೧೫ ಸಮಗ್ರ ವಚನ ಸಂಪುಟ

ಜನಪ್ರಿಯ ಆವೃತ್ತಿ

# ವಚನ ಪರಿಭಾಷಾಕೋಶ

ಸಂಪಾದಕ
ಡಾ. ಎನ್. ಜಿ. ಮಹಾದೇವಪ್ಪ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ವಚನ ಪರಿಭಾಷಾಕೋಶ

೧. ಬಸವಣ್ಣನವರ ವಚನಸಂಪುಟ - ಸಂ : ಡಾ. ಎಂ. ಎಂ. ಕಲಬುರ್ಗಿ
೨. ಅಲ್ಲಮಪ್ರಭುದೇವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ
೩. ಚೆನ್ನಬಸವಣ್ಣನವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ
೪. ಸಿದ್ಧರಾಮೇಶ್ವರ ವಚನಸಂಪುಟ - ಸಂ : ಡಾ. ಎಸ್. ವಿದ್ಯಾಶಂಕರ
೫. ಶಿವಶರಣೆಯರ ವಚನಸಂಪುಟ - ಸಂ : ಡಾ. ವೀರಣ್ಣ ರಾಜೂರ
೬. ಸಂಕೀರ್ಣ ವಚನಸಂಪುಟ : ಒಂದು - ಸಂ : ಡಾ. ಎಂ. ಎಂ. ಕಲಬುರ್ಗಿ
೭. ಸಂಕೀರ್ಣ ವಚನಸಂಪುಟ : ಎರಡು - ಸಂ : ಡಾ. ಎಸ್. ವಿದ್ಯಾಶಂಕರ
೮. ಸಂಕೀರ್ಣ ವಚನಸಂಪುಟ : ಮೂರು - ಸಂ : ಡಾ. ಬಿ. ಆರ್. ಹಿರೇಮಠ
೯. ಸಂಕೀರ್ಣ ವಚನಸಂಪುಟ : ನಾಲ್ಕು - ಸಂ : ಡಾ. ಬಿ. ಆರ್. ಹಿರೇಮಠ
೧೦. ಸಂಕೀರ್ಣ ವಚನಸಂಪುಟ : ಐದು - ಸಂ : ಡಾ. ವೀರಣ್ಣ ರಾಜೂರ
೧೧. ಸಂಕೀರ್ಣ ವಚನಸಂಪುಟ : ಆರು - ಸಂ : ಎಸ್. ಶಿವಣ್ಣ
೧೨. ಸಂಕೀರ್ಣ ವಚನಸಂಪುಟ : ಏಳು - ಸಂ : ಡಾ. ವೀರಣ್ಣ ರಾಜೂರ
೧೩. ಸಂಕೀರ್ಣ ವಚನಸಂಪುಟ : ಎಂಟು - ಸಂ : ಡಾ. ವೀರಣ್ಣ ರಾಜೂರ
೧೪. ಸಂಕೀರ್ಣ ವಚನಸಂಪುಟ : ಒಂಬತ್ತು - ಸಂ : ಡಾ. ವೀರಣ್ಣ ರಾಜೂರ
೧೫. ವಚನ ಪರಿಭಾಷಾಕೋಶ - ಸಂ : ಡಾ. ಎನ್. ಜಿ. ಮಹಾದೇವಪ್ಪ

# ವಚನ ಪರಿಭಾಷಾಕೋಶ

ಸಂಪಾದಕ

**ಡಾ. ಎನ್. ಜಿ. ಮಹಾದೇವಪ್ಪ**

ನಿವೃತ್ತ ತತ್ವಶಾಸ್ತ್ರ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಬೆಂಗಳೂರು

**VACHANA PARIBHASHAKOSHA :** Glossary of technical terms in Vachana literature by Dr. N. G. Mahadevappa, Dharwad and Published by The Administrative Officer, Kannada Pusthaka Pradhikara (Kannada Book Authority), Pampa Mahakavi Road Chamarajpet, Bangalore - 560 018

ISBN : 81-7713-098-6

Pp. xxviii + 428

ಹಕ್ಕುಗಳನ್ನು ಕಾಯ್ದಿರಿಸಿದೆ

ಪ್ರಥಮ ಮುದ್ರಣ : ೧೯೯೩
ದ್ವಿತೀಯ ಪರಿಷ್ಕೃತ ಮುದ್ರಣ : ೨೦೦೧

ಪ್ರತಿ : ಐದು ಸಾವಿರ

ಬೆಲೆ : **ರೂ.** ೮೫೦/-
(೧೫ ಸಂಪುಟಗಳ ಸೆಟ್)

ಅಕ್ಷರ ಜೋಡಣೆ :
ನ್ಯೂಮರಿಕ್ ಇನ್‌ಫೊಟೆಕ್
ಸಪ್ತಾಪುರ, ಧಾರವಾಡ

ಮುದ್ರಣ :
**ಸಿದ್ಧೇಶ್ವರ ಪ್ರಿಂಟರ್ಸ್**
೧೭೧, ಕಾಟನ್‌ಪೇಟೆ ಮುಖ್ಯರಸ್ತೆ
ಬೆಂಗಳೂರು - ೫೬೦ ೦೫೩
✆ : ೬೭೦೫೭೯೩

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ


## ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು

**ಡಾ. ಎಂ. ಎಂ. ಕಲಬುರ್ಗಿ**

ವಿಶ್ರಾಂತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸದಸ್ಯರು

**ಡಾ. ಎಂ. ಚಿದಾನಂದಮೂರ್ತಿ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಡಾ. ಸಿ. ಪಿ. ಕೃಷ್ಣಕುಮಾರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಡಾ. ಎಸ್. ವಿದ್ಯಾಶಂಕರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಸ್. ಶಿವಣ್ಣ**

ವಿಶ್ರಾಂತ ಸಂಪಾದಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಕೆ. ಸಿ. ರಾಮಮೂರ್ತಿ**

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

## ಮುನ್ನುಡಿ

**ಎಸ್. ಎಂ. ಕೃಷ್ಣ**
ಮುಖ್ಯಮಂತ್ರಿಗಳು

ಕನ್ನಡನಾಡಿನ ಪ್ರಥಮ ಪ್ರಜಾಸಾಹಿತ್ಯವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸಾಂಸ್ಕೃತಿಕ ಆಸ್ತಿಯೆನಿಸಿದೆ. ಅನೇಕ ಜನ ವಿದ್ವಾಂಸರು, ಅನೇಕ ಸಂಸ್ಥೆಗಳು ಈ ಸಾಹಿತ್ಯವನ್ನು ಬೆಳಕಿಗೆ ತರಲು ಕಳೆದ ನೂರು ವರ್ಷಗಳಿಂದ ದುಡಿಯುತ್ತ ಬಂದುದು, ಇದರ ವ್ಯಾಪಕತೆಯ ದ್ಯೋತಕವಾಗಿದೆ. ಹೀಗೆ ಪ್ರಕಟವಾಗಿದ್ದ ಮತ್ತು ಅಪ್ರಕಟಿತ ಸ್ಥಿತಿಯಲ್ಲಿದ್ದ ಈ ಸಾಹಿತ್ಯದ ದ್ವಿತೀಯ ಆವೃತ್ತಿಯನ್ನು ವಚನ ಪರಿಭಾಷಾಕೋಶವೂ ಒಳಗೊಂಡಂತೆ ೧೫ ಸಂಪುಟಗಳ ಮೂಲಕ ಕರ್ನಾಟಕ ಸರ್ಕಾರ ಹೊರತರುತ್ತಿರುವುದು, ನಮ್ಮ ಸಾಹಿತ್ಯ ಪ್ರಕಟಣೆಯ ಇತಿಹಾಸದಲ್ಲಿ ಒಂದು ಗಣ್ಯ ಸಾಧನೆಯೆಂದೇ ಹೇಳಬೇಕು. ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ತನ್ನ ಕರ್ತವ್ಯವೆಂದು ಭಾವಿಸಿ, ಕರ್ನಾಟಕದ ಪ್ರಜಾಸರ್ಕಾರ ಈ ಕೆಲಸವನ್ನು ಪೂರೈಸಿದೆ.

ವಚನಸಾಹಿತ್ಯಕ್ಕೆ ನಮ್ಮ ನಾಡಿನಲ್ಲಿ ಸುಮಾರು ೮೦೦ ವರ್ಷಗಳ ಇತಿಹಾಸವಿದೆ. ಈವರೆಗೆ ಬಸವಯುಗದ ಬರವಣಿಗೆಯನ್ನು ಹೊರತರಲು ವಿದ್ವಾಂಸರು ಹೆಚ್ಚು ಗಮನ ಕೊಟ್ಟಿದ್ದರು. ಈ ಯೋಜನೆ ಅದನ್ನೂ ಒಳಗೊಂಡು, ಬಸವೋತ್ತರ ಯುಗದ ಮೇಲೆಯೂ ಒತ್ತುಕೊಟ್ಟುದು ವಿಶೇಷವೆನಿಸಿದೆ. ಇದರಿಂದಾಗಿ ಈ ಯೋಜನೆಗೆ “ಒಂದು ಸಾಹಿತ್ಯ ಪ್ರಕಾರದ ಪ್ರಕಟಣೆ” ಎಂಬ ಕೀರ್ತಿ ಸಲ್ಲುತ್ತದೆ.

ವಚನವೆಂಬುದು ಚಳುವಳಿ ಸಾಹಿತ್ಯಪ್ರಕಾರವಾಗಿದೆ. ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣವನ್ನೂ ಕಾರ್ಯಗತಗೊಳಿಸಲು ಹೋರಾಡಿ ಮಡಿದ ಹುತಾತ್ಮರ ಸಾಹಿತ್ಯವಿದು. ರಾಜಸತ್ತೆ, ಪುರೋಹಿತಸತ್ತೆ, ಪುರುಷಸತ್ತೆಗಳೆಂಬ ಪ್ರತಿಗಾಮಿ ಸತ್ತೆಗಳ ವಿರುದ್ಧ, ಕರ್ನಾಟಕದ ಎಲ್ಲ ಸಮಾಜದ ಜನರು ನಡೆಸಿದ ಹೋರಾಟದ ಉಪನಿಷ್ಪತ್ತಿಯಾದ ಈ ಸಾಹಿತ್ಯದಲ್ಲಿ ಜೀವಪರಧ್ವನಿಗಳು ದಟ್ಟವಾಗಿ ಕೇಳಿಸುತ್ತವೆ. ಪ್ರಾಚೀನ ಕರ್ನಾಟಕದ ಬೌದ್ಧಿಕ ಶ್ರಮದ ವಿದ್ವತ್ ಜನತಾಸಾಹಿತ್ಯಕ್ಕಿಂತ ದೈಹಿಕ ಶ್ರಮದ ಜನತಾಸಾಹಿತ್ಯ ಹೇಗೆ ಭಿನ್ನವಾಗಿದೆಯೆಂಬುದನ್ನು ಕಾಣಬೇಕಾದರೆ ನಾವು ಈ ಸಾಹಿತ್ಯಕ್ಕೇ ಮೊರೆಹೊಗಬೇಕು.

“ವಿಪ್ರ ಮೊದಲು ಅಂತ್ಯಜ ಕಡೆಯಾಗಿ” ಸಮಾಜದ ಎಲ್ಲ ವರ್ಗದ ಸ್ತ್ರೀ-ಪುರುಷರ ಸಂಕೀರ್ಣ ಧ್ವನಿಗಳು ಇದರಲ್ಲಿ ತುಂಬ ಕಲಾತ್ಮಕವಾಗಿ

ಎರಕಗೊಂಡಿವೆ. ಹೀಗಾಗಿ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಧ್ವನಿಯೆನಿಸಿದ ಈ ಸಾಹಿತ್ಯದ ಪ್ರಕಟನೆಯು ತನ್ನ ಕರ್ತವ್ಯದ ಭಾಗವೆಂದು ಭಾವಿಸಿರುವ ಕರ್ನಾಟಕ ಸರ್ಕಾರ, ಅದನ್ನು ಸುಲಭ ಬೆಲೆಯಲ್ಲಿ ಜನತೆಗೆ ನೀಡುತ್ತಿದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಡಾ. ಎಂ. ಎಂ. ಕಲಬುರ್ಗಿ ಅವರ ಶ್ರದ್ಧೆಯನ್ನು, ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ಸಂಪಾದಕರ ಶ್ರಮವನ್ನು ಸ್ಮರಿಸುತ್ತ, ಈ ಐತಿಹಾಸಿಕ ಪ್ರಕಟನೆಯ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

*

# ಬಿನ್ನಹ

## ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಸಾಹಿತ್ಯಕ್ಕೆ ಸಾಹಿತ್ಯ, ಶಾಸ್ತ್ರಕ್ಕೆ ಶಾಸ್ತ್ರವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸೃಷ್ಟಿಯಾಗಿದೆ; ಅತ್ಯಪೂರ್ವ ಆಸ್ತಿಯೆನಿಸಿದೆ. ಪಂಡಿತರ ಮಾರ್ಗಸಾಹಿತ್ಯಕ್ಕೆ ಪ್ರತಿಯಾಗಿ ಸಾಮಾನ್ಯರ ಈ ದೇಶೀಸಾಹಿತ್ಯ ಹೊರಹೊಮ್ಮಿದ್ದು ೧೨ನೆಯ ಶತಮಾನದಲ್ಲಿ; ಕಲಚುರಿಗಳ ರಾಜಧಾನಿಯಾಗಿದ್ದ ಕಲ್ಯಾಣದಲ್ಲಿ; ಬಸವಾದಿ ಶರಣರ ಚಳುವಳಿಯಲ್ಲಿ.

ಮೂಲತಃ ಭಾರತೀಯರದು ಆತ್ಮ ಪರಮಾತ್ಮನಾಗಬೇಕೆಂಬ ವ್ಯಕ್ತಿಕೇಂದ್ರಿತ ಸಿದ್ಧಾಂತ. ಶರಣರು ಇದನ್ನು ಸಮಾಜಕೇಂದ್ರಿತ ಸಿದ್ಧಾಂತಕ್ಕೆ ವಿಸ್ತರಿಸಿದರು. ಹೀಗಾಗಿ ವ್ಯಕ್ತಿ ಕಲ್ಯಾಣದ ಜೊತೆ ಸಮಾಜಕಲ್ಯಾಣವೂ ಈ ಚಳುವಳಿಯ ಮುಖ್ಯ ಲಕ್ಷಣವೆನಿಸಿತು. ಸಾಹಿತ್ಯ ಸಾಹಿತ್ಯಕ್ಕಾಗಿ ಅಲ್ಲ, ವ್ಯಕ್ತಿ ಪರಿವರ್ತನೆಗಾಗಿ, ಸಮಾಜ ಪರಿವರ್ತನೆಗಾಗಿಯೆಂಬ ಸಿದ್ಧಾಂತ ಇಲ್ಲಿ ಅರ್ಥ ಪಡೆಯಿತು.

೧೨ನೆಯ ಶತಮಾನದ ಹೊತ್ತಿಗೆ, ಶೂದ್ರಜೀವ ದೇವನಾಗಲಾರನೆಂಬ ಸಿದ್ಧಾಂತ ಸ್ಥಾಪಿತವಾಗಿದ್ದಿತು. ಸಮಾಜದಲ್ಲಿ ಪುರುಷ-ಸ್ತ್ರೀ, ಪ್ರಭು-ಪ್ರಜೆ, ಬ್ರಾಹ್ಮಣ-ಶೂದ್ರರಲ್ಲಿ ಸಮಾನತೆ ಸಾಧ್ಯವಿಲ್ಲವೆಂಬ ಭೇದಸಂಸ್ಕೃತಿಯೂ ನಿರ್ಮಾಣವಾಗಿದ್ದಿತು. ಈಗ, ಶೂದ್ರನಿಗೂ ದೇವರಾಗುವ ಅರ್ಹತೆಯಿದೆ; ಸ್ತ್ರೀಗೆ ಪುರುಷನಷ್ಟು - ಪ್ರಜೆಗೆ ಪ್ರಭುವಿನಷ್ಟು - ಶೂದ್ರನಿಗೆ ಬ್ರಾಹ್ಮಣನಷ್ಟು ಅಧಿಕಾರವಿದೆಯೆಂದು ಶರಣರು ವಾದಿಸಿದರು. ಇದರ ಫಲವಾಗಿ, ಹೊಸ ಸಮಾಜವೊಂದು ಸೃಷ್ಟಿಯಾಯಿತು. ಇದರಿಂದಾಗಿ ಎಲ್ಲರೂ ಸ್ವತಂತ್ರರು, ಎಲ್ಲರೂ ಸಮಾನರು, ಎಲ್ಲರೂ ಸಹೋದರರೆಂಬ ತತ್ವ ಅನುಷ್ಠಾನಕ್ಕೆ ಬಂದಿತು. ಇದರ ಮುಂದುವರಿಕೆಯೆಂಬಂತೆ ಎಲ್ಲರೂ ದುಡಿಯಬೇಕು ಎಂಬ ಕಾಯಕತತ್ವ, ಎಲ್ಲರೂ ಹಂಚಿಕೊಂಡು ಉಣ್ಣಬೇಕು ಎಂಬ ದಾಸೋಹತತ್ವಗಳು ಆಕಾರ ಪಡೆದವು.

ಹೊಸ ಸಮಾಜದ ಈ ಎಲ್ಲ ನೆಲೆಗಳನ್ನು ಗುರಿಯಿಟ್ಟು ಆಡಿದ ಶರಣರ ಮಾತು ವಚನವೆಂಬ ಸಾಹಿತ್ಯಪ್ರಕಾರವಾಗಿ ಮೂಡಿತು. ವರ್ಗಭೇದ, ವರ್ಣಭೇದ, ಲಿಂಗಭೇದವೆನ್ನದೆ ಎಲ್ಲ ಜನವರ್ಗದವರ ಸಾವಿರ ಸಾವಿರ ವಚನಗಳು ಈ ಕಾಲದಲ್ಲಿ ಸೃಷ್ಟಿಯಾದವು. ಆದರೆ ಒಮ್ಮೆಲೇ ತಲೆದೋರಿದ ಕಲ್ಯಾಣ ಕ್ರಾಂತಿಯಿಂದಾಗಿ ಈ ಸಾಹಿತ್ಯ ನಾಡಿನ ತುಂಬ ಹರಿದು ಹಂಚಿಹೋಯಿತು.

ಹೀಗೆ ಹಂಚಿಹೋಗಿದ್ದ ಈ ಸಾಹಿತ್ಯವನ್ನು ೧೫-೧೬ನೆಯ ಶತಮಾನಗಳಲ್ಲಿ

ಶೋಧಿಸುವ, ಸಂಪಾದಿಸುವ ಪ್ರಯತ್ನ ನಡೆದು, ನೂರಾರು ಸಂಪಾದನ ಕೃತಿಗಳು ಹುಟ್ಟಿ ಬಂದು, ವಚನಸಾಹಿತ್ಯ ವೀರಶೈವ ಮಠಗಳಲ್ಲಿ ತಕ್ಕ ಮಟ್ಟಿಗೆ ರಕ್ಷಿಸಲ್ಪಟ್ಟಿತು. ದುರ್ದೈವದ ಸಂಗತಿಯೆಂದರೆ ಮಠಗಳಲ್ಲಿ ಪ್ರವೇಶ ಪಡೆದ ಸಂಸ್ಕೃತ ಭಾಷೆಯಿಂದಾಗಿ ಕನ್ನಡ ಭಾಷೆಯ ಈ ವಚನಗಳು ಅಲ್ಲಿ ಮೂಲೆ ಸೇರಿದವು.

ಹೀಗೆ ಮೂಲೆಗುಂಪಾಗಿದ್ದ ವಚನಸಾಹಿತ್ಯವು ೨೦ನೆಯ ಶತಮಾನದಲ್ಲಿ ಅನೇಕ ಜನ ವಿದ್ವಾಂಸರ, ಹತ್ತಾರು ಸಂಸ್ಥೆಗಳ ಪ್ರಯತ್ನದ ಫಲವಾಗಿ ಪ್ರಕಟಣೆಗೊಳ್ಳುತ್ತ ಬಂದಿತು. ಈಗ ೧೨ನೆಯ ಶತಮಾನದ ಶರಣಸಾಹಿತ್ಯ ಪ್ರಕಟನೆಗೆ ಒತ್ತುಬಿದ್ದರೂ ಅದು ಬಿಡಿಬಿಡಿಯಾಗಿ ಪ್ರಕಟಣೆಗೊಂಡಿತು. ಆ ತರುವಾಯದ ಶರಣ ಸಾಹಿತ್ಯವಂತೂ ಉಪೇಕ್ಷೆಗೆ ಗುರಿಯಾಯಿತು. ಈ ಎರಡೂ ಕೊರತೆಗಳನ್ನು ನೀಗಿಸುವ ಉದ್ದೇಶದಿಂದ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಪುಟ ಶ್ರೇಣಿಯಲ್ಲಿ ಪ್ರಕಟಿಸಲು ಕರ್ನಾಟಕ ಸರಕಾರ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಂಡಿತು.

ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ವ್ಯಾಪಕ ಕಾರ್ಯ ನಡೆದು, ೨೦ ಸಾವಿರ ವಚನ, ೧೦ ಸಾವಿರ ಪುಟಗಳನ್ನೊಳಗೊಂಡ ೧೫ ಸಂಪುಟಗಳು ೧೯೯೩ರಲ್ಲಿ ಬೆಳಕು ಕಂಡವು. ಆಶ್ಚರ್ಯದ ಸಂಗತಿಯೆಂದರೆ ಇದರ ೫ ಸಾವಿರ ಪ್ರತಿಗಳು ಒಂದೇ ವರ್ಷದಲ್ಲಿ ಮಾರಾಟವಾಗಿ, ಜನರಿಂದ ಬೇಡಿಕೆ ಹೆಚ್ಚುತ್ತ ನಡೆಯಿತು. ಇದನ್ನು ಪೂರೈಸುವ ದಿಕ್ಕಿನಲ್ಲಿ ಪರಿಷ್ಕೃತ ದ್ವಿತೀಯ ಆವೃತ್ತಿ ಈಗ ಹೊರಬರುತ್ತಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾಗಿ ಕನ್ನಡದ ಈ ಅಪೂರ್ವ ಆಸ್ತಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

*

# ನಿರ್ದೇಶಕರ ಮಾತು

**ಕೆ. ಸಿ. ರಾಮಮೂರ್ತಿ**
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ವಚನಸಾಹಿತ್ಯ, ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು. ಪ್ರಾಚೀನ ಕರ್ನಾಟಕದ ಜನಸಾಮಾನ್ಯರ ಧ್ವನಿಯಾಗಿರುವ ಇದನ್ನು ಪ್ರಕಟಿಸುವುದು, ಪ್ರಸಾರ ಮಾಡುವುದು ಜನತಂತ್ರ ಸರಕಾರದ ಮುಖ್ಯ ಕರ್ತವ್ಯವಾಗಿದೆ.

ಭಾರತದಲ್ಲಿ ಆತ್ಮೋದ್ಧಾರದ ಬಗ್ಗೆ ಉದಾತ್ತ ತತ್ವಗಳನ್ನು ಪ್ರತಿಪಾದಿಸುತ್ತ ಬಂದಿದ್ದರೂ ಸಮಾಜೋದ್ಧಾರದ ಬಗ್ಗೆ ಉಪೇಕ್ಷೆ ಬೆಳೆದು, ಅಲ್ಲಿ ಶೋಷಣೆ ವರ್ಧಿಸುತ್ತ ಬಂದುದು ನಮ್ಮ ಇತಿಹಾಸದ ಒಂದು ವಿಪರ್ಯಾಸವೇ ಸರಿ. ೧೨ನೆಯ ಶತಮಾನದಲ್ಲಿ ಉಲ್ಬಣಗೊಂಡಿದ್ದ ಈ ವಿಷಮ ಪರಿಸ್ಥಿತಿಯನ್ನು ನಾಶಗೊಳಿಸಿ, ಸಮಸ್ಥಿತಿಯನ್ನು ಸಮಾಜದಲ್ಲಿ ತರಲು ಹೋರಾಡಿದವರು, ಕಲ್ಯಾಣದ ಶರಣರು. ಈ ಕಾರ್ಯಕ್ಕಾಗಿ ಅವರು ಕೈಕೊಡ ಜನಪರ ಆಂದೋಲನ ನಮ್ಮ ದೇಶದ ಇತಿಹಾಸದಲ್ಲಿಯೇ ಒಂದು ವಿಶಿಷ್ಟ ಘಟನೆಯಾಗಿದೆ.

ಭಾರತದಲ್ಲಿ ರಾಜಸತ್ತೆಯ ಸ್ಥಾಪನೆಗಾಗಿ ರಾಜರು, ಮತಸತ್ತೆಯ ಸ್ಥಾಪನೆಗಾಗಿ ಧರ್ಮಗಳು ಪರಸ್ಪರ ಸಂಘರ್ಷಕ್ಕಿಳಿದುದು ಸರ್ವಶ್ರುತ. ಆದರೆ ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ ಈ ರಾಜಸತ್ತೆ, ಮತಸತ್ತೆಗಳ ವಿರುದ್ಧ ಸಮಾಜದ ವಿವಿಧ ಸ್ತರಗಳ ಜನತೆ, ಅದರಲ್ಲಿಯೂ ದೀನರು-ದಲಿತರು-ಮಹಿಳೆಯರು ಬೀದಿಗಿಳಿದು ನಡೆಸಿದ ಈ ಆಂದೋಲನ, ಇಪ್ಪತ್ತನೆಯ ಶತಮಾನವೂ ಆಶ್ಚರ್ಯಪಡುವ ಸಂಗತಿಯಾಗಿದೆ.

ಅಂದಿನ ಸನ್ನಿವೇಶಕ್ಕೆ ಅನುಗುಣವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಅಂಕುರಿಸಿದ ಈ ಆಂದೋಲನ, ಸಾಮಾಜಿಕ ಕ್ಷೇತ್ರವನ್ನೂ ಆವರಿಸಿದ ಕಾರಣ, ಇದನ್ನು 'ಸಮಾಜೋ ಧಾರ್ಮಿಕ' ಆಂದೋಲನವೆಂದು ಗುರುತಿಸಲಾಗುತ್ತದೆ. ಸಮಾಜವೆನ್ನುವುದು ಸಂಕೀರ್ಣ ವ್ಯವಸ್ಥೆ. ಅದರ ಎಲ್ಲ ಸ್ತರಗಳನ್ನೂ ಎಲ್ಲ ಮಗ್ಗಲುಗಳನ್ನೂ ಬದಲಿಸಲು ಮಾಡಿದ ಪ್ರಯತ್ನವಾಗಿರುವುದರಿಂದ ಇದು ಒಂದು "ಸಮಗ್ರ ಆಂದೋಲನ"ವಾಗಿದೆ. ಈ ಆಂದೋಲನದ ನೇರ ಧ್ವನಿ, ವಚನಸಾಹಿತ್ಯ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನಿಂದಾಗಿ ವ್ಯಕ್ತಿ ಸ್ವಾತಂತ್ರ್ಯ ಪಡೆದ ಜನವರ್ಗವು ವ್ಯಕ್ತಪಡಿಸಿದ ಅಭಿಪ್ರಾಯ ಸ್ವಾತಂತ್ರ್ಯದ ಫಲ, ಈ ಸಾಹಿತ್ಯ. ಹೀಗಾಗಿ ಇಲ್ಲಿ ಆತ್ಮವಿಮರ್ಶೆಯಷ್ಟೇ ವಿಪುಲವಾಗಿ ಸಮಾಜವಿಮರ್ಶೆಯನ್ನೂ ಕಾಣಬಹುದಾಗಿದೆ. ಅದರಲ್ಲಿಯೂ ವರ್ಣಭೇದ ನಿರಾಕರಣೆ, ವರ್ಗಭೇದ

ನಿರಾಕರಣೆ, ಲಿಂಗಭೇದ ನಿರಾಕರಣೆಗಳಂಥ ವಿಚಾರಗಳು ಸ್ಫೋಟಗೊಂಡುದು ಲಕ್ಷಿಸತಕ್ಕ ಸಂಗತಿಯಾಗಿದೆ. ಇಲ್ಲಿ ಪುರುಷರಷ್ಟೇ ಪ್ರಧಾನವಾಗಿ ಮಹಿಳೆಯರೂ, ಕುಲಜರಷ್ಟೇ ಪ್ರಧಾನವಾಗಿ ಅಂತ್ಯಜರೂ, ಪ್ರಭುಗಳಷ್ಟೇ ಪ್ರಧಾನವಾಗಿ ಪ್ರಜೆಗಳೂ ಬಾಳಿದುದು, ಬರೆದುದು ಬಹುಶಃ ಜಗತ್ತಿನ ಇತಿಹಾಸದಲ್ಲಿಯೇ ಏಕೈಕ ಉದಾಹರಣೆಯಾಗಿದೆ. ಇಂಥ ವಿಚಾರಶೀಲರ ಅಂದರೆ ಇವರ ತತ್ತ್ವ-ಸಾಹಿತ್ಯಗಳ ಉತ್ತರಾಧಿಕಾರಿಗಳಾದುದು ನಮ್ಮ ಭಾಗ್ಯ; ಇವರ ಸಾಹಿತ್ಯಸಂಪತ್ತನ್ನು ರಕ್ಷಿಸುವುದು, ಪ್ರಸಾರಮಾಡುವುದು ನಮ್ಮ ಕರ್ತವ್ಯ. ಈ ಕರ್ತವ್ಯದ ಭಾಗವಾಗಿ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕರ್ನಾಟಕ ಸರಕಾರ ಕೈಗೆತ್ತಿಕೊಂಡಿತು.

ಈವರೆಗೆ ವಚನಸಾಹಿತ್ಯ ಬಿಡಿಬಿಡಿಯಾಗಿ ಭಾಗಶಃ ಪ್ರಕಟವಾಗಿದ್ದಿತು, ಕೆಲವು ಭಾಗ ಅಪ್ರಕಟಿತ ಸ್ಥಿತಿಯಲ್ಲಿ ಉಳಿದಿದ್ದಿತು. ಇದೆಲ್ಲವನ್ನು ಕ್ರೋಢೀಕರಿಸಿ, ಪರಿಷ್ಕರಿಸಿ ಪ್ರಕಟಿಸುವುದು ಶ್ರಮದ ಕೆಲಸ. ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ, ಅನೇಕ ಜನ ವಿದ್ವಾಂಸರ ಮತ್ತು ಸಂಪಾದಕ ಮಂಡಳಿ ಸದಸ್ಯರ ಸಂಯುಕ್ತ ಪರಿಶ್ರಮದಿಂದ ಈ ಬೃಹತ್ ಯೋಜನೆ ಪೂರ್ತಿಗೊಂಡುದು ಸಂತೋಷದ ಸಂಗತಿ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಶ್ರಯದಲ್ಲಿ ಅಸ್ತಿತ್ವಕ್ಕೆ ಬಂದು, ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಂಡ ಈ ಐತಿಹಾಸಿಕ ಯೋಜನೆಗಾಗಿ ಸಂಬಂಧಪಟ್ಟ ಎಲ್ಲ ವಿದ್ವಾಂಸರನ್ನು ಅಭಿನಂದಿಸುತ್ತೇನೆ. ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟವಾಗುತ್ತಲಿರುವ ಈ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

*

# ಪ್ರಕಾಶಕರ ಮಾತು


**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ


ಸಮಗ್ರ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಪ್ರಕಟಣೆ ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ನಡೆದಿರುವ ಒಂದು ದಿವ್ಯಘಟನೆ. ವಚನಸಾಹಿತ್ಯದ ಪ್ರಕಟಣೆಗೆ ಸುಮಾರು ಎಂಬತ್ತು ವರ್ಷಗಳ ಇತಿಹಾಸವಿದೆ. ವಚನಪಿತಾಮಹ ಶ್ರೀ ಫ. ಗು. ಹಳಕಟ್ಟಿ ಅವರಿಂದ ಪ್ರಕಟಣೆಯ ದಿವ್ಯಘಟನೆ ಆರಂಭಗೊಂಡಿತು. ಇದೀಗ ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದ ಮೂಲಕ ಸಹಸ್ರಮಾನದ ಸೂರ್ಯೋದಯದ ವೇಳೆಗೆ ಇದು ಒಂದು ಪೂರ್ಣ ಘಟ್ಟಕ್ಕೆ ಬಂದಿದೆ. ಶರಣ ಸಾಹಿತ್ಯದ ಪ್ರಕಟಣೆಯ ಇತಿಹಾಸದಲ್ಲಿ ಇದು ಚಾರಿತ್ರಿಕ ಘಟನೆಯೇ ಸರಿ. ಈ ನಡುವೆ ವಚನಸಾಹಿತ್ಯದ ಸಹಸ್ರಾರು ಬಿಡಿ ಪ್ರಕಟಣೆಗಳು ಹೊರಬಂದಿವೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಮಠಗಳು, ಶಿಕ್ಷಣ ಕೇಂದ್ರಗಳು, ಖಾಸಗಿ ಪ್ರಕಾಶಕರು, ಆಸಕ್ತ ಲೇಖಕರು ಬಿಡಿಬಿಡಿಯಾಗಿ ವಚನಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ನಾವು ಪ್ರೀತಿಯಿಂದ ಇವರನ್ನೆಲ್ಲ ಈ ಹೊತ್ತಿನಲ್ಲಿ ನೆನೆಯುವುದು, ಆ ಪಾತ್ರಃಸ್ಮರಣೀಯರ ಹಾದಿಯಲ್ಲಿ ಮುನ್ನಡೆಯುವುದು ನಮ್ಮ ಸಾಂಸ್ಕೃತಿಕ ಕರ್ತವ್ಯ.

ಸಮಗ್ರ ವಚನ ಸಂಪುಟಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ೧೯೯೩ರಲ್ಲಿ ಪ್ರಕಟಗೊಂಡಿದ್ದವು. ಆ ಸಂಪುಟಗಳು ಪ್ರಕಟವಾದ ವರ್ಷವೇ ಕನ್ನಡಿಗರ ಮನೆಯನ್ನು ಸೇರಿಕೊಂಡವು. ಆದರೆ, ಸಂಪುಟಗಳ ಬೇಡಿಕೆ ಮಹಾಜನರಿಂದ ಇದ್ದೇ ಇತ್ತು. ಆನಂತರ ಕರ್ನಾಟಕ ಸರ್ಕಾರ ಪರಿಷ್ಕೃತ ಆವೃತ್ತಿಗೆ ತಾತ್ವಿಕ ಒಪ್ಪಿಗೆ ನೀಡಿತು. ಹೀಗೆ ಒಪ್ಪಿಗೆ ನೀಡಿದ ಸಂಸ್ಕೃತಿ ಸಂಪನ್ನರೂ ಮುಖ್ಯಮಂತ್ರಿಗಳೂ ಆದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರನ್ನು ತುಂಬು ಹೃದಯದಿಂದ ಈ ಪ್ರಕಟಣೆಯ ದಿವ್ಯಘಟನೆಯ ಹೊತ್ತಿನಲ್ಲಿ ಸ್ಮರಿಸಿಕೊಳ್ಳುತ್ತೇನೆ. ಅನಂತರ ನಾಡಿನ ಶ್ರೇಷ್ಠ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಸಿದ್ಧಗೊಂಡವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಪ್ರಕಟಿಸಬೇಕಿತ್ತು. ಆದರೆ, ಆ ಕಾರ್ಯವನ್ನು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಒಪ್ಪಿಸಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಔದಾರ್ಯ; ಅದನ್ನು ಪಡೆದು ಪ್ರಕಟಿಸುತ್ತಿರುವುದು ಪುಸ್ತಕ ಪ್ರಾಧಿಕಾರದ ಭಾಗ್ಯ. ಈ ಭಾಗ್ಯಕ್ಕೆ ಕಾರಣರಾದವರು ಕನ್ನಡ ಮತ್ತು ಸಂಸ್ಕೃತಿ

ಇಲಾಖೆಯ ಸಚಿವೆಯರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ. ಇವರಿಬ್ಬರ ಆಸಕ್ತಿಯ ಫಲ ಈ ಕಾರ್ಯವನ್ನು ಆಗುಗೊಳಿಸಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆಯರ ಆಪ್ತ ಕಾರ್ಯದರ್ಶಿ ಡಾ. ಎ. ಆರ್. ಮಂಜುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀ ಸಿ. ಎಸ್. ಕೇದಾರ್, ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶ್ರೀ ಕಾ. ತ. ಚಿಕ್ಕಣ್ಣ ಪ್ರಕಟಣೆಯ ವಿವಿಧ ಹಂತಗಳಲ್ಲಿ ನನಗೆ ನೆರವಾಗಿದ್ದಾರೆ. ಈ ಮೇಲಿನ ಎಲ್ಲ ಮಹನೀಯರಿಗೂ ಕನ್ನಡ ಪುಸ್ತಕ ಪ್ರಾಧಿಕಾರವು ಅನನ್ಯವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸಮಗ್ರವಚನ ಸಂಪುಟಗಳ ಪರಿಷ್ಕೃತ ಆವೃತ್ತಿಯ ಸಂಪಾದಕ ಮಂಡಳಿಯ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ್, ಡಾ. ಎಸ್. ವಿದ್ಯಾಶಂಕರ್, ಎಸ್. ಶಿವಣ್ಣ ಇವರನ್ನು, ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಹೊರತರಲು ಒಪ್ಪಿಗೆ ನೀಡಿದ ಪುಸ್ತಕ ಪ್ರಾಧಿಕಾರದ ಸ್ಥಾಯಿಸಮಿತಿ ಸದಸ್ಯರಾದ ಪ್ರೊ. ರಾಮೇಗೌಡ, ಶ್ರೀ ಆರ್. ಜಿ. ಹಳ್ಳಿ ನಾಗರಾಜ್, ಪ್ರೊ. ಸಿದ್ಧಪ್ಪ ಉತ್ನಾಳ್, ಶ್ರೀ ಛಾಯಾಪತಿ ಮತ್ತು ಶ್ರೀಮತಿ ಇಂದಿರಾ ಶಿವಣ್ಣ ಇವರನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ. ಹದಿನೈದು ಸಂಪುಟಗಳ ಅಕ್ಷರ ಜೋಡಣೆ ಮಾಡಿಕೊಟ್ಟವರನ್ನು, ಬಹು ಅಂದವಾಗಿ ಮುದ್ರಿಸಿದವರನ್ನು, ಸುಂದರವಾಗಿ ಮತ್ತು ಆಕರ್ಷಕವಾಗಿ ಸಂಪುಟಗಳನ್ನು ಬೈಂಡ್ ಮಾಡಿಕೊಟ್ಟವರನ್ನು, ಮುಖಪುಟ ವಿನ್ಯಾಸ ಮಾಡಿಕೊಟ್ಟವರನ್ನು; ತುಂಬು ಪ್ರೀತಿಯಿಂದ ನೆನೆಯುವುದು ನನ್ನ ಕರ್ತವ್ಯ. ಇವರ ಮುದ್ರಣ ಪರಿಣತಿಯ ಫಲ ಈ ಸಂಪುಟಗಳಿಗೆ ದೊರಕಿ ಅಂದವಾಗಲು ಕಾರಣವಾಗಿದೆ. ಪುಸ್ತಕ ಪ್ರಾಧಿಕಾರದ ಆಡಳಿತಗಾರರಾದ ಶ್ರೀ ಬಲವಂತರಾವ್ ಪಾಟೀಲ ಸನ್ನೊಡನೆ ಉದ್ದಕ್ಕೂ ಸಹಕರಿಸಿದ್ದಾರೆ. ಈ ಮೇಲೆ ಹೆಸರಿಸಿದ ಎಲ್ಲ ಮಹನೀಯರನ್ನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿರುವ ಸಮಗ್ರ ವಚನ ಸಂಪುಟಗಳನ್ನು ಕನ್ನಡದ ಮಹಾಜನತೆ ಪ್ರೀತಿಯಿಂದ ಸ್ವೀಕರಿಸಬೇಕೆಂದು ಬೇಡುತ್ತೇನೆ.

■■

*

# ಸಂಪಾದಕೀಯ

## ಡಾ. ಎಂ. ಎಂ. ಕಲಬುರ್ಗಿ
ಪ್ರಧಾನ ಸಂಪಾದಕರು

ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ, ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ. ಸಮಾಜದ ಎಲ್ಲ ವರ್ಗ, ಎಲ್ಲ ವರ್ಣಗಳ ಜನಸಮುದಾಯ ಬಸವಣ್ಣನವರ ನೇತೃತ್ವದಲ್ಲಿ ಕೈಕೊಂಡಿದ್ದ ವ್ಯಕ್ತಿಕಲ್ಯಾಣ ಮತ್ತು ಸಮಾಜಕಲ್ಯಾಣ ಚಳುವಳಿಯ ಸೃಷ್ಟಿಯೆನಿಸಿದ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿವೆ.

'ವಚನ' ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೇ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ 'ವಚನ'ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ. ಬಿಡಿಮುತ್ತುಗಳಂತೆ ಸೂರೆಯಾದ ಅವುಗಳನ್ನು ಸಂಗ್ರಹಿಸುವ, ಸಂಕಲಿಸುವ, ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧೆಯಾದ ತ್ರಿಪಿಟಕ, ಶರಣರ ಸಂದೇಶವಾದ ವಚನಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲನಗಳಾಗಿವೆ.

ಮೂಲತಃ ವಚನನಿಧಿ ಜನರಿಂದ, ಜನರಿಗಾಗಿ ಹುಟ್ಟಿ, ಜನರ ಮಧ್ಯದಲ್ಲಿ ಬಾಳಿದ ಸಾಹಿತ್ಯವಾಗಿದೆ. ಹೀಗಾಗಿ ಹನ್ನೆರಡರಿಂದ ಹದಿನೈದನೆಯ ಶತಮಾನಕ್ಕೆ ಬರುವಷ್ಟರಲ್ಲಿ ಅದಕ್ಕೆ ವಿಪುಲ ಭಿನ್ನಪಾಠಗಳು ಹುಟ್ಟಿಕೊಂಡವು. ಆಮೇಲೆ ಸಂಕಲನ-ಸಂಪಾದನ ಕಾರ್ಯದಿಂದಾಗಿ ಕೆಲವೊಮ್ಮೆ ಪ್ರಕ್ಷಿಪ್ತ ವಚನಗಳೂ ತಲೆಯೆತ್ತಿದವು. ಈ ಗೊಂದಲ ಕಾರಣವಾಗಿ ಕವಿಸಾಹಿತ್ಯಕ್ಕಿಂತ ವಚನಸಾಹಿತ್ಯದ ಸಂಪಾದನಕಾರ್ಯ ತುಂಬ ಜಟಿಲಸ್ವರೂಪ ದ್ದಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟನಕಾರ್ಯವನ್ನು ಮೊದಲು ಕೈಗೆತ್ತಿಕೊಂಡವರು, ಕ್ರೈಸ್ತ ಪಾದ್ರಿಗಳು. ಜೈನ ಪುರಾಣ-ಕಾವ್ಯಗಳನ್ನು, ವೈದಿಕ ಪುರಾಣ-ಕೀರ್ತನೆಗಳನ್ನು, ವೀರಶೈವ ಶಾಸ್ತ್ರ-ಪುರಾಣಗಳನ್ನು ಪ್ರಕಟಿಸಿದ ಇವರು, ವಚನಸಾಹಿತ್ಯವನ್ನು ಮಾತ್ರ ತಪ್ಪಿಯೂ ಪ್ರಕಟಿಸಲಿಲ್ಲ. ದೇಶೀ ವಿದ್ವಾಂಸರೇ ಈ ಕೆಲಸವನ್ನು ಪ್ರಾರಂಭ ಮಾಡಬೇಕಾಯಿತು. ಈ

ದಿಸೆಯಲ್ಲಿ ಮೊದಲು ಪ್ರಕಟವಾದ ವಚನಕೃತಿ (೧೮೮೩) 'ಅಪ್ರಮಾಣ ಕೂಡಲ ಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ "ಶಿಖಾರತ್ನಪ್ರಕಾಶ"[1]. ಆಮೇಲೆ ಒಂದು ಮೈಲಿಗಲ್ಲಿನಂತೆ ಪ್ರಕಟವಾದ ವಚನಕೃತಿ, ಬಸವಣ್ಣನವರ ಷಟ್‌ಸ್ಥಲವಚನ ಸಂಪುಟ. ಅದು ಮೊದಲು ಬೆಳಕು ಕಂಡುದು ೧೮೮೯ರಲ್ಲಿ[2]. ಅಲ್ಲಿಂದ ಸರಿಯಾಗಿ ಒಂದು ಶತಮಾನ ಕಳೆಯುವಷ್ಟರಲ್ಲಿ ಅಂದರೆ ೧೯೮೮ರಲ್ಲಿ ಈ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ' ಅಸ್ತಿತ್ವಕ್ಕೆ ಬಂದುದು ಒಂದು ಯೋಗಾಯೋಗವಾಗಿದೆ; ವಚನಸಾಹಿತ್ಯದ ಪ್ರಕಟನಚರಿತ್ರೆಯ ಶತಮಾನಸ್ಮರಣೆಯಾಗಿದೆ.

ಈ ನೂರು ವರ್ಷಗಳ ಕಾಲವ್ಯಾಪ್ತಿಯಲ್ಲಿ ವಚನಸಾಹಿತ್ಯ ಪ್ರಕಟಣೆಗಾಗಿ ಅನೇಕರು ದುಡಿದಿರುವರಾದರೂ ಯೋಜನಾಬದ್ಧ ವ್ಯಾಪಕ ಪ್ರಯತ್ನಗಳು, ವಿಜಾಪುರ, ಧಾರವಾಡ, ಗದಗಗಳಲ್ಲಿ ಹೀಗೆ ಜರುಗಿವೆ :

೧. ಶಿವಾನುಭವ ಗ್ರಂಥಮಾಲೆ, ವಿಜಾಪುರ - ಡಾ. ಫ. ಗು. ಹಳಕಟ್ಟಿ

೨. ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ - ಡಾ. ಆರ್. ಸಿ. ಹಿರೇಮಠ

೩. ತೋಂಟದಾರ್ಯಮಠ, ಗದಗ - ಡಾ. ಎಂ. ಎಂ. ಕಲಬುರ್ಗಿ

ವಚನಸಾಹಿತ್ಯದ ಪ್ರಕಟನ ಕಾರ್ಯ ಹೀಗೆ ವಿಜಾಪುರದಲ್ಲಿ ಪ್ರಾರಂಭವಾಗಿ, ಧಾರವಾಡದಲ್ಲಿ ಬೆಳೆದು, ಗದುಗಿನಲ್ಲಿ ಒಂದು ನಿಲುಗಡೆಗೆ ಬರುತ್ತಿದ್ದಂತೆಯೇ, ಈಗ ನಾಲ್ಕನೆಯ ಘಟ್ಟದಲ್ಲಿ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಅಂಗವಾಗಿ, ೧೫ ಸಂಪುಟಗಳು ಕರ್ನಾಟಕ ಸರಕಾರದ ಮೂಲಕ ಪ್ರಕಟವಾಗುತ್ತಲಿವೆ. ಸುಮಾರು ೧೧೦ ಜನ ಪ್ರಕ್ಷಿಪ್ತ ವಚನಕಾರರನ್ನೂ ಪ್ರಕ್ಷಿಪ್ತವಾಗಿರಬಹುದಾದ ಅನೇಕ ವಚನಗಳನ್ನೂ ಕೈಬಿಟ್ಟು ಸಂಯೋಜಿಸಲಾದ ಈ ಹದಿನೈದು ಸಂಪುಟಗಳ ಒಟ್ಟು ಪುಟ ಸುಮಾರು ಹತ್ತು ಸಾವಿರ; ಒಟ್ಟು ವಚನ ಸಂಖ್ಯೆ ಸುಮಾರು ಇಪ್ಪತ್ತು ಸಾವಿರ. ವಚನಸಾಹಿತ್ಯವನ್ನು ಒಮ್ಮೆ ಸಮಗ್ರವಾಗಿ ಹೊರತಂದ ಪ್ರಥಮ ಮಹತ್ವಾಕಾಂಕ್ಷೆಯ ಯೋಜನೆಯಿದು. ಈ ಸಾಹಿತ್ಯದ ಗಡಿಗೆರೆಗಳನ್ನು, ಸಂಖ್ಯಾಬಾಹುಳ್ಯವನ್ನು ವ್ಯವಸ್ಥೆಗೊಳಿಸಿ ಕೊಟ್ಟು, ವಿದ್ವಾಂಸರ ಅಧ್ಯಯನದ ಮುಂದುವರಿಕೆಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸಿದ ಹಿರಿಮೆ ಈ ಯೋಜನೆಗೆ ಸಲ್ಲುತ್ತದೆ.

ಈ ಯೋಜನೆಯ ಅಂಗವಾಗಿ ಬಸವಣ್ಣನವರ ವಚನ, ಪ್ರಭುದೇವರ ವಚನ, ಚೆನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರ ವಚನ, ಶಿವಶರಣೆಯರ ವಚನ - ಹೀಗೆ ಐದು ಸಂಪುಟಗಳು, ಬಸವ ಸಮಕಾಲೀನ ಮಿಕ್ಕ ಶರಣರ ವಚನಗಳ ನಾಲ್ಕು ಸಂಪುಟಗಳು,

---

೧. ಮೊದಲು ಪ್ರಕಟವಾದ ವಚನಕೃತಿ ಅಖಂಡೇಶ್ವರ ವಚನ (೧೮೮೨)ವೆಂದು ಡಾ. ಬಿ. ನಂಜುಂಡ ಸ್ವಾಮಿ ಅವರ ಅಭಿಪ್ರಾಯ. (ಬಸವಪಥ ೧೬.೬)

೨. ಬಸವಣ್ಣನವರ ಷಟ್ಸ್ಥಲದ ವಚನಗಳು ಪ್ರಥಮ ಸಲ ಬೆಳಕುಕಂಡುದು ೧೮೮೬ರಲ್ಲಿಯೆಂದು ಡಾ. ಬಿ. ನಂಜುಂಡಸ್ವಾಮಿ ಹೇಳುತ್ತಾರೆ. (ಬಸವಪಥ ೧೫-೫ ಪು. ೪೫)

ಬಸವೋತ್ತರ ಕಾಲೀನ ಶರಣರ ವಚನಗಳ ಐದು ಸಂಪುಟಗಳು ಮತ್ತು ಒಂದು ವಚನ ಪರಿಭಾಷಾಕೋಶ - ಹೀಗೆ ಹದಿನೈದು ಸಂಪುಟಗಳು ಬೆಳಕುಕಾಣುತ್ತಲಿವೆ. ಇವುಗಳಲ್ಲಿ ಮೊದಲಿನ ಐದು ಸಂಪುಟಗಳು (ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಶಿವಶರಣೆಯರು) ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಿದ್ದವು. ಆ ಬಳಿಕ ಲಭ್ಯವಾದ ನೂರಾರು ಹೊಸ ವಚನಗಳನ್ನು ಸೇರಿಸಿ, ಈ ಐದೂ ಸಂಪುಟಗಳಿಗೆ ಸಮಗ್ರರೂಪ ಕೊಟ್ಟಿದ್ದೇವೆ ಮತ್ತು ಪರಿಷ್ಕರಿಸಿದ್ದೇವೆ.

ಬಸವ ಸಮಕಾಲೀನ ಮಿಕ್ಕ ಶರಣರ ನಾಲ್ಕು ಸಂಪುಟಗಳ ಕೆಲಸ ಈವರೆಗೆ ಸಮರ್ಪಕವಾಗಿ ನಡೆದಿರಲಿಲ್ಲ. ಈ ಶರಣರ ಸಂಖ್ಯೆ, ಇವರ ವಚನಸಂಖ್ಯೆ ಅಸ್ಪಷ್ಟವಾಗಿಯೇ ಉಳಿದಿದ್ದಿತು. ವಚನಗಳೂ ಅಲ್ಲಿಷ್ಟು, ಇಲ್ಲಿಷ್ಟು ಪ್ರಕಟವಾಗಿದ್ದವು. ಒಂದಿಷ್ಟು ಅಪ್ರಕಟಿತ ಸ್ಥಿತಿಯಲ್ಲಿಯೇ ಉಳಿದುಬಿಟ್ಟಿದ್ದವು. ಇವೆಲ್ಲವುಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಈ ನಾಲ್ಕೂ ಸಂಪುಟಗಳಿಗೆ ಸಮಗ್ರ ರೂಪ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಬಸವಯುಗದ ಈ ಎಲ್ಲ ಒಂಬತ್ತು ಸಂಪುಟಗಳಿಗೆ ಸುಮಾರು ಸಾವಿರದಷ್ಟು ಹೊಸ ವಚನಗಳನ್ನು ಸೇರಿಸಿದ್ದೇವೆ.

ಬಸವೋತ್ತರ ಕಾಲೀನ ಶರಣರ ಸಂಪುಟಗಳ ಕೆಲಸ ಇನ್ನೂ ಅಲಕ್ಷಿತವಾಗಿದ್ದಿತು. ಈವರೆಗೆ ತಿಳಿದುಬಂದಿದ್ದ ವಚನಕಾರರ ಹೊಸ ವಚನಗಳನ್ನು ಶೋಧಿಸುವುದರೊಂದಿಗೆ, ಅನೇಕ ಹೊಸ ವಚನಕಾರರನ್ನೂ ಬೆಳಕಿಗೆ ತಂದಿದ್ದೇವೆ. ಇದರಿಂದಾಗಿ ಬಸವೋತ್ತರಯುಗದ ಶರಣರನ್ನೂ ಅವರ ವಚನಗಳ ವ್ಯಾಪ್ತಿಯನ್ನೂ ಜನತೆಯ ಮುಂದಿಟ್ಟ ಪ್ರಥಮ ಕೀರ್ತಿ ಈ ಐದು ಸಂಪುಟಗಳಿಗೆ ಸಲ್ಲುತ್ತದೆ. ಹೀಗೆ ಬಸವಯುಗ, ಬಸವೋತ್ತರಯುಗಗಳ ವಚನಸಾಹಿತ್ಯಕ್ಕೆ ಸಂಬಂಧಪಟ್ಟ ಎಲ್ಲ ಕೊರತೆಗಳನ್ನು ತುಂಬಿಕೊಡುವ ಒಂದು ಪರಿಪೂರ್ಣ ಯೋಜನೆ ಇದಾಗಿದೆ. ಮೊದಲ ಬಾರಿಗೆ ೧೯ನೆಯ ಶತಮಾನದವರೆಗಿನ ಎಲ್ಲ ಶರಣರ ಎಲ್ಲ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಒಂದು ಕ್ರಮಕ್ಕೆ ಅಳವಡಿಸಿ, ಸಂಪುಟ ಶ್ರೇಣಿಯಲ್ಲಿ ಹೊರತಂದ ದೊಡ್ಡಪ್ರಯತ್ನ ಇಲ್ಲಿದೆ.

ವಚನಸಾಹಿತ್ಯದ ಪರಿಷ್ಕರಣಕಾರ್ಯ ತುಂಬ ಜಟಿಲವಾದುದು. ೧. ಎಲ್ಲ ಶರಣರ ಎಲ್ಲ ವಚನಗಳನ್ನು ಎಲ್ಲ ಪ್ರಾಚೀನ ಆಕರಗಳಿಂದ ಸಂಗ್ರಹಿಸುವುದು, ೨. ಪ್ರಕ್ಷಿಪ್ತವಾಗಿರಬಹುದಾದ ವಚನಕಾರರನ್ನು, ವಚನಗಳನ್ನು ಕೈಬಿಡುವುದು, ೩. ನಿಜವಚನಗಳ ಪಾಠವನ್ನು ಪರಿಷ್ಕರಿಸುವುದು - ಇದು ಈ ಯೋಜನೆಯ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಎಲ್ಲ ಪ್ರಾಚೀನ ಆಕರಗಳಿಂದ ಅಂದರೆ ಸುಮಾರು ೧೦೮ ಆಕರಗಳಿಂದ ಎಲ್ಲ ವಚನಗಳನ್ನು ಸಂಗ್ರಹಿಸಿ, ಪ್ರತಿಯೊಂದು ವಚನದ ಕೆಳಗೆ ಅದರ ಎಲ್ಲ ಆಕರಗಳನ್ನು ನಮೂದಿಸಿದ 'ವಚನ ಬ್ಯಾಂಕ'ನ್ನು ಅಸ್ತಿತ್ವಕ್ಕೆ ತರಲಾಯಿತು. ಒಂದು ವಚನಕ್ಕೆ ಇರುವ ವಿವಿಧ ಪಾಠಾಂತರ, ರೂಪಾಂತರಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು, ಮುದ್ರಿಕೆಯ ವ್ಯತ್ಯಾಸವನ್ನು ಗಮನಿಸಲು, ಒಬ್ಬ ವಚನಕಾರನ ಒಟ್ಟು ವಚನಗಳ ಸಂಖ್ಯೆಯನ್ನು ನಿರ್ಧರಿಸಲು, ಕೊನೆಯದಾಗಿ ವಚನದ ನಿಜಪಾಠವನ್ನು ನಿರ್ಣಯಿಸಲು ಈ ಬ್ಯಾಂಕ್ ತುಂಬ ನೆರವಾಯಿತು.

ಇವು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿ, ಅನ್ಯಪಾಠಗಳನ್ನು ಅಡಿಯಲ್ಲಿ ನಮೂದಿಸದೆ ಕೈಬಿಟ್ಟಿದ್ದೇವೆ. ಜನಸಾಮಾನ್ಯರ ಅನುಕೂಲತೆಗಾಗಿ ಶಕಟರೇಫೆಗೆ ಬದಲು ರೇಫೆ ಇಟ್ಟುಕೊಂಡಿದ್ದೇವೆ. ಅಭ್ಯಾಸಿಗಳ ಉಪಯೋಗ ದೃಷ್ಟಿಯಿಂದ ಕಠಿಣ ಪದಕೋಶ, ಅಕಾರಾದಿ, ಆಕರಸೂಚಿಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ. ಹೆಚ್ಚಿನದಾಗಿ ಪಾರಿಭಾಷಿಕ ಪದಗಳ ಒಂದು ಸ್ವತಂತ್ರ ಕೋಶವನ್ನೇ ಪ್ರಕಟಿಸಿದ್ದೇವೆ. ಒಟ್ಟಿನಲ್ಲಿ, ಇವು ಜನಪ್ರಿಯ ಆವೃತ್ತಿಗಳಾದರೂ ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ಆದರ್ಶದಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

## ಕೃತಜ್ಞತೆ

ವಿಶ್ವವಿದ್ಯಾಲಯದಂಥ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳು, ವೀರಶೈವ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಡಾ. ಫ. ಗು. ಹಳಕಟ್ಟಿಯವರಂಥ ವಿದ್ವಾಂಸ ವ್ಯಕ್ತಿಗಳು ನಿರಂತರ ದುಡಿದರೂ ವಚನಸಾಹಿತ್ಯ ಪೂರ್ಣಪ್ರಮಾಣದಲ್ಲಿ ಪ್ರಕಟವಾಗಲು ಒಂದುನೂರು ವರ್ಷ ಹಿಡಿದುದು ಅದರ ಗಾತ್ರಬಾಹುಳ್ಯಕ್ಕೆ ಸಾಕ್ಷಿಯಾಗಿದೆ. ನೂರುವರ್ಷ ದುಡಿದು, ಸಾಮಗ್ರಿಯನ್ನು ಪ್ರಕಟಿಸಿದ ಈ ಎಲ್ಲ ವ್ಯಕ್ತಿ-ಸಂಸ್ಥೆಗಳಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆಯ ಕಾರ್ಯಾಲಯ ಅಸ್ತಿತ್ವಕ್ಕೆ ಬಂದು ಕೆಲಸ ಪ್ರಾರಂಭವಾದದ್ದು ಅಕ್ಟೋಬರ್ ೧೫, ೧೯೮೮ರಂದು. ಹಸ್ತಪ್ರತಿಗಳು ಅಚ್ಚಿಗೆ ಹೋದದ್ದು ೧೬ ಮಾರ್ಚ್ ೧೯೯೦ರಂದು. ಹೀಗೆ ಮೊದಲೇ ಯೋಜಿಸಿದಂತೆ ಎರಡು ವರ್ಷಗಳ ನಿರ್ದಿಷ್ಟ ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿದ್ದೇವೆ. ಪ್ರತಿಯೊಂದು ಹಂತದಲ್ಲಿಯೂ ಈ ಯೋಜನೆ ಸಕ್ರಮವಾಗಿ ಮುನ್ನಡೆಯುವುದಕ್ಕಾಗಿ 'ಸಂಪಾದಕ ಮಂಡಳಿ'ಯ ಸದಸ್ಯರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ, ಡಾ. ಎಸ್. ವಿದ್ಯಾಶಂಕರ, ಶ್ರೀ ಎಸ್. ಶಿವಣ್ಣ ಅವರು ಉದ್ದಕ್ಕೂ ಬೆಲೆಯುಳ್ಳ ಸಲಹೆ-ಮಾರ್ಗದರ್ಶನ ನೀಡಿದ್ದಾರೆ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಆರಂಭದ ಕೆಲವು ತಿಂಗಳು ಸಂಪಾದಕ ಮಂಡಳಿಯ ಸದಸ್ಯರಾಗಿ, ವಿಶ್ವಾಸದಿಂದ ನೆರವಾಗಿದ್ದಾರೆ. ಸಂಪಾದಕ ಮಿತ್ರರಾದ ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಎಸ್. ವಿದ್ಯಾಶಂಕರ, ಡಾ. ವ್ಹಿ. ಬಿ. ರಾಜೂರ, ಡಾ. ಬಿ. ಆರ್. ಹಿರೇಮಠ, ಶ್ರೀ ಎಸ್. ಶಿವಣ್ಣ ತುಂಬ ಶ್ರಮ-ಶ್ರದ್ಧೆಗಳಿಂದ ಸಂಪಾದನ ಕೆಲಸ ಪೂರೈಸಿದ್ದಾರೆ. ಸಹಾಯಕ ಸಂಶೋಧಕರಾದ ಶ್ರೀಮತಿ ವಿಜಯಶ್ರೀ ಹಿರೇಮಠ, ಶ್ರೀ ವಾಯ್. ಎಂ. ಯಾಕೊಳ್ಳಿ, ಶ್ರೀ ಬಿ. ವ್ಹಿ. ಕೋರಿ ಅವರು ದಣಿವನ್ನು ಲೆಕ್ಕಿಸದೆ ದುಡಿದಿದ್ದಾರೆ. ಇವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಈ ಯೋಜನೆಯನ್ನು ಅನುದಾನ ಮಾಡಿದ ಕರ್ನಾಟಕ ಸರಕಾರದ ಔದಾರ್ಯಕ್ಕೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ. ಈ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಎಸ್. ಆರ್. ಬೊಮ್ಮಾಯಿ, ಶ್ರೀ ವೀರೇಂದ್ರ ಪಾಟೀಲ, ಶ್ರೀ ಎಸ್. ಬಂಗಾರಪ್ಪ ಅವರಿಗೂ, ಸಾಹಿತಿಗಳೂ ಸಾಹಿತ್ಯ-ಸಂಸ್ಕೃತಿಗಳ ಗಾಢ ಆಸಕ್ತರೂ

ಆಗಿರುವ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ ಅವರಿಗೂ ಋಣಿಯಾಗಿದ್ದೇವೆ.

ಈ ಯೋಜನೆ ಅಸ್ತಿತ್ವಕ್ಕೆ ಬರುವಲ್ಲಿ ವಿಶೇಷ ಆಸಕ್ತಿ ವಹಿಸಿದವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂದಿನ ಸಚಿವರಾಗಿದ್ದ ಶ್ರೀ ಎಂ. ಪಿ. ಪ್ರಕಾಶ ಅವರು. ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅನನ್ಯ ಪ್ರೀತಿ-ಗೌರವ ಬೆಳೆಸಿಕೊಂಡಿರುವ ಶ್ರೀಯುತರಿಗೆ ನಾವು ಕೃತಜ್ಞರಾಗಿದ್ದೇವೆ. ಆಮೇಲೆ ಈ ಇಲಾಖೆಗೆ ಸಚಿವರಾಗಿ ಬಂದ ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಕೆ. ಎಚ್. ರಂಗನಾಥ, ಶ್ರೀ ಎಸ್. ರಮೇಶ್, ಇಂದಿನ ಸಚಿವರಾದ ಮಾನ್ಯ ಶ್ರೀ ಎಚ್. ವಿಶ್ವನಾಥ್ ಅವರಿಗೆ ನಮ್ಮ ಗೌರವಗಳು ಸಲ್ಲುತ್ತವೆ.

ಈ ಪ್ರಸಂಗದಲ್ಲಿ ಆತ್ಮೀಯ ಆಡಳಿತ ನಿರ್ದೇಶನ ಮಾಡಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಂದಿನ ನಿರ್ದೇಶಕರಾಗಿದ್ದ ಶ್ರೀ ಐ. ಎಂ. ವಿಠ್ಠಲಮೂರ್ತಿ, ಶ್ರೀ ಬಿ. ಪಾರ್ಥಸಾರಥಿ, ಕಮಿಷನರ್ ಡಾ. ಪಿ. ಎಸ್. ರಾಮಾನುಜಂ, ಇಂದಿನ ಕಮಿಷನರ್‌ರಾದ ಶ್ರೀ ಪಿ. ಎಸ್. ವಿ. ರಾವ್ ಅವರನ್ನೂ ಅಧಿಕ ನಿರ್ದೇಶಕರಾದ ಶ್ರೀ ಕೆ. ದೇವರಸಯ್ಯ, ಉಪನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರನ್ನೂ ನೆನೆಯುವುದು ಪ್ರೀತಿಯ ವಿಷಯವಾಗಿದೆ.

ಇಂಥ ಒಂದು ಬೃಹತ್ ಯೋಜನೆಗೆ ಕಾರ್ಯಾಲಯವೊಂದು ಅತ್ಯವಶ್ಯ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಈ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ. ಜಿ. ಕೆ. ನಾರಾಯಣರೆಡ್ಡಿ, ಇಂದಿನ ಕುಲಪತಿ ಡಾ. ಎಸ್. ರಾಮೇಗೌಡ ಅವರ ಔದಾರ್ಯವನ್ನು, ಪೀಠದ ಮುಖ್ಯಸ್ಥರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳೂ ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ದಾಳಿಗೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಮುದ್ರಿಕೆ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ವಚನಗಳನ್ನು ಶುದ್ಧೀಕರಿಸುವುದು - ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ವಚನಸಾಹಿತ್ಯದ ಮೇಲಿನ ಗೌರವ, ಕೆಲಸದ ಮೇಲಿನ ಪ್ರೀತಿಗಳು ನಮ್ಮಿಂದ ಈ ಕಾರ್ಯ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತ, ಎರಡು ವರ್ಷ ರಾತ್ರಿಯನ್ನೂ ಹಗಲುಮಾಡಿ ದುಡಿದು ರೂಪಿಸಿದ ಈ ಹದಿನೈದು ಸಂಪುಟಗಳನ್ನು ಸಹೃದಯಲೋಕಕ್ಕೆ ಅರ್ಪಿಸುತ್ತೇವೆ. 'ಶಿವಶರಣರ ಸಮಗ್ರ ವಚನಸಾಹಿತ್ಯ' ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳನ್ನು ಬೆಳಗಲೆಂದು ಹಾರೈಸುತ್ತೇವೆ.

## ದ್ವಿತೀಯ ಆವೃತ್ತಿ

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಸಂಪುಟಗಳು ೧೯೯೩ರಲ್ಲಿ ಪ್ರಕಟವಾಗಿ, ಒಂದು ವರ್ಷ ಕಳೆಯುವಷ್ಟರಲ್ಲಿ ಮಾರಾಟವಾದವು. ಕರ್ನಾಟಕ ಸರಕಾರದ ಗ್ರಂಥಪ್ರಕಟನೆಯ ಇತಿಹಾಸದಲ್ಲಿಯೇ ಈ ಬಗೆಯ ಮಾರಾಟ ಒಂದು ದಾಖಲೆ. ಜನತೆಯ ಅಪಾರ ಬೇಡಿಕೆಯನ್ನು ಗಮನಿಸಿ, ಈಗ ಪರಿಷ್ಕೃತ ದ್ವಿತೀಯ ಆವೃತ್ತಿಯನ್ನು ಪ್ರಕಟಿಸುತ್ತಿದ್ದೇವೆ. ಇತ್ತೀಚೆಗೆ ಲಭ್ಯವಾದ ಸುಮಾರು ಒಂದು ಸಾವಿರ ಹೊಸವಚನಗಳನ್ನು ಸೇರಿಸುವ, ಮೊದಲ ಆವೃತ್ತಿಯ ವಚನಪಾಠವನ್ನು ಮತ್ತೆ ಪರಿಷ್ಕರಿಸುವ ಮೂಲಕ ಮೊದಲಿನ ೧೪ ಸಂಪುಟಗಳನ್ನು ಸಮಗ್ರವಾಗಿ ಮತ್ತೆ ರೂಪಿಸಿದ್ದೇವೆ. ೧೫ನೆಯ ಸಂಪುಟ (ಪರಿಭಾಷಾಕೋಶ) ವನ್ನು ಹೊಸದಾಗಿ ಸಿದ್ಧಪಡಿಸಿದ್ದೇವೆ.  ಹೊಸ ವಿಚಾರ, ಶೋಧಗಳ ಬೆಳಕಿನಲ್ಲಿ ಸಂಪಾದಕೀಯ, ಪ್ರಸ್ತಾಪವನೆಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಿಸಿದ್ದೇವೆ.

ಈ ಆವೃತ್ತಿ ಬೆಳಕು ಕಾಣಲು ವಿಶೇಷ ಆಸಕ್ತಿ ವಹಿಸಿದ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಅವರಿಗೂ ನಾವು ಋಣಿಯಾಗಿದ್ದೇವೆ. ಈ ಕೆಲಸ ನಿರ್ದಿಷ್ಟ ಕಾಲಾವಧಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಂಡ ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ ಅವರಿಗೂ ಅವರ ಸಿಬ್ಬಂದಿ ವರ್ಗಕ್ಕೂ, ಮಾರ್ಗದರ್ಶನ ಮಾಡಿ ಸಂಪುಟಗಳ ಉತ್ತಮಿಕೆ ಕಾರಣರಾದ ಸಂಪಾದಕ ಮಂಡಲದ ಸದಸ್ಯರಿಗೂ, ಸಂಸ್ಕೃತ ಶ್ಲೋಕಗಳನ್ನು ಪರಿಷ್ಕರಿಸಿಕೊಟ್ಟ ಮೈಸೂರಿನ ಪೂಜ್ಯ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು ಕುಂದೂರುಮಠ ಅವರಿಗೂ, ೧೫ನೆಯ ಪರಿಭಾಷಾ ಸಂಪುಟವನ್ನು ಹೊಸದಾಗಿ ರೂಪಿಸಿಕೊಟ್ಟ ಡಾ. ಎಸ್. ಜಿ. ಮಹಾದೇವಪ್ಪ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ. ಹತ್ತು ಸಾವಿರ ಪುಟಗಳ, ಹದಿನೈದು ಸಂಪುಟಗಳ ಪ್ರಕಟನೆ ಸುಲಭದ ಕೆಲಸವೇನಲ್ಲ. ಸಾಹಿತ್ಯದ ಮೇಲಿನ, ಅದರಲ್ಲಿಯೂ ವಚನಸಾಹಿತ್ಯದ ಮೇಲಿನ ಪ್ರೀತಿ ಕಾರಣವಾಗಿ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಿಸಿದ ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ನಾವು ಋಣಿಯಾಗಿದ್ದೇವೆ.

ಮೊದಲ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ಕೊರತೆ, ದೋಷಗಳನ್ನು ಕಷ್ಟಪಟ್ಟು ಹುಡುಕಿ, ನಮಗೆ ಪೂರೈಸಿದ ತುಮಕೂರಿನ ಶ್ರೀ ಎಂ. ಚಂದ್ರಪ್ಪ ಅವರಿಗೂ, ಬೆಂಗಳೂರಿನ ಶ್ರೀ ಎಸ್. ಶಿವಣ್ಣ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

# ಪ್ರಸ್ತಾವನೆ

ಸಂಸ್ಕೃತ ಇಲ್ಲವೇ ಹಳಗನ್ನಡ ನಿಬದ್ಧವಾಗಿ, ಅದರಲ್ಲಿಯೂ ಛಂದೋಬದ್ಧವಾಗಿ ಬರೆಯುವ ಸಾಹಿತ್ಯ ಸಂಪ್ರದಾಯವನ್ನು ನಿರಾಕರಿಸಿ ತಿಳಿಗನ್ನಡದಲ್ಲಿ ಛಂದೋಮುಕ್ತವಾಗಿ ಬರೆಯುವ ಹೊಸ ಹಾದಿಯನ್ನು ಕನ್ನಡದಲ್ಲಿ ತೆರೆದವರು ಕಲ್ಯಾಣದ ಶರಣರು.

ಇವರು ಮಾಡಿದ ಮತ್ತೊಂದು ಕ್ರಾಂತಿಯೆಂದರೆ, ತಮ್ಮ ತತ್ವಶಾಸ್ತ್ರವನ್ನು ಬೋಧಿಸಲು ಮಾಧ್ಯಮವಾಗಿಸಿಕೊಂಡ ವಚನಗಳಲ್ಲಿ ಹೊಸ ಅರ್ಥಗಳಿಂದ ಪದಗಳನ್ನು ಬಳಸಿದುದು. ಈಗ ಶಂಕರಾಚಾರ್ಯ, ರಾಮಾನುಜಾಚಾರ್ಯ ಮುಂತಾದ ವೇದಾಂತಿಗಳಿಗಿದ್ದ ಭಾಷಿಕ ಅನುಕೂಲ ವಚನಕಾರರಿಗೆ ಇರಲಿಲ್ಲ. ಈ ಆಚಾರ್ಯರಿಗೆ ಸಿದ್ಧ ವೇದಾಂತ ಪರಿಭಾಷೆ ಇತ್ತು; ಅದು ಉಪನಿಷತ್ತು, ಭಗವದ್ಗೀತೆ, ಪುರಾಣಗಳಲ್ಲಿ ಆಗಲೇ ಬಳಕೆಯಾಗಿತ್ತು. ಅವರಿಗೆ ಹೊಸ ಪಾರಿಭಾಷಿಕ ಪದಗಳನ್ನು ಸೃಷ್ಟಿಸುವ, ಅಥವಾ ಇದ್ದ ಪಾರಿಭಾಷಿಕ ಪದಗಳಿಗೆ ತಮ್ಮದೇ ಆದ ಹೊಸ ಅರ್ಥಕೊಡುವ ಅಗತ್ಯ ಉಂಟಾಗಲಿಲ್ಲ. ವಚನಕಾರರು ತಮ್ಮ ತತ್ವಶಾಸ್ತ್ರವನ್ನು ಸರಳ ಕನ್ನಡದಲ್ಲಿ ಬೋಧಿಸಬೇಕಾಗಿದ್ದುದರಿಂದ, ಅವರಿಗೆ ಎರಡೇ ವಿಕಲ್ಪಗಳಿದ್ದವು: ಸಂಸ್ಕೃತ ಪಾರಿಭಾಷಿಕ ಪದಗಳನ್ನು ಉಪಯೋಗಿಸಬೇಕು, ಅಥವಾ ಹೊಸದಾಗಿ ಕನ್ನಡ ಪಾರಿಭಾಷಿಕ ಪದಗಳನ್ನು ಸೃಷ್ಟಿಸಬೇಕು. ಈ ಅಗತ್ಯವನ್ನು ಪೂರೈಸಿಕೊಳ್ಳಲು ಅವರು ಕೆಲವು ಸಂಸ್ಕೃತ ಪದಗಳನ್ನು ಎರವಲು ಪಡೆದರು; ಮತ್ತೆ ಕೆಲವು ಹಳೆಯ ಸಂಸ್ಕೃತ ಪದಗಳಿಗೆ ಹೊಸ ಅರ್ಥ ಕೊಟ್ಟರು, ಹಾಗೂ ತಮ್ಮದೇ ಆದ ಕನ್ನಡ ಪರಿಭಾಷೆಯನ್ನು ಸೃಷ್ಟಿಸಿದರು. ಉದಾಹರಣೆಗೆ ಮಾಟ, ಕೂಟ, ಅರಿವು, ಇಲ್ಲವೆ, ದಾಸೋಹ, ಚಿದ್ಬೆಳಗು, ನಾನಿಲ್ಲದಿರುವುದು, ನಾನು ನಾನಾಗುವುದು, ಬಯಲು, ಅಂಗವಿಸದಿರುವಿಕೆ, ಮರೆವು ಮುಂತಾದ ಪಾರಿಭಾಷಿಕ ಪದಗಳು ವಚನಕಾರರು ಬಿಟ್ಟು ಹೋದ ಆಸ್ತಿ.

* * *

ಯಾವುದೇ ಪದ ಅಥವಾ ಪದಗುಚ್ಛ ಪಾರಿಭಾಷಿಕ ಪದವೆನಿಸಿಕೊಳ್ಳಬೇಕಾದರೆ, ಅದಕ್ಕೊಂದು ಸಾಂದರ್ಭಿಕ ಆವಶ್ಯಕತೆ ಬೇಕಾಗುತ್ತದೆ. ಉದಾಹರಣೆಗೆ ಶಿವ-ಜೀವರ ಕೂಟವೆಂಬ

ಆಧ್ಯಾತ್ಮಿಕ ಕ್ರಿಯೆಯೇ ನಡೆಯದಿದ್ದರೆ, 'ಕೂಟ' ಎಂಬುದು ವಚನಗಳಲ್ಲಿ ಪಾರಿಭಾಷಿಕಪದವೆನಿಸಿಕೊಳ್ಳುತ್ತಿರಲಿಲ್ಲ. ಕೆಲವು ವೇಳೆ ಅಂಥ ಕ್ರಿಯೆ ಅಥವಾ ಘಟನೆಗಳನ್ನು ಸೂಚಿಸಲು ಒಂದಕ್ಕಿಂತ ಹೆಚ್ಚು ಶಬ್ದಗಳು ಒಟ್ಟುಗೂಡಬೇಕಾಗುತ್ತದೆ. ಈ ಕಾರಣಕ್ಕಾಗಿ ಶರಣರು 'ನಾನು ನಾನಾಗುವುದು', 'ವಾಯುವಿನ ಪೂರ್ವಾಶ್ರಯವ ಕಳೆಯುವುದು', 'ಅರಿವು ಮರವೆ ಹಿಂಗುವುದು' ಮುಂತಾದ ಪಾರಿಭಾಷಿಕ ಪದಗಳನ್ನು ಸೃಷ್ಟಿಸಬೇಕಾಯಿತು. ಮತ್ತೆ ಕೆಲವು ವೇಳೆ, ಪಾರಿಭಾಷಿಕ ಪದಗಳು ಸ್ವತಂತ್ರವಾಗಿ ಪ್ರಯೋಗವಾದಾಗ ಒಂದರ್ಥವನ್ನು ಕೊಟ್ಟರೆ, ಒಟ್ಟುಗೂಡಿಸಿ ಪ್ರಯೋಗಿಸಿದಾಗ ಮತ್ತೊಂದರ್ಥ ಕೊಡುತ್ತವೆ. ಉದಾಹರಣೆಗೆ, "ಏಕವಸ್ತು", "ಉಭಯ", "ಭೇದ" ಎಂಬ ಮೂರು ಪದಗಳಿಗೆ ಮೂರು ಪರಸ್ಪರ ಸಂಬಂಧವಿಲ್ಲದ ಅರ್ಥಗಳಿದ್ದು, "ಏಕವಸ್ತು ಉಭಯ ಭೇದವಾಗುವುದು" ಎಂದಾಗ ನಾಲ್ಕನೇ ಅರ್ಥ ಬರುತ್ತದೆ. ವಚನಕಾರರು ಪರಿಭಾಷಾಸೃಷ್ಟಿಯಲ್ಲಿ ಇಂಥ ಅನೇಕ ಪ್ರಯೋಗಮಾಡಿದ್ದಾರೆ.

* * *

ಯಾವುದೇ ವಚನಕ್ಕೆ ನಾವು ಎರಡು ರೀತಿಯ ಅರ್ಥಗಳನ್ನು ಕೊಡಬಹುದು. ವಚನದ ಪ್ರತಿಶಬ್ದಕ್ಕೆ ಅರ್ಥಕೊಡುವುದು ಒಂದು ರೀತಿಯದು. ಇದು ನಿಘಂಟುವಿನ ಅರ್ಥ. ಒಂದು ವೇಳೆ ಇಲ್ಲಿ ಅರ್ಥ ಗೊತ್ತಿಲ್ಲದಿದ್ದರೆ, ನಿಘಂಟುವಿನ ಸಹಾಯದಿಂದ ವಚನದ ಎಲ್ಲ ಪದಗಳ ಅರ್ಥವನ್ನೂ ತಿಳಿದುಕೊಳ್ಳಬಹುದು. ಎರಡನೆ ರೀತಿಯೆಂದರೆ ವಚನವನ್ನು ಪೂರ್ತಿಯಾಗಿ ಓದಿ, ಅದರ ಸಂಪೂರ್ಣ ಅರ್ಥವನ್ನು ತಿಳಿದುಕೊಳ್ಳುವುದು. ಇದನ್ನು ಸಮಗ್ರ ಅರ್ಥವೆನ್ನಬಹುದು. ಮೊದಲನೆಯದು ವಿಶ್ಲೇಷಣೆ (analysis)ಯಿಂದ ಸಾಧ್ಯವಾದರೆ, ಎರಡನೆಯದು ಸಂಶ್ಲೇಷಣೆ (synthesis)ಯಿಂದ ಸಾಧ್ಯವಾಗುತ್ತದೆ. ಆದರೆ ಇವೆರಡೂ ಕೆಲವು ವೇಳೆ ಪರಸ್ಪರ ಪೂರಕ. ಅಂದರೆ, ಕೆಲವು ವೇಳೆ ಇಡೀ ವಚನದ ಅರ್ಥ ಗೊತ್ತಾಗದ ಹೊರತು, ಅದರೊಳಗಿರುವ ಕೆಲವು ಬಿಡಿ ಪದಗಳ ಅರ್ಥ ಗೊತ್ತಾಗುವುದಿಲ್ಲ; ಮತ್ತೆ ಕೆಲವು ವೇಳೆ, ಕೆಲವು ಬಿಡಿ ಪದಗಳ ಅರ್ಥ ಗೊತ್ತಾಗದೆ ಇಡಿ ವಚನದ ಅರ್ಥ ಗೊತ್ತಾಗುವುದಿಲ್ಲ.

ಅನೇಕ ವೇಳೆ ನಮಗೆ ವಚನದ ಪ್ರತಿಯೊಂದು ಪದದ ನಿಘಂಟುವಿನ ಅರ್ಥ

ಗೊತ್ತಾದರೂ, ವಚನದ ಉದ್ದೇಶ ಸ್ಪಷ್ಟವಾಗುವುದಿಲ್ಲ. ಹಾಗೆ ಸ್ಪಷ್ಟವಾಗಬೇಕಾದರೆ, ವಚನದ ಒಳಗಿರುವ ಅದರ ತತ್ತ್ವಶಾಸ್ತ್ರವನ್ನು ತಿಳಿದುಕೊಳ್ಳಬೇಕಾಗುತ್ತದೆ. ವಚನಗಳ ತತ್ತ್ವಶಾಸ್ತ್ರವನ್ನು ತಿಳಿದುಕೊಂಡಲ್ಲದೆ ಯಾವೊಂದು ವಚನದ ಪಾರಿಭಾಷಿಕ ಪದಕ್ಕೂ ಕೊಟ್ಟ ಅರ್ಥ ಅಪೂರ್ಣ ಅಥವಾ ಅಸ್ಪಷ್ಟವಾಗುತ್ತದೆ. ಇದನ್ನು ಒಂದು ಉಪಮೆಯೊಂದಿಗೆ ವಿವರಿಸಬಹುದು: ಒಬ್ಬ ಹತ್ತು ವರ್ಷದ ಹುಡುಗನಿಗೆ ಕನ್ನಡದಲ್ಲಿ ಬರೆದ ಪ್ರೇಮಪತ್ರ ಸಿಕ್ಕುತ್ತದೆ. ಅವನಿಗೆ ಕನ್ನಡ ಬರುತ್ತದೆಯಾದುದರಿಂದ, ಆ ಪತ್ರದಲ್ಲಿರುವ ಪ್ರತಿಯೊಂದು ಪದದ ಅರ್ಥವೂ ಅವನಿಗೆ ಗೊತ್ತಾಗುತ್ತದೆ. ಆದರೆ ಇನ್ನೂ ಪ್ರೇಮಿಸುವ ವಯಸ್ಸಾಗಿಲ್ಲವಾದುದರಿಂದ ಅವನಿಗೆ ಆ ಪ್ರೇಮಪತ್ರ ಪೂರ್ಣವಾಗಿ ಅರ್ಥವಾಯಿತೆಂದರೆ ತಪ್ಪಾಗುತ್ತದೆ. ಅದೇ ರೀತಿ, ವಚನಗಳ ಪಾರಿಭಾಷಿಕ ಪದಗಳಿಗೆ ಅರ್ಥ ಹೇಳಬೇಕೆನ್ನುವವನಿಗೆ ವಚನದ ತತ್ತ್ವಶಾಸ್ತ್ರದ ಹಿನ್ನೆಲೆ ಬೇಕಾಗುತ್ತದೆ. ವಚನ ಪರಿಭಾಷೆಗೆ ಈ ಅರ್ಥವನ್ನೇ ಏಕೆ ಕೊಡಬೇಕು? ಬೇರೆ ಅರ್ಥವನ್ನೇಕೆ ಕೊಡಬಾರದು? ಎಂದು ಯಾರಾದರೂ ಕೇಳಿದರೆ, ಅದಕ್ಕೆ ಉತ್ತರ ಹೀಗೆ : ಇಡೀ ವಚನಗಳ ತತ್ತ್ವಶಾಸ್ತ್ರದ ಹಿನ್ನೆಲೆಯಲ್ಲಿ ಒಂದು ಪಾರಿಭಾಷಿಕ ಪದಕ್ಕೆ ಕೊಟ್ಟ ಅರ್ಥ ಸಮರ್ಪಕ ಮತ್ತು ಸಮರ್ಥನೀಯವೇ ಹೊರತು, ಬೇರೆ ಹಿನ್ನೆಲೆಯಲ್ಲಿ ಕೊಟ್ಟ ಅರ್ಥವಲ್ಲ. ಉದಾಹರಣೆಗೆ 'ಅಂಗ' ಎಂಬ ಪದಕ್ಕೆ "ಪರಶಿವನ ಅಂಗ(ಭಾಗ)ವಾದ ಆತ್ಮ" ಎಂದು ಹೇಳಬೇಕಾದರೆ ವಚನಗಳ ತತ್ತ್ವಶಾಸ್ತ್ರದ ಹಿನ್ನೆಲೆ ಅಗತ್ಯ. ಆ ಪದಕ್ಕೆ ಬೇರೆ ಅರ್ಥಗಳಿದ್ದರೂ, ಈ ಅರ್ಥಕೊಡದಿದ್ದರೆ ವಚನಕಾರರಿಗೆ ಅನ್ಯಾಯ ಬಗೆದಂತೆ.

ಆದರೆ, ವಚನಗಳ ಎಲ್ಲ ಪಾರಿಭಾಷಿಕ ಪದಗಳ ಅರ್ಥವನ್ನೂ ತಿಳಿದುಕೊಂಡರೆ ವಚನಕಾರರ ತತ್ತ್ವಮೀಮಾಂಸೆ, ನೀತಿಶಾಸ್ತ್ರ, ಕಾಯಕ ಸಿದ್ಧಾಂತ ಮುಂತಾದವುಗಳನ್ನು ತಿಳಿದುಕೊಂಡಂತಲ್ಲ. ಏಕೆಂದರೆ, ಈ ಎಲ್ಲ ಸಿದ್ಧಾಂತಗಳನ್ನು ಒಟ್ಟುಗೂಡಿಸಿ, ಪರಸ್ಪರ ಹೊಂದಿಸಿ, ವಿವರಿಸುವ ಕೆಲಸ, ಪಾರಿಭಾಷಿಕ ಅರ್ಥಕೋಶದ ಮಿತಿಯೊಳಗೆ ಬರುವುದಿಲ್ಲ.

* * *

ವಚನಕಾರರು ಬಳಸಿರುವ ಅನ್ಯ ದರ್ಶನಗಳ ಅನೇಕ ಪದಗಳು ಇತರರ ಪರಿಕಲ್ಪನೆಗಳನ್ನು ಖಂಡಿಸುವುದಕ್ಕಾಗಿರಬಹುದು ಅಥವಾ ತಮ್ಮ ಪರಿಕಲ್ಪನೆಗಳನ್ನು

ಪುಷ್ಟೀಕರಿಸುವುದಕ್ಕಾಗಿರಬಹುದು. ಉದಾ: 'ಅಹಂ ಬ್ರಹ್ಮಾಸ್ಮಿ' ಎಂಬ ಉಪನಿಷತ್ತಿನ ಹೇಳಿಕೆಯನ್ನು ಖಂಡಿಸುವಾಗ ಮಾತ್ರ ಅವರು ಈ ಮಹಾವಾಕ್ಯವನ್ನು ಬಳಸುತ್ತಾರೆ. ಆಗ ನಾವು ವಚನಶಾಸ್ತ್ರದ ಒಳಗಿದ್ದುಕೊಂಡೇ ಈ ಮಹಾವಾಕ್ಯಕ್ಕೆ ಅರ್ಥ ಹೇಳಲು ಖಂಡಿತ ಸಾಧ್ಯವಾಗುವುದಿಲ್ಲ. ಆದುದರಿಂದ ನಾವೂ ವಚನಕಾರರ ಜೊತೆ ಅನ್ಯದರ್ಶನಗಳಾದ ಬೌದ್ಧ, ಜೈನ, ಅದ್ವೈತ, ಮುಂತಾದವುಗಳ ಹಿನ್ನೆಲೆಯಲ್ಲಿ ಮಾತ್ರ ಆ ಪಾರಿಭಾಷಿಕ ಪದಗಳಿಗೆ ಅರ್ಥ ಹೇಳಬಹುದು.

ಇಲ್ಲಿಯೂ ಕೆಲವು ಸಮಸ್ಯೆಗಳು ಉದ್ಭವಿಸುತ್ತವೆ. ಒಬ್ಬ ವಚನಕಾರ ಅಂಗ, ಶೂನ್ಯ, ಪರಬ್ರಹ್ಮ, ಈಶ್ವರ, ಮುಂತಾದ ಅನೇಕಾರ್ಥಕ ಪದಗಳನ್ನು ಉಪಯೋಗಿಸಿದಾಗ, ಅವುಗಳನ್ನು ಯಾವ ವಿಶಿಷ್ಟ ಅರ್ಥದಲ್ಲಿ ಉಪಯೋಗಿಸಿದ್ದಾನೆ ಎಂದು ಓದುಗರಿಗೆ ಗೊತ್ತಾಗುವ ಬಗೆ ಹೇಗೆ? ಅರ್ಥಕಾರರು ಈ ಪದಕ್ಕೆ ಈ ವಚನದಲ್ಲಿ ಈ ಅರ್ಥವಿದೆ, ಎರಡನೆ ವಚನದಲ್ಲಿ ಮತ್ತೊಂದು ಅರ್ಥವಿದೆ, ಮೂರನೆಯ ವಚನದಲ್ಲಿ ಮಗುದೊಂದು ಅರ್ಥವಿದೆ ಎಂದು ಖಚಿತಪಡಿಸಿದ್ದಾರೆಯೇ? ಎಂದು ಓದುಗರು ಕೇಳಿದರೆ, ಇಲ್ಲ ಎಂಬ ಖಚಿತ ಉತ್ತರ ಹೇಳಬೇಕಾಗುತ್ತದೆ. ಕೆಲವು ಕಡೆಯೇನೋ ಈ ಪದಕ್ಕೆ ಅನೇಕ ಅರ್ಥಗಳಿದ್ದು ಈ ವಚನದಲ್ಲಿ ಮಾತ್ರ ಈ ಅರ್ಥಮಾತ್ರವಿದೆ ಎಂದು ಹೇಳಿದ್ದರೂ, ಆ ಕಾರ್ಯನೀತಿಯನ್ನು ಎಲ್ಲ ಪದಗಳಿಗೂ ವಿಸ್ತರಿಸಲು ಬರುವುದಿಲ್ಲ. ಒಂದು ವೇಳೆ ಹಾಗೆ ಮಾಡಿದರೆ, ಅರ್ಥಕೋಶದ ಪುಟಗಳ ಸಂಖ್ಯೆ ಅನವಶ್ಯ ಮಿತಿಮೀರುತ್ತದೆ. ಆದುದರಿಂದ ಓದುಗರೇ ಸಂದರ್ಭಕ್ಕೆ ತಕ್ಕಂತೆ ಸೂಕ್ತ ಅರ್ಥವನ್ನು ಆರಿಸಿಕೊಳ್ಳಬೇಕು.

ಈ ಪುಸ್ತಕ್ಕೆ ಅನೇಕ ಮಿತಿಗಳಿರುವುದನ್ನು ಓದುಗರ ಗಮನಕ್ಕೆ ತರಬಯಸುತ್ತೇನೆ.

೧. ಪಾರಿಭಾಷಿಕ ಪದಗಳ ಜೊತೆಗೆ ಆಲಂಕಾರಿಕ ಪಾರಿಭಾಷಿಕ ಪದಗಳಿಗೂ ಅರ್ಥ ಕೊಡಲಾಗಿದೆ, ಆದರೆ, ಬೆಡಗಿನ ವಚನ ಪದಗಳಿಗೆ ಅರ್ಥ ಕೊಟ್ಟಿಲ್ಲ.

೨. ಇದು ಪ್ರಥಮ ಮುದ್ರಣದ (೧೯೯೩) ವಚನಗಳಿಗೆ ಸೀಮಿತವಾಗಿದ್ದರೂ ಅದರಲ್ಲಿಯ ಇನ್ನೂ ಅನೇಕ ಪಾರಿಭಾಷಿಕ ಪದಗಳು ನನ್ನ ಗಮನಕ್ಕೆ ಬಾರದಿರಬಹುದು.

೩. ನಾನು ಕೊಟ್ಟಿರುವ ಅರ್ಥಗಳಲ್ಲಿ ಕೆಲವು ಅಸಮಂಜಸವಾಗಿಬಹುದು; ಕೆಲವು ಅಪೂರ್ಣವಾಗಿರಬಹುದು; ಕೆಲವು ಆವಶ್ಯಕತೆಗಿಂತ ಹೆಚ್ಚಾಗಿರಬಹುದು.

ಈ ಮಿತಿಗಳನ್ನು ಓದುಗರು ಮನ್ನಿಸಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

*　　*　　*

ಪ್ರಸ್ತುತ ಕಾರ್ಯವನ್ನು ಮಾಡಲು ಪ್ರೇರಣೆ ನೀಡಿದ ಡಾ. ಎಂ. ಎಂ. ಕಲಬುರ್ಗಿ, ಈ ಕಾರ್ಯವನ್ನು ವಹಿಸಿಕೊಟ್ಟ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಧಿಕಾರಿಗಳು, ನನ್ನ ಹಸ್ತಪ್ರತಿಯನ್ನು ಸುಂದರವಾಗಿ ನಕಲು ಮಾಡುವಲ್ಲಿ, ಪ್ರೂಫ್ ತಿದ್ದುವಲ್ಲಿ ಸಹಾಯಮಾಡಿದ ಶ್ರೀ ಕೆ. ವಿ. ಜುಕ್ತಿಮಠ ಸ್ವಾಮೀಜಿ, ಅನೇಕ ರೀತಿಯಲ್ಲಿ ಸಹಾಯಮಾಡಿದ ನನ್ನ ಶ್ರೀಮತಿ ಸರ್ವಮಂಗಳಾ, ಇವರೆಲ್ಲರಿಗೂ ನಾನು ಋಣಿಯಾಗಿದ್ದೇನೆ.

- ಎನ್. ಜಿ. ಮಹಾದೇವಪ್ಪ

# ವಚನ ಪರಿಭಾಷಾಕೋಶ

# ವಚನ ಪರಿಭಾಷಾಕೋಶ

**ಅಂಗ :** ಇದಕ್ಕೆ ಕನಿಷ್ಠ ಏಳು ಅರ್ಥಗಳಿವೆ.

(೧) ದೇಹ. ('ಅಂಗದ ಮೇಲೆ ಶಿವಲಿಂಗವಿಲ್ಲದವರ ...' ಎಂಬಲ್ಲಿ ದೇಹದ ಮೇಲೆ ಇಷ್ಟಲಿಂಗವಿಲ್ಲದವರ ಎಂಬರ್ಥವಿದೆ).

(೨) ದೇಹದ ಒಂದು ಭಾಗ (ಉದಾ: ಉತ್ತಮಾಂಗ).

(೩) ಆತ್ಮ (ಲಿಂಗಾಂಗ ಸಾಮರಸ್ಯ ಎಂಬ ಪದವು ಪರಶಿವ ಮತ್ತು ಆತ್ಮ ಇವುಗಳ ಸಾಮರಸ್ಯಕ್ಕೆ ಅನ್ವಯಿಸುತ್ತದೆ).

(೪) ಲಿಂಗಾಂಗ ಸಾಮರಸ್ಯ ಪಡೆದವನ ಆತ್ಮ ಮತ್ತು ದೇಹ ಎರಡೂ ಪರಶಿವನ ಅಂಗ. ಪರಶಿವನು ಭಕ್ತದೇಹಿಕ ದೇವ ಎಂಬಲ್ಲಿ, 'ಐಕ್ಯಸ್ಥಲದವನೇ ಪರಶಿವನ ದೇಹ' ಎಂಬರ್ಥವಿದೆ. ಭಕ್ತನು ವಿವಿಧ ಅಂಗಗಳ ಮೂಲಕ ವಿಷಯಗಳನ್ನು ಅನುಭವಿಸುವಂತೆ, ಪರಶಿವನು ಆ ಅಂಗಗಳ ಮೂಲಕ ಅನುಭವಿಸುತ್ತಾನೆ - ಎಂಬುದು ಈ ಪರಿಕಲ್ಪನೆಯ ಅರ್ಥ. ಯೋಗಾಂಗದ ಅರ್ಥವೂ ಈ ಪರಿಕಲ್ಪನೆಯ ಹತ್ತಿರಕ್ಕೆ ಬರುತ್ತದೆ. ಈ ಅರ್ಥವನ್ನು ಇನ್ನೂ ಸ್ವಲ್ಪ ಹಿಗ್ಗಿಸಿದರೆ, ಸಾಮರಸ್ಯಪಡೆದವನ ದೇಹ ಮತ್ತು ಆತ್ಮವಷ್ಟೇ ಅಲ್ಲ, ಪ್ರಪಂಚದಲ್ಲಿರುವುದೆಲ್ಲ ಪರಶಿವನ ಅಂಗ ಎಂದಾಗುತ್ತದೆ. ಇದನ್ನೇ ಕೆಲವರು 'ಅಷ್ಟತನು' ಎಂಬ ಪದದ ಮೂಲಕ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಜೀವಾತ್ಮನಿಗೆ ಹೇಗೆ ಪಂಚಭೂತಗಳಿಂದಾದ ಒಂದು ದೇಹವಿದೆಯೋ ಹಾಗೆ, ಪರಶಿವನಿಗೆ

---

(ಸೂಚನೆ: ಪ್ರಯೋಗಗಳ ಮುಂದೆ ಕಂಸದಲ್ಲಿ ಬಳಸಿದ ಮೊದಲ ಅಂಕಿಯು ಸಮಗ್ರ ವಚನಸಂಪುಟದ (೧೯೯೩) ಸಂಖ್ಯೆಯನ್ನೂ, ಆಮೇಲಿನ ಅಂಕಿಯು ಆ ಸಂಪುಟದಲ್ಲಿರುವ ವಚನದ ಸಂಖ್ಯೆಯನ್ನೂ ಸೂಚಿಸುತ್ತವೆ).

ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ, ಆತ್ಮ, ಸೂರ್ಯ ಮತ್ತು ಚಂದ್ರ ಎಂಬ ಎಂಟು ತತ್ವಗಳ ದೇಹವಿದೆ. ಆದರೆ, ನಮಗಿರುವಂತೆ ಅವನಿಗೂ ಕೈಕಾಲು ಇತ್ಯಾದಿಗಳಿವೆ ಎಂಬುದು ಇದರ ಅರ್ಥವಲ್ಲ.

(೫) ಸ್ವರೂಪ [‘ನಿಮ್ಮಂಗವ ತೋರಿ....’ (೯:೮೭) ಎಂಬಲ್ಲಿಯೂ ನಿಮ್ಮ ‘ನಿಜದಂಗವ ತೋರಿ...’ (೯:೯೫) ಎಂಬಲ್ಲಿಯೂ ‘ಅಂಗ’ ಎಂಬ ಪದವು ‘ಸ್ವರೂಪ’ ಎಂಬುದಕ್ಕೆ ಅನ್ವಯವಾಗುವಂತೆ ಬಳಕೆಯಾಗಿದೆ].

(೬) ತ್ವಕ್ಕು ಅಥವಾ ಚರ್ಮ [‘ಅಂಗದ ಕೊನೆಯಲ್ಲಿ ಲಿಂಗ ಮುಂತಲ್ಲದೆ ಸಂಗವ ಮಾಡನಾ ಶರಣನು’ (೩:೩೦೭) ಎಂಬಲ್ಲಿ ಅಂಗ ಎಂಬುದು ಚರ್ಮಕ್ಕೆ ಅನ್ವಯಿಸುತ್ತದೆ. ಚೆನ್ನಬಸವಣ್ಣನವರು ಉಳಿದ ನಾಲ್ಕು ಜ್ಞಾನೇಂದ್ರಿಯಗಳ ಹೆಸರುಗಳನ್ನು ಹೇಳಿ, ಚರ್ಮಕ್ಕೆ ‘ಅಂಗ’ ಎಂಬ ಪದವನ್ನು ಬಳಸಿದ್ದಾರೆ].

(೭) ಬುದ್ಧಿ [“ಅವರು ಕಾಣಬೇಕು, ಇವರು ಕಾಣಬೇಕೆಂಬ ಭ್ರಮೆಯ ಭ್ರಮಿತರು ಅಂಗಹೀನರು” ಎಂದು ಚೆನ್ನಬಸವಣ್ಣನವರು ಹೇಳುವಾಗ (೩:೩೩೭), ಅವರ ಪ್ರಕಾರ, ಅಂಗಹೀನರೆಂದರೆ ಅಜ್ಞಾನಿಗಳು ಅಥವಾ ಬುದ್ಧಿಹೀನರು].

**ಅಂಗಕ್ರಿಯೆಗಳೆಲ್ಲ ಲಿಂಗಕ್ರಿಯೆಗಳಾಗುವುದು** : ಲಿಂಗಾಂಗ ಸಾಮರಸ್ಯದ ಪರಿಣಾಮವಾಗಿ ಅಂಗನಲ್ಲಿ ತಾನು ಪ್ರತ್ಯೇಕ ಎಂಬ ಭಾವ ನಿವಾರಣೆಯಾಗುವುದಲ್ಲದೆ, ಶಿವನೇ ತನ್ನ ಮೂಲಕ ಚಿಂತಿಸುತ್ತಾನೆ, ಕೆಲಸ ಮಾಡುತ್ತಾನೆ, ಅನುಭವಿಸುತ್ತಾನೆ, ಎಂದು ತಿಳಿಯುತ್ತಾನೆ. ಆಗ ಅಂಗದ ಕ್ರಿಯೆಗಳೆಲ್ಲವೂ ಲಿಂಗದ ಕ್ರಿಯೆಗಳು. (೮:೧೧೦೨)

**ಅಂಗಜೀವಿ** : ದೇಹ ಮತ್ತು ಇಂದ್ರಿಯಗಳ ಬಯಕೆಗಳನ್ನು ಪೂರೈಸಿಕೊಳ್ಳಲೋಸುಗ ಜೀವಿಸುವವನು (೨:೩೫೬)

**ಅಂಗತತ್ವ** : ಪರಶಿವನ ಸೃಷ್ಟಿಯಲ್ಲಿ ಎರಡನೆಯ ಹಂತ. ಅಂಗವೂ, ಅವನಿಗೆ (ಆತ್ಮನಿಗೆ) ಬೇಕಾದ ೨೪ ತತ್ವಗಳೂ ಈ ಅಂಗತತ್ವದಲ್ಲಿ ಸೇರಿವೆ. ಅವು: ಐದು ಭೂತಗಳು, ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು, ಐದು ವಾಯುಗಳು ಹಾಗೂ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ.

**ಅಂಗತ್ರಯ** : ಅಂಗ ಎಂದರೆ ಕೇವಲ ‘ಆತ್ಮ’ ಎಂದಷ್ಟೇ ಅರ್ಥವಲ್ಲ. ಈ ಪದವು ಆತ್ಮ ಮತ್ತು ಅದು ಆಕ್ರಮಿಸಿಕೊಂಡಿರುವ ದೇಹ ಎರಡಕ್ಕೂ ಅನ್ವಯವಾಗುತ್ತದೆ. ಈ ಅರ್ಥದಲ್ಲಿ “ಅಂಗತ್ರಯ”ವು ತ್ಯಾಗಾಂಗ, ಭೋಗಾಂಗ ಮತ್ತು ಯೋಗಾಂಗಳ ದೇಹಾತ್ಮ ಸಂಪುಟಗಳಿಗೆ ಅನ್ವಯಿಸುತ್ತದೆ.

**ಅಂಗದ ಭಂಗ** : ಅಂಗನು (ಸಾಧಕನು) ಪರಶಿವನಿಂದ ಭಿನ್ನವೆಂದು ತಿಳಿದುಕೊಂಡಿರುತ್ತಾನೆ. ಹಾಗೂ ಆ ನಂಬಿಕೆಯಂತೆ ತನ್ನಿಂದ ಭಿನ್ನವಾದ ಲಿಂಗವನ್ನು ಪೂಜಿಸುತ್ತಾನೆ. ಆದರೆ, ಐಕ್ಯಸ್ಥಲವನ್ನು ಮುಟ್ಟಿದ ಮೇಲೆ ತಾನು ಅಂಗದಿಂದ ಭಂಗ (ಭಿನ್ನ)ವಾಗಿದ್ದೇನೆಂಬುದು

ಐಕ್ಯಸ್ಥಲವನ್ನು ಮುಟ್ಟಿದ ಮೇಲೆ ತಾನು ಅಂಗದಿಂದ ಭಂಗ (ಭಿನ್ನ)ವಾಗಿದ್ದೇನೆಂಬುದು ಕೇವಲ ಭ್ರಮೆ ಎಂಬುದು ಅವನಿಗೆ ಅರಿವಾಗುತ್ತದೆ. (೫:೨)

**ಅಂಗದ ಲಯ :** ಲಿಂಗಾಂಗ ಸಾಮರಸ್ಯವೆಂಬ ಅತಿಶಯ ಅನುಭವವಾದ ಮೇಲೆ ಅಂಗನು ತಾನೊಬ್ಬ ಪ್ರತ್ಯೇಕ ವ್ಯಕ್ತಿಯೆಂದು ತಿಳಿಯದೆ, ತಾನು ಪರಶಿವನಲ್ಲಿರುವ ಒಂದು ಅರಿವುಳ್ಳ ಕಣ ಎಂದು ತಿಳಿಯುತ್ತಾನೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ - ಮೊದಲಿನ ತಾನು ಇಲ್ಲವೇ ಇಲ್ಲ, ಪರಶಿವನಷ್ಟೇ ಇದ್ದಾನೆ, ಪರಶಿವ ಇಚ್ಛಿಸಿದಂತೆ ತಾನು ಕೆಲಸಮಾಡುವುದಾಗಿ ಹೇಳುತ್ತಾನೆ. ಬೀಜವು ಮೊಳಕೆ ತೋರಿದ ಮೇಲೆ ಹೇಗೆ ಇಲ್ಲವಾಗುತ್ತದೆಯೋ ಹಾಗೆಯೇ ಅಂಗನು ಲಿಂಗವನ್ನು ಅರಿತ ಮೇಲೆ ಅಂಗತ್ವವನ್ನು ಕಳೆದುಕೊಳ್ಳುತ್ತಾನೆ (೮:೮೮೯).

**ಅಂಗದಾಚಾರ :** 'ಅಂಗ' ಎಂದರೆ ಶುದ್ಧವಾದ ಆತ್ಮ, ಪರಶಿವನ ನೆಲೆಯಾಗಿರಲು ಯೋಗ್ಯವಾದ ಆತ್ಮ, ಎಂದಾದರೆ ಅಂಥ ಅಂಗದ ಆಚಾರಗಳೆಲ್ಲ ನಿಷ್ಠಾಪೂರ್ವಕ ಧಾರ್ಮಿಕ ಕ್ರಿಯೆಗಳೂ, ಶ್ರದ್ಧಾಪೂರ್ವಕ ನೈತಿಕ ಕ್ರಿಯೆಗಳೂ ಆಗಿರಬೇಕಾಗುತ್ತದೆ. (೫:೨೪೭)

**ಅಂಗದುದಯ :** ಆತ್ಮಸಾಕ್ಷಾತ್ಕಾರ; ಅಂಗದ ಸ್ವರೂಪದ ಬಗೆಗಿನ ಜ್ಞಾನೋದಯ (ಅಂದರೆ, ಅಂಗನಿಗೆ ತಾನು ಶಿವನ ಅಂಗ ಎಂಬ ಜ್ಞಾನವುಂಟಾಗುವುದು). (೩:೮೭೩)

**ಅಂಗನಿರಂಗದ ಕೂಟ :** ಅಂಗದಲ್ಲಿ ಅಂಗವನ್ನು ಕೂಡಿಸುವುದು (ಮೈಥುನ) ಪ್ರಾಣಿಗಳಿಗೆ ಸಹಜವಾಗಿ ಕ್ರಿಯೆ. ಆದರೆ ಮುಮುಕ್ಷುವು, ತನ್ನ ಅಂಗವನ್ನು (ಜೀವಾತ್ಮವನ್ನು) ನಿರಂಗನಲ್ಲಿ (=ಪರಮಾತ್ಮನಲ್ಲಿ) ಬೆರೆಸಿದರೆ, ಅದೇ ಅಂಗನಿರಂಗ ಕೂಟ, ಅಥವಾ ಲಿಂಗಾಂಗ ಸಾಮರಸ್ಯ (೮:೯೮).

**ಅಂಗನಿರಂಗವಾಗುವುದು :** ಸಾಧಕನು ಐಕ್ಯಸ್ಥಿಯನ್ನು ತಲುಪಿದಾಗ ತಾನೊಬ್ಬ ಅಂಗ (ಪ್ರತ್ಯೇಕ ವ್ಯಕ್ತಿ) ಎಂಬ ಭಾವ ಹೋಗಿ, ತಾನೂ ಶಿವನೂ ಒಂದೇ ಎಂಬ ಭಾವ ಉಂಟಾಗುತ್ತದೆ. ಹೀಗೆ ಅಂಗತನವನ್ನು ಕಳೆದುಕೊಂಡವನೇ ನಿರಂಗ. (೫:೭೮೪)

**ಅಂಗ ಪಂಚಕ :** ಅಂಗನ ಐದು ಅವಸ್ಥೆ(ಸ್ಥಲ)ಗಳು. ಭಕ್ತಸ್ಥಲದಲ್ಲಿರುವ ಅಂಗನಲ್ಲಿ ಉಳಿದ ಐದು ಸ್ಥಲಗಳು ಅಡಗಿರುತ್ತವೆ; ಅದೇ ರೀತಿ ಮಹೇಶ್ವರನಲ್ಲಿ ಉಳಿದ ಐದು ಸ್ಥಲಗಳು ಅಡಗಿರುತ್ತವೆ; ಇತ್ಯಾದಿ. ಇದರ ಅರ್ಥವಿಷ್ಟೇ: (೧) ಪ್ರತಿಯೊಂದು ಸ್ಥಲದಲ್ಲಿರುವ ಸಾಧಕನೂ ಉಳಿದ ಸ್ಥಲಗಳಲ್ಲಿರುವ ಸಾಧಕನಂತೆ ವರ್ತಿಸಬೇಕು. ಒಂದು ವೇಳೆ ಉನ್ನತ ಸ್ಥಲಗಳಲ್ಲಿದ್ದರೆ, ಆಗಲೂ ಸಹ ಹಿಂದಿನ ಸ್ಥಲಗಳನ್ನು ಬಿಡದೇ ಆಚರಿಸಬೇಕು. (೨) ಇನ್ನೊಂದು ಅರ್ಥದ ಪ್ರಕಾರ, ಪ್ರತಿಯೊಂದು ಸ್ಥಲದಲ್ಲಿಯೂ ಉಳಿದ ಸ್ಥಲಗಳು ಸಾಧಕನಲ್ಲಿ ಅವ್ಯಕ್ತವಾಗಿರುತ್ತವೆ. ಉದಾಹರಣೆಗೆ 'ಮಹೇಶ್ವರನಲ್ಲಿ ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ಭಕ್ತನಪ್ಪ ಅಂಗಪಂಚಕವು ಗರ್ಭೀಕೃತವಾಗಿ....' (೧೧:೨೬೫,೩೦೧,೩೩೪, ಇತ್ಯಾದಿ)

**ಅಂಗಭಂಗ ಹಿಂಗುವುದು** : ಸಂಸಾರಸ್ಥಲದಲ್ಲಿ ಅಂಗನು ತಾನು ಲಿಂಗದಿಂದ ಭಿನ್ನ (ಭಂಗ)ವಾಗಿದ್ದೇನೆಂದು ತಿಳಿಯುತ್ತಾನೆ. ಸಾಧನೆಯ ಮೂಲಕ ಈ ಭಿನ್ನತೆಯನ್ನು ಇಲ್ಲವಾಗಿಸಿದರೆ, ಅಂದರೆ, ಮೊದಲಿನಂತೆ ತನ್ನ ಅಂಗವನ್ನು ಲಿಂಗದಲ್ಲಿ ಲೀನಮಾಡಿದರೆ, ಆಗ ಅಂಗಭಂಗ ಹಿಂಗಿತೆಂದರ್ಥ (೮:೧೪೬೦).

**ಅಂಗಭವಿ** : ಲಿಂಗಾಂಗ ಸಾಮರಸ್ಯವನ್ನು ಪಡೆಯಬೇಕೆಂಬ ಇಚ್ಛೆಯಿಲ್ಲದವನ ದೇಹ. ಆ ದೇಹವು ತನ್ನ ಭವಿತವನ್ನು ಕಳೆದುಕೊಳ್ಳಬೇಕಾದರೆ ಅದರ ಮೇಲೆ ಗುರುವು ಲಿಂಗಧಾರಣ ಮಾಡಬೇಕು. ಹಾಗೂ ಅದರಲ್ಲಿ ಭಕ್ತನಿಗೆ ಬೇಕಾದ ಆಧ್ಯಾತ್ಮಿಕ ಅಂಶಗಳನ್ನು ಮೂಡಿಸಬೇಕು (೮:೧೪೨೦-೨೧).

**ಅಂಗಭೋಗ** : ದೇಹಕ್ಕೆ ಸಂಬಂಧಿಸಿದ ಸುಖ ['ಅಂಗಭೋಗವನೆ ಕುಂದಿಸಿ, ಪ್ರಸಾದವನೇ ರುಚಿಸಿಹೆನೆಂಬ....' (೩:೨೫೩)]

**ಅಂಗಭೋಗೋಪಭೋಗ** : ಲಿಂಗಕ್ಕೆ ಅರ್ಪಣೆ ಮಾಡಿದ ನಂತರ ಪದಾರ್ಥಗಳು ಪ್ರಸಾದವಾಗುತ್ತವೆ. ಸಾಧಕನು ಪ್ರಸಾದವನ್ನು ಸೇವಿಸಿದರೆ ಶುದ್ಧನಾಗಿ, ಅವನ ಅನ್ನಮಯಕೋಶವು ಪ್ರಸಾದಕಾಯವಾಗುತ್ತದೆ. ಆದರೆ ಲಿಂಗಕ್ಕೆ ಅರ್ಪಣೆ ಮಾಡದೆಯೇ ಅವನು ಭುಂಜಿಸಿದರೆ, ಅವನು ಅಂಗಕ್ಕೆ (ದೇಹಕ್ಕೆ) ಪ್ರಾಧಾನ್ಯತೆ ಕೊಡುತ್ತಿದ್ದಾನೆ, ಲಿಂಗಕ್ಕಲ್ಲ ಎಂಬುದು ಸ್ಪಷ್ಟವಾಗುತ್ತದೆ. ಹೀಗೆ, ಮಾಡುವುದು ಅಂಗಭೋಗೋಪಭೋಗ. ಇದನ್ನು ಶರಣರು ಮಾಡಬಾರದು. (ನೋಡಿ : **ಲಿಂಗಭೋಗೋಪಭೋಗ**).

**ಅಂಗ ಮುಖ** : ಜೀವಾತ್ಮನೊಳಕ್ಕೆ ಬರುವ ವಿಷಯಗಳೆಲ್ಲವೂ ಇಂದ್ರಿಯಗಳ ಮೂಲಕವೇ ಬರಬೇಕಾದುದ್ದರಿಂದ, ಆ ಇಂದ್ರಿಯಗಳು ಜೀವಾತ್ಮನ (ಅಂಗದ) ಬಾಯಿ (ಮುಖ) ಗಳೆನಿಸಿಕೊಳ್ಳುತ್ತವೆ. ನಿಜವಾದ ಭಕ್ತನು ಈ ಇಂದ್ರಿಯಗಳ ದುರ್ಗುಣಗಳನ್ನು ಕಳೆದು, ಅವುಗಳನ್ನು ಲಿಂಗಕ್ಕೋಸ್ಕರ ಬಳಸುತ್ತಾನೆ (೯:೩೪೧).

**ಅಂಗರಹಿತವಾದ ಸಂಗ** : ಅಂಗವೇ ಇಲ್ಲದಿದ್ದರೆ ಹೆಣ್ಣುಗಂಡುಗಳ ಕೂಟ ಅಸಾಧ್ಯ. ಇಲ್ಲಿ 'ಅಂಗ' ಎಂಬುದನ್ನು 'ದೇಹ' ಎಂಬರ್ಥದಲ್ಲಿಯಾದರೂ ತೆಗೆದುಕೊಳ್ಳಬಹುದು, ಅಥವಾ ದೇಹದ ಭಾಗ ಎಂಬರ್ಥದಲ್ಲಿಯಾದರೂ ತೆಗೆದುಕೊಳ್ಳಬಹುದು. ಆದರೆ ಜೀವಾತ್ಮ ಪರಮಾತ್ಮರ ಕೂಟವು ದೈಹಿಕ ಕೂಟವಲ್ಲ (೯:೪೧೯).

**ಅಂಗರುಚಿ** : ದೇಹದ ಬಯಕೆಗಳು.

**ಅಂಗಲಿಂಗ ಸಂಬಂಧ** : ವಚನಕಾರರು ಅಂಗ ಮತ್ತು ಲಿಂಗಗಳಿಗಿರುವ ಸಂಬಂಧವನ್ನು ಮೂರು ರೀತಿಯಾಗಿ ಕಂಡಿದ್ದಾರೆ.

(೧) ಗುರುವು ಲಿಂಗದೀಕ್ಷೆಯ ಮೂಲಕ ಇಷ್ಟಲಿಂಗವನ್ನು ಕೊಟ್ಟನಂತರ, ಪಡೆದ ಶಿಷ್ಯನು ಅದನ್ನು ಯಾವಾಗಲೂ ತನ್ನ ಸೊಂಟದ ಮೇಲಿನ ಯಾವುದಾದರೊಂದು ಭಾಗದ ಮೇಲೆ ಧರಿಸಬೇಕು. ಇಲ್ಲಿ ಲಿಂಗವೆಂದರೆ ಇಷ್ಟಲಿಂಗ, ಅಂಗವೆಂದರೆ ಸ್ಥೂಲಶರೀರ. ಹೀಗೆ ಇಷ್ಟಲಿಂಗವನ್ನು ಶಿಷ್ಯನು ತನ್ನ ದೇಹದಲ್ಲಿ ಧರಿಸುವುದರಿಂದ ಅವನಲ್ಲಿ ಅಂಗಲಿಂಗ ಸಂಬಂಧ ಏರ್ಪಟ್ಟಂತಾಯಿತು.

(೨) ಅಂಗವೆಂದರೆ ಶುದ್ಧನಾದ ಆತ್ಮನೆಂದೂ, ಲಿಂಗವೆಂದರೆ ಚಿದ್ವಸ್ತುವಾದ ಪರಶಿವನೆಂದೂ ಅರ್ಥ ಮಾಡಿದರೆ, ಆಗ ಪರಿಮಿತಿಯುಳ್ಳ ಅಂಗನು ಅಪರಿಮಿತನಾದ ಪರಶಿವನೊಂದಿಗೆ ಸಂಬಂಧ ಪಡೆದಿದ್ದಾನೆಂದು ಅರ್ಥವಾಗುತ್ತದೆ. ಇಲ್ಲಿ "ಸಂಬಂಧ" ಎಂಬ ಪದಕ್ಕೆ 'ಐಕ್ಯತೆ' ಅಥವಾ 'ಸಾಮರಸ್ಯ' ಎಂಬ ಅರ್ಥವಿದೆ. ಅಂಗಲಿಂಗಸಂಬಂಧದಲ್ಲಿ (ಐಕ್ಯತೆಯಲ್ಲಿ) ಅಂಗನಿಗೆ ತಾನು ಬೇರೆ, ಪರಶಿವ ಬೇರೆ ಎಂಬ ದ್ವೈತ ಭಾವ ಇರುವುದಿಲ್ಲ. ಇಂತಹ ಐಕ್ಯ ಸ್ಥಿತಿಯನ್ನು ವಚನಕಾರರು ಅನೇಕ ಉಪಮೆಗಳ ಮೂಲಕ ವಿವರಿಸಿದ್ದಾರೆ. ನದಿ ಸಮುದ್ರವನ್ನು ಸೇರಿ ಒಂದಾದಂತೆ, ಹಾಲು ಹಾಲು ಬೆರೆತಂತೆ, ಆಲಿಕಲ್ಲು ಸಮುದ್ರದಲ್ಲಿ ಬಿದ್ದಂತೆ, ಕರ್ಪೂರ ಬೆಂಕಿಯಲ್ಲಿ ಬೆರೆತಂತೆ, ಅಂಗನು ಲಿಂಗದಲ್ಲಿ ಐಕ್ಯನಾಗುತ್ತಾನೆ. ಈ ರೀತಿಯ ಸಂಬಂಧಕ್ಕೆ ಅಂಗ ಮತ್ತು ಲಿಂಗಗಳು ಸಾರದಲ್ಲಿ ಒಂದೇ ಆಗಿರಬೇಕಾದುದು ಆವಶ್ಯಕ. ಕಲ್ಲು ಮತ್ತು ನೀರು ಬೇರೆ ಬೇರೆ ರೀತಿಯ ವಸ್ತುಗಳಾದುದರಿಂದ, ಕಲ್ಲು ಎಷ್ಟು ವರ್ಷ ನೀರಿನಲ್ಲಿದ್ದರೂ ಅದು ನೀರಿನಲ್ಲಿ ಬೆರೆತು ಒಂದಾಗಲು ಸಾಧ್ಯವಿಲ್ಲ. ಆದರೆ ಅಂಗ ಮತ್ತು ಲಿಂಗ ಎರಡು ಚಿದ್ವಸ್ತುಗಳೇ ಆದುದರಿಂದ ಸಮಾಧಿ ಸ್ಥಿತಿಯಲ್ಲಿರುವ ಸಾಧಕನ ಅಂಗವು ಪರಶಿವನಲ್ಲಿ ಸಂದಿಲ್ಲದಂತೆ ಒಂದಾಗುತ್ತದೆ.

(೩) ಅಂಗವು ಸಂಸಾರ ಬಂಧನದಲ್ಲಿದ್ದಾಗಲೂ ಅದಕ್ಕೆ ಲಿಂಗದೊಡನೆ ಸಂಬಂಧವಿದ್ದೇ ಇರುತ್ತದೆ. ಅದು ಯಾವಾಗಲೂ ಲಿಂಗದ ಅಂಗವೇ (ಭಾಗವೇ). ಆದರೆ ಅದಕ್ಕೆ ಮರೆವಿನಿಂದಾಗಿ (ಅಜ್ಞಾನದಿಂದಾಗಿ) ಈ ಸಂಬಂಧವನ್ನು ಗುರುತಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಮರೆವಿನಿಂದಾಗಿ ದೈಹಿಕ ಸುಖವೇ ಹೆಚ್ಚೆಂದು ತಿಳಿದು, ನಾನಾ ರೀತಿಯ ಕರ್ಮಗಳನ್ನು ಮಾಡಿ, ತನ್ನ ಸಂಸಾರಬಂಧನವನ್ನು ಮತ್ತಷ್ಟು ಗಟ್ಟಿಮಾಡಿಕೊಳ್ಳುತ್ತದೆ. ಇದೊಂದು ಬಂಧನವೆಂಬ ಅರಿವಾದವನು, ಸಂಸಾರವನ್ನು ತಿಳಿದು, ಅದರಿಂದ ತಪ್ಪಿಸಿಕೊಳ್ಳಲು, ಮಾರ್ಗದರ್ಶನಕ್ಕಾಗಿ ಗುರುವಿನ ಬಳಿ ಬರುತ್ತಾನೆ. ಭಕ್ತಿ, ಜ್ಞಾನ, ಕ್ರಿಯಾ ಮತ್ತು ವೈರಾಗ್ಯಗಳನ್ನು ಒಳಗೊಂಡ ಶಿವಯೋಗವನ್ನು ಗುರುವು ಬೋಧಿಸಿದಾಗ, ಅವನಿಗೆ ಅವುಗಳ ಅರಿವಾಗುತ್ತದೆ. ಐಕ್ಯಸ್ಥಿತಿಯಲ್ಲಿರುವವನ ಅಂಗಲಿಂಗ ಸಂಬಂಧಕ್ಕೂ ಸಂಸಾರಬಂಧನದಲ್ಲಿರುವವನ ಅಂಗಲಿಂಗ ಸಂಬಂಧಕ್ಕೂ ಒಂದು ಮುಖ್ಯ ವ್ಯತ್ಯಾಸವಿದೆ-

ಕಲ್ಲಿನಲ್ಲಿ ಬೆಂಕಿಯಿದ್ದರೂ, ಅದು ಪ್ರಕಟವಾಗಲು ಹೇಗೆ ಒಂದು ಕಾರಣ ಬೇಕೋ, ಹಾಗೆಯೇ ಸಂಸಾರಬಂಧನದಲ್ಲಿರುವವನ ಅಂಗಲಿಂಗ ಸಂಬಂಧವು ಗೋಚರವಾಗಬೇಕಾದರೆ, ಅದಕ್ಕೆ ಶಿವಯೋಗ ಸಾಧನೆಯೆಂಬ ಕಾರಣ ಬೇಕು.

**ಅಂಗಲಿಂಗಸಂಬಂಧವಿಲ್ಲದಿರುವುದು :** ಅರಿದ ಶರಣನೆಂದರೆ ಲಿಂಗಾಂಗ ಸಾಮರಸ್ಯವನ್ನು ಪಡೆದವನು. ಅಂಥವನು ಮತ್ತೆ ಅಂಗಲಿಂಗ ಸಂಬಂಧವನ್ನು ಬಯಸುವುದಿಲ್ಲ (೯:೮೩೮).

**ಅಂಗಲಿಂಗ ಸಹವು :** ಶುದ್ಧವಾದ ಆತ್ಮನು ಲಿಂಗದಲ್ಲಿ ಬೆರೆಯುವುದು.

**ಅಂಗಲಿಂಗಿ :** ದೇಹದ ಯಾವುದಾದರೊಂದು ಭಾಗದ ಮೇಲೆ ಲಿಂಗವನ್ನು ಧರಿಸಿದವನು. (೮:೯೦೧)

**ಅಂಗಲಿಂಗೋದ್ಭವ ಸ್ಥಲ :** ನಿಃಕಲ ಲಿಂಗಸ್ಥಲದಲ್ಲಿ ಪರಶಿವನು ಸೃಷ್ಟಿಸಬೇಕೆಂದು ಇಚ್ಛಿಸುತ್ತಾನೆ. ಆ ಇಚ್ಛೆಯ ಪ್ರಕಾರ ಅವನಲ್ಲಿ ಎರಡು ಭಾಗಗಳಾಗುತ್ತವೆ. ಅವೆಂದರೆ - ಅಂಗಸ್ಥಲ ಮತ್ತು ಲಿಂಗಸ್ಥಲ. ಅಂಗಸ್ಥಲ ಮತ್ತು ಲಿಂಗಸ್ಥಲಗಳು ಉದ್ಭವವಾಗುವ ಈ ಸ್ಥಲಕ್ಕೆ ಅಂಗಲಿಂಗೋದ್ಭವಸ್ಥಲ ಎಂದು ಹೆಸರು. (ನೋಡಿ : ೧೧:೩೮೮ **ಸೂತ್ರ**)

**ಅಂಗವನ್ನು ಮರೆದವನು :** ಅನುಭಾವ ಅಥವಾ ಯೋಗ ಸಮಾಧಿಯಲ್ಲಿ ಸಾಧಕನು ಮೊದಲು ಪ್ರಪಂಚದ ಅರಿವನ್ನು ಕಳೆದುಕೊಳ್ಳುತ್ತಾನೆ; ಅನಂತರ ತಾನು ಪರಶಿವನಲ್ಲಿ ಒಂದಾಗುತ್ತಿರುವಂತೆ ಅನುಭವವನ್ನು ಪಡೆಯುತ್ತಾನೆ. ಸಮಾಧಿಸ್ಥಿತಿ ಮುಗಿದ ನಂತರವೂ ಅವನಿಗೆ ತಾನು ಪ್ರತ್ಯೇಕವೆಂಬ ಭಾವವನ್ನು ಮರೆಯುತ್ತಾನೆ (೫:೧೦೧೫).

**ಅಂಗವಿಕಾರ :** (ನೋಡಿ : **ಕಾಯವಿಕಾರ**)

**ಅಂಗವಿಕಾರದ ಸಂಗ :** ಲೈಂಗಿಕ ಸಂಗ, ಅಂಗವಿಕಾರದಿಂದುಂಟಾದುದು; ದೇಹದ ಸಂಗದಿಂದಾಗಿ ಆತ್ಮನು ಅನೇಕ ರೀತಿಯ ಕಷ್ಟಕ್ಕೆ ಒಳಗಾಗಿರುವುದೂ ಅಲ್ಲದೇ, ಅವನಿಗೆ ಬೆಂಬಿಡದ ಪುನರ್ಜನ್ಮವೂ ಕಾಡುತ್ತಿದೆ. ಅಂಗದ ಬಯಕೆಗಳಿಗೆ ಕಡಿವಾಣ ಹಾಕುವುದೊಂದೇ ಅಂಗವಿಕಾರದ ಸಂಗವನ್ನು ಕೆಡಿಸುವ ಮಾರ್ಗ.

**ಅಂಗವಿದ್ಯೆ :** ಆತ್ಮವಿದ್ಯಾ; ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವ ವಿದ್ಯೆ; ಶಿವಯೋಗ.

**ಅಂಗವಿಷಯ ಭ್ರಾಂತ :** ಅಂಗಕ್ಕೆ ಸಂಬಂಧಿಸಿದ ರೂಪ ರಸ ಗಂಧಾದಿ ಇಂದ್ರಿಯ ವಿಷಯಗಳೆ ಆಧ್ಯಾತ್ಮಿಕ ಮೌಲ್ಯಗಳಿಗಿಂತ ಹೆಚ್ಚು ಎಂಬ ಭ್ರಮೆ ಉಳ್ಳವನು (೧೦:೫೦೨).

**ಅಂಗವಿಸದಿರುವಿಕೆ :** ಮನುಷ್ಯನು ತಾನು ಕೇವಲ ದೇಹ, ಮನಸ್ಸು, ಇಂದ್ರಿಯ ಎಂದು ತಿಳಿದುಕೊಂಡಾಗ, ಅವನು ಕೇವಲ ದೈಹಿಕ ಹಾಗೂ ಐಂದ್ರಿಕ ಸುಖಗಳಿಗೆ ಪ್ರಾಮುಖ್ಯತೆ ಕೊಡುತ್ತಾನೆ; ಹಾಗೆ ಪ್ರಾಮುಖ್ಯತೆ ಕೊಡದಿರುವುದೇ 'ಅಂಗವಿಸದಿರುವಿಕೆ' (೪:೯).

**ಅಂಗ ಶೃಂಗಾರ :** ದೇಹದ ಶೃಂಗಾರ (೫:೫೧೩).

**ಅಂಗಷಟ್‌ಸ್ಥಲ :** (ಅಂಗಸ್ಥಲ ಆರು) ಅಂಗವೆಂದರೆ ಪೂಜಕ; ಲಿಂಗವೆಂದರೆ ಪೂಜ್ಯ; ಅಂಗನು ಲಿಂಗವನ್ನು ಆರಾಧಿಸಿ ಸಾಕ್ಷಾತ್ಕರಿಸಿಕೊಳ್ಳಲು ಆರು ಹಂತಗಳಿವೆ ಎಂದು ವಚನಕಾರರು ನಂಬುತ್ತಾರೆ. ಇವೇ ಅಂಗಷಟ್‌ಸ್ಥಲ.ಇವೆಂದರೆ : ಭಕ್ತಸ್ಥಲ, ಮಹೇಶಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ ಮತ್ತು ಐಕ್ಯಸ್ಥಲ.

**ಅಂಗಸಂಸಾರ :** ಅಂಗಸೋಂಕು (೧:೭೨೩); ಆತ್ಮ (ಅಂಗ)ನಿಗೆ ಆಗಿರುವ ಬಂಧನ ಅಥವಾ ಮೈಲಿಗೆ (ಸೋಂಕು) (೧:೭೨೧,೭೨೨).

**ಅಂಗಸುಖ :** ಇದಕ್ಕೆ ಎರಡು ಅರ್ಥಗಳಿವೆ. (೧) ದೈಹಿಕ ಸುಖ ('ಅಷ್ಟವಿಧಾರ್ಚನೆಯ ಮಾಡಬಲ್ಲರೆ, ಅಂಗಸುಖಂಗಳನರಿಯದಿರಬೇಕು' - ೩:೨೩೫). (೨) ಲಿಂಗದಲ್ಲಿ ಅಂಗವು ಲೀಯವಾದಾಗ, ಅಂಗಕ್ಕೆ ಸಿಕ್ಕುವ ಆಧ್ಯಾತ್ಮಿಕ ಸುಖ ('ಅಂಗದಿಂದ ಲಿಂಗ ಸುಖ, ಲಿಂಗದಿಂದ ಅಂಗ ಸುಖ' - ೩:೨೨೭)

**ಅಂಗಸ್ಥಲ-ಲಿಂಗಸ್ಥಲ ಸಂಬಂಧ :** ವಚನಕಾರರ ಪ್ರಕಾರ, ಪರಶಿವನು ಸೃಷ್ಟಿ ಮಾಡಿದ ಮೇಲೆ ಅವನು ಮಾನವ ಮತ್ತು ಪ್ರಪಂಚದಿಂದ ದೂರ ಉಳಿಯದೆ, ಮಾನವನಲ್ಲಿಯೂ ಪ್ರಪಂಚದಲ್ಲಿಯೂ ಅಂತರ್ಗತನಾಗಿರುತ್ತಾನೆ. ಮನುಷ್ಯನು ಪರಶಿವನನ್ನು ಆರು ಸ್ಥಲಗಳಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು. ಹೀಗೆ ಸಾಕ್ಷಾತ್ಕಾರ ಮಾಡಿಕೊಳ್ಳುವ ಅಂಗನು ಆರುಸ್ಥಲಗಳಲ್ಲಿರಬೇಕಾಗುತ್ತದೆ. ಅಂಗನ ಈ ಆರು ಅಂಗಸ್ಥಲಗಳೆಂದರೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ. ಅವನು ಸಾಕ್ಷಾತ್ಕಾರ ಮಾಡಿಕೊಳ್ಳುವ ಶಿವನ ಸ್ಥಲಗಳಿಗೆ ಲಿಂಗಸ್ಥಲವೆಂಬ ಹೆಸರಿದ್ದು, ಅವು ಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗ ಎನಿಸಿಕೊಳ್ಳುತ್ತವೆ. ಈ ಆರು ಅಂಗಸ್ಥಲಗಳು ಆರು ಲಿಂಗಸ್ಥಳಗಳಿಗೆ ಹೇಗೆ ಸಂಬಂಧಿಸಿವೆ ಎಂಬುದನ್ನು ಇಲ್ಲಿ ನೋಡಬಹುದು.

ಮನುಷ್ಯನ ದೇಹೇಂದ್ರಿಯಾದಿಗಳು ಪರಶಿವನ ಶಕ್ತಿಯ ರೂಪಾಂತರ. ಮನುಷ್ಯನು ಬಂಧನದಲ್ಲಿರುವವರೆಗೆ ಅಥವಾ ತಾನು ಬಂಧನಕ್ಕೊಳಗಾಗುವಂತೆ ಅವುಗಳನ್ನು ಬಳಸುವವರೆಗೆ ಅವು ಶಕ್ತಿ ಅಥವಾ ಅಧೋಮಾಯೆ ಎನಿಸಿಕೊಳ್ಳುತ್ತವೆ. ಒಂದು ವೇಳೆ ಅವನು ಅವುಗಳನ್ನು ಆಧ್ಯಾತ್ಮಿಕ ಉದ್ದೇಶಕ್ಕಾಗಿ ಬಳಸಿದರೆ ಅವೇ ಶಕ್ತಿಗಳು ಭಕ್ತಿ ಅಥವಾ ಊರ್ಧ್ವಮಾಯೆ ಎನಿಸಿಕೊಳ್ಳುತ್ತವೆ. ಹೀಗೆ ಪ್ರತಿಯೊಂದು ಶಕ್ತಿಯೂ ಭಕ್ತಿಯಾಗಿ ಮಾರ್ಪಡುವ ಸಾಧ್ಯತೆಯಿದೆ.

ಮೊಟ್ಟಮೊದಲನೆ ಆಧ್ಯಾತ್ಮಿಕ ಸಾಧನೆಯ ಹಂತದಲ್ಲಿರುವ ಸಾಧಕನು ಭಕ್ತನೆನಿಸಿಕೊಳ್ಳುತ್ತಾನೆ. ಪರಶಿವನ ಕ್ರಿಯಾಶಕ್ತಿಯು ಭಕ್ತನಲ್ಲಿ ಘ್ರಾಣೇಂದ್ರಿಯವಾಗಿ ರೂಪಾಂತರಗೊಂಡಿದ್ದು ಅದರಲ್ಲಿ ಪರಶಿವನು ಆಚಾರಲಿಂಗ ರೂಪದಲ್ಲಿ

ಅಂತರ್ಗತವಾಗಿದ್ದಾನೆ. ಆಚಾರಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಭಕ್ತನು ತನ್ನ ಚಿತ್ತವನ್ನೆ ಹಸ್ತವನ್ನಾಗಿ ಮಾಡಿಕೊಂಡು ಆಚಾರಲಿಂಗಕ್ಕೆ ಪರಿಮಳ ದ್ರವ್ಯಗಳನ್ನು ಅರ್ಪಿಸುತ್ತಾನೆ, ಹಾಗೂ ಆ ಅರ್ಪಿತವು ಗಂಧವೆಂಬ ಪ್ರಸಾದವಾಗುತ್ತದೆ. ಭಕ್ತನ ಈ ಭಕ್ತಿಗೆ ವಿಶ್ವಾಸಭಕ್ತಿ ಅಥವಾ ಶ್ರದ್ಧಾಭಕ್ತಿ ಅಥವಾ ಸದ್ಭಕ್ತಿ ಎಂದು ಹೆಸರು. ಹೀಗೆ ಅರ್ಪಿಸಿದ ಚಿತ್ತವು ಸುಚಿತ್ತವೆನಿಸಿಕೊಳ್ಳುತ್ತದೆ. ಘ್ರಾಣೇಂದ್ರಿಯದಲ್ಲಿರುವ ಆಚಾರಲಿಂಗಕ್ಕೆ ಅವನು ಅರ್ಪಿಸುವದರಿಂದ, ಘ್ರಾಣೇಂದ್ರಿಯವು (ಮೂಗು) ಪರಶಿವನ (ಆಚಾರಲಿಂಗದ) ಬಾಯಿ (ಮುಖ) ಎನಿಸಿಕೊಳ್ಳುತ್ತದೆ.

ಎರಡನೆ ಆಧ್ಯಾತ್ಮಿಕ ಸಾಧನೆಯ ಹಂತದಲ್ಲಿರುವ ಸಾಧಕನಿಗೆ ಮಹೇಶ (ಮಹೇಶ್ವರ) ಎಂದು ಹೆಸರು. ಪರಶಿವನ ಜ್ಞಾನಶಕ್ತಿಯು ಮಹೇಶಸ್ಥಲದಲ್ಲಿರುವ ಸಾಧಕನಲ್ಲಿ ಜಿಹ್ವೇಂದ್ರಿಯವಾಗಿ (ನಾಲಗೆಯಾಗಿ) ರೂಪಾಂತರಗೊಂಡಿದ್ದು, ಪರಶಿವನು ಅದರಲ್ಲಿ ಗುರುಲಿಂಗವಾಗಿ ಅಂತರ್ಗತವಾಗಿದ್ದಾನೆ. ಗುರುಲಿಂಗವನ್ನು ಸಾಕ್ಷಾತ್ಕಾರಿಸಿಕೊಳ್ಳಬೇಕೆಂಬ ಮಹೇಶನು ತನ್ನ ಬುದ್ಧಿಯನ್ನೇ ಹಸ್ತವನ್ನಾಗಿ ಮಾಡಿಕೊಂಡು, ರಸವೆಂಬ ದ್ರವ್ಯವನ್ನು ಅರ್ಪಿಸಿ, ಅದನ್ನು ರುಚಿಯೆಂಬ ಪ್ರಸಾದವನ್ನಾಗಿ ಮಾಡಿಕೊಳ್ಳುತ್ತಾನೆ. ಮಹೇಶನ ಈ ಭಕ್ತಿಗೆ ನೈಷ್ಠಿಕಾಭಕ್ತಿ ಎಂದು ಹೆಸರು. ರಸವನ್ನು ಅರ್ಪಿಸುವ ಮಹೇಶನ ಬುದ್ಧಿಗೆ ಸುಬುದ್ಧಿಯೆಂದು ಹೆಸರು. ನಾಲಗೆಯಲ್ಲಿರುವ ಗುರುಲಿಂಗಕ್ಕೆ ಅವನು ರುಚಿಯನ್ನು ಅರ್ಪಿಸುವುದರಿಂದ, ಆ ಅರ್ಪಣೆಯನ್ನು ಸ್ವೀಕರಿಸುವ ಜಿಹ್ವೇಂದ್ರಿಯವು (ನಾಲಗೆಯು) ಪರಶಿವನ (ಗುರುಲಿಂಗದ) ಬಾಯಿ (ಮುಖ) ಎನಿಸಿಕೊಳ್ಳುತ್ತದೆ.

ಆಧ್ಯಾತ್ಮಿಕ ಸಾಧನೆಯ ಮೂರನೆಯ ಹಂತದಲ್ಲಿರುವ ಸಾಧಕನಿಗೆ ಪ್ರಸಾದಿ ಎಂದು ಹೆಸರು. ಪರಶಿವನ ಇಚ್ಛಾಶಕ್ತಿಯು ಸಾಧಕನ ನೇತ್ರವಾಗಿ ರೂಪಾಂತರಗೊಂಡಿದ್ದು, ಅದರಲ್ಲಿ ಅಂತಸ್ಥವಾಗಿರುವ ಪರಶಿವನಿಗೆ ಶಿವಲಿಂಗ ಎಂದು ಹೆಸರು. ಶಿವಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಪ್ರಸಾದಿಯು ತನ್ನ ಅಹಂಕಾರವನ್ನೆ ಹಸ್ತವನ್ನಾಗಿ ಮಾಡಿಕೊಂಡು ಬೆಳಕನ್ನು ಶಿವಲಿಂಗಕ್ಕೆ ಅರ್ಪಿಸಿ, ಅದನ್ನು ರೂಪ ಎಂಬ ಪ್ರಸಾದವನ್ನಾಗಿ ಮಾಡಿಕೊಳ್ಳುತ್ತಾನೆ. ಪ್ರಸಾದಿಯ ಈ ಭಕ್ತಿಗೆ ಸಾವಧಾನ ಭಕ್ತಿ ಎಂದು ಹೆಸರು. ಬೆಳಕನ್ನು ಅರ್ಪಿಸುವ ಪ್ರಸಾದಿಯ ಅಹಂಕಾರಕ್ಕೆ ನಿರಹಂಕಾರವೆಂದು ಹೆಸರು. ನೇತ್ರದಲ್ಲಿರುವ ಶಿವಲಿಂಗಕ್ಕೆ ಅವನು ಬೆಳಕನ್ನು ಅರ್ಪಿಸುವುದರಿಂದ ಆ ಅರ್ಪಣೆಯನ್ನು ಸ್ವೀಕರಿಸುವ ನೇತ್ರೇಂದ್ರಿಯವು (ಕಣ್ಣು) ಪರಶಿವನ (ಶಿವಲಿಂಗದ) ಬಾಯಿ (ಮುಖ) ಎನಿಸಿಕೊಳ್ಳುತ್ತದೆ.

ಆಧ್ಯಾತ್ಮಿಕ ಸಾಧನೆಯ ನಾಲ್ಕನೆ ಹಂತದಲ್ಲಿರುವ ಸಾಧಕನಿಗೆ ಪ್ರಾಣಲಿಂಗಿಯೆಂದು ಹೆಸರು. ಪರಶಿವನ ಆದಿಶಕ್ತಿಯು ಸಾಧಕನ ತ್ವಗಿಂದ್ರಿಯವಾಗಿ ರೂಪಾಂತರಗೊಂಡಿದ್ದು, ಅದರಲ್ಲಿ ಅಂತಸ್ಥವಾಗಿರುವ ಪರಶಿವನಿಗೆ ಜಂಗಮಲಿಂಗವೆಂದು ಹೆಸರು. ಜಂಗಮಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಪ್ರಾಣಲಿಂಗಿಯು ತನ್ನ ಮನಸ್ಸನ್ನೇ ಹಸ್ತವನ್ನಾಗಿ ಮಾಡಿಕೊಂಡು, ಸೋಂಕನ್ನು ಜಂಗಮಲಿಂಗಕ್ಕೆ ಅರ್ಪಿಸಿ, ಅದನ್ನು ಸ್ಪರ್ಶನವೆಂಬ ಪ್ರಸಾದವನ್ನಾಗಿ ಮಾಡಿಕೊಳ್ಳುತ್ತಾನೆ. ಪ್ರಾಣಲಿಂಗಿಯ ಈ ಭಕ್ತಿಗೆ ಅನುಭಾವ ಭಕ್ತಿ ಎಂದು ಹೆಸರು. ಸೋಂಕನ್ನು ಅರ್ಪಿಸುವ ಪ್ರಾಣಲಿಂಗಿಯ ಮನಸ್ಸಿಗೆ ಸುಮನವೆಂದು ಹೆಸರು. ತ್ವಗಿಂದ್ರಿಯ (ಚರ್ಮ)ದಲ್ಲಿರುವ ಜಂಗಮಲಿಂಗಕ್ಕೆ ಅವನು ಸೋಂಕನ್ನು ಅರ್ಪಿಸುವುದರಿಂದ, ಅದನ್ನು ಸ್ವೀಕರಿಸುವ ತ್ವಗಿಂದ್ರಿಯವು ಪರಶಿವನ (ಜಂಗಮಲಿಂಗದ) ಬಾಯಿ (ಮುಖ) ಎನಿಸಿಕೊಳ್ಳುತ್ತದೆ.

ಐದನೆ ಹಂತದಲ್ಲಿರುವ ಸಾಧಕನಿಗೆ ಶರಣನೆಂದು ಹೆಸರು. ಪರಶಿವನ ಪರಾಶಕ್ತಿಯು ಶರಣನ ಶ್ರೋತ್ರೇಂದ್ರಿಯವಾಗಿ ರೂಪಾಂತರಗೊಂಡಿದ್ದು, ಅದರಲ್ಲಿ ಅಂತಸ್ಥವಾಗಿರುವ ಪರಶಿವನಿಗೆ ಪ್ರಸಾದಲಿಂಗವೆಂದು ಹೆಸರು. ಪ್ರಸಾದಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಶರಣನು ತನ್ನ ಜ್ಞಾನವನ್ನೇ ಹಸ್ತವನ್ನಾಗಿ ಮಾಡಿಕೊಂಡು, ಶಬ್ದವನ್ನು ಪ್ರಸಾದಲಿಂಗಕ್ಕೆ ಅರ್ಪಿಸಿ, ಸುಶಬ್ದವೆಂಬ ಪ್ರಸಾದವನ್ನು ಪಡೆಯುತ್ತಾನೆ. ಶರಣನ ಈ ಭಕ್ತಿಗೆ ಆನಂದಭಕ್ತಿ ಎಂದು ಹೆಸರು. ಶಬ್ದವನ್ನು ಅರ್ಪಿಸುವುದರಿಂದ, ಆ ಅರ್ಪಣೆಯನ್ನು ಸ್ವೀಕರಿಸುವ ಶ್ರೋತ್ರೇಂದ್ರಿಯವು ಪರಶಿವನ (ಪ್ರಸಾದಲಿಂಗದ) ಬಾಯಿ (ಮುಖ) ಎನಿಸಿಕೊಳ್ಳುತ್ತದೆ.

ಕೊನೆಯ ಹಂತದ ಸಾಧಕನಿಗೆ ಐಕ್ಯನೆಂದು ಹೆಸರು. ಪರಶಿವನ ಚಿತ್‌ಶಕ್ತಿಯು ಐಕ್ಯನ ಭಾವ (ಹೃದಯ)ವಾಗಿ ರೂಪಾಂತರಗೊಂಡಿದ್ದು, ಅದರಲ್ಲಿ ಅಂತಸ್ಥವಾಗಿರುವ ಪರಶಿವನಿಗೆ ಮಹಾಲಿಂಗವೆಂದು ಹೆಸರು. ಮಹಾಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಐಕ್ಯನು ತನ್ನ ಭಾವವನ್ನೆ (ಜೀವಾತ್ಮನನ್ನೆ) ಹಸ್ತವನ್ನಾಗಿ ಮಾಡಿಕೊಳ್ಳುತ್ತಾನೆ. ಐಕ್ಯನು ತೋರಿಸುವ ಭಕ್ತಿಗೆ ಸಮರಸಭಕ್ತಿ ಎಂದು ಹೆಸರು. ತೃಪ್ತಿಯನ್ನು ಅರ್ಪಿಸುವ ಐಕ್ಯನ ಭಾವಕ್ಕೆ ಕೆಲವು ವೇಳೆ ಸದ್ಭಾವವೆಂದು ಕರೆಯಲಾಗುತ್ತದೆ. ಹೃದಯದಲ್ಲಿರುವ ಮಹಾಲಿಂಗಕ್ಕೆ ಅವನು ತೃಪ್ತಿಯನ್ನು ಅರ್ಪಿಸುವುದರಿಂದ, ಆ ಅರ್ಪಣೆಯನ್ನು ಸ್ವೀಕರಿಸುವ ಹೃದಯವು ಪರಶಿವನ (ಮಹಾಲಿಂಗನ) ಬಾಯಿ (ಮುಖ) ಎನಿಸಿಕೊಳ್ಳುತ್ತದೆ.

ಅಂಗಸ್ಥಲ ಹಾಗೂ ಲಿಂಗಸ್ಥಲಗಳ ಸಂಬಂಧವನ್ನು ಯಾವ ಶಕ್ತಿ ಯಾವ ಇಂದ್ರಿಯವಾಗಿ ರೂಪಾಂತರಗೊಂಡಿದೆ ಮುಂತಾದ ಮೇಲಿನ ವಿವರಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ತೋರಿಸಬಹುದು.

| ಅಂಗ ಸ್ಥಲಗಳು | ಲಿಂಗ ಸ್ಥಲಗಳು | ಲಿಂಗದ ಶಕ್ತಿಗಳು | ಅಂಗನ ಭಕ್ತಿಗಳು | ಲಿಂಗದ ಮುಖಗಳು | ಅಂಗನ ಹಸ್ತಗಳು | ಅರ್ಪಿತಗಳು | ಪ್ರಸಾದಗಳು |
|---|---|---|---|---|---|---|---|
| ಭಕ್ತ | ಆಚಾರಲಿಂಗ | ಕ್ರಿಯಾಶಕ್ತಿ | ವಿಶ್ವಾಸ(ಶ್ರದ್ಧಾ) | ಘ್ರಾಣ | ಸುಚಿತ್ತ | ಪರಿಮಳ | ಗಂಧ |
| ಮಹೇಶ | ಗುರುಲಿಂಗ | ಜ್ಞಾನಶಕ್ತಿ | ನೈಷ್ಠಿಕಾ ಭಕ್ತಿ | ಜಿಹ್ವೆ | ಸುಬುದ್ಧಿ | ರಸ | ರುಚಿ |
| ಪ್ರಸಾದಿ | ಶಿವಲಿಂಗ | ಇಚ್ಛಾಶಕ್ತಿ | ಸಾವಧಾನ ಭಕ್ತಿ | ನೇತ್ರ | ನಿರಹಂಕಾರ | ರೂಪ(ಬೆಳಕು) | ರೂಪ |
| ಪ್ರಾಣಲಿಂಗಿ | ಜಂಗಮಲಿಂಗ | ಆದಿಶಕ್ತಿ | ಅನುಭಾವ | ತ್ವಕ್ಕು | ಸುಮನ | ಸೋಂಕು | ಸ್ಪರ್ಶನ |
| ಶರಣ | ಪ್ರಸಾದಲಿಂಗ | ಪರಾಶಕ್ತಿ | ಆನಂದ ಭಕ್ತಿ | ಶ್ರೋತ್ರ | ಸುಜ್ಞಾನ | ಶಬ್ದ | ಸುಶಬ್ದ |
| ಐಕ್ಯ | ಮಹಾಲಿಂಗ | ಚಿತ್‌ಶಕ್ತಿ | ಸಮರಸ ಭಕ್ತಿ | ಹೃದಯ | ಭಾವ | ತೃಪ್ತಿ | ಪರಿಣಾಮ |

**ಅಂಗಹೀನರು :** ಬುದ್ಧಿಹೀನರು. ಅಂಗವು ಜ್ಞಾನ ಅಥವಾ ಅರಿವು ಎನ್ನಿಸಿಕೊಳ್ಳುವುದರಿಂದ ಹಾಗೂ ಅಂಗಹೀನರೆಂದರೆ ಅರಿವಿಲ್ಲದವರು ಎಂದಾಗುವುದರಿಂದ, ಬುದ್ಧಿಹೀನರೆಂಬ ಅರ್ಥ ಅಸಮಂಜಸವೇನಲ್ಲ (೩:೩೩೭).

**ಅಂಗಾರ್ಚನೆ :** ದೇಹ ಭೋಗಗಳಲ್ಲಿ ನಿರತನಾಗುವುದು (೭:೫೫೫).

**ಅಂಗಾರ್ಪಿತ ಭುಂಜನೆ :** ದೇಹಕ್ಕೆ ಸಂಬಂಧಿಸಿದ ಸುಖಗಳನ್ನು ಅನುಭವಿಸುವುದು. ಲಿಂಗಕ್ಕೆ ಅರ್ಪಿಸದೇ ಅಂಗಕ್ಕೆ ನೇರವಾಗಿ ಅರ್ಪಿಸಿಕೊಳ್ಳುವುದು. (೭:೫೫೫)

**ಅಂಗಿ :** ಅಂಗವುಳ್ಳವನು ಎಂಬುದು ವಾಚ್ಯಾರ್ಥವಾದರೂ, ಕೆಲವು ಸಂದರ್ಭದಲ್ಲಿ ಅದು ದೇಹದ ವಿಕಾರಕ್ಕೊಳಗಾದವನು ಎಂಬರ್ಥ ಕೊಡುತ್ತದೆ. "ಲಿಂಗ ತಾನಾದಡೆ ಅಂಗಿ ತಾನಾಗಬಾರದು" (೪:೧೬೬೮) ಎಂಬ ಸಿದ್ಧರಾಮನ ಮಾತಿಗೆ ಲಿಂಗಸಾಕ್ಷಾತ್ಕಾರವಾದವನಿಗೆ ದೇಹವಿಕಾರಗಳಿರಬಾರದು ಎಂಬ ಅರ್ಥವಿದೆ.

**ಅಂತರಂಗ :** ದೇಹದ ಒಳಗು. ಸಾಮಾನ್ಯವಾಗಿ ಈ ಪದ ಅಂತಃಕರಣ ಚತುಷ್ಟಯಕ್ಕೆ, ಅಂದರೆ, ಮನಸ್ಸು, ಬುದ್ಧಿ, ಅಹಂಕಾರ ಮತ್ತು ಚಿತ್ತಕ್ಕೆ ಅನ್ವಯಿಸುತ್ತದೆ.

**ಅಂತರಂಗದ ಭವಿ :** ವೀರಶೈವರು ತಮ್ಮ ಕುಲದ ಹೊರಗಿನವರನ್ನು 'ಭವಿ' ಎಂದು ಕರೆಯುತ್ತಾರೆ. ಆದರೆ ವಾಸ್ತವವಾಗಿ ನಮ್ಮ ಅಂತರಂಗದಲ್ಲೇ ಭವಿಗಳಿರುತ್ತಾರೆ. ಅರಿಷಡ್ವರ್ಗ, ಇತ್ಯಾದಿಗಳೇ ವೀರಶೈವೇತರರನ್ನು ಭವಿಗಳನ್ನಾಗಿ ಮಾಡುವುದಾದರೆ, ಇಷ್ಟಲಿಂಗಧಾರಿಗಳನ್ನೂ ಅವು ಭವಿಗಳನ್ನಾಗಿ ಮಾಡುತ್ತವೆ. ಈ ಕಾರಣದಿಂದ ಹೊನ್ನು, ಹೆಣ್ಣು, ಮಣ್ಣಿಗಾಗಿ ಪಡುವ ಆಸೆ, ಕಾಮ ಕ್ರೋಧಾದಿಗಳೇ ನಿಜವಾದ ಭವಿಗಳು. ಅವುಗಳು ನಮ್ಮೊಳಗೆ ಇರುವುದರಿಂದ ಅವು ಅಂತರಂಗದ ಭವಿಗಳು.

**ಅಂತರಂಗದ ಭಾವಸೂತಕ :** ಮಾರ್ಗಕ್ರಿಯೆ ಮತ್ತು ಮೀರಿದ ಕ್ರಿಯೆಗಳನ್ನು ಆಚರಿಸಿ, ಅನುಭಾವವನ್ನು ಸಂಪಾದಿಸಿದ ಸಾಧಕನು ತಾನೇ ಗುರು, ತಾನೇ ಲಿಂಗ, ತಾನೇ ಜಂಗಮ, ತಾನೇ ಪಾದೋದಕ ಪ್ರಸಾದ, ತಾನೇ ರುದ್ರಾಕ್ಷಿ ವಿಭೂತಿ ಮಂತ್ರ, ತಾನೇ ಪರವಸ್ತು ಎಂಬ ಮಹಾಜ್ಞಾನವನ್ನು ಪಡೆಯುತ್ತಾನೆ. ಹೀಗೆ ಸರ್ವೇಂದ್ರಿಯಗಳಲ್ಲಿ ಪರಶಿವ ಇರುವ ವ್ಯಕ್ತಿ ಅಸತ್ಯ, ಅಜ್ಞಾನ, ಅನಾಚಾರ, ಭ್ರಷ್ಟರ ಸಂಗ, ಮುಂತಾದವುಗಳನ್ನು ಬೆಳೆಸಿಕೊಂಡು, ಅವುಗಳನ್ನು ಬಿಡಲಾರದೆ, ಬಯಲಬ್ರಹ್ಮವಾಗಬೇಕೆಂದು ಭ್ರಮೆಗೊಂಡರೆ, ಅದೇ ಅಂತರಂಗದ ಭಾವಸೂತಕ. ಭಾವಶುದ್ಧವಾಗದೆ ಜೀವ ಶುದ್ಧವಾಗಲಾರದು. (೧೪:೨೪೭೫)

**ಅಂತರಂಗದ ಮನಸೂತಕ :** ನಾವು ಯಾವುದೇ ಕೆಲಸ ಮಾಡಬೇಕಾದರೂ ಮನಸ್ಸಿನ ಪ್ರಚೋದನೆ ಬೇಕು. ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳಿಂದ ಪುಣ್ಯ ಅಥವಾ ಪಾಪಕಾರ್ಯಗಳನ್ನು ಮಾಡಿಸುವುದು ಮನಸ್ಸೇ. ಇಂಥ ಮನಸ್ಸಿಗಾಗುವ ಮೈಲಿಗೆಯೇ ಮನಸೂತಕ.

ನವದ್ವಾರ, ನವನಾಳ, ನವಚಕ್ರ, ನವಾಕೃತಿ, ನವಸ್ಥಲಗಳಾವುವು, ಅವುಗಳ ಕೃತ್ಯಗಳಾವುವು, ಎಂಬುದನ್ನು ತಿಳಿಯದೇ, ತಾನಾರು ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸದೆ, ವಿಭೂತಿ, ಮಂತ್ರ, ರುದ್ರಾಕ್ಷಿಗಳನ್ನು ತ್ಯಜಿಸಿ, ಅನೈತಿಕವಾಗಿ ನಡೆದು, ಸುಳ್ಳು, ಚಾಡಿ, ಇತ್ಯಾದಿ ಹೇಳಿ, ತಾನು ಹೀನವಾಗಿ, ಹಲವರಿಂದ ದೂಷಿತನಾಗಿ, ಲಿಂಗಾಂಗ ಸಾಮರಸ್ಯವೇ ಅತ್ಯುಚ್ಚ ಗುರಿಯೆಂಬುದನ್ನು ತಿಳಿಯದೆ ಪಂಚವಿಷಯಗಳನ್ನರಸುತ್ತ, ಸ್ತುತಿ ನಿಂದನೆಗಳಿಗೆ ಬಲಿಯಾಗಿ, ನಿರಾಸೆಯಿಂದ ಅಷ್ಟಾವರಣ-ಷಟ್‌ಸ್ಥಲ ಮಾರ್ಗಗಳನ್ನು ಕೈಬಿಟ್ಟು, ಮನೋವಿಲಾಸಿಯಾಗಿರುವುದೇ ಅಂತರಂಗದ ಮನಸೂತಕ (೧೪:೨೪೭೨).

**ಅಂತರಂಗದ ಸಂಕಲ್ಪಸೂತಕ :** ಗುರುವಿನಿಂದ ದೀಕ್ಷೆ ಮತ್ತು ಉಪದೇಶಗಳನ್ನು ಪಡೆದ ಮೇಲೂ, ಅಷ್ಟಾವರಣ-ಷಟ್‌ಸ್ಥಲ ಮಾರ್ಗಗಳನ್ನು ತ್ಯಜಿಸಿ, ಗುರುಪೂಜೆ, ಲಿಂಗಾರ್ಚನೆ, ಜಂಗಮಾರಾಧನೆ ಮಾಡಬೇಕೆಂದು ಇತರರನ್ನು ಕಾಡಿಬೇಡಿ, ಕೊಟ್ಟರೆ ಹೊಗಳಿ, ಕೊಡದಿದ್ದರೆ ತೆಗಳಿ, ತನ್ನ ಕರ್ಮಕ್ಕಾಗಿ ತನ್ನನ್ನೇ ಹಳಿಯುತ್ತಾ ಪ್ರಥಮಾಚಾರವ ಮರೆದು, ಭವರೋಗಿಯಾಗಿರುವುದೇ ಅಂತರಂಗದ ಸಂಕಲ್ಪಸೂತಕ. (೧೪:೨೪೭೪)

**ಅಂತರಂಗ ಶುದ್ಧಿ :** ಅಂತ:ಕರಣಗಳ ಶುದ್ಧಿ: ಅರಿಷಡ್ವರ್ಗಗಳನ್ನೂ, ಷಡೂರ್ಮಿ ಮುಂತಾದವುಗಳನ್ನೂ, ಅಜ್ಞಾನವನ್ನೂ ನಾಶಮಾಡಿದವನಿಗೆ ಅಂತರಂಗಶುದ್ಧಿ ಪ್ರಾಪ್ತಿಯಾಗುತ್ತದೆ. ಬಸವಣ್ಣನವರ ಪ್ರಕಾರ, ಕಳ್ಳತನ, ಕೊಲೆ, ಸುಳ್ಳುಹೇಳುವುದು, ಮುಂತಾದ ದುರ್ಗುಣಗಳನ್ನು ತ್ಯಜಿಸುವುದೇ ಅಂತರಂಗಶುದ್ಧಿ.

**ಅಂತರಾತ್ಮ :** ಜೀವಾತ್ಮ ಅನುಭಾವದ ಮೂಲಕ ಶುದ್ಧನಾದಾಗ ಅಂತರಾತ್ಮನೆನಿಸಿಕೊಳ್ಳುತ್ತಾನೆ. [`ಅಂತರಾತ್ಮನೇ ಗುರು, ಜೀವಾತ್ಮನೇ ಶಿಷ್ಯ' ೨:೭೪೧]. ಅಂತರಾತ್ಮನು ಪರಿಶುದ್ಧನಾಗಿರುವುದರಿಂದ ಅವನ ಪ್ರಾರಬ್ಧ ಕರ್ಮಗಳೆಲ್ಲವೂ ಭಸ್ಮವಾಗಿವೆ ಹಾಗೂ ಅವನಿಗೆ ಸಂಚಿತ ಕರ್ಮಗಳಾಗಲಿ ಆಗಾಮಿ ಕರ್ಮಗಳಾಗಲಿ ಇಲ್ಲ. ಆದುದರಿಂದ ಅವನಿಗೆ ಪುನರ್ಜನ್ಮವಿಲ್ಲ. (ನೋಡಿ : **ಜೀವಾತ್ಮ**)

**ಅಂತರ್ಮುಖ ಸುಖವಿರಹಿತ :** ಆಧ್ಯಾತ್ಮ ಸಾಧನೆಯಲ್ಲಿ ಪ್ರಗತಿ ಸಾಧಿಸಿದವನು ಹೂವು, ಆಹಾರ, ಇತ್ಯಾದಿಗಳನ್ನಷ್ಟೇ ಅಲ್ಲ, ತನ್ನ ಕರಣಾದಿಗಳನ್ನೂ ಪರಶಿವನಿಗೆ ಅರ್ಪಿಸುತ್ತಾನೆ. ಅಷ್ಟೇ ಅಲ್ಲ, ಪ್ರತಿಯೊಂದು ಇಂದ್ರಿಯದ ಬಾಗಿಲಿನಲ್ಲೂ ಪರಶಿವನನ್ನು ಪ್ರತಿಷ್ಠಾಪಿಸಿ, ಯಾವುದೇ ಅರ್ಪಣೆಯು ಮೊದಲು ಪರಶಿವನಿಗೆ ತಾಗಿದ ನಂತರವೇ ತಾನು ಸುಖಿಸುತ್ತೇನೆನ್ನುವವನು ಅಂತರ್ಮುಖ ಸುಖಿ. ಯಾವ ರೀತಿಯಲ್ಲಿಯೂ ಶಿವನಿಗೆ ಅರ್ಪಿಸದಿರುವುದು ಅಂತರ್ಮುಖಸುಖವಿರಹಿತ. (೧೨:೬೬೨)

**ಅಂತ್ಯನಾಸ್ತಿ :** ಸಾವಿಲ್ಲದವನು (ಅಮರ), ಅನಂತ.

**ಅಂತ್ಯಪ್ರಸಾದ :** ಇಷ್ಟಲಿಂಗಕ್ಕೆ ಅರ್ಪಿಸಿ ಪಡೆದುದು ಆದಿ ಪ್ರಸಾದವಾಗುತ್ತದೆ. ಎಲ್ಲವನ್ನೂ ಪ್ರಾಣಲಿಂಗಕ್ಕೆ ಅರ್ಪಿಸಿ ಪಡೆದುದು ಅಂತ್ಯಪ್ರಸಾದವಾಗುತ್ತವೆ (೯:೧೧೩೬).

**ಅಂತಃಕರಣ ಚತುಷ್ಟಯ :** ಕರ್ಮೇಂದ್ರಿಯಗಳೂ, ಜ್ಞಾನೇಂದ್ರಿಯಗಳೂ ಆತ್ಮನ ಕರಣಗಳು. ಆತ್ಮನು ಕೈಕಾಲು ಇತ್ಯಾದಿಗಳನ್ನೂ ಕಣ್ಣು ಕಿವಿ ಮುಂತಾದವುಗಳನ್ನೂ ಬಳಸಿಕೊಂಡು ರುಚಿನೋಡುವುದು, ಕೇಳಿಸಿಕೊಳ್ಳುವುದು, ನಡೆದಾಡುವುದು, ಮುಂತಾದ ಕೆಲಸಗಳನ್ನು ಮಾಡುತ್ತದೆ. ಅದೇ ರೀತಿ, ಮನಸ್ಸು, ಬುದ್ಧಿ, ಅಹಂಕಾರ ಮತ್ತು ಚಿತ್ತ ಆತ್ಮನ ನಾಲ್ಕು ಅಂತಃಕರಣಗಳು. ಇವೂ ಸಹ ಆತ್ಮನ ಸಂಗದಿಂದಾಗಿ ಮತ್ತು ಆತ್ಮನಿಗೋಸ್ಕರ ನಾಲ್ಕು ಪ್ರಕಾರದ ಮಾನಸಿಕ ಕ್ರಿಯೆಗಳನ್ನೂ ಮಾಡುತ್ತವೆ. ಒಂದು ವಸ್ತುವನ್ನು ನೋಡಿದಾಗ ಮನಸ್ಸು ಅದರ ಮೇಲೆ ಕೇಂದ್ರಿಕೃತವಾಗದ ಹೊರತು, ನಾವು ಆ ವಸ್ತುವನ್ನು ಎಷ್ಟು ಹೊತ್ತು ನೋಡಿದರೂ ಅದನ್ನು ತಿಳಿದುಕೊಳ್ಳಲಾಗುವುದಿಲ್ಲ; ವಸ್ತುವಿನ ಮೇಲೆ ಮನಸ್ಸು ಕೇಂದ್ರಿಕೃತವಾದಾಗ ಬುದ್ಧಿ, ಇದು ಇಂಥ ವಸ್ತು ಎಂಬುದನ್ನು ನಿರ್ಧರಿಸುತ್ತದೆ. ಅಹಂಕಾರವು 'ನಾನು' ಈ ವಸ್ತುವನ್ನು ನೋಡುತ್ತಿದ್ದೇನೆ, ನಾನು ನಾಳೆ ಈ ಕೆಲಸವನ್ನು ಮಾಡಬೇಕು ಎಂದುಕೊಳ್ಳುತ್ತದೆ. ಯಾವ ವಸ್ತುವನ್ನು ತಿಳಿದುಕೊಳ್ಳುವಾಗಲೂ ಇಂದ್ರಿಯ, ಮನಸ್ಸು, ಬುದ್ಧಿ ಬೇಕಾಗಿರುವಂತೆ ಅಹಂಕಾರ ಸಹ ಬೇಕು. ಚಿತ್ತವು ಕೋಪ, ಸಂತೋಷ, ಲೋಭ, ಮುಂತಾದವುಗಳ ಆಶ್ರಯಸ್ಥಾನ.

**ಅಂತರ್ಲಿಂಗ :** ಭಕ್ತನಲ್ಲೆ ಅಂತಸ್ಥವಾಗಿರುವ ಚಿದ್ರೂಪ ಪರಶಿವ. ಆದರೆ ಅದು ಆಧ್ಯಾತ್ಮ ಸಾಧನೆಯ ಮೂಲಕವಲ್ಲದೆ ಪ್ರಕಟವಾಗಲಾರದು (೪:೧೬೬೫).

**ಅಕಾಯ :** (೧) ಕಾಯದ ದುಷ್ಟಭಾವಕ್ಕೆ ಒಳಗಾಗದಿರುವುದು ಅಥವಾ, ದೇಹೇಂದ್ರಿಯಗಳೆಲ್ಲವನ್ನೂ ಪರಶಿವನಗರ್ಪಿಸಿ ದೇಹಭಾವವಿಲ್ಲದಿರುವುದು. (೫:೫); (೨) ಕಾಯವಿಲ್ಲದ ಪರಶಿವ.

**ಅಕಾಯ ಚರಿತ್ರರು :** ಅನುಭಾವದ ಮೂಲಕ ದೇಹಭಾವವನ್ನು ಕಳೆದುಕೊಂಡವರು. ಅವರು ಅದನ್ನು ಮತ್ತೆ ಮರಳಿ ಪಡೆಯಲಾರರಾದುದರಿಂದ ಅವರ ಮುಂದಿನ ಜೀವನ ಚರಿತ್ರೆಯಲ್ಲಿ ದೇಹಭಾವವಿಲ್ಲದ (ಅಕಾಯ) ಚರಿತ್ರ.

**ಅಕಾಯ ಮುಖದಲ್ಲಿ ಸಕಾಯ ಪ್ರತಿಬಿಂಬಿಸುವುದು :** ಲಿಂಗ ಅಥವಾ ಪರಶಿವನಿಗೆ ನಮಗಿರುವಂಥ ಕಾಯ(ದೇಹ)ವಿಲ್ಲ. ಅವನ ಮುಖವನ್ನು ಕಾಯ(ದೇಹ)ವುಳ್ಳ ಜಂಗಮನ ಮುಖ ಪ್ರತಿಬಿಂಬಿಸುತ್ತದೆ. ಆದರೆ ಇಲ್ಲಿ 'ಜಂಗಮ' ಎಂಬ ಪದಕ್ಕೆ 'ಪರಶಿವನಲ್ಲಿ ಒಂದಾದವನು' ಎಂಬರ್ಥವಿದೆ. ಕನ್ನಡಿಯು ನಮ್ಮ ಮುಖವನ್ನು ಹೇಗೆ ಪ್ರತಿಬಿಂಬಿಸುತ್ತದೆಯೋ ಹಾಗೆ ಪರಶಿವನು ತನ್ನಲ್ಲಿ ಒಂದಾದ ಜಂಗಮನನ್ನು ಪ್ರತಿಬಿಂಬಿಸುತ್ತಾನೆ (೩:೩೯೮).

**"ಅಕಾಯೋ ಭಕ್ತ ಕಾಯಸ್ತು" :** ೧. ತನ್ನ ದೇಹ, ಇಂದ್ರಿಯಗಳು, ಅಂತಃಕರಣಾದಿಗಳನ್ನು ಪರಶಿವನಿಗೆ ಅರ್ಪಿಸಿದ ಮೇಲೆ, ಭಕ್ತನಿಗೆ ಅರ್ಪಿಸುವುದೇನೂ ಅವನಲ್ಲಿ ಉಳಿದಿಲ್ಲ. ಆದುದರಿಂದ ಹಾಗೆ ದೇಹವಿಲ್ಲದವನ ಶರೀರವನ್ನು ಅಕಾಯವೆನ್ನಲಾಗುತ್ತದೆ.

೨. ಪರಶಿವನು ಸ್ವತಃ ಅಕಾಯನಾಗಿದ್ದು ಭಕ್ತನ ಕಾಯವೇ ಅವನಿಗೆ ಕಾಯವಾಗುತ್ತದೆ. (೩:೫೫೩).

**ಅಕ್ರೀ :** (ಅಕ್ರಿಯೆ) ಗುರು ವಿಧಿಸಿದ ಕ್ರಿಯೆಗಳಿಗೆ ಆಚಾರಗಳಿಗೆ ವಿರುದ್ಧವಾದ ಕ್ರಿಯೆಗಳು. ದುರಾಚಾರ; (ನೋಡಿ : **ದುರಾಚಾರ**).

**ಅಕ್ಷಯ ಪದ :** (೧೨:೬೨೦) ಐಹಿಕ ಸುಖ, ಇಂದ್ರಪದವಿ, ಬ್ರಹ್ಮಪದವಿ, ಮುಂತಾದ ಪದಗಳೆಲ್ಲಾ ಕ್ಷಯ ಪದಗಳು. ಆದರೆ ಲಿಂಗದಲ್ಲಿ ಆತ್ಮನು ಬೇರಿಲ್ಲದಂತೆ ಬೆರೆತರೆ, ಅದು ಅಕ್ಷಯ ಪದ.

**ಅಕ್ಷರ :** ಕ್ಷರ (ಕ್ಷೀಣ)ವಾಗದಿರುವ ಪರಶಿವ. ಜಗತ್ತೆಲ್ಲಾ ಸಂಹಾರವಾದರೂ, ಬ್ರಹ್ಮ, ವಿಷ್ಣು, ಮುಂತಾದವರೆಲ್ಲಾ ಲಯಕ್ಕೊಳಗಾದರೂ, ಪರಶಿವನು ಮಾತ್ರ ಅಕ್ಷರ.

**ಅಕ್ಷರತ್ರಯ :** ಅ, ಉ, ಮ ಎಂಬ ಮೂರು ಅಕ್ಷರಗಳಿಂದಾಗುವ 'ಓಂ' ಎಂಬ ಮಂತ್ರ.

**ಅಕ್ಷರ ಪಂಚಕ :** ಐದು ಅಕ್ಷರಗಳ ಮಂತ್ರ; ನಮಃ ಶಿವಾಯ ಎಂಬ ಪ್ರಣವ.

**ಅಕ್ಷರವೈದು :** ಐದು ಅಕ್ಷರಗಳನ್ನೊಳಗೊಂಡ ನಮಃಶಿವಾಯ ಮಂತ್ರ.

**ಅಖಂಡ ಪರಿಪೂರ್ಣ ಜ್ಞಾನ :** ಜ್ಞಾನವೆಂದರೆ ಇಂದ್ರಿಯ ಮತ್ತು ವಸ್ತುಗಳ ಸಂಬಂಧದಿಂದ ಉಂಟಾಗುವ ಪರಿಣಾಮವಲ್ಲ; ಜ್ಞಾನವೆಂದರೆ ಚಿತ್ತು ಅಥವಾ ಚಿದ್ವಸ್ತು. ಪರಿಪೂರ್ಣವೆಂದರೆ ಎಲ್ಲ ಕಡೆಯಲ್ಲೂ 'ತುಂಬಿಕೊಂಡಿರುವ' ಎಂದರ್ಥ. ಪ್ರತಿಯೊಂದು ವಸ್ತುವಿನಲ್ಲೂ ತುಂಬಿಕೊಂಡಿರುವ ಈ ಚಿದ್ವಸ್ತು ಅವಿಭಾಜ್ಯ (ಅಖಂಡ). (೭:೪೩೫).

**ಅಖಂಡ ಭಕ್ತಿರತಿ :** ಪರಶಿವನನ್ನಲ್ಲದೆ ಮತ್ತೇನನ್ನೂ ಪ್ರೀತಿಸದವನು ತೋರಿಸುವ ಭಕ್ತಿ ಅಖಂಡ ಭಕ್ತಿ. ಸಾಧಾರಣ ಜನರು ಶಿವನಿಗೂ ಭಕ್ತಿ ತೋರಿಸುತ್ತಾರೆ, ಪ್ರಾಪಂಚಿಕ ವಸ್ತುಗಳಿಗೂ ಒಲವು ತೋರಿಸುತ್ತಾರಾದ್ದರಿಂದ, ಅವರ ಭಕ್ತಿ ಅಖಂಡವಲ್ಲ. ಅಖಂಡ ಭಕ್ತಿಯು ಸಾಮರಸ್ಯದಲ್ಲಿ ಕೊನೆಗೊಳ್ಳಬೇಕು. ರತಿಸುಖದಲ್ಲಿ ಗಂಡು ಹೆಣ್ಣು ಪರಸ್ಪರರಲ್ಲಿ ಹೇಗೆ ಬೆರೆಯುತ್ತಾರೋ, ಹಾಗೆಯೇ, ಸಾಮರಸ್ಯದಲ್ಲಿ ಅಂಗದಲ್ಲಿ ಲಿಂಗವೂ, ಲಿಂಗದಲ್ಲಿ ಅಂಗವೂ ಬೆರೆಯುತ್ತದೆ. ಆಗ ಜೀವ ತೋರಿಸುವ ಭಕ್ತಿಯು ಕೇವಲ ಅಖಂಡವಷ್ಟೇ ಅಲ್ಲ, ಅದು ಅಖಂಡ ರತಿಯೂ ಹೌದು. ಅದು ಅಖಂಡವು ಏಕೆಂದರೆ, ಅದರಲ್ಲಿ ಭಕ್ತನು ತಾನು ಲಿಂಗದಲ್ಲಿ ಬೇರಿಲ್ಲದಂತೆ ಬೆರೆತು, ತಾನೂ ಪರಶಿವನೂ ಒಂದೇ ಎಂದು ತಿಳಿಯುತ್ತಾನೆ (೯:೨೨೭).

**ಅಖಂಡಿತ :** ಅವಿಭಾಜ್ಯ; ಆಕಾಶವು ಹೇಗೆ ಅವಿಭಾಜ್ಯವೋ ಹಾಗೆಯೇ ಚಿತ್‌ಸ್ವರೂಪನಾದ ಪರಶಿವನೂ ಅವಿಭಾಜ್ಯ. ವಸ್ತುಗಳು ಭಾಗವಾಗಬಲ್ಲವು. ಆದರೆ ಅವುಗಳ ಒಳಗೂ ಹೊರಗೂ ಸಂದಿಲ್ಲದಂತೆ ವ್ಯಾಪಿಸಿಕೊಂಡಿರುವ ಚೇತನವು ಅಖಂಡಿತ (೨:೪೯).

**ಅಗ್ಗಣಿ (ಅಗ್ಘವಣಿ) :** ಲಿಂಗ ಪೂಜೆಗೆ ಮತ್ತು ಪಾದಪೂಜೆಗೆ ಉಪಯೋಗಿಸುವ ನೀರು. ಇದು ಶುದ್ಧವಾಗಿರಬೇಕಾದುದು ಆವಶ್ಯಕವಾದುದರಿಂದ, ಕೆಲವರು ಅಗ್ಘವಣಿಗೆ ಚಿಲುಮೆಯ ನೀರೇ ಬೇಕೆಂದು ಒತ್ತಾಯಿಸುತ್ತಾರೆ. ಆದರೆ ಬಹಳಷ್ಟು ವಚನಕಾರರು ಈ ರೀತಿ ಒತ್ತಾಯಿಸುವುದನ್ನು ಖಂಡಿಸುತ್ತಾರೆ.

**ಅಗ್ನಿಧಾರಣ :** ಮೂಲಾಧಾರದಲ್ಲಿರುವ ಅಗ್ನಿಯನ್ನು ಎಬ್ಬಿಸಿ, ಸುಷುಮ್ನನಾಳದ ತುದಿಯನ್ನು ಮುಟ್ಟಿ, ಸಹಸ್ರಾರವನ್ನು ಹೊಕ್ಕರೆ, ಅಲ್ಲಿ ಅದಕ್ಕೆ ಪ್ರಪಂಚದಲ್ಲಿ ಎಲ್ಲೆಲ್ಲೂ ವ್ಯಾಪಿಸಿಕೊಂಡಿರುವ ಪರಶಿವನ ದರ್ಶನವಾಗುವುದು. (೧೩:೧೫೫೩).

**ಅಘೋರ :** (೧) ಅಘೋರವೆಂಬ ನರಕ. ಹೀನಕೃತ್ಯಗಳೆಸಗಿದವರಿಗೆ ಅಘೋರ ನರಕದಲ್ಲಿ ಶಿಕ್ಷೆಯಾಗುತ್ತದೆ, ಎಂದು ನಂಬಲಾಗುತ್ತದೆ.

(೨) ಪರಶಿವನ ಸಾದಾಖ್ಯಗಳಲ್ಲಿ ಒಂದು. (ನೋಡಿ : **ಸಾದಾಖ್ಯ**).

**ಅಚೇತನ ಮೂರ್ತಿ :** ಪರಶಿವನು ಚೇತನವಾದುದರಿಂದ ಅವನು ಮೂರ್ತಿಯಲ್ಲ. ಆದರೆ ಗುರುವು ಕೊಡುವ ಇಷ್ಟಲಿಂಗವು ಆ ಪರಶಿವನ ಕುರುಹು, ಅದು ಅಚೇತನ ಮೂರ್ತಿ. (೯:೨೪೩).

**ಅಚ್ಚ ಪ್ರಸಾದಿ :** ಕೇವಲ ಆಹಾರ ಪದಾರ್ಥಗಳನ್ನಷ್ಟೇ ಅಲ್ಲ, ತಾನು ಅನುಭವಿಸುವ ರೂಪರಸಾದಿಗಳೆಲ್ಲವನ್ನು ಪರಶಿವನಿಗೆ ಅರ್ಪಿಸಿ, ಅವುಗಳನ್ನು ಚಿದ್ರೂಪ, ಚಿದ್ರಸ, ಇತ್ಯಾದಿಗಳೆಂಬ ಪ್ರಸಾದವನ್ನಾಗಿ ಮಾಡಿಕೊಂಡು ಭೋಗಿಸುವವನು. ಅವನ ಭಕ್ತಿ ಇನ್ನೂ ವರ್ಧಿಸಿದಂತೆ, ತನ್ನ ದೇಹೇಂದ್ರಿಯಗಳನ್ನೂ ಪರಶಿವನಿಗರ್ಪಿಸಿ ಅವನ್ನೂ ಪ್ರಸಾದದಂತೆ ಬಳಸುತ್ತಾನೆ. ಪ್ರಸಾದವು ಹೇಗೆ ಶುದ್ಧವೋ, ಹಾಗೆಯೇ ಅವನಿಗೆ ಪ್ರಪಂಚದಲ್ಲಿರುವುದೆಲ್ಲಾ ಶುದ್ಧವೇ ಹೊರತು, ಒಳಿತು ಕೆಡಕುಗಳೆಂಬುದಿಲ್ಲ.

**ಅಚ್ಚ ಲಿಂಗೈಕ್ಯ :** ನಿಜವಾಗಿಯೂ ಲಿಂಗಾಂಗ ಐಕ್ಯತೆಯನ್ನು ಸಾಧಿಸಿದವನು. ಕೆಲವರು ಬರಿದೆ ತಾವು ಶಿವನನ್ನು ಕಂಡಿದ್ದೇವೆಂದು ಹೇಳಿಕೊಳ್ಳುತ್ತಾರೆ. ಅಚ್ಚ ಲಿಂಗೈಕ್ಯರು ಹಾಗೆ ಹೇಳಿಕೊಳ್ಳದೆ ಶಬ್ದ ಮುಗ್ಧರಾಗಿರುತ್ತಾರೆ. ನಿಜವಾಗಿಯೂ ಲಿಂಗೈಕ್ಯರಾದವರು ತಾವು ಬೇರೆ ಲಿಂಗ ಬೇರೆ ಎಂದು ತಿಳಿಯದೆ, ತಾವು ಊಟ ಮಾಡುವುದರಿಂದ ಲಿಂಗಕ್ಕೆ ತೃಪ್ತಿಯಾಗುತ್ತದೆ ಎಂದು ತಿಳಿಯುತ್ತಾರೆ.

**ಅಚ್ಚಶರಣ :** ನಿಜವಾದ ಶರಣ. ನಿಜವಾದ ಶರಣನೆಂದರೆ, ತನ್ನ ಎಲ್ಲವನ್ನೂ ಪರಶಿವನಿಗೆ ಅರ್ಪಿಸಿದವನು; ತಾನೆಂಬ ಭಾವವಿಲ್ಲದವನು.

**ಅಜ :** ಹುಟ್ಟದವನು, ಬ್ರಹ್ಮ.

**ಅಜಪೆ (ಅಜಪ ಮಂತ್ರ) :** ಸಾಧಾರಣ ಭಕ್ತನು ಜಪಿಸುವಾಗ ಅವನ ಜಪವು ಬೇರೆಯವರಿಗೆ ಕೇಳಿಸುತ್ತದೆ. ಆದರೆ ಆಧ್ಯಾತ್ಮದಲ್ಲಿ ಪ್ರಗತಿಹೊಂದಿದ ಸಾಧಕನು ಜಪವನ್ನು ತನ್ನ ಉಸಿರಿನೊಂದಿಗೆ ಜೋಡಿಸುತ್ತಾನೆ. ಹೀಗೆ ಅವನ ಉಸಿರಾಟವೇ ಒಂದು ಜಪ.

**ಅಜಾತ :** ೧. ಮತ್ತೆ ಹುಟ್ಟದಿರುವವನು. ವಾಸ್ತವವಾಗಿ, ಇದರ ಅಂತಿಮ ಅರ್ಥ ಅಮರ ಎಂದು. ಏಕೆಂದರೆ ಯಾರು ಮತ್ತೆ ಹುಟ್ಟುವುದಿಲ್ಲವೋ ಅವನು ಮತ್ತೆ ಸಾಯುವುದಿಲ್ಲ (ಅಮರ). "ಸಾವಂಗೆ ಭಯ ಉಂಟಲ್ಲದೆ, ಅಜಾತಂಗೆ ಭಯವುಂಟೇ"? ಎಂದು ಸಿದ್ಧರಾಮ (೪:೧೦೦೭) ಕೇಳುವಲ್ಲಿ, "ಅಜಾತ" ಎಂಬ ಪದವು "ಸಾಯುವವನು" ಎಂಬುದರ ವಿರುದ್ಧವಾಗಿ ಬಳಸಲ್ಪಟ್ಟಿದೆ ಎಂಬುದು ಸ್ಪಷ್ಟವಾಗುತ್ತದೆ.

೨. ಎಂದೆಂದೂ ಹುಟ್ಟಿರದ ಪರಶಿವ.

**ಅಜಾತನ ಶರಣ :** ಅಜಾತನಾದ ಪರಶಿವನ ಭಕ್ತ; ಶಿವಶರಣ. (೯:೨೬೧).

**ಅಜಾತಮಯ :** ಅಜಾತನಾದ ಲಿಂಗಮಯನಾಗಿರುವುದು. ಪ್ರಾಣಲಿಂಗಿ ಅಥವಾ ಸರ್ವಾಂಗಲಿಂಗಿಯಾದವನು ಸರ್ವವನ್ನೂ ಶಿವನಿಗರ್ಪಿಸುತ್ತಾನೆ; ಹಾಗೂ ತನ್ನ ದೇಹವನ್ನು ಶಿವನ ವಾಸಸ್ಥಾನವನ್ನಾಗಿ ಮಾಡುತ್ತಾನಾದುದರಿಂದ ಅವನು ಅಜಾತಮಯ. ಅನುಭಾವದ ಮೂಲಕ ತನ್ನತನವನ್ನು ಕಳೆದುಕೊಂಡವನೂ ಮೇಲಿನ ಕಾರಣಕ್ಕಾಗಿ ಅಜಾತಮಯ. (೮:೧೦೨೫).

**ಅಜ್ಞಾನ (ಮರೆವು) :** ಇದು "ಜ್ಞಾನ"ದ ವಿರುದ್ಧ ಪದ. (೧) ಇಂದ್ರಿಯ ಗೋಚರ ವಿಶ್ವವು ಪರಶಿವನ ಶಕ್ತಿ; (೨) ಇಡೀ ವಿಶ್ವದ ತುಂಬೆಲ್ಲಾ ಪರಶಿವನೇ ತುಂಬಿದ್ದಾನೆ; (೩) ನಾನೆಂಬ ಜೀವ ಪರಶಿವನಿಂದ ಪ್ರತ್ಯೇಕವಲ್ಲ, ಅವನ ಅಂಗ, ಎಂಬುದೇ ಜ್ಞಾನ. "ನಾನು" ಎಂಬ ಪ್ರತ್ಯೇಕ ವ್ಯಕ್ತಿ, ಶಿವನಿಂದ ಭಿನ್ನ, ನನ್ನ ದೇಹವೇ ಆತ್ಮಕ್ಕಿಂತ ಹೆಚ್ಚು ಮುಖ್ಯವಾದುದು, ಐಹಿಕ (ದೈಹಿಕ) ಸುಖಕ್ಕಿಂತ ಹೆಚ್ಚಿನ ಸುಖವಿಲ್ಲ, ಎಂಬುದೇ ಅಜ್ಞಾನ (ಮರೆವು).

**ಅಣುರೇಣುತೃಣಕಾಷ್ಠ :** ಅಣುವಿನಲ್ಲಿಯೂ, ಪರಮಾಣುವಿನಲ್ಲಿಯೂ ಹುಲ್ಲುಕಡ್ಡಿ ಮತ್ತು ಕಟ್ಟಿಗೆಗಳಲ್ಲಿಯೂ ಇರುವವನು. ಪರಶಿವನು ಎಲ್ಲೆಲ್ಲಿಯೂ - ಕೇವಲ ಈ ವಸ್ತುಗಳಲ್ಲಷ್ಟೇ ಅಲ್ಲ - ಇದ್ದಾನೆಂಬುದು ಈ ಪದಗುಚ್ಛದ ಅರ್ಥ. ಹೀಗೆ ಎಲ್ಲ ವಸ್ತುಗಳಲ್ಲಿಯೂ ಇದ್ದರೂ, ಅವುಗಳ ಹೊರಗೂ ಅವನಿರುವುದರಿಂದ, ಅವನನ್ನು ವಿಭಜಿಸಲು ಬರುವುದಿಲ್ಲ.

**'ಅಣೋರಣೀಯಾನ್ ಮಹತೋ ಮಹೀಯಾನ್' :** "ಅಣುವಿಗಿಂತ ಸಣ್ಣವನು ಹಾಗೂ ದೊಡ್ಡದಕ್ಕಿಂತ ದೊಡ್ಡವನು" (= ಪರಶಿವ) (೨:೭೬೬).

**ಅತರ್ಕ್ಯ :** ಪರಶಿವನನ್ನು ಇಂದ್ರಿಯಗಳ ಮೂಲಕ ತಿಳಿದುಕೊಳ್ಳಲು ಸಾಧ್ಯವಿಲ್ಲವಾದುದರಿಂದ, ಕೆಲವರು ಅವನು ಇದ್ದಾನೆಂದೂ, ಅವನಿಗೆ ಇಂಥಿಂಥ ಗುಣಗಳಿವೆಯೆಂದೂ, ತರ್ಕದ (ಅನುಮಾನವೆಂಬ ಪ್ರಮಾಣದ) ಮೂಲಕ ತೋರಿಸಿಕೊಡಲು ಪ್ರಯತ್ನಿಸಿದ್ದಾರೆ. ಆದರೆ ಅವರ ಪ್ರಯತ್ನಗಳೆಲ್ಲ ವ್ಯರ್ಥ. ಏಕೆಂದರೆ ಪರಶಿವನು ತರ್ಕಕ್ಕೂ ನಿಲುಕದವನು, ಅತರ್ಕ್ಯ (೯:೨೭೫).

**ಅತ್ಯತಿಷ್ಠದ್ದಶಾಂಗುಲ :** ಇರುವುದೆಲ್ಲಕ್ಕೂ ದೊಡ್ಡದು ಎಂದು ನಾವು ಯಾವುದನ್ನು ನಾವು ಕಲ್ಪಿಸಿಕೊಳ್ಳುತ್ತೇವೆಯೋ, ಅದಕ್ಕಿಂತ ಹತ್ತು ಅಂಗುಲ ಎತ್ತರ ಇರುವವನು; ಪರಶಿವ.

**ಅತೀತ :** ಮೀರಿದವನು. "ವಿಶ್ವಾತೀತ" ಎಂಬಲ್ಲಿ ವಿಶ್ವವನ್ನು ಮೀರಿದವನು ಅಥವಾ ವಿಶ್ವದಿಂದ ದೂರ ಇರುವವನು ಎಂದರ್ಥ. ಈ ಪದವು ಯಾವಾಗಲೂ ಪರಮಾತ್ಮನಿಗೆ ಅನ್ವಯಿಸುತ್ತದೆ. ಆದರೆ ವಚನಕಾರರ ಪ್ರಕಾರ, ಪರಶಿವನು ವಿಶ್ವಾತೀತನೂ ಹೌದು, ವಿಶ್ವಾತ್ಮಕನೂ ಹೌದು. ಅಂದರೆ, ಒಂದು ಪಾತ್ರೆ ನೀರಿನಲ್ಲಿ ಮುಳುಗಿದಾಗ ನೀರು ಹೇಗೆ ಅದರೊಳಗೂ ಅದರ ಹೊರಗೂ ಇರುತ್ತದೆಯೋ, ಹಾಗೆಯೇ ಪರಶಿವನು ಪ್ರಪಂಚದ ಒಳಗೂ ಹೊರಗೂ ಇದ್ದಾನೆ.

**ಅದ್ವಯ :** ಎರಡಲ್ಲದ ಸ್ಥಿತಿ. ಅನುಭಾವಿಯು ತಾನು ಪರಶಿವನಲ್ಲಿ ಐಕ್ಯವಾದಾಗ "ನಾನು ಮತ್ತು ಪರಮಾತ್ಮ" ಎಂಬ ದ್ವೈತ ಭಾವವು ಅವನಿಗಿಲ್ಲವಾಗುತ್ತದೆ. (೧:೧೬)

**ಅದ್ವೈತ :** ಶುದ್ಧಾದ್ವೈತ ಅಥವಾ ಚಿದದ್ವೈತ ಎಂದು ಕರೆಯಲಾಗುವ ಈ ದಾರ್ಶನಿಕ ಪಂಥವು ಸಾರರೂಪದಲ್ಲಿ ಉಪನಿಷತ್ತುಗಳಲ್ಲೇ ಇದ್ದರೂ, ಅದಕ್ಕೊಂದು ಸ್ಪಷ್ಟ ರೂಪವನ್ನೂ, ಭದ್ರ ಬುನಾದಿಯನ್ನು ಹಾಕಿ ಕೊಟ್ಟ ಕೀರ್ತಿ ಶಂಕರಾಚಾರ್ಯರಿಗೆ ಸಲ್ಲುತ್ತದೆ. ಅದ್ವೈತ ಸಿದ್ಧಾಂತದ ಪ್ರಕಾರ ಎಲ್ಲೆಲ್ಲೂ ಒಂದೇ ತತ್ವವಿದೆ - ಅದೇ ನಿರ್ಗುಣಬ್ರಹ್ಮ; ಪ್ರಪಂಚವು ಮಾಯೆಯೇ ಹೊರತು, ಬ್ರಹ್ಮನಂತೆ ಶಾಶ್ವತ ಸತ್ಯವಲ್ಲ; ಜೀವಾತ್ಮನು ಬ್ರಹ್ಮನಿಂದ ಭಿನ್ನವಲ್ಲ; ಜೀವನು ಅವಿದ್ಯೆಯಿಂದಾಗಿ ಪ್ರಪಂಚವು ಸತ್ಯವೆಂದೂ, ಅದು ಬ್ರಹ್ಮನಿಂದ ಸೃಷ್ಟಿಯಾಗಿದೆ ಎಂದೂ ತಪ್ಪು ತಿಳಿದಿದ್ದಾನೆ; ಅವಿದ್ಯೆಯಿಂದಾಗಿ ತಾನು ಪರಶಿವನಿಂದ (ಬ್ರಹ್ಮನಿಂದ) ಭಿನ್ನವೆಂದೂ, ತಾನು ದೇಹೇಂದ್ರಿಯಾದಿಗಳೆಂದೂ ತಪ್ಪು ತಿಳಿದಿದ್ದಾನೆ. ಅವನಿಗೆ ಜ್ಞಾನೋದಯವಾದಾಗ ತಾನು ಬ್ರಹ್ಮನೆಂದೂ, ಪ್ರಪಂಚವು ಮಿಥ್ಯೆಯೆಂದೂ ತಿಳಿಯುತ್ತಾನೆ. ಬ್ರಹ್ಮಜ್ಞಾನಿಗೆ ಬ್ರಹ್ಮವೊಂದೇ ಕಾಣಿಸುತ್ತದೆ, ಪ್ರಪಂಚವು ಕಾಣಿಸುವುದಿಲ್ಲ.

**ಅಧ್ಯಾತ್ಮಿಕ ಜೀವನ :** ಆತ್ಮ ಸಾಕ್ಷಾತ್ಕಾರಕ್ಕೆ ಸಾಧನವಾದ ಜೀವನ ಕ್ರಮ.

**ಅಧ್ಯಾತ್ಮಿಕ ತಾಪ :** ತಾಪತ್ರಯಗಳಲ್ಲೊಂದು; ತನ್ನಿಂದ ತಾನೇ ಉಂಟುಮಾಡಿಕೊಂಡ ತಾಪ (ಕಷ್ಟ). ತನಗೆ ಒಗ್ಗದ ಆಹಾರ ಸೇವನೆ, ಜೀರ್ಣಮಾಡಿಕೊಳ್ಳುವುದಕ್ಕಿಂತ ಹೆಚ್ಚಿನ ಆಹಾರ ಸೇವನೆ, ಇವು ದೃಷ್ಟ ಆಧ್ಯಾತ್ಮಿಕ ತಾಪ; ಪಾಪಕೃತ್ಯಗಳನ್ನು ಮಾಡಿ ಅದಕ್ಕೆ ತಕ್ಕ ಫಲಗಳನ್ನು ಅನುಭವಿಸುವುದು ಅದೃಷ್ಟ ಆಧ್ಯಾತ್ಮಿಕ ತಾಪ.

**ಅಧಿದೇವತೆಗಳು :** ಪರಶಿವನು ಪ್ರಳಯ ಕಾಲದಲ್ಲಿ (ಅಥವಾ ಸೃಷ್ಟಿ ಪೂರ್ವದಲ್ಲಿ) ಒಬ್ಬನೇ ಇದ್ದು, ಅವನಿಗೆ ಸೃಷ್ಟಿ ಮಾಡಬೇಕೆಂದು ಇಚ್ಛೆಯಾದಾಗ ಅವನನ್ನು ನಿಷ್ಕಲ ಲಿಂಗ ಅಥವಾ ಸ್ಥಲ ಎಂದು ಕರೆಯಲಾಗುತ್ತದೆ. ಆ ಸ್ಥಿತಿಯಲ್ಲಿ ಶಕ್ತಿ ಅವನಲ್ಲಿ ಅವ್ಯಕ್ತ ಸ್ಥಿತಿಯಲ್ಲಿರುತ್ತದೆ. ಆಗ ಮೊದಲು ಅವನಿಂದ ಸದಾಶಿವ ಹೊರಬರುತ್ತಾನೆ; ಅವನಿಗೆ

ಜ್ಞಾನಶಕ್ತಿಯು ಜೊತೆಯಲ್ಲಿರುತ್ತದೆ. ಜ್ಞಾನಶಕ್ತಿಯೊಡಗೂಡಿದ ಸದಾಶಿವನಿಂದ ಇಚ್ಛಾಶಕ್ತಿಯೊಡಗೂಡಿದ ಶಿವ ಹೊರಬರುತ್ತಾನೆ; ಇವರಿಂದ ಕ್ರಿಯಾಶಕ್ತಿಯೊಡಗೂಡಿದ ರುದ್ರ ಹೊರಬರುತ್ತಾನೆ; ಇವರಿಂದ ಮಹಾಲಕ್ಷ್ಮಿಯೆಂಬ ಶಕ್ತಿಯೊಡಗೂಡಿದ ವಿಷ್ಣು ಹೊರಬರುತ್ತಾನೆ; ಇವರಿಂದ ಸರಸ್ವತಿಯೆಂಬ ಶಕ್ತಿಯೊಡಗೂಡಿದ ಬ್ರಹ್ಮ ಹೊರಬರುತ್ತಾರೆ. ಇವರಿಂದ ಪ್ರಪಂಚದ ಎಲ್ಲಾ ಚರಾಚರ ವಸ್ತುಗಳು ಹುಟ್ಟುತ್ತವೆ (೩:೧೦೦೮).

**ಅಧಿದೇವತೆಗಳು ಮತ್ತು ಶಕ್ತಿಗಳು :** ವಚನಕಾರರ ಪ್ರಕಾರ, ಪ್ರಪಂಚದ ಸೃಷ್ಟಿಗೆ ಎರಡು ರೀತಿಯ ಕಾರಣಗಳಿವೆ- ಶಕ್ತಿಯು ಉಪದಾನ ಕಾರಣ, ಶಿವನು ನಿಮಿತ್ತ ಕಾರಣ. ಆದರೆ ಶಿವ-ಶಕ್ತಿ ಎಂಬ ಕಾರಣಗಳು ಮಣ್ಣು-ಕುಂಬಾರರಂತೆ ಭಿನ್ನ ವಸ್ತುಗಳಲ್ಲ. ಶಕ್ತಿಯು ಯಾವಾಗಲೂ ಶಿವನಲ್ಲೇ ಇದ್ದು, ಕೆಲವು ವೇಳೆ ಅವ್ಯಕ್ತವಾಗಿಯೂ ಮತ್ತೆ ಕೆಲವು ವೇಳೆ ವ್ಯಕ್ತವೂ ಆಗಿರುತ್ತದೆ. ಶಕ್ತಿಯು ಅವ್ಯಕ್ತವಾಗಿ ಶಿವನಲ್ಲಿ ಒಂದಾಗಿದ್ದರೆ, ಆ ಸ್ಥಿತಿಗೆ ಪ್ರಳಯವೆಂತಲೂ, ಅದೇ ಶಕ್ತಿ ವ್ಯಕ್ತವಾಗಿ ವಿಕಾಸವಾದರೆ ಸೃಷ್ಟಿಯೆಂತಲೂ ಹೆಸರು. ಶಕ್ತಿ ಅನೇಕ ಹಂತಗಳಲ್ಲಿ ವಿಕಾಸವಾಗಿದ್ದು, ಪ್ರತಿಯೊಂದು ಹಂತದಲ್ಲಿಯೂ ಅದಕ್ಕೆ ಶಿವನ ಮಾರ್ಗದರ್ಶನವಿರುತ್ತದೆ. ಶಕ್ತಿ ವಿಕಾಸದ ವಿವಿಧ ಹಂತಗಳಿಗೆ ಬೇರೆ ಬೇರೆ ಹೆಸರುಗಳಿರುವಂತೆ, ಅವುಗಳ ವಿಕಾಸವನ್ನು ನಿಯಂತ್ರಿಸಿ, ಅವಕ್ಕೆ ಮಾರ್ಗದರ್ಶನ ನೀಡುವ ಶಿವನಿಗೂ ಆಯಾ ಹಂತಗಳಿಗೆ ತಕ್ಕಂತೆ ಬೇರೆ ಬೇರೆ ಹೆಸರುಗಳಿವೆ. ಶಿವನ ಈ ವಿವಿಧ ಅವಸ್ಥೆಗಳಿಗೆ ಅಧಿದೇವತೆಗಳೆಂದು ಹೆಸರು. ಅಂದರೆ ಅಧಿದೇವತೆಗಳು ಶಿವಾಂಶಿಕರಾದ ದೇವತೆಗಳೇ ಹೊರತು, ಅನ್ಯರಲ್ಲ. ಹೀಗೆ ಕ್ರಿಯಾಶಕ್ತಿಯ ಮತ್ತೊಂದು ರೂಪಾದ ಪೃಥ್ವಿತತ್ವವನ್ನು ನಿಯಂತ್ರಿಸುವ ಅಧಿದೇವತೆ ಬ್ರಹ್ಮ; ಜ್ಞಾನ ಶಕ್ತಿಯ ಮತ್ತೊಂದು ರೂಪಾದ ಅಗ್ನಿತತ್ವವನ್ನು ನಿಯಂತ್ರಿಸುವವನು ವಿಷ್ಣು; ಇಚ್ಛಾಶಕ್ತಿ, ಆದಿಶಕ್ತಿ ಮತ್ತು ಪರಾಶಕ್ತಿಯ ಬೇರೆ ರೂಪಗಳಾದ ಅಗ್ನಿ, ವಾಯು ಮತ್ತು ಆಕಾಶತತ್ವಗಳನ್ನು ನಿಯಂತ್ರಿಸುವವರು ರುದ್ರ, ಈಶ್ವರ, ಮತ್ತು ಸದಾಶಿವ. ಪರಶಿವನು ತನ್ನ ವಿವಿಧ ಶಕ್ತಿಗಳನ್ನು ತಮಗೆ ಬೇಕಾದ ರೀತಿಯಲ್ಲಿ ವಿಕಾಸವಾಗಲು ಬಿಡದೆ, ಅಥವಾ ತಾನೇ ಅವುಗಳಿಂದ ಬಂಧಿತನಾಗದೆ, ಅವುಗಳನ್ನು ಸಕಾಲದಲ್ಲಿ ನಿಯಂತ್ರಿಸಿ, ಅವಕ್ಕೆ ಸೂಕ್ತ ಮಾರ್ಗದರ್ಶನ ನೀಡಿ ವಿಕಸಿತವಾಗುವಂತೆ ಮಾಡುತ್ತಾನೆ. ಪ್ರಪಂಚದ ಪ್ರತಿ ಆಗು ಹೋಗುಗಳಲ್ಲಿಯೂ ಅವನಿಗೆ ಆಸಕ್ತಿ ಇದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಕ್ರಿಯಾಶಕ್ತಿಯ ಮತ್ತೊಂದು ರೂಪ ಪೃಥ್ವಿತತ್ವ; ಬ್ರಹ್ಮ ಅದರ ನಿಯಂತ್ರಕನಾದ ಅಧಿದೇವತೆ. ಅವನು ಪೃಥ್ವಿ ತತ್ವವೊಂದನ್ನೇ ಅಲ್ಲದೆ ಇತರ ತತ್ವಗಳನ್ನೂ ಸೇರಿಸಿಕೊಂಡು ಸೃಷ್ಟಿ ಮಾಡುತ್ತಾನೆ: ಬ್ರಹ್ಮನಿಲ್ಲದಿದ್ದರೆ, ಪಂಚಶಕ್ತಿಗಳು (ಪಂಚಭೂತಗಳು) ಇರುತ್ತವೆ; ಆದರೆ ಅವುಗಳಿಂದಾಗುವ ಸೃಷ್ಟಿಯಿರುವುದಿಲ್ಲ.

ಜಲತತ್ವವು ಸಂಘಟನಾಶಕ್ತಿಯುಳ್ಳ ಶಕ್ತಿ. ಜಲತತ್ವದಿಂದಾಗಿಯೇ ಯಾವ ವಸ್ತುವಾದರೂ ಭಾಗವಾಗದೇ ಅಥವಾ ಪುಡಿಯಾಗದೇ ಉಳಿದಿರುವುದು. ಒಂದು ಪುಡಿಯನ್ನು ಅಥವಾ ಹುಡಿ ಮಣ್ಣನ್ನು ನೀರು ಹಾಕಿ ಕಲಸಿ ಮುದ್ದೆ ಮಾಡಬಹುದು. ಅದೇ ರೀತಿ ಇಡೀ ಪ್ರಪಂಚವನ್ನು ಚದುರಿಹೋಗದಂತೆ ಹಿಡಿದಿಟ್ಟಿರುವ ಶಕ್ತಿ ವಿಷ್ಣುವಿಗಿದೆ. ವಿಷ್ಣು ಜಲ ತತ್ವದ (ಅಥವಾ ಜ್ಞಾನಶಕ್ತಿಯ) ಅಧಿದೇವತೆ ಎಂದರೂ ಒಂದೇ, ವಿಷ್ಣುವು ಜಗದ್ರಕ್ಷಕ ಎಂದರೂ ಒಂದೇ. ಅದೇ ರೀತಿ, ಅಗ್ನಿಗೆ ನಾಶಮಾಡುವ ಶಕ್ತಿಯಿರುವಂತೆ ಅಗ್ನಿ ಅಥವಾ ಇಚ್ಛಾಶಕ್ತಿಯ ಅಧಿದೇವತೆಯಾದ ರುದ್ರನಿಗೂ ಸಂಹಾರ ಮಾಡುವ ಶಕ್ತಿಯಿದೆ.

ವಾಯುವಿಗೆ ವಸ್ತುಗಳನ್ನು ಸ್ಥಳಾಂತರಿಸುವ ಶಕ್ತಿಯಿದೆ. ಅದೇ ರೀತಿ ಅದರ (ಅಥವಾ ಆದಿಶಕ್ತಿಯ) ಅಧಿ ದೇವತೆಯಾದ ಈಶ್ವರನಿಗೆ, ಮನುಷ್ಯನ ಮರಣದ ನಂತರ ಜೀವಾತ್ಮನನ್ನೂ ಅವನ ಜೊತೆಯಲ್ಲಿರುವ ಸೂಕ್ಷ್ಮ ಮತ್ತು ಕಾರಣ ಶರೀರವನ್ನೂ, ಅದರ ಕರ್ಮಕ್ಕನುಗುಣವಾಗಿ ಮತ್ತೊಂದು ಜನ್ಮಕ್ಕೆ (ಗರ್ಭಕ್ಕೆ) ಸ್ಥಳಾಂತರಿಸುವ ಶಕ್ತಿಯಿದೆ. ಆಕಾಶತತ್ವವು ವಸ್ತುಗಳು ಸ್ವತಂತ್ರವಾಗಿ (ಯಾವುದೇ ತಡೆಯಿಲ್ಲದೆ) ಚಲಿಸಲು ಅವಕಾಶಮಾಡಿಕೊಡುತ್ತದೆ. ಅದೇ ರೀತಿ, ಆಕಾಶತತ್ವದ ಅಥವಾ ಪರಾಶಕ್ತಿಯ ಅಧಿದೇವತೆಯಾದ ಸದಾಶಿವನೂ ಸಹ, ಜೀವಾತ್ಮರು ಆಧ್ಯಾತ್ಮಿಕ ಸಾಧನೆಯ ಮೂಲಕ ಲಿಂಗೈಕ್ಯತೆ ಪಡೆದರೆ, ಅವರಿಗೆ ಸ್ವಾತಂತ್ರ್ಯವನ್ನು ಅನುಗ್ರಹಿಸುತ್ತಾನೆ. ಲಿಂಗೈಕ್ಯರಿಗೆ ಕಾಲದೇಶಗಳ ತಡೆಯಿಲ್ಲದಿರುವುದೇ ಅವರು ಚಿದಾಕಾಶದಲ್ಲಿರುವುದಕ್ಕೆ ಕುರುಹು. ಆದಿಶಕ್ತಿ ಮತ್ತು ಪರಾಶಕ್ತಿಗಳಿಗೆ·ಕ್ರಮವಾಗಿ ತಿರೋಧಾನಶಕ್ತಿ ಮತ್ತು ಅನುಗ್ರಹಶಕ್ತಿ ಎಂಬ ಹೆಸರುಗಳೂ ಇವೆ.

**ಅಧಿದೈವಿಕ :** ತಾಪತ್ರಯಗಳಲ್ಲಿ ಒಂದು; ಮಾನವರು ದೈವಗಳಿಗೆ ಸಲ್ಲಿಸಬೇಕಾದ ಬಲಿ, ಭಕ್ತಿ ಇತ್ಯಾದಿಗಳನ್ನು ಮರೆತಾಗ, ಅಥವಾ ಅವುಗಳನ್ನು ಅವಮಾನಗೊಳಿಸಿದಾಗ, ದೈವಗಳಿಗೆ ಸಿಟ್ಟು ಬಂದು ಕೆಲವು ತಾಪ (ಕಷ್ಟ)ಗಳನ್ನು ಸೃಷ್ಟಿಸುತ್ತಾರೆ. ಅದೇ ಅಧಿದೈವಿಕ ತಾಪ (ಲ:೧೧೩೫).

**ಅಧಿಭೌತಿಕ :** ಮನುಷ್ಯನು ಅನುಭವಿಸುವ ಮೂರು ತಾಪಗಳಲ್ಲಿ ಒಂದು ರೀತಿಯದು. ಪ್ರವಾಹ, ಬಿರುಗಾಳಿ, ಅನಾವೃಷ್ಟಿ, ಮುಂತಾದ ಭೌತ ಪ್ರಕೃತಿಯು ಸೃಷ್ಟಿಸುವ ತೊಂದರೆ (ಲ:೧೧೩೫).

**ಅಧೋಮಾಯೆ :** ವಚನಕಾರರು ಮಾಯೆ ಎಂಬ ಪದವನ್ನು ಅವಿದ್ಯೆ ಎಂಬರ್ಥದಲ್ಲಿ ಬಳಸದೆ, 'ಶಕ್ತಿ' ಎಂಬರ್ಥದಲ್ಲಿ ಬಳಸುತ್ತಾರೆ. ಶಕ್ತಿಯು (ಮಾಯೆಯು) ಎರಡು ಪ್ರಕಾರವಾಗಿದ್ದು ಒಂದು ಊರ್ಧ್ವ ಮಾಯೆ ಎನಿಸಿಕೊಂಡರೆ ಮತ್ತೊಂದು ಅಧೋಮಾಯೆಯೆನಿಸಿಕೊಳ್ಳುತ್ತದೆ. ಸೃಷ್ಟಿಯೆಲ್ಲಾ ಶಕ್ತಿಯಿಂದ ರಚಿತವಾಗಿವೆ. ಒಂದು

ವೇಳೆ ಆ ಶಕ್ತಿಯಿಂದ ರಚಿತವಾದ ಇಂದ್ರಿಯಾದಿ ಕರಣಗಳನ್ನು ಬಳಸಿಕೊಂಡು ನಾವು ಪಾಪಕೃತ್ಯಗಳನ್ನೂ, ಸುಕೃತ್ಯಗಳನ್ನೂ ಮಾಡಿ ಮುಂದಿನ ಜನ್ಮದಲ್ಲಿ ಹುಟ್ಟಿದರೆ, ಆಗ ನಮ್ಮಲ್ಲಿರುವ ಶಕ್ತಿಯು ಅಧೋಮಾಯೆಯೆನಿಸಿಕೊಳ್ಳುತ್ತದೆ. ಅದು ನಮ್ಮ ಸಂಸಾರ ಬಂಧನಕ್ಕೆ ಕಾರಣವಾಗುವುದರಿಂದ ಅದಕ್ಕೆ ಅಧೋಮಾಯೆ (ಅಥವಾ ಪ್ರವೃತ್ತಿ ಶಕ್ತಿ) ಎಂದು ಹೆಸರು. ಒಂದು ವೇಳೆ ನಾವು ಅವೇ ದೇಹೇಂದ್ರಿಯಾದಿಗಳನ್ನು ಲಿಂಗಪೂಜೆ, ಜಪ, ಧ್ಯಾನ ಮುಂತಾದವುಗಳಿಗೆ ಉಪಯೋಗಿಸಿಕೊಂಡರೆ ನಮಗೆ ಶಿವಾನುಗ್ರಹವುಂಟಾಗಿ ಲಿಂಗಾಂಗ ಸಾಮರಸ್ಯ ಉಂಟಾಗಬಹುದು. ಅಂಥ ಆಧ್ಯಾತ್ಮಿಕ ಕೆಲಸಗಳಿಗೆ ಬಳಸಲಾಗುವ ಶಕ್ತಿಗಳು ಊರ್ಧ್ವಮಾಯೆಯೆನಿಸಿಕೊಳ್ಳುತ್ತವೆ. (ನೋಡಿ : **ಶಕ್ತಿ, ಮಾಯೆ, ಊರ್ಧ್ವಮಾಯೆ**).

**ಅಧೋಮುಖ ಕಮಲ :** ಆರು ಚಕ್ರ (ಪದ್ಮ ಅಥವಾ ಕಮಲ)ಗಳಲ್ಲಿ ಎಲ್ಲಕ್ಕಿಂತ ಕೆಳಗಿರುವುದೆಂದರೆ ಮೂಲಾಧಾರ ಚಕ್ರ. ಅದು ಮೂಲಾಧಾರದಲ್ಲಿ ತಲೆಕೆಳಗಾಗಿರುತ್ತದೆ. ಇದನ್ನೆ ಇನ್ನೊಂದು ರೀತಿಯಾಗಿ ಹೇಳುತ್ತಾರೆ. ಮೂಲಾಧಾರದಲ್ಲಿ ಕುಂಡಲಿಯು ಸುತ್ತುಹಾಕಿಕೊಂಡು ಮಲಗಿರುತ್ತದೆ. ಸಾಧಕನು ಆ ಕುಂಡಲಿಯನ್ನು ಜಾಗ್ರತಗೊಳಿಸಿ ಮೇಲ್ಮುಖವಾಗಿ ಸಂಚರಿಸುವಂತೆ ಮಾಡಿ ಉಳಿದ ಚಕ್ರಗಳ ಮೂಲಕ ಹಾದು ಸಹಸ್ರಾರ ಚಕ್ರವನ್ನು ತಲುಪುವಂತೆ ಮಾಡಬೇಕು. ಅಥವಾ ಕೆಳಮುಖವಾಗಿರುವ ಪದ್ಮವನ್ನು ಮೇಲ್ಮುಖವನ್ನಾಗಿ ಮಾಡಬೇಕು (೩:೧೩೯೪).

**ಅಧೋಮುಖದ ವಾಯುವನ್ನು ಊರ್ಧ್ವಮುಖಕ್ಕೆ ತಿದ್ದುವುದು :** ತಂತ್ರಗಳ ಪ್ರಕಾರ ಕುಂಡಲಿನಿ ಶಕ್ತಿಯು ಮೂಲಾಧಾರದಲ್ಲಿ ಮಂಡಲಾಕಾರದಲ್ಲಿ ಹಾವಿನಂತೆ ಮಲಗಿರುತ್ತದೆ. ಕೆಳಮುಖವಾಗಿ ಮಲಗಿರುವ ಅದನ್ನು ಮೇಲ್ಮುಖಮಾಡಿ, ಅದನ್ನು ಆಧಾರ, ಸ್ವಾಧಿಷ್ಠಾನ, ಮುಂತಾದ ಚಕ್ರಗಳ ಮೂಲಕ ಮೇಲ್ಮುಖವಾಗಿ ಹೋಗುವಂತೆ ಮಾಡಿ, ಅದು ಕೊನೆಗೆ ಸಹಸ್ರಾರವನ್ನು ಮುಟ್ಟುವಂತೆ ಮಾಡಬೇಕು. ಹೀಗೆ ಮಾಡಲು ಮೊದಲು ಅಧೋಮುಖದ ವಾಯುವನ್ನು (ಅಪಾನವಾಯುವನ್ನು) ಮೇಲ್ಮುಖವಾಗಿ ಹೋಗುವಂತೆ ಮಾಡಿದರೆ, ಮೂಲಾಧಾರದಲ್ಲಿರುವ ಕುಂಡಲಿಯು ಮೇಲ್ಮುಖವಾಗಿ ಚಲಿಸಲು ಪ್ರಾರಂಭಿಸುತ್ತದೆ (೪:೧೮೫).

**ಅಧೋಲೋಕ :** (ನೋಡಿ : **ಹದಿನಾಲ್ಕು ಲೋಕಗಳು**).

**ಅನಂಗದ ನಡೆ :** ೧. ಅನಂಗವೆಂದರೆ ಮನ್ಮಥ; ಮನ್ಮಥನು ಕಾಮದ ದೇವತೆಯಾದುದರಿಂದ 'ಅನಂಗದ ನಡೆ' ಎಂದರೆ 'ಲೈಂಗಿಕ ವರ್ತನೆ' ಎಂದಾಗುತ್ತದೆ. (೯:೧). ೨. ಅಂಗವಲ್ಲದುದು ಅಥವಾ ಅಂಗವಿಲ್ಲದುದು ಎಂಬುದು ಮತ್ತೊಂದು ಅರ್ಥ. ಇರುವುದೆಲ್ಲವನ್ನೂ ಅಂಗ ಮತ್ತು ಅನಂಗವೆಂದು ಎರಡು ಭಾಗಮಾಡಿದರೆ, 'ಅಂಗವು' ಅಂಗಕ್ಕೂ 'ಅನಂಗ'ವು ಪರಶಿವನಿಗೂ ಅನ್ವಯಿಸುತ್ತದೆ. ಆದರೆ ಐಕ್ಯಸ್ಥಿತಿಯಲ್ಲಿ ಅಂಗ

ಮತ್ತು ಅನಂಗ ಎಂಬ ದ್ವೈತವಿರುವುದಿಲ್ಲ. ['ಅಂಗ ಅನಂಗವೆಂಬೆರೆಡೂ ಅಳಿದು ನಿಜದಲ್ಲಿ ನಿಂದ...'(೨:೭೧೮,೯೯೬)].

**ಅನಂಗಹರ :** ಮನ್ಮಥ ಅಥವಾ ಕಾಮ (ಅನಂಗ)ನನ್ನು ಸಂಹರಿಸಿದವನು, ಪರಶಿವ. ಪುರಾಣದ ಪ್ರಕಾರ, ಪರಶಿವನು ತಪಸ್ಸಿನಲ್ಲಿ ನಿರತನಾಗಿದ್ದಾಗ ಕಾಮನು ಅವನ ತಪಸ್ಸು ಕೆಡಿಸಲು ಪ್ರಯತ್ನಿಸಿದಾಗ, ಅದನ್ನು ತಿಳಿದ ಶಿವನು ತನ್ನ ಹಣೆಗಣ್ಣಿನಿಂದ ಅವನನ್ನು ದೃಷ್ಟಿಸಿ ನೋಡಿದಾಗ, ಅದರಿಂದ ಹೊರಟ ಬೆಂಕಿ ಅವನನ್ನು ಸುಟ್ಟಿತು (೪:೯).

**ಅನಂತಮುಖ :** ಐಕ್ಯನಾದವನು ತನ್ನ ವೈಯುಕ್ತಿಕತೆಯನ್ನು ಕಳೆದುಕೊಂಡು, ಪರಶಿವನಲ್ಲಿ ಒಂದಾಗುತ್ತಾನೆ. ಅಲ್ಲದೆ, ಅವನು ಶಿವನ ವಾಹನದಂತೆ ಅಥವಾ ಶಿವನಾಡಿಸುವ ಗೊಂಬೆಯಂತೆ ವರ್ತಿಸುತ್ತಾನೆ, ಅಂದರೆ, ತಾನು ಮಾಡುವುದೆಲ್ಲವೂ ಶಿವನಿಗಾಗಿಯೆ ಎಂದು ತಿಳಿಯುತ್ತಾನೆ. ಅವನ ಕೈಕಾಲುಗಳು ಶಿವನ ಕೈಕಾಲುಗಳು; ಅವನ ಕರಣಗಳು ಶಿವನ ಕರಣಗಳು. ಹೀಗೆ ಅವನು ನಡೆದಾಡುವ ಲಿಂಗವೂ (ಜಂಗಮವೂ) ಆಗಿ, ಶಿವನ ಬಾಯಿಯೂ ಆಗಿದ್ದಾನೆ. ಇಂತಹ ಅನೇಕ ಜಂಗಮರಿರುವುದರಿಂದ ಅನಂತ ಜಂಗಮರು ಶಿವನ 'ಅನಂತ ಮುಖ'ವಾಗಿತ್ತು (೯:೧೧೦೩).

**ಅನರ್ಪಿತ :** (೧). ಗುರುಲಿಂಗ ಜಂಗಮಕ್ಕೆ ಅರ್ಪಿಸಲು ಅಯೋಗ್ಯವಾದುದು. ಮಾಂಸ ಮದ್ಯಗಳು ಅನರ್ಪಿತ; ಕಳ್ಳತನ, ವಂಚನೆ, ಮುಂತಾದ ಅನೈತಿಕ ಮಾರ್ಗಗಳಿಂದ ದುಡಿದು ತಂದ ವಸ್ತುಗಳೂ ಅನರ್ಪಿತವೇ.

(೨). ಶಿವನು ನಿತ್ಯತೃಪ್ತನೆಂದೂ, ತಾನು ಕೈಗಳಿಂದ ಅಥವಾ ಮನಸ್ಸಿನಿಂದ ಅರ್ಪಿಸಿ, ವಾಸ್ತವಿಕವಾಗಿ ವಿರಕ್ತನಾಗದಿದ್ದರೆ ಪರಿಣಾಮಕಾರಿಯಲ್ಲವೆಂದೂ ಅರಿತ ಭಕ್ತನು, ಅರ್ಪಣೆಯನ್ನು ಔಪಚಾರಿಕವಾಗಿ ಮಾಡುವುದಿಲ್ಲವಾದುದರಿಂದ, ಅವನು (ಅನರ್ಪಿತ ಇರುವವನು) ['ಕಾಯದ ಕೈಗಳಲ್ಲಿ... ಭಾವದ ಕೈಗಳಲ್ಲಿ ಅರ್ಪಿಸುವವನಲ್ಲ, ಆತ ಅನರ್ಪಿತನಾಗಿ' (೮:೧೩೨೦) ಎಂಬುದನ್ನು ಗಮನಿಸಿ].

**ಅನ್ಯದೇಹಿ :** ನಿಜವಾದ ಭಕ್ತನು ತನ್ನ ದೇಹವು ತನ್ನದಲ್ಲ, ಪರಶಿವನದು ಎಂದೂ, ತನ್ನ ದೇಹದ ಮೂಲಕ, ತನ್ನ ಇಂದ್ರಿಯಾದಿಗಳ ಮೂಲಕ ಪರಶಿವ ಸುಖಪಡುತ್ತಾನೆ, ಎಂದೂ ತಿಳಿಯುತ್ತಾನೆ. ಆದುದರಿಂದ ಯಾರು ತನ್ನ ದೇಹವು ತನ್ನದೆಂದೂ ಪರಶಿವನದಲ್ಲವೆಂದೂ ತಿಳಿಯುತ್ತಾನೋ, ಅಂಥವನ ದೇಹವು ಪರಶಿವನಿಗೆ 'ಅನ್ಯದೇಹ'ವಾಗುತ್ತದೆ. ಅನ್ಯದೇಹವು ಭಕ್ತಿಯಿಲ್ಲದವನ ದೇಹ. (೧೪:೩೩೨೨).

**ಅನ್ಯದೈವ :** ಬೇರೆ ಮತದವರ ದೈವ. ವಚನಕಾರರು ಶರಣನಾದವನು ಗುರುಕೊಟ್ಟ ಇಷ್ಟಲಿಂಗವನ್ನಲ್ಲದೆ, ವಿಷ್ಣು, ಗಣಪತಿ, ಮುಂತಾದ ಅನ್ಯದೈವಗಳನ್ನು ಪೂಜಿಸಬಾರದೆಂಬ ನಿಷೇಧ ವಿಧಿಸಿದ್ದಾರೆ.

**ಅನ್ಯಪೂಜೆ :** ಇಷ್ಟಲಿಂಗವನ್ನು ಬಿಟ್ಟು ಉಳಿದ ಪ್ರತಿಮೆಗಳನ್ನು ಪೂಜಿಸುವುದು.

**ಅನ್ಯಬೋಧೆ :** ಬೇರೆಯವರು ಕೊಡುವ ಜ್ಞಾನ. ವಚನಕಾರರ ಪ್ರಕಾರ ನಾವು ನಮ್ಮ ಸ್ವಂತ ಅನುಭವದಿಂದ ಪಡೆದ ಅರಿವೇ ಗುರು. ಅನ್ಯಬೋಧೆಯಿಂದ ನಾವು ಕಲಿಯುವ ಸಾಧ್ಯತೆ ಕಡಿಮೆ (ಅ:೯೦೯) .

**ಅನ್ಯಲಿಂಗ :** ಅನ್ಯರ ಇಷ್ಟಲಿಂಗ. ತನ್ನ ಇಷ್ಟಲಿಂಗ ಭಂಗವಾಗಿದೆ ಅಥವಾ ಕಳೆದಿದೆ ಎಂಬ ಕಾರಣದಿಂದ ಅನ್ಯರ ಇಷ್ಟಲಿಂಗವನ್ನು ಪೂಜಿಸಬಾರದೆಂಬ ಮಾತು 'ಏಕೋಲಿಂಗ ಪ್ರತಿಗ್ರಾಹಕನಾದರೆ ಅನ್ಯಲಿಂಗವ ಮುಟ್ಟಬಾರದು' (ಇ:೨೫೦) ಎಂಬ ವಚನದಿಂದ ಸ್ಪಷ್ಟವಾಗುತ್ತದೆ.

**ಅನಾಗತ :** ಬರದಿರುವವನು; ಮುಂದಿನ ಜನ್ಮಕ್ಕೆ ಹೋಗದಿರುವವನು; ಜೀವನ್ಮುಕ್ತ. (ಇ:೪೭೪).

**ಅನಾಹತ ಚಕ್ರ :** (ನೋಡಿ : **ಚಕ್ರಗಳು**).

**ಅನಾಚಾರ :** (೧) ಅನಾಚಾರವೆಂದರೆ ಗುರುವು ಬೋಧಿಸಿದ ಲಿಂಗಪೂಜೆ, ಮಂತ್ರ, ಮುಂತಾದ ಧಾರ್ಮಿಕ ಆಚಾರಗಳು ಮತ್ತು ಕಳಬೇಡ, ಕೊಲಬೇಡ, ಮುಂತಾದ ನೈತಿಕ ಆಚಾರಗಳು ಇವುಗಳಿಗೆ ವಿರುದ್ಧವಾದುದೇ ಅನಾಚಾರ. (ನೋಡಿ : **ದುರಾಚಾರ**).

(೨) ಔಪಚಾರಿಕ ಕ್ರಿಯೆಗಳನ್ನು ಮಾಡದೆ, ತಿಳಿದು ಮಾಡುವ ಆಚಾರ, ['ಆಚಾರ ಸಾಹಿತ್ಯ ಲೋಕ, ಅನಾಚಾರ ಸಾಹಿತ್ಯ ಶರಣ' (ಇ:೬೧೭); 'ಅನಾಚಾರದ ಕಾಯಕವ ಮಾಡಿ, ..... ಆ ಪ್ರಸಾದವನೆ ಓಗರವ ಮಾಡಿ' (ಇ:೬೨೦, ౭೦೫); ಪರಶಿವನು ಎಲ್ಲೆಲ್ಲಿಯೂ ಇದ್ದಾನೆ; ಅರ್ಪಿಸ್ಟವವನೂ ಅವನೆ, ಪ್ರಸಾದಿಯೂ ಅವನೇ ಎಂದು ತಿಳಿದ ಶರಣನು ನಿಯಮಿತ ವೇಳೆಯಲ್ಲಿ ಮಾಡುವ ಲಿಂಗಪೂಜೆ, ವಿಶಿಷ್ಟ ವಸ್ತುಗಳ ಅರ್ಪಣೆ, ಮುಂತಾದ ಆಚಾರಗಳನ್ನು ಮಾಡದೆ, ಯಾವಾಗಲೂ ಲಿಂಗಧ್ಯಾನ ಮಾಡುತ್ತಾ, ಆಹಾರ ವಸ್ತುಗಳನ್ನಷ್ಟೇ ಅಲ್ಲ, ತಾನು ನೋಡುವ ನೋಟ, ಕೇಳುವ ಶಬ್ದ, ಮುಂತಾದ ಎಲ್ಲವೂಗಳನ್ನೂ ಅವು ಎಲ್ಲೆಲ್ಲಿವೆಯೋ ಅಲ್ಲೇ, ಮನಸ್ಸಿನಲ್ಲೇ ಪರಶಿವನಿಗೆ ಅರ್ಪಿಸಿ, ಅನಂತರ ತಾನು ಅನುಭವಿಸುವ ಕ್ರಿಯೆ ಆಚಾರದ ವಿರುದ್ಧವಾದುದರಿಂದ ಅವು ಪರಿಭಾಷೆಯಲ್ಲಿ ಅನಾಚಾರವೆನಿಸಿಕೊಳ್ಳುತ್ತವೆ. ಆದರೆ, ಅವು ಅನೈತಿಕ ಅಥವಾ ಅಧಾರ್ಮಿಕವಲ್ಲ ಎಂಬುದನ್ನು ಗಮನಿಸಬೇಕು.

**ಅನಾಚಾರವ ಅಳವಡಿಸಿಕೊಳ್ಳುವುದು :** ಇಲ್ಲಿ ಅನಾಚಾರವೆಂದರೆ, 'ಆಚಾರಕ್ಕೆ ವಿರುದ್ಧವಾದ ಕ್ರಿಯೆ' ಎಂಬರ್ಥವಿರದೆ 'ಸದಾಚಾರ' ಎಂಬರ್ಥವಿದೆ. ರೂಢಿಯಲ್ಲಿರುವ ಬಾಹ್ಯಕ್ರಿಯೆಗಳನ್ನು (ಇಷ್ಟಲಿಂಗಪೂಜೆ, ವಿಭೂತಿಧಾರಣೆ, ಮಂತ್ರೋಚ್ಚಾರಣೆ ಮುಂತಾದ ಕ್ರಿಯೆಗಳನ್ನು) ಬಿಟ್ಟು, ಮಾನಸಿಕವಾಗೇ, ಆ ಕ್ರಿಯೆಗಳ ಅರ್ಥವನ್ನು ಗ್ರಹಿಸಿ

ಆಚರಿಸಬೇಕೆಂದು ಮೋಳಿಗೆ ಮಹಾದೇವಿ ಹೇಳುತ್ತಾಳೆ. 'ಅನಾಚಾರ ಅಳವಟ್ಟು ಗುರುವನರಿಯಬೇಕು' ಎಂಬ ಅವಳ ಮಾತಿನಲ್ಲಿ 'ಅನಾಚಾರ' ಎಂಬುದಕ್ಕೆ 'ಯಾಂತ್ರಿಕವಾದ ಆಚಾರ'ಗಳನ್ನು ಬಿಡಬೇಕೆಂಬ ಅರ್ಥವಿದೆ.

**ಅನಾತ್ಮ ಸ್ವರೂಪು :** ಆತ್ಮನು ಚಿತ್‌ಸ್ವರೂಪನಾಗಿದ್ದು, ದೇಹವು ಅನಾತ್ಮಸ್ವರೂಪದ್ದಾಗಿದೆ (ಭೌತಿಕವಾಗಿದೆ). ಇಲ್ಲಿ ಅನಾತ್ಮನೆಂದರೆ ಬೌದ್ಧರ ಅನಾತ್ಮವಲ್ಲ. ಬೌದ್ಧರ ಪ್ರಕಾರ, ಅನಾತ್ಮವೆಂದರೆ "ಶಾಶ್ವತವಾದ ದ್ರವ್ಯ"ವಲ್ಲದ ವಸ್ತು. ಆದರೆ ವಚನಕಾರರ ಪ್ರಕಾರ ದೇಹ ಶಾಶ್ವತವಲ್ಲದಿದ್ದರೂ ಆತ್ಮವಂತೂ ಶಾಶ್ವತ (ನಿತ್ಯ) (೧೧:೧೩೪).

**ಅನಾದಿ :** ೧.ಅಕ್ಷರಶ: ಈ ಪದಕ್ಕೆ 'ಆದಿ ಇಲ್ಲದ' ಎಂಬ ಅರ್ಥವನ್ನು ಕೊಡಬಹುದು. ಆಗ ಅದು ಪರಶಿವನಿಗೂ, ಆತ್ಮನಿಗೂ ಅನ್ವಯಿಸುತ್ತದೆ.

೨. ಮತ್ತೊಂದರ್ಥದಲ್ಲಿ 'ಅನಾದಿ' ಎಂದರೆ 'ಒಳ್ಳೆಯ ಮೂಲ (ಆದಿ) ಇಲ್ಲದವಳು/ನು' ಎಂಬ ಅರ್ಥವಿದೆ. ಅಕ್ರಮ ಸಂಬಂಧದಿಂದ ಹುಟ್ಟಿದವನನ್ನು "ನೀನು ಯಾರ ಮಗ" ಎಂದು ಕೇಳಿದರೆ, ಮತ್ತು ಅವನು ಸತ್ಯವನ್ನು ಹೇಳದಿದ್ದರೆ, ತಾನು ಅನಾದಿ ಎಂಬ ಸೂಕ್ಷ್ಮ ಉತ್ತರ ಕೊಡುತ್ತಾನೆ.

**ಅನಾದಿ ಅಭೇದತ್ವಾನುಭಾವ ಪ್ರಕಾಶ :** ಅನುಭಾವದಲ್ಲಿ ಮಹಾಬೆಳಗನ್ನು ಕಾಣುವ ಪ್ರಾಣಲಿಂಗಿಗೆ, ತಾನು ಪರಶಿವನಿಂದ ಅನಾದಿ ಕಾಲದಿಂದಲೂ ಅಭೇದನಾಗಿದ್ದೇನೆಂಬ ಭಾವ ಮೂಡುವುದಲ್ಲದೆ, ತಾನು ಮತ್ತು ಜಂಗಮಲಿಂಗ ಬೇರೆಬೇರೆಯೆಂಬ ಭಾವ ಮಾಯವಾಗುತ್ತದೆ.

**ಅನಾದಿಗುರು :** ಅನಾದಿ ಪರಶಿವನನ್ನು ಸಾಕ್ಷಾತ್ಕರಿಸಿಕೊಳ್ಳಲು ಅಗತ್ಯವಾದ ಮಾರ್ಗವನ್ನು ತೋರಿಸುವವನೇ ಅನಾದಿ ಗುರು.

**ಅನಾದಿ ಚಿಚ್ಛಕ್ತಿಯ ಅಂಶೀಭೂತ ಮಾಯಿಕ ಸಂಬಂಧ ದೇಹಿಕರು :** ಅನಾದಿ ಚಿಚ್ಛಕ್ತಿಯೆಂಬ ಮಾಯೆಯನ್ನೇ ದೇಹವನ್ನಾಗಿ ಉಳ್ಳವರು ಇದು ರುದ್ರ, ವಿಷ್ಣು ಮತ್ತು ಬ್ರಹ್ಮರುಗಳಿಗೆ ಅನ್ವಯಿಸುವ ಮಾತು. ಕಪಾಲವನ್ನು ಹಿಡಿದು ತಿರುಗುವ ರುದ್ರನಿಗೂ, ಹತ್ತು ಅವತಾರಗಳನ್ನು ಎತ್ತಿದ ವಿಷ್ಣುವಿಗೂ, ತಲೆಯೊಂದನ್ನು ಕಳೆದುಕೊಂಡ ಬ್ರಹ್ಮನಿಗೂ ದೇಹವಿದ್ದುದರಿಂದ ಅವರು ಮಾಯಾಸಂಬಂಧದ ದೇಹವುಳ್ಳವರೆನಿಸಿಕೊಳ್ಳುತ್ತಾರೆ (೭:೩೬೮).

**ಜಂಗಮ :** ಅನುಭಾವದ ಮೂಲಕ ಅನಾದಿಯಾದ ಪರಶಿವನನ್ನು ಸಾಕ್ಷಾತ್ಕರಿಸಿಕೊಂಡವನು; ನಡೆದಾಡುವ ಲಿಂಗ.

**ಅನಾದಿ ತತ್ವ ಮೂರ್ತಿ ಬಸವ :** ಅನಾದಿ ತತ್ವವಾದ ಪರಶಿವನು ಸೃಷ್ಟಿಪೂರ್ವಕಾಲದಲ್ಲಿ ಮೂರ್ತನಲ್ಲ, ಆದರೆ ಇಲ್ಲಿ ಬಸವಣ್ಣನನ್ನು ಅನಾದಿತತ್ವದ ಮೂರ್ತರೂಪದಂತೆ ಕಲ್ಪಿಸಿಕೊಳ್ಳಲಾಗಿದೆ (೫:೭೨೪).

**ಅನಾದಿ ಭಕ್ತ :** ಅನುಭಾವವನ್ನು ಹೇಗೆ ಪಡೆಯಬೇಕೆಂಬುದನ್ನು ಅನಾದಿ ಜಂಗಮನಿಂದ ಕಲಿತುಕೊಂಡವನು.

**ಅನಾದಿ ಮಲ :** ಎಲ್ಲ ಮಲಗಳೂ ಒಂದು ಅರ್ಥದಲ್ಲಿ ಅನಾದಿಯೇ. ಅಂದರೆ ಸಂಸಾರವು ಅನಾದಿ. ಅಂದರೆ ಸಂಸಾರದಲ್ಲಿರುವವರೆಗೂ ಅಂಗನು ಮಲಸಂಬಂಧಿಯೇ. ಆದರೆ ಸಂಸಾರ ಅಥವಾ ಮಲವು ಅನಂತವಲ್ಲ ಎಂದು ತಿಳಿದ ಮನುಷ್ಯ ತನ್ನ ಅವಿದ್ಯೆಯನ್ನು (ಮರೆವನ್ನು) ಎಂದು ನಾಶಮಾಡಿ, ಮೋಹವನ್ನು ಗೆಲ್ಲುತ್ತಾನೋ ಅಂದು ಅವನು ನಿರ್ಮಲನಾಗುತ್ತಾನೆ (೩:೯೨೮).

**ಅನಾದಿ ಲಿಂಗ :** ಪ್ರತಿಯೊಂದು ವಸ್ತುವಿಗೂ ಆದಿ ಇದೆ. ಆದರೆ ಅದರ ಸೃಷ್ಟಿಕರ್ತನಿಗೆ ಆದಿ ಇಲ್ಲ. ಇದು ಸ್ಥಾವರ ಲಿಂಗಕ್ಕೆ ಅನ್ವಯಿಸದೆ, ಪರಶಿವನಿಗೆ ಅನ್ವಯಿಸುತ್ತದೆ.

೧. ಅನಾದಿ ವಸ್ತು: ಆದಿಯಿಲ್ಲದ ಪರಶಿವ. ೨. ಅನಾದಿ ವಸ್ತು ಆದಿ ಸ್ವರೂಪ ತಾಳುವುದು. ಆದಿಯಿಲ್ಲದ ಪರಶಿವನು ಸದಾಶಿವಾದಿಯಾಗಿ ಪ್ರಪಂಚವೇ ಅಂತ್ಯವಾಗಿ ವಿಕಾಸವಾಗುವುದು (೮:೮೦).

**ಅನಾಮಿಕ :** ಯಾವುದೇ ಸ್ವಾರ್ಥ ಆಸೆಯಿಲ್ಲದೆ ಅಥವಾ, ನಾನೆಂಬ ಭಾವವಿಲ್ಲದೆ ಇರುವುದು. ಅನಾಮಿಕವಾಗಿ ಲಿಂಗವ ಗ್ರಹಿಸಬೇಕು ಎಂಬ ಮೋಳಿಗೆ ಮಹಾದೇವಿಯ ಆದೇಶದಲ್ಲಿ ನಾನೆಂಬ ಭಾವ ಹೋದರೆ ಲಿಂಗವನ್ನು ಪಡೆದುದಕ್ಕೆ ಸಾರ್ಥಕ, ಎಂಬರ್ಥವಿದೆ (೫:೮೯೨).

**ಅನಿಮಿಷ ಲಿಂಗ :** ಅನುಭಾವದ ಅವಸ್ಥೆಯಲ್ಲಿ ಐಕ್ಯನು ಕಣ್ಣುರೆಪ್ಪೆ ಮುಚ್ಚದಂತೆ ಲಿಂಗಾಂಗ ಸಾಮರಸ್ಯದ ಸುಖವನ್ನು ಅನುಭವಿಸುತ್ತಾ ಇರುತ್ತಾನಲ್ಲದೆ ತಾನೇ ಲಿಂಗವೆಂದು ತಿಳಿಯುತ್ತಾನೆ. ಆಗ ಅವನು ಅನಿಮಿಷ (ಕಣ್ಣುಮುಚ್ಚದ) ಲಿಂಗ (೨:೪೧೭).

**ಅನಿರ್ವಾಚ್ಯ ಅನುಭಾವ :** ಎಲ್ಲ ಅನುಭಾವಿಗಳೂ ಅನುಭಾವದ ವಸ್ತು ವಿಷಯವನ್ನು ವರ್ಣಿಸುವ ಪ್ರಸಂಗ ಬಂದಾಗ ಅದು ಅನಿರ್ವಚನೀಯ (ಅನಿರ್ವಾಚ್ಯ) ಎನ್ನುತ್ತಾರೆ. ಅದರ ಸುಖವನ್ನೇನೆಂದು ವರ್ಣಿಸಲಿ, ಅದು ಉಪಮೆಗೂ ಸಿಕ್ಕದ ಸುಖ ಮುಂತಾಗಿ ಹೇಳುವುದು ಎಲ್ಲ ಅನುಭಾವಿಗಳ ಮತ. ಅನುಭಾವದ ವಿಷಯವು ಅವರ್ಣನೀಯ ಏಕೆಂಬುದಕ್ಕೆ ನಾವು ಎರಡು ಕಾರಣಗಳನ್ನು ಕೊಡಬಹುದು.

ಮೊದಲನೆಯದಾಗಿ, ಅನುಭಾವದ ಸ್ವರೂಪವೇ ಹಾಗಿದೆ. ನಾವು ಒಂದು ವಸ್ತುವನ್ನು ನೋಡಿ ತಿಳಿದುಕೊಳ್ಳುವಾಗ ಜ್ಞಾತೃ ಜ್ಞೇಯಗಳ ದ್ವೈತವಿರುತ್ತದೆ. ಆದರೆ ಅನುಭಾವದಲ್ಲಿ ಅನುಭಾವಿಯೂ ಚೈತನ್ಯವೂ ಒಂದಾಗಿ, ಜ್ಞಾತೃ ಜ್ಞೇಯಗಳ ದ್ವೈತ ಮಾಯವಾಗುತ್ತದೆ. ನಾನು ಪುಸ್ತಕವನ್ನು ನೋಡುತ್ತಿದ್ದೇನೆ ಎಂದಾಗ ಸ್ವಪ್ರಜ್ಞೆ (ನಾನು ಎಂಬ ಪ್ರಜ್ಞೆ) ಮತ್ತು ಪರಪ್ರಜ್ಞೆ (ವಸ್ತುವಿನ ಪ್ರಜ್ಞೆ) ಎರಡೂ ಇರಬೇಕು. ಆದರೆ ಅನುಭಾವದಲ್ಲಿ ಸ್ವಪ್ರಜ್ಞೆಯೂ ಇರುವುದಿಲ್ಲ, ಪರಪ್ರಜ್ಞೆಯೂ ಇರುವುದಿಲ್ಲ. ಆದುದರಿಂದ ಅಂತಹ ವಿಚಿತ್ರ

ಅನುಭವವನ್ನು ಏನೆಂದು ವರ್ಣಿಸಲು ಸಾಧ್ಯ? ನಮ್ಮ ಯಾವ ಭಾಷೆಗೂ ಇದು ವರ್ಣನಾತೀತ; ಹಾಗೂ ಮನೋತೀತ. ಅನುಭಾವ (ಸಮಾಧಿ ಸ್ಥಿತಿ) ಮುಗಿದ ನಂತರ ಅದರ ಬಗ್ಗೆ ಏನೂ ಹೇಳಲಾರದ ಅನುಭಾವಿ ಶಬ್ದಮುಗ್ಧನಾದರೆ ಅಲ್ಲಿ ಆಶ್ಚರ್ಯವೇನಿಲ್ಲ.

ಎರಡನೆಯದಾಗಿ, ಅದು ಆನಂದದಾಯಕ ಅನುಭವ ಎಂದು ಹೇಳಿದಾಗಲೂ ಆ ಆನಂದವು ವರ್ಣನೆಗೆ (ಭಾಷೆಗೆ ಹಾಗೂ ಮನೋಚಿತ್ರಣಕ್ಕೆ) ಸಿಕ್ಕುವುದಿಲ್ಲ. ಒಬ್ಬ ವ್ಯಕ್ತಿಗೆ ಬಹಳ ದುಃಖವಾದಾಗ, 'ಅವನಿಗೆ ಬಹಳ ದುಃಖವಾಗಿದೆ' ಎಂದು ಹೇಳಿದರೆ ಅದು ಅವನ ದುಃಖದ ಸಮರ್ಪಕ ವರ್ಣನೆಯಾಗಲಾರದು. ಏಕೆಂದರೆ ವರ್ಣನೆ ಎಂಬ ಕ್ರಿಯೆಗೆ ಕೆಲವು ಮಿತಿಗಳುಂಟು. ಒಂದು ಗೋಡೆಯ ವರ್ಣನೆ ಮಾಡುವುದೆಂದರೆ, ಅದರ ಗಾತ್ರ, ಆಕಾರ, ಬಣ್ಣ, ವಾಸನೆ, ಇತ್ಯಾದಿಗಳನ್ನು ವರ್ಣಿಸುವುದು. ಈ ದೃಷ್ಟಿಯಿಂದ ನೋಡಿದಾಗ ದುಃಖವು ವರ್ಣನೆಗೆ ಸಿಕ್ಕಲಾರದು. ಒಬ್ಬನ ದುಃಖವನ್ನು ವರ್ಣಿಸಲು ನಾವು ಎಷ್ಟೇ ಶಬ್ದಗಳನ್ನು ಖರ್ಚು ಮಾಡಿದರೂ, ಗೋಡೆಯ ವರ್ಣನೆಗಿರುವಷ್ಟು ಖಚಿತತೆ ಮತ್ತು ಸ್ಪಷ್ಟತೆ, ಅವನ ದುಃಖದ ವರ್ಣನೆಗೆ ಬರುವುದಿಲ್ಲ. ಅದೇ ರೀತಿ, ಅನುಭಾವಿಗೆ ಉಂಟಾಗುವ ಸುಖ ಅನಿರ್ವಾಚ್ಯ.

ಕೆಲವು ವೇಳೆ ನಾವು ಉಪಮೆಯನ್ನು ಬಳಸಿ ವರ್ಣಿಸುತ್ತೇವೆ. ಆದರೆ ಉಪಮೆಗಳಿಗೂ ಕೆಲವು ಮಿತಿಗಳಿರುತ್ತವೆ. ಉದಾಹರಣೆಗೆ, ಆತ್ಮ ಬ್ರಹ್ಮರ ಐಕ್ಯತೆಯನ್ನು ಬೃಹದಾರಣ್ಯಕ ಉಪನಿಷತ್ತಿನಲ್ಲಿ (IV.೩.೨೧) 'ಗಂಡನು ಹೆಂಡತಿಯ ಅಪ್ಪುಗೆಯಲ್ಲಿದ್ದಾಗ, ಅವನಿಗೆ ಒಳಗು-ಹೊರಗುಗಳ ವ್ಯತ್ಯಾಸದ ಅರಿವು ಹೇಗೆ ಉಂಟಾಗುವುದಿಲ್ಲವೋ ಹಾಗೆಯೇ ಬ್ರಹ್ಮನಲ್ಲಿ ಲೀನವಾದವನಿಗೆ ಒಳ ಹೊರಗುಗಳ ವ್ಯತ್ಯಾಸದ ಅರಿವಾಗುವುದಿಲ್ಲ' ಎಂದು ಹೇಳಲಾಗಿದೆ. ಸ್ತ್ರೀ ಪುರುಷರು ಅಪ್ಪುಗೆಯನಂತರ ಮತ್ತೆ ಬೇರೆ ಬೇರೆಯಾಗುವಂತೆ, ಆತ್ಮನೂ ಅನುಭಾವ (ಸಮಾಧಿ ಸ್ಥಿತಿ) ಮುಗಿದನಂತರ ಮತ್ತೆ ಬೇರೆ ಬೇರೆಯಾಗುತ್ತಾರೆಯೇ ಎಂಬ ಸಂದೇಹ ನಮ್ಮಲ್ಲಿ ಮೂಡುತ್ತದೆ. ಇದಕ್ಕೆ ಕಾರಣವಿಷ್ಟೇ: ನಾವು ಭಾಷೆಯನ್ನು ಕಲಿಯುವುದು ಇಂದ್ರಿಯಾನುಭವದ ಮೂಲಕ. ಅಂದರೆ ನಾವು ಕಲಿತ ಭಾಷೆಯು ಬಳಕೆಯಾಗುವುದು ಇಂದ್ರಿಯಾನುಭವದ ಪ್ರಪಂಚದ ಮಿತಿಯಲ್ಲಿ ಮಾತ್ರ. ಆದರೆ ಅನುಭಾವವು ಒಂದು ಅತೀಂದ್ರಿಯ ಮತ್ತು ಅತಿಬೌದ್ಧಿಕ ಅನುಭವವಾದುದರಿಂದ, ಅದನ್ನು ವರ್ಣಿಸಲು ಇಂದ್ರಿಯಾನುಭವದ ಮೂಲಕ ಕಲಿತ ಭಾಷೆ ಅಶಕ್ತವಾಗುತ್ತದೆ. (ನೋಡಿ : **ಅನುಭಾವ**)

**ಅನಿರ್ವಾಚ್ಯ ಪ್ರಣವ** : ಓಂ ಎಂಬ ಪ್ರಣವವು ಅ, ಉ, ಮತ್ತು ಮ ಎಂಬ ಮೂರು ಮಾತ್ರೆಗಳಿಂದಾಗಿದ್ದರೂ, ಹಾಗೂ ಆ ಮಾತ್ರೆಗಳನ್ನು ಉಚ್ಚರಿಸಬಹುದಾದರೂ, ಅದು ಪರಶಿವನ ಸಂಕೇತವಾದುದರಿಂದ, ಪರಶಿವನ ಸ್ವರೂಪವು ಅನಿರ್ವಾಚ್ಯವೆನಿಸಿಕೊಳ್ಳುತ್ತವೆ (೪:೧೪೩೨).

**ಅನುಗ್ರಹ :** ಪರಶಿವನ ಪಂಚಕೃತ್ಯಗಳಲ್ಲಿ ಒಂದು. ಆಧ್ಯಾತ್ಮಿಕ ಸಾಧನೆಯಲ್ಲಿ ಶ್ರದ್ಧೆ ಮತ್ತು ನಿಷ್ಠೆ ತೋರಿಸಿದವರಿಗೆ ಪರಶಿವನು ಅನುಗ್ರಹ ತೋರಿಸುತ್ತಾನೆ. ಪರಶಿವ ಸಾಕ್ಷಾತ್ಕಾರವಾಗುವುದು ಸಾಧಕನ ಸ್ವಪ್ರಯತ್ನದಿಂದಲೇ ಆದರೂ, ಪರಶಿವನ ಅನುಗ್ರಹವಿಲ್ಲದೆ ಅದು ಸಾಧ್ಯವಾಗದು; ಸಾಧಕನ ಸ್ವಪ್ರಯತ್ನವಿಲ್ಲದೆಯೂ ಅದು ಸಾಧ್ಯವಾಗದು. ಅನುಗ್ರಹ ಪಡೆದ ಸಾಧಕರು ಸಾಧನೆಯನ್ನು ಮುಂದುವರೆಸಲು, ಅಡೆತಡೆಗಳನ್ನು ನಿವಾರಿಸಲು ಶಕ್ತರಾಗುವುದಲ್ಲದೆ, ಕೊನೆಯಲ್ಲಿ ಅನುಭಾವದ ಮೂಲಕ ಲಿಂಗಾಂಗ ಸಾಮರಸ್ಯವನ್ನೂ ಪಡೆಯುತ್ತಾರೆ.

**ಅನುಗ್ರಹ ದೀಕ್ಷೆ :** ಆಧ್ಯಾತ್ಮಿಕ ಸಾಧನೆಯ ಮೂಲಕ ಅಂಗದ ನೂರೊಂದು ಸ್ಥಲದಲ್ಲಿ ಲಿಂಗಗಳನ್ನು ನೆಲೆಗೊಳಿಸಿದರೆ, ಆಗ ಮುಮುಕ್ಷುವಿಗೆ ಶಿವಾನುಗ್ರಹ ದೊರೆತಿದೆ ಎಂದರ್ಥ. ಅದೇ ಅನುಗ್ರಹ ದೀಕ್ಷೆ (೧೦:೬೯೭).

**ಅನುಭವ ಶರೀರ :** ಮನುಷ್ಯ ತಾನು ಸಾಯುವ ಮುನ್ನ ಅನೇಕ ಸತ್ಕರ್ಮ, ದುಷ್ಕರ್ಮಗಳನ್ನು ಮಾಡುತ್ತಾನೆ. ಒಂದು ವೇಳೆ ಅವನು ಕಡಿಮೆ ಸತ್ಕರ್ಮಗಳನ್ನು ಹೆಚ್ಚು ದುಷ್ಕರ್ಮಗಳನ್ನು ಮಾಡಿದರೆ ಮೊದಲು ಸತ್ಕರ್ಮಕ್ಕೆ ತಕ್ಕ ಪ್ರತಿಫಲಗಳು ಅವನಿಗೆ ಸಿಕ್ಕುತ್ತದೆ. ಈ ಕರ್ಮಗಳನ್ನು ಅವನು ಸ್ಥೂಲದೇಹದ ನಾಶದನಂತರ ಮತ್ತೊಂದು ಲೋಕದಲ್ಲಿ ಅನುಭವಿಸುವುದರಿಂದ, ಹಾಗೆ ಅನುಭವಿಸಲು ಸ್ಥೂಲದೇಹವಲ್ಲದ ಒಂದು ರೀತಿಯ ಶರೀರ ಬೇಕಾಗುತ್ತದೆ. ಅಂಥ ಶರೀರವೇ ಅನುಭವ ಶರೀರ.

**ಅನುಭಾವ :** 'ಅನುಭಾವ' ಎಂಬ ಪದವನ್ನು ವಚನಕಾರರು ಯೋಗ, ತುರೀಯ, (ತೂರ್ಯ), ಸಮಾಧಿ, ಅದ್ವೈತ ಸ್ಥಿತಿ, ಸಮರಸ, (ಸಾಮರಸ್ಯ) ಮುಂತಾದ ಪದಗಳಿಗೆ ಪರ್ಯಾಯವಾಗಿ ಉಪಯೋಗಿಸಿದ್ದಾರೆ. ಅವೆಲ್ಲ ಪದಗಳೂ ಅನುಭಾವದ ಲಕ್ಷಣಗಳಿಗೆ ಅನ್ವಯಿಸುವುದಿಲ್ಲ. ಆದರೆ ಶಿವಾನುಭವ, ಲಿಂಗಾನುಭವ, ಸ್ವಾನುಭಾವ ಮುಂತಾದ ಪದಗಳು ಅನುಭಾವ ಪದದ ಸಮಾನಾರ್ಥಕ ಪದಗಳು. "ಅನುಭಾವವು ಪರತತ್ವದ ಅರಿವನ್ನು ಕೊಡುವ ಒಂದು ಅತೀಂದ್ರಿಯ ಮತ್ತು ಅತಿ ಬೌದ್ಧಿಕ ಅನುಭವ" ಎಂಬ ಸ್ಥೂಲ ವ್ಯಾಖ್ಯೆಯೊಂದಿಗೆ ಅನುಭಾವದ ಮುಖ್ಯ ಲಕ್ಷಣಗಳ ವಿವರಣೆಯನ್ನು ಪ್ರಾರಂಭಿಸೋಣ.

೧.ಇಂದ್ರಿಯಾನುಭವವು (ಪ್ರತ್ಯಕ್ಷವು) ಇಂದ್ರಿಯಗಳನ್ನೂ ಅಂತಃಕರಣಗಳನ್ನೂ ಅವಲಂಬಿಸುತ್ತದೆ. ಉದಾಹರಣೆಗೆ ಯಾವುದೋ ಎಂದು ರುಚಿ ನಾಲಗೆಯ ಸಂಪರ್ಕಕ್ಕೆ ಬರುತ್ತದೆ. ಇದನ್ನು ಗ್ರಹಿಸಿದ ಬುದ್ಧಿಯು ಇದು ಸಿಹಿ ಎಂದು ನಿರ್ಧರಿಸುತ್ತದೆ. ನಾನು ಸಿಹಿಯನ್ನು ರುಚಿಸುತ್ತಿದ್ದೇನೆ ಎಂದು ಅಹಂಕಾರ ತಿಳಿಸುತ್ತದೆ. ಆದರೆ ಅನುಭಾವದಲ್ಲಿ ಇಂದ್ರಿಯ ಮತ್ತು ಅಂತಃಕರಣಗಳ ವ್ಯಾಪಾರ ಇರುವುದಿಲ್ಲ. ವಾಸ್ತವವಾಗಿ, ಅನುಭಾವವು ಪ್ರಾರಂಭವಾಗುವುದು ಇಂದ್ರಿಯ ಮತ್ತು ಅಂತಃಕರಣಗಳ ವ್ಯಾಪಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಾಗ. ಇದಕ್ಕೆ ಅಪವಾದವೆಂಬಂತೆ ಕೆಲವು ವೇಳೆ ಅನುಭಾವವು

ಇಂದ್ರಿಯಾನುಭವದಿಂದ ಪ್ರಾರಂಭವಾಗುತ್ತದೆ. ಆದರೆ ಅದನ್ನೆಂದೂ ಅವಲಂಬಿಸುವುದಿಲ್ಲ. ಸೂರ್ಯಾಸ್ತದ ಸೌಂದರ್ಯದ ಅನುಭವವೂ, ಸಾಗರದ ವಿಸ್ತಾರದ ಅನುಭವವೂ, ಸಂಗೀತದ ಮಾಧುರ್ಯದ ರಸಾಸ್ವಾದವೂ ಕೆಲವು ವೇಳೆ ಅನುಭಾವವಾಗಿ ಕೊನೆಗೊಂಡಾಗ, ಅದು ಪ್ರತ್ಯಕ್ಷದಿಂದಲೇ ಪ್ರಾರಂಭವಾಗಿರುತ್ತದೆ. ಆದರೆ ಅನುಭಾವವನ್ನು ಹುಟ್ಟಿಸುವಂಥ ಯಾವ ಅಂಶವೂ ಆ ಪ್ರತ್ಯಕ್ಷಗಳಲ್ಲಿಲ್ಲ. ಅಂಥ ಅಂಶ ಅವುಗಳಲ್ಲೇನಾದರೂ ಇದ್ದಿದ್ದರೆ, ಪ್ರಾಯಶಃ ಎಲ್ಲರೂ ಪ್ರಯತ್ನ ಪಡದೆಯೇ ಅನುಭಾವಿಗಳಾಗುತ್ತಿದ್ದರೇನೊ. ಅಲ್ಲದೆ, ಪ್ರತ್ಯಕ್ಷದ ಸಹಾಯವಿಲ್ಲದೆಯೂ ಅನುಭಾವ ಸಾಧ್ಯವಿದೆ. ಉದಾಹರಣೆಗೆ, ಇಂದ್ರಿಯ, ಮನಸ್ಸು, ಬುದ್ಧಿ, ಇತ್ಯಾದಿಗಳನ್ನು ತಾತ್ಕಾಲಿಕವಾಗಿ ನಿಷ್ಕ್ರಿಯಗೊಳಿಸಿ ಮಾಡಿದ ಧ್ಯಾನವು ಅನುಭಾವದಲ್ಲಿ ಕೊನೆಗೊಂಡಾಗ ಪ್ರತ್ಯಕ್ಷದ ಪಾತ್ರ ಸ್ವಲ್ಪವೂ ಇರುವುದಿಲ್ಲ.

ಅನುಭಾವದಲ್ಲಿ ಮುಖ್ಯವಾದ ಮೂರು ಹಂತಗಳನ್ನು ಕಾಣಬಹುದು. ಲಿಂಗಧ್ಯಾನದಲ್ಲಿ ನಿರತನಾಗುವವನು ಮೊದಲು ಪ್ರತ್ಯಾಹಾರ ಮಾಡುತ್ತಾನೆ; ಅಂದರೆ, ಇಂದ್ರಿಯಗಳಿಗೆ ತಮ್ಮ ಆಹಾರಗಳಾದ ರೂಪರಸಾದಿಗಳು ಸಿಗದಂತೆ ಮಾಡುತ್ತಾನೆ, ಅಲ್ಲದೆ ಮನಸ್ಸು ಯಾವುದರ ಬಗೆಗೂ ಆಶಿಸದಂತೆ, ಚಿತ್ತ ವಿಷಯಗಳ ಕಡೆ ಹರಿಯದಂತೆ ಅವುಗಳನ್ನು ನಿಗ್ರಹಿಸುತ್ತಾನೆ. ಇದರ ಪರಿಣಾಮವಾಗಿ ಅವನ ಬಾಹ್ಯ ಪ್ರಪಂಚದ ಪ್ರಜ್ಞೆ ಮತ್ತು ತನ್ನ ಮಾನಸಿಕ ಸ್ಥಿತಿಗಳ ಅರಿವು ಇಲ್ಲದಂತಾಗುತ್ತದೆ. ಆದರೆ ನಾನು ಎಂಬ ಸ್ವಪ್ರಜ್ಞೆ ಇರುತ್ತದೆ. ಎರಡನೆ ಹಂತದಲ್ಲಿ ಅವನ ಅಂತಶ್ಚಕ್ಷುವಿಗೆ ಬಹಳ ಪ್ರಕಾಶಮಾನವಾದ ಬೆಳಗು ಕಾಣಿಸಿಕೊಳ್ಳುತ್ತದೆ. ಇದನ್ನೆ ವಚನಕಾರರು, ಬೆಳಗಿನ ಬೆಳಗು, ಕೋಟಿಸೂರ್ಯ ಪ್ರಕಾಶ, ದಿವ್ಯ ಪ್ರಕಾಶ, ಮುಂತಾಗಿ ಕರೆದಿದ್ದಾರೆ. ಇದು ಭೌತ ವಸ್ತುವಿನಿಂದ ಬರುವ ಬೆಳಕಲ್ಲವಾದ್ದದರಿಂದ ಅದನ್ನು ಚಿದ್ಬೆಳಗು, ಚಿತ್‌ಸೂರ್ಯ, ಚಿತ್‌ಪ್ರಕಾಶ ಎಂದೂ ಕರೆದಿದ್ದಾರೆ. ಈ ಬೆಳಗನ್ನು ಅವರು ಪರಶಿವನೆಂದೂ (ಅಥವಾ ಪರಶಿವನ ಪ್ರಕಾಶವೆಂದೂ) ಪರಿಗಣಿಸಿ ಅದನ್ನು ಉರಿಲಿಂಗ, ಜ್ಯೋತಿರ್ಲಿಂಗ, ಪ್ರಕಾಶಲಿಂಗ, ಎಂದು ಮುಂತಾಗಿ ಕರೆದಿದ್ದಾರೆ. ಈ ಹಂತದಲ್ಲಿ ಅನುಭಾವಿಗೆ ಸ್ವಲ್ಪ ಹೊತ್ತಿನವರೆಗೆ ಅತೀವ ಆನಂದವಾಗುತ್ತದೆ. ಇದು ಯಾವ ಐಂದ್ರಿಕ ಆನಂದವನ್ನೂ ಹೋಲುವುದಿಲ್ಲ. ಆತ್ಮವು ಇಂದ್ರಿಯ ಮತ್ತು ಅಂತಃಕರಣಗಳೊಡನೆ ಇದ್ದ ತನ್ನ ಸಂಬಂಧವನ್ನು ತಾತ್ಕಾಲಿಕವಾಗಿ ಕಡಿದುಕೊಂಡಿರುವುದರಿಂದ, ತಾನೊಂದೇ ಇರುವ ಅದರ ಆನಂದವನ್ನು ಶರಣರು ಆತ್ಮಾನಂದ, ಕೈವಲ್ಯಾನಂದ, ಚಿದಾನಂದ, ಬ್ರಹ್ಮಾನಂದ ಎಂದು ಮುಂತಾಗಿ ಕರೆದಿದ್ದಾರೆ. ಆದರೆ ಶರಣರ ಪ್ರಕಾರ ಈ ಆನಂದವೇ ಆಧ್ಯಾತ್ಮಿಕ ಜೀವನದ ಗುರಿಯಲ್ಲ. ಶರಣಸ್ಥಲದ ಸಾಧಕನು ಅನುಭಾವದ ಮೂಲಕ ಆನಂದವನ್ನು ಪಡೆದು ಇನ್ನೂ ಮುಂದೆ ಹೋಗುತ್ತಾನೆ.

ಮೂರನೆಯ ಹಂತವನ್ನು ಎರಡು ಭಾಗ ಮಾಡಬಹುದು. ಮೊದಲನೆ ಹಂತದಲ್ಲಿ ಶಿವಯೋಗಿಯು (ಅನುಭಾವಿಯು) ತನ್ನ ಆತ್ಮವು ಹಿಗ್ಗುತ್ತ ಹೋಗುವುದನ್ನೂ ಪರಮಾತ್ಮನಲ್ಲಿ ಅದು ಒಂದಾಗುವುದನ್ನೂ ಅನುಭವಿಸುತ್ತಾನೆ. ಇದನ್ನೆ ವಚನಕಾರರು ಲಿಂಗಾಂಗ ಸಾಮರಸ್ಯ, ಲಿಂಗೈಕ್ಯ, ಲಿಂಗಾನುಭವ, ಎಂದು ಮುಂತಾಗಿ ಕರೆದಿದ್ದಾರೆ. ಇದರಿಂದ ವ್ಯಕ್ತವಾಗುವ ಅಂಶವೇನೆಂದರೆ, ಅಂಗ (ಆತ್ಮ) ಮತ್ತು ಲಿಂಗ ಎರಡೂ ಚಿದ್ವಸ್ತುಗಳೇ ಆದುದರಿಂದ ಅವು ಸಂದುಳಿಯದಂತೆ ಬೆರೆತು ಒಂದಾಗಲು ಸಾಧ್ಯ. ನದಿಯ ನೀರು ಸಮುದ್ರದ ನೀರಿನಲ್ಲಿ ಸಂದಿಲ್ಲದಂತೆ ಬೆರೆಯಬಹುದೇ ಹೊರತು, ಕಲ್ಲು ಅಥವಾ ಕಬ್ಬಿಣ ಎಷ್ಟು ಸಾವಿರ ವರ್ಷ ನೀರಿನಲ್ಲಿ ಮುಳುಗಿದರೂ ಅದು ನೀರಿನಲ್ಲಿ ಬೆರೆಯಲು ಸಾಧ್ಯವಿಲ್ಲ. ಕೆಲವು ವೇಳೆ ವಚನಕಾರರು ಅಂಗವು ಲಿಂಗದಲ್ಲಿ ಲೀನವಾದಂತೆ ಲಿಂಗವು ಅಂಗದಲ್ಲಿ ಲೀನವಾಗುತ್ತದೆ ಎಂದು ಹೇಳಿ ಐಕ್ಯತೆಯ ಅರ್ಥವನ್ನು ಹಿಗ್ಗಿಸಿದ್ದಾರೆ. ಈ ಕಾರಣಕ್ಕಾಗಿ ಅಲ್ಲಮಪ್ರಭು "ತುಂಬಿ ಪರಿಮಳವನುಂಡುದೋ, ಪರಿಮಳ ತುಂಬಿಯನುಂಡುದೋ? ಲಿಂಗ ಪ್ರಾಣವಾಯಿತೋ, ಪ್ರಾಣ ಲಿಂಗವಾಯಿತೋ" ಎಂದು ಆಶ್ಚರ್ಯಚಕಿತರಾಗಿ ಕೇಳಿದ್ದಾರೆ.

ಎರಡನೆಯ ಹಂತದಲ್ಲಿ, ಅಂದರೆ ಅಂಗನು ಲಿಂಗದಲ್ಲಿ ಬೆರೆತಿರುವಾಗ, ಅನುಭಾವಿಗೆ ತಾನು ಹಾಗೆ ಲೀನವಾಗಿರುವುದಾಗಲೀ, ಲಿಂಗದ ಅಥವಾ ತನ್ನ ಬಗೆಗಾಗಲಿ ಅರಿವಾಗುವುದಿಲ್ಲ. ಇದು ಜ್ಞಾತೃ ಜ್ಞೇಯಗಳಿಲ್ಲದ ಅದ್ವೈತ ಸ್ಥಿತಿ. ಇಲ್ಲಿ ಸ್ವಪ್ರಜ್ಞೆಯೇ ಇಲ್ಲವಾದುದರಿಂದ ಅನುಭಾವಿಯು 'ನನಗೆ ಯಾವುದರ ಅನುಭವವೂ ಆಗುತ್ತಿಲ್ಲ ಎಂದಾಗಲೀ 'ನನಗೆ ಪರಶಿವನ ಅನುಭವವಾಗುತ್ತಿದೆ' ಎಂದಾಗಲೀ ಹೇಳುವಂತಿಲ್ಲ. ಈ ಅಂಶದಲ್ಲಿ ಅನುಭಾವವು ಸುಷುಪ್ತಿಯನ್ನು ಹೋಲುತ್ತದೆ. ಗಾಢ ನಿದ್ರೆಯಲ್ಲಿರುವವನು 'ನಾನು ನಿದ್ರಿಸುತ್ತಿದ್ದೇನೆ' ಎಂದಾಗಲೀ 'ನನಗೆ ಬಾಹ್ಯ ಪ್ರಜ್ಞೆಯಾಗಲೀ, ಸ್ವಪ್ರಜ್ಞೆಯಾಗಲೀ ಇಲ್ಲ' ಎಂದಾಗಲೀ ಹೇಗೆ ಹೇಳಲಾರನೋ ಹಾಗೆಯೇ ಅನುಭಾವಿಯು ತನ್ನ ಅನುಭಾವದ ಬಗೆಗೆ ಏನನ್ನೂ ಹೇಳಲಾರ. ಆದರೆ ನಿದ್ರೆಯಿಂದ ಎಚ್ಚತ್ತವನು 'ನನಗೆ ನಿದ್ರೆಯಲ್ಲಿ ಯಾವುದರ ಅನುಭವವೂ ಆಗಲಿಲ್ಲ' ಎಂಬುದನ್ನು ಹೇಗೆ ಭೂತಕಾಲದ ವಾಕ್ಯದಲ್ಲಿ ಮಾತ್ರ ಹೇಳುತ್ತಾನೋ ಹಾಗೆಯೇ ಅನುಭಾವಿಯು ಜಾಗ್ರತ ಸ್ಥಿತಿಗೆ ಬಂದಾಗ ತನ್ನ ಅನುಭವದ ಬಗ್ಗೆ ಭೂತಕಾಲದ ವಾಕ್ಯಗಳಲ್ಲಿ ಮಾತ್ರ ಹೇಳಬಲ್ಲನು. ಹೀಗೆ ಪರಪ್ರಜ್ಞೆ, ಸ್ವಪ್ರಜ್ಞೆ ಎರಡನ್ನೂ ಕಳೆದುಕೊಂಡು ಅನುಭಾವಿಯು, ಅಲ್ಲಮಪ್ರಭುವಿನಂತೆ "ಸತ್ಯವು ಇಲ್ಲ, ಅಸತ್ಯವೂ ಇಲ್ಲ, ಸಹಜವೂ ಇಲ್ಲ, ಅಸಹಜವೂ ಇಲ್ಲ, ನಾನೂ ಇಲ್ಲ, ನೀನೂ ಇಲ್ಲ, ಇಲ್ಲ ಇಲ್ಲ ಎಂಬುವುದು ತಾನಿಲ್ಲ" ಎನ್ನುತ್ತಾನೆ.

೨. ಅನುಭಾವವು ಮುಗಿದ ನಂತರವೂ ಅನುಭಾವಿಯು ಅನುಭಾವದ ಗುಂಗಿನಲ್ಲೇ ಇರುತ್ತಾನೆ. ಅವನಿಗೆ ಯಾವುದೋ ಅಜ್ಞಾತ ಶಕ್ತಿಯು ತನ್ನನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡು, ನಿಯಂತ್ರಿಸಿದಂಥ ಅನುಭೂತಿಯಾಗುತ್ತದೆ. ಅವನಿಗೆ ತಾನು ಮಾಡುವ

ಕ್ರಿಯೆಗಳೆಲ್ಲವೂ ತನ್ನವಲ್ಲ, ತಾನು ಮಾಡುವ ಯೋಚನೆಗಳೆಲ್ಲವೂ ತನ್ನವಲ್ಲ, ತಾನು ಪಡುವ ಸುಖ ತನ್ನದಲ್ಲ ಎಂಬ ಪ್ರಜ್ಞೆಯೂ ಪರಶಿವನೇ ತನ್ನಿಂದ ಎಲ್ಲ ಕ್ರಿಯೆ ಮಾಡಿಸುತ್ತಾನೆ, ಎಲ್ಲ ಯೋಚನೆ ಮಾಡಿಸುತ್ತಿದ್ದಾನೆ, ಸುಖಿಸುತ್ತಿದ್ದಾನೆ ಎಂಬ ಭಾವವೂ ಬೇರೂರುತ್ತವೆ. ಅಂದರೆ, ಅನುಭಾವಿಗೆ ತನ್ನತನ ನಷ್ಟವಾಗಿದೆ. ಇದನ್ನ ವಚನಕಾರರು ಮನನಷ್ಟ, ಅಹಂನಷ್ಟ ಮುಂತಾಗಿ ಕರೆದಿದ್ದಾರೆ. ''ಅಂಗ ಅನಂಗ ಎರಡೂ ಅಳಿದು, ನಿಜದಲ್ಲಿ ನಿಂದ ಲಿಂಗೈಕ್ಯನ ಅಂಗದ ಮೇಲುಳ್ಳ ಕ್ರಿಯೆಗಳೆಲ್ಲವೂ ಲಿಂಗ ಕ್ರಿಯೆಗಳು ನೋಡಾ! ಮನೋಲಯವಾಗಿಪ್ಪ ನಿಜಲಿಂಗೈಕ್ಯನ ಅನುಭಾವವೆಲ್ಲವೂ ಜ್ಞಾನನಷ್ಟ, ಶಬ್ದನಷ್ಟ.....'' ಎಂಬ ಪ್ರಭುವಿನ ವಚನ ಈ ಮಾತನ್ನು ಪುಷ್ಟೀಕರಿಸುತ್ತದೆ.

ಅಂದರೆ, ಅನುಭಾವಿಯು ತನ್ನ ಮೊದಲಿನ ಸ್ವಕೇಂದ್ರೀಯ ವ್ಯಕ್ತಿತ್ವವನ್ನು ತೆಗೆದುಹಾಕಿ, ಅಲ್ಲಿ ಲಿಂಗ ಕೇಂದ್ರೀಯ ವ್ಯಕ್ತಿತ್ವವನ್ನು ಪ್ರತಿಷ್ಠಾಪಿಸಿದ್ದಾನೆ. ಆಗ ಅವನಿಗೆ ತಾನು ಬೇರೆ ಪರಶಿವ ಬೇರೆ ಎನಿಸುವುದಿಲ್ಲ. ಅವನು ತನಗೊಮ್ಮೆ ಪರಶಿವನಿಗೊಮ್ಮೆ ಎಂದು ಎರಡು ಪ್ರಸಾದಗಳನ್ನು ಮಾಡದೆ, ಪರಶಿವನೊಡನೆ ಸಹಭೋಜನದಲ್ಲಿ ಪಾಲ್ಗೊಳ್ಳುತ್ತಾನೆ; ಅಥವಾ ಚೆನ್ನಬಸವಣ್ಣ ಹೇಳುವಂತೆ ಲಿಂಗೈಕ್ಯನು (ಅನುಭಾವಿಯು) ತಾನು ಪರಶಿವನ ಅಣತಿಯಂತೆ ನಡೆದುಕೊಳ್ಳುವ ವಾಹನ, ಅಥವಾ ತಾನು ಪರಶಿವನ ದೇಹ (ಅಂಗ) ಎಂದು ತಿಳಿದುಕೊಳ್ಳುತ್ತಾನೆ.

೩. ಲಿಂಗಾಂಗ ಸಾಮರಸ್ಯವನ್ನು ಸಾಧಿಸಿದ ಅನುಭಾವಿಗೆ ತನ್ನ ಜನ್ಮ ಸಾರ್ಥಕವಾಯಿತು ಎಂಬ ತೃಪ್ತಿ ಉಂಟಾಗಿ, ತಾನಿನ್ನು ಸಾಧಿಸಬೇಕಾಗಿದ್ದೇನೂ ಇಲ್ಲ ಎಂಬ ತೃಪ್ತಿ ಉಂಟಾಗುತ್ತದೆ. ಅವನಿಗೆ ಯಾವ ಸ್ವಾರ್ಥ, ಆಸೆ ಆಕಾಂಕ್ಷೆಗಳು ಇಲ್ಲ. ಆದರೆ ಅಂಥಹವರಲ್ಲಿ ಕೆಲವರಿಗೆ ಸಾಮಾಜಿಕ ಕಳಕಳಿ ಅತೀವವಾಗಿರುತ್ತದೆ.

೪. ಅನುಭಾವವು ಅನಿರ್ವಚನೀಯ. ಇಂದ್ರಿಯಾನುಭವಕ್ಕಿಂತ ತೀರಾ ಭಿನ್ನವಾದ ಅನುಭವವನ್ನು ಯಾವ ಉಪಮೆಯ ಮೂಲಕ ವ್ಯಕ್ತಪಡಿಸಿದರೂ, ಅದರ ಸ್ವರೂಪ ನಮಗೆ ಅಪರಿಚಿತವಾಗೇ ಉಳಿಯುತ್ತದೆ. ಇದಕ್ಕೆ ಒಂದು ಪ್ರಬಲ ಕಾರಣವಿದೆ. ಇಂದ್ರಿಯ ಸಂವೇದನೆಗಳನ್ನು ನಾವು ಪ್ರತ್ಯಕ್ಷದ ಮೂಲಕ ಗಳಿಸಿದ ಪರಿಕಲ್ಪನೆಗಳ ಮೂಲಕವೇ ಯಾವಾಗಲೂ ನಿರ್ಣಯಿಸುವುದು. ಉದಾಹರಣೆಗೆ ಕಣ್ಣಿಗೆ ಯಾವುದೊ ಒಂದು ಬಣ್ಣ ಕಾಣಿಸಿಕೊಂಡಾಗ ಬುದ್ಧಿಯು ಕೆಂಪು ಬಣ್ಣಕ್ಕೆ ಸಂಬಂಧಿಸಿದ ಪರಿಕಲ್ಪನೆಯನ್ನು ಉಪಯೋಗಿಸಿಕೊಂಡು ''ಇದು ಕೆಂಪು ಬಣ್ಣ'' ಎಂದು ನಿರ್ಣಯಿಸುತ್ತದೆ. ಆದರೆ ಅನುಭಾವಲ್ಲಾಗುವ ಘಟನೆಗಳು ಇಂದ್ರಿಯ ಅನುಭವದಲ್ಲಾಗುವ ಘಟನೆಗಳಿಗಿಂತ ತೀರಾ ಭಿನ್ನವಾಗಿರುವುದರಿಂದ, ಪ್ರಾತ್ಯಕ್ಷಿಕ ಪರಿಕಲ್ಪನೆಗಳು ಅಲ್ಲಿ ಪ್ರಯೋಜನಕಾರಿಯಾಗುವುದಿಲ್ಲ. ಚಿತ್ ಒಂದೇ ಇರುವುದನ್ನಾಗಲೀ, ಅಥವಾ ಅಂಗ ಲಿಂಗದಲ್ಲಿ ಬೆರೆಯುವುದನ್ನಾಗಲೀ ನಾವು ಕಲಿತ ಭಾಷೆಯ ಮೂಲಕ ವ್ಯಕ್ತಪಡಿಸಲು

ಸಾಧ್ಯವಿಲ್ಲ. ಒಂದು ವೇಳೆ ಉಪಮೆಗಳ ಮೂಲಕ ವರ್ಣಿಸಿದರೂ ಆ ವರ್ಣನೆ ಸಂಪೂರ್ಣವಾಗುವುದಿಲ್ಲ ಉದಾಹರಣೆಗೆ, ಲಿಂಗಾಂಗ ಸಾಮರಸ್ಯವು ನದಿ ಸಮುದ್ರದಲ್ಲಿ ಸೇರಿದಂತೆ ಎಂದು ಹೇಳಿದರೆ ಕನಿಷ್ಠ ಎರಡು ಪ್ರಶ್ನೆಗಳಾದರೂ ಏಳುತ್ತವೆ. ನದಿ ಸಮುದ್ರದಲ್ಲಿ ಸೇರುವ ಮುನ್ನ ಎಲ್ಲಿಂದಲೋ ಹರಿದುಕೊಂಡು ಬರುವಂತೆ ಆತ್ಮವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಚಲಿಸುತ್ತದೆಯೋ? ನದಿ ಸಮುದ್ರವನ್ನು ಸೇರಿದಾಗ, ಸಮುದ್ರದ ನೀರು ಹೆಚ್ಚಾಗುವಂತೆ, ಆತ್ಮ ಪರಶಿವನಲ್ಲಿ ಐಕ್ಯವಾದಾಗ ಪರಶಿವನ ಗಾತ್ರವು ಇನ್ನೂ ದೊಡ್ಡದಾಗುತ್ತದೆಯೋ? ಎರಡು ಪ್ರಶ್ನೆಗಳಿಗೂ ಇಲ್ಲವೆಂದೇ ಉತ್ತರ ಹೇಳಬೇಕಾಗುತ್ತದೆ. ಅಲ್ಲದೆ ಅನುಭಾವದಲ್ಲಿ 'ಗೋಚರಿಸುವ' ವಸ್ತು ಚಿದ್ವಸ್ತುವಾಗಿರುವುದರಿಂದ ಭೌತ ವಸ್ತುಗಳ ಯಾವ ವರ್ಣನೆಯೂ ಅದಕ್ಕೆ ಅನ್ವಯವಾಗುವುದಿಲ್ಲ. ಚಿದ್ವಸ್ತು ಇಲ್ಲಿಲ್ಲ, ಎಲ್ಲೆಲ್ಲಿಯೂ ಇಲ್ಲ. ಚಿದ್ವಸ್ತುವಿಗೆ ಬಣ್ಣವಿಲ್ಲ, ಗಾತ್ರವಿಲ್ಲ, ಆಕಾರವಿಲ್ಲ, ಕ್ರಿಯಾಶಕ್ತಿಯಿಲ್ಲ, ಇತ್ಯಾದಿ. ಅದಕ್ಕೆ ಉಪನಿಷತ್ಕಾರರು ಬ್ರಹ್ಮನನ್ನು, ನಿರಾಕಾರನೆಂದು ಕರೆದು ಅವನು ಅದು ಅಲ್ಲ, ಇದು ಅಲ್ಲ (ನೇತಿನೇತಿ) ಎಂದು ಹೇಳಿ, ಅಷ್ಟಕ್ಕೆ ನಿಲ್ಲಿಸಿದರು. ಅದೇ ಕಾರಣಕ್ಕಾಗಿ ವಚನಕಾರರಿಗೆ ಅನುಭಾವದಲ್ಲಿ ಗೋಚರಿಸುವ ಪರಶಿವನೂ ನಿರ್ಗುಣನೇ ಆದುದರಿಂದ, ಅವನನ್ನು ವಾಙ್ಮನೋತೀತ, ಅನಿರ್ವಾಚ್ಯ, ಅಪ್ರಮೇಯ, ನಿರ್ದ್ವಂದ್ವ, ನಿರಾಮಯ, ನಿರ್ಮಲ, ಮುಂತಾದ ನಿಷೇಧಾತ್ಮಕ ಶಬ್ದಗಳಿಂದ ವರ್ಣಿಸಿರುವುದು. ಆದರೆ ಇಂಥ ನಿಷೇಧಾತ್ಮಕ ವರ್ಣನೆಯು ನಮಗೆ ಪರಶಿವನ ಯಾವ ಗುಣವನ್ನೂ ಪರಿಚಯ ಮಾಡಿಕೊಡುವುದಿಲ್ಲ.

ಇಂಥ ಅನಿರ್ವಾಚ್ಯ ಪರವಸ್ತುವನ್ನು ವರ್ಣಿಸಹೋದರೆ ಅದನ್ನು ನಮ್ಮ ಮಟ್ಟಕ್ಕೆ ಇಳಿಸಿ, ಪರಿಮಿತ ವಸ್ತುವನ್ನಾಗಿ ಮಾಡುತ್ತಿದ್ದೇವೆಂದರ್ಥ.

೫. ಅನುಭಾವವು ಅನುಭಾವಿಯಲ್ಲಿ ಏಕತ್ವದ (ಐಕ್ಯ) ಭಾವನೆಯನ್ನು ಮೂಡಿಸುತ್ತದೆ. ಇಡೀ ಪ್ರಪಂಚವೇ ಒಂದೆಂದೂ, ಪ್ರಪಂಚವೂ, ಪರಶಿವನೂ ಬೇರೆ ಬೇರೆ ಅಲ್ಲವೆಂದೂ ಪರಶಿವನೂ ಜೀವನೂ ಬೇರೆ ಬೇರೆ ಅಲ್ಲವೆಂದೂ ಅವನಿಗೆ ಅನಿಸುತ್ತದೆ. ಇಂಥಹುದೇ ಅಭಿಪ್ರಾಯವನ್ನು ಶಂಕರಾಚಾರ್ಯರು ಮಂಡಿಸಿದರೂ ಅವರ ಅನುಭಾವಕ್ಕೂ ವಚನಕಾರರ ಅನುಭಾವಕ್ಕೂ ವ್ಯತ್ಯಾಸವಿದೆ. ವಚನಕಾರರು ವಿಶ್ವತೋ ಬಾಹು ವಿಶ್ವತೋ ಚಕ್ಷು, ಎತ್ತೆತ್ತ ನೋಡಿದರತ್ತತ್ತ ನೀನೇ ದೇವಾ ಎಂದು ಹೇಳುವ ಮೂಲಕ ಪರಶಿವನೂ ಇದ್ದಾನೆ, ವಿಶ್ವವೂ ಇದೆ ಎಂಬುವುದನ್ನು ಪ್ರತಿಪಾದಿಸುತ್ತಾರೆ. ಅವರು ವಿಶ್ವವನ್ನೂ ಕಂಡು ಅದರಲ್ಲಿರುವ ಪರಶಿವನನ್ನೂ ಕಂಡರೆ, ಶಂಕರಾಚಾರ್ಯರು ನಿರ್ಗುಣ ಬ್ರಹ್ಮನನ್ನಷ್ಟೆ ಕಾಣುತ್ತಾರೆ. ಪ್ರಪಂಚವನ್ನು ಮಿಥ್ಯೆಯೆನ್ನುತ್ತಾರೆ. ಅದೇ ರೀತಿ ವಚನಕಾರರು ಭಕ್ತ ದೇಹಿಕ ದೇವ, ಎಂದು ಹೇಳಿ ಭಕ್ತನು ಪರಶಿವನ ದೇಹ (ಅಂಗ) ಎಂದು ಹೇಳಿ ಭಕ್ತನೂ ಇದ್ದಾನೆ,

ಪರಶಿವನೂ ಇದ್ದಾನೆ ಎಂಬ ಸಿದ್ಧಾಂತವನ್ನು ಸಾರಿದರೆ, ಶಂಕರಾಚಾರ್ಯರು ಜೀವ ಬಾಹುಳ್ಯವು ಮಿಥ್ಯೆಯೆಂದೂ ನಿರ್ಗುಣ ಬ್ರಹ್ಮ ಮಾತ್ರ ಸತ್ಯವೆಂದು ಪ್ರತಿಪಾದಿಸುತ್ತಾರೆ.

**ಅನುಭಾವ ಭಕ್ತಿ :** (ನೋಡಿ : ಭಕ್ತಿ)

**ಅನುಭಾವಸುಖ ಪರಿಣಾಮಿ :** ಪ್ರಾಣಲಿಂಗಿಸ್ಥಲದ ಸಾಧಕನು ಜಂಗಮ ಲಿಂಗವನ್ನು ಸುಮನವೆಂಬ ಹಸ್ತದಲ್ಲಿ ಕಂಡು ಅನುಭಾವವೆಂಬ ಭಕ್ತಿಯನ್ನು ಆಚರಿಸುವಾಗ ಅವನಿಗೆ ಸುಖವುಂಟಾಗುತ್ತದೆ. ಅಲ್ಲದೆ, ಅವನಿಗೆ ತನ್ನ ಸುಜ್ಞಾನವೆಂಬ ಹಸ್ತದಲ್ಲಿ ಮುಂದಿನ ಸ್ಥಲದ ಪ್ರಸಾದ ಲಿಂಗವು ಕಾಣಿಸಿಕೊಳ್ಳುತ್ತದೆ (೧೨:೪೫೫).

**ಅಪೂರ್ವ :** ಈ ಪದವು ಪೂರ್ವಮೀಮಾಂಸಾ ದರ್ಶನದಲ್ಲಿ ಒಂದು ಮುಖ್ಯಸ್ಥಾನವನ್ನು ಪಡೆದಿದೆ. ಈ ದರ್ಶನದ ಪ್ರಕಾರ, ಯಜ್ಞಯಾಗಾದಿಗಳಂಥ ಕರ್ಮ ಮಾಡುವುದರಿಂದ ಸ್ವರ್ಗಪ್ರಾಪ್ತಿಯಾಗುತ್ತದೆ. ಕರ್ಮಗಳು ಒಂದು ಕಾಲದಲ್ಲಿ ಮತ್ತು ಒಂದು ದೇಶದಲ್ಲಿ ನಡೆಯುವುದರಿಂದ ಅವುಗಳನ್ನು ಮಾಡಿದ ವ್ಯಕ್ತಿಗೆ ಬೇರೊಂದು ಕಾಲದಲ್ಲಿ ಹೇಗೆ ಸ್ವರ್ಗಪ್ರಾಪ್ತಿಯಾಗುತ್ತದೆ ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ. ಅದಕ್ಕೆ ಮೀಮಾಂಸಕರು ಕರ್ಮವು ಒಂದು ಕಾಲದಲ್ಲಿ ಪ್ರಾರಂಭವಾಗಿ ಮತ್ತೊಂದು ಕಾಲದಲ್ಲಿ ಮುಗಿದರೂ, ಆ ಕರ್ಮ ಮಾಡಿದವನಲ್ಲಿ ಒಂದು ಅತಿಶಯ ಶಕ್ತಿ ಉಂಟಾಗುತ್ತದೆ; ಅದಕ್ಕೆ ಅಪೂರ್ವವೆಂದು ಹೆಸರು, ಎನ್ನುತ್ತಾರೆ. ಈ ಅಪೂರ್ವವು ಆ ವ್ಯಕ್ತಿಯಲ್ಲಿ ಅವನ ಮರಣದವರೆಗೂ ಇದ್ದು, ಅನಂತರ ಅವನಿಗೆ ಸ್ವರ್ಗಪ್ರಾಪ್ತಿಯಾಗುವಂತೆ ಮಾಡುತ್ತದೆ ಎನ್ನುತ್ತಾರೆ. ಸಂಗಮೇಶ್ವರದ ಅಪ್ಪಣ್ಣ ಇದನ್ನು ಖಂಡಿಸುತ್ತಾ, 'ಅಪೂರ್ವವು ಅಚೇತನವಾದುದರಿಂದ ಅದು ಫಲವೀಯುವಂತೆ ಮಾಡಬೇಕಾದರೆ, ಹಾಗೆಂದು ನಿರ್ಧರಿಸಿ, ಅದರಂತೆ ಮಾಡುವ ಚೇತನ ಪ್ರೇರಕ (ಪರಶಿವ) ಬೇಕಾಗುತ್ತದೆ' ಎನ್ನುತ್ತಾರೆ (೯:೩೫೮).

**ಅಪ್ಪುವಿನ ಪೂರ್ವಾಶ್ರಯವ ಕಳೆಯುವುದು :** ಮಾನವ ದೇಹದ ರಚನೆಯಾಗಿರುವುದು ಪಂಚಭೂತಗಳಿಂದ. ಅದರಲ್ಲೊಂದು ತತ್ವವಾದ ಅಪ್ಪು (ನೀರು) ತತ್ವಕ್ಕೆ ರಸವೇ ಮುಖ್ಯ ಗುಣ. ಈ ತತ್ವದ ವಿಕಾರದಿಂದಾಗಿ ನಾವು ಕಹಿ, ಒಗರು, ಮುಂತಾದ ಅಹಿತಕರವಾದ ರುಚಿಯನ್ನು ಸ್ವಾಭಾವಿಕವಾಗಿ ದ್ವೇಷಿಸುತ್ತೇವೆ ಹಾಗೂ ಸಿಹಿ, ಮುಂತಾದ ರುಚಿಯನ್ನು ನಾವು ಸ್ವಾಭಾವಿಕವಾಗಿ ಪ್ರೀತಿಸುತ್ತೇವೆ. ಸದ್ಭಕ್ತನಾದವನು ಎಲ್ಲ ಸ್ವಾರ್ಥಪರವಾದ ಆಸೆಗಳನ್ನೂ ಗೆದ್ದಿರುವುದರಿಂದ, ಅವನು ರುಚಿಗಳನ್ನು ಹಿತ ಅಹಿತವೆಂದು ವಿಂಗಡಿಸುವುದಿಲ್ಲ. ಅವನಲ್ಲಿರುವ ಅಪ್ಪು ತತ್ವವು ತನ್ನ ಮೂಲಗುಣವನ್ನು ಕಳೆದುಕೊಂಡು, ಭಕ್ತನ ಆಧ್ಯಾತ್ಮಿಕ ಪ್ರಗತಿಗೆ ಸಹಾಯಕವಾಗುತ್ತದೆ (೨:೧೩೬).

**ಅಪ್ರತಿಮ :** ಭೌತವಸ್ತುಗಳನ್ನೂ ಅವುಗಳ ಗುಣ ಮತ್ತು ಕ್ರಿಯೆಗಳನ್ನೂ ಮನಸ್ಸಿನಲ್ಲೆ ರೂಪಿಸಿಕೊಂಡಂತೆ, ಚಿದ್ವಸ್ತುವಾದ ಪರಶಿವನನ್ನು ಮನಸ್ಸಿನಲ್ಲಿ ರೂಪಿಸಿಕೊಳ್ಳಲು ಸಾಧ್ಯವಿಲ್ಲವಾದುದರಿಂದಲೂ ಯಾವ ಉಪಮೆಗೂ ಸಿಕ್ಕುವುದಿಲ್ಲವಾದುದರಿಂದಲೂ, ಅವನು ಅಪ್ರತಿಮ (೭:೪೦೭).

**ಅಪ್ರಮಾಣ :** ನಾವು ಯಾವುದೇ ವಸ್ತುವನ್ನು ತಿಳಿದುಕೊಳ್ಳಬೇಕಾದರೆ ಇಂದ್ರಿಯ ಪ್ರತ್ಯಕ್ಷ, ಅನುಮಾನ, ಶಬ್ದ, ಉಪಮಾನ, ಮುಂತಾದ ಪ್ರಮಾಣಗಳು ಬೇಕು. ಆದರೆ ಪರಶಿವನ ಸ್ವರೂಪವನ್ನು ಯಾವ ಪ್ರಮಾಣದಿಂದಲೂ ತಿಳಿದುಕೊಳ್ಳಲಾಗುವುದಿಲ್ಲ. ಆದುದರಿಂದ ಪರಶಿವ ಅಪ್ರಮಾಣ.

**ಅಪ್ರಾಕೃತರು :** ಪ್ರಕೃತಿ ಅಥವಾ ಅಧೋಮಾಯೆಯ ಪಾಶವನ್ನು ಬಿಡಿಸಿಕೊಂಡವರು; ಪ್ರಾಣಲಿಂಗಿಗಳು.

**ಅಬದ್ಧ ಪಾಪಿ :** ಕಟ್ಟುಪಾಡುಗಳಿಲ್ಲದೆ ಪಾಪ ಮಾಡುವವನು. (೧೪:೨೭೪೫).

**ಅಭಿನ್ನ ಕ್ರೀಯಸ್ಥರು :** ನಿಜವಾದ ಭಕ್ತಿಗೆ ಕ್ರಿಯೆಗಳನ್ನು ಆಚರಿಸುವವರು; ಬಾಹ್ಯಕ್ರಿಯೆಗಳೇ ಭಕ್ತಿ ಎಂದು ಭ್ರಮಿತರಾಗದಿರುವವರು (೮:೪೬೩).

**ಅಭೇದ್ಯಲಿಂಗ :** ಯಾರಿಂದಲೂ ತಿಳಿದುಕೊಳ್ಳಲಾಗದ ಲಿಂಗ.

**ಅಭ್ಯಂತರ ಸ್ಥಾನ ನಾಲ್ಕು :** ಅಂತರಂಗವನ್ನು ಶುದ್ಧಿ ಮಾಡಿಕೊಂಡ ಸಾಧಕನು ತನ್ನ ಮನಸ್ಸನ್ನು ಅಂತರಂಗದ ನಾಲ್ಕು ಸ್ಥಾನಗಳಲ್ಲಿ - ಅಂದರೆ, ನಾಸಿಕಾಗ್ರ, ಭ್ರೂಮಧ್ಯ, ಬ್ರಹ್ಮರಂಧ್ರ, ಮತ್ತು ಚೌಕಮಧ್ಯದಲ್ಲಿ - ಕೇಂದ್ರೀಕರಿಸಿ, ಅಲ್ಲಿ ಪರಶಿವನನ್ನು ಕಾಣಲು ಪ್ರಯತ್ನಿಸುತ್ತಾನೆ. ಪರಶಿವನು ಆ ಸ್ಥಾನಗಳಲ್ಲೇ ಇದ್ದಾನೆ ಎಂಬುದು ಇದರ ಅರ್ಥವಲ್ಲ. ಆ ಸ್ಥಾನದ ಮೇಲೆ ಮನಸ್ಸನ್ನು ಕೇಂದ್ರೀಕರಿಸಿದರೆ ಪರಶಿವನನ್ನು ಕಾಣಬಹುದು ಎಂಬುದಷ್ಟೇ ಇದರ ಅರ್ಥ. ಪರಶಿವನು ಸರ್ವವ್ಯಾಪಿಯಾಗಿರುವುದರಿಂದ ನಾಸಿಕಾಗ್ರದಲ್ಲಿದ್ದಾನೆಂಬುದು ಕೇವಲ ಅಲ್ಪಸತ್ಯ (೭:೧೨೮೦).

**ಅಭ್ಯಾಸದ ಅನುಭಾವ :** ಇಲ್ಲಿ 'ಅನುಭಾವ' ಎಂಬ ಪದವು ಸಾಧಾರಣ ಅರ್ಥದಲ್ಲಿ ಬಳಕೆಯಾಗಿರದೆ, 'ಆಚಾರ' ಎಂಬರ್ಥದಲ್ಲಿ ಬಳಕೆಯಾಗಿದೆ. ಕೆಲವರು ಮನಸ್ಸಿಟ್ಟು ಆಚಾರ ಮಾಡದೆ, ಮನಸ್ಸೆಲ್ಲೋ ಇರುವಾಗ ಪೂಜೆ, ಮುಂತಾದ ಆಚಾರಗಳನ್ನು ಕೇವಲದ ಅಭ್ಯಾಸಬಲದಿಂದ ಮಾಡಿದರೆ, ಅವರ ಆಚಾರ (ಅನುಭಾವ) ಅಭ್ಯಾಸದ 'ಅನುಭಾವ' ಎನಿಸಿಕೊಳ್ಳುತ್ತದೆ (೪:೩೪).

**ಅಮೃತಧಾರಣ :** ಮೂಲಾಧಾರದಲ್ಲಿರುವ ವಾಯುವನ್ನು ನಿಯಂತ್ರಿಸಿ, ಮೂಲಜ್ವಾಲೆಯನ್ನು ಮೇಲೆಬ್ಬಿಸಿ, ನಾಲಗೆಯ ಮೂಲಕ, ಬ್ರಹ್ಮರಂಧ್ರದಿಂದ ಒಸರುವ ಅಮೃತವನ್ನು ಕುಡಿಯುವುದೇ ಅಮೃತಧಾರಣೆ; ಇದು ಆನಂದದ ಮೂರ್ತರೂಪ. ಈ ರೀತಿ ಅಮೃತಪಾನ ಮಾಡಿದವನು ಹರಿಹರಾದಿಗಳೊಡೆಯನಾಗುತ್ತಾನೆ (ಪರಶಿವನೊಂದಿಗೆ ಬೆರೆತು ಒಂದಾಗುತ್ತಾನೆ)ಯಲ್ಲದೆ, ಹಸಿವು, ತೃಷೆ, ಮುಂತಾದ ಬಾಧೆಗಳಿಂದ ಮುಕ್ತನಾಗುತ್ತಾನೆ. (೧೩:೧೫೯೮-೧೬೦೦).

**ಅರಿಕೆ :** ಅರಿಯುವಿಕೆ. ಜ್ಞಾತೃ ಜ್ಞೇಯಗಳನ್ನೊಳಗೊಂಡ (ವಸ್ತುಗಳ ಅಥವಾ ಅವುಗಳ ಭಾವಗಳ) ಜ್ಞಾನ.

**ಅರಿಕೆಗೊಡಲಾದವ :** ೧) ವಿವೇಕಿ; ಒಡಲಿನಲ್ಲಿ ಅರಿವುಳ್ಳವನು; ೨) ಪರಶಿವನನ್ನು ಹೃದಯದಲ್ಲಿ ಉಳ್ಳವನು; ಶಿವಯೋಗಿ (ನೋಡಿ : **ಅರಿವು**)

**ಅರಿದು ತಾನಾಗುವುದು ಮರೆದು ಜಗವಾಗುವುದು :** ಸ್ವಾನುಭಾವವು ಇನ್ನೂ ಸಿದ್ಧಿಸದ ಸಾಧಕನಿಗೆ ಇನ್ನೂ ಅರಿವು ಮೂಡಿಲ್ಲ ಎಂದರ್ಥ. ಅವನು ಜಗತ್ತನ್ನು ನಿತ್ಯ ನೋಡುತ್ತಿರುತ್ತಾನೆ. ಸ್ವಾನುಭಾವದ ಮೂಲಕ ಸಾಮರಸ್ಯ ಸಾಧಿಸಿದವನಿಗೆ ತಾನೇ ಅರಿವು ಎಂಬ ಅರಿವು ಮೂಡುತ್ತದೆ. ಅಂಥವನು ಪೂಜಕನಲ್ಲ; ತಾನೇ ಸ್ವಯಂಭೂವಿನಲ್ಲಿ ಒಂದಾಗಿರುವುದರಿಂದ, ತಾನು ಸ್ವಾನುಭಾವಿ ಎಂದು ಕರೆದುಕೊಳ್ಳುವುದಿಲ್ಲ (೮:೧೫೫೩).

**ಅರಿಯಬಾರದ ಬಸವನೆಂಬ ವಸ್ತು :** ಸಿದ್ಧರಾಮನು ಈ ವಚನದಲ್ಲಿ ಬಸವಣ್ಣನವರನ್ನು ಪರಶಿವನ ಮಟ್ಟಕ್ಕೇರಿಸಿ, ಅವರನ್ನು ಅರಿಯಬಾರದವನೆಂದು ಕರೆದಿದ್ದಾನೆ. ಪರಶಿವನ ಸ್ವರೂಪವನ್ನು ಅನುಭಾವದಲ್ಲಿ ಕಂಡಾಗ, ಅವನು ಅರಿಯಬಾರದವನಾಗಿರುತ್ತಾನೆ. ಬಸವಣ್ಣನವರನ್ನು ಮನುಷ್ಯರಂತೆ ನೋಡಿದಾಗ ಅವರನ್ನು ಯಾರು ಬೇಕಾದರೂ ಅರಿಯಬಹುದು; ಪರಶಿವನಂತೆ ನೋಡಿದಾಗ ಅದೇ ಬಸವಣ್ಣ 'ಅರಿಯಬಾರದ ವಸ್ತು'ವಾಗುತ್ತಾರೆ (೪:೨೭೬).

**ಅರಿವನರಿಯುವುದು :** ಪರಶಿವನನ್ನು (ಅರಿವನ್ನು) ಅರಿಯುವುದು. ಯಾವುದೇ ಒಂದು ವಸ್ತುವನ್ನು ತಿಳಿದಂತೆ ಪರಶಿವನನ್ನೂ ತಿಳಿಯುವುದು ಸಾಧ್ಯವಿಲ್ಲ. ಪರಶಿವನಲ್ಲಿ ಒಂದಾಗುವ ಮೂಲಕವಷ್ಟೇ ಪರಶಿವನನ್ನು ಅರಿಯಲು ಸಾಧ್ಯ (೮:೯೯).

**ಅರಿವಿನ ಮೂರ್ತಿ :** ಅರಿವು ಅಥವಾ ಚಿತ್ತು ಅಮೂರ್ತವಾಗಿದ್ದರೂ, ಆ ಅರಿವನ್ನು ಒಳಗಣ್ಣಿನಿಂದ 'ನೋಡ'ಬಹುದಾದುದರಿಂದ, ಅದು ಅರಿವಿನ ಮೂರ್ತಿ (೭:೧೩೦೩).

**ಅರಿವು (ಅರುಹು) :** ಇದಕ್ಕೆ ಕನಿಷ್ಠ ಮೂರು ರೀತಿಯಗಳಿವೆ. ೧. ವಿವೇಕ. ವಿವೇಕಿಯು ತನ್ನ ನೈಜಸ್ವರೂಪವಾವುದು, ತನ್ನ ಈಗಿನ ಸ್ಥಿತಿಗೆ ಕಾರಣವೇನು, ಮುಂತಾದವುಗಳನ್ನು ತಿಳಿದುಕೊಂಡಿದ್ದರೆ, ಅರಿವುಗೇಡಿ ದೇಹವೇ ಆತ್ಮವೆಂದೂ, ದೇಹಸೌಖ್ಯವೇ ಜೀವನದ ಪರಮಗುರಿ ಎಂದೂ ಭ್ರಮಿಸುತ್ತಾನೆ.

೨. ಜ್ಞಾತೃ-ಜ್ಞೇಯ, ಪೂಜ್ಯ-ಪೂಜಕ ಮುಂತಾದ ದ್ವೈತಗಳನ್ನೊಳಗೊಂಡ ಅರಿವು. 'ಅರಿವು ಉಳ್ಳನಕ್ಕ ಕುರುಹು' ಎಂಬ ವಚನದ ಪ್ರಕಾರ (೭:೧೦೭೯), ಅರಿವು ಎಂಬುದಕ್ಕೆ ಯಾವುದೇ ಇಂದ್ರಿಯಗೋಚರ ವಸ್ತುವಿನ ಜ್ಞಾನ ಎಂಬರ್ಥವಿದೆ. ಇಂಥ ಅರಿವು ವಿವೇಕಿಗೂ ಇದೆ, ಅರಿವುಗೇಡಿಗೂ ಇದೆ.

೩. ಜ್ಞಾನ, ಚಿತ್, ಅಥವಾ ಪರಶಿವ. ನಮಗೆ ಅನೇಕ ವಸ್ತುಗಳ ಜ್ಞಾನವಿದೆ; ಚಿತ್ತದಲ್ಲಿ ಅನೇಕರೀತಿಯ ಲೋಭ, ಮೋಹ, ಮುಂತಾದ ಸಂವೇಗಗಳೂ ಇವೆ; ಅದನ್ನು ಸಾಧಿಸಬೇಕು, ಇದನ್ನು ಸಾಧಿಸಬೇಕು ಎಂಬ ಆಸೆ, ಧ್ಯೇಯ ಇತ್ಯಾದಿಗಳೂ ಇವೆ; ನಾನು ಎಂಬ ಅಹಂಭಾವವು ಇವೆಲ್ಲದರ ಜೊತೆಯಲ್ಲಿಯೂ ಇರುತ್ತದೆ. ಆದರೆ ಅನುಭಾವದಲ್ಲಿ ಬುದ್ಧಿಯ, ಮನಸ್ಸಿನ, ಚಿತ್ತದ ಮತ್ತು ಅಹಂಕಾರದ ಕ್ರಿಯೆಗಳೆಲ್ಲ ಸ್ತಬ್ಧವಾಗುತ್ತದೆ. ಆಗ ಚಿತ್ ಅಥವಾ ಆತ್ಮ ಒಂದೇ ಉಳಿಯುತ್ತದೆ, ಹಾಗೂ ಅದಕ್ಕೆ ತಾನು ಅನಂತ ಪರಶಿವನಲ್ಲಿ ಒಂದಾಗುತ್ತಿದ್ದೇನೆಂಬ ಅನುಭವವಾಗುತ್ತದೆ. ಹೀಗೆ ಯಾವುದೇ ಸಂಗವಿಲ್ಲದ ಚಿತ್ತೇ ಜ್ಞಾನ ಅಥವಾ ಅರಿವು. ಈ ಅರಿವು ಯಾವುದೇ ವಸ್ತುವಿನ ಅರಿವಲ್ಲ, ಅದು ಶುದ್ಧ ಅರಿವು; ವಿವೇಕಿಯಲ್ಲಿ ಇರುವಂತೆ ಅವಿವೇಕಿಯಲ್ಲೂ ಇರುತ್ತದೆ. ಆದರೆ ಅದನ್ನು ಶಿವಯೋಗದ ಮೂಲಕ ಸಾಕ್ಷಾತ್ಕರಿಸಿಕೊಳ್ಳಬೇಕಷ್ಟೆ.

**ಅರಿವು ಕುರುಹ ನುಂಗುವುದು :** ಇಷ್ಟಲಿಂಗಧ್ಯಾನವು ಗಾಢವಾದಾಗ, ಧ್ಯಾನಿಯು ಕೊನೆಗೆ ಇಷ್ಟಲಿಂಗವನ್ನು ಕಾಣದೆ, ಚಿತ್ತನ್ನು (ಅರಿವನ್ನು) ಕಾಣತೊಡಗುತ್ತಾನೆ. ಇದನ್ನೇ ಆಲಂಕಾರಿಕವಾಗಿ 'ಅರಿವು ಕುರುಹನ್ನು (ಇಷ್ಟಲಿಂಗವನ್ನು) ನುಂಗುವುದು' ಎಂದು ಕರೆಯಲಾಗಿದೆ (ಅ:೨೯೧).

**ಅರಿವು ತಾನೆ ಭ್ರಮೆ :** ಲಿಂಗಾಂಗ ಸಾಮರಸ್ಯ ಸಾಧಿಸಿದವನಿಗೆ ಜ್ಞಾತೃ-ಜ್ಞೇಯ (ತಾನು ಇದಿರು)ಗಳ ಭೇದವಿಲ್ಲದಿರುವುದರಿಂದ, 'ನಾನು ಇಷ್ಟಲಿಂಗದ ಮೂಲಕ ಪರಶಿವನನ್ನು ಅರಿತಿದ್ದೇನೆ' ಎಂದರೆ, ಅದು ಕೇವಲ ಭ್ರಮೆಯ ಮಾತಾಗುತ್ತದೆ. ಏಕೆಂದರೆ 'ನಾನು ಅರಿತಿದ್ದೇನೆ' ಎಂದು ಹೇಳಿದಾಗ 'ನಾನು' (ಜ್ಞಾತೃಭಾವ) ಇನ್ನೂ ಇದೆ ಎಂದೂ, ಜ್ಞಾತೃಭಾವ ಇರುವವರೆಗೂ ಸಾಮರಸ್ಯ ಸಾಧ್ಯವಿಲ್ಲವೆಂದೂ ಅರ್ಥ (ಅ:೧೬೦೬).

**ಅರಿವು ಮರವೆ ಹಿಂಗುವುದು :** ಆಧ್ಯಾತ್ಮಿಕ ಜೀವನದ ಪರಮಗುರಿ ಅರಿವನ್ನು ಪಡೆಯುವುದು. ಆ ಅರಿವನ್ನು ಪಡೆದವನು ಸುಖದುಃಖಗಳನ್ನೂ ಚಳಿ-ಉಷ್ಣಗಳನ್ನೂ ಸಿಹಿ-ಕಹಿಗಳನ್ನೂ ಸಮಾನವಾಗಿ (ಪ್ರಸಾದವೆಂದು) ಸ್ವೀಕರಿಸುತ್ತಾನೆ. ಅಂಥವನು ಸಂಸಾರವು ಬಂಧನವೆಂದು ಅದನ್ನು ಧಿಕ್ಕರಿಸುವುದಿಲ್ಲ; ಮೋಕ್ಷ ಸುಖದಾಯಕವೆಂದು ಅದಕ್ಕೆ ಹಾತೊರೆಯುವುದಿಲ್ಲ. ಆದುದರಿಂದ ಅರಿವು ಮತ್ತು ಮರವೆಗಳ ವ್ಯತ್ಯಾಸ ಅವನಿಗೆ ಗೊತ್ತಿದ್ದರೂ, ಅವುಗಳಲ್ಲಿ ಒಂದು ಬೇಕು, ಮತ್ತೊಂದು ಬೇಡ ಎನ್ನುವುದಿಲ್ಲ. (ಆದರೆ ಅವನಲ್ಲಿ ಅರಿವು ಮೂಡಿರುತ್ತದೆ, ಮರೆವು ಹಿಂಗಿರುತ್ತದೆ) (ಅ:೯೦೫).

**ಅರಿವು ಶೂನ್ಯವಾಗುವುದು :** ಇದಕ್ಕೆ ಕನಿಷ್ಠ ಮೂರು ಅರ್ಥಗಳಾದರೂ ಇವೆ.

೧. ನಾನೆಂಬ ಅರಿವು ಇಲ್ಲವಾಗುವುದು. ಅನುಭಾವದಲ್ಲಿ ಐಕ್ಯಸ್ಥಿತಿಯನ್ನು ತಲುಪುವ ಮುನ್ನ ನಾನೆಂಬ ಅರಿವು ಇಲ್ಲವಾಗುತ್ತದೆ. ಇದನ್ನೆ ಅಹಂನಷ್ಟವೆನ್ನಲಾಗುತ್ತದೆ.

೨. ಅನುಭಾವದ ಒಂದು ಹಂತದಲ್ಲಿ ಆತ್ಮವು ಶೂನ್ಯ (ಪರಶಿವ)ವಾಗುತ್ತದೆ; ಶೂನ್ಯದಲ್ಲಿ ಅರಿವು ಒಂದಾಗುತ್ತದೆ.

೩. ಅನುಭಾವದ ಕೊನೆಯ ಹಂತದಲ್ಲಿ ಅನುಭಾವಿಗೂ ತನ್ನ ಬಗೆಗಿನ ಅರಿವೂ ಇಲ್ಲವಾಗುತ್ತದೆ. ಆಗ ಅನುಭಾವಿಯೂ ತನಗೇನಾಗುತ್ತಿದೆ ಎಂಬುದನ್ನು ಹೇಳಲು ಸಾಧ್ಯವಿಲ್ಲ; ಈ ಸ್ಥಿತಿಯಿಂದ ಹೊರಬಂದ ಮೇಲೆ ತಾನು ಯಾವ ಪರಶಿವನಲ್ಲಿ ಒಂದಾದನೋ ಆ ಪರಶಿವನಿಗೆ ಯಾವ ಗುಣವೂ ಇಲ್ಲ ಎನ್ನುತ್ತಾನೆ. ಯಾವ ಗುಣವೂ ಇಲ್ಲದ ಪರಶಿವನೇ ಶೂನ್ಯ ಅಥವಾ ಶೂನ್ಯಲಿಂಗ (ಅ:೨೦೩).

**ಅರಿವೆಂಬ ಭಾವ :** ಅರಿವು ನಿತ್ಯ ಮತ್ತು ಅನಂತವಾಗಿದ್ದರೂ, ಮಾನವರಲ್ಲಿ ಉಪಾಧಿಗಳ ದೆಸೆಯಿಂದಾಗಿ ಕಿರಿದಾಗಿ ತೋರುತ್ತದೆ. ಕಿರಿದಾಗಿ ತೋರುತ್ತಿರುವ ಅರಿವೇ ಭಾವ (ಜೀವಾತ್ಮ). ಜೀವಾತ್ಮನು ಪರಮಾತ್ಮನನ್ನು (ಅಪರಿಮಿತ ಅರಿವನ್ನು) ಸಾಕ್ಷಾತ್ಕರಿಸಿಕೊಳ್ಳಲು ಅರಿವಿನ ಕುರುಹಾದ ಇಷ್ಟಲಿಂಗವನ್ನು ಅರಿಯುತ್ತಾನೆ. ('ಆ ಕುರುಹನರಿಯುವುದಕ್ಕೆ ಅರಿವೆಂಬುದೊಂದು ಭಾವ') (ಅ:೧೪೨೫).

**ಅರಿವೇ ಮರೆವು, ಮರೆವೇ ಅರಿವು :** ಆಧ್ಯಾತ್ಮಿಕ ಪ್ರಗತಿಯ ಪ್ರಥಮ ಹಂತದಲ್ಲಿರುವವನು ತಾನು ಪರಶಿವನಿಂದ ಭಿನ್ನವೆಂದೂ, ತನಗಿಂತ ಭಿನ್ನವಾದ ಪರಶಿವನನ್ನು ಪೂಜಿಸಬೇಕೆಂದೂ ತಿಳಿದಿರುತ್ತಾನೆ. ತಾನು ಪರಮಾತ್ಮನಲ್ಲಿಯೇ ಇದ್ದೇನೆಂದು ಅವನು ಭಾವಿಸಿದರೂ, ಅದನ್ನು ಇನ್ನೂ ಸಾಕ್ಷಾತ್ಕರಿಸಿಕೊಂಡಿಲ್ಲದ ಕಾಲದಲ್ಲಿ ಅವನಿಗೆ ಅರಿವು-ಮರವೆಗಳ ವ್ಯತ್ಯಾಸ ಸ್ಪಷ್ಟವಾಗಿರುತ್ತದೆ. ಆದರೆ ಶಿವಸಾಕ್ಷಾತ್ಕಾರವಾದ ಮೇಲೆ ಅವನು ಯಾವಾಗಲೂ ಶಿವನೊಳಗೆ ಇರುವುದರಿಂದಲೂ ಅವನಿಗೆ ಅರಿವು ಮರವೆಗಳ ವ್ಯತ್ಯಾಸ ಗೊತ್ತಾಗುವುದಿಲ್ಲ. ಗಾಢನಿದ್ರೆಯಲ್ಲಿರುವವನಿಗೆ ನಿದ್ದೆ-ಎಚ್ಚರಗಳ ವ್ಯತ್ಯಾಸ ಹೇಗೆ ಗೊತ್ತಾಗುವುದಿಲ್ಲವೋ, ಹಾಗೆಯೇ ಲಿಂಗೈಕ್ಯನಿಗೆ ಅರಿವೇ ಮರೆವು, ಮರೆವೇ ಅರಿವು; ಆದರೆ ಎಚ್ಚರದಲ್ಲಿರುವವನಿಗೆ ನಿದ್ದೆ-ಎಚ್ಚರಗಳ ವ್ಯತ್ಯಾಸ ಹೇಗೆ ಗೊತ್ತಿರುವದೋ ಹಾಗೆಯೇ ಭ್ರಮಿತನಾದವನಿಗೆ (ಮರೆವಿಗೆ ಅಧೀನನಾದವನಿಗೆ) ಮರೆವು ಅರಿವುಗಳ ವ್ಯತ್ಯಾಸ ಗೊತ್ತು (ಅ:೧೬೦೬).

**ಅರಿಷಡ್ವರ್ಗ :** ಆಧ್ಯಾತ್ಮಿಕ ಸಾಧನೆ ಮಾಡಲು ಮನಸ್ಸು ಚಂಚಲವಾಗಿರಬಾರದು. ಅದನ್ನು ಚಂಚಲ ಮಾಡುವ ಯಾವುದೇ ಆದರೂ ಅದು ಆಧ್ಯಾತ್ಮದ ವೈರಿ. ನಮ್ಮ ಪುರಾತನರು ಇಂಥ ಆರು ವೈರಿಗಳನ್ನು ಗುರುತಿಸಿದ್ದಾರೆ. ಅವೆಂದರೆ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯ.

**ಅರುವತ್ತು ನಾಲ್ಕು ಶೀಲಗಳು :** "ಆಚಾರ", "ಕ್ರಿಯೆ" ಮತ್ತು "ಶೀಲ" ಪರ್ಯಾಯ ಪದಗಳಾದರೂ "ಶೀಲ" ಎಂಬುದನ್ನು ಹೆಚ್ಚಾಗಿ ಗುಣಕ್ಕೂ, "ಆಚಾರ" ಅಥವಾ "ಕ್ರಿಯೆ" ಎಂಬುದನ್ನು ಹೆಚ್ಚಾಗಿ ಗುಣದ ವ್ಯಕ್ತರೂಪವಾದ ಕಾರ್ಯಗಳಿಗೂ

ಅನ್ವಯಿಸುವಂತೆ ನಾವು ಬಳಸುತ್ತೇವೆ. ಒಬ್ಬ ವ್ಯಕ್ತಿಯಲ್ಲಿ ಶೀಲವಿದ್ದರೆ, ಅವನು ಸತ್ಕ್ರಿಯೆಗಳನ್ನು ಆಚರಿಸುತ್ತಾನೆ. ಆದರೆ ಕೆಲವು ವೇಳೆ ಆ ಗುಣವಿಲ್ಲದಿದ್ದರೂ ಅವನು ಆ ರೀತಿ ಆಚರಿಸಬಲ್ಲ. ಉದಾಹರಣೆಗೆ ಒಬ್ಬ ವ್ಯಕ್ತಿ ಸ್ವಭಾವತಃ ದಾನಶೀಲನಲ್ಲದಿದ್ದರೂ, ಯಾರದೋ ಬಲವಂತಕ್ಕೆ ಅಥವಾ ಯಾವುದೋ ಲಾಭದಾಸೆಗೆ ದಾನ ಮಾಡಬಹುದು. ಇಂಥ ಆಚಾರಗಳು ಡಂಭಾಚಾರಗಳೆನಿಸಿಕೊಳ್ಳುತ್ತವೆಯೇ ಹೊರತು, ಶೀಲಗಳೆನಿಸಿಕೊಳ್ಳುವುದಿಲ್ಲ.

ಧರ್ಮದಲ್ಲಿ ಶೀಲ ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತವೆ. ಏಕೆಂದರೆ ಶೀಲವೇ ವ್ಯಕ್ತಿಯನ್ನು ಶುದ್ಧೀಕರಿಸಿ, ಅವನಿಗೆ ಜ್ಞಾನವನ್ನು ಕೊಡುತ್ತದೆ. ಆದಕ್ಕೇ ಕೆಲವು ವಚನಕಾರರು ಆಚಾರವೇ ಜ್ಞಾನ, ಜ್ಞಾನವೇ ಆಚಾರವೆಂದು ಹೇಳಿದರೆ, ಮತ್ತೆ ಕೆಲವರು ಆಚಾರವಿಲ್ಲದವಂಗೆ ಜ್ಞಾನವಿಲ್ಲವೆಂದು ಹೇಳಿದ್ದಾರೆ.

ಇಂಥ ಆಚಾರ ಅಥವಾ ಶೀಲಗಳು ಅರವತ್ತು ನಾಲ್ಕು ಎಂದು ಕೊಂಡುಗುಳಿ ಕೇಶಿರಾಜನೂ ಪಾಲ್ಕುರಿಕೆ ಸೋಮನಾಥನೂ ನಿಗಧಿ ಪಡಿಸಿದ್ದಾರೆ. ವಚನಕಾರರು ಈ ಅರವತ್ತುನಾಲ್ಕು ಶೀಲಗಳ ಬಗ್ಗೆ ಅಲ್ಲಲ್ಲಿ ಪ್ರಸ್ತಾಪಿಸಿದ್ದರೂ, ಅವು ಯಾವುವೆಂಬುದನ್ನು ಯಾರೂ ಪಟ್ಟಿಮಾಡಿ ತಿಳಿಸಿಲ್ಲ. ಆದುದರಿಂದ ನಾವು ಸಧ್ಯಕ್ಕೆ ತೋಂಟದ ಸಿದ್ಧಲಿಂಗ ಶಿವಯೋಗಿಗಳು ರಚಿಸಿರುವ ಪಾಲ್ಕುರಿಕೆ ಸೋಮನಾಥ ಪುರಾಣವನ್ನು ಆಧರಿಸಿ, ಆ ಅರವತ್ತು ನಾಲ್ಕು ಶೀಲಗಳಾವವು ಎಂಬುದನ್ನು ಪಟ್ಟಿಮಾಡೋಣ. [ಸಿದ್ಧಲಿಂಗ ಶಿವಯೋಗಿಗಳ ಪ್ರಕಾರ, ಪಾಲ್ಕುರಿಕೆ ಸೋಮನಾಥನು ಈ ಎಲ್ಲ ಶೀಲಗಳನ್ನು ಆಚರಿಸುತ್ತಿದ್ದನು].

೧. ಶಿವಲಿಂಗಾಂಗ ಸಂಬಂಧಿಯಾದ ಮೇಲೆ ಅನ್ಯ ದೈವಗಳನ್ನು ನಂಬಬಾರದು;
೨. ಅಸತ್ಯ, ದ್ವಂದ್ವಾರ್ಥ, ವಂಚನೆ, ಔದಾಸೀನ್ಯ, ಪಂಕ್ತಿಭೇದ, ನಿರ್ದಯತೆ, ಭವಿಮಿಶ್ರ, ಮುಂತಾದ ಲೌಕಿಕ ಮಾರ್ಗದ ವರ್ಜನೆ;
೩. ನಾಯಿ, ಹಂದಿ, ಕೋಳಿಗಳನ್ನು ಮನೆಯಲ್ಲಾಗಲಿ ಮನೆಯ ಸುತ್ತಮುತ್ತಲಾಗಲಿ ಬಿಟ್ಟುಕೊಳ್ಳಬಾರದು;
೪. ಜಾತಿಸೂಕ, ಜನನಸೂತಕ, ರಜಸ್‌ಸೂತಕ, ಪ್ರೇತಸೂತಕ, ಉಚ್ಚಿಷ್ಟಸೂತಕ ಎಂಬ ಐದು ಸೂತಕಗಳನ್ನು ಪಾಲಿಸಬಾರದು;
೫. ಶುಭವಾರ, ಶುಭ ತಿಥಿ, ಶುಭಲಗ್ನ, ಮುಂತಾದ ಜೋತಿಷಿಗಳು ಪ್ರತಿಪಾದಿಸುವ ಕರ್ಮಕಾಂಡವನ್ನು ತ್ಯಜಿಸುವುದು;
೬. ಸೋಮವಾರ, ವ್ಯತೀಪಾತ (ಸೋಮವಾರದಂದು ಬರುವ ಹುಣ್ಣಿಮೆ), ಸಂಕ್ರಾಂತಿ, ಶಿವರಾತ್ರಿ, ಗ್ರಹಣಕಾಲದಲ್ಲಿ ಉಪವಾಸ, ಮುಂತಾದ ವ್ರತಗಳನ್ನು ಆಚರಿಸಬಾರದು;
೭. ತೀರ್ಥಕ್ಷೇತ್ರಗಳಿಗೆ ಸ್ಥಾವರಲಿಂಗ ಪೂಜೆ ಮಾಡುವ ಉದ್ದೇಶದಿಂದ ಹೋಗಬಾರದು;

೮. ಲಿಂಗಾರ್ಪಿತವ ಭವಿಗಳು ನೋಡದಂತೆ ಪಾತ್ರೆಗಳಿಗೆ ಪಾವುಡ ಕಟ್ಟುವುದು;

೯. ನೈಸರ್ಗಿಕ ಜಲವನ್ನು ಲಿಂಗಪೂಜೆಯಲ್ಲಿ ಬಳಸಲು ಯೋಗ್ಯವಾಗುವಂತೆ ಅದನ್ನು ಶಿವಮಂತ್ರದಿಂದ ಶುದ್ಧಿಮಾಡುವುದು;

೧೦. ಗುರುವಿನಿಂದ ತನ್ನ ಧರ್ಮಪತ್ನಿಗೂ ಶೀಲೋಪದೇಶ ಕೊಡಿಸುವುದು;

೧೧. ಭವಿಗಳೊಜನೆ ಬಂಧುತ್ವ ಮಿತ್ರತ್ವವನ್ನೂ ಬೆಳೆಸಬಾರದು. ಅವರೊಡನೆ ಕೊಡುಕೊಳ್ಳುವ ಯಾವ ವ್ಯವಹಾರವನ್ನೂ ಮಾಡಬಾರದು;

೧೨. ಗುರು ಮತ್ತು ಜಂಗಮರಲ್ಲಿ ಗುಣದೋಷಗಳನ್ನರಸದೆ, ಅವನು ಸಾಕ್ಷಾತ್ ಶಿವನೆಂದು ಭಕ್ತಿ ತೋರಿಸುವುದು;

೧೩. ಜಂಗಮಪಾದೋದಕದಿಂದ ಇಷ್ಟಲಿಂಗವನ್ನು ತೊಳೆದು, ಹಸ್ತದಲ್ಲಿ ಉಳಿದ ಪಾದೋದಕವನ್ನು (ಶೇಷಪಾದೋದಕವನ್ನು) ಸೇವಿಸಬೇಕು;

೧೪. ಗರ್ಭಿಣಿಗೆ ಎಂಟು ತಿಂಗಳು ತುಂಬಿದಾಗ ಜಂಗಮರಿಂದ ವಿಭೂತಿ ಧಾರಣೆ ಮಾಡಿಸಬೇಕು;

೧೫. ಶಿವಭಕ್ತರಲ್ಲಿ ಜಾತಿಭೇದ ಮಾಡಬಾರದು;

೧೬. ಶಿವಭಕ್ತರಲ್ಲಿ ಗುಣದೋಷ, ಜ್ಞಾನಾಜ್ಞಾನಗಳೆನ್ನೆಣಿಸಬಾರದು;

೧೭. ವಿಭೂತಿಧಾರಣೆ ಮಾಡಬೇಕೇ ಹೊರತು, ಕರ್ಪೂರ, ಕಸ್ತೂರಿ, ಕುಂಕುಮ ಮುಂತಾದವುಗಳನ್ನು ಲೇಪಿಸಿಕೊಳ್ಳಬಾರದು;

೧೮. ಎಮ್ಮೆಯ ಹಾಲು ಉಪಯೋಗಿಸಬಾರದು;

೧೯. ಭವಿಗಳಿಗಾಗಿ ಕೆಲಸಮಾಡಬಾರದು;

೨೦. ಉಪ್ಪನ್ನು ಸೇವಿಸಬಾರದು;

೨೧. ಹತ್ತಿಯನ್ನು ಹಿಂಜುವ ಬಿಲ್ಲಿಗೆ ಯಾವುದಾದರೊಂದು ಪ್ರಾಣಿಯ ತೊಗಲಿನ ಕಿವಿಯನ್ನು ಕರುಳಿನ ಹುರಿಯನ್ನು ಅಳವಡಿಸಲಾಗಿರುತ್ತದೆ. ಶರಣನಾದವನು ಅಂಥ ಬಿಲ್ಲಿನಿಂದ ಹತ್ತಿಯನ್ನು ಹಿಂಜಿಸದೆ ಬೇರೆ ಬಿಲ್ಲಿನಿಂದ, ಹಾಗೂ ಲಿಂಗವಂತರಿಂದಲೇ ಹತ್ತಿಯನ್ನು ಹಿಂಜಿಸಿ, ನೇಯಿಸಿ ಧರಿಸುವುದು;

೨೨. ಭವಿಗಳು ನೇಯ್ದ ಕಂಬಳಿಯನ್ನು ಉಪಯೋಗಿಸಬಾರದು;

೨೩. ಬಟ್ಟೆಗಳನ್ನು ಕೆರೆ ಅಥವಾ ಭಾವಿಯ ನೀರಿನಿಂದ ಒಗೆಯದೆ, ಚಿಲುಮೆಯ ನೀರಿನಿಂದಲೇ ಒಗೆಯುವುದು; ಏಕೆಂದರೆ ಚಿಲುಮೆ ನೀರು ನಿರ್ಮಲ.

೨೪. ಮಾತಿಗೆ ತಪ್ಪದಿರುವುದು;

೨೫. ಗುರುಲಿಂಗ ಜಂಗಮಕ್ಕೆ ಶ್ರದ್ಧೆನಿಷ್ಠೆಗಳಿಂದ ತನು ಮನ ಧನ ಅರ್ಪಿಸುವುದು;

೨೬. ಶಿವಭಕ್ತನೇ ಶ್ರೇಷ್ಠ ಕುಲದವನು; ಪಂಚಾಕ್ಷರಿಯೇ ಮಹಾಮಂತ್ರ ಎಂದು ತಿಳಿದು ಆಚರಿಸವುದು;

೨೭. ಮನೆಗೆ ಲಿಂಗಮುದ್ರೆಯನ್ನು ಬರೆಸುವುದು ಹಾಗೂ ಭವಿಗೆ ಕೈ ಮುಗಿಯದಿರುವುದು;
೨೮. ವೀರಶೈವ ಕುಂಬಾರರು ರಚಿಸಿದ ಮಡಕೆಗಳನ್ನಷ್ಟೇ ಬಳಸುವುದು;
೨೯. ಹಸು ಮತ್ತು ಎತ್ತುಗಳಿಗೆ ಲಿಂಗ ಮುದ್ರೆಯನ್ನೊತ್ತುವುದು;
೩೦. ಪಾತ್ರೆಗಳಿಗೂ ನೇಗಿಲು ಮುಂತಾದ ಉಪಕರಣಗಳಿಗೂ ಲಿಂಗ ಮುದ್ರೆಯನ್ನೊತ್ತುವುದು;
೩೧. ದನಕರುಗಳಿಗೆ ಲಿಂಗಧಾರಕರಿಂದಲೇ ಮೇವು ಮತ್ತು ನೀರನ್ನು ಒದಗಿಸುವುದು;
೩೨. ಹಸುಗಳ ಮೇಲೆ ಲಿಂಗಮುದ್ರೆಯಿರುವ ಹೋರಿಯನ್ನು ಮಾತ್ರ ಹಾರಿಸುವುದು;
೩೩. ಶಿವ ಭಕ್ತರಾಜರಿಂದ ಭೂಮಿಯನ್ನು ಕೊಂಡು, ಅದಕ್ಕೆ ಲಿಂಗ ಮುದ್ರಾಂಕಿತ ಕಲ್ಲುಗಳನ್ನು ನಾಲ್ಕುದಿಕ್ಕುಗಳಲಿಯೂ ನಿಲ್ಲಿಸಿ, ಅದರಲ್ಲೆ ಪೂಜೆಗೆ ಬೇಕಾದ ಹೂವನ್ನು ಬೆಳೆಯುವುದು.
೩೪. ಆ ಹೂದೋಟದ ಮೇಲೆ ಭವಿಗಳ ಕಣ್ಣು ಬೀಳದಂತೆ ಎತ್ತರವಾದ ಬೇಲಿ ಬೆಳೆಸುವುದು;
೩೫. ಲಿಂಗಮುದ್ರೆಯಿದ್ದ ಬಸವನ ತೊಗಲಿನಿಂದ ಮಾಡಿದ ಮಿಣಿಯನ್ನು ನೇಗಲಿಗೆ ಕಟ್ಟಬಾರದು;
೩೬. ಭವಿಗಳ ನುಡಿಯನ್ನು ಕೇಳಬಾರದು; ಭವಿಗಳನ್ನು ನೋಡಬಾರದು;
೩೭. ಭವಿಯನ್ನು ಹತ್ತಿರ ಸೇರಿಸಬಾರದು; ಅವರು ಬೆಳೆದ ಧಾನ್ಯಗಳನ್ನು ಬಳಸಬಾರದು;
೩೮. ರೋಗ ರುಜಿನಗಳನ್ನು ಗುಣಪಡಿಸಲು ಮಾಟ ಮಂತ್ರಗಳ ಮೊರೆ ಹೋಗದಿರುವುದು;
೩೯. ಲಿಂಗವನ್ನು ಬೇಡಿಕೊಳ್ಳಬಾರದು;
೪೦. ಸ್ವಾರ್ಥ ಬುದ್ಧಿಯಿಂದಲಾಗಲಿ ಡಂಭಾಚಾರಕ್ಕಾಗಲಿ ಲಿಂಗಪೂಜೆ ಮಾಡಬಾರದು;
೪೧. ಮಾಟತ್ರಯಗಳ ಮರ್ಮವನ್ನರಿದು ಅದರಂತೆ ಮಾಡುವುದು;
೪೨. ಶಿವಕತೆ, ಶಿವಮಂತ್ರ, ಇತ್ಯಾದಿಗಳಿಲ್ಲದ ಮಾತುಗಳನ್ನು ಕೇಳಿಸಿಕೊಳ್ಳಬಾರದು;
೪೩. ನವರತ್ನಗಳನ್ನೊಳಗೊಂಡ ವಸ್ತ್ರ ಒಡವೆಗಳನ್ನು ಧರಿಸಬಾರದು;
೪೪. ಜಂಗಮನಿಗೆ ಮೊದಲು ಮದುವೆ ಮಾಡಿ, ಸಾಕಷ್ಟು ಧನವಸ್ತ್ರ ಒಡವೆಗಳನ್ನು ಅರ್ಪಿಸಿ, ಆಮೇಲೆ ಭಕ್ತರು ಮದುವೆಯಾಗಿ ಭೋಗಿಸಬೇಕು.
೪೫. ತನುವು ಆಚಾರಗಳನ್ನು ಮಾಡಬೇಕು; ಮನಸ್ಸು ಜ್ಞಾನವನ್ನು ಪಡೆಯಬೇಕು. ಆಧ್ಯಾತ್ಮದಲ್ಲಿ ಆಚಾರ, ಮತ್ತು ಜ್ಞಾನ ಎರಡೂ ಬೇಕು; ಹಾಗೆಯೇ ಆಚಾರವನ್ನು ಬೋಧಿಸಿದ ಗುರುವೂ, ಜ್ಞಾನವನ್ನು ಬೋಧಿಸಿದ ಜಂಗಮ ಇಬ್ಬರೂ ಆವಶ್ಯಕ.
೪೬. ಬೆಳಿಗ್ಗೆ ಸೂರ್ಯನನ್ನೂ ರಾತ್ರಿ ಚಂದ್ರನನ್ನೂ ನೋಡುವ ಮೊದಲು ಶಿವಶರಣರ ದರ್ಶನ ಮಾಡಬೇಕು;

೪೭. ದೇಶ ಸಂಚಾರ ಮಾಡುವುದು;

೪೮. ಮನೆಯನ್ನು ದೊಡ್ಡ ಕಲ್ಲುಗಳ ತಳಪಾಯದ ಮೇಲೆ ಕಟ್ಟಬೇಕು; ಹಾಗೂ ಹೊರಗೆ ಹೋಗುವಾಗ ಎತ್ತುಗಳನ್ನು ಒಳಗೆ ಕಟ್ಟಬೇಕು;

೪೯. ಎಲ್ಲವೂ ಶಿವಾಧೀನವಾದುದರಿಂದ, ಎಲ್ಲವೂ ಶಿವನಾಜ್ಞೆಯಂತೆ ನಡೆಯುತ್ತದೆ ಎಂದು ತಿಳಿದು ಆಚರಿಸಬೇಕೇ ಹೊರತು, ಆಚಾರಗಳ ಅರ್ಥವನ್ನು ತಿಳಿಯದೆಯೇ ಅಂಧಶ್ರದ್ಧೆಯಿಂದ ಆಚಾರ ಮಾಡಬಾರದು;

೫೦. ದಶವಾಯುಗಳ ಚಲನೆಯು ನಮ್ಮ ಮನಸ್ಸನ್ನು ಅಸ್ಥಿರಗೊಳಿಸಿ, ನಮ್ಮನ್ನು ದುರ್ಮಾರ್ಗಕ್ಕೆಳೆಯುವಂತೆ ಮಾಡಬಹುದು; ಶರಣನು ಅವುಗಳಿಗೆ ಬಲಿಯಾಗಬಾರದು;

೫೧. ಕಾಮಕ್ರೋಧ ಲೋಭ ಮೋಹ ಮದ ಮಾತ್ಸರ್ಯಗಳನ್ನು ಸಂಹರಿಸುವುದು;

೫೨. ಕಾಯಕಲ್ಪಿತಗಳಿಗೆ ಬಲಿಯಾಗದಿರುವುದು;

೫೩. ಜಾಗ್ರತ, ಸ್ವಪ್ನ, ಸುಷುಪ್ತಿಯಲ್ಲಿ ಲಿಂಗವನ್ನಲ್ಲದೇ ಮತ್ತೇನನ್ನೂ ನೆನೆಯದಿರುವುದು;

೫೪. ಶರಣರಲ್ಲಿ ಶಿವನಿದ್ದಾನೆಂಬ ಮಾತನ್ನು ಭಕ್ತರಿಗೆ ಮನದಟ್ಟಾಗುವಂತೆ ತಿಳಿಸಿ ಹೇಳುವುದು;

೫೫. ದಶವಿಧ ಪಾದೋದಕ ಮತ್ತು ಪ್ರಸಾದಗಳನ್ನು ತಪ್ಪದೇ ಆಚರಿಸುವುದು;

೫೬. ಎಲ್ಲ ಇಂದ್ರಿಯಗಳನ್ನೂ ಲಿಂಗದ ಬಾಯಿಗಳನ್ನಾಗಿ ಮಾಡಿ, ಎಲ್ಲ ಸುಖವನ್ನು ಲಿಂಗ ಭೋಗದ ನಂತರವೇ ಭೋಗಿಸುವುದು;

೫೭. ಷಟ್‌ಸ್ಥಲ ಮಾರ್ಗವನ್ನು ತಪ್ಪದೇ ಆಚರಿಸುವುದು;

೫೮. ಭಕ್ತನೇ ಬಯಸಿ ಪಡುವುದು ಅಂಗಭೋಗ (ಆದುದರಿಂದ ಅದು ಕೀಳು) ಮತ್ತು ಬಯಸದೇ ಬಂದುದು ಲಿಂಗಭೋಗ (ಆದುದರಿಂದ ಅದು ಮೇಲು) ಎಂದು ಪ್ರಸಾದ ಬುದ್ಧಿಯಿಂದ ಭೋಗಿಸುವುದು;

೫೯. ಮೂವತ್ತಾರು ವಿಧದ ಅರ್ಪಣೆ ಮಾಡುವುದು;

೬೦. ಶೈವರಂತೆ ಆಹ್ವಾನ ವಿಸರ್ಜನೆ ಮಾಡದೆ, ಆತ್ಮನೇ ಶಿವನೆಂದು ತಿಳಿದು ಸದಾ ಶಿವಾನುಭವಿಯಾಗಿರುವುದು;

೬೧. ಅಣಿಮಾ, ಮಹಿಮಾ ಇತ್ಯಾದಿ ಮಹಾಸಿದ್ಧಿಗಳನ್ನರಸದೆ (ಶಾಂಕರ) ಅದ್ವೈತ ವೇದಾಂತವನ್ನು ತ್ಯಜಿಸಿ, ದ್ವೈತ ಭಾವವನ್ನು ದೂರವಿಟ್ಟು, ಹೊರಗೂ ಶಿವನೆ ಒಳಗೂ ಶಿವನೆ ಎಂದು ಎಲ್ಲದೂ ಶಿವಮಯವೆಂದು ತಿಳಿಯುವುದು;

೬೨. ಮಾಡುವುದೆಲ್ಲವೂ ಶಿವನಿಗಾಗಿಯೇ ಹೊರತು ತನಗಲ್ಲ ಎಂದು ತಿಳಿದು ಅದರಂತೆ ಆಚರಿಸುವುದು;

೬೩. ದೇಹವಿದ್ದರೂ ದೇಹದ ದುರ್ಗುಣಗಳಿಲ್ಲದಿರುವುದು, ಪ್ರಾಣವಿದ್ದರೂ ಪ್ರಾಣದ ದುರ್ಗುಣಗಳಿಲ್ಲದಿರುವುದು; ದೇಹ, ಪ್ರಾಣ ಮತ್ತು ಮನಸ್ಸೆಲ್ಲವನ್ನೂ ಲಿಂಗಮಯವನ್ನಾಗಿ ಮಾಡುವುದು; ತಾನೆಂಬುದಲ್ಲದೆ ಇರುವದೆಲ್ಲವೂ ಶಿವನೆಂದು

ತಿಳಿಯುವುದು:

೬೪. ಇರುವುದೆಲ್ಲವೂ ಶಿವನೆಂದು ತಿಳಿದರೂ ಜಗತ್ತು ಮಿಥ್ಯೆಯೆಂಬ ವೇದಾಂತದ ನಿಲವನ್ನು ಒಪ್ಪಿಕೊಳ್ಳದಿರವುದು: ಜ್ಞಾನವಿಲ್ಲದ ಶೀಲ, ಶೀಲವಿಲ್ಲದೆ ಜ್ಞಾನ ಎರಡನ್ನು ಆಚರಿಸದೆ, ಜ್ಞಾನ ಶೀಲಗಳಿಗಿರುವ ಅಂತರವನ್ನು ಅಳಿಸಿ, ತಾನು ಶಿವನಲ್ಲಿ ಅಭಿನ್ನಭಾವದಿಂದ ಬೆರೆತಿದ್ದೇನೆಂಬುದನ್ನು ಅನುಭವಿಸುತ್ತಾ ಪರಮಾನಂದದಿಂದ ಇರುವುದು.

ಶೀಲವೆಂದರೆ ಆಧ್ಯಾತ್ಮಿಕ ಪ್ರಗತಿಗೆ ಸಹಾಯಕವಾಗುವ ಧೋರಣೆ ಮತ್ತು ಕ್ರಿಯೆ ಎಂದಾದರೆ, ೩೪ನೆಯ ಶೀಲವಾಗಲಿ, ೪೭ ಅಥವಾ ೪೮ನೆಯ ಶೀಲವಾಗಲಿ ಹೇಗೆ ಶೀಲವೆನ್ನಿಸಿಕೊಳ್ಳುತ್ತವೆ ಎಂಬುದು ಪ್ರಶ್ನೆಯಾಗೇ ಉಳಿಯುತ್ತದೆ.

ವಚನಕಾರರು ಈ ೬೪ ಶೀಲಗಳನ್ನು ಪಾಲ್ಕುರಿಕೆ ಸೋಮನಂತೆ (ಅಥವಾ ತೋಂಟದ ಸಿದ್ಧಲಿಂಗ ಶಿವಯೋಗಿಗಳಂತೆ) ಪಟ್ಟಿಮಾಡದಿದ್ದರೂ, ಬಹಳಷ್ಟನ್ನು ಎಲ್ಲರೂ ಬೇರೆ ಬೇರೆ ಶಬ್ದಗಳಲ್ಲಿ ಆಗಲೇ ತಿಳಿಸಿದ್ದಾರೆ. ಇದರಲ್ಲಿ ಬಹಳಷ್ಟು ಚೆನ್ನಬಸವಣ್ಣನವರ ಐವತ್ತು ಆಚಾರಗಳ ಪಟ್ಟಿಯಲ್ಲೂ ಇದೆ. ಆದರೆ ಪಂಚಾಚಾರಗಳಲ್ಲಿ ಒಂದಾದ ಗಣಾಚಾರವು ಈ ಅರವತ್ತು ನಾಲ್ಕು ಶೀಲಗಳ ಪಟ್ಟಿಯಲ್ಲಿ ಕಾಣದಿರುವುದು ಸೋಜಿಗದ ಸಂಗತಿ. ಅಷ್ಟೇ ಅಲ್ಲ, ಚಿಲುಮೆಯ ನೀರನ್ನೆ ಬಳಸುವ ಶೀಲವನ್ನಾಗಲಿ ಉಪ್ಪು ಬಳಸದಿರುವ ಶೀಲವನ್ನಾಗಲಿ ಕೆಲವು ವಚನಕಾರರು ಆಧ್ಯಾತ್ಮಿಕ ಗುಣವೆಂದು ಒಪ್ಪಿಕೊಳ್ಳದೆ ಅದನ್ನು ಸ್ಪಷ್ಟ ಮಾತುಗಳಲ್ಲಿ ಖಂಡಿಸಿದ್ದಾರೆ. (ನೋಡಿ : **'ಆಚಾರ', 'ಆಚಾರ ಪ್ರಭೇದಗಳು', 'ಶೀಲ, ವ್ರತ, ನೇಮ'**)

**ಅರುವತ್ತು ಮೂರು ಪುರಾತನರು :** ಬಸವಾದಿ ಶರಣರಿಗಿಂತ ಹಿಂದೆಯೇ ಇದ್ದು, ಬಸವಾದಿ ಶರಣರಿಗೆ ಆದರ್ಶಪ್ರಾಯರಾದ ಶಿವಭಕ್ತರು. ಇವರೆಲ್ಲರೂ ತಮಿಳುನಾಡಿನಲ್ಲಿ ಪ್ರಚಲಿತವಿರುವ ಶೈವ ಸಿದ್ಧಾಂತಿಗಳಾಗಿದ್ದು, ಇವರಲ್ಲಿ ಕೆಲವರು ತಮ್ಮ ಅತ್ಯುಗ್ರ ಭಕ್ತಿಗೂ ಮತ್ತೆ ಕೆಲವರು ವ್ಯಾವಹಾರಿಕ ಜೀವನ ಮತ್ತು ಅಧ್ಯಾತ್ಮ ಜೀವನಗಳನ್ನು ಸಮನ್ವಯ ಮಾಡಿದುದಕ್ಕೂ ಹೆಸರಾಗಿದ್ದಾರೆ. ವಚನಕಾರರಿಗೆ ಇವರೆಂದರೆ ಬಹಳ ಗೌರವ ಹಾಗೂ ಭಕ್ತಿ. ಅರವತ್ತು ಮೂರು ಪುರಾತನರೆಂದೂ, ಆದ್ಯರೆಂದೂ, ಹೆಸರಾದ ಇವರಲ್ಲಿ ಎಲ್ಲರ ಹೆಸರನ್ನೂ ವಚನಕಾರರು ಹೇಳುವುದಿಲ್ಲ. ಕಾರಿಕಾಲಮ್ಮೆ, ಕಣ್ಣಪ್ಪ, ಸಿರಿಯಾಳ, ನಂಬಿ, ಸಿಂಧು ಬಲ್ಲಾಳ, ಮೆರೆ ಮಿಂಡದೇವ ಮುಂತಾದ ಕೆಲವರಷ್ಟನ್ನೇ ಅವರು ಸ್ಮರಿಸಿಕೊಳ್ಳುತ್ತಾರೆ. ಈ ಶಿವಭಕ್ತರ (ಅರವತ್ತು ಮೂರು ಪುರಾತನರ) ಹೆಸರುಗಳು ಹೀಗಿವೆ :

೧. ಮುರುಘರು; ೨. ಚೊಕ್ಕನರಾಯರು; ೩. ಕಾರಿಕಾಲಾಂಬೆ; ೪. ಕಡವೂರಕಾರಿ; ೫. ತಿರುನೀಲಕಂಠರು; ೬. ಚಿರುಪುಲಿಯಾಂಡರು; ೭. ಸೋಮಾಸಿಮಾರರು;

೮. ಅಚ್ಯುತರು; ೯. ಮೊನೆಯಾಂಡರು; ೧೦. ಮಾನಕಂಜರು; ೧೧. ಪಗಲ್ಪೋಳರು; ೧೨. ಕಲಿಕಾಮದೇವರು; ೧೩. ತಿರುಮೂಲದೇವರು; ೧೪. ಪಗಲ್ತೊಣೆಯಾಂಡರು; ೧೫. ಅರಿವಾಳ್ತಾಂಡರು; ೧೬. ನೈಸಭಕ್ತರು; ೧೭. ತಿರುನೀಲಕ್ಕರು; ೧೮. ತಿರುಕುರೂಪಿತೊಂಡರು; ೧೯. ತಿರುನಾಳ್ಪೋವರು; ೨೦. ಏಣಾದಿನಾಥರು; ೨೧. ಸೇದಿರಾಜರು; ೨೨. ರುದ್ರಪಶುಪತಿಯರು; ೨೩. ಕಂಗುಲಿಯ ಕಲಿಯಾಂಡರು; ೨೪. ಇರಿಭಕ್ತರು; ೨೫. ಕಳಚೆಂಗುಪೆರುಮಾಳೆರು; ೨೬. ನಮಿನಂದಿಯರು; ೨೭. ಅಮರನೀತಿಗಳು; ೨೮. ಕಲಿಕಂಭನು; ೨೯. ಕಣ್ಣಪ್ಪದೇವರು; ೩೦. ನಾಟ್ಯಮಿಗೆ ತಾಂಡಿಯು; ೩೧. ಒಲಘಂಡ ಮೂರ್ತಿಗಳು; ೩೨. ಅಃಪೂತಿಯರು; ೩೩. ವಾಗೀಶರು; ೩೪. ತಿರುಜ್ಞಾನಸಂಬಂಧಿಗಳು; ೩೫. ಕುಲಶ್ಚರಿಯರು; ೩೬. ಸುಂದರಪಾಂಡ್ಯ ಮತ್ತು ಮಂಣಾಯಕ್ಕರಸಿಯರು; ೩೭. ಪೇಳ್ಕುತ್ತರು; ೩೮. ಸಾಂಖ್ಯಾನಾಯರು; ೩೯. ಕುಲಚಂಗರು; ೪೦. ಓಹಿಲರು; ೪೧. ಕಳಚತ್ತಿಯಾಂಡರು; ೪೨. ಚಿರುತೊಣೆಯಾಂಡರು; ೪೩. ಕೊಲ್ಪುಲಿಯಾಂಡರು; ೪೪. ತಂಡೇಶ; ೪೫. ಕಲಿಯನಯನಾರು; ೪೬. ಐಡಿಯರು; ೪೭. ಭಕ್ತ ಸಿರಿಯಾಳ (ಅಥವಾ ಚಿರುತೊಂಡರು); ೪೮. ಅತಿ ಭಕ್ತನು; ೪೯. ಕಣಂಬುಲ್ಲ ನಂಬಿಯು; ೫೦. ಎಳೆಯಾಂಡ ಗುಡಿಮಾರರು; ೫೧. ಅಡನಘೆಯ ಪೆರುಮಾಳೆಯರು; ೫೨. ಇಹಃಪಗೆಯಾಂಡನು (ಅಥವಾ ಸಿಂಧು ಬಲ್ಲಾಳನು); ೫೩. ಮೆರೆಮಿಂಡದೇವರು; ೫೪. ಚೇರಮನು; ೫೫. ಕುರುಂಬರು; ೫೬. ಜಡೆಯನಯನಾರು; ೫೭. ಸೌಂದರನಂಬಿ; ೫೮. ಪೊಸಲೆಯಾಂಡ; ೫೯. ಕಲಿಗಣನಾಥ; ೬೦. ನರಸಿಂಗ ಮೊನೆಯಾರ್; ೬೧. ತಿರುನೀಲಕಂಠರು; ೬೨. ಊರ್ಪ ಶಿಲೆಯಾಂಡರು ಹಾಗೂ ೬೩. ಗಣನಾಥ ಮಾಹೇಶ್ವರರ್.

**ಅರುಹಿರಿಯುರು :** ಇದರ ಅರ್ಥ ಪ್ರಾಯಶ: ಅರಿವುಳ್ಳ ಹಿರಿಯರು (ಜ್ಞಾನ ವೃದ್ಧರು) ಎಂದಿರಬಹುದು. (೭:೪೫೪)

**ಅರುಹು ಕರಿಗೊಂಡಾತ :** ನಾನು ಎಂಬ ಪ್ರತ್ಯೇಕತಾಭಾವ (ಅರುಹು) ಬೆಂದು ಕರಿಕಾದವನು. ಇದು ಲಿಂಗಾಂಗ ಸಾಮರಸ್ಯ ಸಾಧಿಸಿದವನಿಗಷ್ಟೇ ಸಾಧ್ಯ (೫:೬೯೭).

**ಅರ್ತಿಅಭ್ಯಾಸಮುಚ್ಚು ಕಾರಣದಿಂದ ಮಾಡುವ ಭಕ್ತಿ :** ಯಾವುದೋ ಸ್ವಾರ್ಥಕ್ಕಾಗಿ ಮಾಡುವ ಭಕ್ತಿ; ಮನಸ್ಸೆಲ್ಲಿಯೋ ಇದ್ದು ಕೇವಲ ಅಭ್ಯಾಸ ಬಲದಿಂದ ಯಾಂತ್ರಿಕವಾಗಿ ಮಾಡುವ ಭಕ್ತಿ; ಶಿವನನ್ನು ಮೆಚ್ಚಿಸಲು ಮಾಡುವ ಭಕ್ತಿ; ಇವೆಲ್ಲದರಿಂದಾಗಿ, ದ್ರವ್ಯ ನಷ್ಟವೇ ವಿನಾ, ಶಿವನನ್ನು ಮೆಚ್ಚಿಸುವ ಭಕ್ತಿಯಾಗುವುದಿಲ್ಲ (೯:೨೩೪).

**ಅರ್ಪಿತ :** ಲಿಂಗ, ಗುರು ಅಥವಾ ಜಂಗಮಕ್ಕೆ ಅರ್ಪಿವಾಗುವ ವಸ್ತು. ಇದು ಆಹಾರ ಪದಾರ್ಥವಾಗಿರಬಹುದು; ಅಥವಾ ಕರಣೇಂದ್ರಿಯಾದಿಗಳಾಗಿರಬಹುದು; ಯಾವುದೇ ಅರ್ಪಿತಯೋಗ್ಯವಾದ ವಸ್ತು.

**ಅರ್ಪಿತ ಅವಧಾನ ಮುಖ :** ಯಾವ ಯಾವ ಲಿಂಗದ ಮುಖಗಳಿಗೆ ಯಾವ ಯಾವ ಪದಾರ್ಥಗಳನ್ನು ಅರ್ಪಿಸಬೇಕೆಂಬ ವಿಧಿ. ಉದಾಹರಣೆಗೆ ಲಿಂಗದ ರುದ್ರಮುಖಕ್ಕೆ ಗಂಧವನ್ನು ಅರ್ಪಿಸಬೇಕು. ಅರ್ಪಣಾಭಾವವು ಪ್ರಸಾದಿಸ್ಥಲದ ಪ್ರಮುಖ ಲಕ್ಷಣ. ಆ ಸ್ಥಲದ ಭಕ್ತಿಗೆ ಅವಧಾನ ಭಕ್ತಿ ಒಂದು ಹೆಸರು.

**ಅರ್ಪಿತವಲ್ಲದ ಆಪ್ಯಾಯಿನಿ :** ಲಿಂಗದ ಬಗೆಗೆ ಸರಿಯಾದ ಅರಿವು ಇಲ್ಲದವನು ನಿತ್ಯತೃಪ್ತನಾದ ಲಿಂಗಕ್ಕೆ (ಪರಶಿವನಿಗೆ) ಹಲವಾರು ರೀತಿಯ ಭಕ್ಷ್ಯಭೋಜ್ಯಗಳನ್ನು ಅರ್ಪಿಸಿ, ಅವುಗಳನ್ನು ಪ್ರಸಾದವನ್ನಾಗಿ ಮಾಡಿಕೊಂಡು, ಆಸ್ವಾದಿಸಿ ತೃಪ್ತಿಪಡುತ್ತಾನೆ. ಆದರೆ, ಲಿಂಗೈಕ್ಯನಾದ ಶರಣನಿಗೆ ಯಾವುದೇ ರೀತಿಯ ಸ್ವಾರ್ಥ ಆಸೆಗಳಿಲ್ಲವಾದುದರಿಂದ, ಅವನು ಏನನ್ನೂ ಲಿಂಗಕ್ಕೆ ಅರ್ಪಿಸದೆಯೇ, ಅಂದರೆ, ಏನನ್ನೂ ಪ್ರಸಾದವೆಂದು ಸ್ವೀಕರಿಸದೆಯೇ, ತೃಪ್ತಿಪಟ್ಟುಕೊಳ್ಳುತ್ತಾನೆ. ಅವನಿಗೆ ತಾನು ಶಿವನಲ್ಲಿ ಒಂದಾಗಿರುವುದೇ ಒಂದು ಘನವಾದ ತೃಪ್ತಿ (೩:೭೬೯).

**ಅಲಕ್ಷ್ಯ :** ನಾವು ಭೌತ ವಸ್ತುಗಳ ಕಡೆಗೆ ನಮ್ಮ ಲಕ್ಷ್ಯವನ್ನು ಹರಿಸಬಹುದು; ಕೆಲವು ವೇಳೆ ಅವುಗಳಿಗೆ ಸಂಬಂಧಿಸಿದ ಚಿಂತನೆಗಳ ಕಡೆಗೂ ಲಕ್ಷ್ಯಹರಿಸಬಹುದು. ಆದರೆ ಚಿದ್ವಸ್ತುವಾದ ಪರಶಿವನ ಕಡೆಗೆ ಅದೇ ತರಹದ ಲಕ್ಷ್ಯಹರಿಸಲು ಸಾಧ್ಯವಿಲ್ಲ. ಆದುದರಿಂದ ಪರಶಿವನು ಅಲಕ್ಷ್ಯ (೮:೧೮೫).

**ಅಲಿಂಗಿ :** ಇಷ್ಟಲಿಂಗವಿಲ್ಲದವರು [''ಲಿಂಗದೇಹಿತನಾದ ಬಳಿಕ ಅಲಿಂಗಿಗಳ ಸಂಗವಳಿದಿರಬೇಕು'' (೪:೧೫೧೨)].

**ಅಲುಪ್ತಶಕ್ತಿತ್ವಾನುಭಾವ ಪ್ರಕಾಶ :** ಅನುಭಾವಿಯು ಅನುಭಾವದಲ್ಲಿ ಪ್ರಕಾಶವನ್ನು ಆಧ್ಯಾತ್ಮಿಕ ಕಣ್ಣಿನಿಂದ ನೋಡಿದಾಗ ಅದರಲ್ಲೇ ಲೀನವಾದಾಗ ಅವನಿಗೆ ಅಪರಿಮಿತ (ಅಲುಪ್ತ) ಕ್ರಿಯಾಶಕ್ತಿ (ಕಾರ್ಯಶಕ್ತಿ) ಲಭಿಸುತ್ತದೆ ಹಾಗೂ ತಾನು ಭಕ್ತ, ತಾನು ನೋಡುತ್ತಿರುವುದು ಆಚಾರಲಿಂಗ ಎಂಬ ಭೇದವೂ ಮರೆಯಾಗುತ್ತದೆ (೧೨:೯೦೪).

**ಅವಧಾನ :** ಎಚ್ಚರಿಕೆ, ಜಾಗರೂಕತೆ. ಆದರೆ ಇದು ಸಾಧಾರಣ ಜಾಗರೂಕತೆಯಲ್ಲ. ಭಕ್ತನಾದವನು ಸದಾ ಪರಶಿವನನ್ನು ನೆನೆಯುತ್ತಾ, ತಾನು ಮಾಡುವ ಪ್ರತಿಯೊಂದು ಕ್ರಿಯೆ, ಯೋಚನೆ, ಆಸೆ, ಇತ್ಯಾದಿಗಳೆಲ್ಲವೂ ಪರಶಿವನಿಗಾಗಿಯೇ ಎಂದು ಚಿಂತಿಸಬೇಕು. ಹೀಗೆ ಅವನು ಮತ್ತು ಶಿವಾವಧಾನ, ಎಳ್ಳು ಮತ್ತು ಅದರಲ್ಲಿರುವ ಎಣ್ಣೆಯಂತೆ ಒಂದಾಗಿರಬೇಕು (೯:೨೩೧).

**ಅವಧಾನದ ಮನದ ಕೊನೆಯ ಮೊನೆ :** ಪ್ರಸಾದಿ ಸ್ಥಲದಲ್ಲಿರುವ ಸಾಧಕನು ತಾನು ನೋಡುವ, ಮುಟ್ಟುವ, ರುಚಿಸುವ, ಎಲ್ಲ ವಸ್ತುಗಳನ್ನೂ ಮೊದಲು ಲಿಂಗಕ್ಕೆ ಅರ್ಪಿಸಿ ಅನಂತರ ಅವುಗಳನ್ನು ಪ್ರಸಾದವೆಂಬಂತೆ ಸ್ವೀಕರಿಸಬೇಕು. ಹೀಗೆ ತಾನು ಅನುಭವಿಸುವ ಮೊದಲೆ

ಎಲ್ಲವನ್ನೂ ಲಿಂಗಕ್ಕೆ ಅರ್ಪಿಸಬೇಕಾದರೆ, ಪ್ರತಿಯೊಂದು ಇಂದ್ರಿಯದ ಭಾಗದಲ್ಲಿಯೂ ಲಿಂಗವಿದೆ ಎಂದು ತಿಳಿಯಬೇಕಾಗುತ್ತದೆ. ಆಗ, ಅವನು ಬಹಳ ಎಚ್ಚರ (ಅವಧಾನದಿಂದ) ಇರಬೇಕಾಗುತ್ತದೆ: ಅರ್ಥಾತ್, ಪ್ರತಿ ಇಂದ್ರಿಯಕ್ಕೂ ರೂಪರಸ ಇತ್ಯಾದಿಗಳು ಒಳಬರಲು ಬಾಗಿಲಿರುವಂತೆ, ಅವುಗಳನ್ನು ಅನುಭವಿಸುವ ಮನಸ್ಸಿಗೂ ಒಂದು ಬಾಗಿಲಿರಬೇಕಾಗುತ್ತದೆ. ಈ ಬಾಗಿಲನ್ನೆ ಆಲಂಕಾರಿಕವಾಗಿ ಮನದ ಕೊನೆಯ ಮೊನೆ ಎಂದು ಕರೆಯಲಾಗಿದೆ (೮:೧೧೩೨).

**ಅವಧಾನ ಭಕ್ತಿ :** (ನೋಡಿ : **ಭಕ್ತಿ**).

**ಅವಧಾನಿ :** ಏಕಾಗ್ರತೆಯನ್ನು ಸಾಧಿಸಿದವನು; ಅವಧಾನ ಭಕ್ತಿಯನ್ನು ಆಚರಿಸುವವನು. ಶಿವಯೋಗವು ಲಿಂಗಪೂಜೆ, ವಿಭೂತಿ ಧಾರಣೆ, ಇತ್ಯಾದಿ ಆಚಾರಗಳಿಂದ ಪ್ರಾರಂಭವಾದರೂ, ಅದು ಅಲ್ಲಿಗೇ ಮುಗಿಯುವುದಿಲ್ಲ. ಸಾಧಕನು ಲಿಂಗಧ್ಯಾನವನ್ನೂ ಮಾಡಬೇಕು. ಅವಧಾನವಿಲ್ಲದೆ ಲಿಂಗಧ್ಯಾನವಿಲ್ಲ. ಅವಧಾನವು ಧ್ಯಾನವನ್ನೂ ಅಲ್ಲದೆ, ಲಿಂಗವನ್ನೇ ಯಾವಾಗಲೂ ಧ್ಯಾನಿಸುತ್ತಾ ಅದಕ್ಕಾಗಿಯೇ ಎಲ್ಲ ಯೋಚನೆ, ಎಲ್ಲ ಕ್ರಿಯೆ, ಎಲ್ಲ ಅನುಭವಗಳನ್ನು ಅರ್ಪಿಸಲೇಬೇಕು ಎಂಬ ಭಾವವನ್ನು ಒಳಗೊಳ್ಳುತ್ತದೆ.

**ಅವತಾರ ಮೂರ್ತಿಗಳು :** ಅಮೂರ್ತ ಪರಬ್ರಹ್ಮ ಅಥವಾ ಪರಶಿವನ ಅಂಶವನ್ನು ಪಡೆದು, ಮೂರ್ತಿವೆತ್ತು, ಪರಲೋಕದಿಂದ ಕೆಳಗೆ ಬಂದವರು (೭:೩೬೮).

**ಅವಲೋಕನ ಪ್ರಸಾದ :** ಗುರುವು ಅನೇಕ ಜನ್ಮಗಳಲ್ಲಿ ತಾಪತ್ರಯಕ್ಕೊಳಗಾದ ಭಕ್ತನನ್ನು ಕೃಪಾವಲೋಕನ ಮಾಡಿದರೆ, ಅದು ಅವಲೋಕನ ಪ್ರಸಾದ (೧೧:೧೦೨೩).

**ಅವಸ್ಥಾತ್ರಯ :** ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿ ಮೂರು ಅವಸ್ಥೆಗಳು. ಇವು ಜೀವನಿಗೆ ತಪ್ಪಿದ್ದಲ್ಲ. (ನೋಡಿ : **ಅವಸ್ಥೆ**)

**ಅವಸ್ಥೆ :** ಪುರಾತನ ಭಾರತೀಯರ ಪ್ರಕಾರ, ಜೀವಕ್ಕೆ (೧) ಜಾಗ್ರತ, (೨) ಸ್ವಪ್ನ, (೩) ಸುಷುಪ್ತಿ ಮತ್ತು (೪) ತುರೀಯ ಎಂಬ ನಾಲ್ಕು ಅವಸ್ಥೆಗಳಿವೆ. ಜಾಗ್ರತಾವಸ್ಥೆಯಲ್ಲಿ ಮನುಷ್ಯನು ತನ್ನ ಮನಸ್ಸು, ಬುದ್ಧಿ, ಅಹಂ ಮತ್ತು ಜ್ಞಾನೇಂದ್ರಿಯಗಳನ್ನು ಉಪಯೋಗಿಸಿಕೊಂಡು ಜ್ಞಾನವನ್ನು ಪಡೆಯುತ್ತಾನೆ ಹಾಗೂ ಜಗತ್ತಿನೊಡನೆ ವ್ಯವಹರಿಸುತ್ತಾನೆ. ಇಲ್ಲಿ ಅವನು ತನ್ನ ವಿವೇಚನೆಯನ್ನು ಬಳಸಿಕೊಳ್ಳಬಹುದು ಅಥವಾ ಅದನ್ನು ಕಳೆದುಕೊಂಡು ಅಮಾನುಷವಾಗಿ, ಮೂರ್ಖನಂತೆ ವರ್ತಿಸಬಹುದು. ಅಂತೂ ಅವನಿಗೆ ತನ್ನ ಸುಖದುಃಖಗಳನ್ನು ನಿಯತ್ರಿಸುವ ಸ್ವಾತಂತ್ರ್ಯವಿದೆ. ಸ್ವಪ್ನಾವಸ್ಥೆಯಲ್ಲಿ ಬುದ್ಧಿಯು ತನ್ನದೆ ಆದ ಪ್ರಪಂಚವನ್ನು ಸೃಷ್ಟಿಸಿಕೊಂಡು, ಅದರಲ್ಲೆ ವ್ಯವಹರಿಸುವುದರಿಂದ ಮನುಷ್ಯನಿಗೆ ಇಂದ್ರಿಯಗಳ ಸಹಾಯವಿಲ್ಲದೆಯೇ ಸುಖದುಃಖಗಳನ್ನು ನಿಯಂತ್ರಿಸುವ ಸ್ವಾತಂತ್ರ್ಯವಿಲ್ಲ. ಸುಷುಪ್ತಿ (ಗಾಢನಿದ್ರೆ)ಯಲ್ಲಿ ಜ್ಞಾನೇಂದ್ರಿಯಗಳಾಗಲಿ ಅಂತಃ

ಕರಣಗಳಾಗಲಿ (ಮನಸ್ಸು, ಬುದ್ಧಿ ಮತ್ತು ಅಹಂಕಾರಗಳ ಸಂಪುಟವಾಗಲಿ) ಕೆಲಸಮಾಡುತ್ತಿಲ್ಲ. ತಾತ್ಕಾಲಿಕವಾಗಿ ಆತ್ಮವು ಅವುಗಳೊಂದಿಗೆ ತನ್ನ ಸಂಬಂಧವನ್ನು ಕಡಿದುಕೊಂಡಿದೆ. ಆದುದರಿಂದ ಆ ಸ್ಥಿತಿಯಲ್ಲಿ ದುಃಖವೂ ಇಲ್ಲ, ಸುಖವೂ ಇಲ್ಲ. ಆ ಅವಸ್ಥೆಯಲ್ಲಿ ಅಹಂಕಾರವಿಲ್ಲದಿದುರಿಂದ 'ನಾನು ನಿದ್ರಿಸುತ್ತಿದ್ದೇನೆ' ಎಂದು ಸುಷುಪ್ತಿಗೊಳಗಾದವನು ಹೇಳುವಂತಿಲ್ಲ. ಆದರೆ ಎಚ್ಚರವಾದನಂತರ ಜೀವನು ಮತ್ತೆ ಸುಖ ದುಃಖಗಳಿಗೊಳಗಾಗುತ್ತಾನೆ. ತುರೀಯಾವಸ್ಥೆಯೂ ಒಂದು ರೀತಿಯಲ್ಲಿ ಸುಷುಪ್ತಿಯನ್ನೇ ಹೋಲುತ್ತದೆ. ಹೇಗೆಂದರೆ, ಅಲ್ಲಿಯೂ ಸಹ ಜೀವವೊಂದೇ ಇದ್ದು, ಅದು ಅಂತಃಕರಣ ಹಾಗೂ ಜ್ಞಾನೇಂದ್ರಿಯಗಳೊಡನೆ ತನ್ನ ಸಂಬಂಧವನ್ನು ಕಳೆದುಕೊಂಡಿದೆ. ಆದರೆ ಅದು ಒಂದು ಮುಖ್ಯ ಅಂಶದಲ್ಲಿ ಉಳಿದ ಅವಸ್ಥೆಗಳಿಂದ, ಅದರಲ್ಲೂ ಸುಷುಪ್ತಿಯಿಂದ ಭಿನ್ನವಾಗಿದೆ. ತುರೀಯವನ್ನು ಮುಟ್ಟಿದವನು ಸುಖದುಃಖಗಳನ್ನು ಮೀರಿದವನು.

ತುರೀಯುವನ್ನು ಕೆಲವರು ಅಷ್ಟಾಂಗಯೋಗದ ಸಮಾಧಿ ಎನ್ನುತ್ತಾರೆ. ತುರೀಯದಲ್ಲಿರುವ ಕೆಲವು ಹಂತಗಳನ್ನು ನಾವು ಗಮನಿಸಬೇಕು. ಮೊದಲು ಯೋಗಿಯು ಒಂದೇ ವಸ್ತುವನ್ನು ಕುರಿತು ಧ್ಯಾನಿಸುತ್ತಾನೆ ಅಥವಾ ಏಕಾಗ್ರಚಿತ್ತದಿಂದ ನೋಡುತ್ತಾನೆ. ಆಗ ಅವನಿಗೆ ಆ ವಸ್ತುವಲ್ಲದೆ ಮತ್ತೇನೂ ಕಾಣದು. ಅನಂತರ ಆ ವಸ್ತುವೂ ಕಣ್ಣಿನಿಂದ ಅಥವಾ ಮನಸ್ಸಿನಿಂದ ಮರೆಯಾಗಿ, ಅವನಿಗೆ ತಾನೊಬ್ಬನೆ (ತನ್ನ ಆತ್ಮ ಒಂದೇ) ಇರುವುದರ ಅನುಭವವಾಗುತ್ತದೆ. ಹೀಗೆ ಆತ್ಮಕ್ಕೆ ತನ್ನ ಅರಿವಾಗುವುದೇ ತುರೀಯಾವಸ್ಥೆ.

**ಅವಾಂತರ ಮುಕ್ತರು :** ಕೆಲವರು ಮುಕ್ತರನ್ನು ನಿತ್ಯಮುಕ್ತ ಮತ್ತು ಅವಾಂತರ ಮುಕ್ತ ಎಂದು ಎರಡು ಭಾಗವಾಗಿ ವಿಂಗಡಿಸುತ್ತಾರೆ. ಸಂಸಾರಬಂಧನದಲ್ಲಿದ್ದು ಕೊನೆಗೆ ಮುಕ್ತಿ ಪಡೆಯುವವರು ಅವಾಂತರ ಮುಕ್ತರು; ಮಾನವರೆಲ್ಲಾ ಈ ವರ್ಗಕ್ಕೆ ಸೇರುತ್ತಾರೆ. ಭೃಂಗಿ ಮುಂತಾದ ಪ್ರಮಥರೆಲ್ಲಾ ನಿತ್ಯ ಮುಕ್ತರು. ಅವರು ಯಾವತ್ತೂ ಸಂಸಾರಬಂಧನಕ್ಕೊಳಗಾಗಿಲ್ಲ. ಅದೇ ರೀತಿ ಬ್ರಹ್ಮ, ವಿಷ್ಣು, ಈಶ್ವರ, ರುದ್ರ, ಮೊದಲಾದ ಅಧಿದೇವತೆಗಳೂ ಸಹ ನಿತ್ಯ ಮುಕ್ತರು.

**ಅವಿದ್ಯಾಂಗನೆ :** ಅವಿದ್ಯೆಯೆಂಬ ಸ್ತ್ರೀ (ನೋಡಿ : **ಮರೆವು**) (೧೨:೩೧)

**ಅವಿರಳವಾದವನು :** ಸಂದುಬಿಡದಂತೆ ತುಂಬಿಕೊಂಡ ಪರಶಿವನಂತಾದವನು; ಮುಕ್ತ.

**ಅವಿರಳ ಪ್ರಸಾದ :** ಆಹಾರ ಪಾನೀಯಗಳನ್ನಷ್ಟೇ ಅರ್ಪಿಸಿ ಪ್ರಸಾದ ಮಾಡಿಕೊಳ್ಳುವವನು ಪ್ರಸಾದಕ್ಕೆ ಬಹಳ ಸಂಕುಚಿತ ಅರ್ಥವನ್ನು ನೀಡುತ್ತಿದ್ದಾನೆ. ಅದೇ ಪ್ರಸಾದವಾದರೆ ಅದು ವಿರಳವಾಗುತ್ತದೆ. ಏಕೆಂದರೆ ನಾವು ಪ್ರಸಾದ ಸ್ವೀಕರಿಸಬೇಕಾದರೆ, ಲಿಂಗವನ್ನು ಪೂಜಿಸಲೇಬೇಕು; ಅದನ್ನು ನಿಯಮಿತ ವೇಳೆಯಲ್ಲಿ ಮತ್ತು ನಿಯಮಿತ ಸ್ಥಳದಲ್ಲಿ

ಮಾಡಬೇಕು; ಎಲ್ಲ ರೀತಿಯ ವಸ್ತುಗಳನ್ನು ಅರ್ಪಿಸದೇ ಕೇವಲ ವಿಶಿಷ್ಟ ರೀತಿಯ ವಸ್ತುಗಳನ್ನಷ್ಟೇ ಅರ್ಪಿಸಬೇಕು. ಒಂದು ವೇಳೆ ಪರಶಿವ ಎಲ್ಲೆಲ್ಲಿಯೂ ಇದ್ದಾನೆ, ನಾವು ಸೇವಿಸುವ ಗಾಳಿ, ನೋಡುವ ನೋಟ, ಕೇಳುವ ಶಬ್ದ, ನೋಡುವ ಕೇಳುವ ಇಂದ್ರಿಯಗಳು, ಅಂತಃಕರಣ ಚತುಷ್ಟಯಗಳು ಎಲ್ಲವೂ ಪರಮಾತ್ಮನ ಪ್ರಸಾದವೆಂದು ತಿಳಿಯುವವರಿಗೆ, ಯಾವಾಗಲೂ ಪ್ರಸಾದ ಲಭ್ಯ. ಅಂತಹ ಪ್ರಸಾದ ವಿರಳವಲ್ಲ, ಅವಿರಳ. (೧೪:೨೩೯೮)

**ಅವಿರಳ ಲಿಂಗ :** ಲಿಂಗವೆಂದರೆ ಚಿತ್ತು, ಅರಿವು, ಎಂದಾದರೆ, ಅದಕ್ಕೆ ಭೌತಿಕ ಗುಣಗಳಾದ ರೂಪುರಸಗಂಧಾದಿ ಗುಣಗಳಾಗಲೀ, ಅಲ್ಲಿ, ಇಲ್ಲಿ, ದೊಡ್ಡದು, ಸಣ್ಣದು ಮುಂತಾದ ಪ್ರಾದೇಶಿಕ ಗುಣಗಳಾಗಲಿ ಇಲ್ಲ. ಭೌತ ವಸ್ತುಗಳ ಮಧ್ಯೆ ಶೂನ್ಯಪ್ರದೇಶವಿರುವಂತೆ ಲಿಂಗದ (ಚಿತ್ತಿನ) ಮಧ್ಯೆ ಶೂನ್ಯಪ್ರದೇಶವಿಲ್ಲವಾದುದರಿಂದ ಲಿಂಗ ಅವಿರಳ (೯:೮೭೨).

**ಅವಿರಳ ಶಿವಯೋಗಿ :** ಪರಶಿವನಲ್ಲಿ ಬೆರೆತ ಮೇಲೆ, ತಾನು ಅವನಿಂದ ಭಿನ್ನವಲ್ಲ, ಅವನಲ್ಲಿಯೇ, ಅವನ ಭಾಗ (ಅಂಗ)ವಾಗಿರುವುದಾಗಿ ತಿಳಿಯುವ ಶಿವಯೋಗಿ.

**ಅವಿರಳ ಸಮರಸ :** ಸಂಸಾರಬಂಧನದಿಂದ ಮುಕ್ತನಾಗಿ ಶಿವನೊಂದಿಗೆ ಸಾಮರಸ್ಯವನ್ನು ಸಾಧಿಸಿಕೊಂಡವನು ಮತ್ತೆಂದೂ ಬಂಧನಕ್ಕೊಳಗಾಗಲಾರ; ಅಷ್ಟೇ ಅಲ್ಲ, ಸಮುದ್ರದಲ್ಲಿ ಬೆರೆತ ನದಿಯನ್ನು ಹೇಗೆ ಅದರಿಂದ ಪ್ರತ್ಯೇಕಿಸಲಾಗುವುದಿಲ್ಲವೋ ಹಾಗೆಯೇ ಶಿವನೊಂದಿಗೆ ಸಾಮರಸ್ಯಪಡೆದ ಅಂಗನನ್ನೂ ಶಿವನಿಂದ ಪ್ರತ್ಯೇಕಿಸಲಾಗುವುದಿಲ್ಲ. ಅಂಥ ಅವಿಭಾಜ್ಯ ಸಮರಸವೇ ಅವಿರಳ ಸಾಮರಸ್ಯ.

**ಅಷ್ಟಾತ್ಮಗಳು :** ಜೀವಾತ್ಮ, ಅಂತರಾತ್ಮ, ಪರಮಾತ್ಮ, ನಿರ್ಮಲಾತ್ಮ, ಶುದ್ಧಾತ್ಮ, ಜ್ಞಾನಾತ್ಮ, ಭೂತಾತ್ಮ, ಮಹಾತ್ಮ. (೧೩:೧೮೮೧).

**ಅಷ್ಟಗಣೇಶ್ವರರು :** ಪುರಾಣಗಳ ಪ್ರಕಾರ, ಶಿವನು ಕೈಲಾಸದಲ್ಲಿ ತನ್ನ ಗಣಗಳ ಜೊತೆಯಲ್ಲಿ ಇರುತ್ತಾನೆ. ಈ ಗಣಗಳಿಗೆ ಎಂಟು ಜನ ಅಧಿಪತಿಗಳಿರುತ್ತಾರೆ. ಅವೆಂದರೆ-ಉಮೆ, ಚಂಡೀಶ್ವರ, ನಂದಿಕೇಶ್ವರ, ಮಹಾಕಾಳ, ಭೃಂಗಿರಿಟಿ, ಗಣಪತಿ, ವೃಷಭ, ಷಣ್ಮುಖ.

**ಅಷ್ಟತನು :** ಇದಕ್ಕೆ ಎರಡು ಅರ್ಥಗಳಿವೆ : (೧) ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ, ಆತ್ಮ, ಸೂರ್ಯ ಮತ್ತು ಚಂದ್ರ ಎಂಬ ಘಟಕಗಳಿಂದ ವಿಶ್ವವು ರಚನೆಯಾಗಿದ್ದು, ಅಂಥ ವಿಶ್ವವು ಪರಶಿವನ ಶರೀರವೆಂದು ಕೆಲವು ವಚನಕಾರರು ಪರಿಗಣಿಸುತ್ತಾರೆ. ಅವನ ಶರೀರ (ತನು)ದಲ್ಲಿ ಎಂಟು ಘಟಕಗಳಿರುವುದರಿಂದ ಅದು ಅಷ್ಟತನು ಎನಿಸಿಕೊಳ್ಳುತ್ತದೆ. (೩:೧೦೦೦)

(೨) ಸ್ಥೂಲತನು, ಸೂಕ್ಷ್ಮತನು, ಕಾರಣತನು, ನಿರ್ಮಲತನು, ಚಿನ್ಮಯತನು, ಆನಂದತನು, ಚಿದ್ರೂಪತನು, ಶುದ್ಧತನು. (೧೩:೧೮೮೧).

ಅಷ್ಟತನು ನಿವೃತ್ತಿ ಮಾರ್ಗ : ಕೆಲವು ವಚನಕಾರರು ಶ್ವೇತಾಶ್ವತರ ಉಪನಿಷತ್ತನ್ನು ಅನುಸರಿಸಿ, ಮನುಷ್ಯನು ಅಷ್ಟತನು ಉಳ್ಳ ಪಿಂಡಾಂಡವೆಂದೂ, ಪರಶಿವನು ಅಷ್ಟತನುವುಳ್ಳ ಬ್ರಹ್ಮಾಂಡವೆಂದೂ ಹೇಳುವರು. ಪಿಂಡಾಂಡದಲ್ಲಿರುವ ಎಂಟು ಅಂಶಗಳೆಂದರೆ - ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ, ಆತ್ಮ, ಸೂರ್ಯ ಮತ್ತು ಚಂದ್ರ. ಈ ತತ್ವಗಳನ್ನು ಇಲ್ಲದಂತೆ ಮಾಡಿದರೆ ಅಥವಾ ಈ ತತ್ವಗಳು ಕಾರ್ಯನಿರ್ವಹಿಸದಂತೆ ಮಾಡಿದರೆ ದುಃಖಗಳು ಇಲ್ಲದಂತಾಗುತ್ತವೆ ಎಂದು ಅವರು ಹೇಳುವುದಿಲ್ಲ; ಅದರ ಬದಲು ಆ ತತ್ವಗಳನ್ನು ಚಿತ್ ತತ್ವಗಳನ್ನಾಗಿ ಪರಿವರ್ತಿಸಿದರೆ ಅವು ದುಃಖಕ್ಕೆ ಕಾರಣವಾಗುವುದರ ಬದಲು ದುಃಖದಿಂದ ಬಿಡುಗಡೆಯಾಗಲು ಹಾಗೂ ಆನಂದವನ್ನುಂಟುಮಾಡಲು ಸಹಾಯಕವಾಗುತ್ತವೆ ಎಂದು ಹೇಳುತ್ತಾರೆ. ಈ ಪರಿವರ್ತನಕಾರ್ಯಕ್ಕೆ ನಿವೃತ್ತಿಯೆಂದು ಹೆಸರು. ಈಗ ಈ ಅಷ್ಟತನುವನ್ನು ನಿವೃತ್ತಿಮಾಡುವ ಮಾರ್ಗವಾವುದೆಂಬುದನ್ನು ನೋಡೋಣ :

ಪೃಥ್ವೀ ತತ್ವವು ಕರ್ಮೇಂದ್ರಿಯಗಳಿಗೆ ಕಾರಣ. ಶಿವಯೋಗಿಯು ಭಕ್ತನನ್ನು ನಿಜದೃಷ್ಟಿಯಿಂದ ನೋಡಿ, ಸುಚಿತ್ತವೆಂಬ ಸೂಕ್ಷ್ಮ (ಆಧ್ಯಾತ್ಮಿಕ) ಹಸ್ತದಿಂದ ಮುಟ್ಟಿದರೆ ಆ ಪೃಥ್ವಿಯು ಚಿದ್‌ಪೃಥ್ವಿಯಾಗುವುದು (ಅಂದರೆ, ಪೃಥ್ವಿಯ ದುರ್ಗುಣಗಳೆಲ್ಲ ನಿವೃತ್ತಿಯಾಗುವುದು); ಹಾಗೂ ಭಕ್ತನು ಸತ್ಕ್ರಿಯೆಗಳಲ್ಲಿ ನಿರತನಾಗುವನು; ಅಪ್‌ತತ್ವವು ಜ್ಞಾನೇಂದ್ರಿಯಗಳಿಗೆ ಕಾರಣ. ಶಿವಯೋಗಿಯು ಮಹೇಶನನ್ನು ನಿಜದೃಷ್ಟಿಯಿಂದ ನೋಡಿ, ಸುಬುದ್ಧಿಯೆಂಬ ಸೂಕ್ಷ್ಮ ಹಸ್ತದಿಂದ ಮುಟ್ಟಿದರೆ, ಅಪ್ಪುವಿನ ದುರ್ಗುಣಗಳೆಲ್ಲಾ ನಿವೃತ್ತಿ ಹೊಂದಿ, ಅದು ಚಿದಪ್ ಎನಿಸಿಕೊಳ್ಳುವುದು; ಇದರಿಂದಾಗಿ, ಅವನ ಜ್ಞಾನೇಂದ್ರಿಯಗಳು ಸಮ್ಯಗ್‌ಜ್ಞಾನವನ್ನು ಪಡೆಯಲು ಸಹಾಯಕವಾಗುವವು;

ಅಗ್ನಿತತ್ವವು ಇಂದ್ರಿಯ ವಿಷಯಗಳಿಗೆ ಕಾರಣ. ಶಿವಯೋಗಿಯು ಪ್ರಸಾದಿಯನ್ನು ನಿಜದೃಷ್ಟಿಯಿಂದ ನೋಡಿ ನಿರಹಂಕಾರವೆಂಬ ಹಸ್ತದಿಂದ ಮುಟ್ಟಿದರೆ, ಅಗ್ನಿತತ್ವದ ದುರ್ಗುಣಗಳೆಲ್ಲಾ ನಿವೃತ್ತಿಹೊಂದಿ, ಅದು ಚಿದಗ್ನಿ ಎನಿಸಿಕೊಳ್ಳುವುದು. ಇದರಿಂದಾಗಿ, ಪ್ರಸಾದಿಯು ಪ್ರತಿಯೊಂದು ಇಂದ್ರಿಯ ವಿಷಯವನ್ನೂ (ರೂಪರಸಾದಿ ವಿಷಯಗಳನ್ನು) ಶಿವನ ಪ್ರಸಾದವೆಂದು ತಿಳಿಯುವನು.

ವಾಯುತತ್ವವು ಪ್ರಾಣಾದಿ ವಾಯು ಪಂಚಕಗಳಿಗೆ ಕಾರಣ; ಇವುಗಳ ವಿವಿಧ ಚಲನೆಯಿಂದಾಗಿ ನಮ್ಮಲ್ಲಿ ಅನೇಕ ಗುಣದೋಷಗಳುಂಟಾಗುವವು. ಶಿವಯೋಗಿಯು ಪ್ರಾಣಲಿಂಗಿಯನ್ನು ನಿಜದೃಷ್ಟಿಯಿಂದ ನೋಡಿ, ಸುಮನವೆಂಬ ಹಸ್ತದಲ್ಲಿ ಸ್ಪರ್ಶಿಸಿದರೆ, ವಾಯುತತ್ವದ ದುರ್ಗುಣಗಳೆಲ್ಲಾ ನಿವೃತ್ತಿ ಹೊಂದಿ, ಅದು ಚಿದ್ವಾಯು ಎನಿಸಿಕೊಳ್ಳುವುದು. ಇದರಿಂದ ವಾಯುಪಂಚಕಗಳು ಸರಿಯಾದ ರೀತಿಯಲ್ಲಿ ಕೆಲಸಮಾಡಿ, ಪ್ರಾಣಲಿಂಗಿಯು ಅನುಭಾವಕ್ಕೆ ಬೇಕಾದ ಏಕಾಗ್ರತೆಯನ್ನು ಪಡೆಯಲು ಸಹಾಯಕವಾಗುವವು.

ಆಕಾಶತತ್ವವು ಅಂತಃಕರಣಗಳಿಗೆ ಕಾರಣ. ಅಂತಃಕರಣಗಳೇ ನಮ್ಮ ಎಲ್ಲ ಕರ್ಮಗಳ ಮೂಲ; ನಮ್ಮ ಎಲ್ಲ ಸುಖದುಃಖಗಳಿಗೆ ನಮ್ಮ ಕರ್ಮಗಳೇ ಮೂಲ. ಶಿವಯೋಗಿಯು ಶರಣನನ್ನು ನಿಜದೃಷ್ಟಿಯಿಂದ ನೋಡಿ, ಸುಜ್ಞಾನವೆಂಬ ಹಸ್ತದಿಂದ ಮುಟ್ಟಿದರೆ ಅವನಲ್ಲಿದ್ದ ಆಕಾಶತತ್ವದ ದುರ್ಗುಣಗಳೆಲ್ಲ ನಿವೃತ್ತಿ ಹೊಂದಿ, ಅದು ಚಿದಾಕಾಶವೆನಿಸಿಕೊಳ್ಳುವುದು. ಇದರಿಂದಾಗಿ ಅವನ ಅಂತಃಕರಣಗಳು ಶುದ್ಧವಾಗುವುವಲ್ಲದೆ, ಅವನ ನಡೆ ನುಡಿಗಳೂ, ಪವಿತ್ರವಾಗುವುವು; ಲಿಂಗನಿಷ್ಠೆಯೂ ವೃದ್ಧಿಸುತ್ತದೆ.

ಆತ್ಮತತ್ವವು, ಜಾಗ್ರತ, ಸ್ವಪ್ನ, ಮುಂತಾದ ಅವಸ್ಥೆಗಳಿಗೆ ಕಾರಣ. ಈ ಅವಸ್ಥೆಗಳಲ್ಲಿ ನಾವು ಅನೇಕ ರೀತಿಯ ಸುಖದುಃಖಗಳನ್ನು ಅನುಭವಿಸುತ್ತೇವೆ. ಶಿವಯೋಗಿಯು ಐಕ್ಯನನ್ನು ನಿಜದೃಷ್ಟಿಯಿಂದ ನೋಡಿ, ಸದ್ಭಾವವೆಂಬ ಸೂಕ್ಷ್ಮಹಸ್ತದಿಂದ ಮುಟ್ಟಿದರೆ, ಅವಸ್ಥೆಗಳಲ್ಲಿ ಪಡುವ ಸುಖದುಃಖಗಳು ಮಾಯವಾಗಿ ಆತ್ಮವು ಚಿದಾತ್ಮವೆನಿಸುವುದು. ಇದು ಶುದ್ಧವಾದ ಆತ್ಮವಾದುದರಿಂದ, ಅದು ಲಿಂಗಕ್ಕೆ ಸ್ಥಾನವಾಗಿರಲು ಯೋಗ್ಯವಾಗುತ್ತದೆ.

ಕೊನೆಯದಾಗಿ ಸೂರ್ಯ ಮತ್ತು ಚಂದ್ರ ಎಂಬ ತತ್ವಗಳು ನಮ್ಮಲ್ಲಿರುವ ಅದೇ ಹೆಸರಿನ ಎರಡು ನಾಡಿಗಳ ಹೆಸರುಗಳು. ಸಂಸಾರಬಂಧನದಲ್ಲಿರುವ ವ್ಯಕ್ತಿಯಲ್ಲಿರುವ ಈ ನಾಡಿಗಳು ಅನೇಕ ಕಾರಣಗಳಿಂದಾಗಿ ಪ್ರಕಾಶಮಯನಾದ ಪರಶಿವನನ್ನು ನೋಡಲು ಅಡ್ಡಿಮಾಡುವವು. ಆದರೆ ಶಿವಯೋಗಿಯು ನಿರವಯ ಮೂರ್ತಿಯನ್ನು ನಿಜದೃಷ್ಟಿಯಿಂದ ನೋಡಿ, ಪರಿಣಾಮವೆಂಬ ಸೂಕ್ಷ್ಮಹಸ್ತದಿಂದ ಮುಟ್ಟಿದರೆ, ಈ ಸೂರ್ಯಚಂದ್ರರ ದೋಷಗಳು ನಿವೃತ್ತಿಹೊಂದಿ, ಅವು ಚಿತ್ಸೂರ್ಯಚಂದ್ರರೆನ್ನಿಸಿಕೊಳ್ಳುವವು. ಇದರಿಂದಾಗಿ ಸಾಧಕನು ಮಹಾಬೆಳಗೆಂಬ ಪರಾತ್ಪರಶಿವನನ್ನು ತನ್ನ ಚಿದಕ್ಷಿಯಿಂದ ನೋಡಲು ಸಾಧ್ಯವಾಗುವುದು. (೧೪ : ೨೫೦೬)

**ಅಷ್ಟದಳ ಕಮಲ :** ಇದು ಒಂದು ಉಪಮೆ. ಇಡೀ ವಿಶ್ವವನ್ನೇ ನಾವು ಒಂದು ಕಮಲವೆಂದು ಊಹಿಸಿಕೊಂಡರೆ, ಆಗ ವಿಶ್ವದ ಎಂಟು ದಿಕ್ಕುಗಳನ್ನು, ಆ ಕಮಲದ ಎಂಟು ದಳಗಳಂತೆ ಊಹಿಸಿಕೊಳ್ಳಬೇಕಾಗುತ್ತದೆ. ಆ ಎಂಟು ದಳಗಳೆಂದರೆ : ಇಂದ್ರಗಳ (ಪೂರ್ವ), ಅಗ್ನಿದಳ (ಆಗ್ನೇಯ), ಯಮದಳ (ದಕ್ಷಿಣ), ನೈರುತ್ಯದಳ (ನೈರುತ್ಯ), ವರುಣದಳ (ಪಶ್ಚಿಮ), ವಾಯುದಳ (ವಾಯುವ್ಯ), ಕುಬೇರದಳ, (ಉತ್ತರ) ಮತ್ತು ಈಶಾನ್ಯದಳ (ಈಶಾನ್ಯ). ಕೆಲವು ವೇಳೆ ಮಾನವನ ಹೃದಯವೇ ಅಷ್ಟದಳ ಕಮಲವೆಂದೂ ಕರೆಯಲಾಗಿದೆ. ಅಂತೂ ಅಷ್ಟದಳ ಕಮಲವು ವಿಶ್ವದ ಸಂಕೇತವಾಗಲಿ, ಮಾನವನ ಹೃದಯದ ಸಂಕೇತವಾಗಲಿ, ವಚನಕಾರರ ಪ್ರಕಾರ ಅದರ ಮಧ್ಯವು ಪರಶಿವನ ನೆಲೆ.

**ಅಷ್ಟದಳಗಳ ಪರಿಣಾಮ :** ಇಡೀ ಮಾನವನನ್ನು ಅಥವಾ ಅವನ ಅಷ್ಟತನುವನ್ನು (ನೋಡಿ : ಅಷ್ಟತನು) ಒಂದು ಅಷ್ಟದಳ ಕಮಲವೆಂಬಂತೆ ಊಹಿಸಿಕೊಂಡರೆ, ಆಗ ಆ ದಳಗಳು ಅವನ ವರ್ತನೆಯನ್ನು ಹೇಗೆ ನಿರ್ಧರಿಸುತ್ತವೆ ಎಂಬುದನ್ನು ವಚನಕಾರರು ಹೀಗೆ ವಿವರಿಸಿದ್ದಾರೆ : ಇಂದ್ರದಳ ಪ್ರಬಲವಾದರೆ, ಅವನು ಸದ್ಗುಣಿಯಾಗುತ್ತಾನೆ; ಅಗ್ನಿದಳ ಪ್ರಬಲವಾದರೆ ಅವನಿಗೆ ಹಸಿವೆಯಾಗುತ್ತದೆ. ಯಮದಳ ಪ್ರಬಲವಾದರೆ, ಅವನು ದುರ್ಬುದ್ಧಿಯುಳ್ಳವನಾಗಿ ಚೇಷ್ಟಿತನಾಗುವನು; ನೈಋತ್ಯದಳ ಪ್ರಬಲವಾದರೆ, ಕೋಪಿಷ್ಠನಾಗುವನು; ವರುಣದಳ ಪ್ರಬಲವಾದರೆ ನಿದ್ರೆಗೈಯುತ್ತಾನೆ; ವಾಯುದಳ ಪ್ರಬಲವಾದರೆ, ವಾಯುವಿನಂತೆ ಸಂಚರಿಸುತ್ತಾನೆ; ಕುಬೇರದಳ ಪ್ರಬಲವಾದರೆ ಧರ್ಮಬುದ್ಧಿಯುಳ್ಳವನಾಗುತ್ತಾನೆ; ಈಶಾನ್ಯದಳ ಪ್ರಬಲವಾದರೆ, ವಿಷಯಲೋಲುಪನಾಗುವನು; ಒಂದು ವೇಳೆ ಮನುಷ್ಯನು ಈ ದಳಗಳ ರಹಸ್ಯವನ್ನು ತಿಳಿದು, ಮಧ್ಯಸ್ಥಾನಕ್ಕೆ ಬಂದರೆ, ಆಗ ಮುಮುಕ್ಷುವಾಗುವನು, ಹಾಗೂ ಸದ್ಭಾವಿಯಾಗುವನು. (೩:೧೦೨೯)

**ಅಷ್ಟಪುರಿ :** ದೇಹವನ್ನು ಪುರು ಅಥವಾ ಪುರಿ ಎಂದು ಕರೆಯುವುದು ಆಧ್ಯಾತ್ಮಿಕ ಪರಿಭಾಷೆಯಲ್ಲಿ ಪ್ರಚಲಿತವಿದೆ. ಇದು ಎಂಟು ವಸ್ತುಗಳಿಂದಾದ ಪುರಿ. ಆ ಎಂಟು ವಸ್ತುಗಳೆಂದರೆ ಪೃಥ್ವಿ, ಅಪ್ಪು, ತೇಜಸ್, ವಾಯು, ಆಕಾಶ, ಆತ್ಮ, ಸೂರ್ಯ ಮತ್ತು ಚಂದ್ರ. (೮:೨೦೪).

**ಅಷ್ಟಭೋಗೈಶ್ವರ್ಯ :** ಒಬ್ಬ ಶ್ರೀಮಂತನೆನಿಸಿಕೊಳ್ಳುವ ವ್ಯಕ್ತಿ ಎಂಟು ರೀತಿಯ ವಸ್ತುಗಳನ್ನು ಭೋಗಿಸುತ್ತಾನೆ. ಅವೆಂದರೆ : ಮನೆ, ಹಾಸಿಗೆ, ಬಟ್ಟೆ, ಆಭರಣ, ಸತಿ, ಪುಷ್ಪ, ಗಂಧ, ತಾಂಬೂಲ. ಸಾಧಕನು ಅಷ್ಟಭೋಗೈಶ್ವರ್ಯದ ಕಡೆಗೆ ಗಮನಕೊಡದೆ, ವಿಭೂತಿ (ಐಶ್ವರ್ಯ ಅಥವಾ ಇಂದ್ರಿಯಗಳ ಮೇಲೆ ಪ್ರಭುತ್ವ ಸಾಧನೆ)ಯತ್ತ ಗಮನಕೊಡಬೇಕೆಬುದು ಶರಣರ ವಚನ.

**ಅಷ್ಟಮದಗಳು :** ವಾಸ್ತವವಾಗಿ ಅಷ್ಟಮದಗಳು ಕುಲಮದ, ಐಶ್ವರ್ಯಮದಗಳಂಥ ಮದಗಳೇನಲ್ಲ. ಅವು ಪ್ರಬಲವಾದ ಅಷ್ಟತನುವಿನ ಘಟಕಗಳ ಪರಿಣಾಮವಷ್ಟೇ. ಮಾನವನು ಪೃಥ್ವಿ, ಸಲಿಲ, ಪಾವಕ, ಪಾವನ, ಅಂಬರ, ಸೂರ್ಯ, ಚಂದ್ರ ಮತ್ತು ಆತ್ಮ ಎಂಬ ಎಂಟು ಘಟಕಗಳಿಂದಾದ ಒಂದು ಸಂಪುಟ-ಇವುಗಳಲ್ಲಿ ಯಾವುದಾರೊಂದು ಕೆಲವು ವೇಳೆ ಉಳಿದವುಗಳ ಮೇಲೆ ಪ್ರಾಬಲ್ಯ ಸಾಧಿಸಿದಾಗ, ಅದರ ಪರಿಣಾಮ ಹೆಚ್ಚು ಕಂಡು ಬಂದು, ಉಳಿದವುಗಳ ಪರಿಣಾಮ ಕಡಿಮೆ ಕಂಡುಬರುತ್ತದೆ. ಪ್ರತಿಯೊಂದೂ ಉಳಿದವುಗಳ ಮೇಲೆ ಒಂದಲ್ಲ ಒಂದು ಕಾಲದಲ್ಲಿ ಹೆಚ್ಚಿನ ಪ್ರಾಬಲ್ಯ ಸಾಧಿಸಬಹುದು. ಹಾಗೆ ಪ್ರಾಬಲ್ಯ ಸಾಧಿಸಿದ ಘಟಕದ ಪರಿಣಾಮ 'ಮದ' ಎನಿಸಿಕೊಳ್ಳುತ್ತದೆ. ಚೆನ್ನಬಸವಣ್ಣನವರ ಪ್ರಕಾರ (೩:೩೩೧), ಪೃಥ್ವಿಮದ, ಸಲಿಲಮದ, ಪಾವಕಮದ,

ಪವನಮದ, ಅಂಬರಮದ, ರವಿಮದ, ಶಶಿಮದ ಮತ್ತು ಆತ್ಮಮದ ಇವೇ ಅಷ್ಟಮದಗಳು. ಈ ಅಷ್ಟಮದಗಳು ಮಾನವನ ವರ್ತನೆಯಲ್ಲಿ ಯಾವ ಪರಿಣಾಮವನ್ನುಂಟುಮಾಡುತ್ತವೆ ಎಂಬುದನ್ನು ಈಗ ನೋಡೋಣ.

ಮನುಷ್ಯನಲ್ಲಿರುವ ಪೃಥ್ವಿತತ್ವವು ಪ್ರಬಲಗೊಂಡಾಗ ಪೃಥ್ವಿ ಮದವುಂಟಾಗಿ ಆಗ ಅವನು ತನ್ನ ಪಾರ್ಥಿವ ಶರೀರದ ಕಡೆಗೆ ಗಮನಕೊಡುತ್ತಾನೆ; ಅಂದರೆ, ಊಟೋಪಚಾರ, ಶೃಂಗಾರ, ಇತ್ಯಾದಿಗಳಿಗೆ ಗಮನಕೊಡುತ್ತಾನೆ; ಸಲಿಲಮದವುಂಟಾದಾಗ, ತನಗೆ ಬೇಕು, ತನ್ನ ಮಕ್ಕಳಿಗೆ ಬೇಕು, ತನ್ನ ಕುಟುಂಬಕ್ಕೆ ಬೇಕು, ಎಂಬ ಮಮಕಾರ ಅವನಲ್ಲಿ ಉಂಟಾಗುತ್ತದೆ; ಪಾವಕಮದವುಂಟಾದಾಗ, ಅವನಲ್ಲಿ ಲೈಂಗಿಕ ಭಾವನೆ ಹೆಚ್ಚಾಗಿ ತನ್ನ ಪ್ರಿಯೆಯನ್ನು ನೋಡಬೇಕು, ನುಡಿಸಬೇಕು, ಅಲಿಂಗಿಸಬೇಕು, ಇತ್ಯಾದಿ ಆಸೆಗಳುಂಟಾಗುತ್ತವೆ; ಪವನಮದವುಂಟಾದಾಗ ಸಂಚರಿಸಬೇಕೆಂಬ ಬಯಕೆ ಉಂಟಾಗುತ್ತದೆ; ಅಂಬರಮದ ಉಂಟಾದಾಗ ರಾಜನಿಗೆ ಆವಶ್ಯಕವಾದ ಆನೆ, ಕುದುರೆ, ಪಲ್ಲಕ್ಕಿ, ಸೈನ್ಯ, ಛತ್ರ-ಚಾಮರ, ಮುಂತಾದವುಗಳು ಬೇಕೆಂಬ ಬಯಕೆ ಉಂಟಾಗುತ್ತದೆ; ರವಿಮದದಿಂದ ಕೋಪ ಹೆಚ್ಚಾಗುತ್ತದೆ; ಶಶಿಮದದಿಂದ ಚಿಂತೆ ಹೆಚ್ಚಾಗುವುದಲ್ಲದೆ, ಆತ್ಮವಿಶ್ವಾಸ ಹೋಗಿ, ಆಗುವುದೋ ಇಲ್ಲವೋ, ಮುಂತಾದ ಸಂದೇಹಗಳು ಹುಟ್ಟುತ್ತವೆ; ಆತ್ಮಮದದಿಂದ ಸೌಂದರ್ಯ/ವಿದ್ಯೆ/ಐಶ್ವರ್ಯ/ಶಕ್ತಿಯಲ್ಲಿ ತನ್ನ ಸಮಾನರಿಲ್ಲ ಎಂಬ ಅಹಂಕಾರ ಹುಟ್ಟುತ್ತದೆ. ಶಿವಯೋಗಿಯಾಗಬೇಕೆಂಬ ಸಾಧಕನು ಈ ಅಷ್ಟಮದಗಳನ್ನು ವರ್ಜಿಸಲೇಬೇಕು. (೩:೩೩೧)

**ಅಷ್ಟಮಲಗಳು :** ಸಾಂಸಾರಿಕ ಜೀವನದಲ್ಲಿ ಆತ್ಮನನ್ನು ಎಂಟು ರೀತಿಯ ಆಸೆಗಳು ಮಲಿನವನ್ನಾಗಿ ಮಾಡಿವೆ. ಅವೇ ಅಷ್ಟಮಲಗಳು. ಅವೆಂದರೆ, ಹೊನ್ನು, ಹೆಣ್ಣು, ಮಣ್ಣು, ಆಹಾರ, ನೀರು, ಬಟ್ಟೆ, ವಾಹನ ಮತ್ತು ಒಡವೆಗಳಿಗೆ ಪಡುವ ಆಸೆ. ವಾಸ್ತವವಾಗಿ ಇವೇ ಮಲಗಳಲ್ಲ. ಆದರೆ ಇವುಗಳಿಂದಾಗಿ ನಾವು ಅನೇಕ ರೀತಿಯ ಕರ್ಮಗಳನ್ನು ಮಾಡಿ, ಅವುಗಳು ಆತ್ಮಕ್ಕೆ ಕರ್ಮ ಅಂಟುವಂತೆ ಮಾಡುತ್ತವೆ. ಆಗ ಆತ್ಮ ಮಲಿನವಾಗುತ್ತದೆ.

**ಅಷ್ಟಮಹದೈಶ್ವರ್ಯ :** (ನೋಡಿ : ಅಷ್ಟಸಿದ್ಧಿಗಳು)

**ಅಷ್ಟಮಹಾಸಿದ್ಧಿ :** ಅಂಜನಸಿದ್ಧಿ, ಘುಟಿಕಾಸಿದ್ಧಿ, ರಸಸಿದ್ಧಿ, ಪಾದೋದಕ ಸಿದ್ಧಿ, ಪರಕಾಯ ಪ್ರವೇಶ, ದೂರಶ್ರವಣ, ದೂರದೃಷ್ಟಿ, ತ್ರಿಕಾಲಜ್ಞಾನ. (೧೩:೧೮೮೧).

**ಅಷ್ಟವಿಧ ಸಕೀಲ :** ಅಷ್ಟವಿಧ ಸಕೀಲದಲ್ಲಿ ಎಂಟು ವಿಷಯಗಳಿವೆ. ಅಂಗ, ಲಿಂಗ, ಹಸ್ತ, ಜ್ಞಾನೇಂದ್ರಿಯ, ಭಕ್ತಿ, ಶಕ್ತಿ, ಅರ್ಪಿತ ಮತ್ತು ಪದಾರ್ಥ. ಆರು ಸ್ಥಲಗಳಲ್ಲಿ ಸಾಧಕನು ಈ ಎಂಟು ವಿಷಯಗಳನ್ನುಳ್ಳ ಸಾಧನೆ ಮಾಡಬೇಕು. ಇಲ್ಲಿ ಇಂದ್ರಿಯ ಗೋಚರ ವಿಷಯ ಯಾವುದು ಇಲ್ಲ ಎಂಬುದನ್ನು ನಾವು ಸುಲಭವಾಗಿ ಗುರುತಿಸಬಹುದು. (೧) ಸಾಧಕ

ಭಕ್ತಸ್ಥಲದಲ್ಲಿರುವಾಗ ಭಕ್ತನೇ ಅಂಗ, ಅವನು ಅರ್ಚಿಸುವುದು ಆಚಾರಲಿಂಗ, ಅವನು ಸುಚಿತ್ತವೆಂಬ ಹಸ್ತದಿಂದ, ಆಚಾರಲಿಂಗದ ಘ್ರಾಣೇಂದ್ರಿಯ ಎಂಬ ಬಾಯಿಗೆ ಸದ್ಭಕ್ತಿ. (ಶ್ರದ್ಧಾಭಕ್ತಿ)ಯಿಂದ, ಕ್ರಿಯಾಶಕ್ತಿಯ ಗುಣವಾದ ಪರಿಮಳ ದ್ರವ್ಯವನ್ನು ಅರ್ಪಿಸಿ, ಸುಗಂಧವೆಂಬ ಪ್ರಸಾದ ಪಡೆಯುತ್ತಾನೆ. (೨) ಸಾಧಕ ಎರಡನೆ ಸ್ಥಲದಲ್ಲಿರುವಾಗ, ಅವನೇ ಮಹೇಶನೆಂಬ ಅಂಗ, ಅವನು ಅರ್ಚಿಸುವುದು ಗುರುಲಿಂಗವನ್ನು; ಅಂದರೆ ಸುಬುದ್ಧಿಯೆಂಬ ಹಸ್ತದಿಂದ, ಗುರುಲಿಂಗದ ಜಿಹ್ವೆಯೆಂಬ ಬಾಯಿಗೆ (ಮುಖಕ್ಕೆ) ನಿಷ್ಠಾಭಕ್ತಿಯಿಂದ, ಜ್ಞಾನಶಕ್ತಿಯ ಗುಣವಾದ ರಸವನ್ನು ಅರ್ಪಿಸಿ, ಸುರಸವನ್ನು ಪ್ರಸಾದವಾಗಿ ಪಡೆಯುತ್ತಾನೆ. (೩) ಸಾಧಕ ಮೂರನೆಯ ಸ್ಥಲದಲ್ಲಿರುವಾಗ, ಪ್ರಸಾದಿಯೆಂಬ ಅಂಗನೆನಿಸಿಕೊಳ್ಳುತ್ತಾನೆ; ಹಾಗೂ ಅವನು ಶಿವಲಿಂಗವನ್ನು ಅರ್ಚಿಸುತ್ತಾನೆ; ಅಂದರೆ, ಅವನು ನಿರಹಂಕಾರವೆಂಬ ಹಸ್ತದಿಂದ ಶಿವಲಿಂಗದ ನೇತ್ರವೆಂಬ ಬಾಯಿಗೆ ಅವಧಾನ ಭಕ್ತಿಯಿಂದ ಇಚ್ಛಾಶಕ್ತಿಯ ಗುಣವಾದ ರೂಪವನ್ನು ಅರ್ಪಿಸಿ, ಸುರೂಪವನ್ನು ಪ್ರಸಾದವನ್ನಾಗಿ ಪಡೆಯುತ್ತಾನೆ. (೪) ಪ್ರಾಣಲಿಂಗಿಯೆಂಬ ಅಂಗನು ಜಂಗಮಲಿಂಗವನ್ನು ಆರಾಧಿಸುತ್ತಾನೆ. ಅಂದರೆ, ಅವನು ಸುಮನೆಂಬ ಹಸ್ತದಿಂದ ತ್ವಗಿಂದ್ರಿಯೆಂಬ ಲಿಂಗದ ಬಾಯಿಗೆ ಅನುಭಾವ ಭಕ್ತಿಯಿಂದ ಆದಿಶಕ್ತಿಯ ಗುಣವಾದ ಸೋಂಕನ್ನು ಅರ್ಪಿಸಿ ಸುಸ್ಪರ್ಶನೆಂಬ ಪ್ರಸಾದವನ್ನು ಪಡೆಯುತ್ತಾನೆ. (೫) ಶರಣನೆಂಬ ಅಂಗನಿಗೆ ಪ್ರಸಾದ ಲಿಂಗವೇ ಆರಾಧ್ಯವಸ್ತು. ಅವನು ಸುಜ್ಞಾನವೆಂಬ ಹಸ್ತದಿಂದ ಲಿಂಗದ ಶ್ರೋತ್ರವೆಂಬ ಬಾಯಿಗೆ ಆನಂದ ಭಕ್ತಿಯಿಂದ ಪರಾಶಕ್ತಿಯ ಗುಣವಾದ ಶಬ್ದವನ್ನು ಅರ್ಪಿಸಿ, ಸುಶಬ್ದವನ್ನು ಪ್ರಸಾದವಾಗಿ ಪಡೆಯುತ್ತಾನೆ. (೬) ಐಕ್ಯನೆಂಬ ಅಂಗನಿಗೆ ಮಹಾಲಿಂಗವೇ ಆರಾಧ್ಯ ದೈವ. ಅವನು ಭಾವವೆಂಬ ಹಸ್ತದಿಂದ ಮಹಾಲಿಂಗದ ಹೃದಯವೆಂಬ ಬಾಯಿಗೆ ಸಮರಸಭಕ್ತಿಯಿಂದ, ಚಿತ್‌ಶಕ್ತಿಯ ಗುಣವಾದ ತೃಪ್ತಿಯನ್ನು ಅರ್ಪಿಸಿ, ಪರಿಣಾಮವೆಂಬ ಪ್ರಸಾದವನ್ನು ಪಡೆಯುತ್ತಾನೆ. (೨:೯೮೬).

**ಅಷ್ಟವಿಧಾರ್ಚನೆ :** ಒಬ್ಬ ಶ್ರೇಷ್ಠ ವ್ಯಕ್ತಿ ಅತಿಥಿಯಾಗಿ ಬಂದರೆ, ಅತಿಥೇಯನು ಹೇಗೆ ಅವನನ್ನು ಸನ್ಮಾನಿಸುತ್ತಾನೋ ಹಾಗೆಯೇ, ಭಕ್ತನು ಲಿಂಗಕ್ಕೆ ಭಕ್ತಿಗೌರವಗಳನ್ನು ತೋರಿಸಬೇಕು. ಅಂದರೆ, ಲಿಂಗವನ್ನು ನೀರಿನಿಂದ ತೊಳೆದು, ಅದಕ್ಕೆ ಗಂಧ ಮತ್ತು ಅಕ್ಷತೆಯನ್ನು ಧರಿಸಿ ಪತ್ರಪುಷ್ಪಗಳನ್ನು ಅರ್ಪಿಸಬೇಕು. ಧೂಪ, ದೀಪಗಳನ್ನು ಬೆಳಗಬೇಕು, ಆಹಾರವನ್ನು ನಿವೇದಿಸಬೇಕು (ನೈವೇದ್ಯ ಮಾಡಬೇಕು); ಹಾಗೂ ಕೊನೆಯಲ್ಲಿ ತಾಂಬೂಲವನ್ನು ಅರ್ಪಿಸಬೇಕು.

**ಅಷ್ಟಸಿದ್ಧಿಗಳು (ಅಷ್ಟಮಹದೈಶ್ವರ್ಯ) :** ಸತತ ಹಾಗೂ ಶ್ರದ್ಧೆಯಿಂದ ಕೂಡಿದ ಯೋಗ ಸಾಧನೆ ಮಾಡುವುದರಿಂದಾಗಿ ಸಾಧಕನಿಗೆ ಎಂಟು ಅಪ್ರಾಕೃತಿಕ ಶಕ್ತಿಗಳು ಲಭಿಸುತ್ತವೆ. ಇವೇ ಅಷ್ಟಸಿದ್ಧಿಗಳು ಅಥವಾ ಅಷ್ಟಮಹಾಸಿದ್ಧಿಗಳು, ಇವೆಂದರೆ : ಅಣಿಮಾ, ಮಹಿಮಾ,

ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವ. ಸಾಧಕನು ತನ್ನ ಇಚ್ಛೆಯಂತೆ, ಅತ್ಯಂತ ಸಣ್ಣ ಪ್ರಮಾಣದ ವ್ಯಕ್ತಿ ಅಥವಾ ಪ್ರಾಣಿಯಾದರೆ, ಅವನಿಗೆ ಅಣಿಮಾ (ಅಣುವಿನಷ್ಟು ಸೂಕ್ಷ್ಮವಾಗುವ ಶಕ್ತಿ) ಸಿದ್ಧಿಸಿದೆ ಎಂದರ್ಥ; ತನ್ನ ಇಚ್ಛೆಯಂತೆ ಅತ್ಯಂತ ಮಹಿಮೆಯುಳ್ಳ ವಸ್ತುವಾದರೆ ಅವನಿಗೆ ಮಹಿಮಾ ಸಿದ್ಧಿಸಿದೆ ಎಂದು ಅರ್ಥ; ಅತ್ಯಂತ ಭಾರವಾದ ವಸ್ತುವಾಗುವ ಶಕ್ತಿ ಅವನಿಗೆ ಬಂದರೆ, ಅವನಿಗೆ ಗರಿಮಾ ಸಿದ್ಧಿಸಿದೆಯೆಂದೂ, ಅತ್ಯಂತ ಹಗುರ (ಲಘು)ವಾದ ವಸ್ತುವಾಗುವ ಶಕ್ತಿ ಬಂದರೆ ಲಘಿಮಾ ಸಿದ್ಧಿಸಿದೆಯೆಂತಲೂ ಅರ್ಥ. ಜನರ ದೃಷ್ಟಿಯಲ್ಲಿ ಅವನು ಸಕಲ ಮರ್ಯಾದೆ ಗೌರವಗಳನ್ನು ಪಡೆಯುವುದು ಪ್ರಾಪ್ತಿ; ತನಗಿಷ್ಟವಾದ ವಸ್ತುಗಳನ್ನು ತಕ್ಷಣವೇ ಪಡೆಯುವುದು ಪ್ರಾಕಾಮ್ಯ; ಜನರನ್ನೂ ವಸ್ತುಗಳನ್ನೂ ನಮ್ಮಿಷ್ಟದಂತೆ ಚಲಿಸುವಂತೆ ಮಾಡುವುದು ಈಶತ್ವ; ಮತ್ತು ಎಲ್ಲರ ಮೇಲೆ ಪ್ರಭುತ್ವ ಸಾಧಿಸುವುದು ಹಾಗೂ ನಮ್ಮಿಚ್ಛೆಯನ್ನು ಅವರು ಕಾರ್ಯಗತಗೊಳಿಸುವಂತೆ ಮಾಡಿಸುವುದು ವಶಿತ್ವ.

ಪತಂಜಲಿ ಮಹರ್ಷಿಯು ಯೋಗಿಗೆ ಇವೆಲ್ಲ ಸಾಧ್ಯವೆಂದು ಹೇಳಿದ್ದಾನಲ್ಲದೆ, ಯೋಗಿಯ ಲಕ್ಷ್ಯ ಅಲ್ಲಿ ನಿಲ್ಲಬಾರದೆಂದು ಎಚ್ಚರಿಸುತ್ತಾನೆ. ಒಂದು ವೇಳೆ ಯೋಗಿಯ ಮನಸ್ಸು ಅಷ್ಟಸಿದ್ಧಿಗಳನ್ನು ಕಾರ್ಯಗತಗೊಳಿಸುವುದರಲ್ಲಿ ಸಿಕ್ಕಿಹಾಕಿಕೊಂಡರೆ, ಅದನ್ನು ಅಲ್ಲಿಂದ ಕೀಳುವುದು ಕಷ್ಟ. ಯೋಗಿಯು ಯೋಗಸಾಧನೆಯಲ್ಲಿ ಇನ್ನೂ ಮುಂದೆ ಹೋಗಬೇಕಾಗಿರುವುದರಿಂದ, ಅಷ್ಟಸಿದ್ಧಿಯಂತಹ ಆಕರ್ಷಣೆಗೆ ಒಳಗಾಗಬಾರದೆಂಬುದೇ ಪತಂಜಲಿ ಆದೇಶ.

ಶರಣರೂ ಸಹ ಪತಂಜಲಿಯ ಮಾತನ್ನು ಅನುಮೋದಿಸಿ, ಅಷ್ಟಸಿದ್ಧಿಯಲ್ಲಿ ಸಾಧಕನು ಸಿಕ್ಕಿಹಾಕಿಕೊಳ್ಳಬಾರದೆಂದು ಎಚ್ಚರಿಸುತ್ತಾರೆ.

ಇವಕ್ಕೆ ಅಷ್ಟಮಹದೈಶ್ವರ್ಯವೆಂದೂ ಕರೆಯುತ್ತಾರೆ. ಐಶ್ವರ್ಯವೆಂದರೆ ಪ್ರಭುತ್ವ. ಮನಸ್ಸಿನಿಚ್ಛೆಯಂತೆ ಪರಿಣಾಮವನ್ನುಂಟುಮಾಡುವುದೇ ಐಶ್ವರ್ಯ. ಈ ಅರ್ಥದಲ್ಲಿ ಎಲ್ಲರೂ ಈಶ್ವರರೇ. ಆದರೆ ಯೋಗಿಯು ಪಡೆದಿರುವುದು ಮಹದೈಶ್ವರ್ಯ- ಸಾಧಾರಣ ಐಶ್ವರ್ಯವಲ್ಲ.

**ಅಷ್ಟಾಂಗ ಯೋಗ :** ರಾಜಯೋಗದಲ್ಲಿ ಎಂಟು ಅಂಗಗಳಿರುವುದರಿಂದ ಅದಕ್ಕೆ ಅಷ್ಟಾಂಗಯೋಗವೆಂಬ ಹೆಸರು ಬಂದಿದೆ. ಈ ಎಂಟು ಅಂಗಗಳೆಂದರೆ : ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ.

ಯಮದಲ್ಲಿ ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಹಿಂಸೆ ಮತ್ತು ಅಪರಿಗ್ರಹ ಎಂಬ ಐದು ಉಪಾಂಗಗಳಿವೆ; ಇದೇ ರೀತಿ ನಿಮಯದಲ್ಲಿ ಶೌಚ, ತಪ, ಸ್ವಾಧ್ಯಾಯ, ಸ್ವಸಂತೋಷ ಮತ್ತು ಈಶ್ವರ ಪ್ರಣಿಧಾನ ಎಂಬ ಐದು ಉಪಾಂಗಗಳಿವೆ. ಯಮವು ನೈತಿಕ ಶಿಕ್ಷಣ; ನಿಯಮವು ಆಧ್ಯಾತ್ಮಿಕ ಶಿಕ್ಷಣ.

ಆಸನ ಮತ್ತು ಪ್ರಾಣಾಯಾಮಗಳನ್ನು ಮಾಡುವುದರಿಂದ ಮನಸ್ಸನ್ನು ನಿಯಂತ್ರಿಸಲು ಸಾಧ್ಯವಿದೆ. ಪ್ರತ್ಯಾಹಾರವು ಸಮಾಧಿಯ ಮೊದಲನೆ ಪಾಠ. ಅದರಲ್ಲಿ ಇಂದ್ರಿಯಗಳ ಆಹಾರಗಳನ್ನು (ಅಂದರೆ, ರೂಪರಸಗಂಧ ಸ್ಪರ್ಶಶಬ್ದಗಳನ್ನು) ಆಯಾ ಇಂದ್ರಿಯಗಳು ಗ್ರಹಿಸದಂತೆ ಮಾಡುವುದನ್ನೂ ಮನಸ್ಸು ಮತ್ತು ಬುದ್ಧಿ ಅವುಗಳ ಬಗ್ಗೆ ಯೋಚಿಸದಂತೆ ಮಾಡುವುದನ್ನೂ ಕಲಿಸಿಕೊಡಲಾಗುತ್ತದೆ.

ಪ್ರತ್ಯಾಹಾರದ ಮೂಲಕ ಮನಸ್ಸು ಖಾಲಿಯಾದ ಮೇಲೆ ಧಾರಣವು ಪ್ರಾರಂಭವಾಗುತ್ತದೆ. ಮನಸ್ಸಿನಲ್ಲಿ ವಿಷಯಗಳು ತುಂಬಿರುವಾಗ ಏಕಾಗ್ರತೆ ಸಾಧ್ಯವಾಗಲಾರದು; ಆದರೆ ಖಾಲಿಯಾದ ಮನಸ್ಸಿಗೆ ಅದು ಸಾಧ್ಯ. ಈ ಏಕಾಗ್ರತೆಯನ್ನೇ ಮುಂದುವರೆಸಿದರೆ, ಧ್ಯಾನ. ಅದರಲ್ಲಿ ಆತ್ಮಕ್ಕೆ ತಾನೊಂದೇ ಇರುವುದು ಅರಿವಾಗುತ್ತದಲ್ಲದೇ, ಅದಕ್ಕೆ ಯಾವ ಉಪಾಧಿಗಳ ಸೋಂಕು ಇಲ್ಲದಿರುವುದರಿಂದ ಅತೀವ ಆನಂದವೂ ಆಗುತ್ತದೆ. ಈ ಸ್ಥಿತಿ ಮುಂದುವರೆದರೆ ಯಾವುದೇ ಮಾನಸಿಕ ಸ್ಥಿತಿಯಿಲ್ಲದ ಒಂದು ಸ್ಥಿತಿ ಉಂಟಾಗುತ್ತದೆ. ಅದನ್ನೇ ಪಾತಂಜಲ ಮಹರ್ಷಿಗಳು ಸಮಾಧಿಯೆಂದಿದ್ದಾರೆ.

ಪಾತಂಜಲ ಮಹರ್ಷಿಗಳ ಪ್ರಕಾರ, ಹೀಗೆ ಪ್ರಕೃತಿಯಿಂದ ವಿಚ್ಛೇದನ ಪಡೆದು ಆತ್ಮ ತಾನೊಂದೇ (ಕೇವಲ) ಇರುವುದು ಅಥವಾ ಕೈವಲ್ಯವನ್ನು ಪಡೆಯುವುದು ಜೀವನದ ಪರಮಗುರಿಯಾಗಿದೆ. ಆದರೆ ವಚನಕಾರರು ಅಷ್ಟಾಂಗಯೋಗವನ್ನು ಒಪ್ಪಿಕೊಂಡರೂ, ತಮ್ಮ ಗುರಿಯನ್ನು ಕೈವಲ್ಯಕ್ಕಿಂತ ಇನ್ನೂ ಎತ್ತರದಲ್ಲಿರಿಸಿದ್ದಾರೆ. ಅವರ ಪ್ರಕಾರ, ಆತ್ಮವೊಂದೇ ಉಳಿಯುವುದು ಕೊನೆಯಲ್ಲ; ಹಾಗೆ ಒಂದೇ ಉಳಿದ ಆತ್ಮ (ಅಂಗ)ವನ್ನು ಲಿಂಗದಲ್ಲಿ ಐಕ್ಯ ಮಾಡುವುದು ಅವರ ಗುರಿ. (೩:೧೫೫೮)

**ಅಷ್ಟಾವಧಾನ :** ಪ್ರಸಾದಿಸ್ಥಲದ ಸಾಧಕನು ಮಾಡುವ ಭಕ್ತಿಗೆ ಅವಧಾನವೆಂದು ಹೆಸರು. ಆಹಾರಪಾನೀಯಗಳನ್ನೇ ಆಗಲಿ, ಕೇಳುವ ಶಬ್ದ, ಉಸಿರಾಡುವ ಗಾಳಿ, ರುಚಿ, ಸ್ಪರ್ಶಗಳೇ ಆಗಲಿ, ಪ್ರತಿಯೊಂದನ್ನೂ ಪರಶಿವನಿಗೆ ಅರ್ಪಿಸದೆಯೆ ತಾನು ಅನುಭವಿಸುವುದಿಲ್ಲ ಎಂದು ಅವನು ಪ್ರತಿಜ್ಞೆಮಾಡಿತ್ತಾನೆ. ಈ ಪ್ರತಿಜ್ಞೆಯನ್ನು ಪಾಲಿಸಲು ಅವನು ಯಾವಾಗಲೂ ಜಾಗರೂಕತೆಯಿಂದ (ಅವಧಾನದಿಂದ) ಇರಬೇಕಾಗುತ್ತದೆ.

ಪ್ರಸಾದಿಯ ಅವಧಾನಕ್ಕೆ ಎಂಟು ಅಂಗಗಳಿವೆ. ಅವೆಂದರೆ : ಅಂಗ, ಲಿಂಗ, ಹಸ್ತ, ಮುಖ, ಶಕ್ತಿ, ಭಕ್ತಿ, ಪದಾರ್ಥ ಮತ್ತು ಪ್ರಸಾದ. ಈ ಅಂಗಗಳ ಪಾತ್ರವೇನೆಂಬುವನ್ನು ನಾವು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದು : ಸಾಧಕನು ಭಕ್ತಸ್ಥಲದಲ್ಲಿದ್ದರೆ, ಅವನು ಆಚಾರಲಿಂಗದ ಅಂಗ; ಅವನು ತನ್ನ ಸುಚಿತ್ತವೆಂಬ ಹಸ್ತದಲ್ಲಿ ಕ್ರಿಯಾಶಕ್ತಿ ತತ್ವದ ರೂಪಾದ ಶ್ರದ್ಧಾ ಭಕ್ತಿಯಿಂದ, ಪೃಥ್ವಿ ತತ್ವವನ್ನು ಸದ್ಯೋಜಾತ

ಮುಖಕ್ಕೆ ಅರ್ಪಿಸಿ, ಸುಗಂಧವೆಂಬ ಪ್ರಸಾದವನ್ನು ಪಡೆಯುತ್ತಾನೆ. ಇಲ್ಲಿ ಭಾಗವಹಿಸಿರುವ ಎಂಟು ಅಂಶಗಳೆಂದರೆ - ಭಕ್ತ (ಅಂಗ), ಆಚಾರಲಿಂಗ (ಲಿಂಗ), ಸುಚಿತ್ತ (ಹಸ್ತ), ಸದ್ಯೋಜಾತ (ಮುಖ), ಕ್ರಿಯಾಶಕ್ತಿ (ಶಕ್ತಿ), ಶ್ರದ್ಧಾಭಕ್ತಿ (ಭಕ್ತಿ), ಪೃಥ್ವಿ (ಪದಾರ್ಥ), ಸುಗಂಧ (ಪ್ರಸಾದ). ಹೀಗೆ ಸಾಧಕನು ಎಲ್ಲ ಎಂಟು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವ ಮೂಲಕ ತನ್ನ ಅವಧಾನವನ್ನು ತೋರಿಸಬೇಕು (೧೨:೮೯೨) (ನೋಡಿ : **ಅಷ್ಟವಿಧ ಸಕೀಲ**).

**ಅಷ್ಟಾವರಣ :** ಎಂಟು ಆವರಣಗಳು ಸಂಸಾರ ಜೀವನವು ಹೇಯವೆನಿಸಿ, ಅದರಿಂದ ತಪ್ಪಿಸಿಕೊಂಡು ಲಿಂಗಾಂಗ ಸಾಮರಸ್ಯ ಪಡೆಯಬೇಕೆಂಬ ಉದ್ದೇಶದಿಂದ ಗುರುವಿನ ಬಳಿ ಬಂದವನಿಗೆ ಗುರುವು ಆ ಧ್ಯೇಯ ಸಾಧನೆಗೆ ಬೇಕಾದ ಎಂಟು ಆವರಣಗಳ ಬಗೆಗೆ ತಿಳಿಸಿಕೊಡುತ್ತಾನೆ. ಅವೆಂದರೆ - ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ, ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರ. ಕವಚಗಳು ನಮ್ಮನ್ನು ಬಾಹ್ಯ ಅಪಾಯಗಳಿಂದ ಹೇಗೆ ರಕ್ಷಿಸುತ್ತದೆಯೋ, ಹಾಗೆಯೇ ನಮ್ಮನ್ನು ಈ ಎಂಟು ಆವರಣಗಳು ಸಂಸಾರಿಕ ಬಾಧೆಗಳಿಂದ ರಕ್ಷಿಸುತ್ತವೆ, ಎಂಬುದು ವಚನಕಾರರ ಅಭಿಮತ. (ನೋಡಿ : **ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ**).

**ಅಷ್ಟೈಶ್ವರ್ಯ :** (ನೋಡಿ : **ಅಷ್ಟಭೋಗೈಶ್ವರ್ಯ**)

**ಅಸತ್ಯರು :** ಸತ್ಯವನ್ನು ಹೇಳದವರು ಮತ್ತು ಸದ್ವರ್ತನೆ ಗೊತ್ತಿಲ್ಲದವರು. (೯:೧).

**ಅಸುರ ಕರ್ಮ :** ರಾಕ್ಷಸೀಯ ವರ್ತನೆ; ಅಧಾರ್ಮಿಕ ನಡತೆ (೭:೩೬೫).

**ಅಸ್ಥಿಮೂಲಾಧರ :** ಪುರಾಣಗಳಲ್ಲಿ ಶಿವನು ರುಂಡಗಳ ಅಸ್ಥಿಯನ್ನು ಧರಿಸಿದಂತೆ ಚಿತ್ರಿತನಾಗಿದ್ದಾನೆ. ಇದೊಂದು ಅಲಂಕಾರಿಕ ಚಿತ್ರಣ. ರುಂಡಗಳು (ತಲೆಗಳು) ಜ್ಞಾನ ಮತ್ತು ಅಜ್ಞಾನಗಳ ಸ್ಥಾನಗಳು. ಪರಶಿವನು ಅಜ್ಞಾನವನ್ನು ನಾಶ ಮಾಡಿದವನು ಎಂಬುದನ್ನು ಅಜ್ಞಾನದ ಸ್ಥಾನವಾದ ತಲೆಯನ್ನು ನಾಶಮಾಡಿದವನೆಂದು ಪೌರಾಣಿಕ ಭಾಷೆಯಲ್ಲಿ ಹೇಳಲಾಗುತ್ತದೆ. ತಾನು ಕೊಂದ ವೈರಿಗಳ ರುಂಡಗಳನ್ನು ಧರಿಸುವುದು ಎಲ್ಲ ಬಣಗಳ ರೂಢಿ. (೧೩:೨೩೬೦)

**ಅಹಂಕಾರ :** (ನೋಡಿ : **ಅಂತಃಕರಣ ಚತುಷ್ಟಯ**)

**ಅಹಂಕಾರ ತ್ರಯ :** ರಾಜಸಿಕ ಅಹಂಕಾರ, ತಾಮಸಿಕ ಅಹಂಕಾರ, ಸಾತ್ವಿಕ ಅಹಂಕಾರ (೧೩:೧೮೮೧).

**ಅಹಂಭಾವ ತ್ರಯ :** ಮನುಷ್ಯನು ಪ್ರಾಣಿಗಳಿಗಿಂತ ಭಿನ್ನವಾಗಿರುವುದು ಕೇವಲ ವಿಚಾರ ಶೀಲತೆಯಿಂದಾಗಿ ಮಾತ್ರವಲ್ಲ; ಅವನಲ್ಲಿ ಸ್ವ-ಪ್ರಜ್ಞೆ ಇದೆ, ಪ್ರಾಣಿಗಳಲ್ಲಿ ಇಲ್ಲ. ಹೀಗಾಗಿ ನಾನು ಏನು ಮಾಡುತ್ತಿದ್ದೇನೆ, ಏನು ಮಾಡಬೇಕು, ಏನು ಮಾಡಬಾರದು, ಮುಂತಾಗಿ

ಅವನು ಯೋಚಿಸಿ, ಅನಂತರವೇ ಅವನು ಕಾರ್ಯೋನ್ಮುಖನಾಗುತ್ತಾನೆ. ಇಂಥ ಸ್ವಪ್ರಜ್ಞೆ ಕೆಲವರಲ್ಲಿ ಆಧ್ಯಾತ್ಮಿಕವಾಗಿ ಯೋಚಿಸುವಂತೆ ಮಾಡುತ್ತದೆ. ಆಗ 'ನಾನು ಯಾರು?' 'ಎಲ್ಲಿಂದ ಬಂದೆ?' 'ಎಲ್ಲಿಗೆ ಹೋಗಬೇಕಾಗಿದೆ?' ಮುಂತಾದ ಪ್ರಶ್ನೆಗಳನ್ನು ತನಗೆ ತಾನೆ ಕೇಳಿ ಕೊಳ್ಳುತ್ತಾನೆ. ಇದು 'ಕೋಹಂ ಭಾವ'.

ಸಮರ್ಥ ಗುರುವಿನ ಮಾರ್ಗದರ್ಶನದಿಂದಾಗಿ ಅವನಿಗೆ ನಾನು ಎಂಬ ಭಾವ ಸ್ಥಿರವಲ್ಲ, ಎಂಬ ಅರಿವು ಮೂಡಿದಾಗ ಅವನು ಗಂಭೀರ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗುತ್ತಾನೆ ಇದು 'ನಾಹಂ ಭಾವ'.

ಆ ಗುರುವಿನ ದೆಸೆಯಿಂದಾಗಿ ಸಾಧಕನು ಲಿಂಗಧ್ಯಾನ ಕಲಿತು, ಅದರ ಮೂಲಕ ತಾನು ಶಿವಾಂಶಿಕ ಎಂಬ ಸತ್ಯವನ್ನು ಪ್ರತ್ಯಕ್ಷವಾಗಿ ತಿಳಿದುಕೊಂಡಾಗ, 'ನಾನು ಪ್ರತ್ಯೇಕ ವ್ಯಕ್ತಿಯಲ್ಲ, ನಾನೇ ಅವನು (ಪರಶಿವ)' ಎಂಬ ಐಕ್ಯ ಭಾವ ಮೂಡುತ್ತದೆ. ಇದು ಸೋಹಂ ಭಾವ. (೭:೬೬೧).

**ಅಹಿಂಸಾದೀಕ್ಷೆ :** ಭಕ್ತನು ಅಷ್ಟಾವರಣ ತತ್ವಕ್ಕೆ ನಿಷ್ಠನಾಗಿದ್ದಾನೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಪರಶಿವನು ಭಕ್ತನಿಗೆ ಅನೇಕ ರೀತಿಯ ತೊಂದರೆಗಳನ್ನು ಸೃಷ್ಟಿಸುತ್ತಾನೆ. ಆಗ ಭಕ್ತನಾದವನು ಆ ಬಾಧೆಗೆ ಅಳುಕದೆ, ಅರಿಷಡ್ವರ್ಗಗಳ ಪಾಶಕ್ಕೆ ಸಿಲುಕದೆ, ತನ್ನ ಸಮತಾಬುದ್ಧಿಯನ್ನು ಕಳೆದುಕೊಳ್ಳದೆ, ಸುಳ್ಳು, ಕಳ್ಳತನ, ಮುಂತಾದ ದುರ್ಗುಣಗಳಿಗೆ ಬಲಿಯಾಗಬಾರದು. ಬೇರೆಯವರಿಗೆ ನೇರವಾಗಿ, ದೈಹಿಕವಾಗಿ, ಮಾನಸಿಕವಾಗಿ ಹಿಂಸೆ ಮಾಡುವುದೂ ಒಂದೆ, ಸುಳ್ಳು, ಕಳ್ಳತನ, ಇತ್ಯಾದಿಗಳನ್ನು ಮಾಡಿ, ಅವರಿಗೆ ಹಿಂಸೆ ಕೊಡುವುದೂ ಒಂದೆ: ಆದುದರಿಂದ ಯಾವ ರೀತಿಯಲ್ಲೂ ಬೇರೆಯವರಿಗೆ ಹಿಂಸೆ ಮಾಡುವುದಿಲ್ಲ ಎಂಬ ದೀಕ್ಷೆಯೇ ಅಹಿಂಸಾ ದೀಕ್ಷೆ.

**ಅಹುದಾದುದು, ಅಲ್ಲದುದು :** ಧರ್ಮ ಸಮ್ಮತವಾದುದು, ಧರ್ಮನಿಷಿದ್ಧವಾದುದು (೫:೪೪೮).

**ಅಳಿಮನದವರು :** ದುಂಬಿ (ಅಳಿ)ಯಂತೆ ಹೂವಿನಿಂದ ಹೂವಿಗೆ ಹಾರಾಡುವವರು; ಅಸ್ಥಿರ ಮನಸ್ಸಿನವರು. ಇವರು ಶರಣರ ಪ್ರಕಾರ ಯೋಗ ಸಾಧನೆಗೆ ಯೋಗ್ಯರಲ್ಲ. (೧:೬೬೬, ೬೬೮).

**ಅಳಿವು :** ಲಿಂಗಾಂಗ ಸಾಮರಸ್ಯವನ್ನು ಸಾಧಿಸಿ ಮತ್ತೆ ಹುಟ್ಟದವರು (೮:೧೪೮೭).

**ಆಕಾರ :** ಶಂಕರಾಚಾರ್ಯರು ಬ್ರಹ್ಮನಿಗೆ ಎಲ್ಲ ಆಕಾರಗಳನ್ನೂ ನಿರಾಕರಿಸಿದರೆ, ವಚನಕಾರರು ಈ ವಿಷಯದಲ್ಲಿ ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ. ಪರಶಿವನು ಜಗವಾಗಿ ರೂಪಾಂತರಗೊಂಡಾಗ, ಜಗತ್ತಿನ ಆಕಾರ ಅವನ ಆಕಾರವಾಗುತ್ತದೆ. ಆದರೆ ಜಗತ್ತಿಗೊಂದು ಸ್ಪಷ್ಟ ಆಕಾರವಿಲ್ಲ. ಏಕೆಂದರೆ ಅದು ಸತತವಾಗಿ

ಬದಲಾವಣೆಯಾಗುತ್ತಿರುತ್ತದೆ. ಯಾವುದೇ ಆಕಾರವು ಶಾಶ್ವತವಲ್ಲ, ಏಕೆಂದರೆ ಪರಶಿವ 'ಜಗವಾಗದಿರಲೂ ಬಲ್ಲ'.

ಒಂದು ವೇಳೆ ಪರಶಿವನೆಂದರೆ ಚಿತ್, ಜಗತ್ತು ಕೇವಲ ಅವನ ವಿಶೇಷಣ ಎನ್ನುವುದಾದರೆ, ಆಗಲೂ ಪರಶಿವ ನಿರಾಕಾರ, ಏಕೆಂದರೆ ಭೌತ ವಸ್ತುಗಳಿಗೆ ಆಕಾರವಿರುವಂತೆ ಚಿನ್ಮಯ ವಸ್ತುವಿಗೆ ಆಕಾರವಿರಲು ಸಾಧ್ಯವಿಲ್ಲ (ನೋಡಿ : ನಿರಾಕಾರ).

**ಆಕಾರದ ಮೂರ್ತಿಯ ನಿರಾಕಾರಕ್ಕೆ ತರುವುದು :** ಸಾಕಾರ ಇಷ್ಟಲಿಂಗವನ್ನು ಕುರಿತು ಧ್ಯಾನ ಮಾಡಿ, ಐಕ್ಯ ಸ್ಥಿತಿಯನ್ನು ತಲುಪಿ ಪೂಜ್ಯ-ಪೂಜಕ ದ್ವಂದ್ವವನ್ನು ಕಳೆದುಕೊಳ್ಳುವುದು (೪:೧೫೭೨).

**ಆಕಾರವಿಲ್ಲದ ಮೂರ್ತಿಯ ಆಕಾರಕ್ಕೆ ತರುವುದು :** ನಿರಾಕಾರ ಶಿವನನ್ನು ಹಸ್ತಮಸ್ತಕ ಸಂಯೋಗದ ಮೂಲಕ ಇಷ್ಟಲಿಂಗದಲ್ಲಿ ಪ್ರತಿಷ್ಠಾಪಿಸುವುದು. (೪:೧೫೭೨)

**ಆಕಾಶತ್ರಯ :** ಘಟಾಕಾಶ, ಮಠಾಕಾಶ ಮತ್ತು ಮಹಾಕಾಶ. ಸಾಮಾನ್ಯವಾಗಿ ಈ ಮೂರು ಪದಗಳನ್ನು ಅಂಗ ಲಿಂಗಗಳ ಸಂಬಂಧವನ್ನು ವಿವರಿಸುವಾಗ ಬಳಸಲಾಗುತ್ತದೆ. ಆಕಾಶಕ್ಕೆ ಸ್ವಂತ ಯಾವುದೇ ಆಕಾರವಿಲ್ಲದಿದ್ದರೂ, ಅದು ಘಟದಲ್ಲಿದ್ದಾಗ ಘಟದ ಆಕಾರವನ್ನೇ ಪಡೆಯುತ್ತದೆ. ಆದರೆ ಘಟದೊಳಗಿರುವಾಗ ಆಕಾಶವು ಮಹಾಕಾಶದ ಭಾಗವಾದುದರಿಂದ ಅದು ಸೀಮಿತ; ಹಾಗೂ ಅದರ ಸೀಮೆ ಕೃತಕ. ಮಹಾಕಾಶಕ್ಕೆ ಸೀಮೆಯಿಲ್ಲ. ಒಂದು ವೇಳೆ ಅದು ಮಠದಲ್ಲಿರುವ ಆಕಾಶದಷ್ಟು ದೊಡ್ಡದಾದರೂ ಅದು ಸೀಮಿತವೇ. ಆದರೆ ಸೀಮೆಯಿಲ್ಲದ ಮಹಾಕಾಶಕ್ಕೆ ಯಾವುದೇ ಆಕಾರವಿಲ್ಲ. ಅದೇ ರೀತಿ ಮನುಷ್ಯನಲ್ಲಿರುವ ಚೈತನ್ಯವು ಅಲ್ಪ ಅಥವಾ ಅಣುವಿನಂತೆ ತೋರಿದರೂ, ಅದರ ಮಿತಿ ಕೇವಲ ಕಾಲ್ಪನಿಕ. ಘಟ ಮತ್ತು ಮಠ ಎರಡೂ ಒಡೆದರೆ ಅವುಗಳಲ್ಲಿರುವ ಆಕಾಶವು ಹೇಗೆ ಮಹಾಕಾಶದಲ್ಲಿ ಒಂದಾಗುತ್ತವೆಯೋ ಹಾಗೆಯೇ ಅಜ್ಞಾನ, ದೇಹ, ಇಂದ್ರಿಯ ಮುಂತಾದ ಉಪಾಧಿಗಳಿಂದ ಹೊರಬಂದ ಆತ್ಮವೂ ಅನಂತ ಪರಮಾತ್ಮನಲ್ಲಿ ಒಂದಾಗುತ್ತದೆ.

**ಆಕಾಶದ ಪೂರ್ವಾಶ್ರಯವ ಕಳೆಯುವುದು :** ಪಂಚಭೂತಗಳಲ್ಲೊಂದಾದ ಆಕಾಶ ತತ್ವಕ್ಕೆ ಶಬ್ದವೇ ಮುಖ್ಯ ಗುಣ. ನಮ್ಮ ದೇಹದಲ್ಲಿ ಆಕಾಶ ತತ್ವವು ಇರುವುದರಿಂದ ನಮಗೆ ಸುಮಧುರ ಶಬ್ದ ಕೇಳಿಸಿಕೊಳ್ಳಬೇಕು, ಕರ್ಕಶ ಶಬ್ದವನ್ನು ಕೇಳಿಸಿಕೊಳ್ಳಬಾರದು ಎಂಬ ಸ್ವಾಭಾವಿಕ ಆಸೆ ಇರುತ್ತದೆ. ಆದರೆ ಸದ್ಭಕ್ತನಿಗೆ ಆಧ್ಯಾತ್ಮಿಕ ಪ್ರವಚನಗಳನ್ನು ಕೇಳಿಸಿಕೊಂಡು, ತನ್ನ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಿಕೊಳ್ಳಬೇಕೆಂಬ ಹಂಬಲವಿರುತ್ತದೆ. ಮತ್ತೆ ಕೆಲವು ಸದ್ಭಕ್ತರು ಯಾವುದೇ ರೀತಿಯ ಮಾತುಗಳಿಂದ ವಿಚಲಿತರಾಗುವುದಿಲ್ಲ. ಮತ್ತೆ ಕೆಲವರು ತಾವು ಕೇಳಿಸಿಕೊಂಡುದುದೆಲ್ಲ ಶಿವಮಂತ್ರವೆಂದು ಮನಗಾಣುತ್ತಾರೆ. ಹೀಗಾಗಿ, ಅವರಲ್ಲಿರುವ ಆಕಾಶ ತತ್ವವು ತನ್ನ ಪೂರ್ವಾಶ್ರಯವನ್ನು ಕಳೆದುಕೊಂಡು, ಅವರ ಆಧ್ಯಾತ್ಮಿಕ ಪ್ರಗತಿಗೆ ಪೂರಕವಾಗುತ್ತದೆ. (೨:೧೫೬)

**ಆಗಮಪುರುಷರು :** ಆಗಮಗಳ ಅಧ್ಯಯನದಿಂದ ಪರಶಿವನನ್ನು ತಿಳಿಯಬಹುದೆಂದು ಭ್ರಮಿತರಾದವರು (೨:೧೧೩).

**ಆಗಮ ಮೂರ್ತಿ :** ಆಗಮಗಳಲ್ಲಿ ಉಕ್ತವಾಗಿರುವ ಪರಶಿವ. ವಾಙ್ಮನಕ್ಕಗೋಚರವಾದ ಪರಶಿವನನ್ನು ವರ್ಣಿಸಬಾರದು: ವರ್ಣಿಸುವವರು ಅಜ್ಞಾನಿಗಳು ಅಥವಾ ಬೇಕೆಂದೇ ಸುಳ್ಳು ಹೇಳುತ್ತಿದ್ದಾರೆಂದರ್ಥ. (೧೧:೩೫೫)

**ಆಗಮಸಮರಸ :** ವೇದ ವೇದಾಂತಗಳನ್ನೂ ಆಗಮಗಳನ್ನೂ ಓದಿ ಅಪಾರ ಜ್ಞಾನ ಸಂಪಾದಿಸಿದ ಜಂಗಮನು ಆಗಮೋಕ್ತ ಕ್ರಿಯೆಗಳನ್ನು ಆಚರಿಸದಿದ್ದರೆ, ಅವನು ಪಡೆದ ಆಗಮ ಜ್ಞಾನಕ್ಕೂ ಅವನ ಆಚಾರಕ್ಕೂ ಸಾಮರಸ್ಯವಿಲ್ಲದಂತಾಗುತ್ತದೆ. (ಅಥವಾ ಅವನಲ್ಲಿ ಆಗಮ ಸಮರಸವಿಲ್ಲದಂತಾಗುತ್ತದೆ). (೩:೧೬೩೭)

**ಆಗಮಾಚಾರಿ :** ಆಗಮಗಳು ಬೋಧಿಸಿದ ರೀತಿಯಲ್ಲಿ ನಡೆಯುವವನು, ನುಡಿಯುವವನು.

**ಆಗಾಮಿಕರ್ಮ :** ಈ ಜನ್ಮದಲ್ಲಿ ಮಾಡಿದ ಕರ್ಮಗಳಿಗನುಗುಣವಾಗಿ ಮುಂದೆ ಅಥವಾ ಮುಂದಿನ ಜನ್ಮದಲ್ಲಿ ಪಡೆಯುವ ಕರ್ಮಫಲ. (ಇಲ್ಲಿ 'ಕರ್ಮ' ಎಂದರೆ 'ಕರ್ಮಫಲ' ಎಂಬರ್ಥವಿದೆ.) (ನೋಡಿ : **ಕರ್ಮ, ಕರ್ಮತ್ರಯ**).

**ಆಗಾಮಿಸುಖಿ :** ಸಾಧಕನು ಪರಶಿವನಿಗೆ ಪ್ರಾಣವನರ್ಪಿಸದೇ ತಾನು ಪ್ರಸಿದ್ಧ ಪ್ರಸಾದಿ ಎಂದು ಹೇಳಿಕೊಂಡರೆ ಅವನಿನ್ನೂ ಕಾರ್ಮಿಕಮಲ ಪೀಡಿತನಾಗಿದ್ದಾನೆಂದರ್ಥ. ಅವನು ಇದರಿಂದಾಗಿ (ಕರ್ಮಗಳಿಂದಾಗಿ) ಆಗಮಿಕರ್ಮಫಲವನ್ನು ಅನುಭವಿ (ಸುಖಿ)ಸಬೇಕಾಗುತ್ತದೆ. (೧೨:೩೭೪).

**ಆಚಾರ :** ವಚನಗಳಲ್ಲಿ 'ಆಚಾರ' ಎಂಬ ಪದಕ್ಕೆ ಪರ್ಯಾಯವಾಗಿ, ಕ್ರೀ, ಕ್ರಿಯೆ, ಕರ್ಮ, ಕ್ರಿಯಾಕರ್ಮ, ಮಾಟ, ಮುಂತಾದ ಪದಗಳು ಪ್ರಯೋಗವಾಗಿವೆಯಾದರೂ, ಎಲ್ಲ ಕ್ರಿಯೆ, ಅಥವಾ ಕರ್ಮಗಳೂ ಆಚಾರವೆನಿಸಿಕೊಳ್ಳಲಾರವು. ಏಕೆಂದರೆ, ಕರ್ಮ ಅಥವಾ ಕ್ರಿಯೆ ಎಂಬ ಪದದಲ್ಲಿ ಐಚ್ಛಿಕ ಕ್ರಿಯೆ ಮತ್ತು ಅನೈಚ್ಛಿಕ ಕ್ರಿಯೆ ಎಂಬ ಎರಡು ಅರ್ಥಗಳೂ ಸೇರಿದ್ದರೆ, ಆಚಾರಕ್ಕೆ ಐಚ್ಛಿಕ ಕ್ರಿಯೆ ಎಂಬ ಒಂದೇ ಅರ್ಥವಿದೆ. ಉದಾಹರಣೆಗೆ, ಸಹಾಯ ಮಾಡುವುದು, ಕೊಲ್ಲುವುದು ಮುಂತಾದ ಐಚ್ಛಿಕ ಕ್ರಿಯೆಗಳು ಹೇಗೆ ಕ್ರಿಯೆಗಳೋ ಹಾಗೆಯೇ ಉಸಿರಾಡುವುದು, ಯಾಂತ್ರಿಕವಾಗಿ ಕಣ್ಣುರೆಪ್ಪೆ ಬಡಿಯುವುದು ಮುಂತಾದ ಅನೈಚ್ಛಿಕ ಕ್ರಿಯೆಗಳೂ ಕ್ರಿಯೆಗಳೇ. ಅಲ್ಲದೆ, ಕೆಲವು ಐಚ್ಛಿಕ ಕ್ರಿಯೆಗಳು ಧಾರ್ಮಿಕವಾಗಲಿ, ನೈತಿಕವಾಗಲಿ ಇರುವುದಿಲ್ಲ. ಉದಾಹರಣೆಗೆ ನೆಲದ ಮೇಲೆ ಬಿದ್ದಿರುವ ಪುಸ್ತಕಗಳನ್ನು ತೆಗೆದು, ಅವುಗಳನ್ನು ಮೇಜಿನ ಮೇಲೆ ಸರಿಯಾಗಿ ಜೋಡಿಸುವುದು ಒಂದು ಐಚ್ಛಿಕ ಕ್ರಿಯೆಯಾದರೂ ಅದು ಪೂಜೆಯಂತಹ ಧಾರ್ಮಿಕ ಕ್ರಿಯೆಯೂ ಅಲ್ಲ, ದಾನದಂತಹ ನೈತಿಕ ಕ್ರಿಯೆಯೂ ಅಲ್ಲ. ಆದರೆ ಆಚಾರ ಎಂಬ ಪದಕ್ಕೆ ಒಂದು ನಿಯಮಕ್ಕೆ ಬದ್ಧವಾದ

ರೀತಿಯಲ್ಲಿ ಮಾಡುವ ನೈತಿಕ ಅಥವಾ ಧಾರ್ಮಿಕ ಕ್ರಿಯೆ ಎಂಬ ಅರ್ಥವಿದ್ದು, ಅನೈಚ್ಛಿಕವಾಗಿ ಉಸಿರಾಡುವುದಾಗಲಿ, ನೆಲದ ಮೇಲೆ ಬಿದ್ದಿರುವ ಪುಸ್ತಕಗಳನ್ನು ಮೇಜಿನ ಮೇಲೆ ಸರಿಯಾಗಿ ಜೋಡಿಸುವಂಥ ಐಚ್ಛಿಕ ಕ್ರಿಯೆಯಾಗಲಿ ಅದರ ಅರ್ಥದ ಪರಿಧಿಯಲ್ಲಿ ಬರುವುದಿಲ್ಲ. ಏಕೆಂದರೆ, ಉಸಿರಾಡಬೇಕೆಂಬ ನಿಯಮವನ್ನಾಗಲಿ, ಪುಸ್ತಕಗಳನ್ನು ಜೋಡಿಸಬೇಕೆಂಬ ನಿಯಮವನ್ನಾಗಲಿ ಯಾರೂ ಮಾಡಿಲ್ಲ, ಆದರೆ ಕಳಬೇಡ, ಕೊಲಬೇಡ, ಲಿಂಗಪೂಜೆ ಮಾಡು ಮುಂತಾದ ನಿಯಮಗಳನ್ನು ಮಾಡಿದ್ದಾರೆ.

ಆಚಾರವು ನಿಯಮಕ್ಕೆ ಸಂಬಂಧಿಸಿದೆಯಾದುದರಿಂದ ಅದನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯ ನಮಗೆ ಇದೆ ಎಂದರ್ಥ. ಅಂದರೆ ಒಂದು ನಿಯಮವನ್ನು ಇಚ್ಛಾಪೂರ್ವಕವಾಗಿ ಒಪ್ಪಿಕೊಂಡರೆ, ನಾವು ಅದರಂತೆ ಮಾಡುವುದು ಆಚಾರ ಅಥವಾ ಸದಾಚಾರವಾಗುತ್ತದೆ; ಆ ನಿಯಮವನ್ನು ಒಪ್ಪಿಕೊಳ್ಳದೆ, ಅವಕ್ಕೆ ವಿರುದ್ಧವಾಗಿ ನಡೆದುಕೊಂಡರೆ, ಆ ನಮ್ಮ ನಡವಳಿಕೆ ಅನಾಚಾರ ಅಥವಾ ದುರಾಚಾರ ಎನಿಸಿಕೊಳ್ಳುತ್ತದೆ. ಹೀಗೆ ನಿಯಮವಿಲ್ಲದೆ ಹಾಗೂ ಆಯ್ದುಕೊಳ್ಳುವ ಸ್ವಾತಂತ್ರವಿಲ್ಲದೆ ಮಾಡುವ ಕ್ರಿಯೆಗಳು ಆಚಾರವಲ್ಲ.

ಆದರೆ ನಿಯಮಗಳಿಗನುಸಾರವಾಗಿ ಮಾಡಿದ ಕ್ರಿಯೆಗಳೆಲ್ಲಾ ಆಚಾರಗಳಲ್ಲ. ಉದಾಹರಣೆಗೆ, ಒಬ್ಬ ಕ್ರಿಕೆಟ್ ಆಟಗಾರ, ನಿಯಮಗಳಿಗನುಸಾರವಾಗಿ ಚೆಂಡನ್ನು ಹೊಡೆಯುತ್ತಾನೆ; ಒಬ್ಬ ಬೌಲರ್ ನಿಯಮವೊಂದರ ವಿರುದ್ಧವಾಗಿ ಬೌಲ್ ಮಾಡುತ್ತಾನೆ. ಆದರೆ ಇದರ ಅರ್ಥ ಮೊದಲನೆಯವನ ಕ್ರಿಯೆ ಆಚಾರ, ಎರಡನೆಯವನ ಕ್ರಿಯೆ ದುರಾಚಾರ, ಎಂದಲ್ಲ. ಆದುದರಿಂದ, ಆಚಾರ ಎಂಬ ಪದವನ್ನು ವಚನಕಾರರು ಧಾರ್ಮಿಕ ಮತ್ತು ನೈತಿಕ ಕ್ರಿಯೆಗಳಿಗೆ ಮಾತ್ರ ಅನ್ವಯಿಸುವಂತೆ ಬಳಸಿದ್ದಾರೆ, ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಆಚಾರಗಳು ಒಂದು ತುದಿಯಲ್ಲಿ ನಿಯಮಗಳಿಗೆ ಸಂಬಂಧಿಸಿದ್ದರೆ, ಮತ್ತೊಂದು ತುದಿಯಲ್ಲಿ ಪ್ರತಿಫಲಗಳಿಗೆ ಸಂಬಂಧಿಸಿವೆ. ಉದಾಹರಣೆಗೆ, ನಿತ್ಯ ಮೂರು ಹೊತ್ತು ಇಷ್ಟಲಿಂಗ ಪೂಜೆ ಮಾಡುವುದರಿಂದ ಶಿವಾನುಗ್ರಹ ಲಭಿಸುತ್ತದೆ. ಕಾಯಕ ದಾಸೋಹ ಮಾಡುವುದರಿಂದ ನಮ್ಮ ಮನಸ್ಸು ಶುದ್ಧವಾಗುತ್ತದೆ, ಎಂಬ ವಾಕ್ಯಗಳು ಇಂಥಿಂಥ ಆಚಾರಗಳಿಗೆ ಇಂಥಿಂಥ ಫಲಗಳುಂಟು ಎಂಬುದನ್ನು ತಿಳಿಸುತ್ತದೆ. ಬಹಳ ಪ್ರಸಿದ್ಧವಾದ ಬಸವ ವಚನವನ್ನು ನೋಡಿ : "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯ ಬೇಡ ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಸಂಗಮದೇವರ ಒಲಿಸುವ ಪರಿ". ೧. ಈ ವಚನದಲ್ಲಿ ಕಳಬೇಡ, ಕೊಲಬೇಡ' ಎಂಬ ನೈತಿಕ ನಿಯಮಗಳಿವೆ; ೨. ಈ ನಿಯಮಗಳನ್ನು ಆಚರಿಸಿದರೆ, ನಮ್ಮ ಅಂತರಂಗವೂ, ಬಹಿರಂಗವೂ ಶುದ್ಧಿಯಾಗುತ್ತದೆ. ಮತ್ತು ೩. ದೇವರು ನಮ್ಮ ಅಂತರಂಗ ಶುದ್ಧಿಯನ್ನು

ಮೆಚ್ಚಿಕೊಂಡು, ನಮಗೆ ಲಿಂಗಾಂಗ ಸಾಮರಸ್ಯವನ್ನು ಅನುಗ್ರಹಿಸುತ್ತಾನೆ. ಅಂದರೆ, ಲಿಂಗಾಂಗ ಸಾಮರಸ್ಯ ಎಂಬ ಫಲವನ್ನು ಬಯಸುವವನು ಬಸವವಚನದಲ್ಲಿ ಉಕ್ತವಾಗಿರುವ ಹಾಗೂ ಇತರ ನಿಯಮಗಳನ್ನು ಆಚರಿಸಬೇಕು, ಅದನ್ನು ಬಯಸದವನು ಆಚರಿಸಬೇಕಿಲ್ಲ, ಎಂಬುದು ಇದರ ಅರ್ಥ. ಅದೇ ರೀತಿ, ಸಾಮರಸ್ಯವನ್ನು ಬಯಸಿಯೂ ಮೇಲಿನಂತೆ ಆಚರಿಸದಿದ್ದರೆ, ಅಂಥವನಿಗೂ ಸಾಮರಸ್ಯ ಲಭ್ಯವಿಲ್ಲ, ಎಂಬುದೂ ಇದರ ಅರ್ಥ.

ವಚನಕಾರರು ಲಿಂಗಾಂಗ ಸಾಮರಸ್ಯವನ್ನು ಗುರಿಯಾಗಿಟ್ಟುಕೊಂಡು, ಅನೇಕ ನಿಯಮಗಳನ್ನು ರೂಪಿಸಿದ್ದಾರೆ. ಆ ನಿಯಮಗಳಿಗೆ ತಕ್ಕಂತೆ ಮಾಡುವ ಆಚಾರಗಳನ್ನು ನಾವು ಸ್ಥೂಲವಾಗಿ ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು. ೧. ಕೇವಲ ಧಾರ್ಮಿಕ ಆಚಾರಗಳು, ಮತ್ತು ೨. ಕೇವಲ ನೈತಿಕ ಆಚಾರಗಳು.

೧. ಅಷ್ಟಾವರಣಗಳ ಆಚಾರಗಳೆಲ್ಲವೂ ಕೇವಲ ಧಾರ್ಮಿಕ ಆಚಾರಗಳು. ಮೋಕ್ಷಾರ್ಥಿಯು ಗುರುವಿನ ಬಳಿ ಹೋಗಿ ಅವನಿಂದ ಲಿಂಗದೀಕ್ಷೆ ಪಡೆಯಬೇಕು; ಲಿಂಗವನ್ನು ನಿತ್ಯ ಮೂರು ಹೊತ್ತು ಪೂಜಿಸಬೇಕು; ಜಂಗಮರಿಗೆ ಕಾಣಿಕೆ ಕೊಡಬೇಕು; ಪಾದೋದಕ, ಪ್ರಸಾದ ಸೇವಿಸಬೇಕು; ವಿಭೂತಿ ಮತ್ತು ರುದ್ರಾಕ್ಷಿ ಧರಿಸಬೇಕು; ಮತ್ತು ಶಿವಾಯನಮಃ ಎಂಬ ಮಂತ್ರವನ್ನು ಜಪಿಸಬೇಕು.

೨. ಸತ್ಯವನ್ನು ಹೇಳಬೇಕು, ಸಕಲ ಪ್ರಾಣಿಗಳಿಗೆ ದಯೆ ತೋರಿಸಬೇಕು, ಕಾಯಾವಾಚಾಮನಸಾ ಹಿಂಸೆಯನ್ನು ಮಾಡಬಾರದು, ಕಳ್ಳತನ ಮಾಡಬಾರದು, ಬೇರೆಯವರು ಕೊಟ್ಟಿದುದನ್ನು ಅನಾವಶ್ಯಕವಾಗಿ ಸ್ವೀಕರಿಸಬಾರದು, ಸುಳ್ಳು ಹೇಳಬಾರದು, ಇತ್ಯಾದಿ ನಿಯಮಗಳೆಲ್ಲಾ ನೈತಿಕ ಆಚಾರಗಳನ್ನು ಮಾಡಿ, ಅನೈತಿಕ ಆಚಾರಗಳನ್ನು ಬಿಡಿ ಎಂದು ಹೇಳುತ್ತವೆ.

ಪರಮಾತ್ಮನಲ್ಲಿ ನಂಬಿಕೆಯಿಲ್ಲದ ಕೆಲವರು, ಧಾರ್ಮಿಕ ಆಚಾರಗಳಿಲ್ಲದೆಯೆ, ಕೇವಲ ನೈತಿಕ ಆಚಾರಗಳನ್ನು ಮಾಡಬಹುದು ಎಂದು ಹೇಳುತ್ತಾರೆ. ಒಂದರ್ಥದಲ್ಲಿ ಇದು ಸತ್ಯವಾದರೂ, ನೈತಿಕ ಆಚರಣೆಗಳಿಲ್ಲದೆಯೆ ಧರ್ಮವನ್ನು ಆಚರಿಸಬಹುದು ಹಾಗೂ ಧಾರ್ಮಿಕ ಗುರಿಯನ್ನು ಸಾಧಿಸಬಹುದು ಎಂಬ ಮಾತು ಮಾತ್ರ ಅಸತ್ಯ. ಇಲ್ಲಿ ಧರ್ಮ ಅಥವಾ ಧಾರ್ಮಿಕ ಆಚಾರ ಎಂಬ ಪದವು ಲಿಂಗಪೂಜೆ, ವಿಭೂತಿ ಧಾರಣೆ ಮುಂತಾದ ಕ್ರಿಯೆಗಳಿಗಷ್ಟೇ ಅಲ್ಲ, ನೈತಿಕ ಕ್ರಿಯೆಗಳಿಗೂ ಅನ್ವಯಿಸುತ್ತದೆ ಎಂಬ ಮಾತನ್ನು ಒಪ್ಪಿಕೊಂಡರೆ ನೀತಿಯಿಲ್ಲದ ಧರ್ಮ ಧರ್ಮವೇ ಅಲ್ಲ ಎಂಬ ಮಾತು ನಿರ್ವಿವಾದವಾಗುತ್ತದೆ. ಅದಕ್ಕೆ ಬಸವಣ್ಣನವರು ದಯವಿಲ್ಲದ ಧರ್ಮ ಧರ್ಮವೇ ಅಲ್ಲ ಎಂದಿದ್ದಾರೆ. ಅದೇ ರೀತಿ -ತೊರೆವ ಮೀವ ಅಣ್ಣಗಳಿರಾ.... ತೊರೆಯಿಂಭೋ ಪರನಾರಿ

ಸಂಗಮ.... ಪರಧನದಾಮಿಷವ, ಇವ ತೊರೆಯದೆ ಹೋಗಿ ತೊರೆಯ ಮಿಂದರೆ" ಅದು ಧರ್ಮವಾಗುವುದಿಲ್ಲ ಹಾಗೂ ಅಂಥ ಬಾಹ್ಯ ಕ್ರಿಯೆಗಳೆಲ್ಲಾ ವ್ಯರ್ಥ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಆಚಾರಗಳು ಒಂದೇ ತೆರನಾಗಿರುವುದಿಲ್ಲ. ವಚನಕಾರರು ಆಧ್ಯಾತ್ಮ ಸಾಧನೆಯಲ್ಲಿ ಆರು ಹಂತಗಳನ್ನು ಗುರುತಿಸಿ, ಅವನ್ನು ಸ್ಥಲವೆಂದು ಕರೆದಿದ್ದಾರೆ. ಈ ಆರು ಸ್ಥಲಗಳಲ್ಲಿ ಸಾಧಕನು ತನ್ನ ಸಿದ್ಧಾಂತಗಳನ್ನು ವಿಕಾಸಗೊಳಿಸಿಕೊಂಡಂತೆ, ಅದಕ್ಕೆ ತಕ್ಕಂತೆ ಆಚಾರಗಳನ್ನೂ ವಿಕಾಸಗೊಳಿಸಿಕೊಳ್ಳುತ್ತಾನೆ. ಉದಾಹರಣೆಗೆ, ಅವನು ಮೊದಲು ಶಿವನು ಲಿಂಗವೆಂದು ತಿಳಿದು ಅದಕ್ಕೆ ಪೂಜೆ, ಅರ್ಚನೆ ಮಾಡುತ್ತಾನೆ; ಮುಂದಿನ ಹಂತದಲ್ಲಿ ಲಿಂಗವು ಕೇವಲ ಪರಶಿವನ ಕುರುಹೆಂದು ತಿಳಿದು, ಇಷ್ಟಲಿಂಗಕ್ಕೆ ಪ್ರಾಮುಖ್ಯತೆ ಕೊಡುವುದನ್ನು ಕಡಿಮೆ ಮಾಡಿ ಪರಶಿವನಿಗೆ ಪ್ರಾಮುಖ್ಯತೆ ಕೊಡಲು ಪ್ರಾರಂಭಿಸುತ್ತಾನೆ. ಇನ್ನೂ ಮುಂದಿನ ಹಂತದಲ್ಲಿ, ಪರಶಿವನು (ಲಿಂಗವು) ನಮ್ಮ ಪ್ರತಿ ಅಂಗದಲ್ಲಿಯೂ ಇದ್ದಾನೆ ಎಂದು ಭಾವಿಸುತ್ತಾನೆ. ಕೊನೆಯಲ್ಲಿ ಸಾಮರಸ್ಯದ ಮೂಲಕ ತಾನೇ ಲಿಂಗ ಎಂಬುದನ್ನೂ ಅರಿಯುತ್ತಾನೆ. ಅದೇ ರೀತಿಯಲ್ಲಿ ಅವನ ಆಚಾರದಲ್ಲಿಯೂ ಒಂದು ವಿಕಾಸವನ್ನು ಕಾಣಬಹುದು: ಸಾಧಕನು ಪ್ರಥಮ ಹಂತದಲ್ಲಿ ಲಿಂಗಕ್ಕೆ ಆಹಾರವನ್ನು ಅರ್ಪಿಸಿ, ಅದು ಪ್ರಸಾದವಾದಾಗ, ಅದನ್ನು ಸ್ವೀಕರಿಸುತ್ತಾನೆ. ಆದರೆ ಇನ್ನೂ ಮುಂದಿನ ಸ್ಥಲಕ್ಕೆ ಬಂದಾಗ, ಅವನು ಆಹಾರವನ್ನಷ್ಟೇ ಅಲ್ಲ, ತಾನು ಸೇವಿಸುವ ಗಾಳಿ, ಕುಡಿಯುವ ನೀರು, ಕೇಳುವ ಶಬ್ದ, ಇವೆಲ್ಲವನ್ನೂ ಶಿವನಿಗೆ ಅರ್ಪಿಸಿ ಅನಂತರ ಅವುಗಳನ್ನು ಪ್ರಸಾದವೆಂಬಂತೆ ಅನುಭವಿಸುತ್ತಾನೆ. ಇನ್ನೂ ಮುಂದಿನ ಹಂತದಲ್ಲಿ ಅವನು, ತನ್ನ ಕರ್ಮೇಂದ್ರಿಯ, ಜ್ಞಾನೇಂದ್ರಿಯ ಇತ್ಯಾದಿಗಳನ್ನೆಲ್ಲಾ ಶಿವನಿಗೆ ಅರ್ಪಿಸಿ, ಅನಂತರ ಅವುಗಳ ಮೂಲಕ ಬರುವ ಪ್ರಸಾದವನ್ನು ಸ್ವೀಕರಿಸುತ್ತಾನೆ. ಕೊನೆಗೆ ಶರಣ ಸ್ಥಲದಲ್ಲಿ ತನ್ನ ಆತ್ಮವನ್ನೇ ಅರ್ಪಿಸಿಕೊಳ್ಳುತ್ತಾನೆ. ಆಗ ಅವನು ತಾನೇ ಪ್ರಸಾದ, ತಾನೇ ಪ್ರಸಾದಿ. ಅದೇ ರೀತಿ ಇತರ ಆಚಾರಗಳಲ್ಲಿಯೂ ವಿಕಾಸವಾಗಿರುತ್ತದೆ.

ವಾಸ್ತವವಾಗಿ, ಆಚಾರದಲ್ಲಿ ವಿಕಾಸವಾಗುತ್ತದೆ, ಎಂಬ ಮಾತು ಅಸ್ಪಷ್ಟವಾಗಿದೆ. ಏಕೆಂದರೆ ಆಚಾರದಲ್ಲಿ ವಿಕಾಸವಿರಲಾರದು. ಎಲ್ಲ ಆಚಾರಗಳೂ ಮೇಲೆ ಹೇಳಿದಂತೆ ನಿಯಮಕ್ಕೆ ಒಳಪಟ್ಟಿರುವುದರಿಂದ, ಹಾಗೂ ಆ ನಿಯಮಗಳು ಕೆಲವು ಸಿದ್ಧಾಂತಗಳನ್ನು ಆಶ್ರಯಿಸಿರುವುದರಿಂದ, ಸಿದ್ಧಾಂತದಲ್ಲಿ ವಿಕಾಸವಾದರೆ, ಅದಕ್ಕನುಗುಣವಾದ ಆಚಾರಗಳಲ್ಲಿಯೂ 'ವಿಕಾಸ'ವಾಗುತ್ತದೆ.

ವಚನಕಾರರು ವಿಧಿಸಿರುವ ಆಚಾರಗಳೇ ನಮಗೆ ಲಿಂಗಾಂಗ ಸಾಮರಸ್ಯ ನೀಡುವುದಿಲ್ಲ. ನಾವು ಅನೇಕ ಜನ್ಮಾಂತರಗಳಲ್ಲಿ ಅನೇಕ ಸಾವಿರ ವರ್ಷ ಇಷ್ಟಲಿಂಗ ಪೂಜೆ ಮಾಡಬಹುದು, ಆದರೆ ಇದರಿಂದಾಗಿ ಸಾಮರಸ್ಯ ಲಭ್ಯವಾಗದಿರಬಹುದು.

ಏಕೆಂದರೆ, ಇಷ್ಟಲಿಂಗ ಪೂಜೆಯು ಯಾಂತ್ರಿಕವಾಗಿರಬಹುದು. ಪೂಜೆ, ಜಪ, ಮುಂತಾದ ಧಾರ್ಮಿಕ ಕ್ರಿಯೆಗಳ ಜೊತೆಗೆ, ಅನೇಕ ಸಾವಿರ ಸಾರಿ ದಾನ ಧರ್ಮಗಳನ್ನೂ ಮಾಡಿರಬಹುದು. ಅದರಿಂದಲೂ ಸಾಮರಸ್ಯ ಸಿದ್ಧಿಸದಿರಬಹುದು. ಏಕೆಂದರೆ, ಅವುಗಳನ್ನೂ ನಾವು ಪ್ರತಿಫಲಾಪೇಕ್ಷೆಯಿಂದ ಮಾಡಿರಬಹುದು. ಆದರೆ ಅವುಗಳನ್ನು ಮಾಡದೆಯೇ ಲಿಂಗಾಂಗ ಸಾಮರಸ್ಯ ಸಾಧ್ಯವಿಲ್ಲ. ಹಾಗಾದರೆ, ಆಚಾರಗಳ ಪ್ರಯೋಜನವೇನು? ಅಥವಾ ಅವುಗಳನ್ನು ಹೇಗೆ ಆಚರಿಸಿದರೆ ಪರಿಣಾಮಕಾರಿಯಾಗುತ್ತವೆ?

ಆಚಾರಗಳ ಕೆಲಸ ಕೇವಲ ಮನಸ್ಸನ್ನು ಅಥವಾ ಆತ್ಮವನ್ನು ಶುದ್ಧಿ ಮಾಡುವುದು. ಶುದ್ಧವಾದ ಮನಸ್ಸು (ಅಂದರೆ ಕಾಮ ಕ್ರೋಧಾದಿಗಳಿಲ್ಲದ ಮನಸ್ಸು), ಲಿಂಗಧ್ಯಾನದಲ್ಲಿ ಸುಲಭವಾಗಿ ತೊಡಗಬಲ್ಲುದು. ಲಿಂಗಧ್ಯಾನದ ಮೂಲಕ ಮಾತ್ರ ಲಿಂಗಾಂಗ ಸಾಮರಸ್ಯ ಸಾಧ್ಯ.

ಈ ಕಾರಣಗಳಿಂದಲೇ, ಆಚಾರಗಳನ್ನು ಆತ್ಮಶುದ್ಧಿಗಾಗಿ ಮಾಡಬೇಕೇ ಹೊರತು, ಸಾಮರಸ್ಯ ಅಥವಾ ಮೋಕ್ಷ ಲಭಿಸಲಿ ಎಂಬ ಉದ್ದೇಶದಿಂದ ಅಲ್ಲ, ಎಂದು ವಚನಕಾರರು ಹೇಳಿರುವುದು. (ನೋಡಿ : **ಆಚಾರ ಪ್ರಭೇದಗಳು**)

**ಆಚಾರಗುರು :** ಮತ್ತೆ ಸೃಷ್ಟಿಗೆ ಸಿಕ್ಕದಿರಲು ಸಹಾಯಕವಾಗುವಂಥಹ ಆಚಾರಗಳನ್ನು ಬೋಧಿಸುವ ಗುರು. (ಅ:೧೪೩೫).

**ಆಚಾರತ್ರಯ ಅನಾಚಾರ ಭ್ರಷ್ಟರು :** ಗುರು ಬೋಧಿಸಿದ ಆಚಾರಗಳನ್ನು ಮಾಡದ ಕಾಯ ಗುರುದ್ರೋಹಿ; ಆಚಾರಗಳ ಜ್ಞಾನವೇ ಇಲ್ಲದ ಮನಸ್ಸು ಲಿಂಗದ್ರೋಹಿ; ಜ್ಞಾನವಿದ್ದರೂ ಅವುಗಳನ್ನು ಮಾಡಬೇಕೆಂಬ ಇಚ್ಛೆಯಿಲ್ಲದೇ ಇದ್ದರೆ, ಅಂತಹ ಭಾವ ಜಂಗಮದ್ರೋಹಿ. ಹೀಗೆ ಅಂಗ (ಕಾಯ), ಮನ ಮತ್ತು ಭಾವ ಅನಾಚಾರ ಭ್ರಷ್ಟರು.

**ಆಚಾರದ ಬೇರು :** ಆಚಾರಲಿಂಗಕ್ಕೆ ತೋರಿಸುವ ಭಕ್ತಿ, ಶ್ರದ್ಧಾ ಭಕ್ತಿ. "ಆಚಾರದ ಬೇರು ಹಿಡಿದು ಐಕ್ಯದ ತುದಿಯನೇರಿದೆ" ಎಂದು ಅಕ್ಕಮಹಾದೇವಿ ಹೇಳುವಲ್ಲಿ ಐಕ್ಯವನ್ನು ಮುಟ್ಟಲು ಆಚಾರ ಅಥವಾ ಶ್ರದ್ಧಾಭಕ್ತಿಯೆಂಬ ಮೂಲ ಸಾಧನ ಆವಶ್ಯಕವೆಂಬ ಅರ್ಥವಿದೆ.

**ಆಚಾರ ಪ್ರಭೇದ :** ಧರ್ಮವು ಕೇವಲ ಕೆಲವು ಸಿದ್ಧಾಂತ ಅಥವಾ ನಂಬಿಕೆಗಳ ಕಂತೆಯಲ್ಲ. ನಂಬಿಕೆಗಳು ಬೇಕು, ಅವುಗಳಿಗೆ ಪೂರಕವಾದ ಆಚಾರಗಳೂ ಬೇಕು. ದೇವರು ಇದ್ದಾನೆ, ಆತ್ಮವು ಅವನ ಅಂಶ ಎಂಬ ನಂಬಿಕೆ ಇದ್ದರೆ ಸಾಲದು, ಆ ನಂಬಿಕೆಗೆ ತಕ್ಕಂತೆ ಸಾಧಕನು ಕೆಲವು ವಿಶಿಷ್ಟ ರೀತಿಯ ಕ್ರಿಯೆಗಳನ್ನು ಮಾಡಬೇಕಾಗುತ್ತದೆ. ಅಂತಹ ಮೂಲಭೂತ ಕ್ರಿಯೆಗಳ ಪಟ್ಟಿಯೊಂದನ್ನು ಚೆನ್ನಬಸವಣ್ಣನವರು ಮಾಡಿ, ಅವನ್ನು ವೀರಶೈವನಾದವನು ಆಚರಿಸಬೇಕೆಂದು ವಿಧಿಸಿದ್ದಾರೆ. ಆ ಪಟ್ಟಿಯಲ್ಲಿ ಐವತ್ತು ಆಚಾರಗಳನ್ನು ಹೆಸರಿಸಿದ್ದಾರೆ.

೧. ಪರರ ಹೆಣ್ಣಿಗೆ ಕಣ್ಣಿಡಬಾರದು.
೨. ಪರರ ದ್ರವ್ಯವ ಅಪಹರಿಸಬಾರದು.
೩. ಸುಳ್ಳು ಹೇಳಬಾರದು.
೪. ವಿಶ್ವಾಸದ್ರೋಹ ಮಾಡಬಾರದು.
೫. ಪ್ರಾಣಿ ಹಿಂಸೆ ಮಾಡಬಾರದು.
೬. ಶಿವಶರಣರನ್ನು ಸಂತುಷ್ಟಿ ಪಡಿಸಬೇಕು.
೭. ಪ್ರಾಣ ಹೋದರೂ ನೇಮವನ್ನು ತ್ಯಜಿಸಬಾರದು.
೮. ಶಿವಭಕ್ತರ ಧಿಕ್ಕರಿಸುವವರನ್ನು ಕೊಲ್ಲಬೇಕು.
೯. ಕೆಟ್ಟ ಜನರ ಸಹವಾಸ ಮಾಡಬಾರದು.
೧೦. ಸಜ್ಜನರ ಸಂಗ ಬಿಡಬಾರದು.
೧೧. ಅನ್ಯದೇವತಾಚರಣೆಗೆ ಬೆನ್ನು ತಿರುಗಿಸಬೇಕು.
೧೨. ಶಿವನೇ ಸರ್ವೋತ್ತಮನೆಂದು ತಿಳಿಯಬೇಕು.
೧೩. ಶಿವಗಣಗಳಲ್ಲಿ ತಾರತಮ್ಯ ಮಾಡಬಾರದು.
೧೪. ಸರ್ವಹಿತ ಬಯಸಬೇಕು.
೧೫. ಸರ್ವಹಿತ ಮಾಡಬೇಕು.
೧೬. ಕಡ್ಡಿಯನ್ನು ಲಿಂಗಕ್ಕೆ ತೋರಿಸಿದ ನಂತರವೇ ಅದರಿಂದ ಹಲ್ಲುಜ್ಜಬೇಕು.
೧೭. ಎಲ್ಲ ಅವಯವಗಳನ್ನು ಸಚ್ಛವಾಗಿ ಪ್ರಕ್ಷಾಳನ ಮಾಡಬೇಕು.
೧೮. ಲಿಂಗಮುದ್ರೆ ಇಲ್ಲದ ಗುಡಿಯಲ್ಲಿ ಅಡಿಗೆ ಮಾಡಬಾರದು.
೧೯. ಪ್ರಣವ ಮುದ್ರೆ ಇಲ್ಲದ ವಸ್ತ್ರವ ಹೊದೆಯಬಾರದು.
೨೦. ಹುಟ್ಟಿದ ಶಿಶುವಿಗೆ ಲಿಂಗಧಾರಣೆ ಮಾಡುವ ಮೊದಲು ತಾಯಹಾಲು, ಜೇನುತುಪ್ಪ ಮುಂತಾದವನ್ನು ಕೊಡಬಾರದು.
೨೧. ಕೊಟ್ಟಭಾಷೆಗೆ ತಪ್ಪಬಾರದು.
೨೨. ಸತ್ಯ ನುಡಿದು ಅದಕ್ಕೆ ತಪ್ಪಬಾರದು.
೨೩. ದನ ಕರುಗಳನ್ನು ರಕ್ಷಿಸಬೇಕು.
೨೪. ದನಕರುಗಳಿಗೆ ಲಿಂಗಮುದ್ರೆಯನಿಕ್ಕಿದನಂತರವೇ ಅವುಗಳಿಂದ ಹಾಲು ಕರೆಯಬೇಕು.
೨೫. ಮಂತ್ರಸಹಿತ ಗೋಮವನ್ನು ಸಂಚಯಿಸಿ ಮಂತ್ರಸಹಿತ ಸುಟ್ಟು ರಾಶಿ ಮಾಡಬೇಕು.
೨೬. ಹಾಗೇ ರಾಶಿ ಮಾಡಿದ ಭಸ್ಮ ರಾಶಿಯನ್ನು ಪಾದೋದಕದಿಂದ ಉಂಡೆ ಮಾಡಬೇಕು.
೨೭. ವಿಧ್ಯುಕ್ತವಾಗಿ ವಿಶಿಷ್ಟ ಸ್ಥಾನಗಳಲ್ಲಿ ರುದ್ರಾಕ್ಷಿ ಧರಿಸಬೇಕು.
೨೮. ಶಿವಾನುಭವವನ್ನು ಹೇಗೆ ಸಾಧಿಸಬೇಕೆಂಬುದನ್ನು ವಿಚಾರಿಸಿ ತಿಳಿದುಕೊಳ್ಳಬೇಕು.

೨೯. ಮನ ನೋಯಿಸುವಂತೆ ಮಾತನಾಡಬಾರದು.
೩೦. ಲಿಂಗದ ಸ್ವರೂಪವನ್ನು ಅರಿತು, ಅದನ್ನು ಪೂಜಿಸಬೇಕು.
೩೧. ಗುರುವಿನಿಂದ ಮಾನವನ ನಿಜ ಸ್ವರೂಪವೇನೆಂದು ತಿಳಿದುಕೊಳ್ಳಬೇಕು.
೩೨. ಅರಿಷಡ್ವರ್ಗಗಳನ್ನು ಜಯಿಸಿ, ಷಟ್‌ಸ್ಥಲವನ್ನು ಸಾಧಿಸಬೇಕು.
೩೩. ಮನಸ್ಸು ಮೂರು ರೀತಿಯ ಅಂಗಗಳಲ್ಲಿಯೂ ಅವಿಚ್ಛಿನ್ನವಾಗಿ ಬೆರೆತಿರಬೇಕು.
೩೪. ಇಷ್ಟಲಿಂಗವು ಕೇವಲ ಕಲ್ಲಿನ ತುಂಡು ಎಂದು ಅಲಕ್ಷ್ಯ ಮಾಡಬಾರದು.
೩೫. ಜಂಗಮರಲ್ಲಿ ಕುಲವನರಸಬಾರದು.
೩೬. ವಿಭೂತಿಯ ಬಿಡಬಾರದು.
೩೭. ಶುದ್ಧ ಮಾಡಿದ ರುದ್ರಾಕ್ಷಿಗಳನ್ನು ಧರಿಸಬೇಕು.
೩೮. ಪಾದೋದಕ ನಿರ್ಮಲ ಎಂದು ತಿಳಿಯಬೇಕು.
೩೯. ಪ್ರಸಾದದಲ್ಲಿ ರುಚಿಯ ನೋಡಬಾರದು.
೪೦. ದುರುದ್ದೇಶಕ್ಕೆ ಮಂತ್ರವನ್ನು ಬಳಸಬಾರದು.
೪೧. ಲಿಂಗಾರ್ಚನೆ ಮಾಡದೆ ಭೋಜನ ಮಾಡಬಾರದು.
೪೨. ಶರಣರನ್ನು ಸಮಾಧಿ ಮಾಡಿದ ನಂತರ ಲಿಂಗಪೂಜೆ ಮಾಡಬೇಕು.
೪೩. ಲಿಂಗಕ್ಕೆ ಅಪಚಾರ/ದ್ರೋಹ ಆದರೆ ಪ್ರಾಣಬಿಡಬೇಕು.
೪೪. ಜಂಗಮ ದ್ರೋಹ ಕೇಳಿದರೆ ಪ್ರಾಣಬಿಡಬೇಕು.
೪೫. ಲಿಂಗದ್ರೋಹಿಯನ್ನು ಕೊಲ್ಲಬೇಕು.
೪೬. ಜಂಗಮ ದ್ರೋಹಿಯನ್ನು ಕೊಲ್ಲಬೇಕು.
೪೭. ಅಷ್ಟಾವರಣದ ಆವಶ್ಯಕತೆಯನ್ನು ತಿಳಿದುಕೊಳ್ಳಬೇಕು.
೪೮. ತನಗೂ ಲಿಂಗಕ್ಕೂ ಭೇದವಿಲ್ಲವೆಂದು ತಿಳಿಯಬೇಕು.
೪೯. ತನ್ನ ನಿಜಸ್ವರೂಪವನ್ನು ತಿಳಿದುಕೊಂಡು ಬೇರೆಯವರಿಗೂ ಅದನ್ನು ಬೋಧಿಸಿ, ಅವರನ್ನು ತನ್ನಂತೆ ಮಾಡಬೇಕು.
೫೦. ಈ ಮೇಲಿನ ೪೯ ಆಚಾರಗಳನ್ನು ಕಡೆಯವರೆಗೂ ಬಿಡದೇ ಪಾಲಿಸುವುದೇ ಐವತ್ತನೆ ಆಚಾರ.

ಈ ಪಟ್ಟಿಯಲ್ಲಿರುವ ಆಚಾರಗಳನ್ನು ಸ್ವಲ್ಪ ಸೂಕ್ಷ್ಮವಾಗಿ ಪರಿಗಣಿಸಿದರೆ, 'ಆಚಾರ' ಎಂಬ ಪದವು ಎರಡು ಅರ್ಥಗಳಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ.

೧). 'ಗುರುವಿನಿಂದ ಮಾನವನ ನಿಜಸ್ವರೂಪವನ್ನು ತಿಳಿದುಕೊಳ್ಳಬೇಕು'. ಎಂಬ ಮೂವತ್ತೊಂದನೆ ಆಚಾರ, 'ಇಷ್ಟಲಿಂಗವು ಕಲ್ಲಿನ ತುಂಡೆಂದು ಅಲಕ್ಷಿಸಬಾರದು' ಎಂಬ ೩೪ನೇ ಆಚಾರ, 'ಜಂಗಮರಲ್ಲಿ ಕುಲವನರಸಬಾರದು' ಮತ್ತು 'ಪಾದೋದಕ

ನಿರ್ಮಲ' ಎಂದು ತಿಳಿಯಬೇಕು: ಎಂಬ ೩೫ ಮತ್ತು ೩೮ನೇ ಆಚಾರಗಳು, ಬೌದ್ಧಿಕ ಕ್ರಿಯೆಗಳಾದರೂ ಆಚಾರವೆನಿಸಿಕೊಳ್ಳುತ್ತವೆ. ಬೇರೆ ಸಂದರ್ಭಗಳಲ್ಲಿ ಅವುಗಳನ್ನು ನಾವು ನಂಬಿಕೆಗಳೆಂದು ಕರೆಯುತ್ತಿದ್ದೇವೇ ಹೊರತು, ಆಚಾರವೆಂದಲ್ಲ, ಆದರೆ ಚೆನ್ನಬಸವಣ್ಣನವರು ಅವುಗಳನ್ನೂ ಆಚಾರಗಳೆಂದೇ ಕರೆದಿದ್ದಾರೆ. ಅಂದರೆ ಆಚಾರ ಕೇವಲ ದೈಹಿಕ ಕ್ರಿಯೆಯಷ್ಟೆ ಅಲ್ಲ, ಬೌದ್ಧಿಕ ಕ್ರಿಯೆಯೂ ಹೌದು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

೨). ಎರಡನೆಯ ರೀತಿಯ ಆಚಾರಗಳು ದೈಹಿಕ ಕ್ರಿಯೆಗಳು. ಲಿಂಗಪೂಜೆ ಮಾಡುವುದು, ಗುರು ಜಂಗಮರಿಗೆ ಭಕ್ತಿ ತೋರಿಸುವುದು, ಪಾದೋದಕ ಪ್ರಸಾದಗಳನ್ನು ಸ್ವೀಕರಿಸುವುದು: ಇತ್ಯಾದಿಗಳೆಲ್ಲ ದೈಹಿಕ ಕ್ರಿಯೆಗಳು.

ಈ ಎಲ್ಲ ಆಚಾರಗಳನ್ನು ಮುಖ್ಯವಾಗಿ ಮೂರು ಗುಂಪುಗಳನ್ನಾಗಿ ಮಾಡಬಹುದು.

(ಅ) ಲಿಂಗಪೂಜೆ ಮಾಡುವುದು, ವಿಭೂತಿ ರುದ್ರಾಕ್ಷಿ ಧರಿಸುವುದು, ಮಂತ್ರ ಪಠಿಸುವುದು, ಗುರು ಮತ್ತು ಜಂಗಮರಿಗೆ ಭಕ್ತಿ ತೋರಿಸುವುದು, ಪಾದೋದಕ ಪ್ರಸಾದ ಸ್ವೀಕರಿಸುವುದು, ಅನ್ಯದೈವ ಪೂಜೆ ಮಾಡದಿರುವುದು ಮುಂತಾದ ಕ್ರಿಯೆಗಳನ್ನು ನಾವು ಧಾರ್ಮಿಕ ಆಚಾರಗಳೆಂದು ಪರಿಗಣಿಸಬಹುದು. ಇವು ಧರ್ಮದಿಂದ ಧರ್ಮಕ್ಕೆ ಬೇರೆಯಾಗುತ್ತವೆ. ಉದಾಹರಣೆಗೆ, ಬೌದ್ಧ ಮತದಲ್ಲಾಗಲಿ, ವೈಷ್ಣವ ಪಂಥದಲ್ಲಾಗಲಿ ಲಿಂಗಪೂಜೆ ಮಾಡುವುದಿಲ್ಲ. ವಿಭೂತಿ ಧರಿಸುವುದಿಲ್ಲ. ಮಂತ್ರವನ್ನು ಎಲ್ಲರೂ ಪಠಿಸಿದರೂ ವೀರಶೈವರ ಮಂತ್ರವೆ ಬೇರೆ, ಬೌದ್ಧರ ಮಂತ್ರವೇ ಬೇರೆ, ವೈಷ್ಣವರ ಮಂತ್ರವೇ ಬೇರೆ.

(ಆ) ಪ್ರಾಣಿ ಹಿಂಸೆ ಮಾಡಬಾರದು, ಸುಳ್ಳು ಹೇಳಬಾರದು, ಕಳ್ಳತನ ಮಾಡಬಾರದು, ಗುರುಹಿರಿಯರಿಗೆ ನಮ್ರತೆ ಹಾಗೂ ವಿಧೇಯತೆಯನ್ನು ತೋರಿಸಬೇಕು, ಮುಂತಾದ ಕ್ರಿಯೆಗಳೆಲ್ಲ ನೈತಿಕ ಆಚಾರಗಳು.

ಇ) ಸರ್ವಾವಯವ ಸ್ವಚ್ಛವಾಗಿ ಪ್ರಕ್ಷಾಳನ ಮಾಡುವುದು, ಪ್ರಣವ ಮುದ್ರೆಯಿಲ್ಲದ ವಸ್ತ್ರವ ಹೊದೆಯದೇ ಇರುವುದು, ಹುಟ್ಟಿದ ಶಿಶುವಿಗೆ ಲಿಂಗಧಾರಣೆ ಮಾಡುವ ಮೊದಲು ತಾಯಿ ಹಾಲು, ಜೇನು ತುಪ್ಪ ಮುಂತಾದವನ್ನು ಕೊಡದೇ ಇರುವುದು, ಮುಂತಾದ ಕ್ರಿಯೆಗಳು ಧಾರ್ಮಿಕ ಆಚಾರಗಳೂ ಅಲ್ಲ, ನೈತಿಕ ಆಚಾರಗಳೂ ಅಲ್ಲ. ಜೀವನು ಶಿವನ ಜೊತೆ ನಡೆದುಕೊಳ್ಳುವುದು ಧಾರ್ಮಿಕ ಆಚಾರ. ಒಬ್ಬ ಜೀವನು ಮತ್ತೊಬ್ಬ ಜೀವನೊಡನೆ ನಡೆದುಕೊಳ್ಳುವುದು ನೈತಿಕ ಆಚಾರ, ಜೀವನು ಜೀವನೊಡನಾಗಲಿ ಶಿವನೊಡನಾಗಲಿ ನಡೆದುಕೊಳ್ಳದೆ ಕೆಲವು ನಿಯಮಗಳನ್ನು ಪಾಲಿಸುವುದು ಇತರ ಆಚಾರಗಳು. ಇವುಗಳನ್ನು ರೂಢಿ ಎನ್ನಬಹುದು.

ಒಂದು ವಿಶಾಲ ಅರ್ಥದಲ್ಲಿ ಬೌದ್ಧಿಕ ಆಚಾರಗಳೂ, ಮೂರು ರೀತಿಯ ದೈಹಿಕ ಆಚಾರಗಳೂ ಧಾರ್ಮಿಕ ಕ್ರಿಯೆಗಳೇ. ಹೇಗೆಂದರೆ ನಾವು ಆಚಾರವನ್ನು ತಿಳಿಯದೆ

ಮಾಡಿದರೆ ಅದು ಧಾರ್ಮಿಕ ಆಚಾರವೆನಿಸಿಕೊಳ್ಳುವುದಿಲ್ಲ. ಮೊದಲು ನಾವು ಏನನ್ನು ಮಾಡಬೇಕು, ಏನನ್ನು ಮಾಡಬಾರದು, ನಮ್ಮ ಉದ್ದೇಶವೇನಿರಬೇಕು, ನಮ್ಮ ನಿಜಸ್ವರೂಪವೇನು ಮುಂತಾದ ನಂಬಿಕೆಗಳೇ ನಮ್ಮಲ್ಲಿಲ್ಲದಿದ್ದರೆ ನಾವು ಎಷ್ಟೇ ಆಚಾರಗಳನ್ನು ಮಾಡಿದರೂ, ಎಷ್ಟು ದೀರ್ಘಕಾಲ ಮಾಡಿದರೂ ನಾವು ಧಾರ್ಮಿಕರೆನಿಸಿಕೊಳ್ಳುವುದಿಲ್ಲ. ನಾವು ಮಾಡುವ ಆಚಾರಗಳೆಲ್ಲವನ್ನೂ ಒಂದು ಯಂತ್ರ ಮಾಡಬಲ್ಲುದು. ಆದರೆ ಅದನ್ನು ಧಾರ್ಮಿಕವೆಂದು ಪರಿಗಣಿಸುವುದಿಲ್ಲವೇಕೆಂದರೆ ಅದಕ್ಕೆ ನಂಬಿಕೆಗಳಿಲ್ಲ. ಆದುದರಿಂದ ನಂಬಿಕೆಗಳೆಂಬ ಬೌದ್ಧಿಕ ಆಚಾರಗಳು ಆವಶ್ಯಕ.

ಧರ್ಮ ಎಂಬ ಪದದ ಅರ್ಥವನ್ನು ಮತ್ತಷ್ಟು ಹಿಗ್ಗಿಸಿದರೆ, ಆಗ ಅದು ನೀತಿಯನ್ನೂ ಒಳಗೊಳ್ಳುತ್ತದೆ. ಒಬ್ಬ ವ್ಯಕ್ತಿ ಯಾವ ಧರ್ಮಕ್ಕೆ ಸೇರದಿದ್ದರೂ ನೀತಿಯನ್ನು ಪಾಲಿಸಬಹುದು. ಆದರೆ ಯಾವುದಾದರೂ ಒಂದು ಧರ್ಮಕ್ಕೆ ಅವನು ಸೇರಿದರೆ, ಆಗ ಅವನು ನೀತಿಯನ್ನು ಪಾಲಿಸಬೇಕಾಗುತ್ತದೆ. ಆಗ ನೀತಿ ಧರ್ಮದ ಒಂದು ಅಂಗವಾಗುತ್ತದೆ. ದಯವಿಲ್ಲದ ಧರ್ಮವಾವುದಯ್ಯಾ ಎಂದು ಬಸವಣ್ಣನವರು ಕೇಳುವಾಗ ನೀತಿಯಿದ್ದರೆ ಮಾತ್ರ ಧರ್ಮ ಪೂರ್ಣವಾಗುತ್ತದೆ ಎಂಬುದು ಅವರ ಸ್ಪಷ್ಟ ಅಭಿಪ್ರಾಯವೆಂಬುದು ಖಚಿತವಾಗುತ್ತದೆ. ಅಂದರೆ, ಧರ್ಮವು ಪೂಜೆ, ಭಜನೆ, ಮಂತ್ರ ಮುಂತಾದ ಧಾರ್ಮಿಕ ಆಚಾರಗಳನ್ನೂ ಅಲ್ಲದೆ ನೈತಿಕ ಆಚಾರಗಳನ್ನೂ ಒಳಗೊಳ್ಳುತ್ತದೆ.

ಧರ್ಮ ಎಂಬ ಪದದ ಅರ್ಥವನ್ನು ಇನ್ನೂ ಸ್ವಲ್ಪ ಹಿಗ್ಗಿಸಿದರೆ, ಅದರಲ್ಲಿ ಇತರ ಆಚಾರಗಳನ್ನೂ ಸೇರಿಸಬಹುದು. ಈ ಅರ್ಥದಲ್ಲಿ ಇತರ ಆಚಾರಗಳೂ ಧರ್ಮದ ಭಾಗಗಳಾಗುತ್ತವೆ. ಧಾರ್ಮಿಕ ಆಚಾರಗಳನ್ನೂ ನೈತಿಕ ಆಚಾರಗಳನ್ನೂ ಮಾಡದಿದ್ದರೆ ಧರ್ಮ ಅಪೂರ್ಣವಾಗುತ್ತದೆ. ಉದಾಹರಣೆಗೆ ಒಬ್ಬ ಭಕ್ತ ತನ್ನ ಮನೆಯಲ್ಲಿ ದಾಸೋಹ ಮಾಡುತ್ತಿದ್ದಾನೆಂದು ಊಹಿಸೋಣ. ಆಗ ಅವನು "ಪ್ರಣವ ಮುದ್ರೆಯಿಲ್ಲದ ವಸ್ತ್ರವನ್ನು ಹೊದೆಯದಿಹುದೇ ಹತ್ತೊಂಬತ್ತನೇ ಆಚಾರ" ಎಂದು ಎಚ್ಚರಿಸುತ್ತಾರೆ. ಅಂಥ "ಆಚಾರವಿಲ್ಲದಿದ್ದರೆ ಭಕ್ತನಲ್ಲ ಭೂತಪ್ರಾಣಿ, ಆಚಾರವಿಲ್ಲದಿದ್ದರೆ ದಾಸೋಹದ ಮನೆಯಲ್ಲ, ವೇಶಿಯ ಗುಡಿಸಲು" ಎಂದೂ ಅವರು ಅವನನ್ನು ಎಚ್ಚರಿಸುತ್ತಾರೆ.

ಭಕ್ತನ ಪ್ರಾರಂಭಿಕ ಆಧ್ಯಾತ್ಮಿಕ ಜೀವನದಲ್ಲಿ ಈ ಎಲ್ಲ ಆಚಾರಗಳೂ ಆವಶ್ಯಕ. ಆದರೆ ಮುಂದೆ ಅವನು ಧಾರ್ಮಿಕ ಆಚಾರಗಳಲ್ಲಿ ಕೆಲವನ್ನೂ, ನೈತಿಕ ಆಚಾರಗಳಲ್ಲಿ ಎಲ್ಲವನ್ನೂ ಪಾಲಿಸಿದರೆ, ಇತರ ಆಚಾರಗಳಲ್ಲಿ ಯಾವುದನ್ನೂ ಪಾಲಿಸುವುದಿಲ್ಲ. ಇಷ್ಟಲಿಂಗ ಪರಶಿವನಲ್ಲ, ಕೇವಲ ಪರಶಿವನ ಕುರುಹು ಎಂದು ತಿಳಿದಾಗ, ಅಥವಾ ಸಮರಸ ಭಕ್ತಿಯಿಂದ ಮಹಾಲಿಂಗದಲ್ಲಿ ತಾನು ಐಕ್ಯನಾದ ಮೇಲೆ, ಅವನಿಗೆ ಇಷ್ಟಲಿಂಗದ

ಆವಶ್ಯಕತೆ ಕಾಣುವುದಿಲ್ಲ. ಅದೇ ರೀತಿ ಅವನು ಪ್ರಣವ ಮುದ್ರೆಯಿಲ್ಲದ ವಸ್ತ್ರವನ್ನು ಹೊದೆಯದಿರಬಹುದು. ಲಿಂಗೈಕ್ಯ ಸಾಧನೆಗೆ ಬೇಕಾದ ಆಚಾರಗಳು ಧರ್ಮವೇ ಹೊರತು ಬಾಹ್ಯ ಆಚಾರಗಳಲ್ಲ ಎಂಬುದು ಅವನಿಗೆ ಅರಿವಾದ ಮೇಲೆ ಬಾಹ್ಯ ಆಚಾರಗಳನ್ನು ಅವನು ಕ್ಷುಲ್ಲಕವಾಗಿ ಕಾಣುತ್ತಾನೆ.

ಕೆಲವರು ವ್ಯಾಯಾಮ ಮಾಡದೆಯೇ ಬಲಶಾಲಿಗಳಾಗುತ್ತಾರೆ. ಹಾಗೆಯೇ ಕೆಲವರು ಲಿಂಗದೀಕ್ಷೆ, ಇತ್ಯಾದಿಗಳಿಲ್ಲದೆಯೇ ಆಧ್ಯಾತ್ಮಿಕ ಸಾಧನೆ ಮಾಡುತ್ತಾರೆ; ಮತ್ತೆ ಕೆಲವರಿಗೆ ಮೊದಲ ಎಲ್ಲ ಬಾಹ್ಯ ಆಚಾರಗಳೂ ಬೇಕು.

**ಆಚಾರ್ಯ :** ಗುರು. ಗುರುವು ಶಿಷ್ಯರಿಗೆ ಆಚಾರಗಳನ್ನು ಬೋಧಿಸುತ್ತಾರೆ. ಅವರೇ ಸ್ವತಃ ಆ ಆಚಾರಗಳನ್ನು ಆಚರಿಸಿ, ತಮ್ಮ ಗುರಿಯನ್ನು ಸಾಧಿಸಿಕೊಂಡಿರುವುದರಿಂದ, ಅವರಿಗೆ ಆಚಾರದ ಮಹತ್ವ ಗೊತ್ತು. ಅಂಥವರಷ್ಟೇ ಆಚಾರ್ಯ (ಗುರು) ಎನಿಸಿಕೊಳ್ಳುತ್ತಾರಷ್ಟೇ ವಿನಾ, ತಾವು ಬೋಧಿಸಿದ ಆಚಾರಗಳನ್ನು ಆಚರಿಸದಿರುವವರು ಆಚಾರ್ಯರಲ್ಲ.

**ಆಚಾರಲಿಂಗ :** ಮೂಲಾಧಾರ ಚಕ್ರದಲ್ಲಿ ಪೃಥ್ವಿ ಎಂಬ ದೇಹದಲ್ಲಿ ಅಡಗಿರುವ ಲಿಂಗ.

**ಆಚಾರಲಿಂಗ ತ್ರಿವಿಧ :** ಸಾಧಕನಾದವನು ಯಾವ ಆಚಾರಗಳನ್ನು ಮಾಡಬೇಕು ಎಂಬುದನ್ನು ತಿಳಿಸಿಕೊಡುವುದೇ ಆಚಾರಲಿಂಗಸ್ಥಲ. ಇದರಲ್ಲಿ ಮೂರು ಉಪಸ್ಥಲಗಳಿವೆ. ಸದಾಚಾರ, ನಿಯತಾಚಾರ ಮತ್ತು ಗಣಾಚಾರ. ಎಲ್ಲ ಜನರಿಗೂ ಎಲ್ಲ ಪ್ರಾಣಿಗಳಿಗೂ ಒಳ್ಳೆಯದನ್ನು ಮಾಡುವುದೇ ಸದಾಚಾರ; ಗುರು ಸೂಚಿಸಿದ ವ್ರತಗಳನ್ನು ತಪ್ಪದೇ ಮಾಡುವುದು ನಿಯತಾಚಾರ; ಶಿವನಿಂದೆ ಮತ್ತು ಶಿವಭಕ್ತನಿಂದೆ ಕೇಳದಿರುವುದು ಗಣಾಚಾರ.

**ಆಚಾರಲಿಂಗದ ಪ್ರಸನ್ನತ್ವ :** ನಾಸಿಕಾಗ್ರದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿದವನು, ಲಿಂಗವು ಮೊದಲು ವಾಸಿಸದೆ, ತಾನು ವಾಸನೆ ನೋಡಲಾರ; ಇನ್ನೂ ಮುಂದುವರೆದು ತನ್ನ ಘ್ರಾಣೇಂದ್ರಿಯವೇ ಲಿಂಗದ ಘ್ರಾಣೇಂದ್ರಿಯವೆಂದೂ, ನಿಜವಾದ ತೃಪ್ತಿಪಡುವುದು ತಾನಲ್ಲ, ಲಿಂಗ ಎಂದೂ ತಿಳಿಯುವವನು ನಿಜವಾದ ಪ್ರಸಾದಿ. ಇದರಿಂದ ಆಚಾರಲಿಂಗವು ಪ್ರಸನ್ನವಾಗಿ, ಭಕ್ತನು ಅಷ್ಟರ ಮಟ್ಟಿಗೆ ಬಯಲಾಗುತ್ತಾನೆ. (೧೧:೬೬೦).

**ಆಚಾರ ಲಿಂಗಾನುಭಾವಿ :** ಭಕ್ತ ಸ್ಥಲದಲ್ಲಿರುವ ಸಾಧಕನು ಆಚಾರಲಿಂಗವನ್ನು ಪೂಜಿಸಿ, ತಾನು (ಭಕ್ತ) ಬೇರೆ, ಪೂಜ್ಯನಾದ ಆಚಾರ ಲಿಂಗ ಬೇರೆ ಎಂದು ತಿಳಿಯುತ್ತಾನೆ. ಆದುದರಿಂದ ಆ ಸ್ಥಲದ ಸಾಧಕನು ಲಿಂಗಾನುಭಾವಿಯಾಗಿರಲು ಸಾಧ್ಯವಿಲ್ಲ. ಆದರೂ ಇಲ್ಲಿ 'ಅನುಭಾವಿ' ಎಂಬ ಪದ ಪ್ರಯೋಗವಾಗಿದ್ದು, ಅದು ಕೇವಲ 'ಸುಖಿ' ಎಂಬ ಅರ್ಥ ಕೊಡುತ್ತದೆ. ಅನುಭಾವದಲ್ಲಿ ಪರಮ ಸುಖ ಇರುತ್ತದೆ ಎಂಬ ವಿಷಯವನ್ನು ಉಪಯೋಗಿಸಿಕೊಂಡು ಇಲ್ಲಿ ಅನುಭಾವಿ ಎಂಬ ಪದವನ್ನು ಸೂಚ್ಯಾರ್ಥದಲ್ಲಿ ಬಳಸಲಾಗಿದೆ. ಹೀಗೆ ನೋಡಿದಾಗ, ಭಕ್ತನು (ಭಕ್ತಸ್ಥಲದ ಸಾಧಕನು) ಪೃಥ್ವಿ ತತ್ವವನ್ನು

ಆಚಾರಲಿಂಗಕ್ಕೆ ಅರ್ಪಿಸಿ, ಅದರಿಂದ ಗಂಧವೆಂಬ ಪ್ರಸಾದವನ್ನು ಸ್ವೀಕರಿಸಿ ಸುಖಿಯಾಗುತ್ತಾನೆ. (ಗಂಧವು ಪೃಥ್ವಿ ತತ್ವದ ಮುಖ್ಯ ಗುಣ). ಮತ್ತೊಂದರ್ಥದಲ್ಲಿ, ಮೂಲಾಧಾರದಲ್ಲಿರುವ ಆಚಾರಲಿಂಗವನ್ನು ಸಾಕ್ಷಾತ್ಕಾರಿಸಿಕೊಂಡವನೇ ಆಚಾರ ಲಿಂಗಾನುಭಾವಿ.

**ಆಚಾರವಂಚಕರು :** ಸಂಸಾರವನ್ನು ಹೇಯ ದೃಷ್ಟಿಯಿಂದ ನೋಡುವ ಹಾಗೂ ಲಿಂಗೈಕ್ಯಾಂಕ್ಷಿಯಾದ ಶಿಷ್ಯನಿಗೆ, ಗುರುವು ಆಚಾರಗಳನ್ನು ಭೋಧಿಸುವುದು ಅವನು ಲಿಂಗಾಂಗ ಸಾಮರಸ್ಯ ಪಡೆಯಲಿ ಎಂಬ ಉದ್ದೇಶದಿಂದ. ಆದರೆ ಕೆಲ ಶಿಷ್ಯರು ಈ ಆಚಾರಗಳನ್ನು ಅಂಥ ಉದ್ದೇಶಕ್ಕಾಗಿ ಮಾಡದೆ, ಸ್ವಾರ್ಥ (ಲೌಕಿಕ) ಉದ್ದೇಶಗಳಿಗಾಗಿ ಮಾಡುತ್ತಾರೆ. ಅಂಥವರು ಆಚಾರ ವಂಚಕರು. (೧:೭೬೩)

**ಆಜ್ಞಾಚಕ್ರ :** ( ನೋಡಿ : **ಚಕ್ರಗಳು**)

**ಆಜ್ಞಾಸಿದ್ಧನರ್ಚಿಸುವ ಆನಂದಮಯ ಶರಣ :** ಆಧಾರ ಚಕ್ರದಿಂದ ಮೇಲೇರುವ ಕುಂಡಲಿಯು ಆರನೇ ಚಕ್ರವಾದ ಆಜ್ಞಾ ಚಕ್ರಕ್ಕೆ ಬಂದಾಗ, ಸಾಧಕನು ಐಕ್ಯನೆನಿಸಿಕೊಳ್ಳುತ್ತಾನೆ. ಅವನಲ್ಲಿ ಸುಖ ದುಃಖಗಳ ವ್ಯತ್ಯಾಸ ಮಾಯವಾಗಿ ಸಮತಾಭಾವ ನೆಲೆಗೊಂಡಿರುತ್ತದೆ. ಐದನೇ ಸ್ಥಲದಲ್ಲಿರುವ ಶರಣನು ಆನಂದವನ್ನು ಅನುಭವಿಸುತ್ತಿದ್ದರೂ, ಅವನಿಗೆ ಐಕ್ಯನೇ ಆದರ್ಶ ಪುರುಷ. ಆದುದರಿಂದ ಆನಂದಮಯ ಶರಣನು ಲಿಂಗದೊಂದಿಗೆ ಐಕ್ಯತೆಯನ್ನು ಪಡೆದ ಹಾಗೂ ಆಜ್ಞಾ ಚಕ್ರವನ್ನು ಸಿದ್ಧಿಸಿಕೊಂಡ ಐಕ್ಯನನ್ನು ('ಆಜ್ಞಾ ಸಿದ್ಧನನ್ನು') ಅರ್ಚಿಸುತ್ತಾನೆ.

**ಆಣವಮಲ :** ಅಂಗನು ಮೂಲತಃ ಶಿವಾಂಶಿಕ ಹಾಗೂ ವಿಭುವಾಗಿದ್ದರೂ, ಅವಿದ್ಯೆಯಿಂದಾಗಿ ತಾನು ಪರಿಮಿತ ವ್ಯಕ್ತಿ (ಅಣು) ಎಂದು ತಿಳಿದಿದ್ದಾನೆ. ಹೀಗೆ ತಿಳಿಯುವುದೂ ಒಂದು ಮಲವೇ. ಈ ಮಲಕ್ಕೆ ಆಣವ ಮಲ ಎಂದು ಹೆಸರು.

**ಆತ್ಮ :** (೧) "ಅಂಗ", "ಜೀವ", "ಜೀವಾತ್ಮ" ಇವು "ಆತ್ಮ"ದ ಪರ್ಯಾಯ ಪದಗಳು. ಎಲ್ಲ ಭಾರತೀಯ ದಾರ್ಶನಿಕರಂತೆ (ಚಾರ್ವಾಕರನ್ನುಳಿದು), ವಚನಕಾರರು ಆತ್ಮವು ಚಿದ್ವಸ್ತುವೆಂದೂ, ಅದು ಭೌತ ಶರೀರದಿಂದ ಭಿನ್ನವೆಂದೂ ನಂಬುತ್ತಾರೆ. ದೇಹ ನಶ್ವರ, ಆತ್ಮ ಅಮರ; ದೇಹವು ಪ್ರಾದೇಶಿಕ ಮತ್ತು ಇಂದ್ರಿಯ ಗೋಚರ ಗುಣ (ರೂಪರಸಾದಿಗಳಂತಹ ಗುಣ)ಗಳುಳ್ಳದ್ದು, ಆತ್ಮಕ್ಕೆ ಪ್ರಾದೇಶಿಕ ಗುಣವಾಗಲಿ ಇಂದ್ರಿಯಗೋಚರಗುಣವಾಗಲಿ ಇಲ್ಲ.

ಆತ್ಮವು ಮೂಲತಃ ಪರಶಿವನ ಅಂಗ. ಆದರೆ ಅದು ಅಜ್ಞಾನದಿಂದಾಗಿ ತನ್ನ ಸ್ವರೂಪವನ್ನು ಮರೆತಿರುವುದೂ ಅಲ್ಲದೆ, ಸಂಸಾರಬಂಧನಕ್ಕೆ ಸಿಲುಕಿ ಅನೇಕ ರೀತಿಯ ದುಃಖಗಳನ್ನು ಅನುಭವಿಸುತ್ತದೆ. ಗುರುವಿನ ಮೂಲಕ ಜ್ಞಾನೋದಯ ಸಾಧ್ಯವಾದಾಗ, ಆತ್ಮವು ಮತ್ತೆ ಲಿಂಗದಲ್ಲಿ ಐಕ್ಯವಾಗುತ್ತದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಪರಶಿವ ಮತ್ತು ಆತ್ಮ ಸ್ವರೂಪದಲ್ಲಿ ಒಂದೇ. ಅಂದರೆ ಇಬ್ಬರೂ ಚಿದ್‌ವಸ್ತುಗಳೇ ಆಗಿರುವುದರಿಂದ, ಆತ್ಮ ಪರಶಿವನಲ್ಲಿ ಬೇರಾಗದಂತೆ ಬೆರೆಯಬಲ್ಲ. ನೀರು ಎಣ್ಣೆಯಲ್ಲಿ ಬೆರೆಯಲಾರದು. ಏಕೆಂದರೆ ನೀರಿನ ಸ್ವರೂಪವೇ ಬೇರೆ, ಎಣ್ಣೆಯ ಸ್ವರೂಪವೇ ಬೇರೆ. ಆದರೆ ನೀರು ನೀರಿನಲ್ಲಿ, ಎಣ್ಣೆ ಎಣ್ಣೆಯಲ್ಲಿ ಬೆರೆಯಬಲ್ಲವು; ಏಕೆಂದರೆ ಅವುಗಳ ಸ್ವರೂಪ ಒಂದೇ ಇರುವುದರಿಂದ. ಆಭರಣಗಳು ಬೇರೆ ಬೇರೆ ಇದ್ದರೂ ಅವುಗಳಲ್ಲಿರುವ ಮೂಲವಸ್ತುವಾದ ಚಿನ್ನ ಒಂದೇ ಆಗಿರುವುದರಿಂದ, ಅವು ಕರಗಿದಾಗ ಮತ್ತೆ ಚಿನ್ನವೇ ಆಗುತ್ತದೆ. ಅದೇ ರೀತಿ ಪರಶಿವನೆಂಬ ಚಿದ್ವಸ್ತುವಿನಿಂದ ಬಂದ ಆತ್ಮಗಳು ಲಿಂಗೈಕ್ಯವಾದಾಗ ಮತ್ತೆ ಪರಶಿವನೇ ಆಗುತ್ತವೆ. ಆದರೆ ಅವು ತಮ್ಮ ನಾಮರೂಪುಗಳನ್ನು ಕಳೆದುಕೊಳ್ಳುವುದರಿಂದ ಪರಶಿವನ ಇತರ ಗುಣಗಳಾದ ಸರ್ವಶಕ್ತಿತ್ವ, ಸೃಷ್ಟಿಕರ್ತೃತ್ವ, ಮುಂತಾದ ಗುಣಗಳು ಅವಕ್ಕೆ ಬರುವುದಿಲ್ಲ. (ನೋಡಿ : **ಆತ್ಮತ್ರಯ, ಅಂಗ**)

(೨). 'ಆತ್ಮನೆಂಬ ಅಂಬುಧಿಯಲ್ಲಿ ಸಕಲ ಬ್ರಹ್ಮಾಂಡ ಕೋಟಿಗಳಾದುವಲ್ಲದೆ ಬೇರಾಗಬಲ್ಲವೆ' ಎಂದು ಚಂದಿಮರಸ (೭:೬೦೨) ಕೇಳುವಲ್ಲಿ 'ಆತ್ಮ' ಎಂಬ ಪದಕ್ಕೆ ಪರಮಾತ್ಮ ಎಂಬ ಅರ್ಥವಿದೆ. ಪರಮಾತ್ಮನಿಗೆ ಆತ್ಮ ಎಂಬ ಅನ್ವಯವಾಗುವುದು ವೇದಾಂತ ಪರಿಭಾಷೆಯಲ್ಲಿ ಸಾಮಾನ್ಯವಾದರೂ ವಚನಪರಿಭಾಷೆಯಲ್ಲಿ ಅಪರೂಪ.

**ಆತ್ಮ ಆತ್ಮಗಳ ಮಥನ :** ಜೀವಾತ್ಮ ಮತ್ತು ಪರಮಾತ್ಮರುಗಳು ಒಂದಾಗುವುದು.

**ಆತ್ಮತೇಜ :** (೧) ಆತ್ಮವು ದೇಹಾದಿಕರಣಗಳ ಸಂಗದಿಂದಾಗಿಯೂ ಮರೆವಿನಿಂದಾಗಿಯೂ ತನ್ನ ಮೂಲಸ್ವರೂಪವಾದ ಆನಂದವನ್ನೂ ಸ್ವಪ್ರಕಾಶತ್ವ (ಆತ್ಮತೇಜ)ವನ್ನೂ ಕಳೆದುಕೊಂಡಿರುತ್ತದೆ. ಆಧ್ಯಾತ್ಮ ಸಾಧನೆಯ ಫಲದಿಂದಾಗಿ ಸಮ್ಯಗ್ ಜ್ಞಾನ ಮೂಡಿ, ದೇಹಾದಿಕರಣಗಳ ದುಷ್ಪ್ರಭಾವ ಅದರ ಮೇಲೆ ಕಡಿಮೆಯಾದಾಗ ಅದರ ತೇಜಸ್ಸು ಪುನಃ ವ್ಯಕ್ತವಾಗುತ್ತದೆ. (೪:೧೨೯)

(೨) ತನ್ನನ್ನು ತಾನೇ ಮಹಾನ್ ವ್ಯಕ್ತಿಯೆಂದು ತೋರಿಸಿಕೊಳ್ಳುವುದು. "ಇಷ್ಟವನರಿಯದೇ ಆತ್ಮತೇಜಕ್ಕೆ, ಮಾತಿನ ಘಾತಕಕ್ಕೆ ತಮ್ಮ ಪ್ರಖ್ಯಾತದ ಧಾತು ಕುಂದಿಹಿತೆಂದು ಮಾತಿಗೆ ಮಾತನುಡಿದು....." ಎಂದು ಮೋಳಿಗೆ ಮಾರಯ್ಯ ಹೇಳುವಾಗ ಆತ್ಮತೇಜವೆಂದರೆ "ತಾನು ದೊಡ್ಡವನು, ಸೋಲಬಾರದು ಎಂಬ ಅಹಂಕಾರ" ಎಂದರ್ಥವಾಗುತ್ತದೆ.

**ಆತ್ಮತ್ರಯ :** ಜೀವಾತ್ಮ, ಅಂತರಾತ್ಮ, ಪರಮಾತ್ಮ. (ನೋಡಿ : **ಜೀವಾತ್ಮ, ಅಂತರಾತ್ಮ, ಪರಮಾತ್ಮ**)

**ಆತ್ಮದೃಷ್ಟಕೂಟ :** ಇಲ್ಲಿ ದೃಷ್ಟವೆಂದರೆ ಇಷ್ಟಲಿಂಗವೆಂದಾಗುವುದರಿಂದ, 'ಆತ್ಮದೃಷ್ಟಕೂಟ'ವೆಂದರೆ, 'ಆತ್ಮ ಮತ್ತು ಇಷ್ಟಲಿಂಗಗಳ ಕೂಟ'

ಎಂಬರ್ಥವುಂಟಾಗುತ್ತದೆ. ಆದರೆ ಆ ಕೂಟ ಲಿಂಗಾಂಗ ಸಾಮರಸ್ಯವಲ್ಲ. ಅನುಭಾವದಲ್ಲಿ ಐಕ್ಯ ಸ್ಥಿತಿಯನ್ನು ತಲುಪುವ ಮುನ್ನ ಯೋಗಿಯು ಮೊದಲು ಇಷ್ಟಲಿಂಗದ ಮೇಲೆ ತನ್ನ ಮನಸ್ಸನ್ನು ಕೇಂದ್ರೀಕರಿಸಿ, ಅವನು ಅದರಲ್ಲಿ ಒಂದಾಗುತ್ತಾನೆ. ಇದೇ ಆತ್ಮದೃಷ್ಟಕೂಟ. (ಇನ್ನೂ ಮುಂದೆ ಅವನ ಆತ್ಮ ತನ್ನನ್ನು ತಾನೆ ಅರಿತಾಗ, ಅದು ಶಿವನಲ್ಲಿ ಐಕ್ಯವಾದಂತೆ ಅನುಭವವಾಗುತ್ತದೆ) (೭:೧೮೯೨).

**ಆತ್ಮನ ಸಂಚಿತದಳಿವು :** ಆತ್ಮನಿಗೆ ಅನಾದಿ ಕಾಲದಿಂದಲೂ ಕರ್ಮತ್ರಯಗಳು ಅಂಟಿಕೊಂಡಿದೆ. ಆಧ್ಯಾತ್ಮ ಸಾಧನೆಯ ಫಲವಾಗಿ ಅನೇಕ ಜನ್ಮಗಳಿಂದ ಕೂಡಿಟ್ಟ (ಸಂಚಿತ) ಕರ್ಮಗಳು ಮೊದಲು ಅಳಿಯುತ್ತವೆ. (೭:೧೧೭೭)

**ಆತ್ಮಶುದ್ಧಿ :** ಒಂದರ್ಥದಲ್ಲಿ ಆತ್ಮವು ಆಕಾಶದಂತೆ ಯಾವಾಗಲೂ ಶುದ್ಧವೇ. ಅದು ಮೂಲತ: ಪರಶಿವನ ಅಂಗವಾಗಿದೆಯಾದುದರಿಂದ ಅದು ಸ್ವಭಾವತಃ ಶುದ್ಧವಾಗಿರಬೇಕಾದುದು ಸತ್ಯವೇ. ಆದರೆ ಅಂಗಸಂಗದಿಂದಾಗಿ ಅದು ಅಶುದ್ಧವಾಗಿದೆ. ಇಲ್ಲಿ 'ಅಶುದ್ಧ' ಎಂದರೆ 'ಅವಿದ್ಯೆ ಅಥವಾ ಮರೆವಿಗೆ, ಅನೇಕ ರೀತಿಯ ದು:ಖಗಳಿಗೆ ಹಾಗೂ ಪುನರ್ಜನ್ಮಕ್ಕೆ ಒಳಗಾಗಿದೆ' ಎಂದರ್ಥ. ಆದರೆ ಈ ಮಲಗಳು ಅದರ ಮೂಲ ಸ್ವಭಾವವನ್ನು ಹಾಳು ಮಾಡುವುದಿಲ್ಲ. ಅವಿದ್ಯೆಯಿಂದಾಗಿ ತಾನು ಪರಶಿವನಿಂದ ಬೇರೆಯೇ ಆದ ವ್ಯಕ್ತಿಯೆಂದೂ, ತಾನು ದೇಹೇಂದ್ರಿಯಗಳ ಸಂಘಟನೆಯೆಂದೂ, ದೇಹೇಂದ್ರಿಯಗಳ ಸೌಖ್ಯವೇ ಪರಮವೆಂದೂ ತಿಳಿದು, ಅನೇಕ ರೀತಿಯ ಕರ್ಮಗಳನ್ನು ಮಾಡಿ, ಅವುಗಳ ಫಲಗಳನ್ನನುಭವಿಸಲು ಅನೇಕ ಜನ್ಮ ಎತ್ತುವ ಮಾನವನು ಗುರುವಿನ ಬೋಧನೆಯಿಂದಾಗಿ, ಲಿಂಗಪೂಜೆ ಮಾಡಿ, ಪ್ರಸಾದದ ಬಗೆಗೆ ಪೂರ್ಣ ಜ್ಞಾನ ಪಡೆದು, ಲಿಂಗವನ್ನು ತನ್ನ ದೇಹೇಂದ್ರಿಯಗಳಲ್ಲೆಲ್ಲಾ ಪ್ರತಿಷ್ಠಾಪಿಸಿಕೊಂಡಾಗ ಅಂದರೆ, ಅವನ ಮನಸ್ಸು, ಬುದ್ಧಿ, ಇಂದ್ರಿಯ, ದೇಹ, ಇತ್ಯಾದಿಗಳೆ ಶುದ್ಧವಾದಾಗ ಮತ್ತೆ ಅವನು ಲಿಂಗಾಂಗ ಸಾಮರಸ್ಯ ಪಡೆಯುತ್ತಾನೆ. ಮೋಡಗಳು, ಧೂಳು, ಇತ್ಯಾದಿ ಚದುರಿದಾಗ ಆಕಾಶ ಮತ್ತೆ ಹೇಗೆ ಶುಭ್ರವಾಗಿ ಕಾಣುತ್ತದೆಯೋ ಹಾಗೆಯೇ ಮಲತ್ರಯಗಳಿಲ್ಲದ ಆತ್ಮ ಮತ್ತೆ ಶುದ್ಧವಾದುದು ಗೊತ್ತಾಗುತ್ತದೆ.

**ಆದಿ :** ಆದಿಯುಳ್ಳ ಯಾವುದೇ ವಸ್ತು. ದೇಹವು ಆದಿ; ಪ್ರಪಂಚವೂ ಆದಿ: ಕೆಲವು ವೇಳೆ ಜಂಗಮ ಅನಾದಿಯೆಂದೂ, ಶಿಷ್ಯ ಆದಿಯೆಂದೂ ಹೇಳಲಾಗುತ್ತದೆ. ಕೆಲವು ವೇಳೆ ಆದಿ ಎಲ್ಲಕ್ಕೂ ಆದಿಯಾದ ಪರಶಿವ ಎಂಬರ್ಥವೂ ಉಂಟು.

**ಆದಿ ಅನಾದಿ ಇಲ್ಲದಂದು :** ಅನೇಕ ವಚನಗಳು 'ಆದಿ ಅನಾದಿ ಇಲ್ಲದಂದು', 'ಆದಿ ಇಲ್ಲದಂದು, ಅನಾದಿ ಇಲ್ಲದಂದು', 'ಆದಿ ಅನಾದಿಗಳಿಂದತ್ತತ್ತ' ಎಂದು ಪ್ರಾರಂಭವಾಗುತ್ತದೆ. ಈ ಪದಗಳೂ, ಇವುಗಳ ಜೊತೆಗಿರುವ ಪದಗಳೂ, ಸೃಷ್ಟಿಪೂರ್ವದ

ಪರಶಿವನ ಸ್ಥಿತಿಗೆ ಅನ್ವಯಿಸುತ್ತದೆ. ಶಿವನಿಗೆ ಸೃಷ್ಟಿಸಬೇಕೆಂಬ ಇಚ್ಛೆಯೂ, ತಾನೊಬ್ಬನೆ ಇದ್ದೇನೆಂಬ ಅರಿವೂ ಇಲ್ಲದ ಸ್ಥಿತಿಯದು. ಇದನ್ನೇ ಕೆಲವು ವೇಳೆ ಶೂನ್ಯ, ಬಯಲು, ಮುಂತಾಗಿ ಕರೆಯಲಾಗುತ್ತದೆ.

ಆದರೆ ಆದಿಯಾಗಲಿ ಅನಾದಿಯಾಗಲಿ ಇಲ್ಲದ ಕಾಲ ಅಥವಾ ವಸ್ತು ಏಕಕಾಲಕ್ಕೆ ಇರಲು ಸಾಧ್ಯವೇ? ಪ್ರಪಂಚವೇ ಇರಲಿಲ್ಲ ಎಂದಾಗ, ಆದಿಯುಳ್ಳ ಪ್ರಪಂಚವಿರಲಿಲ್ಲ ಎಂದರ್ಥವಾಗುತ್ತದೆ: ಆದರೆ ಅನಾದಿಯಾದ ಪರಶಿವ ಶೂನ್ಯಸ್ಥಿತಿಯಲ್ಲಿದ್ದ. ಅಂದ ಮೇಲೆ, ಸೃಷ್ಟಿಪೂರ್ವ ಸ್ಥಿತಿಯು ಆದಿ ಅನಾದಿಯಿಲ್ಲದ ಕಾಲ ಹೇಗಾಗುತ್ತದೆ, ಎಂಬುದೇ ಈ ಪದಪ್ರಯೋಗ ಸೃಷ್ಟಿಸುವ ಸಮಸ್ಯೆ. ಅದೇ ರೀತಿ, ಪರಶಿವನೆ ಅನಾದಿ ಎಂದಮೇಲೆ ಅವನನ್ನು ಆದಿ ಅನಾದಿಯಿಂದತ್ತತ್ತ ಎಂದು ವರ್ಣಿಸುವುದರ ಅರ್ಥವೇನು; ಎಂಬ ಸಮಸ್ಯೆಯೂ ಬರುತ್ತದೆ. ಈ ಸಮಸ್ಯೆಗೆ ಪ್ರಾಯಶಃ ಈ ಕೆಳಗಿನ ಉತ್ತರ ಸಮರ್ಪಕವೆನಿಸಬಹುದು.

ನಮಗೆ ಒಂದು ವಸ್ತುವಿನ ಜ್ಞಾನ ಉಂಟಾಗಬೇಕಾದರೆ, ಅದನ್ನು ನಾವು ಇಂದ್ರಿಯಗಳ ಮೂಲಕ ಅನುಭವಿಸಬೇಕಷ್ಟೇ ಅಲ್ಲ, ಅದನ್ನು ಇತರ ವಸ್ತುಗಳೊಡನೆ ಹೋಲಿಸಲೂ ಬೇಕಾಗುತ್ತದೆ. ಉದಾಹರಣೆಗೆ, ನಾವು ಒಂದು ಪುಸ್ತಕವನ್ನು ನೋಡಿದಾಗ, ಅದನ್ನು ಇತರ ಪುಸ್ತಕಗಳೊಡನೆ ಹೋಲಿಸಿ "ಇದೂ ಸಹ ಒಂದು ಪುಸ್ತಕ" ಎಂದು ಹೇಳುತ್ತೇವೆ; ಅಲ್ಲದೆ, ಪರೋಕ್ಷವಾಗಿ (ಹಾಗೂ ಮಾನಸಿಕವಾಗಿ), ಇದು ಕುರ್ಚಿಯಲ್ಲ, ಬೆಟ್ಟವಲ್ಲ, ಮುಂತಾಗಿಯೂ ಹೇಳುತ್ತೇವೆ. ಪ್ರಪಂಚದ ತುಂಬೆಲ್ಲ ಪುಸ್ತಕವಲ್ಲದೆ ಮತ್ತೇನೂ ಇಲ್ಲದಿದ್ದರೆ, ಅದಕ್ಕೆ 'ಪುಸ್ತಕ'ವೆಂಬ ಹೆಸರು ಇರುತ್ತಿರಲಿಲ್ಲ. ಆದರೆ ಅದನ್ನು ನೋಡುವ ಮನುಷ್ಯನೆಂಬ ಎರಡನೆ ವಸ್ತುವಿದ್ದರೆ, ಆಗ ಅವನು ತಾನು ಮನುಷ್ಯ, ಅದು ಪುಸ್ತಕ ಎಂದು ಭಿನ್ನಮಾಡುತ್ತಾನೆ. ಒಬ್ಬ ವ್ಯಕ್ತಿಯನ್ನು "ಬಸವ" ಅಥವಾ "ಕುಳ್ಳ" ಎಂದು ಕರೆಯುವುದು ಅವನನ್ನು ಇತರರಿಂದ (ಬಸವರಲ್ಲದ, ಕುಳ್ಳರಲ್ಲದವರಿಂದ) ಪ್ರತ್ಯೇಕಿಸುವ ಸಲುವಾಗಿ; ಅದೇ ರೀತಿ ಒಂದು ಪುಸ್ತಕವನ್ನು ಅಥವಾ ಒಂದು ಬಣ್ಣವನ್ನು ಪುಸ್ತಕ ಅಥವಾ ಕೆಂಪು ಎಂದು ಕರೆಯುವುದು ಅದನ್ನು ಪುಸ್ತಕವಲ್ಲದ ವಸ್ತುಗಳಿಂದ ಅಥವಾ ಕೆಂಪಲ್ಲದ ಬಣ್ಣಗಳಿಂದ ಪ್ರತ್ಯೇಕಿಸುವುದಕ್ಕಾಗಿ. ಹೀಗೆ ಹೋಲಿಕೆ ವ್ಯತ್ಯಾಸಗಳನ್ನು ಅರಿಯದೆ ನಾವು ಏನನ್ನೂ ಅರಿಯಲು ಸಾಧ್ಯವಿಲ್ಲ.

ಅದೇ ರೀತಿ, ಒಂದು ವಸ್ತುವನ್ನು ನೋಡಿ, ಇದಕ್ಕೆ ಆದಿಯಿದೆ ಎನ್ನುತ್ತೇವೆ; ಅದನ್ನು ಮಾಡಿದವನಿಗೂ ಆದಿಯಿದೆ ಎನ್ನುತ್ತೇವೆ. ಆದರೆ ಇಡೀ ಪ್ರಪಂಚವನ್ನೇ ಗಣನೆಗೆ ತೆಗೆದುಕೊಂಡರೆ, ಪ್ರಪಂಚಕ್ಕೆ ಆದಿಯಿದೆ, ಅದನ್ನು ಸೃಷ್ಟಿಸಿದವನಿಗೆ (ಪರಶಿವನಿಗೆ) ಆದಿಯಿಲ್ಲ ಎನ್ನುತ್ತೇವೆ. ಆದರೆ ಪ್ರಪಂಚವೂ ಇಲ್ಲದೆ, ಪರಶಿವನಿಗೆ ಸೃಷ್ಟಿಸಬೇಕೆಂಬ

ಇಚ್ಛೆಯೂ ಇಲ್ಲದಿದ್ದಾಗ, ಆದಿ-ಅನಾದಿ ಎಂಬ ಜೋಡಿ ಪದಕ್ಕೆ ಆ ಅರ್ಥಕೊಡಬಹುದೇ? ಇದನ್ನು ಮತ್ತೊಂದು ದೃಷ್ಟಾಂತದ ಮೂಲಕ ಪರಿಹರಿಸಬಹುದು.

ಒಬ್ಬ ವ್ಯಕ್ತಿ ಒಂದು ಧರ್ಮಕ್ಕೆ ಸೇರಿದವನಾಗಿದ್ದರೆ, ''ಅವನು ವೀರಶೈವನಾಗಿರಬೇಕು ಅಥವಾ ವೀರಶೈವೇತರನಾಗಿರಬೇಕು'' ಎನ್ನುವುದು ಸತ್ಯ. ''ಅವನು ವೀರಶೈವನೂ ಅಲ್ಲ, ವೀರಶೈವೇತರನೂ ಅಲ್ಲ'' ಎನ್ನುವುದು ಅಸತ್ಯ. ಒಂದು ವೇಳೆ ಆ ವ್ಯಕ್ತಿ ಯಾವುದೇ ಧರ್ಮಕ್ಕೆ ಸೇರದ ವ್ಯಕ್ತಿ ಆಗಿದ್ದರೆ, ''ಅವನು ವೀರಶೈವನಾಗಿರಬೇಕು ಅಥವಾ ವೀರಶೈವೇತರನಾಗಿರಬೇಕು'' ಎನ್ನುವುದು ಸರಿಯಲ್ಲ. ಅದೇ ರೀತಿ ನಾವು ಪ್ರಪಂಚವನ್ನು ನೋಡಿ, ಇದಕ್ಕೆ ಆದಿಯಿದೆ, ಪರಶಿವನು ಅನಾದಿ ಎನ್ನುತ್ತೇವೆ. ಆದರೆ ಪ್ರಪಂಚವೇ ಇಲ್ಲದಿದ್ದರೆ, ಅಂದರೆ ಹೋಲಿಕೆ ವ್ಯತ್ಯಾಸಗಳನ್ನು ಉಪಯೋಗಿಸಿಕೊಂಡು ತಿಳಿಯುವ ಮನುಷ್ಯನೇ ಇಲ್ಲದಿದ್ದರೆ, ಆದಿ ಅನಾದಿ ಎಂಬ ಪದಗಳಿಗೆ ಅರ್ಥವಿಲ್ಲವಾಗುತ್ತದೆ. ಅಂದರೆ ಪ್ರಪಂಚವೇ ಇಲ್ಲದಂಥ ಸಂದರ್ಭದಲ್ಲಿ ಅದನ್ನು ಆದಿ ಎಂದು ಕರೆಯಬೇಕಾಗಿಲ್ಲ; ಆದಿಯೆಂದು ಕರೆಯಬೇಕಾಗಿಲ್ಲವಾದುದರಿಂದ ಅದನ್ನು ''ಅನಾದಿ'' ಎಂಬುದರಿಂದ ಪ್ರತ್ಯೇಕಿಸಬೇಕಾಗಿಲ್ಲ. ಅಂದರೆ, ಶೂನ್ಯ ಕಾಲಕ್ಕೆ ಸಂಬಂಧಿಸಿದಂತೆ ''ಆದಿ-ಅನಾದಿ'' ಎಂಬ ಪದ ಪ್ರಯೋಗ ನಿರರ್ಥಕ.

೨. ''ಆದಿ-ಅನಾದಿ ಇಲ್ಲದಂದು''ಎಂಬುದಕ್ಕೆ ಮತ್ತೊಂದು ರೀತಿಯ ಅರ್ಥ ಕೊಡಬಹುದು. ಕೆಲವು ವಚನಕಾರರು 'ಆದಿ' ಎಂಬುದನ್ನು ದೇಹವೆಂದೂ, 'ಅನಾದಿ' ಎಂಬುದನ್ನು ಆತ್ಮವೆಂದೂ ಅರ್ಥೈಸುತ್ತಾರೆ. ಆಗ ಸೃಷ್ಟಿ ಪೂರ್ವ ಸ್ಥಿತಿಯು ''ಆದಿ ಅನಾದಿಯಿಲ್ಲದ'' ಕಾಲ ಎಂದು ವರ್ಣಿಸುವುದು ಸೂಕ್ತವಾಗಿದೆ.

**ಆದಿ ಗುರು ಅನಾದಿ ಶಿಷ್ಯ :** ಸಾಂಸಾರಿಕ ಜೀವನಕ್ಕೆ ಹೇಸಿ ಬಂದವನಿಗೆ ಗುರುವು ಹಸ್ತಮಸ್ತಕ ಸಂಯೋಗದ ಮೂಲಕ ದೀಕ್ಷೆ ಕೊಟ್ಟು, ಅವನನ್ನು ಶಿಷ್ಯನನ್ನಾಗಿ ಮಾಡಿಕೊಳ್ಳುತ್ತಾನೆ. ಈ ದೀಕ್ಷಾ ಕ್ರಿಯೆಗೆ ಒಂದು ಆದಿಯಿದೆ, ಅಂತ್ಯವಿದೆ. ಮಗು ಹುಟ್ಟಿದ ಬಳಿಕ ಒಬ್ಬ ಹೇಗೆ 'ತಂದೆ' ಎನಿಸಿಕೊಳ್ಳುತ್ತಾನೆಯೋ ಅಥವಾ ತಂದೆ ಮತ್ತು ಮಗು ಹೇಗೆ ಸಮಾನ ವಯಸ್ಕರಾಗುತ್ತಾರೋ, ಹಾಗೆಯೇ ಗುರು ಮತ್ತು ಶಿಷ್ಯ ಸಮಾನ ವಯಸ್ಕರು. ಆದರೆ ಶಿಷ್ಯನಲ್ಲಿ ಅಂತಸ್ಥನಾಗಿರುವ ಶಿವತನಕ್ಕೆ ಆದಿ ಇಲ್ಲ.

**ಆದಿಪಥ :** ೧. ಮೊಟ್ಟಮೊದಲು ಲಿಂಗಾಂಗ ಸಾರಸ್ಯ ಪಡೆದವನು ನಡೆದ ದಾರಿ. ಬಸವಾದಿ ಶರಣರು ಅವನು ನಡೆದ ದಾರಿಯಲ್ಲೇ ಸಾಗುತ್ತಿದ್ದಾರೆ.(೧:೪೬೩) ೨. ಆದಿ ಎಂದರೆ ಎಲ್ಲಕ್ಕೂ ಆದಿಯಾದ ಪರಶಿವ ಎಂದಾದರೆ, 'ಆದಿಪಥ' ಎಂಬ ಪದವು ಪರಶಿವನನ್ನು ಮುಟ್ಟುವ ದಾರಿ, ಶಿವಪಥ, ಎಂದಾಗುತ್ತದೆ.

**ಆದಿಪದ :** ಆದಿಯಲ್ಲಿದ್ದಂತೆ ಅಂಗನು ಶಿವನೊಂದಿಗೆ ಅವಿಭಾಜ್ಯ ಸ್ಥಿತಿಯಲ್ಲಿರುವ ಪದವಿ (ಅಥವಾ ಪದ).

**ಆದಿ ಪ್ರಸಾದ :** ಒಂದು ಪದಾರ್ಥವನ್ನು ಇಷ್ಟಲಿಂಗಕ್ಕೆ ಅರ್ಪಿಸಿದರೆ ಅದು ಪ್ರಸಾದವಾಗುತ್ತದೆ. ಮೊದಲು ನಾವು ಇಷ್ಟಲಿಂಗಕ್ಕೆ ಪದಾರ್ಥಗಳನ್ನು ಅರ್ಪಿಸುವುದರಿಂದ, ಅವು ಆದಿಪ್ರಸಾದವಾಗುತ್ತವೆ. ಆಧ್ಯಾತ್ಮ ಪ್ರಗತಿಯಾಂದಂತೆಲ್ಲಾ ನಾವು ಪದಾರ್ಥಗಳನ್ನೂ ಅಲ್ಲದೆ, ನಮ್ಮ ದೇಹೇದ್ರಿಯಾದಿಗಳನ್ನೇ ಅರ್ಪಿಸಿ, ಕೊನೆಯಲ್ಲಿ ನಮ್ಮ ಆತ್ಮವನ್ನೇ ಅರ್ಪಿಸಿಕೊಳ್ಳುತ್ತೇವೆ. ಕೊನೆಗೆ ಆತ್ಮವನ್ನೆ ಅರ್ಪಿಸಿಕೊಳ್ಳುವವನು ತಾನೇ ಅಂತ್ಯಪ್ರಸಾದಿ; ತಾನೇ ಅಂತ್ಯ ಪ್ರಸಾದ. (೯:೧೧೩೬)

**ಆದಿ ಭಕ್ತ, ಅನಾದಿ ಜಂಗಮ :** ಜಂಗಮ ಲಿಂಗದೊಡನೆ ಐಕ್ಯ ಸಾಧಿಸಿರುವುದರಿಂದ, ಅವನು ಅನಾದಿ. ಅವನನ್ನು ನಡೆದಾಡುವ (ಜಂಗಮ) ಲಿಂಗ ಎಂದು ಕರೆಯುವುದು ಈ ಕಾರಣಕ್ಕಾಗಿಯೇ. ಲಿಂಗ ಅನಾದಿಯಾದರೆ, ಜಂಗಮಲಿಂಗವೂ ಅನಾದಿಯಾಗಲೇ ಬೇಕು. ಭಕ್ತನು ಮೊದಲು ಭವಿಯಾಗಿದ್ದು, ಅವನ ಭಕ್ತಿ ಯಾವುದೋ ಒಂದು ನಿರ್ದಿಷ್ಟ ಸಮಯದಲ್ಲಿ ಪ್ರಾರಂಭವಾಗುವುದರಿಂದ, ಭಕ್ತನು 'ಆದಿ' (ಆದಿ ಉಳ್ಳವನು) ಎನಿಸಿಕೊಳ್ಳುತ್ತಾನೆ.

**ಆದಿಮಧ್ಯಾವಸಾನ :** ೧. ಸಾಮಾನ್ಯವಾಗಿ ಆದಿ, ಮಧ್ಯ ಮತ್ತು ಅವಸಾನ ಎಂಬ ಪ್ರದಗಳು ಕ್ರಮವಾಗಿ ಪ್ರಪಂಚದ ಆದಿ (ಸೃಷ್ಟಿ), ಪ್ರಪಂಚದ ಮಧ್ಯ (ಸ್ಥಿತಿ) ಮತ್ತು ಪ್ರಪಂಚದ ಅವಸಾನ (ಲಯ)ಗಳಿಗೆ ಅನ್ವಯಿಸುತ್ತದೆ. ವಚನಕಾರರ ಪ್ರಕಾರ ಪ್ರಪಂಚದ ಆದಿ ಮಧ್ಯಾವಸಾನಗಳು ಶಿವನ ನಿಯಂತ್ರಣದಲ್ಲಿವೆ. ೨. ಮತ್ತೊಂದು ವಿಶೇಷಾರ್ಥದಲ್ಲಿ ಸಿದ್ಧರಾಮನು ಆದಿಯೆಂದರೆ ಭಕ್ತನು ಲಿಂಗದೀಕ್ಷೆಯ ಮೂಲಕ ಗುರುಕರ ಸಂಜಾತನಾಗುವುದೆಂದೂ, ಮಧ್ಯವೆಂದರೆ ಆ ಭಕ್ತನು ಜಂಗಮರೊಡನೆ ಸಹಚರಿಸುವುದೆಂದೂ, ಅವಸಾನವೆಂದರೆ ಲಿಂಗದಲ್ಲಿ ಐಕ್ಯವಾಗುವುದೆಂದೂ ಹೇಳುತ್ತಾನೆ (೪:೧೩೫).

**ಆದಿಯ ಗುರು :** ಒಬ್ಬ ವ್ಯಕ್ತಿಯು ಶಿಷ್ಯ ಸಿಕ್ಕಿದಾಗ ಗುರುವಾಗುತ್ತಾನೆ. ಅಂದರೆ ಗುರುಶಿಷ್ಯ ಸಂಬಂಧಕ್ಕೆ ಆದಿಯಿದೆ. (೮:೪೩೦)

**ಆದಿಯನರುಹಿದ ಅನಾದಿಯ ತೋರಿದವನು :** ಇದು ಗುರುವಿಗೆ ಅನ್ವಯವಾಗುವ ಪದ. ಗುರುವು ಆದಿಯುಳ್ಳ ಇಷ್ಟಲಿಂಗವನ್ನು ಕೊಟ್ಟು, ಅದರ ಸ್ವರೂಪವನ್ನು ಮಹತ್ವವನ್ನೂ, ಅಗತ್ಯವನ್ನೂ ಕುರಿತು ಶಿಷ್ಯನಿಗೆ ಬೋಧಿಸುತ್ತಾನೆ; ಅಲ್ಲದೆ ಇನ್ನೂ ಮುಂದೆ, ಶಿಷ್ಯನ ಸಾಧನೆ ಮುಂದುವರೆದಂತೆಲ್ಲ ಅವನಿಗೆ ಶಿವಯೋಗದ ಮೂಲಕ ಅನಾದಿ ಪರಶಿವನನ್ನೂ ತೋರಿಸಿಕೊಡುತ್ತಾನೆ. ಭೋಧಿಸಿ, ತೋರಿಸದ ಗುರು ಗುರುವಲ್ಲ. (೧:೧೦೪೫)

**ಆದಿಯ ನಾದ :** ಮೊಟ್ಟ ಮೊದಲು ಪರಶಿವನಲ್ಲಿ ಸೃಷ್ಟಿ ಮಾಡಬೇಕೆಂಬ ನೆನಹು ತಲೆದೋರಿದ ಕೂಡಲೇ ಅವನಲ್ಲಿ ಅವ್ಯಕ್ತವಾಗಿ ಅಡಗಿದ್ದ ಶಕ್ತಿಯಲ್ಲಿ ಕ್ಷೋಭೆ (ಚಲನೆ)ಯುಂಟಾಗುತ್ತದೆ. ಈ ಕ್ಷೋಭೆಯು ನಾದವನ್ನುಂಟುಮಾಡುತ್ತದೆ. ಆದುದರಿಂದ ಆ ನಾದವೇ ಆದಿನಾದ.

**ಆದಿಲಿಂಗ :** ಲಿಂಗವೆಂದರೆ ಮಾನವ ಕೃತ ಇಷ್ಟಲಿಂಗ ಅಥವಾ ಸ್ಥಾವರಲಿಂಗವಾದರೂ ಆಗಬಹುದು, ಪರಶಿವನಾದರೂ ಆಗಬಹುದು. ಪರಶಿವ ಅನಾದಿಯಾದುದರಿಂದ, ಆದಿಲಿಂಗವೆಂದರೆ ಆದಿಯುಳ್ಳ ಇಷ್ಟಲಿಂಗವೆಂದಾಗುತ್ತದೆ.

**ಆದಿಶಕ್ತಿ (ಆದ್ಯ ಶಕ್ತಿ) :** ( ನೋಡಿ : **ಶಕ್ತಿ**)

**ಆದಿಶಕ್ತಿ, ಅನಾದಿಶಿವ :** ಆದಿಶಕ್ತಿ ಎಂಬ ಪದವು ಪರಶಿವನ ಶಕ್ತಿಯ ಐದು ರೂಪಗಳಲ್ಲೊಂದಾದ ಆದಿಶಕ್ತಿಗಾದರೂ ಅನ್ವಯವಾಗಬಹುದು ಅಥವಾ ಆದಿಯುಳ್ಳ ಶಕ್ತಿಗಾದರೂ ಅನ್ವಯವಾಗಬಹುದು. ಆದರೆ ಇಲ್ಲಿ (೧:೧೦೪೪) ಅದು ಆದಿಶಕ್ತಿಯೆಂಬ ವಿಶಿಷ್ಟ ಶಕ್ತಿಗೆ ಅನ್ವಯವಾಗದೆ, ಮೂಲಶಕ್ತಿಗೆ ಅನ್ವಯವಾಗುತ್ತದೆ. ಶಕ್ತಿಯು ಯಾವಾಗಲೂ ಪರಶಿವನ ಅವಿಭಾಜ್ಯ ಅಂಗವೇ ಆದರೂ, ಅದು ಕೆಲವು ವೇಳೆ (ಉದಾಹರಣೆಗೆ, ಪ್ರಳಯಕಾಲದಲ್ಲಿ) ವ್ಯಕ್ತವಾಗುವುದಿಲ್ಲ. ಪರಶಿವನಲ್ಲಿ ಸೃಷ್ಟಿ ಮಾಡಬೇಕೆಂಬ ಇಚ್ಛೆ ಮೂಡಿದ ಕೂಡಲೇ ಅವನ ಶಕ್ತಿಯು (ಚಿತ್ತು ಅಥವಾ ನೆನಹು) ಕಾಣಿಸಿಕೊಳ್ಳುತ್ತದೆ. ಅದರಲ್ಲಿ ಕ್ಷೋಭೆ ಉಂಟಾಗುವ ಮೂಲಕ ಜಗತ್ತಿನ ಸೃಷ್ಟಿ ಪ್ರಾರಂಭವಾಗುತ್ತದೆ. ಹೀಗೆ ಶಕ್ತಿಗೆ ಆದಿ ಇರುವುದರಿಂದ, ಅದು ಆದಿಶಕ್ತಿ; ಪರಶವನಿಗೆ ಆದಿಯಿಲ್ಲವಾದುದರಿಂದ ಅವನು ಅನಾದಿ.

**ಆದ್ಯರು :** ಪುರಾತನರು. ಈ ಪದ ೬೩ ಪುರಾತನರಿಗೆ ಅನ್ವಯಿಸುತ್ತದೆ. (ನೋಡಿ : **ಅರವತ್ಮೂರು ಪುರಾತನರು**)

**ಆದ್ಯಶಕ್ತಿ :** ಆದಿಶಕ್ತಿ. (ನೋಡಿ : **ಶಕ್ತಿ**)

**ಆಧಾರ :** ೧. ಜಗತ್ತಿನ ಆಧಾರವಾದ ಪರಶಿವ. ೨. ಮೂಲಾಧಾರ ಚಕ್ರ. (ನೋಡಿ : **ಚಕ್ರ**)

**ಆಧಾರ ಧಾರಣ :** ಪದ್ಮಾಸನದಲ್ಲಿ ಕುಳಿತು, ಮೂಲಬಂಧ, ಉಡ್ಯಾಣ ಬಂಧ ಮತ್ತು ಜಾಲಂಧರ ಬಂಧಗಳನ್ನು ಮಾಡಿ ಪ್ರತ್ಯಾಹಾರ ಮಾಡಿ, ಏಕಾಗ್ರಚಿತ್ತನಾಗಿ ಮೂಲವಾಯುವಿನಿಂದ ಮೂಲಾಗ್ನಿಯನೆಬ್ಬಿಸಿ, ಆಧಾರ ಚಕ್ರದ ನಾಲ್ಕು ದಳದ ಪದ್ಮವನ್ನು ಹೊಕ್ಕು, ಅಲ್ಲಿ ಮಂತ್ರ, ಪದ, ವರ್ಣ, ಇತ್ಯಾದಿಗಳನ್ನು ಕಂಡು, ಅಲ್ಲಿಂದ ಇನ್ನೂ ಮೇಲಕ್ಕೆ ಹೋಗಿ ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ಆಜ್ಞಾ, ವಿಶುದ್ಧಿ ಮತ್ತು ಸಹಸ್ರಾರ ಚಕ್ರಗಳ ಎಲ್ಲ ಮಂತ್ರ ಪದಾದಿಗಳನ್ನು ನೋಡುವವರೆಗೂ ಈ ಯೋಗವನ್ನೇ ಮಾಡುತ್ತಿರುವುದೇ ಆಧಾರ ಧಾರಣ. (೧೩:೧೬೦೧-೦೭)

**ಆಧಾರ ಶಕ್ತಿ :** ಎಲ್ಲ ವಸ್ತುಗಳ ಮೂಲವಾದ (ಆಧಾರವಾದ) ಚಿತ್ ಶಕ್ತಿಯೇ ಆಧಾರ ಶಕ್ತಿ. ಆದರೆ ಶಿವನ ಇಚ್ಛೆಯಿಂದಲ್ಲದೆ ಆಧಾರ ಶಕ್ತಿ, ಸೃಷ್ಟಿ, ಸ್ಥಿತಿ, ಮುಂತಾದ ವಿಕಾಸ ಕಾರ್ಯದಲ್ಲಿ ತೊಡಗಲಾರರು. (೧೧:೫೦೪)

**ಆಧಾರಾಧೇಯವಡಗುವುದು :** ಆಧೇಯವೆಂದರೆ ಪ್ರಪಂಚ ಮತ್ತು ಚಿದ್ವಸ್ತುಗಳಾದ ಆತ್ಮಗಳು, ಆಧಾರವೆಂದರೆ, ಸೃಷ್ಟಿಕರ್ತನಾದ ಪರಶಿವ. ಆಧೇಯವು ಆಧಾರವನ್ನವಲಂಬಿಸುತ್ತದೆ. ಜೀವನು ತನ್ನ ಅಜ್ಞಾನದಿಂದಾಗಿ (ಮರೆವಿನಿಂದಾಗಿ) ತಾನು ಆಧಾರ (ಪರಶಿವ) ದಿಂದ ಬೇರೆಯೆಂದು ತಿಳಿದುಕೊಂಡಿರುತ್ತಾನೆ. ಆದರೆ ಆಧ್ಯಾತ್ಮ ಶಿಕ್ಷಣದಿಂದಾಗಿ ಐಕ್ಯಸ್ಥಲ ತಲುಪಿದಾಗ ತಾನು-ಇದಿರು (ಆಧೇಯ -ಆಧಾರ)ಗಳ ವ್ಯತ್ಯಾಸ ಇಲ್ಲವಾಗುತ್ತದೆ. ಇಲ್ಲಿ ಆಧಾರ ಮತ್ತು ಆಧೇಯಗಳು ಅಡಗುವುದಿಲ್ಲ, ಅವೆರಡರ ವ್ಯತ್ಯಾಸಗಳಷ್ಟೇ ಅಡಗಿ, ಎರಡೂ ಒಂದಾದಂತೆ ಅನುಭವವಾಗುತ್ತದೆ ಎಂಬುದನ್ನು ಗಮನಿಸಬೇಕಾಗುತ್ತದೆ. (೪:೭೭೪)

**ಆಧ್ಯಾತ್ಮ ದೀಕ್ಷೆ :** ಆರು ಪದ್ಮ (ಚಕ್ರ)ಗಳಲ್ಲಿ ಮಹಾಲಿಂಗ ಮೊದಲಾದ ಆರು ಲಿಂಗಗಳಿವೆ ಎಂದು ತಿಳಿದ ಮುಮುಕ್ಷುವು ತನ್ನ ಆಧ್ಯಾತ್ಮಿಕ ಸಾಧನೆಯ ಮೂಲಕ ಪ್ರತಿಯೊಂದು ಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾ ಹೋಗುತ್ತಾನೆ. ಹೀಗೆ ಮಾಡಬೇಕಾದರೆ, ಇಡೀ ಪ್ರಪಂಚವೇ ಒಂದು ಪ್ರಸಾದವೆಂದು ತಿಳಿದು, ತನ್ನೆಲ್ಲವನ್ನು ಲಿಂಗಕ್ಕರ್ಪಿಸಿ, ಶರಣಸತಿ ಲಿಂಗಪತಿ ಭಾವವನ್ನು ತಳೆಯಬೇಕಾಗುತ್ತದೆ. ಈ ಭಾವವನ್ನು ತಳೆದು ಅದಕ್ಕೆ ತಕ್ಕಂತೆ ವರ್ತಿಸುವುದೇ ಆಧ್ಯಾತ್ಮ ದೀಕ್ಷೆ. (೧೦:೯೬)

**ಆನಂದ :** ಆನಂದವು ಸುಖಕ್ಕಿಂತ ಎರಡು ರೀತಿಯಲ್ಲಿ ಭಿನ್ನ. ಸುಖವು ಇಂದ್ರಿಯವೊಂದು ತನ್ನ ವಿಷಯದೊಡನೆ ಸಂಪರ್ಕ ಪಡೆದಾಗ ಮನಸ್ಸಿನಲ್ಲಾಗುವ ಪರಿಣಾಮ. ಈ ಕಾರಣಕ್ಕಾಗಿ ಅದನ್ನು 'ಇಂದ್ರಿಯ ಸುಖ' ಎಂದು ಕರೆಯುತ್ತಾರೆ. ಆದರೆ ಆನಂದ ಇಂದ್ರಿಯ ಜನ್ಯ ಅಥವಾ ಇಂದ್ರಿಯ ವಿಷಯ ಜನ್ಯವಲ್ಲ. ಎರಡನೆಯದಾಗಿ ಇಂದ್ರಿಯ ಸುಖ ಕ್ಷಣಿಕ. ಆದರೆ ಆನಂದ ನಿತ್ಯ.

ಆನಂದವು ಲಿಂಗಾಂಗ ಸಾಮರಸ್ಯದ ಪರಿಣಾಮ. ಇದು ಎರಡು ಹಂತಗಳಲ್ಲಿ ಪರಿಣಮಿಸುತ್ತದೆ. ಸಾಧಕನು ಧ್ಯಾನ ಪ್ರಾರಂಭಿಸಿ, ಇಂದ್ರಿಯ ಮತ್ತು ಅಂತಃಕರಣಗಳ ವ್ಯಾಪಾರವನ್ನು ತಾತ್ಕಾಲಿಕವಾಗಿ ತಡೆಹಿಡೆದಾಗ, ಆತ್ಮವು ತಾನೊಂದೇ ಇರುತ್ತದೆ. ಕೇವಲ ಒಂದೇ ಇರುವ ಆತ್ಮದ ಈ ಸ್ಥಿತಿಗೆ ಕೈವಲ್ಯಾನಂದ ಎಂದು ಹೆಸರು. ದೇಹದ ಭಾರವಾಗಲಿ ಮಾನಸಿಕ ದುಃಖ ದುಮ್ಮಾನಗಳಾಗಲಿ ಇಲ್ಲದ ಆತ್ಮಕ್ಕೆ ತಾನೊಂದೇ ಇರುವುದು ಆನಂದದಾಯಕ ಸ್ಥಿತಿ.

ಲಿಂಗಾಂಗ ಸಾಮರಸ್ಯ ಮುಗಿದಾಗ ಆತ್ಮನಿಗೆ ತಾನು ಪರಮ ಧ್ಯೇಯವನ್ನು ಸಾಧಿಸಿದ ತೃಪ್ತಿ ಉಂಟಾಗುತ್ತದೆ. ಅರಿಷಡ್ವರ್ಗ ಮುಂತಾದ ಚಿತ್ತ ವೃತ್ತಿಗಳಿಲ್ಲದವನಿಗಷ್ಟೇ ಅನುಭಾವ (ಲಿಂಗಾಂಗ ಸಾಮರಸ್ಯ) ಸಾಧ್ಯ. ಚಿತ್ತವೃತ್ತಿಗಳಿಲ್ಲದ ಮನಸ್ಸು ಆಸೆಗಳಿಂದ ಮುಕ್ತ, ಪೂರ್ವಕರ್ಮಗಳಿಂದಲೂ ಮುಕ್ತ. ಹೀಗೆ ಅತ್ಯಂತ ಹೆಚ್ಚಿನ ಧ್ಯೇಯವನ್ನು ಸಾಧಿಸಿದ, ಆಸೆ ಮತ್ತು ವಾಸನೆಗಳಿಲ್ಲದ ಮನಸ್ಸಿನಲ್ಲಿ ನೆಲೆಯೂರುವ ಶಾಂತಿ, ತೃಪ್ತಿ, ಸಮಾಧಾನಗಳೇ ಅನಂದದ ಮತ್ತೊಂದು ಹೆಸರು.

ವಚನಕಾರರು ಆನಂದವು ಅಂಗನಿಗೆ ಹೊಸತೇನಲ್ಲ ಎನ್ನುತ್ತಾರೆ. ಲಿಂಗದ ಭಾಗವಾಗಿದ್ದಾಗ, ಶಿವ ಸಾನಿಧ್ಯದಿಂದಾಗಿ ಅವನು ಸದಾ ಅನಂದಿಯೇ ಆಗಿದ್ದ. ಸಂಸಾರ ಬಂಧನದಲ್ಲಿ ಅವಿದ್ಯೆಯಿಂದಾಗಿಯೂ ಅಂಗ ಸಂಗದಿಂದಾಗಿಯೂ ಅದನ್ನು ಮರೆತಿದ್ದನಷ್ಟೇ. ಮಲತ್ರಯಗಳನ್ನು ಕೊಡವಿಕೊಂಡು ಮುನ್ನಿನ ಲಿಂಗಾಂಗ ಸಾಮರಸ್ಯವನ್ನು ಪಡೆದಾಗ, ಅದರ ಜೊತೆಗಿನ ಆನಂದವೂ ಅವನಿಗೆ ಲಭ್ಯವಾಗುತ್ತದೆ.

**ಆನಂದಭಕ್ತಿ :** (ನೋಡಿ : **ಭಕ್ತಿ**)

**ಆನಂದಸುಖ ಪರಿಣಾಮ :** ಶರಣಸ್ಥಲದ ಸಾಧಕನು ತನ್ನ ಸುಜ್ಞಾನ ಎಂಬ ಹಸ್ತದಲ್ಲಿ ಪ್ರಸಾದ ಲಿಂಗವನ್ನು ಕಂಡು ಆನಂದವೆಂಬ ಭಕ್ತಿಯನ್ನು ಆಚರಿಸುವಾಗ ಅವನಿಗೆ ಆನಂದವೆಂಬ ಸುಖ ಪರಿಣಮಿಸುತ್ತದೆ. ಅಲ್ಲದೆ, ಅವನಿಗೆ ತನ್ನ ಸದ್ಭಾವ ಎಂಬ ಹಸ್ತದಲ್ಲಿ ಮುಂದಿನ ಸ್ಥಲದ ಮಹಾಲಿಂಗವು ಗೋಚರಿಸುತ್ತದೆ. (೧೨:೪೫೫)

**ಆಪ್ಯಾಯನ :** ತೃಪ್ತಿ. ವಚನಗಳಲ್ಲಿ ಈ ಪದವು ಸಾಮಾನ್ಯವಾಗಿ ಐಹಿಕ ಸುಖಕ್ಕೆ (ತೃಪ್ತಿಗೆ) ಅನ್ವಯವಾಗದೆ, ಅರ್ಪಿಸಿ ಪಡೆದ ಪ್ರಸಾದವನ್ನು ಸೇವಿಸಿದ ತೃಪ್ತಿಗೆ ಅನ್ವಯವಾಗುತ್ತದೆ; ಕೆಲವು ವೇಳೆ, ಅನುಭಾವ ಸ್ಥಿತಿಯಲ್ಲಿ ಅಂಗವು ಲಿಂಗದಲ್ಲಿ ಲೀನವಾಗಿ ತಾನೆಂಬ ಭಾವವನ್ನು ಕಳೆದುಕೊಂಡು, ಮಲತ್ರಯಗಳಿಂದಲೂ ತಾಪತ್ರಯಗಳಿಂದಲೂ ಮುಕ್ತನಾಗುವುದರಿಂದ ಉಂಟಾಗುವ ತೃಪ್ತಿಗೂ, ಈ ಪದ ಅನ್ವಯವಾಗುತ್ತದೆ. [`ಅರಿವಿನ ಆಪ್ಯಾಯನಕ್ಕೆ ತೃಪ್ತಿ'. (೧:೧೦೯)]

**ಆಯತ ಲಿಂಗ :** ಬಂದ ಲಿಂಗ. ಗುರುವು ಲಿಂಗದೀಕ್ಷೆಯ ಮೂಲಕ ಕೊಟ್ಟ ಇಷ್ಟಲಿಂಗ ಅಥವಾ ಗುರುವಿನಿಂದ `ಬಂದಲಿಂಗ'.

**ಆರಂಗ :** ಅಂಗವಾರು ಅಥವಾ ಆರು ಅಂಗಸ್ಥಲಗಳು. ಇವೆಂದರೆ, ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ. ಈ ಆರು ಸ್ಥಲಗಳಲ್ಲಿ ಆಧ್ಯಾತ್ಮಿಕ ಸಾಧನೆ ಮಾಡುವ ಅಂಗನು (ಆತ್ಮನು) ಪರಶಿವನ ಅಂಗ (ದೇಹ ಅಥವಾ ಭಾಗ)ವಾಗಿರುತ್ತೇನೆಂದು ಪ್ರತಿಜ್ಞೆ ಮಾಡುತ್ತಾನೆ. (೧೨:೯೮೦)

ಆರತಿ : ಲಿಂಗಪೂಜೆಯ ಒಂದು ಭಾಗವಾದ ಆರತಿಯು ಬೆಳಕನ್ನು ಲಿಂಗಕ್ಕೆ ತೋರಿಸುವ ಒಂದು ಸಾಂಕೇತಿಕ ಕ್ರಿಯೆ. ಇದು ಒಂದು ಸಾಂಕೇತಿಕ ಕ್ರಿಯೆ ಎಂಬುದು ಮೂರು ಕಾರಣಗಳಿಗಾಗಿ. ೧. ಬೆಳಕನ್ನು ತೋರಿಸಿದಾಗ ಭೌತವಸ್ತುವಾದ ಲಿಂಗವು ಕಾಣುವಂತೆ, ನಮ್ಮ ಮನಸ್ಸಿನಲ್ಲಿರುವ ಅಜ್ಞಾನವೆಂಬ ಕತ್ತಲೆ ಹೋಗಿ ಅರಿವು ಎಂಬ ಜ್ಯೋತಿ (ಜ್ಞಾನ ಜ್ಯೋತಿ) ಬೆಳಗಿದರೆ, ಆಗ ಲಿಂಗ ಗೋಚರವಾಗುತ್ತದೆ. ಇಷ್ಟಲಿಂಗವು ಗೋಚರವಾಗುವಂತೆ ಆರತಿ ಬೆಳಗುವುದು ಒಂದು ಸಾಂಕೇತಿಕ ಕ್ರಿಯೆ. ೨. ಆರತಿಯನ್ನು ಬೆಳಗಿದಾಗ, ನಾವು ಲಿಂಗಕ್ಕೆ ನೀರು, ಗಂಧ, ಹೂವು ಹಣ್ಣುಗಳನ್ನು ಅರ್ಪಿಸುವಂತೆ ಪಂಚಭೂತಗಳಲ್ಲೊಂದು ಬೆಂಕಿಯನ್ನೂ ಅರ್ಪಿಸಿದಂತಾಗುತ್ತದೆ. ಪಂಚಭೂತಗಳಿಂದಾದ ನಮ್ಮ ವ್ಯಕ್ತಿತ್ವವನ್ನು ಪರಶಿವನೇ (ಶಿವಶಕ್ತಿಯೇ) ಸೃಷ್ಟಿಸಿರುವುದರಿಂದ, ಅದನ್ನು ನಾವು ಅವನಿಂದ ಪಡೆದ ಸಾಲವೆಂಬಂತೆ ಪರಿಗಣಿಸಿ, ಅದನ್ನು ಹಿಂದುರುಗಿಸಬೇಕು. ಆರತಿಯನ್ನು ಬೆಳಗುವುದು ಅಗ್ನಿಯನ್ನು ಹಿಂತಿರುಗಿಸಿದ ಸಂಕೇತ. ೩. ಅಜ್ಞಾನದಿಂದಾಗಿ ನಾವು ಅನೇಕ ರೀತಿಯ ಆಸೆಗಳನ್ನು ಕಲ್ಪಿಸಿಕೊಂಡು ಅವುಗಳನ್ನು ಪೂರೈಸಿಕೊಳ್ಳಲು ಅನೇಕ ರೀತಿಯ ದುಷ್ಕರ್ಮಗಳನ್ನು ಮಾಡಿ ಸಂಸಾರ ಬಂಧನಕ್ಕೊಳಗಾಗುತ್ತೇವೆ. ಆರತಿ ಎಂಬ ಬೆಂಕಿಯು ಆ ಆಸೆಗಳನ್ನು ಸುಟ್ಟ ಸಂಕೇತ.

ಆದರೆ ಆರತಿ ಪರಿಕಲ್ಪನೆಯ ಹಿಂದಿರುವ ಈ ತತ್ವವನ್ನರಿಯದೇ ಆರತಿ ಬೆಳಗುವುದೇ ಭಕ್ತಿಯೆಂದರೆ ಅದು ಅಜ್ಞಾನವಾಗುತ್ತದೆ. ಹಾಗೆ ಮಾಡುವ ಯಾಂತ್ರಿಕ ಕ್ರಿಯೆಯನ್ನು ಮಡಿವಾಳ ಮಾಚಯ್ಯ ನಿಷ್ಠುರವಾಗಿ ಖಂಡಿಸಿದ್ದಾನೆ. ಒಂದು ಆರತಿ ಮಾಡಿದೆ, ಹತ್ತು ಆರತಿ ಮಾಡಿದೆ ಎಂದು ಜಂಬ ಕೊಚ್ಚಿಕೊಳ್ಳುವ ಬದಲು ನಮ್ಮ ಬಹುಮುಖದ ಅಜ್ಞಾನವನ್ನೇಕೆ ಸುಡಬಾರದು ಎಂಬುದು ಅವನ ಪ್ರಶ್ನೆ. ಮನೋಪ್ರಕೃತಿಯ ದುರ್ಗುಣ ಪಡೆದ ಏಕಾರತಿ, ಲಿಂಗ ಬೇರೆ ಅಂಗ ಬೇರೆ ಎಂಬ ಎರಡಳಿದುದರ ಸಂಕೇತವಾದ ದ್ವಿಯಾರತಿ, ಮಲತ್ರಯಗಳಿದುದರ ಸಂಕೇತವಾಗಿ ತ್ರಿಯಾರತಿ, ಅಂತಃಕರಣ ಚತುಷ್ಟಯವಳಿದುದರ ಸಂಕೇತವಾಗಿ ಚತುರಾರತಿ, ಪಂಚಭೂತ, ಪಂಚವಾಯು, ಪಂಚೇಂದ್ರಿಯಗಳ ಪಂಚಕ್ಲೇಶ ಮತ್ತು ಪಂಚಮೂರ್ತಿಗಳ ಫಲಪದಗಳನ್ನು ಅತಿಗಳೆದುದರ ಸಂಕೇತವಾಗಿ ಪಂಚಾರತಿ, ಅರಿಷಡ್ವರ್ಗಗಳನ್ನು, ಷಡ್ಭ್ರಮೆಗಳನ್ನೂ ಗೆಲಿದುದರ ಸಂಕೇತವಾಗಿ ಷಡಾರತಿಯನ್ನೂ ಸಪ್ತಧಾತುಗಳ ವಿಕಾರ, ಸಪ್ತವ್ಯಸನಗಳು ಅಳಿದುದಕ್ಕಾಗಿ ಸಪ್ತಾರತಿಯನ್ನೂ, ಅಂತರಂಗದ ಅಷ್ಟಮದ, ಬಹಿರಂಗದ ಅಷ್ಟಮದಗಳ ನಾಶದ ಸಂಕೇತವಾಗಿ ಅಷ್ಟಾರತಿಯನ್ನೂ, ನವಗ್ರಹಗಳ ದುಷ್ಪರಿಣಾಮುಗಳನ್ನು ಹೋಗಲಾಡಿಸುದದರ ಸಂಕೇತವಾಗಿ ನವಾರತಿಯನ್ನೂ, ದಶವಾಯುಗಳ ದುಷ್ಪರಿಣಾಮಗಳಳಿದುದರ ಸಂಕೇತವಾಗಿ ದಶಾರತಿಯನ್ನೂ ಮಾಡುವುದು ನಿಜವಾದ ಭಕ್ತಿಯೇ ಹೊರತು, ಕೇವಲ ಬಹಿರಂಗದ ಕ್ರಿಯೆಗಳಲ್ಲ. (೮:೪೬೩)

**ಆರೂಢ :** ಲಿಂಗದಲ್ಲಿ ಮನಸ್ಸು ನೆಟ್ಟವನು. ಅವನ ಮನಸ್ಸು ಮತ್ತೆಲ್ಲಿಗೂ ಹರಿಯುವುದಿಲ್ಲ. (೪:೨೨೭)

**ಆರೂಢಿಯ ಕೂಟ :** ವ್ಯಾವಹಾರಿಕವಾಗಿ ನಾವು ಈ ಜನ್ಮದ ಯಾವುದೋ ಒಂದು ವಯಸ್ಸಿನಲ್ಲಿ ಲಿಂಗಾಂಗ ಐಕ್ಯವನ್ನು ಸಾಧಿಸಿದರೂ, ಅದನ್ನು ಸಾಧಿಸಿದ ಮೇಲೆ ಈ ಐಕ್ಯತೆ ಹೊಸದಲ್ಲ, ಬಹಳ ಮೊದಲಿನಿಂದಲೂ (ಆರೂಢಿ) ಇದೆ, ಮುಂದೆ ಯಾವಾಗಲೂ ಇರುತ್ತದೆ ಎಂಬ ಅರಿವು ಮೂಡುತ್ತದೆ. ಜಡ ದೇಹಗಳ ಕೂಟ ಕ್ಷಣಿಕ, ಅಜಡರಿಗೆ (ಆತ್ಮ ಮತ್ತು ಪರಶಿವರಿಗೆ) ಕೂಟ ಶಾಶ್ವತ. ಲಿಂಗಾಂಗ ಸಮರಸವು ಶಾಶ್ವತ ಕೂಟಕ್ಕಿದ್ದ ತಡೆಯನ್ನು ತೊಡೆದುಹಾಕಿದೆ. (೯:೯೧೭)

**ಆರೋಹ ಅವರೋಹ :** ಒಂದು ವಿಶಿಷ್ಟ ರೀತಿಯ ಪ್ರಾಣಾಯಾಮದ ಮೂಲಕ ಧ್ಯಾನದ ಒಂದು ಹಂತವನ್ನು ತಲುಪಿದಾಗ, ಧ್ಯಾನಿಯ ಬೆನ್ನು ಹುರಿಯಲ್ಲಿ ಒಂದು ಪರಿಣಾಮ ಉಂಟಾಗುತ್ತದೆ. ಅವೆಂದರೆ, ಮೇಲಿನಿಂದ ಪ್ರಾಣವಾಯುವು ಕೆಳಗಿಳಿದು (ಅವರೋಹವಾಗಿ) ಕೆಳಗಿನಿಂದ ಅಪಾನ ವಾಯುವು ಮೇಲೇರಿ (ಆರೋಹವಾಗಿ) ಅವೆರಡೂ ಒಂದು ಕಡೆ ಸಂಧಿಸುತ್ತವೆ. ಪರಶಿವನ ನಿಃಕಲ ರೂಪು ಈ ರೀತಿ ಆರೋಹ ಅವರೋಹವಾಗಿ ಆಡುತ್ತದೆ ಎಂಬುದು ಕೆಲವು ವಚನಕಾರರ ನಂಬಿಕೆ (೮:೨೧೨೬).

**ಆಶ್ರಮ ನಾಲ್ಕು :** ಸಾಂಪ್ರದಾಯಿಕ ಹಿಂದೂ ಧರ್ಮವು ಮಾನವ ಜೀವನವನ್ನು ವಯಸ್ಸಿನ ಆಧಾರದ ಮೇಲೆ ನಾಲ್ಕು ಭಾಗ ಮಾಡಿದೆ. ಅವೆಂದರೆ, ಬ್ರಹ್ಮಚಾರ್ಯಾಶ್ರಮ, ಗ್ರಹಸ್ಥಾಶ್ರಮ, ವಾನಪ್ರಸ್ಥಾಶ್ರಮ ಮತ್ತು ಸನ್ಯಾಸಾಶ್ರಮ. ಬಾಲ್ಯದಲ್ಲಿ ಮನುಷ್ಯನು ಬ್ರಹ್ಮಚಾರಿಯಾಗಿದ್ದು, ವಿದ್ಯೆಯನ್ನು ಕಲಿಯಬೇಕು; ಕಲಿಕೆಯ ನಂತರ (ತಾರುಣ್ಯದಲ್ಲಿ) ಮದುವೆಯಾಗಿ ಗ್ರಹಸ್ಥಾಶ್ರಮ ನಡೆಸಬೇಕು. ಮಕ್ಕಳು ಪ್ರಾಪ್ತ ವಯಸ್ಕರಾದಾಗ ಎಲ್ಲ ವ್ಯವಹಾರಗಳನ್ನು ಅವರಿಗೆ ವಹಿಸಿಕೊಟ್ಟು, ಕಾಡಿಗೆ ಹೋಗಬೇಕು. ಅಲ್ಲಿ ಸರ್ವಸಂಗ ಪರಿತ್ಯಾಗಿಯಾಗಿ ಸನ್ಯಾಸಾಶ್ರಮ ನಡೆಸುತ್ತಾ ಮುಕ್ತಿಯನ್ನರಸಬೇಕು.

ಸಾಂಪ್ರದಾಯಿಕ ಹಿಂದೂಗಳ ಈ ಜೀವನ ಸಿದ್ಧಾಂತವು ವಚನಕಾರರಿಗೆ ಸ್ವೀಕಾರಾರ್ಹವಲ್ಲ.

**ಆಸನ :** ಚಿತ್ತವೃತ್ತಿನಿರೋಧವನ್ನು ಸಾಧಿಸಲು ಅಗತ್ಯವಾದ ಎಂಟು ಅಂಗಗಳಲ್ಲಿ ಒಂದು. ಇದು ಆವಶ್ಯಕವಾದರೂ ಇದೇ ಕೊನೆಯಲ್ಲ. ದೈಹಿಕ ಲಾಭಗಳಿಗಾಗಿ ಆಸನ ಮಾಡುವವರನ್ನು ವಚನಕಾರರು ಖಂಡಿಸಿದ್ದಾರೆ. (ನೋಡಿ : **ಅಷ್ಟಾಂಗ ಯೋಗ**)

**ಇಂದ್ರಿಯ :** ಈ ಪದವು ಐದು ಜ್ಞಾನೇಂದ್ರಿಯಗಳಿಗೂ (ಬುದ್ಧೀಂದ್ರಿಯಗಳಿಗೂ) ಅಲ್ಲದೆ, ಐದು ಕರ್ಮೇಂದ್ರಿಯಗಳಿಗೂ ಅನ್ವಯಿಸುತ್ತದೆ. ಆದರೆ ಕಣ್ಣು, ಕಿವಿ, ಮೂಗು, ಮುಂತಾದುವುಗಳು ಜ್ಞಾನೇಂದ್ರಿಯಗಳಲ್ಲ. ಇಂದ್ರಿಯವೆಂದರೆ ಒಂದು ಶಕ್ತಿ; ನೋಡುವ

ಶಕ್ತಿ, ರುಚಿಸುವ ಶಕ್ತಿ, ಮೂಸುವ ಶಕ್ತಿ ಮುಂತಾದುವುಗಳು ಇಂದ್ರಿಯಗಳು. ಹೀಗೆ, ಚರ್ಮ ತ್ವಗಿಂದ್ರಿಯ, ಕಿವಿ ಶ್ರೋತ್ರೇಂದ್ರಿಯ, ಮುಂತಾಗಿ ಹೇಳಿದರೂ, ರಕ್ತ ಮಾಂಸಗಳಿಂದಾದ ಕಿವಿ ಮೂಗು ಇತ್ಯಾದಿಗಳು ಆ ಶಕ್ತಿಗಳನ್ನು ವ್ಯಕ್ತಪಡಿಸುವ ಮಾಧ್ಯಮಗಳೇ ಹೊರತು, ಅವೇ ಆ ಶಕ್ತಿಗಳಲ್ಲ. ಕಣ್ಣು ನೋಡಲಾರದು; ಆದರೆ ಕಣ್ಣಿನ ಮೂಲಕ ಬುದ್ಧಿ ನೋಡಬಲ್ಲುದು; ಆದರೆ, ಕಣ್ಣು 'ನೋಡು'ತ್ತಿದ್ದರೂ ಮನಸ್ಸು ಮತ್ತೇನನ್ನೋ ಯೋಚನೆ ಮಾಡುತ್ತಿದ್ದರೆ, ನಮಗೆ ರೂಪಿನ ಅನುಭವವಾಗುವುದಿಲ್ಲ. ಈ ಮಾತು ಕರ್ಮೇಂದ್ರಿಯಗಳಿಗೂ ಅನ್ವಯವಾಗುತ್ತದೆ, (ಬುದ್ಧಿ, ಮನಸ್ಸು ಇತ್ಯಾದಿಗಳು ಆತ್ಮನ ಸಂಪರ್ಕವಿಲ್ಲದಿದ್ದರೆ ಕೆಲಸ ಮಾಡುವುದಿಲ್ಲ).

**ಇಂದ್ರಿಯಂಗಳೈಮುಖವಾಗಿಪ್ಪ ಪ್ರಸಾದಿ :** ಪ್ರಾಣಲಿಂಗಿಯಾದವನು ತನ್ನ ಪ್ರತಿ ಅಂಗದಲ್ಲಿಯೂ ಲಿಂಗವನ್ನು ಪ್ರತಿಷ್ಠಾಪಿಸಿರುವುದರಿಂದ, ವಿಷಯಗಳನ್ನು ತಾನು ಪ್ರಸಾದವಾಗಿ ಸ್ವೀಕರಿಸುವ ಮುನ್ನ, ಇಂದ್ರಿಯಗಳಲ್ಲಿ ಪ್ರತಿಷ್ಠಿತವಾಗಿರುವ ಲಿಂಗಕ್ಕೆ ಅವುಗಳನ್ನು ಅರ್ಪಿಸುತ್ತಾನೆ. ಇಂತಹ ಇಂದ್ರಿಯಗಳು ಐದು ಇರುವುದರಿಂದ ಅವುಗಳ ವಿಷಯಗಳೇ, ಅಂದರೆ ರೂಪ, ರಸ, ಗಂಧ, ಸ್ಪರ್ಶ ಮತ್ತು ಶಬ್ದಗಳೇ ಅವುಗಳ ಆಹಾರಗಳು. ಆ ಆಹಾರಗಳನ್ನು ಸ್ವೀಕರಿಸುವ ಇಂದ್ರಿಯಗಳು ಬಾಯಿ (ಮುಖ)ಗಳೆನಿಸಿಕೊಳ್ಳುತ್ತವೆ. ಈ ಇಂದ್ರಿಯಗಳೆಂಬ ಐದು ಬಾಯಿಗಳಲ್ಲೇ ಲಿಂಗ ಸ್ಥಾಪಿತವಾಗಿರುವುದರಿಂದ, ಅವುಗಳಿಂದ ಮನಸ್ಸಿಗೆ ಹೋದಾಗ ಅವು ಪ್ರಸಾದವಾಗುತ್ತವೆ. ಆದುದರಿಂದ ಪ್ರತಿ ಪ್ರಾಣಲಿಂಗಿಯೂ ಐಮುಖವಾಗಿಪ್ಪ ಪ್ರಸಾದಿ. (೪:೧೩೫)

**ಇಂದ್ರಿಯ ನಿಗ್ರಹ :** ಆಧ್ಯಾತ್ಮ ಸಾಧನೆಗೆ ಇಂದ್ರಿಯ ನಿಗ್ರಹ ಅವಶ್ಯಕ ಎಂದು ಹೇಳುವುದು ರೂಢಿ. ಆದರೆ ಎಷ್ಟು ನಿಗ್ರಹ ಮಾಡಬೇಕು, ಎಷ್ಟು ಮಾಡಬಾರದು ಎಂಬುದರ ಬಗ್ಗೆ ಶರಣರು ಸ್ಪಷ್ಟ ನಿಲುವು ತಳೆದಿದ್ದಾರೆ. ಇಂದ್ರಿಯ ವಿಷಯಗಳ ಬಗ್ಗೆ ಮಾತ್ರ ಆಸಕ್ತನಾಗಿರುವವನಿಗೆ ಲಿಂಗಾಂಗ ಸಾಮರಸ್ಯವಿಲ್ಲ; ಸಾಮರಸ್ಯವೂ ಬೇಕು, ಇಂದ್ರಿಯ ಸುಖವೂ ಬೇಕು, ಎಂಬುವವನಿಗೂ ಸಾಮರಸ್ಯವಿಲ್ಲ; ಇಂದ್ರಿಯ ಸುಖವೇ ಬೇಡ ಎಂಬುವವನಿಗೂ ಸಾಮರಸ್ಯವಿಲ್ಲ. ಏಕೆಂದರೆ ಹಾಗನ್ನುವವನ ಮನಸ್ಸು ಇಂದ್ರಿಯ ಸುಖವನ್ನೇ ಚಿಂತಿಸುತ್ತಿರುತ್ತದೆ. ಆದರೆ ಇರುವುದೆಲ್ಲವೂ ಪರಶಿವನ ಪ್ರಸಾದ, ಬಂದುದೆಲ್ಲಾ ಪರಶಿವನ ಪ್ರಸಾದ ಎಂದು ತಿಳಿದ ಪ್ರಸಾದಿಯು ಬೇಕು-ಬೇಡಗಳ ಬಗ್ಗೆ ಕಾಳಜಿ ವಹಿಸುವುದಿಲ್ಲ. ಹೀಗೆ ಅವನು ಉಳಿದವರಂತೆ ಇಂದ್ರಿಯ ಸುಖ ಪಡೆದರೂ, ಅವನು ಇಂದ್ರಿಯಾಸಕ್ತನಲ್ಲ; ಅವನು ಇಂದ್ರಿಯಸುಖದಿಂದ ದೂರವಿದ್ದಾಗ ಸನ್ಯಾಸಿಯಲ್ಲ.

**ಇಂದ್ರಿಯ ಸಂಗ :** ಹಸಿವು, ಮೈಥುನ, ಮುಂತಾದ ದೈಹಿಕ ಬಯಕೆಗಳು. ನಾವಾಗಿಯೇ ಅರಸಿಕೊಂಡು ಹೋಗಿ ಪಡೆಯುವುದು ಪ್ರಸಾದವಲ್ಲ; ತಾನಾಗಿಯೇ ಬಂದುದನ್ನು ಬೇಕು,

ಬೇಡ ಎನ್ನದೆ ಸ್ವೀಕರಿಸುವುದು ಪ್ರಸಾದ. ಆದುದರಿಂದ 'ಇಂದ್ರಿಯ ಸಂಗ ಮರೆಯದನ್ನಕ್ಕ ಪ್ರಸಾದವ ಕೊಂಡೆವೆಂಬರು' ಎಂದು ಘಟ್ಟಿವಾಳಯ್ಯ ಹೇಳುವಲ್ಲಿ "ಇಂದ್ರಿಯ ಸಂಗ" ಎಂಬ ಪದಕ್ಕೆ ದೇಹಕ್ಕೆ ಸಂಬಂಧಿಸಿದ ಬಯಕೆಗಳು ಎಂಬರ್ಥವಿದೆ. (೭:೫೦೧)

**ಇಡಾ :** ಇಡಾ ನಾಡಿಯು ನಮ್ಮ ಬೆನ್ನು ಹುರಿಯಲ್ಲಿ ಇದೆಯೆಂದು ನಂಬಲಾಗಿದೆ. ಆದರೆ, ಇದು ಇಂದ್ರಿಯಗೋಚರವಲ್ಲ. ಇದು ನಮ್ಮ ಎಡ ಭಾಗವನ್ನು ಪ್ರತಿನಿಧಿಸುತ್ತದೆ.

ಇಡಾ ನಾಡಿಯು ನಮ್ಮ ಜ್ಞಾನೇಂದ್ರಿಯಗಳನ್ನೂ, ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರಗಳನ್ನೂ ನಿಯಂತ್ರಿಸುತ್ತದೆ. ಇದನ್ನೇ ಬುದ್ಧಿ ಅಥವಾ ಮನಸ್ಸು ಎಂದರೆ ತಪ್ಪಾಗಲಾರದು. ಮನುಷ್ಯ ಅಂತರ್ಮುಖಿಯಾಗಲು ಇಡಾ ಮುಖ್ಯ ಕಾರಣ. ಕೆಲವು ವೇಳೆ ಇದನ್ನು ಚಂದ್ರನಾಡಿಯೆಂದೂ ಕರೆಯುವುದುಂಟು.

ಎಡ ಹೊಳ್ಳೆಯ ಮೂಲಕ ಉಸಿರಾಡುವುದರಿಂದ ಇಡಾ ಹೆಚ್ಚು ಕಾರ್ಯಪ್ರವೃತ್ತವಾಗುತ್ತದೆ.

**ಇದಿರು :** ಜ್ಞೇಯ (ತಿಳಿಯಲ್ಪಡುವ) ವಸ್ತು. ಪ್ರತಿಯೊಬ್ಬ ವ್ಯಕ್ತಿಯೂ ತನ್ನನ್ನು ತಿಳಿದುಕೊಳ್ಳದೆ ಇದಿರನ್ನು ತಿಳಿದುಕೊಳ್ಳಲು ಬರುವುದಿಲ್ಲ. ಅದೇ ರೀತಿ, ಇದಿರನ್ನು ತಿಳಿದುಕೊಳ್ಳದೇ ತನ್ನನ್ನು ತಿಳಿದುಕೊಳ್ಳಲು ಬರುವುದಿಲ್ಲ. ಉದಾಹರಣೆಗೆ, "ಇದು ಗೋಡೆ" ಎಂದು ಹೇಳುವ ವ್ಯಕ್ತಿಯು ಸೂಚ್ಯವಾಗಿ "ನಾನು ಈ ಗೋಡೆಯನ್ನು ನೋಡುತ್ತಿದ್ದೇನೆ/ ಮುಟ್ಟುತ್ತಿದ್ದೇನೆ" ಎಂದು ಹೇಳುತ್ತಿದ್ದಾನೆ. ಆದರೆ ಈ ನಾನು-ಇದಿರುಗಳ ಸಾಪೇಕ್ಷತೆ ವ್ಯಾವಹಾರಿಕ ಜ್ಞಾನಕ್ಕೆ ಅನ್ವಯಿಸುತ್ತದೆಯೇ ಹೊರತು, ಪಾರಮಾರ್ಥಿಕ ಜ್ಞಾನಕ್ಕಲ್ಲ. ಸಮಾಧಿಸ್ಥಿತಿಯು ಅಥವಾ ಲಿಂಗಾಂಗ ಸಾಮರಸ್ಯವು ತಾನು-ಇದಿರು (ಜ್ಞಾತೃ ಜ್ಞೇಯಗಳ) ದ್ವಂದ್ವವನ್ನು ಮೀರಿದುದು. (೨:೬೦೪)

**ಇನ್ನೂರ ಹದಿನಾರು ಸಕೀಲಗಳು :** ಕೀಲ ಎಂದರೆ ಕೊಂಡಿ ಎಂದರ್ಥ. ಎರಡು ಭಿನ್ನವಾದ ಭಾಗಗಳನ್ನು ಕೀಲ ಅಥವಾ ಕೊಂಡಿ ಬಂಧಿಸುತ್ತದೆ. ಅದೇ ರೀತಿ, ಆಧ್ಯಾತ್ಮಿಕ ಜೀವನದಲ್ಲಿ ಉಪಯುಕ್ತವಾದ ಪರಿಕಲ್ಪನೆಗಳಲ್ಲಿ ಒಂದು ಸಮನ್ವಯ ಬೇಕಾಗುತ್ತದೆ. ಸಕೀಲಗಳು ಇಂಥ ಒಂದು ಸಮನ್ವಯವನ್ನು ನೀಡಬಲ್ಲವು.

ಯಾವ ಸ್ಥಲದ ಅಂಗನು ಯಾವ ಸ್ಥಲದ ಲಿಂಗವನ್ನು ಪೂಜಿಸಬೇಕು, ಆ ಲಿಂಗ ಯಾವ ಚಕ್ರದಲ್ಲಿದೆ, ಯಾವ ಚಕ್ರದಲ್ಲಿ ಯಾವ ಭೂತ (ತತ್ವ) ಪ್ರಾಧಾನ್ಯತೆ ಪಡೆದಿದೆ; ಅದು ಯಾವ ಶಕ್ತಿಯ ರೂಪ, ಅದರ ಅಧಿದೇವತೆ ಯಾರು; ಸಾಧಕನು ಯಾವ ರೀತಿಯಲ್ಲಿ ಪೂಜೆ ಸಲ್ಲಿಸಿ (ಯಾವ ರೀತಿಯ ಪೂಜಾರಿಯಾಗಿ), ಪರಶಿವನನ್ನು ತೃಪ್ತಿಪಡಿಸಬೇಕು ಎಂಬ ಪ್ರಶ್ನೆಗೆ ಸಕೀಲ ಸಿದ್ಧಾಂತ ಉತ್ತರ ಕೊಡುತ್ತದೆ.

ವಚನಕಾರರು ಷಡ್ವಿಧ ಸಕೀಲ, ಅಷ್ಟವಿಧ ಸಕೀಲ, ಹನ್ನೆರಡು ವಿಧದ ಸಕೀಲ ಇತ್ಯಾದಿಯಾಗಿ ವಿವಿಧ ರೀತಿಯ ಸಕೀಲಗಳ ಗುಂಪನ್ನು ಕುರಿತು ವಿವರಿಸಿದ್ದಾರೆ. ಪ್ರಸ್ತುತ ನಾವು ೨೪ ಸಕೀಲಗಳ ಸಿದ್ಧಾಂತದ ವಿವರಗಳನ್ನು ಗಮನಿಸೋಣ :

ಮೊದಲನೆ ಸ್ಥಲ : ಭಕ್ತಿ ಸ್ಥಲ, ಶ್ರದ್ಧಾಭಕ್ತಿ; ಆಧಾರ ಚಕ್ರ, ಅದರಲ್ಲಿ ಆಚಾರಲಿಂಗ; ಪೃಥ್ವಿತತ್ವ, ಅದರ ಮುಖ್ಯಗುಣ ಗಂಧ; ಗಂಧವೇ ಪದಾರ್ಥ, ಸುಗಂಧವೆಂಬ ಪ್ರಸಾದ; ಸ್ಥೂಲತನು, ಸುಚಿತ್ತವೆಂಬ ಹಸ್ತ; ಘ್ರಾಣಮುಖ; ಬ್ರಹ್ಮಪೂಜಾರಿ, ಬ್ರಹ್ಮ ಅಧಿದೇವತೆ, ತಾರಾಕಾಕೃತಿ, ನಕಾರ ಪ್ರಣಮ; ವೇಣುನಾದ; ಪೀತವರ್ಣ; ಸತ್ ಎಂಬ ಲಕ್ಷಣ, ಕರ್ಮವೆಂಬ ಸಾದಾಖ್ಯ, ಪರ ವೆಂಬ ಸಂಜ್ಞೆ, ಪೂರ್ವ ದಿಕ್ಕು, ಋಗ್ವೇದ. ಜೀವಾತ್ಮ, ಕ್ರಿಯಾಶಕ್ತಿ, ನಿವೃತ್ತಿಕಲೆ.

ಹೀಗೆಂದರೇನು ಎಂಬುದನ್ನು ತಿಳಿದುಕೊಳ್ಳಬೇಕಾದರೆ ನಾವು ಇವುಗಳನ್ನು ಹೊಂದಿಸಿ, ಅವುಗಳಲ್ಲಿರುವ ಸಂಬಂಧವನ್ನು ಕಾಣಬೇಕಾಗುತ್ತದೆ.

ಭಕ್ತಸ್ಥಲದಲ್ಲಿರುವ ಸಾಧಕನ ಸ್ಥೂಲ ತನುವಿನ ಪ್ರತಿ ಅಂಗವು ಪಂಚಭೂತಗಳಿಂದ ಮಾಡಲ್ಪಟ್ಟಿದ್ದರೂ, ಅವನ ಆಧಾರ ಚಕ್ರಕ್ಕೆ ಪೃಥ್ವೀ ತತ್ವವೇ ಪ್ರಧಾನ; ಗಂಧವೇ ಪ್ರಧಾನ ಗುಣವುಳ್ಳ ಪೃಥ್ವೀ ತತ್ವವು ಕ್ರಿಯಾಶಕ್ತಿಯ ಮತ್ತೊಂದು ರೂಪವಾಗಿದ್ದು, ಅದಕ್ಕೆ ಬ್ರಹ್ಮನೇ ಅಧಿದೇವತೆ; ಆಧಾರ ಚಕ್ರದ ಮಧ್ಯದಲ್ಲಿ ಆಚಾರಲಿಂಗವಿದೆ. ಪೃಥ್ವಿಗೆ ಗಂಧವೇ ಪ್ರಧಾನಗುಣವಾದುದರಿಂದ ಭಕ್ತನು ಅದನ್ನು ಪರಶಿವನಿಗೆ ಸಮರ್ಪಿಸಿ, ಅದನ್ನು ಪ್ರಸಾದವನ್ನಾಗಿ ಮಾಡಿಕೊಂಡು, ಅದನ್ನು ಸೇವಿಸಿ ತಾನು ಶುದ್ಧನಾಗಿ ಪರಶಿವನ ಅನುಗ್ರಹಕ್ಕೆ ಪಾತ್ರನಾಗಿ ಅನುಭಾವವನ್ನು ಪಡೆದು, ಲಿಂಗಾಂಗ ಸಾಮರಸ್ಯವೆಂಬ ಧ್ಯೇಯವನ್ನು ಸಿದ್ಧಿಸಿಕೊಳ್ಳಬೇಕು. ಆದುದರಿಂದ, ಅವನು ಗಂಧವನ್ನು ಬ್ರಹ್ಮನಿಗೆ ಅಂದರೆ, ಪರಶಿವನ ಕರ್ಮಸಾದಾಖ್ಯದಲ್ಲಿರುವ ಘ್ರಾಣವೆಂಬ ಬಾಯಿಗೆ, ತನ್ನ ಸುಚಿತ್ತವೆಂಬ ಹಸ್ತದಿಂದ ಅರ್ಪಿಸಿ, ಸುಗಂಧವೆಂಬ ಪ್ರಸಾದವನ್ನಾಗಿ ಮಾಡಿಕೊಳ್ಳುತ್ತಾನೆ. ಪರಶಿವನನ್ನು ಹೀಗೆ ಪೂಜಿಸುವ ಭಕ್ತನು ಬ್ರಹ್ಮಪೂಜಾರಿಯೆನಿಸಿಕೊಳ್ಳುತ್ತಾನೆ. ಇದು ಸ್ಥೂಲ ಕೈಯನ್ನು ಉಪಯೋಗಿಸಿ, ಸ್ಥೂಲವಸ್ತುಗಳನ್ನು ಅರ್ಪಿಸಿ, ಸ್ಥೂಲ ಪ್ರಸಾದಗಳನ್ನು ಸ್ವೀಕರಿಸುವ ಪೂಜೆಯಲ್ಲ ಎಂಬುದನ್ನು ನಾವು ಗಮನದಲ್ಲಿಡಬೇಕು.

ಇಂಥ ಸೂಕ್ಷ್ಮ ಪೂಜೆಯ ದೆಸೆಯಿಂದಾಗಿ, ಭಕ್ತನು ಅನುಭಾವದಲ್ಲಿ ತನ್ನ ಆಧಾರದಲ್ಲಿರುವ ಕುಂಡಲಿಯನ್ನು ಎಬ್ಬಿಸಿ, ಅಲ್ಲಿರುವ ಜೀವಾತ್ಮನನ್ನೂ, ಆಧಾರದ ಪೂರ್ವದಿಕ್ಕಿನಲ್ಲಿರುವ ಸತ್ ಎಂಬ ಲಕ್ಷಣವನ್ನೂ, ಪರವೆಂಬ ಸಂಜ್ಞೆಯನ್ನು, ತಾರಾಕಾಕೃತಿಯನ್ನೂ, ಪೀತವರ್ಣವನ್ನೂ, ವೇಣುನಾದವನ್ನೂ ಅನುಭವಿಸುತ್ತಾನೆ. ಇದರಿಂದ ಪೃಥ್ವೀ ತತ್ವವು ಶುದ್ಧವಾಗಿ ನಿವೃತ್ತಿಕಲೆಯೆನಿಸಿಕೊಳ್ಳುತ್ತದೆ; ಹಾಗೂ ಅವನಿಗೆ ಋಗ್ವೇದ ಜ್ಞಾನವು ಲಭಿಸುತ್ತದೆ.

ಎರಡನೆ ಸ್ಥಲ : ಮಹೇಶ ಸ್ಥಲ, ನಿಷ್ಠಾಭಕ್ತಿ; ಸ್ವಾಧಿಷ್ಠಾನಚಕ್ರ, ಗುರುಲಿಂಗ, ಸೂಕ್ಷ್ಮತನು, ಸುಬುದ್ಧಿ ಹಸ್ತ, ಅಪ್ಪುವೆ ಅಂಗ; ರಸ ಪದಾರ್ಥ, ಸುರಸ ಪ್ರಸಾದ; ಜಿಹ್ವೆಮುಖ, ವಿಷ್ಣು ಪೂಜಾರಿ, ವಿಷ್ಣು ಅಧಿದೇವತೆ; ದಂಡಾಕೃತಿ, ಮಕಾರ ಪ್ರಣಮ, ಘಂಟಾನಾದ, ಶ್ವೇತವರ್ಣ, ಪಶ್ಚಿಮ ದಿಕ್ಕು, ಯಜುರ್ವೇದ; ಅಂತರಾತ್ಮ, ಜ್ಞಾನಶಕ್ತಿ, ಪ್ರತಿಷ್ಠಾಕಲೆ; ಕರ್ತೃ ಸಾದಾಖ್ಯ, ಚಿತ್ತವೆಂಬ ಲಕ್ಷಣ, ಗೂಢ ಎಂಬ ಸಂಜ್ಞೆ.

ಮಹೇಶಸ್ಥಲದಲ್ಲಿರುವವನ ಸೂಕ್ಷ್ಮತನುವು ಪಂಚಭೂತಗಳಿಂದ ಮಾಡಲ್ಪಟ್ಟಿದ್ದರೂ, ಅವನ ಸ್ವಾಧಿಷ್ಠಾನ ಚಕ್ರಕ್ಕೆ ಅಪ್‌ತತ್ವವೇ ಪ್ರಧಾನ; ರಸವೇ ಪ್ರಧಾನ ಗುಣವುಳ್ಳ ಅಪ್ ತತ್ವವು ಜ್ಞಾನಶಕ್ತಿಯ ಮತ್ತೊಂದು ರೂಪವಾಗಿದ್ದು, ಅದಕ್ಕೆ ವಿಷ್ಣುವೇ ಅಧಿದೇವತೆ; ಸ್ವಾಧಿಷ್ಠಾನ ಚಕ್ರದ ಮಧ್ಯದಲ್ಲಿ ಗುರುಲಿಂಗವಿದೆ; ಅಂದರೆ, ಪರಶಿವನ ಕರ್ತೃ ಸಾದಾಖ್ಯದಲ್ಲಿರುವ ಜಿಹ್ವೆ ಎಂಬ ಬಾಯಿಗೆ, ತನ್ನ ಸುಬುದ್ಧಿ ಎಂಬ ಸೂಕ್ಷ್ಮ ಹಸ್ತದಿಂದ ರಸವೆಂಬ ಪದಾರ್ಥವನ್ನು ಅರ್ಪಿಸಿ, ಸುರಸವೆಂಬ ಪ್ರಸಾದವನ್ನು ಪಡೆಯುತ್ತಾನೆ. ಪರಶಿವನನ್ನು ಹೀಗೆ ಪೂಜಿಸುವ ಭಕ್ತನು ವಿಷ್ಣುಪೂಜಾರಿ ಎನಿಸಿಕೊಳ್ಳುತ್ತಾನೆ.

ಸೂಕ್ಷ್ಮ ಹಸ್ತದಿಂದ ಮಾಡುವ ಇಂಥ ಪೂಜೆಯಿಂದಾಗಿಯೂ ಸುರಸ ಎಂಬ ಪ್ರಸಾದವನ್ನು ಸೇವಿಸಿದುದರಿಂದಾಗಿಯೂ ಮಹೇಶನು ಸ್ವಾಧಿಷ್ಠಾನ ಚಕ್ರದಲ್ಲಿರುವ ಗುರುಲಿಂಗವನ್ನು ಧ್ಯಾನಿಸಿ, ಅಲ್ಲಿರುವ ತಾನು ಅಂತರಾತ್ಮವೆಂದು ತಿಳಿದು, ಸ್ವಾಧಿಷ್ಠಾನದ ಪಶ್ಚಿಮ ದಿಕ್ಕಿನಲ್ಲಿರುವ ಚಿತ್ತೆಂಬ ಲಕ್ಷಣವನ್ನೂ, ಗೂಢವೆಂಬ ಚಿಹ್ನೆಯನ್ನೂ, ದಂಡಾಕೃತಿಯನ್ನೂ, ಶ್ವೇತವರ್ಣವನ್ನೂ, ಘಂಟಾನಾದವನ್ನೂ ಅನುಭವಿಸಿ ಆನಂದಿಸುತ್ತಾನೆ. ಇದರಿಂದಾಗಿ ಸ್ವಾಧಿಷ್ಠಾನದ ಅಪ್ ತತ್ವವು ಶುದ್ಧವಾಗಿ ಮುಂದೆ ಅದು ಪ್ರತಿಷ್ಠಾ ಕಲೆಯೆನಿಸಿಕೊಳ್ಳುತ್ತದೆ. ಅಂಥ ಭಕ್ತನಿಗೆ ಯಜುರ್ವೇದದ ಜ್ಞಾನವುಂಟಾಗುತ್ತದೆ.

ಮೂರನೆ ಸ್ಥಲ : ಪ್ರಸಾದಿ ಸ್ಥಲ, ಕುಂಡಲಾಕೃತಿ, ಶಿಕಾರ ಪ್ರಣಮ, ಭೇರಿನಾದ, ಮಣಿಪೂರಕ ಚಕ್ರ, ಹರಿತವರ್ಣ, ಕಾರಣತನು, ನಿರಹಂಕಾರ ಹಸ್ತ, ಶಿವಲಿಂಗ, ನೇತ್ರ ಮುಖ, ಸಾವಧಾನ ಭಕ್ತಿ, ಸುರೂಪು ಪದಾರ್ಥ, ಸುರೂಪು ಪ್ರಸಾದ, ರುದ್ರ ಪೂಜಾರಿ, ರುದ್ರನಧಿ ದೇವತೆ, ಮೂರ್ತಿ ಸಾದಾಖ್ಯ, ಆನಂದವೆಂಬ ಲಕ್ಷಣ, ಶರೀರಸ್ಥವೆಂಬ ಸಂಜ್ಞೆ, ಉತ್ತರ ದಿಕ್ಕು, ಸಾಮವೇದ, ಅಗ್ನಿಯೇ ಅಂಗ, ಪರಮಾತ್ಮ, ಇಚ್ಛಾಶಕ್ತಿ, ವಿದ್ಯಾಕಲೆ.

ಪ್ರಸಾದಿ ಸ್ಥಲದಲ್ಲಿರುವವನ ಕಾರಣ ತನುವಿನಲ್ಲಿರುವ ಮಣಿಪೂರಕ ಚಕ್ರಕ್ಕೆ ಅಗ್ನಿ ತತ್ವವೇ ಪ್ರಧಾನ; ರೂಪವೇ ಪ್ರಧಾನ ಗುಣವುಳ್ಳ ಅಗ್ನಿತತ್ವವು ಇಚ್ಛಾಶಕ್ತಿಯ ಮತ್ತೊಂದು ರೂಪವಾಗಿದ್ದು ಅದಕ್ಕೆ ರುದ್ರನೇ ಅಧಿದೇವತೆ; ಮಣಿಪೂರಕ ಚಕ್ರದ ಮಧ್ಯದಲ್ಲಿ

ಶಿವಲಿಂಗವಿದೆ; ಅಗ್ನಿತತ್ವಕ್ಕೆ ರೂಪವೇ ಪ್ರಧಾನಗುಣವಾದುದರಿಂದ ಪ್ರಸಾದಿಯು ಅದನ್ನು ರುದ್ರನಿಗೆ (ಅಂದರೆ ಪರಶಿವನ ಮೂರ್ತಿ ಸಾದಾಖ್ಯದಲ್ಲಿರುವ ನೇತ್ರವೆಂಬ ಬಾಯಿಗೆ), ತನ್ನ ನಿರಹಂಕಾರವೆಂಬ ಸೂಕ್ಷ್ಮ ಹಸ್ತದಿಂದ ಅರ್ಪಿಸಿ, ಸುರೂಪು ಎಂಬ ಪ್ರಸಾದವನ್ನು ಪಡೆಯುತ್ತಾನೆ; ಪರಶಿವನನ್ನು ಹೀಗೆ ಪೂಜಿಸುವ ಸಾಧಕನು ರುದ್ರನೆಂಬ ಪೂಜಾರಿ ಎನಿಸಿಕೊಳ್ಳುತ್ತಾನೆ.

ಸೂಕ್ಷ್ಮ ಹಸ್ತದಿಂದ ಮಾಡುವ ಪೂಜೆ ಮತ್ತು ಸುರೂಪು ಪ್ರಸಾದಿಗಳಿಂದಾಗಿ, ಪ್ರಸಾದಿಯು ಮಣಿಪೂರಕ ಚಕ್ರದಲ್ಲಿರುವ ಶಿವಲಿಂಗವನ್ನು ಧ್ಯಾನಿಸಿ, ಅಲ್ಲಿರುವ ತಾನು ಪರಮಾತ್ಮನೆಂದು ತಿಳಿದು, ಮಣಿಪೂರಕ ಚಕ್ರದ ಉತ್ತರ ದಿಕ್ಕಿನಲ್ಲಿರುವ ಆನಂದವೆಂಬ ಲಕ್ಷಣವನ್ನೂ, ಶರೀರಸ್ಥವೆಂಬ ಸಂಜ್ಞೆಯನ್ನೂ, ಕುಂಡಲಾಕೃತಿಯನ್ನೂ, ಹರಿತವರ್ಣವನ್ನೂ ಭೇರಿನಾದವನ್ನೂ, ಅನುಭವಿಸಿ ಆನಂದಿಸುತ್ತಾನೆ. ಇದರಿಂದಾಗಿ ಮಣಿಪೂರಕ ಚಕ್ರವನ್ನು ಸುತ್ತುವರಿದ ಇಚ್ಛಾಶಕ್ತಿಯು ಶುದ್ಧವಾಗಿ ಮುಂದೆ ಅದು ವಿದ್ಯಾಕಲೆ ಎನಿಸಿಕೊಳ್ಳುತ್ತದೆ. ಅಂಥ ಸಾಧಕನಿಗೆ ಸಾಮವೇದ ಸಿದ್ಧಿಸುತ್ತದೆ.

ನಾಲ್ಕನೆಯ ಸ್ಥಲ : ಪ್ರಾಣಲಿಂಗಿಸ್ಥಲ, ಅರ್ಧಚಂದ್ರಾಕೃತಿ, ವಕಾರಪ್ರಣವ, ಮೇಘನಾದ, ಅನಾಹತಚಕ್ರ, ಮಾಂಜಿಷ್ಠವರ್ಣ, ನಿರ್ಮಲತನು, ಸುಮನಹಸ್ತ, ಜಂಗಮಲಿಂಗ, ತ್ವಕ್ ಎಂಬ ಮುಖ, ಅನುಭಾವ ಭಕ್ತಿ, ಸುಸ್ಪರ್ಶನಪದಾರ್ಥ, ಸುಸ್ಪರ್ಶನ ಪ್ರಸಾದ; ಈಶ್ವರ ಪೂಜಾರಿ, ಈಶ್ವರನಧಿದೇವತೆ; ಅಮೂರ್ತಿಸಾದಾಖ್ಯ, ನಿತ್ಯವೆಂಬ ಲಕ್ಷಣ, ಲಿಂಗಕ್ಷೇತ್ರ ಎಂಬ ಸಂಜ್ಞೆ, ದಕ್ಷಿಣ ದಿಕ್ಕು, ಅಥರ್ವವೇದ, ವಾಯುವೇ ಅಂಗ, ನಿರ್ಮಲಾತ್ಮ, ಆದಿಶಕ್ತಿ, ಶಾಂತಿಕಲೆ.

ಪ್ರಾಣಲಿಂಗಿ ಸ್ಥಲದಲ್ಲಿರುವವನ ಅನಾಹತಚಕ್ರವನ್ನು ವಾಯುತತ್ವವು ಸುತ್ತುವರೆದಿದೆ. ಸ್ಪರ್ಶವೇ ಪ್ರಧಾನಗುಣವುಳ್ಳ ವಾಯುತತ್ವವು ಆದಿಶಕ್ತಿಯ ಮತ್ತೊಂದು ರೂಪವಾಗಿದ್ದು ಅದಕ್ಕೆ ಈಶ್ವರನೇ ಅಧಿದೇವತೆ; ಈ ಚಕ್ರದ ಮಧ್ಯದಲ್ಲಿ ಜಂಗಮಲಿಂಗವಿದೆ; ವಾಯುವಿಗೆ ಸ್ಪರ್ಶವೇ ಪ್ರಧಾನ ಗುಣವಾದುದರಿಂದ ಪ್ರಾಣಲಿಂಗಿಯು ಅದನ್ನು ಈಶ್ವರನಿಗೆ ಅಂದರೆ, ಪರಶಿವನ ಅಮೂರ್ತಿ ಸಾದಾಖ್ಯದಲ್ಲಿರುವ ತ್ವಕ್ ಎಂಬ ಬಾಯಿಗೆ, ತನ್ನ ನಿರ್ಮಲ ತನುವಿನ ಸುಮನ ಎಂಬ ಸೂಕ್ಷ್ಮ ಹಸ್ತದಿಂದ ಅರ್ಪಿಸಿ, ಸುಸ್ಪರ್ಶವೆಂಬ ಪ್ರಸಾದವನ್ನು ಭೋಗಿಸುತ್ತಾನೆ; ಪರಶಿವನನ್ನು ಹೀಗೆ ಪೂಜಿಸುವ ಸಾಧಕನನ್ನು ಈಶ್ವರಪೂಜಾರಿಯೆಂದು ಕರೆಯಲಾಗುತ್ತದೆ.

ಈ ಪೂಜೆಯನಂತರ, ಪ್ರಾಣಲಿಂಗಿಯು ಅನಾಹತ ಚಕ್ರದಲ್ಲಿರುವ ಜಂಗಮಲಿಂಗವನ್ನು ಧ್ಯಾನಿಸಿ, ಅಲ್ಲಿರುವ ತಾನು ನಿರ್ಮಲಾತ್ಮನೆಂದು ಅರಿತು, ಆ ಚಕ್ರದ ದಕ್ಷಿಣ ದಿಕ್ಕಿನಲ್ಲಿರುವ ನಿತ್ಯವೆಂಬ ಲಕ್ಷಣವನ್ನೂ, ಲಿಂಗಕ್ಷೇತ್ರವೆಂಬ ಸಂಜ್ಞೆಯನ್ನೂ, ಅರ್ಧಚಂದ್ರಾಕೃತಿಯನ್ನೂ ಮಾಂಜಿಷ್ಠ ವರ್ಣವನ್ನೂ,

ಮೇಘನಾದವನ್ನೂ ಅನುಭವಿಸಿ, ಆನಂದಿಸುತ್ತಾನೆ. ಇದರಿಂದಾಗಿ, ಅನಾಹತ ಚಕ್ರವನ್ನು ಸುತ್ತುವರಿದ ಆದಿಶಕ್ತಿಯು ಶುದ್ಧವಾಗಿ, ಮುಂದೆ ಅದು ಶಾಂತಿಕಲೆ ಎನಿಸಿಕೊಳ್ಳುತ್ತದೆ; ಅಂಥ ಸಾಧಕನಿಗೆ ಅಥರ್ವವೇದ ಸಿದ್ಧಿಸುತ್ತದೆ.

ಐದನೆ ಸ್ಥಲ: ಶರಣಸ್ಥಲ, ದರ್ಪಣಾಕೃತಿ, ಯಕಾರಪ್ರಣಮ, ಪ್ರಣವನಾದ, ವಿಶುದ್ಧಿಚಕ್ರ, ಕಪೋತ ವರ್ಣ, ಆನಂದ ತನು, ಸುಜ್ಞಾನ ಹಸ್ತ, ಪ್ರಸಾದಲಿಂಗ, ಶ್ರೋತ್ರವೆಂಬ ಮುಖ, ಆನಂದ ಭಕ್ತಿ, ಸುಶಬ್ದ ಪದಾರ್ಥ, ಸುಶಬ್ದ ಪ್ರಸಾದ, ಸದಾಶಿವ ಪೂಜಾರಿ, ಸದಾಶಿವನೆಂಬ ಅಧಿದೇವತೆ, ಶಿವಸಾದಾಖ್ಯ, ಪರಿಪೂಣವೆಂಬ ಲಕ್ಷಣ, ಅನಾದಿ ಎಂಬ ಸಂಜ್ಞೆ, ಊರ್ಧ್ವದಿಕ್ಕು, ಅಜಪವೇದ, ಆಕಾರವೆಂಬ ಅಂಗ, ಶುದ್ಧಾತ್ಮ, ಪರಾಶಕ್ತಿ, ಶಾಂತ್ಯತೀತ ಕಲೆ.

ಶರಣಸ್ಥಲದಲ್ಲಿರುವವನ ವಿಶುದ್ಧಿ ಚಕ್ರವನ್ನು ಆಕಾಶ ತತ್ವವು ಸುತ್ತುವರೆದಿದೆ. ಶಬ್ದವನ್ನು ಪ್ರಧಾನ ಗುಣವಾಗಿ ಉಳ್ಳ ಆಕಾಶ ತತ್ವವು ಪರಾಶಕ್ತಿಯ ಮತ್ತೊಂದು ರೂಪು; ಅದಕ್ಕೆ ಸದಾಶಿವನೇ ಅಧಿದೇವತೆ; ಈ ಚಕ್ರದ ಮಧ್ಯದಲ್ಲಿ ಪ್ರಸಾದಲಿಂಗವಿದೆ; ಶರಣನು ಆಕಾಶದ ಪ್ರಧಾನಗುಣವನ್ನು ಸದಾಶಿವನಿಗೆ ಅಂದರೆ, ಪರಶಿವನ ಶಿವನ ಸಾದಾಖ್ಯದಲ್ಲಿರುವ ಶ್ರೋತ್ರವೆಂಬ ಬಾಯಿಗೆ ತನ್ನ ಆನಂದ ತನುವಿನ ಸುಜ್ಞಾನ ಹಸ್ತದಿಂದ, ಸುಶಬ್ದವೆಂಬ ಪದಾರ್ಥವನ್ನು ಅರ್ಪಿಸಿ, ಅದನ್ನು ಸುಶಬ್ದವೆಂಬ ಪ್ರಸಾದವನ್ನಾಗಿಸಿಕೊಂಡು ಭೋಗಿಸುತ್ತಾನೆ. ಪರಶಿವನನ್ನು ಹೀಗೆ ಸೂಕ್ಷ್ಮ ರೀತಿಯಲ್ಲಿ ಪೂಜಿಸುವ ಸಾಧಕನನ್ನು ಸದಾಶಿವಪೂಜಾರಿಯೆಂದು ಕರೆಯಲಾಗುತ್ತದೆ.

ಈ ಸೂಕ್ಷ್ಮ ಪೂಜೆಯ ನಂತರ ಶರಣನು ವಿಶುದ್ಧಿ ಚಕ್ರದಲ್ಲಿರುವ ಪ್ರಸಾದಲಿಂಗವನ್ನು ಧ್ಯಾನಿಸಿ, ಅಲ್ಲಿರುವ ತಾನು ಶುದ್ಧಾತ್ಮನೆಂದು ಅರಿತು, ಆ ಚಕ್ರದ ಊರ್ಧ್ವ ದಿಕ್ಕಿನಲ್ಲಿರುವ ಪರಿಪೂರ್ಣವೆಂಬ ಲಕ್ಷಣವನ್ನೂ, ಅನಾದಿವತ್ ಎಂಬ ಸಂಜ್ಞೆಯನ್ನೂ, ದರ್ಪಣಾಕೃತಿಯನ್ನೂ, ಕಪೋತ ವರ್ಣವನ್ನೂ, ಪ್ರಣವನಾದವನ್ನೂ, ಅನುಭವಿಸಿ ಆನಂದಿಸುತ್ತಾನೆ. ಇದರಿಂದಾಗಿ ವಿಶುದ್ಧಿ ಚಕ್ರವನ್ನು ಸುತ್ತುವರಿದ ಪರಾಶಕ್ತಿಯು (ಆಕಾಶ ತತ್ವವು) ಶುದ್ಧವಾಗಿ, ಮುಂದೆ ಅದು ಶಾಂತ್ಯತೀತ ಕಲೆ ಎನಿಸಿಕೊಳ್ಳುತ್ತದೆ; ಅಂಥ ಸಾಧಕನಿಗೆ ಅಜಪವೇದ ಸಿದ್ಧಿಸುತ್ತದೆ.

ಆರನೆಯ ಸ್ಥಲ : ಐಕ್ಯ ಸ್ಥಲ, ಜ್ಯೋತಿರಾಕೃತಿ, ಓಂಕಾರ ಪ್ರಣಮ, ಸಿಂಹನಾದ, ಆಜ್ಞಾಚಕ್ರ, ಮಾಣಿಕ್ಯವರ್ಣ; ಶುದ್ಧತನು, ಸದ್ಭಾವ ಹಸ್ತ, ಮಹಾಲಿಂಗ, ಹೃದಯವೆಂಬ ಮುಖ, ಸಮರಸ ಭಕ್ತಿ. ಸುತೃಪ್ತಿ ಎಂಬ ಪದಾರ್ಥ, ಸುತೃಪ್ತಿ ಎಂಬ ಪ್ರಸಾದ, ಮಹಾದೇವ ಪೂಜಾರಿ, ಮಹಾದೇವ ಎಂಬ ಅಧಿದೇವತೆ, ಮಹಾಸಾದಾಖ್ಯ ಅಖಂಡವೆಂಬ ಲಕ್ಷಣ. ಮಹವೆಂಬ ಸಂಜ್ಞೆ, ಪಾತಾಳ ದಿಕ್ಕು, ಗಾಯತ್ರೀ ವೇದ, ಆತ್ಮನೆ ಲಿಂಗ, ಜ್ಞಾನಾತ್ಮ. ಚಿಚ್ಛಕ್ತಿ, ಶಾಂತ್ಯತೀತೋತ್ತರ ಕಲೆ.

ಐಕ್ಯಸ್ಥಲದಲ್ಲಿರುವ ಶುದ್ಧ ತನುವಿನಲ್ಲಿ ಆಜ್ಞಾ ಚಕ್ರವಿದ್ದು, ಅದಕ್ಕೆ ಆತ್ಮ ವಿಶ್ವಾಸವೇ ಪ್ರಧಾನ; ಆತ್ಮತತ್ವವು ಚಿತ್ ಶಕ್ತಿಯ ಮತ್ತೊಂದು ರೂಪ. ಅದಕ್ಕೆ ಮಹಾದೇವನೆ ಅಧಿದೇವತೆ; ಈ ಚಕ್ರದ ಮಧ್ಯದಲ್ಲಿ ಮಹಾಲಿಂಗವಿದೆ; ಐಕ್ಯನು ಆತ್ಮದ ಪ್ರಧಾನಗುಣವನ್ನು ಮಹಾದೇವನಿಗೆ ಅಂದರೆ ಪರಶಿವನ ಮಹಾಸಾದಾಖ್ಯದಲ್ಲಿರುವ ಹೃದಯುವೆಂಬ ಬಾಯಿಗೆ ಸದ್ಭಾವವೆಂಬ ಹಸ್ತದಿಂದ ಸುತೃಪ್ತಿಯೆಂಬ ಪದಾರ್ಥವನ್ನರ್ಪಿಸಿ, ಸುತೃಪ್ತಿಯೆಂಬ ಪ್ರಸಾದವನ್ನು ಪಡೆದು ಭೋಗಿಸುತ್ತಾನೆ. ಪರಶಿವನನ್ನು ಹೀಗೆ ಸೂಕ್ಷ್ಮ ರೀತಿಯಲ್ಲಿ ಪೂಜೆ ಮಾಡುವ ಸಾಧಕನಿಗೆ ಮಹಾದೇವ ಪೂಜಾರಿ ಎಂದು ಹೆಸರು.

ಈ ಸೂಕ್ಷ್ಮ ಪೂಜೆಯ ನಂತರ ಐಕ್ಯನು ಆಜ್ಞಾ ಚಕ್ರದಲ್ಲಿರುವ ಮಹಾಲಿಂಗವನ್ನು ಧ್ಯಾನಿಸಿ, ಅಲ್ಲಿರುವ ತಾನು ಜ್ಞಾನಾತ್ಮನೆಂಬುದನ್ನು ಅರಿತು, ಆ ಚಕ್ರದ ಪಾತಾಳ ದಿಕ್ಕಿನಲ್ಲಿರುವ ಅಖಂಡವೆಂಬ ಲಕ್ಷಣವನ್ನೂ, ಮಹ ಎಂಬ ಸಂಜ್ಞೆಯನ್ನೂ, ಜ್ಯೋತಿರಾಕೃತಿಯನ್ನೂ, ಮಾಣಿಕ್ಯ ವರ್ಣವನ್ನೂ ಸಿಂಹನಾದವನ್ನೂ, ಅನುಭವಿಸಿ ಆನಂದಿಸುತ್ತಾನೆ. ಇದರಿಂದಾಗಿ, ಆಜ್ಞಾ ಚಕ್ರವನ್ನು ಸುತ್ತುವರಿದ ಚಿತ್‌ಶಕ್ತಿಯು (ಆತ್ಮ ತತ್ವವು) ಶುದ್ಧವಾಗಿ, ಮುಂದೆ ಅದು ಶಾಂತ್ಯತೀತೋತ್ತರ ಕಲೆ ಎನಿಸಿಕೊಳ್ಳುತ್ತದೆ.

ಬಹಳಷ್ಟು ವಚನಕಾರರು ಕೇವಲ ಆರು ಸ್ಥಲಗಳು, ಆರು ಚಕ್ರಗಳು, ಆರು ಲಿಂಗಗಳು, ಆರು ಶಕ್ತಿಗಳು, ಇತ್ಯಾದಿಗಳನ್ನು ಹೇಳಿದರೆ, ಕೆಲವರು ಇವುಗಳ ಸಂಖ್ಯೆಯನ್ನು ಒಂಬತ್ತಕ್ಕೇರಿಸುತ್ತಾರೆ.

ಏಳನೆಯ ಸ್ಥಲ : ನಿಃಕಳಂಕ ಸ್ಥಲ, ನಿಃಕಲಾಕೃತಿ, ಬಕಾರ ಪ್ರಣಮ, ಭ್ರಮರನಾದ, ಬ್ರಹ್ಮಚಕ್ರ, ಜ್ಯೋತಿರ್ವರ್ಣ ಚಿದ್ರೂಪತನು, ಸ್ವತಂತ್ರ ಹಸ್ತ, ನಿಃಕಳಂಕ ಲಿಂಗ, ಬ್ರಹ್ಮರಂಧ್ರಮುಖ, ಸದ್ಭಾವ ಭಕ್ತಿ, ಪರಮಾನಂದ ಪದಾರ್ಥ, ಪರಮಾನಂದ ಪ್ರಸಾದ, ಶ್ರೀಗುರು ಪೂಜಾರಿ; ಪರಮೇಶ್ವರನೆಂಬ ಅಧಿದೇವತೆ, ಅಗಮ್ಯ ಸಾದಾಖ್ಯ, ಅನಾಮಯವೆಂಬ ಲಕ್ಷಣ, ಅಪ್ರಮಾಣವೆಂಬ ಸಂಜ್ಞೆ, ಹೃತ್ಕಮಲವೆಂಬ ದಿಕ್ಕು, ಧನುರ್ವೇದ, ಚಿತ್ಸೂರ್ಯನೆ ಅಂಗ, ಮಹವೆಂಬ ಆತ್ಮ, ನಿರಾಲಂಬ ಶಕ್ತಿ, ನಿರ್ವಾಂಚಕ ಕಲೆ.

ನಿಃಕಲಂಕ ಸ್ಥಲದಲ್ಲಿರುವವನ ಚಿದ್ರೂಪ ತನುವಿನಲ್ಲಿ ಬ್ರಹ್ಮಚಕ್ರವಿದ್ದು, ಅದಕ್ಕೆ ಚಿತ್‌ಸೂರ್ಯನೇ ಅಂಗ; ಸೂರ್ಯತತ್ವವು ನಿರಾಲಂಬ ಶಕ್ತಿಯ ಮತ್ತೊಂದು ರೂಪ; ಅದಕ್ಕೆ ಶ್ರೀಗುರು ಅಧಿದೇವತೆ; ಈ ಚಕ್ರದಲ್ಲಿ ನಿಃಕಳಂಕ ಲಿಂಗವಿದೆ; ನಿಷ್ಕಳಂಕ ಸಾಧಕನು, ಶ್ರೀಗುರು (ಅಂದರೆ ಅಗಮ್ಯ ಸಾದಾಖ್ಯದ ಬ್ರಹ್ಮರಂಧ್ರ ಎಂಬ ಬಾಯಿಗೆ), ಪರಮಾನಂದವೆಂಬ ಪದಾರ್ಥವನ್ನು ಸ್ವತಂತ್ರ ಹಸ್ತದಿಂದ ಅರ್ಪಿಸಿ, ಪರಮಾನಂದವೆಂಬ ಪ್ರಸಾದವನ್ನು ಪಡೆದು ಭೋಗಿಸುತ್ತಾನೆ. ಪರಶಿವನನ್ನು ಹೀಗೆ ಪೂಜಿಸುವವನಿಗೆ ಶ್ರೀಗುರು (ಪರಮೇಶ್ವರ) ಪೂಜಾರಿ ಎಂದು ಹೆಸರು.

ಈ ಸೂಕ್ಷ್ಮ ಪೂಜೆಯ ನಂತರ ನಿಃಕಲ ಸಾಧಕನು ಬ್ರಹ್ಮಚಕ್ರದಲ್ಲಿರುವ ನಿಃಕಲಲಿಂಗವನ್ನು ಧ್ಯಾನಿಸಿ, ಅಲ್ಲಿರುವ ತಾನು ಮಹವೆಂಬ ಆತ್ಮವೆಂದು ಅರಿತು, ಆ ಚಕ್ರದ ಹೃತ್ಕಮಲ ದಿಕ್ಕಿನಲ್ಲಿರುವ ಅನಾಮಯವೆಂಬ ಲಕ್ಷಣವನ್ನೂ, ಅಪ್ರಮಾಣವೆಂಬ ಸಂಜ್ಞೆಯನ್ನೂ, ಜ್ಯೋತಿರ್ವರ್ಣವನ್ನೂ, ಭ್ರಮರನಾದವನ್ನೂ ಅನುಭವಿಸಿ, ಆನಂದಿಸುತ್ತಾನೆ. ಇದರಿಂದಾಗಿ, ಬ್ರಹ್ಮಚಕ್ರವನ್ನು ಸುತ್ತುವರಿದ ನಿರಾಲಂಬ ಶಕ್ತಿಯು ಶುದ್ಧವಾಗಿ ನಿರ್ವಂಚಕ ಕಲೆಯೋನಿಸಿಕೊಳ್ಳುತ್ತವೆ. ಆ ಸಾಧಕನಿಗೆ ಧನುರ್ವೇದ ಸಿದ್ಧಿಸುತ್ತದೆ.

ಎಂಟನೆಯ ಸ್ಥಲ : ನಿರಾಲಂಬ (ನಿಶ್ಶೂನ್ಯಾಸ್ಥಲ), ನಿಶ್ಶೂನ್ಯಾಕೃತಿ, ಕ್ಷಕಾರ ಪ್ರಣಮ, ದಿವ್ಯನಾದ, ಶಿಖಾಚಕ್ರ, ಮಹಾಜ್ಯೋತಿರ್ವರ್ಣ, ಚಿನ್ಮಯ ತನು, ನಿರಾಳ ಹಸ್ತ, ಶೂನ್ಯಲಿಂಗ, ಉನ್ಮನಿ ಮುಖ, ನಿರಹಂಕಾರ ಭಕ್ತಿ, ಪರಿಪೂರ್ಣ ಪದಾರ್ಥ, ಪರಿಪೂರ್ಣ ಪ್ರಸಾದ, ಪರಶಿವ ಪೂಜಾರಿ, ಪರಶಿವನಧಿದೇವತೆ, ಅವಿರಳಸಾದಾಖ್ಯ, ಅಗಮ್ಯವೆಂಬ ಲಕ್ಷಣ, ನಿರ್ಮಾಯವೆಂಬ ಸಂಜ್ಞೆ, ಘೋಷವೆಂಬ ದಿಕ್ಕು, ಮನೋರ್ಲಯ ವೇದ, ಚಿತ್‌ಚಂದ್ರನೆ ಅಂಗ, ದಿವ್ಯಾತ್ಮ, ನಿಭ್ರಾಂತ ಶಕ್ತಿ, ಅನಂತ ಕಲೆ.

ನಿರಾಲಂಬ ಸ್ಥಲದಲ್ಲಿರುವವನ ಚಿನ್ಮಯತನುವಿನಲ್ಲಿ ಶಿಖಾಚಕ್ರವಿದ್ದು, ಅದಕ್ಕೆ ಚಂದ್ರ ತತ್ವವೇ ಅಂಗ; ಚಂದ್ರತತ್ವವು ನಿಭ್ರಾಂತ ಶಕ್ತಿಯ ಮತ್ತೊಂದು ರೂಪ;ಅದಕ್ಕೆ ಪರಶಿವನೇ ಅಧಿದೇವತೆ; ಈ ಚಕ್ರದಲ್ಲಿ ಶೂನ್ಯಲಿಂಗವಿದೆ; ನಿರಾಲಂಬ ಸ್ಥಲದ ಸಾಧಕನು ಪರಶಿವನಿಗೆ (ಅಂದರೆ, ಅವಿರಳ ಸಾದಾಖ್ಯದ ಉನ್ಮನಿ ಎಂಬ ಬಾಯಿಗೆ), ಪರಿಪೂರ್ಣ ಪದಾರ್ಥವನ್ನು, ನಿರಾಳ ಹಸ್ತದಿಂದ ಅರ್ಪಿಸಿ, ಪರಿಪೂರ್ಣ ಪ್ರಸಾದವನ್ನು ಪಡೆದು ಭೋಗಿಸುತ್ತಾನೆ. ಪರಶಿವನ್ನು ಹೀಗೆ ಪೂಜಿಸುವವನಿಗೆ ಪರಶಿವಪೂಜಾರಿ ಎಂದು ಹೆಸರು.

ಈ ಸೂಕ್ಷ್ಮ ಪೂಜೆಯ ನಂತರ ನಿರಾಲಂಬ ಸ್ಥಲದ ಸಾಧಕನು ಶಿಖಾಚಕ್ರದಲ್ಲಿರುವ ಶೂನ್ಯಲಿಂಗವನ್ನು ಧ್ಯಾನಿಸಿ, ಅಲ್ಲಿರುವ ತಾನು ದಿವ್ಯಾತ್ಮನೆಂದರಿತು, ಆ ಚಕ್ರದ ಘೋಷ ಎಂಬ ದಿಕ್ಕಿನಲ್ಲಿರುವ ಅಗಮ್ಯ ಲಕ್ಷಣವನ್ನೂ, ನಿರ್ಮಾಯೆಯೆಂಬ ಸಂಜ್ಞೆಯನ್ನೂ, ಮಹಾಜ್ಯೋತಿರ್ವರ್ಣವನ್ನೂ, ದಿವ್ಯನಾದವನ್ನೂ, ಅನುಭವಿಸಿ ಆನಂದಿಸುತ್ತಾನೆ. ಇದರಿಂದಾಗಿ ಶಿಖಾ ಚಕ್ರದ ನಿಭ್ರಾಂತ ಶಕ್ತಿಯು ಶುದ್ಧವಾಗಿ, ಅನಂತ ಕಲೆಯೆನಿಸಿಕೊಳ್ಳುತ್ತದೆ. ಈ ಸ್ಥಲದ ಸಾಧಕನಿಗೆ ಮನೋರ್ಲಯವೇದ ಸಿದ್ಧಿಸುತ್ತದೆ.

ಒಂಬತ್ತನೆ ಸ್ಥಲ: ನಿರಾತಂಕ ಸ್ಥಲ; ನಿರಂಜನಾಕೃತಿ, ಹಕಾರ ಪ್ರಣಮ, ಮಹಾನಾದ, ಪಶ್ಚಿಮ ಚಕ್ರ, ಅಖಂಡಜ್ಯೋತಿರ್ವರ್ಣ, ನಿರ್ಮುಕ್ತಿತನು, ನಿರ್ಮಾಯ ಹಸ್ತ, ನಿರಂಜನಲಿಂಗ, ಪಶ್ಚಿಮ ಎಂಬ ಮುಖ, ಅಪ್ರಮಾಣ ಭಕ್ತಿ, ಅವಿರಳ ಪದಾರ್ಥ, ಅವಿರಳ ಪ್ರಸಾದ, ಪರಮೇಶ್ವರ ಪೂಜಾರಿ, ಪರಮೇಶ್ವರನಧಿದೇವತೆ; ನಿಶ್ಚಲ ಸಾದಾಖ್ಯ, ನಿರ್ವಂಚಕ ಎಂಬ ಲಕ್ಷಣ, ಅವಿರಳ ಸಂಜ್ಞೆ, ನಿರಾಳ ದಿಕ್ಕು, ಅಗಮ್ಯವೇದ, ಶಿವಯೋಗಿಯೇ ಅಂಗ, ಚಿನ್ಮಯಾತ್ಮ, ನಿರವಯ ಶಕ್ತಿ, ಅನಂತ ಕಲೆ.

ನಿರಾತಂಕ ಸ್ಥಲದಲ್ಲಿರುವವನ ನಿರ್ಮುಕ್ತಿ ತನುವಿನಲ್ಲಿ ಪಶ್ಚಿಮ ಚಕ್ರವಿದ್ದು, ಅದರಲ್ಲಿ ನಿರಂಜನ ಲಿಂಗವಿದೆ. ಈ ಸ್ಥಲದ ಸಾಧಕನು ತನ್ನ ನಿರ್ಮಾಯವೆಂಬ ಹಸ್ತದಿಂದ ಈ ಚಕ್ರದ ಅಧಿದೇವತೆಯಾದ ಪರಮೇಶ್ವರನಿಗೆ, ಅಂದರೆ ಅವನ ನಿಶ್ಚಲ ಸಾದಾಖ್ಯದ ಪಶ್ಚಿಮ ಎಂಬ ಬಾಯಿಗೆ, ಅವಿರಳ ಪದಾರ್ಥವನ್ನು ಅರ್ಪಿಸಿ, ಅವಿರಳ ಪ್ರಸಾದವನ್ನು ಪಡೆದು, ಭೋಗಿಸುತ್ತಾನೆ; ಹಾಗೂ ಆ ಚಕ್ರದಲ್ಲಿರುವ ಪರಮೇಶ್ವರನನ್ನು ಕುರಿತು ಧ್ಯಾನಿಸಿ, ಸಾಕ್ಷಾತ್ಕಾರಿಸಿಕೊಂಡಾಗ, ಅಲ್ಲಿ ನಿರ್ವಂಚಕ ಎಂಬ ಲಕ್ಷಣ, ಅವಿರಳವೆಂಬ ಸಂಜ್ಞೆ ಅಖಂಡ ಮಹಾಜ್ಯೋತಿರ್ವರ್ಣವನ್ನು ಕಾಣುತ್ತಾನೆ ಹಾಗೂ ಮಹಾನಾದ ಕೇಳಿಸುತ್ತದೆ. ಇದರಿಂದ ಅವನ ನಿರವಯಶಕ್ತಿ ಶುದ್ಧವಾಗಿ ಅನಂತ ಕಲೆಯೆನಿಸಿಕೊಳ್ಳುವುದಲ್ಲದೆ, ಸಾಧಕನಿಗೆ ಅಗಮ್ಯವೇದ ಸಿದ್ಧಿಸುತ್ತದೆ.

ಈ ಒಂಬತ್ತು ಸ್ಥಲಗಳಲ್ಲಿ ಸಾಧಕನು ತೋರಿಸುವ ಭಕ್ತಿಗೆ ಕ್ರಮವಾಗಿ; ಶ್ರದ್ಧಾಭಕ್ತಿ, ನಿಷ್ಠಾಭಕ್ತಿ, ಅವಧಾನ ಅನುಭಾವಭಕ್ತಿ, ಆನಂದಭಕ್ತಿ, ಸಮರಸಭಕ್ತಿ, ಸದ್ಭಾವಭಕ್ತಿ, ನಿರಹಂಕಾರಭಕ್ತಿ, ಅಪ್ರಮಾಣಭಕ್ತಿ ಎಂಬ ಹೆಸರಿವೆ.

ಇನ್ನೂರಾ ಹದಿನಾರು ಸಕೀಲಗಳ ಸಿದ್ಧಾಂತದಲ್ಲಿ ಕಾಣುವ ಅಂಶವೇನೆಂದರೆ, ಇದರಲ್ಲಿ ಯಾವೊಂದೂ ಸ್ಥೂಲವಲ್ಲ (ಇಂದ್ರಿಯ ಗೋಚರವಲ್ಲ); ರೂಪು, ರಸ, ಗಂಧ, ಎಂಬ ವಿಷಯಾದಿಗಳೂ ಸಹ ಸೂಕ್ಷ್ಮವೆ. ಅವುಗಳನ್ನು ಅರ್ಪಿಸುವ ಸುಬುದ್ಧಿ ಇತ್ಯಾದಿ ಹಸ್ತಗಳೂ ಸೂಕ್ಷ್ಮವೆ: ಅವುಗಳನ್ನು ಸ್ವೀಕರಿಸುವ ಲಿಂಗಗಳು, ಅಧಿದೇವತೆಗಳು, ಪೂಜಾರಿಗಳು, ಚಕ್ರಗಳು, ಶಕ್ತಿಗಳು, ಭಕ್ತಿಗಳು ಎಲ್ಲವೂ ಸೂಕ್ಷ್ಮವೆ. ಯಾವುದೇ ವ್ಯಕ್ತಿ ಕೇವಲ ರೂಪ ಒಂದನ್ನೆ (ಗಂಧವನ್ನೂ ಶಬ್ದವನ್ನೂ ಬಿಟ್ಟು) ಅರ್ಪಿಸಲು ಸಾಧ್ಯವಿಲ್ಲ. ಎಲ್ಲ ಅರ್ಪಣೆ ಮಾನಸಿಕ. ಸಾಧಕನು 'ನಾನು ಕಾಣುತ್ತಿರುವ ರೂಪನ್ನು ನಿನಗೆ ಅರ್ಪಿಸುತ್ತಿದ್ದೇನೆ' ಎಂದು ಮಾನಸಿಕವಾಗಿ ಅರ್ಪಿಸಬಹುದೇ ಹೊರತು, ಒಂದು ಹಣ್ಣನ್ನು ನೈವೇದ್ಯ ಮಾಡಿದಂತೆ ರೂಪೊಂದನ್ನೆ ಅಥವಾ ಮಾತ್ತಾವುದೇ ವಿಷಯವನ್ನು ಲಿಂಗಾರ್ಪಿತ ಮಾಡಲು ಸಾಧ್ಯವಿಲ್ಲ.

ಅಲ್ಲದೆ, 'ನಾನು ಭಕ್ತ ಸ್ಥಲದಲ್ಲಿದ್ದೇನೆ, ನಾನು ಗುರುಲಿಂಗವನ್ನು ಪೂಜಿಸಬಾರದು, ಆಚಾರ ಲಿಂಗವನ್ನಷ್ಟೇ ಪೂಜಿಸಬೇಕು' ಎಂದಾಗಲಿ, 'ನಾನು ಗಂಧವನ್ನರ್ಪಿಸಬೇಕೇ ಹೊರತು, ಶಬ್ದವನ್ನರ್ಪಿಸಬಾರದು' ಎಂದಾಗಲಿ ಯಾವ ಸಾಧಕನೂ ನಿರ್ಧರಿಸಲು ಸಾಧ್ಯವಿಲ್ಲ. ಆದರೆ, ಗಂಧಯುಕ್ತ ವಸ್ತುಗಳನ್ನು ಇಂದು, ರಸಯುಕ್ತ ವಸ್ತುವನ್ನು ನಾಳೆ, ಹೀಗೆ ಅರ್ಪಿಸಲು (ತ್ಯಾಗ ಮಾಡಲು) ಸಾಧ್ಯವಿದೆ. ಅದೇ ರೀತಿ ಚಕ್ರಗಳಲ್ಲಿರುವ ಲಿಂಗವನ್ನು ಹಂತ ಹಂತವಾಗಿ ಕುರಿತು ಧ್ಯಾನಿಸಲು ಸಾಧ್ಯವಿದೆ. ಒಂದೇ ಲಿಂಗ ಆರು ಲಿಂಗವೆಂಬ ವಿಭಜನೆ ಹೇಗೆ ಮಾನಸಿಕವೋ ಹಾಗೆಯೇ ಅರ್ಪಣೆ, ಪ್ರಸಾದ, ಶಕ್ತಿ, ಭಕ್ತಿ, ಮುಖ, ಹಸ್ತ, ಇತ್ಯಾದಿಗಳೂ ಮಾನಸಿಕವೇ. ಆದರೆ ಒಂದು ಚಕ್ರವನ್ನು

ಜಾಗ್ರತಗೊಳಿಸಿದಾಗ, ಅಲ್ಲಿರುವ ಲಿಂಗ, ಅಲ್ಲಿರುವ ಶಕ್ತಿ, ಇತ್ಯಾದಿಗಳು ಕ್ರಿಯಾಶೀಲವಾಗಿವೆ ಎಂದು ನಾವು ತರ್ಕಿಸುತ್ತೇವೆ.

**ಇಪ್ಪತ್ತೆಂಟು ಆಗಮಗಳು :** ವೀರಶೈವ ಧರ್ಮ ಮತ್ತು ತತ್ವಶಾಸ್ತ್ರದ ಅನೇಕ ಸಿದ್ಧಾಂತಗಳು ಆಗಮಗಳಲ್ಲಿ ಉಕ್ತವಾಗಿದೆ. ಆದರೆ ಈ ಆಗಮಗಳು ಎಷ್ಟು ಹಳೆಯವೆಂಬುದು ನಿರ್ಣಯವಾಗಿಲ್ಲ. ಇವುಗಳು ಇಪ್ಪತ್ತೆಂಟೆಂಬುದು ನಿರ್ಣಯವಾಗಿದ್ದು, ಅವುಗಳಲ್ಲಿ ಕೆಲವು ಬಸವಣ್ಣ, ಮೋಳಿಗೆ ಮಾರಯ್ಯ, ಚೆನ್ನ ಬಸವಣ್ಣ, ಮುಂತಾದ ಹನ್ನೆರಡನೆ ಶತಮಾನದವರ ಹೆಸರುಗಳನ್ನೊಳಗೊಂಡಿರುವುದು ಅನೇಕ ಸೈದ್ಧಾಂತಿಕ ಹಾಗೂ ಐತಿಹಾಸಿಕ ಸಮಸ್ಯೆಗಳಿಗೆ ಎಡೆಮಾಡಿಕೊಟ್ಟಿದೆ. ಈ ಇಪ್ಪತ್ತೆಂಟು ಆಗಮಗಳ ಹೆಸರು ಹೀಗಿವೆ : ಕಾಮಿಕ, ಯೋಗಜ, ಚಿಂತ್ಯ, ಅಜಿತ, ಕಾರಣ, ದೀಪ್ತ, ಸೂಕ್ಷ್ಮ, ಅಂಶುಮಾನ, ಸಹಸ್ರ, ಸುಪ್ರಬೋಧ, ನಿಶ್ವಾಸ, ಸ್ವಯಂಭು, ವಿಜಯ, ಅನಿಲ, ವೀರ, ರೌರವ, ಮಕುಟ, ವಿಮಲ, ಚಂದ್ರಜ್ಞಾನ, ಬಿಂಬ, ಪ್ರೋದ್ಗೀತ, ಲಲಿತ, ಸಿದ್ಧ, ಸಂತಾನ, ಸರ್ವೋಕ್ತ, ಪಾರಮೇಶ್ವರ, ಕಿರಣ, ವಾತುಲ.

ಇವುಗಳಲ್ಲಿ ಕೆಲವು ಲಭ್ಯವಾಗಿಲ್ಲ.

**ಇಪ್ಪತ್ತೆಂಟು ನಾಡಿಗಳು :** ಮಾನವ ದೇಹದ ವಿವಿಧ ಭಾಗಗಳಲ್ಲಿ ಅನೇಕ ನಾಡಿಗಳಿವೆ. ಅವುಗಳೆಲ್ಲವೂ ಸಾಧಕನ ದೃಷ್ಟಿಯಿಂದ ಮುಖ್ಯವಲ್ಲ. ವೈದ್ಯಕೀಯ ದೃಷ್ಟಿಯಿಂದ ಇಪ್ಪತ್ತೆಂಟು ನಾಡಿಗಳು ಮುಖ್ಯವೆಂದು ವೈದ್ಯ ಸಂಗಣ್ಣನೆಂಬ ವಚನಕಾರ ಹೇಳುತ್ತಾನೆ. ಈ ನಾಡಿಗಳು ಆರೋಗ್ಯಸೂಚಕಗಳಾಗಿದ್ದು, ಆರೋಗ್ಯವಂತ ದೇಹದಲ್ಲಿ ಆಧ್ಯಾತ್ಮಿಕ ಸಾಧನೆಗೆ ಅವಕಾಶವಿರುತ್ತದೆ, ಎಂಬುದು ಅವನ ಅಭಿಪ್ರಾಯ. ಈ ಇಪ್ಪತ್ತೆಂಟು ನಾಡಿಗಳ ಹೆಸರು ಹೀಗಿವೆ : ಮಯೂರನಾಡಿ. ಮಂಡೂಕನಾಡಿ, ಜಳೂಕನಾಡಿ, ಅಹಿವಳಿನಾಡಿ ಮಂಡಲಗಮಕನಾಡಿ, ಷಂಡೇತಪಥನಾಡಿ, ದೀರ್ಘನಾಡಿ. ಅಧಮನಾಡಿ. ಉತ್ತರನಾಡಿ, ಪೂರ್ವನಾಡಿ, ಪಶ್ಚಿಮನಾಡಿ, ಗಜಗಮನನಾಡಿ, ಹಚ್ಚೊತ್ತಿ ನಾಡಿ, ವಿಕ್ರಮನಾಡಿ, ಸೂತ್ರನಾಡಿ, ಸಂಚುನಾಡಿ, ಸಂಚಲನಾಡಿ, ಶೈತ್ಯನಾಡಿ, ಉಷ್ಣನಾಡಿ, ವಿಹಂಗನಾಡಿ, ಕೂರ್ಮನಾಡಿ, ಮರ್ಕಟನಾಡಿ, ಪಿಪೀಲಿಕಾನಾಡಿ, ದಂಷ್ಟ್ರನಾಡಿ, ಮಕರನಾಡಿ, ಕರ್ಕೋಟಕ ನಾಡಿ, ಸಮರಸನಾಡಿ, ಸಂತೋಷನಾಡಿ. (೯:೧೨೪)

**ಇಪ್ಪತ್ತೈದು ತತ್ವಗಳು :** ಸಾಂಖ್ಯಯೋಗ ದಾರ್ಶನಿಕರು ಇಪ್ಪತ್ತೈದು ತತ್ವಗಳೇ ಪ್ರಪಂಚದ ವಿವಿಧ ವಸ್ತುಗಳಾಗಿವೆ ಎಂದು ಪ್ರತಿಪಾದಿಸುತ್ತಾರೆ. ಇವೆಂದರೆ: (೧) ಮೂಲಪ್ರಕೃತಿ ಅಥವಾ ಪ್ರಧಾನ; (೨) ಬುದ್ಧಿ; (೩) ಮನಸ್ಸು; (೪) ಅಹಂಕಾರ: (೫-೯) ಐದು ಜ್ಞಾನೇಂದ್ರಿಯಗಳು; (೧೦-೧೪) ಐದು ಕರ್ಮೇಂದ್ರಿಯಗಳು; (೧೫-೧೯) ಐದು ತನ್ಮಾತ್ರೆಗಳು (ರೂಪರಸಾದಿ ಇಂದ್ರಿಯ ವಿಷಯಗಳು); (೨೦-೨೪) ಐದು

ಮಹಾಭೂತಗಳು ಹಾಗೂ (೨೫) ಪುರುಷ (ಅಥವಾ ಆತ್ಮ). ಸಾಂಖ್ಯರಾಗಲಿ, ಯೌಗಿಕರಾಗಲಿ, ಪ್ರಕೃತಿ ಮತ್ತು ಪುರುಷರನ್ನು ನಿಯಂತ್ರಿಸುವ ಈಶ್ವರನಿದ್ದಾನೆಂದು ಹೇಳುವುದಿಲ್ಲ. ಸೃಷ್ಟಿ, ಸ್ಥಿತಿ ಮತ್ತು ಲಯ ನಮ್ಮ ಕರ್ಮಗಳಿಂದಾಗುತ್ತವೆಯೇ ಹೊರತು, ಈಶ್ವರನಿಂದಲ್ಲ. (೨:೫೬೨)

**ಇಪ್ಪತ್ತೊಂದು ದೀಕ್ಷೆಗಳು :** ಸಂಸಾರ ಜೀವನಕ್ಕೆ ಹೇಸಿ, ಲಿಂಗಾಂಗ ಸಾಮರಸ್ಯ ಪಡೆಯಬೇಕೆಂಬ ಇಚ್ಛೆಯಿಂದ ಬಂದ ಸಾಧಕನಿಗೆ ಗುರುವು ದೀಕ್ಷೆ ನೀಡುತ್ತಾನೆ. ಈ ದೀಕ್ಷೆಯು ಇಪ್ಪತೊಂದು ತೆರನಾಗಿದ್ದು, ಅವುಗಳನ್ನು ಚೆನ್ನಬಸವಣ್ಣನವರು ಮೂರು ವರ್ಗಗಳನ್ನಾಗಿ ಮಾಡಿದ್ದಾರೆ. ಹೇಗೆಂದರೆ :

ಕಾಯಕ್ಕೆ ಸಂಬಂಧಿಸಿದ ದೀಕ್ಷೆಗಳು: ಆಜ್ಞಾದೀಕ್ಷೆ, ಉಪಮಾ ದೀಕ್ಷೆ, ಸ್ವಸ್ತಿಕಾರೋಹಣ ದೀಕ್ಷೆ, ಕಳಶಾಭಿಷೇಕ ದೀಕ್ಷೆ, ವಿಭೂತಿಪಟ್ಟ ದೀಕ್ಷೆ, ಲಿಂಗಾಯತ ದೀಕ್ಷೆ ಮತ್ತು ಲಿಂಗಸ್ವಾಯತ ದೀಕ್ಷೆ.

ಪ್ರಾಣಕ್ಕೆ ಸಂಬಂಧಿಸಿದ ದೀಕ್ಷೆಗಳು: ಸಮಯ ದೀಕ್ಷೆ, ನಿಸ್ಸಂಸಾರ ದೀಕ್ಷೆ, ನಿರ್ವಾಣದೀಕ್ಷೆ, ತತ್ವದೀಕ್ಷೆ, ಆಧ್ಯಾತ್ಮ ದೀಕ್ಷೆ, ಅನುಗ್ರಹ ದೀಕ್ಷೆ, ಶುದ್ಧವಿದ್ಯಾ ದೀಕ್ಷೆ.

ಮನಸ್ಸಿಗೆ ಸಂಬಂಧಿಸಿದ ದೀಕ್ಷೆಗಳು: ಏಕಾಗ್ರಚಿತ್ತ ದೀಕ್ಷೆ, ದೃಢವ್ರತ ದೀಕ್ಷೆ, ಪಂಚೇಂದ್ರಿಯಾರ್ಪಿತ ದೀಕ್ಷೆ, ಅಹಿಂಸಾ ದೀಕ್ಷೆ, ಮನೋರ್ಲಯ ದೀಕ್ಷೆ, ಲಿಂಗನಿಜ ದೀಕ್ಷೆ ಮತ್ತು ಸದ್ಯೋನ್ಮುಕ್ತಿ ದೀಕ್ಷೆ.

ಮೊದಲಿನ ಏಳು ದೀಕ್ಷೆಗಳು ದೇಹಕ್ಕೆ ಸಂಬಂಧಿಸಿವೆ. ಅಂದರೆ, ಗುರುವು ದೀಕ್ಷಾರ್ಥಿಗೆ ಸ್ವಸ್ತಿಕದ ಮೇಲೆ ಕೂರುವಂತೆ ಆಜ್ಞಾಪಿಸಿ, ಶುಚಿರ್ಭೂತನಾಗಿ ಬಂದಿರುವ ಅವನಿಗೆ ವಿಭೂತಿಯನ್ನು ಧರಿಸಿ, ಲಿಂಗವನ್ನು ಕೊಡುತ್ತಾನೆ. ಹಾಗೆ ಕೊಟ್ಟ ಲಿಂಗವನ್ನು ದೀಕ್ಷಾರ್ಥಿಯು ಸೊಂಟದ ಮೇಲಿನ ಯಾವುದಾದರೊಂದು ಭಾಗದಲ್ಲಿ ಧರಿಸುತ್ತಾನೆ.

ಪ್ರಾಣಕ್ಕೆ ಸಂಬಂಧಿಸಿದ ದೀಕ್ಷೆಗಳು ವೀರಶೈವಾಚಾರಗಳ ಹಿಂದಿರುವ ತತ್ವದ ಬೋಧನೆಯನ್ನು ಒಳಗೊಳ್ಳುತ್ತವೆ. ಈ ತತ್ವಗಳನ್ನು ಅರಿತ ಸಾಧಕನು ಆಚಾರಗಳನ್ನು ಯಾಂತ್ರಿಕವಾಗಿ ಆಚರಿಸದೆ, ಅವೆಲ್ಲ ಅರ್ಥಪೂರ್ಣವೆಂಬಂತೆ ಆಚರಿಸುತ್ತಾನೆ.

ಮನಸ್ಸಿಗೆ ಸಂಬಂಧಿಸಿದ ದೀಕ್ಷೆಗಳು ಲಿಂಗಧ್ಯಾನದಿಂದುಂಟಾಗುವ ಅನುಭಾವವನ್ನು (ಲಿಂಗಾಂಗ ಸಾಮರಸ್ಯ ಅಥವಾ ಸದ್ಯೋನ್ಮುಕ್ತಿಯನ್ನು) ಪಡೆಯಲು ಆವಶ್ಯಕವಾದ ಏಕಾಗ್ರತೆಯನ್ನು ಹೇಗೆ ಸಾಧಿಸಬೇಕು, ಪಂಚೇಂದ್ರಿಯಗಳನ್ನು ಹೇಗೆ ಅರ್ಪಿಸಬೇಕು, ಹೇಗೆ ಮನೋರ್ಲಯ ಮಾಡಬೇಕು, ನಮ್ಮಲ್ಲಿ ಅಂತಸ್ಥವಾಗಿರುವ ಲಿಂಗವನ್ನು ಹೇಗೆ ಸಾಕ್ಷಾತ್ಕರಿಸಿಕೊಳ್ಳಬೇಕು ಮುಂತಾದ ವಿಧಾನಗಳನ್ನು ತಿಳಿಸಿಕೊಡುತ್ತವೆ. (೩:೯೫)

**ಇಪ್ಪತ್ತೊಂದು ಯುಗಗಳು :** ಆದಿ, ಅನಾದಿ, ಅನಾಗತ, ಅನಂತ, ಅದ್ಭುತ, ತಮಂಧ, ತಾರಜ, ತಂಡಜ, ಬಿಂದುಜ, ಭಿನ್ನಾಯುಕ್ತ, ಅವ್ಯಕ್ತ, ಅಮದಾಯುಕ್ತ, ಮಣಿರಣ, ಮಾನ್ಯರಣ, ವಿಶ್ವರಣ, ವಿಶ್ವಾವಸು, ಅಲಂಕೃತ, ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ. ಚೆನ್ನಬಸವಣ್ಣನವರ ಪ್ರಕಾರ, (೩:೧೦೦೨) ಬಸವಣ್ಣನೇ ಈ ಇಪ್ಪತ್ತೊಂದು ಯುಗಗಳನ್ನೂ ಆಯಾ ಕಾಲಗಳಲ್ಲಿ ವಿವಿಧ ದೇವರನ್ನೂ, ಮಾನವರನ್ನೂ, ಇತರ ಜೀವಿಗಳನ್ನೂ ಸೃಷ್ಟಿಸಿದ. ಇಲ್ಲಿ 'ಬಸವಣ್ಣನೇ ಸೃಷ್ಟಿಸಿದ' ಎಂಬ ಹೇಳಿಕೆಗೆ 'ಬಸವಣ್ಣ ಪರಶಿವನ ಮತ್ತೊಂದು ಹೆಸರು' ಎಂಬರ್ಥವಿದೆ.

**ಇಬ್ಬಟ್ಟೆ :** ಎರಡು (ವಿರುದ್ಧ ದಿಕ್ಕಿನ) ದಾರಿಗಳು; ಆಧ್ಯಾತ್ಮಿಕ (ಪಾರಮಾರ್ಥಿಕ) ದಾರಿ ಮತ್ತು ಪ್ರಾಪಂಚಿಕ ದಾರಿ. (೪:೨೦೨)

**ಇಷ್ಟಪ್ರಸಾದ :** "ಇಷ್ಟಲಿಂಗದ ಪ್ರಸಾದ"ವೆಂಬುದು ಇದರ ಅರ್ಥವಾದರೂ, ಭಕ್ತನ ಮನಸ್ಸಿನಲ್ಲಿ ಅಂತರ್ಗತವಾಗಿರುವ ಲಿಂಗದ ಪ್ರಸಾದ ಎಂಬುದು ಇದರ ನಿಜವಾದ ಅರ್ಥ. "ಇಷ್ಟ ಪ್ರಸಾದವ ದೃಷ್ಟಕ್ಕೆ ಅರ್ಪಿಸಿಕೊಂಡೆಹೆ..." (೮:೧೧೬) ಎಂಬಲ್ಲಿ ದೃಷ್ಟ ಎಂಬುದೇ ಕಣ್ಣಿಗೆ ಕಾಣುವ ಇಷ್ಟಲಿಂಗ ಎಂದೂ, 'ಇಷ್ಟ' ಎಂಬುದು ಭಾವಲಿಂಗ ಎಂದೂ ವೇದ್ಯವಾಗುತ್ತದೆ.

**ಇಷ್ಟಪ್ರಾಣ ಸಂಬಂಧ :** ಇಷ್ಟಲಿಂಗ ಮತ್ತು ಪ್ರಾಣಲಿಂಗಗಳ ಸಂಬಂಧ. ಭಾವದಲ್ಲಿರುವ ಲಿಂಗವನ್ನು (ಪರಶಿವನನ್ನು) ಗುರು ಹೇಗೆ ಹಸ್ತಮಸ್ತಕ ಸಂಯೋಗದ ಮೂಲಕ 'ಹೊರತೆಗೆದು', ಅದನ್ನು ಇಷ್ಟಲಿಂಗದಲ್ಲಿ ಪ್ರತಿಷ್ಠಾಪಿಸುತ್ತಾನೋ, ಹಾಗೆಯೇ ಇಷ್ಟಲಿಂಗವನ್ನು ಪಡೆದವನು ಅದರಲ್ಲಿರುವ ಪರಶಿವನನ್ನು ಧ್ಯಾನದ ಮೂಲಕ ತನ್ನ ಪ್ರಾಣದಲ್ಲಿ ನೆಲೆಗೊಳಿಸಬೇಕು. ಹೀಗೆ ಇಷ್ಟಲಿಂಗ-ಪ್ರಾಣಲಿಂಗ ಸಂಬಂಧವನ್ನು ಸಾಕ್ಷಾತ್ಕರಿಸಿಕೊಳ್ಳದ ಭಕ್ತನ ಭಕ್ತಿ ನಿಷ್ಪ್ರಯೋಜಕ. (೭:೮೮)

**ಇಷ್ಟಲಿಂಗ (ಇಷ್ಟ, ದೃಷ್ಟ, ದೃಷ್ಟಲಿಂಗ) :** ಇದಕ್ಕೆ ಸಾಮಾನ್ಯವಾಗಿ ಎರಡು ಅರ್ಥಗಳನ್ನು ಕೊಡುತ್ತಾರೆ.

(೧) ಭವಚಕ್ರದಿಂದ ತಪ್ಪಿಸಿಕೊಳ್ಳಬಯಸಿ, ಆಧ್ಯಾತ್ಮಿಕ ಜೀವನ ನಡೆಸಬಯಸುವವರು ಗುರುವಿನ ಬಳಿ ಬಂದು ಇಷ್ಟಲಿಂಗ ಪಡೆಯುತ್ತಾರೆ. ತಾವಾಗಿಯೇ ಇಷ್ಟಪಟ್ಟು ಪಡೆದ ಲಿಂಗ ಇದಾದುದರಿಂದ ಇದು 'ಇಷ್ಟಲಿಂಗ'ವೆನಿಸಿಕೊಳ್ಳುತ್ತದೆ.

(೨) 'ಇಷ್ಟ' ಎಂಬ ಪದವನ್ನು 'ಅನಿಷ್ಟ' ಎಂಬ ಪದಕ್ಕೆ ವಿರುದ್ಧಾರ್ಥದಲ್ಲಿ ತೆಗೆದುಕೊಂಡರೆ, ಆಗ 'ಇಷ್ಟಲಿಂಗ' ಎಂಬ ಪದಕ್ಕೆ 'ಒಳ್ಳೆಯ ಲಿಂಗ' (ಅಥವಾ ಒಳ್ಳೆಯದನ್ನು ಮಾಡುವ ಲಿಂಗ) ಎಂಬ ಅರ್ಥ ಉಂಟಾಗುತ್ತದೆ. 'ಶಿವ' ಮತ್ತು 'ಶಂಕರ' ಎಂಬ ಪದಗಳಿಗೂ ಇದೇ ಅರ್ಥವಿರುವುದನ್ನು ಇಲ್ಲಿ ನಾವು ಸ್ಮರಿಸಿಕೊಳ್ಳಬಹುದು.

ಇಷ್ಟಲಿಂಗ ಪೂಜೆಯಿಂದ ಅನಿಷ್ಟ ನಷ್ಟವಾಗುತ್ತದೆ, ಎಂಬ ನಂಬಿಕೆ ಇದರಿಂದ ವ್ಯಕ್ತವಾಗುತ್ತದೆ. (೩:೯೮೭)

**ಇಷ್ಟಲಿಂಗದಂಗ :** ಅಂಗನು ಯಾವಾಗಲೂ ಲಿಂಗದ (ಪರಶಿವನ) ಅಂಗವೇ. ಕೈ ಹೇಗೆ ದೇಹದಿಂದ ಭಿನ್ನವಾದ ಅಂಗವಲ್ಲವೋ ಮತ್ತು ಅದು ದೇಹದ ಭಾಗವಾಗದಿದ್ದರೆ ಅದಕ್ಕೆ ಹೇಗೆ ಬೆಲೆಯಿಲ್ಲವೋ, ಹಾಗೆಯೇ ಅಂಗನು ತಾನು ಪ್ರತ್ಯೇಕವೆಂದು ತಿಳಿದುಕೊಂಡರೆ, ಅವನಿಗೆ ದುಃಖವೂ, ತಾನು ಪರಶಿವನಲ್ಲೇ ಇದ್ದು, ಅವನ ಅಂಗವಾಗಿದ್ದೇನೆ ಎಂದು ತಿಳಿದವನಿಗೆ ಅತೀವ ಆನಂದವೂ ಉಂಟಾಗುತ್ತದೆ. ಆದರೆ ಇಷ್ಟಲಿಂಗವೇ ಪರಶಿವನೆಂದೂ, ತಾನು ಅದರ ಅಂಗವೆಂದೂ, ತಾನು ಪ್ರತ್ಯೇಕನೆಂದೂ ತಿಳಿಯುವುದು ಆಧ್ಯಾತ್ಮಿಕ ಅಜ್ಞಾನದ ಪರಮಾವಧಿ (೮:೧೫೩೬).

**ಇಷ್ಟಲಿಂಗ ಪ್ರಾಣಿ :** ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗ ಮೂರು ಒಂದೇ ಎಂದು ತಿಳಿಯದ ಭಕ್ತ ಇಷ್ಟಲಿಂಗ ಬೇರೆಯೆಂದು ತಿಳಿದು, ಅದಕ್ಕೆ ಪೂಜೆ, ಮುಂತಾದ ಬಾಹ್ಯ ಆಚಾರಗಳಿಂದ ತೃಪ್ತಿಪಡಿಸಲು ನೋಡಿದರೆ, ಆಗ ಅವನು 'ಇಷ್ಟಲಿಂಗಪ್ರಾಣಿ' ಎನಿಸಿಕೊಳ್ಳುತ್ತಾನೆ. ಪ್ರಾಣಿ ಎಂದರೆ ಅಜ್ಞಾನಿ ಎಂದಾಗುವುದರಿಂದ ಅವನು ಇಷ್ಟಲಿಂಗ ಪ್ರಾಣಿ ಎಂಬುದು ಸೂಕ್ತ. (೯:೧೩೩೯)

**ಇಷ್ಟಲಿಂಗಪೂಜೆ :** ಇಷ್ಟಲಿಂಗಪೂಜೆಯನ್ನು ಇಷ್ಟಲಿಂಗವನ್ನು ಧರಿಸಿದವನೇ ಮಾಡಬೇಕೇ ಹೊರತು, ಮತ್ತೊಬ್ಬರು ಮಾಡಬಾರದೆಂಬುದು ವಚನಕಾರರ ಆದೇಶ. ಗುಡಿಗಳಲ್ಲಿ ಪ್ರತಿಷ್ಠಾಪಿತವಾಗಿರುವ ಸ್ಥಾವರಲಿಂಗದ ಪೂಜೆಯನ್ನು ಪೂಜಾರಿ ಮಾಡುವಾಗ ಉಳಿದವರು ಭಕ್ತಿಯಿಂದ ನೋಡಬಹುದು. ಎಲ್ಲರೂ ಅದನ್ನು ಪೂಜಿಸಲಾರರು. ಅಲ್ಲದೆ ಇಷ್ಟಲಿಂಗವನ್ನು ಜಾತಿ ಮತ ಲಿಂಗ ಭೇದವಿಲ್ಲದೆ ಯಾರಾದರೂ ಪಡೆದು ಪೂಜಿಸಬಹುದು. ಸ್ಥಾವರಲಿಂಗ ಪೂಜಕರಿಗೆ ಈ ಸ್ವಾತಂತ್ರ್ಯವಿಲ್ಲ. ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರಿದವರು (ಉದಾಹರಣೆಗೆ, ಪ್ರಾಣಲಿಂಗಿಗಳಾದವರು) ತಮ್ಮ ಇಂದ್ರಿಯ, ಮನಸ್ಸು, ದೇಹಗಳಲ್ಲೇ ಲಿಂಗವನ್ನು ಪ್ರತಿಷ್ಠಾಪಿಸಿಕೊಳ್ಳುತ್ತಾರೆ. ಅಂಥವರಿಗೆ ಇಷ್ಟಲಿಂಗವು ತಮ್ಮಲ್ಲಿ ಅಂತಸ್ಥವಾಗಿರುವ ಚಿತ್‌ಸ್ವರೂಪ ಲಿಂಗದ ಕುರುಹಾಗುತ್ತದೆ.

**ಇಷ್ಟಲಿಂಗಾರ್ಪಿತ :** ರುಚಿಯುಳ್ಳ ಆಹಾರ ಪದಾರ್ಥಗಳನ್ನಷ್ಟೇ ಅಲ್ಲ, ಮೃದು-ಕಠಿಣ, ಶೀತ-ಉಷ್ಣ ಮುಂತಾದ ಗುಣಗಳನ್ನುಳ್ಳ ಪದಾರ್ಥಗಳನ್ನು ಮುಟ್ಟಿ, ಅವುಗಳ ರೂಪವನ್ನು ಇಷ್ಟಲಿಂಗಕ್ಕೆ ಅರ್ಪಿಸಿದರೆ, ಅದು ಇಷ್ಟಲಿಂಗಾರ್ಪಿತವೆನಿಸಿಕೊಳ್ಳುತ್ತದೆ; ಮತ್ತು ಅದು ರೂಪಪ್ರಸಾದವಾಗುತ್ತದೆ. (೯:೧೧೬೧)

**ಇಷ್ಟಾರ್ಥ :** ಲೌಕಿಕ ವಸ್ತುಗಳ ಬಗೆಗಿನ ಆಸೆಗಳು. (ಉದಾ : ಐಶ್ವರ್ಯಬೇಕೆಂಬ ಆಸೆ) (೮:೧೪೬೫)

**ಇಹದಲ್ಲಿ ಅಜ್ಞಾನಿ ಪರದಲ್ಲಿ ಸುಜ್ಞಾನಿ :** ಲಿಂಗಾಂಗ ಸಾಮರಸ್ಯವನ್ನು ಸಾಧಿಸಿದವನು ಲೌಕಿಕರಂತೆ ಧನ-ಕನಕಾದಿಗಳನ್ನು ಆಶಿಸುವುದಿಲ್ಲವಾದುದರಿಂದ, ಅವನು ಅವರ ಕಣ್ಣಿಗೆ ಅಜ್ಞಾನಿ. ಆದರೆ ಅವನು ಸಾಮರಸ್ಯವನ್ನು ಸಾಧಿಸಿರುವುದರಿಂದ ಪರಲೋಕದವರ ದೃಷ್ಟಿಯಿಂದ (ಆಧ್ಯಾತ್ಮಿಗಳ ದೃಷ್ಟಿಯಿಂದ) ಸುಜ್ಞಾನಿ. (೮:೧೪೯೧)

**ಇಹಲೋಕ :** ಬಹಳಷ್ಟು ವಚನಕಾರರು ಇಹಲೋಕ-ಪರಲೋಕ ಎಂಬ ಭೇದವನ್ನು ಮಾಡುವುದಿಲ್ಲ. ಅದರ ಬದಲು ಭವ (ಸಂಸಾರ) ಮೋಕ್ಷ ಎಂಬ ವ್ಯತ್ಯಾಸ ಮಾಡುತ್ತಾರೆ. ಸಿದ್ಧರಾಮನಂಥವರು ಭ್ರಮಾಧೀನರು ಇರುವ ಲೋಕವೇ ಇಹಲೋಕ; ಶಿವಶರಣರು ಇರುವ ಲೋಕವೇ ರುದ್ರಲೋಕ (ಪರಲೋಕ) ಅನ್ನುತ್ತಾರೆ; ಅದೇ ರೀತಿ ಬಸವಣ್ಣನಂಥವರು ಮರ್ತ್ಯಲೋಕವು (ಇಹಲೋಕವು) ಕರ್ತಾರನ ಕಮ್ಮಟವೆನ್ನುತ್ತಾರೆ. ಹೀಗೆ ಇಹಲೋಕ-ಪರಲೋಕಗಳ ಭೇದವನ್ನು ಅವರು ಮಾಡಿದರೂ, ಅವರಿಗೆ ಪರಲೋಕದಲ್ಲಿ ನಂಬಿಕೆಯಿತ್ತೆಂಬುದನ್ನು ಈ ವಾಕ್ಯಗಳು ತಿಳಿಸುವುದಿಲ್ಲ. ಆದರೆ ಜನರಿಗೆ ತಿಳಿಯುವಂಥ ಭಾಷೆಯಲ್ಲಿ ಮಾತನಾಡಬೇಕಾದರೆ, ಇಹಲೋಕ, ಪರಲೋಕ, ಶಿವಪುರ, ಕೈಲಾಸ, ಸ್ವರ್ಗ ಮುಂತಾದ ಪರಿಕಲ್ಪನೆಗಳನ್ನುಳ್ಳ ಭಾಷೆಯಲ್ಲೇ ಅವರು ಮಾತನಾಡಬೇಕಿದ್ದುದು ಅಂದಿನ ಕಾಲಕ್ಕೆ ಅನಿವಾರ್ಯವಾಗಿತ್ತು.

**ಈರೇಳುಲೋಕ :** ಹದಿನಾಲ್ಕು ಲೋಕ. ( ನೋಡಿ : **ಹದಿನಾಲ್ಕು ಲೋಕ**).

**ಈಶ್ವರ :** ಸಾಮಾನ್ಯವಾಗಿ ಶಂಕರಾಚಾರ್ಯರ ಚಿದದ್ವೈತದಲ್ಲಿ "ಈಶ್ವರ" ಎಂಬ ಪದವು ಸಗುಣ ಬ್ರಹ್ಮನಿಗೆ ಅನ್ವಯವಾಗುತ್ತದೆ. ನಿರ್ಗುಣ ಬ್ರಹ್ಮನು ನಿಷ್ಕ್ರಿಯ; ಅವನು ಯಾವ ಕಾರ್ಯಕ್ಕೂ ಕಾರಣನಲ್ಲ. ಆದರೆ ನಾವು ಅಜ್ಞಾನದಿಂದಾಗಿ ಬ್ರಹ್ಮನೇ ಸೃಷ್ಟಿ ಮಾಡುತ್ತಾನೆಂದು ತಪ್ಪು ತಿಳಿದುಕೊಳ್ಳುತ್ತೇವೆ. ಹೀಗೆ ಸೃಷ್ಟಿ, ಸ್ಥಿತಿ, ಮತ್ತು ಲಯಗಳನ್ನು ಮಾಡುವ ದೈವವೇ ಈಶ್ವರ.

ಆದರೆ ವಚನಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಈಶ್ವರನು ಸೃಷ್ಟಿಸುವುದಿಲ್ಲ. ಅವುಗಳ ಪ್ರಕಾರ, ಸೃಷ್ಟಿಕಾರ್ಯವು ಬ್ರಹ್ಮನಿಗೆ ಮೀಸಲಾಗಿದ್ದು, ವಿಷ್ಣುವು ಸ್ಥಿತಿ (ರಕ್ಷಣಾ) ಕಾರ್ಯವನ್ನೂ, ಈಶ್ವರನು ಸಂಹಾರವನ್ನೂ ಮಾಡುತ್ತಾನೆ. ಕೆಲವು ವಚನಕಾರರ ಪ್ರಕಾರ, ಈಶ್ವರ ಅನುಗ್ರಹ ಕಾರ್ಯವನ್ನೂ ರುದ್ರನು ಸಂಹಾರವನ್ನೂ ಮಾಡುತ್ತಾರೆ.

**ಈಶ್ವರ ರತಿ :** ಇಲ್ಲಿ 'ರತಿ' ಎಂಬ ಪದವನ್ನು ಆಲಂಕಾರಿಕವಾಗಿ ಬಳಸಲಾಗಿದೆ. ಲೈಂಗಿಕ ಸಮಾಗಮಕ್ಕೆ 'ರತಿ' ಎಂಬ ಪದವು ಸಾಮಾನ್ಯವಾಗಿ ಅನ್ವಯವಾಗುತ್ತಿದ್ದು, ಇಲ್ಲಿ ಈಶ್ವರ (ಪರಶಿವ)ನೊಂದಿಗೆ ಉಂಟಾಗುವ ಐಕ್ಯಕ್ಕೆ (ಸಾಮರಸ್ಯಕ್ಕೆ) 'ಈಶ್ವರ ರತಿ' ಎಂಬುದು ಅನ್ವಯವಾಗುತ್ತದೆ. (೧೧:೧೧೯)

**ಈಷಣತ್ರಯ :** ಮೂರು ಬಯಕೆಗಳು. ಅವೆಂದರೆ, ಅರ್ಥೇಷಣ (ಹಣ ಬೇಕೆಂಬ ಬಯಕೆ), ಪುತ್ರೇಷಣ (ಪುತ್ರಸಂತಾನ ಬೇಕೆಂಬ ಬಯಕೆ) ಮತ್ತು ದಾರೇಷಣ (ಹೆಣ್ಣು ಬೇಕೆಂಬ ಬಯಕೆ). ಭಕ್ತನಾಗಿ ಲಿಂಗಾಂಗ ಸಾಮರಸ್ಯ ಸಾಧಿಸಬೇಕೆಂದು ದೀಕ್ಷೆ ತೆಗೆದುಕೊಂಡವನು ಈಷಣತ್ರಯಗಳಿಂದ ಮೊದಲು ಮುಕ್ತನಾಗಬೇಕು. ಇಲ್ಲದಿದ್ದರೆ ಅವನು ಭಕ್ತನಾದುದು, ಲಿಂಗದೀಕ್ಷೆ ತೆಗೆದುಕೊಂಡುದು ವ್ಯರ್ಥ ಅಥವಾ ಗುರುಲಿಂಗಜಂಗಮ ದ್ರೋಹ ಮಾಡಿದಂತಾಗುತ್ತದೆ. (೩:೯೬೭)

**ಉತ್ತರಗತಿ :** ಲಿಂಗಾಂಗ ಸಾಮರಸ್ಯದನಂತರದ ಜೀವನ ಅಥವಾ ಮೋಕ್ಷದ ಅರಿವು. ''ಉತ್ತರಗತಿಯನರಿಯುವುದಕ್ಕೆ'' ಎಂಬುದನ್ನು ಆಧ್ಯಾತ್ಮಿಕ ಜೀವನದ ''ಧ್ಯೇಯವನ್ನರಿಯುವುದಕ್ಕೆ'' ಅಥವಾ ''ಸಾಮರಸ್ಯದ ನಂತರದ ಸ್ಥಿತಿಯನ್ನರಿಯುವುದಕ್ಕೆ'' ಎಂದರ್ಥ ಮಾಡಿದರೆ ಉತ್ತರಗತಿಯು ಆಧ್ಯಾತ್ಮಿಕ ಜೀವನದ ಧ್ಯೇಯ ಅಥವಾ ಸಾಮರಸ್ಯದ ನಂತರದ ಸ್ಥಿತಿ ಎಂದಾಗುತ್ತದೆ.

**ಉತ್ತರಾಪಥ :** ಮಾನವ ಜೀವನವನ್ನು ಎರಡು ಭಾಗ ಮಾಡಿ ಮೊದಲನೆಯದನ್ನು ಭವಿ ಜೀವನವೆಂದು, ಎರಡನೆಯದನ್ನು ಆಧ್ಯಾತ್ಮಿಕ ಜೀವನವೆಂದು ಪರಿಗಣಿಸಿದರೆ, ಮೊದಲನೆಯದು ಪೂರ್ವಪಥ ಅಥವಾ (ಪೂರ್ವಾಶ್ರಯ) ಎನಿಸಿಕೊಳ್ಳುತ್ತದೆ ಹಾಗೂ ಎರಡನೆಯದು ಉತ್ತರಾಪಥವೆನಿಸಿಕೊಳ್ಳುತ್ತದೆ. ಉತ್ತರಾಪಥವು ಶಿವಪಥ ಅಥವಾ ಮೋಕ್ಷಮಾರ್ಗ ಅಥವಾ ಲಿಂಗಾಂಗ ಸಾಮರಸ್ಯವನ್ನು ಪಡೆಯುವ ಪಥ ಎಂದು ಮತ್ತೊಮ್ಮೆ ಹೇಳಬೇಕಾಗಿಲ್ಲ. (೨:೪೧೮)

**ಉನ್ಮನಿ :** ಐಹಿಕ ವಸ್ತುಗಳ ಕಡೆಗೆ ತಿರುಗಿದ ಮನಸ್ಸು ಅಧೋಮನಿಯಾದರೆ, ಪರಶಿವನ ಕಡೆಗೆ ತಿರುಗಿದ ಮನಸ್ಸು ಉನ್ಮನಿ (ಮೇಲ್ಮುಖವಾದ ಮನಸ್ಸು). ಬ್ರಹ್ಮರಂಧ್ರವನ್ನು ನೋಡುತ್ತಿರುವ ಮನಸ್ಸು, ಎಂಬುದು ಮತ್ತೊಂದು ಅರ್ಥ. ಆದರೆ ಬ್ರಹ್ಮರಂಧ್ರದಲ್ಲಿ ಪರಶಿವನಿದ್ದಾನೆಂದು ನಂಬುವವರಿಗೆ ಮೇಲ್ಮುಖವಾದ ಮನಸ್ಸು ಪರಶಿವನ ಕಡೆಗಿದೆ ಎಂದರೂ ಒಂದೇ, ಬ್ರಹ್ಮರಂಧ್ರದ ಕಡೆಗೆ ಕೇಂದ್ರೀಕರಿಸಿದೆ ಎಂದರೂ ಒಂದೇ.

**ಉಪಚಾರ :** ಮನಸ್ಸಿಲ್ಲದೇ ಮಾಡುವ ಆಚಾರ. ''ಆನು ಮಾಡುವುದೆಲ್ಲವೂ ಉಪಚಾರವಯ್ಯ'' (೧:೩೮೫) ಎಂಬಲ್ಲಿ ಶ್ರದ್ಧೆಯಿಲ್ಲದೆ ಮಾಡುವ ಆಚಾರವು ಉಪಚಾರವೆನಿಸಿಕೊಳ್ಳುತ್ತದೆ.

**ಉಪಾಧಿ :** ಆತ್ಮದ ಸ್ವಾಭಾವಿಕ ಅಥವಾ ಮೂಲಸ್ವರೂಪವನ್ನು ಸೀಮಿತಗೊಳಿಸುವಂತಹುದು. ಆತ್ಮನು ಮೂಲತಃ ಶಿವಸ್ವರೂಪ ಅಥವಾ ಶಿವಾಂಶಿಕನಾಗಿದ್ದು ಉಪಾಧಿಗಳಿಂದಾಗಿ ಬಂಧನಕ್ಕೊಳಗಾಗಿದ್ದಾನೆ. ಉಪಾಧಿಗಳು ಅನೇಕವಿದ್ದು ಅವುಗಳೆಲ್ಲಕ್ಕೂ ಮರೆವು ಅಥವಾ ಅವಿದ್ಯೆಯೇ ಮೂಲ. 'ಮರೆವು' ಎಂಬ ಉಪಾಧಿಯಿಂದಾಗಿ ಮಾನವನು ತಾನು

ದೇಹೇಂದ್ರಿಯಗಳ ಸಂಕೀರ್ಣವೆಂದೂ, ತಾನು ಪರಶಿವನಿಂದ ಭಿನ್ನನಾದ ಪ್ರತ್ಯೇಕ ವ್ಯಕ್ತಿ ಎಂದೂ ತಿಳಿದು ತನ್ನ ಸಲುವಾಗಿ ಅನೇಕ ರೀತಿಯ ಸ್ವಾರ್ಥ ಕರ್ಮಗಳನ್ನು ಮಾಡಿ ಬಂಧನಕ್ಕೊಳಗಾಗುತ್ತಾನೆ. ಉಪಾಧಿರಹಿತನಾಗುವುದೆಂದರೆ ಮರೆವನ್ನೂ, ಕರ್ಮವನ್ನೂ ಸ್ವಾರ್ಥ ಭಾವನೆಗಳನ್ನೂ ನಾಶಮಾಡಿ, ಮೊದಲಿನಂತೆ ಪರಶಿವನಲ್ಲಿ ಒಂದಾಗಿರುವುದು. (೨:೬೬೯)

**ಉಪಾಧಿಕ :** ಆತ್ಮನಲ್ಲಿ ಶಿವತ್ವವನ್ನು ವ್ಯಕ್ತಪಡಿಸದಂತೆ ಅಡ್ಡಿಮಾಡುವ ಗುಣಗಳು. ಉದಾಹರಣೆಗೆ, ಮಲತ್ರಯಗಳು.

**ಉಪಾಧಿಕ (ಸೋಪಾಧಿಕ) ಪ್ರಸಾದ :** ಕೆಲವರು ತಾವು ತಿನ್ನುವ ಸಲುವಾಗಿ ಲಿಂಗಕ್ಕೆ ನೈವೇದ್ಯ ಮಾಡುತ್ತಾರೆ. ಉಳಿದ ವೇಳೆಯಲ್ಲಿ ಲಿಂಗವನ್ನು ಮರೆಯುತ್ತಾರೆ. ಇಂತಹ ಕರಾರಿನ ಪ್ರಸಾದಕ್ಕೆ ಉಪಾಧಿಕ ಪ್ರಸಾದವೆನ್ನುತ್ತಾರೆ. (೩:೪೫೧)

**ಉಪಾಧಿಕ ಸೇವೆ :** ಅಪೂರ್ಣ ಸೇವೆ; ಅಥವಾ ಕಾಮ್ಯ ಸೇವೆ. ಫಲಗಳನ್ನು ಅಪೇಕ್ಷಿಸಿ ಪರಶಿವನನ್ನು ಸೇವಿಸಿದರೆ ಅದು ಉಪಾಧಿಕ ಸೇವೆ ಎನಿಸಿಕೊಳ್ಳುವುದು. ಈ ಸೇವೆಗೆ ಅಲ್ಪ ಪ್ರತಿಫಲವುಂಟು. ಅದಕ್ಕೇ ಸಂಗಮೇಶ್ವರ ಅಪ್ಪಣ್ಣ (೯:೨೮೪) ಉಪಾಧಿಕ ಸೇವೆಯಿಂದ 'ಶಿವನು ಸಾಧಾರಣ ಪದವನೀವನು' ಎನ್ನುತ್ತಾನೆ. ಅಲ್ಲದೆ ಅಂಥ ಭಕ್ತಿ ಸದೃಢವಲ್ಲ, ಏಕೆಂದರೆ, ತಾನು ಮಾಡಿದ ಸೇವೆಗೆ ತಕ್ಕ ಪ್ರತಿಫಲ ಸಿಗದಿದ್ದರೆ, ಭಕ್ತನು ತನ್ನ ಭಕ್ತಿಯನ್ನು ಇನ್ನು ಮುಂದೆ ತೋರಿಸದೆ ಇರಬಹುದು.

**ಉಪಾಧಿಕೆ :** ಬಯಕೆ. ಅಜ್ಞಾನದಂತೆ ನಮ್ಮ ಸ್ವಾರ್ಥಬಯಕೆಗಳೂ ಸಹ ಆತ್ಮನ ಮೂಲ ಸ್ವರೂಪವನ್ನು ಮರೆಮಾಡುವುದರಿಂದ ಅವು ಸಹ ಉಪಾಧಿಕೆಗಳೆನಿಸಿಕೊಳ್ಳುತ್ತವೆ. ಈ ಬಯಕೆಗಳು ಉಚ್ಚಮಟ್ಟದವಿದ್ದರೂ ಸಹ ಅವು ಉಪಾಧಿಕೆಗಳೆ. ಉದಾಹರಣೆಗೆ, "ಕಾಯವಳಿದು ಕೈಲಾಸಕ್ಕೆ ಹೋಗಬೇಕೆಂಬುದು ಜೀವನ ಉಪಾಧಿಕೆ" ಎಂಬಲ್ಲಿ ಈ ಅರ್ಥ ಸ್ಪಷ್ಟವಾಗುತ್ತದೆ. (೮:೮೦೨)

**ಉಪಾಧಿರಹಿತ ವಿರಕ್ತ :** ಅವಿದ್ಯೆಯಿಂದಾಗಿ (ಮರೆವಿನಿಂದಾಗಿ) ನಾನೇ ಮುಖ್ಯ, ಬೇರೆಯವರಲ್ಲ ಎಂಬ ಭಾವನೆಯೂ, ದೇಹ, ಇಂದ್ರಿಯಾದಿಕರಣಗಳೂ ಆತ್ಮನ ನಿಜ ಸ್ವರೂಪವು ಪ್ರಕಟವಾಗಲು ಅಡ್ಡಿಯುಂಟುಮಾಡುತ್ತವೆ. ನಿಜವಾದ ವಿರಕ್ತನು ಈ ಎಲ್ಲ ಅಡ್ಡಿಗಳಿಂದ ಮುಕ್ತನಾದುದರಿಂದ ಅವನು ಉಪಾಧಿರಹಿತ ವಿರಕ್ತ. (೫:೪೬೫)

**ಉಭಯದಂಗ ಏಕೀಕರವಾಗುವುದು :** ಮಾನವನ ದೇಹ (ಅಂಗ)ದಲ್ಲಿ ಹೇಗೆ ಆತ್ಮನಿದ್ದಾನೋ, ಹಾಗೆ ಪ್ರಪಂಚವೆಂಬ ವಸ್ತುವಿನಲ್ಲಿಯೂ ಆತ್ಮನಿದ್ದಾನೆ. ಅವನೇ ವಿಶ್ವಾತ್ಮ ಅಥವಾ ಪರಶಿವ. ಪರಶಿವನಿಗೆ ವಿಶ್ವವು ಹೇಗೆ ಒಂದು ಅಂಗವೋ, ಹಾಗೆಯೇ ಮಾನವನ ಆತ್ಮವೂ ಒಂದು ಅಂಗ. ಅಂದರೆ, ಮನುಷ್ಯನ ಕೋನದಿಂದ

ಹೇಳುವುದಾದರೆ, ಪರಶಿವನಿಗೆ ಮಾನವರ ಆತ್ಮ ಮತ್ತು ವಿಶ್ವ ಎಂಬ ಎರಡು ಅಂಗಗಳಿವೆ; ಅಲ್ಲದೆ ನಮ್ಮ ಆತ್ಮವೂ ವಿಶ್ವಾತ್ಮವೂ ಒಂದೇ (ಉಭಯ ಅಂಗಗಳಲ್ಲಿರುವುದು ಏಕೀಕರಿಸುತ್ತದೆ). (೯:೨೪೧)

**ಉಭಯದಿರವು :** ನಾನು ಮತ್ತು ಪರಶಿವ ಬೇರೆ ಬೇರೆ ಎಂದು ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ತಿಳಿಯುವುದು. ಈ ರೀತಿಯ ತಿಳಿಯುವಿಕೆ ಆಧ್ಯಾತ್ಮಿಕ ಸಾಧನೆಗೆ ಅಡ್ಡಿಯಾಗುತ್ತದೆ. ಅದಕ್ಕೋಸ್ಕರವೇ ಭಕ್ತನಾನೇ ಅಥವಾ ವಿರಕ್ತನಾನೇ ಎಂದು ಬೀಗುವವರನ್ನು ಪರಶಿವನು ಮೆಚ್ಚುವುದಿಲ್ಲ (೯:೨೪೪) ಎನ್ನುತ್ತಾನೆ ಶಿವಲೆಂಕಮಂಚಣ್ಣ.

**ಉಭಯಭ್ರಷ್ಟರು :** ಅನೈತಿಕ ಕರ್ಮ ಮಾಡುವವರನ್ನು ಯಾರೂ ಮೆಚ್ಚುವುದಿಲ್ಲವಾದುದರಿಂದ, ಅವರು ಇಹಲೋಕ ಭ್ರಷ್ಟರು. ಆಧ್ಯಾತ್ಮಿಕ ಜೀವನವನ್ನು ಶ್ರದ್ಧೆಯಿಂದ ಮಾಡದಿದ್ದರೆ ಅವರು ಪರಲೋಕ ಭ್ರಷ್ಟರು ಆಗುತ್ತಾರೆ. ಹೀಗೆ ನೈತಿಕ ಮತ್ತು ಆಧ್ಯಾತ್ಮಿಕ ಆಚಾರಗಳನ್ನು ಮಾಡದವರು ಉಭಯಭ್ರಷ್ಟರು. (೭:೪೧)

**ಉಭಯಲಿಂಗ ಪ್ರಸಾದ :** ಲಿಂಗಪ್ರಸಾದ ಮತ್ತು ಗುರು ಎಂಬ ಲಿಂಗದ ಪ್ರಸಾದ. (೩:೧೦೫೯)

**ಉಭಯಲೇಪ :** ನಮ್ಮ ದೈನಂದಿನ ಜೀವನದಲ್ಲಿ ನಾವು ಅರಿಯುವ ವಸ್ತುಗಳನ್ನು ನಮ್ಮಿಂದ ಪ್ರತ್ಯೇಕಿಸಿಕೊಳ್ಳುತ್ತೇವೆ. ಇಂತಹ ನಾನು ಮತ್ತು ಇದಿರು (ನಾವು ಅರಿಯುವ ವಸ್ತುಗಳು) ಎಂಬ ದ್ವೈತವಿಲ್ಲದ ಜ್ಞಾನ ಯಾರಿಗೂ ಸಾಧ್ಯವಿಲ್ಲ. ಆದರೆ, ಲಿಂಗಾಂಗ ಸಾಮರಸ್ಯದಲ್ಲಿ ಈ ದ್ವೈತವಿರುವುದಿಲ್ಲ. ["ಅರಿದು ಅರುಹಿಸಿಕೊಂಬ ಉಭಯಲೇಪ ಏನೂ ಎನಲಿಲ್ಲ" (೯:೫೨)]

**ಉಭಯಸ್ಥಲಭರಿತ :** ಪರಶಿವ. ಉಭಯಸ್ಥಲ ಎಂದರೆ ಅಂಗಸ್ಥಲ ಮತ್ತು ಲಿಂಗಸ್ಥಲ. ಶಕ್ತಿಯ ಚಲನೆಯಿಂದಾಗಿ ನಿಷ್ಕಲಲಿಂಗವು ತಾನೇ ಅಂಗಸ್ಥಲ ಮತ್ತು ಲಿಂಗಸ್ಥಲ ಎಂದು ಎರಡು ಭಾಗವಾಗುವುದರಿಂದ ಆ ಎರಡರಲ್ಲಿಯೂ ನಿಷ್ಕಲಲಿಂಗವು (ಪರಶಿವನು) ಇರಬೇಕಾಗುತ್ತದೆ. ಒಂದು ಚಿನ್ನದ ಗಟ್ಟಿಯಿಂದ ಎರಡು ಆಭರಣಗಳನ್ನು ಮಾಡಿದಾಗ ಹೇಗೆ ಅವೆರೆಡರಲ್ಲಿಯೂ ಚಿನ್ನ ತುಂಬಿಕೊಂಡಿರುತ್ತದೆಯೋ, ಹಾಗೆಯೇ ನಿಷ್ಕಲಲಿಂಗದಿಂದ ಉದ್ಭವವಾದ ಅಂಗಸ್ಥಲ ಮತ್ತು ಲಿಂಗಸ್ಥಲ ಎರಡರಲ್ಲಿಯೂ ಪರಶಿವನು ತುಂಬಿಕೊಂಡಿರುತ್ತಾನೆ. (೮:೧೬೮೬)

**ಉಭಯಾರೂಢ :** ಇಡೀ ಪ್ರಾಣದಲ್ಲಿಯೂ, ಅಂಗದಲ್ಲಿಯೂ ಲಿಂಗವನ್ನು ಪ್ರತಿಷ್ಠಾಪಿಸಿಕೊಂಡವನು. ಲಿಂಗದೀಕ್ಷೆಯ ಸಮಯದಲ್ಲಿ ಅಂಗದ ಮೇಲೆ ಲಿಂಗವನ್ನು ಪ್ರತಿಷ್ಠಾಪಿಸಿಕೊಂಡರೆ, ಪ್ರಾಣಲಿಂಗಿಸ್ಥಲದಲ್ಲಿ ಇಡಿ ಪ್ರಾಣದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿಕೊಳ್ಳುತ್ತಾನೆ. ಅಂತಹವನು ಉಭಯಾರೂಢ. (೮:೧೪೨೨)

**ಉರಸ್ಥಲದ ಪರಂಜ್ಯೋತಿರ್ಲಿಂಗ :** ಹೃದಯದಲ್ಲಿ ಆತ್ಮನಿದ್ದಾನೆ ಎಂಬ ಉಪನಿಷತ್ತಿನ ಮಾತನ್ನು ವಚನಕಾರರೂ ಒಪ್ಪುತ್ತಾರೆ. ಆ ಆತ್ಮನೇ (ಅಂಗನೇ) ಲಿಂಗವಾದುದರಿಂದ ಹೃದಯದಲ್ಲಿ ಪರಂಜ್ಯೋತಿರ್ಲಿಂಗವಿದೆ ಎಂದರ್ಥವಾಗುತ್ತದೆ. ಈ ಲಿಂಗವು ಜ್ಯೋತಿಯೆಂಬುದು ಅನುಭಾವದಲ್ಲಿ ತಿಳಿಯುತ್ತದೆ. (೯:೮೫೫)

**ಉರಿಯುಂಡ ಕರ್ಪುರ :** ಉರಿಯುಂಡ ಕರ್ಪೂರವು ಹೇಗೆ ಇಲ್ಲವಾಗಿ ಬೆಂಕಿಯೆ ಆಗುತ್ತದೆಯೋ, ಹಾಗೆಯೇ ಲಿಂಗದಲ್ಲಿ ಐಕ್ಯವಾದ ಅಂಗವೂ ತನ್ನತನವನ್ನು ಕಳೆದುಕೊಂಡು ಲಿಂಗವೇ ಆಗುತ್ತದೆ.

**ಉಳಿವು :** ಅನೇಕ ರೀತಿಯ ಕರ್ಮಗಳನ್ನು ಮಾಡಿ ನಿರಂತರವಾಗಿ ಪುನರ್ಜನ್ಮಗಳನ್ನು ಪಡೆಯುತ್ತಾ ಸಂಸಾರದಲ್ಲೆ ಉಳಿಯುವುದು. (೮:೧೪೮೭)

**ಊರ್ಧ್ವಕುಂಡಲಿ :** ಮೂಲಾಧಾರದಲ್ಲಿ ಸುಪ್ತವಾಗಿರುವ ಕುಂಡಲಿಯನ್ನು ಎಬ್ಬಿಸಿ, ಅನುಕ್ರಮವಾಗಿ ಸ್ವಾಧಿಷ್ಠಾನ, ಇತ್ಯಾದಿ ಚಕ್ರಗಳ ಮೂಲಕ ಹಾದು ಹೋಗುವಂತೆ ಮಾಡಿ, ಕೊನೆಯಲ್ಲಿ ಅದು ಸಹಸ್ರಾರದಲ್ಲಿರುವ ಶೂನ್ಯಲಿಂಗವನ್ನು ಬೆರೆಸುವಂತೆ ಮಾಡಿದರೆ, ಅದಕ್ಕೆ ಅಲ್ಲಿರುವ ಅಮೃತ ಸಿಕ್ಕುತ್ತದೆ. ಸಹಸ್ರಾರವೇ ಅಥವಾ ಬ್ರಹ್ಮರಂಧ್ರವೇ ಊರ್ಧ್ವಕುಂಡಲಿ. (೧೦:೧೯೫)

**ಊರ್ಧ್ವದ್ವಾರ :** ಮನುಷ್ಯನ ಬೆನ್ನುಹುರಿಯ ಒಳಭಾಗದಲ್ಲಿ ಚಕ್ರಗಳಿವೆ ಎಂಬ ತಾಂತ್ರಿಕರ ಅಭಿಮತವನ್ನು ವಚನಕಾರರೂ ಒಪ್ಪಿಕೊಂಡಿದ್ದಾರೆ. ಅತ್ಯಂತ ಕೆಳಭಾಗದಲ್ಲಿರುವ (ಅಂದರೆ ಗುದಸ್ಥಾನದಲ್ಲಿರುವ) ಕುಂಡಲಿಯನ್ನು ಜಾಗೃತಗೊಳಿಸಿ ಅದನ್ನು ಬೆನ್ನುಹುರಿಯಲ್ಲಿರುವ ಚಕ್ರಗಳ ಮೂಲಕ ಹಾಯ್ದು ಹೋಗುವಂತೆ ಮಾಡಿ, ಕೊನೆಗೆ ತಲೆಯಲ್ಲಿರುವ ಸಹಸ್ರಾರ ಚಕ್ರವನ್ನು ಮುಟ್ಟುವಂತೆ ಮಾಡಬೇಕು. ಇದು ತಾಂತ್ರಿಕರ ಪ್ರಕಾರ, ಆಧ್ಯಾತ್ಮಿಕ ಜೀವನದ ಪರಮ ಗುರಿ. ಅದನ್ನೇ ವಚನಕಾರರು ಹೀಗೆ ಹೇಳುತ್ತಾರೆ : ಗುದಸ್ಥಾನದಲ್ಲಿರುವ ಮೂಲಾಧಾರ ಚಕ್ರದಲ್ಲಿರುವ ಆಚಾರಲಿಂಗದಲ್ಲಿ ಭಕ್ತನು ಐಕ್ಯವಾಗಬೇಕು; ಇನ್ನೂ ಮೇಲಿನ ಚಕ್ರಗಳಲ್ಲಿರುವ ಗುರುಲಿಂಗ, ಪ್ರಸಾದಲಿಂಗ ಮುಂತಾದ ಲಿಂಗಗಳನ್ನು ಸಾಧಿಸಿ, ಕೊನೆಯಲ್ಲಿ ಆರನೆಯ ಮಹಾಲಿಂಗವನ್ನೂ ದಾಟಿ, ತಲೆಯಲ್ಲಿರುವ ಶೂನ್ಯಲಿಂಗವನ್ನು ಮುಟ್ಟಬೇಕು. ಇದೇ ಆಧ್ಯಾತ್ಮಿಕ ಜೀವನದ ಪರಮ ಗುರಿ. ತಲೆಯಲ್ಲಿರುವ ಬ್ರಹ್ಮರಂಧ್ರವೇ ನಿಜವಾದ (ಹಾಗೂ ಅತ್ಯುನ್ನತ) ಊರ್ಧ್ವದ್ವಾರ. (೯:೨೬೯)

**ಊರ್ಧ್ವಪಥ :** ಬೆನ್ನುಹುರಿಯ ತಳದಲ್ಲಿ ಆಧಾರಚಕ್ರವಿದೆ. ಅದರಲ್ಲಿರುವ ಆಚಾರಲಿಂಗವನ್ನು ಕುಂಡಲಿಯು ಸುತ್ತುವರಿದಿದೆ. ಯೋಗದ ಮೂಲಕ ಆ ಕುಂಡಲಿಯನ್ನು ಜಾಗೃತಗೊಳಿಸಿ, ಮೇಲ್ಮುಖವಾಗಿ ಸಾಗಿ ಸಹಸ್ರಾರದಲ್ಲಿರುವ ಶೂನ್ಯಲಿಂಗವನ್ನು ತಲುಪುವ ದಾರಿಯೇ

ಊರ್ಧ್ವಪಥ. ಈ ಪಥದಲ್ಲಿ ಸ್ವಾಧಿಷ್ಠಾನ, ವಿಶುದ್ಧಿ, ಮಣಿಪೂರಕ, ಅನಾಹತ, ಆಜ್ಞಾ ಚಕ್ರಗಳಿವೆ. (೭:೬೮೩)

**ಊರ್ಧ್ವಮಾಯಾ :** ಪರಶಿವನಲ್ಲಿ ಅವಿನಾಭಾವದಿಂದ ಬೆರೆತಿರುವ ಶಕ್ತಿ ಅಥವಾ ಮಾಯೆಯು ಸೃಷ್ಟಿಯ ಸಮಯದಲ್ಲಿ ಎರಡು ಭಾಗವಾಗುತ್ತದೆ. ಅಂಗಸ್ಥಲದ ಜೊತೆಗಿರುವ ಶಕ್ತಿಗೆ ಭಕ್ತಿ ಅಥವಾ ಭಕ್ತಿಶಕ್ತಿಯೆಂದೂ, ಲಿಂಗಸ್ಥಲದ ಜೊತೆಗಿರುವ ಶಕ್ತಿಗೆ ಶಕ್ತಿ ಅಥವಾ ಕಲಾಶಕ್ತಿಯೆಂದೂ ಹೆಸರು. ಅಂಗನು ತನ್ನ ಭಕ್ತಿಶಕ್ತಿಯ ಸಹಾಯದಿಂದ ಮೇಲಕ್ಕೆ ಅಂದರೆ, ಪರಶಿವನ ಕಡೆಗೆ ಹೋಗಲು ಸಾಧ್ಯವಾಗುತ್ತದೆ. ಆದುದರಿಂದ ಭಕ್ತಿಶಕ್ತಿಯನ್ನು ಊರ್ಧ್ವಮಾಯಾ ಎಂದು ಕರೆಯಲಾಗುತ್ತದೆ.

**ಊರ್ಧ್ವಮುಖದ ಶಿವಾಲಯದೊಳಗಿರುವ ಮಹಾದೇವರು :** ಸಹಸ್ರಾರ ಅಥವಾ ಬ್ರಹ್ಮರಂಧ್ರದಲ್ಲಿರುವ ಪರಶಿವ. (೭:೪೩೬)

**ಊರ್ಧ್ವರೇತ ಶಿವ :** ಜಗತ್ತನ್ನು ಹುಟ್ಟಿಸಿದ ಶಿವನನ್ನು ಸಾಂಕೇತಿಕವಾಗಿ ಊರ್ಧ್ವಲಿಂಗವೆಂದೂ, ಸೃಷ್ಟಿಗೆ ಕಾರಣನಾದ ಅವನ ಶಕ್ತಿಯನ್ನು ಸಾಂಕೇತಿಕವಾಗಿ ರೇತಸ್ ಎಂದೂ ಕರೆಯಲಾಗಿದ್ದು, ಸೃಷ್ಟಿಮಾಡಬೇಕೆಂದು ನಿರ್ಧರಿಸಿದ ಶಿವನನ್ನು ಸಾಂಕೇತಿಕವಾಗಿ ಊರ್ಧ್ವರೇತ ಶಿವ ಎಂದು ಕರೆಯಲಾಗುತ್ತದೆ. (೮:೫೪೨)

**ಊರ್ಧ್ವಲೋಕ :** ಲೋಕಗಳು ಒಟ್ಟು ಹದಿನಾಲ್ಕು ಇದ್ದು, ಅವುಗಳಲ್ಲಿ ಏಳನ್ನು ಊರ್ಧ್ವಲೋಕಗಳೆಂದೂ, ಉಳಿದ ಏಳನ್ನು ಅಧೋಲೋಕಗಳೆಂದೂ ಕರೆಯಲಾಗಿದೆ. ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನರ್ಲೋಕ, ತಪರ್ಲೋಕ, ಸತ್ಯಲೋಕ ಇವೇ ಊರ್ಧ್ವಲೋಕಗಳು. ಇಡೀ ವಿಶ್ವವೇ ಮನುಷ್ಯನಲ್ಲಿ ಇರುವುದರಿಂದ ಅವನನ್ನು ಪಿಂಡಾಂಡವೆನ್ನಲಾಗುತ್ತದೆ. ಈ ಅರ್ಥದಲ್ಲಿ ಅವನಲ್ಲಿಯೇ ಹದಿನಾಲ್ಕು ಲೋಕಗಳುವೆ. ನಾಭಿ, ಕುಕ್ಷಿ, ಹೃದಯ, ವಕ್ಷ, ಕಂಠ, ಹಣೆ, ತಲೆ, ಇವು ಕ್ರಮವಾಗಿ ಮೇಲೆ ಹೇಳಿದ ಏಳು ಊರ್ಧ್ವಲೋಕಗಳ ಸ್ಥಾನಗಳೆನಿಸಿವೆ.

**ಎಂಜಲ ಸೂತಕ ನಿರಸನ :** ಒಬ್ಬರ ಎಂಜಲನ್ನು ಮತ್ತೊಬ್ಬರು ತಿನ್ನಬಾರದು, ಹಾಗೆ ತಿಂದರೆ ಅದು ಎಂಜಲ ಸೂತಕ ಎಂಬುದು ಹಿಂದೂ ಸಾಮಾಜಿಕ ನಿಯಮ. ಲಿಂಗಾಯತರು ಇದನ್ನು ಆಚರಿಸಬಾರದೆಂಬುದಕ್ಕೆ ವಿವರ :

ಪ್ರತಿಯೊಂದು ವಸ್ತುವೂ ಶಿವನ ಪ್ರಸಾದವೆಂದು ಪರಿಗಣಿಸಿದರೆ ಅಲ್ಲಿ ಎಂಜಲೆಂಬ ಭಾವವೇ ಇರುವುದಿಲ್ಲ. ನಮ್ಮ ಇಂದ್ರಿಯಗಳೂ, ರೂಪರಸಾದಿ ಇಂದ್ರಿಯ ವಿಷಯಗಳೂ, ಅಂತಃಕರಣ ಚತುಷ್ಟಯಗಳೂ, ಪರಶಿವನ ಪ್ರಸಾದ ಎಂಬ ಭಾವದಿಂದ ನೋಡಿದರೆ ಎಂಜಲೆಂಬ ಭಾವಕ್ಕೆ ಎಡೆಯೇ ಇರುವುದಿಲ್ಲ. ಹಾಗೆ ಭಾವಿಸುವುದೇ ಎಂಜಲಸೂತಕ ನಿರಸನ. (೧೪:೨೪೮೯)

**ಎರಡಳಿದ ಏಕರಸ :** ಅನುಭಾವದಲ್ಲಿ ಅಂಗವು ಲಿಂಗದಲ್ಲಿ ಒಂದಾಗಿ, ತಾನು ಬೇರೆ ಲಿಂಗ (ಪರಶಿವ) ಬೇರೆ ಎಂಬ ಭಿನ್ನಭಾವವನ್ನು ಕಳೆದುಕೊಳ್ಳುತ್ತದೆ. ವಾಸ್ತವಿಕವಾಗಿ ಆ ಸಮಯದಲ್ಲಿ ತಾನು ಮತ್ತು ಲಿಂಗ ಒಂದೇ ಎಂಬ ಅದ್ವೈತ ಭಾವ ಬರದಿದ್ದರೂ, ಜಾಗೃತ ಸ್ಥಿತಿಗೆ ಬಂದ ನಂತರ ತಾನು ಲಿಂಗದಲ್ಲೇ ಇದ್ದೆನೆಂದು ಅಂಗನಿಗೆ ಅನಿಸುತ್ತದೆ. ಈ ರೀತಿಯ ಅನುಭವಗಳು ಅವನಿಗೆ ಪದೇ ಪದೇ ಆದರೆ ಅವನಿಗೆ ಜಾಗೃತ ಸ್ಥಿತಿಯಲ್ಲೂ ಅನುಭಾವದ ಸ್ಥಿತಿಯಲ್ಲೂ ಅದ್ವೈತ ಸ್ಥಿತಿಯೇ ಉಂಟಾಗಿ, ತಾನೆಂಬ ಅಂಗ (ಅಂಶ) ಭಾವ ಹೋಗಿ ಲಿಂಗ (ಪೂರ್ಣ) ಭಾವ ಮಾತ್ರ ಉಳಿಯುತ್ತದೆ. ಅಗ್ನಿ ತಾಗಿದ ಕರ್ಪೂರವು ಇಲ್ಲವಾದರೂ, ಅದನ್ನು ಇಲ್ಲವಾಗಿಸಿದ ಅಗ್ನಿ ಇರುತ್ತದೆ; ಸಮುದ್ರವನ್ನು ಸೇರಿದ ನದಿಗೆ ಪ್ರತ್ಯೇಕವಾದ ಅಸ್ತಿತ್ವ ಇಲ್ಲವಾದರೂ, ನದಿಯನ್ನು ಒಳಗೊಂಡ ಸಮುದ್ರಕ್ಕೆ ಅಸ್ತಿತ್ವ ಇರುತ್ತದೆ. ಹಾಗೆಯೇ, ಅಂಗತ್ವವು ಇಲ್ಲವಾಗಿ, 'ಲಿಂಗತ್ವ ಮಾತ್ರ ಇರುತ್ತದೆ. ಹೀಗೆ ಲಿಂಗ ಎಂಬ ರಸದಲ್ಲಿ ಅಂಗ ಎಂಬ ರಸ ಐಕ್ಯವಾಗುವುದೇ ಎರಡಿಲ್ಲದ ಏಕರಸ (೧೦:೬೬೫).

**ಏಕಚಿತ್ತ ಮನೋಭಾವಿ :** ಲಿಂಗದೀಕ್ಷೆಯನ್ನು ಪಡೆದನಂತರ ಸಾಧಕನು ಲಿಂಗದಲ್ಲಿ ವಿಶ್ವಾಸವನ್ನು ನಿಷ್ಠೆಯನ್ನೂ ತೋರಿಸಬೇಕು. ಇಂಥ ಸಾಧಕನೇ ಏಕಚಿತ್ತಮನೋಭಾವಿ. ಇವನಿಗೆ ಮುಖ್ಯವಾದ ಎರಡು ಗುಣಗಳಿರಬೇಕು. ೧). ಲಿಂಗಪ್ರೇಮಿಯಾದ ಬಳಿಕ ವ್ಯಾವಹಾರಿಕ ವಿಷಯಗಳ ಭ್ರಾಂತಿಯಿಲ್ಲದಿರಬೇಕು. ೨). ಲಿಂಗವನ್ನು ಮಾತ್ರ ನೆನೆಯಬೇಕು. ಅನ್ಯದೈವ ಪೂಜೆ ವರ್ಜ್ಯ (೧೧:೩೩೩).

**ಏಕಭಾವ :** ಜ್ಞಾನ ಮತ್ತು ಅದಕ್ಕೆ ತಕ್ಕ ಕ್ರಿಯೆಗಳಲ್ಲಿ ವ್ಯತ್ಯಾಸವಿಲ್ಲದೆ ಒಂದೆಯಾಗಿರುವುದು. "ಅಂತರಂಗದಲ್ಲಿ ಜ್ಞಾನ, ಬಹಿರಂಗದಲ್ಲಿ ಕ್ರಿಯೋಪಚಾರಯಿರುತ್ತಿರಲಾಗಿ ಏಕಭಾವನೆನಿಸಿಕೊಂಬುದಯ್ಯಾ''. ಇದು ಪ್ರಾಣಲಿಂಗಿಗೆ ಸಾಧ್ಯ. ಏಕೆಂದರೆ, ಜ್ಞಾನವಿಲ್ಲದೆ ಕ್ರಿಯೆಯನ್ನು ಆಚರಿಸಿದರೆ ಪ್ರಯೋಜನವಿಲ್ಲ, ಅದೇ ರೀತಿ ಕ್ರಿಯೆಯಿಲ್ಲದೆ ಬರಿ ಜ್ಞಾನದಿಂದಲೂ ಪ್ರಯೋಜನವಿಲ್ಲ. (೧೧:೨೪೫)

**ಏಕಮಯವಸ್ತು :** ವಚನಕಾರರ ಪ್ರಕಾರ ಚಿನ್ಮಯ ವಸ್ತುವೇ ಪ್ರಪಂಚವಾಗಿ ಮಾರ್ಪಟ್ಟಿದೆ. ಈ ದೃಷ್ಟಿಯಿಂದ ನೋಡಿದಾಗ ಪಂಚಭೂತಗಳಿಂದ ಮಾಡಲ್ಪಟ್ಟ ವಸ್ತುಗಳೆಲ್ಲದರಲ್ಲಿಯೂ ಒಂದೇ ವಸ್ತು (ಪರವಸ್ತು) ಇದೆ. ಅಥವಾ ಏಕಮಯವಸ್ತುವಿಗೆ ಪಂಚಭೂತಗಳಿಂದಾದ ವಸ್ತುಗಳು ಕೇವಲ ನಾಮರೂಪಗಳು. (೯:೧೩೬)

**ಏಕಮುಖದಲ್ಲಿ ನಿರವಯ ಜಪ :** ಭಕ್ತಸ್ಥಲದ ಸಾಧಕನು ಪರಶಿವನನ್ನು ಕುರಿತು ಜಪಿಸುವಾಗ ತಾನು ಮತ್ತು ಪರಶಿವ ಎಂಬ ದ್ವೈತವಿರುತ್ತದೆ. ಆದರೆ ಅವನು ಐಕ್ಯಸ್ಥಿತಿಯನ್ನು ಮುಟ್ಟಿದಾಗ ಈ ಭೇದ ಇಲ್ಲವಾಗಿ ಅವನು ಯಾವಾಗಲೂ ಏಕಾಗ್ರ ಚಿತ್ತನಾಗಿ ಪರಶಿವನನ್ನು ಜಪಿಸುತ್ತಾನೆ (೮:೨೯).

**ಏಕವಸ್ತು ಉಭಯ ಭೇದವಾಗುವುದು :** ಸೃಷ್ಟಿಯ ಸಮಯದಲ್ಲಿ ಶೂನ್ಯ ಎಂಬ ಒಂದೇ ಚಿದ್ವಸ್ತು ಇರುತ್ತದೆ. ಆ ಚಿದ್ವಸ್ತುವಿನ ನೆನಹಿನಿಂದಾಗಿ ಅದರಲ್ಲಿ (ಪರಶಿವನಲ್ಲಿ) ಸೃಷ್ಟಿಮಾಡಬೇಕೆಂಬ ಇಚ್ಛೆ ಉಂಟಾಗುತ್ತದೆ. ಆ ಇಚ್ಛೆ ಉಂಟಾದ ಕೂಡಲೇ ಆ ಏಕ ವಸ್ತು ಪೂಜ್ಯ ಮತ್ತು ಪೂಜಕ (ಲಿಂಗಸ್ಥಲ ಮತ್ತು ಅಂಗಸ್ಥಲ) ಎಂಬ ಎರಡು ಭೇದವುಳ್ಳ ವಸ್ತುಗಳಾಗುವುದು. (೮:೩೦)

**ಏಕಸ್ಥಲದಾಟ :** ಮನನಷ್ಟವಾದ ಮೇಲೆ ನಾನು - ಅದು, (ಜ್ಞಾತೃ-ಜ್ಞೇಯ) ಎಂಬ ದ್ವೈತ ಹೋಗಿ ಕೊನೆಯಲ್ಲಿ ಪರಶಿವ ಎಂಬ ಒಂದೇ ಭಾವ ಉಳಿದಾಗ, ಅಂಥ ಸ್ಥಿತಿ ಏಕಸ್ಥಲವೆನಿಸಿಕೊಳ್ಳುವುದು. (೭:೧೧೩೬)

**ಏಕಾಗ್ರಚಿತ್ತ ದೀಕ್ಷೆ :** ಆಧ್ಯಾತ್ಮಿಕ ಸಾಧನೆಯಿಂದಾಗಿ, ಎಲ್ಲವನ್ನೂ ಲಿಂಗಕ್ಕೆ ಅರ್ಪಿಸಿ, ಯಾವ ಆಸೆಗಳೂ ಇಲ್ಲದೆ, ಆತ್ಮ ಶುದ್ಧಿಯಾದಾಗ, ಚಿತ್ತವು ಶಿವನನ್ನು ಬಿಟ್ಟು ಮತ್ತೇನನ್ನೂ ಧ್ಯಾನಿಸುವುದಿಲ್ಲ. ಹೀಗೆ ಚಿತ್ತವು ಯಾವಾಗಲೂ ಒಂದನ್ನೇ ಕುರಿತು ಧ್ಯಾನಿಸುತ್ತಿರುವುದೇ ಏಕಾಗ್ರಚಿತ್ತ ದೀಕ್ಷೆ. (೧೦:೪೯)

**ಏಕಾರ್ಥ:** ಅನೇಕತೆಯಲ್ಲಿ ಏಕ ತತ್ವವಿದ್ದಾಗ, ಏಕಾರ್ಥವಾಗುತ್ತದೆ. ಅನೇಕ ಇಂದ್ರಿಯಗಳು ಏಕಾರ್ಥವಾಗಬೇಕು, ಅಥವಾ ಕೂಡಲ ಚೆನ್ನಸಂಗಯ್ಯನಲ್ಲಿ ಏಕಾರ್ಥವಾಗಬೇಕು ಎಂದಾಗ, ವಿವಿಧ ಇಂದ್ರಿಯಗಳು ಒಬ್ಬನಲ್ಲಿ (ಪರಶಿವನಲ್ಲಿ) ಒಂದಾಗಬೇಕು ಎಂದರ್ಥವಾಗುತ್ತದೆ.

**ಏಕಾದಶ ಆಚಾರ :** (ನೋಡಿ : **ಏಕಾದಶವರ್ಮ**)

**ಏಕಾದಶ ಪ್ರಸಾದ :**

| | | | |
|---|---|---|---|
| ೧. | ಗುರುಪ್ರಸಾದ | : | ಗುರುಮುಖದಿಂದ ಬಂದ ಪ್ರಸಾದ. |
| ೨. | ಲಿಂಗ ಪ್ರಸಾದ | : | ಗುರುಪ್ರಸಾದವನ್ನು ಲಿಂಗಕ್ಕೆ ಅರ್ಪಿಸುವುದು. |
| ೩. | ಜಂಗಮ ಪ್ರಸಾದ | : | ಗುರುಪ್ರಸಾದವನ್ನು ಜಂಗಮಕ್ಕೆ ಅರ್ಪಿಸುವುದು. |
| ೪. | ಪ್ರಸಾದಿಯ ಪ್ರಸಾದ | : | ಆ ಪ್ರಸಾದವನ್ನು ಭಕ್ತ ಸ್ವೀಕರಿಸುವುದು. |
| ೫. | ಸಮಯ ಪ್ರಸಾದ | : | ಗುರುಲಿಂಗ ಜಂಗಮವನ್ನು ಕಂಡು, ಆ ಸಮಯದಲ್ಲಿ ಸ್ವೀಕರಿಸುವುದು. |
| ೬. | ಪಂಚೇಂದ್ರಿಯ ವಿರಹಿತ ಪ್ರಸಾದ | : | ಪಂಚೇಂದ್ರಿಯಗಳಲ್ಲಿ ಪಂಚಲಿಂಗಗಳನ್ನು ಸ್ಥಾಪಿಸಿ, ಪಂಚೇಂದ್ರಿಯ ವಿಷಯಗಳನ್ನು (ರೂಪರಸ ಇತ್ಯಾದಿಗಳನ್ನು) ಅವುಗಳಿಗೆ ಅರ್ಪಿಸುವುದು. |

೭. ಅಂತಃಕರಣ ವಿರಹಿತ ಪ್ರಸಾದಿ : ಅಹಂಕಾರದಲ್ಲಿ ಶಿವಚಿಂತನೆಯುಳ್ಳವನಾಗಿ, ಮನಸ್ಸನ್ನೇ ಲಿಂಗವನ್ನಾಗಿ ಮಾಡಿಕೊಂಡು, ಚಿತ್ತದಿಂದ ದಾಸೋಹಮಾಡುವುದು.

೮. ಸದ್ಭಾವ ಪ್ರಸಾದ : ತ್ರಿವಿಧ ಅಂಗಗಳಲ್ಲಿ ತ್ರಿವಿಧ ಲಿಂಗವನ್ನು ಪ್ರತಿಷ್ಠಾಪಿಸಿ, ತಾನೇ ಚಿದ್ಘನನೆಂದು ಭಾವಿಸಿ ಅರ್ಪಿಸುವುದು.

೯. ಸಮತಾಪ್ರಸಾದ : ಲೌಕಿಕವನ್ನು ತ್ಯಜಿಸಿ, ಸುಖದುಃಖಗಳನ್ನು ಸಮಾನವೆಂದು ಪರಿಗಣಿಸಿ ಅದನ್ನು ಅರ್ಪಿಸುವುದು.

೧೦. ಗುರುವಿನ ಪ್ರಸನ್ನತೆಯೇ ಜ್ಞಾನಪ್ರಸಾದ.

೧೧. ಅಪೇಕ್ಷೆಯಿಂದ ಸಲಿಸುವುದು ಆಪ್ಯಾಯನ ಪ್ರಸಾದ. (೫:೧೧೦೪)

**ಏಕಾದಶವರ್ಮ ( ಹನ್ನೊಂದು ರಹಸ್ಯಗಳು) :** ಇಲ್ಲಿ ವರ್ಮ (ಮರ್ಮ) ಎಂಬ ಪದವು ಶೂನ್ಯಸಂಪಾದನೆಯ ರಹಸ್ಯವನ್ನು ಸೂಚಿಸುತ್ತದೆ. ಈ ಪದವಿಯನ್ನು ಪಡೆಯಲು ನಾವು ಹನ್ನೊಂದು ರೀತಿಯ ಆಚಾರಗಳನ್ನು ಪಾಲಿಸಬೇಕಾಗುತ್ತದೆ. ಈ ಆಚಾರಗಳು ಎಲ್ಲರಿಗೂ ಗೊತ್ತಿಲ್ಲವಾದುದರಿಂದ, ಮೋಕ್ಷಾರ್ಥಿಯು ಅವುಗಳ ರಹಸ್ಯವನ್ನು ಸಮರ್ಥ ಗುರುವಿನಿಂದ ಕಲಿಯಬೇಕಾಗುತ್ತದೆ. ಈ ಹನ್ನೊಂದು ಆಚಾರಗಳ ವಿವರಗಳು ಹೀಗಿವೆ :

೧. ಲಿಂಗಾಚಾರ : ಗುರು, ದೀಕ್ಷೆಯಲ್ಲಿ ಕೊಟ್ಟ ಲಿಂಗವನ್ನಲ್ಲದೆ ಅನ್ಯದೈವಗಳನ್ನು ಕಾಯಾ, ವಾಚಾ, ಮನಸಾ ಅರ್ಚಿಸದಿರುವುದೇ ಲಿಂಗಾಚಾರ.

೨. ಸದಾಚಾರ : ಸಾಧಕನು ಲಿಂಗಾಚಾರವನ್ನೂ ಅಲ್ಲದೆ, ಅದಕ್ಕೆ ಪೂರಕವಾಗಿ ನೈತಿಕ ಆಚಾರಗಳನ್ನೂ (ಸದಾಚಾರವನ್ನೂ) ಪಾಲಿಸಬೇಕು. ಸಾಧಕನು ಭಕ್ತಸ್ಥಲದಲ್ಲಿದ್ದರೆ, ಸತ್ಯಶುದ್ಧ ಕಾಯಕ ಮಾಡಿ, ದಾಸೋಹ ಮಾಡಬೇಕು; ಅವನು ಮಹೇಶ ಸ್ಥಲದಲ್ಲಿದ್ದರೆ, ಸತ್ಯಶುದ್ಧ ಭಿಕ್ಷೆ ಮಾಡಿ. ದಾಸೋಹ ಮಾಡಬೇಕು; ಅಂತೂ ದಾಸೋಹ ಸಾಧಕನ ಕರ್ತವ್ಯ. ಸಮಸ್ತ ಪ್ರಾಣಿಗಳ ಹಿತಾರ್ಥವಾಗಿ ದಾಸೋಹ ಮಾಡಬೇಕೇ ಹೊರತು, ಆಡಂಬರಕ್ಕಲ್ಲ. ಅಲ್ಲದೆ ಬೇರೆಯವರ ಹಸಿವು-ತೃಷೆಗಳನ್ನು ಗಮನಿಸಿ ದಾಸೋಹ ಮಾಡಬೇಕೇ ಹೊರತು, ಅಪಾತ್ರರಿಗೆ ದಾಸೋಹ ಮಾಡಬಾರದು. ಇಷ್ಟೆಲ್ಲ ಸದಾಚಾರವೆನಿಸಿಕೊಳ್ಳುತ್ತದೆ.

೩.ಶಿವಾಚಾರ : ನೈತಿಕ ಕ್ರಿಯೆ ಶಿವಾಚಾರವನ್ನೂ ಒಳಗೊಳ್ಳುತ್ತದೆ. ಗುರು ಹೇಳಿದಂತೆ ನಡೆದುಕೊಳ್ಳುವ ಶಿವಭಕ್ತರು ನಮ್ಮವರೆಂಬ ಅಭಿಮಾನದಿಂದ, ಅವರಿಗೆ ತನು ಮನ ಧನಗಳನ್ನು ಅರ್ಪಿಸಬೇಕು. ಆಗ ಅವರು ಲಾಂಛನಧಾರಿಗಳೆಂಬುದನ್ನು ನೋಡಬೇಕೇ ಹೊರತು, ಅವರ ಗುಣಾವಗುಣವನ್ನಲ್ಲ. ವಾಸ್ತವವಾಗಿ ಅವರೆಲ್ಲರೂ ·ಗುರುಮಾರ್ಗಾಚಾರದಲ್ಲಿ ನಿಂದ·ವರೇ ಆದುದರಿಂದ ಅವರ ಗುಣಾವಗುಣಗಳ ಪರೀಕ್ಷೆ ಅನಗತ್ಯ.

೪. ಗಣಾಚಾರ : ಶಿವಗಣಗಳ (ಶಿವಭಕ್ತರ) ಅಥವಾ ಅಷ್ಟಾವರಣಗಳ ನಿಂದೆಯು ಕೇಳಿ ಬಂದರೆ, ಗಣಸಮೇತ ಆ ಸ್ಥಳವನ್ನು ಬಿಟ್ಟು ಬೇರೆ ಕಡೆಗೆ ಹೋಗುವುದೇ ಗಣಾಚಾರ. (ಕೆಲವರು ಶಿವಭಕ್ತರನ್ನೂ ಶಿವಧರ್ಮವನ್ನೂ ನಿಂದಿಸುವವರ ಕೊಲ್ಲಬೇಕು ಎಂಬುದೇ ಗಣಾಚಾರ ಎನ್ನುತ್ತಾರೆ).

೫. ಭೃತ್ಯಾಚಾರ : ಭೃತ್ಯನೆಂದರೆ ಸೇವಕ. ನಿಜವಾದ ವೀರಶೈವನು ಗುರು ಮತ್ತು ಜಂಗಮರನ್ನು ಭೃತ್ಯರಂತೆ ಸೇವೆ ಮಾಡಬೇಕು. ಜಾತಿ, ಆಶ್ರಮ, ಕುಲ, ಗೋತ್ರ ಮುಂತಾದವುಗಳನ್ನು ಲೆಕ್ಕಿಸದೆ ಗುರುವಿನಿಂದ ಇಷ್ಟಲಿಂಗವನ್ನು ಪಡೆದು, ಭಕ್ತಿ, ಜ್ಞಾನ, ವೈರಾಗ್ಯಗಳಿಂದ ಅಷ್ಟಾವರಣ ಮತ್ತು ಷಟ್‌ಸ್ಥಲಗಳನ್ನಾಚರಿಸುವ ಶಿವಭಕ್ತರನ್ನು ಭಕ್ತಿಗೌರವಗಳಿಂದ ಆದರಿಸಿ, ಅವರಿದ್ದಲ್ಲಿಗೇ ಹೋಗಿ ತನುಮನಧನಗಳನ್ನರ್ಪಿಸುವುದು ಭೃತ್ಯಾಚಾರ.

೬. ಕ್ರಿಯಾಚಾರ : ಕ್ರಿಯಾಚಾರದಲ್ಲಿ ಅನೇಕ ರೀತಿಯ ಧಾರ್ಮಿಕ ಕ್ರಿಯೆಗಳು ಅಡಕವಾಗಿವೆ. ಇವುಗಳಲ್ಲಿ ಮುಖ್ಯವಾದುವೆಂದರೆ : ದೀಕ್ಷಾಗುರು, ಶಿಕ್ಷಾಗುರು ಮತ್ತು ಜ್ಞಾನಗುರುಗಳಿಂದ ಪೂಜೆ ಹೇಗೆ ಮಾಡಬೇಕು, ಮಂತ್ರವನ್ನು ಹೇಗೆ, ಯಾವಾಗ, ಉಚ್ಚರಿಸಬೇಕು ಮುಂತಾದವುಗಳನ್ನು ಕಲಿತು, ಅದರಂತೆ ಆಚರಿಸಬೇಕು; ದೈಹಿಕ ಶುಚಿಯನ್ನು ಆಚರಿಸಿ, ಸಾಕಾರ ಮತ್ತು ನಿರಾಕಾರ ಅರ್ಚನೆ ಮಾಡುವುದನ್ನು ಕಲಿತು, ಅದರಂತೆ ಆಚರಿಸಬೇಕು.

೭. ಜ್ಞಾನಾಚಾರ : ಕ್ರಿಯಾಚಾರದಿಂದ ದೈಹಿಕ ಮತ್ತು ಮಾನಸಿಕ ಶುದ್ಧಿಯನ್ನು ಪಡೆದ ನಂತರ ಸಾಧಕನು ಜ್ಞಾನವನ್ನು ಪಡೆಯಲು ಪ್ರಯತ್ನಿಸಬೇಕು. ಈ ಪ್ರಯತ್ನವು ಜ್ಞಾನಾಚಾರವೆನ್ನಿಸಿಕೊಳ್ಳುತ್ತದೆ. ಇದರಲ್ಲಿ ಮುಖ್ಯವಾದುವೆಂದರೆ : ಗುರುಹಿರಿಯರಲ್ಲಿ ಅಹಂಕಾರದಿಂದ ವರ್ತಿಸಬಾರದು; ಕುಂದು-ನಿಂದೆ, ಹಾಸ್ಯ-ರೋಷಗಳನ್ನು ವರ್ಜಿಸಬೇಕು. ಪಾತಕರ ದರ್ಶನ, ಸ್ಪರ್ಶನ, ಸಹಭೋಜನ, ಸಹವಾಸವನ್ನು ವರ್ಜಿಸಬೇಕು. ವಚನಗಳಲ್ಲಿ ಹೇಳಿರುವಂತೆ ನಡೆದುಕೊಳ್ಳಬೇಕು.

೮. ಭಾವಾಚಾರ : ಭಾವಾಚಾರವೆಂದರೆ ನಮ್ಮ ಭಾವ (ಅಂತರಂಗ)ವನ್ನು ನಾವೇ ಪರೀಕ್ಷೆ ಮಾಡಿಕೊಳ್ಳುವುದು. ತನು ವಿಕಾರದಿಂದ ಉಂಟಾದ ಕಾಮಕ್ರೋಧ ಲೋಭಮೋಹಮದ ಮಾತ್ಸರ್ಯಗಳನ್ನು ವರ್ಜಿಸಬೇಕು ಭವಿಜೀನಸವನ್ನು ಬಿಡಬೇಕು; ಯಾವುದು ಒಳ್ಳೆಯದು, ಯಾವುದು ಕೆಟ್ಟದು ಎಂಬುದನ್ನು ನಾವೇ ನಮ್ಮ ಸ್ವಂತ ವಿವೇಚನೆಯಿಂದ ನಿರ್ಧರಿಸಿ, ದುರ್ಗುಣವ ತ್ಯಜಿಸಿ, ಸದ್ಗುಣವ ಹಿಡಿದು, ಬಿಡದಿಪ್ಪುದೇ ಭಾವಾಚಾರ'.

೯. ಸತ್ಯಾಚಾರ : ಸತ್ಯಾಚಾರವೆಂದರೆ, ಸತ್ಯವಚನ. ಅತ್ಯಾಸೆಯಿಂದ ಹುಸಿಯನುಡಿಯದೆ, ಸತ್ಯವನ್ನೇ ನುಡಿಯಬೇಕೆಂಬುದು; ನುಡಿದ ಮೇಲೆ, ಅದರಂತೆ ನಡೆಯಬೇಕೆಂಬುದು; ವಚನ ಕೊಟ್ಟಮೇಲೆ ವಚನಕ್ಕೆ ತಪ್ಪದಿರುವುದು ಸತ್ಯಾಚಾರವೆನಿಸಿಕೊಳ್ಳುತ್ತದೆ.

೧೦. ನಿತ್ಯಾಚಾರ : ಕಾಮನ ಬಾಧೆಗೊಳಗಾಗಿ ಅನೈತಿಕವಾಗಿ ವರ್ತಿಸದೆ, ಮಡಿ ಮೈಲಿಗೆ ಮುಂತಾದವುಗಳನ್ನು ಆಚರಿಸದೆ, ಬಂದುದೆಲ್ಲವೂ ಪ್ರಸಾದವೆಂದು ತಿಳಿದು, ಆ ಪ್ರಸಾದ ಭೋಗದಲ್ಲಿ ಲೋಲುಪ್ತನಾಗಿರುವುದೇ ನಿತ್ಯಾಚಾರ.

೧೧. ಧರ್ಮಾಚಾರ : ಯಾವುದೇ ಪರಿಸ್ಥಿತಿಯಲ್ಲಿ ದಶವಿಧ ಪಾದೋದಕದ ಆಚರಣೆ, ಏಕಾದಶ ಪ್ರಸಾದದ ಆಚರಣೆ ಮತ್ತು ಮೂವತ್ತಾರು ಪ್ರಣವಗಳ ಆಚರಣೆ ಇವುಗಳನ್ನು ಧರ್ಮಾಚಾರ ಒಳಗೊಳ್ಳುತ್ತದೆ.

ಇದೆಲ್ಲವನ್ನೂ ಸಮರ್ಥ ಗುರುವಿನಿಂದ ತಿಳಿದುಕೊಂಡು ಅದರಂತೆ ಆಚರಿಸುವುದೇ ಸರ್ವಾಚಾರ ಸಂಪತ್ತು ಎಂದು ಚೆನ್ನಬಸವಣ್ಣವರು ನಿರ್ಣಯಿಸಿದ್ಧಾರೆ. (೩:೯೪೫)

**ಏಕಾದಶವಿಧ ಅರ್ಪಣೆ (ಏಕಾದಶವಿಧ ಪ್ರಸಾದ) :** ಪರಶಿವನು ನಮ್ಮನ್ನೂ ನಮಗಾಗಿ ಪ್ರಪಂಚವನ್ನೂ ಸೃಷ್ಟಿಸಿದುದಕ್ಕಾಗಿ ನಾವು ತೋರಿಸಬೇಕಾದ ಕೃತಜ್ಞತೆಯೇ ಭಕ್ತಿ. ನಮ್ಮ ಇಂದ್ರಿಯಗಳಾಗಲಿ ಕರಣಗಳಾಗಲಿ, ದೇಹವಾಗಲಿ, ನಮ್ಮವಲ್ಲ, ಅವೆಲ್ಲ ನಾವು ಪರಶಿವನಿಂದ ಪಡೆದ ಸಾಲ ಎಂದು ನಾವು ತಿಳಿಯಬೇಕು. ಹಾಗೆ ತಿಳಿದ ಮೇಲೆ ನಾವು ಭಕ್ತಿಯಿಂದ ಅವೆಲ್ಲವನ್ನೂ ಹಿಂದಿರುಗಿಸಬೇಕು. ಇದನ್ನೇ ಅರ್ಪಣೆ ಎನ್ನುತ್ತೇವೆ. ಹೀಗೆ ಮನಸ್ಸಿನಲ್ಲಿ ಅದೆಲ್ಲವನ್ನೂ ಪರಶಿವನಿಗೆ ಅರ್ಪಿಸಿ, ಅನಂತರ ಅವುಗಳನ್ನು ಉಪಯೋಗಿಸುವುದರಿಂದ ಅವು ಪ್ರಸಾದವಾಗುತ್ತವೆ. ಹೀಗೆ ತಿಳಿಯುವವನ ದೇಹವು ಪ್ರಸಾದಕಾಯ. ವಚನಕಾರರ ಪ್ರಕಾರ ಹೀಗೆ ನಾವು ಹನ್ನೊಂದು ರೀತಿಯಲ್ಲಿ ಪ್ರಸಾದವನ್ನಾಗಿ ಮಾಡಿಕೊಳ್ಳಬಹುದು. ಅವೆಂದರೆ :

೧. ನಮ್ಮ ಮನಸ್ಸನ್ನು ಪರಶಿವನಿಗೆ ಅರ್ಪಿಸುವುದು.

೨. ಪರಸ್ತ್ರೀ ಪರಧನಕ್ಕೆ ಆಸೆ ಮಾಡುವುದು, ಕಳ್ಳತನ ಮಾಡುವುದು, ಕೊಲ್ಲುವುದು, ಮುಂತಾದ ಅನೈತಿಕ ಕಾರ್ಯಗಳನ್ನು ಮಾಡುವುದಿಲ್ಲ ಎಂಬ ನಮ್ಮ ದೃಢ ನಿರ್ಧಾರವನ್ನು ಅರ್ಪಿಸುವುದು.

೩. ನಮ್ಮ ಸಮಾಧಾನವನ್ನು ಅರ್ಪಿಸುವುದು.

೪. ಯಾವುದೇ ವಿಷಯಗಳಿಗೆ ಆಸೆಪಡದ ನಿರ್ವಿಷಯಿ ಬುದ್ಧಿಯನ್ನು ಅರ್ಪಿಸುವುದು.

೫. ನಮ್ಮ ಇಂದ್ರಿಯಗಳೆಂಬ ಐದು ಮುಖ (ಪಂಚವಕ್ರ)ಗಳನ್ನು ಅರ್ಪಿಸುವುದು.

೬. ಎಲ್ಲ ರೂಪಗಳನ್ನು ಅರ್ಪಿಸಿ ನಿರೂಪನಾಗುವುದು.

೭. ಆತ್ಮನನ್ನೇ ಅರ್ಪಿಸುವುದು.

೮. ಮರೆವನ್ನು ಅರ್ಪಿಸಿ ಜ್ಞಾನವನ್ನು ಪಡೆಯುವುದು.

೯. ಸಹಸ್ರದಳ ಪದ್ಮ (ಬ್ರಹ್ಮರಂಧ್ರ)ದಲ್ಲಿರುವ ತೃಪ್ತಿಯನ್ನು ಅರ್ಪಿಸುವುದು.

೧೦. ಸುಷಮ್ನಾ ನಾಳದಿಂದ ಒಸರುವ ಅಮೃತವನ್ನು ಅರ್ಪಿಸುವುದು,

೧೧. ತಾನಾರೆಂಬುದನ್ನು ಮರೆತು, ತನ್ನನ್ನೇ ಅರ್ಪಿಸಿಕೊಳ್ಳುವುದು. (೩:೧೪೧೬)

**ಏಕೇಂದ್ರಿಯ ಸುಚಿತ್ತ :** ಸಾಧಕನಿಗೆ ಐದು ಇಂದ್ರಿಯಗಳಿದ್ದರೂ, ಚಿತ್ತವನ್ನು ಶುದ್ಧಮಾಡಿಕೊಂಡು, ಅಂದರೆ, ಸುಚಿತ್ತನಾಗಿ, ಚಿತ್ತವೆಂಬ ಒಂದೇ ಇಂದ್ರಿಯದಿಂದ ಯಾವಾಗಲೂ ಶಿವಧ್ಯಾನಮಾಡುತ್ತಿರಬೇಕು.

**ಏಕೋತ್ತರ ಶತಸ್ಥಲ :** (ನೋಡಿ : **ನೂರೊಂದು ಸ್ಥಲ**)

**ಏಕೋಭಾಜನ :** ಭಕ್ತನು ತಾನು ಪರಶಿವನಿಂದ ಭಿನ್ನವಲ್ಲ ಎಂಬ ಅರಿವು ಮೂಡಿದ ಮೇಲೆ, ತಾನೊಮ್ಮೆ ಉಣ್ಣಬೇಕು, ಲಿಂಗಕ್ಕೊಮ್ಮೆ ಉಣ್ಣಿಸಬೇಕು ಎಂಬ ದ್ವೈತ ಭಾವ ಹೋಗಿ, ತಾನು ಉಂಡಾಗ ಪರಮಾತ್ಮನಿಗೆ ತೃಪ್ತಿಯಾಗುತ್ತದೆ ಎಂದು ತಿಳಿಯುತ್ತಾನೆ; ಏಕೆಂದರೆ ಅವನು ತನ್ನ ದೇಹ, ಇಂದ್ರಿಯ, ಕರಣಾದಿಗಳನ್ನು ಪರಶಿವನಿಗೆ ಅರ್ಪಿಸಿರುವುದರಿಂದ (ಅಥವಾ ಅವು ತನ್ನವಲ್ಲ ಪರಶಿವನವು ಆದುದರಿಂದ), ತಾನು ಕೇವಲ ಒಂದು ಮಾಧ್ಯಮವಾಗುತ್ತಾನೆ. ಅಂದರೆ, ಭಕ್ತನ ಕರಣಾದಿಗಳ ಮೂಲಕ ಪರಶಿವ ತೃಪ್ತಿಪಟ್ಟುಕೊಳ್ಳುವುದರಿಂದ, ಭಕ್ತನಿಗೆ ತೃಪ್ತಿಯಾಗುವುದು ಪರಶಿವನಿಗೂ ತೃಪ್ತಿಯಾಗುವುದರಿಂದಲೇ. ಹೀಗೆ, ಒಂದೇ ತಟ್ಟೆಯಲ್ಲಿ (ಏಕಭಾಜನದಲ್ಲಿ) ಭಕ್ತ ಮತ್ತು ಪರಶಿವ ಭೋಗಿಸುತ್ತಾರೆನ್ನಬಹುದು. (೩:೫೨೬)

**ಏಳುನೂರೆಪ್ಪತ್ತು ಪ್ರಮಥ ಗಣಂಗಳು :** ಪ್ರಮಥರೆಂದರೆ ಪರಶಿವನ ಸಂಗಡಿಗರು. ಅವರು ಮುಕ್ತರಾಗಿದ್ದಾರಲ್ಲದೆ, ಕೈಲಾಸದಲ್ಲಿ ಶಿವನ ಪರಿವಾರದಲ್ಲಿರುವವರು. ಆದರೆ ವಚನಕಾರರು ಭೂಮಿಯ ಮೇಲಿದ್ದ ಕೆಲವು ವೀರಶೈವ ಸಂತರನ್ನು ಪ್ರಮಥ ಗಣಗಳ ಮಟ್ಟಕ್ಕೇರಿಸಿ, ಅವರ ಸಂಖ್ಯೆ ೭೭೦ ಎಂದು ನಿರ್ಧರಿಸಿದ್ದಾರೆ. ಅವರಲ್ಲಿ ಪ್ರಮುಖರೆಂದರೆ-ಉರಿಲಿಂಗ ಪೆದ್ದಿ, ನುಲಿಯ ಚಂದಯ್ಯ, ಹಡಪದ ಅಪ್ಪಣ್ಣ, ಮೇದಾರ ಕೇತಯ್ಯ, ಗಜೇಶ ಮಸಣಯ್ಯ, ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು. ಇವರೆಲ್ಲರೂ ಲಿಂಗಾಂಗ ಸಾಮರಸ್ಯಪಡೆದು, ಜೀವನ್ಮುಕ್ತರಾಗಿ ತಮ್ಮ ಕಾಯವನ್ನೇ ಕೈಲಾಸವನ್ನಾಗಿ ಮಾಡಿಕೊಂಡವರೆಂಬ ಕಾರಣಕ್ಕಾಗಿ ಅವರನ್ನು ಪ್ರಮಥರೆಂದು ಕರೆದಿರಬಹುದು. (೧೦:೨೯೫)

**ಐಕ್ಯ :** ತಾನೂ ಪರಶಿವನೂ ಎರಡಲ್ಲ, ಒಂದೇ ಎಂಬ ಭಾವವಿರುವವನು. ಇದು ಕೇವಲ ಊಹಿಸಿಕೊಳ್ಳುವ ಅಥವಾ ಯಾರೋ ಹೇಳಿದುದನ್ನು ನಂಬುವ ಒಂದು ಭಾವವಲ್ಲ; ಅನುಭಾವದ ಮೂಲಕ ಲಿಂಗಾಂಗ ಸಾಮರಸ್ಯವನ್ನು ಪಡೆದು, ಒಂದು ಸ್ಪಷ್ಟ ಹಾಗೂ ನಿಖರ ಸಿದ್ಧಿಯನ್ನು ಮುಟ್ಟಿದ ಸ್ಥಿತಿ. ಐಕ್ಯನಿಗೆ ಯಾವ ಸ್ವಾರ್ಥ ಆಸೆ ಆಕಾಂಕ್ಷೆಗಳಿಲ್ಲ; "ನಾನು ಪರಶಿವನ ಅಂಗ (ದೇಹ), ಪರಶಿವನು ನನ್ನ ದೇಹ, ಇಂದ್ರಿಯ, ಅಂತಃಕರಣಗಳ ಮೂಲಕ ಅನುಭವಿಸುತ್ತಾನೆ. ನಾನು ಪರಶಿವನ ವಾಹನ, ಸ್ವತಂತ್ರ ವ್ಯಕ್ತಿಯಲ್ಲ" ಎಂದು ತಿಳಿದವನು.

**ಐಕ್ಯಂಗೆ ಮಹಾಬೆಳಗೆ ಅಂಗ :** ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರದಲ್ಲಿ ಲಿಂಗಾಂಗ ಸಾಮರಸ್ಯದ ಸಮಯದಲ್ಲಿ ಧ್ಯಾನಿಗೆ ಮಹಾಬೆಳಗು ಕಾಣಿಸುತ್ತದೆ. ಇದು ಕಣ್ಣಿಗೆ ಕಾಣುವ ಬೆಳಗಿನಂತಲ್ಲ. ಇದು ಚಿತ್ಸೂರ್ಯವೆಂದೂ ಕೆಲವು ವೇಳೆ ಕರೆಯಲ್ಪಡುತ್ತದೆ ಹಾಗೂ ಅದರ ಪ್ರಕಾಶ ಅನಂತ ಕೋಟಿ ಸೂರ್ಯ ಪ್ರಕಾಶಕ್ಕೆ ಸಮವೆಂದು ಹೇಳಲಾಗುತ್ತದೆ. ಇದನ್ನೇ ಮಹಾಲಿಂಗವೆಂದೂ ಕರೆಯಲಾಗುತ್ತದೆ. ಉಳಿದ ಲಿಂಗಗಳಿಗೆ ಇರುವಂತೆ ಮಹಾಲಿಂಗಕ್ಕೂ ಒಂದು ಮಾಧ್ಯಮವಿದೆ, ಅದೇ ಚಿತ್ ಶಕ್ತಿ. ಕೆಲವು ವೇಳೆ ಚಿತ್‌ಶಕ್ತಿಯೇ ಚಿತ್ಸೂರ್ಯವೆಂದೂ, ಮಹಾಲಿಂಗ ಬೆಳಕಿನಂತೆ ಅನುಭಾವಿಗೆ ಕಾಣಿಸಿಕೊಳ್ಳುತ್ತಾನೆಂದೂ ಹೇಳಲಾಗುತ್ತದೆ. ಆಗ ಮಹಾಲಿಂಗಕ್ಕೆ ಮಹಾಬೆಳಗೆ (ಚಿತ್ಸೂರ್ಯನೇ) ಅಂಗವಾಗುತ್ತದೆ.

ಮಹಾಲಿಂಗನನ್ನು ಸಾಕ್ಷಾತ್ಕರಿಸಿಕೊಳ್ಳುವ ಸಾಧಕನಿಗೆ ಐಕ್ಯನೆಂದು ಹೆಸರು. ಏಕೆಂದರೆ ಅವನು ಈ ಸ್ಥಲದಲ್ಲಿ ಲಿಂಗದಲ್ಲಿ ಬೆರೆತಿರುವುದೂ ಅಲ್ಲದೆ, ತನ್ನ ಪ್ರತ್ಯೇಕತೆ ಅಥವಾ ವೈಯಕ್ತಿಕತೆಯನ್ನೂ ಕಳೆದುಕೊಂಡಿರುತ್ತಾನೆ. ಇದರಿಂದಾಗಿ, 'ತಾನು' ಇಲ್ಲವೆಂದೂ ತನ್ನ ದೇಹ, ಮನಸ್ಸು, ಇಂದ್ರಿಯಾದಿಗಳಲ್ಲಿ ಪರಶಿವನೇ ಇದ್ದಾನೆಂದೂ ನಂಬುತ್ತಾನೆ. ಅವನು ವೈವಿಧ್ಯತೆ ಮತ್ತು ಇಂದ್ರಿಯಗೋಚರವಿರುವ ವಸ್ತುಗಳ ಹಿಂದೆ ಪರಶಿವ ಇರುವುದನ್ನು ಕಾಣುತ್ತಾನೆ. ಹೀಗೆ, ಅವನಿಗೆ ಅವಿಭಾಜ್ಯ ಪರಶಿವ ಕಾಣುವುದರಿಂದ ಅವನು ಐಕ್ಯ.

**ಐಕ್ಯಸ್ಥಲ :** ಆಧ್ಯಾತ್ಮಿಕ ಜೀವನದ ಆರು ಮೆಟ್ಟಿಲುಗಳಲ್ಲಿ ಕೊನೆಯದು. ಇದನ್ನು ತಲುಪಿದವನು ಜೀವನದ ಪರಮಧ್ಯೇಯವಾದ ಲಿಂಗಾಂಗ ಸಾಮರಸ್ಯವನ್ನು ಸಾಧಿಸುತ್ತಾನೆ. (ನೋಡಿ : **ಐಕ್ಯ, ಭಕ್ತಿ**)

**ಐಕ್ಯಸ್ಥಲ ತ್ರಿವಿಧ :** ಸಂಪೂರ್ಣ ಶರಣಾದವನಿಗೆ ತಾನು ಎಂಬ ಅಹಂಭಾವವಿಲ್ಲ. ತಾನು ಸ್ವತಂತ್ರ ಹಾಗೂ ಪ್ರತ್ಯೇಕ ವ್ಯಕ್ತಿಯಲ್ಲವೆಂದೂ ತಾನು ಶಿವನಲ್ಲಿರುವ ಹಾಗೂ ಶಿವಸ್ವರೂಪದ ಒಂದು ಅಂಗ (ಅಂಶ)ವೆಂದೂ ಅವನು ಭಾವಿಸುತ್ತಾನೆ. ಈ ಭಾವವಿಲ್ಲದಿದ್ದರೆ ಧ್ಯಾನ (ಅನುಭಾವ)ದಲ್ಲಿ ಪರಶಿವನೊಂದಿಗೆ ಐಕ್ಯವಾಗುವುದು ಸಾಧ್ಯವಿಲ್ಲ. ಪರಶಿವನೊಂದಿಗೆ ಐಕ್ಯತೆಯನ್ನು ಸಾಧಿಸಿದವನು ಐಕ್ಯಸ್ಥಲದಲ್ಲಿದ್ದಾನೆ ಎಂದರ್ಥ.

ಐಕ್ಯಸ್ಥಲದಲ್ಲಿಯೂ ಮೂರು ಉಪಸ್ಥಲಗಳಿವೆ. ಅವೆಂದರೆ: ಕಾಯ ಲಿಂಗೈಕ್ಯ, ಜೀವಲಿಂಗೈಕ್ಯ, ಭಾವಲಿಂಗೈಕ್ಯ. ಕಾಯಲಿಂಗೈಕ್ಯನ ಪ್ರತಿಯೊಂದು ಕಾಯಕವೂ ದೈವೀಕಾರ್ಯದಂತೆ ಇರುತ್ತದೆಯೇ ಹೊರತು ಸ್ವಾರ್ಥಬುದ್ಧಿಯ ಮಾನವ ಕಾಯಕದಂತಿರುವುದಿಲ್ಲ. ಅವನು ತನ್ನ ಲಿಂಗೈಕ್ಯ ಭಾವವನ್ನು ನಿಸ್ವಾರ್ಥ ಕಾಯಕದ ಮೂಲಕ ತೋರಿಸಿದಾಗ, ಅವನ ಕಾಯ ಲಿಂಗೈಕ್ಯ ಎನಿಸಿಕೊಳ್ಳುತ್ತಾನೆ. ತಾನು ಪರಶಿವನಲ್ಲಿ

ಒಂದಂಶವೇ ಹೊರತು, ತಾನು ಪ್ರತ್ಯೇಕ ವ್ಯಕ್ತಿಯಲ್ಲ ಎಂಬ ಭಾವವು ಅವನ ಧ್ಯಾನದಲ್ಲಿ ಗೋಚರಿಸಿದಾಗ ಅವನು ಜೀವಲಿಂಗೈಕ್ಯನೆನಿಸಿಕೊಳ್ಳುತ್ತಾನೆ. ತನ್ನ ಸ್ವರೂಪವೂ ಶಿವಸ್ವರೂಪವೂ ಬೇರೆಯಲ್ಲ ಎಂಬ ಭಾವವು ಅವನಿಗೆ ಅನುಭಾವದಲ್ಲಿ ಗೋಚರಿಸಿದಾಗ ಅವನು ಭಾವಲಿಂಗೈಕ್ಯನೆನಿಸಿಕೊಳ್ಳುತ್ತಾನೆ. (೩:೭೨೯)

**ಐಕ್ಯಸ್ಥಲ ಪರವಸ್ತು ನಾಶನ :** ಸಾಧಕನು ತನ್ನ ಆಧ್ಯಾತ್ಮಿಕ ಸಾಧನೆಯ ವಿವಿಧ ಹಂತಗಳಲ್ಲಿ ತಾನು ಮತ್ತು ಪರಶಿವ ಬೇರೆ ಬೇರೆ ಎಂದು ತಿಳಿದು ಅವನನ್ನು ಪೂಜಿಸುತ್ತಾನೆ, ಅವನಿಗೆ ತನ್ನನ್ನು ಅರ್ಪಿಸಿಕೊಳ್ಳುತ್ತಾನೆ. ಆದರೆ ಐಕ್ಯಸ್ಥಲದಲ್ಲಿ ಜ್ಞಾತೃ-ಜ್ಞೇಯಗಳ ಭೇದವಿಲ್ಲದಂತೆ ಅವನು ಶಿವನಲ್ಲಿ ಒಂದಾದಾಗ, ತಾನು ಸಾಧಕನೆಂಬ ಭಾವವೂ ನಾಶವಾಗುತ್ತದೆಯಲ್ಲದೆ, ಪರಶಿವ ಪೂಜ್ಯನೆಂಬ ಭಾವವೂ ನಾಶವಾಗುತ್ತದೆ. ಶಿವ ಬೇರೆ ಎಂಬ ಭಾವ ಹೋಗದಿದ್ದರೆ, ಅವನು ಐಕ್ಯಸ್ಥಲವನ್ನು ಸಾಧಿಸಿಲ್ಲವೆಂದರ್ಥ. (೮:೨೦೦೨)

**ಐದಂಗ :** ಪರಶಿವನ ಐದು ಅಂಗಗಳು. ಅವೆಂದರೆ : ಸತ್ತು, ಚಿತ್ತು, ಆನಂದ, ನಿತ್ಯ ಪರಿಪೂರ್ಣ. ವಾಸ್ತವವಾಗಿ ಇಲ್ಲಿ 'ಅಂಗ' ಎಂಬ ಪದವು ಭಾಗ ಅಥವಾ ದೇಹ ಎಂಬರ್ಥದಲ್ಲಿ ಬಳಕೆಯಾಗಿರದೆ, ಗುಣ ಅಥವಾ ಅಂಶ ಎಂಬರ್ಥದಲ್ಲಿ ಬಳಕೆಯಾಗಿದೆ. ಶೂನ್ಯಸ್ಥಿತಿಯಲ್ಲಿರುವಾಗ ಪರಶಿವನಿಗೆ ಈ ಯಾವ ಗುಣವೂ ಇರಲಿಲ್ಲ. ಆದರೆ, ಪರಶಿವನಿಗೆ ತಾನೊಬ್ಬನೇ ಇರುವುದರ ಅರಿವುಂಟಾದಾಗ (ಅವನ ನೆನಹೆ) "ಸಾವಯವವಾಗಿ ಚಿತ್ತನೆನಿಸಿಕೊಂಡಿತ್ತು. ಆ ಚಿತ್ತೇ ಸತ್ತು, ಚಿತ್ತು, ಆನಂದ, ನಿತ್ಯ ಪರಿಪೂರ್ಣ ಎಂಬ ಐದಂಗವನಂಗೀಕರಿಸಿ, ನಿಃಕಲ ಶಿವತತ್ವವೆನಿಸಿತ್ತು ನೋಡಾ" (೧೧:೩೯).

**ಐದರ ಗುಣ :** ಪಂಚಭೂತಗಳ ಗುಣ. ಪ್ರತಿಯೊಂದು ಭೂತದಲ್ಲಿ ಐದೂ ಭೂತಗಳ ಗುಣಗಳಿದ್ದರೂ, ಅದಕ್ಕೆ ತನ್ನದೇ ಆದ ವಿಶಿಷ್ಟ ಗುಣವಿರುತ್ತದೆ. ಉದಾಹರಣೆಗೆ ಪೃಥ್ವೀ ತತ್ವವು ಕಠಿಣತೆಯ ಸಂಕೇತ; ಅದಕ್ಕೆ ಗಂಧವೇ ವಿಶಿಷ್ಟ ಗುಣ. ಹೀಗೆ ನೀರಿಗೆ ರಸ, ವಾಯುವಿಗೆ ಸ್ಪರ್ಶ, ಆಕಾಶಕ್ಕೆ ಶಬ್ದ ಹಾಗೂ ಅಗ್ನಿಗೆ ರೂಪ ಇವು ವಿಶಿಷ್ಟ ಗುಣಗಳು. ಇವುಗಳನ್ನು ಪ್ರತ್ಯೇಕವಾಗಿ ಅರ್ಪಿಸಿ ಮುಕ್ತಿ ಪಡೆಯುತ್ತೇನೆಂದು ಯಾರಾದರೂ ಹೇಳಿದರೆ ಅದು ಕೇವಲ ಸುಳ್ಳಲ್ಲ, ಅಸಾಧ್ಯದ ಮಾತೂ ಹೌದು. ಏಕೆಂದರೆ, ಪಂಚಭೂತಗಳನ್ನಾಗಲಿ, ಅವುಗಳ ವಿಶಿಷ್ಟ ಗುಣಗಳನ್ನಾಗಲಿ ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಈ ಕಾರಣಕ್ಕಾಗಿ ಮೋಳಿಗೆ ಮಾರಯ್ಯನು 'ಪೃಥ್ವಿಯ ಗುಣವ ಅಪ್ಪು ನುಂಗಿತ್ತಾಗಿ, ಪೃಥ್ವಿಯ ಗುಣವಿಲ್ಲ; ಅಪ್ಪುವಿನ ಗುಣವ ಅನಿಲ ನುಂಗಿತ್ತಾಗಿ, ಅಪ್ಪುವಿನ ಗುಣವಿಲ್ಲ... ಇದು ಕಾರಣ, ಐದರ ಗುಣದಲ್ಲಿ ಅರ್ಪಿಸಿ ಮುಕ್ತಿಯ ಕಂಡೆನೆಂಬ ನಿಷ್ಠೆ ನಿನಗೆಲ್ಲಿದೆಯೋ?' ಎಂದು ಕೇಳುತ್ತಾನೆ. (೮:೧೯೧೭)

**ಐದು ಇಂದ್ರಿಯಗಳ ಚಕ್ರ :** ಕೆಲವು ದರ್ಶನಗಳ ಪ್ರಕಾರ, ಕೆಲವು ಪ್ರಾಣಿಗಳಿಗೆ ಒಂದಿಂದ್ರಿಯ, ಕೆಲವಕ್ಕೆ ಎರಡು, ಕೆಲವಕ್ಕೆ ಮೂರು, ಕೆಲವಕ್ಕೆ ನಾಲ್ಕು ಇಂದ್ರಿಯಗಳು ಇರುತ್ತವೆ. ಮನುಷ್ಯನಿಗೆ ಐದೂ ಇಂದ್ರಿಯಗಳಿವೆ. ವಚನಕಾರರ ಪ್ರಕಾರ ಭವವು ಒಂದು ಚಕ್ರ. ಚಕ್ರಕ್ಕೆ ಆದಿಯಾಗಲಿ, ಅಂತ್ಯವಾಗಲಿ ಇಲ್ಲ. ಹಾಗೆಯೇ ಸೃಷ್ಟಿಯ ಒಂದು ಭಾಗವಾಗಿರುವ ಮನುಷ್ಯನು ಚಕ್ರದ ಕಡ್ಡಿಗಳಂತೆ ಅನೇಕ ಬಾರಿ ಸೃಷ್ಟಿಯಾಗಿದ್ದಾನೆ; ಹಾಗೂ ತನ್ನ ಕರ್ಮಕ್ಕೆ ತಕ್ಕಂತೆ ಮತ್ತೆ ಸೃಷ್ಟಿಯಾಗುತ್ತಾನೆ. ಆಗ ಅವನ ಇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ಚರ್ಮ ಮತ್ತು ನಾಲಿಗೆಗಳೂ ಅವನಲ್ಲಿ ಉತ್ಪತ್ತಿಯಾಗುತ್ತವೆ. ಈ ಐದು ಇಂದ್ರಿಯಗಳ ಚಕ್ರಗಳು ತಿರುಗದಿದ್ದರೆ (ವ್ಯಾಪಾರಗಳು ನಡೆಯದಿದ್ದರೆ), ಅಂದರೆ, ಮನುಷ್ಯ ಯಾವುದೇ ರೀತಿಯ ಕರ್ಮಗಳನ್ನು ಮಾಡದಿದ್ದರೆ, ಆಗ ಅವನಿಗೆ ಪಾಪಪುಣ್ಯಗಳುಂಟಾಗುವುದಿಲ್ಲ. ಪಾಪಪುಣ್ಯಗಳುಂಟಾಗದಿದ್ದರೆ ಸೃಷ್ಟಿಯಾಗುವುದಿಲ್ಲ. ಆದುದರಿಂದ ರೂಪಚಕ್ರ (ನಯನಚಕ್ರ) ಇತ್ಯಾದಿಗಳ ಚಕ್ರಗಳು ತಿರುಗದಿದ್ದರೆ, ಲೋಕಾದಿಲೋಕಗಳೇ ಇರುವುದಿಲ್ಲ. (೩:೧೫೬೫)

**ಐವತ್ತಕ್ಷರ :** ವಚನಕಾರರು ತಂತ್ರಗಳನ್ನನುಸರಿಸಿ, ಮಾನವನ ದೇಹದಲ್ಲಿ ಆರು ಚಕ್ರಗಳಿವೆ ಎಂದು ನಂಬುತ್ತಾರೆ. ಈ ಚಕ್ರಗಳಿಗೆ ಪದ್ಮಗಳೆಂದೂ ಕರೆಯಲಾಗಿದ್ದು, ಪ್ರತಿಯೊಂದು ಪದ್ಮಕ್ಕೂ ತನ್ನದೇ ಆದ ವಿಶಿಷ್ಟ ಸಂಖ್ಯೆಯ ಎಸಳು (ದಳ)ಗಳಿವೆಯೆಂದೂ, ಆ ಎಸಳುಗಳ ಮೇಲೆ ಅಕ್ಷರಗಳಿವೆಯೆಂದೂ ನಂಬಲಾಗುತ್ತದೆ. ಅವುಗಳ ವಿವರ ಈ ಪ್ರಕಾರ ಇದೆ :

ಆಧಾರ ಅಥವಾ ಮೂಲಾಧಾರ ಪದ್ಮದಲ್ಲಿ ನಾಲ್ಕು ದಳಗಳಿವೆ. ಅವುಗಳ ಮೇಲೆ ವ, ಶ, ಷ ಮತ್ತು ಸ ಎಂಬ ನಾಲ್ಕು ಅಕ್ಷರಗಳಿವೆ. ಅದಕ್ಕಿಂತ ಮೇಲಿರುವ ಸ್ವಾಧಿಷ್ಠಾನ ಪದ್ಮದಲ್ಲಿ ಆರು ದಳಗಳಿದ್ದು, ಅವುಗಳ ಮೇಲೆ ಬ, ಭ, ಮ, ಯ, ರ ಮತ್ತು ಲ ಎಂಬ ಆರು ಅಕ್ಷರಗಳನ್ನು ಬರೆಯಲಾಗಿದೆ. ಅದಕ್ಕಿಂತ ಮೇಲಿರುವ ಮಣಿಪೂರಕ ಚಕ್ರಕ್ಕೆ ಹತ್ತು ದಳಗಳಿದ್ದು, ಅವುಗಳ ಮೇಲೆ ಡ, ಢ, ಣ ತ, ಥ, ದ, ಧ, ನ, ಪ ಮತ್ತು ಫ ಎಂಬ ಹತ್ತು ಅಕ್ಷರಗಳು ಮೂಡಿವೆ. ಅದಕ್ಕಿಂತ ಇನ್ನೂ ಮೇಲಿರುವ ಅನಾಹತ ಪದ್ಮದಲ್ಲಿ ಹನ್ನೆರೆಡು ದಳಗಳಿದ್ದು ಅವುಗಳ ಮೇಲೆ ಕ, ಖ, ಗ, ಘ, ಙ, ಚ, ಛ, ಜ, ಝ, ಞ, ಟ ಮತ್ತು ಠ ಎಂಬ ಹನ್ನೆರಡು ಅಕ್ಷರಗಳು ಮೂಡಿವೆ. ಅನಾಹತ ಪದ್ಮದ ಮೇಲಿರುವ ವಿಶುದ್ಧಿ ಪದ್ಮದಲ್ಲಿ ಹದಿನಾರು ಎಸಳುಗಳಿದ್ದು, ಅವುಗಳ ಮೇಲೆ, ಅ, ಆ, ಇ, ಈ, ಉ, ಊ, ಋ, ೠ, ಌ, ೡ, ಏ, ಐ, ಓ, ಔ, ಅಂ, ಅಃ ಎಂಬ ಹದಿನಾರು ಅಕ್ಷರಗಳು ಮೂಡಿವೆ. ಈ ಐದೂ ಚಕ್ರಗಳು ಮನುಷ್ಯನ ಮೇರುದಂಡದಲ್ಲಿ (ಬೆನ್ನುಹುರಿಯೊಳಗೆ) ಇವೆ ಎಂದು ನಂಬಲಾಗಿದೆ.

ಆರನೆಯ ಪದ್ಮವಾದ ಆಜ್ಞಾ ಚಕ್ರವು ಭ್ರೂಮಧ್ಯದಲ್ಲಿದ್ದು, ಅದಕ್ಕೆ ಎರಡೇ ದಳಗಳಿವೆಯೆಂದೂ, ಅವುಗಳ ಮೇಲೆ ಹ ಮತ್ತು ಕ್ಷ ಎಂಬ ಎರಡಕ್ಷರಗಳು ಮೂಡಿರುತ್ತವೆ ಎಂದೂ ನಂಬಲಾಗಿದೆ.

ಆದರೆ ತಂತ್ರಗಳು ಚಕ್ರ ಅಥವಾ ಪದ್ಮಗಳೆಂದರೆ ಇವೇ ಆರೆಂದು ಹೇಳಿದರೂ, ಬ್ರಹ್ಮರಂಧ್ರ ಎಂಬ ಮತ್ತೊಂದು ಸಹಸ್ರದಳ ಪದ್ಮವಿದೆಯೆಂದೂ ಹೇಳುತ್ತಾರೆ. ನೆತ್ತಿ ಮತ್ತು ಮೆದುಳಿನ ಮಧ್ಯದಲ್ಲಿರುವ ಬ್ರಹ್ಮರಂಧ್ರದಲ್ಲಿ ಸಹಸ್ರದಳಗಳಿದ್ದರೂ ಅವುಗಳ ಮೇಲೆ 'ಓಂ' ಎಂಬ ಒಂದೇ ಅಕ್ಷರವಿದೆಯೆಂದು ಹೇಳುತ್ತಾರೆ (೨:೧೮೮).

**ಐಶ್ವರ್ಯ :** ಪ್ರಭುತ್ವ. ಈಶ್ವರ ಎಂದರೆ ಪ್ರಭು. ಜಗದೀಶ್ವರ ಅಥವಾ ಲೋಕೇಶ್ವರ ಎಂದರೆ ಜಗತ್ತನ್ನು (ಲೋಕವನ್ನು) ನಿಯಂತ್ರಿಸುವವನು ಎಂದರ್ಥ. ಭಕ್ತನಿಗೆ ಸಂಬಂಧಿಸಿದಂತೆ ಐಶ್ವರ್ಯವೆಂದರೆ ಇಂದ್ರಿಯ ನಿಗ್ರಹ ಎಂದರ್ಥ. ಮಹೇಶ ಸ್ಥಲದ ಸಾಧಕನು ಕಳಬೇಕು, ಕೊಲಬೇಕು, ಎಂಬ ಆಸೆಯನ್ನು ನಿಗ್ರಹಿಸುವುದರಿಂದಲೇ, ಮಹೇಶ (ಮಹೇಶ್ವರ) ಎನಿಸಿಕೊಳ್ಳುತ್ತಾನೆ.

**ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ ಪ್ರಾಣಿಗಳು :** ಜೈನರ ಪ್ರಕಾರ, ಇಂದ್ರಿಯಗಳ ಸಂಖ್ಯೆಯ ಆಧಾರದ ಮೇಲೆ ಪ್ರಾಣಿಗಳನ್ನು ವರ್ಗೀಕರಿಸಲಾಗಿದ್ದು, ವಚನಕಾರರು ಆ ತತ್ವವನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಈ ತತ್ವದ ಪ್ರಕಾರ, ಪ್ರಾಣಿಗಳನ್ನು ಹೀಗೆ ವರ್ಗೀಕರಿಸಲಾಗಿದೆ :

೧. ಒಂದೇ ಇಂದ್ರಿಯವನ್ನುಳ್ಳ ಪ್ರಾಣಿಗಳು : ಏಕಾಣು ಜೀವಿಗಳಿಗೆ ಕೇವಲ ಸ್ಪರ್ಶನೇಂದ್ರಿಯವೊಂದೇ ಇದ್ದು, ಉಳಿದ ಯಾವ ಇಂದ್ರಿಯಗಳಿಲ್ಲ.

೨. ಹುಳಗಳು, ಶಂಖದ ಹುಳ, ಜಿಗಣೆ ಮುಂತಾದ ಪ್ರಾಣಿಗಳಿಗೆ ಸ್ಪರ್ಶನೇಂದ್ರಿಯ ಮತ್ತು ಘ್ರಾಣೇಂದ್ರಿಯ ಎಂಬ ಎರಡೇ ಇಂದ್ರಿಯಗಳಿರುತ್ತವೆ.

೩. ತಿಗಣೆ, ಹೇನು, ಇರುವೆ, ದೀಪದ ಹುಳಗಳು, ಮುಂತಾದ ಪ್ರಾಣಿಗಳಿಗೆ ಸ್ಪರ್ಶನೇಂದ್ರಿಯ, ಘ್ರಾಣೇಂದ್ರಿಯ ಮತ್ತು ನಯನೇಂದ್ರಿಯ ಎಂಬ ಮೂರು ಮಾತ್ರ ಇಂದ್ರಿಯಗಳಿರುತ್ತವೆ.

೪. ಜೇನುಹುಳ, ನೊಣ, ಸೊಳ್ಳೆ, ಮುಂತಾದ ಜೀವಿಗಳಿಗೆ ಘ್ರಾಣೇಂದ್ರಿಯ, ನಯನೇಂದ್ರಿಯ, ಶ್ರೋತ್ರೇಂದ್ರಿಯ ಮತ್ತು ರಸನೇಂದ್ರಿಯ ಎಂಬ ನಾಲ್ಕು ಇಂದ್ರಿಯಗಳಿದ್ದು ಅದಕ್ಕೆ ತ್ವಗಿಂದ್ರಿಯ (ಸ್ಪರ್ಶನೇಂದ್ರಿಯ) ಇರುವುದಿಲ್ಲ.

೫. ಮೀನು, ಮೊಸಳೆ, ಹಸುಗಳಂಥ ಚತುಷ್ಪಾದಿ, ಹಕ್ಕಿ, ಕೋತಿ, ಮನುಷ್ಯ ಈ ಎಲ್ಲ ಪ್ರಾಣಿಗಳಿಗೆ ಮೇಲೆ ಹೇಳಿದ ಐದೂ ಇಂದ್ರಿಯಗಳಿರುತ್ತವೆ. ಕಡಿಮೆ ಇಂದ್ರಿಯಗಳಿರುವುದು ಪ್ರಾಣಿ ವರ್ಗದ ಕೆಳ ಅಂತಸ್ತನ್ನು ತೋರಿಸಿದರೆ, ಹೆಚ್ಚು ಇಂದ್ರಿಯಗಳಿರುವುದು ಪ್ರಾಣಿಗಳು ಹೆಚ್ಚು ವಿಕಾಸವಾಗಿರುವುದರ ದ್ಯೋತಕವಾಗಿದೆ.

ಇಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯ ಇಂದ್ರಿಯಗಳನ್ನುಳ್ಳ ಮಾನವನಿಗೆ ಬುದ್ಧಿಯೂ ಹೆಚ್ಚಿರುವುದರಿಂದ, ಅವನಿಗೆ ಮಾತ್ರ ಉನ್ನತ ಧ್ಯೇಯಗಳ ಪ್ರಜ್ಞೆಯಿರುತ್ತದೆ, ಎಂಬುದು ಗಮನಾರ್ಹ. (೧:೧೩೧೫)

**ಒಕ್ಕುದು ಮಿಕ್ಕುದು :** ಪ್ರಸಾದ. ಲಿಂಗಕ್ಕೆ ಕೊಟ್ಟುದುದು (ಒಕ್ಕುದು) ಮತ್ತು ಹಿಂದಿರುಗಿ ಪಡೆದುದು (ಮಿಕ್ಕುದು). ಅಂದರೆ ಒಕ್ಕುದು ಅರ್ಪಿತ, ಮಿಕ್ಕುದು ಪ್ರಸಾದ. (೨:೧೦೨೮)

**ಒಡಲಿಲ್ಲದ ಭಕ್ತ :** ಐಕ್ಯಸ್ಥಿತಿಯನ್ನು ತಲುಪಿದ ಭಕ್ತನು ತನಗಾಗಿ ಚಿಂತಿಸುವುದಿಲ್ಲ. ಅವನು ಹಸಿವು, ನಿದ್ರೆ ಮುಂತಾದ ಕಾಯಗುಣಗಳನ್ನು ಮೀರಿದವನಾದುದರಿಂದ ಒಡಲಿಲ್ಲದ ಭಕ್ತನೆನಿಸಿಕೊಳ್ಳುತ್ತಾನೆ. (೧:೧೧೧೫)

**ಒಡೆಯ :** ಎಲ್ಲದನ್ನೂ ನಿಯಂತ್ರಿಸುವವನು; ಪರಶಿವ ('ಸುಖದ ಮನದ, ದು:ಖದ ಮನದ, ಸುಚಿತ್ತ ದುಶ್ಚಿತ್ತದ ಒಡೆಯ. ನೀ ಸಹಿತವಲ್ಲದೇನುವನನುಭವಿಸೆ' (೩:೪೪೭) ಎಂಬಲ್ಲಿ ಪರಶಿವನಿಗೆ ಗೊತ್ತಾಗದಂತೆ ಮತ್ತು ಅವನ ಅಪ್ಪಣೆಯಿಲ್ಲದೆ ಭಕ್ತ ಏನನ್ನೂ ಅನುಭವಿಸಲಾರ ಎಂಬರ್ಥವಿದೆ).

**ಓಂ (ಓಂಕಾರ) :** ಓಂಕಾರದಲ್ಲಿ ಅಕಾರ ಉಕಾರ ಮಕಾರ ಎಂಬ ಮೂರು ಅಕ್ಷರಗಳಿವೆ. ಇದನ್ನು ಕೆಲವು ವೇಳೆ ಪ್ರತ್ಯೇಕವಾಗಿಯೂ ಮತ್ತೆ ಕೆಲವು ವೇಳೆ 'ನಮಃ ಶಿವಾಯ' ಎಂಬ ಪಂಚಾಕ್ಷರ ಮಂತ್ರದ ಜೊತೆಗೆ ಸೇರಿಸಿಯೂ ಉಚ್ಚರಿಸಲಾಗುತ್ತದೆ. ಈ ಉಚ್ಚಾರದ ಉದ್ದೇಶ ಏಕಾಗ್ರತೆಯನ್ನೂ ಸಾಧಿಸುವುದು.

ಓಂಕಾರಕ್ಕೆ ಎರಡನೆಯ ಅರ್ಥವೂ ಇದೆ. ಇದನ್ನು ಪರಶಿವನ ಸಮಾನವೆಂದು ಪರಿಗಣಿಸಲಾಗುತ್ತದೆ. ಈ ಅರ್ಥದಲ್ಲಿ ಅದರಲ್ಲಿರುವ ಅ ಕಾರವು ಬ್ರಹ್ಮನೆಂದು, ಉ ಕಾರವು ವಿಷ್ಣುವೆಂದು, ಮ ಕಾರವು ಮಹೇಶ್ವರ (ರುದ್ರ)ನೆಂದು ಪರಿಗಣಿಸಲಾಗುತ್ತದೆ. ಕೆಲವು ವೇಳೆ ಪರಶಿವನು ಸೃಷ್ಟಿಸಬೇಕೆಂದು ಇಚ್ಛಿಸಿದಾಗ ಅವನಲ್ಲಿದ್ದ ಶಕ್ತಿಯಲ್ಲಿ ಚಲನೆ ಉಂಟಾಗುತ್ತದೆ. ಆ ಚಲನೆಯ ಸಮಯದಲ್ಲಿ ಉಂಟಾಗುವ ಪ್ರಥಮ ನಾದವೇ ಓಂ ಅಥವಾ ಓಂಕಾರ. ಅಲ್ಲಿಂದ ಮುಂದೆ ಶಕ್ತಿಯು ವಿವಿಧ ರೀತಿಯಲ್ಲಿ ರೂಪಾಂತರಗೊಳ್ಳುತ್ತದೆ.

**ಓಂ ಏಕಮೇವನದ್ವಿತೀಯ :** ಇದನ್ನು ಮೂರು ರೀತಿಯಲ್ಲಿ ಅರ್ಥೈಸಬಹುದು. (೧) ಪರಶಿವನಲ್ಲದೆ ಅನೇಕ ದೇವದೇವತೆಗಳಿದ್ದರೂ, ಪರಶಿವನಿಗೆ ಸಮಾನರಾದ ದ್ವಿತೀಯರಿಲ್ಲ. (೨) ಚಿತ್‌ಸ್ವರೂಪನಾದ ಪರಶಿವ ಒಬ್ಬನೇ ಇದ್ದಾನೆ. ಅವನ ಹೊರತು, ಇತರರೂ ಇಲ್ಲ, ಪ್ರಪಂಚವೂ ಇಲ್ಲ. ಈ ರೀತಿಯಲ್ಲಿ ಚಿದದ್ವೈತಿಗಳು ಅರ್ಥೈಸುತ್ತಾರೆ. ಈಶ್ವರ, ಪ್ರಪಂಚ, ಜೀವಾತ್ಮರು ಇದ್ದಾರಾದರೂ, ಅವರಾರೂ ನಿರ್ಗುಣ ಬ್ರಹ್ಮನಂತೆ ಸತ್ಯವಲ್ಲ. (೩) ಇಡೀ ವಿಶ್ವವೇ, ಅಂದರೆ ಇಹಲೋಕಪರಲೋಕ, ಅನೇಕಾನೇಕ ಗ್ರಹಗಳು, ನಕ್ಷತ್ರಗಳು, ಸಕಲ ಚರಾಚರವಸ್ತುಗಳು ಪರಶಿವನ ಶರೀರವಾಗಿದ್ದು, ಅವನು ಅವುಗಳ ಒಳಗೂ ಹೊರಗೂ ಇದ್ದರೆ, ಆಗಲೂ ಇರುವವನೊಬ್ಬನೇ, ದ್ವಿತೀಯನಿಲ್ಲ ಎಂಬರ್ಥವಾಗುತ್ತದೆ. ವಚನಕಾರರು ಮೂರನೆ ರೀತಿಯಲ್ಲಿ ಅರ್ಥೈಸುತ್ತಾರೆ. (೯:೮೦೦)

**ಕಂಗಳ ಕೈಗಳಲರ್ಪಿಸುವುದು :** ನಾವು ಪ್ರತಿಯೊಂದು ಪದಾರ್ಥವನ್ನು ಅರ್ಪಿಸುವಾಗಲೂ ಕೈಯನ್ನೇ ಉಪಯೋಗಿಸುತ್ತೇವೆ. ಆದರೆ ಆಧ್ಯಾತ್ಮ ಸಾಧನೆಯಲ್ಲಿ ಮುಂದುವರಿದವನು ತನ್ನ ಕಣ್ಣುಗಳನ್ನೇ ಕೈಯಂತೆ ಉಪಯೋಗಿಸಿ ರೂಪನ್ನು ಅರ್ಪಿಸುತ್ತಾನೆ. (೩:೩೦೮)

**ಕಂಗಳ ಸೂತಕ ಹಿಂಗುವುದು :** ಆಧ್ಯಾತ್ಮಿಕ ಪ್ರಗತಿಗೆ ಅಡ್ಡಿಮಾಡುವ ದೃಶ್ಯಗಳನ್ನು ನೋಡಬೇಕೆಂಬ ಬಯಕೆಯನ್ನು ಹಿಂಗಿಸುವುದು. ಲಿಂಗಪೂಜೆಯಿಂದ ಕಂಗಳ ಸೂತಕ ಹಿಂಗುತ್ತದೆ; ಹಾಗೆ ಹಿಂಗಿಸಿದವನಷ್ಟೇ ಭಕ್ತನಾಗುತ್ತಾನೆ. (೮:೧೦೩೮)

**ಕಂಗಳಿಂದರ್ಪಿಸುವುದು :** ನಾವು ಅನುಭವಿಸುವ ರೂಪನ್ನು ಶಿವನಿಗೆ ಮೊದಲು ಅರ್ಪಿಸಿ, ಅನಂತರ ನಾವು ಅನುಭವಿಸಬೇಕು ಎಂಬುದು ಪ್ರಸಾದದ ಅರ್ಥಗಳಲ್ಲೊಂದು. ಲಿಂಗಕ್ಕೆ ನಾವು ಅರ್ಪಿಸಬೇಕಾದರೆ ಕುರೂಪನ್ನು ಕಳೆದು ಸುರೂಪನ್ನು ನಾವು ಲಿಂಗದ ಬಳಿ ತೆಗೆದುಕೊಂಡು ಹೋಗಿ, ಕೈಯಿಂದ ಅರ್ಪಿಸಬೇಕೆಂಬುದು ಇದರ ಅರ್ಥವಲ್ಲ. ಸುರೂಪನ್ನು ಕಣ್ಣೇ ಲಿಂಗಕ್ಕೆ ಅರ್ಪಿಸಬೇಕು. ಆಗ ಭಕ್ತ ಎಲ್ಲಿಯೂ ಹೋಗಬೇಕಾಗಿಲ್ಲ. ಅಂದರೆ, ಮನಸ್ಸಿನಲ್ಲೇ ಶಿವನನ್ನು ನೆನೆದು, ಮನಸ್ಸಿನಲ್ಲಿಯೇ ರೂಪನ್ನು ಅರ್ಪಿಸಿದರೆ, ಆಗ ಕಣ್ಣುಗಳು ಲಿಂಗಕ್ಕೆ ಸುರೂಪನ್ನು ಅರ್ಪಿಸಿದವು ಎಂದರ್ಥ. (೩:೨೨೮)

**ಕಂಥೆ :** ೧. ನೇರವಾದ ಅರ್ಥದಲ್ಲಾದರೆ, ಕಲ್ಲಿನ ಲಿಂಗದ ಸುತ್ತ ಇರುವ ಕರಿಬಣ್ಣದ ವಸ್ತುವೇ ಕಂಥೆ. ಯಾವ ಯಾವ ವಸ್ತುಗಳನ್ನು ಸೇರಿಸಿ ಕಂಥೆಯನ್ನು ಮಾಡಬೇಕೆಂಬುದಕ್ಕೆ ನಿಯಮಗಳಿವೆ. ೨. ಕಂಥೆಯೆಂದರೆ ಜೋಳಿಗೆ ಎಂಬರ್ಥವೂ ಇದೆ. ೩. ಆಲಂಕಾರಿಕವಾಗಿ ತೆಗೆದುಕೊಂಡರೆ, ಕಂಥೆ ಎಂಬ ಪದವು ಮನುಷ್ಯನ ಸ್ಥೂಲ ಶರೀರ ಎಂಬರ್ಥ ಕೊಡುತ್ತದೆ. ಕಂಥೆಯು ಹೇಗೆ ಲಿಂಗವನ್ನು ಸುತ್ತುವರಿದಿರುತ್ತದೆಯೋ, ಹಾಗೆಯೇ ಶರೀರವು ಆತ್ಮಲಿಂಗವನ್ನು ಸುತ್ತುವರಿದಿರುತ್ತದೆಯಾದುದರಿಂದ, ಮಾನವ ಶರೀರವೂ ಕಂಥೆ. (೯:೧೧೬೫)

**ಕಣ್ಣೆನೊಳಗಣ ಕಣ್ಣು :** ನಮ್ಮ ಕಣ್ಣಿನಲ್ಲಿ ನೋಡಿದ ನೋಟವನ್ನು ನಾವೇ ಅನುಭವಿಸುತ್ತೇವೆ, ಎಂಬುದು ಸಾಮಾನ್ಯರ ನಂಬಿಕೆ. ಆದರೆ ಪ್ರಾಣಲಿಂಗಿಯ ಪ್ರಕಾರ, ಈ ಕಣ್ಣಿನೊಳಗೆ ಬೇರೆ ಕಣ್ಣಿದ್ದು, ಅದರಿಂದ ಪರಶಿವ ಅನುಭವಿಸುತ್ತಾನೆ. ಅಂದರೆ, ಪ್ರಾಣಲಿಂಗಿಯ ಕಣ್ಣು ಪರಶಿವನಿಗೆ ಸೇರಿದವು ಎಂದರ್ಥ. (೯:೫೫೧)

**ಕತ್ತಲೆಯ ಕಳೆದು ನಿಶ್ಚಿಂತನಾದವನು :** ಅಜ್ಞಾನವನ್ನು (ಮರೆವನ್ನು) ಅಳಿಸಿ, ಲಿಂಗಾಂಗ ಸಾಮರಸ್ಯವನ್ನು ಪಡೆದು ನಿಶ್ಚಿಂತನಾದವನು. (೯:೫೫೪)

**ಕದಳಿ :** ಅಕ್ಕಮಹಾದೇವಿಯ ವಚನಗಳಲ್ಲಿ ಬರುವ ಈ ಪದವು ಸಂಕೇತಾತ್ಮಕವಾಗಿ ಬಳಕೆಯಾಗಿದ್ದು, ಅದಕ್ಕೆ 'ಸಂಸಾರ' ಎಂಬರ್ಥವಿದೆ.

**ಕರಣ :** ಉಪಕರಣ. ಭಾರತೀಯ ದರ್ಶನದಲ್ಲಿ ಈ ಪದಕ್ಕೆ 'ಆತ್ಮನ ಉಪಕರಣ' ಎಂಬ ಅರ್ಥವಿದೆ. ಆತ್ಮನು ಚಿನ್ಮಯ ವಸ್ತುವಾದುದರಿಂದ, ಅದು ಯಾವುದೇ ರೀತಿಯಲ್ಲಿ ಕ್ರಿಯಿಸಲಾರದು. ಆದರೆ ಅದಕ್ಕೆ ಕರಣಗಳ ಸಂಗವಾದರೆ ಅದು ಅವುಗಳ ಮೂಲಕ

ಕ್ರಿಯಿಸಬಲ್ಲುದು. ಹೀಗೆ, ಆತ್ಮವು ಬುದ್ಧಿಯಿಲ್ಲದೆ ಚಿಂತಿಸಲಾರದು; ಅಹಂ ಇಲ್ಲದೆ 'ನಾನು' ಎಂಬ ಪ್ರಜ್ಞೆ ಅದಕ್ಕೆ ಬರಲಾರದು. ಮನಸ್ಸು ಇಲ್ಲದೆ ಕೇಂದ್ರೀಕರಿಸಲಾರದು. ಚಿತ್ತವಿಲ್ಲದೆ ಆಸೆ ಆಕಾಂಕ್ಷೆಗಳನ್ನು ಪಡೆಯಲಾರದು, ಆದುದರಿಂದ ಈ ಕರಣಗಳು ಅಂತಃಕರಣಗಳೆನಿಸಿಕೊಳ್ಳುತ್ತವೆ. ಕೈಕಾಲು ಇತ್ಯಾದಿ ಬಾಹ್ಯಕರಣಗಳೆನಿಸಿಕೊಳ್ಳುತ್ತವೆ.

**ಕರಣಂಗಳ ಕೇಡು :** ಆತ್ಮನಿಗಿರುವ ಚಿತ್ತ, ಬುದ್ಧಿ, ಮನಸ್ಸು ಮತ್ತು ಅಹಂಕಾರಗಳೆಂಬ ಕರಣಗಳು ತಮ್ಮ ದುರ್ಗುಣಗಳನ್ನು ಕಳೆದುಕೊಳ್ಳುವುದು. (೭:೧೭೪)

**ಕರಣಂಗಳ ಹಂಗು :** ಅನುಭಾವದ ಮೂಲಕ ಪರಶಿವನನ್ನು ಅರಿಯಬೇಕಾದರೆ ದೇಹವಿರಲೇಬೇಕು. ದೇಹವಿಲ್ಲದೆ ಪರಶಿವನನ್ನು ಕಾಣಲು ಬರುವುದಿಲ್ಲ. ಏಕೆಂದರೆ, ಪರಶಿವನು ಎಲ್ಲೆಲ್ಲಿಯೂ ಇದ್ದಾನೆಂದು ತಿಳಿಯಬೇಕಾದರೆ, ಎಲ್ಲ ಕಡೆಯೂ ನೋಡುವ ಕಣ್ಣು ಬೇಕಾಗುತ್ತದೆ. ಹೀಗೆ ದೇಹವು ಕರಣಗಳ ಹಂಗು. (೮:೧೭೨೨)

**ಕರಣಚತುಷ್ಟಯ :** (ಕರಣ ನಾಲ್ಕು) ಅಥವಾ ನಾಲ್ಕು ಕರಣೇಂದ್ರಿಯಗಳು. (**ನೋಡಿ: ಕರಣ**)

**ಕರಣಾರ್ಪಣ :** ೧. ವಸ್ತುಗಳಲ್ಲಿರುವ ರುಚಿಯನ್ನು ಮಾನಸಿಕವಾಗಿ ಪ್ರಾಣಲಿಂಗಕ್ಕೆ ಅರ್ಪಿಸುವುದು. ಇಲ್ಲಿ ನೈವೇದ್ಯದಲ್ಲಿ ಕೈಯಾಡುವಂತೆ, ಕೈಯಾಗಲಿ ಮತ್ತಾವ ಅಂಗವಾಗಲಿ ಆಡುವುದಿಲ್ಲ. (೯:೧೩೩೯) ೨. ಪದಾರ್ಥಗಳನ್ನು ಪರಶಿವನಿಗೆ ಅರ್ಪಿಸಿದಂತೆ ಕರಣಗಳನ್ನೇ ಅರ್ಪಿಸುವುದು.

**ಕರತೇಜ :** ಕರಸ್ಥಲದಲ್ಲಿರುವ ಇಷ್ಟಲಿಂಗದ ಹೊಳಪು (ತೇಜ) (೪:೩೩೨).

**ಕರವೆಂಬ ಗರ್ಭ :** ಗುರುವಿನ ಹಸ್ತಮಸ್ತಕ ಸಂಯೋಗದಿಂದಾಗಿ ಭವಿಯು ಭಕ್ತನಾಗುತ್ತಾನಾದುದರಿಂದ, ಭಕ್ತನು ಗುರುವಿನ ಕರಸಂಜಾತನಾಗುತ್ತಾನೆ. ('ಕರವೆಂಬ ಉರುತರ ಗರ್ಭದಲ್ಲಿ' ಜನಿಸುತ್ತಾನೆ) (೪:೬೧)

**ಕರುಣಪ್ರಸಾದ :** ಗುರು ಅಥವಾ ಜಂಗಮ ಕರುಣೆಯಿಂದ ಕೊಡುವ ಪ್ರಸಾದ. ಭಕ್ತನು ಲಿಂಗಾಂಗ ಸಾಮರಸ್ಯ ಪಡೆಯಲಿ ಎಂಬ ಉದ್ದೇಶದಿಂದ ಕೊಡುವುದರಿಂದ, ಆ ಪ್ರಸಾದವು ಕರುಣೆಯಿಂದ ಕೂಡಿರಬೇಕಾದುದು ಆವಶ್ಯಕ.

**ಕರ್ಣಮಂತ್ರ :** ಭವಿಯನ್ನು ಭಕ್ತನನ್ನಾಗಿ ಮಾಡಲು ಗುರುವು ಅವನಿಗೆ ಲಿಂಗದೀಕ್ಷೆ ಮಾಡಿ ಅವನ ಕಿವಿಯಲ್ಲಿ ''ಓಂ ನಮಃ ಶಿವಾಯ'' ಎಂಬ ಮಂತ್ರವನ್ನು ಉಚ್ಚರಿಸಲು ಹೇಳುತ್ತಾನೆ. (೮:೧೧೨೭). ಈ ಮಂತ್ರವೇ ಕರ್ಣಮಂತ್ರ.

**ಕರ್ತ :** ೧. ಸ್ವಾಮಿ, ಜಂಗಮ. ಭಕ್ತನು ಜಂಗಮನಿದ್ದೆಡೆಗೆ ಹೋಗಿ ಭೃತ್ಯಾಚಾರ ಮಾಡಬೇಕೇ ಹೊರತು, ಜಂಗಮನೇ ಭಕ್ತನ ಬಳಿಗೆ ಬಂದು 'ಭೃತ್ಯಾಚಾರ ಮಾಡು' ಎಂದು ಕೇಳುವುದು ತಪ್ಪು. ''ಭೃತ್ಯನಿದ್ದೆಡೆಗೆ ಕರ್ತನೆಯ್ತಂದು ಭೃತ್ಯಾಚಾರವ ಮಾಡಿಸಿಕೊಂಬ ಕರ್ತಂಗೆ

ಕರ್ತೃತ್ವವೆಲ್ಲಿಯದು?" ಎಂದಾಗಲೂ, "ಜಗದ ಕರ್ತನವೇಷವಧರಿಸಿ ಕರ್ತನಾದ ಬಳಿಕ..." ಎನ್ನುವಾಗಲೂ "ಕರ್ತ" ಎಂಬುದಕ್ಕೆ "ಜಂಗಮ" ಎಂಬ ಅರ್ಥ ಇರುವುದು ಸ್ಪಷ್ಟವಾಗುತ್ತದೆ.

೨. ಜಗತ್ತನ್ನು ಸೃಷ್ಟಿಸುವ ಪರಶಿವ.

**ಕರ್ತಾರನ ಕಮ್ಮಟ :** ಕಮ್ಮಾರನು ತನ್ನ ಕಮ್ಮಟದಲ್ಲಿ ಹೇಗೆ ವಸ್ತುಗಳನ್ನು ರೂಪಿಸುತ್ತಾನೋ, ಹಾಗೆ ನಾವು ಈ ಮರ್ತ್ಯಲೋಕದಲ್ಲಿ ನಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು. ಮರ್ತ್ಯಲೋಕವು ಕರ್ತಾರನ (ಸೃಷ್ಟಿಕರ್ತನ) ಕಮ್ಮಟ.

**ಕರ್ತೃ :** ಸೃಷ್ಟಿಕರ್ತನಾದ ಪರಶಿವ.

**ಕರ್ತೃತ್ವ :** ಆತ್ಮನು ಬಂಧನದಲ್ಲಿದ್ದಾಗ, ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಅನೇಕ ರೀತಿಯ ಕೆಲಸಗಳನ್ನು ಮಾಡುತ್ತಾನೆ. ಈ ಸಾಮರ್ಥ್ಯವೇ ಕರ್ತೃತ್ವ ಶಕ್ತಿ. ಅಲ್ಲದೆ, ಇದು ಅವನಲ್ಲಿ ನಾನು ಮಾಡಿದೆ ಎಂಬ ಅಹಂಕಾರಕ್ಕೆ ಕಾರಣವಾಗುತ್ತದೆ.

**ಕರ್ತೃಭೃತ್ಯಭಾವ :** ಸಾಧಕನು ತಾನು ಕೇವಲ ಪೂಜಕ, ಪರಶಿವನು ಪೂಜ್ಯ ಎಂಬ ಭಾವವನ್ನಿಟ್ಟುಕೊಂಡಿದ್ದರೆ ಸಾಲದು, ಅದರ ಜೊತೆಗೆ ಅವನು ಪರಶಿವನು ಸ್ವಾಮಿ (ಕರ್ತೃ) ಎಂದೂ, ತಾನು ಭೃತ್ಯ (ಸೇವಕ) ಎಂದೂ ತಿಳಿದು ಅದರಂತೆ ಆಚರಿಸಬೇಕು. ವಾಸ್ತವವಾಗಿ ಕರ್ತೃ ಎಂದರೆ ಸೃಷ್ಟಿಕರ್ತ ಎಂದಾದುದರಿಂದ, ಸಾಧಕನು ತನ್ನನ್ನು ಸೃಷ್ಟಿಸಿ, ಸಾಕಿ ಸಲಹಿದುದಕ್ಕಾಗಿ ಪರಶಿವನಿಗೆ ಋಣಿಯಾಗಿರಬೇಕು-ಭೃತ್ಯನು ಸ್ವಾಮಿಗೆ ಋಣಿಯಾಗಿರುವಂತೆ.

**ಕರ್ತೃ ಸಾದಾಖ್ಯ :** (ನೋಡಿ : ಸಾದಾಖ್ಯ)

**ಕರ್ಮ :** ವಚನಕಾರರು ಇದನ್ನು ಆರು ಅರ್ಥಗಳಲ್ಲಿ ಬಳಸಿದ್ದಾರೆ.

(೧) ಉದ್ದೇಶಪೂರ್ವಕವಾದ ಅಥವಾ ಉದ್ದೇಶರಹಿತವಾದ ಯಾವುದೇ ರೀತಿಯ ಕ್ರಿಯೆಯಾಗಿರಬಹುದು. ನಿದ್ದೆಯಲ್ಲಿ ಕೈಕಾಲುಗಳನ್ನಾಡಿಸುವುದೂ ಈ ಅರ್ಥದಲ್ಲಿ ಕರ್ಮವೇ.

(೨) ವೈದಿಕ ಕರ್ಮ. ವೇದದ ಕರ್ಮಕಾಂಡವು ಬೋಧಿಸುವ ಯಜ್ಞ ಯಾಗಾದಿಗಳು, ನಿತ್ಯ ನೈಮಿತ್ತಿಕ ಕರ್ಮಗಳು ಕರ್ಮಗಳೆನಿಸಿಕೊಳ್ಳುತ್ತದೆ.

(೩) ಉದ್ದೇಶ ಪೂರ್ವಕವಾಗಿ ಮಾಡುವ ಕ್ರಿಯೆ. ಇವು ಸತ್ಕರ್ಮಗಳಾಗಿರಬಹುದು ದುಷ್ಕರ್ಮಗಳಾಗಿರಬಹುದು.

(೪) ಕರ್ತವ್ಯ. ಸಮಾಜವೊಂದರ ಸದಸ್ಯನಾಗಿ ವ್ಯಕ್ತಿಯು ಕೆಲವು ಕರ್ತವ್ಯಗಳನ್ನು ಮಾಡಬೇಕಾಗುತ್ತದೆ. ಅವನಿಗೆ ಕೆಲವು ವೇಳೆ ಇಷ್ಟವಿಲ್ಲದಿದ್ದರೂ ಈ ಕರ್ತವ್ಯ (ಕರ್ಮ)ವನ್ನು ಮಾಡಲೇಬೇಕು. ಉದಾಹರಣೆಗೆ, ದೇಶರಕ್ಷಣೆ ಕ್ಷತ್ರಿಯನ ಕರ್ತವ್ಯ.

(೫) ಬಹಳ ಸಂಕುಚಿತವಾದ ಅರ್ಥದಲ್ಲಿ 'ಕರ್ಮ'ವೆಂಬ ಪದವು ನಿಷ್ಕಾಮ ಕರ್ಮಕ್ಕೆ ಮಾತ್ರ ಅನ್ವಯಿಸುತ್ತದೆ. ಉದಾಹರಣೆಗೆ, 'ಕರ್ಮಯೋಗ' ಎಂಬ ಪದ ಪ್ರಯೋಗದಲ್ಲಿ ಸಾಧಕನು ನಿಷ್ಕಾಮ ಕರ್ಮವನ್ನು ಮಾಡುವ ಮೂಲಕ ಆತ್ಮಶುದ್ಧಿಯನ್ನು ಮಾಡಿಕೊಂಡು ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾಗಬೇಕು ಎಂಬ ಅಭಿಪ್ರಾಯ ಅಡಗಿದೆ.

(೬) ಕರ್ಮಫಲ, ಎಂಬುದು ಮತ್ತೊಂದು ಅರ್ಥ. ಒಬ್ಬ ವ್ಯಕ್ತಿ ತನ್ನ ಪ್ರಯತ್ನಕ್ಕೆ ತಕ್ಕ ಜಯ ಸಿಕ್ಕದಿದ್ದಾಗ ನಾವು 'ಅದು ಅವನ ಕರ್ಮ' ಎಂದು ಹೇಳುತ್ತೇವೆ. ಇಲ್ಲಿ ಕರ್ಮ 'ಎಂದರೆ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳ ಫಲ' ಎಂದಾಗುತ್ತದೆ.

**ಕರ್ಮಕಾಂಡ :** (೧) ಯಾವ ಯಾವ ಕ್ರಿಯೆಗಳನ್ನು ಯಾವ ಯಾವ ಸಂದರ್ಭದಲ್ಲಿ ಯಾವ ಕ್ರಮದಲ್ಲಿ ಮಾಡಬೇಕೆಂಬುದನ್ನು ತಿಳಿಸಿಕೊಡುವ ವೇದಗಳ ಭಾಗ. (೮:೮೭೯)

(೨) ಯಾವ ರೀತಿಯ ಪೂಜೆ ಪುರಸ್ಕಾರಗಳನ್ನು ಹಾಗೂ ಯಾವ ರೀತಿಯ ನೈತಿಕ ಆಚಾರಗಳನ್ನು ವೀರಶೈವನಾದವನು ಮಾಡಬೇಕೆಂದು ತಿಳಿಸುವ ಶಾಸ್ತ್ರ.

**ಕರ್ಮಕಾಯ :** ಭವಿಯು ಶಿವಯೋಗಿಯಾಗುವ ತನಕ, ಅವನು ಸಂಚಿತ, ಆಗಾಮಿ ಮತ್ತು ಪ್ರಾರಬ್ಧ ಎಂಬ ಮೂರು ಕರ್ಮಗಳಿಂದಲೂ ಪೀಡಿತನಾಗಿರುತ್ತಾನೆ. ಅಂದರೆ, ಕರ್ಮಕಾಯವು ಪ್ರಾರಬ್ಧ ಕರ್ಮದಿಂದ ಉಂಟಾದ ಕಾಯವಾದರೂ ಆಗಬಹುದು, ಹಿಂದಿನ ಜನ್ಮದ ವಾಸನೆಗಳಿಗನುಗುಣವಾಗಿ ಮತ್ತಷ್ಟು ಕರ್ಮಗಳನ್ನು ಮಾಡುವ ಕಾಯವಾದರೂ ಆಗಬಹುದು. (೧೧:೮೬೦)

**ಕರ್ಮಕೃತಶರೀರಿ :** ಕರ್ಮವನ್ನು ಮಾಡಿ ಶರೀರವನ್ನು ಪಡೆದವನು. ವಾಸ್ತವವಾಗಿ, ಕರ್ಮಗಳು ಸಂಚಿತ, ಪ್ರಾರಬ್ಧ ಮತ್ತು ಆಗಾಮಿ ಎಂದು ಮೂರು ರೀತಿಯವಿದ್ದು, ಶರೀರವು ಪ್ರಾರಬ್ಧ ಕರ್ಮದ ಫಲವಾಗಿದೆ. ಒಂದು ವೇಳೆ ನಾವು ಆಗಾಮಿ ಕರ್ಮಫಲಗಳು ಇಲ್ಲದಂತೆ ಮಾಡಿದರೂ ಹಾಗೂ ಎಲ್ಲ ಹಳೆಯ ಸಂಚಿತ ಕರ್ಮಗಳನ್ನು ಸುಟ್ಟರೂ ಪ್ರಾರಬ್ಧ ಕರ್ಮ ಮಾತ್ರ ಹಾಗೇ ಇರುತ್ತದೆ. ಜೀವನ್ಮುಕ್ತನಾದವನಿಗೆ ಮಾತ್ರ ಪ್ರಾರಬ್ಧಕರ್ಮದ ಫಲಗಳೂ ನಾಸ್ತಿ.

**ಕರ್ಮಜಾತ :** ಕರ್ಮವನ್ನು ಮಾಡಿ, ಅವುಗಳ ಫಲವನ್ನು ಅನುಭವಿಸಲು ಮತ್ತೆ ಹುಟ್ಟುವವನು.

**ಕರ್ಮತ್ರಯ :** ಭಾರತೀಯ ದರ್ಶನಗಳ ಪ್ರಕಾರ, ನಾವು ಮಾಡುವ ಪ್ರತಿಯೊಂದು ಐಚ್ಛಿಕ ಕ್ರಿಯೆಗೂ ಒಂದು ದೃಷ್ಟ (ಕಣ್ಣಿಗೆ ಕಾಣುವ) ಮತ್ತು ಅದೃಷ್ಟ (ಅಗೋಚರ) ಫಲಗಳಿರುತ್ತವೆ. ಉದಾಹರಣೆಗೆ, ನಾನು ಇಂದು ಒಬ್ಬನನ್ನು ಅವಾಚ್ಯ ಶಬ್ದಗಳಿಂದ ಅವಮಾನಗೊಳಿಸಿದೆನಾದರೆ, ಇದರ ಫಲದಿಂದ ನನಗೆ ಸಂತೋಷವಾಗಿ ಅವಮಾನಿತಗೊಂಡವನಿಗೆ ದುಃಖವಾಗುತ್ತದೆ. ನನಗಾಗುವ ಸಂತೋಷ ಮತ್ತು ಇನ್ನೊಬ್ಬನಿಗಾಗುವ ದುಃಖ ಇವೆರಡೂ ದೃಷ್ಟಫಲಗಳು. ಆದರೆ ಕರ್ಮ ಸಿದ್ಧಾಂತದ

ಪ್ರಕಾರ, ಈಗ ನನಗೆ ಸಂತೋಷವಾದರೂ, ಮುಂದೆ ಅಥವಾ ಮುಂದಿನ ಜನ್ಮದಲ್ಲಿ (ಅಥವಾ ಮತ್ತಾವುದೋ ಮುಂದಿನ ಜನ್ಮದಲ್ಲಿ) ಈ ನನ್ನ ಕೃತ್ಯಕ್ಕನುಗುಣವಾಗಿ ನನಗೆ ತಕ್ಕ ಪ್ರತಿಫಲ ಸಿಗಲೇಬೇಕು. ಇದು ಅದೃಷ್ಟ.

ಕರ್ಮಗಳನ್ನು ಸಾಮಾನ್ಯವಾಗಿ ಸಂಚಿತ, ಪ್ರಾರಬ್ಧ ಮತ್ತು ಆಗಾಮಿ ಎಂದು ವಿಂಗಡಿಸುವುದು ವಾಡಿಕೆ. ನಾವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳೆಲ್ಲಕ್ಕೂ ಆಯಾ ಜನ್ಮದಲ್ಲೇ ಪ್ರತಿಫಲ ಸಿಕ್ಕುತ್ತದೆ ಎಂಬ ನಿಯಮವೇನಿಲ್ಲ. ಅಂತಹ ಕರ್ಮಗಳೆಲ್ಲವೂ ಸೇರಿಕೊಂಡು ಮುಂದಿನ ಯಾವುದೋ ಒಂದು ಜನ್ಮದಲ್ಲಿ ಅಥವಾ ಜನ್ಮಗಳಲ್ಲಿ ಪ್ರತಿಫಲ ನೀಡಬಹುದು. ಎಲ್ಲಿಯವರೆಗೆ ಅಂತಹ ಕರ್ಮಗಳು ಕೂಡಿ ಇನ್ನೂ ಕರ್ಮಫಲ ನೀಡುವುದಿಲ್ಲವೋ ಅಲ್ಲಿಯವರೆಗೂ ಅವಕ್ಕೆ ಕೂಡಿಟ್ಟ (ಸಂಚಿತ) ಕರ್ಮಗಳೆನ್ನುತ್ತೇವೆ. ಈ ಸಂಚಿತ ಕರ್ಮಗಳೇ ನಮ್ಮ ಈಗಿನ ಮತ್ತು ಮುಂದಿನ ಸಾಮರ್ಥ್ಯ, ಬುದ್ಧಿವಂತಿಕೆ, ಪ್ರವೃತ್ತಿಗಳು, ಇವುಗಳನ್ನು ನಿರ್ಧರಿಸುವುದು.

ಯಾವುದೇ ಕರ್ಮವು ಎಂದಾದರೊಂದು ದಿನ ತಕ್ಕ ಫಲ ನೀಡಲೇಬೇಕು. ಹೀಗೆ ಫಲಕೊಡಲು ಪ್ರಾರಂಭವಾದ ಕರ್ಮವೇ ಪ್ರಾರಬ್ಧ ಕರ್ಮ. ನನಗೆ ಈ ಜನ್ಮದಲ್ಲಿ ಒಂದೇ ಕಾಲಿರಬೇಕೆಂಬುದಕ್ಕೆ, ಯಾವುದೋ ಒಂದು ಸಂಚಿತ ಕರ್ಮವು ಪ್ರಾರಬ್ಧವಾಗಿದೆ ಎಂದರ್ಥ. ಹೀಗೆ ನಮ್ಮ ದೇಹ, ಬುದ್ಧಿವಂತಿಕೆ, ನಮ್ಮ ನೈತಿಕ ಮಟ್ಟ, ನಮ್ಮ ಧಾರ್ಮಿಕ ಅಥವಾ ಆಧ್ಯಾತ್ಮಿಕ ಒಲವು, ನಮ್ಮ ವಿದ್ಯಾಸಂಪಾದನೆ, ನಮ್ಮ ಹಣಗಳಿಕೆಯ ಸಾಮರ್ಥ್ಯ, ಇತ್ಯಾದಿಗಳೆಲ್ಲವೂ ಪ್ರಾರಬ್ಧಕರ್ಮದ ಫಲ. ಹೀಗೆ ಸಂಚಿತ ಕರ್ಮವು ಪ್ರಾರಬ್ಧ ಕರ್ಮವಾಗುವುದನ್ನು ಅಂದರೆ, ಪ್ರಾರಬ್ಧಕರ್ಮದ ಫಲವಾಗಿ ನಾವು ಅನುಭವಿಸಬೇಕಾದ ಸುಖ ದು:ಖಗಳನ್ನು ನಾವು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಆಗಾಮಿ ಕರ್ಮವೆಂದರೆ ಈ ಜನ್ಮದಲ್ಲಿ ಮಾಡುವ ಕರ್ಮಕ್ಕೆ ಮುಂದಿನ ಜನ್ಮದಲ್ಲಿ ಸಿಕ್ಕುವ ಫಲ. ಹಿಂದಿನ ಅನೇಕ ಜನ್ಮಗಳಲ್ಲಿ ಸಂಚಿತವಾದ ಕರ್ಮಗಳಿಗೆ ಫಲಸಿಕ್ಕುವುದು ಕೆಲವು ವೇಳೆ ಒಂದು ಜನ್ಮದಲ್ಲಿ ಸಾಕಾಗಲಾರದು.

ಆದರೆ ಮೋಕ್ಷಾರ್ಥಿಯಾಗಿ ಹೊರಟವನು ವಿಜಯಿಯಾದರೆ, ಅವನು ತನ್ನ ಆಗಾಮಿಕರ್ಮಗಳನ್ನು ತಡೆಯುವುನಲ್ಲದೆ, ಸಂಚಿತ ಕರ್ಮಗಳನ್ನೂ ಸಹ ಸುಡಬಲ್ಲನು. ಅಲ್ಲದೆ ಆಗಾಮಿಕರ್ಮಗಳ ಸಹಾಯದಿಂದ ತನ್ನ ಮುಂದಿನ ಜನ್ಮವನ್ನೂ ಅವನು ರೂಪಿಸಿಕೊಳ್ಳಬಲ್ಲನು.

**ಕರ್ಮದ ವರ್ಮ :** ನಿಜವಾದ ಕರ್ಮ ಯಾವುದು ಅಥವಾ ಹೇಗಿರಬೇಕು ಎಂಬ ರಹಸ್ಯ. ಮೋಳಿಗೆ ಮಾರಯ್ಯನ ಪ್ರಕಾರ, ಕರ್ಮ ಹೇಗಿರಬೇಕೆಂದರೆ, "ಉಮ್ಮಳದುಮ್ಮಳವೆಂಬ ಸುಖಸುಮ್ಮಾನವೆಂಬ ಉಭಯು" ಅಡಗಬೇಕು. ಸುಖದುಃಖಗಳ

ವ್ಯತ್ಯಾಸಗೊತ್ತಿಲ್ಲದವರಂತೆ ಯಾರು ವರ್ತಿಸುತ್ತಾರೋ, ಹಾಗೂ ಪ್ರಾಣಲಿಂಗಿಯಾಗಿ ಯಾರು ವರ್ತಿಸುತ್ತಾರೋ, ಅವರಿಗೆ ನಿಜವಾದ ಕರ್ಮದ ರಹಸ್ಯ ಗೊತ್ತು. (ಅ:೧೬೩೮)

**ಕರ್ಮಪೂಜೆ :** ಪರವಸ್ತುವು ಅನ್ಯವೆಂದು ತಿಳಿದು, ದೈಹಿಕವಾಗಿ ಮಾಡುವ ಪೂಜೆ. ಈ ಪೂಜೆಯಲ್ಲಿ ಲಿಂಗವನ್ನು ನೀರಿನಿಂದ ತೊಳೆಯುವುದು, ಹೂವುಗಂಧಗಳನ್ನು ಅರ್ಪಿಸುವುದು, ಇತ್ಯಾದಿ ದೃಶ್ಯಗೋಚರ ಕರ್ಮಗಳಿರುತ್ತವೆ.

**ಕರ್ಮಫಲಭೋಗ :** ನಾವು ಉದ್ದೇಶ ಪೂರ್ವಕವಾಗಿ ಮಾಡಿದ ಕರ್ಮಗಳಿಗೆ ತಕ್ಕ ಎರಡು ರೀತಿಯ ಫಲಗಳಿರುತ್ತವೆ. ಒಂದನ್ನು ಈ ಕರ್ಮ ಮುಗಿದ ತಕ್ಷಣವೇ ಕಾಣಬಹುದು. ಮತ್ತೊಂದು ಕಾಣುವುದಿಲ್ಲವಾದುದರಿಂದ ಅದು ಅದೃಷ್ಟವೆನಿಸಿಕೊಳ್ಳುತ್ತದೆ. ಉದಾಹರಣೆಗೆ, ಅ ಎಂಬುವನು ಬ ಎಂಬವನನ್ನು ಹೆದರಿಸುತ್ತಾನೆ. ಇದರ ದೃಷ್ಟ ಪರಿಣಾಮವಾಗಿ ಹೆದರಿಸಿದ ವ್ಯಕ್ತಿಗೆ ಲಾಭವಾಗಬಹುದು. ಆದರೆ ಇದು ಅನೈತಿಕವಾಗಿದ್ದರೆ, ಅವನಲ್ಲಿ ಕೆಲವು ಅದೃಷ್ಟ ಶಕ್ತಿಗಳು ಉಳಿದುಕೊಂಡು ಅವು ಈ ಜನ್ಮದಲ್ಲಿ ಅಥವಾ ಮುಂದಿನ ಜನ್ಮದಲ್ಲಿ ಅಥವಾ ಜನ್ಮಗಳಲ್ಲಿ ಫಲನೀಡುತ್ತವೆ. ಈ ಅದೃಷ್ಟ ಫಲಗಳನ್ನು ಭೋಗಿಸುವುದರಿಂದ ಅವನು ತಪ್ಪಿಸಿಕೊಳ್ಳಲಾರ.

೩. **ಕರ್ಮಯೋಗ :** ಲಿಂಗಾಂಗ ಸಾಮರಸ್ಯದ ಬದಲು ಮತ್ತೆ ಪುನರ್ಜನ್ಮವನ್ನೇ ನೀಡುವ ಯೋಗ. ತೋಂಟದ ಸಿದ್ಧಲಿಂಗ ಶಿವಯೋಗಿಗಳ ಪ್ರಕಾರ,ಯಾವ ಯೋಗದಲ್ಲಿ ಇಷ್ಟಲಿಂಗಾರ್ಚನೆಗೆ ಅವಕಾಶವಿಲ್ಲವೋ ಅವೆಲ್ಲವೂ ಮತ್ತೆ ನಮಗೆ ಕರ್ಮವನ್ನುಂಟುಮಾಡುವುದರಿಂದ ಅವೆಲ್ಲ ಕರ್ಮಯೋಗಗಳೆನಿಸಿಕೊಳ್ಳುತ್ತವೆ. ಮತ್ತೊಂದರ್ಥದ ಪ್ರಕಾರ, ಮೋಕ್ಷವನ್ನು ಪಡೆಯಲು ಅನುಸರಿಸುವ ನಿಷ್ಕಾಮ ಕರ್ಮವೇ ಕರ್ಮಯೋಗ.

**ಕರ್ಮವಶ :** ಸತ್ಕರ್ಮಗಳನ್ನಷ್ಟೇ ಮಾಡುವಂತೆ ಪ್ರೇರೇಪಿಸುವ ನಿರ್ಧಾರ ಎಂಬುದು ಒಂದರ್ಥವಾದರೆ, ಹಿಂದಿನ ಜನ್ಮದ ಕರ್ಮಕ್ಕೆ ವಶವಾಗುವುದು ಎಂಬುದು ಎರಡನೆ ಅರ್ಥ.

**ಕರ್ಮವಾದಿ :** ಕರ್ಮಗಳು ಎಂದಾದರೊಮ್ಮೆ ದಿನ-ಕೊನೆಗೆ ಮುಂದಿನ ಯಾವುದೋ ಒಂದು ಜನ್ಮದಲ್ಲಿ ಫಲ ನೀಡಿಯೇ ನೀಡುತ್ತವೆ, ಇದಕ್ಕೆ ವಿನಾಯಿತಿ ಇಲ್ಲ, ಎಂದು ವಾದಿಸುವವನು. ಇವನ ಪ್ರಕಾರ ಕರ್ಮಗಳು ಫಲ ನೀಡುವುದಕ್ಕೆ ಈಶ್ವರ ಬೇಕಿಲ್ಲ, ಒಂದು ವೇಳೆ ಈಶ್ವರ ಇದ್ದರೂ, ಅವನು ಯಾರ ಕರ್ಮಫಲವನ್ನೂ ತಪ್ಪಿಸಲಾರ.

ಈ ರೀತಿಯ ಕರ್ಮವಾದವು ವಚನಕಾರರಿಗೆ ಸ್ವೀಕಾರಾರ್ಹವಲ್ಲ. ಏಕೆಂದರೆ, ಅವರ ಪ್ರಕಾರ, ಕರ್ಮವು ಅಚೇತನವಾದುದರಿಂದ, ಅದಕ್ಕೆ ಯಾರಿಗೆ ಯಾವ ಕಾಲಕ್ಕೆ ಎಂಥ ಫಲವನ್ನು ಎಷ್ಟು ಪ್ರಮಾಣದಲ್ಲಿ ಕೊಡಬೇಕು ಎಂಬುದು ಗೊತ್ತಿಲ್ಲ, ಈ ರೀತಿ ಯೋಗ್ಯ ಕರ್ಮಫಲವು ಯೋಗ್ಯಕಾಲದಲ್ಲಿ ನಮಗೆ ಸಿಗಬೇಕೆಂಬುದನ್ನು ಶಿವನು ಮಾತ್ರ

ನಿರ್ಧರಿಸಬಲ್ಲನು. ಅಲ್ಲದೆ, ಆತ್ಯಂತಿಕ ಭಕ್ತಿಗೆ ತಕ್ಕ ಅನುಗ್ರಹವನ್ನೂ ಅವನೇ ಮಾಡಬಲ್ಲನು ಹಾಗೂ ಎಲ್ಲ ಕರ್ಮಗಳನ್ನೂ ನಾಶಮಾಡಬಲ್ಲನು ಒಮ್ಮೆ ವೀರಶೈವನಾಗಿ ಹುಟ್ಟಿದ ಮೇಲೆ, ಅವನಿಗೆ ಮೋಕ್ಷಲಭಿಸುವುದರಿಂದ, ಅವನಿಗೆ ಯಾವಕರ್ಮವೂ ಬಾಧಿಸಲಾರದು.

**ಕರ್ಮವಿಲ್ಲದ ಕಾರಣಿಕ :** ಹಿಂದಿನ ಎಲ್ಲ ಕರ್ಮಗಳನ್ನೂ ಸುಟ್ಟು, ಮುಂದಿನ ಕರ್ಮಗಳು ಫಲನೀಡದಂತೆ ಮಾಡಿದ ಶರಣನು ಕಾರಣಿಕ. (ಮಹಾಪುರುಷ); ಜೀವನ್ಮುಕ್ತ. ಒಂದು ಸದುದ್ದೇಶದಿಂದ ಜನ್ಮವೆತ್ತಿದವನು. (೩:೭೬೯)

**ಕರ್ಮವಿಲ್ಲದ ಪೂಜೆ :** ಲಿಂಗವನ್ನು ತೊಳೆಯುವುದು, ಅದರ ಮೇಲೆ ಹೂವಿಡುವುದು, ಇತ್ಯಾದಿ ಕರ್ಮಪೂಜೆಯಾದರೆ, ಮಾನಸಿಕವಾಗಿ ಮಾಡುವ ಪೂಜೆ, ಜಪ, ಧ್ಯಾನ ಇವೆಲ್ಲ ಕರ್ಮವಿಲ್ಲದ ಪೂಜೆಗಳೆನಿಸಿಕೊಳ್ಳುತ್ತವೆ (೮:೧೧೫೮).

**ಕರ್ಮಸಾದಾಖ್ಯ :** (ನೋಡಿ : **ಸಾದಾಖ್ಯ**)

**ಕರ್ಮಿ :** ೧. ಕರ್ಮಕಾಂಡದ ಅನುಯಾಯಿ. ಯಜ್ಞಯಾಗಾದಿಗಳನ್ನು ಮಾಡುವವನು ಅಥವಾ ಮಾಡಿಸುವವನು. (೧:೫೬೨) ೨. ಕರ್ಮವನ್ನು ಮಾಡಿ ಮತ್ತೆ ಹುಟ್ಟುವವನು, ಭವಿ.

**ಕರ್ಮೇಂದ್ರಿಯಗಳು :** ಆತ್ಮನಿಗೆ ಕರ್ಮವನ್ನು ಮಾಡಲು ಬೇಕಾದ ಉಪಕರಣಗಳು; ಕರ್ಮೇಂದ್ರಿಯಗಳು ಆತ್ಮನ ಬಾಹ್ಯಕರಣಗಳೂ ಹೌದು. ಇವು ಐದು, ಯಾವುವೆಂದರೆ, ಕೈ, ಕಾಲು, ಜನನೇಂದ್ರಿಯ, ಗುದ ಮತ್ತು ವಾಕ್ಕು.

**ಕಲಶಾಭಿಷೇಕ ದೀಕ್ಷೆ :** ಸ್ವಸ್ತಿಕಾರೋಹಣ ದೀಕ್ಷೆಯ ನಂತರ (ನೋಡಿ : ಸ್ವಸ್ತಿಕಾರೋಹಣ ದೀಕ್ಷೆ) ಜಂಗಮನು ನೆರೆದಿರುವ ಪ್ರಮಥಗಣಗಳು, ಆರಾಧ್ಯರು, ಭಕ್ತರು ಮತ್ತು ಮಾಹೇಶ್ವರರೊಪ್ಪಿಗೆಯಿಂದ ನಿರಂಜನ ಜಂಗಮಕ್ಕೆ ಸಿಂಹಾಸನ ಮಾಡಿ, ಪಂಚಕಲಶಗಳಿಗೆ ಜಂಗಮ ದೀಕ್ಷಾ ಪಾದೋದಕವನ್ನು ತುಂಬುತ್ತಾರೆ. ಅನಂತರ, ಷಟ್‌ಸಮ್ಮಾರ್ಜನೆ, ಷಡ್ವರ್ಣದ ರಂಗೋಲೆ, ನವವಿಧ ಧಾನ್ಯ, ನವಸೂತ್ರ, ವಿಭೂತಿ, ವೀಳ್ಯ, ಸುವರ್ಣ ಕಾಣಿಕೆಗಳನ್ನು ಕೊಟ್ಟು, ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ್ಯ ಮೂರ್ತಿಗಳ ಪ್ರತಿನಿಧಿಗಳಾದ ಪಂಚಕಲಶಗಳಿಗೆ ಜಂಗಮಪಾದ ಸೋಂಕುವಂತೆ ಗುರುವು ಮುಹೂರ್ತಮಾಡಿ, ಆ ಕಲಶಗಳ ಸೂತ್ರವನ್ನು ತನ್ನ ಕಾಲ್ಬೆರಳಿಗೆ ಕಟ್ಟಿಕೊಳ್ಳುತ್ತಾನೆ. ಕಲಶಗಳ ಪೂರ್ವಭಾಗದಲ್ಲಿ ಕರಿಕಂಬಳಿಯ ಗದ್ದುಗೆ ಮಾಡಿ, ಅದರ ಮೇಲೆ ಮೋಕ್ಷಾರ್ಥಿಯಾಗಿ ಬಂದ ಶಿಷ್ಯನನ್ನು ಕೂರಿಸುತ್ತಾರೆ. ಹಾಗೂ ತನ್ನ ಕಾಲ್ಬೆರಳಿಗೆ ಕಟ್ಟಿರುವ ಸೂತ್ರವನ್ನು ಶಿಷ್ಯನಿಗೆ ಕಟ್ಟುತ್ತಾರೆ. ಆ ಮೇಲೆ, ಶಿಷ್ಯನು ಧರಿಸಿರುವ ಶಿವಲಿಂಗವನ್ನು ಅವನ ಕೈಮೇಲಿರಿಸಿ, ಅದರ ಮೇಲೆ ನಿರಂಜನ ಜಂಗಮದ ಪಾದವನ್ನು ಮುಟ್ಟಿಸಿ, ಪಂಚಕಲಶಗಳಲ್ಲಿರುವ ಜಂಗಮ ಪಾದೋದಕವನ್ನು ಒಂದು ಕಲಶಕ್ಕೆ ತುಂಬಿ

ಪ್ರಮಥಗಣಾರಾಧ್ಯ ಭಕ್ತಮಾಹೇಶ್ವರರೆಲ್ಲ ಶಿಷ್ಯೋತ್ತಮನ ಮಸ್ತಕದ ಮೇಲೆ, ಮಂತ್ರಧ್ಯಾನದಿಂದ ಆ ಪಾದೋದಕವನ್ನು ಪ್ರೋಕ್ಷಿಸುವುದೇ ಕಲಶಾಭಿಷೇಕ ದೀಕ್ಷೆ. (೧೦:೬೮೮)

**ಕಲೆಗಳು :** ವಚನಗಳಲ್ಲಿ ಬರುವ ಕಲೆಗಳ ಪರಿಕಲ್ಪನೆಯು ಸ್ಪಷ್ಟತೆಗೆ ದೂರ. ಕೆಲವು ವಚನಕಾರರು ಕಲೆಗಳು ಅಥವಾ ಕಲಾಶಕ್ತಿಗಳು ಅಧೋಮಾಯೆಯ ರೂಪಗಳೆಂದೂ, ಭಕ್ತಿಗಳು ಅಥವಾ ಭಕ್ತಿ ಶಕ್ತಿಗಳು ಊರ್ಧ್ವಮಾಯೆಯ ರೂಪಗಳೆಂದು ಹೇಳಿದರೆ, ಮತ್ತೆ ಕೆಲವರು ಪರಾಶಕ್ತಿ, ಆದಿಶಕ್ತಿ ಮುಂತಾದ ಶಕ್ತಿಗಳು ಅಧೋಮಾಯೆಯ ರೂಪಗಳೆಂದೂ, ಕಲೆ ಅಥವಾ ಕಲಾಶಕ್ತಿಗಳೇ ಊರ್ಧ್ವಮಾಯೆಯ ರೂಪಗಳೆಂದೂ ಹೇಳುತ್ತಾರೆ. ಕೆಲವರು ಕಲಾ, ಶಕ್ತಿಮತ್ತು ಭಕ್ತಿಗಳಿಗೆ ಯಾವ ಭೇದವೂ ಇಲ್ಲವೆನ್ನುತ್ತಾರೆ. ಒಬ್ಬನೇ ವಚನಕಾರ "ಕಲೆ" ಎಂಬ ಪದವನ್ನು ಮೂರು ಅರ್ಥಗಳಲ್ಲಿ ಬಳಸಿ, ನಮ್ಮ ಗೊಂದಲವನ್ನು ಮತ್ತಷ್ಟು ಅಧಿಕ ಮಾಡುತ್ತಾನೆ. ಸಧ್ಯಕ್ಕೆ ನಾವು ಕಲೆಯೆಂದರೆ ಪರಶಿವನ ಶಕ್ತಿಯ ಶುದ್ಧರೂಪವೆಂದೂ, ಶಕ್ತಿಗಳೇ ಅಶುದ್ಧರೂಪವೆಂದೂ ಊಹಿಸಿ ಮುಂದುವರೆಯಬಹುದು.

ಕಲೆಗಳ ಪರಿಕಲ್ಪನೆಯಲ್ಲಿ ಅಸ್ಪಷ್ಟತೆ ಮತ್ತು ಒಮ್ಮತವಿಲ್ಲದಿದ್ದರೂ, ಅವುಗಳ ಬಗ್ಗೆ ಈ ಎರಡು ವಿಷಯಗಳನ್ನು ಖಚಿತವಾಗಿ ಹೇಳಬಹುದು.

(೧) ಅಕ್ಕಮಹಾದೇವಿಯ ಪ್ರಕಾರ ( ೫:೪೮), ಉಪಾಸ್ಯನಾಗಿ ಕಾಣಬೇಕೆಂಬ ಉದ್ದೇಶದಿಂದ ಮಹಾಲಿಂಗವು ಪಂಚಸಾದಾಖ್ಯವಾಗುತ್ತದೆ. ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ ಮತ್ತು ಪ್ರಸಾದಲಿಂಗ ಇವುಗಳೇ ಆ ಲಿಂಗದ ಮುಖಗಳು ಅಥವಾ ಪ್ರಕಾಶಗಳು. (ಸದಾಶಿವ, ತತ್ಪುರುಷ, ಇತ್ಯಾದಿ ಹೆಸರುಗಳೂ ಈ ಹೆಸರುಗಳ ಬದಲು ಬಳಸಲ್ಪಡುತ್ತವೆ). ಅಂತೂ, ಐದು ಮುಖಗಳಿಂದ (ಪಂಚಸಾದಾಖ್ಯಗಳಿಂದ) ಪಂಚಾಕ್ಷರಿ ಮಂತ್ರ ಉತ್ಪತ್ತಿಯಾಗುತ್ತದೆ. ಹೇಗೆಂದರೆ : ನಕಾರವು ಸದ್ಯೋಜಾತ ಮುಖದಿಂದಲೂ, ಮಕಾರವು ವಾಮದೇವ ಮುಖದಿಂದಲೂ, ಶಿಕಾರವು ಅಘೋರ ಮುಖದಿಂದಲೂ ವಕಾರವು ತತ್ಪುರುಷ ಮುಖದಿಂದಲೂ, ಯಕಾರವು ಈಶಾನ್ಯ ಮುಖದಿಂದಲೂ ಉತ್ಪತ್ತಿಯಾಗುತ್ತವೆ.

ಈ ಐದು ಅಕ್ಷರಗಳು ಐದು ಕಲೆಗಳನ್ನು ಉತ್ಪಾದಿಸುತ್ತವೆ. ನಕಾರವು ನಿವೃತ್ತಿಕಲೆಯನ್ನೂ, ಮಕಾರವು ಪ್ರತಿಷ್ಠಾಕಲೆಯನ್ನೂ, ಶಿಕಾರವು ವಿದ್ಯಾಕಲೆಯನ್ನೂ, ವಕಾರವು ಶಾಂತಿಕಲೆಯನ್ನೂ, ಯಕಾರವು ಶಾಂತ್ಯತೀತ ಕಲೆಯನ್ನೂ ಉತ್ಪಾದಿಸುತ್ತವೆ. ತೋಂಟದ ಸಿದ್ಧಲಿಂಗ ಶಿವಯೋಗಿಗಳು ಶಾಂತ್ಯತೀತೋತ್ತರೆಯೆಂಬ ಆರನೆ ಕಲೆಯನ್ನು ಗುರುತಿಸಿ, ಅದು ಮಹಾಲಿಂಗ ಅಥವಾ ನಿರ್ಮುಕ್ತ ಸಾದಾಖ್ಯದಿಂದ ಉತ್ಪತ್ತಿಯಾಗುತ್ತದೆ ಎನ್ನುತ್ತಾರೆ. (೧೧:೬೩).

(೨) ಕಲೆಗಳು ಸಾಧಕನಿಗೆ ಆಧ್ಯಾತ್ಮಿಕ ಜೀವನವನ್ನು ಪ್ರಬಲಗೊಳಿಸಲು ಸಹಾಯ ಮಾಡುತ್ತವೆ. ಜೀವಾತ್ಮನು ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಅಂತಃಕರಣ ಮುಂತಾದವುಗಳ ದುಷ್ಪ್ರಭಾವದಿಂದ ತಪ್ಪಿಸಿಕೊಳ್ಳುವವರೆಗೂ ಮುಕ್ತನಾಗಲಾರ. ಆದರೆ, ನಿವೃತ್ತಿ ಕಲೆಗಳ ಸಹಾಯದಿಂದ ಅವನು ಅವುಗಳ ದುಷ್ಕ್ರಿಯೆಗಳನ್ನು ತಪ್ಪಿಸಿ, ಅವು ಸತ್ಕ್ರಿಯೆ ಮಾಡುವಂತೆ ಮಾಡಬಲ್ಲನು. ಕರ್ಮೇಂದ್ರಿಯಗಳು ಅವನನ್ನು ವಿವಿಧ ರೀತಿಯಲ್ಲಿ ಪ್ರೇರೇಪಿಸಿ, ಅವನನ್ನು ಕರ್ಮಬಂಧನಕ್ಕೊಳಗು ಮಾಡಿವೆ. ಆದರೆ ನಿವೃತ್ತಿಕಲೆಯ ಪ್ರಭಾವದಿಂದ, ಅವನು ಅವುಗಳಿಂದ ಆಧ್ಯಾತ್ಮಿಕ ಕೆಲಸಗಳನ್ನಷ್ಟೇ ಮಾಡಿಸುತ್ತಾನೆ. ಹೀಗೆ, ಅವನ ವಾಗಿಂದ್ರಿಯವು ಇನ್ನು ಮೇಲೆ ಯಾವಾಗಲೂ ಶಿವನಾಮವನ್ನೆ ಉಚ್ಚರಿಸುತ್ತದೆ; ಸತ್ಯವನ್ನೇ ನುಡಿಯುತ್ತದೆ; ಮೃದು ವಚನವನ್ನಷ್ಟೇ ನುಡಿಯುತ್ತದೆ; ಅವನ ಕೈಗಳು ಎಂದೂ ದುಷ್ಟ ಕಾರ್ಯಗಳನ್ನೂ ಮಾಡದೆ, ಸತ್ಕಾರ್ಯಗಳನ್ನಷ್ಟೇ ಮಾಡಲು ಉಪಯೋಗಿಸಲ್ಪಡುತ್ತವೆ; ಅವನ ಕಾಲುಗಳು ಯಾವ ದುರ್ಮಾರ್ಗವನ್ನೂ ಕ್ರಮಿಸದೆ, ಗುರು ವಿಧಿಸಿದ ಸನ್ಮಾರ್ಗದಲ್ಲಿ ಮಾತ್ರ ಚಲಿಸುತ್ತವೆ; ಅವನ ಗುದವು ಆಣವ, ಕಾರ್ಮಿಕ ಮತ್ತು ಮಾಯೀಯ ಮಲಗಳಿಂದ ಮುಕ್ತವಾಗುತ್ತದೆ; ಅವನು ಜನನೇಂದ್ರಿಯದ ಮೂಲಕ ಕೂಟದ ಸುಖಪಡುವ ಇಚ್ಛೆಯನ್ನು ತ್ಯಜಿಸಿ, ಲಿಂಗಾಂಗ ಸಾಮರಸ್ಯದ ಮೂಲಕ ಸುಖಪಡುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ಇದರಲ್ಲಿ ಜಯಸಾಧಿಸಿದವನು ಆಚಾರಲಿಂಗ ಅಥವಾ ಅದರ ಪ್ರಕಾಶವಾದ ಸದ್ಯೋಜಾತ (ಅಥವಾ ಕರ್ಮ) ಸಾದಾಖ್ಯವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಸಾಧಕನ ಆಧ್ಯಾತ್ಮ ಸಾಧನೆಯಲ್ಲಿ ಇನ್ನೂ ಪ್ರಗತಿಯಾದರೆ ಅವನು ಪ್ರತಿಷ್ಠಾಕಲೆಯ ಪ್ರಭಾವಕ್ಕೊಳಗಾಗಿದ್ದಾನೆಂದರ್ಥ. ಆಗ ಅವನು ರೂಪರಸಗಂಧಾದಿ ವಿಷಯಗಳ ಬಯಕೆಯನ್ನು ನಿಯಂತ್ರಿಸುತ್ತಾನೆ. ಆಗ ಅವನಿಗೆ ಶಬ್ದವೆಂದರೆ ಗುರುವಿನ ವಚನ (ಶಬ್ದ), ಸ್ಪರ್ಶವೆಂದರೆ ಇಷ್ಟಲಿಂಗ ಸ್ಪರ್ಶ, ರೂಪವೆಂದರೆ, ಲಾಂಛನಗಳಾದ ರುದ್ರಾಕ್ಷಿ, ವಿಭೂತಿ, ಕಾವಿಬಟ್ಟೆ, ಮುಂತಾದವುಗಳ ನೋಟ, ರಸವೆಂದರೆ ಪ್ರಸಾದದ ರುಚಿ, ವಾಸನೆಯೆಂದರೆ ಶಿವನ ನಿರ್ಮಲತೆ. ಹೀಗೆ ತನ್ಮಾತ್ರೆಗಳನ್ನು ನಿಯಂತ್ರಿಸ ಬಲ್ಲ ಸಾಧಕನು ಗುರುಲಿಂಗ ಅಥವಾ ಅದರ ಪ್ರಕಾಶವಾದ ವಾಮದೇವ ಮುಖ (ಅಥವಾ ಕರ್ತುಸಾದಾಖ್ಯ)ವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಶಿವಲಿಂಗ ಅಥವಾ ಅದರ ಪ್ರಕಾಶವಾದ ಅಘೋರಮುಖ (ಮೂರ್ತಿಸಾದಾಖ್ಯ)ವನ್ನು ಅಂತಶ್ಚಕ್ಷುವಿನಿಂದ ನೋಡಬೇಕೆನ್ನುವ ಸಾಧಕನು ವಿದ್ಯಾಕಲೆಯನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ವಿದ್ಯಾಕಲೆಯನ್ನು ಸಾಧಿಸಿದವನು ರುದ್ರಾಕ್ಷಿ, ವಿಭೂತಿ ಮತ್ತು ಲಿಂಗವನ್ನು ಧರಿಸುತ್ತಾನಲ್ಲದೆ ಯಾವ ಆಲಂಕಾರಿಕ ವಸ್ತುಗಳನ್ನೂ ಧರಿಸುವುದಿಲ್ಲ; ಶಿವಲಿಂಗವನ್ನು ನೋಡುತ್ತಾನಲ್ಲದೆ ಯಾವ ಮೋಹಕ ವಸ್ತುವನ್ನೂ ನೋಡುವುದಿಲ್ಲ;

ಪ್ರಸಾದವನ್ನಲ್ಲದೆ ಏನನ್ನೂ ತಿನ್ನ. ಏಕೆಂದರೆ, ಅವನಿಗೆ ಗುರುವಿನಿಂದ ವಿದ್ಯೆಯಾವುದ ಅವಿದ್ಯೆ ಯಾವುದು ಎಂಬುದರ ಭೇದ ತಿಳಿದಿದೆ.

ಜಂಗಮಲಿಂಗ ಅಥವಾ ಅದರ ಪ್ರಕಾಶವಾದ ತತ್ಪುರುಷ ಮುಖ (ಅಥವಾ ಅಮೂರ್ತಿಸಾದಾಖ್ಯ)ವನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆನ್ನುವ ಸಾಧಕನು ಶಾಂತಕಲೆಯನ್ನು ಅವಲಂಬಿಸಬೇಕಾಗುತ್ತದೆ. ಇದರಿಂದಾಗಿ ಅವನಿಗೆ ಪ್ರಾಣ, ಸಮಾನ, ಉದಾನ, ಅಪಾನ, ವ್ಯಾನ ಎಂಬ ಐದು ವಾಯುಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ, ಹಾಗೂ ಪರಶಿವನಂತೆ ಸತ್ತು, ಚಿತ್ತು, ಆನಂದ, ನಿತ್ಯ ಮತ್ತು ಪರಿಪೂರ್ಣನಾಗುತ್ತಾನೆ.

ಶಾಂತ್ಯತೀತ ಕಲೆಯ ಸಹಾಯದಿಂದ ಸಾಧಕನು ಮನಸ್ಸು, ಚಿತ್ತ, ಬುದ್ಧಿ ಮತ್ತು ಅಹಂಕಾರಗಳನ್ನು ನಿಯಂತ್ರಿಸಿ, ಆಧ್ಯಾತ್ಮದಲ್ಲಿ ಮತ್ತಷ್ಟು ಪ್ರಗತಿ ಸಾಧಿಸುತ್ತಾನೆ. ಆಗ ಅವನ ಮನಸ್ಸು ಯಾವಾಗಲೂ ಲಿಂಗವನ್ನೆ ಮನನ ಮಾಡುತ್ತಿರುತ್ತದೆ; ಅವನ ಬುದ್ಧಿಯು ಯಾವಾಗಲೂ ಸಚ್ಚಾರಿತ್ರವನ್ನೆ ಅನುಸರಿಸುತ್ತದೆ; ಅವನ ಚಿತ್ತವು ದಾಸೋಹವನ್ನು ಮಾಡಲು ನಿರ್ಧರಿಸುತ್ತದೆ ಮತ್ತು ಅವನು ನಿರಂಹಾರಿಯಾಗುತ್ತಾನೆ.

ಇಲ್ಲಿ ನಿವೃತ್ತಿಕಲೆಗೆ ಆ ಹೆಸರೇಕೆ ಎಂದು ನಾವು ಪ್ರಶ್ನಿಸಬಹುದು. ಅದಕ್ಕೆ ಕಾರಣವಿಷ್ಟೆ. ಮೋಕ್ಷಾರ್ಥಿಯಾದವನು ನಿವೃತ್ತಿ ಮಾರ್ಗವನ್ನು ಅನುಸರಿಸದೆಯೇ ತನ್ನ ಗುರಿಯನ್ನು ಸಾಧಿಸಲಾರ. ನಿವೃತ್ತಿಕಲೆಯು ಸಾಧಕನನ್ನು ನಿವೃತ್ತಿಪರನನ್ನಾಗಿ ಮಾಡುತ್ತದೆ. ಪ್ರತಿಷ್ಠಾಕಲೆಯು ಆ ನಿವೃತ್ತಿಯನ್ನು ಮತ್ತಷ್ಟು ಪ್ರಬಲಗೊಳಿಸುತ್ತದೆ; ವಿದ್ಯಾಕಲೆಯು ಆಧ್ಯಾತ್ಮಿಕ ಜ್ಞಾನವನ್ನು ಹುಟ್ಟಿಸುತ್ತದೆ; ಶಾಂತಿಕಲೆಯು ಇಂದ್ರಿಯಗಳನ್ನು ಶಾಂತವಾಗಿಡುತ್ತದೆ ಹಾಗೂ ಶಾಂತ್ಯತೀತ ಕಲೆಯು ಅಂತಃಕರಣಗಳನ್ನು ಶಾಂತವಾಗಿಡುತ್ತದೆ. ಹೀಗೆ ನೋಡಿದಾಗ ಎಲ್ಲ ಕಲಾಗಳೂ ನಿವೃತ್ತಿಕಲೆಗಳೇ ಎಂಬುದು ಖಚಿತವಾಗುತ್ತದೆ.

**ಕಲೆಗಳು ಮತ್ತು ಶಕ್ತಿಗಳು** : ವಿವಿಧ ವಚನಗಳ ಪರಿಶೀಲನೆಯಿಂದ ಕಲೆಗಳು ಮತ್ತು ಶಕ್ತಿಗಳು ಭಿನ್ನವೋ ಅಲ್ಲವೋ ಎಂಬ ಪ್ರಶ್ನೆ ಏಳುತ್ತದೆ. ತೋಂಟದ ಸಿದ್ಧಲಿಂಗೇಶ್ವರರು ತಮ್ಮ ವಚನವೊಂದರಲ್ಲಿ "ಕಲೆ" ಮತ್ತು "ಶಕ್ತಿ" ಒಂದೇ ವಸ್ತುವಿನ ಎರಡು ಹೆಸರುಗಳೆನ್ನುತ್ತಾರೆ. "ಶಾಂತ್ಯತೀತೋತ್ತರೆಯೆಂಬ ಕಲಾ ಪರಿಯಾಯವನ್ನುಳ್ಳ ಚಿಚ್ಛಕ್ತಿ, ಶಾಂತ್ಯತೀತೆಯೆಂಬ ಕಲಾಪರಿಯಾಯವನ್ನುಳ್ಳ ಪರಾಶಕ್ತಿ, ಶಾಂತಿಯೆಂಬ ಕಲಾಪರಿಯಾಯವನ್ನುಳ್ಳ ಆದಿಶಕ್ತಿ, ವಿದ್ಯಾಕಲಾಪರಿಯಾಯವನ್ನುಳ್ಳ ಇಚ್ಛಾಶಕ್ತಿ, ಪ್ರತಿಷ್ಠಾಕಲಾಪರಿಯಾಯವನ್ನುಳ್ಳ ಕ್ರಿಯಾಶಕ್ತಿ ನಿವೃತ್ತಿ ಕಲಾಪರಿಯಾಯವನ್ನುಳ್ಳ ಚಿಚ್ಛಕ್ತಿ ಹೀಂಗೆ ಒಂದೇ ಶಕ್ತಿ ಆರು ತೆರನಾಗಿ ಷಟ್ ಪ್ರಕಾರವಹಂಥಾ ಲಿಂಗಕ್ಕೆ ಅಂಗರೂಪವಾಗಿತ್ತು" ಎಂಬ ಅವರ ವಚನವು (೧೧:೩೯) ಈ ಮಾತನ್ನು ಸಮರ್ಥಿಸುತ್ತದೆ. ಆದರೆ, ಇದೇ ವಚನಕಾರರು, "ಪಂಚಶಕ್ತಿಯನು, ಪಂಚಸಾದಾಖ್ಯವನು, ಪಂಚಕಲೆಗಳನು, ಪಂಚಾಕ್ಷರಗಳನು .... ತನ್ನಲ್ಲಿ

ಗರ್ಭೀಕರಿಸಿಕೊಂಡು....." (೧೧:೩೬) ಎಂದು ಹೇಳುವಾಗಲೂ, " .... ಆ ಚಿಚ್ಛಕ್ತಿಯ ಸಂಗದಿಂದ ನೀನು ಮಹಾಲಿಂಗವಾದಲ್ಲಿ, ಆ ಶಾಂತ್ಯತೀತೋತ್ತರೆಯೆಂಬ ಕಲೆಯಿಂದ ನಾನು ಉದಯವಾಗಿ; ... ಆ ಚಿಚ್ಛಕ್ತಿಯ ಸಂಗದಿಂದ ನೀನು ಪ್ರಸಾದಲಿಂಗವಾದಲ್ಲಿ, ಆ ಶಾಂತ್ಯತೀತೆಯೆಂಬ ಕಲೆಯಲ್ಲಿ ನಾನು ಉದಯವಾಗಿ.... (ಇತ್ಯಾದಿ)" ಎಂದು ಹೇಳುವಾಗಲೂ ಕಲೆಗಳೇ ಬೇರೆ, ಶಕ್ತಿಗಳೇ ಬೇರೆ ಎಂಬ ನಮ್ಮ ಮತ ದೃಢವಾಗುತ್ತದೆ.

ವಾಸ್ತವವಾಗಿ, ಕಲೆಗಳು ಶಕ್ತಿಗಳಿಂದ ಭಿನ್ನವಲ್ಲ. ಈ ವಾದಕ್ಕೆ ನಾವು ಎರಡು ಆಧಾರಗಳನ್ನು ಕೊಡಬಹುದು : (೧) ಮೂವತ್ತಾರು ತತ್ವಗಳ ಬಗ್ಗೆ ಹೇಳುವಾಗ ಯಾವ ವಚನಕಾರನೂ ಕಲೆಗಳನ್ನು ಪ್ರಸ್ತಾಪಿಸುವುದಿಲ್ಲ. ಶಕ್ತಿಗಳೈದು, ಕಲೆಗಳೈದು ಎಂದು ಹೇಳಿದರೆ ಆಗ ತತ್ವಗಳ ಸಂಖ್ಯೆ ಮೂವತ್ತಾರಕ್ಕಿಂತ ಹೆಚ್ಚಾಗುತ್ತದೆ. (೨) ಪ್ರತಿಯೊಂದು ವಸ್ತುವೂ ಶಕ್ತಿಯ ರೂಪವೆಂದೂ, ಆ ಶಕ್ತಿಯು ಶಿವನ ಅಂಗ (ಭಾಗ ಅಥವಾ ದೇಹ)ವೆಂದೂ ಹೇಳುವಾಗ, ಉಳಿದ ಏನೇ ಇದ್ದರೂ ಅದು ಶಕ್ತಿಯ ರೂಪೇ ಆಗಿರಬೇಕಾಗುತ್ತದೆ. ಅಲ್ಲದೆ, "ಹೀಗೆ ಒಂದೇ ಶಕ್ತಿ ಆರು ತೆರನಾಗಿ ಷಟ್ ಪ್ರಕಾರವಹಂಥಾ ಲಿಂಗಕ್ಕೆ ರೂಪಾಯಿತ್ತು" ಎಂಬ ವಚನವೂ ಲಿಂಗಕ್ಕೆ ಕಲೆಯೇ ಅಂಗವೆಂದೂ, ಕಲೆ ಶಕ್ತಿಯ ಇನ್ನೊಂದು ಹೆಸರೆಂದೂ ಹೇಳುತ್ತದೆ.

ಇನ್ನೊಂದು ಅರ್ಥದಲ್ಲಿ ಶಕ್ತಿ ಮತ್ತು ಕಲೆಗಳು ಕೇವಲ ಹೆಸರುಗಳು ಅಷ್ಟೇ ಅಲ್ಲ, ಸ್ವರೂಪದಲ್ಲಿಯೂ ಭಿನ್ನ ಎಂಬುದನ್ನು ತೋರಿಸಬಹುದು. ಕಲೆಗಳೆಂದರೆ ನಿವೃತ್ತಿಕಲಾ, ವಿದ್ಯಾಕಲಾ (ಇತ್ಯಾದಿ) ಎಂದು ಅರ್ಥ ಮಾಡುವುದಾದರೆ ಕಲೆಗಳು ನಿವೃತ್ತಿ ಶಕ್ತಿಗಳೆಂದೂ, ಶಕ್ತಿಗಳು ಪ್ರವೃತ್ತಿ ಶಕ್ತಿಗಳೆಂದೂ ಹೇಳಬಹುದು. ಅಥವಾ ಕಲೆಗಳು ಪರಶಿವನ ಶಕ್ತಿಯ ಶುದ್ಧ ರೂಪಗಳು, ಶಕ್ತಿಗಳು ಅದೇ ಶಕ್ತಿಯ ಅಶುದ್ಧ ರೂಪಗಳು. ಆಗ ನಿವೃತ್ತಕಲೆ, ಪ್ರತಿಷ್ಠಾಕಲೆ, ಮುಂತಾದ ಕಲೆಗಳು ಶಕ್ತಿಯ ಬೇರೆ ರೂಪಗಳೂ ಹೌದು, ಬೇರೆ ಹೆಸರುಗಳೂ ಹೌದು.

**ಕಳಾಸೂತ್ರ ದಿವ್ಯತೇಜ ಃ ಪ್ರಕಾಶ ಸಂಬಂಧ :** ಭಕ್ತನಲ್ಲಿರುವ ಭಕ್ತಿಗೆ (ಅಥವಾ ಭಕ್ತಿಶಕ್ತಿಗೆ) ಅಥವಾ ಊರ್ಧ್ವಮಾಯೆಗೆ ಕಳೆಯೆಂದು ಹೆಸರು. ಈ ಕಳೆಯನ್ನು ಆಧ್ಯಾತ್ಮಿಕ ಸಾಧನೆಯ ಮೂಲಕ ಪರಿಷ್ಕರಿಸುವ ಮೂಲಕ ಭಕ್ತನು ಸಮಾಧಿ ಸ್ಥಿತಿಯಲ್ಲಿ ಪರಶಿವನನ್ನು ದಿವ್ಯತೇಜದ ರೂಪದಲ್ಲಿ ಕಾಣುತ್ತಾನೆ. (೮:೫೦)

**ಕಳೆ :** ಕಲಾಶಕ್ತಿ. ಈ ಪದಕ್ಕೆ ಬೇರೆ ಬೇರೆ ವಚನಕಾರರು ಬೇರೆ ಬೇರೆ ಅರ್ಥಗಳನ್ನು ಕೊಟ್ಟಿದ್ದಾರೆ. ಶಕ್ತಿ ಪರಶಿವನ ಒಂದು ಭಾಗ ಅಥವಾ ಅಂಗವಾಗಿರುವುದರಿಂದ ಅದು ಶುದ್ಧವಾಗಿಯೇ ಇರುತ್ತದೆ. ಆದುದರಿಂದ ಕೆಲವು ವೇಳೆ ಇದಕ್ಕೆ ಶುದ್ಧ ಮಾಯೆ ಎಂದು ಹೆಸರು. ಮತ್ತೆ ಕೆಲವು ವೇಳೆ ಇದು ಭಕ್ತನಲ್ಲಿರುವ ಭಕ್ತಿಗೆ (ಅಥವಾ ಭಕ್ತಿ ಶಕ್ತಿಗೆ) ಅನ್ವಯವಾಗುತ್ತದೆ.

ಕಳೆಯು ಭಕ್ತಿಶಕ್ತಿ ಮತ್ತು ಕಲಾಶಕ್ತಿ ಎಂದು ಇಬ್ಭಾಗವಾಗುವುದರಿಂದ, ಆ ಪದವು ಎರಡರಲ್ಲಿ ಯಾವೊಂದಕ್ಕಾದರೂ ಅನ್ವಯವಾಗಬಹುದು.

**ಕಳೆಯಗೊತ್ತನರಿಯುವುದು :** ಪರಶಿವನು ಸೃಷ್ಟಿಸಬೇಕೆಂದು ನಿರ್ಣಯಿಸಿದಾಗ ಅವನ ಶಕ್ತಿಯು ಪ್ರಪಂಚವಾಗಿ (ಕಲ್ಲು, ಮರ, ಇತ್ಯಾದಿ ವಸ್ತುಗಳೂ ಅಲ್ಲದೆ, ಮನುಷ್ಯನ ದೇಹ, ಇಂದ್ರಿಯ, ಮನಸ್ಸು ಇತ್ಯಾದಿಗಳಾಗಿಯೂ) ಪರಿಣಮಿಸುತ್ತದೆ. ಮನುಷ್ಯನಲ್ಲಿರುವ ದೇಹೇಂದ್ರಿಯಾದಿಗಳೆಂಬ ಶಕ್ತಿಯು (ಕಳೆಯು) ಮಾನವನ ಆಧ್ಯಾತ್ಮಿಕ ಪ್ರಗತಿಗೆ ಸಹಾಯಕವಾಗಲೂಬಲ್ಲದು, ಅವನ ಈಗಿನ ಸಂಸಾರಬಂಧನವನ್ನು ಮತ್ತಷ್ಟು ಬಿಗಿಗೊಳಿಸಲೂ ಬಲ್ಲದು. ಅಂದರೆ, ಬಂಧನದಲ್ಲಿರಬೇಕೋ, ಮೋಕ್ಷಪಡೆಯಬೇಕೋ ಎಂಬುದಕ್ಕೆ ಬೇಕಾದ ಸಾಮಗ್ರಿಗಳು ನಮ್ಮಲ್ಲಿಯೆ ಇವೆ ಎಂಬುದನ್ನು ಅರಿಯುವುದೇ ಕಳೆಯಗೊತ್ತನರಿಯುವುದು. (೮:೧೨೯೫)

**ಕಾಮ :** ೧. ಆಸೆ ೨. ಮೈಥುನದ ಆಸೆ (೭:೪೫೩, ೪೬೪).

**ಕಾಮೇಶ :** ಕಾಮನನ್ನು ಗೆದ್ದ ಪರಶಿವ.

**ಕಾಯ ಅಕಾಯದಲ್ಲಿ ಅಡಗುವುದು :** ಲಿಂಗಾಂಗ ಸಾಮರಸ್ಯದನಂತರ ಸಾಧಕನ ಕಾಯದಲ್ಲಿ ಅನೇಕ ಬದಲಾವಣೆ ಉಂಟಾಗುತ್ತದೆ. ಕಾಯದ ಬಯಕೆಗಳು ಕಡಿಮೆಯಾಗುತ್ತದೆಯಲ್ಲದೆ, ತನ್ನ ಕಾಯವು ತನ್ನದಲ್ಲ (ಅಕಾಯ) ಎಂದೂ, ಅದು ಶಿವನ ಕಾಯವೆಂದೂ ಪರಿಗಣಿಸುತ್ತಾನೆ. ಹೀಗೆ ತಾನು ಕಾಯವನ್ನು ಕಳೆದುಕೊಂಡು ಅದನ್ನು ಶಿವನಲ್ಲಿ ಕಾಣುವುದೇ 'ಕಾಯ ಅಕಾಯದಲ್ಲಿ ಅಡಗುವುದು' ಎನ್ನಿಸಿಕೊಳ್ಳುತ್ತದೆ. (೯:೬೩೭)

**ಕಾಯಕ :** ಕಾಯಕ ಎಂದರೆ ಯಾವುದೇ ವೃತ್ತಿ ಅಥವಾ ಉದ್ಯೋಗ. ಆದರೆ ವಚನಕಾರರ ದೃಷ್ಟಿಯಲ್ಲಿ ಕಾಯಕಕ್ಕೆ ವಿಶಿಷ್ಟ ಅರ್ಥವಿದೆ. ಅದನ್ನು ಸ್ಥೂಲವಾಗಿ ಹೀಗೆ ಅದನ್ನು ವಿವರಿಸಬಹುದು.

ಸತ್ಯ ಶುದ್ಧ ಕಾಯಕವಷ್ಟೇ ಕಾಯಕ. ಹಿಂಸೆ, ವಂಚನೆ, ಸುಳ್ಳು, ಮುಂತಾದ ಅನೈತಿಕತೆಯನ್ನೊಳಗೊಂಡ ಕಾಯಕ ಕಾಯಕವೆನಿಸಿಕೊಳ್ಳುವುದಿಲ್ಲ.

ಕಾಯವ ಬಳಲಿಸದೆ ಸುಮ್ಮನೆ ಕುಳಿತು ಉಣ್ಣುವುದು ಕಾಯಕ ತತ್ವಕ್ಕೆ ವಿರುದ್ಧ. ಅಂದರೆ ಎಲ್ಲರೂ ಕಾಯಕ ಮಾಡಲೇಬೇಕು. ಕಾಯವ ಸವೆಸಲೇಬೇಕು. 'ಕಾಯವ ಬಳಲಿಸದೆ, ತನು ಕರಗದೆ, ಮನ ನೋಯದೆ, ಕಾಡಿ ಬೇಡಿ' ತರುವುದು ಕಾಯಕವಲ್ಲ. ಭಿಕ್ಷೆ ಮಾಡುವುದು, ಕಳ್ಳತನ ಅಥವಾ ಮೋಸದಿಂದ ಗಳಿಸುವುದು, ಅದರಿಂದ ಬಂದುದನ್ನು ದಾಸೋಹ ಮಾಡುವುದು ವಚನಕಾರರ ಸಿದ್ಧಾಂತಕ್ಕೆ ವಿರುದ್ಧ.

ಸತ್ಯಶುದ್ಧ ಕಾಯಕವು ದುರಾಸೆಯಿಂದ ಕೂಡಿರಬಾರದು. ನಾಳೆಗೋಸ್ಕರ ದುಡಿಯುವುದು, ಮಕ್ಕಳು ಮೊಮ್ಮಕ್ಕಳಿಗೋಸ್ಕರ ಉಳಿಸುವುದು, ಅಷ್ಟೇಕೆ, ಇಂದಿನ ಅಗತ್ಯಕ್ಕಿಂತ ಹೆಚ್ಚು ದುಡಿಯುವುದು, ಕಾಯಕ ಸಿದ್ಧಾಂತಕ್ಕೆ ಹೊರಗು. ವ್ಯಕ್ತಿ ತನ್ನ ಕುಟುಂಬಕ್ಕೆ ಅಂದಂದಿಗೆ ಅಗತ್ಯವಾದಷ್ಟನ್ನು ಮಾತ್ರ ದುಡಿದರೆ ಸಾಕು. ಇನ್ನೂ ಉಳಿದುದನ್ನು ಜಂಗಮಕ್ಕೆ ನೀಡಬೇಕು. ಹೀಗೆ ಎಲ್ಲರೂ ದುಡಿದರೆ ಯಾರೂ ಪರಾವಲಂಬಿಗಳಾಗಬೇಕಾಗಿಲ್ಲ. ಯಾರೂ ಭಿಕ್ಷುಕರಾಗಬೇಕಿಲ್ಲ ("ಬೇಡಲಾಗದು ಭಕ್ತ"). ಹೀಗೆ ಇಡೀ ಸಮಾಜವು ಸಮೃದ್ಧಿಯಿಂದ ತುಂಬಿ ತುಳುಕುತ್ತಿರುತ್ತದೆ ("ಚಿತ್ತಶುದ್ಧ ಕಾಯಕ ಮಾಡುವ ಸದ್ಭಕ್ತನ ಮನೆಯಲ್ಲಿ ಎತ್ತ ನೋಡಿದಡತ್ತ ಲಕ್ಷ್ಮಿ ತಾನೇ ತಾನಾಗಿಪ್ಪಳು"). ಅಗತ್ಯಕ್ಕಿಂತ ಹೆಚ್ಚು ದುಡಿದರೆ, ಕಾಯವ ಬಳಲಿಸದೆ ವಂಚನೆ, ಸುಳ್ಳು, ಕಳ್ಳತನ, ಮುಂತಾದ ಅನೈತಿಕ ರೀತಿಯಲ್ಲಿ ದುಡಿದರೆ, ಮನುಷ್ಯನು ಆಲಸಿ, ದುರ್ವ್ಯಸನಿ, ದುರಾಚಾರಿ, ಅಧರ್ಮಿಯಾಗುತ್ತಾನೆ. ದುಷ್ಟ ಕಾಯಕ ಮಾಡಿ ಲಿಂಗಾಂಗ ಸಾಮರಸ್ಯ ಸಾಧಿಸಲು ಸಾಧ್ಯವಿಲ್ಲ. ಸತ್ಕಾಯಕದಿಂದ ಸಮಾಜದ ಆರ್ಥಿಕ ಪ್ರಗತಿಯಾಗುವುದಷ್ಟೇ ಅಲ್ಲ, ಸಮಾಜದಲ್ಲಿ ಶಾಂತಿ ಸಮಾಧಾನಗಳೂ ಉಂಟಾಗುತ್ತವೆ. ನಾಳೆಗೆಂತೋ ಎಂಬ ಆಹಾರದ ಚಿಂತೆಯನ್ನು ದೂರಮಾಡಿ ನಮ್ಮ ಆಹಾರವನ್ನು ನಾಳೆ ಯಾರೂ ದೋಚಿಕೊಂಡು ಹೋಗುವುದಿಲ್ಲ ಎಂಬ ಸಮಾಧಾನವನ್ನು, ಮೂಡಿಸುವುದೇ ಕಾಯಕದ ಉದ್ದೇಶ.

ಕಾಯಕವು ಶರಣರ ದೃಷ್ಟಿಯಲ್ಲಿ ಕೇವಲ ವೈಯಕ್ತಿಕ ಅಥವಾ ಕೌಟುಂಬಿಕ ವೃತ್ತಿಯಾಗಿರದೆ, ಒಂದು ಸಮಾಜ ಸೇವೆಯೂ ಆಗಿತ್ತು. ಅಂತಹ ಸಮಾಜ ಸೇವೆಯೆಂಬ ಕಾಯಕಗಳನ್ನು ಸಾಮಾನ್ಯವಾಗಿ ಜಂಗಮರು ಮಾಡುತ್ತಿದ್ದರು. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಹೆಸರಿಸಬಹುದು.

೧. ಘಂಟೆಯ ಕಾಯಕ : ಮಠದಲ್ಲಿರುವ ಜಂಗಮರು ಪ್ರತಿದಿನ ಬೆಳಿಗ್ಗೆ ನಸುಕಿನಲ್ಲಿ ಘಂಟೆ ಬಾರಿಸಿ, ಜನರನ್ನು ಎಚ್ಚರಗೊಳಿಸುತ್ತಾರೆ. ನಿದ್ದೆಯಿಂದ ಜನರು ದೈನಂದಿನ ಕಾರ್ಯಕ್ರಮಗಳನ್ನು ಮುಗಿಸಿ ತಮ್ಮ ಕಾಯಕದಲ್ಲಿ ತೊಡಗಲಿ ಎಂಬುದೇ ಅವರು ಘಂಟೆ ಬಾರಿಸುವ ಉದ್ದೇಶ.

೨. ಜಂಗಿನ ಕಾಯಕ : ಮಠದಿಂದ ಸೂರ್ಯೋದಯಕ್ಕೆ ಹೊರಬಿದ್ದ ಜಂಗಮರು ಪ್ರತಿಭಕ್ತರ ಮನೆಯನ್ನು ಪ್ರವೇಶಿಸಿ, ಮಲಗಿರುವವರನ್ನು ತಮ್ಮ ಬೆತ್ತದಿಂದ ತಿವಿದು ಎಚ್ಚರಿಸುತ್ತಾರೆ. ಇವರು ತಮ್ಮ ಎಡಗೈಗೆ ಜಂಗು (ಜಂಗ್ ಜಂಗ್ ಎಂದು ಶಬ್ದ ಮಾಡುವ ಘಂಟೆ) ಕಟ್ಟಿಕೊಂಡು ಅಡ್ಡಾಡುವುದರಿಂದ ಇನ್ನೂ ಮಲಗಿದ್ದ ಜನರು ಅದರ ಶಬ್ದದಿಂದ ಎದ್ದು, ಮುಖ ಮಾರ್ಜನೆ ಇತ್ಯಾದಿಗಳಲ್ಲಿ ನಿರತರಾಗುತ್ತಾರೆ. ಇವರು

ಮನೆಯೊಳಗೆ ಬಂದು ಎಬ್ಬಿಸಿದುದಕ್ಕಾಗಿ ಜನರು ಅವರಿಗೆ ಜೋಳವನ್ನು ನೀಡುತ್ತಾರೆ. ಆದುದರಿಂದ ಅವರಿಗೆ ಜಂಗಿನ ಅಯ್ಯ ಅಥವಾ ಜೋಳದ ಅಯ್ಯ ಎಂಬ ಹೆಸರೂ ಇದೆ.

೩. ಸುಮಾರು ೯ ಅಥವಾ ೧೦ ಗಂಟೆಗೆ ಹಿಟ್ಟಿನ ಅಯ್ಯನವರು ಭಕ್ತರ ಮನೆಗೆ ಬಂದು ಜನರು ಸ್ನಾನ ಪೂಜಾದಿಗಳಲ್ಲಿ ನಿರತರಾಗಿದ್ದಾರೊ ಇಲ್ಲವೋ, ತಮ್ಮ ಕಾಯಕಗಳಲ್ಲಿ ನಿರತರಾಗಿದ್ದಾರೊ ಅಥವಾ ಇನ್ನೂ ಮಲಗಿದ್ದಾರೋ ಎಂದು ಪರೀಕ್ಷಿಸುತ್ತಾರೆ. ಅವರು ಮಾಡಿದ ಸೇವೆಗೆ ಪ್ರತಿಫಲವೆಂಬಂತೆ ಭಕ್ತರು ಅವರಿಗೆ ಒಂದು ಹಿಡಿ ಹಿಟ್ಟನ್ನು ನೀಡುತ್ತಾರೆ. ಅವರಿಗೆ ಹಿಟ್ಟಿನ ಅಯ್ಯನವರೆಂದು ಹೆಸರು. ಹೀಗೆ ಭಕ್ತರ ವೈಯಕ್ತಿಕ, ಕೌಟುಂಬಿಕ ಮತ್ತು ಸಾಮಾಜಿಕ ನಡೆನುಡಿಯನ್ನು ರೂಪಿಸುವ ಸಲುವಾಗಿ ಜಂಗಮರು ಮೇಲಿನ ನಯವಾದ ರೀತಿಗಳನ್ನು ಅನುಸರಿಸುತ್ತಾರೆ. ಆದರೆ ಇದಾವುದಕ್ಕೂ ಬಗ್ಗದ ಕೆಲ ಜನರಿರುತ್ತಾರೆ; ಅವರನ್ನು ತಿದ್ದಲಾಗದವರೆಂದು ಜಂಗಮರು ಹಾಗೇ ಬಿಡುವುದಿಲ್ಲ. ಅಂಥವರನ್ನು ತಿದ್ದಿ ಧಾರ್ಮಿಕ ಹಾದಿಗೆ ತರಬೇಕೆಂಬ ಉದ್ದೇಶದಿಂದ ಅವರು ತೆಕ್ಕೆಯ ಕಾಯಕ, ಮುಳ್ಳಾವಿಗೆಯ ಕಾಯಕ ಮತ್ತು ಶಸ್ತ್ರದ ಕಾಯಕ ಎಂಬ ಮೂರು ಕಾಯಕಗಳನ್ನು ಮಾಡುತ್ತಾರೆ.

ತೆಕ್ಕೆಯ ಕಾಯಕ : ಘಂಟೆಯ ಕಾಯಕ, ಜಂಗಿನ ಕಾಯಕ ಮತ್ತು ಹಿಟ್ಟಿನ (ಜೋಳದ) ಕಾಯಕದಯ್ಯಗಳು ಒಂದೇ ಊರಲ್ಲಿ ನೆಲೆಸಿದ ಜಂಗಮರಾದರೆ, ತೆಕ್ಕೆಯ ಕಾಯಕದಯ್ಯಗಳು ಊರೂರು ತಿರುಗುವ ಜಂಗಮರು. ಅವರು ಮಠದಲ್ಲಿ ವಾಸ್ತವ್ಯ ಹೂಡಿ, ಅಲ್ಲಿನ ಜಂಗಮರಿಂದ ಅಧರ್ಮಿಗಳ ಪಟ್ಟಿ ಪಡೆಯುತ್ತಾರೆ. ಅನಂತರ ಆ ಅಧರ್ಮಿಯ ಮನೆಯ ಮುಂದೆ ಸೂರ್ಯೋದಯಕ್ಕಿಂತ ಮೊದಲೇ ಹೋಗಿ ನಿಂತಿರುತ್ತಾರೆ. ಬಾಗಿಲು ತೆಗೆದುಕೊಂಡಕೂಡಲೇ ಒಳನುಗ್ಗಿ ಮನೆಯಲ್ಲಿರುವ ಕಂಬವನ್ನು ಅಪ್ಪಿಕೊಳ್ಳುತ್ತಾರೆ. ಆ ಅಧರ್ಮಿಯು ತನ್ನ ಗುರುಹಿರಿಯರ ಕ್ಷಮೆ ಕೇಳಬೇಕು, ತಾನು ಅಧರ್ಮವನ್ನು ತ್ಯಜಿಸಿ ಧರ್ಮದ ಹಾದಿ ಹಿಡಿಯುತ್ತೇನೆಂದು ಸ್ವಾಮಿಗಳಿಗೆ ವಚನ ನೀಡುವವರೆಗೂ ಅವರು ತಮ್ಮ ಅಪ್ಪುಗೆಯನ್ನು ಸಡಿಲಿಸುವದಿಲ್ಲ. ಅಂದರೆ, ಅಲ್ಲಿಯವರೆಗೂ ಅವರಿಗೆ ಸ್ನಾನವಿಲ್ಲ, ಪೂಜೆಯಿಲ್ಲ, ಪ್ರಸಾದವಿಲ್ಲ. ಇದು ಒಂದು ದಿನವಾಗಬಹುದು, ಎರಡು ಅಥವಾ ಮೂರು ದಿನಗಳಾಗಬಹುದು, ಒಂದು ವೇಳೆ ಅಧರ್ಮಿ ಇದಕ್ಕೆ ಬಗ್ಗದಿದ್ದರೆ ಸ್ವಾಮಿಗಳು ಅಲ್ಲೇ ಪ್ರಾಣತ್ಯಾಗ ಮಾಡಬಹುದು. ಅನಂತರ ಅಧರ್ಮಿಗೆ ಪಶ್ಚಾತ್ತಾಪವಾದರೂ ಆಗಬಹುದು.

ಮುಳ್ಳಾವಿಗೆ ಕಾಯಕ : ತೆಕ್ಕೆಯ ಕಾಯಕದಯ್ಯಗಳು ಅಧರ್ಮಿಯ ಮನೆಯ ಒಳಗೆ ತಮ್ಮ ಕಾಯಕ ಮಾಡಿದರೆ, ಮುಳ್ಳಾವಿಗ ಕಾಯಕದಯ್ಯಗಳು ತಮ್ಮ ಕಾಯಕವನ್ನು ಆ ಅಧರ್ಮಿಯ ಮನೆಯ ಮುಂದೆ, ರಸ್ತೆಯಲ್ಲಿ ನಿಂತು ಮಾಡುವರು. ಇವರೂ ಮಠದಲ್ಲಿ

ವಾಸ್ತವ್ಯ ಹೂಡಿ ವಿಷಯಲಂಪಟರ ಪಟ್ಟಿಯನ್ನು ಪಡೆದು ಮಾರನೆಯ ದಿನವೇ ತಮ್ಮ ಕಾಯಕವನ್ನು ಪ್ರಾರಂಭಿಸುತ್ತಾರೆ. ತೆಕ್ಕೆಯ ಕಾಯಕದಯ್ಯಗಳು ಹೋದರೆಂಬ ಸಮಾಧಾನದ ಮೇಲೆ ಅಧರ್ಮಿಯು ತನ್ನ ಅಧರ್ಮವನ್ನು ಮತ್ತೆ ಮುಂದುವರೆಸಬಹುದು. ಅಂತಹವನ ಮನೆಯ ಮುಂದೆ ಸೂರ್ಯೋದಯದ ಹೊತ್ತಿಗೆ ಮುಳ್ಳಾವಿಗೆ ಕಾಯಕದಯ್ಯಗಳು ಚೂಪಾದ ಮೊಳೆಗಳನ್ನು ಜೋಡಿಸಿದ ಹಲಗೆಯ ಮೇಲೆ ಅಂಗಾಲನ್ನು ಊರಿ ನಿಲ್ಲುತ್ತಾರೆ. ಅಧರ್ಮಿಯ ಹೆಸರನ್ನು ಘಟ್ಟಿಯಾಗಿ ಹೇಳುತ್ತಾ, ಬಸವಾದಿ ಶರಣರ ಹೆಸರುಗಳನ್ನು ಸ್ಮರಿಸುತ್ತಾ, ಅಧರ್ಮಿಗೆ ಸದ್ಬುದ್ಧಿಯನ್ನು ಕೊಡಲೆಂದು ಶಿವನನ್ನು ಸ್ಮರಿಸುತ್ತಾ ನಿಂತರೆ, ಊರಿನ ಜನರೆಲ್ಲ ಅಧರ್ಮಿಯನ್ನು ಶಪಿಸತೊಡಗುತ್ತಾರೆ. ಆ ಅವಮಾನ ಸಾಲದೆಂಬಂತೆ, ತನ್ನ ತಪ್ಪಿಗಾಗಿ ಸ್ವಾಮಿಗಳಿಗೆ ನೋವಾಗುತ್ತಿದೆ ಎಂಬ ಪಶ್ಚಾತ್ತಾಪವೂ ಅವನಲ್ಲಿ ಉಂಟಾಗಿ, ಅವನು ತನ್ನ ತಪ್ಪನ್ನು ಒಪ್ಪಿಕೊಂಡು, ಇನ್ನು ಮುಂದೆ ಧಾರ್ಮಿಕ ಜೀವನ ನಡೆಸುವುದಾಗಿ ವಚನ ನೀಡಿದ ನಂತರವೇ, ಸ್ವಾಮಿಗಳು ತಮ್ಮ ರಕ್ತ ಸಿಕ್ತ ಪಾದಗಳನ್ನು ತೊಳೆದುಕೊಂಡು, ಸ್ನಾನ ಪೂಜಾದಿಗಳನ್ನು ಮುಗಿಸಿ ಪ್ರಸಾದ ಸ್ವೀಕರಿಸುತ್ತಾರೆ.

ಶಸ್ತ್ರದ ಕಾಯಕ : ಇದಕ್ಕೂ ಜಗ್ಗದ ಅಧರ್ಮಿಗಳಿಗೇನೂ ಕೊರತೆಯಿಲ್ಲ. ಆಗ ಶಸ್ತ್ರದ ಕಾಯಕದಯ್ಯಗಳ ಪ್ರವೇಶವಾಗುತ್ತದೆ. ಸೂರ್ಯೋದಯಕ್ಕೆ ಮುಂಚೆ ಅಧರ್ಮಿಯ ಮನೆಗೆ ಹೋಗಿ ಅವರ ಮನೆಯ ಮುಂದೆ ಹುರಿಯ ಒಂದು ಕೊನೆಯಲ್ಲಿರುವ ಕುಡುಗೋಲನ್ನು ಗೋಡೆಗೆ ನೇತು ಹಾಕಿ, ಮತ್ತೊಂದು ಕೊನೆಯಲ್ಲಿರುವ ಕುಡುಗೋಲನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡು ರಸ್ತೆಯ ಮಧ್ಯಕ್ಕೆ ಬಂದು ನಿಲ್ಲುತ್ತಾರೆ; ಹಾಗೂ ಘಟ್ಟಿಯಾಗಿ ಅಧರ್ಮಿಯ ಹೆಸರು ಹೇಳುತ್ತಾ, ಬಸವಾದಿ ಪ್ರಮಥರ ಹೆಸರನ್ನು ಸ್ಮರಿಸುತ್ತಾ, ಶಿವನು ಅವನಿಗೆ ಸದ್ಬುದ್ಧಿ ಕೊಡಲೆಂದು ಪ್ರಾರ್ಥಿಸುತ್ತಾರೆ. ಅವನಿಗೆ ಸದ್ಬುದ್ಧಿ ಕೊಡದಿದ್ದರೆ ತನ್ನ ಶಿರವನ್ನೆ ತೆಗೆದುಕೊಳ್ಳಲೆಂದು ನುಡಿಯುತ್ತಾರೆ. ಅಧರ್ಮಿಯಾರೆಂದು ಇಡೀ ಊರಿಗೆ ಗೊತ್ತಾದಾಗ ಅವನಿಗೆ ಅವಮಾನವಾಗುತ್ತದೆ, ಅಲ್ಲದೆ ತನ್ನ ತಪ್ಪಿಗಾಗಿ ಜಂಗಮರೇಕೆ ಪ್ರಾಣತ್ಯಾಗ ಮಾಡಬೇಕು ಎಂದು ತೀರ್ಮಾನಿಸಿದ ಅವನು ತನ್ನ ದುರ್ಮಾರ್ಗವನ್ನು ತ್ಯಜಿಸಿಯಾನು.

ಹೀಗೆ ಯಾವುದೇ ಕಾಯಕ ವ್ಯಕ್ತಿಗೂ ಹಿತವಾಗುವುದಲ್ಲದೆ ಸಮಾಜಕ್ಕೂ ಹಿತವಾಗುತ್ತದೆ. ಅಲ್ಲದೆ, ಹೀಗೆ ಐಹಿಕಕ್ಕೂ ಪಾರಮಾರ್ಥಿಕಕ್ಕೂ ಸೇತುವೆ ಕಲ್ಪಿಸಿದ ಶರಣರ ಕಾಯಕ ಸಿದ್ಧಾಂತ ಅದ್ಭುತ, ಅಪೂರ್ವ.

**ಕಾಯಕಲ್ಪಿತ :** ೧. ಕಲ್ಪಿತ ಎಂಬುದಕ್ಕೆ ಕೆಲವು ವೇಳೆ ಆಸೆ ಎಂಬ ಅರ್ಥವಿರುತ್ತದೆ. ದೈಹಿಕ ಆಸೆಗಳಿಗೆ ವಶವಾಗಿರುವವನು ಕಾಯಕಲ್ಪಿತ.

೨. ಮತ್ತೆ ಕೆಲವು ವೇಳೆ ಕಲ್ಪಿತ ಎಂದರೆ ಭ್ರಮಾಧೀನ ಎಂದರ್ಥವಾಗುತ್ತದೆ. ಆಗ ಕಾಯಕಲ್ಪಿತ ಎಂದರೆ 'ಕಾಯವೇ ಆತ್ಮಕ್ಕಿಂತ ಮುಖ್ಯವಾದುದು ಎಂಬ ಭ್ರಮೆಯುಳ್ಳ' ಎಂಬರ್ಥವಾಗುತ್ತದೆ.

**ಕಾಯಜೀವಿ :** ಕೇವಲ ಕಾಯಕ್ಕಾಗಿ ಜೀವಿಸುವವನು. (೨:೩೫೬)

**ಕಾಯತ್ರಯ :** ಸ್ಥೂಲ ಶರೀರ, ಸೂಕ್ಷ್ಮ ಶರೀರ, ಕಾರಣ ಶರೀರ.

**ಕಾಯದ ಅಳಿವು :** ಆಧ್ಯಾತ್ಮಿಕ ಜೀವನಕ್ಕೆ ಅಡ್ಡಿಮಾಡುವ ದೈಹಿಕ ಬಯಕೆಗಳ ಅಳಿವು. (೮:೧೯೮)

**ಕಾಯದ ಕರಣಂಗಳ ಬಿಡುವುದು :** ಚಿತ್ತ, ಬುದ್ಧಿ, ಮನಸ್ಸು, ಅಹಂಕಾರ ಎಂಬ ಅಂತ:ಕರಣಗಳ ಹಾಗೂ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ದುಷ್ಟ ಪ್ರಭಾವಕ್ಕೆ ಒಳಗಾಗದಿರುವುದು. (೮:೧೬೮೩)

**ಕಾಯದ ಮೈಲಿಗೆ :** ಹುಟ್ಟು, ಬೆಳವಣಿಗೆ, ರೋಗರುಜಿನ, ಮುಪ್ಪು, ಸಾವು ಮುಂತಾದ ಕಾಯಕ್ಕೆ ಸಂಬಂಧಿಸಿದ ವಿಕಾರಗಳು. ಶುದ್ಧವಾದ ಆತ್ಮಕ್ಕೆ ಇವೆಲ್ಲಾ ಮೈಲಿಗೆಗಳೇ.

**ಕಾಯದ ಸುಳುಹು :** ಜೀವನ ಪರ್ಯಂತ. ["ಕಾಯದ ಸುಳುಹುಳ್ಳನ್ನಕ್ಕ ಕರ್ಮಪೂಜೆ ಬೇಕೆಂಬರು" ಎಂಬಲ್ಲಿ ಕಾಯದ ಸುಳುಹು ಎಂದರೆ ಕಾಯವಿರುವ ತನಕ ಎಂಬರ್ಥವಿದೆ. (೮:೧೧೫೭)]

**ಕಾಯದ ಸೂತಕ :** ನಿದ್ರೆ, ಭಯ, ಹಸಿವು, ಮೈಥುನ ಮುಂತಾದ ದೈಹಿಕ ಉಪಾಧಿಗಳು. ಆತ್ಮನ ಶುದ್ಧತ್ವವು ಇವುಗಳಿಂದಾಗಿ ಕೆಡುತ್ತದೆ. ಆದುದರಿಂದ ಇವೆಲ್ಲ ಸೂತಕ. (೯:೨೨೫)

**ಕಾಯದ ಸೂತಕ ಹಿಂಗುವುದು :** ಆಧ್ಯಾತ್ಮಿಕ ಜೀವನಕ್ಕೆ ಅಡ್ಡಿ ಮಾಡುವ ದೇಹದ ಬಯಕೆಗಳು ಓಂಗುವುದು. ದೇಹದ ಬಯಕೆಗಳನ್ನು ತೀರಿಸುತ್ತಲೇ ಇದ್ದರೆ, ಅವುಗಳನ್ನು ನಿಯಂತ್ರಿಸಬೇಕೆಂಬ ಛಲ ನಮ್ಮಲ್ಲಿ ಮೂಡುವುದೇ ಇಲ್ಲ. ಛಲವಿಲ್ಲದವನು ಮಾಹೇಶ್ವರನಾಗಲಾರ. ಆದುದರಿಂದ ಮಾಹೇಶ್ವರನಾಗಬಯಸುವವನು ಕಾಯದ ಸೂತಕವನ್ನು ಹಿಂಗಿಸಬೇಕು. (೮:೧೦೩೮)

**ಕಾಯಪ್ರಕೃತಿ :** ದೇಹದ ಸ್ವಭಾವ. ನಮ್ಮ ದೇಹೇಂದ್ರಿಯಾದಿಗಳೆಲ್ಲ ಶಕ್ತಿಯ ವಿವಿಧ ರೂಪಗಳು. ಆ ಶಕ್ತಿಯ ಅಂಶಗಳು ನಮ್ಮನ್ನು ಬಂಧನಕ್ಕೆ ಒಳಗುಮಾಡಿ, ಆಧ್ಯಾತ್ಮಿಕ ಪ್ರಗತಿಗೆ ಅಡ್ಡಿಮಾಡುವ ಬಯಕೆಗಳನ್ನು ನಮ್ಮಲ್ಲಿ ಸ್ವಾಭಾವಿಕವಾಗಿ ಹುಟ್ಟಿಸುತ್ತವೆ.

**ಕಾಯಭ್ರಮೆ :** ಆತ್ಮಸಾಧನೆಗಿಂತ, ದೇಹವೇ ಮುಖ್ಯ ಎಂಬ ಭ್ರಮೆ; ನಾವು ಮಾಡುವುದೆಲ್ಲ ದೇಹಕ್ಕೆ ಎಂಬ ಭ್ರಮೆ; ವಿಷಯಲೋಲುಪತೆಗೆ ಕಾರಣವಾದ ಭ್ರಮೆ. (೯:೨೨೫)

**ಕಾಯಭ್ರಮೆಯಿಂದ ಕೈಲಾಸ :** ಸದೇಹನಾಗಿ ಕೈಲಾಸಕ್ಕೆ ಹೋಗಬೇಕೇಂಬ ಭ್ರಮೆ. ಇದು ಭ್ರಮೆ ಏಕೆಂದರೆ, ಕೈಲಾಸವೆಂಬ ಪ್ರತ್ಯೇಕ ಸ್ಥಳ (ಲೋಕ) ಇಲ್ಲ. ಇಲ್ಲಿ ಕಾಯಕ್ಕೆ ಕೊಡುವ ಪ್ರಾಮುಖ್ಯತೆ ಒಂದು ಭ್ರಮೆಯಿಂದಾಗಿಯೇ ಆದುದರಿಂದ, ಅದು ಗಮನಾರ್ಹ.

**ಕಾಯಲಿಂಗ ಸಂಬಂಧ :** ಕಾಯಕ್ಕೂ ಇಷ್ಟ ಲಿಂಗಕ್ಕೂ ಇರುವ ಸಂಬಂಧವನ್ನು ಮೋಳಿಗೆ ಮಾರಯ್ಯನು ಉರಿನೀರು ಕುಂಭಗಳ ಸಂಬಂಧಕ್ಕೆ ಹೋಲಿಸಿದ್ದಾನೆ. ಉರಿಯು ಕುಂಭವನ್ನು ಪ್ರವೇಶಿಸದೆಯೇ ಅದರಲ್ಲಿರುವ ನೀರನ್ನು ಹೇಗೆ ಬಿಸಿ ಮಾಡುತ್ತದೆಯೋ ಹಾಗೆಯೇ, ಇಷ್ಟಲಿಂಗವು ಲಿಂಗಧಾರಣೆಯ ಮೂಲಕ ಲಿಂಗಧಾರಕನ ಕಾಯವನ್ನು ಶುದ್ಧ ಮಾಡುತ್ತದೆ. (೮:೧೫೬೪)

**ಕಾಯವಂಚಕ :** ದೇಹದ ಬಯಕೆಗಳನ್ನು ತೀರಿಸಲು ಒಲ್ಲದವನು. ಇಂದ್ರಿಯಗಳನ್ನು ಅನಾವಶ್ಯಕವಾಗಿ ಹತೋಟಿಯಲ್ಲಿ ಇಟ್ಟುಕೊಂಡಿರುವವನು. (೮:೧೬೧೫)

**ಕಾಯವಶ :** ಕಾಯವನ್ನು ವಶಪಡಿಸಿಕೊಳ್ಳುವುದು; ದೇಹದ ಬಯಕೆಗಳನ್ನು ನಿಯಂತ್ರಿಸುವುದು. (೫:೮೮೮)

**ಕಾಯವಳಿಯುವುದು :** ಜೀವಂತವಿದ್ದಾಗಲೆ ಕಾಯದ ದುಷ್ಟ ಗುಣಗಳು ಅಳಿಯುವುದು. (೮:೭೦೩)

**ಕಾಯವಿಕಾರ :** ದೇಹದ ಬಯಕೆಗಳು. ವಾಸ್ತವವಾಗಿ, ಕಾಯವಿಕಾರವೆಂದರೆ ದೇಹದಲ್ಲಾಗುವ ಬದಲಾವಣೆಗಳು ಎಂದಾಗಬೇಕು. ಹೀಗೆ ನೋಡಿದಾಗ, ಕಾಯವಿಕಾರವೆಂದರೆ, ಶೈಶವ, ಬಾಲ್ಯ, ತಾರುಣ್ಯ, ಮುಪ್ಪು, ಮುಂತಾದವುಗಳು ಕಾಯವಿಕಾರಗಳಾಗಬೇಕಿತ್ತು. ಆದರೆ, ಆಧ್ಯಾತ್ಮಿಕ ಪರಿಭಾಷೆಯಲ್ಲಿ ಕಾಯವಿಕಾರ ಎಂಬುದನ್ನು ಮನೋವಿಕಾರ ಎಂಬುದಕ್ಕೆ ಸಮಾನಾಂತರವಾಗಿ ಬಳಸಲಾಗುತ್ತದೆ. ಕಾಮ, ಕ್ರೋಧ, ಲೋಭ, ಮೋಹ, ಇತ್ಯಾದಿಗಳು ಹೇಗೆ ಮನೋವಿಕಾರಗಳೋ, ಹಾಗೆ ನಿದ್ರೆ, ಹಸಿವು ತೃಷೆಗಳಂಥ ಕಾಯ ವಿಕಾರಗಳೂ ಮನುಷ್ಯನನ್ನು ಅಧಾರ್ಮಿಕನನ್ನಾಗಿ ಮಾಡಬಹುದು. ಆದುದರಿಂದ ಸಾಧಕನು ಕಾಯವಿಕಾರಗಳ ಬಗ್ಗೆಯೂ ಎಚ್ಚರದಿಂದಿರಬೇಕು. (೧:೪೮)

**ಕಾಯಶೂನ್ಯ :** ಭವಿಯ ಕಾಯವು ಯಾವಾಗಲೂ ತನ್ನ ಬಯಕೆಯನ್ನು ಪೂರೈಸುವಂತೆ ಒತ್ತಾಯಿಸುತ್ತದೆ. ಆದರೆ ಭಕ್ತನಾದವನು ಭವಿತನದ ಈ ಬಯಕೆಗಳನ್ನು ಕಡಿಮೆ ಮಾಡಿ, ತನ್ನ ಕಾಯವನ್ನು ಮಂತ್ರಕಾಯವನ್ನು ಮಾಡಬೇಕು, ಅಂದರೆ, ಅವನು ಯಾವಾಗಲೂ ದೇಹದ ಬಯಕೆಗಳನ್ನು ಜಪಿಸದೆ, ಶಿವಮಂತ್ರವನ್ನು ಜಪಿಸುತ್ತಿರಬೇಕು. ಆಗ ಕಾಯವಿದ್ದು ಕಾಯದ ಬಯಕೆಗಳು ಇಲ್ಲವಾಗುತ್ತದೆ. ಆದುದರಿಂದ ನಿಜವಾದ ಕಾಯಶೂನ್ಯವೆಂದರೆ ಕಾಯ ಇಲ್ಲವಾಗುವುದಲ್ಲ, ಕಾಯದ ಬಯಕೆಗಳು ಇಲ್ಲವಾಗಿ ಮಂತ್ರಕಾಯವಾಗುವುದು. (೮:೧೩೨೪)

**ಕಾಯಸಂಗನಿಸ್ಸಂಗ :** ಕಾಯವಿದ್ದರೂ ಅದರ ಬಯಕೆಗಳು, ಅದರ ವಿಕಾರಗಳೂ ಆತ್ಮಕ್ಕೆ ತಗುಲದಂತೆ ('ನಿಸ್ಸಂಗ') ಇದ್ದರೆ, ಅದೇ ಕಾಯ ಸಂಗ ನಿಸ್ಸಂಗವೇ ಹೊರತು, ದೇಹವನ್ನು ತ್ಯಜಿಸುವುದಲ್ಲ. (೧:೪೮೮)

**ಕಾಯಸಮಾಧಿ :** ಸಮಾಧಿ ಎಂಬ ಪದವನ್ನು ಎರಡು ಅರ್ಥಗಳಲ್ಲಿ ಬಳಸುವ ವಾಡಿಕೆಯುಂಟು. ಯೋಗಕ್ಕೆ ಸಂಬಂಧಿಸಿದಂತೆ ಸಮಾಧಿ ಎಂಬ ಪದಕ್ಕೆ ಆತ್ಮ ತಾನೊಂದೇ ಇರುವುದು (ಕೈವಲ್ಯ); ಅಂದರೆ, ಆತ್ಮ ಪ್ರಕೃತಿಯ ವಿಕಾರಗಳಾದ ಬುದ್ಧಿ, ಅಹಂ, ಮನಸ್ಸು, ದೇಹ ಇತ್ಯಾದಿಗಳ ಪ್ರಭಾವಕ್ಕೆ ಸಿಕ್ಕದಿರುವುದು ಎಂದರ್ಥ. ಇನ್ನೊಂದರ್ಥದ ಪ್ರಕಾರ ಸಮಾಧಿಯೆಂದರೆ ಮರಣೋತ್ತರ ಸಂಸ್ಕಾರ. ಗುಂಡಿಯಲ್ಲಿ ಶವವನ್ನು ಧ್ಯಾನಸ್ಥ ಸ್ಥಿತಿಯಲ್ಲಿ ಕೂರಿಸಿ, ಮುಚ್ಚುವುದು ಈ ಸಂಸ್ಕಾರದ ಮುಖ್ಯ ಕ್ರಿಯೆ. ಜೀವ ಕಾಯ ಬದುಕಿರುವಾಗಲೇ ಇರುವಾಗಲೆ ಕೆಲವರು ಸ್ವ ಇಚ್ಛೆಯಿಂದ ಕಾಯಸಮಾಧಿ ಮಾಡಿಸಿಕೊಳ್ಳುತ್ತಾರೆ. (ಅ:೧೬೬೪)

**ಕಾಯಸಿದ್ಧಿ :** ಕಾಯವನ್ನು ವಜ್ರದಷ್ಟು ಕಠಿಣವಾಗಿ ಮಾಡಿಕೊಳ್ಳುವ ಒಂದು ಬಗೆಯ ವಿಜ್ಞಾನ. ಕಾಯಸಿದ್ಧಿ ಪಡೆದವನ ಕಾಯವನ್ನು ಹರಿತವಾದ ಆಯುಧವೂ ಗಾಯಗೊಳಿಸಲಾರದು ಎಂಬುದೊಂದು ನಂಬಿಕೆಯಿದೆ. (ಅ:೧೫೬೧)

**ಕಾಯಾಧಾರಲಿಂಗೋಪಜೀವಿ :** ಪ್ರಾಣಲಿಂಗಿಯು ತನ್ನ ಕಾಯದಲ್ಲಿರುವ ಪ್ರತಿಯೊಂದು ಅಂಗದಲ್ಲಿಯೂ ಲಿಂಗವನ್ನು ಸ್ಥಾಪಿಸಿಕೊಂಡಿರುವುದರಿಂದ, ಅದರಲ್ಲಿರುವ ಲಿಂಗವು ಕಾಯಾಧಾರಲಿಂಗ; ಆ ಲಿಂಗಕ್ಕೋಸ್ಕರವೇ ಅವನು ಯೋಚಿಸುವುದು, ರೂಪರಸ ಇತ್ಯಾದಿಗಳನ್ನು ಅನುಭವಿಸುವುದು ಹಾಗೂ ಒಳ್ಳೆಯ ಕಾರ್ಯಗಳನ್ನು ಮಾಡುವುದರಿಂದ ಅವನು ಲಿಂಗೋಪಜೀವಿ. (೩:೧೩೦೩)

**ಕಾರ್ಯನಲ್ಲ ಕಾರಣನಲ್ಲ :** ನಾವು ಯಾವೊಂದು ವಸ್ತು ಅಥವಾ ಘಟನೆಯನ್ನು ನೋಡಿದರೂ ಅದಕ್ಕೊಂದು ಕಾರಣವಿರಲೇಬೇಕು ಎನ್ನುತ್ತೇವೆ. ಕಾರಣ ಯಾವುದೆಂದು ನಮಗೆ ಸಧ್ಯಕ್ಕೆ ಗೊತ್ತಿಲ್ಲದಿರಬಹುದು, ಆದರೆ ಕಾರಣವಿಲ್ಲದ ಘಟನೆಗಳಿಲ್ಲ. ಅದೇ ರೀತಿ ಯಾವುದೇ ಒಂದು ಘಟನೆಯನ್ನು ನೋಡಿದರೂ, ಇದಕ್ಕೆ ಕಾರ್ಯ (ಪರಿಣಾಮ) ಇರಲೇಬೇಕು ಎಂದುಕೊಳ್ಳುತ್ತೇವೆ. ಅದರ ಪರಿಣಾಮಗಳು ನಮಗೆ ಸಧ್ಯಕ್ಕೆ ಗೊತ್ತಿಲ್ಲದಿರಬಹುದು ಆದರೆ ಪರಿಣಾಮವಿಲ್ಲದ ಘಟನೆಗಳಿಲ್ಲ. (೧೧:೨೫)

ಆದರೆ ಸೃಷ್ಟಿ ಮಾಡಬೇಕೆಂಬ ಇಚ್ಛೆ ಪರಶಿವನಲ್ಲಿ ಇನ್ನೂ ಮೂಡದೆ ಇದ್ದಾಗ ಅಂದರೆ, ಪರಶಿವನು ಶೂನ್ಯ ಸ್ಥಿತಿಯಲ್ಲಿರುವಾಗ, ಅವನು ಕಾರ್ಯನೂ ಅಲ್ಲ, ಕಾರಣನೂ ಅಲ್ಲ ಎನ್ನುವುದು ಸಮಂಜಸವೇ ಎಂಬುದು ಇಲ್ಲಿ ಮುಖ್ಯ ಪ್ರಶ್ನೆ. ಸೃಷ್ಟಿಸಿಲ್ಲವಾದುದರಿಂದ ಅವನು ಕಾರ್ಯನಲ್ಲ ಎನ್ನುವುದೇನೋ ಸರಿಯೇ. ಆದರೆ ಅವನೆ ಎಲ್ಲವನ್ನೂ ಸೃಷ್ಟಿಸುವುದರಿಂದ ಅವನನ್ನು ಕಾರಣನೆಂದೇಕೇ ಕರೆಯಬಾರದು? ಹಾಗೆ ಕರೆಯುವುದನ್ನು ಬಿಟ್ಟು ಅವನು ಕಾರ್ಯನೂ ಅಲ್ಲ, ಕಾರಣನೂ ಅಲ್ಲ ಎನ್ನುವುದು ಸರಿಯೆ ಎಂಬ ಪ್ರಶ್ನೆಗಳು ಇಲ್ಲಿ ತಲೆದೋರುತ್ತದೆ. ಕಾರ್ಯನೂ ಅಲ್ಲದ ಕಾರಣನೂ ಅಲ್ಲದ ವ್ಯಕ್ತಿ ಇರಲು ಸಾಧ್ಯವೇ?

ಒಬ್ಬ ವ್ಯಕ್ತಿ ಇದ್ದರೆ, ಅವನು ಕೆಲವು ವಸ್ತುಗಳನ್ನು ನೋಡಿ ಇವು ಕಾರಣ, ಇವು ಪರಿಣಾಮ ಎಂದು ವಿಂಗಡಿಸಬಲ್ಲ. ಹಾಗೆ ವಿಂಗಡಿಸದಿರಲು ಅವನ ಬುದ್ಧಿಗೆ ಅಸಾಧ್ಯ. ಆದರೆ ವ್ಯಕ್ತಿಯೇ ಇಲ್ಲದಂಥ ಸಂದರ್ಭದಲ್ಲಿ, ಅಂದರೆ ಸೃಷ್ಟಿಯೇ ಇನ್ನೂ ಆಗಿಲ್ಲದೆ ಇದ್ದಾಗ ಅಥವಾ ಪರಶಿವ ಇನ್ನೂ ಶೂನ್ಯಸ್ಥಿತಿಯಲ್ಲಿರುವಾಗ ಅವನು ಸೃಷ್ಟಿಕರ್ತ (ಕಾರಣ), ಜಗತ್ತು ಪರಿಣಾಮ ಎಂದು ಹೇಳಲು ಬರುವುದಿಲ್ಲ. ಅಂದರೆ, ಸೃಷ್ಟಿಯಾದ ಮೇಲೆ ಈ ಭೇದ ಸಾಧ್ಯವೇ ಹೊರತು, ಸೃಷ್ಟಿಪೂರ್ವದಲ್ಲಿ ಯಾವ ಭೇದವೂ ಸಾಧ್ಯವಿಲ್ಲ. ಈ ಕಾರಣಕ್ಕಾಗಿ ವಚನಕಾರರು ಪರಶಿವನು ಕಾರ್ಯನೂ ಅಲ್ಲ, ಕಾರಣನೂ ಅಲ್ಲ, ಆದಿಯೂ ಅಲ್ಲ, ಅನಾದಿಯೂ ಅಲ್ಲ ಎಂದು ಹೇಳುತ್ತಾರೆ. (ನೋಡಿ : **ಆದಿ ಅನಾದಿ ಇಲ್ಲದಂದು**)

**ಕಾರಣಾತೀತ :** ಪ್ರಪಂಚದ ಪ್ರತಿಯೊಂದು ವಸ್ತುವಿಗೂ ಒಂದೊಂದು ಕಾರಣವಿರುತ್ತದೆ. ಆದರೆ ಪ್ರಪಂಚದ ಕಾರಣವಾದ ಪರಶಿವನಿಗೆ ಯಾವುದೇ ಕಾರಣವಿಲ್ಲವಾದ ಕಾರಣ, ಅವನು ಕಾರಣಾತೀತ.

ಮತ್ತೊಂದರ್ಥದಲ್ಲಿ ಕಾರಣಾತೀತನೆಂದರೆ ಕಾರಣತನುವೂ ಇಲ್ಲದವನು, ಮುಕ್ತನಾದವನು ಎಂದರ್ಥವಾಗುತ್ತದೆ.

**ಕಾಲಕರ್ಮಪ್ರಳಯ ಜೀವಿಗಳು :** ಸಂಸಾರಬಂಧನಕ್ಕೊಳಗಾದವರು ಕಾಲಕ್ಕೂ, ಕರ್ಮಕ್ಕೂ, ಪ್ರಳಯಕ್ಕೂ ಒಳಗು. ಲಿಂಗಾಂಗ ಸಾಮರಸ್ಯ ಪಡೆದವರು ಕಾಲಾತೀತರು, ಕರ್ಮವನ್ನು ಸುಟ್ಟವರು, ಪ್ರಳಯವಾದಾಗ ಅವರು ನಾಶವಾಗುವುದಿಲ್ಲ. ಆದರೆ ದೇಹ, ಬುದ್ಧಿ, ಇತ್ಯಾದಿ ನಾಶವಾದರೂ, ಅವರು ಮತ್ತೊಮ್ಮೆ ಹುಟ್ಟುವುದಿಲ್ಲ. (೩:೩೪೫)

**ಕಾಲನ ಕಮ್ಮಟ :** ಕಾಲಕಾಲಕ್ಕೆ ಏನೇನು ಘಟಿಸಬೇಕೊ ಅದೆಲ್ಲವೂ ಘಟಿಸಲು ಅವಕಾಶ ಮಾಡಿಕೊಡುವ ಸಂಸಾರ. (೭:೪೩೫)

**ಕಾಲಸಂಹಾರ :** ಪರಶಿವ; ಲಿಂಗಾಂಗ ಸಾಮರಸ್ಯ ಸಾಧಿಸಿಕೊಂಡವನಿಗೆ ಭೂತ, ಭವಿಷ್ಯತ್ ಮತ್ತು ವರ್ತಮಾನಗಳೆಂಬ ಯಾವ ಕಾಲವೂ ಇಲ್ಲ; ಶಿವನೊಂದಿಗೆ ಸಾಮರಸ್ಯ ಪಡೆದ ಅವನು ಶಿವನಂತೆ ಕಾಲಸಂಹಾರಿ. (೮:೧೬೭೨)

**ಕಾಲಾತೀತ :** ಎಲ್ಲ ಪ್ರಾಪಂಚಿಕ ಘಟನೆಗಳೂ ಒಂದು ಕಾಲದಲ್ಲಿ ಪ್ರಾರಂಭವಾಗಿ ಮತ್ತೊಂದು ಕಾಲದಲ್ಲಿ ಮುಗಿಯುತ್ತವೆ. ಆದರೆ ಪರಶಿವನು ನಿತ್ಯವಾದುದರಿಂದ ಅವನು ನಿನ್ನೆಯಿಂದ ಇದ್ದಾನೆ, ನಾಳೆಯವರೆಗೂ ಇರುತ್ತಾನೆ, ಮುಂತಾಗಿ ಹೇಳಲು ಬರುವುದಿಲ್ಲ. ಆದುದರಿಂದ ಅವನು ಕಾಲಾತೀತ.

**ಕಾಷ್ಠಶಿಲಾನ್ಯಾಯ :** ಶಿಲೆಯೊಳಗಿರುವ ಅಗ್ನಿಯು ಕಾಷ್ಠಕ್ಕೆ ತಗುಲಿ, ಅದರಲ್ಲಿರುವ ರಸವನ್ನು ನಾಶಮಾಡಿ, ಕಟ್ಟಿಗೆಯನ್ನು ಅಗ್ನಿಮಯಮಾಡಿ, ಕೊನೆಗೆ ಆ ಕಟ್ಟಿಗೆಯನ್ನು ಬಯಲುಮಾಡುವಂತೆ, ಗುರುವು ತನ್ನ ಜ್ಞಾನದ ಮೂಲಕ ಶಿಷ್ಯನಲ್ಲಿ ಆಧ್ಯಾತ್ಮಿಕ

ಉದ್ದೀಪನ ಮಾಡಿ, ಅವನಲ್ಲಿರುವ ಪಾಪವನ್ನು ನಾಶಪಡಿಸಿ, ಅವನನ್ನು ಜ್ಞಾನಮಯನನ್ನಾಗಿ ಮಾಡುತ್ತಾನೆ. ಹಾಗೂ ಶಿಷ್ಯನು ಇದರಿಂದ ಬಯಲಾಗುತ್ತಾನೆ. ಒಂದು ವೇಳೆ ಕಟ್ಟಿಗೆಯು ಬಹಳ ಹಸಿಯಾಗಿದ್ದರೆ, ಅಗ್ನಿಯು ಅದನ್ನು ಹೇಗೆ ಸುಡಲಾರದೋ ಹಾಗೆಯೇ ಗುರುವು ಜ್ಞಾನಿಯಾಗಿದ್ದು ಶಿಷ್ಯನು ಅಜ್ಞಾನಿಯಾಗಿದ್ದರೆ, ಗುರುವಿನ ಕ್ರಿಯೆಗಳೆಲ್ಲಾ ವ್ಯರ್ಥವಾಗಿ, ಶಿಷ್ಯನು ಬಯಲಾಗಲಾರ. (೧೩:೨೩೪೨) (ನೋಡಿ:**ಶಿಲಾಕಾಷ್ಠನ್ಯಾಯ**)

**ಕಿಂಚಿಜ್ಞತ್ವ :** ಕಡಿಮೆ ಗೊತ್ತಿದೆ, ಅಥವಾ ಏನೂ ಗೊತ್ತಿಲ ಎಂಬ ಭಾವ. ಈ ಭಾವವು ಸಾಧಕನಿಗೆ ಒಂದು ದೋಷ. ಆ ದೋಷವು ಮಲತ್ರಯಗಳಲ್ಲಿ ಒಂದಾಗಿದ್ದು, ಅದಕ್ಕೆ ಆಣವ ಮಲ ಎಂದು ಹೆಸರು. ಸಾಧಕನು ಈ ಮಲದಿಂದ ಮುಕ್ತನಾಗುವವರೆಗೂ ಅವನು ಮುಕ್ತಿಯೋಗ್ಯನಲ್ಲ. (೪:೧೨೮೭)

**ಕಿರಿದೈವ :** ಕ್ಷುದ್ರ ದೇವತೆ. ಮೈಲಾರ, ಬೀರ, ಮಾರಿ, ಮುಂತಾದ ದೈವಗಳು. ಈ ದೈವಗಳ ಪೂಜೆಯಿಂದ ಸಾಧಕನಿಗೆ ಯಾವ ಲಾಭವೂ ಇಲ್ಲ. ಈ ದೈವಗಳು ಭಕ್ತನಿಂದ ವಿಶಿಷ್ಟ ನೈವೇದ್ಯಗಳನ್ನು ಅಪೇಕ್ಷಿಸುವುದಾದರೆ, ಅವು ಭಕ್ತನಿಗೆ ಏನನ್ನೂ ಕೊಡಲು ಸಾಧ್ಯವಿಲ್ಲ. ಆದುದರಿಂದ ಇಂಥ ಅಶಕ್ತ ದೈವಗಳನ್ನು ಪೂಜಿಸದೆ, ಸರ್ವಶಕ್ತನಾದ ಶಿವನನ್ನು ಪೂಜಿಸುವುದು ಸೂಕ್ತ ಎಂಬುದು ವಚನಕಾರ ಅಭಿಮತ.

**ಕೀಲ :** ರಹಸ್ಯ, ಸಂಬಂಧ. (ನೋಡಿ : **ಸಕೀಲಗಳು**)

**ಕುಂಚ :** ನವಿಲುಗರಿಗಳಿಂದ ಮಾಡಲಾದ ಕಟ್ಟು. ಜೈನ ಸನ್ಯಾಸಿಗಳು ತಾವು ಕುಳಿತುಕೊಳ್ಳುವ ಅಥವಾ ಮಲಗಿಕೊಳ್ಳುವ ಮೊದಲು, ಯಾವ ಸಣ್ಣ ಜೀವಿಯೂ ಇರಬಾರದೆಂಬ ಉದ್ದೇಶದಿಂದ, ಆ ಸ್ಥಳವನ್ನು ಗುಡಿಸಲು ಈ ಕುಂಚವನ್ನು ಉಪಯೋಗಿಸುತ್ತಾರೆ. ಆದರೆ ಮನುಮುನಿ ಗುಮ್ಮಟದೇವನೆಂಬ ವಚನಕಾರರು ನಿಜವಾದ ಕುಂಚವನ್ನು ನವಿಲುಗರಿಗಳಿಂದ ರಚಿಸದೆ, ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರಗಳಿಂದ ರಚಿಸಬೇಕೆಂದೂ, ಅದನ್ನು ಹುರಿಯಿಂದ ಕಟ್ಟದೆ ಸುಚಿತ್ತದಲ್ಲಿ ಉದಯಿಸಿದ ಅರಿವಿನಿಂದ ಕಟ್ಟಬೇಕೆಂದೂ ಅದರಿಂದ ಕಸ, ಜೀವಿಗಳನ್ನು ಗುಡಿಸದೆ ಸ್ಥೂಲತನು, ಸೂಕ್ಷ್ಮತನು ಮತ್ತು ಕಾರಣತನುಗಳನ್ನು ಗುಡಿಸಬೇಕೆಂದೂ ಉಪದೇಶಿಸುತ್ತಾನೆ. (೮:೧೦೦೩)

**ಕುಂಡಲಿ ಕೀಡ ನ್ಯಾಯ :** ಕುಂಡಲಿ ಎಂಬ ಒಂದು ಜಾತಿಯ ಹುಳವು ಮತ್ತೊಂದು ಜಾತಿಯ ಕೀಟವನ್ನು ತಂದು, ಅದನ್ನು ಒಂದು ಗೂಡಲ್ಲಿಟ್ಟು, ಅದನ್ನು ತನ್ನಂತೆ ಮಾಡಿ, ಅದರಿಂದ ಮರಿಯನ್ನು ಹುಟ್ಟಿಸುತ್ತದೆ, ಎಂಬ ಸಿದ್ಧಾಂತವೊಂದಿದೆ. ಶಿವನು ಭಕ್ತನನ್ನು ತನ್ನಂತೆ ಮಾಡುತ್ತಾನೆ, ಎಂಬ ಸಿದ್ಧಾಂತವನ್ನು ಪ್ರತಿಪಾದಿಸಲು ವಚನಕಾರರು ಈ ಉಪಮೆಯನ್ನು ಬಳಸಿಕೊಳ್ಳುತ್ತಾರೆ. (೪:೧೧೭೮)

**ಕುಂಡಲಿನಿ :** ಶಾಕ್ತರು ಹಾಗೂ ವಚನಕಾರರ ಪ್ರಕಾರ, ಪರಶಿವನೇ ಚೈತನ್ಯ, ಪ್ರಕೃತಿಯೇ ಅವನ ಶಕ್ತಿ. ಪರಶಿವನಿಲ್ಲದೆ ಶಕ್ತಿಯಿಲ್ಲ, ಶಕ್ತಿಯಲ್ಲದೆ ಪರಶಿವನಿಲ್ಲ. ಚೈತನ್ಯ ಮತ್ತು ಶಕ್ತಿ ಎರಡು ಪ್ರತ್ಯೇಕ ವಸ್ತುಗಳಾಗಿರದೆ, ಒಂದೇ ವಸ್ತುವಿನ ಎರಡು ಗುಣಗಳಾಗಿವೆ. ಅಂದರೆ, ಪರಶಿವನ ಚಿತ್ತಿಗೆ ಚೈತನ್ಯವೆಂದೂ ಅವನ ಶಕ್ತಿಗೆ ಮಾಯೆ ಅಥವಾ ಪ್ರಕೃತಿಯೆಂದೂ ಹೆಸರು. ಈ ದೃಷ್ಟಿಯಿಂದ ನೋಡಿದಾಗ, ಇರುವುದೆಲ್ಲಾ ಚೈತನ್ಯಮಯವಾದ ಶಕ್ತಿಯ ವಿವಿಧ ರೂಪುಗಳು.

ಅಧ್ಯಯನದ ದೃಷ್ಟಿಯಿಂದ ನಾವು ಇಡೀ ಸತ್ಯವನ್ನು (ಇರುವುದೆಲ್ಲವನ್ನೂ) ಎರಡು ಭಾಗ ಮಾಡಿ, ಒಂದನ್ನು ಬ್ರಹ್ಮಾಂಡವೆಂದೂ, ಮತ್ತೊಂದನ್ನು ಪಿಂಡಾಂಡವೆಂದೂ ಕರೆಯಬುಹುದು. ಬ್ರಹ್ಮಾಂಡ ಅಥವಾ ಮನುಷ್ಯನ ಹೊರಗಿರುವ ಜಗತ್ತು ಶಕ್ತಿಯ ದೊಡ್ಡ ಅಂಶವಾದರೆ ಪಿಂಡಾಡವು ಮನುಷ್ಯನಾಗಿ ಶಕ್ತಿಯ ಸಣ್ಣ ಅಂಶವಾಗಿದೆ. ಬ್ರಹ್ಮಾಂಡದಲ್ಲಿ ಚೈತನ್ಯ (ಪರಶಿವ) ಅವ್ಯಕ್ತವಾಗಿ ಅಡಗಿರುವಂತೆ ಪಿಂಡಾಡದಲ್ಲಿ ಅಡಗಿದ್ದಾನೆ. ಇವೆರಡರಲ್ಲಿರುವ ಪರಶಿವ ಯೋಗಿಗಳ ಅಂತಶ್ಚಕ್ಷು ಅಥವಾ ಜ್ಞಾನ ಚಕ್ಷುವಿಗೆ ಮಾತ್ರ ಗೋಚರವಾಗುತ್ತಾನೆ. ಆದರೆ ಯೋಗಿಗಳು ಅಂತಶ್ಚಕ್ಷುವಿನಿಂದ ಪರಶಿವನನ್ನು ಕಾಣಬೇಕಾದರೆ, ಅವರು ತಮ್ಮ ಪಿಂಡಾಂಡವನ್ನು ಆಧ್ಯಾತ್ಮಿಕ ಶಿಕ್ಷಣಕ್ಕೊಳಪಡಿಸಬೇಕು, ಹಾಗೂ ಆ ಅಂತಶ್ಚಕ್ಷುಗಳನ್ನು ಪಡೆಯಬೇಕು. ಈ ಶಿಕ್ಷಣಕ್ಕೆ ಕುಂಡಲಿನಿಯೋಗವೆನ್ನುತ್ತಾರೆ. ವಚನಕಾರರು ಕುಂಡಲಿನಿ ಯೋಗದ ಬಹಳಷ್ಟು ಅಂಶಗಳನ್ನು ಒಪ್ಪಿಕೊಂಡಿದ್ದಾರೆ.

ಕುಂಡಲಿನಿ ಯೋಗದ ಪ್ರಕಾರ, ಮನುಷ್ಯನ ಮೇರು ದಂಡದಲ್ಲಿ (ಬೆನ್ನು ಹುರಿಯಲ್ಲಿ) ಐದು ವಿಶಿಷ್ಟ ಸ್ಥಾನಗಳಿದ್ದು, ಪರಿಭಾಷೆಯಲ್ಲಿ ಅವಕ್ಕೆ ಚಕ್ರ ಅಥವಾ ಪದ್ಮಗಳೆಂದು ಹೆಸರು. ಆಧಾರ ಅಥವಾ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ ಮತ್ತು ವಿಶುದ್ಧಿ ಎಂಬುದು ಇವುಗಳ ಹೆಸರುಗಳು. ಆದರೆ ಈ ಯಾವ ಚಕ್ರಗಳೂ ಇಂದ್ರಿಯ ಗೋಚರವಲ್ಲ. ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಚೈತನ್ಯವಿದ್ದರೂ ಅದು ಗಿಡ ಮರಗಳಲ್ಲಿ, ಅವಕ್ಕಿಂತ ಹೆಚ್ಚಾಗಿ ಪ್ರಾಣಿಗಳಲ್ಲಿ, ಅವಕ್ಕಿಂತ ಹೆಚ್ಚಾಗಿ ಮನುಷ್ಯನಲ್ಲಿ ವ್ಯಕ್ತವಾಗುತ್ತದೆ. ಅದೇ ರೀತಿ ಅದು ಮನುಷ್ಯನಲ್ಲಿ ಎಲ್ಲೆಡೆಯಲ್ಲಿಯೂ ಒಂದೇ ತೆರನಾಗಿದ್ದರೂ, ಚಕ್ರಗಳಲ್ಲಿ ಅದು ಹೆಚ್ಚಾಗಿ ವ್ಯಕ್ತವಾಗುತ್ತದೆ. ಮನುಷ್ಯನು ಮೆದುಳಿನ ಮೂಲಕ ಮಾತ್ರ ಹೇಗೆ ಚಿಂತಿಸಬಲ್ಲನೋ, ಹಾಗೆಯೇ ಅವನು ಚಕ್ರಗಳ ಮೂಲಕ ಮಾತ್ರ ಚೈತನ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬಲ್ಲ. ಇಂದ್ರಿಯಗಳಿಲ್ಲದಿದ್ದರೆ, ಹೇಗೆ ರೂಪರಸಾದಿಗಳ ವರದಿ ಬುದ್ಧಿಗೆ ಹೋಗುತ್ತಿರಲಿಲ್ಲವೋ, ಮತ್ತು ಬುದ್ಧಿಯಿಲ್ಲದಿದ್ದರೆ, ಆ ವರದಿಗಳ ಅರಿವು ನಮಗಾಗುತ್ತಿರಲಿಲ್ಲವೋ, ಹಾಗೆಯೇ ಚಕ್ರಗಳಿಲ್ಲದಿದ್ದರೆ ನಮಗೆ ಚೈತನ್ಯದ ಸಾಕ್ಷಾತ್ಕಾರವಾಗುತ್ತಿರಲಿಲ್ಲ. ಆದುದರಿಂದ, ಕುಂಡಲಿನಿ ಯೋಗದ ಮೂಲಕ ಚಕ್ರಗಳನ್ನು ಬಳಸಿಕೊಂಡು ಚೈತನ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಸಾಧಕನಿಗೆ ಆವಶ್ಯಕ.

ಮೇಲೆ ಹೇಳಿದ ಐದು ಚಕ್ರಗಳಲ್ಲಿ ಎಲ್ಲಕ್ಕಿಂತ ಕೆಳಗಿರುವುದು ಮೂಲಾಧಾರ ಚಕ್ರ. ಅಂದರೆ, ಬೆನ್ನು ಹುರಿಯ ಅತ್ಯಂತ ಕೆಳಭಾಗ ಅಥವಾ ಗುದದ ಹತ್ತಿರದ ಸ್ಥಳವೇ ಅದರ ಸ್ಥಾನ. ಆ ಚಕ್ರವನ್ನು, ಮಲಗಿರುವ ಹಾವಿನಂತೆ ಸುರುಳಿಯಾಕಾರದಲ್ಲಿ ಕುಂಡಲಿಯು ಸುತ್ತಿಕೊಂಡಿರುತ್ತದೆ. ಕುಂಡಲಿಯೇ ಶಕ್ತಿ, ಚಕ್ರದ ಕೇಂದ್ರವೇ ಚೈತನ್ಯ. ಇಲ್ಲಿರುವ ಚೈತನ್ಯಕ್ಕೆ ಆಚಾರಲಿಂಗವೆಂದು ಹೆಸರು. ಶಕ್ತಿಯು ಹಾವಿನಂತೆ ಕಾಣುವುದರಿಂದ, ಅದಕ್ಕೆ ಭುಜಂಗಿ ಶಕ್ತಿಯೆಂದೂ ಹೆಸರುಂಟು. ಸಾಧಕನು ಕುಂಡಲಿಯನ್ನು ಜಾಗೃತಗೊಳಿಸಿದಾಗ ಅದರ ಶಿರೋಭಾಗವು ಮೇಲ್ಮುಖವಾಗಿ, ಅದು ಮೊದಲು ಆಧಾರಚಕ್ರವನ್ನು ಭೇದಿಸುತ್ತದೆ. ಅದನ್ನೇ ನಾವು ವಚನಪರಿಭಾಷೆಯಲ್ಲಿ ಆಚಾರಲಿಂಗದ ಸಾಕ್ಷಾತ್ಕಾರವೆನ್ನುತ್ತೇವೆ. ಅನಂತರ ಕುಂಡಲಿನಿಯು ಆಧಾರದ ಮೇಲಿರುವ ಸ್ವಾಧಿಷ್ಠಾನ ಚಕ್ರವನ್ನು ಭೇದಿಸಿ ಅಲ್ಲಿರುವ ಗುರುಲಿಂಗವನ್ನೂ, ಅನಂತರ ಸ್ವಾಧಿಷ್ಠಾನದ ಮೇಲಿರುವ ಮಣಿಪೂರಕ ಚಕ್ರವನ್ನು ಭೇದಿಸಿ, ಅಲ್ಲಿರುವ ಶಿವಲಿಂಗವನ್ನೂ ಕೂಡುತ್ತದೆ. ಅನಂತರ ಅದು ಹೃದಯಸ್ಥಾನದಲ್ಲಿರುವ ಅನಾಹತ ಚಕ್ರವನ್ನು ಭೇದಿಸಿ ಅಲ್ಲಿರುವ ಜಂಗಮ ಲಿಂಗವನ್ನೂ ಕೂಡುತ್ತದೆ, ಅನಂತರ ಕಂಠಸ್ಥಾನದಲ್ಲಿರುವ ವಿಶುದ್ಧ ಚಕ್ರವನ್ನು ಭೇದಿಸಿ ಅಲ್ಲಿರುವ ಪ್ರಸಾದಲಿಂಗವನ್ನು ಕೂಡುತ್ತದೆ.

ತಲೆಯಲ್ಲಿ ಮತ್ತೆರೆಡು ಚಕ್ರಗಳಿವೆ. ಹುಬ್ಬಿನ ಮಧ್ಯದಲ್ಲಿರುವ ಚಕ್ರಕ್ಕೆ ಆಜ್ಞಾಚಕ್ರವೆಂದು ಹೆಸರು. ಸಾಧಕನು ಅನಂತರ ಕುಂಡಲಿಯನ್ನು ಇನ್ನೂ ಮೇಲಕ್ಕೆ ತಂದು ಆಜ್ಞಾಚಕ್ರವನ್ನು ಭೇದಿಸಿ, ಅಲ್ಲಿರುವ ಮಹಾಲಿಂಗವನ್ನು ಸಾಕ್ಷಾತ್ಕಾರಿಸಿಕೊಳ್ಳುತ್ತಾನೆ. ಕೊನೆಯಲ್ಲಿ, ನೆತ್ತಿಯಲ್ಲಿರುವ ಸಹಸ್ರಾರ ಚಕ್ರಕ್ಕೆ ಬಂದು ನೆಲೆಸಿದ ಕುಂಡಲಿನಿ ಶಕ್ತಿಯು ಅಲ್ಲಿರುವ ಶೂನ್ಯಲಿಂಗದಲ್ಲಿ ಐಕ್ಯವಾಗುತ್ತದೆ. ವಚನಪರಿಭಾಷೆಯಲ್ಲಿ ಇದಕ್ಕೆ ಲಿಂಗಾಂಗ ಸಾಮರಸ್ಯವೆಂದು ಹೆಸರು. ಶಾಕ್ತರ ಪ್ರಕಾರ ಕುಂಡಲಿನಿಯು ಶಿವನಲ್ಲಿ ಐಕ್ಯವಾಗುವುದೇ ಪರಮಧ್ಯೇಯ; ವಚನಕಾರರ ಪ್ರಕಾರ, ಅಂಗನು (ಕುಂಡಲಿನಿ) ಶೂನ್ಯಲಿಂಗದಲ್ಲಿ ಐಕ್ಯವಾಗುವುದೇ ಅಂತಿಮ ಗುರಿ. ಹೀಗೆ ಧ್ಯೇಯ ಒಂದೇ ಇದ್ದು, ಅದನ್ನು ವ್ಯಕ್ತಪಡಿಸುವ ಪರಿಭಾಷೆಯಷ್ಟೇ ಭಿನ್ನವಾಗಿದೆ.

**ಕುಂಭಜಲಬಿಂಬ :** ಬ್ರಹ್ಮಮೂರ್ತಿ, ವಿಷ್ಣುಮೂರ್ತಿ, ಈಶ್ವರ ಮೂರ್ತಿ, ಮುಂತಾದ ಮೂರ್ತಿಗಳು ಆಕಾರದಲ್ಲಿ ಭಿನ್ನವಾದರೂ, ಅವುಗಳಿಗೆ ಅಧಾರವಾದ ಶಿಲೆ ಮಾತ್ರ ಒಂದೇ; ವಿವಿಧ ಆಕಾರದ ಮತ್ತು ಗಾತ್ರದ ಕುಂಭಗಳಲ್ಲಿರುವ ನೀರಿಗೆ ವಿವಿಧ ಆಕಾರಗಳಿದ್ದರೂ, ನೀರಿನ ಮೂಲ ಸ್ವರೂಪ ಒಂದೇ. ಹಾಗೆಯೇ, ಬ್ರಹ್ಮ, ವಿಷ್ಣು, ಮಹೇಶ್ವರ, ರುದ್ರ ಮತ್ತು ಸದಾಶಿವ ಎಂಬ ಐದು ಅಧಿದೇವತೆಗಳ ರೂಪ ಬೇರೆ ಬೇರೆಯಾದರೂ, ಅವರಲ್ಲಿರುವ ಪರಶಿವ ಮಾತ್ರ ಒಬ್ಬನೇ. (೯:೬೭)

**ಕುರುಹಿಂದ ಅರಿಹನರಿಯುವುದು :** ಇಷ್ಟಲಿಂಗವು ಚಿನ್ಮಯವಾದ ಪರಶಿವನ ಕುರುಹು. ಅದನ್ನು ಪೂಜಿಸಿ, ಆ ಮೇಲೆ ಧ್ಯಾನ ಮಾಡಿದಾಗ ಕುರುಹು ಕಾಣದಾಗಿ ಧ್ಯಾನಿಯು ಚಿತ್ತನ್ನು (ಅರಿವನ್ನು) ಮಾತ್ರ ಕಾಣುತ್ತಾನೆ. (೮:೧೩೪೯)

**ಕುರುಹು :** ಗುರುತು ಎಂಬುದು ಇದರ ಸಾಮಾನ್ಯ ಅರ್ಥವಾದರೂ, ವಚನ ಪರಿಭಾಷೆಯಲ್ಲಿ ಅದು ಇಷ್ಟಲಿಂಗವನ್ನು ಮಾತ್ರ ನಿರ್ದೇಶಿಸುತ್ತದೆ. ಕಣ್ಣಿಗೆ ಕಾಣುವ ಇಷ್ಟಲಿಂಗವು ಕಣ್ಣಿಗೆ ಕಾಣದ ಅರಿವಿನ (ಪರಶಿವನ) ಕುರುಹು.

**ಕುರುಹಭವಿ :** ಪ್ರಾಣಲಿಂಗಿಯಾದವನು ಲಿಂಗವನ್ನು (ಪರಶಿವನನ್ನು) ತನ್ನ ಅಂಗದ ಪ್ರತಿಯೊಂದು ಭಾಗದಲ್ಲಿಯೂ ಪ್ರತಿಷ್ಠಾಪಿಸಿಕೊಳ್ಳುತ್ತಾನೆ. ಇದು ಸಾಧ್ಯವಾಗದೆ, ಲಿಂಗವೆಂದರೆ ಕೇವಲ ಕುರುಹು (ಇಷ್ಟಲಿಂಗ), ಅದು ಕರಸ್ಥಲದಲ್ಲಿ ಪ್ರತಿಷ್ಠಿತವಾಗಿದ್ದರೆ ಸಾಕು ಎಂದು ಭಕ್ತನು ತಿಳಿದರೆ, ಅವನನ್ನು ಆ ಕುರುಹೇ ಭವಿಯನ್ನಾಗಿ ಮಾಡುತ್ತದೆ (೮:೧೪೨೧).

**ಕುಲಜ :** ಉತ್ತಮ ಕುಲದಲ್ಲಿ ಹುಟ್ಟಿದವನು.

**ಕುಲವಿಲ್ಲದ ಅಕುಲ :** ನಿಜವಾದ ಭಕ್ತನಿಗೆ ತನ್ನ ಕುಲದ ಬಗೆಗೆ ಅಹಂಕಾರವಾಗಲಿ, ಇತರರ ಕುಲದ ಬಗೆಗೆ ತಿರಸ್ಕಾರವಾಗಲಿ ಇಲ್ಲ. ಅಷ್ಟೇ ಅಲ್ಲ, ತನಗೊಂದು ಕುಲವಿದೆ ಎಂಬುದನ್ನೂ ಅವನು ಒಪ್ಪುವುದಿಲ್ಲವಾದುದರಿಂದ ಅವನು ಕುಲವಿಲ್ಲದ ಅಕುಲ. (೩:೭೬೯)

**ಕುಳ :** ರಹಸ್ಯ

**ಕುಳಸ್ಥಳ :** ವಿವರ, ಆದ್ಯಂತ

**ಕೂಟದ ಭಕ್ತಿ :** ಪರಶಿವನಲ್ಲಿ ಕೂಡ (ಐಕ್ಯವಾಗ)ಬೇಕೆಂಬ ಧ್ಯೇಯವಿಟ್ಟುಕೊಂಡು ಮಾಡುವ ಭಕ್ತಿ. ಪ್ರಾಪಂಚಿಕ ಆಸೆಗಳನ್ನು ಪೂರೈಸಿಕೊಳ್ಳಲಾಗಲಿ ಡಂಭಾಚಾರಕ್ಕಾಗಲಿ ಮಾಡುವ ಭಕ್ತಿಗಿಂತ ಇದು ಭಿನ್ನ. (೯:೧)

**ಕೂಟಸ್ಥ :** ೧. ಕೂಟದಲ್ಲಿ ಭಾಗಿಯಾದವನು, ಅಂಟಿಕೊಂಡವನು. ೨. ವೇದಾಂತ ಪರಿಭಾಷೆಯಲ್ಲಿ ಕೂಟಸ್ಥನೆಂದರೆ ಪರಿವರ್ತನೆಗೊಳಗಾಗದವನು ಎಂದರ್ಥ. (೯:೧೧೧)

**ಕೂಟಸ್ಥಭವಿ ಐಕ್ಯ :** ನಾನು ಲಿಂಗೈಕ್ಯನಾಗಿದ್ದೇನೆ ಎಂದು ಐಕ್ಯನು ತಿಳಿದರೆ, ಅವನು ನಿಜವಾಗಿಯೂ ಐಕ್ಯನಲ್ಲ. ಹೆಣವು ನಾನು ಸತ್ತಿದ್ದೇನೆ ಎಂದು ಹೇಗೆ ಹೇಳಲಾರದೋ, ಹಾಗೆ ಲಿಂಗೈಕ್ಯನಾಗಿ ಅಹಂನಷ್ಟನಾದವನು ನಾನು ಲಿಂಗದಲ್ಲಿ ಕೂಟಸ್ಥನೆಂದು ಹೇಳಲಾರ. ಹಾಗೆ ಹೇಳುವವನು ಮೊದಲಿನಂತೆ ಭವಿ. (೮:೧೪೨೧)

**ಕೈವಲ್ಯಾವಸ್ಥೆ :** ಆತ್ಮನ ಐಹಿಕ (ಸಾಂಸಾರಿಕ) ಜೀವನದಲ್ಲಿ ಅವನ ಜೊತೆಗೆ ೩೪ ತತ್ವಗಳಿರುತ್ತವೆ. ಸದಾಶಿವ, ಈಶ್ವರ, ಬ್ರಹ್ಮ, ವಿಷ್ಣು, ಮತ್ತು ರುದ್ರ ಎಂಬ ಐದು ಶಿವತತ್ವಗಳು, ಶ್ರೋತ್ರಾದಿ ಐದು ಜ್ಞಾನೇಂದ್ರಿಯಗಳು, ಶಬ್ದಾದಿ ಐದು ಇಂದ್ರಿಯ ವಿಷಯಗಳು, ವಾಗಾದಿಗಳೈದು ಕರ್ಮೇಂದ್ರಿಯಗಳು, ವಾಯುಗಳು ಹತ್ತು, ಚಿತ್ತಾದಿ ನಾಲ್ಕು ಅಂತಃಕರಣಗಳು. ಜೊತೆಗೆ ಜೀವ ಮತ್ತು ಪರಶಿವ ಸೇರಿದರೆ ಮೂವತ್ತಾರು. ಆತ್ಮನು ತನ್ನ ಅನುಭಾವಸ್ಥಿತಿ (ಸಮಾಧಿಸ್ಥಿತಿಯಲ್ಲಿ) ಈ ಮೂವತ್ನಾಲ್ಕು ತತ್ವಗಳಿಂದ

ಬೇರೆಯಾಗಿದ್ದರೆ ಅಂಥ ಅವಸ್ಥೆಯನ್ನು ವಚನಕಾರರು ಕೈವಲ್ಯಾವಸ್ಥೆಯೆನ್ನುತ್ತಾರೆ. (೧೩:೧೯೮೩-೮೪)

**ಕೈಲಾಸ :** ಪುರಾಣಗಳ ಪ್ರಕಾರ, ಕೈಲಾಸವು ಪರಶಿವನ ಸ್ಥಾನ. ಅಲ್ಲಿ ಅವನು ಪಾರ್ವತಿ, ಗಣಪತಿ, ಕುಮಾರ, ಭೃಂಗಿ, ತುಂಬುರ, ಪ್ರಮಥರು, ಮುಂತಾದವರು ಅವನ ಸಂಗಡ ಇರುತ್ತಾರೆ. ಕಠಿಣ ಆಧ್ಯಾತ್ಮಿಕ ಸಾಧನೆಯನ್ನು ಮಾಡಿದ ಶಿವಭಕ್ತರು ಸದೇಹಿಗಳಾಗಿ ಅಲ್ಲಿಗೆ ಹೋಗಿ, ಶಿವನ ಸನ್ನಿಧಿಯಲ್ಲೇ ಅನಂತಕಾಲ ಇರುತ್ತಾರೆ. ಅವರಿಗೆ ಶಿವಸಾನಿಧ್ಯದಲ್ಲಿ ಯಾವ ತಾಪತ್ರಯವೂ ಇರುವುದಿಲ್ಲ.

ಆದರೆ ವಚನಕಾರರ ಪ್ರಕಾರ, ಕೈಲಾಸ ಇರುವುದೂ ಸುಳ್ಳು, ಅದು ಆಧ್ಯಾತ್ಮಿಕ ಸಾಧನೆಯ ಪರಮ ಗುರಿ ಎಂಬುದೂ ಸುಳ್ಳು. ಕೈಲಾಸವಿದೆ ಎಂದು ನಂಬುವವರನ್ನು ಶರಣರು ಅಪಹಾಸ್ಯ ಮಾಡಿದ್ದಾರೆ. ಕೈಲಾಸವೆಂಬುದೊಂದು ಭೂಮಿಯೊಳಿರುವ ಹಾಳು ಬೆಟ್ಟ ಎಂದು ಹೇಳುವ ಸಿದ್ಧರಾಮನು ಅದೊಂದು ವಿಶ್ವಾತೀತ ಪ್ರದೇಶವಲ್ಲವೆಂದು ಖಚಿತಪಡಿಸುತ್ತಾನೆ. ಭಕ್ತಿಯೆಂಬ ಪಿತ್ತ ತಲೆಗೇರಿ, ಕೈಲಾಸದ ಬಟ್ಟೆಯ ಹತ್ತುವ ಪಾಪಾತ್ಮರ ಕಂಡು ಎನ್ನ ಮನ ನಾಚಿತ್ತು ಎಂದು ಚೆನ್ನಬಸವಣ್ಣ ವ್ಯಂಗ್ಯವನ್ನಾಡುತ್ತಾನೆ.

ಇಲ್ಲಿ ಕೈಲಾಸವೆಂಬ ಲೋಕವಿದೆ ಎಂಬುದನ್ನು ಖಂಡಿಸುವುದೊಂದೆ ವಚನಕಾರರ ಗುರಿಯಲ್ಲ. ಅವರು ವಾಸ್ತವವಾಗಿ ಖಂಡಿಸುತ್ತಿರುವುದು ಧಾರ್ಮಿಕ ಜೀವನದ ಗುರಿಯ ಬಗೆಗಿರುವ ನಮ್ಮ ತಪ್ಪು ಕಲ್ಪನೆಯನ್ನು. ಕೈಲಾಸ ಪರಿಕಲ್ಪನೆಯು ಭಕ್ತ (ಅಂಗ) ಬೇರೆ, ಕೈಲಾಸದಲ್ಲಿರುವ ಪರಶಿವ ಬೇರೆ ಎಂಬ ದ್ವೈತ ಸಿದ್ಧಾಂತವನ್ನೂ, ಪರಶಿವನು ನಮ್ಮಿಂದ ಬಹಳ ದೂರ ಇರುವ, ಯಾವಾಗಲೋ ಒಮ್ಮೆ ಭೂಮಿಗೆ ಇಳಿದು ಬರುವ ದೇವ, ಎಂಬ ಸಿದ್ಧಾಂತವನ್ನೂ ಪ್ರತಿಪಾದಿಸುತ್ತದೆ. ವಚನಕಾರರು ಇವೆರಡು ಸಿದ್ಧಾಂತಗಳನ್ನೂ ಖಂಡಿಸಿದರಲ್ಲದೆ, ಪರಶಿವನು ನಮ್ಮಲ್ಲೇ ಇದ್ದಾನೆ ಅಥವಾ ನಾವೆಲ್ಲ ಶಿವಾಂಶಿಕರೇ ಎಂಬ ಸಿದ್ಧಾಂತವನ್ನೂ, ಶಿವಸಾಕ್ಷಾತ್ಕಾರವಾದಾಗ ನಾವು ಶಿವನೊಂದಿಗೆ ಐಕ್ಯ ಸಾಧಿಸಬಹುದು ಎಂಬ ಸಿದ್ಧಾಂತವನ್ನೂ ಪ್ರತಿಪಾದಿಸಿದರು. ಕೈಲಾಸಕ್ಕೆ ಹೋಗಬೇಕಾದವರು ಮೊದಲು ವಿದೇಹಿಗಳಾಗಬೇಕು, ಆದರೆ ವಚನಕಾರರು ಜೀವನ್ಮುಕ್ತಿ ಸಿದ್ಧಾಂತವನ್ನು ಪ್ರತಿಪಾದಿಸಿದರು. ಶಿವಜೀವೈಕ್ಯತೆಯನ್ನು ಸಾಧಿಸಿದವನ ದೇಹದಲ್ಲಿ ಶಿವನಿರುವುರಿಂದ, ಬಸವಣ್ಣನವರು ಕಾಯವೇ ಕೈಲಾಸವೆಂದರು. ಅಲ್ಲದೆ ವಚನಕಾರರ ಪ್ರಕಾರ, ಕೈಲಾಸವೆಂಬ ಧ್ಯೇಯಕ್ಕಿಂತ ಲಿಂಗೈಕ್ಯತೆಯೆಂಬ ಧ್ಯೇಯವೇ ಶ್ರೇಷ್ಠವೆಂದೂ ಸಾರಿದರು.

**ಕೈಲಾಸವೆಂಬ ಭವಸಾಗರ :** ಶೈವಸಿದ್ಧಾಂತ ಮತ್ತು ಸಾಂಪ್ರದಾಯಿಕ ವೈಷ್ಣವ ಪಂಥಗಳ ಪ್ರಕಾರ, ದೇವಲೋಕ (ಕೈಲಾಸ ಅಥವಾ ವೈಕುಂಠ) ಪ್ರಾಪ್ತಿಯೇ ಆಧ್ಯಾತ್ಮಿಕ ಜೀವನದ ಅಂತಿಮ ಗುರಿ. ಆದರೆ ವಚನಕಾರರು ಪರಲೋಕ ಪ್ರಾಪ್ತಿಯನ್ನು ಲಿಂಗಾಂಗ

ಸಾಮರಸ್ಯಕ್ಕಿಂತ ಕಡಿಮೆಯೆಂದು ಪರಿಗಣಿಸುತ್ತಾರೆ. ಇದಕ್ಕೆ ಕಾರಣವೆಂದರೆ, ಕೈಲಾಸಕ್ಕೆ ಹೋದವರು ಮರ್ತ್ಯಕ್ಕೆ ಮತ್ತೆ ಬರುವ ಸಾಧ್ಯತೆಯುಂಟು. ಆದುದರಿಂದ ಭೂಲೋಕವು ಕಡಿಮೆ ಸುಖವನ್ನು ಕೊಡುವ ಭವಸಾಗರದ ಒಂದು ಸ್ಥಳವಾದರೆ, ಕೈಲಾಸವು ಹೆಚ್ಚು ಸುಖವನ್ನು ಕೊಡುವ ಭವಸಾಗರದ ಮತ್ತೊಂದು ಭಾಗ. (೮:೧೬೬೪)

**ಕೊಟ್ಟುಕೊಂಬುವರು :** ಪ್ರಸಾದಿಗಳು. ಲಿಂಗಕ್ಕೆ ಕೊಟ್ಟು (ಅರ್ಪಿಸಿ), ಅರ್ಪಿತ ಪದಾರ್ಥವನ್ನು ಪ್ರಸಾದವನ್ನಾಗಿ ಮಾಡಿಕೊಂಡು ಅನಂತರ ತೆಗೆದುಕೊಳ್ಳುವವರು (ಸ್ವೀಕರಿಸುವವರು). (೧೨:೪೫೦)

**ಕ್ರಿಯಾಗಮ :** ಆಚಾರಗಳನ್ನು ಪ್ರತಿಪಾದಿಸುವ ಆಗಮ. ನೇಮ ಮಾಡುವವನು ಐಹಿಕ ಸುಖವನ್ನು ಧ್ಯೇಯವನ್ನಾಗಿಟ್ಟುಕೊಂಡಿದ್ದಾನೆ. ಭಕ್ತನು ತನ್ನ ಸಮಾಧಾನಕ್ಕೋಸ್ಕರ ಆಚರಿಸು(ಪೂಜೆಮಾಡು)ತ್ತಾನೆ. ಬೇಡುವುದು ಜಂಗಮನ ಕ್ರಿಯೆ. ಇಂಥವರ ಕ್ರಿಯಾಗಮದಲ್ಲಿ ಅಂಗದ ಆಧ್ಯಾತ್ಮಿಕ ಪ್ರಗತಿಗೆ ಸ್ಥಾನವಿಲ್ಲ. (೨:೩೧೪)

**ಕ್ರಿಯಾಗಮ್ಯಲಿಂಗ :** ವೀರಶೈವಗುರುವು ಭೋಧಿಸಿದ ಕ್ರಿಯೆಗಳೆಲ್ಲವನ್ನೂ ಆಚರಿಸುವ ಮೂಲಕ ಸಾಕ್ಷಾತ್ಕಾರಿಸಿಕೊಳ್ಳಬಲ್ಲ ಲಿಂಗ, ಇದು ಕೇವಲ ಈ ಆಚಾರಗಳನ್ನೂ ಅಲ್ಲದೆ, ತ್ಯಾಗವನ್ನೂ ಒಳಗೊಳ್ಳುತ್ತದೆಯಾದುದರಿಂದ ಆ ಲಿಂಗವನ್ನು ಸಾಧಕನು ತನ್ನ ತ್ಯಾಗಾಂಗದಲ್ಲೇ ಕಾಣುತ್ತಾನೆ.

**ಕ್ರಿಯಾಚಾರ :** ಪೂಜೆ, ನೈವೇದ್ಯ, ಮುಂತಾದ ದೈಹಿಕ ಕ್ರಿಯೆಗಳು. ಮಂತ್ರ, ಧ್ಯಾನ, ಮುಂತಾದ ಮಾನಸಿಕ ಕ್ರಿಯೆಗಳು ಮತ್ತು ದಯೆ, ಅಹಿಂಸೆ, ಸತ್ಯಶೀಲತೆ ಮುಂತಾದ ನೈತಿಕ ಆಚಾರಗಳು. ಕೆಲವು ವೇಳೆ ಇವೆಲ್ಲಕ್ಕೂ ಆಚಾರ ಎಂಬ ಪದವನ್ನು ಬಳಸಲಾಗುತ್ತದೆ. (ನೋಡಿ : **ಆಚಾರ, ಆಚಾರ ಪ್ರಭೇದ**).

**ಕ್ರಿಯಾತೀತ :** ಪ್ರಾಥಮಿಕ ಹಂತದ ಸಾಧಕನು ಇಷ್ಟಲಿಂಗ ಪೂಜೆ, ಪಾದೋದಕಪ್ರಸಾದ ಸೇವನೆ, ಗುರುಜಂಗಮಭಕ್ತಿ, ಉಪವಾಸ ಮುಂತಾದ ವ್ರತನೇಮಗಳನ್ನೆಲ್ಲಾ ಯಾಂತ್ರಿಕವಾಗಿ ಆಚರಿಸುತ್ತಾನೆ. ಆದರೆ ಪರಶಿವನ ಸ್ವರೂಪದ ಅರಿವಾದತೆಲ್ಲಾ ಈ ಕ್ರಿಯೆಗಳೆಲ್ಲಾ ಅರ್ಥವಿಲ್ಲದವು ಎಂಬ ಮನವರಿಕೆಯಾಗಿ ಅವನು ಆ ಕ್ರಿಯೆಗಳನ್ನು ಬಿಟ್ಟು ಕ್ರಿಯಾತೀತನಾಗುತ್ತಾನೆ. (೫:೩)

**ಕ್ರಿಯಾದೀಕ್ಷೆ :** ಲಿಂಗದೀಕ್ಷೆಯ ಸಮಯದಲ್ಲಿ ಮಾಡುವ ದೀಕ್ಷೆಗಳಲ್ಲಿ ಒಂದು. ಕ್ರಿಯೆಯೆಂದರೆ ಆಚಾರ. ಭಕ್ತನು ವೀರಶೈವನಾದ ಮೇಲೆ ಯಾವ ರೀತಿಯ ಪೂಜೆಗಳನ್ನು ಮಾಡಬೇಕೆಂಬುದನ್ನು ಗುರುವು ಆ ಸಮಯದಲ್ಲಿ ಹೇಳಿಕೊಡುತ್ತಾನೆ. ಈ ಆಚಾರಗಳೆಲ್ಲಾ ಹೆಚ್ಚಾಗಿ ದೈಹಿಕ ಕ್ರಿಯೆಗಳನ್ನೆ ಒಳಗೊಳ್ಳುವುದರಿಂದ, ಕ್ರಿಯಾದೀಕ್ಷೆಯನ್ನು ಕಾಯಕ್ಕೆ (ಕಾಯಕ್ಕಾಗಿ) ಉಪದೇಶ ಮಾಡಲಾಗುತ್ತದೆ.

**ಕ್ರಿಯಾದ್ವೈತಿ :** ನಿಜವಾದ ಭಕ್ತನು ಕೇವಲ ಸ್ನಾನ ಪೂಜಾದಿಗಳನ್ನು ಮಾಡಿ ಶುದ್ಧನಾದೆ ಎಂದು ತಿಳಿದರೆ, ಅವನು ಕ್ರಿಯಾದ್ವೈತಿಯೆನಿಸಿಕೊಳ್ಳುತ್ತಾನೆ. ಅವನು ಈ ರೀತಿ ಬಾಹ್ಯಕ್ರಿಯೆಗಳನ್ನಷ್ಟೇ ಮಾಡುತ್ತಿದ್ದಾನೆಯೇ ಹೊರತು, ನಿಜವಾದ ಅದ್ವೈತವನ್ನು ಸಾಧಿಸಲು ಬೇಕಾದ ಶಮದಮಾದಿ ಸದ್ಗುಣ ಸಂಪತ್ತನ್ನೂ ಆಳವಾದ ಶಿವಭಕ್ತಿಯನ್ನೂ ಬೆಳೆಸಿಕೊಳ್ಳುತ್ತಿಲ್ಲ. ಹಿಗಾದರೆ ಅವನು ಕ್ರಿಯಾದ್ವೈತಿಯಾಗೇ ಉಳಿಯುತ್ತಾನೆ. (೩:೯೩೯)

**ಕ್ರಿಯಾಪೂಜೆ ಒಡಲ ‍ಎವುದು :** ಪೂಜೆ, ಮತ್ತಿತರ ಕ್ರಿಯೆಗಳನ್ನು ನಾವು ದೈಹಿಕವಾಗಿ, ಅಂದರೆ ದೃಗ್ಗೋಚರವಾಗಿ, ಮಾಡುತ್ತೇವೆ. ಆದರೆ ಕ್ರಿಯಾಪೂಜೆಗಳನ್ನು ಒಡಲಿನಿಂದ (ಹೃದಯದಿಂದ) ಮಾಡಿದಾಗ, ಅಂದರೆ ಪರಮಾತ್ಮ ಎಲ್ಲೆಲ್ಲಿಯೂ ಇರುವುದರಿಂದ, ಹಾಗೂ ಅವನೇ ಎಲ್ಲ ವಸ್ತುಗಳನ್ನೂ ಕೊಟ್ಟಿರುವುದರಿಂದ, ಅವು ಎಲ್ಲಿವೆಯೋ ಅಲ್ಲಿಂದಲೆ ಮಾನಸಿಕವಾಗಿ ಅವುಗಳನ್ನು ನೈವೇದ್ಯ ಮಾಡಿದರೆ ಹಾಗೂ ತನ್ನನ್ನು ತಾನೇ ಅರ್ಪಿಸಿಕೊಂಡರೆ, ಅಂಥವನು ಮತ್ತೆ ಕ್ರಿಯಾಪೂಜೆಗಳನ್ನು ಮಾಡಲೇಬೇಕಾಗಿಲ್ಲ. (೫:೯೧೬)

**ಕ್ರಿಯಾರ್ಪಣ :** ಇಂದ್ರಿಯಗೋಚರವಾದ ಇಷ್ಟಲಿಂಗಕ್ಕೆ ಇಂದ್ರಿಯಗೋಚರ ವಸ್ತುಗಳನ್ನು ಇಂದ್ರಿಯಗೋಚರ ಕ್ರಿಯೆಗಳ ಮೂಲಕ (ಉದಾ : ನೈವೇದ್ಯ ಮಾಡುವ ಮೂಲಕ) ಅರ್ಪಿಸುವುದು. (೯:೧೩೩೯)

**ಕ್ರಿಯಾಲಿಂಗ :** ಇಷ್ಟಲಿಂಗ ಅಥವಾ ಆಚಾರಲಿಂಗ. ಭಕ್ತ ಸ್ಥಲದಲ್ಲಿರುವ ಸಾಧಕನು ಕೇವಲ ವಿಶ್ವಾಸ ಅಥವಾ ಶ್ರದ್ಧೆಯಿಂದ ಗುರುವು ಬೋಧಿಸಿದ ಆಚಾರ ಅಥವಾ ಕ್ರಿಯೆಗಳನ್ನು ಆಚರಿಸಿ, ಆಚಾರ ಲಿಂಗವನ್ನು ತೃಪ್ತಿಪಡಿಸುತ್ತಾನೆಂಬ ನಂಬಿಕೆಯನ್ನು ಕ್ರಿಯಾಲಿಂಗ ಪರಿಕಲ್ಪನೆ ಸೂಚಿಸುತ್ತದೆ.

**ಕ್ರಿಯಾಲಿಂಗ ಮೂರು :** ದೀಕ್ಷೆಯನ್ನು ಪಡೆದು ಶಿವಭಕ್ತನಾದವನು ಪ್ರಥಮದ ಮೂರು ಹಂತಗಳಲ್ಲಿ (ಸ್ಥಲಗಳಲ್ಲಿ) ಕ್ರಿಯೆಗೆ ಪ್ರಾಧಾನ್ಯತೆ ಕೊಡುತ್ತಾನೆ. ಆಚಾರಲಿಂಗ, ಗುರುಲಿಂಗ, ಮತ್ತು ಶಿವಲಿಂಗಗಳನ್ನು ಭಕ್ತನಾಗಿ, ಮಹೇಶನಾಗಿ ಮತ್ತು ಪ್ರಸಾದಿಯಾಗಿ ಒಲಿಸಿಕೊಳ್ಳಲು ಪ್ರಯತ್ನ ಮಾಡುತ್ತಾನೆ. ಭಕ್ತನಾಗಿ ವಿಶ್ವಾಸ, ಮಹೇಶನಾಗಿ ನಿಷ್ಠೆ, ಮತ್ತು ಪ್ರಸಾದಿಯಾಗಿ ಅವಧಾನ ಇವುಗಳ ಮೂಲಕ, ಪೂಜೆ, ಜಪ, ಪ್ರಸಾದ ಮುಂತಾದ ಬಾಹ್ಯ ಕ್ರಿಯೆಗಳ ಮೂಲಕ ತನ್ನ ಭಕ್ತಿಯನ್ನು ತೋರಿಸುತ್ತಾನೆ.

**ಕ್ರಿಯಾಶುದ್ಧಾತ್ಮ :** ಕ್ರಿಯಾಶುದ್ಧಾತ್ಮನು ಕೇವಲ ಮಾನಸಿಕವಾಗಷ್ಟೇ ಅಲ್ಲ, ಕ್ರಿಯೆಯಲ್ಲೂ ಶುದ್ಧವಾಗಿರುತ್ತಾನೆ. ಹೇಗೆಂದರೆ, ಅವನು ತಾನೆಲ್ಲವನ್ನೂ ಮಾಡಿದರೂ ಅದು ಲಿಂಗಕ್ಕಾಗಿಯೇ, ತನಗಲ್ಲ ಎಂಬ ಶರಣಾಗತಿ ಮನೋಭಾವವಿರುತ್ತದೆ. (೮:೨೯೪)

**ಕ್ರೀ, ಕ್ರಿಯೆ, ಕರ್ಮ :** ಆಚಾರ, (ನೋಡಿ : **ಆಚಾರ**)

**ಕ್ರೀಯಳಿದ ಭಕ್ತ :** ಭಕ್ತಸ್ಥಲದಲ್ಲಿರುವ ಸಾಧಕನು ನಿಷ್ಕಾಮ ಕರ್ಮವನ್ನೂ, ಪೂಜೆ, ಮಂತ್ರಪಠಣ, ಮುಂತಾದ ಆಚಾರವನ್ನೂ ಮಾಡಬೇಕು. ಆದರೆ, ಆ ಸಾಧಕನಿಗೆ ಲಿಂಗ ಸಾಕ್ಷಾತ್ಕಾರವಾದರೆ, ಅವನು ಆ ಕ್ರಿಯೆಗಳನ್ನು ಮಾಡಬೇಕೆಂಬ ವಿಧಿಯಿಲ್ಲ. ಅವನು ಕ್ರಿಯೆಯಳಿದ ಭಕ್ತ. ಇನ್ನೊಂದರ್ಥದಲ್ಲಿ ಭಕ್ತ ಮಾಡಿದ ಕರ್ಮಗಳು ನಿಷ್ಕಾಮ ಕರ್ಮಗಳಾದುದರಿಂದ, ಅವನು ಕ್ರೀಯಳಿದ ಭಕ್ತನೆನಿಸಿಕೊಳ್ಳುತ್ತಾನೆ. ಏಕೆಂದರೆ, ಅಂಥ ಕರ್ಮಗಳು ಮಾಡಿದ ಕೂಡಲೇ ಅಳಿಯುತ್ತವೆ. ಆದರೆ ಸ್ವಾರ್ಥ ಉದ್ದೇಶದಿಂದ ಮಾಡಿದ ಕ್ರಿಯೆಗಳು ಫಲ ನೀಡುವವರೆಗೂ ನಮ್ಮಲ್ಲೇ ಅವ್ಯಕ್ತವಾಗಿರುತ್ತವೆ.

**ಕ್ರೀಯೊಳಗಿದ್ದ ನಿಷ್ಕ್ರೀವಂತರು :** ನಿಷ್ಕಲ್ಮಷ ಮನಸ್ಸಿನಿಂದ ನಾವು ಕ್ರಿಯೆಯನ್ನು ಮಾಡಿದರೂ, ನಮಗೆ ಆಗಾಮಿ ಕರ್ಮ ಉಂಟಾಗುವುದಿಲ್ಲ. ನಮ್ಮ ಸಾಧಾರಣ ಕ್ರಿಯೆಗಳೆಲ್ಲ ಕರ್ಮವನ್ನುಂಟುಮಾಡುವಂಥವಾಗಿದ್ದು, ನಿಷ್ಕಲ್ಮಷ ಮನಸ್ಸಿನಿಂದ ಮಾಡಿದ ಕ್ರಿಯೆಗಳು ನಿಷ್ಕ್ರಿಯೆಗಳೆನಿಸಿಕೊಳ್ಳುತ್ತವೆ. (೩:೧೧೭೬)

**ಖಂಡಮಂಡಲದ ಅಂಗ :** ದೃಶ್ಯ ಗೋಚರಪ್ರಪಂಚವನ್ನು ವಿಭಜಿಸಲು (ಖಂಡಿಸಲು) ಬರುವುದರಿಂದ, ಅದು ಖಂಡಮಂಡಲ ಎನ್ನಿಸಿಕೊಳ್ಳುತ್ತದೆ; ಇಡೀ ಸಂಸಾರವೆಂಬ ಖಂಡಮಂಡಲದೊಳಗೆ ಅಂಗವು ಬಂಧಿತವಾಗಿದೆ. (೮:೧೦೦೯)

**ಖಂಡಿತಕಾಯಕ :** ಅಂದಂದಿನ ಜೀವಿತಕ್ಕೆ ಸಾಕಾಗುವಷ್ಟು ಮಾತ್ರ ಮಾಡುವ ದುಡಿಮೆ ಖಂಡಿತ ಕಾಯಕ; ನಾಳೆಗೂ ಇರಲಿ ಎಂಬ ಉದ್ದೇಶದಿಂದ ಹೆಚ್ಚು ದುಡಿದು ಸಂಪಾದಿಸಿದರೆ, ಖಡಿತಕಾಯಕವೆನಿಸಿಕೊಳ್ಳುವುದಿಲ್ಲ. (೫:೩೯೬)

**ಖಂಡಿತಜ್ಞಾನ :** ಪರಶಿವನಲ್ಲಿ ಭಾಗಗಳಿಲ್ಲ. ಆತ್ಮಗಳೂ ಅಚಿದ್ವವಸ್ತುಗಳಿರುವ ಪ್ರಪಂಚವೂ ಅವನ ಅವಿಭಾಜ್ಯ ಅಂಗ. ಆದರೆ ಅಜ್ಞಾನ (ಮರೆವು)ದಿಂದಾಗಿ ನಾವು ಪ್ರತ್ಯೇಕವೆಂದು (ಖಂಡಿತವೆಂದು) ತಿಳಿಯುತ್ತೇವೆ. ಅದೇ ರೀತಿ, ಕುಂಬಾರ ಮತ್ತು ಮಡಕೆ ಹೇಗೆ ಬೇರೆ ಬೇರೆಯೋ ಹಾಗೆಯೇ ಪರಶಿವನೂ ಅವನು ಸೃಷ್ಟಿಸಿದ ಜಗತ್ತೂ ಬೇರೆ ಬೇರೆ ಎಂದು ತಿಳಿಯುತ್ತೇವೆ. ಹಾಗೆ ತಿಳಿಯುವುದೇ ಖಂಡಿತಜ್ಞಾನ. ವಾಸ್ತವವಾಗಿ, ತೆರೆಗಳು ಸಮುದ್ರದಲ್ಲಿ ಹೇಗೆ ಸಮುದ್ರದ ಅವಿಭಾಜ್ಯ ಅಂಗವಾಗಿವೆಯೋ ಹಾಗೆಯೆ ಆತ್ಮಗಳೂ ಪ್ರಪಂಚವೂ ಪರಶಿವನ ಅವಿಭಾಜ್ಯ ಅಂಗವಾಗಿದೆ ಎಂದು ತಿಳಿಯುವುದು ಅಖಂಡಿತ ಜ್ಞಾನ. ಖಂಡಿತ ಜ್ಞಾನ ಮರೆವಿನಿಂದ ಉಂಟಾದುದು.

**ಗಗನಕೇಶಿ (ವ್ಯೋಮಕೇಶಿ) :** ಪರಶಿವ ಮತ್ತು ಶಕ್ತಿ ಇವುಗಳ ಸಂಬಂಧವನ್ನು ವಿವರಿಸುವಾಗ ವಚನಕಾರರು ದೇಹ ಮತ್ತು ಆತ್ಮಗಳ ಸಂಬಂಧದ ಉಪಮೆಯನ್ನು ಕೊಡುತ್ತಾರೆ. ದೇಹದ ಪ್ರತಿ ಅಣುವಿನಲ್ಲಿಯೂ ಹೇಗೆ ಆತ್ಮ ವ್ಯಾಪಿಸಿಕೊಂಡಿದ್ದಾನೋ, ಹಾಗೆಯೇ ಬ್ರಹ್ಮಾಂಡದ ಪ್ರತಿ ಅಣುವಿನಲ್ಲಿಯೂ ಪರಶಿವ ವ್ಯಾಪಿಸಿಕೊಂಡಿದ್ದಾನೆ. ಕೆಲವು ವೇಳೆ ಇಡೀ ಬ್ರಹ್ಮಾಂಡವೇ ಅವನ ಅಷ್ಟತನು ಎನ್ನುವುದೂ ಉಂಟು. ಆದರೆ ಇದರ ಅರ್ಥ ಅವನಿಗೆ ನಮ್ಮ ದೇಹಕ್ಕಿರುವಂತೆ ಎರಡು ಕಾಲು, ಎರಡು ಕೈ ಇತ್ಯಾದಿಗಳಿವೆ

ಎಂದರ್ಥವಲ್ಲ. ಇದನ್ನೆ ಕೆಲವರು ಇಡೀ ಆಕಾಶ (ಗಗನ ಅಥವಾ ವ್ಯೋಮ)ವೇ ಅವನ ಕೂದಲು (ಕೇಶ) ಎಂದು ಹೇಳುವ ಮೂಲಕ, ಪರಶಿವನನ್ನು ಆಲಂಕಾರಿಕವಾಗಿ ಗಗನಕೇಶಿ ಎಂದು ಕರೆದಿದ್ದಾರೆ. (೧೩:೨೩೬೦)

**ಗಣಂಗಳು :** ಯಶಸ್ವೀ ಆಧ್ಯಾತ್ಮಿಕ ಜೀವನ ನಡೆಸಿದ ಶಿವಭಕ್ತರು. ವಾಸ್ತವವಾಗಿ, ಗಣ ಎಂದರೆ ಗುಂಪು ಎಂದಾಗುವುದರಿಂದ "ಗಣಂಗಳು" ಎಂದರೆ ಶಿವಭಕ್ತರ ಗುಂಪು ಎಂದಾಗುತ್ತದೆ. ಇವರಲ್ಲಿ ಬಸವ, ಅಲ್ಲಮ, ಮುಂತಾದವರು ಏಳುನೂರು ಎಪ್ಪತ್ತು ಗಣಂಗಳ ಗುಂಪಿಗೆ ಸೇರಿದವರು.

**ಗಣಾಚಾರ :** ಗಣಂಗಳ ಹಿತರಕ್ಷಣೆಗಾಗಿ ಆಚರಿಸುವ ಆಚಾರವೇ ಗಣಾಚಾರ. ಯಾರೂ ಶಿವಗಣಂಗಳನ್ನು (ಶಿವಭಕ್ತರನ್ನು) ಅಥವಾ ಅವರ ಆಚಾರಗಳನ್ನು ನಿಂದಿಸಬಾರದು. ಶಿವನಿಂದೆ, ಶಿವಭಕ್ತನಿಂದೆ, ಶಿವಾಚಾರನಿಂದೆಯನ್ನು ಕೇಳಿಸಿಕೊಳ್ಳಬಾರದೆಂಬ ಉದ್ದೇಶದಿಂದ ಘಂಟಾಕರ್ಣನೆಂಬುವನು ತನ್ನ ಕಿವಿಗಳಿಗೆ ಸಣ್ಣ ಗಂಟೆಗಳನ್ನು ಕಟ್ಟಿಕೊಂಡಿದ್ದನಂತೆ. ಅಂಥ ನಿಂದೆ ಕೇಳಿಸಿಕೊಳ್ಳುವ ಮೊದಲೇ ತಲೆಯಲ್ಲಾಡಿಸಿ, ಘಂಟಾಶಬ್ದ ಮಾಡುತ್ತಿದ್ದನಂತೆ. ಇದೂ ಸಾಧ್ಯವಾಗದಿದ್ದಾಗ ಆ ಸ್ಥಳವನ್ನೇ ತೊರೆಯಬೇಕು. ಶಿವನಿಂದೆಯನ್ನು ಮಾಡಿದವನನ್ನು ಕೊಲ್ಲುವುದು ಅಥವಾ ಅವನ ಕಣ್ಣು ಕೀಳುವುದು ಗಣಾಚಾರದ ಮತ್ತೊಂದು ಕೊನೆ.

**ಗತಿಪದ ಮುಕ್ತಿ ವಿರಹಿತ ಭಕ್ತ :** ನಿಜವಾದ ಭಕ್ತನಿಗೆ ಭಕ್ತಿ ಒಂದು ವ್ಯಾಪಾರವಲ್ಲ. ನನ್ನ ಭಕ್ತಿಗೆ ಪ್ರತಿಯಾಗಿ ಸದ್ಗತಿಯನ್ನು ಕೊಡು ಎಂದಾಗಲಿ ಅಥವಾ ಸಾಲೋಕ್ಯ, ಸಾಮೀಪ್ಯದಂಥ ಪದವಿಯನ್ನು ಕೊಡು ಎಂದಾಗಲಿ ಆತ ಪರಶಿವನನ್ನು ಕೇಳುವುದಿಲ್ಲ; ನಿಜವಾದ ಭಕ್ತ ಮುಕ್ತಿಯನ್ನು ಕೊಡು ಎಂದು ಸಹಾ ಕೇಳುವುದಿಲ್ಲ. ಯಾರು ಇವನ್ನು ಕೇಳುತ್ತಾನೋ ಅವನು ಭಕ್ತನಲ್ಲ. (೩:೫೧೨)

**ಗತಿಯ ಪಥ :** ಲಿಂಗಾಂಗ ಸಾಮರಸ್ಯವೇ ಗತಿ; ಅದನ್ನು ಸಾಧಿಸಿಕೊಳ್ಳುವ ದಾರಿಯೇ ಪಥ. ಆದುದರಿಂದ ಗತಿಯ ಪಥವೆಂದರೆ ಶಿವಯೋಗ. (೯:೩೦೪)

**ಗಮನ ನಾಸ್ತಿ :** ೧. ಐಕ್ಯನು ಸಾಧನೆಯ ಮಾರ್ಗದಲ್ಲಿ ಮತ್ತೆ ಮುಂದಕ್ಕೆ ಹೋಗುವ ಕಾರಣವಿಲ್ಲವಾದುದರಿಂದ ಅವನಿಗೆ 'ಗಮನನಾಸ್ತಿ'ಯಾಗಿದೆ. ೨. ಅವನಿಗೆ ಮಾರ್ಗವೇ ಇನ್ನಿಲ್ಲವಾದುದರಿಂದ 'ಗಮನನಾಸ್ತಿ'ಯಾಗಿದೆ. ೩. ಅವನು ಮುಂದಿನ ಜನ್ಮಕ್ಕೆ ಹೋಗಬೇಕಾದ ಆವಶ್ಯಕತೆಯಿಲ್ಲವಾದುದರಿಂದ ಅವನಿಗೆ 'ಗಮನನಾಸ್ತಿ'ಯಾಗಿದೆ. (೫:೭೨೫)

**ಗರ್ಭಾಂತರ :** ಕರ್ಮಾಕ್ಕನುಸಾರವಾಗಿ ಬೇರೆ ಬೇರೆ ಗರ್ಭಗಳಲ್ಲಿ ಹುಟ್ಟುವುದು. ಮಾನವನು ಮತ್ತೆ ಕೀಳು ಪ್ರಾಣಿಯ ಗರ್ಭದಲ್ಲಿ ಸಹ ಹುಟ್ಟಬಹುದು. (೮:೬೧)

**ಗುಣತ್ರಯ :** ಸತ್ವ, ರಜಸ್. ತಮಸ್ ಎಂಬ ಪ್ರಕೃತಿಯ ಮೂರು ಗುಣಗಳು. ಸಾಂಖ್ಯರ ಪ್ರಕಾರ, ನಮ್ಮ ದೇಹ, ಮನಸ್ಸು, ಬುದ್ಧಿ, ಮುಂತಾದವುಗಳೆಲ್ಲವೂ ಗುಣತ್ರಯಗಳ ವಿವಿಧ ಪ್ರಮಾಣಗಳ ಸಂಯೋಜನೆಯಿಂದ ಆಗಿವೆಯಾದುದರಿಂದ, ನಮ್ಮ ಗುಣಗಳು ತ್ರಿಗುಣಗಳ ಪ್ರಮಾಣವನ್ನು ಅವಲಂಬಿಸಿವೆ. ಅಂದರೆ, ಸತ್ವ ಹೆಚ್ಚು ಪ್ರಮಾಣವಿದ್ದ ವ್ಯಕ್ತಿಯು ಜ್ಞಾನಿಯೂ, ಸಾತ್ವಿಕ ಗುಣವುಳ್ಳವನೂ ಆಗಿದ್ದರೆ, ರಜಸ್ ಹೆಚ್ಚು ಪ್ರಮಾಣವಿರುವವನು ಹೆಚ್ಚು ಕ್ರಿಯಾ ಶೀಲನೂ, ಎಲ್ಲವೂ ತನಗೆ ಸೇರಬೇಕು, ತಾನು ಎಲ್ಲರನ್ನೂ ಆಳಬೇಕು ಮುಂತಾದ ಆಕಾಂಕ್ಷೆ ಉಳ್ಳವನಾಗಿರುತ್ತಾನೆ. ತಮಸ್ ಹೆಚ್ಚು ಪ್ರಮಾಣವಿರುವವನು ದಡ್ಡ, ಸೋಮಾರಿ, ದುಷ್ಟನಿರುತ್ತಾನೆ.

**ಗುಣಸಂಪಾದನೆ :** 'ಸದ್ಗುಣಗಳನ್ನು ಬೆಳೆಸಿಕೊಳ್ಳುವುದು' ಎಂಬುದು ಇದರ ಅರ್ಥವಲ್ಲ. ಇಲ್ಲಿ ಸಂಪಾದನೆ ಎಂಬ ಪದಕ್ಕೆ ಸಂದೇಹ, ಚರ್ಚೆ ಎಂಬರ್ಥವಿದೆ. ಗುರುವಿನ ಗುಣವನ್ನು ಸಂದೇಹಿಸಬಾರದು ಎಂಬುದು 'ಗುರುವಿನ ಗುಣ ಸಂಪಾದನೆಯ ಮಾಡುವನ್ನಕ್ಕ, ಗುರುಸಂಬಂಧಿಯಲ್ಲ' ಎಂಬುದರ ಅರ್ಥ. (೩:೧೨೯)

**ಗುಪ್ತಪಾತಕ :** ಯಾರ ಕಣ್ಣಿಗೂ ಕಾಣದಂತೆ ಪಾತಕವನ್ನು ಮಾಡುವುದು. ಹೆಣ್ಣು, ಹೊನ್ನು, ಮಣ್ಣು ತ್ಯಜಿಸಿದ್ದೇನೆಂದು ಬಹಿರಂಗವಾಗಿ ಘೋಷಿಸಿ, ಅಂತರಂಗದಲ್ಲಿ ಹೆಣ್ಣು, ಹೊನ್ನು, ಮಣ್ಣುಗಳನ್ನು ಕುರಿತು ಚಿಂತಿಸುವುದು ಗುಪ್ತಪಾತಕಕ್ಕೆ ಉದಾಹರಣೆ. (೧೪:೨೭೪೧)

**ಗುರು :** ವೀರಶೈವ ಧರ್ಮದಲ್ಲಿ ಗುರುವೂ ಒಂದು ಮಹತ್ವದ ಪಾತ್ರವಹಿಸುತ್ತಾನೆ. ಮನುಷ್ಯನು ತಾನು ಪರಶಿವನ ಭಾಗ (ಅಂಗ)ವೆಂದು ತಿಳಿಯದೇ ತಾನೊಬ್ಬ ಪ್ರತ್ಯೇಕ ವ್ಯಕ್ತಿ, ಪರಶಿವ ಮತ್ತೊಬ್ಬ ವ್ಯಕ್ತಿ ಎಂದು ತಿಳಿದು, ಅವಿದ್ಯೆಯಿಂದಾಗಿ ನಾನಾರೀತಿಯ ಕೃತ್ಯಗಳನ್ನೆಸಗಿ ಅವುಗಳ ಫಲಗಳನ್ನು ಅನುಭವಿಸಲು ಅನೇಕ ಜನ್ಮಗಳನ್ನೆತ್ತುತ್ತಾನೆ. ಈ ಅನೇಕ ಜನ್ಮಗಳನಂತರ ಸಂಸಾರವು ಹೇಯವೆನಿಸಿದಾಗ, ಅವನ ಮನಸ್ಸು ಆಧ್ಯಾತ್ಮದ ಕಡೆಗೆ ತಿರುಗುತ್ತವೆ. ಆದರೆ ಆಧ್ಯಾತ್ಮದ ಹಾದಿ ಅವನಿಗೆ ಅಪರಿಚಿತ. ಆಗ ಅವನು ಮಾರ್ಗದರ್ಶನಕ್ಕೆ ಗರುವಿನ ಬಳಿ ಬರುತ್ತಾನೆ. ಅಲ್ಲಿಂದ ಮುಂದೆ ಸಾಧಕನ ಜೀವನದಲ್ಲಿ ಗುರುವು ಒಂದು ಪ್ರಮುಖ ಪಾತ್ರ ವಹಿಸುತ್ತಾನೆ.

ಮೊಟ್ಟ ಮೊದಲನೆಯದಾಗಿ ಅವನು ಮೋಕ್ಷಾರ್ಥಿಯಾಗಿ ಬಂದವನಿಗೆ ಕರುಣೆಯಿಂದ, ದೀಕ್ಷೆಯ ಮೂಲಕ, ಇಷ್ಟಲಿಂಗವನ್ನು ಕೊಡುತ್ತಾನೆ. ಅಷ್ಟೇ ಮುಖ್ಯವಾದ ಅವನ ಮತ್ತೊಂದು ಕೆಲಸವೆಂದರೆ, ಮಾನವನ ಆತ್ಮವು ಮೂಲತಃ ಶಿವಾಂಶಿಕವೆಂದೂ, ತಾನು ಶಿವಾಂಶಿಕನೆಂಬುದನ್ನು ಅನುಭಾವದ ಮೂಲಕ ತಿಳಿಯುವುದೇ ಜೀವನ ಪರಮಗುರಿ ಎಂದೂ ಅವನು ಮೋಕ್ಷಾರ್ಥಿಗೆ ತಿಳಿಸಿಕೊಡುತ್ತಾನೆ. ಗುರುವು ತಾನೇ ಈ ಗುರಿಯನ್ನು ಸಾಧಿಸಿದವನಾದುದರಿಂದ, ಅದನ್ನು ಹೇಗೆ ಸಾಧಿಸಬೇಕೆಂಬುದರ ತಂತ್ರವು ಅವನಿಗೆ

ಗೊತ್ತು. ಅವನು ಶಿಷ್ಯನಿಗೆ ಕೇವಲ ಸಿದ್ಧಾಂತವನ್ನಷ್ಟೇ ಬೋಧಿಸದೇ, ಮೋಕ್ಷ ಪಡೆಯುವ ಮಾರ್ಗವನ್ನೂ, ಅನುಸರಿಸಬೇಕಾದ ವಿಧಿ ವಿಧಾನಗಳನ್ನೂ ತಿಳಿಸಿಕೊಡುತ್ತಾನೆ. ಶಿಷ್ಯನ ಆಧ್ಯಾತ್ಮಿಕ ಜೀವನದಲ್ಲಿ ಇಷ್ಟೊಂದು ಹಾಸು ಹೊಕ್ಕಾಗಿರುವ ಗುರುವನ್ನು ವಚನಕಾರರು ಅತಿಯಾಗಿ ಶ್ಲಾಘಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಗುರುವಿನ ಆವಶ್ಯಕತೆ ಎಷ್ಟಿದೆ ಎಂಬುದನ್ನು ತಿಳಿಯಬೇಕಾದರೆ, ಗುರುವಿಲ್ಲದ ಶಿಷ್ಯನ ಆಧ್ಯಾತ್ಮಿಕ ಜೀವನವನ್ನು ಊಹಿಸಿಕೊಂಡರೆ ಸಾಕು. ಬೌದ್ಧ ಧರ್ಮದಲ್ಲಿ ಮೋಕ್ಷ ಸಾಧನೆ ಬಹಳ ಕಷ್ಟವೆನಿಸುವುದು, ಬೌದ್ಧ ಪಥವು ಬಹಳ ಕಠಿಣವೆಂಬ ಕಾರಣಕ್ಕಲ್ಲ; ಅದು ಕಠಿಣವಾಗಿರುವುದು ಅದರಲ್ಲಿ ಗುರುವಿಲ್ಲದಿರುವುದರಿಂದ. ಇಲ್ಲಿ ಅಷ್ಟೇ ಮುಖ್ಯವಾದ ಅಂಶವೆಂದರೆ - ವೀರಶೈವ ಗುರುವು ಕೇವಲ ದೀಕ್ಷಾ ವಿಧಿಗಳನ್ನು ತಿಳಿದಿದ್ದರೆ ಸಾಲದು - ಅವನು ಶಿಷ್ಯನಿಗೆ ಮಾರ್ಗದರ್ಶನ ನೀಡಲು ಯೋಗ್ಯನಾಗಿರಬೇಕು. ತಾನೆ ಮುಕ್ತನಲ್ಲದೆ, ಬೇರೆಯವರಿಗೆ ಮೋಕ್ಷ ಮಾರ್ಗ ಮಾಡುವುದು, ಒಬ್ಬ ಕುರುಡ ಮತ್ತೊಬ್ಬ ಕುರುಡನಿಗೆ ಮಾರ್ಗದರ್ಶನ ನೀಡಿದಂತೆ. ಆದುದರಿಂದ, ಬಸವಣ್ಣ "ಮಡಕೆಯ ಮಾಡುವರೆ ಮಣ್ಣೇ ಮೊದಲು . . . ಶಿವಪಥವನರಿವೊಡೆ ಗುರುಪಥವೇ ಮೊದಲು" ಎನ್ನುತ್ತಾರೆ.

ಮೋಕ್ಷ (ಲಿಂಗಾಂಗ ಸಾಮರಸ್ಯ)ವನ್ನು ಪಡೆದ ಗುರು ಲಿಂಗಕ್ಕೆ ಸಮಾನ. ಇಂಥಹ ಗುರುವಿಗಿರುವ ಕರುಣೆ ಅಪಾರ. ಈ ಕರುಣೆಯಿಂದಾಗಿಯೇ ಸಂಸಾರ ಬಂಧನದಲ್ಲಿ ತೊಳಲುತ್ತಿರುವವರಿಗೆಲ್ಲಾ ಅವನು ಲಿಂಗದೀಕ್ಷೆ ನೀಡುವುದು. ಆದರೆ ಅವನು ಕರುಣೆ ತೋರುವುದು ಯೋಗ್ಯ ಶಿಷ್ಯರಿಗೆ ಮಾತ್ರ.

ಗುರುವು ಹರನಷ್ಟೇ ಮುಖ್ಯ ಎಂಬ ಮಾತನ್ನು ಸಮರ್ಥಿಸಲು ಚೆನ್ನ ಬಸವಣ್ಣ "ಹರತನ್ನ ರೂಪ ತೋರಬೇಕೆಂಬುದು, ಗುರುರೂಪಾಗಿ ಬಂದು, ಮನಸ್ಥಲಕ್ಕೆ ಮಂತ್ರವಾದ, ತನು ಸ್ಥಲಕ್ಕೆ ಪ್ರಸಾದವಾದ, ಕರಸ್ಥಲಕ್ಕೆ ಲಿಂಗವಾದ" (೩:೨೨) ಎನ್ನುತ್ತಾರೆ. ಹರನಿಗಿರುವಷ್ಟು ಕರುಣೆ ಗುರುವಿಗೂ ಇರುವುದರಿಂದಲೇ, ಗುರುವು ಶಿಷ್ಯರನ್ನು ತನ್ನಂತೆ ಮಾಡಬೇಕೆಂಬ ಉದ್ದೇಶದಿಂದ ಕರುಣೆ ತೋರಿಸುತ್ತಾನೆ.

ಗುರು ಶಿಷ್ಯನಿಗೆ ಕೊಡುವ ಶಿಕ್ಷಣದ ವಿವಿಧ ರೀತಿಗಳಿಗನುಗುಣವಾಗಿ, ವಚನಕಾರರು ಗುರು ತ್ರಿವಿಧವೆಂದು ಗುರುತಿಸಿದ್ದಾರೆ. ಕರುಣೆಯಿಂದ ಶಿಷ್ಯನಿಗೆ ದೀಕ್ಷೆ ಕೊಟ್ಟು, ಲಿಂಗದ ಆವಶ್ಯಕತೆಯನ್ನೂ, ಅದರ ಪೂಜಾ ಕ್ರಮವನ್ನೂ ಆಚಾರವನ್ನೂ ಭೋದಿಸುವ ಗುರುವು ದೀಕ್ಷಾ ಗುರು; ಶಿಷ್ಯನು ಈ ಕ್ರಮವನ್ನು ಅಶ್ರದ್ಧೆಯಿಂದ ಪಾಲಿಸದಂತೆ ನೈತಿಕ ನಿಯಮಗಳನ್ನು ಎಲ್ಲೂ ತಪ್ಪದಂತೆ ನೋಡಿಕೊಳ್ಳುವ ಹಾಗೂ ಎಲ್ಲಾದರೂ ತಪ್ಪಿದರೆ ಶಿಷ್ಯನನ್ನು ಶಿಕ್ಷಿಸುವ ಗುರು ಶಿಕ್ಷಾ ಗುರು. ಧಾರ್ಮಿಕ ಮತ್ತು ನೈತಿಕ ಆಚಾರಗಳನ್ನು ಬಹಳ ಶ್ರದ್ಧೆ ಮತ್ತು ನಿಷ್ಠೆಯಿಂದ ಪಾಲಿಸಿದಾಕ್ಷಣ ಶಿಷ್ಯನಿಗೆ ಲಿಂಗಾಂಗ ಸಾಮರಸ್ಯ ಲಭಿಸುವುದಿಲ್ಲ. ಇವುಗಳನ್ನು ಪೂರ್ವಪೀಠಿಕೆಯಾಗಿಟ್ಟುಕೊಂಡು, ಅವನು ಲಿಂಗಧ್ಯಾನವನ್ನು ಕಲಿತುಕೊಳ್ಳಬೇಕು. ಇದಕ್ಕೆ ಪೂರಕವಾಗಿ ಅವನು ಪ್ರಸಾದವೆಂದರೇನು,

ಹೇಗೆ ಪ್ರಾಣಲಿಂಗಿಯಾಗಬೇಕು ಎಂಬುದನ್ನು, ಸಂಪೂರ್ಣ ಶರಣಾಗತಿ ಮತ್ತು ಲಿಂಗಸತಿ - ಶರಣಸತಿ ಭಾವವನ್ನು ತಿಳಿದುಕೊಳ್ಳಬೇಕು. ಹಾಗೂ ಕೊನೆಯಲ್ಲಿ ಲಿಂಗದಲ್ಲಿ ಹೇಗೆ ತನ್ನ ಅಂಗವನ್ನು ಐಕ್ಯಗೊಳಿಸಬೇಕೆಂಬುದನ್ನು ಕಲಿತುಕೊಳ್ಳಬೇಕು. ಇದು ಸಮರ್ಥ ಗುರುವಿನ ಮಾರ್ಗದರ್ಶನವಿಲ್ಲದೆ ಸಾಧ್ಯವಿಲ್ಲ. ಇದನ್ನು ಭೋದಿಸುವ ಗುರು ಮೋಕ್ಷ ಗುರು. ಈ ಮೂವರು ಬೇರೆ ಬೇರೆಯಾಗಿರಬೇಕೆಂಬ ನಿಯಮವೇನಿಲ್ಲ.

ಗುರು ತಾನೇ ಮೋಕ್ಷ ಪಡೆದವನಾಗಿರದಿದ್ದರೆ, ಶಿಷ್ಯ ತನ್ನ ಸಾಧನೆಯಲ್ಲಿ ಎಷ್ಟೇ ಶ್ರದ್ಧೆ ಮತ್ತು ನಿಷ್ಠೆಯನ್ನು ತೋರಿಸಿದರೂ, ಅವನಿಗೆ ಧ್ಯೇಯವು ಸಿದ್ಧಿಸುವುದಿಲ್ಲ. “ಲಾಂಛನಕ್ಕೆ ಶರಣೆಂಬೆ” ಎಂದು ಬಸವಣ್ಣ, “ಗುರುವಿನಲ್ಲಿ ಗುಣವನರಸಬಾರದು” ಎಂದು ಇತರ ಶರಣರು ಹೇಳಿದರೂ, ಗುಣವಿಲ್ಲದ (ದುರ್ನಡತೆಯ) ಹಾಗೂ ಕೇವಲ ಲಾಂಛನಧಾರಿಗಳು ಮೋಕ್ಷಗುರುಗಳಾಗಲು ಸಾಧ್ಯವಿಲ್ಲ. ಅದೇ ರೀತಿ, ಗುರುವು ಎಷ್ಟೇ ಸಮರ್ಥನಿದ್ದರೂ ಶಿಷ್ಯನು ಚಂಚಲ ಮನಸ್ಸಿನವನಾಗಿದ್ದರೆ ಅವನು ಶಿಷ್ಯನಿಗೆ ಮೋಕ್ಷ ಕೊಡಿಸಲಾರ. ಒಬ್ಬನಿಗೆ ಹೋರಾಡಲು ಆಯುಧವನ್ನು ಕೊಡಬಹುದು; ಆದರೆ ಗೆಲ್ಲಲು ಬೇಕಾದ ಪ್ರಬಲ ಮನಸ್ಸು ಮತ್ತು ಧೈರ್ಯವನ್ನು ಯಾರೂ ಅವನಿಗೆ ಕೊಡಲಾರರು. ಹಾಗೆಯೇ ಗುರುವು ದೀಕ್ಷೆ ಕೊಡಬಹುದು, ಮೋಕ್ಷಕ್ಕೆ ಅಗತ್ಯವಾದ ಬೋಧನೆಯನ್ನು ಕೊಡಬಹುದು. ಆದರೆ ಶ್ರದ್ಧೆ ಮತ್ತು ನಿಷ್ಠೆಯನ್ನು ಯಾರೂ ಅವನಿಗೆ ಕೊಡಲಾರರು. ಹೀಗೆ ಗುರುವಿನ ಯಶಸ್ಸು ಶಿಷ್ಯನ ಶ್ರದ್ಧೆ ಮತ್ತು ನಿಷ್ಠೆಯನ್ನು ಅವಲಂಬಿಸಿದೆ.

**ಗುರುಕರುಣ (ಗುರುಕಾರುಣ್ಯ) ಸ್ಥಲ :** ಮನುಷ್ಯ ಸಂಸಾರ ಬಂಧನದಿಂದ ಬೇಸತ್ತು, ಪಾರಮಾರ್ಥಿಕ ಧ್ಯೇಯವನ್ನು ಸಾಧಿಸಬೇಕೆಂದು ನಿಶ್ಚಯಿಸಿದಾಗ, ಅವನಿಗೆ ದಾರಿ ಗೊತ್ತಾಗದೆ, ಮೊದಲು ಗುರುವಿನ ಕಡೆ ಮಾರ್ಗದರ್ಶನಕ್ಕೆ ಹೋಗುತ್ತಾನೆ. ಆಗ ಗುರು ಕರುಣೆಯಿಂದ ಮೋಕ್ಷಾರ್ಥಿಗೆ ಮಾರ್ಗದರ್ಶನ ನೀಡಲು ಇಚ್ಛಿಸುತ್ತಾನೆ. ಈ ರೀತಿ ಕರುಣೆ ಪಡೆಯುವ ಮೋಕ್ಷಾರ್ಥಿಯ ನಿಲವೇ ಗುರುಕಾರುಣ್ಯ ಸ್ಥಲ. (ನೋಡಿ : **ಗುರು, ಸಂಸಾರ, ಸಂಸಾರಹೇಯ ಸ್ಥಲ**)

**ಗುರುತಪ್ಪುಕ :** ಗುರುವಿನಲ್ಲಿ ತಪ್ಪನ್ನು ಹುಡುಕುವವನು. (೭:೧೧೦೧)

**ಗುರುತ್ರಯ :** ವಿಚಾರಗುರು, ವಿನಯಗುರು, ಕೃಪಾಗುರು (೧೨:೧೧೯೬).

**ಗುರುದ್ರೋಹ :** ಗುರುದ್ರೋಹವೆಂದರೆ ಗುರುವಿಗೆ ಕೊಟ್ಟ ಮಾತಿನಂತೆ ನಡೆಯದೆ ಇರುವುದು. ಸಂಸಾರದ ತಾಪತ್ರಯಗಳಿಗೆ ಹೇಸಿ ಭಕ್ತನಾಗಬೇಕೆಂದು ಗುರುವಿನ ಬಳಿಗೆ ಬಂದವನು, ಗುರುಕಾರುಣ್ಯದಿಂದ ಭಕ್ತಸ್ಥಲಕ್ಕೆ ಬರುತ್ತಾನೆ. ಆಗ ಅವನಿಗೆ ಪೂರ್ವಾಶ್ರಮ (ಪೂರ್ವಾಶ್ರಯ) ಹೋಯಿತೆಂದರ್ಥ. ಆದರೆ ಅವನು ತನ್ನ ಪೂರ್ವಾಶ್ರಮದ ಆಚಾರಗಳನ್ನೇ ಮತ್ತೆ ಆಚರಿಸಿದರೆ, ಗುರುವಿನ ಉಪದೇಶವನ್ನು ಕಡೆಗಣಿಸಿದ್ದಾನೆ ಹಾಗೂ ತಾನು ಕೊಟ್ಟ ಮಾತನ್ನು ಮರೆತಿದ್ದಾನೆಂದರ್ಥ.

**ಗುರುಪಥ :** ಇದಕ್ಕೆ ಎರಡು ಅರ್ಥಗಳಿವೆ. ೧. ಗುರುವನ್ನು ತಲುಪುವ ದಾರಿ. ಇಲ್ಲಿ 'ಗುರು' ಎಂದರೆ ಕೇವಲ ಮಾರ್ಗದರ್ಶನ ನೀಡುವವನು ಅಥವಾ ದೀಕ್ಷೆ ಕೊಡುವವನು ಎಂದಷ್ಟೇ ಅರ್ಥವಾಗದೆ, ತಾನೇ ಲಿಂಗಾಂಗಸಾಮರಸ್ಯ ಪಡೆದವನು ಎಂಬ ಅರ್ಥವಿದೆ. ಆದುದರಿಂದ ಗುರುಪಥವೆಂದರೆ ಗುರುವಾಗಬೇಕಾದರೆ ಅನುಸರಿಸಬೇಕಾದ ಮಾರ್ಗ ಎಂದಾಗುತ್ತದೆ.

೨.'ಗುರುವು ಶಿಷ್ಯನಿಗೆ ತೋರಿಸಿದ ಮಾರ್ಗ' ಎಂಬುದು 'ಗುರುಪಥ'ದ ಮತ್ತೊಂದು ಅರ್ಥ.

ಈ ಎರಡು ಅರ್ಥಗಳಿಗೂ ಒಂದು ನಿಶ್ಚಿತ ಸಂಬಂಧವಿದೆ : ಗುರುವಿಗೆ ಶಿವಪಥ ಗೊತ್ತಿಲ್ಲದಿದ್ದರೆ, ಶಿಷ್ಯನಿಗೆ ಅದನ್ನು ಬೋಧಿಸಲಾರ.

**ಗುರುಪಾದೋದಕ :** ಗುರುವಿನ ಪಾದದಿಂದ ಬಂದ ಉದಕ. (ನೋಡಿ : **ಪಾದೋದಕ**). ಗುರುಪಾದೋದಕ ಭಕ್ತನ ಪಾಲಿಗೆ ಎಷ್ಟು ಪವಿತ್ರವೆಂದರೆ, ಅದನ್ನು ಅವನು ಸೇವಿಸಿದರೆ ಅವನ ಪಾಪ ಪರಿಹಾರವಾಗುವುದು; ಮನೆಯ ವಿವಿಧ ಭಾಗಗಳಿಗೆ ಸಿಂಪಡಿಸಿದರೆ, ಮನೆಯು ಶುದ್ಧವಾಗುವುದು.

**ಗುರುಪುತ್ರ :** ಮಗನು ತಂದೆಯನ್ನು ಹೇಗೆ ಹೋಲುತ್ತಾನೆಯೋ ಹಾಗೆ, ಶಿಷ್ಯನು ಗುರುವನ್ನು ಹೋಲುತ್ತಾನಾದುದರಿಂದ, ಅವನು (ಆಧ್ಯಾತ್ಮಿಕ ಪರಿಭಾಷೆಯಲ್ಲಿ) ಗುರುಪುತ್ರ. ಸಂಸಾರದ ತಾಪತ್ರಯಗಳಿಗೆ ಹೇಸಿ ಅವುಗಳಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಬಂದವನನ್ನು ಶಿಷ್ಯನನ್ನಾಗಿ ಸ್ವೀಕರಿಸಿದ ಗುರುವು ಅವನನ್ನೂ ಒಬ್ಬ ಗುರುವನ್ನಾಗಿ ಮಾಡಬೇಕಾಗುತ್ತದೆ. ಇದು ಗುರುವಿಗೆ ಕರುಣೆಯಿದ್ದರೆ ಮಾತ್ರ ಸಾಧ್ಯ. ಅಲ್ಲದೆ ಗುರುವೆನಿಸಿಕೊಂಡವನು ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದವನೇ ಆಗಿರಬೇಕು. ಅಂಥ ಕರುಣಾಮಯ ಗುರುವನ್ನು ಶಿಷ್ಯನು ತಂದೆಯೆಂದು ಪರಿಗಣಿಸಿ ಪೂರ್ವಾಶ್ರಮದ ತಂದೆ ತಾಯಿಯರನ್ನೂ ಬಂಧ ಬಳಗದವರನ್ನೂ ಮೋಹದಿಂದ ನೆನೆಯಬಾರದು. ಹೀಗೆ ಸಂಸಾರಿಯನ್ನು ಪರಿವರ್ತಿಸಿ, ಅವನಿಗೆ ಹೊಸ ಜನ್ಮವನ್ನು ನೀಡುವ ಗುರುವು ಪರಿಭಾಷೆಯಲ್ಲಿ ತಂದೆ, ಅವನ ಶಿಷ್ಯ ಗುರುಪುತ್ರ.

**ಗುರುಪ್ರಸಾದ :** ಭಕ್ತನು ಮನೆಗೆ ಬಂದ ಗುರುವಿಗೆ ಆಹಾರವನ್ನು ಅರ್ಪಿಸುತ್ತಾನೆ. ಗುರುವು ಆ ಆಹಾರದಲ್ಲಿ ಸ್ವಲ್ಪ ಪ್ರಮಾಣವನ್ನು ಆರೋಗಿಸಿ ಮಿಕ್ಕುದುದನ್ನು ಭಕ್ತನಿಗೆ ಹಿಂದಿರುಗಿಸುತ್ತಾನೆ. ಈ ಮಿಕ್ಕ ಆಹಾರವೇ ಗುರುಪ್ರಸಾದ. ಇದೊಂದು ಸಾಂಕೇತಿಕ ಕ್ರಿಯೆ. ಪರಶಿವನಿಗೆ ಅರ್ಪಿಸಿದ ಆಹಾರ ಹೇಗೆ ಪ್ರಸಾದವಾಗುತ್ತದೆ ಎಂದು ನಂಬುತ್ತೇವೆಯೋ ಹಾಗೆಯೇ ಇಲ್ಲಿ ಗುರುವಿಗೆ ಅರ್ಪಿಸಿದ ಆಹಾರವೂ ಪ್ರಸಾದವಾಗುತ್ತದೆ ಎಂದು ನಂಬುತ್ತೇವೆ. (ನೋಡಿ : **ಪ್ರಸಾದ**)

**ಗುರುಭಕ್ತ ಸಂಬಂಧ :** ಸಂಸಾರದ ಬೆಂಕಿಯಲ್ಲಿ ಬೆಂದವನು ಅದರಿಂದ ಬಿಡುಗಡೆ ಪಡೆಯಬೇಕೆಂದು ಗುರುವಿನ ಬಳಿಗೆ ಬಂದಾಗ, ಗುರು ಕರುಣೆಯಿಂದ ಅವನಿಗೆ ಮೊದಲು ಲಿಂಗದೀಕ್ಷೆ ಮಾಡಿ, ಅನಂತರ ಆಧ್ಯಾತ್ಮಿಕ ಮಾರ್ಗದ ವಿವರಗಳನ್ನು ಬೋಧಿಸುತ್ತಾನೆ. ಗುರುವಿನ ಸಹಾಯವಿಲ್ಲದೆ ಒಬ್ಬ ವ್ಯಕ್ತಿ ಭಕ್ತನಾಗಲು ಸಾಧ್ಯವಿಲ್ಲ; ಅಷ್ಟೇ ಅಲ್ಲ, ಅವನು ಭಕ್ತನಾದ ಮೇಲೆ ಮುಂದುವರೆಯುವಂತೆಯೂ ಇಲ್ಲ. ಅವನಿಗೆ ಎಲ್ಲ ವಿಷಯಗಳಲ್ಲಿಯೂ ಗುರುವಿನ ಮಾರ್ಗದರ್ಶನ ಬೇಕು. ನಿಜವಾದ ಭಕ್ತ ಗುರುಹೇಳಿದಂತೆ ನಡೆದುಕೊಳ್ಳಬೇಕಷ್ಟೆ ಅಲ್ಲ, ಗುರು ತೋರಿಸಿದ ದಾರಿಯಲ್ಲಿ ನಡೆಯುತ್ತೇನೆ ಎಂಬ ಶ್ರದ್ಧೆ ಮತ್ತು ಛಲ ಬೇಕು. ಮುಂದೆ ತಾನೂ ಗುರುವಿನಂತಾಗಬೇಕು ಎಂದು ಪ್ರತಿಜ್ಞೆಮಾಡಿ ಅದರಂತೆ ನಡೆದುಕೊಳ್ಳಲು ಯಾರು ಪ್ರಯತ್ನಿಸುತ್ತಾರೋ ಅವರಷ್ಟೇ ನಿಜವಾದ ಭಕ್ತರು. ಪ್ರತಿಜ್ಞೆಗೆ ತಕ್ಕಂತೆ ನಡೆದುಕೊಳ್ಳದವರು ಗುರುದ್ರೋಹಿಗಳು. (ನೋಡಿ : **ಗುರು**)

**ಗುರುಭಕ್ತಿ :** ಗುರು ಕರುಣೆಯಿಂದ ಶಿಷ್ಯನನ್ನು ಭಕ್ತನನ್ನಾಗಿ ಮಾಡಿದುದಕ್ಕೆ ಪ್ರತಿಯಾಗಿ ಭಕ್ತನಾದವನು ಗುರುವಿಗೆ ಕೇವಲ ದಕ್ಷಿಣೆ ಕೊಟ್ಟರೆ ಸಾಲದು. ಲಿಂಗಪೂಜೆಯಲ್ಲಿ ವಿಶ್ವಾಸ, ಆಧ್ಯಾತ್ಮಿಕ ಜೀವನದಲ್ಲಿ ಛಲ ಬೆಳೆಸಿಕೊಂಡರೆ, ಅದು ಗುರುವಿಗೆ ಭಕ್ತಿ ತೋರಿಸಿದಂತೆ. ಕೇವಲ ಗುರುವಿನ ಸೇವೆ ಮಾಡಿ, ಗುರು ತೋರಿಸಿದ ಮಾರ್ಗದಲ್ಲಿ ನಡೆಯದಿದ್ದರೆ, ಅದು ಗುರುಭಕ್ತಿಯೆನಿಸಿಕೊಳ್ಳುವುದಿಲ್ಲ.

**ಗುರುಮೂರ್ತಿ :** ಶಿವಜೀವರ ಐಕ್ಯತೆಯನ್ನು ಅನುಭಾವದ ಮೂಲಕ ಅರಿತುಕೊಂಡವನೇ ನಿಜವಾದ ಗುರು ಅಥವಾ ಗುರುಮೂರ್ತಿ. (೯:೨೦೧)

**ಗುರುಲಿಂಗ :** ೧. ಸಾಧಕನು ಮಹೇಶ ಸ್ಥಲದಲ್ಲಿರುವಾಗ ಗುರುಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಗುರುಲಿಂಗ ಸ್ವಾಧಿಷ್ಠಾನ ಚಕ್ರದ ಮಧ್ಯದಲ್ಲಿದೆ, ಕುಂಡಲಿನಿ ಶಕ್ತಿಯು ಮೊದಲು ಆಧಾರ ಚಕ್ರವನ್ನು ಭೇದಿಸಿ, ಆ ಮೇಲೆ ಸ್ವಾಧಿಷ್ಠಾನ ಚಕ್ರವನ್ನು ಭೇದಿಸಿದಾಗ, ಸಾಧಕನು ಅಲ್ಲಿರುವ ಗುರುಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆಂಬುದು ವಚನಕಾರರ ಸಿದ್ಧಾಂತ.

೨. ಕೆಲವು ವೇಳೆ ಗುರುವನ್ನೇ ಗುರುಲಿಂಗವೆಂದು ಕರೆಯುವುದುಂಟು (ಜಂಗಮನನ್ನು ಜಂಗಮಲಿಂಗ ಎಂದು ಕರೆದಂತೆ). ಇದಕ್ಕೆ ಕಾರಣವೇನೆಂದರೆ : ಗುರುವಾದವನು ಲಿಂಗಾಂಗ ಸಾಮರಸ್ಯವನ್ನು ಪಡೆದಿರುವುದರಿಂದ ತಾನೇ ಲಿಂಗವೆಂದು ನಂಬುತ್ತಾನೆ. ಹೀಗೆ ಲಿಂಗೈಕ್ಯವನ್ನು ಪಡೆಯದೆಯೇ ಗುರುವೆನಿಸಿಕೊಳ್ಳಲು ಬರುವುದಿಲ್ಲ. ಲಿಂಗಾಂಗ ಸಾಮರಸ್ಯ ಪಡೆಯದೆಯೇ ಶಿಷ್ಯರಿಗೆ ಬೋಧನೆ ಮಾಡಿದರೆ ಅದು ಒಬ್ಬ ಕುರುಡ ಇನ್ನೊಬ್ಬ ಕುರುಡನಿಗೆ ಮಾರ್ಗದರ್ಶನ ಮಾಡಿದಂತೆ.

**ಗುರುಲಿಂಗ ತ್ರಿವಿಧ :** ಗುರುಲಿಂಗ ಸ್ಥಲದಲ್ಲಿರುವ ಮೂರು ಸ್ಥಲಗಳು. ಅವೆಂದರೆ, ದೀಕ್ಷೆ, ಶಿಕ್ಷೆ, ಮತ್ತು ಸ್ವಾನುಭಾವ. ಭವಿತನವನ್ನು ಹೋಗಲಾಡಿಸುವ ಉದ್ದೇಶದಿಂದ ಭಕ್ತನಿಗೆ ಗುರು ದೀಕ್ಷೆಕೊಡುವುದೇ ದೀಕ್ಷಾಸ್ಥಲ; ಅನಂತರ ಅವನಿಗೆ ಆಧ್ಯಾತ್ಮಿಕ ಪಥದಲ್ಲಿ ಹೇಗೆ ಮುಂದುವರಿಯಬೇಕೆಂದು ತಿಳಿಸಿಕೊಡುವುದೇ ಶಿಕ್ಷಾಸ್ಥಲ. ಆಧ್ಯಾತ್ಮಿಕ ಪಥದಲ್ಲಿ ಚಲಿಸಿ, ತನ್ನ ಆತ್ಮದ ನಿಜವಾದ ಸ್ವರೂಪವನ್ನು ತಿಳಿದುಕೊಳ್ಳುವುದೇ ಸ್ವಾನುಭಾವ ಸ್ಥಲ. ಮೊದಲನೆ ಎರಡು ಸ್ಥಲಗಳಲ್ಲಿ ಗುರುವಿನ ಪಾತ್ರ ಮುಖ್ಯವಾಗಿದ್ದು, ಮೂರನೆಯದರಲ್ಲಿ ಶಿಷ್ಯನ ಪಾತ್ರ ಬಹಳ ಮುಖ್ಯವಾದುದು. (೩:೭೩೯)

**ಗುರುಲಿಂಗದ ಪ್ರಸನ್ನತ್ವ :** ನಾಲಗೆಯ ತುದಿಯಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿದವನು, ಲಿಂಗವು ಮೊದಲು ರುಚಿಸದೆ ತಾನು ರುಚಿಸೆನು, ಎಂಬ ಪ್ರತಿಜ್ಞೆ ಮಾಡುತ್ತಾನೆ; ಇನ್ನೂ ಮುಂದುವರೆದು ಅವನು, ತನ್ನ ರಸನೇಂದ್ರಿಯವೇ (ನಾಲಗೆಯೇ) ಶಿವನ ನಾಲಗೆ ಎಂದು ತಿಳಿದು, ನಿಜವಾಗಿ ತೃಪ್ತಿ ಪಡುವವನು ತಾನಲ್ಲ, ಪರಶಿವ ಎಂದು ತಿಳಿಯುತ್ತಾನೆ. ಅವನು ನಿಜವಾದ ಪ್ರಸಾದಿ. ಹೀಗೆ ತನ್ನೆಲ್ಲವನ್ನೂ ಮೊದಲು ಶಿವನಿಗರ್ಪಿಸಿ, ಅನಂತರ ತಾನು ಭೋಗಿಸುವ ಪ್ರಸಾದಿಯು ಗುರುಲಿಂಗವನ್ನು ತೃಪ್ತಿಪಡಿಸುತ್ತಾನೆ. ಈ ತೃಪ್ತಿಯಿಂದಾಗಿ ಗುರುಲಿಂಗವು ಪ್ರಸನ್ನಗೊಂಡು, ಮಹೇಶನನ್ನು ರಸನೇಂದ್ರಿಯದಿಂದ ಮುಕ್ತಗೊಳಿಸುತ್ತದೆ. (ಬಯಲುಗೊಳಿಸುತ್ತದೆ) (೧೧:೬೭೦).

**ಗುರುಲಿಂಗಾನುಭಾವಿ :** ಮಹೇಶಸ್ಥಲದ ಭಕ್ತನು ತಾನು ಬೇರೆ ಪರಶಿವ ಬೇರೆ ಎಂದು ತಿಳಿದೇ ಗುರುಲಿಂಗವನ್ನು ಪೂಜಿಸುವುದರಿಂದ ಅವನು ಲಿಂಗಾನುಭಾವಿಯಾಗಿರಲು ಸಾಧ್ಯವಿಲ್ಲ. ಅನುಭಾವದಲ್ಲಿ ಸುಖವಿರುತ್ತದೆ ಎಂಬ ವಿಷಯವನ್ನು ಉಪಯೋಗಿಸಿಕೊಂಡು ಇಲ್ಲಿ ಅನುಭಾವಿ ಎಂಬ ಪದವನ್ನು ಸೂಚ್ಯಾರ್ಥದಲ್ಲಿ ಬಳಸಲಾಗಿದೆ. ಅಪ್‌ತತ್ವವನ್ನು ಅವನು ಗುರುಲಿಂಗಕ್ಕೆ ಅರ್ಪಿಸಿ, ಅದರಿಂದ ರಸವೆಂಬ ಪ್ರಸಾದವನ್ನು ಕೊಂಡು ಸುಖಿಸುವುದರಿಂದ ಅವನು ಗುರುಲಿಂಗಾನುಭಾವಿ ಎನಿಸಿಕೊಳ್ಳುತ್ತಾನೆ. (೧೨:೪೦೬)

**ಗುರುವನರಿತವಂಗೆ ಗುರುವಿಲ್ಲ :** ನಿಜವಾದ ಗುರು ಯಾರೆಂದರೆ, ಅನುಭಾವದ ಮೂಲಕ ಪರಶಿವನನ್ನು ಅರಿತವನು. ಹೀಗೆ ಅರಿತವನು ತನ್ನನ್ನು ಪರಶಿವನೊಂದಿಗೆ ಸಮೀಕರಿಸಿಕೊಳ್ಳುತ್ತಾನೆ. ಈ ಕಾರಣದಿಂದಲೇ ಗುರು ಮತ್ತು ಲಿಂಗ ಸಮಾನವೆಂದು ಹೇಳುವುದು. ಇಂಥ ಗುರುವಾದವನಷ್ಟೇ ಇತರರಿಗೆ ದೀಕ್ಷೆ ಕೊಡಬಲ್ಲನು, ತತ್ವಗಳನ್ನು ಬೋಧಿಸಬಲ್ಲನು.

ಯಾವ ಸಾಧಕನು ಹೀಗೆ ಗುರುವಾಗುತ್ತಾನೋ ಅವನಿಗೆ ಮತ್ತೊಬ್ಬ ಗುರು ಬೇಕಾಗುವುದಿಲ್ಲ. ದೀಕ್ಷೆ ಪಡೆಯುವವನಿಗೆ ತಾನೂ ಲಿಂಗೈಕ್ಯ (ಗುರು) ಆಗಬೇಕೆಂಬ ಉದ್ದೇಶ ಇರುತ್ತದೆ. ಈ ಉದ್ದೇಶವಿಲ್ಲದ ಭಕ್ತ ಭಕ್ತನಲ್ಲ. ಶಿವಸಾಕ್ಷಾತ್ಕಾರವಿಲ್ಲದ

ಗುರು ಗುರುವಲ್ಲ, ಅವನು ಕೊಡುವ ದೀಕ್ಷೆ ದೀಕ್ಷೆಯಲ್ಲ (ಇಲ್ಲಿ ಲಿಂಗವನ್ನರಿತವನು ಹೇಗೆ ಲಿಂಗವೇ ಆಗುತ್ತಾನೋ, ಹಾಗೆಯೇ ಗುರುವನ್ನರಿತವನೂ ಗುರುವೇ ಆಗುತ್ತಾನೆಂಬುದನ್ನು ಗಮನಿಸಬೇಕು) (ಅ:೧೭೨೯).

**ಗುರುವಾದರೆ ಕಾಲಿಲ್ಲದಿರುವುದು :** ಗುರುವಿಗೆ ತನು, ಲಿಂಗಕ್ಕೆ ಮನ ಮತ್ತು ಜಂಗಮಕ್ಕೆ ಧನ ಕೊಡಬೇಕು ಎಂಬುದು ವಚನಕಾರರ ಆದೇಶ. ಒಂದು ವೇಳೆ ಸಾಧಕನೇ ಗುರುವಿನ ಸ್ಥಿತಿಗೆ ಏರಿದರೆ, ಅಂದರೆ ಅನುಭಾವದ ಮೂಲಕ ಶಿವಸಾಕ್ಷಾತ್ಕಾರ ಪಡೆದರೆ, ಆಗ ಅವನು ಇತರರ ಸೇವೆ ಮಾಡಲು ಎಲ್ಲಿಗೂ ಹೋಗಬೇಕಾಗಿಲ್ಲ. (ಅ:೧೭೩೨)

**ಗುರುಶುದ್ಧಾತ್ಮಿ :** ದೇಹದ ಬಯಕೆಗಳನ್ನು ಕಡಿಮೆ ಮಾಡಿದಾಗ, ಅದರ ಮೂಲವಸ್ತುವಾದ ಮಣ್ಣಿನ ಗುಣವನ್ನು ಕಳೆದಂತೆ (ದೇಹವನ್ನು ಮಣ್ಣಿನ ದೇಹ ಅಥವಾ ಪಾರ್ಥಿವ ಶರೀರ ಎಂದು ಕರೆಯುವುದು ಭಾರತೀಯ ದರ್ಶನಗಳಲೆಲ್ಲಾ ಪ್ರಸಿದ್ಧ). ಹೀಗೆ 'ಮಣ್ಣಿನ ಗುಣವನರಿದು ಕಳೆದಡೆ ಗುರು ಶುದ್ಧಾತ್ಮಿ' ಎನ್ನುತ್ತಾನೆ ಮೋಳಿಗೆ ಮಾರಯ್ಯ. (ಅ:೨೦೨೯)

**ಗೊತ್ತಮುಟ್ಟುವುದು :** ರಹಸ್ಯವನ್ನು ತಿಳಿಯುವುದು. (೯:೨೨೫,೨೩೬)

**ಘಂಟಾಕರ್ಣ :** ಪರಶಿವನ ಬಗೆಗೆಗಲ್ಲದೆ ಅನ್ಯಶಬ್ದವನ್ನೂ ಅಪಶಬ್ದವನ್ನೂ ಕೇಳಬಾರದೆಂದು, ಕಿವಿಗೆ ಗಂಟೆಗಳನ್ನು ಕಟ್ಟಿಕೊಂಡವರು. ಅಂಥ ಶಬ್ದಗಳು ಕೇಳುವ ಸಮಯಕ್ಕೆ ಸರಿಯಾಗಿ ತಲೆಯನ್ನು ಅಲುಗಾಡಿಸಿದರೆ ಕಿವಿಯಲ್ಲಿದ್ದ ಗಂಟೆಯ ಶಬ್ದ ಕೇಳಿ ಅನ್ಯಶಬ್ದ ಮತ್ತು ಅಪಶಬ್ದಗಳು ಕೇಳದಾಗುತ್ತವೆ. (ಅ:೧೪೪೫)

**ಘಟ :** ಇದಕ್ಕೆ ಸಾಮಾನ್ಯವಾಗಿ ಮಡಕೆ ಎಂಬ ಅರ್ಥವಿದ್ದರೂ, ಇದು ಶರೀರಕ್ಕೂ ಅನ್ವಯವಾಗುತ್ತದೆ. ಏಕೆಂದರೆ, ಶರೀರವೂ ಮಡಕೆಯಂತೆ ಮುಖ್ಯವಾಗಿ ಮಣ್ಣಿನಿಂದಲೇ (ಪೃಥ್ವೀ ತತ್ವದಿಂದಲೇ) ಮಾಡಲ್ಪಟ್ಟಿದೆ. ('ಪಾರ್ಥಿವ ಶರೀರ' ಎಂಬುದನ್ನು ಗಮನಿಸಿ).

**ಘಟಕರ್ಮಿ :** ಘಟ(ದೇಹ)ಕ್ಕಾಗಿ ಎಲ್ಲ ರೀತಿಯ ಕರ್ಮಗಳನ್ನೂ ಮಾಡಿ ಭವಚಕ್ರಕ್ಕೆ ಸಿಕ್ಕಿಕೊಳ್ಳುವವನು. "ಇಷ್ಟ ಲಿಂಗವನರಿಯದೆ ಸತ್ಯರೆಂದು ಘಟವ ಹೊರೆವ ಘಟಕರ್ಮಿಗಳ ಮುಖನೋಡಲಾಗದು" (೫:೫೧೨) ಎಂದೂ, "ತೆತ್ತಿಗರು ಕಂಡು ಒತ್ತಿ ನುಡಿದರೆಂದು ಘಟವ ಬಿಡುವ ಘಟಕರ್ಮಿಗಳು ಏಳೇಳು ಜನ್ಮದಲ್ಲಿ ಸೂಕರನ ಹೊಟ್ಟೆಯಲ್ಲಿ ಹುಟ್ಟಿ......." ಎಂದು ಹೇಳುವಾಗಲೂ ಅಮುಗೆ ರಾಯಮ್ಮ "ಘಟಕರ್ಮಿ" ಎಂಬ ಪದವನ್ನು ಈ ಅರ್ಥದಲ್ಲೇ ಬಳಸಿದಂತೆ ಕಾಣುತ್ತದೆ. (೫:೬೨೦)

**ಘಟಯೋಗಿಗಳು :** ಯಾವುದೇ ಯೋಗವು ಆಧ್ಯಾತ್ಮಿಕ ಪ್ರಗತಿಗೆ ಅನುಕೂಲವಾಗುತ್ತದೆ. ಕೆಲವು ವೇಳೆ ಯೋಗದಿಂದ ದೇಹಶುದ್ಧಿಯಾಗಿ, ಅನೇಕ ದೈಹಿಕ ಲಾಭಗಳುಂಟಾಗುತ್ತವೆ. ಆಧ್ಯಾತ್ಮಿಕ ಪ್ರಗತಿಯ ಕಡೆಗೆ ಗಮನಕೊಡದೆ, ಕೇವಲ ದೈಹಿಕ ಲಾಭಗಳಿಗೆ ಪ್ರಾಧಾನ್ಯತೆ ಕೊಡುವ 'ಯೋಗಿ'ಗಳೇ ಘಟಯೋಗಿಗಳು. (೭:೧೧೫೦)

**ಘನ :** ಗಟ್ಟಿಗೊಂಡಿದುದು. ಚಿನ್ಮಯ ವಸ್ತು (ಚಿದ್ಘನವಾದುದು) ಅನುಭಾವಿಗಷ್ಟೇ ಗೋಚರವಾಗುತ್ತದೆ.

**ಘನ :** ದೊಡ್ಡದು; ಬ್ರಹ್ಮ. ('ಮನ ಘನವೆಂದರಿಯದೆ . . .') (೨:೧೦೪)

**ಘನಕ್ಕೆ ಘನವಾದ ವಸ್ತು :** ದೊಡ್ಡದಕ್ಕಿಂತ ಹೆಚ್ಚು ದೊಡ್ಡದು, ಪರಶಿವ. (೨:೫೫)

**ಘನವನೆಮ್ಮದ ಅಭ್ಯಾಸ :** ಚಿದ್ಘನವನ್ನು (ಪರಶಿವನನ್ನು) ಬಹಳ ಹಿಂದಿನಿಂದ ನಂಬಿಕೊಂಡು ಬಂದಿದ್ದರೆ, ಈಗ ಅದೊಂದು ಅಭ್ಯಾಸವಾಗಿರುತ್ತದೆ. ಅವನನ್ನು ಮತ್ತೆ ನಂಬಲು ನಾವು ಪ್ರಯಾಸಪಡಬೇಕಾಗಿಲ್ಲ. (೯:೨೩೪)

**ಘನವ ವೇಧಿಸುವವರು :** ಪರಶಿವನನ್ನು ತಿಳಿಯುವವರು.

**ಘ್ರಾಣದಿಂದ ಅರ್ಪಿಸುವುದು :** ಘ್ರಾಣೇಂದ್ರಿಯದಿಂದ ನಾವು ದುರ್ಗಂಧ ಮತ್ತು ಸುಗಂಧಗಳ ವ್ಯತ್ಯಾಸಮಾಡಿ, ಪರಶಿವನಿಗೆ ಸುಗಂಧವನ್ನಷ್ಟೇ ಅರ್ಪಿಸಬೇಕು. ಒಂದು ವಿಶಾಲಾರ್ಥದಲ್ಲಿ, ಈ ರೀತಿ ವ್ಯತ್ಯಾಸಮಾಡದೆ ಎಲ್ಲದನ್ನೂ ಶಿವನಿಗೆ ಅರ್ಪಿಸಬೇಕೆಂದು ಮನಸ್ಸು ಮಾಡಿದರೆ, ಅರ್ಪಿಸಿದುದೆಲ್ಲಾ ಸುಗಂಧವಾಗಿ ಪರಿಣಮಿಸುತ್ತದೆ. ಅಂದರೆ ನಿಜವಾದ ಭಕ್ತನು ಸುಗಂಧ ಬೇಕು, ದುರ್ಗಂಧ ಬೇಡ ಎನ್ನದೆ, ಎಲ್ಲದನ್ನೂ ಶಿವನಿಗೆ ಅರ್ಪಿಸಿ, ಅನಂತರ ತಾನು ಅನುಭವಿಸುತ್ತಾನೆ. ಶಿವನಿಗೆ ಅರ್ಪಿಸಿದ ಗಂಧದ ಪೂರ್ವಗುಣಗಳು ಹೋಗಿ, ಅದು ಶುದ್ಧ ಗಂಧ (ಸುಗಂಧ)ವಾಗುತ್ತದೆ. ಅದನ್ನು ಅವನು ಲಿಂಗವಿರುವಲ್ಲಿಗೆ ಹೋಗಿ, ಕೈಯಿಂದ ಅರ್ಪಿಸದೆ, ಮನಸ್ಸಿನಲ್ಲಿಯೇ ಲಿಂಗವನ್ನು ನೆನೆದು, ಮನಸ್ಸಿನಿಂದಲೇ ಅದನ್ನು ಲಿಂಗಕ್ಕೆ ಅರ್ಪಿಸುತ್ತಾನೆ. ಇದನ್ನೆ ಚೆನ್ನಬಸವಣ್ಣನವರು 'ದುರ್ಗಂಧವ ಕಳೆದು ಸುಗಂಧವನು ಘ್ರಾಣದಿಂದ ಲಿಂಗಕ್ಕರ್ಪಿಸುವಲ್ಲಿ...' ಎನ್ನುತ್ತಾರೆ. (೩:೨೨೮)

**ಘ್ರಾಣಲಿಂಗ ಸಮರಸ :** ಲಿಂಗಾಂಗ ಸಾಮರಸ್ಯ ಸಾಧಿಸಿದವನಿಗೆ ಸ್ವಂತ ದೇಹಾದಿಕರಣಗಳಿಲ್ಲ. ಏಕೆಂದರೆ, ಅವನು ಅವೆಲ್ಲವೂ ಶಿವನ ದೇಹಾದಿಕರಣಗಳೆಂದು ಭಾವಿಸುತ್ತಾನೆ. ಹೀಗೆ ಅವನ ಆತ್ಮವು ಲಿಂಗದಲ್ಲಿ ಒಂದಾಗಿರುವಂತೆ, ಅವನ ಘ್ರಾಣವೂ ಲಿಂಗದಲ್ಲಿ ಒಂದಾಗಿದೆ (ಸಾಮರಸ್ಯ ಪಡೆದಿದೆ). (೧೦:೧೫೪)

**ಚಕ್ರಗಳು (ಪದ್ಮಗಳು) :** ಚಕ್ರಗಳು ಅಥವಾ ಪದ್ಮಗಳು ಶಕ್ತಿಯ ಸೂಕ್ಷ್ಮ ರೂಪಗಳು. ಇವುಗಳು ಮಾನವನ ಮೆದುಳು ಮತ್ತು ಬೆನ್ನೆಲುಬುಗಳಲ್ಲಿವೆ, ಎಂಬ ಶಾಕ್ತರ ಸಿದ್ಧಾಂತವನ್ನು ವಚನಕಾರರು ಒಪ್ಪುತ್ತಾರೆ. ಅವು ಶಕ್ತಿಯ ಸ್ಥೂಲ ರೂಪಗಳಾದ ಮಾಂಸ, ಎಲುಬುಗಳಂತಲ್ಲವಾದುದರಿಂದ, ಅವು ಇಂದ್ರಿಯಗೋಚರವಲ್ಲ. ಮೆದುಳಿನಲ್ಲಿ ಮತ್ತು ಬೆನ್ನುಹುರಿಯಲ್ಲಿ ಚಕ್ರಗಳಿವೆ ಎಂದು ಹೇಳಬಹುದಾದರೂ, ಅವು ಸೂಕ್ಷ್ಮವಾದುದರಿಂದ, ಮೆದುಳಿನಲ್ಲಿರುವ ಕಾಲುವೆಗಳನ್ನು ನೋಡಿದಂತೆ ಅಥವಾ ಬೆನ್ನುಹುರಿಯಲ್ಲಿರುವ

ನರಗಳನ್ನು ನೋಡಿದಂತೆ, ಚಕ್ರಗಳನ್ನು ನೋಡಲು ಸಾಧ್ಯವಿಲ್ಲ. ಚಕ್ರವೆಂದರೆ ಶಕ್ತಿಯ ಸ್ಥಲ ಎಂದಷ್ಟೇ ಸಂಕ್ಷಿಪ್ತವಾಗಿ ವಿವರಿಸಬಹುದು.

ವಚನಕಾರರ ಪ್ರಕಾರ, ಅರಿವು ಶಕ್ತಿಯ ಎಲ್ಲ ರೂಪಗಳಲ್ಲಿಯೂ ಅಂತಸ್ಥವಾಗಿದೆ. ನಮ್ಮ ಬೆನ್ನು ಹುರಿಯಲ್ಲಿಯೂ ಮೆದುಳಿನಲ್ಲಿಯೂ ಇರುವ ಶಕ್ತಿಯನ್ನೂ (ಅಂದರೆ, ದೇಹದ ವಿವಿಧ ಅಂಗಗಳನ್ನು) ಒಂದು ವಿಶಿಷ್ಟ ಆಧ್ಯಾತ್ಮಿಕ ರೀತಿಯಲ್ಲಿ ಪಳಗಿಸುವ ಮೂಲಕ, ಅಲ್ಲಿರುವ ಅರಿವನ್ನು (ಚೇತನ ಅಥವಾ ಪರಶಿವನನ್ನು) ನಾವು ಸಾಕ್ಷಾತ್ಕರಿಸಿಕೊಳ್ಳಬಹುದು. ನೆತ್ತಿಯಲ್ಲಿರುವ ಚೇತನವನ್ನು ಧ್ಯಾನದ ಮೂಲಕ 'ಕಾಣು'ವುದೇ ಆಧ್ಯಾತ್ಮಿಕ ಜೀವನದ ಪರಮ ಧ್ಯೇಯ. ಆದರೆ ಚೇತನವು ಮೆದುಳಿನ ಅಥವಾ ದೇಹದ ಮತ್ತಾವುದೇ ಭಾಗದ ಗುಣ ಅಲ್ಲ ಎಂಬುದನ್ನು ನಾವು ನೆನಪಿಡಬೇಕು; ಹಾಗೆಯೇ, ಅಂತಃಕರಣದಂಥ ಶಕ್ತಿಯ ಮೂಲಕವಲ್ಲದೆ ಚೇತನ ಯಾವ ರೀತಿಯಲ್ಲೂ ನಮಗೆ ಪ್ರಕಟವಾಗಲಾರದು ಎಂಬುದನ್ನೂ ನಾವು ನೆನಪಿಡಬೇಕು.

ವಚನಕಾರರೂ ಶಾಕ್ತರಂತೆ ಚಕ್ರಗಳ ಸಂಖ್ಯೆ ಆರು ಎನ್ನುತ್ತಾರೆ. ಅವೆಂದರೆ, ಆಧಾರ ಅಥವಾ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ (ಮಣಿಪೂರಕ), ಅನಾಹತ, ವಿಶುದ್ಧ ಮತ್ತು ಆಜ್ಞಾ. ಇವುಗಳಲ್ಲಿ ಮೊದಲಿನ ಐದು ಬೆನ್ನು ಹುರಿಯಲ್ಲಿದ್ದರೆ, ಆಜ್ಞಾ ಹಣೆಯಲ್ಲಿ (ಭ್ರೂಮಧ್ಯದಲ್ಲಿ) ಇದೆ. ಇವೆಲ್ಲಕ್ಕೂ ಮೇಲಿರುವ (ನೆತ್ತಿಯಲ್ಲಿರುವ) ಸಹಸ್ರಾರಕ್ಕೆ ಚಕ್ರವೆನ್ನುವುದಿಲ್ಲ; ಆದರೆ ಸಹಸ್ರಾರ ಪದ್ಮ (ಅಥವಾ ಸಹಸ್ರದಳ ಪದ್ಮ)ವೆನ್ನುತ್ತಾರೆ.

ಗುದದ ಮೇಲೆ, ಆದರೆ ಜನನೇಂದ್ರಿಯ ಕೆಳಗೆ, ಅಂದರೆ ಬೆನ್ನು ಹುರಿಯ ಅತ್ಯಂತ ಕೆಳಭಾಗದಲ್ಲಿ, ಇರುವ ಚಕ್ರವೇ ಆಧಾರ (ಮೂಲಾಧಾರ) ಚಕ್ರ. ಈ ಪದ್ಮಕ್ಕೆ ಕೆಂಪು ಬಣ್ಣದ (ಚಂದ್ರಬಣ್ಣದ) ನಾಲ್ಕು ದಳಗಳಿದ್ದು, ಅವುಗಳ ಮೇಲೆ ಚಿನ್ನದ ಬಣ್ಣದ ವ, ಶ, ಷ, ಸ ಎಂಬ ನಾಲ್ಕು ಅಕ್ಷರಗಳಿವೆ. ಈ ಚಕ್ರದ ಮಧ್ಯದಲ್ಲಿ ಆಚಾರಲಿಂಗವಿದ್ದು, ಚಕ್ರವು ಹಳದಿ ಬಣ್ಣದ ಪೃಥ್ವೀತತ್ವದ ಪ್ರತೀಕವಾಗಿದೆ.

ಜನನೇಂದ್ರಿಯದ ಸ್ವಲ್ಪ ಮೇಲೆ (ಬೆನ್ನು ಹುರಿಯೊಳಗೆ) ಇರುವ ಎರಡನೆ ಪದ್ಮಕ್ಕೆ ಸ್ವಾಧಿಷ್ಠಾನ ಚಕ್ರವೆಂದು ಹೆಸರು. ಈ ಪದ್ಮಕ್ಕೆ ಆರು ಕುಂಕುಮ ಬಣ್ಣದ ದಳಗಳಿದ್ದು ಅವುಗಳ ಮೇಲೆ ಮಿಂಚಿನ ಬಣ್ಣದ ಬ, ಭ, ಮ, ಯ, ರ, ಲ ಎಂಬ ಆರು ಅಕ್ಷರಗಳಿವೆ. ಈ ಪದ್ಮದ ಮಧ್ಯದಲ್ಲಿ ಗುರುಲಿಂಗವಿದ್ದು, ಆ ಪದ್ಮವು ಅಪ್ ತತ್ವವನ್ನು ಪ್ರತಿನಿಧಿಸುತ್ತದೆ. ಅಪ್ ತತ್ವವು ಬಿಳಿ ಬಣ್ಣದ್ದಾಗಿದೆ.

ಸ್ವಾಧಿಷ್ಠಾನದ ಮೇಲೆ, ನಾಭಿಯ ಮೂಲದಲ್ಲಿ ಇರುವ ಚಕ್ರಕ್ಕೆ, ಮಣಿಪೂರ (ಮಣಿಪೂರಕ) ಚಕ್ರವೆಂದು ಹೆಸರು. ಈ ಪದ್ಮಕ್ಕೆ ಹತ್ತು ಶ್ಯಾಮಲ ವರ್ಣದ (ದಟ್ಟವಾದ ಮಳೆ ಮೋಡಗಳ ಬಣ್ಣದ) ಹತ್ತು ದಳಗಳಿದ್ದು, ಅವುಗಳ ಮೇಲೆ ನೀಲಕಮಲ ಬಣ್ಣದ

ಡ, ಢ, ಣ, ತ, ಥ, ದ, ಧ, ನ, ಪ, ಫ ಎಂಬ ಹತ್ತು ಅಕ್ಷರಗಳಿವೆ. ಈ ಚಕ್ರವು ಶಿವಲಿಂಗವನ್ನು ಸುತ್ತುವರಿದಿದ್ದು, ಚಕ್ರವು ಅಗ್ನಿಶಕ್ತಿಯನ್ನು ಪ್ರತಿನಿಧಿಸುತ್ತದೆ. ಅಗ್ನಿಯು ಉದಯರವಿಯ ಬಣ್ಣದಂತೆ ಕೆಂಪಾಗಿದೆ. ಮಣಿಪೂರ ಪದ್ಮಕ್ಕೆ ನಾಭೀ ಪದ್ಮವೆಂದೂ ಹೆಸರಿದೆ.

ನಾಭೀಪದ್ಮದ ಮೇಲೆ, ಹೃದಯದಲ್ಲಿರುವ ಚಕ್ರಕ್ಕೆ ಅನಾಹತ ಚಕ್ರವೆಂದು ಹೆಸರು. ಈ ಪದ್ಮಕ್ಕೆ ರಕ್ತವರ್ಣದ ಹನ್ನೆರಡು ದಳಗಳಿದ್ದು, ಅವುಗಳ ಮೇಲೆ ಕ, ಖ, ಗ, ಘ, ಙ, ಚ, ಛ, ಜ, ಝ, ಞ, ಟ, ಠ ಎಂಬ ಹನ್ನೆರಡು ಕುಂಕುಮ ವರ್ಣದ ಅಕ್ಷರಗಳಿವೆ. ಈ ಪದ್ಮವು ಜಂಗಮ ಲಿಂಗವನ್ನು ಸುತ್ತುವರಿದಿದ್ದು, ಪದ್ಮವು ವಾಯು ತತ್ತ್ವ ಸ್ವರೂಪವುಳ್ಳದ್ದಾಗಿದೆ. ವಾಯು ತತ್ತ್ವದ ಬಣ್ಣ ದಟ್ಟವಾದ ಹೊಗೆಯ ಬಣ್ಣ.

ಬೆನ್ನು ಹುರಿಯಲ್ಲಿ ಎಲ್ಲಕ್ಕಿಂತ ಮೇಲೆ ಇರುವ ಚಕ್ರವೇ ವಿಶುದ್ಧ ಚಕ್ರ. ಇದರ ಸ್ಥಾನ ಕಂಠ. ಈ ಚಕ್ರಕ್ಕೆ ಹದಿನಾರು ಹೊಗೆ ಬಣ್ಣದ ದಳಗಳಿವೆ, ಹಾಗೂ ಅವುಗಳ ಮೇಲೆ ಕೆಂಪು ಬಣ್ಣದ ಅ, ಆ, ಇ, ಈ, ಉ, ಊ, ಋ, ೠ, ಲೃ, ಲ, ಏ, ಐ, ಓ, ಔ, ಅಂ, ಅಃ ಎಂಬ ಅಕ್ಷರಗಳಿವೆ. ಪ್ರಸಾದ ಲಿಂಗವನ್ನು ಸುತ್ತುವರಿದಿರುವ ವಿಶುದ್ಧ ಚಕ್ರವು ಪ್ರಧಾನವಾಗಿ ಆಕಾಶ ತತ್ತ್ವದಿಂದ ಮಾಡಲ್ಪಟ್ಟಿದ್ದು, ಆ ತತ್ತ್ವವು ಬಿಳಿಯಾಗಿದೆ.

ಎರಡು ಹುಬ್ಬುಗಳು ಕೂಡುವ ಸ್ಥಾನವೇ ಆಜ್ಞಾಚಕ್ರವೆಂಬ ಆರನೆಯ ಚಕ್ರದ ಸ್ಥಾನ. ಇದು ಬಿಳಿಯಾಗಿದ್ದು, ಅದಕ್ಕೆ ಎರಡೇ ದಳಗಳಿವೆ. ಅವುಗಳ ಮೇಲೆ ಹ ಮತ್ತು ಕ್ಷ ಎಂಗಲಿಂಗಾಂಗ ಸಾಮರಸ್ಯವೆನ್ನುತ್ತಾರೆ.

**ಚತುರ್ದಶ ಭುವನಂಗಳು :** ನೋಡಿ : **ಹದಿನಾಲ್ಕು ಲೋಕಗಳು.**

**ಚತುರ್ಮುಖ ಲಿಂಗ ಪ್ರತಿಷ್ಠೆ :** ಪ್ರಾಣಲಿಂಗಿಸ್ಥಲಕ್ಕೇರಿದ ಸಾಧಕನು ತನ್ನ ಪ್ರತಿಯೊಂದು ಅಂಗದಲ್ಲಿಯೂ ಲಿಂಗಪ್ರತಿಷ್ಠೆ ಮಾಡುತ್ತಾನೆ. ಅಂತಃಕರಣ ಚತುಷ್ಟಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅವೆಲ್ಲವನ್ನೂ ಅವನು ಬಾಯಿ ಅಥವಾ ಬಾಗಿಲು ಎಂದು ಪರಿಗಣಿಸುತ್ತಾರೆ. ಮನಸ್ಸಿನೊಳಕ್ಕೆ ಯಾವುದೇ ವಿಷಯ ಹೋಗುವ ಮೊದಲು, ಮನಸ್ಸಿನ ಬಾಯಿ ಅಥವಾ ಬಾಗಿಲಿನಲ್ಲೇ ಪ್ರತಿಷ್ಠಿತವಾಗಿರುವ ಪರಶಿವ ಅದನ್ನು ಗ್ರಹಿಸುತ್ತಾನೆ; ಅದೇ ರೀತಿ ಚಿತ್ತ, ಬುದ್ಧಿ ಮತ್ತು ಅಹಂಕಾರಗಳ ಬಾಗಿಲಿನಲ್ಲಿರುವ ಪರಶಿವನು ಆಯಾ ವಿಷಯಗಳನ್ನು ಸ್ವೀಕರಿಸುತ್ತಾನೆ; (ಇಲ್ಲಿ 'ಮುಖ' ಎಂದರೆ 'ಬಾಯಿ' ಎಂಬ ಅರ್ಥವಿರುವುದನ್ನು ನಾವು ಗಮನಿಸಬೇಕು).

**ಚತುರ್ವಿಂಶತಿ ದೇಹ :** ಇಪ್ಪತ್ನಾಲ್ಕು (ಚತುರ್ವಿಶಂತಿ) ತತ್ತ್ವಗಳಿಂದಾದ ದೇಹ. ಈ ತತ್ತ್ವಗಳೆಂದರೆ : (ಮನಸ್ಸು, ಬುದ್ಧಿ, ಚಿತ್ತ, ಮತ್ತು ಅಹಂ ಎಂಬ) ನಾಲ್ಕು ಅಂತಃಕರಣಗಳು; (ಚಕ್ಷು, ಶ್ರೋತ್ರ, ತ್ವಕ್ಕು, ರಸನ ಮತ್ತು ಘ್ರಾಣ ಎಂಬ) ಐದು ಜ್ಞಾನೇಂದ್ರಿಯಗಳು; (ಗುದ, ಗುಹ್ಯ, ವಾಕ್ಕು, ಪಾದ, ಪಾಣಿ, ಎಂಬ) ಐದು

ಕರ್ಮೇಂದ್ರಿಯಗಳು; (ಪ್ರಾಣ, ಅಪಾನ, ಉದಾನ, ವ್ಯಾನ, ಮತ್ತು ಸಮಾನ ಎಂಬ) ಐದು ವಾಯುಗಳು; (ಪೃಥ್ವಿ, ಜಲ, ಅಗ್ನಿ, ವಾಯು, ಮತ್ತು ಆಕಾಶ ಎಂಬ) ಐದು ಭೂತಗಳು; ಚಂದಿಮರಸನು ಇವೇ ಇಪ್ಪತ್ತು ನಾಲ್ಕು ತತ್ವಗಳೆಂದು ಮೊದಲು ಹೇಳಿ, (೭:೬೦೫,೬೫೪), ಅನಂತರ ಇವು ಸಾಂಖ್ಯ ಶಾಸ್ತ್ರವು ಪ್ರತಿಪಾದಿಸುವ ತತ್ವಗಳೆನ್ನುತ್ತಾನೆ. ಆದರೆ ವಾಸ್ತವವಾಗಿ, ಸಾಂಖ್ಯ ಶಾಸ್ತ್ರದ ಪ್ರಕಾರ, ಇಪ್ಪತ್ತು ನಾಲ್ಕು ತತ್ವಗಳು ಹೀಗಿವೆ : ಮೂಲಪ್ರಕೃತಿ (ಪ್ರಧಾನ), ಮನಸ್ಸು, ಬುದ್ಧಿ, ಅಹಂ; ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು; ರೂಪ, ರಸ, ಗಂಧ, ಶಬ್ದ ಮತ್ತು ಸ್ಪರ್ಶ ಎಂಬ ಐದು ತನ್ಮಾತ್ರೆಗಳು ಮತ್ತು ಐದು ಭೂತಗಳು. ವಚನಕಾರರ ಇಪ್ಪತ್ನಾಲ್ಕು ತತ್ವಗಳಲ್ಲಿ ಚಿತ್ತವೆಂಬ ನಾಲ್ಕನೆಯ ಅಂತಃಕರಣವೂ, ಐದು ವಾಯುಗಳೂ ಇವೆ; ಆದರೆ ಪ್ರಧಾನ (ಮೂಲಪ್ರಕೃತಿ) ಸೇರ್ಪಡೆಯಾಗಿಲ್ಲ; ಸಾಂಖ್ಯರ ಇಪ್ಪತ್ನಾಲ್ಕು ತತ್ವಗಳಲ್ಲಿ ಚಿತ್ತದ ಬದಲು ಪ್ರಧಾನ (ಮೂಲಪ್ರಕೃತಿ) ಹಾಗೂ ಪಂಚವಾಯುಗಳ ಬದಲು ಪಂಚತನ್ಮಾತ್ರೆಗಳು ಸೇರ್ಪಡೆಯಾಗಿವೆ.

**ಚತುರ್ವಿಧ ಕರಣಗಳು :** ನಾಲ್ಕು ಅತಃಕರಣಗಳು. ಅವು ಯಾವುವೆಂದರೆ, ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರ. ನಾವು ಯಾವುದೇ ವಸ್ತುವನ್ನು ನೋಡಿದಾಗಲೂ ಮನಸ್ಸು ಅದರ ಮೇಲೆ ಕೇಂದ್ರೀಕೃತವಾಗದ ಹೊರತು, ನಮಗೆ ಆ ವಸ್ತುವಿನ ಜ್ಞಾನವುಂಟಾಗುವುದಿಲ್ಲ. ಮನಸ್ಸೆಲ್ಲೋ ಇದ್ದರೆ ನಾವು ಆ ವಸ್ತುವನ್ನು ಎಷ್ಟು ಹೊತ್ತು ನೋಡಿದರೂ, ನಮಗೆ ಆ ವಸ್ತುವಿನ ಅರಿವಾಗುವುದಿಲ್ಲ ಎಂಬ ಮಾತು, ಮನಸ್ಸಿನ ಮಹತ್ವವನ್ನು ತಿಳಿಸುತ್ತದೆ. ಮನಸ್ಸು ಕೇಂದ್ರೀಕೃತವಾದ ನಂತರ, ಇಂದ್ರಿಯಗಳು ಕಳಿಸಿದ ವರದಿಯನ್ನು, ಬುದ್ಧಿಯು ವಿಶ್ಲೇಷಣೆ ಮತ್ತು ಸಂಶ್ಲೇಷಣೆ ಮಾಡುತ್ತದೆ; ಹಿಂದೆ ನೋಡಿದ ಇತರ ವಸ್ತುಗಳೊಡನೆ ಹೋಲಿಸುತ್ತದೆ; ಇತ್ಯಾದಿ. ಇದರಿಂದಾಗಿ ನಮಗೆ ಆ ವಸ್ತುವು ಕೆಂಪಗಿದೆ, ಮುಂತಾದ ಜ್ಞಾನವುಂಟಾಗುತ್ತದೆ. ಚಿತ್ತವು ಹೆಚ್ಚಾಗಿ ಸಂವೇಗಗಳಿಗೆ ಸಂಬಂಧಿಸಿದುದು. ನಾವು ಸಿಟ್ಟು ಮಾಡಿಕೊಳ್ಳುವುದು, ಲೋಭಿಗಳಾಗುವುದು, ಕಾಮುಕರಾಗುವುದು ಚಿತ್ತದ ಕಾರ್ಯದಿಂದಾಗಿ. ನಮ್ಮ ಪ್ರತಿಯೊಂದು ಮಾನಸಿಕ, ಬೌದ್ಧಿಕ ಅಥವಾ ಚೈತ್ತಸಿಕ ಕಾರ್ಯಗಳ ಜೊತೆಯಲ್ಲಿ ಅಹಂ ಇರುತ್ತದೆ. ನಾನು ನೋಡುತ್ತಿದ್ದೇನೆ; ನನಗೆ ಆಸೆ ಉಂಟಾಗುತ್ತಿದೆ, ನಾನು ಈ ಕಾರ್ಯವನ್ನು ಮಾಡಬೇಕು ಅಥವಾ ಮಾಡಬಾರದು, ಇತ್ಯಾದಿ ಕಾರ್ಯಗಳ ಹಿಂದೆ 'ನಾನು' ಎಂಬ ಭಾವ ಇರುವುದೇ ಅಹಂಭಾವದ ಕುರುಹು. ಅಹಂ ಇಲ್ಲದೆ ಯಾವ ಬೌದ್ಧಿಕ, ಮಾನಸಿಕ, ಚೈತ್ತಸಿಕ ಕಾರ್ಯವೂ ನಡೆಯದು.

**ಚತುರ್ವಿಧ ಕ್ರಿಯೆ :** ಸಾಧಕನು ಲಿಂಗಾಂಗ ಸಾಮರಸ್ಯವೆಂಬ ತನ್ನ ಗುರಿಯನ್ನು ತಲುಪಲು ಮೊದಲು ಕೆಲವು ಕ್ರಿಯೆಗಳನ್ನು ಕೇವಲ ಯಾಂತ್ರಿಕವಾಗಿ ಮಾಡುತ್ತಾನೆ. ಇಂಥ ಕ್ರಿಯೆಗಳಿಗೆ

ಅಭ್ಯಾಸ ಕ್ರಿಯೆಗಳೆಂದು ಹೆಸರು. ಇವು ಅಭ್ಯಾಸ ಕ್ರಿಯೆಗಳೇಕೆಂದರೆ, ಸಾಧಕನು ಅವುಗಳನ್ನು ಕೇವಲ ಅಭ್ಯಾಸಬಲದಿಂದ ಮಾಡುತ್ತಾನೆಯೇ ಹೊರತು, ಆ ಕ್ರಿಯೆಗಳ ಅರ್ಥವಾಗಲಿ, ಅವನ್ನೇ ಏಕೆ ಮಾಡಬೇಕೆಂಬುದಾಗಲಿ ಅವನಿಗೆ ಗೊತ್ತಿಲ್ಲ. ಅವುಗಳನ್ನು ಮಾತ್ರ ಮನಸ್ಸಿಟ್ಟು ಮಾಡಬೇಕು. ಅರ್ಥ ಗೊತ್ತಿದ್ದರೂ ಮನಸ್ಸಿಟ್ಟು ಮಾಡದಿದ್ದರೆ ಏನೂ ಪ್ರಯೋಜನವಿಲ್ಲ.

ಲಿಂಗವನ್ನು ಧ್ಯಾನಿಸುತ್ತಾ ತಾನು ಮಾಡುವ ಕ್ರಿಯೆಗಳಿಗೆ ಪರಶಿವ ಪ್ರತಿಫಲ ನೀಡುತ್ತಾನೆಂದು ನಂಬಿ ಮಾಡುವ ಕ್ರಿಯೆಗಳಿಗೆ ಮಾರ್ಗಕ್ರಿಯೆಗಳೆಂದು ಹೆಸರು. ಉದಾಹಾರಣೆಗೆ, ಪ್ರಸಾದ ತೆಗೆದುಕೊಳ್ಳುವುದರಿಂದ ತಾನು ಶುದ್ಧವಾಗುವುದಾಗಿಯೂ ಅದರಿಂದಾಗಿ ತನಗೆ ಪರಶಿವನ ಅನುಗ್ರಹವುಂಟಾಗುವುದಾಗಿಯೂ ಅವನು ನಂಬಿ ಅದರಂತೆ ಆಚರಿಸುತ್ತಾನೆ. ಇಲ್ಲಿ ಒಂದು ರೀತಿಯ ಸ್ವಾರ್ಥಭಾವನೆಗಳಿರುವುದು ಗಮನಾರ್ಹ.

ವಸ್ತುಗಳು ಎಲ್ಲಿವೆಯೋ ಅಲ್ಲಿಂದಲೇ, ಕೈಯಿಂದ ಮುಟ್ಟದೆ ಕೇವಲ ಮನಸ್ಸಿನಲ್ಲೇ, ಅವುಗಳನ್ನು ಅರ್ಪಿಸುವುದು ಮೀರಿದ ಕ್ರಿಯೆ; ಪ್ರತಿಯೊಂದು ಇಂದ್ರಿಯ, ಅಂತಃಕರಣಗಳಲ್ಲಿ ಲಿಂಗವನ್ನು ಸ್ಥಾಪಿಸಿ, ವಸ್ತುಗಳನ್ನು ತಾನು ಅನುಭವಿಸುವ ಮೊದಲು, ಅವುಗಳಲ್ಲಿರುವ ಲಿಂಗಕ್ಕೆ (ಪರಶಿವನಿಗೆ) ಅರ್ಪಿಸುವುದೂ ಮೀರಿದ ಕ್ರಿಯೆಯೇ. ದೇಹೇಂದ್ರಿಯಾದಿಕರಣಗಳನ್ನು ಪರಶಿವನಿಗೆ ಅರ್ಪಿಸಿ, ಅನಂತರ ಅವುಗಳನ್ನು ಬಳಸುವುದು, ತಾನು ಮಾಡುವುದೆಲ್ಲವೂ ಲಿಂಗಕ್ಕಾಗಿಯೇ ಎಂದು ತಿಳಿಯುವುದೂ ಸಹ ಮೀರಿದ ಕ್ರಿಯೆಗಳೇ.

ಮೊದಲಿನ ಎರಡು ಕ್ರಿಯೆಗಳಿಗೂ ಮೀರಿದ ಕ್ರಿಯೆಗಳಿಗೂ ಇರುವ ವ್ಯತ್ಯಾಸವೆಂದರೆ: ಮೊದಲಿನ ಎರಡು ಕ್ರಿಯೆಗಳನ್ನು ನಾವು ಇಂದ್ರಿಯಗಳ ಮೂಲಕ ತಿಳಿದುಕೊಳ್ಳಬಹುದು. ಆದರೆ ಮೀರಿದ ಕ್ರಿಯೆಗಳನ್ನು ಸಾಧಕನಲ್ಲದೆ ಬೇರಾರೂ ತಿಳಿದುಕೊಳ್ಳಲಾರರು. ನಾನು ಮಾಡುವುದು ಲಿಂಗಕ್ಕಾಗಿಯೇ ಎಂಬುದು ನನಗೆ ಗೊತ್ತೇ ಹೊರತು, ಬೇರೆಯವರಾರಿಗೂ ಗೊತ್ತಾಗುವುದಿಲ್ಲ.

ಸಾಧಕನು ತನ್ನ ಆತ್ಮವನ್ನೂ ಸಮರ್ಪಿಸಿ, ಲಿಂಗಾಂಗ ಸಾಮರಸ್ಯ ಪಡೆದ ಮೇಲೆ, ಅವನಿಗೆ ಅಹಂನಷ್ಟ (ಮನನಷ್ಟ) ಉಂಟಾಗುತ್ತದೆ. ಆಗ, ಅವನಿಗೆ ತಾನು ಸ್ವತಂತ್ರನಲ್ಲ, ತನ್ನ ಅಂಗದ ಮೂಲಕ ಶಿವನೇ ಎಲ್ಲ ಕೆಲಸವನ್ನೂ ಮಾಡಿಸುತ್ತಿದ್ದಾನೆ ಎಂಬ ಅರಿವು ಅವನಿಗೆ ಮೂಡಿದಾಗ, ಅವನಲ್ಲಿ ಮೀರಿದ ಕ್ರಿಯಾನಿಷ್ಪತ್ತಿ ಆಗುತ್ತದೆ. ಅಂತಹವನಿಗೆ ಸ್ವಾರ್ಥ ಉದ್ದೇಶಗಳೂ ಇಲ್ಲ, ತಾನು ಮಾಡುತ್ತಿದ್ದೇನೆಂಬ ಅಹಂಭಾವವೂ ಇಲ್ಲ (೩:೧೫೮೦).

**ಚತುರ್ವಿಧ ಚಕ್ರ :** ಸಂಸಾರ ಬಂಧನಕ್ಕೊಳಗಾದವನು ಕಾಲಚಕ್ರ, ಕರ್ಮಚಕ್ರ, ನಾದಚಕ್ರ ಮತ್ತು ಬಿಂದುಚಕ್ರಗಳೆಂಬ ಚತುರ್ವಿಧ ಚಕ್ರಗಳಿಗೆ ಒಳಗಾಗಿರುತ್ತಾನೆ. ಹುಟ್ಟು ಸಾವುಗಳ ಚಕ್ರಕ್ಕೆ ಸಿಕ್ಕಿಕೊಂಡವನು ಕಾಲಚಕ್ರಕ್ಕೂ, ಕರ್ಮಗಳನ್ನು ಮಾಡಿ ಭವಚಕ್ರಕ್ಕೆ ಸಿಕ್ಕಿಕೊಂಡವನು ಕರ್ಮಚಕ್ರಕ್ಕೂ ಸಿಕ್ಕಿಹಾಕಿಕೊಂಡಿದ್ದಾನೆಂದರ್ಥ. ಅದೇ ಶಕ್ತಿಯ ರೂಪಗಳಾದ ನಾದ ಮತ್ತು ಬಿಂದುಗಳಿಗೆ ಸಿಕ್ಕಿಹಾಕಿಕೊಂಡವನು ನಾದಚಕ್ರ, ಬಿಂದುಚಕ್ರಗಳಿಗೆ ಸಿಕ್ಕಿಹಾಕಿಕೊಂಡಿದ್ದಾನೆ. ಶಕ್ತಿಯ ಈ ರೂಪಗಳ ದೆಸೆಯಿಂದಾಗಿ ಅವನು ವಿವಿಧ ರೀತಿಯ ಕರ್ಮಗಳನ್ನು ಮಾಡಲು ಪ್ರಚೋದಿತನಾಗುತ್ತಾನೆ.

**ಚತುರ್ವಿಧ ಜೀವರಾಶಿ :** ಎಂಬತ್ತು ನಾಲ್ಕು ಲಕ್ಷ ಜೀವರಾಶಿಯನ್ನು ಮುಖ್ಯವಾಗಿ ನಾಲ್ಕು ವಿಧವಾಗಿ ವಿಂಗಡಿಸಲಾಗಿದೆ. ಮೊಟ್ಟೆಯ ಮೂಲಕ ಹುಟ್ಟುವ ಜೀವಿಗಳಿಗೆ ಅಂಡಜ ಎಂದೂ, ಬೆವರಿನಿಂದ ಹುಟ್ಟುವ ಜೀವಿಗೆ ಶ್ವೇದಜ ಎಂದೂ, ಮಣ್ಣು, ಸಗಣಿ ಮುತಾದ ವಸ್ತುಗಳಿಂದ ಉದ್ಭವವಾಗುವ ಜೀವಿಗಳಿಗೆ ಉದ್ಭಿಜ ಎಂದೂ, ಭ್ರೂಣದಿಂದ ಹುಟ್ಟುವ ಜೀವಿಗಳಿಗೆ ಜರಾಯುಜ ಎಂದೂ ಹೆಸರು. (ಕೆಲವರು ರೋಮಜ ಕೂದಲಿನಿಂದ ಹುಟ್ಟುವ ಜೀವಿಗಳನ್ನು ಐದನೆಯ ವಿಧವೆಂದು ಪರಿಗಣಿಸುತ್ತಾರೆ).

**ಚತುರ್ವಿಧದ ಪೂರ್ವಾಶ್ರಯವ ಕಳೆಯುವುದು :** ವಚನಕಾರರ ಪ್ರಕಾರ, ಆಧ್ಯಾತ್ಮಿಕ ಜೀವನಕ್ಕೆ ಗುರು, ಲಿಂಗ, ಜಂಗಮ ಮತ್ತು ಪ್ರಸಾದ ಬಹಳ ಮುಖ್ಯವಾದುವು. ಅವರ ಪ್ರಕಾರ, ಗುರು ಪರಶಿವನ ಅವತಾರ. ಸ್ವಪ್ರಯತ್ನದಿಂದ ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದವನಿಗಷ್ಟೇ ಇತರರಿಗೆ ಬೋಧಿಸುವ (ಗುರುವೆನಿಸಿಕೊಳ್ಳುವ) ಅಧಿಕಾರ ಇರುತ್ತದೆ. ಗುರುವಾದವನು ಪರಶಿವನೊಂದಿಗೆ ಸಾಮರಸ್ಯ ಪಡೆದಿರುವುದರಿಂದ ಶಿಷ್ಯರು ಅವನೇ ಶಿವನೆನ್ನುತ್ತಾರೆ. ಹೀಗೆ ಗುರುವಾದವನು ತನ್ನ ಪೂರ್ವಾಶ್ರಯದ ನರತ್ವವನ್ನು ಕಳೆದುಕೊಳ್ಳುತ್ತಾನೆ. ಯಾವುದೇ ಶಿಲೆಯು ಲಿಂಗವಾಗಲಾರದು. ಶಿಲೆಯು ಲಿಂಗವಾಗಬೇಕಾದರೆ ವೀರಶೈವ ಗುರುವಾದವನು ಅದನ್ನು ಶುದ್ಧಿಗೊಳಿಸಿ, ಹಸ್ತಮಸ್ತಕ ಸಂಯೋಗದ ಮೂಲಕ ಶಿಷ್ಯನಲ್ಲಿರುವ ಚೈತನ್ಯವನ್ನು ಅದರಲ್ಲಿ ನೆಲೆಗೊಳಿಸಬೇಕು. ಆಗ ಅದರ ಪೂರ್ವಾಶ್ರಯವು ಕಳೆದಂತೆ. ವಚನಕಾರರ ಪ್ರಕಾರ ಜಂಗಮನಾಗಲು ಜಂಗಮ ಜಾತಿಯಲ್ಲಿ ಹುಟ್ಟಬೇಕಾಗಿಲ್ಲ. ಲಿಂಗಾಂಗ ಸಾಮರಸ್ಯ ಪಡೆದವರೆಲ್ಲಾ ನಡೆದಾಡುವ (ಜಂಗಮ) ಲಿಂಗಗಳೇ. ಜಂಗಮರಾಗುವ ಮೊದಲು ಅವರಿಗಿದ್ದ ಜಾತಿಯು ಜಂಗಮರಾದ ಮೇಲೆ ಹೋಗುವುದರಿಂದ, ಅವರು ಪೂರ್ವಾಶ್ರಯವನ್ನು ಕಳೆದುಕೊಂಡಂತೆ. ಗುರು ಅಥವಾ ಜಂಗಮ ನೈವೇದ್ಯದ ಆಹಾರವನ್ನು ಸಾಂಕೇತಿಕವಾಗಿ ಸ್ವೀಕರಿಸಿದಾಗ ಉಳಿದುದು ಪ್ರಸಾದವಾಗುತ್ತದೆ. ಹೀಗೆ ಆಹಾರವು ಅರ್ಪಿತದ ಪೂರ್ವಾಶ್ರಯವನ್ನು ಕಳೆದುಕೊಂಡು ಪ್ರಸಾದವಾಯಿತು.

**ಚತುರ್ವಿಧ ಪಥ :** ಕೆಲವು ಅಜ್ಞಾನಿಗಳು ನಾಲ್ಕರಲ್ಲಿ ಯಾವುದಾದರೊಂದು ಮಾರ್ಗದ ಮೂಲಕ ಪರಶಿವನೊಂದಿಗೆ ಐಕ್ಯವಾಗಬಹುದು ಎಂದು ತಿಳಿದಿದ್ದಾರೆ. ಈ ನಾಲ್ಕು ಮಾರ್ಗಗಳೆಂದರೆ: ಭಕ್ತಿ, ಯುಕ್ತಿ, ತತ್ವ, ವಿರಕ್ತಿ. ಭಕ್ತಿ ಮಾಡಿ, ಕೆಲವರು ಐಹಿಕ ಭಾಗ್ಯ ಪಡೆದರೇ ಹೊರತು, ಅವರು ಲಿಂಗೈಕ್ಯರಾಗಲಿಲ್ಲ. ಮತ್ತೆ ಕೆಲವರು ಮುಕ್ತಿಯ ಸಾಧಿಸುತ್ತೇವೆಂದು (ಕೈಲಾಸ ಪಡೆಯುತ್ತೇವೆಂದು) ಹೊರಟು, ತ್ರಿವಿಧ ಕರ್ಮಕ್ಕೊಳಗಾದರು; ಮತ್ತೆ ಕೆಲವರು ತತ್ವವನ್ನರಿಯುತ್ತೇವೆಂದು ಹೊರಟು, ತರ್ಕಿಗಳಾದರೇ ಹೊರತು, ಐಕ್ಯ ಸಾಧಿಸಲಿಲ್ಲ; ಮತ್ತೆ ಕೆಲವರು ವಿರಕ್ತಿಯ ಮೂಲಕ ಐಕ್ಯ ಸಾಧಿಸುತ್ತೇವೆಂದು ತೀರ್ಮಾನಿಸಿ ಕಾಡಿಗೆ ಹೋಗಿ ಸಂನ್ಯಾಸಿಗಳಾದರೇ ಹೊರತು, ಐಕ್ಯ ಸಾಧಿಸಿಲಿಲ್ಲ. ಶರಣರು ಬೋಧಿಸಿದ ಅಷ್ಟಾವರಣ ಷಟ್‌ಸ್ಥಲ-ಪಂಚಾಚಾರ ಮಾರ್ಗವನ್ನು ಬಿಟ್ಟು ಲಿಂಗೈಕ್ಯ ಸಾಧಿಸುತ್ತೇವೆಂಬುದು ಅಸಾಧ್ಯ, ಎಂಬುದು ಇದರ ಸಾರಾಂಶ. (೯:೯೯)

**ಚತುರ್ವಿಧ ಪಾಶ :** ನಾಲ್ಕು ರೀತಿಯ ಆಸೆಗಳು ನಾಲ್ಕು ರೀತಿಯ ಪಾಶಗಳಾಗಿ ಪರಿಣಮಿಸುತ್ತವೆ. ಅವೆಂದರೆ, ೧. ತನುವಿನಾಸೆ : ದೇಹಕ್ಕೋಸ್ಕರ ಕರ್ಮಗಳನ್ನು ಮಾಡುವಂತೆ ಪ್ರಚೋದಿಸುವ ಆಸೆಗಳು; ೨. ಮನದಕಾಂಕ್ಷೆ : ಮಾನಸಿಕ ಸಂತೋಷಕ್ಕೆ ಕರ್ಮಗಳನ್ನು ಮಾಡುವಂತೆ ಪ್ರಚೋದಿಸುವ ಆಸೆಗಳು; ೩. ಭಾವದ ಭ್ರಮೆ : ನಾನು ಪರಶಿವನಿಂದ ಪ್ರತ್ಯೇಕವಾಗಿದ್ದೇನೆ ಎಂಬ ಭ್ರಮೆ; ಈ ಭ್ರಮೆಯು ನಮ್ಮ ಇತರ ಭ್ರಮೆಗಳಿಗೂ, ಎಲ್ಲ ರೀತಿಯ ಸ್ವಾರ್ಥ ಆಸೆಗಳಿಗೂ ಮೂಲ; ಮತ್ತು ೪. ಪ್ರಾಣ ಹಾಗೂ ಪ್ರಪಂಚದ ಆಸೆ. ನಾನಿನ್ನೂ ಬದುಕಿರಬೇಕು, ಪ್ರಪಂಚದಲ್ಲೇ ಇರಬೇಕು ಸಶರೀರಿಯಾಗೇ ಇರಬೇಕು, ಎಂಬುದು ಕೊನೆಯ ಪದದ ಅರ್ಥ.

**ಚತುರ್ವಿಧ ಪುರುಷಾರ್ಥ :** ಪುರುಷ ಎಂದರೆ ಆತ್ಮ; ಅರ್ಥವೆಂದರೆ 'ಗೋಸ್ಕರ'. ಹೀಗೆ ಪುರುಷಾರ್ಥವೆಂದರೆ 'ಆತ್ಮನಿಗೋಸ್ಕರ' ಎಂಬರ್ಥವುಂಟಾಗುತ್ತದೆ. ಆತ್ಮನಿಗೋಸ್ಕರ ನಾವು ಚತುರ್ವಿಧ ಫಲಪ್ರಾಪ್ತಿಯ ಕಡೆ ಗಮನ ಕೊಡಬೇಕಾಗುತ್ತದೆ. ಅವೆಂದರೆ, ಧರ್ಮ, ಅರ್ಥ, ಕಾಮ, ಮೋಕ್ಷ. ಇಲ್ಲಿ ಧರ್ಮವೆಂದರೆ ಕರ್ತವ್ಯವೂ ಹೌದು, ಯಜ್ಞ ಯಾಗಾದಿಗಳೂ ಹೌದು. ಅರ್ಥವೆಂದರೆ ಹಣ. ಕುಟುಂಬ ಪೋಷಣೆಗೆ ಪ್ರತಿಯೊಬ್ಬನು ಅರ್ಥ ಸಂಪಾದನೆ ಮಾಡಬೇಕು. ದಾಂಪತ್ಯ ಜೀವನದ ಮೂಲಕ ಕಾಮವನ್ನು ತೃಪ್ತಿಪಡಿಸಿಕೊಳ್ಳಬೇಕು. ಹಾಗೂ ಕೊನೆಯಲ್ಲಿ ಮೋಕ್ಷವನ್ನು ಪಡೆಯಬೇಕು. ಕೆಲವರು ಮೋಕ್ಷವೇ ಪರಮ ಪುರುಷಾರ್ಥವೆಂದೂ ಮೊದಲಿನ ಮೂರು ಅದಕ್ಕೆ ಪೂರಕವೆಂದೂ ವಾದಿಸಿದರೆ, ಕೆಲವರು ಪ್ರತಿಯೊಂದು ಪುರುಷಾರ್ಥವೂ ಉಳಿದ ಮೂರರಿಂದ ಪ್ರತ್ಯೇಕವೆಂದು ವಾದಿಸುತ್ತಾರೆ.

**ಚತುರ್ವಿಧ ಪ್ರಸಾದ :** ಪ್ರಸಾದದ ಪ್ರಕಾರಗಳನ್ನು ವಿವರಿಸುವಾಗ ವಚನಕಾರರಲ್ಲಿ ಒಮ್ಮತವಿಲ್ಲ. ಕೆಲವರು ಪ್ರಸಾದವು ತ್ರಿವಿಧವೆಂದೂ, ಮತ್ತೆ ಕೆಲವರು ಪ್ರಸಾದವು ಏಕಾದಶ ವಿಧವೆಂದೂ ಹೇಳಿದರೆ, ಮತ್ತೆ ಕೆಲವರು ಪ್ರಸಾದವು ಚತುರ್ವಿಧವೆಂದು ಹೇಳಿದ್ದಾರೆ. ಚತುರ್ವಿಧ ಪ್ರಸಾದದ ಬಗ್ಗೆಯೂ ವಚನಕಾರರಲ್ಲಿ ಒಮ್ಮತವಿಲ್ಲ. ಚತುರ್ವಿಧ ಪ್ರಸಾದದ ಬಗೆಗೆ ಕನಿಷ್ಠ ಮೂರು ಅಭಿಪ್ರಾಯಗಳಿವೆ.

೧. ಕಾಡಸಿದ್ಧೇಶ್ವರನೆಂಬ ಶರಣನು ಚತುರ್ವಿಧ ಪ್ರಸಾದವೆಂದರೆ, ಅಚ್ಚ, ನಿಚ್ಚ, ಸಿದ್ಧ ಮತ್ತು ಸಮಯವೆಂಬ ನಾಲ್ಕು ವಿಧದ ಪ್ರಸಾದವೆನ್ನುತ್ತಾನೆ. ಅಲ್ಲದೆ, ಅವೆಲ್ಲವನ್ನೂ ಈ ಕೆಳಗಿನಂತೆ ವಿವರಿಸಿದ್ದಾನೆ.

ಗುರುವು (ಆಚಾರ್ಯನು) ಶುದ್ಧ ಪ್ರಸಾದದ ಪ್ರತೀಕ. ಅವನಿಂದ ದೀಕ್ಷೆ ಪಡೆದ ಭಕ್ತನು ತಾನೂ ಗುರುವಿನಂತಾಗಬೇಕು ಎಂದು ಪ್ರತಿಜ್ಞೆ ಮಾಡಬೇಕು. ಹೀಗೆ ಶುದ್ಧ ಪ್ರಸಾದದ ಸ್ವರೂಪಾಚಾರ್ಯನನ್ನು ತನುವಿನಲ್ಲಿ ಸ್ವಾಯತ ಮಾಡಿಕೊಂಡು (ಅಂದರೆ, ಆಚಾರ್ಯನು ಬೋಧಿಸಿದ ಆಚಾರಗಳನ್ನು ತನುವಿನಲ್ಲಿ ರೂಢಿಸಿಕೊಂಡು) ಆ ಮೂಲಕ ತನುವಿನ ಕೆಟ್ಟ ಗುಣಗಳನ್ನು ನಷ್ಟಮಾಡಿಕೊಂಡರೆ, ಆಗ ನಾವು ತೆಗೆದುಕೊಂಡುದುದು ಅಚ್ಚ ಪ್ರಸಾದ.

ಗುರುವು ಕರುಣೆಯಿಂದ ಕೊಡುವ ಇಷ್ಟಲಿಂಗವೂ ಒಂದು ಪ್ರಸಾದವೇ. ಗುರು ಕೊಟ್ಟ ಸಿದ್ಧ ಪ್ರಸಾದರೂಪವಾದ ಚಿಲ್ಲಿಂಗವನ್ನು ಭಕ್ತನು ಮನಸ್ಸಿನಲ್ಲಿ ಸ್ವಾಯತ ಮಾಡಿಕೊಂಡರೆ, ಅದರಿಂದ ಮನಸ್ಸಿನ ದುರ್ಗುಣಗಳು ನಷ್ಟವಾಗಬೇಕು. ಹಾಗೆ ನಷ್ಟವಾದರೆ ನಾವು ತೆಗೆದುಕೊಂಡ ಪ್ರಸಾದ ನಿಚ್ಚ (ನಿತ್ಯ) ಪ್ರಸಾದ. ಲಿಂಗವು ನಿತ್ಯವಾದುದರಿಂದ, ಹಾಗೂ ಲಿಂಗವೇ ಪ್ರಸಾದವಾದುದರಿಂದ, ಅದು ನಿತ್ಯ ಪ್ರಸಾದ (ನಿತ್ಯ=ಶಾಶ್ವತವಾದ ಲಿಂಗವೆಂಬ ಪ್ರಸಾದ) ಎನಿಸಿಕೊಳ್ಳುತ್ತದೆ.

ಗುರು ಮತ್ತು ಲಿಂಗ ಹೇಗೆ ಪ್ರಸಾದಗಳೋ ಹಾಗೆಯೇ ಜಂಗಮವೂ ಸಹ ಒಂದು ಪ್ರಸಾದವೇ. ಸಿದ್ಧ ಪ್ರಸಾದರೂಪನಾದ ಜಂಗಮವನ್ನು ಆತ್ಮದಲ್ಲಿ ಸ್ವಾಯತ ಮಾಡಿಕೊಂಡರೆ ಆಗ ಆತ್ಮದ ಜೀವತ್ವ ಭಾವ ನಷ್ಟವಾಗುತ್ತದೆ; ಆಗ ನಾವು ತೆಗೆದುಕೊಂಡುದುದು ಸಮಯ ಪ್ರಸಾದ. ಶುದ್ಧ, ಸಿದ್ಧ ಮತ್ತು ಪ್ರಸಾದ ಸ್ವರೂಪವಾದ ಮಹಾಲಿಂಗವೂ ಒಂದು ಪ್ರಸಾದವೇ. ಆ ಮಹಾಲಿಂಗವನ್ನು ನಾವು ನಮ್ಮ ಸರ್ವಾಂಗದಲ್ಲಿ ಸ್ವಾಯತ ಮಾಡಿಕೊಂಡರೆ, ಆಗ ಸರ್ವಾಂಗಗಳ ದುಷ್ಟಗುಣಗಳು ನಷ್ಟವಾಗಿ, ಪೂರ್ಣಭಕ್ತಿ ನೆಲೆಸುತ್ತದೆ. ಹೀಗೆ ಪೂರ್ಣ ಭಕ್ತಿ ನೆಲೆಸಿದರೆ, ನಾವು ತೆಗೆದುಕೊಳ್ಳುವ ಪ್ರಸಾದ ಏಕ ಪ್ರಸಾದ. ಇಲ್ಲಿ, ಭಕ್ತನು ತನ್ನನ್ನು ತಾನೇ ಅರ್ಪಿಸಿಕೊಂಡು (ಹಾಗೂ ಪ್ರಸಾದವನ್ನಾಗಿ ಮಾಡಿಕೊಂಡು) ಪ್ರಸಾದಿಗೂ ಪ್ರಸಾದಕ್ಕೂ ಇರುವ

ಅಂತರವನ್ನು ಅಳಿಸಿಹಾಕುವುದೇ ಏಕಪ್ರಸಾದದ ಅರ್ಥ. ಆದರೆ ಚತುರ್ವಿಧ ಪ್ರಸಾದವು ಪ್ರಸಾದಿಗಿಂತ ಭಿನ್ನವೆಂಬುದನ್ನು ಗಮನಿಸಬೇಕು. (೧೦:೧೬೨)

೨. ಕುಷ್ಟಗಿ ಕರಿಬಸವೇಶ್ವರನೆಂಬ ವಚನಕಾರನ ಪ್ರಕಾರ, ಚತುರ್ವಿಧ ಪ್ರಸಾದವೆಂದರೆ, ಗುರುಪ್ರಸಾದ, ನಿತ್ಯ ಪ್ರಸಾದ, ಜ್ಞಾನ ಪ್ರಸಾದ ಮತ್ತು ಸಿದ್ಧ ಪ್ರಸಾದ ಎಂಬ ನಾಲ್ಕು ವಿಧದ ಪ್ರಸಾದ. ಅವನ ಪ್ರಕಾರ ಗುರುವಿನ ಮುಖಾಂತರ ಬಂದುದು ಗುರುಪ್ರಸಾದ; ಲಿಂಗದ ಮುಖಾಂತರ ಬಂದುದು ನಿತ್ಯ ಪ್ರಸಾದ; ಜಂಗಮದ ಮುಖಾಂತರ ಬಂದುದು ಜ್ಞಾನಪ್ರಸಾದ ಮತ್ತು ಜ್ಞಾನದ ಮುಖಾಂತರ ಬಂದುದು ಸಿದ್ಧ ಪ್ರಸಾದ.

ಗುರು ಕೊಟ್ಟ ಪ್ರಸಾದ ಗುರುಪ್ರಸಾದ. ಲಿಂಗವು ನಿತ್ಯವಾದುದರಿಂದ, ಲಿಂಗಮುಖದಿಂದ ಬಂದುದು ನಿತ್ಯಪ್ರಸಾದವೆನಿಸಿಕೊಳ್ಳುತ್ತದೆ. ಜಂಗಮವೆಂದರೆ ಲಿಂಗಾಂಗ ಸಾಮರಸ್ಯದ ಮೂಲಕ ಜ್ಞಾನ ಪಡೆದಾತ. ಅಂಥವನು ಮಾತ್ರ ಬೇರೆಯವರಿಗೆ ಜ್ಞಾನವನ್ನು ನೀಡಬಲ್ಲ. ಅವನಿಂದ ಬಂದ ಜ್ಞಾನವೂ ಒಂದು ಪ್ರಸಾದವೇ. ವಾಸ್ತವವಾಗಿ, ಜ್ಞಾನಪ್ರಸಾದವು ಹಣ್ಣು, ಹಾಲು, ಮುಂತಾದ ಭೌತಿಕ ಪ್ರಸಾದಗಳಿಗಿಂತ ಹೆಚ್ಚು ಶ್ರೇಷ್ಠವಾದುದು. ಜಂಗಮನಿಂದ ಪಡೆದ ಜ್ಞಾನದ ಮೂಲಕ ಭಕ್ತನು ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದು, ಸಿದ್ಧನೆನಿಸಿಕೊಳ್ಳುತ್ತಾನೆ; ಅಥವಾ ಜ್ಞಾನ ಮುಖದಲ್ಲಿ ಬಂದ ಪ್ರಸಾದವು ಸಿದ್ಧ ಪ್ರಸಾದವೆನಿಸಿಕೊಳ್ಳುತ್ತದೆ. (೧೦:೫೧೨)

೩. ಆದರೆ ಗುರುಸಿದ್ಧ ದೇವರು ಎಂಬ ವಚವಕಾರನ ಪ್ರಕಾರ, ಚತುರ್ವಿಧ ಪ್ರಸಾದವ ಪಟ್ಟಿಯಲ್ಲಿ ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದ, ಮತ್ತು ನಿಜಪ್ರಸಾದಗಳು ಸೇರಿವೆ. ಮೇಲೆ ಹೇಳಿದ ಪದಗಳೇ ಇಲ್ಲಿಯೂ ಬಳಕೆಯಾಗಿದ್ದರೂ, ಅವುಗಳ ಅರ್ಥದಲ್ಲಿ ಭಿನ್ನತೆಯಿದೆ. ಅವನ ಪ್ರಕಾರ, ದೀಕ್ಷಾವಿಧಿಗಳ ಪ್ರಕಾರ ಗುರುವು ಶಿಷ್ಯನಿಗೆ ಕೊಡುವ ಇಷ್ಟಲಿಂಗವೇ ಗುರು ಪ್ರಸಾದ; ಇಷ್ಟಲಿಂಗ ಪೂಜಾವಿಧಿಗಳ ಪ್ರಕಾರ, ಗುರುವು ಶಿಷ್ಯನಿಗೆ ದಶವಿಧ ಪಾದೋದಕ ಮತ್ತು ಏಕಾದಶ ಪ್ರಸಾದವನ್ನು ಕರುಣಿಸುವುದೇ ಲಿಂಗಪ್ರಸಾದ. ಸೃಷ್ಟಿ ವಿಚಾರ, ಆತ್ಮ ವಿಚಾರ, ಮನುಷ್ಯನಲ್ಲಿರುವ ಯಾವ ಕಲಾಶಕ್ತಿಗೆ ಯಾರು ಅಧಿದೇವತೆ, ಯಾವ ಭಕ್ತಿಗೆ ಯಾವ ಲಿಂಗ, ಯಾವ ಚಕ್ರದಲ್ಲಿ ಯಾವ ಲಿಂಗವಿದೆ, ಇತ್ಯಾದಿ ಸಕೀಲಗಳ ರಹಸ್ಯವನ್ನು ಜಂಗಮನು (ಜ್ಞಾನವನ್ನು ಪಡೆದವನು) ಶಿಷ್ಯನಿಗೆ ಬೋಧಿಸುವುದರಿಂದ, ಆ ಬೋಧನೆಯೇ ಜಂಗಮ ಪ್ರಸಾದವೆನಿಸಿಕೊಳ್ಳುತ್ತದೆ. ಶಿಷ್ಯನು ಈ ಬೋಧನೆಗನುಗುಣವಾಗಿ ನಡೆದುಕೊಂಡು, ಸರ್ವಾಚಾರ, ಸಂಪತ್ತಿನೊಡಗೂಡಿ ಭಿನ್ನಭಾವವ ತ್ಯಜಿಸಿ, ತಾನು ಮತ್ತು ಲಿಂಗ (ಪರಶಿವ) ಒಂದೇ ಎಂಬ ಐಕ್ಯ ಭಾವವನ್ನು ಅನುಭಾವದ ಮೂಲಕ ಪಡೆದುಕೊಂಡರೆ, ತಾನೇ ನಿಜ ಪ್ರಸಾದವಾಗುತ್ತಾನೆ. (೧೦:೬೭೯)

ವಾಸ್ತವವಾಗಿ, ಅಲ್ಪ ಸ್ವಲ್ಪ ಬದಲಾವಣೆಗಳನ್ನು ಹೊರತುಪಡಿಸಿ, ಚತುರ್ವಿಧ ಪ್ರಸಾದದ ಬಗೆಗಿನ ಈ ಶರಣರ ಕಲ್ಪನೆಗಳು ಒಂದೇ ತೆರನಿದ್ದು, ಅವುಗಳ ಹೆಸರುಗಳಷ್ಟೇ ಭಿನ್ನವಾಗಿವೆ, ಎಂಬುದನ್ನು ನಾವು ಗಮನಿಸಬಹುದು.

**ಚತುರ್ವಿಧ ಫಲ ಪದವಿ :** ಸಾಮಾನ್ಯವಾಗಿ ಇದಕ್ಕೆ ಮೋಕ್ಷದ ನಾಲ್ಕು ಹಂತಗಳು ಎಂಬ ಅರ್ಥವಿದೆ. ದ್ವೈತ ವೈಷ್ಣವರೂ, ದ್ವೈತ ಶೈವ ಸಿದ್ಧಾಂತಿಗಳೂ ಶುದ್ಧಾತ್ಮನು ನಾಲ್ಕು ಉತ್ತಮ ಪದ (ಪದವಿ)ಗಳನ್ನು ಪಡೆಯುತ್ತಾನೆ ಎನ್ನುತ್ತಾನೆ. ಅವೆಂದರೆ, ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯ. ಶುದ್ಧಾತ್ಮನು ಮೊದಲು ಪರಮಾತ್ಮನು ಇರುವ ಲೋಕಕ್ಕೆ (ಸಾಲೋಕ್ಯ) ಹೋಗುತ್ತಾನೆ. ಅನಂತರ ಪರಮಾತ್ಮನ ಸಾಮೀಪ್ಯವನ್ನು ಪಡೆಯುತ್ತಾನೆ; ಪರಮಾತ್ಮನಂತೆ ಶುದ್ಧನಾಗಿ ಸಾರೂಪ್ಯನಾಗುತ್ತಾನೆ; ಕೊನೆಯಲ್ಲಿ ಪರಮಾತ್ಮನೊಂದಿಗೆ ಬೆರೆಯುತ್ತಾನೆ (ಆದರೆ ಪರಮಾತ್ಮನಾಗುವುದಿಲ್ಲ). ಈ ರೀತಿಯ ನಾಲ್ಕು ರೀತಿಯ ಫಲಪದಗಳು ಆಧ್ಯಾತ್ಮಿಕ ಜೀವನಕ್ಕೆ ಸಿಕ್ಕ ಬಹುಮಾನ. ಈ ಸಿದ್ಧಾಂತವು ವಚನಕಾರರಿಂದ ತಿರಸ್ಕರಿಸಲ್ಪಟ್ಟಿದೆ. ಏಕೆಂದರೆ, ಅವರ ಪ್ರಕಾರ, ಇಹಲೋಕ ಮತ್ತು ವೈಕುಂಠ ಅಥವಾ ಕೈಲಾಸ ಎಂಬ ಎರಡು ಲೋಕಗಳಿಲ್ಲ. ಎರಡನೆಯದಾಗಿ ನಾವು ಅತ್ಯಂತ ಶ್ರೇಷ್ಠವಾದ ಶಿವಸಾಯುಜ್ಯವನ್ನು ಈ ಜನ್ಮದಲ್ಲೇ ಸಾಧಿಸಿಕೊಳ್ಳಬೇಕೇ ಹೊರತು, ಸತ್ತನಂತರವಲ್ಲ.

ಕೆಲವು ವಚನಕಾರರ ಪ್ರಕಾರ, ಚತುರ್ವಿಧ ಫಲಪದವೆಂದರೆ, ಐಹಿಕ ಜೀವನದಲ್ಲೇ ಸಾಧಿಸಿಕೊಳ್ಳಬೇಕಾದ ನಾಲ್ಕು ರೀತಿಯ ಪದವಿಗಳು. ಅವೆಂದರೆ, ಗುರು, ಲಿಂಗ, ಜಂಗಮ ಮತ್ತು ಪ್ರಸಾದ. ಮಾನವ ಜೀವನದ ಅತ್ಯಂತ ಶ್ರೇಷ್ಠ ಧ್ಯೇಯ ಲಿಂಗೈಕ್ಯ ಪ್ರಾಪ್ತಿಯೇ ಆದರೂ, ಆ ಧ್ಯೇಯ ನಾಲ್ಕು ರೂಪಗಳಲ್ಲಿ ವ್ಯಕ್ತವಾಗುತ್ತದೆ. ಲಿಂಗಾಂಗ ಸಾಮರಸ್ಯದ ಮೂಲಕ ಜ್ಞಾನ (ಅರಿವು) ಪಡೆದವನೇ ಗುರು; ಹೀಗೆ, ಮೋಕ್ಷ ಪಡೆಯುವುದೆಂದರೂ ಒಂದೇ, ಗುರುಪದವಿಯನ್ನು ಪಡೆಯುವುದೆಂದರೂ ಒಂದೇ; ಅದೇ ರೀತಿ ಗುರುವು ಲಿಂಗದೊಡನೆ ಸಾಮರಸ್ಯಪಡೆದಿರುವುದರಿಂದ ಗುರು ಮತ್ತು ಲಿಂಗ ಸಮಾನ; ಹಾಗೆಯೇ ಜಂಗಮ ಸಹ ಗುರುವಿನಂತೆ ಲಿಂಗಸಮಾನ. ಆದುದರಿಂದ ಇವು ಮೂರು ಪದವಿಗಳೂ ಒಂದೇ ಪದವಿ. ತನ್ನ ಶರೀರ, ಕರಣಗಳು, ಆತ್ಮ ಮುಂತಾದುವುಗಳೆಲ್ಲವೂ ತನ್ನವಲ್ಲ ಪರಶಿವನ ಪ್ರಸಾದವೆಂದು ತಿಳಿದವನು (ಅಥವಾ ತಾನೇ ಪ್ರಸಾದವೆಂದು ತಿಳಿದವನು) ಮುಕ್ತ. ಹೀಗೆ ಜೀವಂತವಿದ್ದಾಗಲೇ ಈ ಚತುರ್ವಿಧ ಫಲ ಪದವಿಯನ್ನು ಪಡೆಯಬೇಕು.

**ಚತುರ್ವಿಧ ಲಿಂಗ :** ಗುರು, ಲಿಂಗ, ಜಂಗಮ ಮತ್ತು ಪ್ರಸಾದ ಇವುಗಳನ್ನು ಸಾಧಕನು ಮೊದಲು ದ್ವೈತ ಭಾವದಿಂದ ಆಚರಿಸುತ್ತಾನೆ. ಕ್ರಮೇಣ ಇವನ್ನೇ ಪರಶಿವನ ಸ್ಥಾನಕ್ಕೆ ಏರಿಸುತ್ತಾನೆ. ಆಗ ಇವು ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಮತ್ತು ಪ್ರಸಾದಲಿಂಗಗಳೆನಿಸಿಕೊಳ್ಳುತ್ತವೆ. ಗುರು ಮತ್ತು ಜಂಗಮ ಇಬ್ಬರೂ ಲಿಂಗದೊಂದಿಗೆ

ಸಾಮರಸ್ಯ ಪಡೆದಿರುವುದರಿಂದ ಅವರು ಲಿಂಗಸಮಾನರು. ಲಿಂಗವೆಂದರೆ ಮೊದಲು ಇಷ್ಟಲಿಂಗವೆಂಬ ಅರ್ಥವಿದ್ದು, ಸಾಮರಸ್ಯದನಂತರ ಅದಕ್ಕೆ ಪರಶಿವ ಎಂಬ ಅರ್ಥ ಬರುತ್ತದೆ. ಪ್ರಸಾದವೆಂದರೆ ಮೊದಲು ತಿನ್ನಲು ಅಥವಾ ಕುಡಿಯಲು ಯೋಗ್ಯವಾದ ಪದಾರ್ಥ ಎಂಬರ್ಥವಿದ್ದು, ಕೊನೆಗೆ ಸಾಧಕನು ತನ್ನನ್ನೇ ಸಂಪೂರ್ಣವಾಗಿ ಅರ್ಪಿಸಿಕೊಂಡು, (ಶರಣಾಗತನಾಗಿ, ಶರಣಾಗಿ) ಪ್ರಸಾದ ಮತ್ತು ಪ್ರಸಾದಿಗಳಿಗಿರುವ ವ್ಯತ್ಯಾಸವನ್ನು ಅಳಿಸಿಹಾಕುವುದಲ್ಲದೆ, ತಾನು ಶಿವನ ವಾಹನವೆನಿಸಿಕೊಳ್ಳುತ್ತಾನೆ. ಐಕ್ಯಸ್ಥಿತಿಯಲ್ಲಿ ತಾನೂ ಶಿವನಾಗುತ್ತಾನೆ. ಹೀಗೆ ಪ್ರಸಾದವಾದ ಅವನೂ ಲಿಂಗವಾಗಿ, ಪ್ರಸಾದಲಿಂಗವೆನಿಸಿಕೊಳ್ಳುತ್ತಾನೆ.

**ಚತುರ್ವಿಧ ಸಂಪಾದನೆ :** ಇಲ್ಲಿ ಸಂಪಾದನೆ ಎಂದರೆ ಸಂದೇಹ ಮಾಡುವುದು ಎಂದರ್ಥ. ಗುರುವು ಲಿಂಗದೀಕ್ಷೆ ಕೊಡಲು ಅರ್ಹನೋ ಅಲ್ಲವೋ ಎಂದು ಅವನ ಗುಣವನ್ನು ಸಂದೇಹಿಸುವುದು ಗುರುವಿನ ಗುಣಸಂಪಾದನೆ; ಇಷ್ಟಲಿಂಗಕ್ಕೆ ಬಳಸಲಾಗಿರುವ ಕಲ್ಲು ಯಾವ ಸ್ಥಳದ್ದೋ ಎಂದು ಸಂದೇಹಿಸುವುದು ಲಿಂಗದ ಸ್ಥಳ ಸಂಪಾದನೆ; ಯಾರು ಬೇಕಾದರೂ ಜಂಗಮವಾಗಲು ಸಾಧ್ಯವಿರುವುದರಿಂದ ಜಂಗಮ ಒಳ್ಳೆಯ ಜಾತಿಯವನೋ ಅಲ್ಲವೋ ಎಂದು ಸಂದೇಹಿಸುವುದು ಜಂಗಮನ ಜಾತಿ ಸಂಪಾದನೆ; ಪ್ರಸಾದವೆಂದು ಸ್ವೀಕರಿಸುವ ವಸ್ತುವಿಗೆ ರುಚಿ ಇದೆಯೊ ಇಲ್ಲವೋ ಎಂದು ಸಂದೇಹಿಸುವುದು ಪ್ರಸಾದದಲ್ಲಿ ರುಚಿ ಸಂಪಾದನೆ. ನಿಜವಾದ ಭಕ್ತನು ಈ ಚತುರ್ವಿಧ ಸಂಪಾದನೆ ಮಾಡಬಾರದು. ಗುರುವಿನ ಗುಣವನ್ನೂ, ಇಷ್ಟಲಿಂಗಕ್ಕೆ ಬಳಸಲಾದ ಕಲ್ಲಿನ ಸ್ಥಳವನ್ನೂ, ಜಂಗಮನ ಜಾತಿಯನ್ನೂ, ಪ್ರಸಾದದ ರುಚಿಯನ್ನೂ ಅರಸುತ್ತಾ ಹೋದರೆ ನಮ್ಮ ಸಂದೇಹಕ್ಕೆ ಸೂಕ್ತ ಪರಿಹಾರ ಸಿಕ್ಕದೇ ಇರಬಹುದು. ಅಥವಾ ಸಿಕ್ಕಿದರೂ ನಮ್ಮ ಭಕ್ತಿ ಮತ್ತು ಶ್ರದ್ಧೆ ಗಟ್ಟಿಯಾಗದಿರಬಹುದು. ಭಕ್ತಿಗೆ ಮೊದಲು ಬೇಕಾದುದು ನಿಸ್ಸಂಶಯ ವಿಶ್ವಾಸವಾದುದರಿಂದ ಯಾವುದೇ ರೀತಿಯ ಸಂಶಯಕ್ಕೆ ಎಡೆಯಿರಬಾರದು.

**ಚತುರ್ವಿಧ ಸಂಬಂಧಿ :** ಲಿಂಗಸಂಬಂಧಿ, ಜ್ಞಾನಸಂಬಂಧಿ, ಪ್ರಸಾದ ಸಂಬಂಧಿ ಮತ್ತು ನಿಜಲಿಂಗ ಸಂಬಂಧಿ. ತನುವಿಗೆ ಹಸಿವು, ತೃಷೆ, ಮೈಥುನ ಮುಂತಾದ ಸಹಜ ಬಯಕೆಗಳಿರುತ್ತವೆ. ಇವು ತನುವಿನ ಧರ್ಮವೇ ಹೊರತು, ಹೊಸದಾಗಿ ಕಲಿತುಕೊಂಡ ಅಭ್ಯಾಸಗಳಲ್ಲ. ತನುವಿನ ಈ ತನ್ನ ಸಹಜ ಗುಣಗಳನ್ನು ಕಳೆದುಕೊಂಡವನು ಲಿಂಗಸಂಬಂಧಿಯಾಗುತ್ತಾನೆ.

ಮನಸ್ಸು ತನ್ನ ಸಹಜ ಅಜ್ಞಾನದಿಂದಾಗಿ ತನ್ನ ಬಗೆಗೆ, ಪ್ರಪಂಚದ ಬಗೆಗೆ ಹಾಗೂ ಪರಶಿವನ ಬಗೆಗೆ ಅನೇಕ ತಪ್ಪು ಕಲ್ಪನೆಗಳನ್ನು ಬೆಳೆಸಿಕೊಂಡಿರುತ್ತದೆ. ಆದರೆ ಅದು ತನ್ನ ಈ ಸಹಜ ಗುಣವನ್ನು ಕಳೆದುಕೊಂಡರೆ ಜ್ಞಾನ ಸಂಬಂಧಿಯಾಗುತ್ತದೆ. ಇದರಿಂದಾಗಿ ಅದಕ್ಕೆ ಸಮ್ಯಗ್‌ಜ್ಞಾನ ಉಂಟಾಗುತ್ತದೆ.

ಪ್ರಾಣಕ್ಕೆ ತಾನು ಉಳಿದುಕೊಳ್ಳಬೇಕು, ತಾನು ಅಭಿವೃದ್ಧಿ ಹೊಂದಬೇಕು ಮುಂತಾದ ಅನೇಕ ಸಹಜವಾದ ಸ್ವಾರ್ಥ ಆಸೆಗಳನ್ನಿಟ್ಟುಕೊಂಡಿರುತ್ತದೆ. ಆದರೆ ಅದು ತನ್ನ ಈ ಸಹಜಗುಣವನ್ನು ಕಳೆದುಕೊಂಡರೆ, ಅಂದರೆ, ತಾನು ಮಾಡುವುದೆಲ್ಲವೂ ತನಗಾಗಿ ಅಲ್ಲ, ಲಿಂಗಕ್ಕಾಗಿ ಎಂದು ತಿಳಿದುಕೊಂಡರೆ, ತನ್ನ ಕರಣೇಂದ್ರಿಯಾದಿಗಳು ತನ್ನವಲ್ಲ, ಲಿಂಗಕ್ಕೆ ಸೇರಿದವು ಎಂದು ಭಾವಿಸಿದರೆ, ಆಗ ಅದು ಪ್ರಸಾದ ಸಂಬಂಧಿಯಾಗುತ್ತದೆ. ಅಂದರೆ, ತನ್ನ ಕರಣೇಂದ್ರಿಯಗಳೂ ಅಲ್ಲದೆ ಇಡೀ ಪ್ರಪಂಚವೇ ಶಿವನ ಪ್ರಸಾದವೆಂದು ಅದು ಬಲವಾಗಿ ನಂಬುತ್ತದೆ.

ಭಾವ (ಜೀವ)ಕ್ಕೆ ತಾನು ಬೇರೆ, ಶಿವಬೇರೆ, ಪ್ರಪಂಚ ಬೇರೆ ಎಂಬ ಸಹಜವಾದ ಭ್ರಮೆಗಳಿರುತ್ತವೆ. ಈ ಭ್ರಮೆಯಳಿದರೆ, ಅದಕ್ಕೆ ನಿಜಲಿಂಗಸಂಬಂಧ ಉಂಟಾಗುತ್ತದೆ: ಅಂದರೆ ತನ್ನಲ್ಲಿರುವ ಲಿಂಗವು (ಚೈತನ್ಯವು) ವ್ಯಕ್ತವಾಗುತ್ತದೆ: ಅಥವಾ ಆ ಚೈತನ್ಯವು ಪರಶಿವನಲ್ಲದೆ ಬೇರೆಯಲ್ಲ ಎಂಬ ಅರಿವು ಮೂಡುತ್ತದೆ. (೮:೬೧೬)

**ಚತುರ್ವಿಧ ಸ್ಥಲ :** ಗುರುಸ್ಥಲ, ಲಿಂಗಸ್ಥಲ, ಜಂಗಮಸ್ಥಲ, ಪ್ರಸಾದಸ್ಥಲ. (೮:೫೧೦)

**ಚತುರಾಶ್ರಮಿ :** ಚಂದಿಮರಸನ ಪ್ರಕಾರ, ಕರ್ಮಿ, ಭಕ್ತ, ಜ್ಞಾನಿ, ಲೌಕಿಕರೆಂಬ ನಾಲ್ಕು ರೀತಿಯ ಜನರು ಚತುರಾಶ್ರಮಿಗಳು. ಯಜ್ಞ ಯಾಗಾದಿಗಳೆಂಬ ವೈದಿಕ ಕರ್ಮ ಮಾಡುವ ಕರ್ಮಿಗೂ, ಪೂಜೆ, ಜಪ, ಮುಂತಾದ ಯಾಂತ್ರಿಕ ಕ್ರಿಯೆಗಳನ್ನು ಮಾಡುವ ಭಕ್ತನಿಗೂ, ಶಾಸ್ತ್ರಾಧ್ಯಯನ ಮಾಡಿದ ಜ್ಞಾನಿಗೂ, ಇಂದ್ರಿಯ ವಿಷಯಗಳಲ್ಲಿ ನಿರತನಾದ ಲೌಕಿಕನಿಗೂ ಯಾವುದೇ ರೀತಿಯ ಸುಖವಿಲ್ಲ. ಅವರಿಗೆ ನಿಜವಾದ ಪರಮಾನಂದ ಬೇಕಾದರೆ ಅಹಂ ಭಾವವನ್ನು ತ್ಯಜಿಸಬೇಕು ಹಾಗೂ ನಾನೇ ಅವನು (ಶಿವ ಸೋಹಂ) ಎಂಬ ಭಾವ ಬೆಳೆಸಿಕೊಳ್ಳಬೇಕು (೭:೫೮೬).

**ಚರ :** ಜಂಗಮ. ಎಲ್ಲರೂ ಚಲಿಸುವವರೇ ಆದರೂ, ಯಾರು ಲಿಂಗದೊಂದಿಗೆ ತಾದಾತ್ಮ್ಯ ಪಡೆದಿರುತ್ತಾರೋ ಅವರು ನಡೆದಾಡುವ (ಚರ)ಲಿಂಗವೆನ್ನಿಸಿಕೊಳ್ಳುವರು. (ನೋಡಿ : **ಜಂಗಮ**).

**ಚರಮೂರ್ತಿ :** ಜಂಗಮ. ಜಂಗಮನು ಅಚಲ ಅಮೂರ್ತ ಪರಶಿವನ ಚರಮೂರ್ತಿ. (೮:೨೨೯)

**ಚರನಿಂದೆ :** ಲಿಂಗವು (ಪರಶಿವನು) ಚಲಿಸುವುದಿಲ್ಲ. ಆದರೆ ಜಂಗಮನಲ್ಲಿರುವ ಪರಶಿವನು ಜಂಗಮ ಚಲಿಸಿದಾಗಲೆಲ್ಲ ಚಲಿಸುತ್ತಾನೆ. ಜಂಗಮನು ಪರಶಿವನೊಡನೆ ಒಂದಾಗಿರುವುದರಿಂದ, ಜಂಗಮನೆಂದರೆ ಚರಲಿಂಗ. ಚರನಿಂದೆಯೆಂದರೆ ಚರಲಿಂಗದ ನಿಂದೆ. (೮:೫೯೮)

**ಚರಲಿಂಗ :** ಹಿಂದೆ, ಶಿವಭಕ್ತರು ಪ್ರವಾಸ ಹೋಗುವಾಗ ತಮ್ಮ ಜೊತೆಯಲ್ಲೇ ಒಂದು ಸಣ್ಣ ಪ್ರಮಾಣದ ಲಿಂಗವನ್ನು ಒಯ್ಯುತ್ತಿದ್ದರು. ಇದು ಅವರ ಜೊತೆಯಲ್ಲಿ ಚರಿಸುತ್ತಿದ್ದುದರಿಂದ ಅದಕ್ಕೆ ಚರಲಿಂಗವೆಂದು ಹೆಸರು.

**ಚಾತುರ್ವರ್ಣ್ಯ :** ವೈದಿಕ ಸಂಪ್ರದಾಯದ ಪ್ರಕಾರ, ವರ್ಣವೆಂದರೆ ಜಾತಿ. ವರ್ಣದ ಆಧಾರದ ಮೇಲೆ ಇಡೀ ಸಮಾಜವನ್ನು ವೈದಿಕರು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ನಾಲ್ಕು ಭಾಗ ಮಾಡಿದುದನ್ನು ವಚನಕಾರರು ಒಕ್ಕೊರಲಿನಿಂದ ಖಂಡಿಸುತ್ತಾರೆ.

**ಚಾರ್ವಾಕ :** 'ಚಾರ್ವಾಕ' ಎಂಬುದು ಒಂದು ಪಂಥ ಹೆಸರೋ, ಆ ಪಂಥವನ್ನು ಸ್ಥಾಪಿಸಿದವನ ಹೆಸರೋ ಗೊತ್ತಿಲ್ಲ. ಅವನ ಕೃತಿಗಳಾವುವೂ ಸಿಕ್ಕದೇ ಇದ್ದರೂ, ಅವನನ್ನು ಖಂಡಿಸಲೋಸ್ಕರ ಅವನ ವಿರೋಧಿಗಳು ಅವನ ಸಿದ್ಧಾಂತಗಳನ್ನು ಮೊದಲು ಮಂಡಿಸುತ್ತಾರೆ. ಅವನ ವಿರೋಧಿಗಳ ಪ್ರಕಾರ, ಚಾರ್ವಾಕನೆಂದರೆ ಲೋಕಾಯತ; ಅಂದರೆ, ಈ ಲೋಕವೇ ಅಂತಿಮ, ಇದಕ್ಕಿಂತ ಹೆಚ್ಚಿನದೇನೂ ಇಲ್ಲ ಎಂಬ ಸಿದ್ಧಾಂತವನ್ನು ಪ್ರತಿಪಾದಿಸುವವನು. ಚಾರ್ವಾಕನು ಪ್ರತ್ಯಕ್ಷ ಪ್ರಮಾಣವನ್ನು ಮಾತ್ರ ನಂಬುತ್ತಾನೆ. ಅವನ ಪ್ರಕಾರ ಇಡೀ ವಿಶ್ವ ಪೃಥ್ವಿ, ಅಪ್ಪು, ವಾಯು, ಅಗ್ನಿ, ಎಂಬ ನಾಲ್ಕು ತತ್ವಗಳಿಂದಾಗಿದೆ. ಆಕಾಶ ತತ್ವವು ಪ್ರತ್ಯಕ್ಷಕ್ಕೆ ಗೋಚರವಾಗುವುದಿಲ್ಲವಾದುದರಿಂದ ಆಕಾಶ ತತ್ವವು ಇಲ್ಲವೇ ಇಲ್ಲ. ಜೀವವೂ ಚೇತನವೂ ಈ ನಾಲ್ಕು ಭೂತಗಳಿಂದಲೇ ಆಗಿದೆ. ಎಲೆ, ಅಡಿಕೆ, ಸುಣ್ಣಗಳಲ್ಲಿ ಯಾವೊಂದರಲ್ಲಿ ಕೆಂಪು ಬಣ್ಣವಿಲ್ಲದಿದ್ದರೂ, ಅವು ಒಂದು ವಿಶಿಷ್ಟಪ್ರಮಾಣದಲ್ಲಿ ಕೂಡಿದರೆ ಹೇಗೆ ಕೆಂಪು ಬಣ್ಣವನ್ನು ಉತ್ಪತ್ತಿ ಮಾಡಬಲ್ಲವೋ, ಹಾಗೆಯೇ ಈ ನಾಲ್ಕು ಭೂತಗಳಲ್ಲಿ ಚೇತನವಿಲ್ಲದಿದ್ದರೂ, ಅವು ವಿಶಿಷ್ಟ ಪ್ರಮಾಣಗಳಲ್ಲಿ ಕೂಡಿದಾಗ ಕಲ್ಲು, ನದಿ, ಬೆಟ್ಟ, ಗಿಡ, ಮರ, ದನಕರುಗಳು, ಮನುಷ್ಯರು ಉತ್ಪತ್ತಿಯಾಗುತ್ತವೆ. ದೇಹಕ್ಕಿಂತ ಭಿನ್ನವಾದ ಆತ್ಮವಿಲ್ಲ. ದೇಹವೇ ಆತ್ಮ. ದೇಹ ಅಥವಾ ಆತ್ಮಕ್ಕೆ ಪುನರ್ಜನ್ಮವಿಲ್ಲ. ಲೋಕಕ್ಕಿಂತ ಹೆಚ್ಚಿನ ಪರಮಾತ್ಮನಿಲ್ಲ. ಇರುವುದೊಂದೇ ಜನ್ಮವೆಂದ ಮೇಲೆ, ನಾವು ಸಾಯುವುದರೊಳಗಾಗಿ ಆದಷ್ಟು ಸಂತೋಷ ಪಡಬೇಕು; ಪುನರ್ಜನ್ಮವಿಲ್ಲ; ಪರಮಾತ್ಮನೂ ಇಲ್ಲ; ಎಂದ ಮೇಲೆ ನಾವು ಸಂತೋಷಪಡುವ ಮಾರ್ಗ ಅನೈತಿಕವಾಗಿದ್ದರೂ ಸಂಕೋಚಪಡಬೇಕಾಗಿಲ್ಲ. ಸ್ವರ್ಗ ನರಕಗಳಿಲ್ಲವೆಂದ ಮೇಲೆ ಅನೈತಿಕರಾಗಲು ಹೆದರಬೇಕಾಗಿಲ್ಲ.

ಅನೇಕ ವಚನಕಾರರು ಚಾರ್ವಾಕರನ್ನು ಬಹಳ ಹೀನಾಯವಾಗಿ ಖಂಡಿಸಿದ್ದಾರೆ. ಅವರ ನಿರೀಶ್ವರವಾದವಾಗಲಿ, ಸುಖವಾದವಾಗಲಿ, ಅನಾತ್ಮಸಿದ್ಧಾಂತವಾಗಲಿ ಅವರಿಗೆ ಸ್ವೀಕಾರಾರ್ಹವಲ್ಲ.

**ಚಿತ್‌ಪ್ರಕಾಶ :** ಆತ್ಮವು ಅಜ್ಞಾನದಿಂದಾಗಿ (ಮರೆವಿನಿಂದಾಗಿ) ತನ್ನ ನಿಜಸ್ವರೂಪವನ್ನು ಮರೆತಿದೆ. ಆಧ್ಯಾತ್ಮಿಕ ಶಿಕ್ಷಣದಿಂದಾಗಿ ನಾವು ಅನುಭಾವವನ್ನು ಪಡೆದೆವಾದರೆ, ಆ ಸ್ಥಿತಿಯಲ್ಲಿ ನಮ್ಮ ಆತ್ಮವು ಪ್ರಕಾಶಿಸುವುದನ್ನು ಅರಿಯಬಹುದು. ರಕ್ತಮಾಂಸದ ಕಣ್ಣುಗಳಿಂದ ನೋಡುವ ದೀಪದ ಬೆಳಗು, ಬೆಂಕಿಯ ಬೆಳಕು, ಸೂರ್ಯನ ಬೆಳಗು, ಮುಂತಾದುವೆಲ್ಲಾ ಭೌತಪ್ರಕಾಶಗಳಾದರೆ, ಅನುಭಾವದಲ್ಲಿ ಗೋಚರವಾಗುವ ಆತ್ಮದ ಪ್ರಕಾಶವು ಚಿತ್‌ಪ್ರಕಾಶವೆನಿಸಿಕೊಳ್ಳುತ್ತದೆ. (೩:೧೨೪೬)

**ಚಿತ್‌ಶಕ್ತಿ :** ನೋಡಿ : **ಶಕ್ತಿ.**

**ಚಿತ್‌ಶಿಖಿ :** ಸಮಾಧಿ ಸ್ಥಿತಿಯಲ್ಲಿರುವ ಶಿವಯೋಗಿಯ ಅಂತಶ್ಚಕ್ಷುವಿಗೆ ಕೋಟಿಸೂರ್ಯ ಪ್ರಭೆಯ ಬೆಳಕು ಕಾಣಿಸುವುದು. ಆ ಬೆಳಕು ಭೌತಿಕ ಬೆಳಕಲ್ಲ; ಚಿದ್ಬೆಳಗು ಅಥವಾ ಚಿತ್‌ಶಿಖಿ (ಚಿದಗ್ನಿ). (೧೧:೬೦೧)

**ಚಿತ್ತ :** ಈ ಪದವು (ವಿಶಾಲಾರ್ಥದಲ್ಲಿ) ಅಂತಃಕರಣಗಳೆಲ್ಲಕ್ಕೂ, ಆತ್ಮಕ್ಕೂ ಅನ್ವಯಿಸಿದರೆ, ಸಂಕುಚಿತ ಅರ್ಥದಲ್ಲಿ ಅಂತಃಕರಣ ಚತುಷ್ಟಯಗಳಲ್ಲೊಂದಾದ ಚಿತ್ತಕ್ಕಷ್ಟೇ ಅನ್ವಯಿಸುತ್ತದೆ. ಚಿತ್ತದ ದೆಸೆಯಿಂದಾಗಿ ಕೋಪ, ಮೋಹ, ಕಾಮ, ಮುಂತಾದ ಸಂವೇಗಗಳಿಗೆ ಒಳಗಾಗುತ್ತೇವೆ. ಆದುದರಿಂದ ಚಿತ್ತಶಾಂತಿ ಆಧ್ಯಾತ್ಮಿಕ ಪ್ರಗತಿಗೆ ಬಹಳ ಅವಶ್ಯಕ.

**ಚಿತ್ತಪರಿಪಾಕ :** ಚಿತ್ತ ಪರಿಶುದ್ಧಿ. ಚಿತ್ತವು ಲಿಂಗದಲ್ಲಿ ನೆಲೆಗೊಳ್ಳಲು ಬೇಕಾದ ಪರಿಶುದ್ಧಿ. ಆಧ್ಯಾತ್ಮಿಕ ಬೆಂಕಿಯಲ್ಲಿ ತಪ್ತವಾದರೆ ಚಿತ್ತ ಶುದ್ಧಿಯಾಗುತ್ತದೆ. (೪:೬೩೯)

**ಚಿತ್ತಬಿದಿರು :** ನೂರಾರು ರೀತಿಯ ವ್ಯಾವಹಾರಿಕ ಕರ್ಮಗಳನ್ನು ಮಾಡುವ ಚಿತ್ತ; ಬಿದಿರು ಮೆಳೆ ಹೇಗೆ ಎತ್ತರವಾಗಿ ಬೆಳೆದು ಅದರಾಚೆಗೆ ಇರುವುದನ್ನು ತೋರಗೊಡುವುದಿಲ್ಲವೊ ಹಾಗೆಯೇ, ಚಿತ್ತವು ತನ್ನ ಲೌಕಿಕ ವ್ಯಾಪಾರವನ್ನೇ ದೊಡ್ಡದು ಮಾಡಿ ಅದಕ್ಕಿಂತ ಹೆಚ್ಚಿನದಾದ ಆಧ್ಯಾತ್ಮಿಕ ಧ್ಯೇಯವನ್ನು ಚಿಂತಿಸಗೊಡುವುದಿಲ್ಲ.

**ಚಿತ್ತಸುಯಿದಾನ :** ಚಿತ್ತಶಾಂತಿ. ಚಿತ್ತವು ಕೋಪ, ಕಾಮ, ಲೋಭ, ಮೋಹ, ಮುಂತಾದ ಸಂವೇಗಗಳಿಗೊಳಗಾದರೆ, ಆಧ್ಯಾತ್ಮಿಕ ಜೀವನವು ಕುಂಠಿತವಾಗುತ್ತದೆ. ಆದುದರಿಂದ ಸಾಧಕನು ಚಿತ್ತಸುಯಿಧಾನವನ್ನು ಕಾಯ್ದುಕೊಳ್ಳಬೇಕು. (೫:೧೦೫೫)

**ಚಿತ್ತು :** ಕೆಲವು ವೇಳೆ 'ಚಿತ್ತು' ಎಂಬ ಪದಕ್ಕೆ ಸ್ವ-ಪ್ರಜ್ಞೆಯಿಲ್ಲದ ಚಿತ್ತು ಎಂಬ ಅರ್ಥವಿದ್ದರೆ, ಮತ್ತೆ ಕೆಲವು ವೇಳೆ ಅದಕ್ಕೆ ಸ್ವ-ಪ್ರಜ್ಞೆಯುಳ್ಳ ಚಿತ್ತು ಎಂಬರ್ಥವಿರುವುದು ಕಂಡುಬರುತ್ತದೆ. ಉದಾಹರಣೆಗೆ 'ಆದಿ ಅನಾದಿಯಿಂದತ್ತತ್ತಲಾದ ನಿರಾಕಾರ ಪರವಸ್ತು ತನ್ನ ಸ್ವರೂಪವ ತಾನರಿಯದೆ ಅನಂತ ಕಲ್ಪಕಲ್ಪಾಂತರ ಇರ್ದು, ತನ್ನ ಸ್ವಲೀಲೆಯಿಂದ ತಾನೇ ಜಗತ್‌ಸೃಷ್ಟಿ ನಿಮಿತ್ತವಾಗಿ ನೆನವುದೋರಲು, ಆ ನೆನವು ನಿರ್ಧಾರವಾಗಿ ಚಿತ್ತೆನಿಸಿತ್ತು' (೧೦:೧೩)

ಎಂಬಲ್ಲಿ, ಶೂನ್ಯಕ್ಕೂ ಚಿತ್ತಿಗೂ ವ್ಯತ್ಯಾಸವಿರುವುದು ಸ್ಪಷ್ಟವಾಗುತ್ತದೆ. ಆದಿ ಅನಾದಿಯಿಂದತ್ತತ್ತಲಾದ ಪರವಸ್ತು ಅನಂತಕಾಲ ತಾನೊಂದೆ ಇತ್ತು, ಆದರೆ ಅದಕ್ಕೆ ತನ್ನ ಸ್ವರೂಪದ ಬಗ್ಗೆ ಅರಿವಿರಲಿಲ್ಲ. ಇಂಥ ಸ್ವ- ಪ್ರಜ್ಞೆ ಇಲ್ಲದ ಪರವಸ್ತುವನ್ನು ವಚನಕಾರರು ಶೂನ್ಯ, ಮಹಾಶೂನ್ಯ, ಮುಂತಾಗಿ ಕರೆದಿದ್ದಾರೆ. ಇಂಥ ಶೂನ್ಯದಲ್ಲಿ ಯಾವಾಗಲೋ ಸ್ವ ಪ್ರಜ್ಞೆ ಉಂಟಾಗಿ, ತಾನೊಂದೇ ಇರುವುದು ಅರಿವಾಗಿ, ಜಗತ್ತನ್ನು ಸೃಷ್ಟಿಸಬೇಕು ಎಂಬ ನೆನಹು ತಲೆದೋರಿ, ನೆನಹೇ ಗಟ್ಟಿಗೊಂಡರೆ, ಅದು ಚಿತ್ತೆನಿಸಿಕೊಳ್ಳುತ್ತದೆ. ಹಾಗಾದರೆ ಶೂನ್ಯದಲ್ಲಿ ಚಿತ್ತು ಇರಲಿಲ್ಲವೋ? ಆಗಲೂ ಇತ್ತು. ಅಂದರೆ, ಶೂನ್ಯವು ಚಿತ್ತಿನ ಒಂದು ಸ್ಥಲವಾದರೆ, ಸೃಷ್ಟಿಮಾಡಬೇಕೆಂಬ ನೆನಹು (ನಿರ್ಧಾರ) ಮತ್ತೊಂದು ಸ್ಥಲ. ನಿರ್ಧಾರಕ್ಕೆ ಚಿತ್ ಬೇಕೇ ಬೇಕು. ಏಕೆಂದರೆ, ಜಡ (ಅಚಿತ್) ವಸ್ತುಗಳು ಸೃಷ್ಟಿಸಬೇಕೆಂದು ನಿರ್ಧರಿಸುವುದಿಲ್ಲ. ಅಲ್ಲದೆ, ಶೂನ್ಯಸ್ಥಲದಲ್ಲೇ ಚಿತ್ ಇಲ್ಲದಿದ್ದರೆ, ಪರಶಿವನಿಗೆ ನಿರ್ಧಾರ ಸ್ಥಲದಲ್ಲಿ ಚಿತ್ತು ಎಲ್ಲಿಂದ ಬರಲು ಸಾಧ್ಯ? ಚಿತ್ತು ಪರಶಿವನ ಮುಖ್ಯ ಲಕ್ಷಣಗಳಲ್ಲೊಂದಾಗಿರುವದರಿಂದಲೇ, ಅವನನ್ನು ಚಿದಾನಂದ. ಚಿದಾಕಾಶ, ಚಿತ್‌ಸೂರ್ಯ, ಚಿತ್‌ಪ್ರಕಾಶ, ಚಿದ್ಘನ ಮುಂತಾಗಿ ಕರೆಯುವುದು.

ಈ ಚಿತ್ತನ್ನು ತೋಂಟದ ಸಿದ್ಧಲಿಂಗರು ನಿಃಕಲ ಲಿಂಗವೆಂದು ಕರೆದಿದ್ದಾರೆ. ಅವರೂ ಸಹ ಚಿತ್ತು ಎಂಬ ಪದವನ್ನು ಸೃಷ್ಟಿಗೆ ಸಂಬಂಧಿಸಿದಂತೆ ಉಪಯೋಗಿಸಿದ್ದರೂ, ಅಲ್ಲಿ ಚಿತ್ತು ಎಂಬ ಪದಕ್ಕೆ ಬೇರೆ ಅರ್ಥವಿದೆ. ಅವರ ಪ್ರಕಾರ "ನಿಃಕಲ ಶಿವತತ್ವದಲ್ಲಿ ಜ್ಞಾನಚಿತ್ತು ಉದಯವಾಯಿತ್ತು. ಆ ಚಿತ್ತಿನಿಂದ ಅಕಾರ, ಉಕಾರ, ಮಕಾರಗಳೆಂಬ ಅಕ್ಷರ ತ್ರಯಗಳಾದವು; ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ. ಇಂತೀ ತ್ರಿವಿಧಕ್ಕೆ ತಾಯಿ ಚಿತ್ತು".

**ಚಿದಂಗ :** ಅಂಗವೆಂದರೆ ಪ್ರಕೃತಿಯನೊಡಗೂಡಿದ ಆತ್ಮ ಎಂದಾದುದರಿಂದ, ಅಥವಾ ಮಾನವ ಎಂದಾಗುವುದರಿಂದ, ಅದು ಚಿದಂಗವು ಹೇಗಾಗಲು ಸಾಧ್ಯ, ಎಂಬ ಪ್ರಶ್ನೆ ಏಳುತ್ತದೆ. ಆತ್ಮನನ್ನುಳಿದು ಉಳಿದೆಲ್ಲವೂ ಶಕ್ತಿಯ ವಿವಿಧ ರೂಪಗಳಾದುದರಿಂದ, ಅವೆಲ್ಲವೂ ಕಲಾಶಕ್ತಿಗಳೆನಿಸಿಕೊಳ್ಳುತ್ತವೆ. ಆಧ್ಯಾತ್ಮಿಕ ಸಾಧನೆಯಿಂದಾಗಿ ಅವುಗಳ ಅವಗುಣಗಳೆಲ್ಲ ಹೋದಾಗ, ಅವೇ ಭಕ್ತಿ ಶಕ್ತಿಗಳೆನಿಸಿಕೊಳ್ಳುತ್ತವೆ. ಹೀಗೆ ಸಾಧಾರಣ ಮನುಷ್ಯ ಅಂಗನೆನಿಸಿಕೊಂಡರೆ, ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಿದವನು ಚಿದಂಗನೆನಿಸಿಕೊಳ್ಳುತ್ತಾನೆ.

ಈ ಚಿದಂಗದಲ್ಲಿ ಗುರುಸಿದ್ಧದೇವರೆಂಬ ವಚನಕಾರರ ಪ್ರಕಾರ ೪೪ ತತ್ವಗಳಿವೆ. ಅವು ಯಾವುವೆಂದರೆ,

೧. ಐದು ಭಕ್ತಿಗಳು : ಸತ್ಕ್ರಿಯೆ, ಸಮ್ಯಜ್ಞಾನ, ಸತ್ಕಾಯಕ, ಸತ್ಪಾತ್ರ ಭಿಕ್ಷ, ಮಹಾಜ್ಞಾನ.

೨. ಕರ್ಮೇಂದ್ರಿಯಗಳು : ಪಾದ, ಪಾಣಿ, ವಾಕ್ಕು, ಪಾಯು, ಮತ್ತು ಗುಹ್ಯ.

೩. ಐದು ಜ್ಞಾನೇಂದ್ರಿಯಗಳು : ಕಣ್ಣು, ಕಿವಿ, ನಾಲಗೆ, ತ್ವಕ್ಕು, ಮೂಗು.

೪. ಐದು ವಿಷಯಗಳು : ರೂಪ, ರಸ, ಗಂಧ, ಸ್ಪರ್ಶ, ಶಬ್ದ.

೫. ಐದು ವಾಯುಗಳು : ಉದಾನ, ಅಪಾನ, ವ್ಯಾನ, ಸಮಾನ, ಪ್ರಾಣ.

೬. ನಾಲ್ಕು ಕರಣಗಳು : ಚಿತ್ತ, ಮನಸ್ಸು, ಬುದ್ಧಿ, ಅಹಂ.

೭. ಉದರ.

೮. ಐದು ವರ್ಣಗಳು.

೯. ಐದು ನಾದಗಳು.

೧೦. ಚತುರ್ವಿಧ ಫಲ : ಗುರು, ಲಿಂಗ, ಜಂಗಮ ಮತ್ತು ಪ್ರಸಾದ (೧೦:೬೯೫).

**ಚಿದಂಗನೆ :** ಚಿದ್ವಸ್ತುವಾದ ಆತ್ಮ (ಅಂಗ). ಸಾಧಕನು ತನ್ನ ದೇಹ, ಇಂದ್ರಿಯ, ಅಂತಃಕರಣ ಮತ್ತು ಆತ್ಮ-ಇವೆಲ್ಲವನ್ನೂ ಪರಶಿವನಿಗೆ ಅರ್ಪಿಸುವ ಮೂಲಕ ಹಾಗೂ ತಾನೆಂಬ ಅಹಂಕಾರವನ್ನು ಕಳೆದುಕೊಳ್ಳುವ ಮೂಲಕ, ಅವನು ಪರಶಿವನಿಗೆ ಪೂರ್ಣ ಶರಣಾಗಿದ್ದಾನೆ, ಅಥವಾ ಆತ್ಮಸಮರ್ಪಣೆ ಮಾಡಿಕೊಂಡಿದ್ದಾನೆ. ಅಲ್ಲದೆ, ಅವನು 'ಪರಶಿವನು ನನ್ನ ದೇಹದ ಮೂಲಕ ಅನುಭವಿಸುತ್ತಾನೆ' ಎಂದು ತಿಳಿದುಕೊಳ್ಳುತ್ತಾನೆ. ಇದನ್ನು ಪತಿವ್ರತೆಯ ಉಪಮೆಯ ಮೂಲಕ ವಿವರಿಸಬಹುದು. ಪತಿವ್ರತೆಯು ಹೇಗೆ ತಾನು ಗಂಡನಿಗಾಗಿ ಇದ್ದೇನೆ, ತನ್ನ ಗಂಡನ ಸುಖವೇ ತನ್ನ ಸುಖ ಎಂದು ಹೇಗೆ ತಿಳಿದುಕೊಳ್ಳುತ್ತಾಳೆಯೋ ಹಾಗೆಯೇ ಶರಣಸ್ಥಲದ ಸಾಧಕನು ತಾನು ಪರಶಿವನ ಭೋಗಕ್ಕಾಗಿ ಎಂದು ತಿಳಿದುಕೊಳ್ಳುತ್ತಾನೆ. ಈ ಕಾರಣಕ್ಕಾಗಿಯೇ ಶರಣನು ತನ್ನನ್ನು ಪರಶಿವನ ಸತಿ (ಅಂಗನೆ) ಎಂದು ತಿಳಿದುಕೊಳ್ಳುತ್ತಾನೆ.

**ಚಿದಂಗವ ಮಾಡುವುದು :** ನಮ್ಮ ದೇಹವು (ಅಂಗವು) ಪಂಚಭೂತಗಳಿಂದಾಗಿರುವುದರಲ್ಲಿ ಯಾವ ದೋಷವೂ ಇಲ್ಲ. ದೋಷವಿರುವುದು ಅವುಗಳನ್ನು ನಾವು ನಿಯಂತ್ರಿಸಲು ಸೋಲುವಲ್ಲಿ. ಒಂದು ವೇಳೆ ನಾವು ಅವುಗಳನ್ನು ನಿಯಂತ್ರಿಸುವಲ್ಲಿ ಗೆದ್ದರೆ, ಅಂದರೆ, ಅವುಗಳ ದುಷ್ಪರಿಣಾಮಗಳನ್ನು ತಡೆದರೆ, ಆಗ ನಮ್ಮ ಅಂಗವು ಲೋಕಾಭಿಮುಖವಾಗಿ ವರ್ತಿಸುವುದರ ಬದಲು ಲಿಂಗಾಭಿಮುಖವಾಗಿ ವರ್ತಿಸುತ್ತದೆ. ಆಗ, ನಮ್ಮ ಅಂಗದ ಪ್ರತಿಯೊಂದು ಭಾಗವೂ ಪರಶಿವನನ್ನು ಪ್ರತಿಫಲಿಸಲು ಪ್ರಾರಂಭಿಸುತ್ತದೆ; ಅಥವಾ ಚಿದಂಗವಾಗುತ್ತದೆ. (೫:೯೬೧)

**ಚಿದಹಂಕಾರ :** ಚಿತ್ತಿನ ಗುಣಗಳನ್ನು ಅಳವಡಿಸಿಕೊಂಡ ಅಹಂಕಾರ. ಸಾಂಖ್ಯರ ಪ್ರಕಾರ, ಅಹಂಕಾರವು ಪ್ರಕೃತಿಯ ವಿಕಾರ; ವಚನಕಾರರ ಪ್ರಕಾರ, ಅದು ಶಕ್ತಿಯ ವಿಕಾರ. ಅಂತೂ ಅಹಂಕಾರದ ದೆಸೆಯಿಂದಾಗಿ ನಾವು ನಮ್ಮನ್ನೆ ಕೇಂದ್ರವನ್ನಾಗಿ ಮಾಡಿಕೊಂಡು ಆಲೋಚಿಸುತ್ತೇವೆ, ದುಃಖಿಸುತ್ತೇವೆ, ಸುಖಿಸುತ್ತೇವೆ, ಮತ್ತು ಅನೇಕ ರೀತಿಯ

ಕರ್ಮಗಳನ್ನು ಮಾಡುತ್ತೇವೆ. ಆದರೆ ಆಧ್ಯಾತ್ಮಿಕ ಪ್ರಗತಿಯ ಉನ್ನತ ಹಂತವನ್ನು ತಲುಪಿದ ಸಾಧಕನು ಅಹಂಕಾರವನ್ನು ಮರ್ದನ ಮಾಡದೆ, ಅದನ್ನು ಆಧ್ಯಾತ್ಮಿಕ ಪ್ರಗತಿಗೆ, ಸದುಪಯೋಗಪಡಿಸಿಕೊಳ್ಳುತ್ತಾನೆ. ನಾನು ಪ್ರಕೃತಿ ಗುಣವುಳ್ಳವನಲ್ಲ, ನಾನು ಚಿತ್ ಸ್ವರೂಪನು ಎಂದು ತಿಳಿಯುವ ಅಹಂಕಾರವೇ ಚಿದಹಂಕಾರ. (೨:೧೫೬೩)

**ಚಿದಾದಿತ್ಯ :** ಧ್ಯಾನದ ಒಂದು ಹಂತದಲ್ಲಿ ಬಾಹ್ಯಪ್ರಜ್ಞೆಯನ್ನು ಕಳೆದುಕೊಂಡ ಸಾಧಕನಿಗೆ ತನ್ನ ಚಿತ್ ಒಂದೇ ಇರುವುದರ ಅನುಭವವಾಗುತ್ತದೆ. ಹಾಗೂ ಆ ಚಿತ್ ಎಲ್ಲ ಮಲಗಳನ್ನೂ ಕಳೆದುಕೊಂಡು ಜಾಜ್ವಲ್ಯಮಾನವಾಗಿ ಕಾಣಿಸಿಕೊಳ್ಳುತ್ತದೆ. ಹೀಗೆ ಕಾಣಿಸಿಕೊಂಡ ಸೂರ್ಯನಷ್ಟು ಪ್ರಕಾಶಮಾನವಾದ ಚಿತ್ತೇ ಚಿದಾದಿತ್ಯ ಅಥವಾ ಚಿತ್ಸೂರ್ಯ. ಆದರೆ ಇದು ಜ್ಞಾನಚಕ್ಷುವಿಗೆ ಕಾಣುವ ಆದಿತ್ಯನೇ ಹೊರತು, ಮಾಂಸರಕ್ತಗಳ ಕಣ್ಣಿಗೆ ಕಾಣುವ ಆದಿತ್ಯನಲ್ಲ. (೮:೧೧೪೦,೯:೧೫೬)

**ಚಿದಾನಂದ :** ರುಚಿ, ನೋಟ, ಮುಂತಾದ ಭೌತ ವಿಷಯಗಳನ್ನು ಇಂದ್ರಿಯಗಳ ಮೂಲಕ ಪಡೆದು ಅನುಭವಿಸುವ ಸುಖಕ್ಕೆ ಇಂದ್ರಿಯ ಸುಖ ಅಥವಾ ವಿಷಯ ಸುಖವೆನ್ನುತ್ತಾರೆ. ಇದನ್ನು ಅನುಭವಿಸಲು ವಿಷಯಗಳೂ ಬೇಕು, ಇಂದ್ರಿಯಗಳೂ ಬೇಕು, ಹಾಗೂ ಅಂತಃ ಕರಣಗಳೂ ಆತ್ಮವೂ ಬೇಕು. ಆದರೆ ಆತ್ಮವು ಇಂದ್ರಿಯ, ಅಂತಃಕರಣಗಳ ಸಂಗದಿಂದ ಪ್ರತ್ಯೇಕವಾದಾಗ (ಅಥವಾ ಅವುಗಳ ಪ್ರಭಾವ ಆತ್ಮದ ಮೇಲೆ ಇಲ್ಲದಿದ್ದಾಗ), ಆತ್ಮವು ಒಂದೇ ಇದ್ದಾಗ, ಅದಕ್ಕೆ ಉಂಟಾಗುವ ಸುಖವನ್ನು ಚಿದಾನಂದ ಎಂದು ಕರೆಯಲಾಗುತ್ತದೆ. ಚಿದಾನಂದವನ್ನು ಪಡೆಯಲು ವಿಷಯಗಳು ಬೇಕಿಲ್ಲ; ಅಲ್ಲದೆ, ಚಿತ್ತು (ಆತ್ಮ) ಪಡೆಯುವ ಆನಂದ ಅದಕ್ಕೆ ಹೊಸತೂ ಅಲ್ಲ. ಏಕೆಂದರೆ ಅದು ತನ್ನ ಮೂಲ ಸ್ವರೂಪದಲ್ಲಿ ಯಾವಾಗಲೂ ಆನಂದಿತವಾಗೇ ಇರುತ್ತದೆ.

**ಚಿದ್ಭೂತ ಪಂಚಕಗಳು :** ನಮ್ಮ ಹಿಂದಿನ ಜನ್ಮದ ಕರ್ಮಗಳಿಂದಾಗಿಯೂ, ನಮ್ಮ ಈ ಜನ್ಮದ ಕರ್ಮಗಳಿಂದಾಗಿಯೂ ಪೃಥ್ವಿ, ಅಪ್ಪು, ತೇಜ, ವಾಯು ಮತ್ತು ಆಕಾಶ ತತ್ವಗಳು (ಅಂದರೆ, ಅವುಗಳಿಂದಾದ ದೇಹಾದಿಕರಣಗಳು) ನಮ್ಮನ್ನು ಅನೇಕ ರೀತಿಯಲ್ಲಿ ಬಾಧಿಸುತ್ತವೆ. ಆದರೆ ಹೀಗೆ ನಮ್ಮನ್ನು ಬಾಧಿಸುವುದೇ ಅವುಗಳ ಧರ್ಮವಲ್ಲ. ಅವುಗಳನ್ನು ನಮ್ಮ ಆಧ್ಯಾತ್ಮಿಕ ಶಕ್ತಿಯಿಂದಾಗಿ ಪರಿವರ್ತಿಸಬಹುದು. ಅವುಗಳನ್ನು ಪರಿವರ್ತಿಸುವ ಆಧ್ಯಾತ್ಮಿಕ ಶಕ್ತಿಗಳಿಗೆ ಭಕ್ತಿಶಕ್ತಿಗಳೆಂದು ಹೆಸರಿದ್ದರೆ, ಅವುಗಳು ಪರಿವರ್ತಿತವಾದಾಗ ಆ ಪಂಚಭೂತಗಳನ್ನು ಚಿದ್ಭೂತವೆಂದು ಕರೆಯುತ್ತಾರೆ. ವಾಸ್ತವವಾಗಿ ಚಿದ್ವಸ್ತುವು ಭೌತವಲ್ಲ, ಭೌತವಸ್ತುವು ಚಿದ್ವಸ್ತುವಲ್ಲ ಆದರೂ ಭೂತಪಂಚಕಗಳನ್ನು ಚಿದ್ಭೂತಗಳೆಂದು ಕರೆಯಲು ಒಂದು ಸ್ಪಷ್ಟ ಕಾರಣವಿದೆ. ಅದೆಂದರೆ : ಪಂಚಭೂತಗಳು ಸ್ವಾಭಾವಿಕವಾಗಿ ನಮ್ಮನ್ನು ಬಾಧಿಸದಿದ್ದರೂ, ಅವು ನಮ್ಮನ್ನು ಬಾಧಿಸುವಂತೆ ಮತ್ತು ಸಂಸಾರಕ್ಕೆ ನಮ್ಮನ್ನು ಬಂಧಿಸುವಂತೆ ಮಾಡುವುದು ನಾವೇ. ಅವುಗಳನ್ನು ಬಂಧಿಸದಂತೆ

ಮಾಡಬೇಕಾದರೆ ಅವುಗಳಲ್ಲಿ ಆಧ್ಯಾತ್ಮಿಕ ಪರಿವರ್ತನೆಯಾಗಬೇಕು. ಉದಾಹರಣೆಗೆ, ಪೃಥ್ವೀ ತತ್ವದಿಂದಾದ ದೇಹದ ದೋಷಗಳು ಹೋಗಬೇಕಾದರೆ, ಅದರ ಮೂಲ ಕಾರಣವಾದ ಅನ್ನವು ಪ್ರಸಾದವಾಗಬೇಕು. ಕುಡಿಯುವ ನೀರು ಪಾದೋದಕವಾಗಬೇಕು, ಇತ್ಯಾದಿ. ಆಗ ನಮ್ಮ ದೇಹವು ಚಿದ್ ಪೃಥ್ವಿ, ಚಿದಪ್ಪು, ಚಿದ್ವಾಯು, ಚಿದಗ್ನಿ ಮತ್ತು ಚಿದಾಕಾಶಗಳಿಂದ ಆದ ಪ್ರಸಾದಕಾಯವಾಗಿದೆ ಎಂದರ್ಥ. (೧೨:೪೬)

**ಚುಳುಕು :** ಚೈತನ್ಯ ಸ್ವರೂಪನಾದ ಪರಶಿವನಿಗೆ ರೂಪವಿಲ್ಲ. ಇಷ್ಟಲಿಂಗವು ಅಂಥ ಪರಶಿವನ ಸ್ಥೂಲ ರೂಪ. ಅದೇ ಪರಶಿವನಲ್ಲ, ಅದು ಕೇವಲ ಅವನ ಕುರುಹು. ಭಕ್ತರ ಅನುಕೂಲಕ್ಕೆಂದು ಗುರುವು ಅಪರಿಮಿತ ಚೈತನ್ಯವನ್ನು ಪರಿಮಿತ ಭೌತವಸ್ತುವನ್ನಾಗಿ ಮಾಡಿಕೊಟ್ಟಿದುದರಿಂದ, ಅದು ಚುಳುಕಾಯಿತು (ಸಣ್ಣದಾಯಿತು).

**ಚೈತನ್ಯ ಜಂಗಮ :** ಚೈತನ್ಯವು ಜಂಗಮವಲ್ಲ (ಚಲಿಸುವುದಿಲ್ಲ). ಆದರೆ ಮಾನವನು ಪರಶಿವನೊಂದಿಗೆ ಸಾಮರಸ್ಯ ಸಾಧಿಸಿಕೊಂಡಾಗ ತಾನೇ ಶಿವನೆಂಬ ಐಕ್ಯಭಾವ ಅವನಿಗೆ ಉಂಟಾಗುತ್ತದೆ. ಆಗ ಚೈತನ್ಯದ ಸ್ಥೂಲ ರೂಪವಾದ ಅವನು ಚಲಿಸುವುದರಿಂದ ಅವನು ಜಂಗಮಲಿಂಗ ಅಥವಾ ಚೈತನ್ಯ ಜಂಗಮನೆನಿಸಿಕೊಳ್ಳುತ್ತಾನೆ.

**ಛಾಯಾಜೀವ :** ವಚನಕಾರರ ಪ್ರಕಾರ ಪ್ರತಿಯೊಬ್ಬ ಜೀವನೂ ಪರಶಿವನ ಭಾಗ (ಅಥವಾ ಅಂಗ). ಜೀವನು ತಾನು ಪ್ರತ್ಯೇಕ ವ್ಯಕ್ತಿ ಎಂದೂ ಪರಶಿವನೇ ಬೇರೆ ಎಂದೂ ತಿಳಿದುಕೊಂಡರೆ, ಅಂತಹ ಜೀವನಿಗೆ ಅಜ್ಞಾನವೆಂಬ ಛಾಯೆ ಮುಸುಕಿದೆ ಎಂದರ್ಥ. ಅಂಥ ಅಜ್ಞಾನದಿಂದ (ಛಾಯೆಯಿಂದ) ಆಚ್ಛಾದಿತನಾದವನೇ ಛಾಯಾಜೀವ. ಜೀವನು ಅನುಭಾವವನ್ನು ಸಂಪಾದಿಸಿ ಲಿಂಗಾಂಗ ಸಾಮರಸ್ಯ ಪಡೆದಾಗ ಅವನಲ್ಲಿದ್ದ ಛಾಯಾಜೀವತ್ವ ಹೋಗಿ, ಅಲ್ಲಿ ಲಿಂಗಪ್ರಕಾಶ ನೆಲೆಸುತ್ತದೆ. (೧೩:೨೪೧೪)

**ಜಂಗಮ :** ಇದಕ್ಕೆ ಇರುವ ಅರ್ಥಗಳನ್ನು ಮುಖ್ಯವಾಗಿ ಎರಡು ಭಾಗ ಮಾಡಬಹುದು.

೧. ಜಂಗಮ ಎಂಬ ಉಪಜಾತಿಯಲ್ಲಿ ಹುಟ್ಟಿದವನು.

೨. ಚಲಿಸುವವನು

ವಚನಕಾರರು ಮೊದಲೆಲ್ಲಾ ಎರಡನೆಯ ಅರ್ಥದಲ್ಲೇ ಆ ಪದವನ್ನು ಬಳಸಿದ್ದಾರೆ. ಆದರ ಇಲ್ಲಿ 'ಚಲನೆ' ಎಂಬುದಕ್ಕೂ ವಿವಿಧ ಅರ್ಥಗಳಿರುವಂತೆ ಕಾಣುತ್ತದೆ. ಪ್ರತಿಯೊಬ್ಬರಲ್ಲೂ ಪರಶಿವ ಅಂತಸ್ಥನಾಗಿರುವುದರಿಂದ ಹಾಗೂ ಎಲ್ಲರೂ ಚಲಿಸುವುದರಿಂದ, ಎಲ್ಲರೂ ಜಂಗಮರೇ. ಒಂದು ವಿಶಾಲಾರ್ಥದಲ್ಲಿ ಮನುಷ್ಯರಷ್ಟೇ ಅಲ್ಲ, ಚಲಿಸುವ ಪ್ರಾಣಿಗಳೂ 'ಜಂಗಮ' ವರ್ಗಕ್ಕೆ ಸೇರುತ್ತವೆ.

ಸಂಕುಚಿತ ಅರ್ಥದಲ್ಲಿ ಯಾರು ತನ್ನಲ್ಲಿ ಪರಶಿವನನ್ನು ಪ್ರತಿಷ್ಠಾಪಿಸಿಕೊಂಡಿದ್ದಾನೋ, ಅವನು ಮಾತ್ರ ಜಂಗಮ. ಅಂಥವನು ಅನುಭಾವದ ಮೂಲಕ ಪರಶಿವನನ್ನು

ಸಾಕ್ಷಾತ್ಕರಿಸಿಕೊಂಡು, ತನ್ನನ್ನು ಪರಶಿವನಿಂದ ಪ್ರತ್ಯೇಕಿಸಿಕೊಳ್ಳದೆ, ತಾನು ಪರಶಿವನೊಂದಿಗೆ ಒಂದಾಗಿರುವ ಭಾವನೆಯನ್ನು ತಳೆದಿರುತ್ತಾನೆ. ಬೇರೆಯವರ ದೃಷ್ಟಿಯಲ್ಲಿ ಅವನು ಬೇರೆ, ಲಿಂಗ (ಪರಶಿವ) ಬೇರೆ. ಆದರೆ ಲಿಂಗಾಂಗ ಸಾಮರಸ್ಯ ಪಡೆದವನಲ್ಲಿ ತಾನು ಲಿಂಗದ ಅಂಗ (ಅಥವಾ ತಾನು ಲಿಂಗ) ಎಂಬ ಭಾವನೆ ಬೇರೂರಿರುತ್ತದೆ. ಆದುದರಿಂದ ಅವನು ಲಿಂಗ - ನಡೆದಾಡುವ ಲಿಂಗ. ಈ ಅರ್ಥದಲ್ಲಿ ಐಕ್ಯಸ್ಥಲ ತಲುಪಿದವರೆಲ್ಲಾ ಜಂಗಮರೇ. ಈ ಕಾರಣದಿಂದಲೆ ವಚನಕಾರರು ಕಾವಿಬಟ್ಟೆ, ರುದ್ರಾಕ್ಷಿ ಮಾಲೆ ಮತ್ತು ವಿಭೂತಿ, ಕೈಯಲ್ಲಿ ದಂಡ ಮುಂತಾದ ಲಾಂಛನವಿದ್ದವರೆಲ್ಲಾ ಜಂಗಮರಲ್ಲ ಎಂದೂ, ಜಂಗಮರಲ್ಲಿ ಜಾತಿಯನರಸಬಾರದು ಎಂದೂ ಹೇಳಿದ್ದಾರೆ.

ಜಂಗಮನು ಗುರುವು ಮಾಡುವ ಕರ್ತವ್ಯಗಳನ್ನು ಮಾಡಬಹುದಾದರೂ, ಅವನ ಮುಖ್ಯ ಉದ್ದೇಶ ಸಮಾಜದ ಉದ್ಧಾರ. ಮೊದಲನೆಯದಾಗಿ, ಅವನು ವೀರಶೈವ ಧರ್ಮದ ದಾರ್ಶನಿಕ, ಧಾರ್ಮಿಕ ಮತ್ತು ನೈತಿಕ ತತ್ವಗಳನ್ನು ಪ್ರಚಾರ ಮಾಡಬೇಕು; ಎರಡನೆಯದಾಗಿ, ಎಲ್ಲರೂ ಶಿವಪಥದಲ್ಲಿ ನಡೆಯುತ್ತಿದ್ದಾರೋ ಇಲ್ಲವೋ ಎಂಬುದನ್ನು ಪರೀಕ್ಷಿಸಿ, ಶಿವಪಥವನ್ನು ಬಿಟ್ಟು ಅನ್ಯ ಮಾರ್ಗ ಹಿಡಿದವರಿಗೆ ಹಿತವಚನ ಹೇಳಿ, ಸಾಧ್ಯವಾದರೆ ದಂಡಿಸಿ, ಮತ್ತೆ ಅವರನ್ನು ಶಿವಪಥ ಹಿಡಿಯುವಂತೆ ಮಾಡಬೇಕು. ಈ ಕರ್ತವ್ಯವನ್ನು ಎಸಗಲು ಜಂಗಮ ಊರಿಂದೂರಿಗೆ ತಿರುಗಬೇಕು. ಹೀಗೆ ತಿರುಗುವದರಿಂದಲೇ ಅವನಿಗೆ ಜಂಗಮ ಎಂಬ ಹೆಸರು ಬಂದಿದೆ. ಆದರೆ ಜಂಗಮನಿಗೇ ಲಿಂಗಸಾಕ್ಷಾತ್ಕಾರವಾಗಿರದಿದ್ದರೆ, ಅವನು ಇತರರಿಗೆ ಪರಿಣಾಮಕಾರಿ ಮಾರ್ಗದರ್ಶನ ಮಾಡಲಾರ.

ಜಂಗಮನು ಸಂನ್ಯಾಸಿ. ಆದುದರಿಂದ ಜನರಿಗೆ ಜ್ಞಾನದಾಸೋಹ, ಅನ್ನದಾಸೋಹಗಳನ್ನು ಮಾಡಿಸಲು ಧನಧಾನ್ಯ ಸಂಗ್ರಹ ಮಾಡಬಹುದಾದರೂ ತನಗಾಗಿ ಏನನ್ನೂ ಸಂಗ್ರಹಿಸಬಾರದು.

ಜಂಗಮನು ಜ್ಞಾನದಾಸೋಹ ಮತ್ತು ಅನ್ನದಾಸೋಹಕ್ಕೇ ಆದರೂ, ಭಕ್ತರನ್ನು ಕಾಡಬಾರದು. ಏಕೆಂದರೆ ಕಾಡುವವನು ಜಂಗಮನಲ್ಲ. ಜಂಗಮ ಕೇಳುವುದಕ್ಕೆ ಮೊದಲೇ ಭಕ್ತ ನೀಡಬೇಕು. ನಿಜವಾದ ಜಂಗಮನಿಗೆ ಭಕ್ತ ಕೊಡದೇ ಇರಬಾರದು.

**ಜಂಗಮತ್ರಯ :** ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದ ಜಂಗಮರಲ್ಲಿ ಮೂರು ಸ್ತರಗಳಿವೆ. ಅವರಲ್ಲಿ ಜ್ಞಾನ ಜಂಗಮ ಕೆಳಗಿದ್ದರೆ, ಮಹಾಜ್ಞಾನ ಜಂಗಮ ಅವನಿಗಿಂತ ಮೇಲು. ಪರಮಜ್ಞಾನ ಜಂಗಮ ಇವರಿಬ್ಬರಿಗಿಂತ ಅಧಿಕ. ಇಲ್ಲಿ 'ಜ್ಞಾನ'ವೆಂದರೆ 'ಅನುಭಾವ'ದ ಮೂಲಕ ಪಡೆದ ಅರಿವು ಎಂದರ್ಥ. ಪರಮಜ್ಞಾನ ಜಂಗಮನಲ್ಲಿ ದೇಹಭಾವ ಕಿಂಚಿತ್ತು ಇಲ್ಲದೆ, ಅವನು ತಾನು ಪರಮಾತ್ಮನ ಒಂದು ಅವಿಭಾಜ್ಯ ಅಂಗವೆಂದು ತಿಳಿದುಕೊಳ್ಳುತ್ತಾನೆ. (೧೨ : ೧೧೯೬)

**ಜಂಗಮದ ಪೂರ್ವಾಶ್ರಯವ ಕಳೆಯುವುದು :** ಒಬ್ಬ ವ್ಯಕ್ತಿ ಜಂಗಮನೆನಿಸಿಕೊಳ್ಳಲು ಕಾವಿ ಬಟ್ಟೆ, ರುದ್ರಾಕ್ಷಿಮಾಲೆ, ಇತ್ಯಾದಿಗಳನ್ನು ಧರಿಸಿದರೆ ಸಾಲದು. ಇವು ಕೇವಲ ಬಾಹ್ಯ ಲಾಂಛನ. ಆ ವ್ಯಕ್ತಿಯು ಆಧ್ಯಾತ್ಮಿಕವಾಗಿ ಪರಿವರ್ತನೆಯಾದರೆ ಮಾತ್ರ ಜಂಗಮನೆನಿಸಿಕೊಳ್ಳಬಲ್ಲ. ಆಧ್ಯಾತ್ಮಿಕವಾಗಿ ಪರಿವರ್ತನೆಗೊಳ್ಳುವ ಮೊದಲು ಅವನೊಬ್ಬ ಸಾಧಾರಣ ವ್ಯಕ್ತಿ. ಈ ಸಾಧಾರಣ ವ್ಯಕ್ತಿತ್ವವೆಂಬ ಪೂರ್ವಾಶ್ರಯ ಕಳೆದುಕೊಂಡವನು ಇತರರಿಗೆ ಆದರ್ಶನಾದ ಜಂಗಮ. (೩ : ೬, ೭, ೮)

**ಜಂಗಮದ್ರೋಹ :** ಜಂಗಮನೆನಿಸಿಕೊಂಡವನು ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಹಿಂಸೆ ಮುಂತಾದವುಗಳನ್ನು ಪಾಲಿಸದಿದ್ದರೆ, ಜಂಗಮತ್ವಕ್ಕೇ ದ್ರೋಹ ಬಗೆದಂತೆ. ಭವಿಯಾಗಿದ್ದವನು ಜಂಗಮನಾದರೆ, ಜಂಗಮದ್ರೋಹ ಅಸಾಧ್ಯ. ಆದರೆ ಕೆಲವು ವೇಳೆ ಬೇರ ರೀತಿ ಜಂಗಮರೆನಿಸಿಕೊಂಡವರು ಜಂಗಮದ್ರೋಹಕ್ಕೆ ಅವಕಾಶ ಮಾಡಿಕೊಡುತ್ತಿದ್ದರೇನೋ.

**ಜಂಗಮ ಪ್ರಸಾದ :** ಅರ್ಪಿತ ಆಹಾರದಲ್ಲಿ ಒಂದು ತುತ್ತನ್ನು ತಾನು ಸಾಂಕೇತಿಕವಾಗಿ ಸ್ವೀಕರಿಸಿದ ಜಂಗಮನು ಉಳಿದುದನ್ನು ಭಕ್ತರಿಗೆ ಕೊಡುತ್ತಾನೆ. ಭಕ್ತ ಅದನ್ನು ಎಂಜಲು ಎಂದು ತಿಳಿಯಬಾರದು. "ಸೂಳೆಗೆ ಮುಟ್ಟಿ ಸೂಳೆಯ ಬಂಟರೆಂಜಲ ತಿಂಬುದೀ ಲೋಕ....... ಲಿಂಗವ ಮುಟ್ಟಿ ಜಂಗಮ ಪ್ರಸಾದವ ಕೊಂಬುವರ ನೋಡಿ ನಗುವರ ಕಂಭೀಪಾತಕ ನಾಯಕನರಕದಲ್ಲಿಕ್ಕುವ ಕೂಡಲ ಸಂಗಮದೇವ". (೧ : ೭೬೯)

**ಜಂಗಮ ಪ್ರಾಣಿ :** ಜಂಗಮರಿಗೆ ತನುಮನಧನಗಳನ್ನು ಹೃತ್ಪೂರ್ವಕವಾಗಿ ಅರ್ಪಿಸಿಕೊಳ್ಳುವ ಭಕ್ತ.

**ಜಂಗಮ ಭಕ್ತ :** ಜಂಗಮರನ್ನು ನಿಷ್ಠೆಯಿಂದ ಆರಾಧಿಸುವ ಭಕ್ತ.

**ಜಂಗಮ ಭೇದ :** ಜಂಗಮನೆಂದರೆ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಿದವನೂ, ಜ್ಞಾನದಾಸೋಹ ಮತ್ತು ಧರ್ಮಪ್ರಚಾರದಲ್ಲಿ ನಿರತನಾದವನೂ ಆದುದರಿಂದ, ಅವನು ಸಾಧಾರಣ ಜನರಿಗಿಂತ ಮೇಲಿನವನೆನಿಸಿಕೊಳ್ಳುತ್ತಾನೆ. ಆದರೆ ಅವನ ಯೋಗ್ಯತೆಯನ್ನರಿಯದ ಭಕ್ತನು ಅವನಿಗೆ ಸಲ್ಲಬೇಕಾದ ಗೌರವವನ್ನು ಕೊಡದಿದ್ದರೆ, ಅದು ಜಂಗಮಭೇದ (ಜಂಗಮನಿಗೆ ಅಗೌರವ) ಎನಿಸಿಕೊಳ್ಳುತ್ತದೆ. (೧೨ : ೨೮೫)

**ಜಂಗಮ ಮುಖ :** ಪರಶಿವನೊಂದಿಗೆ ಸಾಮರಸ್ಯಪಡೆದವನು ತಾನು ಪರಶಿವನ ಅಂಗವೆಂದು ತಿಳಿದುಕೊಳ್ಳುತ್ತಾನೆ; ಅಥವಾ ತಾನು ಪರಶಿವನ ಬಾಯಿ (ಮುಖ) ಎಂದು ತಿಳಿದುಕೊಳ್ಳುತ್ತಾನೆ. ಈ ಅರ್ಥದಲ್ಲಿ, ಶಿವನು ಜಂಗಮ ಎಂಬ ಬಾಯಿಯ ಮೂಲಕ ಅನುಭವಿಸುತ್ತಾನೆ. ಆಗ, ಜಂಗಮನ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೆಲ್ಲ ಪರಶಿವನ ಮಾಧ್ಯಮಗಳಾಗುತ್ತವೆ. (೧ : ೩೯೯)

**ಜಂಗಮ ಮುಖಲಿಂಗ :** 'ಮುಖ' ಎಂದರೆ 'ಬಾಯಿ' ಎಂಬರ್ಥವೂ ಇರುವುದರಿಂದ, ಜಂಗಮದ ಬಾಯಿಗೆ ಅರ್ಪಿತವಾದವೆಲ್ಲವೂ ಅಲ್ಲಿಯೇ ಇರುವ ಲಿಂಗಕ್ಕೂ ಅರ್ಪಿತವಾದಂತೆಯೇ. ಯಾವುದರ ಮೂಲಕ ಏನಾದರೂ ಹೋಗುತ್ತದೆಯೋ ಅದೆಲ್ಲವೂ ಮುಖ (ಮುಖಾಂತರ ಎಂಬುದನ್ನು ಗಮನಿಸಿ) ಎಂಬರ್ಥದಲ್ಲಿ ವಚನಕಾರರು ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೂ ಮುಖ ಎಂದು ಪರಿಗಣಿಸುತ್ತಾರೆ. ತನ್ನ ಮುಖಗಳಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿಕೊಂಡಿರುವ ಜಂಗಮನೇ ಜಂಗಮ ಮುಖಲಿಂಗ. (೩ : ೧೫೮೨)

**ಜಂಗಮ ಲಿಂಗ :** ಷಟ್‌ಸ್ಥಲವೆಂಬ ಆಧ್ಯಾತ್ಮಿಕ ತೀರ್ಥಯಾತ್ರೆಯಲ್ಲಿ ಮುಮುಕ್ಷುವು ತನ್ನಲ್ಲೇ ಇರುವ ಲಿಂಗವನ್ನು ಆರು ಹಂತಗಳಲ್ಲಿ ಸಾಕ್ಷಾತ್ಕರಿಸಿಕೊಳ್ಳಬೇಕು. ಅವನು ಆಧ್ಯಾತ್ಮಿಕ ಮುನ್ನಡೆಯ ನಾಲ್ಕನೆಯ ಹಂತದಲ್ಲಿ ಪ್ರಾಣಲಿಂಗಿ ಎನಿಸಿಕೊಳ್ಳುತ್ತಾನೆ, ಹಾಗೂ ಅವನು ಸಾಕ್ಷಾತ್ಕರಿಸಿಕೊಳ್ಳುವ ಲಿಂಗಕ್ಕೆ ಜಂಗಮಲಿಂಗವೆಂದು ಹೆಸರು. ಪ್ರಾಣಲಿಂಗಿ ಅಥವಾ ಸರ್ವಾಂಗಲಿಂಗಿಯು ತನ್ನ ಪ್ರತಿಯೊಂದು ಕಣದಲ್ಲಿಯೂ ಲಿಂಗವನ್ನು (ಶಿವನನ್ನು) ಪ್ರತಿಷ್ಠಾಪಿಸಿಕೊಂಡಿರುವುದೂ ಅಲ್ಲದೇ, ತನಗೂ ಲಿಂಗಕ್ಕೂ ಏನೂ ಭೇದವಿಲ್ಲ ಎಂದು ತಿಳಿಯುತ್ತಾನೆ. ಹೀಗೆ ಲಿಂಗಮಯವಾದ ಪ್ರಾಣಲಿಂಗಿಯೇ ಚಲಿಸುವ (ಜಂಗಮ) ಲಿಂಗ.

**ಜಂಗಮಲಿಂಗ ತ್ರಿವಿಧ :** ಲಿಂಗದೊಂದಿಗೆ ಸಾಮರಸ್ಯ ಪಡೆದ ಜಂಗಮರು ಮೂರು ವಿಧ : ಸ್ವಯ, ಚರ ಮತ್ತು ಪರ ಅಥವಾ ಜೀವಾತ್ಮ, ಅಂತರಾತ್ಮ ಮತ್ತು ಪರಮಾತ್ಮ. ಬೇರೆಯವರ ಕಣ್ಣಿಗೆ ಜಂಗಮನು ಜೀವಾತ್ಮನೇ ಆದರೂ, ಅವನು ಸಾಧಾರಣ ರೀತಿಯ ಜೀವಾತ್ಮ (ಸ್ವಯ) ಅಲ್ಲ, ಅವನು ದೇಹೇಂದ್ರಿಯಾದಿಗಳಿಂದ ಬಾಧಿತನಲ್ಲವಾದುದರಿಂದ ಅವನನ್ನು ಶುದ್ಧ ಅಥವಾ ಅಂತರಾತ್ಮನೆನ್ನಬಹುದು ಅಥವಾ ಚರಲಿಂಗ ('ಚಲಿಸುವ ಲಿಂಗ') ಎನ್ನಬಹುದು. ಅವನು ಶಿವನೊಂದಿಗೆ ಸಂಪೂರ್ಣ ಸಾಮರಸ್ಯ ಸಾಧಿಸಿಕೊಂಡರೆ ಅವನೇ ಪರಲಿಂಗ ಅಥವಾ ಪರಮಾತ್ಮ ಎನಿಸಿಕೊಳ್ಳುತ್ತಾನೆ. (೩ : ೭೨೯)

**ಜಂಗಮಲಿಂಗ ಪ್ರಸನ್ನತ್ವ :** ತನ್ನ ಕಿವಿಯ ತುದಿಯಲ್ಲಿ ಜಂಗಮಲಿಂಗವನ್ನು ಪ್ರತಿಷ್ಠಾಪಿಸಿಕೊಂಡವನು ಲಿಂಗವು ಕೇಳದೆ ತಾನು ಯಾವ ಶಬ್ದವನ್ನು ಕೇಳೆನು ಎಂದು ಪ್ರತಿಜ್ಞೆ ಮಾಡುತ್ತಾನೆ; ಅಲ್ಲದೆ ಅವನು ತನ್ನ ಕಿವಿಗಳೇ ಶಿವನ ಕಿವಿಗಳು ಎಂದು ತಿಳಿದು, ಶಬ್ದದ ತೃಪ್ತಿ ತನಗಲ್ಲ, ಶಿವನಿಗೆ ಎಂದು ತಿಳಿಯುತ್ತಾನೆ. ಹೀಗೆ ಕಿವಿ, ಶಬ್ದ, ಕೇಳಿದ ತೃಪ್ತಿ ಮೂರನ್ನೂ ಜಂಗಮಲಿಂಗದ ಪ್ರಸನ್ನತೆಗೆ ಅರ್ಹವನ್ನಾಗಿ, ಆ ಮೂಲಕ ಕಿವಿಯ ದುಷ್ಟಭಾವದಿಂದ ಮುಕ್ತನಾಗುತ್ತಾನೆ.

**ಜಂಗಮಲಿಂಗಾನುಭಾವಿ :** ಪ್ರಾಣಲಿಂಗಿ ಸ್ಥಲದ ಸಾಧಕನು ಲಿಂಗಧ್ಯಾನದ ಮೂಲಕ ಪ್ರಾಣವಾಯು ಇತ್ಯಾದಿ ವಾಯುಗಳನ್ನು ನಿಯಂತ್ರಿಸಿ, ಹಾಗೂ ತನ್ನ ಪ್ರತಿಯೊಂದು ಇಂದ್ರಿಯದ ಬಾಗಿಲಿನಲ್ಲಿ ಪರಶಿವನನ್ನು ಪ್ರತಿಷ್ಠಾಪಿಸಿ, ಜಂಗಮಲಿಂಗವನ್ನು ಆರಾಧಿಸುತ್ತಾನೆ. ಅನುಭಾವದ ಆರಂಭದ ಹಂತದಲ್ಲಿರುವ ಅವನು ವಾಯುತತ್ವವನ್ನು ಅರ್ಪಿಸಿ ಸ್ಪರ್ಶನವೆಂಬ ಪ್ರಸಾದವನ್ನು ಸುಖಿಸುತ್ತಾನಾದುದರಿಂದ ಅವನು ಜಂಗಮಲಿಂಗಾನುಭಾವಿ ಎನಿಸಿಕೊಳ್ಳುತ್ತಾನೆ. (೧೨ : ೪೦೬)

**ಜಂಗಮವಾದರೆ ಅಂಗವಿಲ್ಲದಿರುವುದು :** 'ಜಂಗಮ' ಎಂದರೆ ಜಂಗಮ ಜಾತಿಯಲ್ಲಿ ಹುಟ್ಟಿದವನು ಎಂದರ್ಥವಲ್ಲ; ಸಾಧನೆಯಿಂದ ಜಂಗಮನಾದವನು ಎಂದರ್ಥ. ಸಾಧಕನು ಲಿಂಗವಾದರೆ ತನಗೂ ಲಿಂಗಕ್ಕೂ ಭಿನ್ನಭಾವವಿಲ್ಲವೆಂದು ತಿಳಿಯುತ್ತಾನೆ. ಚೈತನ್ಯರೂಪವಾದ ಲಿಂಗವು ಎಲ್ಲೆಡೆಯಲ್ಲೂ ಇರುವುದರಿಂದ ಅದಕ್ಕೆ ಚಲಿಸಲು ಸ್ಥಳವೇ ಇಲ್ಲ; ಅದು ಅಚಲ. ಆದರೆ ಲಿಂಗವಾದ ಜಂಗಮನು ತಿರುಗಾಡುವುದರಿಂದ ಆತ ಜಂಗಮಲಿಂಗ. ಅವನಿಗೆ ಅಂಗವಿದೆ. ಆದರೆ ಅಂಗದ ಬಯಕೆಗಳಿಲ್ಲ. ಅಂದರೆ, ಅಂಗವಿದ್ದರೂ ಇಲ್ಲದಂತೆ.

**ಜಂಗಮವಿಕಾರಿ :** ಜಂಗಮರಾಗಿ ಪರಿವರ್ತಿತನಾದವರು ಸಾಮಾನ್ಯವಾಗಿ ಸಮಾಜದ ಸಲುವಾಗಿ ಧನಧಾನ್ಯ ಸಂಗ್ರಹ ಮಾಡುತ್ತಾರೆ. ಆದರೆ ಅವರಿಗೆ ಧನಕನಕಾದಿಗಳ ವಿಕಾರವಿರುವುದಿಲ್ಲ. ಭವಿ ಜಂಗಮನಾಗುವುದೇ ಜಂಗಮವಿಕಾರ.

**ಜಂಗಮಶುದ್ಧಾತ್ಮಿ :** ತನುಮನಗಳನ್ನು ಗುರು ಮತ್ತು ಲಿಂಗಗಳಿಗೆ ಅರ್ಪಿಸುವಂತೆ, ಧನವನ್ನು ಜಂಗಮರಿಗೆ ಅರ್ಪಿಸಬೇಕು, ಎಂಬುದು ವಚನಗಳ ಆದೇಶ. ಹೀಗೆ ಭಕ್ತರಿಂದ ಸಂಗ್ರಹಿಸಿದ ಧನಧಾನ್ಯಗಳನ್ನು ಅವರು ಲೋಕಕಲ್ಯಾಣಕ್ಕಾಗಿ ಬಳಸುತ್ತಾರೆ. ಆದರೆ ಹೊನ್ನಿನ ಆಸೆಯಿಂದ ತಮ್ಮ ಆಧ್ಯಾತ್ಮಿಕ ಗುರಿಯನ್ನು ಮರೆತ ಜಂಗಮರೂ ಉಂಟು. ಅವರು ಶುದ್ಧಾತ್ಮರಲ್ಲ. "ಹೊನ್ನಿನ ಗುಣವನರಿತು ಕಳೆದಡೆ ಜಂಗಮ ಶುದ್ಧಾತ್ಮಿ" ಎನ್ನುತ್ತಾನೆ, ಮೋಳಿಗೆ ಮಾರಯ್ಯ. (೮ : ೨೦೭)

**ಜಂಗಮಸ್ಥಲ :** ಯಾವ ಮುಮುಕ್ಷುವಾದರೂ ತಲುಪಬಹುದಾದ ಸ್ಥಲ. ಇದಕ್ಕೆ ಜಾತಿ ಭೇದವಿಲ್ಲ. "ಆಚಾರವರಿಯಿರಿ, ವಿಚಾರವರಿಯಿರಿ, ಲಿಂಗಸ್ಥಲ ಕಾಣಿರಯ್ಯಾ, ಜಾತಿಭೇದವಿಲ್ಲ ಸೂತಕವಿಲ್ಲ", ಎಂದು ಬಸವಣ್ಣ ಹೇಳುವಾಗ, ಈ ಸ್ಥಲದ ಪರಿಚಯವಾಗುತ್ತದೆ. ಜಂಗಮನಾದವನು ಭಕ್ತನ ಕರೆಯಿಲ್ಲದೆ ಅವನ ಮನೆಗೆ ಹೋಗಬಾರದು. "ಇಂತಲ್ಲದೆ ಮಾಡಿಸಿಕೊಂಬುದು ಜಂಗಮಸ್ಥಲಕ್ಕೆ ಸಲ್ಲದು" (೧ : ೪೧೮).

**ಜಂಗಮೋಪಭೋಗ :** ಜಂಗಮ ತೃಪ್ತಿಗೊಂಡರೆ ಲಿಂಗವೇ ತೃಪ್ತಿಗೊಂಡಂತೆ ಎಂದು ನಂಬಿದ ಭಕ್ತನು ಮೊದಲು ಜಂಗಮಕ್ಕರ್ಪಿಸಿ ಅನಂತರ ತಾನು ಉಪಭೋಗಿಸುತ್ತಾನೆ. (ನೋಡಿ: **ಲಿಂಗಭೋಗೋಪಭೋಗ**)

**ಜಗತ್ತಿನ ಭ್ರೂಮಧ್ಯ :** ಮನುಷ್ಯನು ಒಂದು ಸಣ್ಣ ಜಗತ್ತು (ಪಿಂಡಾಂಡ) ಹಾಗೂ ಜಗತ್ತು ಒಂದು ಮಹಾನ್ ಮನುಷ್ಯ ಎಂಬಂತೆ ಶರಣರು ಕಲ್ಪಿಸಿಕೊಂಡಿದ್ದಾರೆ. ಮನುಷ್ಯನಿಗೆ ಭ್ರೂಮಧ್ಯವಿರುವಂತೆ ಜಗತ್ತಿಗೆ ಭ್ರೂಮಧ್ಯ ವಾಸ್ತವವಾಗಿ ಇರುವುದಿಲ್ಲವಾದರೂ, ಜಗತ್ತಿನ ಎಲ್ಲರ ಭ್ರೂಮಧ್ಯದಲ್ಲಿಯೂ ಅಂತರಾತ್ಮನಿದ್ದಾನೆಂದು ಹೇಳುವುದೇ ಅವರ ಉದ್ದೇಶ. (ನೋಡಿ : **ಅಂತರಾತ್ಮ**) (೯: ೩೨೪).

**ಜಗತ್ತಿನ ಶಿರೋಮಧ್ಯ :** ಮನುಷ್ಯನನ್ನು ಪಿಂಡಾಂಡವೆಂದೂ, ಜಗತ್ತನ್ನು ಬ್ರಹ್ಮಾಂಡವೆಂದೂ ಕರೆಯುವುದು ವಚನಗಳಲ್ಲಿ ಸಾಮಾನ್ಯ. ಸಂಗಮೇಶ್ವರದ ಅಪ್ಪಣ್ಣ 'ಜಗತ್ತಿನ ಶಿರೋಮಧ್ಯ' ಎಂಬ ಪದವನ್ನು 'ಮನುಷ್ಯನ ಶಿರೋಮಧ್ಯ' ಎಂಬಂತೆ ಉಪಯೋಗಿಸಿದ್ದಾನೆ. ಮನುಷ್ಯನ ಶಿರೋಮಧ್ಯದಲ್ಲಿ ಪರಮಾತ್ಮನಿರುವಂತೆ, ಜಗತ್ತಿನ ಶಿರೋಮಧ್ಯದಲ್ಲಿಯೂ ಪರಮಾತ್ಮನಿದ್ದಾನೆ, ಎಂಬುದೇ ಅವನ ಹೇಳಿಕೆಯ ಅರ್ಥ (೯ : ೩೨೪). (ನೋಡಿ : **ಪರಮಾತ್ಮ**)

**ಜಗತ್ತಿನ ಹೃದಯ :** ಬ್ರಹ್ಮಾಂಡವೇ ಒಂದು ದೇಹವಾದರೆ, ಅದರಲ್ಲಿರುವ ಆತ್ಮವು ಹೇಗೆ ಪರಮಾತ್ಮನೆನಿಸಿಕೊಳ್ಳುವುದೋ ಹಾಗೆಯೇ ಮಾನವನ ದೇಹದಲ್ಲಿ ಜೀವಾತ್ಮ ಇದ್ದಾನೆ. ಜೀವಾತ್ಮನಿಗೇನೊ ಹೃದಯವೆಂಬ ಸ್ಥಾನವಿದೆ. ಆದರೆ ಜಗತ್ತಿನ ಹೃದಯವೆಂದರೆ ಯಾವುದು? ಜಗತ್ತಿನ ಹೃದಯವೆಂದರೆ ಜಗತ್ತಿನಲ್ಲಿರುವ ಎಲ್ಲ ಹೃದಯಗಳೂ ಆದುದರಿಂದ ಪ್ರತಿ ಹೃದಯದಲ್ಲಿಯೂ ಜೀವಾತ್ಮನಿದ್ದಾನೆ. ಆ ಜೀವಾತ್ಮನೇ ಪರಶಿವನ ರೂಪ. (೯ : ೩೨೪)

**ಜಗದ ಕುರುಹು :** ಜಗತ್ತಿನಲ್ಲಿ ಹೇಗೆ ಪರಶಿವ ಇದ್ದಾನೋ ಹಾಗೆ ಲಿಂಗದಲ್ಲಿಯೂ ಪರಶಿವನಿದ್ದಾನೆ. ಲಿಂಗವು ಹೇಗೆ ಪರಶಿವನ ಕುರುಹೋ, ಹಾಗೆಯೇ ಅದು ಜಗತ್ತಿನ ಕುರುಹೂ ಆಗಿದೆ.

**ಜಡಕ್ಕೆ ಜಡವ ಕಟ್ಟುವುದು :** ಪಂಚಭೂತದಿಂದಾದ ಜಡದೇಹಕ್ಕೆ ಇಷ್ಟಲಿಂಗವೆಂಬ ಜಡವಸ್ತುವನ್ನು ಕಟ್ಟುವುದು. (೯ : ೧೩೬೯)

**ಜನನದ ಬೇರ ಕಿತ್ತೊರಸುವುದು :** ನಾವು ಅಜ್ಞಾನದಿಂದಾಗಿ ಅನೇಕ ರೀತಿಯ ಕರ್ಮಗಳನ್ನು ಮಾಡಿ ಪುನರ್ಜನ್ಮಕ್ಕೊಳಗಾಗುತ್ತೇವೆ. ಈ ಹೊಸ ಜನ್ಮದಲ್ಲಿಯೂ ಮತ್ತೆ ಅನೇಕ ರೀತಿಯ ಕರ್ಮಗಳನ್ನು ಮಾಡಿ ಮತ್ತೆ ಪುನರ್ಜನ್ಮಕ್ಕೆ ಒಳಗಾಗುತ್ತೇವೆ. ಲಿಂಗಾಂಗ ಸಾಮರಸ್ಯ ಪಡೆದರೆ ನಾವು ಮತ್ತೆ ಪುನರ್ಜನ್ಮ ಪಡೆಯಬೇಕಾಗಿಲ್ಲವಾದುದರಿಂದ, ಜನನದ ಬೇರ ಕಿತ್ತು ಹಾಕಿದಂತಾಗುವುದು. (೮ : ೪೬೭)

**ಜನನವಿಪಿನ ದಾವಾನಲ :** ವಿಪಿನ ದಾವಾನಲವೆಂದರೆ ಕಾಡಿನ ಬೆಂಕಿ. ಕಾಡಿಗೆ ಬೆಂಕಿ ಹತ್ತಿದರೆ, ಅದು ಉರಿಯುತ್ತಾ ಹೋಗಿ ಇಡೀ ಕಾಡನ್ನೆ ಸುಡಬಹುದು. ಹಾಗೆಯೇ ಸಾಧಕನು ನಿಜವಾದ ಭಕ್ತಿಯನ್ನಳವಡಿಸಿಕೊಂಡರೆ, ಅದು ಅವನ ಹಿಂದಿನ ಜನ್ಮದ ಕರ್ಮಗಳನ್ನೆಲ್ಲಾ ಸುಟ್ಟು ಬೂದಿ ಮಾಡುತ್ತದೆ. ಆಗ ನಾವು ಮತ್ತೆ ಹುಟ್ಟಬೇಕಾಗಿಲ್ಲ. (೪ : ೧೪೨೩)

**ಜನನಸೂತಕನಿರಸನ :** ಮಗು ಹುಟ್ಟಿದ ದಿನ ಜನನಸೂತಕವನ್ನಾಚರಿಸುವುದು ಹಿಂದೂ ಪದ್ಧತಿಗಳಲ್ಲೊಂದು. ವೀರಶೈವರು ಇದನ್ನು ಆಚರಿಸಬಾರದೆಂದೂ, ಆ ಸೂತಕವನ್ನು ನಿರಸನ ಮಾಡಬಹುದೆಂದೂ ಹೇಳುತ್ತಾರೆ. ಜನನ ಸೂತಕ ನಿರಸನದ ವಿವರ ಹೀಗಿದೆ : ವೀರಶೈವ ಮಾತಾಪಿತೃಗಳಿಗೆ ಹುಟ್ಟಿದ ಮಗುವು ಭೂಸ್ಪರ್ಶವಾದಕೂಡಲೇ ಗುರುಗಳ ಆಜ್ಞೆಯ ಮೇರೆಗೆ ಶಿವಮಂತ್ರವನ್ನು ಉಚ್ಚರಿಸುತ್ತ, ಲಿಂಗಾಂಗಕ್ಕೆ ಗೋಮೂತ್ರವ ತಳೆದು ಅಂಗಕ್ಕೆ ಲಿಂಗಾಂಗ ಸಂಬಂಧವನ್ನು ಮಾಡಿ, ಪಾದೋದಕದಿಂದ ಸ್ನಾನ ಮಾಡಿಸಿ, ಗುರುವಿನ ಕೈಯಲ್ಲಿ ವಿಭೂತಿಧಾರಣೆ ಮಾಡಿಸಿ, ಪಂಚಾಕ್ಷರಿ ಮಂತ್ರವನ್ನು ಬರೆಸಿ, ಅನಂತರ ಹೊಕ್ಕಳಬಳ್ಳಿಯನ್ನು ಕೊಯ್ಯಬೇಕು. ಇಷ್ಟು ಮಾಡಿದರೆ ಜನನ ಸೂತಕ ನಿವಾರಣೆಯಾದಂತೆ. (೧೪ : ೨೪೬೬)

**ಜನ್ಮವಸ್ತ್ರಧಾರಣಜಾಡ್ಯ :** ಚಾರ್ವಾಕರನ್ನುಳಿದು ಭಾರತೀಯ ತತ್ವಶಾಸ್ತ್ರಜ್ಞರೆಲ್ಲರೂ ದೇಹ ನಶ್ವರವೆಂದೂ ಅದನ್ನು ಧರಿಸಿರುವ ಆತ್ಮನು ಮಾತ್ರ ಅಮರ ಮತ್ತು ಶಾಶ್ವತವೆಂದೂ ಅಭಿಪ್ರಾಯಪಡುತ್ತಾರೆ. ಭಗವದ್ಗೀತೆಯಲ್ಲಿ ಆಗಲೇ ಹೇಳಿರುವಂತೆ ಹಳೆಯ ಬಟ್ಟೆಯನ್ನು ಬಿಸುಟು ಹೊಸ ಬಟ್ಟೆಯನ್ನು ಹೇಗೆ ಧರಿಸುತ್ತೇವೆಯೋ ಹಾಗೆಯೇ ಆತ್ಮನು ಹಳೆಯ ದೇಹವೆಂಬ ವಸ್ತ್ರವನ್ನು ಬಿಸುಟು (ಮರಣಾನಂತರ) ಹೊಸದೇಹವೆಂಬ ಮತ್ತೊಂದು ವಸ್ತ್ರವನ್ನು ಧರಿಸುತ್ತದೆ. ವಾಸ್ತವವಾಗಿ ಇದೊಂದು ಜಾಡ್ಯ (ಭವರೋಗ ಎಂದು ಕರೆಯುವುದು ಇದನ್ನೆ).

**ಜಪ :** ಸಾಧಕನು ತನ್ನ ಮನಸ್ಸು ಅತ್ತ ಇತ್ತ ಹೋಗದಂತೆ ಮಾಡಲು ಹಾಗೂ ಅದು ಶಿವನ ಮೇಲೆ ಕೇದ್ರೀಕರಿಸಲು ಸದಾ ಪರಶಿವನ ಹೆಸರನ್ನು ಪಠಿಸುತ್ತಾನೆ. ಇದು ಎರಡು ರೀತಿಯದಾಗಿರಬಹುದು. ಶಿವಾಶಿವಾ, ಓಂ ನಮಃ ಶಿವಾಯ ಮುಂತಾಗಿ ಬೇರೆಯವರಿಗೆ ಕೇಳುವಂತೆ ಜಪಿಸುವುದು ಒಂದು ರೀತಿಯದಾದರೆ, ಯಾರಿಗೂ ಕೇಳದಂತೆ ಮಾನಸಿಕವಾಗಿ ಜಪಿಸುವುದು ಎರಡನೆ ರೀತಿಯದು. ಸದಾ ಶಿವನನ್ನೆ ಕುರಿತು ಚಿಂತಿಸುವುದು ಇವೆರಡಕ್ಕಿಂತ ಉತ್ತಮ.

**ಜಲದೊಳಗಿರ್ದ ಕಿಚ್ಚು :** ಪುರಾತನ ಭಾರತೀಯ ದಾರ್ಶನಿಕರ ಪ್ರಕಾರ, ಪೃಥ್ವಿ, ಜಲ, ವಾಯು, ಅಗ್ನಿ ಮತ್ತು ಆಕಾಶ ಎಂಬ ಪಂಚಭೂತಗಳೇ ದೃಶ್ಯಗೋಚರ ವಿಶ್ವ ಹಾಗೂ ಗಿಡಮರ ಮತ್ತು ಪ್ರಾಣಿಗಳ ಶರೀರಕ್ಕೆ ಕಾರಣ. ಈ ಭೂತಗಳಿಗೆ ಪ್ರತಿಯೊಂದಕ್ಕೂ ತನ್ನದೇ ಆದ ವಿಶಿಷ್ಟಗುಣ ಇರುತ್ತದೆಯಲ್ಲದೇ, ಉಳಿದವುಗಳ ಗುಣಗಳೂ ಇರುತ್ತವೆ. ಆದರೆ (ವಿಶಿಷ್ಟ)

ಗುಣ ಪ್ರಧಾನವಾಗಿದ್ದು, ಉಳಿದ ಗುಣಗಳು ಅಮುಖ್ಯವಾಗಿರುತ್ತವೆ. ಉದಾ: ಜಲತತ್ವಕ್ಕೆ ರಸವೇ ಪ್ರಧಾನ (ವಿಶಿಷ್ಟ) ಗುಣವಾದರೂ ಅಮುಖ್ಯ ಗುಣಗಳಾದ ಪೃಥ್ವಿಯ ಗಂಧ, ಅಗ್ನಿಯ ತೇಜಸ್ಸು, ಆಕಾಶದ ಶಬ್ದ ಹಾಗೂ ವಾಯುವಿನ ಸ್ಪರ್ಶ ಇವೂ ಅದರಲ್ಲಿರುತ್ತವೆ. ಜಲದೊಳಗೆ ಅಗ್ನಿ ಇಲ್ಲದಿದ್ದರೆ ಜಲ ಬಿಸಿಯಾಗುವುದೇ ಇಲ್ಲ; ಅದರಲ್ಲಿ ವಾಯುವಿಲ್ಲದಿದ್ದರೆ ಅದಕ್ಕೆ ವಾಸನೆ ಇರುವುದಿಲ್ಲ. ಅದರಲ್ಲಿ ಆಕಾಶತತ್ವವಿಲ್ಲದಿದ್ದರೆ ಜುಳುಜುಳು ಮುಂತಾದ ಶಬ್ದ ಹೊರಡುವುದೇ ಇಲ್ಲ. (೨ : ೩)

**ಜಾತ, ಅಜಾತ, ನಿರ್ಜಾತ :** ಕರ್ಮಮಾಡಿ ಮತ್ತೆ ಮತ್ತೆ ಹುಟ್ಟುವ ಮನುಷ್ಯರು (ಮತ್ತು ಪ್ರಾಣಿಗಳು) ಜಾತರು; ಹುಟ್ಟದೇ ಇರುವ ಪರಶಿವನು ಅಜಾತನು; ಹುಟ್ಟಿ ತನ್ನ ಎಲ್ಲ ಕರ್ಮಗಳನ್ನು ತೀರಿಸಿ, ಮುಕ್ತನಾಗಿ ಮತ್ತೆ ಹುಟ್ಟದಿರುವವನು ನಿರ್ಜಾತ. (೮ : ೧೨೧೮)

**ಜಾತಿ ನಾಲ್ಕು :** ಸಾಂಪ್ರದಾಯಿಕ ಹಿಂದೂ ಧರ್ಮದ ಪ್ರಕಾರ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ಪಂಗಡಗಳೇ 'ಜಾತಿನಾಲ್ಕು'. ಇವು ಹುಟ್ಟಿನ ಆಧಾರದ ಮೇಲೆ ಮಾಡಿದ ವಿಭಜನೆ. ಆದರೆ ಈ ಜಾತಿ ವಿಭಜನೆಯನ್ನು ವಚನಕಾರರು ತಿರಸ್ಕರಿಸುತ್ತಾರೆ. (೮ : ೬೦೯)

**ಜಾತಿಸಂಪಾದನೆ :** ಜಾತಿಯ ಬಗ್ಗೆ ಮಾಡುವ ಚರ್ಚೆ. ಹನ್ನೆರಡನೆ ಶತಮಾನದ ವಚನಕಾರರು ಜಂಗಮ ಎಂಬ ಪದ ಜಾತಿ ಸೂಚಕವಲ್ಲ. ಅಂಗಸ್ಥಲ ಅಥವಾ ಆಧ್ಯಾತ್ಮಿಕ ಪ್ರಗತಿ ಸೂಚಕ ಎಂಬ ಸ್ಪಷ್ಟ ಹಾಗೂ ಖಂಡಿತ ಅಭಿಪ್ರಾಯ ಉಳ್ಳವರಾಗಿದ್ದರು. ಯಾರು ಬೇಕಾದರೂ ಆಧ್ಯಾತ್ಮಿಕ ಪ್ರಗತಿಯಲ್ಲಿ ಉನ್ನತ ಹಂತವನ್ನು ಮುಟ್ಟಿದವರಾಗಿದ್ದರೆ ಅವರು ಜಂಗಮರೆನಿಸಿಕೊಳ್ಳುತ್ತಿದ್ದರು. ಆದರೂ ಕೆಲವು ಅಜ್ಞಾನಿಗಳು ಜಂಗಮರ ಜಾತಿಯನ್ನು ಪ್ರಶ್ನಿಸುತ್ತಿದ್ದರು. ಅದಕ್ಕೆ ಚೆನ್ನಬಸವಣ್ಣನವರು 'ಜಂಗಮದಲ್ಲಿ ಜಾತಿಸಂಪಾದನೆಯ ಮಾಡುವನ್ನಕ್ಕ ಜಂಗಮಸಂಬಂಧಿಯಲ್ಲ' ಎಂದಿದ್ದಾರೆ. (೩ : ೧೨೯)

**ಜಾತಿಸೂತಕ ನಿರಸನ :** ಒಂದು ಜಾತಿಯವರು ಇನ್ನೊಂದು ಜಾತಿಯ ಜನರೊಡನೆ ಸಹಭೋಜನ, ವಿವಾಹ ಸಂಬಂಧ ಮುಂತಾದವುಗಳನ್ನು ಮಾಡಬಾರದೆಂಬುದು ಹಿಂದೂ ಸಾಮಾಜಿಕ ಪದ್ಧತಿಗಳಲ್ಲೊಂದು. ಹಾಗೆ ಮಾಡಿದರೆ ಅದು ಜಾತಿಸೂತಕವಾಗುತ್ತದೆ. ವೀರಶೈವರಾದವರು ಜಾತಿಸೂತಕ ಮಾಡಬಾರದೆಂಬುದಕ್ಕೆ ವಿವರ : ಭವಿಯಾಗಿದ್ದವನನ್ನು ಗುರುವು ಭಕ್ತನನ್ನಾಗಿ ಮಾಡಿ, ಜಡ ಜೀವಭಾವವನ್ನು ತೊಡೆದು ಶಿವಭಾವವನ್ನುಂಟು ಮಾಡಿದ ಮೇಲೆ, ಅವನು ಶಿವಭಕ್ತರಲ್ಲಾಗಲಿ, ಜಂಗಮರಲ್ಲಾಗಲಿ ಕುಲವನ್ನರಸಬಾರದು. ಅವನು ಸತ್ಯಶುದ್ಧ ನಡೆನುಡಿಗಳಲ್ಲಿ ನಿರತನಾಗಿದ್ದರೆ, ಶಿವಭಕ್ತರ ಮನೆಗಳನ್ನು ಹಂಗಿಸಿ, ಅವರುಡುಗೆ ತೊಡುಗೆಗಳನ್ನೂ, ಊಟತಿಂಡಿಗಳನ್ನೂ ಅವಹೇಳನ ಮಾಡದೆ, ಪರಸ್ತ್ರೀ, ಪರಧನದ ಆಸೆ ಮಾಡದೆ, ಅನ್ಯದೈವವನ್ನು ಪೂಜಿಸದೆ, ಸಕಲಪ್ರಾಣಿಗಳಿಗೆ ಹಿಂಸೆ ಮಾಡದೆ, ಲೇಸನೆ ಬಯಸಿದರೆ ಆಗ ಜಾತಿಸೂತಕನಿರಸನವಾಯಿತೆಂದರ್ಥ. (೧೪ : ೨೪೬೭)

**ಜಿಹ್ವಾಶೇಷ :** ನಾಲಗೆಗೆ ತಗುಲಿ ಉಳಿದುದು. ಜಂಗಮ ಅಥವಾ ಗುರು ಭಕ್ತ ನೀಡಿದ ಪದಾರ್ಥವನ್ನು ಸಾಂಕೇತಿಕವಾಗಿ ಸ್ವಲ್ಪ ಸೇವಿಸಿ, ಉಳಿದುದನ್ನು ಹಿಂತಿರುಗಿಸಿದಾಗ, ಅದು ಪ್ರಸಾದವೆನಿಸಿಕೊಳ್ಳುತ್ತದೆ. ಆದುದರಿಂದ ಜಿಹ್ವಾಶೇಷವೆಂದರೆ ಪ್ರಸಾದ.

**ಜಿಹ್ವೆಲಿಂಗ ಸಮರಸ :** ಲಿಂಗದಲ್ಲಿ ಬೆರೆತ ಐಕ್ಯನು ತನ್ನ ವ್ಯಕ್ತಿತ್ವವನ್ನು ಪರಶಿವನಿಗೆ (ಲಿಂಗಕ್ಕೆ) ಅಧೀನಪಡಿಸುತ್ತಾನೆ. ಹೀಗಾಗಿ, ಅವನ ಕಾಯವು ಅವನದಲ್ಲ, ಪರಶಿವನದು. ಅವನ ನಾಲಿಗೆಯು ಉಳಿದ ಅಂಗಗಳಂತೆ ಪರಶಿವನಲ್ಲಿ ಒಂದಾಗಿದೆಯಾದ್ದರಿಂದ, ಅದನ್ನು ಜಿಹ್ವೆ-ಲಿಂಗ ಸಮರಸ (ಲಿಂಗ-ಅಂಗ ಸಮರಸ ಎಂಬಂತೆ) ಎನ್ನಬಹುದು. (೧೦ : ೧೫೫೪)

**ಜೀವ, ಜೀವಾತ್ಮ :** ದೇಹ, ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಅಂತಃಕರಣ ಚತುಷ್ಟಯಗಳನ್ನೊಳಗೊಂಡ ಆತ್ಮ. ಜೀವಾತ್ಮನು ಇವುಗಳ ಸಹಾಯದಿಂದ ಪಡುವ ಸುಖದುಃಖಗಳೆಲ್ಲವೂ ಅವನ ಕರ್ಮವನ್ನವಲಂಬಿಸಿದೆ. ಜೀವಾತ್ಮನು ಈ ಸಂಬಂಧದಿಂದಾಗಿ ಸಂಸಾರಬಂಧನಕ್ಕೊಳಗಾಗಿರುತ್ತಾನೆ. ಆದರೆ ಆಧ್ಯಾತ್ಮ ಸಾಧನೆಯ ಮೂಲಕ ಜೀವನು ಶುದ್ಧನಾದಾಗ ಜೀವಾತ್ಮನೆನಿಸಿಕೊಂಡೇ ಮೋಕ್ಷ ಪಡೆಯಬಹುದು. (ನೋಡಿ : **ಅಂತರಾತ್ಮ, ಪರಮಾತ್ಮ**).

**ಜೀವತ್ರಯ :** ಅವಸ್ಥೆಗಳಿಗನುಗುಣವಾಗಿ ಜೀವಾತ್ಮನನ್ನು ವಿಶ್ವ, ತೈಜಸ ಮತ್ತು ಪ್ರಾಜ್ಞ ಎಂದು ಕರೆಯಲಾಗುತ್ತದೆ. ಜಾಗ್ರದವಸ್ಥೆಯಲ್ಲಿರುವ ಜೀವಾತ್ಮನೇ ವಿಶ್ವ, ಸ್ವಪ್ನಾವಸ್ಥೆಯಲ್ಲಿರುವ ಜೀವಾತ್ಮನೇ ತೈಜಸ ಮತ್ತು ಸುಷುಪ್ತಿ ಅವಸ್ಥೆಯಲ್ಲಿರುವ ಜೀವಾತ್ಮನೇ ಪ್ರಾಜ್ಞ.

ವಿಶ್ವ : ಜಾಗ್ರದವಸ್ಥೆಯಲ್ಲಿರುವ ಜೀವನು ಎಲ್ಲ ಪ್ರಾಪಂಚಿಕ (ವಿಶ್ವ) ವ್ಯವಹಾರಗಳಲ್ಲಿ ನಿರತನಾಗಿರುತ್ತಾನೆ. ಸ್ಥೂಲ ಶರೀರಾಭಿಮಾನಿಯಾದ ವಿಶ್ವನು ಬೇಕು ಬೇಡಗಳ ಸಾಧನೆಯಲ್ಲಿ ಹೆಚ್ಚಾಗಿ ವ್ಯವಹರಿಸುತ್ತಿದ್ದರೂ, ಗುರು-ಶಿಷ್ಯ, ಬಂಧನ-ಮೋಕ್ಷ, ಮುಂತಾದವುಗಳ ಸಾಧನೆಯಲ್ಲೂ, ಜ್ಞಾನಾರ್ಜನೆಯಲ್ಲೂ ನಿರತನಾಗಿರುತ್ತಾನೆ.

ತೈಜಸ : ಸೂಕ್ಷ್ಮಶರೀರದ ಮೂಲಕ ಸ್ವಪ್ನಾವಸ್ಥೆಯಲ್ಲಿ ಮಾನಸಿಕ ವಿಷಯಗಳೊಡನೆ ವ್ಯವಹರಿಸುವ ಜೀವನೇ ತೈಜಸ ಎನಿಸಿಕೊಳ್ಳುತ್ತಾನೆ. ಸ್ವಪ್ನಾವಸ್ಥೆಯಲ್ಲಿ ಸ್ಥೂಲ ಶರೀರವು ಇಚ್ಛಾಪೂರ್ವಕವಾಗಿ ಚಲಿಸುವುದಿಲ್ಲ, ಹಾಗೂ ಇಂದ್ರಿಯಗಳು ನಿಷ್ಕ್ರಿಯವಾಗಿರುತ್ತವೆ. ಆಗ ಮನಸ್ಸು ತನ್ನಲ್ಲೇ ಇರುವ ಸಂಸ್ಕಾರಗಳನ್ನು ಬಳಸಿಕೊಂಡು ತನ್ನದೇ ಆದ ಸ್ವಪ್ನ ಲೋಕವನ್ನು ನಿರ್ಮಿಸುತ್ತದೆ. ಇಲ್ಲಿ ನಡೆಯುವ ಕ್ರಿಯೆಗಳು ಸೂಕ್ಷ್ಮಶರೀರದಿಂದ ಉಂಟಾದ ಕ್ರಿಯೆಗಳಾಗಿವೆ. ಇಂತಹ (ಸ್ವಪ್ನ)ಲೋಕವನ್ನು ಅನುಭವಿಸುವ ಜೀವನೇ ತೈಜಸ.

ಪ್ರಾಜ್ಞ: ಸುಷುಪ್ತಿಯಲ್ಲಿ ಸ್ಥೂಲಶರೀರವೂ ಇಚ್ಛಾಪೂರ್ವಕ ಕೆಲಸ ಮಾಡುವುದಿಲ್ಲ; ಇಂದ್ರಿಯ ಮತ್ತು ಅಂತ:ಕರಣಗಳೂ ಕೆಲಸ ಮಾಡುವುದಿಲ್ಲ. ಅಂದರೆ, ಜೀವನು ಪ್ರಪಂಚದೊಡನೆಯಾಗಲಿ, ಸ್ವಪ್ನಲೋಕದೊಡನೆಯಾಗಲಿ ವ್ಯವಹರಿಸದೆ, ತಾನೊಬ್ಬನೇ ತಾತ್ಕಾಲಿಕವಾಗಿ ನಿಸ್ಸಂಗಿಯಾಗಿರುತ್ತಾನೆ. ಆದರೆ ಅವನೊಡನೆ ಕಾರಣ ಶರೀರವಿರುತ್ತದೆ. ಕಾರಣ ಶರೀರದಲ್ಲಿ ಅವಿದ್ಯೆ ಮತ್ತು ಕರ್ಮಗಳಿರುತ್ತವೆಯಾದುದರಿಂದ, ಸುಷುಪ್ತಿಯಲ್ಲಿರುವ ಆತ್ಮನು ನಿಸ್ಸಂಗಿಯಾದರೂ ಮುಕ್ತನಲ್ಲ. ಹೀಗೆ ಕಾರಣಶರೀರದೊಡನೆ ಇರುವ ಆತ್ಮನೆ ಪ್ರಾಜ್ಞ.

**ಜೀವನ್ಮುಕ್ತಿ :** ಸ್ಥೂಲಶರೀರಿಯಾಗಿ (ಜೀವಿಸಿರುವಾಗಲೇ) ಪಡೆದ ಮುಕ್ತಿ. ವೈಷ್ಣವರ ಪ್ರಕಾರ (ರಾಮಾನುಜ ಮತ್ತು ಮಧ್ವರ ಪ್ರಕಾರ), ಮುಕ್ತಿ ಸಾಧ್ಯವಾಗುವುದು ಮರಣದ ನಂತರವೇ ಆದುದರಿಂದ, ಜೀವನ್ಮುಕ್ತಿ ಅಸಾಧ್ಯ. ಆದರೆ, ಕೇವಲಾದ್ವೈತಿ ಹಾಗೂ ವಚನಕಾರರ ಪ್ರಕಾರ, ಮುಕ್ತಿಯನ್ನು ಬದುಕಿದ್ದಾಗಲೇ ಅನುಭವಿಸಬಹುದು.

**ಜೀವನ ಪ್ರಕೃತಿಯ ಮರೆದರ್ಪಿಸುವುದು :** ಜೀವನು ಪ್ರಕೃತಿಯ ಬಂಧನದಲ್ಲಿರುವುದರಿಂದ, ತಾನು ದೇಹ, ಅಂತಃಕರಣ, ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳ ಅಧೀನದಲ್ಲಿದ್ದೇನೆಂದು ತಿಳಿದುಕೊಂಡಿರುತ್ತಾನೆ. ವಾಸ್ತವವಾಗಿ ಪ್ರಕೃತಿಯೂ ಸಹ ಶಿವನ ಶಕ್ತಿಯ ರೂಪಾಂತರ. ಆದರೆ ಪ್ರಕೃತಿಯ ದುರ್ಗುಣಗಳನ್ನು ಕಡಿಮೆಮಾಡಿ, ಪ್ರಕೃತಿಯನ್ನೂ ಅರ್ಪಿಸಬಹುದು.

**ಜೀವನ ಸಂಚಾರ :** ಜೀವನು ತನ್ನ ಕರ್ಮಗಳಿಗನುಸಾರವಾಗಿ ಜನ್ಮದಿಂದ ಜನ್ಮಕ್ಕೆ ಸಂಚಾರ ಮಾಡುವುದು; ಸಂಸಾರ.

**ಜೀವಪಿಂಡ :** ಪರಶಿವನಿಗೆ ಹೇಗೆ ಶಕ್ತಿ ಇದೆಯೋ ಮತ್ತು ಆ ಶಕ್ತಿ ಹೇಗೆ ಪ್ರಪಂಚ (ಬ್ರಹ್ಮಾಂಡ)ವಾಗಿ ಮಾರ್ಪಾಡಾಗಿದೆಯೋ ಹಾಗೆಯೇ ಜೀವನಿಗೂ ಶಕ್ತಿ ಇದೆ ಹಾಗೂ ಆ ಶಕ್ತಿಯೇ ಅವನ ದೇಹೇಂದ್ರಿಯಾದಿಯಾಗಿ ಪಿಂಡವಾಗಿ ಮಾರ್ಪಾಡಾಗಿದೆ.

**ಜೀವ ನಿರ್ಜೀವದಲ್ಲಿ ಅಡಗುವುದು :** ಜೀವನು (ಅಂಗನು) ಮರೆವಿನಿಂದಾಗಿ ತಾನು ಶಿವನಿಂದ ಪ್ರತ್ಯೇಕವೆಂದು ತಿಳಿದುಕೊಂಡಿರುತ್ತಾನೆ. ಆದರೆ, ಅನುಭಾವದಲ್ಲಿ ಅಂಗನು ಲಿಂಗದಲ್ಲಿ ಲೀನವಾದಾಗ, ಅವನು ತನ್ನ ಪ್ರತ್ಯೇಕತೆಯನ್ನು ಕಳೆದುಕೊಂಡು, ಜೀವನಲ್ಲದ ('ನಿರ್ಜೀವ') ಪರಶಿವನೊಂದಿಗೆ ಅಡಗುತ್ತಾನೆ. (೯ : ೬೩೭)

**ಜೀವಪ್ರಕೃತಿ :** ಜೀವನು ತನ್ನ ಅಜ್ಞಾನದಿಂದಾಗಿ ಅಧೋಮಾಯೆಗೆ ಅಧೀನನಾಗಿರುತ್ತಾನೆ. ಈ ಅಧೋಮಾಯೆ ಅಥವಾ ಶಕ್ತಿಗೆ ಪ್ರಕೃತಿಯೆಂದು ಹೆಸರು. ದೇಹೇಂದ್ರಿಯಾದಿಗಳೆಲ್ಲವೂ ಪ್ರಕೃತಿಯ ವಿವಿಧ ರೂಪಾಂತರಗಳು ಹಾಗೂ ಅವು ಜೀವನಿಗೆ ಸೇರಿದವಾದುದರಿಂದ ಅವು ಜೀವಪ್ರಕೃತಿಯೆನಿಸಿಕೊಳ್ಳುತ್ತವೆ. (೮ : ೧೬೬೨)

**ಜೀವಭ್ರಮೆ :** ನಾನು ಒಬ್ಬ ಪ್ರತ್ಯೇಕ ಜೀವ, ನಾನು ಬಂಧನದಲ್ಲಿದೇನೆ, ನಾನು ಮಹದಲ್ಲಿ ಕೂಡ (ಬೆರೆಯ)ಬೇಕು ಎಂಬುದೂ ಒಂದು ರೀತಿಯ ಭ್ರಮೆ. ಯಾವ ವ್ಯಕ್ತಿಯೂ ಪರಶಿವನಿಂದ ಪ್ರತ್ಯೇಕವಲ್ಲ; ಪರಶಿವನೊಂದಿಗೆ ಬೆರೆಯಲು ಎಲ್ಲಿಗೂ ಹೋಗಬೇಕಾಗಿಲ್ಲ. (೫ : ೯೦೮)

**ಜೀವಶೂನ್ಯ :** ಅಂಗನು (ಜೀವನು) ತಾನು ಪರಶಿವನಿಂದ ಪ್ರತ್ಯೇಕವೆಂದು ತಿಳಿಯದೇ, ಪರಶಿವನು ತನ್ನ ತುಂಬೆಲ್ಲ ('ಪರಿಪೂರ್ಣ') ಪ್ರವೇಶಿಸಿದ್ದಾನೆ ಎಂಬ ರಹಸ್ಯ (ಭೇದ)ವನ್ನು ತಿಳಿದರೆ ಆಗ ಅವನು ಜೀವನಾಗಿದ್ದರೂ ತನ್ನ ಜೀವತ್ವವನ್ನು ಕಳೆದುಕೊಂಡಿದ್ದಾನೆ ಎಂದರ್ಥ.

**ಜೀವಸಂಹಾರಿ :** ಶರಣಸ್ಥಲ ತಲುಪುವವವರೆಗೂ ಭಕ್ತನು ತನ್ನ ಪ್ರತ್ಯೇಕತೆಯನ್ನೇ ಸತ್ಯವೆಂದು ತಿಳಿದುಕೊಂಡಿರುತ್ತಾನೆ. ಆದರೆ ಅನುಭಾವದ ದೆಸೆಯಿಂದಾಗಿ ಶಿವ-ಜೀವರ ಐಕ್ಯತೆ ಉಂಟಾದಾಗ ತನ್ನ ಜೀವತ್ವ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ಉಪಾಧಿಗಳು ಇಲ್ಲವಾಗುತ್ತವೆ. ಪರಮಾತ್ಮನು ಎಲ್ಲೆಲ್ಲಿಯೂ ಇದ್ದಾನೆಂದು ಒಪ್ಪಿಕೊಳ್ಳುವುದೂ ಒಂದೇ, ಅವನು ಜೀವಸಂಹಾರಿ ಎನ್ನುವುದೂ ಒಂದೇ. (೧ : ೯೪೭)

**ಜ್ಯೋತಿ :** ಜ್ಯೋತಿ ಎಂದರೆ ಬೆಳಕು ಅಥವಾ ದೀಪ ಎಂಬ ಸಾಮಾನ್ಯ ಅರ್ಥವಿರುವುದಾದರೂ, ವಚನಗಳಲ್ಲಿ ಅದಕ್ಕೆ ಅನುಭಾವಿಯು ತನ್ನ ಬೋಧಚಕ್ಷುವಿನಿಂದ ಕಾಣುವ ಬೆಳಕು ಎಂಬರ್ಥವೇ ಇದೆ. ಇದು ಸಾಧಾರಣ ರೀತಿಯ ಬೆಳಕಲ್ಲ. ಚೈತನ್ಯಾತ್ಮಕ ಬೆಳಕು; ಅಥವಾ ಚಿದ್ಬೆಳಗು.

**ಜ್ಞಾನ :** ವಚನಕಾರರು ಈ ಪದವನ್ನು ಕನಿಷ್ಠ ನಾಲ್ಕು ಅರ್ಥಗಳಲ್ಲಿ ಬಳಸಿರುವಂತೆ ಕಾಣುತ್ತದೆ.

೧. ಪದಾರ್ಥ, ಇಂದ್ರಿಯ ಮತ್ತು ಅಂತಃಕರಣಗಳ ಸನ್ನಿಕರ್ಷದಿಂದ ಉಂಟಾಗುವ ಪರಿಣಾಮ. ಉದಾಹರಣೆಗೆ, ಕಣ್ಣು ಕೆಂಪು ಬಣ್ಣವನ್ನು ನೋಡಿ, ಬುದ್ಧಿ "ಈ ಹೂವು ಕೆಂಪಗಿದೆ" ಎಂದು ನಿರ್ಧರಿಸಿದಾಗ ನಮಗೆ ಈ ಹೂವಿನ ಜ್ಞಾನ ಉಂಟಾಯಿತೆಂದರ್ಥ. ಅದೇ ರೀತಿ, ಹೊಗೆಯನ್ನು ನೋಡಿ, ಬೆಂಕಿಯನ್ನು ನೋಡದೆಯೇ 'ಅಲ್ಲಿ ಬೆಂಕಿಯಿರಬೇಕೆಂಬ' ಜ್ಞಾನ ಪಡೆಯುತ್ತೇವೆ. ಅದೇ ರೀತಿ ವೇದ, ಉಪನಿಷತ್ತುಗಳನ್ನು ಓದಿ ನಮಗೆ ಆತ್ಮವಿದೆ ಎಂಬ ಜ್ಞಾನವನ್ನು ಪಡೆಯುತ್ತೇವೆ.

೨. ಕೆಲವು ವೇಳೆ ಜ್ಞಾನವೆಂದರೆ 'ನಿಜವಾದ ಜ್ಞಾನ' ಎಂದಾಗುತ್ತದೆ. ಶಿವನ ಜ್ಞಾನವೊಂದೇ ನಿಜವಾದ ಜ್ಞಾನ. ಶಾಸ್ತ್ರಜ್ಞಾನ, ವೇದಪುರಾಣಗಳ ಜ್ಞಾನ ಇವು ನಿಜವಾದ ಜ್ಞಾನವಲ್ಲ. ಏಕೆಂದರೆ, ಅವುಗಳಿಂದ ನಮ್ಮ ವ್ಯವಹಾರ ಉತ್ತಮವಾಗಬಲ್ಲುದೆ ಹೊರತು, ಪರಮ ಪುರುಷಾರ್ಥವಾದ ಲಿಂಗಾಂಗ ಸಾಮರಸ್ಯ ಸಾಧ್ಯವಾಗುವುದಿಲ್ಲ. ಈ ಕಾರಣಕ್ಕಾಗೇ ಬಸವಣ್ಣನವರು "ನಿಮ್ಮನರಿಯದ ಜ್ಞಾನವೆಲ್ಲ ಅಜ್ಞಾನವಯ್ಯ" (೧ : ೭೯) ಎಂದಿದ್ದಾರೆ.

೩. ಅನುಭಾವ ಅಥವಾ ಯೋಗ ಪ್ರತ್ಯಕ್ಷ ಎಂಬುದು ಮತ್ತೊಂದು ಅರ್ಥ. ಅನುಭಾವದಲ್ಲಿ ಆತ್ಮನು ದೇಹ, ಇಂದ್ರಿಯ ಮತ್ತು ಅಂತಃಕರಣಗಳ ಜೊತೆಗಿನ ಸಂಬಂಧವನ್ನು ತಾತ್ಕಾಲಿಕವಾಗಿ ಕಳೆದುಕೊಂಡು ನಿಸ್ಸಂಗಿಯಾಗಿರುತ್ತಾನೆ. ತಾನು ಪರಮಾತ್ಮನ

ಅಂಗವೆಂಬ ಅರಿವು ಆಗ ಮೂಡುತ್ತದೆ. ಆ ಅರಿವೇ ಜ್ಞಾನ. ಇದು ಇಂದ್ರಿಯ ಪ್ರತ್ಯಕ್ಷದಿಂದಲೂ ಅನುಮಾನ (ತರ್ಕ)ದಿಂದಲೂ ಪಡೆದ ಜ್ಞಾನಕ್ಕಿಂತ ಭಿನ್ನ ಎಂಬುದು ಗಮನಾರ್ಹ.

೪. ಯಾವುದರಿಂದ ನಮ್ಮ ಬುದ್ಧಿ ಚಿಂತಿಸಬಲ್ಲುದೋ, ಇಂದ್ರಿಯಗಳು ನೋಡಬಲ್ಲವೋ ಅದೇ ಜ್ಞಾನ ಅಥವಾ ಅರಿವು ಅಥವಾ ಚಿತ್ತು. ವಾಸ್ತವವಾಗಿ, ವಚನಕಾರರ ಪ್ರಕಾರ, ಚಿತ್ತೇ ಚಿಂತಿಸುವುದಿಲ್ಲ, ಆದರೆ ಅದರ ಸಾನ್ನಿಧ್ಯದಿಂದಾಗಿ ಬುದ್ಧಿಯು ಚಿಂತಿಸುತ್ತದೆ. ಎಲ್ಲಿಯವರೆಗೆ ಜ್ಞಾನ (ಚಿತ್ತು) ನಮ್ಮಲ್ಲಿ ಇರುತ್ತದೆಯೋ ಅಲ್ಲಿಯವರೆಗೆ ನಾವು ಜೀವಿಸಿರುತ್ತೇವೆ, ಚಿಂತಿಸುತ್ತೇವೆ, ನೋಡುತ್ತೇವೆ. ಅದು ದೇಹದಿಂದ ನಿರ್ಗಮಿಸಿದ ಕೂಡಲೇ ನಾವು ನಿರ್ಜೀವರಾಗುತ್ತೇವೆ. ನಾವು ಇತರ ವಸ್ತುಗಳ ಜ್ಞಾನ ಪಡೆಯುತ್ತಿರುವಾಗ, ನಮಗೆ ಚಿತ್ತು (ಜ್ಞಾನ) ಇದೆ ಎಂಬ ಅಸ್ಪಷ್ಟ ಅರಿವೂ ಇರುತ್ತದೆ. ಆದರೆ ಅನುಭಾವದಲ್ಲಿ ಆ ಜ್ಞಾನದ ಅರಿವೇ ಪ್ರಧಾನವಾಗಿ, ಇತರ ಜ್ಞಾನ ಇಲ್ಲವಾಗುತ್ತದೆ. ಅನುಭಾವದಲ್ಲಿ ಸಿದ್ಧವಾಗುವ ಚಿತ್ತು ಪರಶಿವನೆಂಬ ಮಹಾಚಿತ್ತಿನ ಅಂಶ. ಈ ಅರ್ಥದಲ್ಲಿ, ನಮ್ಮ ಚಿತ್ತು (ಆತ್ಮ) ಜ್ಞಾನ ಎಂದೂ ಪರಶಿವನು ಮಹಾಜ್ಞಾನ ಎಂದೂ ವಚನಕಾರರು ಹೇಳುತ್ತಾರೆ.

**ಜ್ಞಾನಕಲಾತ್ಮ :** ಪರಶಿವನ ಮತ್ತೊಂದು ಹೆಸರು ಜ್ಞಾನ ಅಥವಾ ಅರಿವು. ಆದರೆ ಈ ಜ್ಞಾನವು ಮಾನವರು ಪ್ರಮಾಣಗಳ ಮೂಲಕ ಪಡೆಯುವ ಜ್ಞಾನವಲ್ಲ. ಇಲ್ಲಿ ಜ್ಞಾನವೆಂದರೆ ಅಪರಿಮಿತ ಚೈತನ್ಯ (ಚಿತ್). ಅದು ಕಲಾಶಕ್ತಿಯ ಬಂಧನಕ್ಕೊಳಗಾದಾಗ ಜೀವಾತ್ಮನೆನಿಸಿಕೊಳ್ಳುತ್ತದೆ. ಆದುದರಿಂದ ಜ್ಞಾನಕಲಾತ್ಮ ಎಂದರೆ ಬಂಧನಕ್ಕೊಳಗಾದ ಶಿವಾಂಶಿಕನಾದ ಜೀವಾತ್ಮ ಅಥವಾ ಅಂಗ. (೧೨ : ೪೪)

**ಜ್ಞಾನಕಾಂಡ :** ೧. ಪರಬ್ರಹ್ಮನ ಸ್ವರೂಪವನ್ನೂ, ಪರಬ್ರಹ್ಮ ಮತ್ತು ಜಗತ್ತುಗಳಿಗಿರುವ ಸಂಬಂಧವನ್ನೂ, ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಆವಶ್ಯಕವಾದ ಜ್ಞಾನಮಾರ್ಗದ ವಿಧಾನವನ್ನೂ, ಮೋಕ್ಷಸ್ವರೂಪವನ್ನೂ ತಿಳಿಸಿಕೊಡುವ ಉಪನಿಷತ್ತುಗಳು.

೨. ಅರಿತು, ಪೂಜೆ ಮುಂತಾದ ಕ್ರಿಯೆಗಳನ್ನೂ ನೈತಿಕ ಕ್ರಿಯೆಗಳನ್ನು ಆಚರಿಸುವ ಮೂಲಕ ಆತ್ಮವನ್ನು ಹೇಗೆ ಶುದ್ಧಮಾಡಿಕೊಳ್ಳಬಹುದು ಎಂಬುದನ್ನೂ ತಿಳಿಸಿಕೊಡುವ ಶಾಸ್ತ್ರ. ವಾಸ್ತವವಾಗಿ ಈ ಹೆಸರಿನ ಶಾಸ್ತ್ರ ವಚನಗಳಲ್ಲಿ ಇಲ್ಲ. (೮ : ೮೭೯)

**ಜ್ಞಾನಕಾಯ :** ಪರಶಿವನೆಂದರೆ ಕೇವಲ ಚಿದ್ವಸ್ತು. ಈ ಅಪರಿಮಿತ ಚಿತ್ತನ್ನು 'ಜ್ಞಾನ' ಅಥವಾ 'ಅರಿವು' ಎಂದೂ ವಚನಕಾರರು ಕರೆಯುತ್ತಾರೆ. ಐಕ್ಯನಾದವನು ತನ್ನತನವನ್ನು ಕಳೆದುಕೊಂಡು, ತಾನು ಪರಶಿವನ ವಾಹನ; ತನ್ನ ದೇಹ ಪರಶಿವನ ದೇಹ, ಮುಂತಾಗಿ ತಿಳಿದುಕೊಳ್ಳುವುದರಿಂದ, ಅವನ ಕಾಯವು ಭೂತಕಾಯವಲ್ಲ, ಜ್ಞಾನಕಾಯ ಎನಿಸಿಕೊಳ್ಳುತ್ತದೆ. (೧೧ : ೮೬೦)

**ಜ್ಞಾನಗಮ್ಯಲಿಂಗ :** ಪರಶಿವನು ಎಲ್ಲೆಲ್ಲೂ ಇದ್ದಾನೆಂದು ತಿಳಿದ ಸಾಧಕನು ತಾನು ತಿನ್ನುವ ಆಹಾರವನ್ನಷ್ಟೇ ಅಲ್ಲದೇ. ತಾನು ಕುಡಿಯುವ ಗಾಳಿ, ರುಚಿಸುವ ರುಚಿ, ಕೇಳುವ ಶಬ್ದ ಹೀಗೆ ಎಲ್ಲವನ್ನೂ ಪರಶಿವನಿಗೆ ಮಾನಸಿಕವಾಗೇ ಅರ್ಪಿಸುತ್ತಾನೆ. ಅಲ್ಲದೇ ಎಲ್ಲವನ್ನೂ ಶಿವನಿಗೆ ಮೊದಲು ಅರ್ಪಿಸಿ ಅನಂತರ ತಾನು ಅನುಭವಿಸುವ ನಿರ್ಧಾರದಿಂದ ತನ್ನೆಲ್ಲ ಇಂದ್ರಿಯಗಳ ಬಾಗಿಲಿನಲ್ಲೇ ಪರಶಿವನನ್ನು ಪ್ರತಿಷ್ಠಾಪಿಸುತ್ತಾನೆ. ಹೀಗೆ ತನ್ನ ದೇಹಾದಿ ಕರಣಗಳನ್ನೆಲ್ಲ ಪರಶಿವನ ಭೋಗಕ್ಕೆ ಮೀಸಲಾಗಿಟ್ಟ ಸಾಧಕನ ಅಂಗವು ಭೋಗಾಂಗವಾಗಿ ಪರಿಣಮಿಸುತ್ತದೆ. ಸಾಧಕನು ಅದರಲ್ಲಿ ಕಾಣುವ ಲಿಂಗವೇ ಜ್ಞಾನಕ್ಕೆ ಗಮ್ಯವಾದ ಲಿಂಗ.

**ಜ್ಞಾನಗುರು :** ಸೃಷ್ಟಿ, ಸ್ಥಿತಿ ಮತ್ತು ಲಯ ಮೂರಕ್ಕೂ ಸಿಕ್ಕದಿರುವಂಥ ಹಾಗೂ ಮುಕ್ತಿಯನ್ನು ಪಡೆಯಲು ಅನುಕೂಲವಾಗುವಂಥ ಮಾರ್ಗವನ್ನು ಬೋಧಿಸುವ ಗುರು. (೮ : ೧೪೫೫)

**ಜ್ಞಾನದ ಸೂತಕ ಹಿಂಗುವುದು :** ನಾನೇ ಬೇರೆ, ಪರಶಿವನೇ ಬೇರೆ ಎಂಬ ಅಜ್ಞಾನವೇ ಜ್ಞಾನದ ಸೂತಕ. ಪರಶಿವ ಎಲ್ಲೆಲ್ಲಿಯೂ ಇದ್ದಾನೆ, ಹಾಗೂ ಅವನನ್ನು ಅಂಗದ ಪ್ರತಿಭಾಗದಲ್ಲಿಯೂ ಪ್ರತಿಷ್ಠಾಪಿಸಬಹುದು ಎಂಬ ಅರಿವೇ ಜ್ಞಾನದ ಸೂತಕವನ್ನು ಹಿಂಗಿಸುವುದು. ಪ್ರಾಣಲಿಂಗಿಯಾಗಬೇಕೆಂಬುವವನು ಜ್ಞಾನದ ಸೂತಕ ಹಿಂಗಿಸುವುದು ಅವಶ್ಯಕ. (೮ : ೧೦೩೮)

**ಜ್ಞಾನ ಪಾದೋದಕ :** ಪಾದೋದಕ ವಿಧಿಗಳಲ್ಲಿ ಒಂದಾದ ಜ್ಞಾನಪಾದೋದಕವು ಒಂದು ಸಾಂಕೇತಿಕ ಕ್ರಿಯೆ. ಅದರ ಉದ್ದೇಶ ಸಾಧಕನಲ್ಲಿ ಜ್ಞಾನ ಮೂಡಿಸುವುದು.

**ಜ್ಞಾನಪಿಂಡ :** ನಮ್ಮ ದೇಹಾದಿಕರಣಗಳೆಲ್ಲವೂ ಶಕ್ತಿಯಿಂದ ಮಾಡಲ್ಪಟ್ಟಿದ್ದರೂ, ಅನುಭಾವಿಗೆ ಶಕ್ತಿಯ ಪ್ರತಿಕರದಲ್ಲೂ ಜ್ಞಾನವು (ಚೈತನ್ಯವು) ಕಾಣುತ್ತದೆ. ಮಾಂಸಪಿಂಡದಲ್ಲಿರುವ ಅರಿಷಡ್ವೈರಿಗಳು, ದೇಹವಿಕಾರಗಳು, ಇತ್ಯಾದಿಗಳು ಜ್ಞಾನಪಿಂಡದಲ್ಲಿಲ್ಲ. ಏಕಂದರೆ, ಮಾಂಸಪಿಂಡದಲ್ಲಿರುವ ನಾನೆಂಬ ಭಾವವು ಜ್ಞಾನಪಿಂಡದಲ್ಲಿಲ್ಲ. ಜ್ಞಾನಪಿಂಡದಲ್ಲಿರುವ ನಿರ್ಭಾವ ಚಿತ್ತು (೭ : ೧೧೧೧)

**ಜ್ಞಾನಲಿಂಗ ಮೂರು :** ಆಧ್ಯಾತ್ಮಿಕ ಸಾಧನೆಯ ಕೊನೆಯ ಮೂರು ಹಂತಗಳಾದ ಪ್ರಾಣಲಿಂಗಿಸ್ಥಲ, ಶರಣಸ್ಥಲ ಮತ್ತು ಐಕ್ಯಸ್ಥಲದಲ್ಲಿ ಸಾಧಕನು ಹೆಚ್ಚಾಗಿ ಜ್ಞಾನ ಮತ್ತು ಧ್ಯಾನ (ಅನುಭಾವ)ಗಳ ಮೂಲಕ ಪರಶಿವನ ಮೂರು ರೂಪಗಳಾದ ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗಗಳನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದುದರಿಂದ ಈ ಮೂರು ಲಿಂಗಗಳು ಜ್ಞಾನಲಿಂಗಗಳೆನಿಸಿಕೊಳ್ಳುತ್ತವೆ. (೧೧ : ೨೫೦)

**ಜ್ಞಾನಪರಿದಾತ :** ಇಲ್ಲಿ ಜ್ಞಾನವೆಂದರೆ ತಿಳಿಯುವುದು ಎಂದರ್ಥವಲ್ಲ, ಎಂಬುದು ಸ್ಪಷ್ಟವಾಗೇ ಇದೆ; ಜ್ಞಾನವೆಂದರೆ ಮಹಾಚಿತ್ತು; ಅಥವಾ ಪರಶಿವ. ಆದುದರಿಂದ ಜ್ಞಾನಪರಿದಾತನು ಶಿವಜ್ಞಾನಿ ಅಥವಾ ಶಿವಾನುಭವಿಯೇ ಆಗಿರಬೇಕು. (೫ : ೭೭೩)

ಜ್ಞಾನವಾರು : ಕೆಲವು ವೇಳೆ ಶರಣರು ಈ ಪದಕ್ಕೆ ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನ, ಮನ:ಪರ್ಯಾಯ ಜ್ಞಾನ, ಕೇವಲ ಜ್ಞಾನ ಮತ್ತು ಜ್ಯೋತಿರ್ಜ್ಞಾನ ಎಂಬರ್ಥಕೊಟ್ಟಿದ್ದರೆ, ಮತ್ತೆ ಕೆಲವು ವೇಳೆ ಮತಿಜ್ಞಾನ, ಶ್ರುತಿಜ್ಞಾನ, ಖಂಡಜ್ಞಾನ, ಕೇವಲ ಜ್ಞಾನ, ಜ್ಯೋತಿರ್ಜ್ಞಾನ ಮತ್ತು ಮಹಾಜ್ಯೋತಿರ್ಜ್ಞಾನ ಎಂಬರ್ಥ ಕೊಟ್ಟಿದ್ದಾರೆ.

ಜೈನರು ಐದು ರೀತಿಯ ಜ್ಞಾನಗಳಿವೆ ಎಂದು ಹೇಳಿದರೆ, ವಚನಕಾರರು ಆರು ಪ್ರಕಾರದ ಜ್ಞಾನವನ್ನು ಪ್ರತಿಪಾದಿಸಿದ್ದಾರೆ. ಜೈನರ ಐದು ಪ್ರಕಾರದ ಜ್ಞಾನವೆಂದರೆ, ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನ, ಮನ:ಪಯಾಾಯ ಜ್ಞಾನ ಮತ್ತು ಕೇವಲ ಜ್ಞಾನ. ಬುದ್ಧಿ (ಮತಿ) ಮತ್ತು ಇಂದ್ರಿಯಗಳ ಮೂಲಕ ತಿಳಿದುಕೊಳ್ಳುವುದೇ ಮತಿಜ್ಞಾನ. (ಹಿಂದೂಗಳು ಇದನ್ನು ಪ್ರತ್ಯಕ್ಷವೆಂಬ ಹೆಸರಿನಿಂದ ಕರೆದಿದ್ದಾರೆ); ಹಿಂದೂಗಳು ಶಬ್ದಪ್ರಮಾಣವೆನ್ನುವುದನ್ನೇ ಜೈನರು ಶ್ರುತಜ್ಞಾನವೆನ್ನುತ್ತಾರೆ; ದೂರದಲ್ಲಿ ನಡೆಯುತ್ತಿರುವ ಘಟನೆಗಳನ್ನು ಯಾವ ಮಾಧ್ಯಮದ ಸಹಾಯವೂ ಇಲ್ಲದೆ ತಿಳಿದುಕೊಳ್ಳುವ ಈ ಅತೀಂದ್ರಿಯ ಜ್ಞಾನವೇ ಅವಧಿಜ್ಞಾನ; ಬೇರೆಯವರ ಮನಸ್ಸಿನಲ್ಲಿ ನಡೆಯುತ್ತಿರುವ ಕ್ರಿಯೆಗಳನ್ನು ಅರಿಯುವುದೇ ಮನ:ಪರ್ಯಾಯ ಜ್ಞಾನ; ತ್ರಿಕಾಲ ಜ್ಞಾನಕ್ಕೆ ಕೇವಲ ಜ್ಞಾನವೆಂಬುದು ಮತ್ತೊಂದು ಹೆಸರು. ಇದು ಸಿದ್ಧರಿಗಷ್ಟೇ ಸಾಧ್ಯ. ಜೈನರು ಇಲ್ಲಿಗೇ ನಿಲ್ಲಿಸಿದರೆ ವಚನಕಾರರು, ಪರಶಿವನ ಅನುಭವವನ್ನು ಪಡೆಯುವುದೇ ಜ್ಯೋತಿರ್ಜ್ಞಾನ ಎಂಬ ಆರನೆಯ ಪ್ರಕಾರ ಜ್ಞಾನ ಎನ್ನುತ್ತಾರೆ.

ಎರಡನೆ ಗುಂಪಿನ ಆರು ಪ್ರಕಾರಗಳಿಗೆ ಈ ಅರ್ಥವಿದೆ : ಮತಿಜ್ಞಾನ ಮತ್ತು ಶ್ರುತಜ್ಞಾನಕ್ಕೆ ಮೇಲೆ ಹೇಳಿರುವ ಅರ್ಥಗಳಿವೆ, ಖಂಡಜ್ಞಾನವೆಂದರೆ ನಾನು ಬೇರೆ ಪ್ರಪಂಚ ಬೇರೆ, ಪರಶಿವ ಬೇರೆ ಎಂಬ ಖಂಡಿತ ಜ್ಞಾನ; ಧ್ಯಾನಸ್ಥನಾದ ಶಿವಯೋಗಿಗೆ ಪ್ರಪಂಚವೂ ತನ್ನ ದೇಹವೂ ಕಾಣೆಯಾಗಿ ಕೇವಲ ತಾನೊಬ್ಬನೇ ಇರುವುದರ ಅರಿವಾಗುತ್ತದೆ. ಈ ಅರಿವೇ ಕೇವಲ ಜ್ಞಾನ. ಧ್ಯಾನದ ಮುಂದಿನ ಹಂತದಲ್ಲಿ ಶಿವಯೋಗಿಗೆ ಅನಾದಿ ಅನಂತ, ಸೂರ್ಯಕೋಟಿ ಪ್ರಕಾಶವುಳ್ಳ ಬೆಳಕು (ಜ್ಯೋತಿ) ಕಾಣಿಸಿಕೊಳ್ಳುತ್ತದೆ. ಇದರ ಅರಿವೇ ಜ್ಯೋತಿರ್ಜ್ಞಾನ. ಕೊನೆಯಲ್ಲಿ ಈ ಬೆಳಕೂ ತನ್ನ ಚಿತ್ತೂ ಒಂದೇ, ಅದೇ ಪರಶಿವನ ಅಂಗ ಎಂಬ ಅರಿವುಂಟಾಗುತ್ತದೆ. ಇದೇ ಮಹಾಜ್ಯೋತಿರ್ಜ್ಞಾನ.

ಇಲ್ಲಿ ಗಮನಿಸಬೇಕಾದ ಅಂಶವಿದು : ತನ್ನಿಂದ ಹೊರಗಿರುವ ವಸ್ತುಗಳನ್ನಾಗಲಿ, ತನ್ನೊಳಗೆ ಇರುವ ಮಾನಸಿಕ ಸ್ಥಿತಿಗಳನ್ನಾಗಲಿ ತಿಳಿದುಕೊಳ್ಳುವ ವಿಧಾನಕ್ಕೂ ಮಹಾಜ್ಯೋತಿರ್ಜ್ಞಾನವನ್ನು ತಿಳಿದುಕೊಳ್ಳುವ ವಿಧಾನಕ್ಕೂ ಒಂದು ಮುಖ್ಯ ಅಂತರವಿದೆ. ಮೊದಲನೆ ವಿಧಾನದಲ್ಲಿ ಇಂದ್ರಿಯ, ಮನಸ್ಸು, ಬುದ್ಧಿ, ಅಹಂ ಇವುಗಳ ಕ್ರಿಯೆ ಆವಶ್ಯಕವಾದರೆ, ಎರಡನೆಯದರಲ್ಲಿ ಅವು ಬೇಕೇ ಇಲ್ಲ. ಮೊದಲನೆಯದರಲ್ಲಿ 'ನಾನು ಇಂತಹ ವಸ್ತುವನ್ನು ತಿಳಿದುಕೊಳ್ಳುತ್ತಿದ್ದೇನೆ, ನನಗೂ ಆ ವಸ್ತುವಿಗೂ ವ್ಯತ್ಯಾಸವಿದೆ' ಎಂಬ

ದ್ವೈತಭಾವವಿದ್ದರೆ, ಎರಡನೆಯದರಲ್ಲಿ ಅಂತಹ ದ್ವೈತಭಾವ ಹೋಗಿ, ನಾನೇ ಮಹಾಲಿಂಗವಾಗಿದ್ದೇನೆ ಎಂಬ ಅದ್ವೈತ ಭಾವ ಉಂಟಾಗುತ್ತದೆ.

**ಜ್ಞಾನವಾಹನ :** ಜ್ಞಾನವು ಅಗೋಚರ ವಸ್ತುವಾದರೂ, ಅದು ನಮ್ಮಲ್ಲೇ ಇದ್ದು, ಇಂದ್ರಿಯಗೋಚರವಾದ ಎಲ್ಲ ಕೆಲಸಗಳನ್ನೂ ಮಾಡಿಸುತ್ತದೆ. ಜ್ಞಾನವೆಂದರೆ (ಈ ಸಂದರ್ಭಗಳಲ್ಲಿ) ಉಪಾಧಿರಹಿತ, ಅಪರಿಮಿತ ಜ್ಞಾನವಾದುದರಿಂದ, ಮುಕ್ತವಾದವನಷ್ಟೇ ಜ್ಞಾನವಾಹನವಾಗುತ್ತಾನೆ (ನೋಡಿ : **ವೃಷಭ**) (೮ : ೫೪೨).

**ಜ್ಞಾನವಿಲ್ಲದ ಪೂಜೆ :** ಪೂಜ್ಯವಸ್ತು (ಪರಶಿವನ)ವಿನ ಸ್ವರೂಪ ಎಂಥಹುದು, ಅವನನ್ನು ಏಕೆ ಪೂಜಿಸಬೇಕು, ಯಾವ ಉದ್ದೇಶಕ್ಕಾಗಿ ಪೂಜಿಸಬೇಕು, ಎಂಬ ಜ್ಞಾನವಿಲ್ಲದೆಯೇ, ಯಾಂತ್ರಿಕವಾಗಿ ಮಾಡುವ ಪೂಜೆ. (೮ : ೯೧೩)

**ಜ್ಞಾನಶೂನ್ಯಸ್ಥಲ :** ಪ್ರತಿಯೊಂದು ಪ್ರತ್ಯಕ್ಷಜ್ಞಾನವೂ ಜ್ಞಾನೇಂದ್ರಿಯ, ಮನಸ್ಸು, ಬುದ್ಧಿ, ಅಹಂ ಮತ್ತು ಜ್ಞೇಯವಸ್ತುಗಳ ಸಂಬಂಧದಿಂದ ಉಂಟಾಗುತ್ತದೆ. ಇದರಲ್ಲಿ ಮುಖ್ಯವಾದ ಎರಡು ಘಟಕಗಳೆಂದರೆ - ನಾನು ಎಂಬ ಜ್ಞಾನ ಮತ್ತು ವಸ್ತುವಿನ ಜ್ಞಾನ. ಆದರೆ ಐಕ್ಯಸ್ಥಲ ತಲುಪಿದ ಶರಣನಿಗೆ ಗಾಢವಾದ ಧ್ಯಾನಸ್ಥಿತಿಯಲ್ಲಿರುವಾಗ ಸ್ವಪ್ರಜ್ಞೆ (ನಾನು ಎಂಬ ಜ್ಞಾನ)ಯಾಗಲಿ, ವಸ್ತುವಿನ (ಅಥವಾ ಪರವಸ್ತುವಿನ) ಪ್ರಜ್ಞೆಯಾಗಲಿ ಇರುವುದಿಲ್ಲ. ಇಂತಹ ಸ್ಥಿತಿಯೇ ಜ್ಞಾನಶೂನ್ಯಸ್ಥಲ. (೨ : ೮೧೯)

**ಜ್ಞಾನಸಾರಾಯ :** ಜ್ಞಾನದ (ಅರಿವಿನ) ಕೇಂದ್ರಬಿಂದುವೇ (ಪರಶಿವನೇ) ಜ್ಞಾನದ ಸಾರ ಎಂದು ಅರಿತವನು.

**ಜ್ಞಾನಸಿಂಧು ಸಂಪೂರ್ಣ :** ಸಮುದ್ರವು ಹೇಗೆ ಅಪಾರವೋ ಹಾಗೆಯೇ ಅರಿವೂ (ಪರಶಿವನೂ) ಅಪರಿಮಿತವೇ. ಇಂಥ ಅಪರಿಮಿತ ಜ್ಞಾನವು ಪ್ರತಿಯೊಂದು ವಸ್ತುವಿನಲ್ಲಿಯೂ ತುಂಬಿಕೊಂಡಿದೆ. (೮ : ೧೫೭೯)

**ಜ್ಞಾನಸಿದ್ಧ :** ಜ್ಞಾನ (ಪರಶಿವ)ವನ್ನು ಸಿದ್ಧಿಸಿಕೊಂಡವನು; ಐಕ್ಯ. (೪ : ೪೨)

**ಜ್ಞಾನಸೂತ್ರ ಬಿಂದು ಸಂಬಂಧ :** ಅನಂತ ಚಿತ್ತು (ಪರಶಿವ) ಸೃಷ್ಟಿಪ್ರಾರಂಭಕ್ಕೂ ಮೊದಲು ಬಿಂದು ರೂಪದಲ್ಲಿರುವ ಶಕ್ತಿಯೊಡನೆ ಬೇರಿಲ್ಲದಂತೆ ಬೆರೆತಿರುತ್ತದೆ. ಆ ಕೂಟವೇ ಜ್ಞಾನಸೂತ್ರ ಬಿಂದು ಸಂಬಂಧ (೮ : ೫೦)

**ಜ್ಞಾನಾಗ್ನಿ :** ತನ್ನ ತಾನರಿಯುವುದೇ ಜ್ಞಾನ. ಈ ಜ್ಞಾನ ಸಂಪಾದನೆಯಿಂದಾಗಿ ಅಜ್ಞಾನ ಮತ್ತು ಕರ್ಮಗಳು ಸುಡುತ್ತವೆ; ಅಲ್ಲದೆ ದೇಹದ ಬಯಕೆಗಳೂ ಸುಡುವುದರಿಂದ ಹೊಸ (ಆಗಾಮಿ) ಕರ್ಮಗಳೇ ಇಲ್ಲದಂತಾಗಿ ಸಾಧಕನು ಮುಕ್ತನಾಗುತ್ತಾನೆ. (೧ : ೮೮೨)

**ಜ್ಞಾನೇಂದ್ರಿಯ :** ಜ್ಞಾನವನ್ನು ಕೊಡುವ ಇಂದ್ರಿಯಗಳು. ಕಣ್ಣು, ಕಿವಿ, ನಾಲಗೆ, ಚರ್ಮ ಮತ್ತು ಮೂಗು. ವಾಸ್ತವವಾಗಿ ಈ ಅಂಗಗಳೇ ಜ್ಞಾನೇಂದ್ರಿಯಗಳಲ್ಲ, ಅವುಗಳಲ್ಲಿ ನೋಡುವ, ಕೇಳುವ, ರುಚಿಸುವ, ಸ್ಪರ್ಶಿಸುವ ಮತ್ತು ವಾಸಿಸುವ ಶಕ್ತಿ ಇದೆ. ಇಲ್ಲಿ ಜ್ಞಾನೇಂದ್ರಿಯವೆಂದರೆ ಆ ಶಕ್ತಿಯೇ ಹೊರತು, ಆ ಶಕ್ತಿಯನ್ನು ಹೊಂದಿಂದ ರಕ್ತ ಮಾಂಸಗಳಿಂದಾದ ಅಂಗವಲ್ಲ.

ಈ ಇಂದ್ರಿಯಗಳು ವಸ್ತುಗಳಲ್ಲಿರುವ ರುಚಿ, ರೂಪ, ಗಂಧ ಮುಂತಾದ ಗುಣಗಳನ್ನು ಬುದ್ಧಿಗೆ ತಲುಪಿಸಿದಾಗ, ಬುದ್ಧಿಯು ಇದು ಉಪ್ಪು, ಇದು ಕೆಂಪು ಎಂದು ನಿರ್ಧರಿಸುತ್ತದೆ. ಆದುದರಿಂದ ಜ್ಞಾನಕ್ಕೆ ಜ್ಞಾನೇಂದ್ರಿಯಗಳು ಆವಶ್ಯಕವಾದರೂ ಅವೇ ಪೂರ್ಣ ಕಾರಣವಲ್ಲ.

ಕೆಲವು ವೇಳೆ ಶಿವಯೋಗಿಯು ಇಂದ್ರಿಯಗಳ ಸಹಾಯವಿಲ್ಲದೆಯೇ ಜ್ಞಾನವನ್ನು ಪಡೆಯಬಲ್ಲ. (ನೋಡಿ : **ಜ್ಞಾನವಾರು**)

**ತಗಡ ಸಂಬಂಧ :** ವೀರಶೈವನು ಮೃತನಾದಾಗ ಪ್ರಣವವನ್ನು ಬರೆದ ತಾಮ್ರದ ತಗಡನ್ನು ಅವನ ಹಣೆ ಮೊದಲಾದ ಭಾಗಗಳಿಗೆ ಕಟ್ಟಿದನಂತರ ಅವನ ಪಾರ್ಥಿವ ಶರೀರವನ್ನು ಮಣ್ಣು ಮಾಡುತ್ತಾರೆ. ಬದುಕಿದ್ದಾಗ ಹೇಗೋ ಹಾಗೆ ಲಿಂಗೈಕ್ಯನಾದ ನಂತರವೂ ಅವನ ಶರೀರವು ಪ್ರಣವ ಸಂಗದೊಡನೆ ಇರಬೇಕೆಂಬ ನಂಬಿಕೆಯೇ ಈ ಪದ್ಧತಿಯ ತಳಹದಿ. (೩ : ೯೨೨)

**ತತ್ತ್ವ :** ಈ ಪದವು 'ತತ್' ('ಅದು') ಮತ್ತು 'ತ್ವ' ('ತನ') ಎಂಬ ಎರಡು ಧಾತುಗಳಿಂದ ವ್ಯುತ್ಪತ್ತಿಯಾಗಿದೆ. ಇದರಿಂದ ತತ್ತ್ವವೆಂದರೆ ಒಂದು ವಸ್ತುವಿನ ಮೂಲ ಅಥವಾ ಬದಲಾಗದ ಗುಣ ಎಂಬರ್ಥ ಆಗುತ್ತದೆ.

ಸಾಂಖ್ಯರ ಪ್ರಕಾರ, ತತ್ತ್ವಗಳು ಇಪ್ಪತ್ತೈದು. ಅವೆಂದರೆ ಪ್ರಕೃತಿ, ಬುದ್ಧಿ, ಮನಸ್ಸು, ಅಹಂಕಾರ, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ತನ್ಮಾತ್ರೆಗಳು ಮತ್ತು ಐದು ಮಹಾಭೂತಗಳು ಮತ್ತು ಇಪ್ಪತ್ತೈದನೆ ತತ್ತ್ವ ಆತ್ಮ (ಪುರುಷ). ವಚನಕಾರರ ಪ್ರಕಾರ ತತ್ತ್ವಗಳು ಮೂವತ್ತಾರು. ಅವೆಂದರೆ, ಐದು ಅಧಿದೇವತೆಗಳು, ಐದು ಶಕ್ತಿಗಳು, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು, ವಾಯುಗಳು, ಐದು ಮಹಾಭೂತಗಳು, ಆತ್ಮನೂ ಸೇರಿ ಐದು ಅಂತ:ಕರಣಗಳು, ಪರಶಿವ ಮೂವತ್ತಾರನೆ ತತ್ತ್ವ. ಚಿನ್ನದ ಆಭರಣಗಳಿಗೆ ಚಿನ್ನವೇ ಆಧಾರವಾಗಿರುವಂತೆ, ಪ್ರಪಂಚದ ಚರಾಚರ ವಸ್ತುಗಳಿಗೆ ಈ ತತ್ತ್ವಗಳೇ ಆಧಾರ. ಆಭರಣಗಳ ರೂಪ, ಬದಲಾಗಬಹುದಾದರೂ ಚಿನ್ನದ ಮೂಲಗುಣ ಬದಲಾಯಿಸುವುದಿಲ್ಲ. ಹಾಗೆಯೇ ಚರಾಚರ ವಸ್ತುಗಳ ರೂಪ ಬದಲಾವಣೆಗೊಂಡರೂ ಅವುಗಳಲ್ಲಿರುವ ತತ್ತ್ವಗಳು ಬದಲಾಯಿಸುವುದಿಲ್ಲ.

ಮೂವತ್ತೈದು ತತ್ವಗಳು ಪರಶಿವನಿಂದಲೇ ಉದ್ಭವಿಸುವುದರಿಂದ ಹಾಗೂ ಅವುಗಳಲ್ಲಾಗುವ ರೂಪಾಂತರಕ್ಕೆ ಪರಶಿವನೇ ಕಾರಣನಾದುದರಿಂದ, ಪರಶಿವನಿಗೆ ನಿಜತತ್ವವೆಂದು ಹೆಸರು.

**ತತ್ವಜ್ಞಾನ :** ಇರುವುದೆಲ್ಲದರ ತತ್ವಗಳನ್ನು ಅರಿತುಕೊಳ್ಳುವುದು ಎಂಬುದು ಇದರ ಅರ್ಥ. ಈ ತತ್ವಗಳನ್ನು ನಾವು ಮುಖ್ಯವಾಗಿ ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು. ಇವೆಂದರೆ ಹೊರಜಗತ್ತಿನ ತತ್ವ ಮತ್ತು ಆತ್ಮ ತತ್ವ. ಆದರೆ ಈ ತತ್ವದ ಜ್ಞಾನವು ನಮಗೆ ಬೇರೆಯವರ ಬೋಧನೆಯಿಂದ ಅಥವಾ ಪುಸ್ತಕಗಳಿಂದ ಬರುವುದಿಲ್ಲ. ಅಂದರೆ ಸಾಂಖ್ಯರ ೨೫ ತತ್ವಗಳನ್ನಾಗಲಿ, ವಚನಕಾರರ ೩೬ ತತ್ವಗಳನ್ನಾಗಲಿ ನಾವು ಪರರ ಬೋಧನೆಯಿಂದ ಅಥವಾ ಪುಸ್ತಕಗಳಿಂದ ತಿಳಿದುಕೊಂಡರೆ, ನಾವು ತತ್ವಜ್ಞಾನಿಗಳೆನಿಸಿಕೊಳ್ಳುವುದಿಲ್ಲ. ಇಲ್ಲಿ ತತ್ ಎಂಬ ಪದಕ್ಕೆ ಬದಲಾಗದ ಸತ್ಯ ಎಂಬ ಅರ್ಥವಿದೆ. ಇಂತಹ ಬದಲಾಗದ ಕಾಲಾತೀತ, ದೇಶಾತೀತ ತತ್ವವು ಇಂದ್ರಿಯಾತೀತ, ತರ್ಕಾತೀತ ಮತ್ತು ಮನೋತೀತ. ಅದರ ಜ್ಞಾನವನ್ನು ಯೋಗಿಯ ಸಮಾಧಿ ಸ್ಥಿತಿಯಲ್ಲಿದ್ದಾಗ ಪಡೆಯುವುದರಿಂದ ತತ್ವಜ್ಞಾನವು ಯೋಗಿಗಳಿಗಷ್ಟೆ ಸಾಧ್ಯ.

ವಚನಕಾರರ ಪ್ರಕಾರ ಪರಶಿವನೇ ಮಹಾತತ್ವ ಅಥವಾ ಪರತತ್ವ. ಪರತತ್ವವನ್ನು ಜ್ಞಾತೃವೊಬ್ಬನು ಜ್ಞೇಯವೊಂದನ್ನು ಅರಿತಂತೆ, ಅರಿಯಲು ಸಾಧ್ಯವಿಲ್ಲ. ವಾಸ್ತವವಾಗಿ ಉಳಿದೆಲ್ಲವನ್ನೂ ಅರಿಯುವ ಮೂಲತತ್ವವೇ ಅರಿವು ಅಥವಾ ಜ್ಞಾನ. ಆದುದರಿಂದ ತತ್ವಜ್ಞಾನವೆಂದರೆ ತಾನೇ ಪರಶಿವನ ಅಂಗ ಅಥವಾ ಅಂಶ ಎಂಬ ಅರಿವು. ಹೀಗೆ ತತ್ವಜ್ಞಾನವು ನಮ್ಮನ್ನು ನಾವು ತಿಳಿದುಕೊಳ್ಳುವ ಜ್ಞಾನವಾದರೆ, ಬೇರೆಯ ವಸ್ತುಗಳ ಬಗೆಗಿನ ಜ್ಞಾನವು ಸಾಧಾರಣ ಜ್ಞಾನ ಅಥವಾ ವಿಜ್ಞಾನ ಎನಿಸಿಕೊಳ್ಳುತ್ತದೆ. (೯ : ೧೦೦) (ನೋಡಿ : ತತ್ವ)

**ತತ್ವತ್ರಯ :** ವಚನಕಾರರು ಇರುವುದೆಲ್ಲವನ್ನೂ ಮೂವತ್ತಾರು ತತ್ವಗಳಿಗೆ ಭಟ್ಟಿ ಇಳಿಸುತ್ತಾರೆ. ಹಾಗೂ ಅವುಗಳನ್ನು ಶಿವತತ್ವ, ವಿದ್ಯಾತತ್ವ ಮತ್ತು ಆತ್ಮತತ್ವ ಎಂದು ಮೂರು ಗುಂಪುಗಳನ್ನಾಗಿ ಮಾಡುತ್ತಾರೆ. ೧. ಶಿವತತ್ವವೆಂದರೆ ಉಳಿದ ಮೂವತ್ತೈದು ತತ್ವಗಳಿಗೆ ಮೂಲ, ಆಧಾರ ಮತ್ತು ನಿಯಂತ್ರಕ.

೨. ವಿದ್ಯಾತತ್ವದಲ್ಲಿ ಐದು ಅಧಿದೇವತೆಗಳು ಮತ್ತು ಐದು ಶಕ್ತಿಗಳು ಇವೆ. ಬ್ರಹ್ಮ, ವಿಷ್ಣು, ರುದ್ರ ಈಶ್ವರ ಮತ್ತು ಸದಾಶಿವ ಇವು ಐದು ಅಧಿದೇವತೆಗಳು. ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ ಮತ್ತು ಪರಾಶಕ್ತಿ ಇವು ಐದು ಶಕ್ತಿಗಳು. ಕೆಲವು ವೇಳೆ ಅಧಿದೇವತೆಗಳ ಬದಲು ಐದು ಸಾದಾಖ್ಯಗಳನ್ನು ಹೆಸರಿಸಲಾಗುತ್ತದೆ. ಅದೇ ರೀತಿ ಐದು ಶಕ್ತಿಗಳ ಬದಲು ನಿವೃತ್ತಿಕಲಾ, ಪ್ರತಿಷ್ಠಾಕಲಾ, ವಿದ್ಯಾಕಲಾ, ಶಾಂತಿಕಲಾ ಮತ್ತು ಶಾಂತ್ಯತೀತಕಲಾ ಎಂಬ ಹೆಸರುಗಳನ್ನು ಬಳಸಲಾಗುತ್ತದೆ. ಅಂತೂ ವಿದ್ಯಾತತ್ವದಲ್ಲಿ ಹತ್ತು ಉಪತತ್ವಗಳಿವೆ.

೩. ಆತ್ಮದಲ್ಲಿ ಇಪ್ಪತ್ತೈದು ತತ್ವಗಳಿವೆ. ಅವೆಂದರೆ, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ವಾಯುಗಳು, ಐದು ಮಹಾಭೂತಗಳು ಮತ್ತು ಅಂತಃಕರಣ ಚತುಷ್ಟಯ ಮತ್ತು ಜೀವಾತ್ಮ.

**ತತ್ವತೂರ್ಯ :** ತುರೀಯಾವಸ್ಥೆಯಲ್ಲಿ ಮಾತ್ರ ಅನುಭವಿಸಬಹುದಾದ ತತ್ವ, ಪರಶಿವ.

**ತತ್ವದೀಕ್ಷೆ :** ಮುಮುಕ್ಷುವು ತಾನು ನಲವತ್ನಾಲ್ಕು ತತ್ವಗಳಿಂದ ಕೂಡಿದ ಚಿದಂಗವೆಂದೂ, ಆ ಚಿದಂಗದಲ್ಲಿ ಐವತ್ತೇಳು ಲಿಂಗಗಳು ಅಡಕವಾಗಿವೆಯೆಂದೂ, ತಾನಾರು, ತನ್ನ ಉದ್ದೇಶವೇನಿರಬೇಕು, ೧೦೧ ಸ್ಥಲಗಳ ಮರ್ಮವೇನು ಮುಂತಾದ ತತ್ವಗಳನ್ನು ವಿಧ್ಯುಕ್ತವಾಗಿ ತಿಳಿಸಿಕೊಡುವ ದೀಕ್ಷೆಯೇ ತತ್ವದೀಕ್ಷೆ. ಲಿಂಗದೀಕ್ಷೆ ಪಡೆದವನು ತತ್ವದೀಕ್ಷೆಯಿಲ್ಲದೆಯೇ ಇಷ್ಟಲಿಂಗ ಪೂಜೆ, ಗುರು ಜಂಗಮ ಭಕ್ತಿ, ವಿಭೂತಿ ಧಾರಣೆ ಮುಂತಾದವುಗಳನ್ನು ಮಾಡಿದರೆ ಏನೂ ಪ್ರಯೋಜನವಿರುವುದಿಲ್ಲ. (೧೦ : ೬೫)

**ತತ್ವಮಯ :** ತತ್ವಮಯ ಎಂದರೆ, ಮೂವತ್ತೈದು ತತ್ವಗಳನ್ನು ಒಳಗೊಂಡಿರುವ ಪರಶಿವನೆಂಬ ಮೂವತ್ತಾರನೆಯ ತತ್ವ. ಪ್ರಪಂಚದ ವಿವಿಧ ವಸ್ತುಗಳನ್ನು ಸೃಷ್ಟಿಸುವ, ನಿಯಂತ್ರಿಸುವ, ರಕ್ಷಿಸುವ, ಸಂಹಾರ ಮಾಡುವ, ಜೀವರನ್ನು ಅವರವರ ಕರ್ಮಗಳಿಗನುಸಾರವಾಗಿ ಅನುಗ್ರಹಿಸುವ ಅಥವಾ ಶಿಕ್ಷಿಸುವ ಕಾರ್ಯಗಳನ್ನು ಪರಶಿವನು ಈ ತತ್ವಗಳ ಮೂಲಕ ವ್ಯಕ್ತಪಡಿಸುತ್ತಾನೆ. ಅವು ಅವನ ಹೊರಗಿಲ್ಲವಾದುದರಿಂದ ಅವನು ತತ್ವಮಯನೆನಿಸಿಕೊಳ್ಳುತ್ತಾನೆ. (೫ : ೮೬೧)

**ತತ್ವಮಸಿ :** ತತ್, ತ್ವಂ. ಅಸಿ (=ಅದು, ನೀನು ಆಗಿದ್ದೀಯ). ಈ ಉಪನಿಷತ್ತಿನ ವಾಕ್ಯದ ಪ್ರಕಾರ, ಅದು ಎಂದರೆ ಬ್ರಹ್ಮ. ನೀನು ಎಂದರೆ ಜೀವಾತ್ಮ. ಜೀವನ ನಿಜವಾದ ಸ್ವರೂಪವೂ ಪರಬ್ರಹ್ಮನ ಸ್ವರೂಪವೂ ಒಂದೇ ಆಗಿದೆ, ಎಂಬುದೇ ಈ ವಾಕ್ಯದ ಸಂದೇಶ. ಆದರೆ ಜೀವನು ಪರಬ್ರಹ್ಮನಾಗಬೇಕಾದರೆ, ಅವನಿಗೆ ಸ್ವಾಭಾವಿಕವಾಗಿ ಅನಾದಿಕಾಲದಿಂದ ಅಂಟಿಕೊಂಡಿರುವ ಅವಿದ್ಯೆ ಮತ್ತಿತರ ಉಪಾಧಿಗಳಿಂದ ಮುಕ್ತನಾಗಬೇಕು. ಆಗ ಅವನು ತಾನು ಸಹಜವಾಗಿಯೇ ಬ್ರಹ್ಮ ಸ್ವರೂಪನೆಂದು ಅರಿತುಕೊಳ್ಳುತ್ತಾನೆ.

ಜೀವನು ಬ್ರಹ್ಮನಾಗುವುದೆಂದರೇನೆಂಬುದರ ಬಗೆಗೆ ಅದ್ವೈತಿ ಮತ್ತು ವಿಶಿಷ್ಟಾದ್ವೈತಿಗಳಲ್ಲಿ ಭಿನ್ನಾಭಿಪ್ರಾಯವಿದೆ. ಶಂಕರಾಚಾರ್ಯ ಮತ್ತು ಅವರ ಅನುಯಾಯಿಗಳ ಪ್ರಕಾರ, ಅವಿದ್ಯೆಯಿಂದ ಮುಕ್ತನಾದ ಜೀವನಿಗೆ, ತಾನು ಜೀವನಲ್ಲ, ಬ್ರಹ್ಮ ಎಂಬ ಅರಿವೂ, ಪ್ರಪಂಚವು ಮಿಥ್ಯೆ, ಬ್ರಹ್ಮ ಮಾತ್ರ ಸತ್ಯ ಎಂಬ ಅರಿವೂ ಮೂಡುತ್ತದೆ. ಹೀಗೆ ಜೀವಾತ್ಮನು ಪರಮಾತ್ಮನೇ ಆಗಿದ್ದರೂ, ಅವಿದ್ಯೆಯಿಂದಾಗಿ ತಾನು ಪ್ರತ್ಯೇಕನೆಂಬ ತಪ್ಪು ಕಲ್ಪನೆಗೆ ಒಳಗಾಗಿದ್ದ. ಆದರೆ ರಾಮಾನುಜಾಚಾರ್ಯ ಹಾಗೂ ವೀರಶೈವರ ಪ್ರಕಾರ, ಅವಿದ್ಯೆಯಿಂದ ಮುಕ್ತನಾದ ಜೀವನಿಗೆ ತಾನು ಪರಮಾತ್ಮನ

ಅವಿಭಾಜ್ಯ ಅಂಗ ಎಂಬ ಅರಿವು ಮೂಡುತ್ತದೆ. ಅವನು ಅವಿದ್ಯೆಯಿಂದಾಗಿ ತಾನು ಪ್ರತ್ಯೇಕ ವ್ಯಕ್ತಿ ಎಂಬ ತಪ್ಪು ಕಲ್ಪನೆಗೆ ಒಳಗಾಗಿದ್ದ. ತನ್ನ ದೇಹೇಂದ್ರಿಯಾದಿಗಳನ್ನೆಲ್ಲಾ ಪರಶಿವನೇ ಆಕ್ರಮಿಸಿಕೊಳ್ಳುವುದರಿಂದ ಆ ಭಕ್ತನಿಗೆ ನಾನು ಎಂಬ ಭಾವ ಹೋಗುತ್ತದೆ. ಅಥವಾ ತನಗೂ ಪರಶಿವನಿಗೂ ಇರುವ ವ್ಯತ್ಯಾಸ ಇಲ್ಲವಾಗುತ್ತದೆ. ಅವನು ನಾನೆ ಪರಶಿವ ಎಂದುಕೊಂಡರೂ, ನಾನೇ ಸೃಷ್ಟಿ, ಸ್ಥಿತಿ ಮುಂತಾದ ಕಾರ್ಯಗಳನ್ನು ಮಾಡುತ್ತೇನೆ ಎಂಬರ್ಥ ಅವನ ಹೇಳಿಕೆಗೆ ಇರುವುದಿಲ್ಲ.

**ತತ್ವವೆಲ್ಲಕ್ಕಧಿಕವಾಗಿಪ್ಪಾತ :** ಮೂವತ್ತೈದು ತತ್ವಗಳನ್ನು ಒಳಗೊಂಡು ಅವುಗಳನ್ನು ಮೀರಿ, ಅವುಗಳನ್ನು ನಿಯಂತ್ರಿಸುವಾತ, ಪರಶಿವ.

**ತತ್ವಸೂತ್ರ ಶಕ್ತಿ ಸಂಬಂಧ :** ಪರತತ್ವವು ಸೃಷ್ಟಿಯ ಸಮಯದಲ್ಲಿ ಶಕ್ತಿಯೊಡನೆ ಒಂದಾಗಿರುತ್ತದೆ. ಆದರೆ ಆ ಶಕ್ತಿಗೆ ನಾಮರೂಪಗಳಿರುವುದಿಲ್ಲ. ಸೂತ್ರ ಸಂಬಂಧದಂತೆ ಯಾವಾಗಲೂ ಅವಿನಾಭಾವವಿರುತ್ತದೆ. (೮ : ೫೦)

**ತದ್ಗತನಾಗುವುದು :** ಅಲ್ಲಿಯೇ ಲೀನವಾಗುವುದು. ವಚನಕಾರರ ಪ್ರಕಾರ, ಅಂಗನು ಲಿಂಗದಿಂದ ಬಂದವನಾದುದರಿಂದ, ತದ್ಗತನಾಗುವುದೆಂದರೆ, ಲಿಂಗದಲ್ಲೇ ಮತ್ತೆ ಲೀನವಾಗುವುದೆಂದರ್ಥ. ಸಾಮರಸ್ಯ ಸ್ಥಿತಿಯಲ್ಲಿ ಮಾತ್ರ ತದ್ಗತನಾಗುವುದು ಸಾಧ್ಯ. (೪:೧೦೪೧)

**ತನು ಕರಗುವುದು :** (೧) ಅಂಗವು ಲಿಂಗದಲ್ಲಿ ಐಕ್ಯವಾದಾಗ ಸಾಧಕನಿಗೆ ತನಗೆ ದೇಹೇಂದ್ರಿಯಾದಿಗಳು ಇಲ್ಲ, ತಾನೆಂದರೆ ಕೇವಲ ಆತ್ಮ ಎಂಬ ಭಾವನೆ ಉಂಟಾಗುತ್ತದೆ. ಈ ಭಾವನೆ ಉಂಟಾದ ಕೆಲವು ದಾರ್ಶನಿಕರು. (ಉದಾ : ಚಿದದ್ವೈತಿಗಳು) ದೇಹೇಂದ್ರಿಯಾದಿಗಳು ಅಸತ್ ಎಂದೂ, ಆತ್ಮ ಮಾತ್ರ ಸತ್ ಎಂದೂ ವಾದಿಸುತ್ತಾರೆ. ಆದರೆ ವಚನಕಾರರು ದೇಹೇಂದ್ರಿಯಾದಿಗಳು ಪರಶಿವನ ಶಕ್ತಿಯ ವಿವಿಧ ರೂಪಗಳಾದುದರಿಂದ ಅವೂ ಪರಶಿವನಷ್ಟೇ ಸತ್ಯ ಎಂದು ಸಾರುತ್ತಾರೆ. (೧ : ೮೪೮)

(೨) ಮತ್ತೊಂದು ಅರ್ಥಪ್ರಕಾರ ತನು ಕರಗುವುದು ಅಥವಾ ತನು ಹಾಳಾಗುವುದು ಅಥವಾ ತನುವ ಕೆಡಿಸುವುದು (೧ : ೫೮೯, ೧:೧೧೪೧) ಎಂದರೆ, ದೇಹದ ಅವಗುಣಗಳನ್ನು ಇಲ್ಲವಾಗಿಸುವುದು ಎಂದರ್ಥ. ಇಲ್ಲಿ ಅವಗುಣಗಳೆಂದರೆ ಆಹಾರ, ನಿದ್ರೆ, ಮೈಥುನ ಮುಂತಾದ ದೇಹಕ್ಕೆ ಸಂಬಂಧಿಸಿದ ಬಯಕೆಗಳು ಎಂದಾಗುತ್ತದೆ. ಅನುಭಾವದಿಂದಾಗಿ ಶಿವನಲ್ಲಿ ಒಂದಾದವನು ದೇಹದ ಬಯಕೆಗಳನ್ನು ಗೆಲ್ಲುವುದರಿಂದ ಅವನ ತನು ಕರಗುತ್ತದೆ. ಅಥವಾ ಹಾಳಾಗುತ್ತದೆ.

**ತನುತ್ರಯ :** ವಚನಕಾರರನ್ನೊಳಗೊಂಡು ಭಾರತೀಯ ದಾರ್ಶನಿಕರೆಲ್ಲರ ಪ್ರಕಾರ (ಚಾರ್ವಾಕರನ್ನೂ ಹೊರತುಪಡಿಸಿ) ಮಾನವನಿಗೆ ಮೂರು ದೇಹಗಳಿವೆ. ಅವೆಂದರೆ, ಸ್ಥೂಲತನು, ಸೂಕ್ಷ್ಮತನು ಮತ್ತು ಕಾರಣತನು.

'ಸ್ಥೂಲ ತನು' ('ಶರೀರ') : ಪಂಚಭೂತಗಳಿಂದಾದ ದೇಹ; ಇಂದ್ರಿಯಗಳಿಗೆ ಗೋಚರವಾಗುವ, ಹುಟ್ಟು, ಬೆಳವಣಿಗೆ, ರೋಗ-ರುಜಿನ, ಸಾವುಗಳಿಗೆ ಬದ್ಧವಾದ ದೇಹ.

'ಸೂಕ್ಷ್ಮತನು': ಇದರಲ್ಲಿ (೧) ಆತ್ಮ (೨) ಬುದ್ಧಿ, (೩) ಮನಸ್, (೪) ಅಹಂ, (೫-೯) ಪಂಚೇಂದ್ರಿಯಗಳು, (೧೦-೧೪) ಕರ್ಮೇಂದ್ರಿಯಗಳು (೧೫-೧೯) ತನ್ಮಾತ್ರೆಗಳು ಇರುತ್ತವೆ.

'ಕಾರಣ ಶರೀರ': ಇದರಲ್ಲಿ ಕರ್ಮ ಬೀಜಗಳಿದ್ದು, ನಮ್ಮ ಹುಟ್ಟು ಸಾವು, ಸುಖ ದುಃಖಗಳಿಗೆಲ್ಲಾ ಕಾರಣವಾಗುತ್ತದೆ.

ಮನುಷ್ಯನು ಹುಟ್ಟುವುದೆಂದರೆ ಸ್ಥೂಲತನುವನ್ನು ಪಡೆಯುವುದು, ಸಾಯುವುದೆಂದರೆ ಸ್ಥೂಲತನುವನ್ನು ಕಳೆದುಕೊಳ್ಳುವುದು. ಸಾವಿನನಂತರ ಅವನಲ್ಲಿದ್ದ ಸೂಕ್ಷ್ಮ ಶರೀರವು, ಅದರಲ್ಲಿದ್ದ ಕಾರಣ ಶರೀರದೊಡನೆ ಮತ್ತೊಂದು ಜನ್ಮವನ್ನು ಪಡೆಯುತ್ತದೆ. (ಮತ್ತೊಂದು ಸ್ಥೂಲತನುವನ್ನು ಪಡೆಯುತ್ತದೆ.) (೧ : ೧೪೦೧)

**ತನುಧರ್ಮವ ತರಹರಿಸುವುದು :** ದೇಹದ ಕೀಳುಗುಣಗಳ ಪ್ರಭಾವವನ್ನು ಕಡಿಮೆ ಮಾಡುವುದು. (೫ : ೬೯೭) (ನೋಡಿ : **ತನು ಕರಗುವುದು**)

**ತನುಮುಖ :** ಮುಖವೆಂದರೆ ಬಾಯಿಯೆಂಬ ಅರ್ಥವೂ ಇದೆ. ಇಡೀ ತನು (ಅಥವಾ ಅಂಗ)ವನ್ನು ಬಾಯಿಯನ್ನಾಗಿ ಮಾಡಿಕೊಳ್ಳುವುದು ಎಂದರ್ಥ. ಇದು ಪ್ರಾಣಲಿಂಗಿಗಷ್ಟೇಸಾಧ್ಯ. ಇಡೀ ಅಂಗವನ್ನು ಪರಶಿವನ ಬಾಯಿಯನ್ನಾಗಿ ಮಾಡಿಕೊಳ್ಳುವುದು ಎಂಬುದು ಇದರರ್ಥ. ಇದು ಪ್ರಾಣಲಿಂಗಿಗಷ್ಟೇ ಸಾಧ್ಯ. ಇಡೀ ತನುವಿನಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿಕೊಂಡಿರುವ ಪ್ರಾಣಲಿಂಗಿ (ಸರ್ವಾಂಗಲಿಂಗಿ)ಯು, ತನ್ನ ಜ್ಞಾನೇಂದ್ರಿಯ ಕರ್ಮೇಂದ್ರಿಯ ಮತ್ತು ಅಂತ:ಕರಣಗಳನ್ನೆಲ್ಲಾ ಪರಶಿವನ ಬಾಯಿಯನ್ನಾಗಿ ಮಾಡಿಕೊಂಡಿರುತ್ತಾನೆ. ಆ ಬಾಯಿಗೆ ಬಂದುದೆಲ್ಲ ಪರಶಿವನಿಗೆ ಅರ್ಪಿತ, ಅವುಗಳನ್ನು ಮನಸ್ಸಿನಲ್ಲಿ ಆಸ್ವಾದಿಸಿದಾಗ ಅವು ಪ್ರಸಾದ. (೪ : ೩೧೫)

**ತನುಲಿಂಗಭಾವ :** ತನ್ನ ತನು, ಕರ್ಮೇಂದ್ರಿಯ, ಜ್ಞಾನೇಂದ್ರಿಯಗಳೆಲ್ಲವನ್ನೂ ಪರಶಿವನಿಗರ್ಪಿಸಿ, ಅವೆಲ್ಲವೂ ಪರಶಿವನವು, ತನ್ನವಲ್ಲ ಎಂದು ನಿರ್ಧರಿಸಿದ ಶರಣನು ಲಿಂಗವನ್ನು ತನ್ನದನ್ನಾಗಿ ಮಾಡಿಕೊಂಡಿದ್ದಾನೆ. ಅಂಥವನಲ್ಲಿ ತನುಲಿಂಗಭಾವ (ತನುವೆಲ್ಲಾ ಲಿಂಗ ಎಂಬ ಭಾವ) ಇರುತ್ತವೆಯೇ ಹೊರತು, ಪ್ರಕೃತಿಭಾವ ಇರುವುದಿಲ್ಲ. (೧೨ : ೬೯೦)

**ತನುವಿನೊಳಗಣ ತನು :** ನಮ್ಮ ದೇಹದಲ್ಲಿ ಮತ್ತೊಂದು ದೇಹವಿದ್ದು, ಅದು ಪರಶಿವನದಾಗಿರುತ್ತದೆ. ಹಾಗೆಂದು ಪ್ರಾಣಲಿಂಗಿ ನಂಬುತ್ತಾನೆ. ಅಂದರೆ, ನಮ್ಮ ತನುವಿಗಾಗುವ ಸುಖ ಸಂತೋಷಗಳೆಲ್ಲ ಪರಮಾತ್ಮನಿಗಾಗುತ್ತವೆ, ಎಂಬುದು ಈ ಪರಿಕಲ್ಪನೆಯ ಅರ್ಥ. (೯ : ೫೫೧)

**ತನುಸಾರಾಯ :** ಅನುಭಾವದಲ್ಲಿ ಪರಮಾತ್ಮನನ್ನು ಕಂಡವನು ಪರಮಾತ್ಮನು ಪ್ರಪಂಚದ ಪ್ರತಿಕಣದಲ್ಲಿಯೂ ಇದ್ದಾನೆ, ಎಂದು ಮನಗಾಣುತ್ತಾನೆ. ತನುವಿನ ಸಾರವೇ ಪರಶಿವ ಎಂದು ತಿಳಿದವನೇ ತನು ಸಾರಾಯ. (೧ : ೫೧೨)

**ತನುಸೂತಕ :** ಅಂಗವು ಲಿಂಗದಲ್ಲಿ ಬೆರೆಯಬೇಕೆಂಬ ಧ್ಯೇಯವನ್ನು ಮರೆತು ಸ್ತ್ರೀಯೊಡನೆ ರತಿಕ್ರೀಡೆಯಲ್ಲಿ ಬೆರೆತರೆ, ಪ್ರತಿಯೊಂದು ವಸ್ತುವೂ ಪ್ರಸಾದವೆಂದು ಶಿವನಾಮ ಸ್ಮರಣೆ ಮಾಡುವುದನ್ನು ಬಿಟ್ಟು ಭೌತರಸಾನ್ನ ಪಾನಾದಿಗಳನ್ನು ಸೇವಿಸಿ, ಅವುಗಳಿಂದಾಗಿ ವ್ಯಾಧಿಗಳು ತಗುಲಿದಾಗ, ಗುರು ತೋರಿಸಿದ ಮಾರ್ಗವನ್ನು ಬಿಟ್ಟು ಅನ್ಯದೈವಗಳನ್ನು ಪೂಜಿಸುವುದು ತನುಸೂತಕ; ಭೌತ ವಸ್ತುಗಳೂ, ಬುದ್ಧಿ ಇತ್ಯಾದಿಯೂ, ಸುಖಭೋಗಗಳೂ ಪರಶಿವನ ಪ್ರಸಾದವೆಂದು ತಿಳಿದು ಅವನನ್ನು ನೆನೆಯದೆ ದೇಹದ ಬಾಧೆಗಳನ್ನು ತೃಪ್ತಿಪಡಿಸಿಕೊಳ್ಳಲು ಪ್ರಾಣಿಗಳಂತೆ ವರ್ತಿಸುವ ಪ್ರವೃತ್ತಿಯೆ ತನುಸೂತಕ.

**ತನ್ನ ಮರೆಯುವುದು :** ಇದಕ್ಕೆ ಎರಡು ಅರ್ಥಗಳುಂಟು. (೧) ಅನುಭಾವದಲ್ಲಿ ಸಾಧಕನು ಲಿಂಗ ಅಥವಾ ಪರಶಿವನನ್ನು ಮರೆಯುವುದೂ ಅಲ್ಲದೆ ತನ್ನನ್ನೂ ಮರೆಯುತ್ತಾನೆ, ಎಂಬುದು ಒಂದು ಅರ್ಥ.

(೨) ಅಜ್ಞಾನಿಯು ತನ್ನ ನಿಜ ಸ್ವರೂಪವನ್ನು ಮರೆತರೆ, ಅದೂ ತನ್ನನ್ನು ಮರೆತಂತೆಯೇ. ಮೊದಲನೆ ಅರ್ಥದ ಪ್ರಕಾರ, ತನ್ನ ಮರೆಯುವುದರಿಂದ ತಾನು ಇದಿರುಗಳ ದ್ವೈತ ಅಳಿಯುತ್ತದೆ. ಎರಡನೆ ಅರ್ಥದ ಪ್ರಕಾರ, ಅಜ್ಞಾನ ಇನ್ನೂ ಇರುವುದರಿಂದ ದ್ವೈತವೂ ಇರುತ್ತದೆ. (೫ : ೯೪೮)

**ತನ್ನಲ್ಲಿ ತಾನು ತೃಪ್ತಿಯಾಗುವುದು :** ನಮ್ಮ ಮನಸ್ಸು ಇಂದ್ರಿಯಗಳ ಮೂಲಕ ವಿಷಯಗಳನ್ನು ಅನುಭವಿಸಿ ತೃಪ್ತಿ ಪಡುತ್ತದೆ. ಇದು ಎಲ್ಲ ಭವಿಗಳಿಗೂ ಗೊತ್ತಿರುವ ವಿಚಾರ. ಆದರೆ ಭಕ್ತನು ತನ್ನ ಮನಸ್ಸನ್ನು ಯಾವ ವಿಷಯದ ಕಡೆ ತಿರುಗಿಸದೆಯೂ, ಕೇವಲ ಅನುಭಾವದ ಮೂಲಕ ತನ್ನನ್ನು ಅರಿತನಾದರೆ, ಆಗ ಅವನು ಪರಮ ಸುಖಿ. ಆ ಸುಖ ತನ್ನಲ್ಲಿ ತಾನು ತೃಪ್ತಿಯಾದ ನಿಜವು. (೨ : ೧೪೪೯)

**ತನ್ಮಯ ರೂಪ :** ಚಿನ್ಮಯನಾದ ಪರಶಿವನು ಪ್ರಪಂಚವನ್ನು ಸೃಷ್ಟಿಸಬೇಕೆಂದು ಇಚ್ಛಿಸಿದಾಗ, ರೂಪವಿಲ್ಲದ ಅವನು ರೂಪಾಗಿ ಪರಿವರ್ತಿತನಾಗುತ್ತಾನೆ. ಆಗ ಅವನ ಶಕ್ತಿ ಸ್ವರೂಪವಾದ ಪಂಚಭೂತಗಳು ನಾಮರೂಪಗಳನ್ನು ಪಡೆಯುತ್ತವೆ. (೯ : ೧೩೬)

**ತಾನಿಂದಲ್ಲಿ ನಿಜಕೂಟ :** ಈ ಪರಿಭಾಷೆಗೆ ಎರಡು ರೀತಿಯ ಅರ್ಥಗಳನ್ನು ಕೊಡಬಹುದು. (೧) ತಾನು ಎಂಬ ಪ್ರತ್ಯೇಕತಾ ಭಾವ ಹೋದರೆ (ನಿಂದಲ್ಲಿ) ಆಗ ಆತ್ಮ ಪರಮಾತ್ಮರ ಕೂಟ ಸಾಧ್ಯವಾಗುತ್ತದೆ. (೨) ಆತ್ಮ ಪರಮಾತ್ಮರ ಕೂಟವನ್ನು ಸಾಧಿಸಲು ಸಾಧಕನು ಬೇರೆಲ್ಲಿಯೂ ಹೋಗದೆ ತಾನು ನಿಂತಲ್ಲಿಯೆ ಸಾಧಿಸಬಹುದು. (೫ : ೯೧೪)

**ತಾಪತ್ರಯ :** ಮೂರು ರೀತಿಯ ತಾಪ (ಕಷ್ಟ)ಗಳು. ಇವೆಂದರೆ, ಅಧಿಭೌತಿಕ, ಅಧಿದೈವಿಕ ಮತ್ತು ಆಧ್ಯಾತ್ಮಿಕ. ಪ್ರಕೃತಿಯ ವಿಕೋಪಗಳು (ಉದಾಹರಣೆಗೆ, ಬರ, ಪ್ರವಾಹ, ಅತಿವೃಷ್ಟಿ) ಅಧಿಭೌತಿಕ ತಾಪಗಳು. ಭೌತ ಪ್ರಕೃತಿಯಿಂದ ಇವು ಉಂಟಾಗುವುದರಿಂದ, ಇವಕ್ಕೆ ಅಧಿಭೌತಿಕ ಎಂದು ಹೆಸರು. ದೇವದೇವತೆಗಳನ್ನು ನಾವು ಸಕಾಲಕ್ಕೆ ಪೂಜಿಸದೆ ಅವರನ್ನು ತೃಪ್ತಿಪಡಿಸದಿದ್ದರೆ, ಅಥವಾ ಅವರನ್ನು ಅವಹೇಳನ ಮಾಡಿದರೆ, ಅವರಿಗೆ ಕೋಪಬಂದು, ನಮಗೆ ಕೆಲವು ರೀತಿಯ ತಾಪಗಳನ್ನುಂಟುಮಾಡುತ್ತಾರೆ. ಸಿಡುಬು ಮುಂತಾದ ರೋಗಗಳು ಅಧಿದೈವಿಕ ತಾಪಗಳಿಗೆ ಉದಾಹರಣೆಗಳು. ಕೆಲವು ತಾಪಗಳನ್ನು ನಾವೇ ಉಂಟುಮಾಡಿಕೊಳ್ಳುತ್ತೇವೆ. ಅತಿಯಾಗಿ ತಿನ್ನುವುದು, ನಮ್ಮ ಆರೋಗ್ಯಕ್ಕೆ ಒಗ್ಗದ ವಸ್ತುಗಳನ್ನು ಸೇವಿಸಿವುದು, ಕಳ್ಳತನ, ಸುಲಿಗೆ, ಕೊಲೆ ಮುಂತಾದ ಅನೈತಿಕ ಕಾರ್ಯಗಳನ್ನು ಮಾಡುವುದು ನಮ್ಮ ಮೇಲೆ ಕೆಲವು ದುಷ್ಪರಿಣಾಮಗಳನ್ನು ಬೀರುತ್ತವೆ. ಈ ಪರಿಣಾಮಗಳಿಗೆ ಪ್ರಕೃತಿಯಾಗಲಿ ದೇವದೇವತೆಗಳಾಗಲಿ ಹೊಣೆಯಲ್ಲ. ಅದಕ್ಕೆ ನಾವೇ ಕಾರಣರು. ಅತಿಯಾಗಿ ತಿನ್ನುವುದು ಮುಂತಾದ ಕ್ರಿಯೆಗಳು ತಮ್ಮ ದುಷ್ಪರಿಣಾಮವನ್ನು ಈ ಜನ್ಮದಲ್ಲೆ ಉತ್ಪಾದಿಸಿದರೆ, ಅನೈತಿಕ ಕಾರ್ಯಗಳು ತಮ್ಮ ಪರಿಣಾಮವನ್ನು ಕೆಲವು ವೇಳೆ ಮುಂದಿನ ಜನ್ಮದಲ್ಲಿ ಉತ್ಪಾದಿಸುತ್ತವೆ.

ಪುರಾತನ ಭಾರತೀಯ ದಾರ್ಶನಿಕರೆಲ್ಲರ ಪ್ರಕಾರ (ಚಾರ್ವಾಕರನ್ನುಳಿದು) ತಾಪತ್ರಯಗಳು ಅನಾದಿ. ಸಾವೇ ಅವುಗಳ ಅಂತ್ಯ ಎಂಬ ಭರವಸೆಯೂ ಇಲ್ಲ. ಏಕೆಂದರೆ, ನಮ್ಮ ನಮ್ಮ ಕರ್ಮಗಳಿಗೆ ತಕ್ಕಂತೆ ಅವೇ ಬೇರೆ ಬೇರೆ ರೂಪಗಳಲ್ಲಿ ಮುಂದಿನ ಜನ್ಮಗಳಲ್ಲಿಯೂ ಮರುಕಳಿಸುತ್ತವೆ. ಮೋಕ್ಷವೇ (ಲಿಂಗಾಂಗ ಸಾಮರಸ್ಯವೇ) ಅವುಗಳ ಅಂತ್ಯ.

**ತಾಮಸನಿರಸನ :** ಆತ್ಮನು ಮೂಲತಃ ಪರಶಿವನ ಅವಿಭಾಜ್ಯ ಅಂಗ. ಆದರೆ ಮರೆವು ಎಂಬ ತಾಮಸದಿಂದಾಗಿ ಅವನು ತಾನು ಶಿವಾಂಗನೆಂಬುದನ್ನು ಸಂಪೂರ್ಣವಾಗಿ ಮರೆತು, ತಾನು ಸ್ವತಂತ್ರನೆಂದೂ, ದೇಹದ ಬಯಕೆಗಳನ್ನು ತೀರಿಸುವುದೇ ಜೀವನದ ಉದ್ದೇಶವೆಂದೂ ತಿಳಿದು ನಾನಾರೀತಿಯ ಕರ್ಮಗಳನ್ನು ಮಾಡಿ ಸಂಸಾರ ಬಂಧನಕ್ಕೊಳಗಾಗಿದ್ದಾನೆ. ಗುರುಕಾರುಣ್ಯದಿಂದ ಈ ತಮಸ್ಸು ಕಳೆದಾಗ ತನ್ನ ನೈಜ ಸ್ಥಿತಿಯ ಜ್ಞಾನ ಉಂಟಾಗುತ್ತದೆ. ಹೀಗೆ ಅರಿವು ಮೂಡುವುದೇ ತಾಮಸನಿರಸನ. (೮ : ೧೫೫೭)

**ತಾಳುಬೋಳು ಕಪ್ಪರ :** ತಾಳು ಎಂದರೆ ಕೋಲು, ಕಾಂಡ; ಬೋಳು ಎಂದರೆ ತಲೆಯನ್ನು ಬೋಳಿಸಿಕೊಳ್ಳುವುದು; ಕಪ್ಪರ ಎಂದರೆ ಭಿಕ್ಷಾಪಾತ್ರೆ. ಇವು ಮೂರು ಸಂನ್ಯಾಸಿಯ ಲಕ್ಷಣಗಳು. ಆದರೆ ಈ ಬಾಹ್ಯ ಲಕ್ಷಣಗಳನ್ನುಳ್ಳವರೆಲ್ಲ ಸನ್ಯಾಸಿ ಅಥವಾ ಜಂಗಮರಲ್ಲ. ಚೆನ್ನ ಬಸವಣ್ಣವರ ಪ್ರಕಾರ, ಕಾಯದ ಕಳವಳವ ತಾಳಿಕೊಳ್ಳುವುದೇ ತಾಳು, ಸಂಸಾರ ವಿಷಯಕ್ಕೆ ಆಸೆಪಡುವುದನ್ನು ಇಲ್ಲವಾಗಿಸುವುದೇ ಬೋಳು. ತರತತ್ವದಲ್ಲಿ ನಿರತನಾಗಿರುವುದೇ ಕಪ್ಪರ. ಅಲ್ಲದಿದ್ದರೆ, ಇವು ಮೂರು ಡಾಂಭಿಕನ ಲಕ್ಷಣಗಳೆನಿಸಿಕೊಳ್ಳುತ್ತವೆ. (೩ : ೫೨೦)

**ತಿಂಗಳ ಸೂಡ :** ತಿಂಗಳು (= ಚಂದ್ರ) + ಸೂಡ (ತತ್ಸಮ, ಚೂಡ) = ಚಂದ್ರ ಚೂಡ ಅಥವಾ ಪರಶಿವ. (೪ : ೧೨೬೫)

**ತುರೀಯ :** ಜೀವನಿಗೆ ಜಾಗ್ರತ, ಸ್ವಪ್ನ, ಸುಷುಪ್ತಿ, ತುರೀಯ ಎಂಬ ನಾಲ್ಕು ಅವಸ್ಥೆಗಳಿದ್ದು, ಅವುಗಳಲ್ಲಿ ತುರೀಯವೇ ನಾಲ್ಕನೆಯ ಮತ್ತು ಅತ್ಯಂತ ಹೆಚ್ಚಿನದಾಗಿದೆ. ಜಾಗೃತಾವಸ್ಥೆಯಲ್ಲಿ ಆತ್ಮನು ಇಂದ್ರಿಯ, ಮನಸ್ಸು, ಚಿತ್ತ, ಬುದ್ಧಿ ಮತ್ತು ಅಹಂಕಾರಗಳ ಸಹಯೋಗದಿಂದ ಜ್ಞಾನವನ್ನು ಪಡೆದರೆ, ತುರೀಯಾವಸ್ಥೆಯಲ್ಲಿ ಅವನು ತಾತ್ಕಾಲಿಕವಾಗಿ ಅವುಗಳಿಂದ ಪ್ರತ್ಯೇಕನಾಗಿರುತ್ತಾನೆ. ತಾನೊಬ್ಬನೇ ಇದ್ದೇನೆ, ತನಗೆ ದೇಹಾದಿಗಳಿಲ್ಲ ಎಂಬ ಅರಿವೇ ಆತ್ಮದ ತುರೀಯಾವಸ್ಥೆ. (೨ : ೬೦೧)

**ತುರೀಯಾತೀತ :** ಕೆಲವು ಯೋಗಿಗಳ ಪ್ರಕಾರ, ಆತ್ಮವನ್ನು ಪ್ರಕೃತಿಯಿಂದ ಭಿನ್ನಯಿಸಿ ಅನುಭವಿಸುವುದೇ ತುರೀಯ. ಅದೇ ಅತ್ಯಂತ ಸುಖದ ಅನುಭವ. ಆದರೆ ಶಿವಯೋಗಿಗಳ ಪ್ರಕಾರ, ಆ ಪ್ರಕೃತಿಯಿಂದ ಭಿನ್ನವಾದ ಆತ್ಮವು ಶಿವನೊಡನೆ ಲೀನವಾಗುವ ಮತ್ತೊಂದು ಅವಸ್ಥೆಯಿದೆ. ತುರೀಯಕ್ಕಿಂತ ಅತೀತವಾದ ಈ ಅವಸ್ಥೆಯೇ ಎಲ್ಲಕ್ಕಿಂತ ಹೆಚ್ಚಿನದು. ಮತ್ತೆ ಕೆಲವರ ಪ್ರಕಾರ ತುರೀಯಾತೀತ ಅವಸ್ಥೆಯು ತುರೀಯಾವಸ್ಥೆಯ ಮತ್ತೊಂದು ಹೆಸರಷ್ಟೆ. (ನೋಡಿ : **ಅವಸ್ಥೆ**)

**ತೂರ್ಯಜ್ಞಾನ :** ಜಾಗೃತಾವಸ್ಥೆಯಲ್ಲಿ ನಾವು ಏನನ್ನಾದರೂ ತಿಳಿದುಕೊಳ್ಳಬೇಕಾದರೆ, ಇಂದ್ರಿಯ ಮತ್ತು ಮನಸಾದಿ ಚತುಷ್ಟಯ ಕರಣಗಳನ್ನು ಉಪಯೋಗಿಸುತ್ತೇವೆ. ಸ್ವಪ್ನ ಸ್ಥಿತಿಯಲ್ಲಿ ಜ್ಞಾನ ಉಂಟಾಗುವುದು ಕೇವಲ ಮನೋವ್ಯಾಪಾರದಿಂದ, ಏಕೆಂದರೆ, ಆಗ ಇಂದ್ರಿಯಗಳು ಕೆಲಸಮಾಡುತ್ತಿರುವುದಿಲ್ಲ. ನಾವು ಇಚ್ಛಾಪೂರ್ವಕವಾಗಿ ಹೇಗೆ ಒಂದು ವಸ್ತುವನ್ನು ನೋಡಬಯಸುತ್ತೇವೆಯೋ ಅಥವಾ ನೋಡದಿರಬಯುಸುತ್ತೇವೆಯೋ ಹಾಗೆ ಕನಸಿನಲ್ಲಿ ಇಚ್ಛಾಪೂರ್ವಕವಾಗಿ ಒಂದು ವಸ್ತುವನ್ನು ಕಾಣಲು ಅಥವಾ ಕಾಣದಿರಲು ಸಾಧ್ಯವಿಲ್ಲ. ಸುಷುಪ್ತಿಯಲ್ಲಿ ಉಂಟಾದ ಜ್ಞಾನದಲ್ಲಿ ಅಂತಃಕರಣ ಚತುಷ್ಟಯಗಳಾಗಲಿ ಇಂದ್ರಿಯಗಳಾಗಲಿ ಕೆಲಸ ಮಾಡುವುದಿಲ್ಲ. ಆಗ ಆತ್ಮ ಇವುಗಳೊಂದಿಗೆ ತಾತ್ಕಾಲಿಕವಾಗಿ ಸಂಬಂಧ ಕಡಿದುಕೊಂಡಿರುತ್ತದೆ.

ತೂರ್ಯಾವಸ್ಥೆ (ತುರೀಯಾವಸ್ಥೆ)ಯಲ್ಲಿಯೂ ಯೋಗಿ ಗಾಢ ನಿದ್ರೆಯಲ್ಲಿರದಿದ್ದರೂ, ಅವನು ವಸ್ತು, ಇಂದ್ರಿಯ ಮತ್ತು ಅಂತಃಕರಣ ಚತುಷ್ಟಯಗಳೊಂದಿಗೆ ತಾತ್ಕಾಲಿಕವಾಗಿ ಸಂಬಂಧವನ್ನು ಕಡಿದುಕೊಂಡಿರುತ್ತಾನೆ. ಆಗ ಅವನಿಗೆ ಆತ್ಮ ತಾನೊಂದೇ ಇರುವುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಸ್ಪಷ್ಟತೆ, ಈ ಖಚಿತತೆ, ಉಳಿದ ಜ್ಞಾನಗಳಲ್ಲಿಲ್ಲವಾದುದರಿಂದ, ಅದೇ ನಿಜವಾದ ಜ್ಞಾನ.

**ತೃಪ್ತಾತ್ಮಾನುಭಾವಪ್ರಕಾಶ :** ಐಕ್ಯಸ್ಥಲದ ಅನುಭಾವಿಯು ಚಿನ್ಮಯ ಪ್ರಕಾಶದಲ್ಲಿ ಒಂದಾದಾಗ, ಮಹಾಲಿಂಗ ಹಾಗೂ ತಾನು ಐಕ್ಯರೆಂಬ ಅದ್ವೈತ ಭಾವ ಮೂಡುವುದಲ್ಲದೇ, ಅವನಿಗೆ ಅಪರಿಮಿತ ತೃಪ್ತಿಯಾಗುತ್ತದೆ. (೧೨ : ೯೦೪)

**ತೃಪ್ತಿ ಪ್ರಸಾದ :** ರುಚಿ ಪ್ರಸಾದವನ್ನು ಭಕ್ತನು ಭಾವಲಿಂಗಕ್ಕೆ (ತೃಪ್ತಿ ಲಿಂಗಕ್ಕೆ) ಸಾವಧಾನ ಭಕ್ತಿಯಿಂದಲೂ ಸಮರಸ ಭಕ್ತಿಯಿಂದಲೂ ಅರ್ಪಿಸಿದರೆ, ಅದು ತೃಪ್ತಿ ಪ್ರಸಾದವಾಗುತ್ತದೆ. (೯ : ೧೧೬೧) (ನೋಡಿ : **ಭಕ್ತಿ, ರುಚ್ಯರ್ಪಿತ**)

**ತೆರೆಹಿಲ್ಲದ ಘನ :** ಘನವೆಂದರೆ ಚಿತ್ತು, ಅರಿವು, ಪರಶಿವ. ಯಾವೆರಡು ಭೌತವಸ್ತುಗಳನ್ನು ತೆಗೆದುಕೊಂಡರೂ, ಅವುಗಳ ಮಧ್ಯೆ ತೆರವು ಇರುತ್ತದೆ. ತೆರವಿಲ್ಲದ ಯಾವೆರಡು ಭೌತವಸ್ತುಗಳನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಆದರೆ ಅರಿವು ಅಥವಾ ಚಿತ್ತು ಅಖಂಡವಾಗಿರುತ್ತದೆ. ನನ್ನ ಚಿತ್ತು ಮತ್ತು ನಿಮ್ಮ ಚಿತ್ತುಗಳ ನಡುವೆ ತೆರವು ಇರುವಂತೆ ಈಗ ಕಾಣುತ್ತದೆಯಾದರೂ, ಅನುಭಾವ ಪಡೆದವನಿಗೆ ಆತ್ಮಗಳು ವಿಶ್ವಾತ್ಮನ ಭಾಗಗಳಾಗಿ ಕಾಣುತ್ತವೆ. ಅಷ್ಟೇ ಅಲ್ಲ, ಅವನಿಗೆ ಭೌತವಸ್ತುಗಳಲ್ಲಿರುವ ಚಿತ್ತೂ ಕಾಣುತ್ತದೆ. ಅಂದರೆ, ವಿವಿಧ ಆತ್ಮ ಹಾಗೂ ವಿವಿಧ ವಸ್ತುಗಳಲ್ಲಿ ಅವನಿಗೆ ಚೈತನ್ಯ ಕಾಣುತ್ತದೆ. ವಸ್ತುಗಳಲ್ಲಿ ಅನೇಕತೆ ಹಾಗೂ ವೈವಿಧ್ಯ ಕಂಡರೂ, ಅವುಗಳಲ್ಲಿರುವ ಚಿತ್ತು ಒಂದೇ; ಅದು ಅಖಂಡ. ಇದನ್ನು ಒಂದು ಉಪಮೆಯ ಮೂಲಕ ಸ್ಪಷ್ಟಪಡಿಸಬಹುದು. ಅನೇಕ ಜಾತಿಯ ಹೂಗಳನ್ನು ಒಂದು ದಾರದ ಮೂಲಕ ಮಾಲೆ ಮಾಡಿದಾಗ, ಹೂವುಗಳು ತಮ್ಮ ಅನೇಕತೆ ಹಾಗೂ ವೈವಿಧ್ಯಗಳನ್ನು ಕಳೆದುಕೊಳ್ಳುವುದಿಲ್ಲ. ಆದರೆ ಅವುಗಳಲ್ಲಿರುವ ದಾರ ಮಾತ್ರ ಒಂದೇ. ಆ ದಾರದಿಂದಾಗಿಯೇ ಅವುಗಳಲ್ಲಿ ಏಕತೆ ಬಂದಿರುವುದು. ಹಾಗೆಯೇ, ಭೌತ ಹಾಗೂ ಚಿದ್ ವಸ್ತುಗಳಲ್ಲಿ ಆ ಪರಶಿವನಿಂದಾಗಿ ಏಕತೆ ಮೂಡಿದಾಗ ಅವುಗಳಲ್ಲಿ ಅನೇಕತೆ ಹಾಗೂ ವೈವಿಧ್ಯ ನಷ್ಟವಾಗುವುದಿಲ್ಲ. ಆದರೆ ಅವುಗಳಲ್ಲಿ ಅಂತಸ್ಥವಾಗಿರುವ ಪರಶಿವನಲ್ಲಿ ವೈವಿಧ್ಯತೆ ಅಥವಾ ಅನೇಕತೆ ಇಲ್ಲ. ಒಂದು ವೇಳೆ, ಪರಶಿವನು ಕೆಲವು ವಸ್ತುಗಳಲ್ಲಿ ಇದ್ದು, ಇನ್ನು ಕೆಲವು ವಸ್ತುಗಳಲ್ಲಿ ಇರದಿದ್ದರೆ, ಆಗ ಚಿತ್ತಿಗೂ ಖಂಡತೆ ಇದೆ ಎನ್ನಬಹುದಾಗಿತ್ತು.

ಜ್ಞಾನಿಗಳಿಗೂ ಅನುಭಾವಿಗಳಿಗೂ ತೆರಹಿಲ್ಲದ ಘನ ಕಾಣಿಸಿಕೊಂಡರೆ ಅಜ್ಞಾನಿಗಳಿಗೆ, ವಸ್ತುಗಳ ಅನೇಕತೆ ಮತ್ತು ವೈವಿಧ್ಯದಿಂದಾಗಿ ತೆರಹಿಲ್ಲದ ಘನ ಕಾಣಿಸುವುದಿಲ್ಲ.

**ತೆರಹಿಲ್ಲದ ಪರಿಪೂರ್ಣ :** ಪರಮಾತ್ಮನು ಭೌತವಸ್ತುವಾಗಿರದೆ ಚಿದ್ವಸ್ತುವಾಗಿರುವುದರಿಂದ, ಹಾಗೂ ಆ ಚಿದ್ವಸ್ತು ಎಲ್ಲ ಕಡೆಯಲ್ಲಿಯೂ ತುಂಬಿಕೊಂಡಿರುವುದರಿಂದ ಅದು ತೆರಹಿಲ್ಲದ ಪರಿಪೂರ್ಣ ಎನಿಸಿಕೊಳ್ಳುತ್ತದೆ. (ನೋಡಿ : ಪರಿಪೂರ್ಣ)

**ತೆರಹು :** ಸಂದು, ವಿಭಜನೀಯತೆ. ಸಾಮಾನ್ಯವಾಗಿ ತೆರಹು ಎಂಬುದನ್ನು ವಚನಕಾರರು ಮುಖ್ಯವಾಗಿ ಎರಡು ಸಂದರ್ಭಗಳಲ್ಲಿ ಉಪಯೋಗಿಸಿದ್ದಾರೆ. (೧) 'ತೆರಹಿಲ್ಲದ ಘನ' : ಎಂಬಲ್ಲಿ ಚಿದ್ಘನವನ್ನು ಭಾಗವಮಾಡಲು ಬರುವುದಿಲ್ಲ ಎಂಬರ್ಥವಿದೆ. ಭೌತವಸ್ತುಗಳನ್ನು ನಾವು ವಿಭಾಗಿಸಬಹುದು ಹಾಗೂ ಪ್ರತ್ಯೇಕಿಸಬಹುದು. ಉದಾಹರಣೆಗೆ ಇಲ್ಲಿರುವ ಕುರ್ಚಿ ಮತ್ತು ಅಲ್ಲಿರುವ ಗೋಡೆಗಳ ಮಧ್ಯೆ ತೆರಹು ಇದೆ. ಆದರೆ ಅಪರಿಮಿತವಾದ ಚಿತ್ತಿನಲ್ಲಿ ಈ ರೀತಿಯ ತೆರಹು ಇಲ್ಲವಾದುದರಿಂದ ಅದು ತೆರಹಿಲ್ಲದ ಘನ.

(೨) ತೆರಹಿಲ್ಲದ ಕೂಟ ಎಂಬ ಪದವು ಅಂಗ ಮತ್ತು ಲಿಂಗಗಳ ಕೂಟಕ್ಕೆ ಅನ್ವಯವಾಗುವುದು, ಇಲ್ಲಿ ಪ್ರತ್ಯೇಕಿಸಲಾಗದ ಕೂಟ ಎಂಬರ್ಥವಿದೆ. ಉಪ್ಪಿನ ಗೊಂಬೆಯನ್ನು ಸಮುದ್ರದಲ್ಲಿ ಮುಳುಗಿಸಿದಾಗ, ಸಮುದ್ರದ ಉಪ್ಪು ಮತ್ತು ಗೊಂಬೆಯ ಉಪ್ಪು ಒಂದಾಗಿ, ಅವುಗಳ ಕೂಟವು ತೆರಹಿಲ್ಲದ ಕೂಟವಾಗುತ್ತದೆ. ಅಂದರೆ, ಇದು ಗೊಂಬೆಯ ಉಪ್ಪು, ಇದು ಸಮುದ್ರದ ಉಪ್ಪು ಎಂದು ಹೇಗೆ ಭಿನ್ನ ಮಾಡಿ ಹೇಳಲು ಬರುವುದಿಲ್ಲವೋ ಅದೇ ರೀತಿ ಅಂಗವು ಲಿಂಗದಲ್ಲಿ ಬೆರೆತಾಗ, ಅದು ತನ್ನ ಪ್ರತ್ಯೇಕತೆ ಮತ್ತು ವೈಶಿಷ್ಟ್ಯವನ್ನು ಕಳೆದುಕೊಳ್ಳುತ್ತದೆಯಲ್ಲದೆ, ಅವುಗಳನ್ನು ಭಿನ್ನ ಮಾಡಿ ಗುರುತಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಲಿಂಗಾಂಗ ಕೂಟವೂ ತೆರಹಿಲ್ಲದ ಕೂಟ.

**ತೇಜದ ಪೂರ್ವಾಶ್ರಯವ ಕಳೆಯುವುದು :** ಮಾನವ ದೇಹದ ಘಟಕಗಳಲ್ಲೊಂದಾದ ಅಗ್ನಿ (ತೇಜ) ತತ್ವಕ್ಕೆ ರೂಪವು ಮುಖ್ಯ ಗುಣ. ಈ ತತ್ವದ ದೆಸೆಯಿಂದಾಗಿ ಪ್ರಾಪಂಚಿಕರಿಗೆ ಕುರೂಪವನ್ನು ನೋಡಿದರೆ ಅಹಿತವೂ ಸುರೂಪವನ್ನು ನೋಡಿದರೆ ಹಿತವೂ ಆಗಿ, ಸುರೂಪವನ್ನೆ ನೋಡಬೇಕೆಂಬ ಆಸೆ ಉಂಟಾಗುತ್ತದೆ. ಅಂಥ ಆಸೆಯು ಸ್ವಾರ್ಥಪರವಾದುದು. ಆದರೆ ಸದ್ಭಕ್ತನಾದವನು ರೂಪವನ್ನು ಕುರೂಪ ಮತ್ತು ಸುರೂಪವೆಂದು ವಿಂಗಡಿಸಿದರೂ, ಒಂದನ್ನು ದ್ವೇಷಿಸಿ ಮತ್ತೊಂದನ್ನು ಪ್ರೀತಿಸಬೇಕೆಂದು ಇಚ್ಛಿಸುವುದಿಲ್ಲ. ಅವನಿಗೆ ಯಾವುದೇ ಸ್ವಾರ್ಥಪರ ಆಸೆ ಇಲ್ಲವಾದುದರಿಂದ, ಅವೆರೆಡೂ ಅವನಿಗೆ ಸಮಾನ. ಆಧ್ಯಾತ್ಮಿಕ ಪ್ರಗತಿಯಲ್ಲಿ ಮುಂದುವರೆದ ಕೆಲ ಭಕ್ತರು ನೋಡುವುದಾದರೆ ಲಿಂಗವನ್ನೇ ಎಂದು ತೀರ್ಮಾನಿಸಿದರೆ, ಮತ್ತೆ ಕೆಲವರು ಇರುವುದೆಲ್ಲವೂ ಶಿವಶಕ್ತಿಯ ರೂಪಾಂತರವೇ ಆದುದರಿಂದ, ಎಲ್ಲವೂ ಸುರೂಪವೇ ಎನ್ನುತ್ತಾರೆ. ಅವರಿಗೆ ಸೌಂದರ್ಯವಿಲ್ಲದ ತಾಣವೇ ಇಲ್ಲ, ಹೀಗೆ ಅವರು ತೇಜದ ಪೂರ್ವಾಶ್ರಯವ ಕಳೆದಿದ್ದಾರೆ.

**ತೈಜಸ :** ತೈಜಸ ಅಥವಾ ತೈಜಸಿಕ ಎಂಬ ಸಂಸ್ಕೃತ ಪದವು, ಪಂಚಭೂತಗಳಲ್ಲೊಂದಾದ ತೇಜಸ್ ಎಂಬ ಭೂತದ ಗುಣಕ್ಕೆ ಅನ್ವಯಿಸಿದರೂ, ಉಪನಿಷತ್ತುಗಳಲ್ಲಿ ಅದೇ ಪದವು ಜೀವಾತ್ಮನ ಒಂದು ವಿಶಿಷ್ಟ ಅವಸ್ಥೆಗೆ ಅನ್ವಯಿಸುತ್ತದೆ. ಸ್ಥೂಲ ತನುವಿನಲ್ಲಿ ಜಾಗ್ರತಾವಸ್ಥೆಯಲ್ಲಿ ವ್ಯವಹರಿಸುವ ಆತ್ಮನಿಗೆ ವಿಶ್ವವೆಂದು ಹೆಸರಿದ್ದರೆ, ಅಗ್ನಿ ಮತ್ತು ವಾಯುಗಳಿಂದಾದ ಸೂಕ್ಷ್ಮತನುವಿನ ಮೂಲಕ ಸ್ವಪ್ನಾವಸ್ಥೆಯಲ್ಲಿ ವ್ಯವಹರಿಸುವ ಆತ್ಮನಿಗೆ ತೈಜಸ ಎಂದು ಹೆಸರು. ತೈಜಸನು ಹೆಚ್ಚಾಗಿ ಮಾನಸಿಕವಾಗಿ ಕ್ರೀಯಾಶೀಲನಾಗಿರುತ್ತಾನೆ. ಅವನಿಗೆ ಶಿಕ್ಷಾಗುರುವು ಮಂತ್ರದೀಕ್ಷೆಯ ಮೂಲಕ ಪ್ರಾಣಲಿಂಗ ಸಂಬಂಧ ಮಾಡಿಸುತ್ತಾನೆ. ಇಲ್ಲಿ ಮಂತ್ರ ದೀಕ್ಷೆಯೆಂದರೆ, ಭಕ್ತನು ಮನಸ್ಸಿನಲ್ಲಿ ಯಾವಾಗಲೂ ಪರಶಿವನನ್ನು ನೆನೆಯುವುದು ಎಂದರ್ಥ.

**ತೊತ್ತುಗೆಲಸ :** (ಶಿವನ) ತೊತ್ತಾಗಿ ಮಾಡುವ ಕೆಲಸ, ಭೃತ್ಯಾಚಾರ. (ತಾನು ಶಿವನ ಅಥವಾ ಶಿವಭಕ್ತರ ತೊತ್ತು ಎಂದು ತಿಳಿದು ಭಕ್ತಿ ಪೂರ್ವಕವಾಗಿ ಮಾಡುವ ಕೆಲಸ.)

**ತೊತ್ತುತನ :** ದಾಸ್ಯ, ಭೃತ್ಯತ್ವ ಅಥವಾ ಶರಣಭಾವ.

**ತ್ರಿಕರಣ ಶುದ್ಧಿ :** ಕಾಯ, ವಾಚ ಮತ್ತು ಮನಸ್ಸುಗಳ ಶುದ್ಧಿ.

**ತ್ರಿಕಾಲ ಪೂಜೆ :** ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಮಾಡುವ ಪೂಜೆ. ಲಿಂಗದೀಕ್ಷೆ ಪಡೆದವನು ಈ ಮೂರು ಸಾರಿ ಲಿಂಗ ಪೂಜೆ ಮಾಡದೆಯೇ ಏನನ್ನೂ ಸೇವಿಸಬಾರದು.

**ತ್ರಿಕೂಟ :** ಎರಡು ಹುಬ್ಬುಗಳ ಮಧ್ಯದ ಸ್ಥಳ, ಇಡಾ, ಪಿಂಗಳಾ ಮತ್ತು ಸುಷಮ್ನಾ ನಾಡಿಗಳು ಕೂಡುವ ಸ್ಥಳ. (೮ : ೬೨೮)

**ತ್ರಿಗುಣ :** ಇದಕ್ಕೆ ಎರಡು ಅರ್ಥಗಳಿವೆ. ೧. ಕಾಯಗುಣ, ಪ್ರಾಣಗುಣ, ಮತ್ತು ಭಾವಗುಣ. ಇವು ತ್ರಿಗುಣಗಳು ಎಂಬುದು ವಚನಕಾರರ ವಿಶೇಷ ಅರ್ಥ. ಹಸಿವು, ನಿದ್ರೆ, ಇಂದ್ರಿಯಗಳಿಗೆ ಸಂಬಂಧಿಸಿದ ಆಸೆ, ಹುಟ್ಟು, ಸಾವು ಮುಂತಾದವುಗಳೆಲ್ಲ ಕಾಯಗುಣಗಳು; ಇನ್ನೂ ಬಹಳ ದಿನ ಜೀವಿಸಬೇಕೆಂಬ ಆಸೆ ಪ್ರಾಣಗುಣ; ನಾನು, ನನ್ನದು, ನಮ್ಮವರು, ನನಗಾಗಿ ಮುಂತಾದ ಸ್ವಾರ್ಥ ಭಾವನೆಗಳು ಭಾವಗುಣ. (೨ : ೧೦೮೮)

೨. ಮತ್ತೊಂದು ಎಲ್ಲ ಪ್ರಾಚೀನ ಭಾರತೀಯ ದಾರ್ಶನಿಕರೂ-ವಚನಕಾರರೂ ಸೇರಿ-ಒಪ್ಪಿಕೊಳ್ಳುವ ಸಾಮಾನ್ಯ ಅರ್ಥ. ಈ ಅರ್ಥದ ಪ್ರಕಾರ, ತ್ರಿಗುಣವೆಂದರೆ, ಸತ್ವ, ರಜಸ್, ತಮಸ್ ಎಂಬ ಮೂರು ಗುಣಗಳು. ಪ್ರತಿಯೊಂದು ವಸ್ತುವೂ (ಮಾನವ ದೇಹ, ಬುದ್ಧಿ, ಮನಸ್ಸು ಸೇರಿದಂತೆ) ಈ ಮೂರು ಗುಣಗಳಿಂದ ರಚಿತವಾಗಿದೆ. ಪ್ರಳಯಕಾಲದಲ್ಲದಷ್ಟೇ ಈ ಮೂರುಗುಣಗಳು ಒಂದೇ ಸಮನಾಗಿದ್ದು, ಸೃಷ್ಟಿ, ಸ್ಥಿತಿಗಳಲ್ಲಿ ಅವುಗಳಲ್ಲಿ ಏರುಪೇರಾಗುತ್ತದೆ. ಜಡವಸ್ತುಗಳಲ್ಲಿ ಅತಿಯಾದ ತಮೋಗುಣವಿದ್ದು, ಉಳಿದೆರಡು

ಗುಣಗಳು ಗೌಣವಾಗಿರುತ್ತವೆ. ದುಷ್ಟರಲ್ಲಿಯೂ ದಡ್ಡರಲ್ಲಿಯೂ ಹೆಚ್ಚು ತಮೋಗುಣವಿರುತ್ತದೆ. ರಜೋಗುಣ ಹೆಚ್ಚಾಗಿ, ಉಳಿದೆರಡು ಗುಣಗಳು ಕಡಿಮೆ ಇದ್ದವರಲ್ಲಿ ಕ್ರಿಯಾಶೀಲತೆ ಹೆಚ್ಚಾಗಿರುತ್ತವೆ. ಮುಂದಾಳಾಗಿರಬೇಕೆಂಬ ಆಸೆ, ಯಶಸ್ಸು, ಹಣ, ಮತ್ತು ಹೆಣ್ಣಿನ ಆಸೆ ಅವರಲ್ಲಿ ಅಧಿಕವಾಗಿರುತ್ತದೆ. ಸತ್ವಗುಣ ಅಧಿಕವಾಗಿದ್ದು ಉಳಿದೆರಡು ಗುಣಗಳು ಕಡಿಮೆಯಾಗಿದ್ದವರು ಹೆಚ್ಚಾಗಿ ಜ್ಞಾನಿಗಳಾಗಿದ್ದು, ಸಾತ್ವಿಕ ಜೀವನ ನಡೆಸುತ್ತಾರೆ.

ತ್ರಿಗುಣಗಳ ಪ್ರಸ್ತಾಪ ವಚನಗಳಲ್ಲಿ ಹೆಚ್ಚಾಗಿ ಬರದಿದ್ದರೂ, ಆಗಾಗ್ಗೆ ಪರಶಿವನನ್ನು ತ್ರಿಗುಣಾತ್ಮಕ, ತ್ರಿಗುಣಾತೀತ ಎಂದು ವರ್ಣಿಸುವುದುಂಟು.

**ತ್ರಿಗುಣ ರಹಿತ :** ಸತ್ವ, ರಜಸ್, ತಮಸ್ ಎಂಬ ಮೂರು ಗುಣಗಳನ್ನು ಹೊಂದಿದ್ದರೂ, ಅವುಗಳ ಪ್ರಭಾವಕ್ಕೆ ಒಳಗಾಗದವನು, ಪರಶಿವ (೭ : ೮೬)

**ತ್ರಿಗುಣಾತ್ಮಕ :** ಸತ್ವ, ರಜಸ್, ತಮಸ್ ಎಂಬ ಮೂರು ಗುಣಗಳನ್ನು ಅಥವಾ ಅವುಗಳಿಂದಾದ ಪ್ರಕೃತಿಯನ್ನು ತನ್ನಲ್ಲಿಯೇ ಉಳ್ಳವನು, ಪರಶಿವ.

**ತ್ರಿಗುಣಾತ್ಮಕನ ಕೊಲ್ಲುವುದು :** ತ್ರಿಗುಣಾತ್ಮಕನಾದ ಪರಶಿವನನ್ನು ಮತ್ತೊಬ್ಬನಂತೆ ಭಾವಿಸದೆ, ಅವನಲ್ಲಿ ಒಂದಾಗುವುದು. ತಾನು ಮತ್ತು ಪರಶಿವನಲ್ಲಿನ ಈ ವ್ಯತ್ಯಾಸ ಹೋದಕೂಡಲೇ ಪರಶಿವನೆಂಬ ಅನ್ಯವಸ್ತುವೂ ಇಲ್ಲವಾಗುತ್ತದೆ. ಮತ್ತೊಂದರ್ಥದಲ್ಲಿ ತ್ರಿಗುಣಗಳ ಮಿತಿಗೆ ಒಳಪಡೆದಿರುವುದೇ ತ್ರಿಗುಣಾತ್ಮಕನಾದ ಜೀವನನ್ನು ಕೊಲ್ಲುವುದು ಎಂದಾಗುತ್ತದೆ. (೭:೧೧೪)

**ತ್ರಿಗುಣಾತ್ಮಭರಿತ :** ತ್ರಿಗುಣಗಳಿಂದಾದ ಎಲ್ಲ ವಸ್ತುಗಳಲ್ಲಿಯೂ ಇರುವವನು, ಪರಶಿವ. (೭:೮೬)

**ತ್ರಿಣಯನ (ತ್ರಿಣೇತ್ರ, ಮುಕ್ಕಣ್ಣ) :** ಪರಶಿವ.

**ತ್ರಿಪುಂಡ್ರ :** ಮೂರು ಬೆರಳುಗಳಿಂದ ಧರಿಸಿಕೊಂಡ ವಿಭೂತಿ. ವಿಭೂತಿಯು ಭಸ್ಮದ ಗಟ್ಟಿಯಾದುದರಿಂದ, ಅದು ದೈಹಿಕ ಬಯಕೆಗಳನ್ನು ಸುಟ್ಟು ಭಸ್ಮ ಮಾಡಿದುದರ ಸಂಕೇತವಾಗಿದೆ. ನಮಗೆ ಸ್ಥೂಲತನು, ಸೂಕ್ಷ್ಮತನು ಮತ್ತು ಕಾರಣತನು ಎಂಬ ಮೂರು ತನುಗಳಿರುವದರಿಂದ, ಆ ಮೂರನ್ನು ಸುಟ್ಟಾಗಲೇ ನಮ್ಮ ಕರ್ಮ ಸಂಪೂರ್ಣವಾಗಿ ಸುಟ್ಟಂತೆ. ಇದನ್ನೆ ತ್ರಿಪುರಸಂಹಾರ ಎಂದು ಆಲಂಕಾರಿಕವಾಗಿ ಹೇಳುವುದೂ ಉಂಟು. ಅಂತೂ ಮೂರು ಬೆರಳುಗಳಿಂದ ಧರಿಸಿಕೊಂಡ ತ್ರಿಪುಂಡ್ರವೆಂದರೆ ಮೂರು ದೇಹಗಳ (=ಪುರ) ಭಸ್ಮವೆಂದಾಗುತ್ತದೆ.

**ತ್ರಿಪುಟಿ :** ಮೂರು ಘಟಕಗಳನ್ನೊಳಗೊಳ್ಳುವಂಥಹದು. ಸಾಮಾನ್ಯವಾಗಿ ಈ ಪದ ವ್ಯವಹಾರಿಕ ಜ್ಞಾನಕ್ಕೆ ಮಾತ್ರ ಅನ್ವಯವಾಗುತ್ತದೆ. ಇದರಲ್ಲಿ ಮೂರು ಘಟಕಗಳೆಂದರೆ, ಜ್ಞಾತೃ, ತ್ರಿವಿಧ

('ತಾನು'), ಜ್ಞೇಯ (ಇದಿರು) ಮತ್ತು ಜ್ಞಾನ (ಅರಿವು). ವ್ಯವಹಾರಿಕ ಜ್ಞಾನವು ಜ್ಞಾತೃ ಮತ್ತು ಜ್ಞೇಯಗಳ ಸನ್ನಿಕರ್ಷದಿಂದುಂಟಾದ ಪರಿಮಾಮ ಎಂಬುದು 'ತ್ರಿಪುಟಿ'ಯ ಅರ್ಥ. ಉದಾಹರಣೆಗೆ ನಾನು ಒಂದು ವಸ್ತುವನ್ನು ನೋಡುತ್ತೇನೆ; ನನ್ನ ಬುದ್ಧಿ ಇದು ಪುಸ್ತಕವೆಂಬುದನ್ನು ನಿರ್ಧರಿಸುತ್ತದೆ. ಅಂತಃಕರಣಗಳನ್ನೂ, ಇಂದ್ರಿಯಗಳನ್ನೂ, ಜೀವಾತ್ಮನನ್ನೂ ಒಳಗೊಂಡ ಈ ಸಂಕೀರ್ಣವು ಜ್ಞಾತೃ (ತಿಳಿದುಕೊಳ್ಳುವವನು); ರೂಪರಸಾದಿಗುಣಗಳನ್ನು ಹೊಂದಿರುವ, ಕಾಲದೇಶಗಳ ಮಿತಿಯಲ್ಲಿರುವ ವಸ್ತುವನ್ನು ನಾನು ತಿಳಿದುಕೊಳ್ಳುತ್ತೇನೆ. ಹಾಗೆ ತಿಳಿದುಕೊಂಡ ವಸ್ತುವೇ ಜ್ಞೇಯ. ಜ್ಞಾತೃ ಮತ್ತು ಜ್ಞೇಯಗಳ ಸಂಪರ್ಕದಿಂದ ಉಂಟಾದ 'ಇದು ಪುಸ್ತಕ' ಎಂಬ ತಿಳುವಳಿಕೆಯೇ ಜ್ಞಾನ.

ಜ್ಞಾತೃವಿಗೆ ಜ್ಞೇಯವಿಲ್ಲದೆ ಜ್ಞಾನವಿಲ್ಲ; ಅಲ್ಲದೆ 'ನಾನು ಪುಸ್ತಕವನ್ನು ನೋಡುತ್ತಿದ್ದೇನೆ' ಎಂಬುದನ್ನು ತಿಳಿದುಕೊಳ್ಳದೆಯೂ ಜ್ಞಾನವಿಲ್ಲ. ಅಂದರೆ ಜ್ಞಾತೃವಿನ ಸ್ವಪ್ರಜ್ಞೆ ಜ್ಞೇಯದ ಜ್ಞಾನಕ್ಕೆ ಆವಶ್ಯಕ.

ಆದರೆ ತುರೀಯಾತೀತ ಸ್ಥಿತಿಯಲ್ಲಿ ಜಾತೃವಿಗೆ ತಾನು ಇದ್ದೇನೆಂಬ ಅರಿವಾಗಲಿ, ತಾನು ಪರಶಿವನಲ್ಲಿ ಒಂದಾಗಿ ಬೆರೆತಿದ್ದೇನೆ ಎಂಬ ಅರಿವಾಗಲಿ ಇರುವುದಿಲ್ಲ. ಅಂತಹ ಸ್ಥಿತಿಯು ತ್ರಿಪುಟಿ ಶೂನ್ಯ.

**ತ್ರಿಪುರ :** ದೇಹವನ್ನು ಪುರಕ್ಕೆ ಹೋಲಿಸಿ, ಅದರೊಳಗಿನ ಆತ್ಮನನ್ನು ಪುರುಷ (ಪುರದೊಳಗಿರುವವನು) ಎಂದು ಕರೆಯುವುದು ಹಿಂದೂ ದಾರ್ಶನಿಕ ಪರಿಭಾಷೆಯಲ್ಲಿ ಸುಪ್ರಸಿದ್ಧ. ತ್ರಿಪುರವೆಂದರೆ ಮೂರು ಶರೀರವೆಂದರ್ಥ ಆ ಮೂರೆಂದರೆ, ಸ್ಥೂಲ ಶರೀರ, ಸೂಕ್ಷ್ಮಶರೀರ, ಕಾರಣಶರೀರ.

**ತ್ರಿಪುರ ಸಂಹಾರ :** ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರವು ಮತ್ತೆ ಅಂಗ (ಆತ್ಮ)ನನ್ನು ಬಾಧಿಸದಂತೆ ಮಾಡುವುದು, ಅಂದರೆ ಮೋಕ್ಷವನ್ನು ಪಡೆಯುವುದು. (೨ : ೩೩೪)

**ತ್ರಿಪುರಾಂತಕ :** ಪುರ ಎಂಬ ಪದವನ್ನು ದೇಹಕ್ಕೆ ಅನ್ವಯಿಸುವುದು ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದಲ್ಲಿ ಸಾಮಾನ್ಯ. ತ್ರಿಪುರವೆಂದರೆ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಎಂಬ ಮೂರು ಶರೀರಗಳು ಹಾಗೂ ತ್ರಿಪುರಾಂತಕ ಎಂದರೆ ಕರ್ಮದಿಂದಾದ ಮೂರು ಶರೀರಗಳನ್ನು ನಾಶಮಾಡುವ ಪರಶಿವ. (೭ : ೪೮)

**ತ್ರಿಭುವನ :** ಮೂರು ಲೋಕಗಳು (ಸ್ವರ್ಗ, ಮರ್ತ್ಯ ಮತ್ತು ನರಕ ಅಥವಾ ಪಾತಾಳ).

**ತ್ರಿಮುಖದಲ್ಲಿ ತ್ರಿವಿಧಾತ್ಮಭೇದ :** ಆಧ್ಯಾತ್ಮಿಕ ಸಾಧನೆ ಮಾಡುವಾಗ ಗುರು, ಲಿಂಗ ಮತ್ತು ಜಂಗಮ ಎಂಬ ಮೂರು ಮುಖಗಳಿಗೆ ತೋರಿಸುವ ಭಕ್ತಿ (೮ : ೨೯)

**ತ್ರಿಶಕ್ತಿಪತಿ :** ಜ್ಞಾನಶಕ್ತಿ, ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿ ಎಂಬ ಮೂರು ಶಕ್ತಿಗಳನ್ನು ನಿಯಂತ್ರಿಸುವ ಪರಶಿವ. (೮ : ೧೦೫೫)

**ತ್ರಿಶಕ್ತಿ ಇಚ್ಛೆ :** ಜ್ಞಾನಶಕ್ತಿ, ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿಗಳ ಪ್ರಭಾವದಿಂದ ಉಂಟಾಗುವ ದುಷ್ಟ ಇಚ್ಛೆಗಳು.

**ತ್ರಿವಿಧ ಅನುಗ್ರಹ :** ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ (೨ : ೭೮೯). ಅನುಗ್ರಹವಿಲ್ಲದೆ ಸಾಮರಸ್ಯವಿಲ್ಲ. ಕಾಯಾನುಗ್ರಹವೆಂದರೆ, ದೇಹಕ್ಕೆ ಸಂಬಂಧಿಸಿದ ಅನುಗ್ರಹ. ಕಾಯಾನುಗ್ರಹದ ಮೂಲಕ ಕಾಯ ಪ್ರಸಾದಕಾಯವಾದಂತೆ, ಇಂದ್ರಿಯಾನುಗ್ರಹದ ಮೂಲಕ ತನ್ನ ಆನಂದವೆಲ್ಲವೂ ಪರಶಿವನ ಆನಂದವೆಂದು ಭಕ್ತನು ತಿಳಿಯುತ್ತಾನೆ. ಹಾಗೆಯೇ, ಅವನು ಪ್ರಾಣಾನುಗ್ರಹದ ಮೂಲಕ ಪ್ರಾಣಲಿಂಗಿಯಾಗುತ್ತಾನೆ. ಅಂದರೆ ಲಿಂಗವು ಪ್ರಾಣವಿರವಲ್ಲೆಲ್ಲಾ ಇರುತ್ತದೆ ಎಂದು ನಂಬುತ್ತಾನೆ.

**ತ್ರಿವಿಧ ಅರ್ಪಿತ :** ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತ ಎಂಬ ಮೂರು ರೀತಿಯ ಅರ್ಪಣೆ. ಭಕ್ತನು ತನ್ನ ಕಾಯದ ಮೂಲಕವೇ ಪರಮಾತ್ಮ ಆನಂದಿಸುತ್ತಾನೆ ಎಂದು ತಿಳಿಯುವುದೇ ಕಾರ್ಯಾರ್ಪಣೆ; ಭಕ್ತನು ತನ್ನ ಇಂದ್ರಿಯ, ಬುದ್ಧಿ, ಮುಂತಾದ ಕರಣಗಳ ಮೂಲಕ ಪರಮಾತ್ಮನು ಆನಂದಿಸುತ್ತಾನೆ ಎಂದು ತಿಳಿಯುವುದೇ ಕರಣಾರ್ಪಣೆ; ಭಕ್ತನು ತನ್ನ ಜೀವಾತ್ಮದ ಮೂಲಕವೇ ಪರಶಿವನು ಎಲ್ಲವನ್ನು ಅನುಭವಿಸುತ್ತಾನೆ ಎಂದು ತಿಳಿಯುವುದೇ ಭಾವಾರ್ಪಣೆ (೨ : ೭೮೯).

**ತ್ರಿವಿಧ ಆಕಾಶ :** ಪಿಂಡಾಕಾಶ, ಬಿಂದ್ವಾಕಾಶ ಮತ್ತು ಮಹದಾಕಾಶ. ದೇಹಗಳು ಇರುವ ಮತ್ತು ಚಲಿಸುವ ಆಕಾಶವೇ ಪಿಂಡಾಕಾಶ. ಅತ್ಯಂತ ಸಣ್ಣ ಪ್ರದೇಶವೇ ಬಿಂದ್ವಾಕಾಶ. ಅಪರಿಮಿತ ಆಕಾಶವೇ ಮಹದಾಕಾಶ. (೨ : ೭೮೯)

**ತ್ರಿವಿಧ ಆಗಮ :** ಕ್ರಿಯಾಗಮ, ಭಾವಾಗಮ, ಜ್ಞಾನಾಗಮ ಎಂಬ ಮೂರು ವಿಧದ ಆಗಮಗಳು. ವೀರಶೈವ ದೀಕ್ಷೆಯನ್ನು ಪಡೆದವನು ಯಾವ ರೀತಿ ಲಿಂಗ ಪೂಜೆ ಮಾಡಬೇಕು, ಗುರು ಜಂಗಮರಲ್ಲಿ ಹೇಗೆ ಭಕ್ತಿ ತೋರಿಸಬೇಕು, ಸಮಾಜದಲ್ಲಿ ಯಾವ ನೈತಿಕ ಕಾರ್ಯಗಳನ್ನು ಮಾಡಬೇಕು, ಮುಂತಾದ ಆಚಾರ ಅಥವಾ ಕ್ರಿಯೆಗಳಿಗೆ ಪ್ರಾಧಾನ್ಯತೆ ಕೊಡುವ ಆಗಮಗಳು ಕ್ರಿಯಾಗಮಗಳು; ಆಧ್ಯಾತ್ಮಿಕ ಸಾಧನೆಯ ಮೂಲಕ ತಾನೆಂಬ ಭಾವವನ್ನು ಹೇಗೆ ಮರೆಯಬೇಕೆಂಬುದಕ್ಕೆ ಒತ್ತು ಕೊಡುವ ಆಗಮ ಭಾವಾಗಮ; ಪರಶಿವನನ್ನು ನೇರವಾಗಿ ಸಮರಸದ ಮೂಲಕ ತಿಳಿದುಕೊಳ್ಳುವ ದಾರಿಯನ್ನು ಬೋಧಿಸುವ ಆಗಮವೇ ಜ್ಞಾನಾಗಮ. (೨ : ೭೮೯)

**ತ್ರಿವಿಧ ಆಚಾರ :** ಲಿಂಗಾಂಗ ಸಾಮರಸ್ಯವನ್ನು ಸಾಧಿಸಿಕೊಳ್ಳಲು ಬೇಕಾಗುವ ಮೂರು ವಿಧದ ಆಚಾರಗಳು. ಅವೆಂದರೆ, ಧರ್ಮಾಚಾರ ಅಥವಾ ಕ್ರಿಯಾಚಾರ, ಭಾವಾಚಾರ ಮತ್ತು ಜ್ಞಾನಾಚಾರ. ಆಧ್ಯಾತ್ಮಿಕ ಜೀವನದ ಪ್ರಾರಂಭದಲ್ಲಿ ಇಷ್ಟಲಿಂಗಪೂಜೆ, ಜಂಗಮ ಗುರುಗಳಿಗೆ ಭಕ್ತಿ ತೋರಿಸುವುದು, ನೈತಿಕ ನಡವಳಿಕೆ ಮುಂತಾದ ಧಾರ್ಮಿಕ ಕ್ರಿಯೆ

ಅಥವಾ ಕ್ರಿಯಾಚಾರಗಳು ಆವಶ್ಯಕ. ಸಾಧಕನಲ್ಲಿ ನಿಷ್ಠೆ ನೆಲೆಯೂರಿದ ಮೇಲೆ ಅವನಲ್ಲಿ ಭಕ್ತಿಯ ರೂಪವೇ ಬದಲಾಗಿ, ಪರಶಿವನಿಗೆ ಹೊರಗಿನ ವಸ್ತುಗಳನ್ನು ಅರ್ಪಿಸುವದರ ಬದಲು ತನ್ನ ದೇಹೇಂದ್ರಿಯಾದಿಗಳನ್ನು ಅರ್ಪಿಸಿ, ಅವುಗಳನ್ನು ತನ್ನವೆಂದು ಪರಗಣಿಸದೆ, ಪರಶಿವನವೆಂದು ಪರಿಗಣಿಸುತ್ತಾನೆ. ಇಲ್ಲಿ ದೈಹಿಕ ಕ್ರಿಯೆಗಳಿಗಿಂತ ಭಾವಕ್ಕೇ ಹೆಚ್ಚು ಪ್ರಾಮುಖ್ಯತೆಯಿರುವುದರಿಂದ, ಸಾಧಕನ ಅಂತಹ ಆಚಾರಗಳನ್ನು ಭಾವಾಚಾರವೆಂದು ಕರೆಯಲಾಗುತ್ತದೆ. ಶರಣಸ್ಥಲ ಹಾಗೂ ಐಕ್ಯಸ್ಥಲ ಮುಟ್ಟಿದ ಸಾಧಕನಿಗೆ ತಾನು ಪರಶಿವನ ಅಭಿನ್ನ ಅಂಗ, ತನಗೂ ಪರಶಿವನಿಗೂ ಭಿನ್ನತೆಯಿಲ್ಲ ಎಂಬ ಜ್ಞಾನ ಉಂಟಾಗಿ, ಅವನಿಗೆ, ತನ್ನ ಕ್ರಿಯೆಗಳೆಲ್ಲವೂ ಪರಶಿವನ ಕ್ರಿಯೆ ಎಂಬ ಅರಿವು ಮೂಡುತ್ತದೆ. ಹೀಗೆ ಅರಿತು ಆಚರಿಸುವ ಕ್ರಿಯೆಗಳೆಲ್ಲ ಜ್ಞಾನಾಚಾರ. (೨ : ೭೮೯, ೭೮೨)

**ತ್ರಿವಿಧ ಆತ್ಮ :** ಜೀವಾತ್ಮ, ಅಂತರಾತ್ಮ, ಪರಮಾತ್ಮ (ನೋಡಿ : **ಆತ್ಮತ್ರಯ**)

**ತ್ರಿವಿಧ ಆನಂದಭಕ್ತಿ :** ಆನಂದ ಭಕ್ತಿಯನ್ನು ಸಾಧಕನು ಮೂರು ಹಂತಗಳಲ್ಲಿ ವ್ಯಕ್ತಪಡಿಸುತ್ತಾನೆ. ಅವುಗಳನ್ನು ಆವೇಶ ಭಕ್ತಿ, ಭಾವಭಕ್ತಿ ಮತ್ತು ಜ್ಞಾನಭಕ್ತಿ ಎಂಬ ಮೂರು ಹಂತಗಳಲ್ಲಿ ವ್ಯಕ್ತಪಡಿಸುತ್ತಾನೆ. ಭಕ್ತನು ತನ್ನ ಆನಂದವನ್ನು ತಡೆದುಕೊಳ್ಳಲಾರದೆ ಆಹಾ ಎಂಬ ಉದ್ಗಾರದ ಮೂಲಕ ವ್ಯಕ್ತಪಡಿಸುವುದು ಆವೇಶಭಕ್ತಿ; ಯಾವ ರೀತಿಯ ಉದ್ಗಾರವನ್ನೂ ಮಾಡದೆ, ಅಂತಃಕರಣದಲ್ಲೆ ಆನಂದಿಸುವುದು ಭಾವಭಕ್ತಿ. ತಾನಾರು, ತಾನು ಆನಂದಿಸುತ್ತಿರುವುದು ಏನನ್ನು ಎಂಬುದರ ಪರಿವೆ ಇಲ್ಲದೆ, ಶಬ್ದ ಮುಗ್ಧವಾಗಿ ಆನಂದಿಸುವಾಗ ಆನಂದಾಶ್ರುಗಳು ಬಂದರೆ, ಆಗ ಆನಂದವು ಜ್ಞಾನಭಕ್ತಿ ಎನಿಸಿಕೊಳ್ಳುತ್ತದೆ. ಇದರಲ್ಲಿ ಜ್ಞಾನಭಕ್ತಿಯ ಆನಂದವು ಉಳಿದೆರಡಕ್ಕಿಂತ ಹೆಚ್ಚಿನದು. ಏಕೆಂದರೆ, ಅದು ನಿಶ್ಚಲವಾಗಿಯೂ ಸ್ವಪ್ರಜ್ಞೆರಹಿತವಾಗಿಯೂ, ಅನುಭಾವಕ್ಕೆ ಹತ್ತಿರವಾಗಿಯೂ ಇದೆ. (೮ : ೧೫೦೮)

**ತ್ರಿವಿಧ ಗುರು :** ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಗುರು. ತಾಪತ್ರಯಗಳಿಂದ ತಪ್ಪಿಸಿಕೊಂಡು, ಲಿಂಗಾಂಗ ಸಾಮರಸ್ಯ ಪಡೆಯುವ ಉದ್ದೇಶದಿಂದ ಬಂದ ವ್ಯಕ್ತಿಗೆ ಲಿಂಗದೀಕ್ಷೆ ಕೊಟ್ಟು ಯಾವಾವ ಕ್ರಿಯೆಗಳನ್ನು ಆಚರಿಸಬೇಕೆಂಬುದನ್ನು ಬೋಧಿಸುವ ಗುರುವೇ ದೀಕ್ಷಾಗುರು. ಇವನು ದೀಕ್ಷೆಯ ಜೊತೆಗೆ ಆಚಾರಗಳನ್ನು ಬೋಧಿಸುವುದರಿಂದ ಇವನಿಗೆ ಆಚಾರಗುರು ಎಂಬ ಹೆಸರೂ ಉಂಟು. ಯಾವ ಕ್ರಿಯೆಗಳನ್ನು ಯಾವ ಭಾವದಿಂದ ಮಾಡಬೇಕು, ಯಾವ ಕರ್ಮದಿಂದ ಬಂಧನ ಉಂಟಾಗುತ್ತದೆ, ಯಾವ ಕರ್ಮದಿಂದ ಆಧ್ಯಾತ್ಮಿಕ ಪ್ರಗತಿಯುಂಟಾಗುತ್ತದೆ, ಎಂಬುದನ್ನು ಪ್ರಾಯೋಗಿಕವಾಗಿ ಬೋಧಿಸುವ ಗುರುವೇ ಶಿಕ್ಷಾಗುರು ಅಥವಾ ಸಮಯಗುರು. ಮೋಕ್ಷ ಮಾರ್ಗಕ್ಕೆ ಬೇಕಾದ ಶಿವಯೋಗದ ಆಚರಣೆಗಳನ್ನು ಬೋಧಿಸುವ ಗುರು ಮೋಕ್ಷಗುರು. ಸಾಮರಸ್ಯದ ಮೂಲಕ ಸಾಧಕನಿಗೆ ಪರಶಿವನ ನೇರ ಅರಿವು ಮೂಡುವುದರಿಂದ, ಅದನ್ನು ತಿಳಿಸಿಕೊಡುವ ಗುರುವಿಗೆ

ಜ್ಞಾನಗುರು ಎಂದೂ ಹೆಸರಿದೆ. ಆ ಮೂರು ಕೆಲಸಗಳನ್ನು ಒಬ್ಬನೇ ಗುರು ಮಾಡಬಹುದು ಅಥವಾ ಬೇರೆ ಬೇರೆ ಗುರುಗಳೂ ಮಾಡಬಹುದು. (೨ : ೭೮೯, ೮ : ೧೪೯೫)

**ತ್ರಿವಿಧ ಜಂಗಮ :** ಸ್ವಯ, ಚರ ಮತ್ತು ಪರ. ಲಿಂಗವನ್ನು ತನ್ನದನ್ನಾಗಿ ಮಾಡಿಕೊಂಡವನು ಸ್ವಯ ಜಂಗಮ, ಸಾಮಾಜಿಕ ಒಳಿತಿಗಾಗಿ ಚಲಿಸುವವನು ಚರಜಂಗಮ. ಪರಮಾತ್ಮನೊಂದಿಗೆ ಐಕ್ಯವನ್ನು ಸಾಧಿಸಿದವನು ಪರಜಂಗಮ.

**ತ್ರಿವಿಧದಾಸೆ :** ಮಾಂಸ, ಮದ್ಯ ಮತ್ತು ಪರಸ್ತ್ರೀಯರ ಆಸೆ.

**ತ್ರಿವಿಧ ದಾಸೋಹ :** ಗುರುದಾಸೋಹ, ಲಿಂಗದಾಸೋಹ, ಜಂಗಮದಾಸೋಹ. ಗುರುಗಳಿಗೆ ದಾಸ್ಯಭಾವದಿಂದ ಅರ್ಪಿಸುವುದು ಗುರುದಾಸೋಹ; ಅದೇ ರೀತಿ ಲಿಂಗಕ್ಕೂ, ಜಂಗಮಕ್ಕೂ ಶರಣಾಗತಿ ಭಾವದಿಂದ ಅರ್ಪಿಸುವುದು ಕ್ರಮವಾಗಿ ಲಿಂಗದಾಸೋಹ ಮತ್ತು ಜಂಗಮದಾಸೋಹ ಎನಿಸಿಕೊಳ್ಳುತ್ತವೆ.

**ತ್ರಿವಿಧ ದ್ರೋಹ :** ಲಿಂಗದ್ರೋಹ, ಗುರುದ್ರೋಹ, ಜಂಗಮದ್ರೋಹ ಎಂಬ ಮೂರು ರೀತಿಯ ದ್ರೋಹಗಳು. ಇಷ್ಟಲಿಂಗ ಪರಶಿವನಲ್ಲವೋ ಹೌದೋ ಎಂಬ ಸಂದೇಹವು ಲಿಂಗದ್ರೋಹ. ಗುರು ಲಿಂಗದೀಕ್ಷೆಯ ಸಮಯದಲ್ಲಿ ಇಷ್ಟಲಿಂಗವೇ ಪರಶಿವನ ಕುರುಹು ಎಂದು ಹೇಳಿದುದನ್ನು ಭಕ್ತನು ಒಪ್ಪಿಕೊಂಡು, ಆ ಮಾತನ್ನು ಅನಂತರ ಸಂದೇಹಿಸುವುದು ಲಿಂಗ ದ್ರೋಹವೇ ಸರಿ. ಗುರು ಲಿಂಗಕ್ಕೆ ಸಮಾನವೋ ಅಲ್ಲವೋ, ಗುರುವಾಣಿಯು ಸತ್ಯವೋ ಅಸತ್ಯವೋ ಎಂದು ಸಂದೇಹಿಸುವುದು ಗುರುದ್ರೋಹ. ಜಂಗಮದ ಜಾತಿಯನ್ನು ಅರಸುವುದು, ಜಂಗಮವು ಲಿಂಗವೋ ಅಲ್ಲವೋ ಎಂದು ಸಂದೇಹಿಸುವುದು ಜಂಗಮದ್ರೋಹ. (೮ : ೪೪)

**ತ್ರಿವಿಧ ನಾಸ್ತಿ :** ೧. ದಾಸಿಯ ಸಂಗ, ವೇಶ್ಯಾಸಂಗ ಮತ್ತು ಪರಸ್ತ್ರೀ ಸಂಗ ಇವುಗಳ ನಾಸ್ತಿ (೩:೧೩೨೧). ಈ ತ್ರಿವಿಧ ನಾಸ್ತಿಯಾದ ಹೊರತು, ಭಕ್ತಿ ನೆಲೆಯೂರದು.

೨. ಆಧ್ಯಾತ್ಮಿಕ ಪ್ರಗತಿಗೆ ಅಡ್ಡಿಯಾಗುವ ಆತ್ಮತೇಜ (ತನುವಿಕಾರ). ಮನವಿಕಾರ ಮತ್ತು ಧನವಿಕಾರ ಎಂಬ ಮೂರು ಅಡ್ಡಿಗಳ ನಾಸ್ತಿ. (೮:೧೫೦೦)

೩. ಅದೇ ರೀತಿ, ಗುರುಸ್ಥಲ, ಲಿಂಗಸ್ಥಲ ಮತ್ತು ಜಂಗಮ ಸ್ಥಲಗಳನ್ನು ಮೀರಿ ಪರಶಿವನಲ್ಲಿ ಸಾಮರಸ್ಯ ಸಾಧಿಸಿದವನಿಗೆ ತ್ರಿವಿಧಸ್ಥಲ ನಾಸ್ತಿಯಾಗುತ್ತದೆ.

**ತ್ರಿವಿಧ ನಿಷ್ಪತ್ತಿ :** ಮೋಕ್ಷಾರ್ಥಿಗೆ ಪರಶಿವನ ಅನುಗ್ರಹ ದೊರೆಯಬೇಕಾದರೆ, ಭಕ್ತ ಜಂಗಮ ಮತ್ತು ಲಿಂಗ ಎಂಬ ತ್ರಿವಿಧ ನಿಷ್ಪತ್ತಿಯಾಗಬೇಕು. ಜಂಗಮನು ಬೇಡಿ ತನ್ನನ್ನು ತಾನೇ ಕಿರಿದು ಮಾಡಿಕೊಳ್ಳುತ್ತಾನೆ. ಇಷ್ಟಲಿಂಗವು ಕಲ್ಲುಕುಟಿಕನಿಂದಾಗಿ ಕೀಳಾಗುತ್ತದೆ. ಭಕ್ತನು ತನು ಮನ ಧನದಾಸೆಗಳಿಂದ ಕೀಳಾಗುತ್ತಾನೆ. ಬೇಡುವ ಜಂಗಮನ ಬಳಿ ಹೋಗದೆ, ಲಿಂಗಕ್ಕೆ ಕಲ್ಲುಕುಟಿಗನೆ ಕರ್ತೃವೆಂದು ತಿಳಿಯದೆ,ತನುಮನಧನಗಳ ಬೆನ್ನು ಹತ್ತದೆ

ನಿಷ್ಕಲಂಕ ಭಕ್ತಿ ತೋರಿಸುವವನಿಗೆ ಪರಶಿವ ಒಲಿಯುತ್ತಾನೆ ಎಂದು ಚೆನ್ನಬಸವಣ್ಣ (೩:೧೨೪೮).

ಅಲ್ಲಮ ಪ್ರಭುದೇವರ ಪ್ರಕಾರ, ಕ್ರಿಯಾನಿಷ್ಪತ್ತಿ, ಭಾವನಿಷ್ಪತ್ತಿ ಮತ್ತು ಜ್ಞಾನ ನಿಷ್ಪತ್ತಿಗಳೇ ತ್ರಿವಿಧ ನಿಷ್ಪತ್ತಿ. ಇಷ್ಟಲಿಂಗ ಪೂಜೆ, ಪ್ರಸಾದ, ಸ್ವೀಕರಣೆ, ಗುರುಜಂಗಮ ಭಕ್ತಿ ಮುಂತಾದ ಬಾಹ್ಯಕ್ರಿಯೆಗಳು ನಿಷ್ಪತ್ತಿಯಾಗಬೇಕು. ನಾನು ಅರ್ಪಿಸುತ್ತಿದ್ದೇನೆ, ನಾನೇ ಬೇರೆ, ನನ್ನ ಅರ್ಪಣೆಯನ್ನು ಸ್ವೀಕರಿಸುವ ಪರಶಿವನೇ ಬೇರೆ, ಎಂಬ ಭಾವ ನಿಷ್ಪತ್ತಿಯಾಗಬೇಕು. ನಿಜವಾದ ಲಿಂಗೈಕ್ಯನಿಗೆ ತನ್ನ ಅರಿವೂ ಇರುವುದಿಲ್ಲ. ತಾನು ಪರಶಿವನಲ್ಲಿ ಒಂದಾಗಿದ್ದೇನೆ ಎಂಬ ಅರಿವೂ ಇರುವುದಿಲ್ಲ. (೨ : ೭೮೯)

**ತ್ರಿವಿಧ ಪ್ರಸಾದ :** ಚೆನ್ನಬಸವಣ್ಣನವರು ಈ ಪದಕ್ಕೆ ಶುದ್ಧ ಪ್ರಸಾದ, ಸಿದ್ಧಪ್ರಸಾದ ಮತ್ತು ಪ್ರಸಿದ್ಧ ಪ್ರಸಾದ ಎಂಬ ಅರ್ಥವನ್ನು ಕೊಟ್ಟಿದ್ದರೂ, ಈ ಮೂರು ಪದಗಳಲ್ಲಿ ಪ್ರತಿಯೊಂದಕ್ಕೂ ಎರಡು ಬೇರೆ ಬೇರೆ ಅರ್ಥಕೊಟ್ಟಿದ್ದಾರೆ. ಗುರುವಿನಿಂದ ಪಡೆದ ಪ್ರಸಾದ ಶುದ್ಧ ಪ್ರಸಾದ. ಇದು ಗುರುವಿನಿಂದ ಪಡೆದುದಾದುದರಿಂದ, ಅದಕ್ಕೆ ಗುರುಪ್ರಸಾದ ಎಂಬ ಹೆಸರೂ ಇದೆ. ಲಿಂಗಕ್ಕರ್ಪಿಸಿ ಪಡೆದ ಪ್ರಸಾದವೇ ಸಿದ್ಧ ಪ್ರಸಾದ. ಇದು ಲಿಂಗದಿಂದ ಪಡೆದುದಾದುರಿಂದ, ಅದಕ್ಕೆ ಲಿಂಗ ಪ್ರಸಾದವೆಂಬ ಹೆಸರೂ ಇದೆ. ಜಂಗಮಕ್ಕರ್ಪಿಸಿ ಪಡೆದ ಪ್ರಸಾದಕ್ಕೆ ಪ್ರಸಿದ್ಧ ಪ್ರಸಾದ ಅಥವಾ ಜಂಗಮ ಪ್ರಸಾದ ಎಂಬ ಹೆಸರಿದೆ.

ತನುವಿನ ಸ್ವಾರ್ಥಕ್ಕೆ ತೆಗೆದುಕೊಳ್ಳದೆ ಅದು ಶುದ್ಧಿಯಾಗಲಿ ಎಂಬ ಉದ್ದೇಶದಿಂದ ತೆಗೆದುಕೊಂಡ ಗುರುಪ್ರಸಾದವು ಶುದ್ಧ ಪ್ರಸಾದವೆನಿಸಿಕೊಳ್ಳುತ್ತದೆ. ರುಚಿ ಎಂಬ ಬಯಕೆಯನ್ನು ಪೂರೈಸಲು ಪ್ರಸಾದವನ್ನು ತೆಗೆದುಕೊಳ್ಳದೆ ರುಚಿ ಶುಚಿ ಹೇಗೇ ಇದ್ದರೂ ಕೇವಲ ನಿಷ್ಠೆಯಿಂದ ತೆಗೆದುಕೊಂಡ ಪ್ರಸಾದ ಸಿದ್ಧ ಪ್ರಸಾದ. ವಸ್ತುಗಳನ್ನು ಎಲ್ಲಿದ್ದರಲ್ಲಿಂದಲೇ, ಯಾವ ಸ್ವಾರ್ಥ ಉದ್ದೇಶವಿಲ್ಲದೆಯೇ ಅರ್ಪಿಸಿ ಪಡೆದ ಪ್ರಸಾದವೇ ಪ್ರಸಿದ್ಧ ಪ್ರಸಾದ. (೨ : ೨೪೫ ಮತ್ತು ೯೮)

ಚೆನ್ನಬಸವಣ್ಣನವರ ಮತ್ತೊಂದು ಅರ್ಥದ ಪ್ರಕಾರ, ಕಣ್ಣಿನಿಂದ ನೋಡುವ ವಿಷಯಗಳ ರೂಪದ ಗುಣಾವಗುಣಗಳನ್ನು ನಿಸ್ವಾರ್ಥ ಭಾವನೆಯಿಂದ ಇಷ್ಟಲಿಂಗಕ್ಕೆ ಅರ್ಪಿಸಿ, ಪಡೆದುದು ಶುದ್ಧ ಪ್ರಸಾದ; ರುಚಿಯ ಗುಣಾವಗುಣಗಳನ್ನು ನಿಸ್ವಾರ್ಥ ಭಾವನೆಯಿಂದ ಪ್ರಾಣಲಿಂಗಕ್ಕೆ ಅರ್ಪಿಸಿ ಪಡೆದುದು ಸಿದ್ಧ ಪ್ರಸಾದ. ಆಹಾರವೇನೇ ಇರಲಿ, ಅದರ ರುಚಿ ಏನೇ ಇರಲಿ, ನಿರ್ಭಾವದಿಂದ ಭಾವಲಿಂಗಕ್ಕರ್ಪಿಸಿ ಪಡೆದುದು ಪ್ರಸಿದ್ಧ ಪ್ರಸಾದ. (೩:೨೭೬)

**ತ್ರಿವಿಧ ಪ್ರಸಾದಿ :** ಶುದ್ಧ ಪ್ರಸಾದಿ, ಸಿದ್ಧ ಪ್ರಸಾದಿ, ಪ್ರಸಿದ್ಧ ಪ್ರಸಾದಿ. (**ನೋಡಿ : ತ್ರಿವಿಧ ಪ್ರಸಾದ**). ಅಲ್ಲಮ ಪ್ರಭುವಿನ ಪ್ರಕಾರ, ಆದಿ ಪ್ರಸಾದಿ. ಅಂತ್ಯ ಪ್ರಸಾದಿ, ಸೇವ್ಯ ಪ್ರಸಾದಿ, ಇವರೆ ತ್ರಿವಿಧ ಪ್ರಸಾದಿಗಳು. ಸೃಷ್ಟಿಯಲ್ಲಿ ಸಿಕ್ಕುವ ಆದಿಯುಳ್ಳ ವಸ್ತುಗಳನ್ನು ಅರ್ಪಿಸಿ, ಅವುಗಳನ್ನು ಪ್ರಸಾದವನ್ನಾಗಿ ಮಾಡಿಕೊಳ್ಳುವವನು ಆದಿ ಪ್ರಸಾದಿ. ತನ್ನ ದೇಹ, ಇಂದ್ರಿಯ, ಮನಸ್ಸು ಇತ್ಯಾದಿಗಳನ್ನು ಅರ್ಪಿಸಿ ಅವುಗಳನ್ನು ಪ್ರಸಾದವೆಂಬಂತೆ ಉಪಯೋಗಿಸುವವನು ಅಂತ್ಯಪ್ರಸಾದಿ. ಹೊರಗಿನದನ್ನಾಗಲಿ ತನ್ನದನ್ನಾಗಲಿ ಅರ್ಪಿಸದೆ, ತನ್ನನ್ನೆ ಅರ್ಪಿಸಿಕೊಂಡು, ತಾನೇ ಪರಶಿವನ ದೇಹ, ಕರಣಗಳೆಂದು ತಿಳಿದುಕೊಂಡವನು ಸೇವ್ಯ ಪ್ರಸಾದಿ (೨ : ೭೮೯)

**ತ್ರಿವಿಧ ಪಾದೋದಕ :** ಲಿಂಗವನ್ನು ಮುಟ್ಟದೆ, ಪಾದೋದಕವನ್ನು ಐದು ಬೆರಳುಗಳಿಂದ ನಾಲಗೆಯ ಮೇಲೆ ಹಾಕಿಕೊಳ್ಳುವುದೇ ಗುರುಪಾದೋದಕ ಅಥವಾ ದೀಕ್ಷಾ ಪಾದೋದಕ. ಲಿಂಗವನ್ನೆತ್ತಿ ಅದರ ತಳದಲ್ಲಿ ನಿಂತಿರುವ ಪಾದೋದಕವನ್ನು ಸ್ವೀಕರಿಸುವುದೇ ಲಿಂಗ ಪಾದೋದಕ ಅಥವಾ ಶಿಕ್ಷಾ ಪಾದೋದಕ; ಬಟ್ಟಲಿನಲ್ಲಿ ಶೇಖರವಾಗಿರುವ ಪಾದೋದಕವನ್ನು ಬಟ್ಟಲನ್ನೆತ್ತಿ ಸೇವಿಸುವುದು ಜಂಗಮ ಪಾದೋದಕ ಅಥವಾ ಜ್ಞಾನಪಾದೋದಕ. (೩:೧೨೭೩)

**ತ್ರಿವಿಧ ಭಕ್ತಿ :** ಗುರು, ಲಿಂಗ ಮತ್ತು ಜಂಗಮರಲ್ಲಿ ತೋರಿಸುವ ಭಕ್ತಿ.

**ತ್ರಿವಿಧ ಭವಿ :** ಆಧ್ಯಾತ್ಮಿಕ ಒಲವು ಇಲ್ಲದವನು ಭವಿ, ಆದರೆ ಲಿಂಗದೀಕ್ಷೆ ಪಡೆದೂ ಅವನು ಹೊನ್ನು, ಹೆಣ್ಣು ಮತ್ತು ಮಣ್ಣುಗಳೆಂಬ ಪ್ರಾಪಂಚಿಕ ಆಸೆಗಳ ಕಡೆ ತಿರುಗಿದರೆ ಅವನು ತ್ರಿವಿಧ ಭವಿ.

**ತ್ರಿವಿಧ ಭ್ರಮೆ :** ಕಾಲಜ್ಞಾನ ಭ್ರಮೆ, ಕರ್ಮಜ್ಞಾನ ಭ್ರಮೆ, ಭಾವಜ್ಞಾನ ಭ್ರಮೆ.

ಕಾಲಜ್ಞಾನ ಭ್ರಮೆ : ಲಿಂಗಾಂಗ ಸಾಮರಸ್ಯ ಸಾಧಿಸಿದವನಿಗೆ ತಾನು ಯಾವಾಗಲೂ ಶಿವೈಕ್ಯನಾಗೇ ಇದ್ದೇನೆಂಬ ಅರಿವು ಮೂಡಿದಾಗ, ಭೂತ, ಭವಿಷ್ಯತ್ ಮತ್ತು ವರ್ತಮಾನಗಳ ವ್ಯತ್ಯಾಸಮಾಡುವುದಿಲ್ಲ. ಆ ರೀತಿಯ ವ್ಯತ್ಯಾಸ ವ್ಯಾವಹಾರಿಕ ಕ್ರಿಯೆಗಳಿಗಷ್ಟೇ ಸಿಂಧುವಾಗುತ್ತದೆ. ಉದಾಹರಣೆಗೆ ನಾನು ನೋಡಿದೆ ಎಂದರೆ ನನ್ನ ನೋಟವೆಂಬ ಕ್ರಿಯೆಯು ಒಂದು ನಿರ್ದಿಷ್ಟಕಾಲದಲ್ಲಿ ಪ್ರಾರಂಭವಾಗಿ, ಒಂದು ನಿರ್ದಿಷ್ಟಕಾಲದಲ್ಲಿ ಮುಗಿಯಿತು ಎಂದರ್ಥ. ಆದರೆ, ಒಂದು ವೇಳೆ ನನ್ನ ನೋಟಕ್ಕೆ ಆದಿ ಅಂತ್ಯಗಳೇ ಇಲ್ಲದಿದ್ದರೆ, ಆಗ ನನಗೆ ಕಾಲದ ಪರಿವೆಯೂ ಇರುವುದಿಲ್ಲ. ಆದುದರಿಂದ ಈಗ ೬ ಗಂಟೆ ಮುಂತಾದ ಕಾಲದ ಜ್ಞಾನವು ನಾವಿನ್ನೂ ಭ್ರಮಿತರಾಗಿದ್ದೇವೆಂಬುದರ ಸೂಚಕ.

ಕರ್ಮಜ್ಞಾನ ಭ್ರಮೆ : ಈ ಕೆಲಸ ಮಾಡುವುದರಿಂದ ಸುಖ, ಆ ಕೆಲಸ ಮಾಡುವುದರಿಂದ ದುಃಖ ಮುಂತಾಗಿ ತಿಳಿದು, ನಾವು ದುಃಖಕಾರಕ ಕೆಲಸಗಳನ್ನು ತ್ಯಜಿಸಿ, ಅನೈತಿಕವಾದರೂ ಸುಖದಾಯಕ ಕರ್ಮಗಳನ್ನೇ ಮಾಡುತ್ತೇವೆ. ಇದರಿಂದ ಸುಖ ಸಿಕ್ಕುತ್ತದೆಯೆಂಬ ಜ್ಞಾನವೂ ಸಹ ಭ್ರಮೆಯೇ. ಏಕೆಂದರೆ ಅನೈತಿಕ ಕಾರ್ಯಗಳು ಇಂದಲ್ಲ ನಾಳೆ ನಮಗೆ ದುಷ್ಪರಿಣಾಮವನ್ನುಂಟು ಮಾಡುತ್ತವೆ.

ಭಾವಜ್ಞಾನ ಭ್ರಮೆ : ನಾನು ಪರಶಿವನಿಂದ ಪ್ರತ್ಯೇಕ, ನನ್ನ ಸುಖವೇ ನನಗೆ ಮುಖ್ಯ ಎಂಬ ಜ್ಞಾನವೂ ಭ್ರಮೆಯೇ. ನಾನು ಪರಶಿವನಿಂದ ಪ್ರತ್ಯೇಕವಲ್ಲ, ಲಿಂಗಾನುಭವವೇ ನಿಜವಾದ ಸುಖ ಎಂಬ ತಿಳುವಳಿಕೆಯೇ ನಿಜವಾದ ಜ್ಞಾನ.

**ತ್ರಿವಿಧ ಭೂತಿಕ :** ಸತ್ವ, ರಜಸ್ ಮತ್ತು ತಮಸ್ ಎಂಬ ಭೌತಿಕ ಗುಣಗಳು. (ಅ:೧೨೬೫)

**ತ್ರಿವಿಧ ಮಾಯೆ :** ಮನದ ಮುಂದಣ ಆಸೆಯೇ ಮಾಯೆ ಎಂಬರ್ಥದಲ್ಲಿ ಹೊನ್ನು, ಮಣ್ಣು ಮತ್ತು ಹೆಣ್ಣು ತ್ರಿವಿಧ ಮಾಯೆ ಎನಿಸಿಕೊಳ್ಳುತ್ತದೆ.

**ತ್ರಿವಿಧ ಮಾಯೋಚ್ಛಿಷ್ಟ :** ಗುರುಪ್ರಸಾದಿಯೆನಿಸಿಕೊಂಡವನು ತನ್ನ ಕಾಯವನ್ನು ಕೇವಲ ಔಪಚಾರಿಕ ಪೂಜೆಗಳಿಗೆ ಬಳಸಿಕೊಂಡರೆ ಆ ಕಾಯ ಮಾಯೋಚಿಷ್ಟ; ಲಿಂಗ ಪ್ರಸಾದಿಯಾದವನು ತನ್ನ ಅಂತಃಕರಣಗಳನ್ನು ಔಪಚಾರಿಕ ಮಂತ್ರಧ್ಯಾನ ಜಪಸ್ತೋತ್ರಾದಿಗಳಿಗೆ ಬಳಸಿಕೊಂಡರೆ, ಆ ಅಂತಃಕರಣವೂ ಮಾಯೋಚ್ಛಿಷ್ಟ; ಜಂಗಮ ಪ್ರಸಾದಿ ಎನಿಸಿಕೊಂಡವನು ತನ್ನ ಆತ್ಮವನ್ನು ಕೇವಲ ಔಪಚಾರಿಕವಾಗಿ ಮಾಡುವ ದಾಸೋಹ ಮುಂತಾದವುಗಳಿಗೆ ಬಳಸಿಕೊಂಡರೆ, ಆ ಆತ್ಮನೂ ಮಾಯೋಚ್ಛಿಷ್ಟ; ಈ ತ್ರಿವಿಧ ಮಾಯೋಚ್ಛಿಷ್ಟವಾದ ಜೀವನಿಗೆ ನಾಯಕ ನರಕ ತಪ್ಪದು ಎಂಬುದು ವಚನಕಾರರ ಎಚ್ಚರಿಕೆ. (೧೨ : ೩೭೯)

**ತ್ರಿವಿಧ ಮುಖ :** ಮುಖ ಎಂಬ ಪದಕ್ಕೆ ವಚನಗಳಲ್ಲಿ ಹೆಚ್ಚಾಗಿ ಬಾಯಿ ಎಂಬ ಅರ್ಥವಿರುತ್ತದೆ. ನಮ್ಮ ಇಂದ್ರಿಯಗಳೆಂಬ ಬಾಯಿಯೊಳಕ್ಕೆ ವಿಷಯಗಳೆಂಬ ಆಹಾರ ಬರುತ್ತವೆ. ಅದೇ ರೀತಿ, ಮನಸ್ಸು, ಬುದ್ಧಿ, ಮತ್ತು ಚಿತ್ತ ತ್ರಿವಿಧ ಮುಖಗಳು. ಈ ಪ್ರತಿಯೊಂದು ಬಾಯಿಯಲ್ಲಿಯೂ ಪರಶಿವನನ್ನು ಪ್ರತಿಷ್ಠಾಪಿಸಿಕೊಂಡವನು, ಪರಶಿವನಿಗೆ ಅರ್ಪಿಸದೆ, ಏನನ್ನೂ ಸೇವಿಸಲು ಸಾಧ್ಯವಿಲ್ಲ.

**ತ್ರಿವಿಧ ಮೂರ್ತಿ :** ಕ್ರಿಯಾಶಕ್ತಿಯ ಅಧಿದೇವತೆಯಾದ ಬ್ರಹ್ಮ, ಇಚ್ಛಾಶಕ್ತಿಯ ಅಧಿದೇವತೆಯಾದ ವಿಷ್ಣು ಮತ್ತು ಜ್ಞಾನಶಕ್ತಿಯ ಅಧಿದೇವತೆಯಾದ ಮಹೇಶ್ವರ.

**ತ್ರಿವಿಧ ಲಿಂಗ :** ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ (೨ : ೭೮೯). ಕೆಲವು ವೇಳೆ ಇಷ್ಟಲಿಂಗ, ಭಾವಲಿಂಗ, ಪ್ರಾಣಲಿಂಗವೆಂದೂ ಮತ್ತೆ ಕೆಲವು ವೇಳೆ, ಆಯತಲಿಂಗ, ಸ್ವಾಯತ ಲಿಂಗ ಸನ್ನಿಹಿತಲಿಂಗವೆಂದೂ ಅರ್ಥೈಸುವುದುಂಟು. ಇಷ್ಟಲಿಂಗವು

ಹೊರಗಿನಿಂದ ಬಂದುದು (ಆಯತ) ಆದುದದರಿಂದ, ಅದಕ್ಕೆ ಆಯತಲಿಂಗವೆಂದು ಹೆಸರು: ಅಷ್ಟವಿಧ ಪೂಜೆ, ಮುಂತಾದ ಕ್ರಿಯೆಗಳನ್ನು ಅದಕ್ಕೆ ಮಾಡಬೇಕಾದುದರಿಂದ, ಆದು ಕ್ರಿಯಾಲಿಂಗವೂ ಹೌದು. ಕಣ್ಣಿಗೆ ಕಾಣದ ಆದರೆ ಮೊದಲಿನಿಂದಲೂ ನಮ್ಮಲ್ಲೇ ಇರುವ ಲಿಂಗವೇ ಭಾವಲಿಂಗ ಅಥವಾ ಸ್ವಾಯತ ಲಿಂಗ. ನಾವು ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿದ್ದರೂ, ಪ್ರಾರಂಭದಲ್ಲಿ ಮಾತ್ರ ನಾವು ಪರಶಿವನಿಂದ ಪ್ರತ್ಯೇಕವೆಂದೇ ಭಾವಿಸಿ, ಇಷ್ಟಲಿಂಗಕ್ಕೆ ಪೂಜೆ ಸಲ್ಲಿಸುತ್ತೇವೆ, ಹಾಗೂ ಪರಶಿವನಿಗೆ ಅರ್ಪಣೆ ಮಾಡುತ್ತೇವೆ. ನಾವು ಪರಮಾತ್ಮನ ಅಂಗವೆಂದೂ, ಆ ಪರಮಾತ್ಮನು ಜ್ಞಾನ ಅಥವಾ ಚಿತ್ ಸ್ವರೂಪನೆಂದೂ ಆಧ್ಯಾತ್ಮಿಕ ಜೀವನದ ಕೊನೆಯಲ್ಲಿ ತಿಳಿಯುತ್ತೇವೆ. ಆಗ ಪರಮಾತ್ಮ ಜ್ಞಾನಲಿಂಗ ಅಥವಾ ಪ್ರಾಣಲಿಂಗ ಅಥವಾ ಸನ್ನಹಿತ ಲಿಂಗ.

**ತ್ರಿವಿಧ ವಿಕಾರಿ :** ತನುವಿಕಾರಿ, ಮನವಿಕಾರಿ, ಧನವಿಕಾರಿ. ದೇಹದ ಬಯಕೆಗಳಿಗೆ ದಾಸನಾದವನು ತನುವಿಕಾರಿ, ಮಾನಸಿಕ ಚಾಂಚಲ್ಯಕ್ಕೆ ಒಳಗಾದವನು ಮನವಿಕಾರಿ, ಧನದಾಸೆ ಉಳ್ಳವನು ಧನವಿಕಾರಿ.

**ತ್ರಿವಿಧ ಶಕ್ತಿ :** ಕ್ರಿಯಾಶಕ್ತಿ (ಸರಸ್ವತಿ), ಇಚ್ಛಾಶಕ್ತಿ (ಮಹಾಲಕ್ಷ್ಮಿ), ಜ್ಞಾನಶಕ್ತಿ (ಉಮಾ).

**ತ್ರಿವಿಧ ಸ್ಥಲ :** (೧) ಭಕ್ತಸ್ಥಲ, ಮಹೇಶ ಸ್ಥಲ, ಪ್ರಸಾದಿ ಸ್ಥಲ, ಪ್ರಾಣಲಿಂಗಿ ಸ್ಥಲ, ಶರಣಸ್ಥಲ, ಮತ್ತು ಐಕ್ಯಸ್ಥಲ ಇವುಗಳನ್ನು ಕೆಲವು ವಚನಕಾರರು ಮೂರು ಗಂಪುಗಳಾಗಿ ಮಾಡುತ್ತಾರೆ. ಭಕ್ತ ಮತ್ತು ಮಹೇಶ ಸ್ಥಲಗಳು ಮೊದಲನೆಯ ಗುಂಪಿಗೂ, ಪ್ರಸಾದಿ ಮತ್ತು ಪ್ರಾಣಲಿಂಗಿ ಸ್ಥಲಗಳು ಎರಡನೆಯ ಗುಂಪಿಗೂ ಶರಣ ಮತ್ತು ಐಕ್ಯಸ್ಥಲಗಳು ಮೂರನೆಯ ಗುಂಪಿಗೂ ಸೇರುತ್ತವೆ. (೯ : ೯೨)

(೨) ಮತ್ತೆ ಕೆಲವು ವಚನಕಾರರ ಪ್ರಕಾರ ತ್ರಿವಿಧ ಸ್ಥಲವೆಂದರೆ, ಅಂಗಸ್ಥಲ, ಪ್ರಾಣಸ್ಥಲ ಮತ್ತು ಭಾವಸ್ಥಲ. ಅಂದರೆ, ಅಂಗಸ್ಥಲದಲ್ಲಿ ಸಾಧಕನು ತನ್ನ ಅಂಗದ ಮೇಲೆ ಲಿಂಗವನ್ನೂ ಧರಿಸುತ್ತಾನೆ ಹಾಗೂ ಪೂಜಾ ಸಮಯದಲ್ಲಿ ಅದನ್ನು ಕರಸ್ಥಲದಲ್ಲಿ ಪ್ರತಿಷ್ಠಾಪಿಸುತ್ತಾನೆ. ಆಧ್ಯಾತ್ಮದಲ್ಲಿ ಇನ್ನೂ ಮುಂದುವರಿದ ಸಾಧಕನು ಲಿಂಗವನ್ನು ಪೂಜಾ ಸಮಯದಲ್ಲಷ್ಟೇ ಧ್ಯಾನಿಸದೆ ಇತರ ಸಮಯದಲ್ಲೂ ಧ್ಯಾನಿಸುತ್ತಾನೆ. ಇದಕ್ಕೆ ಮಂತ್ರ ಮುಂತಾದವುಗಳು ಸಹಾಯಕವಾಗುತ್ತವೆ. ಕೊನೆಯದಾಗಿ ಸಾಧಕನು ತನ್ನ ಭಾವಸ್ಥಲದಲ್ಲಿಯೂ ಲಿಂಗವನ್ನು ಪ್ರತಿಷ್ಠಾಪಿಸಿ ತಾನು ಲಿಂಗದಿಂದ ಪ್ರತ್ಯೇಕವಲ್ಲ ಎಂಬ ಅರಿವನ್ನು ಪಡೆಯುತ್ತಾನೆ (೧:೧೦೩೨). ಕೆಲವು ವೇಳೆ ಈ ತ್ರಿವಿಧ ಸ್ಥಲಗಳಿಗೆ ಕರಸ್ಥಲ, ಮನಸ್ಥಲ ಮತ್ತು ಭಾವಸ್ಥಲ ಎಂಬ ಹೆಸರುಗಳನ್ನು ವಚನಕಾರರು ಕೊಟ್ಟಿದ್ದಾರೆ. (೧: ೧೦೬೨)

**ತ್ವಕ್ಕುಲಿಂಗ ಸಮರಸ :** ಸಾಮರಸ್ಯ ಸಾಧಿಸಿದವನ ಆತ್ಮವನ್ನು ಪರಶಿವನು ಸ್ವಾಧೀನ ಪಡಿಸಿಕೊಂಡಿರುವಂತೆ, ಅವನ ತ್ವಕ್ಕನ್ನೂ (ಚರ್ಮವನ್ನೂ) ಸ್ವಾಧೀನ

ಪಡಿಸಿಕೊಂಡಿದ್ದಾನಾದುದರಿಂದ, ಅವನ ತ್ವಕ್ಕು ಮತ್ತು ಲಿಂಗಗಳಲ್ಲಿ ತಾಮರಸ್ಯ ಇದೆ ಎನ್ನಬಹುದು. (೧೦ : ೧೫೪).

**ದಗ್ಧಪಟನ್ಯಾಯ :** ಬಟ್ಟೆ ಸುಟ್ಟಾಗ ಅದರಲ್ಲಿದ್ದ ವಿನ್ಯಾಸಗಳು ನಾಶವಾಗುತ್ತವೆ. ಅದೇ ರೀತಿ, ಅನುಭಾವಿಗೆ ತನ್ನ ವ್ಯಕ್ತಿತ್ವನಾಶವಾದಾಗ, ಅವನ ಸ್ವಾರ್ಥ ಉದ್ದೇಶಗಳೂ, ಇತರ ಉಪಾಧಿಗಳೂ ನಾಶವಾಗುತ್ತವೆ. (೭:೩೧೦)

**ದರುಶನ (ದರ್ಶನ) :** ಈ ಪದಕ್ಕೆ ನೋಟ ಎಂಬ ಅರ್ಥವಿದ್ದರೂ, ತತ್ತ್ವಶಾಸ್ತ್ರ ಅಥವಾ ಅನುಭಾವಕ್ಕೆ ಸಂಬಂಧಿಸಿದಂತೆ ಒಳನೋಟ ಎಂಬ ಆರ್ಥವಿದೆ. ಗಾಢವಾದ ಧ್ಯಾನದಲ್ಲಿ ಜೀವನು ಶಿವನಲ್ಲಿ ಒಂದಾಗುವ ಮುನ್ನ ಶಿವನನ್ನು ಒಳಗಣ್ಣಿನಿಂದ ನೋಡುತ್ತಿರುವಂತೆ ಅನುಭವಿಸುತ್ತಾನೆ. ಈ ದರ್ಶನದಲ್ಲಿ ಜೀವನಿಗೆ ತಾನು ಪರಮಾತ್ಮನಲ್ಲಿ ಬೆರೆತಿದ್ದೇನೆ ಅಥವಾ ಪರಮಾತ್ಮನನ್ನು ಅನುಭವಿಸುತ್ತಿದ್ದೇನೆ ಎಂಬ ಜ್ಞಾನ ಉಂಟಾಗುತ್ತದೆಯಾದುದರಿಂದ ಜ್ಞಾನವಿಲ್ಲದ ದರ್ಶನವಿರಲು ಸಾಧ್ಯವಿಲ್ಲ. ಕೆಲವು ವೇಳೆ, ತಾನು ಅನುಭವಿಸುತ್ತಿರುವುದರ ಗುಣಗಳು ಗೊತ್ತಾಗುವುದಿಲ್ಲವಾದ ಕಾರಣ, ಅದನ್ನು ಬೌದ್ಧರಂಥವರು ಪರಮಾತ್ಮ ಎಂದು ವರ್ಣಿಸಲು ಹಿಂಜರಿಯುತ್ತಾರೆ. ಆದರೆ ಅಂಥಹುದರ ಜ್ಞಾನವೂ ಜ್ಞಾನವೇ. (೨:೪೩೪, ೮.೧೬೮೮)

**ದಶನಾಡಿಗಳು :** ನಾಡಿಗೆ ನರ ಎಂಬ ಪರ್ಯಾಯ ಪದವೂ ಇದೆ. ಈ ಹತ್ತು ನಾಡಿಗಳು ಯಾವುವು ಎಂದರೆ, ಇಡಾ, ಪಿಂಗಳಾ, ಸುಷುಮ್ನಾ, ಗಾಂಧಾರಿ, ಹಸ್ತಿಜಿಹ್ವಾ, ಪೂಷಾ ಅಲಂಬು, ಲಕುಹಾ, ಪಯಸ್ವಿನಿ, ಶಂಖಿನಿ. (೩ : ೧೦೦೦)

**ದಶನಾದಗಳು :** ಅನುಭಾವಿಗೆ ಸಮಾಧಿ ಸ್ಥಿತಿಯಲ್ಲಿರುವಾಗ ರಕ್ತಮಾಂಸದ ಕಿವಿಗೆ ಕೇಳದ, ಆದರೆ ಅಂತರಂಗದ ಕಿವಿಗೆ ಕೇಳಿಸುವಂತಹ ಹತ್ತು ರೀತಿಯ ಶಬ್ದಗಳು ಕೇಳುತ್ತವೆ. ಇವೆಲ್ಲ ಶಬ್ದಗಳೂ ಒಂದೇ ಸಾರಿಗೆ ಕೇಳಿಸದೆ, ಅವನ ಆಧ್ಯಾತ್ಮಿಕ ಪ್ರಗತಿಯಾದಂತೆಲ್ಲಾ ಒಂದೊಂದು ರೀತಿಯ ಶಬ್ದ ಕೇಳುತ್ತದೆ. ಈ ಶಬ್ದಗಳು ಅನುಕ್ರಮವಾಗಿ ಹೀಗಿವೆ : ಭ್ರಮರನಾದ, ವೀಣಾನಾದ, ಘಂಟಾನಾದ, ಭೇರಿನಾದ, ಮೇಘನಾದ, ಪ್ರಣಮನಾದ, ದಿವ್ಯನಾದ, ಸಿಂಹನಾದ, ಶರಭನಾದ, ಮಹಾನಾದ: ಅಂದರೆ ಆಧ್ಯಾತ್ಮಿಕ ಶಿಕ್ಷಣದ ಮೊದಲನೆ ಹಂತದಲ್ಲಿ ಸಮಾಧಿಸ್ಥಿತಿಯಲ್ಲಿರುವಾಗ ಭ್ರಮರನಾದ ಕೇಳಿದರೆ, ಆಧ್ಯಾತ್ಮಿಕ ಪ್ರಗತಿಯ ಕೊನೆಯ ಹಂತದಲ್ಲಿ, ಸಾಧಕನಿಗೆ ಮಹಾನಾದ ಕೇಳಿಸುತ್ತದೆ. (೨:೮೧೬)

**ದಶಮುಖ ಲಿಂಗ ಪ್ರತಿಷ್ಠೆ :** ಸರ್ವಾಂಗಲಿಂಗಿಯಾದವನು ತನ್ನ ಹತ್ತೂ ಕರಣಗಳನ್ನು (ಐದು ಜ್ಞಾನೇಂದ್ರಿಯ ಮತ್ತು ಐದು ಕರ್ಮೇಂದ್ರಿಯಗಳನ್ನು) ಪರಶಿವನ ಸ್ಥಾನವನ್ನಾಗಿ ಮಾಡಿಕೊಳ್ಳುತ್ತಾನೆ. ಆಗ, ಭಕ್ತನು ಅನುಭವಿಸುವ ನೋಟ, ರುಚಿ, ವಾಸನೆ ಮುಂತಾದ ಇಂದ್ರಿಯಗಳ ಆಹಾರಗಳು ಮೊದಲು ಅಲ್ಲೇ ಇರುವ ಪರಶಿವನಿಗೆ ಅರ್ಪಿತವಾಗಿ, ಅನಂತರ ಜೀವನಿಗೆ ಪ್ರಸಾದ ರೂಪದಲ್ಲಿ ತಲುಪುತ್ತವೆ. ಹೀಗೆ ಪ್ರತಿಯೊಂದು ಕರಣ

(ಇಂದ್ರಿಯ)ವೂ ಪರಶಿವನ ಬಾಯಿ (ಮುಖ) ಆದಾಗಲೇ, ಭಕ್ತನು ಸರ್ವಾಂಗಲಿಂಗಿಯಾಗುತ್ತಾನೆ ಎಂದರ್ಥ.

**ದಶವಾಯುಗಳು :** ನಮ್ಮ ಶರೀರದ ವಿವಿಧ ಭಾಗಗಳಲ್ಲಿ ಸಂಚರಿಸಿ, ವಿವಿಧ ರೀತಿಯ ಕೆಲಸಗಳನ್ನು ಮಾಡುವ ಹತ್ತು ವಾಯುಗಳೆಂದರೆ: ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ.

ಪ್ರಾಣವಾಯುವು ಹೃದಯಸ್ಥಾನದಲ್ಲಿದ್ದು, ನಾವು ಅದರ ದೆಸೆಯಿಂದಲೇ ಉಸಿರನ್ನು ಎಳೆದುಕೊಳ್ಳುತ್ತೇವೆ ಅಥವಾ ಬಿಡುತ್ತೇವೆ ಅಥವಾ ತಡೆಹಿಡಿಯುತ್ತೇವೆ. ಅದು ಇಡೀ ದೇಹದಲ್ಲಿ ಸಂಚರಿಸುವುದರಿಂದ ದೇಹವು ಪ್ರಾಣಯುಕ್ತವಾಗಿರುತ್ತದೆ. ನಾವು ಸೇವಿಸಿದ ಅನ್ನ ಪಾನಾದಿಗಳು ಜೀರ್ಣವಾಗುವುದೂ ಪ್ರಾಣವಾಯುವಿನಿಂದಲೇ.

ಜೀರ್ಣವಾದ ಆಹಾರವು ಜಠರದಿಂದ ಕೆಳಮುಖವಾಗಿ ಚಲಿಸುವಂತೆ ಮಾಡಿ, ಕೊನೆಗೆ ಅದನ್ನು ಮಲಮೂತ್ರಗಳ ಮೂಲಕ ಹೊರಹಾಕುವುದು ಅಪಾನ ವಾಯುವಿನ ಕೆಲಸ. ಇದರ ಸ್ಥಾನ ಗುದ.

ನಾವು ನೀಡಿದ ಕಾಲು ಅಥವಾ ಕೈಗಳನ್ನು ಮಡಿಸುವುದು, ಮಡಿಸಿದ ಕೈಕಾಲುಗಳನ್ನು ನೀಡುವುದು ವ್ಯಾನ ವಾಯುವಿನ ದೆಸೆಯಿಂದಾಗಿಯೇ. ಇದು ಎಲ್ಲ ಸಂದುಗಳಲ್ಲಿಯೂ ಇರುತ್ತದೆ.

ಉದಾನ ವಾಯುವು ಕಂಠಸ್ಥಾನದಲ್ಲಿದ್ದು, ನಾವು ಮಾತಾಡುವುದು, ಅಳುವುದು, ನಗುವುದು, ಶೀನುವುದು, ಕೆಮ್ಮುವುದು, ತೇಗುವುದು ಅದರಿಂದಾಗಿಯೇ. ನಾವು ಅನ್ನ ಪಾನಾದಿಗಳನ್ನು ತಿನ್ನುವಾಗ, ಕುಡಿಯುವಾಗಲೂ, ಅದನ್ನು ನುಂಗುವಾಗಲೂ ಅದು ಸಹಾಯಕವಾಗುತ್ತದೆ. ನಾವು ಸ್ವೀಕರಿಸಿದ ಆಹಾರ ಪಾನೀಯಗಳನ್ನು ನಾವು ಜೀರ್ಣಿಸಿಕೊಂಡ ಮೇಲೆ, ಆ ಶಕ್ತಿಯನ್ನು ಎಲ್ಲ ಭಾಗಗಳಿಗೆ ಒಯ್ಯುವ ಕೆಲಸ ಸಮಾನವಾಯುವಿನದು.

ನಮ್ಮ ನಾಳಗಳನ್ನೂ ರೋಮಗಳನ್ನೂ ನಾವು ಇಚ್ಛಾಪೂರ್ವಕವಾಗಿ ಚಲಿಸಲು ಬರುವುದಿಲ್ಲ. ಅವುಗಳಲ್ಲಿ ನಾಗವಾಯು, ಇದ್ದು ಅದು ಎಲ್ಲ ಕಡೆಯಲ್ಲೂ ಹರಿಯುತ್ತಿರುತ್ತಿರುವುದು.

ಕೂರ್ಮವಾಯುವಿನ ದೆಸೆಯಿಂದಾಗಿ ನಾವು ಬಾಯಿ ಮತ್ತು ಕಣ್ಣುಗಳನ್ನು ತೆರೆಯುವುದು ಮುಚ್ಚುವುದು ಮಾಡುತ್ತೇವೆ.

ಕೃಕರ ವಾಯುವಿನಿಂದಾಗಿ ನಮಗೆ ಹಸಿವು ನೀರಡಿಕೆ ಇತ್ಯಾದಿ ಬಯಕೆಗಳಾಗುತ್ತವೆ.

ದೇವದತ್ತ ವಾಯುವಿನಿಂದಾಗಿ, ನಾವು ಮಲಗುವುದು, ಕೂರುವುದು, ಏಳುವುದು, ನಿಲ್ಲುವುದು ತಿರುಗುವುದು ಮುಂತಾದ ಕ್ರಿಯೆಗಳನ್ನು ಮಾಡುತ್ತೇವೆ.

ಧನಂಜನವಾಯುವು ಬ್ರಹ್ಮರಂಧ್ರದಲ್ಲಿದ್ದು, ಅನೇಕ ರೀತಿಯ ಶಬ್ದಗಳನ್ನು ಉತ್ಪತ್ತಿ ಮಾಡುತ್ತಿರುತ್ತದೆ.

**ದಶವಿಧ ಉದಕ :**

೧. ಗುರು ಅಥವಾ ಜಂಗಮರ ಪಾದಕ್ಕೆ ಉದಕವನ್ನೆರೆದರೆ, ಅದು ಪಾದೋದಕ.

೨. ಆ ಪಾದೋದಕವನ್ನೇ ಲಿಂಗಕ್ಕೆರೆಯಬೇಕೆಂಬ ಇಚ್ಛೆ ಉಂಟಾದಲ್ಲಿ, ಅದು ಲಿಂಗೋದಕ.

೩. ಅದನ್ನು ಲಿಂಗದ ಮಜ್ಜನಕ್ಕೆರೆದರೆ, ಮಜ್ಜನೋದಕ.

೪. ಆ ಉದಕವನ್ನು ಐದು ಬೆರಳಿನಿಂದ ಮುಟ್ಟಿದರೆ, ಅದು ಸ್ಪರ್ಶನೋದಕವೆನಿಸಿಕೊಳ್ಳುತ್ತದೆ.

೫. ಅದನ್ನು ಎಚ್ಚರಿಕೆಯಿಂದ (ಸಾವಧಾನದಿಂದ) ಸ್ವೀಕರಿಸಿದರೆ, ಅದು ಅವಧಾನೋದಕವೆನಿಸಿಕೊಳ್ಳುತ್ತದೆ.

೬. ಆ ಸೇವನೆಯಿಂದ ಸಂತೋಷ (ಆಪ್ಯಾಯನ) ಉಂಟಾಗುವುದರಿಂದ, ಅದು ಆಪ್ಯಾಯನೋದಕವೆನಿಸಿಕೊಳ್ಳುತ್ತದೆ.

೭. ಆ ಹಸ್ತದೊಳಗಿದ್ದ ಉದಕವನ್ನು ಲಿಂಗಕ್ಕೆ ಸಲ್ಲಿಸಿದರೆ, ಹಸ್ತೋದಕವಾಗುತ್ತದೆ.

೮. ಬಟ್ಟಲಲ್ಲಿದ್ದ ಉದಕವನ್ನು ಮೂರು ಸಲ ಸೇವಿಸಿದರೆ, ಅದು ಪರಿಣಾಮೋದಕವೆನಿಸಿಕೊಳ್ಳುತ್ತದೆ.

೯. ಈ ಸೇವನೆಯಿಂದ ನಮ್ಮ ಅಶುದ್ಧತೆ ನಿರ್ನಾಮವಾಗುವುದರಿಂದ, ಆ ಉದಕವು ನಿರ್ನಾಮೋದಕವೆನಿಸಿಕೊಳ್ಳುತ್ತದೆ.

೧೦. ನಾವು ಸ್ವೀಕರಿಸಿದ ಉದಕವು ಬ್ರಹ್ಮರಂಧ್ರದಲ್ಲಿರುವ ಅಮೃತಕ್ಕೆ ಸಮ ಎಂದು ಸ್ವೀಕರಿಸಿದರೆ, ಅದು ಸತ್ಯೋದಕವೆನಿಸಿಕೊಳ್ಳುತ್ತದೆ.

ಕೆಲವು ವೇಳೆ ಈ ಪಟ್ಟಿಯಲ್ಲಿರುವ ಉದಕಗಳಲ್ಲಿ ಕೆಲವು ಬದಲಾಗುತ್ತವೆ; ಮತ್ತೆ ಕೆಲವು ವೇಳೆ ಹೆಸರುಗಳು ಅವೇ ಇದ್ದು, ಅವುಗಳ ಸೂಚಕತೆ ಬೇರೆಯಾಗಿರುತ್ತದೆ. ಚೆನ್ನಬಸವಣ್ಣನವರ ಪ್ರಕಾರ, ಮೊದಲನೆಯದು ಕೇವಲ ಪಾದೋದಕವಲ್ಲ, ಅದು ಗುರು ಪಾದೋದಕ, ಲಿಂಗದಲ್ಲಿ ಲೀಯವಾಗಬೇಕೆಂಬ ಉದ್ದೇಶದಿಂದ ಗುರುಪಾದೋದಕವನ್ನು ಲಿಂಗಕ್ಕೆರೆಯಬೇಕೆಂಬ ಇಚ್ಛೆ ಉಂಟಾದಲ್ಲಿ, ಅದು ಲಿಂಗೋದಕವೆನಿಸಿಕೊಳ್ಳುತ್ತದೆ., ಮಜ್ಜನೋದಕಕ್ಕೆ ಜಂಗಮೋದಕವೆಂದೂ ಹೆಸರು. ಹಾಗೆಯೇ ಸ್ಪರ್ಶನೋದಕವು ಆಧಾರ ಚಕ್ರ ಅಥವಾ ಚತುರ್ದಳ ಪದ್ಮ (ಪುಷ್ಪ)ವನ್ನು ಜಾಗೃತಗೊಳಿಸುವುದರಿಂದ, ಅದಕ್ಕೆ ಪುಷ್ಪೋದಕವೆಂದೂ ಹೆಸರು. (೩:೧೪೧೪, ೧೪೧೬)

ಅಂತೂ ಪಾದೋದಕ ಸೇವನೆಯ ಮೂಲಕ ಆಧ್ಯಾತ್ಮಿಕ ಪ್ರಗತಿಯು ಸಾಧ್ಯ ಎಂಬುದನ್ನು ಇದು ತೋರಿಸಿಕೊಡುತ್ತದೆ.

**ದಶವಿಧ ಪೂಜೆ :** ಮಹಾರಾಜನಿಗೆ ಹೇಗೆ ಸಾಧಾರಣ ಜನರು ಗೌರವ ಸಲ್ಲಿಸುತ್ತಾರೋ ಹಾಗೆಯೇ ಲಿಂಗಕ್ಕೂ ಗೌರವಸಲ್ಲಿಸಬೇಕು. ಈ ಗೌರವ ಸಲ್ಲಿಸುವಿಕೆ ಹತ್ತು ಅಂಶಗಳನ್ನು ಒಳಗೊಳ್ಳುತ್ತದೆ. ಅವೆಂದರೆ, ಉದಕ, ಹೂವು, ಭಸ್ಮ, ಗಂಧ, ಅಕ್ಷತೆ, ನೀರಾಜನ, ಸ್ತೋತ್ರ, ಚಾಮರ, ನಾಟ್ಯ ಮತ್ತು ವಸ್ತ್ರ.

**ದಶವಿಧ ವಾಯುಗಳನ್ನು ನಿಲ್ಲಿಸುವುದು :** ಪ್ರಾಣ, ವ್ಯಾನ, ಅಪಾನ, ಉದಾನ ಸಮಾನ, ನಾಗ, ಕೂರ್ಮ, ಕೃಕರ, ದೇವದತ್ತ ಮತ್ತು ಧನಂಜಯ ಎಂಬ ಹತ್ತು ವಾಯುಗಳ ದೆಸೆಯಿಂದಾಗಿ ನಮ್ಮ ಶರೀರ ಮತ್ತು ಅಂತಃಕರಣಗಳಲ್ಲಿ ಒಳ್ಳೆಯ ಮತ್ತು ಕೆಟ್ಟ ವ್ಯಾಪಾರಗಳು ನಡೆಯುತ್ತಿರುತ್ತವೆ. ಐಕ್ಯಸ್ಥಿತಿಯನ್ನು ತಲುಪಬೇಕೆನ್ನುವವನು ಈ ವ್ಯಾಪಾರಗಳನ್ನು ನಿಯಂತ್ರಿಸಿ ('ನಿಲ್ಲಿಸಿ') ಅವುಗಳನ್ನು ಆಧ್ಯಾತ್ಮ ಸಾಧನೆಗೆ ಉಪಯೋಗಿಸಿಕೊಳ್ಳಬೇಕು. ಆಗ ವಾಯುಪ್ರಾಣಿಯಾಗಿದ್ದ ಅವನು ಲಿಂಗಪ್ರಾಣಿಯಾಗುತ್ತಾನೆ. ಹತ್ತು ವಾಯುಗಳನ್ನು ಹತ್ತು ಸ್ಥಾನಗಳಲ್ಲಿ ನಿಲ್ಲಿಸುವುದಕ್ಕೆ ವಿವರ :

· ಪ್ರಾಣವಾಯುವನ್ನು ಪ್ರಾಣಲಿಂಗದಲ್ಲಿಯೂ, ಅಪಾನವಾಯುವನ್ನು ಪ್ರಸಾದಲಿಂಗದಲ್ಲಿಯೂ ನಿಲ್ಲಿಸಬೇಕು. ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯ ಎಂಬ ಚತುರ್ವಿಧ ಪದವಿ ಬೇಕೆಂಬ ಬಯಕೆಯನ್ನು ಅಳಿಸಿಹಾಕಿ, ಕೇವಲ ಲಿಂಗಧ್ಯಾನ ಮಾಡಿದರೆ, ವ್ಯಾನ ವಾಯುವಿನ ದುಷ್ಪರಿಣಾಮಗಳನ್ನು ನಿಯಂತ್ರಿಸಬಹುದು. ಉದ್ದೇಶ ಪೂರ್ವಕವಾಗಿ ನಾವು ಚಂಚಲಚಿತ್ತರಾಗಿ ಅನ್ಯಗಮನ ಮಾಡುವುದು ಉದಾನ ವಾಯುವಿನಿಂದಾಗಿ. ಲಿಂಗಧ್ಯಾನ ಮಾಡಿದರೆ ಸುಚಿತ್ತದಲ್ಲಿ ಆ ವಾಯುವು ನೆಲೆಗೊಳ್ಳುತ್ತದೆ ಹಾಗೂ ಅದರ ದುಷ್ಪರಿಣಾಗಳು ಕಡಿಮೆಯಾಗುತ್ತವೆ. ಧ್ಯಾನದಿಂದುಂಟಾಗುವ ಸ್ವಯಂಜ್ಯೋತಿಯ ಪ್ರಭೆಯಲ್ಲಿ ಸಮಾನ ವಾಯುವಿನಲ್ಲಿ ನೆಲೆಗೊಳಿಸಿ ಅದರ ದುಷ್ಪರಿಣಾಮಗಳನ್ನು ಇಲ್ಲವಾಗಿಸಬಹುದು. (೩:೧೪೨೮)

**ದಶಾವತಾರ :** ವೈಷ್ಣವರ ಪ್ರಕಾರ ವಿಷ್ಣುವೇ (ಹರಿಯೇ) ಸರ್ವೋತ್ತಮ, ಮತ್ತು ಅವನು ಮನುಕುಲವನ್ನು ಉದ್ಧರಿಸಲು ಹತ್ತು ಅವತಾರಗಳನ್ನು ಎತ್ತುತ್ತಾನೆ. ವಚನಕಾರರು ಈ ಎರಡು ಸಿದ್ಧಾಂತಗಳನ್ನು ಖಂಡಿಸಿದ್ದಾರೆ. ಅವರ ಪ್ರಕಾರ ಹರನೇ ಸರ್ವೋತ್ತಮ. ಹರನೆಂದರೆ ಕಾಮ ಸಂಹಾರ, ಕಾಲಸಂಹಾರಿ, ತ್ರಿಪುರ ಸಂಹಾರಿ ಎಂಬ ಅರ್ಥವಿದೆಯೆಂದೂ, ಹರಿಹರನೆಂದರೆ ಹರಿಯನ್ನು ಕೊಂದವನೆಂಬ ಅರ್ಥವಿದೆಯೆಂದೂ ಅವರು ಹೇಳುತ್ತಾರೆ. (೯:೭೮೨). ತಮ್ಮ ಈ ವಾದವನ್ನು ಸಮರ್ಥಿಸಿಕೊಳ್ಳಲು ಓಂ. ಹರಿಹರಂತಂ ಮನುಮಾತಿಂ ದೇವಾಃ "ವಿಶ್ವಸ್ಯಶಾನಂ ವೃಷಭಂ ಮತಿನಾಂ" ಎಂಬ ಯುಜುರ್ವೇದದ ಶ್ಲೋಕವನ್ನು ಉದ್ಧರಿಸುತ್ತಾರೆ.

ಅದೇ ರೀತಿ ವಿಷ್ಣುವು ಹತ್ತು ಅವತಾರಗಳನ್ನು ಎತ್ತುವುದು ಸತ್ಯವಾದರೂ ಅದು ಭೃಗು ಮುನಿಯ ಶಾಪದಿಂದ ಎಂದೂ ಆ ಶಾಪ ನಿವಾರಣೆಗೆ ವಿಷ್ಣುವು ಪ್ರತಿ ಅವತಾರದಲ್ಲಿಯೂ ಹರನನ್ನು ಪೂಜಿಸಿದರೆ ಆಯಾ ಅವತಾರ ಕೊನೆಗೊಳ್ಳುತ್ತದೆಯೆಂದೂ, ವಚನಕಾರರು ಹೇಳುತ್ತಾರೆ. (೯:೭೯೨). ಹೀಗೆ, ಮತ್ಸ್ಯಾವತಾರದಲ್ಲಿ ಲಂಕಾಪುರಿಯಲ್ಲಿಯೂ, ಕೂರ್ಮಾವತಾರದಲ್ಲಿ ಧಾರಾಪುರಿಯಲ್ಲಿಯೂ, ವರಾಹಾವತಾರದಲ್ಲಿ ವೃಂದಗಿರಿಯಲ್ಲಿಯೂ ವಾಮನಾವತಾರದಲ್ಲಿ ವಾರಣಾಸಿಯಲ್ಲಿಯೂ, ರಾಮಾವತಾರದಲ್ಲಿ ಸೇತುವಿನಲ್ಲಿಯೂ, ನರಸಿಂಹಾವತಾರದಲ್ಲಿ ಅಹೋಬಳದಲ್ಲಿಯೂ, ಬೌದ್ಧಾವತಾರದಲ್ಲಿ ಕಾಶಿಯಲ್ಲಿಯೂ, ಪರಶುರಾಮಾವತಾರದಲ್ಲಿ ಕಪಿಲೆಯ ತೀರದಲ್ಲಿಯೂ, ಕೃಷ್ಣಾವತಾರದಲ್ಲಿ ಹಿಮಾಲಯದಲ್ಲಿಯೂ, ಹರಿಯು ಶಿವಲಿಂಗವನ್ನು ಪ್ರತಿಷ್ಠೆ ಮಾಡಿ ಪೂಜೆ ಮಾಡಿದ್ದಾನೆ. ಆದುದರಿಂದ ಹರಿಯು ಭಕ್ತ, ಹರನು ದೇವ. ಕಲ್ಕಿಯ ಅವತಾರ ಇನ್ನೂ ಆಗಿಲ್ಲವಾದುದರಿಂದ ಹರಿ ಎಲ್ಲಿ ಶಿವಲಿಂಗ ಪ್ರತಿಷ್ಠೆ ಮಾಡುತ್ತಾನೆಂಬುದು ಗೊತ್ತಿಲ್ಲ.

**ದಳದುಳಿ ಪ್ರಸಾದ :** ಪ್ರಸಾದ ವಿತರಣೆ ಮಾಡುವಾಗ ಕಳ್ಳತನದಿಂದ ಎರಡು ಮೂರು ಸಾರಿ ಪ್ರಸಾದ ಪಡೆಯುವುದು.

**ದಾಸೋಹ :** ಲಿಂಗಾಂಗ ಸಾಮರಸ್ಯಕ್ಕೆ ಬಹಳ ಆವಶ್ಯಕವಾದ ಒಂದು ಅಂಶವೆಂದರೆ ನಿಸ್ವಾರ್ಥತೆ. ನಿಸ್ವಾರ್ಥತೆಯನ್ನು ನಾವು ಎರಡು ರೀತಿಗಳಲ್ಲಿ ವ್ಯಕ್ತಪಡಿಸಬಹುದು- ಭೃತ್ಯಾಚಾರದಲ್ಲಿ ಮತ್ತು ದಾಸೋಹದಲ್ಲಿ. ಗುರು ಜಂಗಮ ಸೇವೆ, ಇತರ ಶರಣರ ಸೇವೆ, ಸಮಾಜ ಸೇವೆ, ಜಂಭವಿಲ್ಲದೆ ಇರುವುದು, ಇತರರನ್ನು ಗೌರವದಿಂದ ಕಾಣುವುದು ಭೃತ್ಯಾಚಾರದ ಲಕ್ಷಣಗಳಾದರೆ, ಅರ್ಪಣಾ ಮನೋಭಾವದಿಂದ ದಾನ ಮಾಡುವುದು ದಾಸೋಹದ ಲಕ್ಷಣ.

ದಾಸೋಹ ಪದವು 'ದಾಸೋಹಂ' ಪದದ ತದ್ಭವ. 'ದಾಸೋಹಂ' ಎಂಬುದಕ್ಕೆ ದಾಸ+ಅಹಂ= ದಾಸ ನಾನು ಎಂಬ ಅರ್ಥವಿದೆ. ಆದರೆ 'ದಾಸೋಹ' ಎಂಬ ಪದಕ್ಕೆ ದಾನ ಎಂಬರ್ಥವಿದೆ. ಶಿವನ ದಾಸ (ಶರಣ)ನಾದವನು ದಾನ ಮಾಡಬೇಕು ಎಂಬರ್ಥ ಈಗ ದಾಸೋಹ ಎಂಬ ಪದಕ್ಕೆ ಬಂದಿದೆ. ಹೀಗೆ, ದಾಸ ಎಂಬ ಪದವು ಭೃತ್ಯ ಎಂಬ ಪದಕ್ಕೆ ಸಮನಾಗಿದ್ದರೂ, ದಾಸೋಹ, ಭೃತ್ಯಾಚಾರ ಬೇರೆ ಬೇರೆ ಅರ್ಥಗಳುಳ್ಳ ಪದಗಳಾಗುತ್ತವೆ. ಆದರೆ, ದಾಸೋಹ ಮಾಡಬೇಕಾದರೆ ಭಕ್ತನು ಭೃತ್ಯಾಚಾರ ಮನೋಭಾವವುಳ್ಳವನಾಗಿರಬೇಕೇ ಹೊರತು, ಜಂಭವುಳ್ಳವನಾಗಿರಬಾರದು.

ದಾಸೋಹವನ್ನು ಸಾಮಾನ್ಯವಾಗಿ ಎರಡು ರೀತಿಗಳಲ್ಲಿ ಮಾಡಲಾಗುತ್ತದೆ. ಮಠಗಳಲ್ಲಿ ಮಾಡುವ ದಾಸೋಹವು ಸಾಮಾನ್ಯವಾಗಿ ಅನ್ನ ಸಂತರ್ಪಣೆಯ ರೂಪದಲ್ಲಿರುತ್ತದೆ. ಜಂಗಮರೇ ಮಾಡುವ ಈ ರೀತಿಯ ದಾಸೋಹಕ್ಕೆ ಪೂರಕವಾಗಿ ಭಕ್ತಾದಿಗಳು ಧನ ಕನಕಾದಿಗಳನ್ನು ಜಂಗಮರಿಗೆ ನೀಡುತ್ತಾರೆ. ಅಲ್ಲದೆ. ಜಂಗಮರು ಜ್ಞಾನದಾಸೋಹವನ್ನೂ ಮಾಡುತ್ತಾರೆ.

ಭಕ್ತಾದಿಗಳು ಮಾಡುವ ದಾಸೋಹವು ಎರಡು ರೀತಿಯದು. ಅವರು ಜಂಗಮರಿಗೂ, ಇತರ ಶರಣ ಶರಣೆಯರಿಗೂ ಅನ್ನಸಂತರ್ಪಣೆ ಮಾಡಬಹುದು, ಅಥವಾ ಸಾಮಾಜಿಕ ವಿನಿಯೋಗಕ್ಕಾಗಿ ಜಂಗಮರಿಗೆ ಧನಕನಾಕಾದಿಗಳನ್ನು ದಾನ ಮಾಡಬಹುದು. ಹೀಗೆ ಸಾಮಾಜಿಕ ಒಳಿತನ್ನು ಸಾಧಿಸುವ ಮೂಲಕ ತನ್ನ ಆಧ್ಯಾತ್ಮಿಕ ಪ್ರಗತಿಯನ್ನೂ ಸಾಧಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತಿರುವುದು ದಾಸೋಹದ ವೈಶಿಷ್ಟ್ಯ.

ದಾಸೋಹವನ್ನು ಆಚರಿಸಲು ಎರಡು ನಿಯಮಗಳನ್ನು ಪಾಲಿಸುವುದು ಆವಶ್ಯಕ. ಮೊದಲನೆಯದು, ಸತ್ಯ ಶುದ್ಧ ಕಾಯಕದಿಂದ ಸಂಪಾದಿಸಿದುದಷ್ಟನ್ನೇ ದಾಸೋಹಕ್ಕೆ ಉಪಯೋಗಿಸಬೇಕೇ ಹೊರತು, ಉಳಿದ ಮಾರ್ಗಗಳಿಂದ ಸಂಪಾದಿದುದನ್ನಲ್ಲ. ಹಿಂಸೆ, ಕ್ರೌರ್ಯ, ಮೋಸ, ಮುಂತಾದ ಮಾರ್ಗಗಳಿಂದ ಸಂಪಾದಿಸಿದುದು ದಾಸೋಹಕ್ಕೆ ಅರ್ಹವಲ್ಲ. ಅದೇ ರೀತಿ ದಾಸೋಹವು ಭಕ್ತನ ಭೃತ್ಯಭಾವವನ್ನು ಪ್ರತಿಬಿಂಬಿಸಬೇಕೇ ಹೊರತು, ಅವನ ಡಾಂಭಿಕತನ, ವ್ಯವಹಾರಿಕ ಬುದ್ಧಿ, ಅಹಂಕಾರವನ್ನಲ್ಲ.

ದಾಸೋಹವು ಪ್ರಾಪಂಚಿಕ ವಸ್ತುಗಳ ಮೇಲಿನ ನಮ್ಮ ವ್ಯಾಮೋಹವನ್ನು ಕಡಿಮೆ ಮಾಡುತ್ತದೆ. ಅಲ್ಲದೆ, ಪರಶಿವನಿಂದ ಪಡೆದುದನ್ನು ಅವನಿಗೇ ದಾಸೋಹದ ರೂಪದಲ್ಲಿ ಹಿಂತಿರುಗಿಸಿ, ಋಣಮುಕ್ತ ಭಾವವನ್ನು ಪ್ರಕಟಿಸುತ್ತೇವೆ.

**ದಿವ್ಯಜ್ಞಾನ :** ಸಾಮರಸ್ಯ ಸ್ಥಿತಿಯಲ್ಲಿ ನಾನು ಪರಶಿವನೊಂದಿಗೆ ಒಂದಾಗಿದ್ದೇನೆ ಎಂಬ ಅರಿವು: ಜ್ಞಾನ.

**ದೀಕ್ಷಾಗುರು :** ನೋಡಿ : **ಗುರು.**

**ದೀಕ್ಷಾತ್ರಯ :** ಕ್ರಿಯಾದೀಕ್ಷೆ, ಮಂತ್ರದೀಕ್ಷೆ ಮತ್ತು ವೇಧಾದೀಕ್ಷೆ ಎಂಬುದು ಈ ಪದದ ಅರ್ಥವಾದರೂ, ವೇಧಾದೀಕ್ಷೆ ಎಂಬುದಕ್ಕೆ ಮಾತ್ರ ಬೇರೆ ಬೇರೆ ಅರ್ಥಗಳಿರುವಂತೆ ಕಾಣುತ್ತದೆ. ಹಸ್ತ ಮಸ್ತಕ ಸಂಯೋಗದ ಮೂಲಕ ಇಷ್ಟಲಿಂಗ ಪ್ರದಾನ ಮಾಡುವ ಗುರುವಿನ ಕ್ರಿಯೆಯೇ ಕ್ರಿಯಾದೀಕ್ಷೆ; ಆ ಸಮಯದಲ್ಲಿ ಗುರು ದೀಕ್ಷಿತನಿಗೆ ಪ್ರಣವವನ್ನು ಬೋಧಿಸುವುದೇ ಮಂತ್ರದೀಕ್ಷೆ. ಮರೆವನ್ನು ಹೇಗೆ ವೇಧಿಸಬೇಕು ಅಥವಾ ಪರಶಿವನ ಬಗೆಗಿನ ರಹಸ್ಯವನ್ನು ಹೇಗೆ ವೇಧಿಸಬೇಕು ಎಂಬುದನ್ನು ಗುರು ತಿಳಿಸಿಕೊಡುವುದೇ ವೇಧಾದೀಕ್ಷೆ. ಮತ್ತೆ ಕೆಲವು ವಚನಕಾರರ ಪ್ರಕಾರ, ಇವು ಮೂರು ಏಕಕಾಲದಲ್ಲಿ ನಡೆಯುವುದರಿಂದ, ಗುರುವು ಶಿಷ್ಯನ ಮಸ್ತಕಕ್ಕೆ ತನ್ನ ಹಸ್ತವನ್ನು ಸಂಬಂಧಿಸಿ, ಆ ಮೂಲಕ ಅವನಲ್ಲಿರುವ ಚೈತನ್ಯವನ್ನು ವೇಧೆಯ ಮೂಲಕ ಹೊರತಂದು ಇಷ್ಟಲಿಂಗದಲ್ಲಿ ಪ್ರತಿಷ್ಠಾಪಿಸುವುದು ವೇಧಾ ದೀಕ್ಷೆ. ಅನಂತರ ಇಷ್ಟಲಿಂಗ ಪ್ರದಾನ ಮತ್ತು ಮಂತ್ರ ಬೋಧನೆ ಮಾಡುವುದು ಕ್ರಿಯಾದೀಕ್ಷೆ ಮತ್ತು ಮಂತ್ರದೀಕ್ಷೆ. ಅಂತೂ ಈ ದೀಕ್ಷೆ ಒಂದು ಸಾಂಕೇತಿಕ ಕ್ರಿಯೆಯಾಗಿದ್ದು, ಕ್ರಿಯಾದೀಕ್ಷೆಯು ಸ್ಥೂಲತನುವಿನ ಶುದ್ಧೀಕರಣವನ್ನೂ, ಮಂತ್ರದೀಕ್ಷೆಯು ಮನಸ್ಸು, ಬುದ್ಧಿ, ಮುಂತಾದ ಅಂತಃಕರಣಗಳ ಶುದ್ಧೀಕರಣವನ್ನೂ ವೇಧಾದೀಕ್ಷೆಯು ಆತ್ಮದ ಶುದ್ಧೀಕರಣವನ್ನೂ ಸೂಚಿಸುತ್ತದೆ.

ದೀಕ್ಷೆ : ದೀಕ್ಷೆಯೆಂದರೆ ಧಾರ್ಮಿಕ ವಿಧಿಗಳ ಮೂಲಕ ಕೆಲವು ಕ್ರಿಯೆಗಳನ್ನು ಆಚರಿಸಲು ನೀಡುವ ಅನುಮತಿ ಎಂಬ ಸಾಮಾನ್ಯ ಅರ್ಥವಿದ್ದರೂ, ವಚನ ಮತ್ತು ಆಗಮಗಳ ಪ್ರಕಾರ, ದೀಕ್ಷೆಯೆಂದರೆ ಲಿಂಗ ದೀಕ್ಷೆ. ಲಿಂಗದೀಕ್ಷೆ ಎಂಬ ಸಂಕೀರ್ಣ ಧಾರ್ಮಿಕ ಕ್ರಿಯೆಯು ಅನೇಕ ದೀಕ್ಷೆಗಳನ್ನು (ಉದಾಹರಣೆಗೆ ಲಿಂಗದೀಕ್ಷೆಯು ಮಂತ್ರದೀಕ್ಷೆಯನ್ನು) ಒಳಗೊಳ್ಳುತ್ತದೆ. ವೀರಶೈವರಿಗೆ ಲಿಂಗದೀಕ್ಷೆಯನ್ನು ಗರ್ಭಧಾರಣೆಯಾದ ಎಂಟು ತಿಂಗಳಿನಲ್ಲೆ ಮೊದಲು ಮಾಡಿ, ಜನನದ ನಂತರ ಮತ್ತೆ ಮಾಡುತ್ತಾರೆ. ವೀರಶೈವೇತರರು ಯಾವಾಗ ಬೇಕಾದರೂ ಲಿಂಗದೀಕ್ಷೆ ಪಡೆಯಬಹುದು. ಆದರೆ, ಲಿಂಗದೀಕ್ಷೆಯನ್ನು ಯಾವಾಗಲೂ ವೀರಶೈವ ಗುರುವೇ ಕೊಡಬೇಕು.

ಸಾಂಸಾರಿಕ ತಾಪತ್ರಯಗಳಿಂದ ಪೀಡಿತರಾಗಿ ಧೃತಿಗೆಟ್ಟವರು ಅವುಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿ ಆಧ್ಯಾತ್ಮಿಕ ಜೀವನದ ಕಡೆಗೆ ಒಲವು ತೋರಿಸುತ್ತಾರೆ. ಆದರೆ, ಅವರಿಗೆ ಯಾವ ರೀತಿಯ ಆಧ್ಯಾತ್ಮಿಕ ಜೀವನ ನಡೆಸಿದರೆ ತಾಪತ್ರಯಗಳಿಂದಲೂ, ಕರ್ಮದಿಂದಲೂ ಬಿಡುಗಡೆ ಪಡೆಯಬಹುದೆಂಬುದು ಗೊತ್ತಿರುವುದಿಲ್ಲ. ಆಗ ಅವರು ಗುರುವಿನ ಬಳಿ ಮಾರ್ಗದರ್ಶನಕ್ಕೆ ಬರುತ್ತಾರೆ. ಗುರು ಅವರಿಗೆ ದೀಕ್ಷೆಕೊಟ್ಟು ಮಾರ್ಗದರ್ಶನ ಪ್ರಾರಂಭಿಸುತ್ತಾನೆ.

"ದೀಕ್ಷೆ" ಎಂಬುದಕ್ಕೆ ಸಂಸ್ಕೃತ ವ್ಯುತ್ಪತ್ತಿ ಶಾಸ್ತ್ರವು ಈ ರೀತಿ ಅರ್ಥ ಕೊಡುತ್ತದೆ: ಜ್ಞಾನವನ್ನು ಕೊಡುವ ("ದೀಯತೆ") ಮತ್ತು ಪಾಪಸಂಚಯವನ್ನು ಕೆಡಿಸುವ ("ಕ್ಷೀಯತೆ") ಧಾರ್ಮಿಕ ಕ್ರಿಯೆಯೇ ದೀಕ್ಷಾ.

ದೀಕ್ಷೆಯು ಎರಡು ಪ್ರಕಾರವಾಗಿದೆ ಪರಶಿವನು ತೀವ್ರಗತಿಯಲ್ಲಿ ಅನುಗ್ರಹ (ಶಕ್ತಿನಿಪಾತ) ಮಾಡುವ ದೀಕ್ಷೆಗೆ ನಿರಾಧಾರ ದೀಕ್ಷೆಯೆಂದು ಹೆಸರು, ಇದು ಕೆಲವು ಜನರಿಗೆ ಮಾತ್ರ ಕೊಡಬಹುದಾದ ದೀಕ್ಷೆ. ಎಲ್ಲದಕ್ಕೂ ಗುರುವನ್ನೆ ಆಶ್ರಯಿಸಿ, ಮಂದಗತಿಯಲ್ಲಿ ಶಕ್ತಿನಿಪಾತವನ್ನು ಸಾಧಿಸುವವರಿಗೆ ಕೊಡುವ ದೀಕ್ಷೆ ಸಾಧಾರ ದೀಕ್ಷೆ. ಈ ದೀಕ್ಷೆಯನ್ನು ಎಲ್ಲರಿಗೂ ಕೊಡಬಹುದು.

ಸಾಧಾರ ದೀಕ್ಷೆಯು ಸಬೀಜ ದೀಕ್ಷೆ, ನಿರ್ಬೀಜ ದೀಕ್ಷೆ ಮತ್ತು ಚಿನ್ಮಯ ದೀಕ್ಷೆ ಎಂದು ಮೂರು ಪ್ರಕಾರವಾಗಿದೆ. ಮುಕ್ತಿಯನ್ನು ಕರ್ಮಗಳ ಮೂಲಕ ಸಾಧಿಸುವವರಿಗೆ ಸಬೀಜ ದೀಕ್ಷೆ, ಭಕ್ತಿಯ ಮೂಲಕ ಸಾಧಿಸುವವರೆ ನಿರ್ಬೀಜ ದೀಕ್ಷೆ ಮತ್ತು ಜ್ಞಾನದ ಮೂಲಕ ಸಾಧಿಸುವವರಿಗೆ ಚಿನ್ಮಯ ದೀಕ್ಷೆಯನ್ನು ಕೊಡಲಾಗುವುದು.

ನಿರ್ಬೀಜ ದೀಕ್ಷೆಯಲ್ಲಿ ಎರಡು ವಿಧಗಳಿವೆ : (೧) ಅನೇಕ ಜನ್ಮಾಂತರಗಳಲ್ಲಿ ಕೂಡಿಟ್ಟ ಕರ್ಮಗಳನ್ನೂ, ಈಗ ಫಲ ನೀಡುತ್ತಿರುವ ಕರ್ಮಗಳನ್ನೂ ಇನ್ನು ಮುಂದೆ ಫಲ ನೀಡಬಹುದಾದ ಕರ್ಮಗಳನ್ನೂ, ಈ ಶರೀರವಿದ್ದಾಗಲೇ ಸುಟ್ಟು

ಸದ್ಯೋನ್ಮುಕ್ತಿಯನ್ನು ಪಡೆಯುವವರಿಗೆ ಕೊಡುವ ದೀಕ್ಷೆಗೆ ಸದ್ಯೋನಿರ್ವಾಣ ದೀಕ್ಷೆ ಎಂದು ಹೆಸರು. (೨) ಎಲ್ಲ ಮೂರು ರೀತಿಯ ಕರ್ಮಗಳನ್ನು ಸುಟ್ಟು ಭವಾಂತರದ ಕೊನೆಯಲ್ಲಿ ಮುಕ್ತಿ ಪಡೆಯುವವರಿಗೆ ಕೊಡುವ ದೀಕ್ಷೆ ಚಿರಂನಿರ್ವಾಣ ದೀಕ್ಷೆ ಎನಿಸಿಕೊಳ್ಳುವುದು.

ಚಿರಂನಿರ್ವಾಣ ದೀಕ್ಷೆಯು ಏಳು ಪ್ರಕಾರವಾಗಿದೆ. (೧) ಗುರುವಿನ ಆಜ್ಞೆಯನ್ನು ಪಾಲಿಸುವಂತೆ ವಚನಬದ್ಧನನ್ನಾಗಿ ಮಾಡುವ ದೀಕ್ಷೆ ಆಜ್ಞಾ ದೀಕ್ಷೆ. (೨) ಸರ್ವ ಪುರಾತನರು ಪಾಲಿಸಿದಂತಹ ಸಮಯಾಚಾರವನ್ನು ಪಾಲಿಸುವಂತೆ ಕೈಕೊಳ್ಳುವ ದೀಕ್ಷೆ ಉಪಮಾ ದೀಕ್ಷೆ. ೩) ಶಿಷ್ಯನನ್ನು ಸ್ವಸ್ತಿಕವೆಂಬ ಮಂಡಲದ ಮೇಲೆ ಕುಳ್ಳಿರಿಸಿ, ಅವನ ಭೌತಿಕ ದೇಹವನ್ನು ಮಂತ್ರ ಪಿಂಡವನ್ನಾಗಿ ಪರಿವರ್ತಿಸುವಂಥ ಮಂತ್ರಗಳನ್ನು ಒಳಗೊಳ್ಳುವ ದೀಕ್ಷೆಯೇ ಸ್ವಸ್ತಿಕಾರೋಹಣ. ೪) ಆಗಮೋಕ್ತ ಹದಿನಾರು ಸ್ಥಾನಗಳಲ್ಲಿ ವಿಭೂತಿ ಪಟ್ಟವನ್ನು ಧರಿಸುವುದು ವಿಭೂತಿ ಪಟ್ಟ. ೫) ಪಂಚಕಲಶಗಳಲ್ಲಿ ತೀರ್ಥೋದಕವನ್ನು ತುಂಬಿ, ಅವುಗಳಲ್ಲಿ ಲಿಂಗ ಪ್ರತಿಷ್ಠಾಪಿಸಿ, ಆ ತೀರ್ಥದಿಂದ ಶಿಷ್ಯನಿಗೆ ಸ್ನಾನ ಮಾಡಿಸುವುದು ಕಲಶಾಭಿಷೇಕ, ೬) ಶಿಷ್ಯನಿಗೆ ಕೊಡಬೇಕಾದ ಲಿಂಗವನ್ನು ಅವನಿಗೆ ತೋರಿಸುವುದು ಲಿಂಗಾಯತ. ಮತ್ತು ೭) ಆ ಲಿಂಗವನ್ನು ಅವನಿಗೆ ಕೊಟ್ಟು, ಅದನ್ನು ಅವನು ತಲೆ, ಕೊರಳು, ಇತ್ಯಾದಿ ಯಾವದಾದರೊಂದು ಸ್ಥಾನದಲ್ಲಿ ಧರಿಸಿದರೆ ಅದು ಲಿಂಗಸ್ವಾಯತ.

ಸ್ವಾಯತ ದೀಕ್ಷೆ ಸಹಾ ಮೂರು ಪ್ರಕಾರವಾಗಿದೆ : ೧) ಶಿಷ್ಯನ ಮಸ್ತಕದಲ್ಲಿರುವ ಶಿವತತ್ವವನ್ನು ಗುರುವು ಧ್ಯಾನಿಸಿ, ವೇಧಿಸಿ, ಅದನ್ನು ಸ್ವಾಯತವಾದ ಇಷ್ಟಲಿಂಗದಲ್ಲಿ ಪ್ರತಿಷ್ಠಾಪಿಸಿದರೆ, ಆ ದೀಕ್ಷೆ ವೇಧಾದೀಕ್ಷೆ ಎನಿಸಿಕೊಳ್ಳುವುದು, ೨) ಶಿಷ್ಯನು ಲಿಂಗಪೂಜೆಯ ಸಮಯದಲ್ಲಿಯೂ, ಉಳಿದ ಸಮಯದಲ್ಲಿಯೂ ಓಂ ನಮಃ ಶಿವಾಯ ಎಂಬ ಮಂತ್ರವನ್ನು ಉಚ್ಚರಿಸಬೇಕೆಂದು ಹೇಳಿಕೊಡುವುದೇ ಮಂತ್ರ ದೀಕ್ಷೆ. ೩) ಇಷ್ಟಲಿಂಗಕ್ಕೆ ಯಾವ ರೀತಿಯಲ್ಲಿ ಪೂಜೆ ಮಾಡಬೇಕೆಂಬ ಉಪದೇಶ ನೀಡುವುದೇ ಕ್ರಿಯಾ ದೀಕ್ಷೆ. (ನೋಡಿ ೯:೧೩೭೬-೧೩೮೦)

**ದುರಾಚಾರ :** ಶೀಲ. ವ್ರತ, ನೇಮ, ಸದಾಚಾರಗಳನ್ನು ಪಟ್ಟಿ ಮಾಡಿರುವಂತೆ, ವಚನಕಾರರು ದುರಾಚಾರಗಳ ಪಟ್ಟಿಯನ್ನೂ ಮಾಡಿದ್ದಾರೆ.

೧. ಸರ್ವಾಚಾರ ಸಂಪನ್ನ ಬಾಹ್ಯರಾದ ಕಿರಾತರಂತೆ, ಭಂಗಿ, ಗಾಂಜಾ, ಗುಡಾಕು, ತಂಬಾಕದ ಚಿಲುಮೆ, ಕಡ್ಡಿಪುಡಿ, ನಾಸಿಪುಡಿ (ನಸ್ಯ)ಗಳನ್ನು ಸೇವಿಸುವುದು, ತಮ್ಮನ್ನು ತಾವರಿಯದೆ, ಪಿಶಾಚಿ ಮಾನವರಂತೆ, ಹರಿಸುರ ಬ್ರಹ್ಮಾದಿಗಳಂತೆ ಹೊಡೆದಾಡಿ ಬಿದ್ದು ಹೊರಳಾಡುವುದು, ವನಿತಾದಿ ಭೋಗದ ಆಸೆಗಳಿಗೆ ವಶರಾಗಿ ಜಗಳಾಡುವುದೊಂದು ದುರಾಚಾರ.

೨. ರಾಜರಿಗೆ ರೊಕ್ಕ ಕೊಡುವುದು, ಯಂತ್ರ ಮಂತ್ರ ತಂತ್ರಗಳಲ್ಲಿ ನಿರತರಾಗಿರುವುದು, ಹಮ್ಮಿಗಾಗಿ ಹೊಡೆದಾಡುವುದು, ನಡೆನುಡಿ ಹೀನರಾಗಿ, ಮಲತ್ರಯಕ್ಕಧೀನರಾಗಿ ಸುಳ್ಳು ಹೇಳುವುದು, ಮತ್ತೊಂದು ದುರಾಚಾರ.

೩. ರಾಕ್ಷಸರಂತೆ ದುರ್ವಿದ್ಯೆಗಳನ್ನು ಕಲಿತುಕೊಂಡು ಆಯುಧಗಳನ್ನು ಹಿಡಿದು, ಹೊಲಗಳಲ್ಲಿ ಪೈರನ್ನೂ ಹೊರಗೆ ಬಣವೆಗಳನ್ನೂ ಸುಟ್ಟು, ಜೀವರಾಶಿಗಳನ್ನು ಹಿಂಸಿಸಿ, ಊರು ಕೇರಿಗಳಲ್ಲಿ ಸುಲಿಗೆ ಮಾಡಿ, ಹಾದಿಯಲ್ಲಿ ಅಡ್ಡಹಾಕಿ ದೋಚಿ, ಮತ್ತೆ ತಾವು ಭಕ್ತರು ಮಹೇಶ್ವರರು ಎಂದು ಹೇಳುವುದು ಮತ್ತೊಂದು ದುರಾಚಾರ.

೪. ವಿಭೂತಿ, ರುದ್ರಾಕ್ಷಿ ಮುಂತಾದ ಲಿಂಗ ಲಾಂಛನಧಾರಿಗಳಾಗಿ, ಜಡೆ ಗಡ್ಡಧಾರಿಗಳಾಗಿ, ಕೌಪೀನ ಕಾಷಾಯಗಳನ್ನು ಹೊದ್ದು, ಮೋಕ್ಷವೆಂದರೇನೆಂಬುದನ್ನು ಅರಿಯದೇ, ಆಂತರಿಕ ಹಾಗೂ ಬಾಹ್ಯ ಆಚಾರಗಳನ್ನು ಮರೆತು, ಕಾಲ, ಕಾಮ, ಕರ್ಮ, ಪಾಪ, ರೋಗ ರುಜಿನ, ಅಜ್ಞಾನ ಅನಾಚಾರಕ್ಕೆ ಬಲಿಯಾಗಿರುವುದು ಮತ್ತೊಂದು ದುರುಚಾರ. (೧೪:೨೪೫೩)

**ದುರ್ವಾಸನೆ :** ನಾವು ಮಾಡುವ ಅನೇಕ ವಿಶೇಷ ರೀತಿಯ ಕೆಲಸಗಳು (ಉದಾಹರಣೆಗೆ ಸಂಗೀತವನ್ನು ಕಲಿಯುವುದು, ದಾನಧರ್ಮ ಮಾಡುವುದು) ನಮ್ಮ ಹಿಂದಿನ ಜನ್ಮದ ಸಂಸ್ಕಾರಗಳ ಫಲವಾಗಿ. ಈ ಸಂಸ್ಕಾರಗಳಿಗೆ ಮತ್ತೊಂದು ಹೆಸರು ವಾಸನೆ. ಕೆಟ್ಟ ಕೆಲಸಗಳನ್ನು ಮಾಡುವಂತೆ ಪ್ರೇರೇಪಿಸುವ ವಾಸನೆಗಳೇ ದುರ್ವಾಸನೆಗಳು. (೫:೯೬)

**ದೃಢವ್ರತ ದೀಕ್ಷೆ :** ಅನ್ಯದೈವಗಳನ್ನು ಅರ್ಚಿಸುವುದಿಲ್ಲ, ಅನ್ಯಶಾಸ್ತ್ರವನ್ನು ನಂಬುವುದಿಲ್ಲ, ಭವಿಗಳ ಮನೆಯಲ್ಲಿ ಭುಂಜಿಸುವುದಿಲ್ಲ, ಮುಂತಾದ ವ್ರತಗಳು, ಲಿಂಗಪೂಜೆ, ಪಾದೋದಕಗಳಿಲ್ಲದೆ ಏನನ್ನೂ ಸ್ವೀಕರಿಸುವುದಿಲ್ಲ ಎಂಬ ವ್ರತ, ಪ್ರಸಾದವನ್ನಲ್ಲದೇ ಮತ್ತೇನನ್ನೂ ಭುಂಜಿಸುವುದಿಲ್ಲವೆಂಬ ವ್ರತ, ಮುಂತಾದುವುಗಳನ್ನು ದೃಢಚಿತ್ತದಿಂದ ಪಾಲಿಸುವುದೇ ದೃಢವ್ರತದೀಕ್ಷೆ. (೧೦:೭೦೦)

**ದೃಷ್ಟ :** ವಚನಕಾರರು ಇದಕ್ಕೆ ಮೂರು ಅರ್ಥಗಳನ್ನು ಕೊಡುತ್ತಾರೆ. ಕಣ್ಣಿಗೆ ಕಾಣುವುದೆಲ್ಲ ದೃಷ್ಟ. ಈ ಅರ್ಥದಲ್ಲಿ ಭೌತವಸ್ತುಗಳೆಲ್ಲ ದೃಷ್ಟವೇ. ಆದರೆ ಅಷ್ಟಾವರಣ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಇಷ್ಟಲಿಂಗ ಮಾತ್ರ ದೃಷ್ಟ. ಈ ಕಾರಣದಿಂದಲೇ ಕೆಲವು ವೇಳೆ ಇಷ್ಟಲಿಂಗವು ದೃಷ್ಟಲಿಂಗವೆಂದು ವಚನಕಾರರು ಹೇಳುವುದು.

ಮತ್ತೊಂದು ವಿಶಿಷ್ಟ ಅರ್ಥದಲ್ಲಿ ಯಾವುದು ಅಂತಶ್ಚಕ್ಷುವಿನ ನೋಟಕ್ಕೆ ಸಿಕ್ಕುವುದೋ ಅದು ದೃಷ್ಟ. ಈ ಅರ್ಥದಲ್ಲಿ ಚಿತ್ ಅಥವಾ ನಿಃಕಲವೇ ದೃಷ್ಟ.

ಮೂರನೆಯ ಅರ್ಥದಲ್ಲಿ ದೃಷ್ಟ ಎಂದರೆ ನೋಡುವವನು. (೭:೬೨೪)

**ದೃಷ್ಟನಾಮ :** ದೃಷ್ಟವೆಂದರೆ ರೂಪು. ದೃಷ್ಟನಾಮವೆಂದರೆ ನಾಮರೂಪು. (ನೋಡಿ : **ನಾಮರೂಪು**) (೧:೧೫)

**ದೃಷ್ಟ ಪದಾರ್ಥವ ಇಷ್ಟಲಿಂಗ ಸಹವಾಗಿಸುವುದು :** ಇಷ್ಟಲಿಂಗಕ್ಕೆ, ರೂಪರಸಾದಿ ಗುಣಗಳ್ನುಳ್ಳ ಹಾಗೂ ಕಣ್ಣಿಗೆ ಕಾಣುವ ದೃಷ್ಟ ಪದಾರ್ಥಗಳನ್ನು ಅರ್ಪಿಸುವುದು.

**ದೃಷ್ಟಲಿಂಗ :** ೧. ಕಣ್ಣಿಗೆ ಕಾಣುವ ಲಿಂಗ, ಇಷ್ಟಲಿಂಗ.

೨. ಜಂಗಮ, ಐಕ್ಯಸ್ಥಲವನ್ನು ಮುಟ್ಟಿ, ತಾನೆಂಬ ಭಾವವನ್ನು ಕಳೆದುಕೊಂಡು, ಪರಶಿವನಲ್ಲಿ ಒಂದಾಗಿ, ತಾನೂ ಪರಶಿವನೆಂಬ ಅರಿವು ಪಡೆದವನು. ಅಂಥವನು ಲಿಂಗಸಮಾನನಾದುದರಿಂದ, ಅವನು ದೃಷ್ಟಲಿಂಗ (೩:೧೦೩೮)

**ದೃಷ್ಟಾರ್ಪಿತ :** ದೃಷ್ಟಿಗೋಚರವಾದ ವಸ್ತುಗಳನ್ನು ಅರ್ಪಿಸುವುದು (೮:೨೯೮)

**ದೇವದೇಹಿಕ ಭಕ್ತ :** ದೇವನನ್ನೇ ಅಥವಾ ದೇವನ ದೇಹವನ್ನೇ ತನ್ನ ದೇಹವನ್ನಾಗಿ ಮಾಡಿಕೊಂಡ ಭಕ್ತ. ಅನೇಕ ಶರಣರ ಪ್ರಕಾರ, ಇಡೀ ಪ್ರಪಂಚವೇ ಪರಶಿವನ ತನು. ಅದು ಅಷ್ಟಾಂಶಗಳಿಂದ ಕೂಡಿರುವುದರಿಂದ, ಅದಕ್ಕೆ ಅಷ್ಟತನುವೆಂದು ಹೆಸರು. ಅನುಭಾವಿಯು ತನ್ನ ವೈಯುಕ್ತಿಕತೆಯನ್ನು ಕಳೆದುಕೊಂಡನಂತರ, ತಾನೇ ಪರಶಿವ ಅಥವಾ ಪರಶಿವನ ಅವಿಭಾಜ್ಯ ಅಂಗ ಎಂದೂ ತನ್ನ ದೇಹವನ್ನು ಪರಶಿವನು ಆಕ್ರಮಿಸಿಕೊಂಡಿದ್ದಾನೆಂದೂ ತಿಳಿದುಕೊಳ್ಳುತ್ತಾನೆ. ಅಥವಾ ಪರಶಿವನ ದೇಹಕ್ಕೆ ಹೇಗೆ ಸೀಮೆಯಿಲ್ಲವೋ ಹಾಗೆಯೇ ತನಗೂ ಸೀಮೆಯಿಲ್ಲವೆಂದು ತಿಳಿಯುತ್ತಾನೆ. ಈ ಅರ್ಥದಲ್ಲಿ ದೇಹವೇ ದೇಗುಲ, ಕಾಯವೇ ಕೈಲಾಸ.

**ದೇವಲೋಕ :** ದೇವ ದೇವತೆಗಳೂ ಮಾನವರ ಪಿತೃಗಳೂ ಇರುವ ಲೋಕ; 'ಪಿತೃಲೋಕ' ಮತ್ತು 'ಸ್ವರ್ಗ' ಪರ್ಯಾಯ ಪದಗಳು.

**ದೇವಶರೀರ :** ಮನುಷ್ಯ ಸತ್ಕರ್ಮ ಮತ್ತು ದುಷ್ಕರ್ಮಗಳೆರಡನ್ನೂ ಮಾಡಿ ಸತ್ತಾಗ, ಅವನು ಅವುಗಳಿಗೆ ತಕ್ಕ ಪ್ರತಿಫಲಗಳನ್ನು ಅನುಭವಿಸಲು ಒಂದು ಶರೀರ ಬೇಕಾಗುತ್ತದೆ. ಇದು ಸ್ಥೂಲ ಶರೀರವಲ್ಲ. ಹೆಚ್ಚಾಗಿ ಸತ್ಕರ್ಮಗಳನ್ನೇ ಅವನು ಮಾಡಿದರೆ ಅವನಿಗೆ ಸಿಕ್ಕುವ ಶರೀರ ದೇವಶರೀರ. ಅದನ್ನು ದೇವದೂತರು ದೇವಲೋಕಕ್ಕೆ ಒಯ್ದು, ಅದು ಸವೆಯುವವರೆಗೂ ಅದಕ್ಕೆ ಸುಖಾನುಭವ ಕೊಡುತ್ತಾರೆ. (ನೋಡಿ : **ಅನುಭವ ಶರೀರ**, ೧೩:೨೪೦೦). ಅದರಲ್ಲಿ ಪಾಪವಿದ್ದರೆ ಅದನ್ನು ಯಮದೂತರ ವಶಕ್ಕೆ ಒಪ್ಪಿಸಲಾಗುವುದು. ಪಾಪಕ್ಕೆ ತಕ್ಕ ಶಿಕ್ಷೆ ಮುಗಿದ ನಂತರ ಅದನ್ನು ಮರ್ತ್ಯಲೋಕಕ್ಕೆ ಹಿಂದಿರುಗಿಸಲಾಗುವುದು.

**ದೇಶಾಂತರಿ :** ಸ್ವಜನರನ್ನೂ ಸ್ವಸ್ಥಳವನ್ನೂ, ಎಲ್ಲ ರೀತಿಯ ವ್ಯವಹಾರಗಳನ್ನೂ ತೊರೆದು, ಊರೂರು ತಿರುಗುವ ಸಂನ್ಯಾಸಿ; ಆದರೆ ಅವನು ಜನರ ಆಗುಹೋಗುಗಳ ಬಗೆಗೆ ಕಾಳಜಿ ತೋರಿಸಬೇಕೇ ಹೊರತು, ತನ್ನ ಸ್ವಾರ್ಥಸಾಧನೆಗಳ ಬಗೆಗಲ್ಲ. (೮:೬೩೭)

**ದೇಹ ಎರಡು :** ಪ್ರಕೃತಿ ಮತ್ತು ಪುರುಷ, ಅಂಗ ಮತ್ತು ಲಿಂಗ. (೪:೧೫೨೨)

**ದೇಹದ ಕಲೆ :** ಪರಶಿವನ ಶಕ್ತಿಯು ಮಾನವನಲ್ಲಿ ಎರಡು ವಿರುದ್ಧ ದಿಕ್ಕುಗಳಲ್ಲಿ ವರ್ತಿಸಬಲ್ಲುದು. ಅದು ಲಿಂಗಾಂಗ ಸಾಮರಸ್ಯಕ್ಕೆ ಸಹಾಯಕವಾಗುವಂತೆ ವರ್ತಿಸಿದರೆ ಭಕ್ತಿಶಕ್ತಿಯೆಂದೂ, ಮತ್ತೂ ಬಂಧನದ ಕಡೆಗೇ ಹೋಗುವಂತೆ ಪ್ರೇರೇಪಿಸಿದರೆ ಕಲಾಶಕ್ತಿಯೆಂದೂ ಹೆಸರು ಪಡೆಯುತ್ತದೆ. ಯಾವ ದಿಕ್ಕಿನಲ್ಲಿ ಶಕ್ತಿಯನ್ನು ಕೊಂಡೊಯ್ಯಬೇಕೆಂಬುದನ್ನು ಸಾಧಕನು ನಿರ್ಧರಿಸಬೇಕು. "ದೇಹದ ಕಲೆ (ಕಲಾಶಕ್ತಿ)ಯಿರುವ ತನಕ ಇಷ್ಟಲಿಂಗ ಸಂಬಂಧ" ಕೇವಲ ಔಪಚಾರಿಕವೇ ಹೊರತು, ಪರಿಣಾಮಕಾರಿಯಲ್ಲ.

**ದೇಹ ನಾಲ್ಕು :** ಚಿತ್ತ, ಬುದ್ಧಿ, ಮನಸ್ಸು, ಅಹಂಕಾರ. (೪:೧೫೨೨)

**ದೇಹಭಾವಶೂನ್ಯ ಶರಣಲಿಂಗ :** ಧ್ಯಾನದಲ್ಲಿ ತಲ್ಲೀನನಾದವನಿಗೆ ತನಗೊಂದು ದೇಹವಿದೆ ಎಂಬ ಭಾವ ಇಲ್ಲವಾಗುತ್ತದೆ. ಅಷ್ಟೇ ಅಲ್ಲ ಅನುಭಾವ ಮುಗಿದ ಮೇಲೂ ಸರ್ವವೂ ಶಿವಮಯವೆಂದು ತಿಳಿದ ಅವನಿಗೆ ದೇಹಭಾವ ಶೂನ್ಯವಾಗುತ್ತದೆ. ಅಂಥ ಶರಣನೇ ದೇಹಭಾವ ಶೂನ್ಯ ಶರಣಲಿಂಗ. (೧೨:೪೩೩)

**ದೇಹಮೂರು :** ಭೋಗಾಂಗ, ತ್ಯಾಗಾಂಗ ಮತ್ತು ಯೋಗಾಂಗ. (೪:೧೫೨೨)

**ದೇಹಾರ :** ಇಷ್ಟಲಿಂಗ ಪೂಜೆ.

**ದ್ರವ್ಯ :** ಇದಕ್ಕೆ ವಚನಗಳಲ್ಲಿ ನಾಲ್ಕು ಅರ್ಥಗಳಿವೆ.

ಅ. ರೂಪ, ರಸ, ಗಂಧ ಮುಂತಾದ ಗುಣಗಳಿರುವ ಯಾವುದೇ ವಸ್ತು.

ಆ. ಲಿಂಗ ಜಂಗಮಕ್ಕರ್ಪಿತವಾದ ಯಾವುದೇ ವಸ್ತು.

ಇ. ಹಣ, ಒಡವೆ.

ಈ. ಔಷಧಿಯಲ್ಲಿ ವೈದ್ಯರು ಬಳಸುವ ಸಾಮಗ್ರಿಗಳು. (೯:೧೨೬)

**ದ್ವಾತ್ರಿಂಶದುಪಚಾರ (ಮೂವತ್ತೆರಡು ಉಪಚಾರ)ಗಳು :** ಶಾಸ್ತ್ರೋಕ್ತ ಶಿವಲಿಂಗ ಪೂಜೆಯು ಮೂವತ್ತೆರಡು ಉಪಚಾರಗಳನ್ನು ಒಳಗೊಳ್ಳುತ್ತದೆ. ಆವಾಹನ (ಆಮಂತ್ರಿಸುವುದು), ಆಸನ (ಆಸನದಲ್ಲಿ ಕುಳ್ಳಿರಿಸುವುದು), ಪಾದ್ಯ, ಅರ್ಘ್ಯ, ಆಚಮನೀಯ, ಸ್ನಾನ, ವಸ್ತ್ರ, ಯಜ್ಞಸೂತ್ರ, ಭೂಷಣ, ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ, ಮುಖವಸನ, ನೀರಾಜನ, ದರ್ಪಣ, ಫಲಾರ್ಪಣ, ತಾಂಬೂಲ, ಪ್ರದಕ್ಷಿಣ, ನಮಸ್ಕಾರ, ಸ್ತೋತ್ರ, ಪುರಾಣ ಪಠಣ, ಛತ್ರ, ಚಾಮರ, ವ್ಯಜನ, ಶಯ್ಯೆ, ಸಂಗೀತ, ನೃತ್ಯ, ವಾದ್ಯ, ಆತ್ಮಾರೋಪಣ (೯:೧೪೪೩)

**ದ್ವಾದಶ ಕಮಲ :** ಹೃದಯಸ್ಥಾನದಲ್ಲಿರುವ ಅನಾಹತ ಪದ್ಮಕ್ಕೆ ಹನ್ನೆರಡು ದಳಗಳಿರುವುದರಿಂದ ಅದಕ್ಕೆ ದ್ವಾದಶ ಕಮಲವೆಂದೂ ಹೆಸರು. (ನೋಡಿ : **ಚಕ್ರಗಳು**)

**ದ್ವಾದಶ ಚಕ್ರಗಳು :** ಕೆಲವರು ಚಕ್ರಗಳು ಆರೆಂದೂ, ಕೆಲವರು ಚಕ್ರಗಳು ಏಳೆಂದೂ ಕೆಲವರು ಒಂಬತ್ತೆಂದೂ ಹೇಳಿದರೆ, ಮತ್ತೆ ಕೆಲವರು ಚಕ್ರಗಳು ಹನ್ನೆರಡೆಂದು ಹೇಳುತ್ತಾರೆ. ಈ ಹನ್ನೆರಡೆಂದರೆ : ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ, ಬ್ರಹ್ಮರಂಧ್ರ (ಸಹಸ್ರಾರ), ಶಿಖಾ, ಪಶ್ಚಿಮ, ನಾದ, ಬಿಂದು ಮತ್ತು ಕಲಾ.

**ದ್ವಾದಶ ಮಲ :** ಆತ್ಮವು ಮಲಗಳಿಂದಾಗಿ ತನ್ನ ಶುದ್ಧತೆಯನ್ನು ಕಳೆದುಕೊಂಡಿದ್ದು, ಲಿಂಗೈಕ್ಯಕ್ಕೆ ಅನರ್ಹವಾಗಿದೆ. ಈ ಮಲಗಳನ್ನು ನಿವಾರಿಸುವುದೇ ಆಧ್ಯಾತ್ಮಿಕ ಜೀವನದ ಗುರಿ. ಈ ಮಲಗಳು ಮೂರು ಎಂದು ಕೆಲವರು ಹೇಳಿದರೆ, ಹನ್ನೆರಡು ಎಂದು ಗುರುಸಿದ್ಧದೇವರೆಂಬ ವಚನಕಾರ ಹೇಳುತ್ತಾನೆ. ಈ ಹನ್ನೆರಡೆಂದರೆ : ಹೊನ್ನು, ಹೆಣ್ಣು, ಮಣ್ಣು, ಅನ್ನ, ನೀರು, ವಸ್ತ್ರ, ಆಭರಣ, ವಾಹನ, ಪುತ್ರ, ಮಿತ್ರ, ಅನಾಚಾರ, ದುಸ್ಸಂಗ. ಆದರೆ ಇವೆಲ್ಲವನ್ನೂ ಮಲತ್ರಯಗಳಲ್ಲೊಂದಾದ ಮಾಯಾ ಮಲದ ಅಡಿಯಲ್ಲಿ ತರಬಹುದು. ನಾವು ಪ್ರಾಕೃತಿಕ ಶರೀರ ಕರಣಗಳನ್ನು ಪಡೆದಿರುವುದರಿಂದ (ಮಾಯಾಪಾಶಕ್ಕೆ ಸಿಕ್ಕಿರುವುದರಿಂದ), ಆ ಪ್ರಕೃತಿಗುಣಗಳಿಗನುಗುಣವಾಗಿ ಈ ಹನ್ನೆರಡು ರೀತಿಯ ಆಸೆಗಳಿಗೆ ಬಲಿಯಾಗುತ್ತೇವೆ. (೧೦:೬೯೪)

**ದ್ವಿಮುಖದಲ್ಲಿ ಶಕ್ತಿ ಸಂಪರ್ಕಯೋಗ :** ಸಾಧಕನು ತಾನು ಪೂಜಕನೆಂದೂ ಪರಶಿವನು ಪೂಜ್ಯನೆಂದೂ ಭಾವಿಸಿ ಆಧ್ಯಾತ್ಮ ಸಾಧನೆ ಮಾಡುವಾಗ ಅವನಲ್ಲಿ ಭಕ್ತಿ ಎಂಬ ಶಕ್ತಿ (ಭಕ್ತಿಶಕ್ತಿ) ಸಂಪರ್ಕವಾಗುತ್ತದೆ.

**ದ್ವೈತ :** ಇದಕ್ಕೆ ಕನಿಷ್ಠ ಮೂರು ಅರ್ಥಗಳಿವೆ. ೧. ಮಧ್ವಾಚಾರ್ಯರ ದ್ವೈತ ಸಿದ್ಧಾಂತದ ಪ್ರಕಾರ, ಸ್ವತಂತ್ರ ಮತ್ತು ಪರತಂತ್ರ ಎರಡೇ ಅಂತಿಮ ತತ್ತ್ವಗಳು. ಸರ್ವಶಕ್ತನೂ, ಸರ್ವಸ್ವತಂತ್ರನೂ ಆದ ವಿಷ್ಣುವು ಒಂದು ತತ್ತ್ವವಾದರೆ, ಪರತಂತ್ರಗಳ ವರ್ಗಕ್ಕೆ ಅಲ್ಪಶಕ್ತರೂ, ಅಲ್ಪಸ್ವತಂತ್ರರೂ ಆದ ಆತ್ಮಗಳೂ, ಜಡಜಗತ್ತೂ ಸೇರುತ್ತವೆ. ಆತ್ಮ ಮತ್ತು ಪ್ರಕೃತಿಗಳು ವಿಷ್ಣುವನ್ನೆ ಎಲ್ಲದಕ್ಕೂ ಅವಲಂಬಿಸುತ್ತವೆಯಾದುದರಿಂದ, ಅವು ಪರತಂತ್ರ. ವಿಷ್ಣು ಯಾರನ್ನೂ ಅವಲಂಬಿಸುವುದಿಲ್ಲವಾದುದರಿಂದ, ಅವನು ಸ್ವತಂತ್ರ.

೨. ಪ್ರಕೃತಿ ಮತ್ತು ಪುರುಷ ಎರಡೇ ಅಂತಿಮ ತತ್ತ್ವಗಳು ಎಂದು ಸಾರುವ ಸಾಂಖ್ಯರೂ ದ್ವೈತಿಗಳೇ. ಅದೇ ರೀತಿ, ಜೀವ ಮತ್ತು ಅಜೀವಗಳೇ ಅಂತಿಮ ತತ್ತ್ವಗಳೆಂದು ಹೇಳುವ ಜೈನ ದರ್ಶನವೂ ದ್ವೈತವೇ.

೩. ಜ್ಞಾನ ಉಂಟಾಗಲು ಜ್ಞಾತೃ ಮತ್ತು ಜ್ಞೇಯಬೇಕೆಂದೂ, ಅವೆರಡೂ ಬೇರೆ ಬೇರೆ ಎಂದೂ ಹೇಳುವ ಸಿದ್ಧಾಂತವೂ ದ್ವೈತವೇ. ಅನುಭಾವದಲ್ಲಿ ಜ್ಞಾತೃ ಜ್ಞೇಯಗಳಲ್ಲಿನ ವ್ಯತ್ಯಾಸ ಇಲ್ಲವಾಗುವುದರಿಂದ, ಅನುಭಾವಕ್ಕೆ (ತುರೀಯಾತೀತ ಸ್ಥಿತಿಗೆ) ಅದ್ವೈತ ಸ್ಥಿತಿ ಎಂದು ಹೆಸರು.

**ಧರಿತ್ರಿಯ ವರ್ಗ :** ಸಂಸಾರ, ಬಂಧನಕ್ಕೊಳಗಾಗಿರುವವರ ವರ್ಗ. (೮:೭೦೧)

**ಧರ್ಮ :** ವಚನಕಾರರು, ಉಪನಿಷತ್ಕಾರರಂತೆ, ಈ ಪದವನ್ನು ಒಂದಕ್ಕಿಂತ ಹೆಚ್ಚು ಅರ್ಥದಲ್ಲಿ ಬಳಸಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪಟ್ಟಿ ಮಾಡಹುದು.

೧. ಸುಡುವುದು ಬೆಂಕಿಯ ಧರ್ಮ, ಎಂಬಲ್ಲಿ ಧರ್ಮಕ್ಕೆ ಗುಣ ಅಥವಾ ಸ್ವರೂಪ ಎಂಬರ್ಥವಿದೆ.

೨. ಯುದ್ಧ ಮಾಡುವುದು ಕ್ಷತ್ರಿಯ ಧರ್ಮ ಎಂಬಲ್ಲಿ ಧರ್ಮಕ್ಕೆ ಕರ್ತವ್ಯ ಎಂಬರ್ಥವಿದೆ.

೩. ನೀತಿ ಎಂಬುದು ಮತ್ತೊಂದು ಅರ್ಥ.

೪. ಧರ್ಮಗ್ರಂಥ, ಬೌದ್ಧ ಧರ್ಮ ಎಂಬಲ್ಲಿ "ಧರ್ಮ"ವು ನಂಬಿಕೆ, ಆಚಾರ ಮತ್ತು ಭಾವನೆಗಳನ್ನೊಳಗೊಳ್ಳುತ್ತದೆ. ಪರಮಾತ್ಮ ಇದ್ದಾನೆ ಅಥವಾ ಇಲ್ಲ, ಸ್ವರ್ಗ ನರಕಗಳಿವೆ ಅಥವಾ ಇಲ್ಲ, ಇತ್ಯಾದಿ ನಂಬಿಕೆಗಳು. ಬಲಿಕೊಡುವುದು, ಜಪಿಸುವುದು, ಪೂಜೆ ಮಾಡುವುದು, ದಾನ ಮಾಡುವುದು, ಸತ್ಯ, ಅಹಿಂಸೆ, ಬ್ರಹ್ಮಚರ್ಯಗಳನ್ನು ಪಾಲಿಸುವುದು, ಧ್ಯಾನ ಮಾಡುವುದು, ಇವೆಲ್ಲ ಆಚಾರಗಳು. ಪೂಜೆ, ಧ್ಯಾನ, ಜಪ ಇತ್ಯಾದಿಗಳ ಮೂಲಕ ತೃಪ್ತಿ, ಸಮಾಧಾನ, ಆನಂದ, ಶಾಂತಿ ಮುಂತಾದವುಗಳು ಭಾವನೆಗಳು. ಒಬ್ಬ ಧಾರ್ಮಿಕ ಜೀವನ ನಡೆಸುತ್ತಾನೆ, ಎಂದರೆ ಅವನು ಮೂರೂ ಅಂಶಗಳಿಗೆ ಒತ್ತು ಕೊಡುತ್ತಾನೆ, ಎಂದರ್ಥ.

**ಧಾತು :** ರಸೇಶ್ವರವಾದದ ಪ್ರಕಾರ, ಕೆಲವೊಂದು ಗಿಡಮೂಲಿಕೆಗಳ ಮಿಶ್ರಣದಿಂದ ನಾವು ವಜ್ರದೇಹಿಗಳಾಗಿರಬಹುದು. ಆದರೆ ವಚನಕಾರರ ಪ್ರಕಾರ, ವಜ್ರದೇಹಿಗಳಾಗುವುದು, ದೀರ್ಘಕಾಲ ಬದುಕುವುದು ಜೀವನದ ಗುರಿಯಲ್ಲ. ಜೀವನದ ಗುರಿ ಶೂನ್ಯಕಾಯರಾಗುವುದು ಮತ್ತು ಲಿಂಗಾಂಗ ಸಾಮರಸ್ಯ ಪಡೆಯುವುದು.

**ಧ್ಯಾನ :** ವಚನಕಾರರ ಪ್ರಕಾರ, ಧ್ಯಾನವೆಂದರೆ ಲಿಂಗಧ್ಯಾನ. ಇದನ್ನು ಎರಡು ರೀತಿ ಮಾಡಬಹುದು. ಮೊದಲನೆಯದು ಇಷ್ಟಲಿಂಗ ಪೂಜೆಯ ನಂತರ, ಇಷ್ಟಲಿಂಗವನ್ನೇ ದೃಷ್ಟಿಸಿ ನೋಡುತ್ತಾ ಧ್ಯಾನಕ್ಕೊಳಗಾಗುವುದು. ಆಧ್ಯಾತ್ಮಿಕ ಜೀವನದ ಪ್ರಥಮ ಹಂತದಲ್ಲಿರುವವರಿಗೆ ಇದು ಸಾಧ್ಯವಾಗಬೇಕಾದರೆ ಇಷ್ಟಲಿಂಗ ಆವಶ್ಯಕವಾಗುತ್ತದೆ. ಎರಡನೆಯದು ಮಾನಸಿಕ, ಅಂದರೆ, ಯಾವಾಗಲೂ ಲಿಂಗವನ್ನೇ (ಪರಶಿವನನ್ನೇ) ಕುರಿತು ಚಿಂತಿಸುವವರು ಲಿಂಗಧ್ಯಾನದಲ್ಲಿದ್ದಾರೆಂದೇ ಅರ್ಥ. ಅವರು ಪೂಜೆ ಮಾಡುತ್ತಿರಬಹುದು, ಸಂತೆಯಲ್ಲಿರಬಹುದು, ಹೊಲದಲ್ಲಿ ಕೆಲಸ ಮಾಡುತ್ತಿರಬಹುದು, ಅಂತೂ ಧ್ಯಾನಕ್ಕೆ ಆತ್ಮಶುದ್ಧಿ ಆವಶ್ಯಕ. ಏಕೆಂದರೆ, ಆತ್ಮಶುದ್ಧಿಯಿಲ್ಲದೆ, ಏಕಾಗ್ರತೆ ಇಲ್ಲ; ಏಕಾಗ್ರತೆ ಇಲ್ಲದೆ ಧ್ಯಾನ ಲಭಿಸದು.

ಧ್ಯಾನವಿಲ್ಲದೆ ಸಾಮರಸ್ಯ ಸಾಧ್ಯವಿಲ್ಲ.

**ಧ್ಯಾನವಿಲ್ಲದ ಜಪ :** ಮನಸ್ಸನ್ನು ಶಿವನ ಮೇಲೆ ಕೇಂದ್ರೀಕರಿಸದೆ, ಯಾಂತ್ರಿಕವಾಗಿ ಮಂತ್ರವನ್ನು ಅಥವಾ ಶಿವನಾಮವನ್ನು ಜಪಿಸುವುದು. (೮:೭೦೧)

**ನಂದಿವಾಹನಾರೂಢ :** ಪೌರಾಣಿಕವಾಗಿ ಪರಶಿವನು ನಂದಿವಾಹನಾರೂಢನಂತೆ ಚಿತ್ರಿತವಾಗಿದ್ದಾನೆ. ಪ್ರತಿಯೊಬ್ಬ ಅನುಭಾವಿಯೂ ಕೊನೆಯಲ್ಲಿ ತಾನು ಯೋಚಿಸುವುದು, ಮಾಡುವುದು, ಅನುಭವಿಸುವುದು, ಎಲ್ಲ ಪರಶಿವನ ಇಚ್ಛೆಯಂತೆಯೇ ಹೊರತು, ತನ್ನಿಚ್ಛೆಯಂತೆ ಅಲ್ಲ ಎಂದು ದೃಢವಾಗಿ ನಂಬುತ್ತಾನೆ. ಅಲ್ಲದೆ ಅವನಿಗೆ ತನ್ನ ವೈಯಕ್ತಿಕತೆ ಅಥವಾ ಅಹಂ ಅಥವಾ ಮನನಷ್ಟವಾಗುವುದರಿಂದ, ಅವನು ತಾನಾಗಿ ಏನೂ ಯೋಚಿಸಲಾರ. ನಂದಿಯು ಹೇಗೆ ಅದರ ಸವಾರನ ಇಚ್ಛೆಗನುಸಾರವಾಗಿ ಚಲಿಸುತ್ತದೆಯೋ ಹಾಗೆಯೇ ಅನುಭಾವಿಯ ಜೀವನವೂ ಶಿವನ ಇಚ್ಛೆಗನುಸಾರವಾಗಿ ನಡೆಯುತ್ತದೆ. ಆದುದರಿಂದ ಪ್ರತಿಯೊಬ್ಬ ಅನುಭಾವಿಯೂ ಒಬ್ಬ ನಂದಿ, ಪರಶಿವನು ನಂದಿವಾಹನಾರೂಢ. ಆದರೆ ಪರಶಿವನು ಅನುಭಾವಿಯ ಒಳಗಿದ್ದುಕೊಂಡೇ, ಅವನನ್ನು ನಿಯಂತ್ರಿಸುತ್ತಾನೆ.

**ನಟ್ಟಿದ ಲಿಂಗ :** ಗುಡಿಯಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಲಿಂಗ, ಸ್ಥಾವರಲಿಂಗ. ಶಿವಶರಣರಿಗೆ ಸ್ಥಾವರ ಲಿಂಗಪೂಜೆ ನಿಷಿದ್ಧ.

**ನಡೆಗೆಟ್ಟವನು :** ಇನ್ನೂ ಅನುಭಾವವನ್ನು ಪಡೆಯದವನು ಭಸ್ಮಧಾರಣೆ, ಇಷ್ಟಲಿಂಗ ಪೂಜೆ ಮಂತ್ರೋಚ್ಚಾರಣೆ ಮುಂತಾದ ವಿಧಿಗಳನ್ನು ತಪ್ಪದೆ ಆಚರಿಸುತ್ತಾನೆ. ಆದರೆ, ಅನುಭಾವಿಯಾದವನು ಲಿಂಗಾಂಗ ಸಾಮರಸ್ಯವನ್ನು ಪಡೆದಿರುವುದರಿಂದ ಇಂತಹ ಆಚಾರ (ನಡೆಗಳು) ಅನಾವಶ್ಯಕವಾಗುವುದರಿಂದ ಅವನನ್ನು ಆಲಂಕಾರಿಕವಾಗಿ ನಡೆಗೆಟ್ಟವನು ಎಂದು ಕರೆಯಬಹುದು. (೫:೧೦೧೫)

**ನನ್ನಿಯರೂಪ :** ಪರಶಿವನ ನಿಜವಾದ ಸ್ವರೂಪ. ಪರಶಿವನಿಗೆ ಎರಡು ರೀತಿಯ ಗುಣಗಳಿವೆ. ಸತ್, ಚಿತ್,ಆನಂದ, ನಿತ್ಯ, ಪರಿಪೂರ್ಣ ಎಂಬ ಗುಣಗಳು ಪರಶಿವನಲ್ಲಿ ಯಾವಾಗಲೂ ಇರುತ್ತವೆ. ಇವಿಲ್ಲದೆ ಅವನನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಸೃಷ್ಟಿ ಸ್ಥಿತಿ ಇತ್ಯಾದಿಗಳನ್ನು ಮಾಡುವ ಗುಣಗಳು ಮತ್ತೊಂದು ರೀತಿಯ ಗುಣಗಳು. ಇವು ಯಾವಾಗಲೂ ಪರಶಿವನಲ್ಲಿರುವದಿಲ್ಲ. ಆದುದರಿಂದ ಭಕ್ತನು 'ನನ್ನಿಯರೂಪ' ವನ್ನು ತೋರಿಸೆಂದು ಪರಶಿವನನ್ನು ಕೇಳುವಾಗ 'ನೀನು ಹೇಗೆ ಸೃಷ್ಟಿ ಮಾಡುತ್ತಿ ತೋರಿಸು' ಎಂದರ್ಥವಾಗುತ್ತದೆ. ಸಾಧಕನು ತನ್ನ ಅನುಭಾವದಲ್ಲಿ ತಾನು ಪರಶಿವನಾಗುತ್ತೇನೆಂದು ತಿಳಿಯಲು ಅವನಿಗೆ ಆ ಐದುಗುಣಗಳ ಅರಿವಾಗುವುದೇ ಕಾರಣ (೯:೭)

**ನಯನ ಪ್ರಸಾದ :** ಕಣ್ಣುಗಳ ಮೂಲಕ ನೋಡಿದ ಸುರೂಪು ಕುರೂಪುಗಳು ನಮ್ಮ ಆಧ್ಯಾತ್ಮಿಕ ಜೀವನಲ್ಲಿ ಯಾವ ಬದಲಾವಣೆಯನ್ನೂ ಮಾಡುವುದಿಲ್ಲ. ಆದರೆ ಲಿಂಗವನ್ನು ನೋಡಿದ

ಕಣ್ಣುಗಳು ಶುದ್ಧವಾಗಿ (ಪ್ರಸಾದ ನಯನವಾಗಿ), ಅಂತಹ ನಯನಗಳಿಂದ ನೋಟವನ್ನು ಲಿಂಗಕ್ಕೆ ಅರ್ಪಿಸಿದರೆ. ಅದು ಶುದ್ಧವಾಗಿ ನಯನ ಪ್ರಸಾದವಾಗುತ್ತದೆ.

**ನವಗ್ರಹಗಳ ಸ್ಥಾನ :** ಬ್ರಹ್ಮಾಂಡದಲ್ಲಿರುವ ನವಗ್ರಹಗಳು ಮಾನವ ದೇಹ (ಪಿಂಡಾಂಡ)ದಲ್ಲಿಯೂ ಇವೆ ಎನ್ನುವುದಕ್ಕೆ ವಿವರ: ನಾದಚಕ್ರದಲ್ಲಿ ಸೂರ್ಯ, ಬಿಂದು ಚಕ್ರಗಳಲ್ಲಿ ಚಂದ್ರ, ಅಧೋನಾಭಿಯಲ್ಲಿ ಮಂಗಳ, ಗುಹ್ಯಸ್ಥಾನದಲ್ಲಿ ಗುರು, ಕಲಾಚಕ್ರದಲ್ಲಿ ಶುಕ್ರ, ನಾಭಿಯಲ್ಲಿ ಶನಿ, ಮುಖದಲ್ಲಿ ರಾಹು, ನಾಭಿ ಸ್ಥಾನದಲ್ಲಿ ಕೇತು, ಹೃದಯದಲ್ಲಿ ಬುಧ. (೧೩:೧೫೭೧)

**ನವಚಕ್ರಗಳು :** ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧ, ಆಜ್ಞಾ, ಬ್ರಹ್ಮರಂಧ್ರ, ಶಿಖಾ, ಪಶ್ಚಿಮ. (೩:೧೦೮೭)

**ನವದ್ವಾರ :** ದೇಹವೆಂಬ ಪುರಕ್ಕೆ (ಕೋಟೆಗೆ) ಎರಡು ಕಣ್ಣುಗಳು, ಎರಡು ಕಿವಿಗಳು, ಬಾಯಿ, ಮೂಗು, ಮೂತ್ರನಾಳ, ಗುದದ್ವಾರ, ಬ್ರಹ್ಮರಂಧ್ರ ಎಂಬ ಒಂಬತ್ತು ದ್ವಾರಗಳಿವೆ (೨:೧೧೦೨).

**ನವಪಿಂಡ :** ಭಕ್ತನೆಂಬಪಿಂಡ, ಮಹೇಶ್ವರನೆಂಬ ಪಿಂಡ, ಪ್ರಸಾದಿಯೆಂಬ ಪಿಂಡ, ಪ್ರಾಣಲಿಂಗಿಯೆಂಬ ಪಿಂಡ, ಶರಣನೆಂಭ ಪಿಂಡ, ಐಕ್ಯನೆಂಬ ಪಿಂಡ, ಚಿದ್ಗುಣನೆಂಬ ಪಿಂಡ, ಚಿನ್ಮಯನೆಂಬ ಪಿಂಡ, ಚಿನ್ಮೂರ್ತಿಯೆಂಬ ಪಿಂಡ. (೩:೧೩೦೮)

**ನವಲಿಂಗ :** ಬಹಳಷ್ಟು ವಚನಕಾರರು ಮಾನವನ ದೇಹದಲ್ಲಿ ಆರು ಲಿಂಗಗಳಿವೆಯೆಂದು ಹೇಳುತ್ತಾರೆ. ಮತ್ತೆ ಕೆಲವರು ಲಿಂಗಗಳು ಒಂಬತ್ತೆಂದು ಹೇಳುತ್ತಾರೆ. ಇವೆಂದರೆ, ಎಲ್ಲರೂ ಹೇಳುವಂತೆ : ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದ ಲಿಂಗ ಮತ್ತು ಮಹಾಲಿಂಗ; ಇವುಗಳ ಜೊತೆಗೆ ನಿಷ್ಕಲ ಲಿಂಗ, ಶೂನ್ಯಲಿಂಗ ಮತ್ತು ನಿರಂಜನಲಿಂಗವೆಂಬ ಮೂರು ಲಿಂಗಗಳನ್ನು ಸೇರಿಸಿ, ಲಿಂಗಗಳು ಒಟ್ಟು ಒಂಬತ್ತೆಂದು ಹೇಳುತ್ತಾರೆ. ಮೊದಲಿನ ಆರು ಲಿಂಗಗಳು ಕ್ರಮವಾಗಿ, ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಮತ್ತು ಆಜ್ಞಾಚಕ್ರಗಳಲ್ಲಿದ್ದು, ಕೊನೆಯ ಮೂರು ಕ್ರಮವಾಗಿ ಬ್ರಹ್ಮಚಕ್ರ, ಶಿಖಾಚಕ್ರ ಮತ್ತು ಪಶ್ಚಿಮಗಳಲ್ಲಿವೆ ಎಂದು ನಂಬಲಾಗಿದೆ.

**ನವವಿಧ ಭಕ್ತಿ :** ಆಧ್ಯಾತ್ಮಿಕ ದಾರಿಯನ್ನು ಆಗ ತಾನೆ ಪ್ರಾರಂಭಿಸುವವನ ಭಕ್ತಿ. ಆ ಹಂತದ ಸಾಧಕನಿಗೆ ತನ್ನ ಕ್ರಿಯೆಗಳ ಅರ್ಥ ಮತ್ತು ಉದ್ದೇಶ ಗೊತ್ತಿರುವುಲ್ಲ. ಅವನು ಕೇವಲ ಗುರುಗಳು ಹೇಳಿದರೆಂಬ ಒಂದೇ ಕಾರಣದಿಂದ ಅವುಗಳನ್ನು ಆಚರಿಸುತ್ತಾನೆ. ಆ ಭಕ್ತಿಯಲ್ಲಿ ಒಂಬತ್ತು ಅಂಗಗಳಿವೆ. ೧. ಶ್ರವಣ ಭಕ್ತಿ : ತನ್ನ ಆಧ್ಯಾತ್ಮಿಕ ಸಾಧನೆಯಲ್ಲಿ ಪ್ರಗತಿ ಸಾಧಿಸಿಕೊಳ್ಳುವ ಉದ್ದೇಶದಿಂದ, ಭಕ್ತನು ಆದಷ್ಟೂ ಆಧ್ಯಾತ್ಮಿಕ ಜೀವನದ

ಬಗೆಗೇ ಕೇಳಿಸಿಕೊಳ್ಳಬೇಕು. ಅಂದರೆ, ಅವನು ಶಿವಭಕ್ತರ ಬಗೆಗಿನ ಕತೆಗಳನ್ನೂ, ಪ್ರಸಂಗ, ಪುರಾಣ, ಇತ್ಯಾದಿಗಳನ್ನೂ ಕೇಳಿಸಿಕೊಳ್ಳಬೇಕು. ಆಧ್ಯಾತ್ಮಿಕ ಚರ್ಚೆಗಳಲ್ಲಿ ಭಾಗವಹಿಸಬೇಕು. ೨. ಕೀರ್ತನ ಭಕ್ತಿ : ಪರಶಿವನ ಬಗೆಗಿನ ಹಾಡುಗಳನ್ನು ಪ್ರೀತಿಯಿಂದ ಹಾಡುವುದು ಕೀರ್ತನ ಭಕ್ತಿ: ಇಲ್ಲಿಯಾದರೂ ಶಿವಭಕ್ತರ ಮಹಿಮೆಯನ್ನು ಹಾಡಿ ಹೊಗಳುವುದರ ಹಿಂದೆ, ತಾನೂ ಒಬ್ಬ ದೊಡ್ಡ ಭಕ್ತನಾಗಬೇಕೆಂಬ ಉದ್ದೇಶವೇ ಇದೆ. ೩. ಸ್ಮರಣ ಭಕ್ತಿ : ಯಾವಾಗಲೂ ಪರಶಿವನ ಬಗೆಗೆ ಚಿಂತಿಸುತ್ತಿರುವುದೇ ಸ್ಮರಣ ಭಕ್ತಿ. ಮಂತ್ರೋಚ್ಚಾರಣೆ, ಭಜನೆ, ಕೀರ್ತನೆ ಇವೆಲ್ಲ ಪರಶಿವನನ್ನು ಸ್ಮರಿಸುವ ಬಾಹ್ಯ ವಿಧಾನಗಳಾದರೆ, ಮನಸ್ಸಿನಲ್ಲೇ ಸದಾ ಚಿಂತಿಸುವುದು ಆಂತರಿಕ ವಿಧಾನ. ೪. ಸೇವನ (ಪಾದಸೇವೆ) ಭಕ್ತಿ : ಇಲ್ಲಿ ವಾಸ್ತವವಾಗಿ ಸಾಧಕನು ಸಾಕಷ್ಟು ಆಧ್ಯಾತ್ಮಿಕ ಪ್ರಗತಿ ಸಾಧಿಸಿರುವವರ ಪಾದಸೇವೆ, ಮುಂತಾದ ಸೇವೆಯಲ್ಲಿ ನಿರತನಾಗಬೇಕು. ಅವರ ಒಡನಾಟದಿಂದ ಆಧ್ಯಾತ್ಮಿಕ ಪ್ರಗತಿಯನ್ನು ಹೇಗೆ ಸಾಧಿಸಬೇಕೆಂಬುದನ್ನೂ, ನಮ್ರತೆಯನ್ನೂ, ಅವನು ಕಲಿತುಕೊಳ್ಳಬಹುದು. ೫. ಪೂಜೆ : ಎಲ್ಲರೂ ಮಾಡುವಂತೆ ಇಷ್ಟಲಿಂಗವನ್ನು ಪೂಜಿಸಿಯೂ ಅವನು ತನ್ನ ಭಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು. ೬. ವಂದನೆ : ಪರಶಿವನಿಗೆ ಎಲ್ಲ ರೀತಿಯ ತ್ಯಾಗ ಮಾಡಲು ಸಿದ್ಧನಾಗುವುದೇ ವಂದನೆ. ೭. ದಾಸ್ಯ : ಯಾವುದೇ ಕಾರ್ಯದಲ್ಲಿ ತಾನು ಮಾಡಿದೆನೆಂಬ ಅಹಂಕಾರ ತೋರಿಸದೆ, ಪರಮಾತ್ಮನೇ ನನ್ನಿಂದ ಮಾಡಿಸುತ್ತಿದ್ದಾನೆ, ಪರಮಾತ್ಮನೇ ನನ್ನನ್ನು ಮಾತನಾಡುವಂತೆ ಮಾಡುತ್ತಿದ್ದಾನೆ, ಎಂದು ತಿಳಿಯುವುದೇ ದಾಸ್ಯ. ದಾಸನು ಹೇಗೆ ಎಲ್ಲ ಕೆಲಸಗಳನ್ನೂ ತನ್ನ ಸ್ವಾಮಿಯ ಆಜ್ಞೆಯಂತೆ ಮತ್ತು ತನ್ನ ಸ್ವಾಮಿಗಾಗಿ ಮಾತ್ರ ಮಾಡುತ್ತಾನೋ ಹಾಗೆಯೇ ದಾಸ್ಯ ಭಕ್ತಿಯಲ್ಲಿ ನಿರತನಾದ ಸಾಧಕನು, ತಾನು ಶಿವನ ದಾಸನೆಂದೂ, ತಾನು ಮಾಡುವುದೆಲ್ಲವೂ ಶಿವನಿಗಾಗಿ ಮಾತ್ರ ಎಂದೂ ತಿಳಿಯುತ್ತಾನೆ. ೮. ಸಖ್ಯ : ಸ್ನೇಹಿತನಾದವನು ಯಾವಾಗಲೂ ತನ್ನ ಪ್ರಿಯ ಗೆಳೆಯನ ಜೊತೆಯಲ್ಲಿರಲು ಬಯಸುತ್ತಾನೋ, ಹಾಗೆಯೇ ನಿಜವಾದ ಭಕ್ತನು ಯಾವಾಗಲೂ ಪರಶಿವನ ಸಂಗದಲ್ಲಿ ಬಯಸುತ್ತಾನೆ. ನಿಜವಾದ ಸಖ್ಯ ಲಾಭದ ಕಡೆ ಗಮನ ಕೊಡುವುದಿಲ್ಲ. ಹಾಗೆಯೇ ಸಾಧಕನು ಪರಮಾತ್ಮನಿಂದ ಯಾವ ಪ್ರತಿಫಲವನ್ನೂ ಅಪೇಕ್ಷಿಸುವುದಿಲ್ಲ. ೯. ಆತ್ಮಾರ್ಪಣ : ನನ್ನದೇನೂ ಇಲ್ಲ, ಎಲ್ಲವೂ ಪರಶಿವನ ಇಚ್ಛೆಯಂತೆ ನಡೆಯಲಿ ಎಂದು ಎಲ್ಲವನ್ನೂ - ತನ್ನ ಆತ್ಮವನ್ನೂ - ಪರಶಿವನಿಗೆ ಅರ್ಪಿಸುವುದೇ ಆತ್ಮಾರ್ಪಣ.

ಹೀಗೆ ಭಕ್ತನು ಲಿಂಗಾಂಗ ಸಾಮರಸ್ಯಕ್ಕೆ ಅರ್ಹನಾಗುವ ಮೊದಲು ನವವಿಧ ಭಕ್ತಿಯ ಮೂಲಕ ಪರಿಶುದ್ಧನಾಗಬೇಕು.

**ನವವಿಧ ಲಿಂಗ :** ಆದಿಲಿಂಗ, ಅನಾದಿಲಿಂಗ, ಪುರುಷಲಿಂಗ, ಅವ್ಯಕ್ತಲಿಂಗ, ಅಗೋಚರಲಿಂಗ, ಅಪ್ರತಿಮಲಿಂಗ, ಅನಾಮಯಲಿಂಗ, ಅಭೇದ್ಯಭೇದಕಲಿಂಗ, ಅಸಾಧ್ಯಸಾಧಕ ಲಿಂಗ.

(ಮರುಳಶಂಕರದೇವನ ವಚನ ೮:೧೧೨೭)

**ನವವಿಧ ಹಸ್ತಗಳು :** ಹಸ್ತ ಎಂದರೆ ರಕ್ತಮಾಂಸಗಳಿಂದ ರಚಿತವಾದ ಕೈ ಎಂದರ್ಥವಲ್ಲ. ಇಷ್ಟಲಿಂಗವೇ ಪರಶಿವ ಎಂಬ ಭ್ರಮೆ ಇರುವ ತನಕ, ರಕ್ತಮಾಂಸಗಳ ಕೈಯಿಂದ ಹಾಲು, ಹಣ್ಣು ಮುಂತಾದ ಇಂದ್ರಿಯಗೋಚರ ವಸ್ತುಗಳನ್ನು ಒಂದು ನಿರ್ದಿಷ್ಟ ಸ್ಥಳದಲ್ಲಿ ಒಂದು ನಿರ್ದಿಷ್ಟ ಸಮಯದಲ್ಲಿ ಅರ್ಪಿಸುತ್ತೇವೆ. ಆದರೆ ಪರಶಿವನ ಬಗೆಗೆ ನಮಗೆ ಹೆಚ್ಚಿನ ಅರಿವು ಮೂಡಿದಂತೆಲ್ಲಾ ನಿತ್ಯತೃಪ್ತನಾದ ಶಿವನಿಗೆ ನಾವು ಕೊಡುವ ನೈವೇದ್ಯ ಅನಾವಶ್ಯಕ ಹಾಗೂ ನಿರರ್ಥಕವೆಂದು ಅನಿಸಿ, ಎಲ್ಲ ವಸ್ತುಗಳನ್ನೂ ಅವು ಎಲ್ಲೆಲ್ಲಿ ಇವೆಯೊ ಅಲ್ಲಲ್ಲೇ, ಮನಸ್ಸಿನಿಂದಲೇ ಶಿವನಿಗೆ ಅರ್ಪಿಸುವುದನ್ನು ಕಲಿಯುತ್ತೇವೆ. ಆಗ ನಮ್ಮ ಚಿತ್ತ, ಬುದ್ಧಿ, ಇತ್ಯಾದಿಗಳು ಹಸ್ತಗಳೆನಿಸಿಕೊಳ್ಳುತ್ತವೆ. ಇಂಥ ಮಾನಸಿಕ ಅಥವಾ ಅಭೌತಿಕ ಹಸ್ತಗಳು ಶರಣರ ಪ್ರಕಾರ ಒಂಬತ್ತು. ಅವೆಂದರೆ, ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ಭಾವ, ನಿರುಪಾಧಿಕ, ನಿಷ್ಕಳಂಕ ಮತ್ತು ನಿರಾಳ (ನೋಡಿ : **ಹಸ್ತ**).

**ನವಶಕ್ತಿಯರು :** ಶಾಕ್ತ ಸಂಪ್ರದಾಯದ ಪ್ರಕಾರ, ಮಾನವ ದೇಹದಲ್ಲಿ ಒಂಬತ್ತು ಚಕ್ರಗಳಿದ್ದು, ಅವುಗಳನ್ನು ಒಂಬತ್ತು ಶಕ್ತಿಯರು ಸುತ್ತುವರಿದಿದ್ದಾರೆ. ವಚನಕಾರರು ಯಾವ ಶಕ್ತಿಗಳನ್ನು ಕ್ರಿಯಾಶಕ್ತಿ ಅಥವಾ ಪೃಥ್ವಿ, ಜ್ಞಾನಶಕ್ತಿ ಅಥವಾ ಅಪ್‌ತತ್ವ, ಇತ್ಯಾದಿಯಾಗಿ ಕರೆಯುತ್ತಾರೋ, ಅವೇ ಶಕ್ತಿಗಳನ್ನು ಶಾಕ್ತರು ಕಾಕಿನಿ, ಲಾಕಿನಿ ಎಂದು ಮುಂತಾಗಿ ಕರೆಯುತ್ತಾರೆ. ಯಾವ ಚಕ್ರದಲ್ಲಿ ಯಾವ ಶಕ್ತಿ ಇದೆ ಎಂಬುದಕ್ಕೆ ವಿವರ ಹೀಗಿದೆ : ಕಂಸದಲ್ಲಿ ಕೊಟ್ಟಿರುವುದು ವಚನಕಾರರು ಕೊಡುವ ಹೆಸರುಗಳು :

ಆಧಾರ ಚಕ್ರದಲ್ಲಿ ಕಾಕಿನಿ ಶಕ್ತಿ (ಕ್ರಿಯಾ ಶಕ್ತಿ ಅಥವಾ ಪೃಥ್ವಿತತ್ವ), ಸ್ವಾಧಿಷ್ಠಾನ ಚಕ್ರದಲ್ಲಿ ರಾಕಿನಿ ಶಕ್ತಿ (ಜ್ಞಾನ ಶಕ್ತಿ ಅಥವಾ ಅಪ್ ತತ್ವ), ಮಣಿಪೂರಕ ಚಕ್ರದಲ್ಲಿ ಲಾಕಿನಿ ಶಕ್ತಿ (ಇಚ್ಛಾಶಕ್ತಿ ಅಥವಾ ಅಗ್ನಿತತ್ವ), ಅನಾಹತ ಚಕ್ರದಲ್ಲಿ ಶಾಕಿನಿ ಶಕ್ತಿ (ಆದಿಶಕ್ತಿ ಅಥವಾ ವಾಯು ತತ್ವ), ವಿಶುದ್ಧಿ ಚಕ್ರದಲ್ಲಿ ಡಾಕಿನಿ ಶಕ್ತಿ (ಪರಾಶಕ್ತಿ ಅಥವಾ ಆಕಾಶ ತತ್ವ). ಆಜ್ಞಾ ಚಕ್ರದಲ್ಲಿ ಹಾಕಿನಿಶಕ್ತಿ (ಚಿತ್‌ಶಕ್ತಿ ಅಥವಾ ಮನವೆಂಬ ತತ್ವ), ಬ್ರಹ್ಮಚಕ್ರದಲ್ಲಿ ನಿರ್ಮಾಯ ಶಕ್ತಿ. (ವಚನಕಾರರು ಆರಕ್ಕಿಂತ ಹೆಚ್ಚು ಶಕ್ತಿಗಳನ್ನು ಗುರುತಿಸುವುದಿಲ್ಲ). ಶಿಖಾ ಚಕ್ರದಲ್ಲಿ ನಿಭ್ರಾಂತ ಶಕ್ತಿ ಪಶ್ಚಿಮ ಚಕ್ರದಲ್ಲಿ ನಿರ್ಭಿನ್ನ ಶಕ್ತಿ.

ಆದರೆ ಬಾಲಸಂಗಯ್ಯನ *ಸಕಲಾಗಮ ಶಿಖಾಮಣಿಯಲ್ಲಿ* ಶಾಕ್ತರ ಒಂಬತ್ತು ಚಕ್ರಗಳು, ಒಂಬತ್ತು ಶಕ್ತಿಗಳು, ಇತ್ಯಾದಿಗಳ ಪ್ರಸ್ತಾಪವಿದೆ. (೧೩:೧೭೮೨ ಆ೩, ೧೭೯೭)

**ನಷ್ಟವ ಕೈಯಲ್ಲಿ ಹಿಡಿದು ದೃಷ್ಟವ ಕಾಣುವುದು :** ಇಂದಲ್ಲ ನಾಳೆ ನಷ್ಟವಾಗುವ ಇಷ್ಟಲಿಂಗವನ್ನು ಕೈಯಲ್ಲಿ ಹಿಡಿದು, ಧ್ಯಾನಾಸಕ್ತನಾಗಿ, ಅಂತಶ್ಚಕ್ಷುವಿಗೆ ಕಾಣುವ ಪರಶಿವನನ್ನು ಕಾಣುವುದು. (೪:೧೦೬೯)

**ನಾಗಾಭರಣ :** ನಾಗನನ್ನೆ (ಹಾವನ್ನೆ) ಆಭರಣದಂತೆ ತೊಟ್ಟುಕೊಂಡಿರುವ ಶಿವನೇ ನಾಗಾಭರಣ. ಇದೊಂದು ಆಲಂಕಾರಿಕ ವರ್ಣನೆ. ಮೂಲಾಧಾರ ಚಕ್ರವು ಪೃಥ್ವಿ ತತ್ವವನ್ನು ಪ್ರತಿನಿಧಿಸುತ್ತದೆ ಎಂಬ ಮಾತನ್ನು ಹೇಳಲಾಗುತ್ತದೆ. ಕುಂಡಲಿಶಕ್ತಿಯು ಹಾವು ಸುತ್ತಿಕೊಂಡು ಮಲಗಿರುವಂತೆ, ಆತ್ಮನು ಆಧಾರ ಚಕ್ರದಲ್ಲಿ ಮಲಗಿದ್ದಾನೆ. ಕುಂಡಲಿಯನ್ನು ಜಾಗ್ರತಗೊಳಿಸಿ ಆಧಾರವನ್ನೂ ಉಳಿದ ಐದು ಚಕ್ರಗಳನ್ನೂ ದಾಟುವಂತೆ ಪ್ರೇರೇಪಿಸಿ ಕೊನೆಗೆ ಅದು ಸಹಸ್ರಾರವನ್ನು ಮುಟ್ಟಿದಾಗ ಅಲ್ಲಿ ಅದು ನೆಲೆಸುತ್ತದೆ; ಅಥವಾ ಆತ್ಮನು ಪರಮಾತ್ಮನಲ್ಲಿ ನೆಲೆಸುತ್ತಾನೆ. ಹೀಗೆ ಪರಶಿವನು ಕುಂಡಲಿನೀ ಶಕ್ತಿಯ ಅಂತಿಮ ಗುರಿಯಾಗಿದ್ದಾನೆ. ಅಥವಾ ನಾಗನನ್ನು ಅವನು ಧರಿಸಿದ್ದಾನೆ.

**ನಾಡಿಗಳು :** ಮನುಷ್ಯನ ದೇಹದಲ್ಲಿ ಪ್ರಾಣಶಕ್ತಿ ಇದೆ. ದೈಹಿಕ ಶಕ್ತಿಯನ್ನು ಕಂಡಂತೆ ಪ್ರಾಣಶಕ್ತಿಯನ್ನು ಕಾಣಲು ಬರುವುದಿಲ್ಲ. ಪ್ರಾಣಶಕ್ತಿ ಹರಿಯಬೇಕಾದರೆ, ನಾಳಗಳು ಬೇಕಾಗುತ್ತದೆ. ಇವನ್ನೆ ಶಾಕ್ತರು ನಾಡಿಗಳೆಂದು ಕರೆಯುತ್ತಾರೆ. ಪ್ರಾಣಶಕ್ತಿ ಹೇಗೆ ಅಗೋಚರವೊ ಹಾಗೆ ನಾಡಿಗಳೂ ಅಗೋಚರವೇ. ಆದರೆ ನಮ್ಮ ದೇಹದಲ್ಲಿರುವ ನರಗಳು ನಾಡಿಗಳ ವ್ಯಕ್ತರೂಪವೆನ್ನಬಹುದು. ನಮ್ಮ ದೇಹದಲ್ಲಿ ೭೨,೦೦೦ ನಾಡಿಗಳಿದ್ದು, ೩೬,೦೦೦ ಎಡಗಡೆ ಭಾಗದಲ್ಲಿಯೂ, ೩೬,೦೦೦ ಬಲಭಾಗದಲ್ಲಿಯೂ ಇವೆ. ಇವುಗಳಲ್ಲಿ ಅತ್ಯಂತ ಪ್ರಮುಖವಾದುವೆಂದರೆ ಇಡಾ ಮತ್ತು ಪಿಂಗಳ. ಮತ್ತು ಸುಷುಮ್ನ (ನೋಡಿ : **ದಶನಾಡಿಗಳು**).

**ನಾದಬಿಂದುಕಲೆ :** ಸೃಷ್ಟಿ ಪೂರ್ವದಲ್ಲಿ, ಪ್ರಪಂಚವನ್ನು ಸೃಷ್ಟಿಸಬೇಕೆಂಬ ನೆನಹು ತಲೆದೋರುವುದಕ್ಕಿಂತ ಮುಂಚೆ, ಪರಶಿವನು ಶೂನ್ಯಸ್ಥಿತಿಯಲ್ಲಿರುತ್ತಾನೆ. ತಾನೊಬ್ಬನೇ ಇರುವ ಅರಿವುಂಟಾದಾಗ ಅವನ ಶಕ್ತಿಯಲ್ಲಿ ಸ್ಫುರಣ ಉಂಟಾಗುತ್ತದೆ. ಇದೇ ನಾದ. ಅನಂತರ ಅವನ ಶಕ್ತಿಯು ಗಟ್ಟಿಗೊಳ್ಳುತ್ತದೆ. ಅದೇ ಬಿಂದು. ಪರಶಿವನು ಆ ಶಕ್ತಿಯನ್ನುಪಯೋಗಿಸಿಕೊಂಡು ಪ್ರಪಂಚವನ್ನು ಸೃಷ್ಟಿಸುತ್ತಾನೆ. ಆ ಉಪಾದಾನ ಕಾರಣಕ್ಕೆ ಕಲೆ ಅಥವಾ ಕಲಾಶಕ್ತಿ ಎಂದು ಹೆಸರು.

**ನಾದಬಿಂದುಕಲಾತೀತ :** (ನೋಡಿ : **ನಾದಬಿಂದು ಕಲೆ**) ಈ ಎಲ್ಲ ಬದಲಾವಣೆಗಳು ಶಕ್ತಿಯಲ್ಲಿ ಆಗುವುದರಿಂದ ಹಾಗೂ ಶಿವನಲ್ಲಿ ಅವು ಆಗುವುದಿಲ್ಲವಾದುದರಿಂದ, ಅವನು ನಾದಬಿಂದುಕಲಾತೀತ.

**ನಾನಾ ಪ್ರಕೃತಿಯವನು :** ಕರ್ಮದ ದೆಸೆಯಿಂದಾಗಿ ನಾನಾ ಜನ್ಮಾಂತರಗಳಲ್ಲಿ ಪ್ರಕೃತಿಯ ವಿಕೃತಿಗಳನ್ನೂ ದೇಹೇಂದ್ರಿಯಾದಿಗಳನ್ನೂ ಧರಿಸುವವನು. (೮:೧೬೬೧)

**ನಾನು ನಾನಾಗುವುದು :** ಇಲ್ಲಿ ನಾನು ಎಂಬ ಪದವು ಎರಡರ್ಥಗಳಲ್ಲಿ ಪ್ರಯೋಗವಾಗಿದೆ. ನಾನು ಇಂಥವನು, ನನ್ನ ಕುಲ, ನಾಮ, ವಿಶಿಷ್ಟ ಗುಣಗಳು ಇಂಥಿಂಥವು ಎಂಬುದು

ಮೊದಲನೆ ಅರ್ಥ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ನಾನು ಎಂದರೆ ಜೀವಾತ್ಮ. ಪರಶಿವ ಎಂಬುದು ನಾನು ಎಂಬುದರ ಎರಡನೆ ಅರ್ಥ. ನಾನು ಆಧ್ಯಾತ್ಮಿಕ ಸಾಧನೆ ಮಾಡಿ ಪರಶಿವನಲ್ಲಿ ಒಂದಾಗಿ ಜೀವಭಾವವನ್ನು ಮರೆತಾಗ, ನಾನು ಪರಶಿವನೆಂಬ ಭಾವ ಮೂಡುತ್ತದೆ. ಆಗ ನಾನು ನಾನಾಗುತ್ತೇನೆ. (೯:೩)

**ನಾನೆಂಬುದೆ ಸಕಲ :** ನಮ್ಮಲ್ಲಿ ಅಜ್ಞಾನವಿರುವವರೆಗೂ ನಾನು, ನೀನು, ಜಗತ್ತು, ಪರಮಾತ್ಮ ಮುಂತಾಗಿ ಬೇರೆ ಬೇರೆ ಮಾಡಿ ಚಿಂತಿಸುತ್ತೇವೆ. ಸಕಲವೆಂದರೆ ಭಾಗವುಳ್ಳವನು ಎಂಬರ್ಥವಿರುವುದರಿಂದ, ಅಖಂಡ ಪರವಸ್ತುವಾದ ಪರಶಿವನನ್ನು ಹಾಗೆಂದು ಚಿಂತಿಸುವುದು ಅಜ್ಞಾನದ ಕುರುಹಾಗುತ್ತದೆ. (೮:೧೦೩೯)

**ನಾಮ :** ಹೆಸರು ಅಥವಾ ವರ್ಣನೆ. 'ನಾಮಕ್ಕೆ ಬಾರದ ಬಯಲು' (೯:೨೪೩) ಎಂಬಲ್ಲಿ ಬಯಲಿನಂತೆ ರೂಪವಿಲ್ಲದ ಪರಶಿವನು ವರ್ಣನೆಗೆ ಸಿಕ್ಕುವುದಿಲ್ಲ ಎಂಬರ್ಥವಿದೆ.

**ನಾಮನಷ್ಟಭೇದ :** ಸೃಷ್ಟಿಯಲ್ಲಿರುವ ಪ್ರತಿಯೊಂದು ವಸ್ತುವಿಗೂ ನಾಮರೂಪಗಳಿರುತ್ತವೆ. ಐಕ್ಯಸ್ಥಲವನ್ನು ಮುಟ್ಟಿದವನು ತನ್ನ ವೈಶಿಷ್ಟ್ಯವನ್ನು ಕಳೆದುಕೊಳ್ಳುವುದರಿಂದ ಅವನಿಗೆ ನಾಮರೂಪವಿಲ್ಲವಾಗುತ್ತದೆ. ನಾಮನಷ್ಟವಾಗುವ ರಹಸ್ಯವನ್ನು ತಿಳಿಯುವುದೇ ನಾಮನಷ್ಟಭೇದ. (೮:೨೪)

**ನಾಮ ನಿರ್ಲೇಪ :** ಐಕ್ಯಸ್ಥಲ ಮುಟ್ಟಿದವನಿಗೆ ಜ್ಞಾತೃ ಜ್ಞೇಯಗಳ ಭೇದವಿಲ್ಲವಾಗುವುದರಿಂದ, ತಾನು ಇಂಥವನು ಎಂಬ ಕುರುಹು ನಷ್ಟವಾಗುತ್ತದೆ. ಅಲ್ಲದೆ ಅವನಿಗೆ ಪುನರ್ಜನ್ಮವಿಲ್ಲವಾದುದರಿಂದ ಕರ್ಮಮಾಡಿದವನಿಗೆ ಬರುವ ನಾಮರೂಪುಗಳು ಅವನಿಗೆ ಇಲ್ಲವಾಗುತ್ತವೆ.

**ನಾಮರೂಪು :** ಬುದ್ಧಿಗೋಚರವೂ ಇಂದ್ರಿಯಗೋಚರವೂ ಆದ ವಸ್ತು. ಒಂದೇ ಮಣ್ಣು ವಿವಿಧ ರೂಪಗಳನ್ನು ಗಾತ್ರ ಮತ್ತು ಆಕಾರಗಳನ್ನು ಪಡೆದಾಗ, ಅದಕ್ಕೆ ನಾಮರೂಪ ಬರುತ್ತವೆ ಎಂದರ್ಥ. ಅದೇ ರೀತಿ, ಪರಶಿವನು ಶೂನ್ಯಸ್ಥಿತಿಯಲ್ಲಿ ನಾಮರೂಪರಹಿತ, ಅವನೇ ಸ್ವ-ಇಚ್ಛೆಯಿಂದ ಪ್ರಪಂಚವಾದಾಗ, ಅವನಿಗೆ ನಾಮರೂಪಗಳು ಬರುತ್ತವೆ.

**ನಾಮರೂಪು ಕ್ರಿಯಾಭೇದದಿಂ ತೋರುವ ಜಗ :** ಪ್ರಪಂಚಕ್ಕೆ ನಾಮ, ರೂಪ ಮತ್ತು ಕ್ರಿಯೆಗಳುಂಟು ಹಾಗೂ ಅವೆಲ್ಲವೂ ಕಾಲಕಾಲಕ್ಕೆ ಬದಲಾವಣೆಗೆ ಒಳಪಡುತ್ತವೆ. ಆದುದರಿಂದ ಅಂಥ ಜಗವು ಕೇವಲ ತೋರಿಕೆಯೇ ಹೊರತು, ಸತ್ಯವಲ್ಲ.

**ನಾಮಶೂನ್ಯ :** ಪ್ರತಿಯೊಂದು ವಸ್ತುವಿಗೂ ಒಂದು ಹೆಸರು ಇರುತ್ತದೆ. ಯಾವುದೇ ವಸ್ತುವಿನ ಜ್ಞಾನ ಪಡೆಯುವಲ್ಲಿ ನಾನು ಜ್ಞಾತೃ ಮತ್ತು ಆ ವಸ್ತು ಜ್ಞೇಯ ಎಂಬ ಭೇದವು ಒಳಗೊಂಡಿರುತ್ತದೆ. ಆದರೆ ಲಿಂಗಾಂಗ ಸಾಮರಸ್ಯದಲ್ಲಿ ಜ್ಞಾತೃವಿನ ಜ್ಞಾನವಾಗಲಿ

ವಸ್ತುವಿನ ಮತ್ತು ಅದರ ಹೆಸರಿನ ಜ್ಞಾನವಾಗಲಿ ಇರುವುದಿಲ್ಲ. ಲಿಂಗಾಂಗ ಸಾಮರಸ್ಯ ಪಡೆದವನಿಗೆ ನಾನು ಪೂಜಕ, ಲಿಂಗ ಪೂಜ್ಯ ಎಂಬ ನಾಮಭೇದ ನಾಸ್ತಿಯಾಗುತ್ತದೆ. (೭:೧೧೨೪)

**ನಾಸಿಕ ರೋಗ :** ನಾಸಿಕ (ಮೂಗು) ವಾಸನೆ ಪಡೆಯುವ ಇಂದ್ರಿಯ. ಆದರೆ ಸಿದ್ಧರಾಮನ ಈ ವಚನದಲ್ಲಿ (೪:೫೨೧) ವಾಸನೆ ಎಂಬ ಪದವು ಮೂಗು ಮಾಡುವ ಕೆಲಸ ಎಂಬರ್ಥದಲ್ಲಿ ಪ್ರಯೋಗವಾಗದೆ, ಹಳೆಯ ಕೆಟ್ಟ ಸಂಸ್ಕಾರಗಳು ಎಂಬರ್ಥದಲ್ಲಿ ಪ್ರಯೋಗವಾಗಿದೆ. ನಾಸಿಕ ರೋಗವು ಕೆಟ್ಟ ಸಂಸ್ಕಾರಗಳ ಸಂಕೇತ. ಹಳೆಯ ಕೆಟ್ಟ ಸಂಸ್ಕಾರಗಳು ಇರುವವರೆಗೂ ನಮಗೆ ಯೋಗ ಮಾಡಲು ಮತ್ತು ಅದರಿಂದ ಮಾನಸಿಕ ಶಾಂತಿ ಪಡೆಯಲು ಸಾಧ್ಯವಿಲ್ಲ.

**ನಾಸ್ತಿಕ :** ಸಾಮಾನ್ಯವಾಗಿ ಭಾರತೀಯ ತತ್ವಶಾಸ್ತ್ರದಲ್ಲಿ ಇದಕ್ಕೆ ಮೂರು ಅರ್ಥಗಳಿವೆ. ೧. ವೇದನಿಂದಕರೆಲ್ಲ ನಾಸ್ತಿಕರು. ೨. ಆತ್ಮ, ಪರಮಾತ್ಮ, ಪುನರ್ಜನ್ಮ, ಸ್ವರ್ಗ ನರಕಗಳಾವುವೂ ಇಲ್ಲ ಎನ್ನುವವರು ನಾಸ್ತಿಕರು. ೩. ಪರಮಾತ್ಮ ಇಲ್ಲ ಎನ್ನುವವರು ನಾಸ್ತಿಕರು. ಇತ್ತೀಚೆಗೆ ಹೆಚ್ಚಾಗಿ ನಾಸ್ತಿಕ ಪದವು ಮೂರನೆ ಅರ್ಥದಲ್ಲಿ ಪ್ರಯೋಗವಾಗುತ್ತಿದೆ. ವಚನಕಾರರು ವೇದನಿಂದಕರಾದರೂ ನಿರೀಶ್ವರವಾದಿಗಳಲ್ಲ.

**ನಾಹಂ :** ಐಕ್ಯಸ್ಥಿತಿಯಲ್ಲಿ ನಾನು (ಅಹಂ) ಎಂಬ ಅರಿವು ಇರುವುದಿಲ್ಲ. ಅನಂತರವೂ ಸಹ ಅನುಭಾವಿಯು ತಾನು ಶಿವನಿಗೆ ಅಧೀನವಾಗಿದ್ದೇನೆಂಬ ಭಾವ ನೆಲೆಯೂರಿ, ತಾನೆಂಬ ಭಾವ ಅಳಿಸಿಹೋಗುತ್ತದೆ. ನ (ಇಲ್ಲ) ಅಹಂ (ನಾನು) ಎಂಬ ಭಾವ ಅವನಿಗೆ ಮಾತ್ರ ಸಾಧ್ಯ.

**ನಿಗಮಾತೀತ :** ತಂತ್ರ ಅಥವಾ ಆಗಮಗಳ ಮೂಲಕ ತಿಳಿದುಕೊಳ್ಳಲು ಸಾಧ್ಯವಾಗದಂಥ ಪರಶಿವ.

**ನಿಜತತ್ವ :** ತತ್ವಗಳನ್ನು ನಿಯಂತ್ರಿಸುವ ಹಾಗೂ ಬದಲಾಗದ ತತ್ವ, ಪರಶಿವ. (ನೋಡಿ:ತತ್ವ)

**ನಿಜತತ್ವಶಾಂತಿ :** ಶಿವಾನುಭವದಿಂದುಂಟಾದ ಶಾಂತಿ, ಬದಲಾಗದ ಅಥವಾ ನಶಿಸದ ಶಾಂತಿ. (೯:೭೬)

**ನಿಜನಿತ್ಯ :** ಪರಶಿವನು ಶಾಶ್ವತ, ನಿತ್ಯ. ಆದರೆ ಶಕ್ತಿಯು ಅವನ ಅವಿಭಾಜ್ಯ ಅಂಗವಾದರೂ ಅದು ನಿತ್ಯವಲ್ಲ. ಏಕೆಂದರೆ, ಸೃಷ್ಟಿಪೂರ್ವದಲ್ಲಿ ಅದು ಅವ್ಯಕ್ತವಾಗಿರುತ್ತದೆ.

**ನಿಜನಿಳಯ :** ಮೂಲಸ್ಥಾನ. ಮೋಕ್ಷಪಡೆದವನು ಹಿಂತಿರುಗಿ ಪರಶಿವನ ಬಳಿ ಬರುವುದುರಿಂದ, ಪರಶಿವನೇ ನಿಜನಿಳಯ. ಅದೇ ರೀತಿ ಪ್ರಳಯವಾದಾಗ ಚರಾಚರವಸ್ತುಗಳೆಲ್ಲ ಹಿಂತಿರುಗಿ ಪರಶಿವನೆಂಬ ಮೂಲಸ್ಥಾನಕ್ಕೆ ಹಿಂದಿರುಗುತ್ತವೆ.

**ನಿಜಪದ :** ಮೂಲಸ್ಥಿತಿಯಲ್ಲಿ ಕುಂಡಲಿಶಕ್ತಿಯು ಮೂಲಾಧಾರ ಚಕ್ರದಲ್ಲಿ ಅಧೋಮುಖವಾಗಿದ್ದು, ಅದನ್ನು ಊರ್ಧ್ವಮುಖವಾಗಿ ಚಲಿಸುವಂತೆ ಮಾಡಿದಾಗ, ಅದು

ಉಳಿದ ಐದು ಚಕ್ರಗಳಲ್ಲಿ ಹಾದು ಕೊನೆಗೆ ಸಹಸ್ರಾರ ಪದ್ಮದಲ್ಲಿ ಅಥವಾ ಬ್ರಹ್ಮರಂಧ್ರದಲ್ಲಿ ನೆಲೆಸುತ್ತದೆ. ಇದನ್ನೆ ವಚನಕಾರರು ತಮ್ಮ ಪರಿಭಾಷೆಯಲ್ಲಿ ಹೀಗೆ ಹೇಳುತ್ತಾರೆ : ಸಾಧಕನು ಮೊದಲು ತನ್ನ ಆಚಾರಲಿಂಗವನ್ನು ಜಾಗೃತಗೊಳಿಸಿ, ಅನಂತರ ಉಳಿದ ನಾಲ್ಕು ಲಿಂಗಗಳನ್ನೂ ಜಾಗೃತಗೊಳಿಸಿ ಕೊನೆಯಲ್ಲಿ ಐಕ್ಯವಾಗುತ್ತಾನೆ. ಕುಂಡಲಿ ಶಕ್ತಿ ಸಹಸ್ರಾರವನ್ನು ಸೇರುವುದೇ ಅಥವಾ ಅಂಗನು ಲಿಂಗವನ್ನು ಕೂಡುವುದೇ ಅದರ ನಿಜವಾದ ಸ್ಥಿತಿ. ಸಂಸಾರ ಸ್ಥಿತಿಯಲ್ಲಿ ಅಂಗನು ತಾನು ಬೇರೆ ಲಿಂಗ ಬೇರೆ ಎಂಬ ಭ್ರಮೆಯಲ್ಲಿರುತ್ತಾನೆಯೇ ಹೊರತು, ವಾಸ್ತವಿಕವಾಗಿ ಬೇರೆಯಾಗಿರುವುದಿಲ್ಲ. ಐಕ್ಯಸ್ಥಿತಿಯನ್ನು ತಲುಪಿದಾಗ ಈ ಭ್ರಮೆ ಮರೆವು ಹೋಗಿ, ಅರಿವು ಉಂಟಾಗಿ, ನಿಜಪದದ ಅರಿವಾಗುತ್ತದೆ.

**ನಿಜಭಕ್ತ :** ಸಹಜಭಕ್ತ. ಜನರ ಗುಣಗಳನ್ನು ನೋಡಿ ಹಾಡಿ ಹೊಗಳುವವರಲ್ಲಿ ಹಾಗೂ ದೋಷಗಳನ್ನು ನೋಡಿ ತೆಗಳುವವರಲ್ಲಿ ಹೇಗೆ ಏಕಮನ ಇಲ್ಲವೋ ಹಾಗೆಯೇ ಭಕ್ತನಲ್ಲಿ ಏಕೋಭಾವ ಇಲ್ಲ, ಏಕೆಂದರೆ ಅವನು ಸುಖಬಂದಾಗ ಶಿವನನ್ನು ಪೂಜಿಸಿ, ಕಷ್ಟಬಂದಾಗ ಶಿವನನ್ನು ದೂಷಿಸುತ್ತಾನೆ. ಆದರೆ ನಿಜಭಕ್ತ ನಿರುಪಾಧಿಕವಾಗಿ ಶಿವನನ್ನು ಪೂಜಿಸುತ್ತಾನೆ. (೧:೨೮೭)

**ನಿಜವಸ್ತು :** ಮೂಲ ಸ್ವರೂಪದಲ್ಲಿ ಯಾವ ಬದಲಾವಣೆಯೂ ಆಗದ ವಸ್ತು. ಶಿವಜಗವಾಗಲೂ ಬಲ್ಲ ಜಗವಾಗದಿರಲೂ ಬಲ್ಲ ಎಂದು ಶರಣರು ಹೇಳಿದರೂ ಶಿವನಲ್ಲಾಗುವ ಬದಲಾವಣೆಗಳಿಗೂ ಪ್ರಪಂಚದಲ್ಲಾಗುವ ಬದಲಾವಣೆಗೂ ಒಂದು ದೊಡ್ಡ ವ್ಯತ್ಯಾಸವಿದೆ. ವಿಶ್ವಕ್ಕೆ ಹುಟ್ಟು, ಸ್ಥಿತಿ ಮತ್ತು ಪ್ರಲಯವೆಂಬ ಅವಸ್ಥೆಗಳಿವೆ. ಪರಶಿವನಿಗೆ ಅಂಥ ಯಾವ ಅವಸ್ಥೆಯೂ ಇಲ್ಲ. ಅದುದರಿಂದ ಪರಶಿವನೇ ನಿಜವಾದ ವಸ್ತು.

**ನಿಜಾವಧಾನ :** ನಿಜಾವಧಾನವೆಂದರೆ ತನ್ನ ನಿಜವಾದ ಸ್ವರೂಪವನ್ನು ಎಚ್ಚರಿಕೆಯಿಂದ ಅರಿತುಕೊಳ್ಳುವುದು ಎಂದರ್ಥ. ಇದು ಇತರರಿಂದ ಅಥವಾ ಗ್ರಂಥಗಳಿಂದ ಲಭ್ಯವಾಗುವ ಅರಿವಲ್ಲ. ಇದು ಅನುಭಾವದಲ್ಲಿ ಸಾಧಕನಿಗೆ ತಾನು ಅತ್ಯಂತ ಪ್ರಕಾಶಮಯವಾದ ಪರಶಿವನ ಒಂದು ಅವಿಭಾಜ್ಯ, ಗುರುತಿಸಲಾಗದ ಭಾಗ ಎಂಬ ಅರಿವು ಮೂಡುತ್ತದೆ. ಅಲ್ಲದೆ, ತಾನು ಇದಕ್ಕಿಂತ ಹೆಚ್ಚೇನೂ ಸಾಧಿಸಬೇಕಾಗಿಲ್ಲ, ತಾನಾಗಲೇ ಅತ್ಯಂತ ಹೆಚ್ಚಿನ ಮೌಲ್ಯವುಳ್ಳ ಗುರಿಯನ್ನು ಸಾಧಿಸಿದ್ದೇನೆ ಎಂಬ ಸಾರ್ಥಕ ಮನೋಭಾವ ಹಾಗೂ ತೃಪ್ತಿ, ಶಾಂತಿ, ಅವನಿಗೆ ಲಭಿಸುತ್ತದೆ.

**ನಿಜೈಕ್ಯ :** ಆತ್ಮವು ಮೂಲತಃ ಶಿವನ ಭಾಗವೇ ಆಗಿರುವದರಿಂದ, ಅದು ನಿಜೈಕ್ಯನೆನಿಸಿಕೊಳ್ಳುತ್ತದೆ. ಸಂಸಾರ ಬಂಧನದಲ್ಲಿರುವವರು ಮರೆವಿನಿಂದಾಗಿ ತಾವು ಶಿವನಿಂದ ಭಿನ್ನರೆಂದು ತಿಳಿದುಕೊಂಡಿದ್ದಾರೆ. ಮತ್ತೆ ಐಕ್ಯತೆಯನ್ನು ಪಡೆಯುವುದು

ಹೊಸದನ್ನು ಪಡೆದಂತೇನಲ್ಲ. ಕಳೆದುಕೊಂಡಿದ್ದನೆಂದು ಭಾವಿಸಲಾಗಿದ್ದ ಐಕ್ಯತೆಯನ್ನು (ನಿಜೈಕ್ಯತೆಯನ್ನು) ಮತ್ತೆ ಪಡೆದಂತೆ, ಅಷ್ಟೆ. ನಿಜೈಕ್ಯತೆಯನ್ನು ಪಡೆದವನು ನಿಜೈಕ್ಯ.

**ನಿತ್ಯ :** ಇದಕ್ಕೆ ಕನಿಷ್ಠ ಎರಡು ಅರ್ಥಗಳಿವೆ. ೧. ನಿತ್ಯ ಎಂದರೆ ಆದಿಯಿಲ್ಲದ ಮತ್ತು ಅಂತ್ಯವಿಲ್ಲದ ಎಂಬುದು ಒಂದರ್ಥ. ಈ ಅರ್ಥದಲ್ಲಿ ಈ ಪದವು ಪರಶಿವನಿಗೆ ಮಾತ್ರ ಅನ್ವವಾಗುತ್ತದೆ. ಆತ್ಮ, ಮಾಯೆ, (ಶಕ್ತಿ) ಮುಂತಾದವುಗಳು ಬಹಳ ದೀರ್ಘ ಇದ್ದರೂ ಅವು ನಿತ್ಯವಲ್ಲ. ಸೃಷ್ಟಿಗಿಂತ ಮೊದಲು ಮಾಯೆಗೆ ಅಸ್ತಿತ್ವವಿರುವುದಿಲ್ಲವಾದುದರಿಂದಲೂ, ಪ್ರಲಯದ ನಂತರ ಮತ್ತೆ ಅದು ಶಿವನಲ್ಲೆ ಅಂತರ್ಗತವಾಗುದುದರಿಂದಲೂ, ಅದು ನಿತ್ಯವಲ್ಲ. ಅದೇ ರೀತಿ ಬ್ರಹ್ಮ, ವಿಷ್ಣು ರುದ್ರಾದಿಗಳೂ ಸಹ ನಿತ್ಯ ಅಲ್ಲ. ಆದರೆ ಪ್ರಲಯ, ಸೃಷ್ಟಿ ಇತ್ಯಾದಿಗಳನ್ನು ಮಾಡುವ ಪರಶಿವ ಮಾತ್ರ ಯಾವಾಗಲೂ ಇರುವುದರಿಂದ ಅವನು ನಿತ್ಯ. ಶಾಶ್ವತ.

೨. ನಿತ್ಯವೂ ಮಾಡುವ ವ್ರತವು ನಿತ್ಯನೇಮ ಅಥವಾ ನಿತ್ಯ ಎನಿಸಿಕೊಳ್ಳುತ್ತದೆ. ಕೆಲವು ವ್ರತ ಅಥವಾ ನೇಮಗಳು ವಾರ ಅಥವಾ ತಿಂಗಳಿಗೊಮ್ಮೆ ಮಾಡಲ್ಪಟ್ಟರೆ ಮತ್ತೆ ಕೆಲವು ವ್ರತಗಳು (ನೇಮಗಳು) ದಿನನಿತ್ಯವೂ ಮಾಡಲ್ಪಡಬೇಕು.

ಆದರೆ ಒಂದು ನೇಮವನ್ನು ನಿತ್ಯ ಮಾಡುವುದಾದರೂ ಅದನ್ನು ಆ ದಿನವೆಲ್ಲಾ ಮಾಡುವುದಿಲ್ಲ. ಉದಾಹರಣೆಗೆ ಪ್ರತಿದಿನ ತಣ್ಣೀರು ಸ್ನಾನ ಮಾಡಿ ಪೂಜೆಮಾಡುತ್ತೇನೆಂಬ ನಿತ್ಯ ನೇಮಕ್ಕೆ ೨೪ ಗಂಟೆಯೂ ತಣ್ಣೀರು ಸ್ನಾನ ಮಾಡಬೇಕೆಂಬ ಅರ್ಥವಿಲ್ಲ. ಸ್ನಾನ ಮಾಡುವುದೇ ಆದರೆ ತಣ್ಣೀರಲ್ಲಿ ಮಾತ್ರ ಮಾಡುತ್ತೇನೆ ಮತ್ತು ನಿತ್ಯವೂ ಮಾಡುತ್ತೇನೆ ಎಂಬರ್ಥ ಅದಕ್ಕಿದೆ. ಆದರೆ ಪರಶಿವ ನಿತ್ಯ ಎಂದರೆ ದಿನವೂ ಪರಶಿವ ಇರುತ್ತಾನೆ ಎಂಬರ್ಥವಿರದೆ, ಪ್ರತಿಕ್ಷಣವೂ ಇರುತ್ತಾನೆ, ಅವನ ಅಸ್ತಿತ್ವಕ್ಕೆ ಕೊನೆ ಮೊದಲಿಲ್ಲ ಎಂಬರ್ಥವಿದೆ.

**ನಿತ್ಯ ಅನಿತ್ಯ :** ಲಿಂಗಾಂಗ ಸಾಮರಸ್ಯ ನಿತ್ಯ, ಶಾಶ್ವತ. ಅಂಗಸುಖ ಕ್ಷಣಿಕ ಅನಿತ್ಯ. ನಿತ್ಯವ ಹಿಡಿಯದೆ, ಅನಿತ್ಯವ ಹಿಡಿಯುವುದು ಶರಣರಿಗೆ ಅಸ್ವೀಕಾರಾರ್ಹ. (೧೧:೧೧೮)

**ನಿತ್ಯತ್ವಾನುಭಾವ ಪ್ರಕಾಶ :** ತನ್ನ ಅನುಭಾವದಲ್ಲಿ ಚಿತ್ ಪ್ರಕಾಶವನ್ನು ಕಾಣುವ ಸಾಧಕನಿಗೆ ತಾನು ನಿತ್ಯವೆಂಬ ಭಾವ ಉಂಟಾಗುವುದಲ್ಲದೆ, ತಾನು ಪ್ರಸಾದಿ ಮತ್ತು ತಾನು ಸಾಕ್ಷಾತ್ಕಾರಿಸಿಕೊಂಡ ಲಿಂಗ ಗುರುಲಿಂಗ ಎಂಬ ಭೇದಭಾವ ನಾಶವಾಗುತ್ತದೆ.

**ನಿತ್ಯನೇಮ :** ನಿತ್ಯ ಆಚರಿಸುವ ವ್ರತ. ನೇಮ ಅಥವಾ ವ್ರತವು ನಿತ್ಯವೇ ಆಗಿರಲಿ ಸಾಂದರ್ಭಿಕವೇ ಆಗಿರಲಿ, ಅದು ವೃತಿಯನ್ನು ಶುದ್ಧಗೊಳಿಸುತ್ತದೆ. ಮಾಘ ಮಾಸದಲ್ಲಿ ನಿತ್ಯವೂ ಒದ್ದೆ ಬಟ್ಟೆಯಲ್ಲಿ ಪೂಜೆ ಮಾಡುತ್ತೇನೆ ಎಂಬ ವ್ರತದ ಹಿಂದೆ, ಆ ತಿಂಗಳು ದೈಹಿಕ ಸುಖವನ್ನೇ ತ್ಯಾಗ ಮಾಡುತ್ತೇನೆ, ಹಾಗೂ ಅಷ್ಟರ ಮಟ್ಟಿಗೆ ಶುದ್ಧನಾಗುತ್ತೇನೆ, ಎಂಬ ಉದ್ದೇಶವಿದೆ. (ನೋಡಿ : ವ್ರತ ಶೀಲ ನೇಮ)

**ನಿತ್ಯ ಪ್ರಸಾದಿ :** ವಿಷಯಗಳನ್ನೂ ದೇಹೇಂದ್ರಿಯಾದಿಗಳನ್ನೂ ಅರ್ಪಿಸಿದವನು ಆಗೊಮ್ಮೆ ಈಗೊಮ್ಮೆ ಆಹಾರವನ್ನು ಅರ್ಪಿಸಬೇಕಾಗಿಲ್ಲ, ಅಥವಾ ಅವನು ತಾತ್ಕಾಲಿಕ ಪ್ರಸಾದಿಯಲ್ಲ. ಅವನು ನಿತ್ಯ (ನಿಚ್ಚ) ಪ್ರಸಾದಿ.

**ನಿತ್ಯ ಸುಖ :** ನಾವು ಇಂದ್ರಿಯ ಸುಖವನ್ನು ಇಂದ್ರಿಯ ಮತ್ತು ವಸ್ತುಗಳಿಗಿರುವ ಸಂಬಂಧ ಇರುವತನಕ ಅನುಭವಿಸುತ್ತೇವೆ. ಇಂತಹ ಸಂಬಂಧ ಕ್ಷಣಿಕವೆಂದು ಹೇಳಬೇಕಾಗುತ್ತದೆ. ಆದರೆ ಅನುಭಾವದಲ್ಲಿ ಜೀವನು ಶಿವನೊಂದಿಗೆ ಐಕ್ಯವಾದಾಗ ಉಂಟಾಗುವ ಸುಖ ನಿತ್ಯ. ಏಕೆಂದರೆ ಶಿವಜೀವರ ಸಂಬಂಧವೂ ನಿತ್ಯ. ಜೀವನು ತಾನು ಸಾಂಸಾರಿಕ ಜೀವನದಲ್ಲಿ ಈ ನಿತ್ಯ ಸಂಬಂಧವನ್ನೂ ನಿತ್ಯಸುಖವನ್ನೂ ಮರೆತಿದ್ದ. ಅನುಭಾವದಲ್ಲಿ ಅದನ್ನು ಮರಳಿ ಪಡೆದನಷ್ಟೇ ವಿನಾ, ಅದನ್ನು ಹೊಸದಾಗಿ ಪಡೆಯಲಿಲ್ಲ. (ಲ:೧೯೬೧)

**ನಿತ್ಯಾನಂದ :** ಅನುಭಾವದಲ್ಲಿ ಪಡೆಯುವ ಆನಂದವು ತಾತ್ಕಾಲಿಕವಲ್ಲ. ಮೊದಲು ಕೆಲವು ಸಾರಿ ಸಮಾಧಿಸ್ಥಿತಿಯಲ್ಲಿರುವವರೆಗೆ ಮಾತ್ರ ಆನಂದವು ಅನುಭವಿಸಲ್ಪಟ್ಟರೆ, ಕೊನೆಯಲ್ಲಿ ಅದು ಶಾಶ್ವತವಾಗಿ ನೆಲೆಯೂರುತ್ತದೆ. ಅಂದರೆ, ಹಿಂದಿನ ಕರ್ಮಗಳು ಒಂದೊಂದಾಗಿ ಸುಟ್ಟು ಹೋಗುವವರೆಗೂ ಅದು ತಾತ್ಕಾಲಿಕವಾಗಿ ಕಾಣಿಸಿಕೊಂಡು, ಎಲ್ಲ ಕರ್ಮಗಳೂ ಪೋದ ಮೇಲೆ ಅಂಗದಲ್ಲಿ ಶಾಶ್ವತವಾಗಿ ನೆಲೆಸುತ್ತದೆ. ಇದರಿಂದ ವಚನಕಾರರು ಆನಂದವು ಅಂಗದ (ಆತ್ಮನ) ಶಾಶ್ವತ ಗುಣವೆಂದೂ, ಆಗಂತುಕ ಗುಣವಲ್ಲವೆಂದೂ, ತೀರ್ಮಾನಿಸಿದ್ದಾರೆ. ಪರಶಿವನು ಹೇಗೆ ಸತ್ತು ಚಿತ್ತು ಆನಂದನೋ ಹಾಗೆಯೇ ಅವನ ಅಂಗ (ಭಾಗ)ವಾದ ಅಂಗನೂ ಚಿತ್‌ಸ್ವರೂಪನೂ ಅನಂದಮಯನೂ ಆಗಿದ್ದಾನೆ. ಹೀಗೆ ಅವನ ಸ್ವರೂಪವೇ ಆನಂದಮಯವಾದುದರಿಂದ ಅವನು ನಿತ್ಯಾನಿಂದ. ಅವನು ನಿತ್ಯಾನಂದನಾದರೂ ಕರ್ಮಾದಿಗಳಿಂದಾಗಿ ತನ್ನ ಆನಂದ ಸ್ವರೂಪವನ್ನು ಗುರುತಿಸಿರಲಿಲ್ಲ.

**ನಿರಂಗ :** ೧. ತನ್ನ ಪ್ರತ್ಯೇಕತಾ ಭಾವವನ್ನು ಮರೆತ ಅಂಗನು ತಾನು ಅಂಗ (ಪ್ರತ್ಯೇಕ)ನಲ್ಲವೆಂದೂ ನಿರಂಗವೆಂದೂ ತಾನು ಪರಶಿವನಲ್ಲಿ ಐಕ್ಯವಾಗಿದ್ದಾನೆಂದೂ ತಿಳಿಯುತ್ತಾನೆ.

೨. ತಾನು ದೇಹ (ಅಂಗ) ಅಲ್ಲವೆಂದೂ, ಅಥವಾ ತನಗೆ ದೇಹಭಾವ ಇಲ್ಲವೆಂದೂ ತಿಳಿಯುವ ಲಿಂಗೈಕ್ಯ. (ಜ:೯೨೪)

**ನಿರಂಜನ :** ಯಾವುದೇ ದೋಷ ಅಥವಾ ಮಲ ಇಲ್ಲದವನು, ಪರಶಿವ. ಹೊಗೆ, ಧೂಳು, ಮುಂತಾದ ಮಲಿನವಸ್ತುಗಳು ಆಕಾಶದಲ್ಲಿದ್ದರೂ, ಆಕಾಶವು ಹೇಗೆ ಯಾವಾಗಲೂ ಶುದ್ಧವೋ, ಹಾಗೆಯೇ ಅನೇಕ ದೋಷಪೂರಿತ ವಸ್ತುಗಳು ಪರಶಿವನಲ್ಲಿದ್ದರೂ, ಅವಾವುವೂ ಅವನನ್ನು ಕಲುಷಿತಗೊಳಿಸುವುದಿಲ್ಲವಾದುದರಿಂದ, ಅವನು ನಿರಂಜನ.

**ನಿರವಯ, ನಿರವಯುವ :** ಇಡೀ ವಿಶ್ವದಲ್ಲಿ ಅವಯವ ಇಲ್ಲದ ಒಂದೇ ವಸ್ತುವೆಂದರೆ ಪರಶಿವ. ಅವನು ಕೇವಲ ಚಿತ್‌ಸ್ವರೂಪನಾದುದರಿಂದ, ಚಿತ್ತಿನಲ್ಲಿ ಭಾಗಗಳಿರಲು

ಸಾಧ್ಯವಿಲ್ಲ. ಈ ವರ್ಣನೆ ಪರಶಿವನ ಸೃಷ್ಟಿ ಪೂರ್ವ ಸ್ಥಿತಿಗೆ ಮಾತ್ರ ಅನ್ವಯಿಸುತ್ತದೆ. ಸೃಷ್ಟಿಯಾದ ನಂತರ ಅವನು ಶಕ್ತಿವಿಶಿಷ್ಟಶಿವನೆನಿಸಿಕೊಳ್ಳುವುದರಿಂದ, ಹಾಗೂ ಶಕ್ತಿ ವಿಶಿಷ್ಟ ಶಿವನಲ್ಲಿ ಅಂದರೆ, ಶಿವನುಳ್ಳ ಪ್ರಪಂಚದಲ್ಲಿ ಭಾಗಳಿರುವುದರಿಂದ, ಅವನು ನಿರವಯವ ಎನಿಸಿಕೊಳ್ಳುವುದಿಲ್ಲ.

**ನಿರವಯಲಿಂಗ :** ಲಿಂಗವೆಂದರೆ ಇಷ್ಟಲಿಂಗ ಅಥವಾ ಸ್ಥಾವರಲಿಂಗವೆಂದು ಅರ್ಥೈಸಿದರೆ ಲಿಂಗಕ್ಕೆ ಅವಯವಗಳಿರುತ್ತವೆ. ಆದರೆ ನಿಜವಾದ ಅರ್ಥದಲ್ಲಿ ಲಿಂಗ ಎಂಬ ಪದವು ಚಿತ್ತು, ಅಥವಾ ಅರಿವು ಅಥವಾ ಪರವಸ್ತುವಿಗೆ ಅನ್ವಯವಾಗುತ್ತದೆ. ಚಿತ್ತು ಕೆಲವು ಕಡೆ ಗಟ್ಟಿಯಾಗಿರುವುದಾಗಲಿ ಕೆಲವು ಕಡೆ ತೆಳ್ಳಗಿರುವುದಾಗಲಿ ಇರಲು ಸಾಧ್ಯವಿಲ್ಲ, ಅದೇ ರೀತಿ, ಭೌತವಸ್ತುಗಳಿಗಿರುವಂತೆ ಚಿತ್ತಿಗೆ ಭಾಗ (ಅವಯವ)ಗಳಿರುವುದಿಲ್ಲ. ಆದುದರಿಂದ ಲಿಂಗವು (ಚಿತ್ತು) ನಿರವಯವಿ. (ಅ:೧೮೬೬)

**ನಿರಹಂಕಾರ ಲೇಪ ಗ್ರಾಹಕ ಪ್ರಸಾದಿ :** ಪ್ರಸಾದಿ ಸ್ಥಲದಲ್ಲಿ ಸಾಧಕನು ಅಗ್ನಿ ಎಂಬ ತನ್ನ ಅಂಗದಲ್ಲಿರುವ ನಿರಹಂಕಾರ ಎಂಬ ಹಸ್ತದಿಂದ ಶಿವಲಿಂಗದ ಬಾಯಿಯಾದ ನೇತ್ರಗಳಿಗೆ ರೂಪವನ್ನು ಅರ್ಪಿಸುತ್ತಾನೆ. ಅಂದರೆ, ತನ್ನ ಕಣ್ಣುಗಳಲ್ಲೆ ಅವನು ಶಿವಲಿಂಗವನ್ನು ಸ್ಥಾಪಿಸಿಕೊಂಡಿರುವದರಿಂದ, ಅವನ ಕಣ್ಣುಗಳಿಗೆ ಬರುವ ರೂಪವೆಲ್ಲವೂ ಅವುಗಳಲ್ಲಿರುವ ಶಿವಲಿಂಗಕ್ಕೆ ಅರ್ಪಿತವಾದಂತೆಯೇ. ಹೀಗೆ ಪ್ರಸಾದಿಯು ನಿರಹಂಕಾರವನ್ನು ಲೇಪಿಸಿಕೊಂಡು ಶಿವಲಿಂಗವನ್ನು ಗ್ರಹಿಸಿರುವುದರಿಂದ, ಅವನನ್ನು ನಿರಹಂಕಾರ ಲೇಪ ಪ್ರಸಾದಿ ಎಂದು ಕರೆಯಲಾಗುತ್ತದೆ. ಅವನು ಮುಂದೆ ಜಂಗಮಲಿಂಗದಲ್ಲಿ ಐಕ್ಯನಾಗುತ್ತಾನೆ.

**ನಿರಾಕಾರ :** ಶಂಕರಾಚಾರ್ಯರ ಅದ್ವೈತದಲ್ಲಿ ನಿರಾಕಾರ ಎಂಬ ವಿಶೇಷಣ ಪರಮಾತ್ಮನಿಗೆ ಅನ್ವಯವಾದಾಗ, ಪರಮಾತ್ಮನಿಗೆ ಯಾವುದೇ ಆಕಾರ, ಯಾವುದೇ ಗುಣ ಇಲ್ಲವೆಂದರ್ಥ. ಆದರೆ ವಚನಗಳಲ್ಲಿ ಬರುವ ನಿರಾಕಾರ ಎಂಬ ಪದಕ್ಕೆ ಬೇರೆ ಅರ್ಥವಿದೆ. ೧. ಪರಶಿವ ಶೂನ್ಯಸ್ಥಿತಿಯಲ್ಲಿದ್ದಾಗ ಅವನಿಗೆ ಯಾವುದೇ ಆಕಾರವಿಲ್ಲ. ಆದರೆ ಅವನು ಶೂನ್ಯಸ್ಥಿತಿಯನ್ನು ಮೀರಿ, ಸೃಷ್ಟಿಯನ್ನು ಮಾಡಿದಾಗ, ಅಥವಾ ತಾನೇ ಜಗತ್ತಾಗಿ ಪರಿಣಮಿಸಿದಾಗ, ಅವನಿಗೆ ಜಗತ್ತೇ ಒಂದು ಆಕಾರವಾಗುತ್ತದೆ. ಆದರೆ ಜಗತ್ತೇ ಅವನ ನಿತ್ಯ ಆಕಾರವಲ್ಲ. ಏಕೆಂದರೆ ಶಿವ ಜಗವಾಗಲೂ ಬಲ್ಲ, ಜಗವಾಗದಿರಲೂ ಬಲ್ಲ.

**ನಿರಾಕಾರದ ಶಕ್ತಿ :** ಪರಶಿವ ಮತ್ತು ಅವನ ಶಕ್ತಿಯನ್ನು ಪ್ರತ್ಯೇಕವಾಗಿ ಚಿಂತಿಸಿದಾಗ, ಪರಶಿವ ನಿರಾಕಾರ ಮತ್ತು ಯಾವುದೇ ವಿಕಾರಗಳಿಗೆ ಒಳಗಾಗುವುದಿಲ್ಲವೆಂದೂ, ಅವನ ಶಕ್ತಿಯೂ ಎಲ್ಲ ರೀತಿ ವಿಕಾರಗಳಿಗೆ ಒಳಗಾಗುತ್ತದೆಯೆಂದೂ ವೇದ್ಯವಾಗುವುದು. ಆದರೆ, ಸಂಗಮೇಶ್ವರದ ಅಪ್ಪಣ್ಣ 'ನಿರಾಕಾರದ ಶಕ್ತಿಯಲ್ಲಿ ನಿರಾಳವೆಂಬ ತನು' ಎಂದು ಹೇಳಿದಾಗ ಸ್ವಲ್ಪ ಗೊಂದಲವೆನಿಸುತ್ತದೆ. ಶಕ್ತಿಯು ಯಾವುದೇ ರೀತಿ ವಿಕಾರಕ್ಕೊಳಪಡುವ

ಮುನ್ನ, ಅಂದರೆ ಪ್ರಲಯ ಅಥವಾ ಸೃಷ್ಟಿಪೂರ್ವ ಸ್ಥಿತಿಯಲ್ಲಿ, ಅದಕ್ಕೆ ಯಾವುದೇ ಆಕಾರವಿರುವುದಿಲ್ಲ. ಅದೇ ರೀತಿ ಪ್ರಪಂಚವು ಶಕ್ತಿಯಿಂದ ರಚಿತವಾದಾಗ ಅದರ ವಸ್ತುಗಳೆಲ್ಲಕ್ಕೂ ನಾಮರೂಪುಗಳಿರುತ್ತವೆ. ಆದರೆ ಸೃಷ್ಟಿಪೂರ್ವ ಸ್ಥಿತಿಯಲ್ಲಿ ನಿರಾಕಾರಶಕ್ತಿಯು ಪರಶಿವನ ನಿರಾಳ ತನುವಾಗಿರುತ್ತದೆ (೯:೩೨೧).

**ನಿರಾಧಾರ (ನಿರಾಲಂಬ) :** ಪರಶಿವನು ಉಳಿದೆಲ್ಲ ವಸ್ತುಗಳಿಗೆ ಆಧಾರವಾದಂತೆ, ಅವನಿಗೆ ಆಧಾರವಾದ ಮತ್ತೊಂದು ವಸ್ತುವಿಲ್ಲ.

**ನಿರಾಧಾರ ಪಥ :** ಪ್ರತಿಯೊಂದು ವಸ್ತುವಿಗೂ ಪರಶಿವನೇ ಆಧಾರ, ಆದರೆ ಪರಶಿವನಿಗೆ ಯಾವುದೇ ಆಧಾರವಿಲ್ಲ. ಆದುದರಿಂದ ನಿರಾಧಾರ ಪಥವೆಂದರೆ ಶಿವಪಥವೆಂದಾಗುತ್ತದೆ. (೮:೫೫೧)

**ನಿರಾಧಾರ ಯೋಗ :** ಮನಸ್ಸಿನಲ್ಲಿ ಸುಜ್ಞಾನವೆಂಬ ಲಿಂಗವನ್ನು ಪ್ರತಿಷ್ಠಾಪಿಸಿ, ಅಜ್ಞಾನವನ್ನು ದೂರಮಾಡಿ, ನಾನೇ ಆ ಲಿಂಗ ಎಂಬ ಜ್ಞಾನ ಪಡೆಯುವುದೇ ನಿರಾಧಾರಯೋಗ. (೧೩:೧೬೦೮, ೧೬೧೨)

**ನಿರಾಧಾರ ಸಮಯ :** ಆಧಾರವೆಂದರೆ ಎಲ್ಲ ವಸ್ತುಗಳಿಗೆ ಹಾಗೂ ಎಲ್ಲ ಜೀವಿಗಳಿಗೆ ಆಧಾರವಾದ ಪರಶಿವ. ಪರಶಿವ ಆಧಾರವಾಗಬೇಕಾದರೆ ವಸ್ತು ಅಥವಾ ಜೀವಿಗಳೆಂಬ ಆಧೇಯವಿರಬೇಕಾಗುತ್ತದೆ. ಆಧೇಯಗಳೇ ಇಲ್ಲದಿದ್ದರೆ, ಪರಶಿವ ಆಧಾರನಲ್ಲ. ಆಗ ಅವನನ್ನು ನಿರಾಧಾರನೆಂದು ಕರೆಯಬೇಕಾಗುತ್ತದೆ. ಅನುಭಾವದಲ್ಲಿ (ಐಕ್ಯಸ್ಥಿತಿಯಲ್ಲಿ) ಆಧಾರ ಆಧೇಯಗಳ ವ್ಯತ್ಯಾಸ ಇಲ್ಲವಾದಾಗ ಪರಶಿವ ನಿರಾಧಾರನೆನ್ನಿಸಿಕೊಳ್ಳುತ್ತಾನೆ. ಆದುದರಿಂದ, ಐಕ್ಯಸ್ಥಿತಿಯು ನಿರಾಧಾರ ಸಮಯ. (೪:೭೭೪)

**ನಿರಾಭಾರಿ :** ಸರ್ವಸಂಗ ಪರಿತ್ಯಾಗ ಮಾಡಿ, ಎಲ್ಲ ರೀತಿಯ ಕರ್ಮಗಳಿಂದಲೂ ಅವಿದ್ಯೆ ಮುಂತಾದ ಉಪಾಧಿಗಳಿಂದಲೂ ಮುಕ್ತರಾಗಿ, ಯಾವ ರೀತಿಯ ಕರ್ತವ್ಯಕ್ಕೂ ಬದ್ಧರಾಗದೆ ಇರುವವರು. (೫:೭೮೫)

**ನಿರಾವಯವಾನಂದ ಸನ್ನಿಹಿತ ಶರಣ :** ಅನುಭಾವದಲ್ಲಿ ಸಾಧಕನು ಪರಶಿವನೆಂಬ ಅಪರಿಮಿತ ಚಿತ್ತಿನಲ್ಲಿ ಬೆರೆತಾಗ ಹಾಗೂ ಆ ಚಿತ್ತು ಅವನ ಆತ್ಮದಲ್ಲಿ ಬೆರೆತಾಗ, ಅವನಿಗೆ ಹೊರಗು ಒಳಗುಗಳ ವ್ಯತ್ಯಾಸವಿಲ್ಲದಂತಾಗುತ್ತದೆ. ಅಲ್ಲದೆ ಸಗುಣ ನಿರ್ಗುಣಗಳ ಭೇದವೂ ತಾನು ಮತ್ತು ಪರಶಿವನೆಂಬ ಭೇದವೂ ಇಲ್ಲವಾಗಿ, ಎಲ್ಲವೂ ಶೂನ್ಯವಾಗುತ್ತದೆ. ಅಂಥ ಶರಣನು ಶೂನ್ಯಲಿಂಗವನ್ನು ನೋಡಿ ಆನಂದಪಡುತ್ತಾನೆ. ಹಾಗೂ ಅವನು ನಿರಾವಯಾನಂದ ಸನ್ನಿಹಿತ ಶರಣನೆನಿಸಿಕೊಳ್ಳುತ್ತಾನೆ.

**ನಿರಾವರಣ :** ಕೆಲವು ಭೌತವಸ್ತುಗಳನ್ನು ಬೇರೆ ಭೌತವಸ್ತುಗಳು ಆವರಿಸಬಹುದು: ಎಲ್ಲ ಭೌತವಸ್ತುಗಳನ್ನು ಆಕಾಶವು ಆವರಿಸುತ್ತದೆ ಆದರೆ ಪರಶಿವನನ್ನು ಯಾವ ವಸ್ತುವೂ ಆವರಿಸಲಾರದು. ಆದುದರಿಂದ ಅವನು ನಿರಾವರಣ. (೭:೫೩೭)

**ನಿರಾಳ, ಅನಿರ್ವಾಚ್ಯ :** ಸೃಷ್ಟಿಯಾದ ನಂತರ ನಾವು ಒಂದು ವಸ್ತುವನ್ನು ಮತ್ತೊಂದರಿಂದ ಪ್ರತ್ಯೇಕಿಸಿ ಅಥವಾ ಹೋಲಿಸಿ ಮಾತನಾಡುತ್ತೇವೆ. ಅನೇಕದ ಅರ್ಥ ಗೊತ್ತಿಲ್ಲದೆ ಏಕ ಎಂಬುದನ್ನು ನಾವು ಬಳಸುವುದಿಲ್ಲ. ಸಣ್ಣದು, ಎಂಬುದರ ಅರ್ಥಗೊತ್ತಿಲ್ಲದಿದ್ದರೆ, ದೊಡ್ಡದು ಎಂಬುದನ್ನು ನಾವು ಬಳಸುವುದಿಲ್ಲ. ಆದರೆ ಸೃಷ್ಟಿಪೂರ್ವ ಸ್ಥಿತಿಯಲ್ಲಿ, ಈ ಹೋಲಿಕೆಗೆ ಅವಕಾಶವೇ ಇಲ್ಲವಾದುದರಿಂದ, ಹಾಗೂ ವರ್ಣಿಸಲು ವಸ್ತುಗಳೇ ಇಲ್ಲವಾದುದರಿಂದ, ಪರಮಾತ್ಮನನ್ನು ಯಾರೊಂದಿಗೆ ಹೋಲಿಸಬೇಕು ಅಥವಾ ಭಿನ್ನೈಸಬೇಕು?. ಆದುದರಿಂದ ಪರಶಿವ ನಿರಾಳ, ಅನಿರ್ವಚನೀಯ.

**ನಿರೀಕ್ಷಣಾ ಸ್ವರೂಪ ಲಿಂಗ :** ಸಾಧಕನು ಧ್ಯಾನವನ್ನು ಪ್ರಾರಂಭಿಸುವ ಮುನ್ನ ಇಷ್ಟಲಿಂಗವನ್ನು ತದೇಕದೃಷ್ಟಿಯಿಂದ ನಿರೀಕ್ಷಿಸುತ್ತಾನೆ. ಹೀಗೆ ನಿರೀಕ್ಷಿಸಲ್ಪಡುವ ಲಿಂಗವೇ ನಿರೀಕ್ಷಣಾ ಲಿಂಗ. ಹೀಗೆ ನಿರೀಕ್ಷಿಸುವ ಮೂಲಕ ಸಾಧಕನು ಹೊರಗಿನ ಲಿಂಗವನ್ನು ಸನ್ನಿಹಿತ ಮಾಡಿಕೊಳ್ಳುತ್ತಾನೆ ಹಾಗೂ ಲಿಂಗ ಸ್ವರೂಪನಾಗುತ್ತಾನೆ. (೧೨:೨೧೪)

**ನಿರುಪಾಧಿಕ ಭಕ್ತ :** ಉಪಾಧಿ ಎಂದರೆ ನಿಯಮ, ಕರಾರು, ಬಂಧನ ಎಂದರ್ಥ. ಕೆಲವರು ಲಿಂಗಪೂಜೆಯನ್ನು ಹರಕೆಗೋಸ್ಕರ ಮಾಡಿಕೊಳ್ಳುತ್ತಾರೆ. ಉದಾಹರಣಗೆ ನನ್ನ ಇಷ್ಟ ನೆರವೇರಿದರೆ, ಇಂಥ ಪೂಜೆ ಮಾಡುತ್ತೇನೆ. ಅಂಥ ಭಕ್ತರು ಸೋಪಾಧಿಕ ಭಕ್ತರು. ಆದರೆ ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ ಭಕ್ತಿಯನ್ನು ತೋರಿಸುವವರು ನಿರುಪಾಧಿಕ ಭಕ್ತರು. (೮:೧೮೬೭)

**ನಿರುಪಾಧಿಕ ಸೇವೆ :** ಯಾವುದೇ ಶರತ್ತಿಲ್ಲದೆ ಮಾಡುವ ಭಕ್ತಿ. ಉಪಾಧಿಕ ಸೇವೆಯಲ್ಲಿ ಭಕ್ತನು ಪ್ರತಿಫಲಾಪೇಕ್ಷೆಯಿಂದ ಶಿವಸೇವೆ ಮಾಡಿದರೆ, ಯಾವಪ್ರತಿಫಲಾಪೇಕ್ಷೆಯನ್ನೂ ನಿರೀಕ್ಷಸದೆಯೇ ಮಾಡುವ ಸೇವೆ ನಿರುಪಾಧಿಕ ಸೇವೆ ಎನಿಸಿಕೊಳ್ಳುತ್ತದೆ. ಭಕ್ತನು ಅತಿಶಯ ಪದವಿಯನ್ನು ನೀಡು, ಸಾಮರಸ್ಯಸ್ಥಿತಿಯನ್ನು ಕೊಡು ಎಂದು ಶಿವನನ್ನು ಕೇಳದಿದ್ದರೂ, ಶಿವನೇ ನಿರುಪಾಧಿಕ ಭಕ್ತಿಗೆ ಮೆಚ್ಚಿ 'ಅತಿಶಯ ಪದವನೀವನು' (೯:೨೮೪)

**ನಿಶ್ಚಯ :** ವಚನಕಾರರು ಇದನ್ನು ಮೂರು ಅರ್ಥಗಳಲ್ಲಿ ಬಳಸಿರುವಂತೆ ಕಾಣುತ್ತದೆ.(೧) ಕಣ್ಣಿನಲ್ಲಿ ನೋಡಿ, ಕಿವಿಯಿಂದ ಕೇಳಿ, ತರ್ಕ (ಅನುಮಾನ)ದ ಮೂಲಕ ಮನಗಂಡು, ಭಾವದಲ್ಲಿ (ಅನುಭಾವದಲ್ಲಿ) ನೇರವಾಗಿ ತಿಳಿದುಕೊಂಡಾಗಲೇ ನಮ್ಮ ಸಂದೇಹ ಪರಿಹಾರವಾಗುತ್ತದೆ ಹಾಗೂ ನಿಶ್ಚಯ (ನಿಶ್ಚಿತ ಜ್ಞಾನ) ನೆಲೆಸುತ್ತದೆ. ಈ ಪದವು ಹೆಚ್ಚಾಗಿ ಆಧ್ಯಾತ್ಮಿಕ ವಿಷಯಗಳ ಬಗೆಗಿನ ಜ್ಞಾನಕ್ಕೆ ಸಂಬಂಧಿಸುತ್ತದೆ. ಆತ್ಮ ಪರಮಾತ್ಮ ಮುಂತಾದ ವಿಷಯಗಳನ್ನು ನಾವು ಬೇರೆಯವರಿಂದ ಕೇಳಿ, ತರ್ಕಿಸಿ ಮನಗಂಡಿದ್ದರೂ, ಅನುಭಾವದ ಮೂಲಕ ನೇರವಾಗಿ ಅರಿತುಕೊಂಡಾಗಲೇ ಅವುಗಳನ್ನು ಕುರಿತ ಜ್ಞಾನ ನಿಶ್ಚಿತವಾಗುವುದು. (೨) ಕೆಲವು ವಚನಕಾರರು ಈ ಪದವನ್ನು ಅನಿಶ್ಚಿತ, ಎಂಬ ಪದದ

ವಿರುದ್ಧಾರ್ಥದಲ್ಲಿ ಬಳಸದೆ, ನಿಶ್ಚಲ ಎಂಬರ್ಥದಲ್ಲಿ ಬಳಸಿದ್ದಾರೆ. ಉದಾಹರಣೆಗೆ, "ನಿಶ್ಚಿಯವನರಿದಿಹೆನೆಂದಡೆ, ಆತ್ಮಕ್ಕೆ ಲಕ್ಷವಿಡುವುದೊಂದು ಗೊತ್ತ ಕಾಣೆ", (೯:೯೨) ಎಂಬಲ್ಲಿ ನಿಶ್ಚಯದ, ಬದಲು "ನಿಶ್ಚಲ" ವನ್ನು ಹಾಕಿಕೊಂಡರೆ, ಆಗ ನನ್ನ ಆತ್ಮಕ್ಕೆ ಏಕಾಗ್ರತೆಯನ್ನು ಹೇಗೆ ಸಾಧಿಸಬೇಕೆಂಬುದು ಗೊತ್ತಿಲ್ಲದ ಕಾರಣ ನಿಶ್ಚಲ (ಅಚಲ : ಪರಶಿವ) ವಾದುದನ್ನು ಅರಿಯಲಾರೆ, ಎಂಬರ್ಥ ಉಂಟಾಗುತ್ತದೆ.

(೩) ಮೂರನೆಯ ಅರ್ಥದಲ್ಲಿ ಈ ಪದವು ಖಂಡಿತ ಬುದ್ಧಿಗೆ ಅನ್ವಯಿಸುತ್ತದೆ. ನಾನು ಪರಮಾತ್ಮನನ್ನು ಅರಿತಿದ್ದೇನೆ ಎಂದು ಯಾರು ನಿಶ್ಚಯ ಮಾಡಿಕೊಂಡಿದ್ದಾರೋ ಅವರು ಅವನನ್ನು ಅರಿತಿಲ್ಲ (೯:೧೪೦).

**ನಿಶ್ಚಯದ ನಿಜಏಕತ್ವ :** ವ್ಯಾವಹಾರಿಕವಾಗಿ ನಾವು ಪರಶಿವನ ಇರವನ್ನು ಒಪ್ಪಿಕೊಳ್ಳುತ್ತೇವೆ, ಆದರೆ ಅದು ಕೇವಲ ವಿಶ್ವಾಸವೇ ಹೊರತು, ನಾವೇ ಸ್ವಾನುಭಾವದಿಂದ ತಿಳಿದುಕೊಂಡುದುದಲ್ಲ. ಆದರೆ, ಶರಣಸ್ಥಲವನ್ನು ತಲುಪಿದವನಿಗೆ ಪರಶಿವನ ಇರುವು ಸ್ವಾನುಭವದ ಮೂಲಕ ನಿಶ್ಚಯವಾಗುತ್ತದೆ.

ಪ್ರಪಂಚವೂ, ಮಾನವನ ದೇಹೇಂದ್ರಿಯಾದಿಗಳೂ ನಶ್ವರ ಮತ್ತು ಸತತ ಪರಿವರ್ತನೆಗೊಳಪಟ್ಟಿವೆ. ಆದರೆ ಸ್ವಾನುಭಾವದಲ್ಲಿ ಅರಿತ ಪರಶಿವನು ಈ ಪರಿವರ್ತನೆಗಳಿಗೆ ಅತೀತ, ಅವನೇ ನಿಜ (ಸತ್ಯ), ಶಾಶ್ವತ.

ವ್ಯಾವಹಾರಿಕವಾಗಿ ನಾವು ವೈವಿಧ್ಯತೆಯನ್ನು ಅನುಭವಿಸಿದರೆ, ಸ್ವಾನುಭಾವದಲ್ಲಿ ಅಂಗ ಮತ್ತು ಲಿಂಗ ಎರಡೂ ಒಂದಾಗಿ, ಅಂಗವು ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡು, ತಾನು ಪರಶಿವನಲ್ಲಿದ್ದೇನೆ, ಪರಶಿವನೊಬ್ಬನೇ ಇದ್ದಾನೆ ಎಂಬ ಏಕತ್ವದ ಅರಿವಾಗುತ್ತದೆ. (೮:೧೫೩೨)

**ನಿಷ್ಕರ್ಮ :** ನಾವೆಲ್ಲರೂ ನಮ್ಮ ದೇಹ ಮತ್ತು ಇಂದ್ರಿಯಗಳ ಸಲುವಾಗಿ ಅನೇಕ ರೀತಿಯ ಕರ್ಮಗಳನ್ನು ಮಾಡುತ್ತೇವೆ. ಇದನ್ನೆ ಬೇರೆ ರೀತಿಯಲ್ಲಿ ಹೇಳುವುದಾದರೆ ನಮ್ಮ ಕರ್ಮಗಳೆಲ್ಲವೂ ಸಕಾಮಕರ್ಮಗಳೇ. ಆದರೆ ನಿಜವಾದ ಶರಣರು ಯಾವುದೇ ಕರ್ಮ ಮಾಡಿದರೂ ಅದು ನಿಷ್ಕಾಮ ಕರ್ಮವಾಗುತ್ತದೆ. ಅಥವಾ, ಅವರ ಕರ್ಮ ಸಾಧಾರಣ ಜನರು ಮಾಡುವ ಕರ್ಮ ಅಲ್ಲವೇ ಅಲ್ಲ, ಅದು ನಿಷ್ಕರ್ಮ. (೧:೯೯)

**ನಿಷ್ಕಲ (ನಿಃಕಲ) :** ಕಲಾರಹಿತ. ಸೃಷ್ಟಿಪೂರ್ವದಲ್ಲಿ ಪರಶಿವನು ಕಲಾಶಕ್ತಿ ರಹಿತನಾಗಿರುತ್ತಾನೆ. ಸೃಷ್ಟಿಸಬೇಕೆಂಬ ಇಚ್ಛೆ ಅವನಲ್ಲಿ ಉಂಟಾದಾಗಲೂ ಶಕ್ತಿ (ಕಲೆ) ಇನ್ನೂ ಅವ್ಯಕ್ತ ಸ್ಥಿತಿಯಲ್ಲೇ ಇರುತ್ತದೆ. ಶಕ್ತಿಯ ಅಂತಹ ಸ್ಥಿತಿಯನ್ನು ಚಿತ್ತು (ಚಿತ್‌ಶಕ್ತಿ) ಅಥವಾ ನೆನಹು ಎಂದು ಕರೆಯಲಾಗಿದೆ. ಶಕ್ತಿಯು ಈ ಸ್ಥಿತಿಯಲ್ಲಿದ್ದಾಗ, ಅದನ್ನೊಳಗೊಂಡ ಶಿವನು ನಿಷ್ಕಲ ಲಿಂಗನೆನಿಸಿಕೊಳ್ಳುತ್ತಾನೆ. (೨:೧೨೭೨) ಆದರೆ, ನವಿಲಿನ ತತ್ತಿಯಲ್ಲಿ

ಹೇಗೆ ಮುಂದೆ ಹುಟ್ಟುವ ನವಿಲಿನ ವಿವಿಧ ವರ್ಣಗಳು, ಇತ್ಯಾದಿಗಳಿರುತ್ತವೆಯೋ, ಹಾಗೆಯೇ ನಿಷ್ಕಲತತ್ವದಲ್ಲಿ ಮುಂದೆ ಆಗುವ ವೈವಿಧ್ಯಮಯ ಸೃಷ್ಟಿಯೆಲ್ಲವೂ ಅವ್ಯಕ್ತವಾಗಿ ಅಡಗಿರುತ್ತದೆ.

**ನಿಷ್ಕಾಮಸಂಗ :** ಹೆಣ್ಣು, ಗಂಡುಗಳ ಸಂಗ ಕಾಮಸಂಗ ಆದರೆ, ಲಿಂಗ ಮತ್ತು ಅಂಗಗಳ ಸಂಗ ನಿಷ್ಕಾಮ ಸಂಗ. ಕಾಮ ಎಂಬ ಪದಕ್ಕೆ ಆಸೆ ಎಬರ್ಥವನ್ನು ಕೊಟ್ಟರೂ, ಅದು ನಿಷ್ಕಾಮ ಸಂಗವೇ. (೪:೫೫೦)

**ನಿಷ್ಠೆ ಸುಖ ಪರಿಣಾಮಿ :** ಮಹೇಶ ಸ್ಥಲದ ಸಾಧಕನು ಗುರುಲಿಂಗವನ್ನು ತನ್ನ ಸುಬುದ್ಧಿಯೆಂಬ ಹಸ್ತದಲ್ಲಿ ಕಂಡು ನಿಷ್ಠೆ ಎಂಬ ಭಕ್ತಿಯನ್ನು ಆಚರಿಸುತ್ತಿರುವಾಗ ನಿಷ್ಠೆ ಸುಖವು ಉಂಟಾಗುತ್ತದೆ. ಆಗ ಅವನಿಗೆ ತನ್ನ ನಿರಹಂಕಾರವೆಂಬ ಹಸ್ತದಲ್ಲಿ ಮುಂದಿನ ಸ್ಥಲದ ಶಿವಲಿಂಗವು ಕಾಣಿಸಿಕೊಳ್ಳುತ್ತದೆ. (೧೨:೪೫೫)

**ನಿಸ್ಸಂಗ :** ನಾವು ಯಾವುದೇ ವಸ್ತುವನ್ನು ತಿಳಿದುಕೊಳ್ಳುವಾಗಲೂ, ನಾನು (ಜ್ಞಾತೃ) ಮತ್ತು ವಸ್ತು (ಜ್ಞೇಯ) ಎಂಬ ಎರಡು ಪ್ರಜ್ಞೆಗಳಿರುತ್ತವೆ. ಸ್ವ-ಪ್ರಜ್ಞೆಯಿಲ್ಲದೆ ಪರಪ್ರಜ್ಞೆಯಿಲ್ಲ, ಪರಪ್ರಜ್ಞೆಯಿಲ್ಲದೆ ಸ್ವ-ಪ್ರಜ್ಞೆಯಿಲ್ಲ. ಆದರೆ ಅನುಭಾವದಲ್ಲಿ ಸ್ವ-ಪ್ರಜ್ಞೆ ಇಲ್ಲವಾಗುವುದರಿಂದ ಪರ-ಪ್ರಜ್ಞೆಯೂ ಇಲ್ಲವಾಗುತ್ತದೆ. ಅನುಭಾವ ಪ್ರಾರಂಭವಾಗುವುದು ಅಂಗ ಮತ್ತು ಲಿಂಗಗಳ ಸಂಗದಿಂದಲೇ ಆದರೂ, ಮುಂದೆ ಸ್ವಪ್ರಜ್ಞೆ ಮತ್ತು ಪರ ಪ್ರಜ್ಞೆಗಳು ಇಲ್ಲವಾಗುವುದರಿಂದ, ಅಂಗ-ಲಿಂಗ ಸಂಗದ ಅನುಭವವೂ ಇಲ್ಲವಾಗಿ ನಿಸ್ಸಂಗದ ಅನುಭಾವವಾಗುತ್ತದೆ. "ಅಂಗವಿಲ್ಲಾಗಿ ಅನ್ಯ ಸಂಗವಿಲ್ಲ, ಅನ್ಯಸಂಗವಿಲ್ಲಾಗಿ ಮತ್ತೊಂದ ವಿವರಿಸಲಿಲ್ಲ. ಮತ್ತೊಂದ ವಿವರಿಸಲಿಲ್ಲಾಗಿ ನಿಸ್ಸಂಗವಾಯಿತ್ತಯ್ಯಾ" (೨:೩೦೩)

**ನಿಸ್ಸಂಗದಲ್ಲಿ ಸುಸಂಗಿ :** ಸಂಗ ಅಥವಾ ಕೂಟ ಉಂಟಾಗಬೇಕಾದರೆ ಕನಿಷ್ಠ ಎರಡು ವಸ್ತುಗಳು ಬೇಕು. ಆದರೆ ಇಲ್ಲಿ ಐಕ್ಯಸ್ಥಲವನ್ನು ತಲುಪಿದವನ ಆತ್ಮವು ಪರಮಾತ್ಮನಲ್ಲಿ ಬೆರೆತು, ತನ್ನನ್ನು ತಾನು ಮರೆಯುತ್ತದೆ. ಆಗ ಆ ಸಂಗದಲ್ಲಿ ಎರಡನೆ ವಸ್ತು ತನ್ನ ಪ್ರತ್ಯೇಕತೆಯನ್ನು ಕಳೆದುಕೊಂಡಿರುವುದರಿಂದ, ಅಲ್ಲಿ (ಒಂದು ವಿಶೇಷ ಅರ್ಥದಲ್ಲಿ) ಸಂಗವಿಲ್ಲ - ಅಲ್ಲಿ ನಿಸ್ಸಂಗವಿದೆ; ಆದರೂ ಮತ್ತೊಂದರ್ಥದಲ್ಲಿ ಆತ್ಮನಿಗೆ ಆ ಸಂಗಕ್ಕಿಂತ ಹೆಚ್ಚು ಒಳ್ಳೆಯ ಸಂಗವಿಲ್ಲವಾದುದರಿಂದ, ಅವನು ಸುಸಂಗಿಯಾಗಿದ್ದಾನೆ ಎಂದರ್ಥ. (ಇಲ್ಲಿ ಸಂಗ, ನಿಸ್ಸಂಗ ಮತ್ತು ಸುಸಂಗ ಎಂಬ ಪದಗಳು ಸಾಂಕೇತಿಕವಾಗಿ ಬಳಕೆಯಾಗಿದೆ ಎಂಬುದು ಗಮನಾರ್ಹ) (೮:೧೫೨೧)

**ನಿಸ್ಸಂಸಾರ ದೀಕ್ಷೆ :** ಅರ್ಥಪ್ರಾಣಾಭಿಮಾನಗಳನ್ನೂ, ತನುಮನಕರಣೇಂದ್ರಿಯಗಳನ್ನೂ ಗುರುಲಿಂಗಜಂಗಮ, ಭಕ್ತ ಮಾಹೇಶ್ವರರುಗಳಿಗರ್ಪಿಸಿ, ನಿಸ್ವಾರ್ಥ ಬುದ್ಧಿಯಿಂದ ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ ಇಷ್ಟಲಿಂಗವನ್ನು ತೃಪ್ತಿಪಡಿಸಿ,

ಮಂತ್ರಧ್ಯಾನ ಜಪಸ್ತೋತ್ರಗಳಿಂದ ಪ್ರಾಣಲಿಂಗವ ತೃಪ್ತಿಮಾಡಿ ಮನೋಲಯವಾಗುವಂತೆ ಭಾವಲಿಂಗವ ತೃಪ್ತಿಮಾಡಿ, ಗುರು ಲಿಂಗಜಂಗಮ ಭಕ್ತಾದಿ ಐಕ್ಯಾಂತಮಹಾಪ್ರಮಥಗಣಗಳನ್ನು ತೃಪ್ತಿಮಾಡಿ, ಸಾಂಸಾರಿಕ ಆಸೆಗಳನ್ನು ತ್ಯಜಿಸಿ, ಅವಿರಳಾನಂದದಿಂದ ಲಿಂಗದಲ್ಲಿ ಕೂಟಸ್ಥನಾಗಿರುವುದೇ ನಿಸ್ಸಂಸಾರ ದೀಕ್ಷೆ. (೧೦:೬೯೩)

**ನಿಸ್ಸೀಮ ಸಖಿ :** ನಮ್ಮ ಯಾವುದೇ ಪ್ರಾಪಂಚಿಕ ಸುಖಕ್ಕೆ ಸೀಮೆ (ಕೊನೆ) ಇರುತ್ತದೆ. ಆದರೆ ಲಿಂಗದಲ್ಲಿ ಲೀನವಾದವನ ಲಿಂಗಾನುಭವದ ಸುಖಕ್ಕೆ ಕೊನೆಯಿಲ್ಲವಾದುದರಿಂದ, ಅವನು ನಿಸ್ಸೀಮಸುಖಿ. (೨:೪೪೨)

**ನಿರ್ಗಮನಿ :** ೧. ನಡೆಯದವನು, ಆದರೆ ಕಾಲಿಲ್ಲದವನಲ್ಲ. ತನ್ನಲ್ಲೇ ಪರಶಿವನನ್ನು ಕಂಡುಕೊಂಡು, ಅವನನ್ನು ಹುಡಿಕಿಕೊಂಡು ಮತ್ತೆಲ್ಲಿಯೂ ಹೋಗದಿರುವನು.(೩:೯೯೫) ೨. ಪರಶಿವ : ಎಲ್ಲೆಡೆಯಲ್ಲೂ ಪರಶಿವನೇ ಇರುವುದರಿಂದ ಅವನು ಮತ್ತೊಂದು ಕಡೆಗೆ (ತಾನಿಲ್ಲದ ಕಡೆಗೆ) ಹೋಗುವಂತಿಲ್ಲ. ಜಂಗಮನು ಬಯಲಾದಾಗ ಅವನೂ ನಿರ್ಗಮನಿಯೆ. (೩:೧೫೮೩)

**ನಿರ್ಗಮನಿ ಜಂಗಮ :** ಜಂಗಮ ಎಂಬ ಪದವು ಒಬ್ಬ ವ್ಯಕ್ತಿಯನ್ನು ನಿರ್ದೇಶಿಸುವುದಾದರೂ, ನಿಜವಾದ ಅರ್ಥದಲ್ಲಿ ಆ ವ್ಯಕ್ತಿ ಲಿಂಗದಲ್ಲಿ ತಾದಾತ್ಮ್ಯವನ್ನು (ಐಕ್ಯತೆಯನ್ನು) ಸಾಧಿಸಿಕೊಂಡವನಾಗಿರಬೇಕು. ಆಗ ಅವನು ತಾನೊಬ್ಬ ವ್ಯಕ್ತಿ ಎಂದುಕೊಳ್ಳದೆ ತಾನು ಶಿವನ ಮಾಧ್ಯಮ (ವಾಹನ) ಎಂದು ಕೊಳ್ಳುತ್ತಾನೆ. ಅದಕ್ಕೆ ವಚನಕಾರರು ಕೆಲವು ವೇಳೆ ಜಂಗಮನನ್ನು ಜಂಗಮಲಿಂಗವೆಂದು ಕರೆಯುತ್ತಾರೆ. ಆದರೆ ಅಂಥ ಜಂಗಮನಿಗೂ ಲಿಂಗಕ್ಕೂ ಒಂದು ಮುಖ್ಯವಾದ ಅಂಶದಲ್ಲಿ ವ್ಯತ್ಯಾಸವಿದೆ. ಜಂಗಮನು (ತಿರುಗಾಡುವವನು) ಒಬ್ಬ ಚಲಿಸುವ ಲಿಂಗ, ಆದರೆ ಲಿಂಗ ಚಲಿಸದ ಲಿಂಗ. ಅವನಲ್ಲಿರುವ ಲಿಂಗವು ನಿರ್ಗಮನಿ ಜಂಗಮ; ನಿರ್ಗಮನಿ ಜಂಗಮ ಎಂಬುದಕ್ಕೆ ಮನೆಯಿಂದ ಮನೆಗೆ ಹೋಗದ ಜಂಗಮ ಎಂಬ ಅರ್ಥವನ್ನೂ ಕೊಡಬಹುದು (೩:೬೫೯).

**ನಿರ್ಗುಣ ಪೂಜೆ :** ಇಷ್ಟಲಿಂಗ ಎಂಬ ಭೌತ ವಸ್ತುವೇ ಪರಶಿವನೆಂದೂ, ಆ ಲಿಂಗಕ್ಕೆ ತೋರಿಸುವ ನೀರು, ವಿಭೂತಿ, ಆರತಿ ಮುಂತಾದ ಕ್ರಿಯೆಗಳೆ ಭಕ್ತಿಯೆಂದೂ ನಂಬುವವರು ನಿಜವಾದ ಭಕ್ತರಲ್ಲ. ಇಷ್ಟಲಿಂಗದಲ್ಲಿಯೂ ಅಲ್ಲದೆ, ಎಲ್ಲೆಲ್ಲಿಯೂ ಪರಶಿವನಿದ್ದಾನೆ ಎಂದೂ, ನಾವು ಪೂಜಿಸಬೇಕಾದುದು ಅವನನ್ನೇ ಹೊರತು ಇಷ್ಟಲಿಂಗವನ್ನಲ್ಲ ಎಂದೂ ತಿಳಿದು. ಅದಕ್ಕೆ ತಕ್ಕಂತೆ ಪೂಜೆ ಮಾಡುವವನು, ನಿರ್ಗುಣ ಪೂಜಕ ಅವನು ನಿಯಮಿತ ವೇಳೆಯಲ್ಲಿ, ಲಿಂಗಕ್ಕೆ ನಿಯಮಿತ ವಸ್ತುಗಳನ್ನು ಅರ್ಪಿಸದೆ, ಮನಸ್ಸಿನಲ್ಲೇ ಎಲ್ಲ ಕಾಲದಲ್ಲೂ, ಎಲ್ಲ ವಸ್ತುಗಳನ್ನೂ ಲಿಂಗಕ್ಕೆ ಅರ್ಪಿಸುತ್ತಾನೆ, ಇದು ನಿರ್ಗುಣ ಪೂಜೆಯ ಒಂದು ಅಂಗ (೮:೪೬೩).

**ನಿರ್ಗುಣಾನಂದ ಸನ್ನಿಹಿತ ಶರಣ :** ಅನುಭಾವದಲ್ಲಿ ಪರಶಿವನೊಡನೆ ಬೆರೆತ ಶರಣನು, ಜಗತ್ತನ್ನು ಬಿಟ್ಟು, ಬರೀ ಪರಶಿವನನ್ನೆ ನೋಡಿದರೆ, ಆಗ ಅವನಿಗೆ ನಿರ್ಗುಣ ಪರಶಿವ ಕಾಣಿಸಿಕೊಳ್ಳುತ್ತಾನೆ. ಹೀಗೆ ನಿರ್ಗುಣ ಶಿವನನ್ನು ನೋಡಿ ಆನಂದಿಸುವ ಶರಣನೆ ನಿರ್ಗುಣಾನಂದ ಸನ್ನಿಹಿತ ಶರಣ.

**ನಿರ್ಗುಣಾರ್ಪಿತ :** ಅಧ್ಯಾತ್ಮ ಸಾಧನೆಯಲ್ಲಿ ಪ್ರಗತಿ ಹೊಂದಿದವನು ಹೂವು ಹಣ್ಣು ಮುಂತಾದ ಬಾಹ್ಯವಸ್ತುಗಳನ್ನೂ ಅಲ್ಲದೆ ತನ್ನ ಇಂದ್ರಿಯ ದೇಹ, ಅಂತಃಕರಣಗಳನ್ನೂ ಲಿಂಗಕ್ಕೆ ಅರ್ಪಿಸಿ ತೃಪ್ತಿಪಡುತ್ತಾನೆ. ಅಂತಹ ತೃಪ್ತಿಗೆ ಅಂತರ್ಮುಖ ಸುಖವೆಂದು ಹೆಸರು. ಆ ರೀತಿ ತೃಪ್ತಿ ಇರುವವನು ಮಾಡುವ ಅರ್ಪಿತವೆ ನಿರ್ಗುಣಾರ್ಪಿತ (ಪರಶಿವನು ನಿರ್ಗುಣವೆಂದು ತಿಳಿದು ಮಾಡುವ ಅರ್ಪಿತ). ತೃಪ್ತಿಯಿಲ್ಲದೆ ಮಾಡುವ ಅರ್ಪಿತವು ನಿರ್ಗುಣಾರ್ಪಿತವಲ್ಲ. (೧೨:೩೬೩)

**ನಿರ್ಣಯವಿಲ್ಲದ ಭಕ್ತಿ :** ಮನಸ್ಸಿಲ್ಲದೆ ಯಾಂತ್ರಿಕವಾಗಿ ತೋರಿಸುವ ಭಕ್ತಿ.

**ನಿರ್ದೇಹ :** ದುಷ್ಪರಿಣಾಮಗಳು ಇಲ್ಲದ ದೇಹ (೪:೧೧೦೨).

**ನಿರ್ದೇಹ ಪ್ರಸಾದಿ :** ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಿದವನು ದೇಹದ ಕೀಳುಗುಣಗಳನ್ನು ಕಿತ್ತುಹಾಕಿರುವುದರಿಂದ, ಅವನಿಗೆ ದೇಹವಿದ್ದರೂ ಇಲ್ಲದಂತೆ; ಅಲ್ಲದೆ ತನ್ನ ಇಡೀ ದೇಹವನ್ನೆ ಪರಶಿವನಿಗೆ ಅರ್ಪಿಸಿರುವುದರಿಂದ, ಅವನು ನಿರ್ದೇಹ ಪ್ರಸಾದಿ (೩:೯೨೦).

**ನಿರ್ದೇಹಿ :** ದೇಹವಿಲ್ಲದ ಪರಶಿವ. ಪರಶಿವನನ್ನು ಅಷ್ಟತನುವುಳ್ಳವನೆಂದು ಕರೆದರೂ, ಅವನಿಗೆ ಮಾನವಶರೀರಕ್ಕಿರುವ ದೋಷಗಳಿಲ್ಲ. (೪:೧೪೩೭).

**ನಿರ್ದ್ವಂದ್ವ ಅಸಾಕ್ಷಿಕ :** ತಾನು ಸಾಕ್ಷಿಯಾಗಿ ಎಲ್ಲವನ್ನು ನೋಡುತ್ತಿದ್ದೇನೆ ಎಂಬ ಜ್ಞಾತೃತ್ವ ಭಾವವೂ ಜ್ಞೇಯ ಭಾವವೂ ಅಳಿಯುವುದು.(೪:೧೫೨೨)

**ನಿರ್ಭಾವ :** ಮರೆವಿನಿಂದಾಗಿ ನಾವೇ ಬೇರೆ, ಶಿವನೇ ಬೇರೆ ಎಂದು ಭ್ರಮಿಸುತ್ತೇವೆ. ಆದರೆ ಅನುಭಾವದ ಮೂಲಕ ಲಿಂಗೈಕ್ಯತೆಯನ್ನು ಪಡೆದವನು, ಹಾಗೆ ತಿಳಿಯುವುದಿಲ್ಲ; ಅವನಲ್ಲಿ ನಿರ್ಭಾವವಿದೆ. (೧:೯೬೩) (ನೋಡಿ : **ಅಹಂಸಪ್ಪ**)

**ನಿರ್ಮಲ :** ಮಲತ್ರಯಗಳು ಜೀವಾತ್ಮನ ಗುಣಗಳೇ ಹೊರತು, ಪರಶಿವನ ಗುಣಗಳಲ್ಲವಾದುದರಿಂದ, ಪರಶಿವ ನಿರ್ಮಲ.

**ನಿರ್ಮಲ ಸುಧೆ :** ತನ್ನ ಬ್ರಹ್ಮರಂಧ್ರದಲ್ಲಿ ಒಸರುವ ಅಮೃತವನ್ನು ಐಕ್ಯನು ಅನುಭವಿಸುತ್ತಾನೆ. ಈ (೫:೭೯) ಅಮೃತಕ್ಕೆ ಸುಧೆ, ಅಮೃತಸುಧೆ, ಎಂಬ ಹೆಸರು ಉಂಟು.

**ನಿರ್ಮಾಯ :** ಮಾಯೆಯ ದುಷ್ಪರಿಣಾಮಕ್ಕೆ ದೂರನಾದ ಪರಶಿವ.

**ನಿರ್ಯಾಣ :** (೧) ನಿರ್ವಾಣ,(೨) ಯಾನವೂ ಯಾನದ ಗುರಿಯೂ, ಪ್ರಯಾಣಿಕ (ಸಾಧಕ)ನೂ ಕೊನೆಯಲ್ಲಿ ಒಂದಾಗಿ ಯಾನ ಇಲ್ಲದಾಗುವುದು (೫:೯೪೯).

**ನಿರ್ಲೇಪ :** ನಮ್ಮ ಜೀವಾತ್ಮಕ್ಕೆ ಕರ್ಮದಿಂದಾಗಿ ಅನೇಕ ದೋಷಗಳು ಲೇಪಿತವಾಗಿದ್ದರೆ, ಪರಶಿವನಿಗೆ ಯಾವ ದೋಷಗಳೂ ಲೇಪವಾಗಿಲ್ಲವಾದುದರಿಂದ, ಅವನು ನಿರ್ಲೇಪ. (೭:೬೨೮).

**ನಿರ್ಲೇಪ ಜ್ಞಾನಿ :** ನಾವು ಮಾಡುವ ಸಕಾಮ ಕರ್ಮಗಳ ಪರಿಣಾಮವಾಗಿ ಕರ್ಮವು ನಮ್ಮ ಮನಸ್ಸಿಗೆ ಲೇಪವಾಗುತ್ತದೆ (ಅಂಟಿಕೊಳ್ಳುತ್ತದೆ) ಹಾಗೂ ಮುಂದೆ ಸಕಾಲದಲ್ಲಿ ಅದು ವ್ಯಕ್ತಗೊಳ್ಳುತ್ತದೆ. ಆದರೆ ಶರಣಸ್ಥಲ ತಲುಪಿದವನಲ್ಲಿ ಯಾವ ಸ್ವಾರ್ಥ ಆಸೆಯೂ ಇಲ್ಲವಾದುದರಿಂದ, ಅವನ ಕರ್ಮಗಳು ಮನಸ್ಸಿಗೆ ಏನನ್ನೂ ಲೇಪಿಸುವದಿಲ್ಲ. ಶರಣರು ಶಿವಜ್ಞಾನವನ್ನು ನೇರವಾಗಿ ಪಡೆದಿರುವುದರಿಂದ ಹಾಗೂ ನಿಷ್ಕಾಮ ಕರ್ಮಮಾಡುವುದರಿಂದ ಅವರು ಮನದಲ್ಲಿ ನಿರ್ಲೇಪ ಜ್ಞಾನಿಗಳು.

**ನಿರ್ಲೇಪಿ :** ಜಗತ್ತಿನ ಎಲ್ಲರೊಡನೆ ಇದ್ದರೂ, ಎಲ್ಲ ವಸ್ತುಗಳ ಹಾಗೂ ಎಲ್ಲ ವ್ಯವಹಾರಗಳ ಮಧ್ಯೆ ಇದ್ದರೂ, ಯಾವ ಮೋಹ ಮತ್ತು ಆಸೆಗಳಿಗೆ ಬಲಿಯಾಗದೆ ಇರುವವನು. ಮೋಡ, ಧೂಳು ಮತ್ತಿತರ ಕೊಳಕು ವಸ್ತುಗಳು ಆಕಾಶದಲ್ಲಿ ಆಗಾಗ ಚಲಿಸುತ್ತಿದ್ದರೂ ಆಕಾಶವು ಯಾವಾಗಲೂ ಹೇಗೆ ಶುದ್ಧ ಸ್ವರೂಪದ್ದಾಗಿದೆಯೇ ಹಾಗೆಯೇ ಶಿವಯೋಗಿಯಾದವನು ತನ್ನ ಪರಿಸರದಿಂದ ಕೆಡದೆ ನಿರ್ಲೇಪಿಯಾಗಿರುತ್ತಾನೆ.

**ನಿರ್ವಾಣ :** ಮೋಕ್ಷ. (ನೋಡಿ : **ಲಿಂಗಾಂಗ ಸಾಮರಸ್ಯ**)

**ನಿರ್ವಾಣ ದೀಕ್ಷೆ :** ಹನ್ನೆರಡು ಮಲಗಳಿಗೆ ದೂರನಾಗಿ, ಇಹದ ಸುಖ ಪರದ ಮೋಕ್ಷಗಳ ಬಯಸದೆ, ಸುಖ, ದುಃಖಗಳನ್ನು ಸಮಾನವಾಗಿ ಕಾಣುತ್ತ ತನ್ನ ಸುಖಗಳನ್ನು ಅರ್ಪಿಸುತ್ತ, ಇಹಲೋಕದಲ್ಲಿ ಇದ್ದೂ ಇಹದ ದು:ಖಗಳಿಂದ ದೂರನಾಗಿರುವುದೇ ನಿರ್ವಾಣ ದೀಕ್ಷೆ. (೧೦:೬೯೪)

**ನಿರ್ವಾಣಿ :** ವಾಣಿ (ಮಾತು) ಇಲ್ಲದಿರುವ ಸ್ಥಿತಿ. ಅನುಭಾವದಲ್ಲಿ ಆತ್ಮವು ಪರಮಾತ್ಮನಲ್ಲಿ ಒಂದಾದಾಗ, ಅನೇಕ ವೇಳೆ ಅನುಭಾವಿಗೆ ಆತ್ಮದಲ್ಲಿ ಪರಮಾತ್ಮನು ಬೆರೆತನೊ, ಪರಮಾತ್ಮನಲ್ಲಿ ಆತ್ಮ ಬೆರೆತನೊ ಎಂಬ ಗೊಂದಲ ಪರಿಸ್ಥಿತಿಯುಂಟಾದಾಗ, ಅವನು ತನ್ನ ಅನುಭವವನ್ನು ಅನಿರ್ವಚನೀಯವೆಂದು ಪರಿಗಣಿಸುತ್ತಾನೆ. ಹಲವಾರು ವಸ್ತುಗಳನ್ನು ಅವನು ನೋಡುತ್ತಿದ್ದರೂ, ಅವೆಲ್ಲ ವಸ್ತುಗಳಲ್ಲಿರುವ ಚಿನ್ಮಯವೆಂಬ ತತ್ವವು ಇರುವುದೂ ಅವನಿಗೆ ಗೊಂದಲವನ್ನು ಉಂಟುಮಾಡುತ್ತದೆ. ಏಕೆಂದರೆ ವಿವಿಧ ವಸ್ತುಗಳೆಲ್ಲವು ಖಂಡವಾಗಿದ್ದರೆ, ಅವುಗಳಲ್ಲಿರುವ ಚಿದ್ವಸ್ತುವು ಅಖಂಡವಾಗಿರುತ್ತದೆ. ಆದುದರಿಂದ ಐಕ್ಯಸ್ಥಿತಿಯನ್ನು ಮುಟ್ಟಿದವನು ನಿರ್ವಾಣಿ (ಮಾತಿಲ್ಲದವನು,ಶಬ್ದ ಮುಗ್ಧ) (೪:೯೯೩).

**ನಿರ್ವಿಕಾರಿ :** ಪ್ರತಿಯೊಂದು ಭೌತವಸ್ತುವೂ ಪರಿಸರದ ಒತ್ತಡಕ್ಕೆ ತಕ್ಕಂತೆ ಬದಲಾವಣೆ ಹೊಂದಿ, ತನ್ನ ಆಕಾರಗಳನ್ನು ಕಳೆದುಕೊಳ್ಳುತ್ತಿರುತ್ತದೆ. ಆದರೆ ಚೈತನ್ಯಾತ್ಮಕನಾದ ಪರಶಿವನು ಭೌತವಸ್ತುವಲ್ಲವಾದುದರಿಂದ ಅವನು ನಿರ್ವಿಕಾರ (೨:೫೫).

**ನಿರ್ವಿಷಯ :** ವಿಷಯವೆಂದರೆ ಇಂದ್ರಿಯಗಳ ವಿಷಯ (ಉದಾಹರಣೆ ರುಚಿ ನಾಲಗೆಯ ವಿಷಯ) ಈ ರೀತಿ ವಿಷಯಲೋಲುಪತೆ ಇಲ್ಲದವನೇ ನಿರ್ವಿಷಯ.

**ನಿರ್ವ್ಯಾಪಾರಿಗಳು :** ಯಾವುದೇ ರೀತಿಯ ಸ್ವಾರ್ಥ ನಡತೆಯಿಲ್ಲದವನು; ಲಾಭದ ದೃಷ್ಟಿ ಇಲ್ಲದವನು; ನಿಸ್ವಾರ್ಥಿ (೮:೪೬೩)

**ನಿಹಿತದ ಉಭಯಸ್ಥಲ :** ಹೇಳುವ ನೀತಿ ಒಂದಾದರೆ, ನಡೆಯುವ ದಾರಿ ಮತ್ತೊಂದು (ಇದು ಒಳಗಿನ ಎರಡರ ರಹಸ್ಯ) (೮:೩೯).

**ನಿಃಕಲತತ್ವ :** (ನೋಡಿ: ನಿಃಕಲ ಶಿವತತ್ವ)

**ನಿಃಕಲಲಿಂಗ :** (ನೋಡಿ: ನಿಃಕಲ ಶಿವತತ್ವ)

**ನಿಃಕಲ ಶಿವತತ್ವ :** ಶೂನ್ಯಸ್ಥಿತಿಯಲ್ಲಿ ಪರಶಿವನೊಬ್ಬನೇ ಇರುತ್ತಾನೆ. ಆಗಿನ್ನೂ ಜಗತ್ತು ಸೃಷ್ಟಿಯಾಗಿರುವುದೂ ಇಲ್ಲ, ಸೃಷ್ಟಿಸಬೇಕೆಂಬ ಇಚ್ಛೆ ಅಥವಾ ನಿರ್ಧಾರ ಸಹಾ ಅವನಿಗಿರುವುದಿಲ್ಲ. ಆದರೆ ಮುಂದೆ ತಾನೊಬ್ಬನೇ ಇರುವುದರ ಅರಿವಾಗಿ, ಜಗತ್ತನ್ನು ಸೃಷ್ಟಿಸಬೇಕೆಂಬ ನಿರ್ಧಾರ ಮೂಡುತ್ತದೆ. ಇಂಥ ನಿರ್ಧಾರವುಳ್ಳ ಶಿವನ ಸ್ಥಿತಿಗೆ ನಿಃಕಲ (ನಿಷ್ಕಲ) ಶಿವತತ್ವವೆಂದು ಹೆಸರು. ಇದು ಕೇವಲ ಒಂದು ನಿರ್ಧಾರ ಸ್ಥಿತಿಯೇ ಹೊರತು, ವಾಸ್ತವಿಕ ಸೃಷ್ಟಿ ಮಾಡುವ ಕ್ರಿಯೆಯಲ್ಲ. ಇಂತಹ ಸ್ಥಿತಿಯಲ್ಲಿ ಅವನಿಂದ ಮುಂದೆ ಉದ್ಭವವಾಗಬೇಕಾಗಿರುವ ಅಂಗವಾರು, ಲಿಂಗವಾರು, ಶಕ್ತಿಯಾರು, ಭಕ್ತಿಯಾರು, ಇತ್ಯಾದಿಗಳನ್ನು ಶಿವನು ತನ್ನಲ್ಲೆ ಗರ್ಭೀಕರಿಸಿಕೊಂಡಿರುತ್ತಾನೆ. ಅವಿನ್ನೂ ಅವನಿಂದ ಭಾಗವಾಗಿಲ್ಲವಾದ ಕಾರಣ, ಅವನಿನ್ನೂ ನಿಷ್ಕಲಲಿಂಗ ಅಥವಾ ನಿಷ್ಕಲ ಶಿವತತ್ವ. ಅವು ಅವನಿಂದ ಉದ್ಭವವಾದನಂತರ ಶಿವನು ಸಕಲನೆನಿಸಿಕೊಳ್ಳುತ್ತಾನೆ. (೧೧ : ೨೨-೩೨)

**ನಿಃಕ್ರಿಯೆ :** ನಿಷ್ಕ್ರಿಯೆ, ನಿವೃತ್ತಿ, ವೈರಾಗ್ಯ. ಯಾವ ಕ್ರಿಯೆಯನ್ನೂ ಮಾಡದೆ ಕೇವಲ ವೈರಾಗ್ಯದ ಮೂಲಕ ಲಿಂಗಸಾಕ್ಷಾತ್ಕಾರ ಮಾಡಿಕೊಳ್ಳಬಹುದೆಂಬ ನಿವೃತ್ತಿ ಸಿದ್ಧಾಂತವನ್ನು ವಚನಕಾರರು ಒಪ್ಪುವುದಿಲ್ಲ (೯:೯೦).

**ನಿಃಕ್ರೀಲೇಪ :** ಯಾವ ಕರ್ಮವೂ ಅಂಟಿಕೊಳ್ಳದಂತೆ ಕರ್ಮಮಾಡುವುದು, ನಿಷ್ಕಾಮ ಕರ್ಮ (೬:೧೦೩೨).

**ನಿಃಪತಿ (ನಿಷ್ಪತ್ತಿ) :** ಇಲ್ಲವಾಗಿಸುವುದು.

**ನಿಃಶಬ್ದಬ್ರಹ್ಮ ಉಚ್ಯತೇ :** "ನಿಃಶಬ್ದವೇ ಬ್ರಹ್ಮ ಎಂದು ಹೇಳಲಾಗುತ್ತದೆ". ಬ್ರಹ್ಮ (ಪರಶಿವ)ನನ್ನು ತನ್ನ ಸ್ವಂತ ಅನುಭಾವದ ಮೂಲಕ ಅರಿತವನು ಪರಶಿವನ ಬಗೆಗೆ ಏನನ್ನೂ ಹೇಳುವುದಿಲ್ಲ. ಅದಕ್ಕೆ ಕಾರಣವಿಷ್ಟೇ:ನಾವು ಪ್ರತಿಯೊಂದು ಶಬ್ದವನ್ನೂ

ಇಂದ್ರಿಯಾನುಭವದ ಮೂಲಕವೇ ತಿಳಿದುಕೊಳ್ಳುತ್ತೇವೆ. ಇಂದ್ರಿಯಾನುಭವದ ಮೂಲಕ ಬಾರದ ಭಾಷೆ ಇಲ್ಲವೇ ಇಲ್ಲ. ಆದುದರಿಂದ ನಾವು ಯಾವುದೇ ರೀತಿಯ ಭಾಷೆಯನ್ನು ಉಪಯೋಗಿಸಿದರೂ ಅದು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಇಂದ್ರಿಯಾನುಭವದ ವಸ್ತುಗಳಿಗೆ ಅನ್ವಯಿಸುತ್ತದೆ. ಆದರೆ ಪರಬ್ರಹ್ಮ ನಾವು ನೋಡಿದ, ನಾವು ಮುಟ್ಟಿದ, ನಾವು ರುಚಿಸಿದ, ನಾವು ಕೇಳಿದ, ಯಾವ ವಸ್ತುವಿನಿಂತೆಯೂ ಇಲ್ಲವಾದುದರಿಂದ, ಅವನನ್ನು ನಮಗೆ ಗೊತ್ತಿರುವ ಯಾವ ಶಬ್ದಗಳಿಂದಲೂ ವರ್ಣಿಸಲು ಸಾಧ್ಯವಿಲ್ಲ. ಆಗ ಬ್ರಹ್ಮನನ್ನು ತಿಳಿದವರು ಅವನ್ನು ವರ್ಣಿಸ ಹೋಗಿ ಮೂಕ (ನಿಃಶಬ್ದ) ರಾಗುತ್ತಾರೆ (೨:೬೬೦).

ಎರಡನೆಯದಾಗಿ, ನಾವು ಯಾವುದೇ ವಸ್ತುವನ್ನು ಇಂದ್ರಿಯಾನುಭವದ ಮೂಲಕ ತಿಳಿದುಕೊಳ್ಳುವಾಗ ಜ್ಞಾತೃ ಜ್ಞೇಯಗಳ ದ್ವೈತವನ್ನು ಅನುಸರಿಸುತ್ತೇವೆ. ಆದರೆ ಪರಶಿವನನ್ನು ಅರಿತವರು ಈ ದ್ವೈತಕ್ಕೆ ಹೊರಗಾದುದರಿಂದ ಅವರು ಪರಶಿವನನ್ನು ಒಂದು ಜ್ಞೇಯದಂತೆ ವರ್ಣಿಸಲಾರರು. ಆಗಲೂ ಅವರು ನಿಃಶಬ್ದ.

**ನಿಃಸಂಸಾರಿ :** ಪ್ರಾಣದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿ, ಮನಸ್ಸಿನಲ್ಲೇ ವಸ್ತುಗಳನ್ನು ಲಿಂಗಕ್ಕೆ ಅರ್ಪಿಸಿ, ತೃಪ್ತಿಪಟ್ಟುಕೊಳ್ಳುವವನು ಸಂಸಾರಬಂಧನದಿಂದ ಮುಕ್ತ (ನಿಃಸಂಸಾರಿ)ನಾಗುತ್ತಾನೆ. (೮:೪೪೨)

**ನಿಃಸಂಗಿ :** ಅಂಗಸಂಗವಿಲ್ಲದ ಪರಶಿವ (೭:೬೨೮).

**ನುಡಿಯೆ ಬ್ರಹ್ಮವಾದವರು :** ಬ್ರಹ್ಮದ ಬಗೆಗೆ ಕೇವಲ ಮಾತನಾಡಿ, ನಡೆಯಲ್ಲಿ ಮಾತ್ರ ಲೌಕಿಕರಂತೆ ಇರುವವರು; ವಾಗದ್ವೈತಿಗಳು; (೪:೫೦೨).

**ನೂರೊಂದು ಸ್ಥಲ (ಏಕೋತ್ತರ ಶತಸ್ಥಲ) :** ವಚನಗಳಲ್ಲಿ ಅಲ್ಲಲ್ಲಿ ನೂರೊಂದು ಸ್ಥಲ ಅಥವಾ ಏಕೋತ್ತರ ಶತಸ್ಥಲ ಎಂಬ ಪದ ಪ್ರಯೋಗವಾಗಿದ್ದರೂ, ಆ ನೂರೊಂದು ಸ್ಥಲಗಳಾವವು, ಅವುಗಳ ವಿಶಿಷ್ಟ ಲಕ್ಷಣಗಳಾವವು ಎಂಬುದರ ವಿವರ ಸಿಕ್ಕುವುದಿಲ್ಲ. ಈ ವಿವರಗಳಿಗೆ ನಾವು, ಇದನ್ನು ವಿವರವಾಗಿ ತಿಳಿಸಿರುವ ಸಿದ್ಧಾಂತಶಿಖಾಮಣಿಯನ್ನು ಅವಲಂಬಿಸಬೇಕಾಗುತ್ತದೆ. ಜಕ್ಕಣಾರ್ಯರು ರಚಿಸಿದ 'ಏಕೋತ್ತರ ಶತಸ್ಥಲ'ವೂ ಇಲ್ಲಿ ಉಪಯೋಗಕರವಾಗಿದ್ದರೂ, ಅವರು ಯಾವೊಬ್ಬ ಶರಣರ ನೂರೊಂದು ಸ್ಥಲ ಪರಿಕಲ್ಪನೆಯನ್ನೂ ಕುರಿತು ಹೇಳುವುದಿಲ್ಲ. ಸಿದ್ಧಾಂತ ಶಿಖಾಮಣಿಯ ಸಿದ್ಧಾಂತಕ್ಕೆ ಹೋಲುವಂಥ ವಚನಗಳನ್ನು ಆಯ್ದು ಅವುಗಳನ್ನು ನೂರೊಂದು ಸ್ಥಲಗಳಡಿಯಲ್ಲಿ ತಂದಿದ್ದಾರೆ.

ನೂರೊಂದು ಸ್ಥಲಗಳನ್ನು ಮುಖ್ಯವಾಗಿ, ಅಂಗ ಷಟ್‌ಸ್ಥಲ ಮತ್ತು ಲಿಂಗಷಟ್‌ಸ್ಥಲ ಎಂದು ಎರಡು ಭಾಗ ಮಾಡಲಾಗಿದೆ. ಮೊದಲನೆಯದು ನಲವತ್ನಾಲ್ಕು ಸ್ಥಲಗಳನಒಳಗೊಂಡರೆ, ಎರಡನೆಯದು ಐವತ್ತೇಳು ಸ್ಥಲಗಳನ್ನೊಳಗೊಳ್ಳುತ್ತದೆ.

ವಚನಕಾರರೆಲ್ಲರೂ ಷಟ್‌ಸ್ಥಲ ಸಿದ್ಧಾಂತದ ಪ್ರತಿಪಾದಕರಾಗಿದ್ದರೂ, ಆ ಸಿದ್ಧಾಂತಕ್ಕೂ ನೂರೊಂದು ಸ್ಥಲ ಸಿದ್ಧಾಂತಕ್ಕೂ ವಿರೋಧ ಅಥವಾ ವ್ಯತ್ಯಾಸಬರದಂತೆ, ಅವೆರಡನ್ನೂ ಸಮನ್ವಯಗೊಳಿಸಿದ್ದಾರೆ. ಅಂದರೆ, ನೂರೊಂದು ಸ್ಥಲಗಳನ್ನು ಈ ಕೆಳಗಿನಂತೆ ಹಂಚಿದ್ದಾರೆ:

(ಅ) ಅಂಗ ಷಟ್‌ಸ್ಥಲಗಳಡಿಯಲ್ಲಿ ಈ ಕೆಳಗಿನ ೪೪ ಸ್ಥಲಗಳು ಬರುತ್ತವೆ :

೧. ಭಕ್ತಸ್ಥಲದಡಿಯಲ್ಲಿ ೧೫ ಸ್ಥಲಗಳು (ಅವು ಯಾವುವೆಂದರೆ : ಪಿಂಡಸ್ಥಲ, ಪಿಂಡಜ್ಞಾನಸ್ಥಲ; ಸಂಸಾರ ಹೇಯಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಸ್ಥಲ, ರುದ್ರಾಕ್ಷಿ ಸ್ಥಲ, ಪಂಚಾಕ್ಷರಿಸ್ಥಲ, ಭಕ್ತಿಸ್ಥಲ, (ಅಥವಾ ಭಕ್ತಿಮಾರ್ಗಕ್ರಿಯಾಸ್ಥಲ), ಉಭಯಸ್ಥಲ, ತ್ರಿವಿಧ ಸಂಪತ್ತಿನ ಸ್ಥಲ, ಚತುರ್ವಿಧ ಸಾರಾಯಸ್ಥಲ, ಉಪಾಧಿ ಮಾಟಸ್ಥಲ, ನಿರುಪಾಧಿ ಮಾಟಸ್ಥಲ ಮತ್ತು ಸಹಜ ಮಾಟಸ್ಥಲ).

೨. ಮಹೇಶ್ವರಸ್ಥಲದಡಿಯಲ್ಲಿ ಒಂಬತ್ತು ಸ್ಥಲಗಳು (ಅವು ಯಾವುದೆಂದರೆ : ಮಹೇಶ್ವರಸ್ಥಲ, ಲಿಂಗನಿಷ್ಠಾಸ್ಥಲ, ಪೂರ್ವಾಶ್ರಯಿನಿರಸನಸ್ಥಲ, ವಾಗದ್ವೈತನಿರಸನಸ್ಥಲ, ಆಹ್ವಾನ ನಿರಸನಸ್ಥಲ, ಅಷ್ಟತನು ಮೂರ್ತಿನಿರಸನಸ್ಥಲ, ಸರ್ವಗತ ನಿರಸನಸ್ಥಲ, ಶಿವಜಗನ್ಮಯಸ್ಥಲ, ಭಕ್ತದೇಹಿಕ ಲಿಂಗಸ್ಥಲ).

೩. ಪ್ರಸಾದಿಸ್ಥಲದಡಿಯಲ್ಲಿ ಏಳು ಸ್ಥಲಗಳು (ಅವೆಂದರೆ : ಪ್ರಸಾದಿಸ್ಥಲ, ಗುರುಮಹಾತ್ಮ್ಯಸ್ಥಲ, ಲಿಂಗಮಹಾತ್ಮ್ಯಸ್ಥಲ, ಶರಣಮಹಾತ್ಮ್ಯಸ್ಥಲ, ಜಂಗಮ ಮಹಾತ್ಮ್ಯಸ್ಥಲ, ಭಕ್ತಮಹಾತ್ಮ್ಯಸ್ಥಲ, ಪ್ರಸಾದ ಮಹಾತ್ಮ್ಯಸ್ಥಲ).

೪. ಪ್ರಾಣಲಿಂಗಿಸ್ಥಲವು ಐದು ಸ್ಥಲಗಳನ್ನೊಳಗೊಳ್ಳುತ್ತದೆ. (ಅವೆಂದರೆ : ಪ್ರಾಣಲಿಂಗಿಸ್ಥಲ, ಪ್ರಾಣಲಿಂಗಾರ್ಚನಸ್ಥಲ, ಶಿವಯೋಗ ಸಮಾಧಿ ಸ್ಥಲ, ಲಿಂಗಲಿಜಸ್ಥಲ, ಅಂಗನಿಂಗಸ್ಥಲ).

೫. ಶರಣಸ್ಥಲವು ನಾಲ್ಕು ಸ್ಥಲಗಳನ್ನೊಳಗೊಳ್ಳುತ್ತದೆ. (ಅವೆಂದರೆ : ಶರಣಸ್ಥಲ, ತಾಮಸನಿರಸನಸ್ಥಲ, ನಿರ್ದೇಶಸ್ಥಲ, ಶೀಲಸಂಪಾದನಾ ಸ್ಥಲ).

೬. ಐಕ್ಯಸ್ಥಲವು ನಾಲ್ಕು ಸ್ಥಲಗಳನ್ನೊಳಗೊಳ್ಳುತ್ತದೆ. (ಅವೆಂದರೆ : ಐಕ್ಯಸ್ಥಲ, ಸರ್ವಾಚಾರ ಸಂಪತ್ತಿನ ಸ್ಥಲ, ಏಕಭಾಜನಸ್ಥಲ, ಸಹಭಾಜನ ಸ್ಥಲ).

(ಆ) ಲಿಂಗಷಟ್‌ಸ್ಥಲದಡಿಯಲ್ಲಿ ಉಳಿದ ೫೭ ಸ್ಥಲಗಳು ಬರುತ್ತವೆ. ಅವುಗಳ ವಿವರ:

(೧) ಆಚಾರಲಿಂಗಸ್ಥಲದಡಿಯಲ್ಲಿ : ದೀಕ್ಷಾಗುರುಸ್ಥಲ, ಶಿಕ್ಷಾಗುರುಸ್ಥಲ, ಜ್ಞಾನಗುರುಸ್ಥಲ, ಕ್ರಿಯಾಲಿಂಗಸ್ಥಲ, ಭಾವಲಿಂಗಸ್ಥಲ, ಜ್ಞಾನಲಿಂಗಸ್ಥಲ, ಸ್ವಯಸ್ಥಲ, ಚರಸ್ಥಲ ಮತ್ತು ಪರಸ್ಥಲ ಎಂಬ ಒಂಬತ್ತು ಸ್ಥಲಗಳು ಬರುತ್ತವೆ.

(೨) ಗುರುಲಿಂಗಸ್ಥಲವು ಕ್ರಿಯಾಗಮಸ್ಥಲ, ಭಾವಾಗಮಸ್ಥಲ, ಜ್ಞಾನಾಗಮಸ್ಥಲ, ಸಕಾಯಸ್ಥಲ; ಅಕಾಯಸ್ಥಲ, ಪರಕಾಯಸ್ಥಲ, ಧರ್ಮಾಚಾರಸ್ಥಲ, ಭಾವಾಚಾರಸ್ಥಲ, ಜ್ಞಾನಾಚಾರಸ್ಥಲ ಎಂಬ ಒಂಬತ್ತು ಸ್ಥಲಗಳನ್ನು ಒಳಗೊಳ್ಳುತ್ತದೆ.

(೩) ಶಿವಲಿಂಗಸ್ಥಲವೂ ಒಂಬತ್ತು ಸ್ಥಲಗಳನ್ನು ಒಳಗೊಳ್ಳುತ್ತದೆ. ಅವೆಂದರೆ : ಕಾಯಾನುಗ್ರಹಸ್ಥಲ, ಇಂದ್ರಿಯಾನುಗ್ರಹಸ್ಥಲ, ಪ್ರಾಣಾನುಗ್ರಹಸ್ಥಲ, ಕಾಯಾರ್ಪಿತಸ್ಥಲ, ಕರಣಾರ್ಪಿತಸ್ಥಲ, ಭಾವಾರ್ಪಿತಸ್ಥಲ, ಶಿಷ್ಯಸ್ಥಲ, ಶುಶ್ರೂಷಾಸ್ಥಲ, ಸೇವ್ಯಸ್ಥಲ.

(೪) ಜಂಗಮಲಿಂಗದಡಿಯಲ್ಲಿ ಜೀವಾತ್ಮಸ್ಥಲ, ಅಂತರಾತ್ಮಸ್ಥಲ, ಪರಮಾತ್ಮಸ್ಥಲ, ನಿರ್ದೇಹಾಗಮಸ್ಥಲ, ನಿರ್ಭಾವಾಗಮಸ್ಥಲ, ನಷ್ಟಾಗಮಸ್ಥಲ, ಆದಿಪ್ರಸಾದಿಸ್ಥಲ, ಅಂತ್ಯಪ್ರಸಾದಿಸ್ಥಲ, ಸೇವ್ಯಪ್ರಸಾದಿಸ್ಥಲ, ದೀಕ್ಷಾಪಾದೋದಕಸ್ಥಲ, ಜ್ಞಾನಪಾದೋದಕಸ್ಥಲ ಎಂಬ ಹನ್ನೆರೆಡು ಸ್ಥಲಗಳು ಸೇರುತ್ತವೆ.

(೫) ಪ್ರಸಾದಲಿಂಗಸ್ಥಲವು ಕ್ರಿಯಾನಿಷ್ಪತ್ತಿ ಸ್ಥಲ, ಭಾವನಿಷ್ಪತ್ತಿಸ್ಥಲ, ಜ್ಞಾನನಿಷ್ಪತ್ತಿಸ್ಥಲ, ಪಿಂಡಾಕಾಶಸ್ಥಲ, ಬಿಂದ್ವಾಕಾಶಸ್ಥಲ, ಮಹದಾಕಾಶಸ್ಥಲ, ಕ್ರಿಯಾಪ್ರಕಾಶಸ್ಥಲ, ಭಾವಪ್ರಕಾಶಸ್ಥಲ, ಜ್ಞಾನಪ್ರಕಾಶಸ್ಥಲ ಎಂಬ ಒಂಬತ್ತು ಸ್ಥಲಗಳನ್ನೊಳಗೊಳ್ಳುತ್ತದೆ.

(೬) ಮಹಾಲಿಂಗಸ್ಥಲವು ಸ್ವೀಕೃತಪ್ರಸಾದಿಸ್ಥಲ, ಶಿಷ್ಟೌದನಸ್ಥಲ, ಚರಾಚರನಾಸ್ತಿಸ್ಥಲ, ಭಾಂಡಸ್ಥಲ, ಭಾಜನಸ್ಥಲ, ಅಂಗಲೇಪಸ್ಥಲ, ಸ್ವಪರಾಜ್ಞಾಸ್ಥಲ, ಭಾವಾಭಾವಲಯಸ್ಥಲ, ಜ್ಞಾನಶೂನ್ಯಸ್ಥಲ ಎಂಬ ಒಂಬತ್ತು ಸ್ಥಲಗಳನ್ನು ಒಳಗೊಂಡಿದೆ.

ಅಂಗ ಷಟ್‌ಸ್ಥಲಕ್ಕೂ ಲಿಂಗ ಷಟ್‌ಸ್ಥಲಕ್ಕೂ ಇರುವ ಮುಖ್ಯವ್ಯತ್ಯಾಸವನ್ನು ನಾವು ಹೀಗೆ ಸಂಕ್ಷಿಪ್ತವಾಗಿ ಹೇಳಬಹುದು : ಅಂಗನು (ಸಾಧಕನು) ಮಾಡುವ ಸಾಧನೆಯಲ್ಲಿ ಹೆಚ್ಚಾಗಿ ಸಾಧಾರಣ ಆಧ್ಯಾತ್ಮಿಕತೆ ಇದ್ದು, ಲಿಂಗಷಟ್‌ಸ್ಥಲದ ಸಾಧನೆಯು ಉನ್ನತ ಮಟ್ಟದ್ದು ಇದೆ. ಅಥವಾ ಮೊದಲನೆಯದು ಹೆಚ್ಚಾಗಿ ಕ್ರಿಯೆಗಳನ್ನು ಒಳಗೊಂಡಿದ್ದು, ಎರಡನೆಯದು ಹೆಚ್ಚಾಗಿ ಜ್ಞಾನ ಮತ್ತು ಭಕ್ತಿಯನ್ನೊಳಗೊಂಡಿದೆ.

**ನೆನಹ ನಿಲಿಸುವುದು :** ಗುರುವು ಭಕ್ತರಿಗೆ ಲಿಂಗವನ್ನು ಕೊಡುವುದು ಸುಲಭ, ಆದರೆ ಹಾಗೆ ಕೊಟ್ಟವನಿಗೆ ಭಕ್ತನ ಹರಿದಾಡುವ ಮನಸ್ಸನ್ನು ನಿಲ್ಲಿಸಿ, ಏಕಾಗ್ರತೆಯನ್ನು ಉಂಟುಮಾಡುವುದಾಗಲಿ, ಆ ಮನಸ್ಸನ್ನು ತಾನು ಕೊಟ್ಟ ಲಿಂಗದಲ್ಲಿ ನೆಲೆಸುವಂತೆ ಮಾಡುವುದಾಗಲಿ ಸುಲಭವಲ್ಲ (೯:೪೦೩).

**ನೆನಹು :** ವಚನಕಾರರು ಈ ಪದವನ್ನು ಕನಿಷ್ಠ ನಾಲ್ಕು ಅರ್ಥಗಳಲ್ಲಿ ಬಳಸಿರುವಂತೆ ಕಾಣುತ್ತದೆ.

೧. ಇಚ್ಛೆ ಅಥವಾ ನಿರ್ಧಾರ. 'ಆ ನೆನಹೇ ಜ್ಞಾನಶಕ್ತಿಯಾಗಿತ್ತು'. (೧೧:೨೨-೩೨) ಎಂಬಲ್ಲಿ ಸೃಷ್ಟಿಸಬೇಕೆಂಬ ಪರಶಿವನ ನಿರ್ಧಾರವೇ ಚಿಚ್ಛಕ್ತಿಯಾಗಿ ಅಲ್ಲಿಂದ, ಮುಂದೆ ಸೃಷ್ಟಿಕಾರ್ಯ ಪ್ರಾರಂಭವಾಗುತ್ತದೆ, ಎಂಬರ್ಥವಿದೆ.

೨. ಅಹಂ. 'ನೆನಹು ನಿಃಪತಿಯಾದ ಮತ್ತೆ... ಲಿಂಗವೆಂಬ ನಾಮವಡಗಿತ್ತು'. (೯:೨೪೯) ಜ್ಞಾತೃ ಭಾವ ಅಥವಾ ಅಹಂ ಅಡಗಿದಾಗ, ಲಿಂಗವೆಂಬ ಜ್ಞೇಯಭಾವವೂ ಅಡಗುತ್ತದೆ ಎಂಬರ್ಥವಿದೆ.

೩. ಮನಸ್ಸು ಅಥವಾ ಬುದ್ಧಿ. 'ನೆನಹಿನಲ್ಲಿ ಕುರುಹುಗೊಂಡು ನಿಂದು, ಆ ನೆನಹೆ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ಸಲೆತಂದುದು', (೯:೨೬೨) ಎಂಬಲ್ಲಿ ಧ್ಯಾನನಿರತ ಬುದ್ಧಿಯಲ್ಲಿ (ಮನಸ್ಸಿನಲ್ಲಿ) ಪರಶಿವ ನೆಲೆಗೊಳ್ಳುತ್ತಾನೆ, ಎಂಬರ್ಥವಿದೆ.

೪. ನೆನಪು. 'ನಿಮ್ಮ ನೆನಹಿಲ್ಲದೆ ನಿರ್ಭಾಗ್ಯನಾದೆ' (೧:೨೫೭) ಎಂಬಲ್ಲಿ ಶಿವನನ್ನು ನೆನಪಿಸಿಕೊಳ್ಳದೆ (ಧ್ಯಾನಿಸದೆ) ಕೆಟ್ಟೆ ಎಂಬರ್ಥವಿದೆ.

**ನೆನಹು ಮಾತ್ರ :** ಸೃಷ್ಟಿ ಮಾಡಬೇಕೆಂಬ ಇಚ್ಛೆ ಪರಶಿವನಿಗೆ ಬಂದಾಗ ಅವನು ಮತ್ತಾವ ಉಪಾದಾನ ಕಾರಣದ ಸಹಾಯವಿಲ್ಲದೆ ಕೇವಲ ನೆನಹು ಅಥವಾ ಚಿತ್ತು ಅಥವಾ ಚಿತ್‌ಶಕ್ತಿಯಿಂದ ಸೃಷ್ಟಿಮಾಡುತ್ತಾನೆ. ಹೀಗೆ ಸೃಷ್ಟಿ ಎಲ್ಲವು ಪರಶಿವನ ಚಿತ್‌ಶಕ್ತಿಯ ವಿವಿಧ ರೂಪಾಂತರ. (೭:೫೭೮)

**ನೇತ್ರಲಿಂಗಸಮರಸ :** ಲಿಂಗಾಂಗ ಸಾಮರಸ್ಯ ಸಾಧಿಸಿದವನ ನೇತ್ರವೂ ಲಿಂಗದಲ್ಲಿ ಒಂದಾಗುತ್ತದೆ (೧೦:೧೫೯೪).

**ನೇಮ :** (ನೋಡಿ : **ವ್ರತ ಶೀಲ ನೇಮ**)

**ನೈವೇದ್ಯ :** ಅರ್ಪಣೆ.

**ನ್ಯಾಯವೈಶೇಷಿಕ :** ಮೂಲದಲ್ಲಿ ಗೌತಮ ಮಹರ್ಷಿಯು ಪ್ರತಿಪಾದಿಸಿದ ನ್ಯಾಯದರ್ಶನವೂ ಕಣಾದ ಮಹರ್ಷಿ ಪ್ರತಿಪಾದಿಸಿದ ವೈಶೇಷಿಕ ದರ್ಶನವೂ ಬೇರೆ ಬೇರೆಯಾಗಿದ್ದವು. ನ್ಯಾಯದರ್ಶನವು ಸೇಶ್ವರವಾದಿಯಾಗಿದ್ದರೆ ವೈಶೇಷಿಕ ದರ್ಶನವು ನಿರೀಶ್ವರವಾದಿಯಾಗಿತ್ತು. ನ್ಯಾಯದರ್ಶನವು ತರ್ಕಶಾಸ್ತ್ರಕ್ಕೂ ಪ್ರಮಾಣಶಾಸ್ತ್ರಕ್ಕೂ ಒತ್ತುಕೊಟ್ಟರೆ, ವೈಶೇಷಿಕ ದರ್ಶನವು ವಿಶ್ವಶಾಸ್ತ್ರಕ್ಕೆ ಒತ್ತುಕೊಟ್ಟಿತು. ಸುಮಾರು ಕ್ರಿ. ಶ. ಒಂಬತ್ತನೇ ಶತಮಾನದ ಹೊತ್ತಿಗೆ ಇವೆರಡೂ ಒಂದುಗೂಡಿ ಅಲ್ಲಿಂದ ಮುಂದಕ್ಕೆ "ನ್ಯಾಯವೈಶೇಷಿಕ" ವೆಂಬ ಜೋಡಿ ಹೆಸರಿನ ದರ್ಶನವೆನಿಸಿಕೊಂಡಿವೆ. ನ್ಯಾಯವೈಶೇಷಿಕವು ಸೇಶ್ವರವಾದೀಯ ದರ್ಶನವಾಗಿದ್ದರೂ, ತರ್ಕಶಾಸ್ತ್ರ ಮತ್ತು ವಿಶ್ವಶಾಸ್ತ್ರಗಳು ಜೀವನಕ್ಕೆ ಹೆಚ್ಚು ಪ್ರಯೋಜನಕಾರಿಯಲ್ಲ ಎಂಬ ಕಾರಣದಿಂದ ವಚನಕಾರರಿಗೆ ಸ್ವೀಕಾರಾರ್ಹವಾಗಿಲ್ಲದಿರಬಹುದು.

**ಪಂಚಕರಣ :** ಐದು ಕರಣಗಳು. ಈ ಐದು ಕರಣಗಳು ಬಾಹ್ಯ ಕರಣಗಳಾದರೂ ಆಗಬಹುದು, ಅಂತಃಕರಣಗಳಾದರೂ ಆಗಬಹುದು. ಆದರೆ ಸಿದ್ಧರಾಮನು (೪:೧೩೩೪, ೧೫೯೩) ಮಾತ್ರ ಈ ಪದವನ್ನು ಅಂತಃಕರಣಗಳಿಗೆ ಅನ್ವಯಿಸುವಂತೆ ಉಪಯೋಗಿಸುತ್ತಾನೆ. ಮನಸ್ಸು, ಬುದ್ಧಿ, ಚಿತ್ತ, ಅಹಂ ಮತ್ತು ಜ್ಞಾನ (ಜೀವ) ಇವೇ ಆ ಐದು ಕರಣಗಳು. ಅಜ್ಞಾನಕ್ಕೊಳಗಾದ ಮನಸ್ಸು ಇಲ್ಲದುದನ್ನು ಕಲ್ಪಿಸಿಕೊಂಡು, ಇದ್ದುದನ್ನು ಅರಿಯಲು ಅಸಮರ್ಥವಾಗಿದೆ; ಬುದ್ಧಿಯು ಇಂದ್ರಿಯ ಸಂವೇದನೆಗಳನ್ನು ಉಪಯೋಗಿಸಿಕೊಂಡು ಜ್ಞಾನವನ್ನು ರಚಿಸುತ್ತದೆ. ನಾನು ಅರಿಯುತ್ತಿದ್ದೇನೆ, ನಾನು ಅನುಭವಿಸುತ್ತಿದ್ದೇನೆ, ನಾನು

ಮಾಡುತ್ತೇನೆ ಎಂಬ ಭಾವವು ಅಹಂಕಾರದಿಂದಾಗಿದೆ. ಸುಖ ದುಃಖಗಳನ್ನು ಅನುಭವಿಸುವುದು ಚಿತ್ತ. ಜೀವ ಅಥವಾ ಜ್ಞಾನವು ಇವೆಲ್ಲವನ್ನೂ ಸಕ್ರಿಯಗೊಳಿಸುವ ಚೇತನ.

**ಪಂಚಕರ್ಮೇಂದ್ರಿಯುಗಳು :** ವಾಕು, ಹಸ್ತ, ಪಾದ, ಪಾಯು ಮತ್ತು ಗುಹ್ಯ.

**ಪಂಚಕಲೆ ಪಂಚಕಲಾಶಕ್ತಿ :** ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ, (ನೋಡಿ:**ಶಕ್ತಿ, ಕಲೆ ಮತ್ತು ಶಕ್ತಿ**)

**ಪಂಚಕೃತ್ಯ :** ಪರಶಿವನ ಐದು ಕೃತ್ಯಗಳು. ಅವೆಂದರೆ, ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹ. ಪರಶಿವನು ತನ್ನ ಶಕ್ತಿಯನ್ನು ವಿಕಸಿಸಲು ನಿರ್ಧರಿಸಿದಾಗ ಸೃಷ್ಟಿಯಾಗುತ್ತದೆ. ಸೃಷ್ಟಿಯಾದ ಜಗತ್ತು ನಾಶವಾಗದಂತೆ, ದುಷ್ಟ ಶಿಕ್ಷಣ ಮತ್ತು ಶಿಷ್ಟ ರಕ್ಷಣ ಮಾಡುವುದೇ ಸ್ಥಿತಿ; ತನ್ನ ಲೀಲೆ ಸಾಕೆನಿಸಿದಾಗ, ಜಗತ್ತನ್ನು ತನ್ನೊಳಕ್ಕೆ ಎಳೆದುಕೊಂಡು ಮುಂಚಿನಂತೆ ಅದು ಶಕ್ತಿಯ ರೂಪಾಗುವುದೇ ಲಯ; ಅವರವರ ಕರ್ಮಗಳಿಗೆ ತಕ್ಕಂತೆ ಜೀವರನ್ನು ಬಂಧಿಸುವುದೇ ತಿರೋಧಾನ; ಅವರವರ ಆಧ್ಯಾತ್ಮಿಕ ಪ್ರಯತ್ನಕ್ಕೆ ತಕ್ಕಂತೆ ಜೀವರನ್ನು ಬಿಡುಗಡೆ ಮಾಡುವುದೇ ಅನುಗ್ರಹ.

**ಪಂಚಕೃತ್ಯಾಧಿಕಾರಿ :** ಸೃಷ್ಟಿ, ಸ್ಥಿತಿ, ಲಯ ತಿರೋಧಾನ ಮತ್ತು ಅನುಗ್ರಹ ಎಂಬ ಐದು ಕೃತ್ಯಗಳನ್ನು ಮಾಡುವ ಅಧಿಕಾರವುಳ್ಳವನು, ಪರಶಿವ. (೪:೧೬೫೧)

**ಪಂಚಕೋಶ :** ಉಪನಿಷತ್ತುಗಳಲ್ಲಿ ಪ್ರಥಮ ಬಾರಿಗೆ ಉಲ್ಲೇಖಿತವಾಗಿರುವ ಪಂಚಕೋಶ ಪರಿಕಲ್ಪನೆ ವಚನಗಳಲ್ಲೂ ಪ್ರಸ್ತಾಪಿಸಲ್ಪಟ್ಟಿದೆ. ಪರಿಕಲ್ಪನೆಯ ಮೂಲ ಅರ್ಥವನ್ನು ವಚನಕಾರರು ಬದಲಾಯಿಸಿಲ್ಲ. ಆದರೆ ಅದನ್ನು ತಮ್ಮ ಸಿದ್ಧಾಂತಕ್ಕನುಗುಣವಾಗಿ ಹಿಗ್ಗಿಸಿದ್ದಾರೆ.

ಪಂಚಕೋಶದ ಸಿದ್ಧಾಂತದ ಪ್ರಕಾರ, ಪರಬ್ರಹ್ಮ ಸ್ವರೂಪವಾದ ಜೀವಾತ್ಮನು ಮಾನವನ ಐದು ಕೋಶಗಳಲ್ಲಿ ಅಡಗಿದ್ದಾನೆ. ಅವುಗಳ ವಿವರ ಹೀಗಿದೆ :

೧. ಅನ್ನಮಯ ಕೋಶ : ಅನ್ನಮಯ ಕೋಶವೆಂದರೆ ನಾವು ತಿಂದ ಅನ್ನ (ಆಹಾರ)ದಿಂದ ರೂಪುಗೊಂಡ ಸ್ಥೂಲ ಶರೀರ. ವಚನಕಾರರು ಈ ಮಾತನ್ನು ಒಪ್ಪಿಕೊಂಡರೂ, ಈ ಅನ್ನವು ಪ್ರಸಾದ ರೂಪವಪ್ಪೆಂದೂ, ಆದುದರಿಂದ, ಅದು ಪ್ರಸಾದಕಾಯವೆಂದೂ ಹೇಳುತ್ತಾರೆ.

೨. ಪ್ರಾಣಮಯಕೋಶ : ಅನ್ನಮಯಕೋಶದೊಳಗಿರುವ ಪ್ರಾಣಮಯ ಕೋಶವು ಪ್ರಾಣಸ್ವರೂಪದ್ದಾಗಿದೆ. ಪ್ರಾಣಲಿಂಗಿಯಾದವನು ತನ್ನ ಪ್ರಾಣವನ್ನೆ ಲಿಂಗವನ್ನಾಗಿ ಮಾಡಿಕೊಳ್ಳುತ್ತಾನೆ. (ಪ್ರಾಣವಿರುವ ಪ್ರತಿ ಸ್ಥಳದಲ್ಲಿಯೂ ಲಿಂಗವನ್ನು ಪ್ರತಿಷ್ಠಾಪಿಸಿಕೊಳ್ಳುತ್ತಾನೆ).

೩. ಮನೋಮಯಕೋಶ : ಪ್ರಾಣಮಯ ಕೋಶದೊಳಗಿರುವ ಮನಸ್ಸು ಅಥವಾ ಮನೋಮಯಕೋಶ ಯಾವಾಗಲೂ ಶಿವಧ್ಯಾನದಲ್ಲೇ ನಿರತವಾಗಿ, ಮತ್ತೊಂದನ್ನು ಯೋಚಿಸುವುದಿಲ್ಲ.

೪. ವಿಜ್ಞಾನಮಯ ಕೋಶ : ಮನೋಮಯಕೋಶದೊಳಗಿರುವ ವಿಜ್ಞಾನವು (ವಿಜ್ಞಾನಮಯಕೋಶವು) ಚಿತ್‌ಸ್ವರೂಪದಾಗಿದ್ದು, ಭವಾಂತರದಲ್ಲಿ ಕಲುಷಿತಗೊಂಡಿದೆ. ಲಿಂಗಸಾಧಕನು ಆಧ್ಯಾತ್ಮಿಕ ಸಾಧನೆಯ ಮೂಲಕವೂ ಧ್ಯಾನದ ಮೂಲಕವೂ ಅದರ ಜ್ಞಾನಸ್ವರೂಪವನ್ನು ಅನುಭವಿಸುತ್ತಾನೆ.

೫. ಆನಂದಮಯಕೋಶ : ವಿಜ್ಞಾನಮಯಕೋಶದಲ್ಲಿರುವ ಆನಂದಮಯವಾದ ವಿಜ್ಞಾನವು (ಆತ್ಮನು) ಸದಾ ಶಿವನೊಂದಿಗೆ ಐಕ್ಯವಾಗಿ ತೃಪ್ತಿಯಿಂದ ಇರುತ್ತಾನೆ.

ವಾಸ್ತವವಾಗಿ, ಪಂಚಕೋಶಗಳನ್ನು ಪ್ರಸ್ತಾಪಿಸುವ ಗುಮ್ಮಳಾಪುರದ ಸಿದ್ಧಲಿಂಗದೇವನು ಪ್ರತಿಕೋಶವನ್ನು ಪ್ರಸ್ತಾಪಿಸುವಾಗಲೂ ಬಸವಣ್ಣನ ಹೆಸರನ್ನು ತರುತ್ತಾನೆ. ಉದಾಹರಣೆಗೆ "...ಎನ್ನ ಅನ್ನಮಯವ ಪ್ರಸಾದಸ್ವರೂಪವಾಗಿ ಬಂದು ಒಳಕೊಂಡನಯ್ಯಾ ಬಸವಣ್ಣ; ಎನ್ನ ಪ್ರಾಣಮಯ ಲಿಂಗಸ್ವರೂಪವಾಗಿ ಬಂದು ಒಳಕೊಂಡನಯ್ಯಾ ಬಸವಣ್ಣ... (ಇತ್ಯಾದಿ)" ಹೀಗೆ "ಎನ್ನ ಅಂಗ, ಮನ, ಪ್ರಾಣೇಂದ್ರಿಯಗಳಲ್ಲಿ ಪರಿಪೂರ್ಣವಾಗಿ ಬಸವಣ್ಣನೇ ಇಷ್ಟವಾಗಿ ತೊಳಗಿ ಬೆಳಗುತ್ತಿಪ್ಪ ಭೇದವನು...."(11:784) ಎಂದು ಅವನು ಹೇಳುವಲ್ಲಿ ಬಸವಣ್ಣನೇ ಶಿವನೆಂಬ ಅಭಿಪ್ರಾಯ ಹೊರಹೊಮ್ಮುತ್ತದೆ.

**ಪಂಚಕೋಶಗಳನ್ನು ಕೆಡಿಸುವುದು :** ಶಿವಸ್ವರೂಪನಾದ ಅಂಗನು, ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ, ಎಂಬ ಪಂಚಕೋಶದೊಳಗೆ ಬಂಧಿತನಾಗಿದ್ದು, ಅವುಗಳಿಂದಾಗಿ ಅನೇಕ ದುಃಖಗಳಿಗೆ ಈಡಾಗಿದ್ದಾನೆ. ಆದರೆ ಅವುಗಳ ದುಷ್ಪರಿಣಾಮಗಳನ್ನು ಇಲ್ಲವಾಗಿಸಿದರೆ, ಲಿಂಗಾಂಗ ಸಾಮರಸ್ಯ ಪಡೆಯಬಹುದು. ವಚನಕಾರರು ಪಂಚಕೋಶಗಳ ದುಷ್ಪರಿಣಾಮಗಳನ್ನು ಹೇಗೆ ಕಡಿಮೆ ಮಾಡಬಹುದೆಂಬುದನ್ನು ಈ ಕೆಳಗಿನಂತೆ ಸೂಚಿಸಿದ್ದಾರೆ :

ಎಲ್ಲ ಪದಾರ್ಥಗಳನ್ನೂ ಲಿಂಗಾರ್ಪಿತ ಮಾಡಿ, ಲಿಂಗ ಭೋಗಿಸಿದ ನಂತರವೇ ತಾನು ಭೋಗಿಸುತ್ತೇನೆಂದು ನಿರ್ಧರಿಸಿ, ಅದರಂತೆ ಮಾಡಿದಾಗ ಅವನ ಅನ್ನಮಯ ಕೋಶ ಕೆಟ್ಟು, ಪ್ರಸಾದಕಾಯವಾಗುತ್ತದೆ; ಪಂಚವಾಯುಗಳನ್ನು ನಿಯಂತ್ರಿಸಿ, ಲಿಂಗವು ಪ್ರಾಣಮಯವಾದಾಗ, ಪ್ರಾಣಮಯಕೋಶ ಕೆಡುತ್ತದೆ; ಮನಸ್ಸಿನಲ್ಲಿದ್ದ ಐಹಿಕ ಆಸೆಗಳೆಲ್ಲಾ ಹೋಗಿ, ಅಲ್ಲಿ ಲಿಂಗ ನೆಲೆಗೊಂಡರೆ, ಮನೋಮಯ ಕೋಶ ಕೆಡುತ್ತದೆ, ಧ್ಯಾನದಲ್ಲಿ ಜ್ಞಾತೃ-ಜ್ಞೇಯಗಳೆರೆಡೂ ಒಂದಾದರೆ, ವಿಜ್ಞಾನಮಯಕೋಶ ಕೆಡುತ್ತದೆ; ಅನುಭಾವದಲ್ಲಿ ಆನಂದವನ್ನು ಪಡೆದು ಐಹಿಕ ಆನಂದವನ್ನು ಕಡೆಗಣಿಸಿದರೆ ಆನಂದಮಯಕೋಶ ಕೆಡುತ್ತದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಆತ್ಮನು (ಅಂಗನು) ಕೋಶಗಳಲ್ಲಿ ಬಂಧಿತನಾಗಿದ್ದು, ಆ ಬಂಧನದಿಂದ ಅವನನ್ನು ಬಿಡಿಸುವುದು. ಆ ಬಿಡಿಸುವ ಪ್ರಯತ್ನದಲ್ಲಿ ಕೋಶಗಳೇನೂ ನಾಶವಾಗುವುದಿಲ್ಲ. ಅವುಗಳ ದುರ್ಗುಣಗಳಷ್ಟೇ ನಾಶವಾಗಿ, ಆತ್ಮನು ಮೊದಲಿನಂತೆ ಪ್ರಕಾಶಿಸುತ್ತಾನೆ.

**ಪಂಚಜ್ಞಾನ :** ಜೈನ ದರ್ಶನದ ಪ್ರಕಾರ, ನಮ್ಮ ಜ್ಞಾನವು ಐದು ರೀತಿಯದಾಗಿರುತ್ತದೆ. ಈ ಐದು ರೀತಿಗಳೆಂದರೆ : ಮತಿಜ್ಞಾನ, ಶ್ರುತ ಜ್ಞಾನ, ಅವಧಿ ಜ್ಞಾನ, ಮನಃ ಪರ್ಯಾಯ ಜ್ಞಾನ ಮತ್ತು ಕೇವಲ ಜ್ಞಾನ. ಮತಿ ಜ್ಞಾನವೆಂದರೆ ಮನಸ್ಸು (ಮತಿ) ಮತ್ತು ಇಂದ್ರಿಯಗಳ ಮೂಲಕ ಪಡೆದ ಜ್ಞಾನ. ಜ್ಞಾನ ಪಡೆಯುವುದು ಮತಿ, ಆದರೆ ಅದು ಇಂದ್ರಿಯಗಳನ್ನು ಉಪಯೋಗಿಸಿಕೊಂಡು ಜ್ಞಾನವನ್ನು ಪಡೆಯುತ್ತದೆ.

ಶ್ರುತ ಜ್ಞಾನವೆಂದರೆ ಶ್ರುತಿಗಳ (ಧರ್ಮಗ್ರಂಥಗಳ) ಮೂಲಕ ಪಡೆದ ಜ್ಞಾನ. ಶ್ರುತಿಜ್ಞಾನವನ್ನು ಧರ್ಮಗ್ರಂಥಗಳನ್ನು ಓದುವ ಮೂಲಕ ಅಥವಾ ಗುರುಗಳ ಪ್ರವಚನದ ಮೂಲಕ ಪಡೆಯಬಹುದು.

ಅವಧಿ ಜ್ಞಾನವೆಂದರೆ ಆತ್ಮವು ಇಂದ್ರಿಯಗಳ ಸಹಾಯವಿಲ್ಲದೆಯೇ ಪಡೆಯುವ ಜ್ಞಾನ (ಅತೀಂದ್ರಿಯ ಜ್ಞಾನ).

ಮನಃ ಪರ್ಯಾಯ ಜ್ಞಾನವೆಂದರೆ ಬೇರೆಯವರ ಮನಸ್ಸಿನಲ್ಲಿರುವುದನ್ನು ತಿಳಿದುಕೊಳ್ಳುವುದು. ಕೇವಲ ಜ್ಞಾನವೆಂದರೆ ಸರ್ವಜ್ಞತ್ವ. ತ್ರಿಕಾಲ ಜ್ಞಾನ, ದೂರಶ್ರವಣ, ದೂರದರ್ಶನ, ಮುಂತಾದವೆಲ್ಲ ಇದರಲ್ಲಿ ಸೇರುತ್ತವೆ. ಕೊನೆಯ ಮೂರು ರೀತಿಯ ಜ್ಞಾನವನ್ನು ಪಡೆಯಲು ನಮ್ಮ ಚಾರಿತ್ರ್ಯ ಉತ್ತಮ ಮಟ್ಟದ್ದಿರಬೇಕು ಹಾಗೂ ನಾವು ಸಾಕಷ್ಟು ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಿರಬೇಕು.

ಶರಣರು ಈ ಐದು ರೀತಿಯ ಜ್ಞಾನದ ಬಗ್ಗೆ ಬೇರೆ ರೀತಿಯಲ್ಲಿ ಚಿಂತಿಸಿದ್ದಾರೆ. ಅವರ ಪ್ರಕಾರ, ಮತಿ ಜ್ಞಾನವುಳ್ಳಾತ ಭಕ್ತ, ಶ್ರುತಜ್ಞಾನವುಳ್ಳಾತ ಮಹೇಶ, ಮನಪರಿಪೂರ್ಣ (ಮನಃಪರ್ಯಾಯ) ಜ್ಞಾನ ಉಳ್ಳಾತನೆ ಪ್ರಸಾದಿ, ಅವಧಿ ಜ್ಞಾನ ಉಳ್ಳಾತನೇ ಪ್ರಾಣಲಿಂಗಿ, ಕೇವಲ ಜ್ಞಾನ ಉಳ್ಳಾತನೆ, ಶರಣ. ಈ ಐದು ಜ್ಞಾನಗಳಿಗೆ ಮೂಲವಾದುದು ಜ್ಯೋತಿರ್ಜ್ಞಾನ (ಶಿವಜ್ಞಾನ).

ಶರಣರು ಹೀಗೆ ಹೇಳುವ ಉದ್ದೇಶ ವಿವಿಧ ಹಂತದ ಸಾಧಕನಿಗೆ ಬೇರೆ ಬೇರೆ ರೀತಿಯ ಜ್ಞಾನವುಂಟಾಗುತ್ತದೆ ಎಂದು ಹೇಳುವುದಲ್ಲ. ಪ್ರಾಯಶಃ ಅವರ ಉದ್ದೇಶ ಜೈನರ ಜ್ಞಾನವರ್ಗೀಕರಣವನ್ನೂ ಪಂಚಸ್ಥಲಕ್ಕೂ ಅನ್ವಯಿಸಬಹುದು ಎಂದು ಹೇಳುವುದಿದ್ದಿರಬಹುದು. (೩:೧೬೩೮)

**ಪಂಚದ್ರವ್ಯ :** ದೈಹಿಕ ದ್ರವ್ಯ, ಭೌತಿಕದ್ರವ್ಯ, ಆತ್ಮ ದ್ರವ್ಯ, ಇಂದ್ರಿಯ ದ್ರವ್ಯ, ಜ್ಞಾನ ದ್ರವ್ಯ (ದೇಹ, ಪಂಚಭೂತಗಳು, ಆತ್ಮ, ಇಂದ್ರಿಯಗಳು, ಮತ್ತು ಜ್ಞಾನ) ಇವುಗಳನ್ನು ಗುರುವಿಗರ್ಪಿಸಬೇಕು.

**ಪಂಚನಷ್ಟ :** ಅನುಭಾವದ ಮೂಲಕ ಲಿಂಗಾಂಗ ಸಾಮರಸ್ಯ ಸಾಧಿಸಿದವನಿಗೆ ತನುನಷ್ಟ, ಮನನಷ್ಟ, ನೆನಹು ನಷ್ಟ, ಭಾವನಷ್ಟ, ಜ್ಞಾನನಷ್ಟ ಎಂಬ ಐದು ನಷ್ಟಗಳಾಗುತ್ತವೆ. ತನು ಹಾಳಾಗದೆ, ಅದರ ದುರ್ಗುಣಗಳಷ್ಟೇ ಹಾಳಾಗುವುದು ತನುನಷ್ಟ. ಅನುಭಾವಿಯು ತಾನೇನನ್ನೂ ಮಾಡಲು ಮನಸ್ಸು ಮಾಡದೆ, ಶಿವನ ಇಚ್ಛೆಯಂತೆ ವರ್ತಿಸಿ, ತನ್ನ ವೈಯುಕ್ತಿಕ ಸ್ವಾತಂತ್ರ್ಯವನ್ನು ನಷ್ಟಮಾಡಿಕೊಳ್ಳುತ್ತಾನೆ. ಇದು ಮನನಷ್ಟ. ನಾನು ನಾಳೆಗಾಗಿ ಮಾಡಬೇಕು, ನನ್ನ ಮಕ್ಕಳು ಮೊಮ್ಮಕ್ಕಳಿಗಾಗಿ ಮಾಡಬೇಕೆಂದು ನೆನಪಿಟ್ಟುಕೊಂಡು ಮಾಡುವ ಪ್ರವೃತ್ತಿ ಹಾಳಾಗುವುದೇ ನೆನಹು ನಷ್ಟ. ನಾನೊಬ್ಬ ಪ್ರತ್ಯೇಕ ಹಾಗೂ ಪರಶಿವನಿಂದ ಭಿನ್ನವಾದ ವ್ಯಕ್ತಿ ಎಂಬ ಭಾವ ಹಾಳಾಗುವುದೇ ಭಾವನಷ್ಟ. ಅನುಭಾವದಲ್ಲಿ ಅನುಭಾವಿಯು ಪರಶಿವನನ್ನೂ, ತನ್ನನ್ನೂ, ತಾನು ಪರಶಿವನಲ್ಲಿ ಬೆರೆತಿರುವುದನ್ನೂ ಮರೆಯುವುದೇ ಜ್ಞಾನನಷ್ಟ. (೮:೬೧೭)

**ಪಂಚಪಾತಕ (ಪಂಚಮಹಾಪಾತಕ)** : ಸಾಂಪ್ರದಾಯಿಕ ಹಿಂದೂಗಳು ಭ್ರೂಣಹತ್ಯೆ, ಬ್ರಹ್ಮಹತ್ಯೆ, ಮುಂತಾದವುಗಳನ್ನು ಪಂಚಪಾತಕಗಳೆಂದು ಪರಿಗಣಿಸಿದರೆ ಚೆನ್ನಬಸವಣ್ಣನವರು (೩:೧೬೬) ಭವಿ ಮಾಡಿದ ಪಾಕವನ್ನು ಉಣ್ಣುವುದು ಮೊದಲನೆ ಪಾತಕ, ಪರಧನ, ಪರಸತಿಗೆ ಆಸೆ ಪಡುವುದು ಎರಡನೆ ಪಾತಕ, ಜಂಗಮನಿಂದೆ ಮೂರನೆ ಪಾತಕ, ಗುರುವಾಜ್ಞೆ ಮೀರುವುದು ನಾಲ್ಕನೆಯ ಪಾತಕ, ಶಿವನಿಂದೆ ಐದನೆ ಪಾತಕ ಎಂದು ಹೇಳುತ್ತಾರೆ. ಭವಿಗಳೊಡನಾಟ ಆಧ್ಯಾತ್ಮಿಕ ಪ್ರಗತಿಗೆ ಅಡ್ಡಿ ಮಾಡುತ್ತದೆ; ಎರಡನೆಯದು ಅನೈತಿಕ; ಜಂಗಮನಿಂದೆ, ಶಿವನಿಂದೆ, ಗುರುವಾಜ್ಞೆ ಮೀರುವುದು ನಿಷ್ಠೆಯಿಲ್ಲದುದರ ಸಂಕೇತ. ಆದುದರಿಂದ ಇವೆಲ್ಲ ವರ್ಜ್ಯ. ಆದರೆ ಚೆನ್ನಬಸವಣ್ಣನವರೇ ಈ ಪಟ್ಟಿಯನ್ನು ಬದಲಾಯಿಸಿ: "ಲಿಂಗದೀಕ್ಷೆಯಾದ ಬಳಿಕ ಲಿಂಗವನ್ನು ಕಳೆದುಕೊಳ್ಳುವುದು ಮೊದಲನೆ ಪಾತಕ, ಭವಿಪಾಕಭೋಜನ ಎರಡನೆ ಪಾತಕ; ಪ್ರತಿಮೆಗಳಿಗೆ ನಮಸ್ಕರಿಸುವುದು ಮೂರನೆಯ ಪಾತಕ, ಪ್ರಸಾದಿಸ್ಥಲವನ್ನರಿಯದಿದ್ದರೆ, ನಾಲ್ಕನೆಯ ಪಾತಕ, ಲಿಂಗದಲ್ಲಿ ಲೀಯವಾಗದಿದ್ದರೆ ಐದನೆ ಪಾತಕ" ಎನ್ನುತ್ತಾರೆ (೩:೧೯೮). ಅವರೇ ಮತ್ತೊಮ್ಮೆ (೮:೭೦೧) 'ಶಿವ ಭಕ್ತರ ಕಂಡು ಉದಾಸೀನ ಮಾಡುವುದು ಮೊದಲನೆ ಪಾತಕ, ಭಕ್ತರ ಸಮಯೋಚಿತವ ನಡೆಸದಿದ್ದರೆ ಎರಡನೆ ಪಾತಕ, ಭಕ್ತರಿಗೆ ಮಾರುತ್ತರ ಕೊಟ್ಟರೆ, ಮೂರನೆ ಪಾತಕ, ಭಕ್ತರ ಸಕಳಾರ್ಥಕ್ಕೆ ಸಲ್ಲದಿದ್ದರೆ ನಾಲ್ಕನೆ ಪಾತಕ, ಭಕ್ತರಿಗೆ ಮಾಡಿದೆನೆಂದು ಹೆಮ್ಮೆ ಪಟ್ಟುಕೊಂಡರೆ ಐದನೆ ಪಾತಕ' ಎನ್ನುತ್ತಾರೆ.

**ಪಂಚಪ್ರಣವ :** ಅನಾದಿ ಪ್ರಣವ, ಆದಿ ಪ್ರಣವ, ಅಂತ್ಯ ಪ್ರಣವ, ನಾದ ಪ್ರಣವ ಮತ್ತು ಅನಾದ ಪ್ರಣವ. (ಲ:೭೦೧)

**ಪಂಚ ಪ್ರಧಾನರು :** ಪಂಚಶಕ್ತಿಗಳನ್ನು ನಿಯಂತ್ರಿಸುವ ಅಧಿದೇವತೆಗಳು. ಅವರೆಂದರೆ, ಸದಾಶಿವ, ಈಶ್ವರ, ರುದ್ರ, ವಿಷ್ಣು, ಬ್ರಹ್ಮ. **(ನೋಡಿ : ಅಧಿದೇವತೆಗಳು)**

**ಪಂಚ ಬ್ರಹ್ಮರು :** ಪೃಥ್ವಿ, ಜಲ, ಅಗ್ನಿ, ವಾಯು ಮತ್ತು ಆಕಾಶ ಎಂಬ ಭೂತಗಳ ಅಧಿದೇವತೆಗಳಾದ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ ಮತ್ತು ಪ್ರಸಾದಲಿಂಗ ಇವರೇ ಪಂಚಬ್ರಹ್ಮರು. ಕೆಲವು ವೇಳೆ ಈ ಲಿಂಗಗಳ ಬದಲು ಪರಶಿವನ ಐದು ಮುಖಗಳಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಇವರೇ ಪಂಚಬ್ರಹ್ಮರೆನ್ನುವುದೂ ಉಂಟು. ಈ ಅರ್ಥದಲ್ಲಿ ಸದಾಶಿವ, ಈಶ್ವರ, ಬ್ರಹ್ಮ, ವಿಷ್ಣು ಮತ್ತು ರುದ್ರರೂ ಸಹ ಪಂಚಬ್ರಹ್ಮರೇ. (ಲ:೪೨೭)

**ಪಂಚ ಬ್ರಹ್ಮರ ಹಂಗು :** ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನರೇ ಪಂಚಬ್ರಹ್ಮರು. ವಾಸ್ತವಿಕವಾಗಿ ಇವರು ಶಿವನ ಐದು ರೂಪಗಳು. ಶಿವನಿಂದ ಹುಟ್ಟಿದ ಈ ಪಂಚ ಬ್ರಹ್ಮರು ವಿಶ್ವವನ್ನೂ ಮಾನವನಿಗೆ ಬೇಕಾದ ದೇಹೇಂದ್ರಿಯಾದಿಗಳನ್ನೂ ಸೃಷ್ಟಿಸಲು, ಬೇಕಾದ ಉಪಾದಾನಕಾರಣವಾದ ಪಂಚಭೂತಗಳನ್ನು ಸೃಷ್ಟಿಸುತ್ತಾರೆ. ಅಥವಾ ಕೆಲವು ವಚನಕಾರರ ಪ್ರಕಾರ ಶಿವ ಶಕ್ತಿಯ ಐದು ರೂಪಗಳಾದ ಐದು ಭೂತಗಳಿಗೆ ಈ ಪಂಚಬ್ರಹ್ಮರು ಅಧಿದೇವತೆಗಳು. ಅಂದರೆ, ಪಂಚಭೂತಗಳಿಂದಾದ ದೇಹವನ್ನು ಸೃಷ್ಟಿಸಿದುದಕ್ಕೆ ನಾವು ಈ ಪಂಚಬ್ರಹ್ಮರಿಗೆ ಋಣಿಗಳಾಗಿರಬೇಕು. ಈ ಅರ್ಥದಲ್ಲಿ ನಮ್ಮಲ್ಲಿರುವ ಪೃಥ್ವಿ ಅಂಶವು ಅದರ ಅಧಿದೇವತೆಯಾದ ಸದ್ಯೋಜಾತನ ಹಂಗು, ಅದೇ ರೀತಿ ಜಲವು ವಾಮದೇವನ, ಅಗ್ನಿಯು ಅಘೋರನ, ವಾಯುವು ತತ್ಪುರುಷನ ಹಾಗೂ ಆಕಾಶವು ಈಶಾನನ ಹಂಗು. ಈ ದೇಹ ನಮ್ಮದಲ್ಲ, ಪರಶಿವನು ನಮಗೆ ಕೊಟ್ಟಿರುವ ಸಾಲ ಎಂಬುದು ಇದರ ಅರ್ಥ. ಈ ಸಾಲವನ್ನು ನಾವು ಭಕ್ತಿ ಮತ್ತು ನಿಸ್ವಾರ್ಥತೆಯ ಮೂಲಕ ತೀರಿಸಬೇಕು. (ಲ:೧೩೫೬)

**ಪಂಚಭೂತ (ಪಂಚ ಮಹಾಭೂತ):** ಪೃಥ್ವಿ, ಅಪ್, ಅಗ್ನಿ, ವಾಯು ಮತ್ತು ಆಕಾಶ. ಇವುಗಳ ಸಮ್ಮಿಶ್ರಣದಿಂದಲೇ ನಮ್ಮ ದೇಹ ಮತ್ತು ಪ್ರಪಂಚ ರಚಿತವಾಗಿರುವುದು.

**ಪಂಚಭೂತಕಾಯ :** ಪಂಚಭೂತಗಳಿಂದಾದ ದೇಹ **(ನೋಡಿ : ಪಂಚಭೂತ)**

**ಪಂಚಭೂತಗಳ ಪರಿಣಾಮಗಳು :** ಮನುಷ್ಯನ ಶರೀರವೂ, ಅದರಲ್ಲಿ ನಡೆಯುವ ದೈಹಿಕ ಹಾಗೂ ಮಾನಸಿಕ ವ್ಯಾಪಾರಗಳೂ ಪಂಚಭೂತಗಳ ಸೃಷ್ಟಿ. ವಚನಕಾರರ ಪ್ರಕಾರ ಯಾವಾವ ಭೂತ ಯಾವುದಕ್ಕೆ ಕಾರಣ ಎಂಬುದರ ವಿವರ ಹೀಗಿದೆ.

೧. ಅಸ್ಥಿ, ಚರ್ಮ, ಮಾಂಸ, ರೋಮ, ಮಜ್ಜೆ ಇವು ಘನ ಪದಾರ್ಥಗಳಾದುದರಿಂದ, ಅವುಗಳಲ್ಲಿ ಪೃಥ್ವಿ ತತ್ವದ ಅಂಶ ಪ್ರಧಾನವಾಗಿರುತ್ತದೆ.

೨. ಶುಕ್ಲಶೋಣಿತ, ಶ್ಲೇಷ್ಮ, ಪಿತ್ತ, ರಕ್ತ ಇವು ದ್ರವ ಪದಾರ್ಥಗಳಾದುದರಿಂದ, ಅವುಗಳಲ್ಲಿ, ಜಲತತ್ವದ ಅಂಶ ಪ್ರಧಾನವಾಗಿರುತ್ತದೆ.

೩. ಹಸಿವು, ತೃಷೆ, ಆಲಸ್ಯ, ಸ್ತ್ರೀಸಂಗ, ಇವು ಅಗ್ನಿ ತತ್ವದ ಪರಿಣಾಮಗಳು.

೪. ತೆರಳುವುದು, ಕುಳಿತುಕೊಳ್ಳುವುದು, ಏಳುವುದು, ಮೈಮುರಿಯುವುದು, ನಡೆಯುವುದು ಮುಂತಾದ ಕ್ರಿಯೆಗಳು ವಾಯುವಿನ ಪರಿಣಾಮಗಳು.

೫. ಆನಂದಪಡುವುದು, ದು:ಖಪಡುವುದು, ಪ್ರಕಟಪಡಿಸುವುದು, ಮುಚ್ಚಿಡುವುದು ಮುಂತಾದ ಮಾನಸಿಕ ಕ್ರಿಯೆಗಳೆಲ್ಲ ಆಕಾಶ ತತ್ವದ ಪರಿಣಾಮಗಳು. (೩:೧೪೦೪)

**ಪಂಚಮಹಾಭೂತತ್ರಯ :**

೧. ಸ್ಥೂಲಪಂಚಮಹಾಭೂತ : ಸ್ಥೂಲದೇಹ. (ಸ್ಥೂಲ ಪಂಚಮಹಾಭೂತಗಳಲ್ಲಿ ಇಷ್ಟಲಿಂಗ ಪ್ರತಿಷ್ಠೆ)

೨. ಸೂಕ್ಷ್ಮಪಂಚಮಹಾಭೂತ : ಸೂಕ್ಷ್ಮಶರೀರ. (ಸೂಕ್ಷ್ಮ ಪಂಚಮಹಾಭೂತಗಳಲ್ಲಿ ಪ್ರಾಣಲಿಂಗ ಪ್ರತಿಷ್ಠೆ)

೩. ಕಾರಣ ಪಂಚಮಹಾಭೂತ : ಕಾರಣ ಶರೀರ (ಕಾರಣ ಪಂಚಮಹಾಭೂತಗಳಲ್ಲಿ ತೃಪ್ತಿಲಿಂಗ ಪ್ರತಿಷ್ಠೆ) (೧:೧೪೦೨)

**ಪಂಚಮುದ್ರೆಗಳು :** ಒಬ್ಬ ಶಿವಸಾಕ್ಷಾತ್ಕಾರ ಪಡೆದವನಲ್ಲಿರಬೇಕಾದ ಐದು ಗುರುತುಗಳು. ಅವೆಂದರೆ ಕಂಥೆ, ಕರ್ಪರ, ದಂಡ, ಕಮಂಡಲು ಮತ್ತು ಭಸ್ಮದ ಗುಂಡಿಗೆ.

**ಪಂಚವಕ್ತ್ರ :** ಸದ್ಯೋಜ್ಯಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ್ಯ ಎಂಬ ಐದು ಮುಖ ಅಥವಾ ಬಾಯಿಗಳನ್ನುಳ್ಳ ಪರಶಿವ. ಎಲ್ಲವನ್ನೂ ಲಿಂಗಕ್ಕೆ ಅರ್ಪಿಸಿದ ನಂತರವೇ ತಾನು ಅನುಭವಿಸಬೇಕೆಂಬ ಪ್ರಸಾದಿಯ ಐದು ಇಂದ್ರಿಯಗಳು ಪರಶಿವನನ್ನು ತಲುಪುವ ಐದು ಬಾಗಿಲುಗಳು ಅಥವಾ ಬಾಯಿಗಳಾಗುತ್ತವೆ. ರೂಪರಸಗಂಧಾದಿಗಳನ್ನು ಪರಶಿವನ ಈ ವಕ್ತ್ರಗಳು ಸ್ವೀಕರಿಸಿದ ನಂತರ ಭಕ್ತನು ಸ್ವೀಕರಿಸುತ್ತಾನೆ, ಎಂಬುದು ಈ ಪರಿಕಲ್ಪನೆಯ ಅರ್ಥ. (೩:೬೪೨, ೬೫೨, ೯:೧೫೭)

**ಪಂಚವದನ :** ಐದು ಮುಖಗಳು. (ನೋಡಿ : **ಪಂಚವಕ್ತ್ರ**)

**ಪಂಚವಿಧ :** ಗುರು, ಲಿಂಗ, ಜಂಗಮ, ಪ್ರಸಾದ, ಮತ್ತು ಆಚಾರ. ಇವು ಶಿವನ ಐದು ವಿಧದ ರೂಪಗಳು. ಹೀಗೆಂದು ತಿಳಿದವನೇ ನಿಜವಾದ ಗುರು. (೨:೧೫೫೧)

**ಪಂಚವಿಧ ಭಕ್ತ :**

ತನುವಿಲ್ಲದ ಭಕ್ತ : ತನುಗುಣವಿಲ್ಲದ ಭಕ್ತ

ಮನವಿಲ್ಲದ ಭಕ್ತ : ಅಹಂಕಾರ ಮತ್ತು ಆಸೆಗಳಿಲ್ಲದ ಭಕ್ತ

ಧನವಿಲ್ಲದ ಭಕ್ತ : ಧನದಾಸೆಯಿಲ್ಲದ ಭಕ್ತ.

ಪಂಚೇಂದ್ರಿಯ ಸುಖವಿಲ್ಲದ ಭಕ್ತ : ಪಂಚೇಂದ್ರಿಯ ಸುಖಕ್ಕೆ ಹಾತೊರೆಯದ ಭಕ್ತ.
ಕರ್ಮವಿಲ್ಲದ ಭಕ್ತ : ನಿಷ್ಕಾಮ ಕರ್ಮ ಮಾಡುವ ಭಕ್ತ.

**ಪಂಚಶಕ್ತಿ :** ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಎಂಬ ಐದು ಶಕ್ತಿಗಳು. (ನೋಡಿ : **ಶಕ್ತಿಗಳು**)

**ಪಂಚಸಾದಾಖ್ಯ :** ಶಿವ, ಅಮೂರ್ತಿ, ಮೂರ್ತಿ, ಕರ್ತೃ ಮತ್ತು ಕರ್ಮ. ಇವರಿಗೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ್ಯ ಎಂಬ ಹೆಸರೂ ಉಂಟು. (ನೋಡಿ : **ಸಾದಾಖ್ಯ**)

**ಪಂಚಸೂತಕ :** ಸಾಂಪ್ರದಾಯಿಕ ಹಿಂದೂಗಳು (ಲಿಂಗಾಯತರೂ ಸೇರಿ) ಐದು ಸೂತಕಗಳನ್ನು ಪಾಲಿಸುತ್ತಾರೆ. ಅವೆಂದರೆ : ಜನನಸೂತಕ, ಕುಲಸೂತಕ, ರಜಃ ಸೂತಕ, ಎಂಜಲ ಸೂತಕ ಮತ್ತು ಪ್ರೇತಸೂತಕ. ಶಿಶು ಜನನವಾದವರನ್ನು ಸೂತಕ ಕಳೆಯುವವರೆಗೆ ಮುಟ್ಟಿಸಿಕೊಳ್ಳಬಾರದು ಮತ್ತು ಅವರು ಮುಟ್ಟಿದುದನ್ನು ನಾವು ಮುಟ್ಟಬಾರದು ಎಂಬುದು ಜನನ ಸೂತಕ,; ಬೇರೆ ಜಾತಿಯವರನ್ನು ಮುಟ್ಟಬಾರದು ಮತ್ತು ಅವರು ಮುಟ್ಟಿದುದನ್ನು ನಾವು ಮುಟ್ಟಬಾರದು ಎಂಬುದು ಕುಲಸೂತಕ, ರಜಸ್ವಲೆಯಾದವಳನ್ನು ಮುಟ್ಟಬಾರದು ಮತ್ತು ಅವರು ಮುಟ್ಟಿದುದನ್ನು ನಾವು ಮುಟ್ಟಬಾರದು ಎಂಬುದು ರಜಃ ಸೂತಕ: ಒಬ್ಬರು ತಿಂದು ಉಳಿದುದನ್ನು ತಿನ್ನಬಾರದು ಎಂಬುದು ಎಂಜಲ ಸೂತಕ, ಸತ್ತವರ ಮನೆಯಲ್ಲಿರುವವವರನ್ನು ಮುಟ್ಟಬಾರದು, ಅವರು ಮುಟ್ಟಿದುದನ್ನು ತಿನ್ನಬಾರದು ಎಂಬುದು ಪ್ರೇತಸೂತಕ. (೧:೧೨೦೨). ಆದರೆ ನಿಜವಾದ ಭಕ್ತನು ಇವುಗಳನ್ನು ಆಚರಿಸಬಾರದು ಎಂಬುದು ಚೆನ್ನಬಸವಣ್ಣನವರ ಆದೇಶ.

**ಪಂಚಾಕ್ಷರ :** ನ, ಮ, ಶಿ, ವಾ, ಯ ಎಂಬ ಐದು ಅಕ್ಷರದ ಮಂತ್ರ.

**ಪಂಚಾಕ್ಷರಿ ಮಂತ್ರ** : ನಮ:ಶಿವಾಯ ಎಂಬ ಐದಕ್ಷರದ ಮಂತ್ರ.

**ಪಂಚಾಗ್ನಿ :** ಐದು ರೀತಿಯ ಅಗ್ನಿಗಳು : ವಡಬಾಗ್ನಿ, ಮಂದಾಗ್ನಿ, ಉದರಾಗ್ನಿ, ಶೋಕಾಗ್ನಿ, ಕಾಮಾಗ್ನಿ.

**ಪಂಚಾಚಾರ :** ವಚನಕಾರರ ಪ್ರಕಾರ, ನಮ್ಮ ದೇಹೇಂದ್ರಿಯಾದಿಗಳೂ, ಪ್ರಪಂಚದ ಸಕಲ ವಸ್ತುಗಳೂ ಪರಶಿವನು ಕೊಟ್ಟ ಸಾಲ ಅಥವಾ ಅವನ ಪ್ರಸಾದ. ಇದಕ್ಕಾಗಿ ನಾವು ಪರಶಿವನಿಗೆ ಋಣಿಯಾಗಿರಬೇಕೆಂದರೆ, ಅವನಿಗೆ ಭಕ್ತಿ ತೋರಿಸಬೇಕು. ಈ ಭಕ್ತಿಯು ಐದು ರೀತಿಯ ಕ್ರಿಯೆ (ಪಂಚಾಚಾರ) ಗಳನ್ನೊಳಗೊಳ್ಳುತ್ತದೆ. ಈ ಕ್ರಿಯೆಗಳೆಂದರೆ, ಇಷ್ಟ ಲಿಂಗಪೂಜೆ, ವಿಭೂತಿ ಮತ್ತು ರುದ್ರಾಕ್ಷಿಧಾರಣೆ, ಮಂತ್ರಪಠನೆ, ಇಷ್ಟೇ ಅಲ್ಲ ಎಂಬುದು ಗಮನಾರ್ಹ. ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ ಎಂಬ ಈ ಐದು ರೀತಿಯ ಕ್ರಿಯೆಗಳೇ ಪಂಚಾಚಾರಗಳು.

ಲಿಂಗಾಚಾರವೆಂದರೆ, ಇಷ್ಟಲಿಂಗ ಪೂಜೆಯಲ್ಲಿ ತೋರುವ ನಿಷ್ಠೆಯೊಂದೇ ಅಲ್ಲ, ಪರದೈವಪೂಜೆ ಮಾಡೆ ಎಂಬ ಪ್ರತಿಜ್ಞೆಯೂ ಸೇರುತ್ತದೆ. ಮುಖ್ಯವಾಗಿ, ಭಕ್ತನು ತಾನು ಮಾಡುವುದೆಲ್ಲವೂ ಲಿಂಗಕ್ಕಾಗಿಯೇ ಎಂಬ ಧ್ಯೇಯ ಉಳ್ಳವನಾಗಿರಬೇಕು.

ಸದಾಚಾರವು ವಚನಕಾರರ ನೀತಿಶಾಸ್ತ್ರವನ್ನೊಳಗೊಳ್ಳುತ್ತದೆ. ಭಕ್ತನು ಸದಾಚಾರವನ್ನೂ ಆಚರಿಸಿದರಷ್ಟೇ ಲಿಂಗಾಚಾರಕ್ಕೆ ಅರ್ಥ ಬರುತ್ತದೆ. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಪರಸತಿಯ ಬಯಸಬೇಡ, ಮುಂತಾದ ನಿಷಿದ್ಧಗಳೂ, ದಯೆತೋರಿಸು, ಸತ್ಯಹೇಳು, ನಡೆದಂತೆ ನುಡಿ ಮುಂತಾದ ವಿಧಿಗಳೂ ಲಿಂಗಾಚಾರಕ್ಕೆ ನೈತಿಕ ಜೀವನವೂ ಪೂರಕ ಎಂಬುವನ್ನು ಸಾರುತ್ತವೆ. ಪ್ರತಿಯೊಂದು ಜೀವಿಯೂ ಶಿವನ ಸೃಷ್ಟಿ ಎಂದ ಮೇಲೆ, ಇಷ್ಟಲಿಂಗ ಪೂಜೆಮಾಡಿ, ಹಿಂಸೆಯಲ್ಲಿ ನಿರತನಾದರೆ, ಸದಾಚಾರವೂ ಇಲ್ಲ, ಲಿಂಗಾಚಾರವೂ ಇಲ್ಲ. ನಮ್ಮ ದುಡಿಮೆ ಸಹ ಅನೈತಿಕವಾಗಿರಬಾರದು, ದುರಾಸೆಯಿಂದ ಕೂಡಿರಬಾರದು. ಹೀಗೆ ಸದಾಚಾರದ ಮೂಲಕ ಮಾತ್ರ ಆತ್ಮ ಶುದ್ಧವಾಗಬಲ್ಲುದು. ಶುದ್ಧ ಆತ್ಮ ಮಾತ್ರ ಸಾಮರಸ್ಯಗಳಿಸಿಕೊಳ್ಳಬಲ್ಲುದು.

ಶಿವಾಚರವೆಂದರೆ, ಶಿವಭಕ್ತರನ್ನು ಸಮಾನವಾಗಿ ಕಾಣುವುದು. ಶಿವಭಕ್ತರನ್ನು ಅವರವರ ಕಸಬುಗಳ ಆಧಾರದ ಮೇಲೆ ಮೇಲು ಕೀಳೆಂದು ಪರಿಗಣಿಸಬಾರದು. ಅಂಗದ ಮೇಲೆ ಲಿಂಗವಿದ್ದರೆಲ್ಲ ಶಿವಭಕ್ತರೇ. ಬ್ರಾಹ್ಮಣ ಮೇಲಲ್ಲ, ಮಾದಿಗ ಕೀಳಲ್ಲ. ಆದರೆ ಲಿಂಗೀ ಬ್ರಾಹ್ಮಣನಾದರೂ ಹೊಲಸು ತಿಂದರೆ ಹೊಲೆಯನಾಗುತ್ತಾನೆ. ಮಾದಾರ ಚೆನ್ನಯ್ಯ ತನ್ನ ಶಿವಭಕ್ತಿಯ ಹಿರಿಮೆಯ ಮೂಲಕ ಬ್ರಾಹ್ಮಣನಿಗಿಂತ ಶ್ರೇಷ್ಠನಾಗಿ, ಬಸವಣ್ಣನವರಿಂದ ಪೂಜಿಸಲ್ಪಡುತ್ತಾನೆ.

ಗಣಾಚಾರವು ಒಬ್ಬ ಶಿವಭಕ್ತನು ಉಳಿದ ಶಿವಭಕ್ತರ ನೆರವಿಗೆ ನಿಲ್ಲಬೇಕೆಂದು ಸಾರುವ ಒಂದು ಸಾಮಾಜಿಕ ಕ್ರಿಯೆ. ಶಿವನಿಂದೆ, ಜಂಗಮನಿಂದೆ, ಶಿವಭಕ್ತರ ನಿಂದೆ, ಇವುಗಳನ್ನು ಭಕ್ತರು ತಡೆಯಬೇಕು. ಇದರ ಅರ್ಥವಿಷ್ಟೇ, ಆಧ್ಯಾತ್ಮಿಕ ಪ್ರಗತಿಗೆ ಅಡ್ಡಿಯಾಗುವ ಯಾವುದೇ ಘಟನೆಯನ್ನು ನಾವು ಹೇಗಾದರೂ ದೂರ ಮಾಡಬೇಕು.

ಭೃತ್ಯಾಚಾರ ನಾವು ವಿನಯಶೀಲರಾಗಿರಬೇಕು ಹಾಗೂ ಸಮಾಜ ಮತ್ತು ಶಿವಭಕ್ತರ ದಾಸರಾಗಿರಬೇಕು ಎಂದು ಹೇಳುತ್ತದೆ. ಬಸವಣ್ಣನವರು ಪ್ರಧಾನಿಯಾಗಿದ್ದರೂ, ಶಿವಭಕ್ತರನ್ನು ಗೌರವಿಸುತ್ತಿದ್ದರು. ಉಳಿದ ಶಿವಭಕ್ತರಿಂದ ನಾವು ಆಧ್ಯಾತ್ಮಿಕ ಪಾಠಗಳನ್ನು ಕಲಿಯಬೇಕಾದರೆ, ನಾವು ಅಹಂಕಾರಪಟ್ಟುಕೊಳ್ಳದೆ ಭೃತ್ಯಾಚಾರ ಮಾಡಿದರೆ ಪ್ರಯೋಜನಕಾರಿ. ಎನಗಿಂತ ಕಿರಿಯರಿಲ್ಲ ಎಂಬ ಬಸವಣ್ಣನವರ ವಚನ ಭೃತ್ಯಾಚಾರಕ್ಕೆ ಒಳ್ಳೆಯ ನಿದರ್ಶನ.

**ಪಂಚೀಕರಣ (ಪಂಚೀಕೃತಿ) :** ಮನುಷ್ಯನೆಂದರೆ ಇಪ್ಪತ್ತೈದು ತತ್ವಗಳ ಒಂದು ಸಂಕೀರ್ಣ ಸಂಯೋಜನೆ. ಈ ಇಪ್ಪತ್ತೈದು ತತ್ವಗಳೆಂದರೆ: ೧. ಭೂತ ಪಂಚಕ : ಪೃಥ್ವಿ, ಅಪ್ಪು, ವಾಯು, ಅಗ್ನಿ ಮತ್ತು ಆಕಾಶ, ಎಂಬ ಐದು ಮಹಾಭೂತಗಳು.

೨. ವಾಯು ಪಂಚಕ : ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಐದು ವಾಯುಗಳು.

೩. ಕರ್ಮೇಂದ್ರಿಯ ಪಂಚಕ : ಪಾಯು, ಗುಹ್ಯ, ಪಾದ, ಪಾಣಿ ಮತ್ತು ವಾಕ್ ಎಂಬ ಐದು ಕರ್ಮೇಂದ್ರಿಯಗಳು.

೪. ಕರಣ ಪಂಚಕ : ಅಹಂಕಾರ, ಚಿತ್ತ, ಮನಸ್ಸು, ಬುದ್ಧಿ, ಜ್ಞಾನ ಎಂಬ ಐದು ಅಂತಃಕರಣಗಳು.

೫. ಜ್ಞಾನೇಂದ್ರಿಯ ಪಂಚಕ : ಕಣ್ಣು, ನಾಲಗೆ, ಮೂಗು, ಚರ್ಮ ಮತ್ತು ಕಿವಿ ಎಂಬ ಐದು ಜ್ಞಾನೇಂದ್ರಿಯಗಳು.

ವಾಸ್ತವವಾಗಿ ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಇತ್ಯಾದಿಗಳು ಭೂತ ಪಂಚಕಗಳ ವಿವಿಧ ಪ್ರಮಾಣದ ಮಿಶ್ರಣಗಳು. ಯಾವ ಭೂತ ಉಳಿದ ಯಾವ ಭೂತಗಳೊಡನೆ ಎಷ್ಟು ಪ್ರಮಾಣದಲ್ಲಿ ಸೇರಿದರೆ ಯಾವ ತತ್ವಗಳು ಹುಟ್ಟುತ್ತದೆ ಎಂಬುದರ ಜ್ಞಾನವೇ ಪಂಚೀಕರಣದ ಜ್ಞಾನ. ಪಂಚೀಕರಣದ ಜ್ಞಾನದಿಂದಾಗಿ, ನಾವು ಕರ್ಮೇಂದ್ರಿಯ, ಜ್ಞಾನೇಂದ್ರಿಯ ಇತ್ಯಾದಿಗಳ ಬಗೆಗೆ ತಿಳಿದುಕೊಂಡರೆ ಅವನ್ನು ಆಧ್ಯಾತ್ಮಿಕ ಜೀವನಕ್ಕೆ ಹೇಗೆ ಪರಿವರ್ತಿಸಿಕೊಳ್ಳಬಹುದೆಂಬುದನ್ನು ತಿಳಿದುಕೊಳ್ಳಬಹುದು. ಆದುದರಿಂದ ಪಂಚೀಕರಣದ ಜ್ಞಾನ ಕೇವಲ ಬೌದ್ಧಿಕ ತೃಪ್ತಿಗಾಗಿ ಅಲ್ಲ, ಆಧ್ಯಾತ್ಮಿಕ ಪ್ರಯೋಜನಕ್ಕಾಗಿ ಎಂಬ ಮಾತನ್ನು ವಚನಕಾರರು ಒತ್ತಿ ಹೇಳಿದ್ದಾರೆ.

ಈಗ ಪಂಚೀಕರಣದ ವಿವರಗಳನ್ನು ಪರಿಶೀಲಿಸೋಣ.

ಪಂಚಭೂತಕಗಳಲ್ಲಿ ಅತ್ಯಂತ ಸೂಕ್ಷ್ಮವಾದುದೆಂದರೆ, ಆಕಾಶ ತತ್ವ. ಜ್ಞಾನ, ಬುದ್ಧಿ, ಮನಸ್ಸು ಚಿತ್ತ ಮತ್ತು ಅಹಂಕಾರ ಎಂಬ ಸೂಕ್ಷ್ಮ ತತ್ವಗಳು ಆಕಾಶದಿಂದ ಹೇಗೆ ಉತ್ಪತ್ತಿಯಾಗುತ್ತವೆ, ಎಂಬುದನ್ನು ವಚನಕಾರರು ಹೀಗೆ ವಿವರಿಸುತ್ತಾರೆ : ಆಕಾಶದ ಒಂದಂಶವು ವಾಯುವನ್ನು ಸೇರಿದರೆ ಮನಸ್ಸು, ಮತ್ತೊಂದಂಶವು ಅಗ್ನಿಯನ್ನು ಸೇರಿದರೆ ಬುದ್ಧಿ, ಮತ್ತೊಂದಂಶವು ಜಲ ತತ್ವವನ್ನು ಸೇರಿದರೆ, ಚಿತ್ತ, ಮತ್ತು ಮತ್ತೊಂದಂಶವು ಪೃಥ್ವಿಯನ್ನು ಸೇರಿದರೆ ಅಹಂಕಾರ ಹುಟ್ಟುತ್ತವೆ. ಜ್ಞಾನವು ಅಂತಃಕರಣವಲ್ಲದಿದ್ದರೂ, ಅದು ಆಕಾಶದ ಮೂಲಸ್ವರೂಪ. ಅಂದರೆ, ಬುದ್ಧಿ, ಮನಸ್ಸು, ಮುಂತಾದ ಅಂತಃಕರಣಗಳು ಜ್ಞಾನ ಪಡೆಯಲು ಸಾಧ್ಯವಾಗುವುದು ಅವು ಆಕಾಶಜನ್ಯ ತತ್ವಗಳಾದುದರಿಂದ.

ವಾಯು ಪಂಚಕಗಳು ವಾಯುವಿನ ವಿವಿಧ ರೂಪಗಳು.

ವಾಯುವಿನ ಎರಡು ಅಂಶಗಳು ಕೂಡಿಕೊಂಡರೆ, ಉದಾನ ವಾಯುವೂ, ಒಂದಂಶ ವಾಯು ಒಂದಂಶ ಆಕಾಶ ಕೂಡಿಕೊಂಡರೆ, ಸಮಾನ ವಾಯುವೂ, ಒಂದಂಶ ಅಪ್ಪುವಿನಲ್ಲಿ ಕೂಡಿಕೊಂಡರೆ ಅಪಾನ ವಾಯುವೂ ಒಂದಂಶ ವಾಯು ಪೃಥ್ವಿಯನ್ನು ಕೂಡಿಕೊಂಡರೆ ಪ್ರಾಣವಾಯುವೂ ಜನಿಸುತ್ತದೆ.

ಅಗ್ನಿ ಎಂಬ ಮಹಾಭೂತದ ವಿವಿಧ ರೂಪಗಳೇ ಬುದ್ಧೀಂದ್ರಿಯಗಳು (ಜ್ಞಾನೇಂದ್ರಿಯಗಳು) ಅವುಗಳ ಉತ್ಪತ್ತಿಯ ವಿವರ : ಅಗ್ನಿ ಅಗ್ನಿಯನ್ನು ಕೂಡಿದರೆ ನೇತ್ರ. ಅಂದರೆ, ಅಗ್ನಿ (ಬೆಳಕು) ಇದ್ದರೆ ಮಾತ್ರ ನೇತ್ರ ನೋಡಲು ಸಾಧ್ಯ. ಅಗ್ನಿಯ ಒಂದಂಶ ಆಕಾಶದ ಒಂದಂಶವನ್ನು ಕೂಡಲು ಶ್ರೋತ್ರೇಂದ್ರಿಯ (ಕಿವಿ), ಒಂದಂಶ ವಾಯುವನ್ನು ಕೂಡಿಕೊಂಡರೆ ತ್ವಗಿಂದ್ರಿಯವೂ, ಅಪ್ಪುವಿನ ಒಂದಂಶವನ್ನು ಸೇರಿದರೆ ಜಿಹ್ವೆಯೂ (ನಾಲಗೆಯೂ), ಅಗ್ನಿಯ ಒಂದಂಶ ಪೃಥ್ವಿಯ ಒಂದಂಶವನ್ನು ಕೂಡಿದರೆ ಘ್ರಾಣೇಂದ್ರಿಯವೂ ಉತ್ಪತ್ತಿ.ಆಗುತ್ತದೆ.

ಅಪ್ಪು ಎಂಬ ಮಹಾಭೂತದ ವಿವಿಧ ರೂಪಗಳೇ ವಿಷಯ (ತನ್ಮಾತ್ರೆ)ಗಳು. ಅವುಗಳ ಉತ್ಪತ್ತಿಯ ವಿವರ : ಅಪ್ಪುವಿನ ಒಂದಂಶ ಅಪ್ಪುವಿನ ಮತ್ತೊಂದಂಶವನ್ನು ಕೂಡಿದರೆ, ರಸವೂ, ಅಪ್ಪುವಿನ ಒಂದಂಶ ಆಕಾಶವನ್ನು ಕೂಡಿದರೆ ಶಬ್ದವೂ, ಮತ್ತೊಂದಂಶ ವಾಯುವನ್ನು ಕೂಡಿದರೆ ಸ್ಪರ್ಶವೂ ಒಂದಂಶ ಅಗ್ನಿಯನ್ನು ಕೂಡಿದರೆ ರೂಪವೂ, ಒಂದಂಶ ಪೃಥ್ವಿಯನ್ನು ಕೂಡಿದರೆ ಗಂಧವೂ ಉತ್ಪತ್ತಿಯಾಗುತ್ತವೆ.

ಪೃಥ್ವಿ ತತ್ವವು ಉಳಿದ ನಾಲ್ಕು ತತ್ವಗಳಿಗಿಂತ ಹೆಚ್ಚು ಸ್ಥೂಲವಾದುದು. ಅದರಂತೆ, ವಿವಿಧ ರೂಪಗಳಾದ ಕರ್ಮೇಂದ್ರಿಯಗಳೂ ಸ್ಥೂಲವಾದ ಅಂಗಗಳಾಗಿವೆ. ಅವು ಪೃಥ್ವಿ ತತ್ವದಿಂದ ಹೇಗೆ ಉತ್ಪತ್ತಿಯಾಗುತ್ತವೆ ಎಂಬುದಕ್ಕೆ ವಿವರ ಹೀಗಿದೆ : ಪೃಥ್ವಿಯ ಎರಡಂಶಗಳು ಕೂಡಿದರೆ ಪಾಯುವೂ, ಪೃಥ್ವಿಯ ಒಂದಂಶ ಆಕಾಶದ ಒಂದಂಶದೊಂದಿಗೆ ಸೇರಿದರೆ, ವಾಗಿಂದ್ರಿಯವೂ, ಒಂದಂಶ ವಾಯುವನ್ನು ಕೂಡಿದರೆ ಹಸ್ತವೂ, ಒಂದಂಶ ಅಗ್ನಿಯನ್ನು ಕೂಡಿದರೆ ಪಾದವೂ ಒಂದಂಶ ಅಪ್ಪುವನ್ನು ಕೂಡಿದರೆ ಗುಹ್ಯೇಂದ್ರಿಯವೂ ಉತ್ಪತ್ತಿಯಾಗುತ್ತದೆ.

**ಪಂಚೇಂದ್ರಿಯ :** ಪಂಚ ಜ್ಞಾನೇಂದ್ರಿಯಗಳು. ಅವೆಂದರೆ, ಕಣ್ಣು, ಕಿವಿ, ನಾಲಗೆ, ಮೂಗು ಮತ್ತು ಚರ್ಮ.

**ಪಂಚೇಂದ್ರಿಯ ನಾಸ್ತಿ :** ಲಿಂಗಾಂಗ ಸಾಮರಸ್ಯ ಸಾಧಿಸಿದವನು ವಿಶ್ವದಲ್ಲಿ ಮತ್ತೇನನ್ನೂ ಸಾಧಿಸಬೇಕಾಗಿಲ್ಲ. ಆ ಸಿದ್ಧಿ ಕೊಡುವ ಆನಂದವನ್ನು ಯಾವ ಇಂದ್ರಿಯವೂ ಕೊಡುವುದಿಲ್ಲವಾದುದರಿಂದ, ಅವನಿಗೆ ಪಂಚೇಂದ್ರಿಯಗಳು ಕೊಡುವ ಸುಖದಲ್ಲಿ ಆಸಕ್ತಿ ಇಲ್ಲವಾಗುತ್ತದೆ. ಸಾಮರಸ್ಯ ಪಡೆಯುವ ಮುನ್ನ ಇಂದ್ರಿಯಗಳ ಸಂರಂಕ್ಷಣೆಯಲ್ಲಿಯೂ,

ಅವುಗಳು ಕೊಡುವ ಸುಖದಲ್ಲಿಯೂ ಇದ್ದ ಆಸಕ್ತಿ ಸಾಮರಸ್ಯ ಸಾಧಿಸಿದನಂತರ ಇಲ್ಲವಾಗುವುದು. ಸಮರಸಾನಂದ ಇಂದ್ರಿಯ ಸುಖಕ್ಕಿಂತ ಬಹಳ ಪಟ್ಟು ಮಿಗಿಲಾಗಿರುವದರಿಂದ ಇಂದ್ರಿಯಗಳು ಇದ್ದು, ಅವು ಎಂದಿನಂತೆ ಕೆಲಸವನ್ನು ಮಾಡಿದರೂ ಅವುಗಳು ಕೊಡುವ ಸುಖ ಮಾತ್ರ ನಾಸ್ತಿ.

**ಪಂಚೇಂದ್ರಿಯ ಬಯಲಾಗುವುದು :** ನಾವು ಸಾಮಾನ್ಯವಾಗಿ ವಿಷಯ ಸುಖವನ್ನೂ ಆಧ್ಯಾತ್ಮವನ್ನೂ ಪರಸ್ಪರ ವಿರುದ್ಧವೆಂಬಂತೆ ಆಚರಿಸುತ್ತೇವೆ. ಆದರೆ ನಿಜವಾದ ಸಾಧಕನ ಪ್ರಕಾರ ನಾವು ಭೋಗಿಸುವುದೆಲ್ಲ ನಮಗಾಗಿ ಅಲ್ಲ, ಪರಶಿವನಿಗಾಗಿ ಎಂಬ ದೃಷ್ಟಿಯಿಂದ ಭೋಗಿಸಿದರೆ ಆಗ ಅಂಗಭೋಗವೆಲ್ಲ ಲಿಂಗಭೋಗವಾಗುತ್ತವೆ. ಅಂಥ ಶರಣನ ಪಂಚೇಂದ್ರಿಯಗಳು ತಮ್ಮ ಸ್ವಾರ್ಥ ಹಾಗೂ ದೋಷಯುಕ್ತ ಗುಣಗಳನ್ನು ಕಳೆದುಕೊಂಡು ಪರಶಿವನ ಪಂಚೇಂದ್ರಿಯಗಳಾಗುತ್ತವೆ, ಅಥವಾ ಅವು ಬಯಲಾಗುತ್ತವೆ.

**ಪಂಚೇಂದ್ರಿಯಗಳಲ್ಲಿ ಲಿಂಗಮುಖವಾಗಿಕೊಳ್ಳುವುದು :** ಸಾಧಕನು ಪ್ರಾಣಲಿಂಗಿ ಸ್ಥಲಕ್ಕೆ ಬಂದರೆ, ಆಗ ತನ್ನ ಪ್ರತಿ ಇಂದ್ರಿಯವನ್ನೂ ಪರಶಿವನ ಬಾಯಿಯನ್ನಾಗಿ ಪರಿವರ್ತಿಸಬೇಕು. ಅಂದರೆ ಸಾಧಕನು, ರೂಪರಸಗಂಧ ಇತ್ಯಾದಿಗಳನ್ನು ತಾನು ಅನುಭವಿಸುವ ಮೊದಲು ಆಯಾ ಇಂದ್ರಿಯಗಳ ಬಾಗಿಲಲ್ಲೆ ಇರುವ ಪರಶಿವನು ಮೊದಲು ಅನುಭವಿಸಲೆಂದು ಇಚ್ಛಿಸುತ್ತಾನೆ. ಇದು ಇಂದ್ರಿಯಗಳ ದೋಷವನ್ನು ನಿವಾರಿಸುವ ಒಂದು ಕ್ರಮ. (೮:೧೩೫೧)

**ಪಡಿ :** ನಿಯಮಿತ ಪ್ರಮಾಣದ ಆಹಾರ ಪದಾರ್ಥಗಳು; ಕಾಳು ಬೇಳೆ ಮುಂತಾದವು. ಇಲ್ಲಿ ಸಿದ್ಧಕಾಯನು ಪಡಿ ಎಂಬ ಪದವನ್ನು ಸುಖದುಃಖಗಳು ಎಂಬರ್ಥದಲ್ಲಿ ಬಳಸುತ್ತಿದ್ದಾನೆ. ಈ ಸುಖ ದುಃಖಗಳನ್ನು ತಪ್ಪಿಸಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ಎರಡನೆಯದಾಗಿ, ಪಡಿಯನ್ನು ಪಡೆಯುವವನಿಗೆ ಇದು ಬೇಕು, ಇದನ್ನೆ ಕೊಡು, ಅದು ಬೇಡ, ಅದನ್ನು ಕೊಡಬೇಡ ಎಂದು ಆಜ್ಞಾಪಿಸುವ ಸ್ವಾತಂತ್ರ್ಯವಿಲ್ಲ. ಅದೇ ರೀತಿ ಪರಶಿವ ಸುಖದುಃಖಗಳನ್ನು ಕೊಡುವಾಗ ಅದನ್ನು ಪಡೆಯುವ ಮನುಷ್ಯನಿಗೆ ಕೇಳುವ ಮತ್ತು ತಿರಸ್ಕರಿಸುವ ಸ್ವಾತಂತ್ರ್ಯವಿಲ್ಲ. ಮೂರನೆಯದಾಗಿ ನಾಳೆ ಯಾವ ರೀತಿಯ ಪಡಿ ಬರುತ್ತದೆ ಎಂಬುದೂ ಪಡಿ ಪಡೆಯುವವನಿಗೆ ಗೊತ್ತಿರುವುದಿಲ್ಲ. ಬಂದುದೆಲ್ಲವನ್ನೂ ಸಮಾನವಾಗಿ ಸ್ವೀಕರಿಸಬೇಕೆಂಬ ಪ್ರಸಾದಿ ಸ್ಥಲದ ನಿಯಮವಿದು.

**ಪದನಾಲ್ಕು :** ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯ. ಶುದ್ಧನಾದ ಆತ್ಮನು ಸಾವಿನನಂತರ ಮೊದಲು ಪರಮಾತ್ಮನ ಲೋಕಕ್ಕೆ ಹೋಗುತ್ತಾನೆ. ಅನಂತರ ಅವನ ಸಮೀಪ ಹೋಗಿ, ಅವನಂತೆ ಶುದ್ಧರೂಪನಾಗಿ, ಅವನಲ್ಲಿ ಬೆರೆಯುತ್ತಾನೆ. ಆದರೆ, ತಮಿಳು ಶೈವರೂ ವೈಷ್ಣವರೂ ಪ್ರತಿಪಾದಿಸುವ ಈ ಸಿದ್ಧಾಂತದ ಪ್ರಕಾರ, ಮುಕ್ತಾತ್ಮ ಪರಮಾತ್ಮನೊಂದಿಗೆ ಬೆರೆಯುವುದಿಲ್ಲ. ಶರಣರು ಲಿಂಗಾಂಗ ಸಾಮರಸ್ಯವು ಈ ನಾಲ್ಕು ಪದವಿಗಳಿಗಿಂತ ಮೇಲೆಂದು ನಂಬುತ್ತಾರೆ. (೪:೫೨೭)

**ಪದಮುಕ್ತ :** ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯ ಎಂಬ ನಾಲ್ಕು ಪದವಿಗಳಿಂದ ಮುಕ್ತನಾದ ಆತ್ಮ.

**ಪದರಸ :** ಪಾದೋದಕ.

**ಪದುಮ, ಪದ್ಮ :** (ನೋಡಿ : **ಚಕ್ರಗಳು**)

**ಪದ್ಮಗಳ ಆಕೃತಿಗಳು :** ಶಾಕ್ತರಂತೆ ಅನೇಕ ವಚನಕಾರರು ಒಂಬತ್ತು ಚಕ್ರ ಅಥವಾ ಪದ್ಮಗಳನ್ನು ನಂಬುತ್ತಾರೆ. ಈ ಚಕ್ರಗಳು ಸಾಮಾನ್ಯ ಚಕ್ರಗಳಂತೆ ವೃತ್ತಾಕಾರವಿರಬೇಕಾಗಿಲ್ಲ. ಅವು ಸಾಂಕೇತಿಕ ಭಾಷೆಯಲ್ಲಿ ಚೈತನ್ಯ ಕೇಂದ್ರಗಳಿಗೆ ಅನ್ವಯಿಸುತ್ತವೆ. ಈ ಚೈತನ್ಯಕೇಂದ್ರಗಳು ಇಂದ್ರಿಯಗೋಚರವಲ್ಲದಿದ್ದರೂ, ಶಿವಯೋಗಿಗಳು ಅವುಗಳಿಗೆ ಆಕಾರವಿರುವುದನ್ನು ತಮ್ಮ ಅನುಭಾವದಲ್ಲಿ ಕಂಡುಕೊಂಡಿದ್ದಾರೆ. ಯಾವ ಚಕ್ರಕ್ಕೆ ಯಾವ ಆಕಾರವಿದೆ ಎಂಬುದಕ್ಕೆ ವಿವರ: ಗುದಸ್ಥಾನದಲ್ಲಿರುವ ಆಧಾರ ಚಕ್ರಕ್ಕೆ ಚತುಷ್ಕೋಣಾಕೃತಿ ಇದೆ; ಸ್ವಾಧಿಷ್ಠಾನ ಚಕ್ರವು ಧನುರಾಕೃತಿಯುಳ್ಳದು; ನಾಭಿಸ್ಥಾನದಲ್ಲಿರುವ ಮಣಿಪೂರಕ ಚಕ್ರಕ್ಕೆ ತ್ರಿಕೋಣಾಕೃತಿ ಇದೆ; ಹೃದಯಸ್ಥಾನದಲ್ಲಿರುವ ಅನಾಹತ ಚಕ್ರಕ್ಕೆ ಷಟ್ಕೋಣಾಕೃತಿಯಿದೆ, ಕಂಠಸ್ಥಾನದಲ್ಲಿರುವ ವಿಶುದ್ಧಿ ಚಕ್ರವು ವರ್ತುಳಾಕಾರವುಳ್ಳದು, ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರವು ತಮಂಧಾಕಾರವುಳ್ಳದು. ಒಂಬತ್ತು ಚಕ್ರಗಳನ್ನು ಪ್ರಸ್ತಾಪಿಸುವ ಬಾಲಸಂಗಯ್ಯ ಏಳನೆ, ಎಂಟನೆ ಮತ್ತು ಒಂಬತ್ತನೇ ಚಕ್ರಗಳ ಆಕೃತಿಗಳ ಬಗ್ಗೆ ಮೌನವಹಿಸಿದ್ದಾನೆ. (೧೩:೧೭೯೭-೧೮೦೨)

**ಪರಂಜ್ಯೋತಿ :** ಶಿವಯೋಗಿಯು ತುರೀಯ ಸ್ಥಿತಿಯಲ್ಲಿ ಕಾಣುವ ಅತೀಂದ್ರಿಯ ಬೆಳಕು. ಇದನ್ನು ಚಿದ್ಬೆಳಗು ಎಂದೂ ಕೆಲವರು ಕರೆಯುತ್ತಾರೆ. (೭:೧೧೨೧)

**ಪರತಂತ್ರ :** ಪರಶಿವನಿಗೆ ಇಡೀ ವಿಶ್ವವೇ ಒಂದು ತನು. ಪೃಥ್ವಿ, ಜಲ, ವಾಯು ಅಗ್ನಿ, ಆಕಾಶ, ಆತ್ಮ, ಸೂರ್ಯ, ಚಂದ್ರ ಎಂಬ ಎಂಟು ಅಂಶಗಳಿರುವ ಈ ತನುವಿಗೆ ಅಷ್ಟತನುವೆಂದು ಹೆಸರು. ಸೃಷ್ಟಿಯಾಗುವುದು, ಅಸ್ತಿತ್ವದಲ್ಲಿರುವುದು ಮತ್ತು ಪ್ರಲಯಕ್ಕೊಳಗಾಗುವುದು ಈ ಮೂರಕ್ಕೂ ಅದು ಪರಶಿವನನ್ನೇ ಅವಲಂಬಿಸುವುದರಿಂದ, ಅದು ಪರತಂತ್ರ. ಆತ್ಮನಿಗೆ, ತನ್ನ ಜೀವನವನ್ನು ರೂಪಿಸಿಕೊಳ್ಳುವ ಕಿಂಚಿತ್ ಸ್ವಾತಂತ್ರ್ಯವಿದೆಯಾದರೂ, ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವ ಸ್ವಾತಂತ್ರ್ಯವಾಗಲಿ ತನ್ನ ಕರ್ಮಕ್ಕೆ ತಕ್ಕಂತೆ ಫಲವನ್ನು ಅನುಭವಿಸದಿರುವ ಸ್ವಾತಂತ್ರ್ಯವಾಗಲಿ ಅದಕ್ಕಿಲ್ಲ. ತನ್ನ ದೇಹಾದಿಗಳನ್ನು ಪಡೆಯಲು, ಒಂದು ನಿಶ್ಚಿತ ಪರಿಸರದಲ್ಲಿರಲು ಪರಶಿವನನ್ನೆ ಅದು ಅವಲಂಬಿಸಬೇಕಾಗಿರುವುದರಿಂದ, ಅದೂ ಜಡವಿಶ್ವದಂತೆ ಪರತಂತ್ರವೇ (೯:೨೪೪).

**ಪರದೇಶಿಕ :** ಐಂದ್ರಿಕ ಆಸೆಗಳ ಜಾಲದಲ್ಲಿ ಸಿಕ್ಕಿರುವವರೆಗೂ ನಾವು ವಿವಿಧ ರೀತಿಯ ಕರ್ಮಗಳನ್ನು ಮಾಡುತ್ತಾ ಸಂಸಾರದಲ್ಲೆ ಇರುತ್ತೇವೆ. ಆದರೆ ಲಿಂಗಾಂಗ ಸಾಮರಸ್ಯವನ್ನು

ಸಾಧಿಸಿದ ಮೇಲೆ ನಾವು ಸಾಂಸಾರಿಕ ಬಂಧನವನ್ನು ತಪ್ಪಿಸಿಕೊಳ್ಳುತ್ತೇವೆ. ಮೋಳಿಗೆ ಮಾರಯ್ಯ ಸಂಸಾರದಿಂದ ತಪ್ಪಿಸಿಕೊಳ್ಳುವ ಈ ಕ್ರಿಯೆಯನ್ನು ಅಲಂಕಾರಿಕವಾಗಿ ಪರದೇಶಿಕ ಎನ್ನುತ್ತಾನೆ. ನೋಡಿ : ಈಶ್ವರಸಂಗವ ತಾಳಿದ ಮತ್ತೆ ಪರದೇಶಿಕನಾಗಬೇಕು. (೮:೧೫೪೪)

**ಪರದೈವ :** ಶಿವನಲ್ಲದೆ ಬೇರೆ ದೈವ. ಶರಣರು ಪರದೈವ ಪೂಜೆಯನ್ನು ಖಂಡಿಸುತ್ತಾರೆ.

**ಪರಪಾಕ :** ಭಕ್ತರಲ್ಲದವರು (ಭವಿಗಳು) ಮಾಡಿದ ಅಡುಗೆ. (೫:೪೪೩)

**ಪರಮ ಸೌಖ್ಯಾಂಗ :** ಚ್ಯುತಿಯಿಲ್ಲದ ಸುಖವನ್ನು ಅನುಭವಿಸುವ ಆತ್ಮ(೭:೫೭೬)

**ಪರಮ ಹಂಸ :** ಪರಮನೊಡನೆ (ಪರಮವಸ್ತುವಿನೊಡನೆ) ಬೇರಿಲ್ಲದಂತೆ ಬೆರೆತವನು.

**ಪರಮಾರ್ಥ :** ಅತ್ಯಂತ ಹೆಚ್ಚು ಮೌಲ್ಯದ ಸಲುವಾಗಿ ಅಂದರೆ ಮೋಕ್ಷ ಅಥವಾ ಲಿಂಗಾಂಗ ಸಾಮರಸ್ಯದ ಸಲುವಾಗಿ ಮಾಡುವ ಆಧ್ಯಾತ್ಮ.

**ಪರಮೂರ್ತಿ :** ಪರಮವಸ್ತುವಿನ ರೂಪದವನು, ಗುರು ಅಥವಾ ಜಂಗಮ (೮:೮೫೯)

**ಪರಲೋಕ :** (೧) ಬೇರೆ ಲೋಕ: ಇದು ಸ್ವರ್ಗವಾದರೂ ಇರಬಹುದು, ನರಕವಾದರೂ ಇರಬಹುದು, (೨) ಸ್ವರ್ಗ (೩) ಕೈಲಾಸ

**ಪರವಸ್ತು(ಪರಾತ್ಪರವಸ್ತು) :** ಯಾವುದು ಸತ್ಯವೋ ಅದು ವಸ್ತು; ಯಾವುದು ಇಂದ್ರಿಯ ಮನಸ್ಸು, ಬುದ್ಧಿಗೆ ಅತೀತವೋ ಅದು ಪರ: ಪರ ಎಂದರೆ ಎಲ್ಲಕ್ಕಿಂತ ಹೆಚ್ಚಿನ ಎಂದೂ ಅರ್ಥವಿದೆ. ಇಂದ್ರಿಯಾತೀತ, ಮನೋತೀತ ಪರಶಿವನು ಯಾವ ಬದಲಾವಣೆಗೂ ಒಳಗಾಗದೆ ಯಾವಾಗಲೂ ಇರುವವನು, ಎಂಬುದು ಇದರ ಅರ್ಥ.

**ಪರಶಿವ, ಪರಮಶಿವ, ಪರಶಿವಲಿಂಗ :** ಅತ್ಯಂತ ಶ್ರೇಷ್ಠನಾದ ಶಿವ.

**ಪರಿಣಾಮ :** ವಚನ ಪರಿಭಾಷೆಯಲ್ಲಿ ಪೂಜೆ ಅಥವಾ ಪ್ರಸಾದ ಅಥವಾ ಪಾದೋದಕದಿಂದ ಸಿಕ್ಕುವ ತೃಪ್ತಿ.

**ಪರಿಣಾಮ ಪ್ರಸಾದ :** ಧಾರ್ಮಿಕವಾಗಿ ಪರಿವರ್ತನೆಗೊಂಡವನು ಭೋಗಿಸುವ ಪ್ರಸಾದ. ನಮ್ಮನ್ನೂ ನಮಗಾಗಿ ಪ್ರಪಂಚವನ್ನೂ ಸೃಷ್ಟಿಸಿದುದಕ್ಕಾಗಿ ನಾವು ಪರಶಿವನಿಗೆ ಋಣಿಗಳಾಗಿದ್ದೇವೆ. ದೇಹೇಂದ್ರಿಯಾದಿಗಳಾಗಲಿ ವಿಷಯಗಳಾಗಲಿ, ನಮ್ಮವಲ್ಲ ಎಂದು ತಿಳಿದು ಅವುಗಳನ್ನು ಪರಶಿವನಿಗರ್ಪಿಸಿ ಅನಂತರ ತಾನು ಅನುಭವಿಸುವುದರಿಂದ ಅವನಿಗಾಗುವ ತೃಪ್ತಿಯೇ ಪರಿಣಾಮ. ಅವನು ಭೋಗಿಸುವ ಪ್ರಸಾದ ಪರಿಣಾಮ ಪ್ರಸಾದ (೩:೪೫)

**ಪರಿಪೂರ್ಣ :** ೧. ಕುಂದು ಕೊರತೆಯಿಲ್ಲದ; ೨. ಎಲ್ಲೆಲ್ಲೂ ಪೂರ್ಣವಾಗಿ ವ್ಯಾಪಿಸಿಕೊಂಡಿರುವ. ಇವೆರಡೂ ಅರ್ಥ ಪರಶಿವನಿಗೆ ಅನ್ವಯವಾಗುತ್ತವೆ.

**ಪರಿಪೂರ್ಣಭಾವಿ :** ಪರಶಿವನು ಎಲ್ಲೆಲ್ಲಿಯೂ ತುಂಬಿಕೊಂಡಿರುವದರಿಂದ, ಯಾವುದೋ ಒಂದು ಸ್ಥಳದಲ್ಲಿ, ಯಾವುದೋ ಒಂದು ಕಾಲದಲ್ಲಿ, ಯಾವುದೋ ಒಂದು ಆಹಾರವಸ್ತುವನ್ನು ಅರ್ಪಿಸಿ ಪ್ರಸಾದವನ್ನಾಗಿ ಮಾಡಿಕೊಳ್ಳುವುದು ತಪ್ಪು. ವಸ್ತುಗಳು ಎಲ್ಲೆಲ್ಲಿವೆಯೋ ಅಲ್ಲಲ್ಲಿಯೇ ಕೈಯಿಂದ ಮುಟ್ಟದೆಯೇ ಮನಸ್ಸಿನಲ್ಲೇ ಅವುಗಳನ್ನು ಅರ್ಪಿಸುವವನು ನಿಜವಾದ ಪರಿಪೂರ್ಣಭಾವಿ. (೮:೨೧೫೩)

**ಪರಿಭವದ ದಂದುಗ :** ಸಂಸಾರದಲ್ಲಿನ ಕಷ್ಟಗಳು. (೭:೧೦೭೩)

**ಪರಿಭ್ರಮಣದ ಸೂತಕ :** ನಾನು ಪರಶಿವನನ್ನು ಅರಿತಿದ್ದೇನೆ ಎನ್ನಲು ಯಾರಿಗೂ ಸಾಧ್ಯವಿಲ್ಲ. ಏಕೆಂದರೆ ಪರಶಿವನಲ್ಲಿ ಅಹಂಭಾವವನ್ನು ಕಳೆದುಕೊಳ್ಳದೆ ಅವನನ್ನು ಅರಿಯಲು ಸಾಧ್ಯವಿಲ್ಲ. ಅವನನ್ನು ಅರಿತಮೇಲೆ (ಅಹಂ) ನಾನು ಭಾವ ನಷ್ಟವಾಗುವುದರಿಂದ ನಾನು ಪರಶಿವನನ್ನು ಅರಿತಿದ್ದೇನೆ ಎಂಬುದು ಅಸತ್ಯವಷ್ಟೇ ಅಲ್ಲ, ಸ್ವವಿರೋಧವೂ ಆಗುತ್ತದೆ. ಹಾಗನ್ನುವುದು ಭ್ರಮೆಯ (ಪರಿಭ್ರಮಣದ) ಲಕ್ಷಣ. (೮:೧೨೩೨)

**ಪರುಷ :** ಈ ಪದಕ್ಕೆ ಯಾವುದೇ ಲೋಹವನ್ನು ಚಿನ್ನವನ್ನಾಗಿ ಮಾಡುವ ಒಂದು ಅಸಾಧಾರಣ ವಸ್ತು ಎಂಬ ವಾಸ್ತವಿಕ ಅರ್ಥವಿದ್ದರೂ, ಈ ವಚನದಲ್ಲಿ (೧:೧೨೩೩) ಅದು ಆಲಂಕಾರಿಕವಾಗಿ ಬಳಕೆಯಾಗಿದೆ. ನಿಜವಾದ ಭಕ್ತಿಯಿಂದ (ಹಸ್ತಪರುಷದಿಂದ) ಅರ್ಪಿತವನ್ನು ಮುಟ್ಟಿದಾಗ ಆದರ ಅಪಾವಿತ್ರ್ಯ ಹೋಗುತ್ತದೆ. ನಿಜವಾದ ಭಕ್ತಿಯಿಂದ 'ದೃಷ್ಟಿಪರುಷದಿಂದ' ಅದನ್ನು ನೋಡಿದಾಗ ಅದರ ಅಪಾವಿತ್ರ್ಯ ಹೋಗುತ್ತದೆ. ನಿಜವಾದ ಭಕ್ತಿಯಿಂದ 'ವಾಕ್ಪರುಷದಿಂದ' ಅದರ ಬಗೆಗೆ ನಾನು ಅರ್ಪಿಸುತ್ತೇನೆ ಎಂದು ನುಡಿದಾಗ, ಆ ನುಡಿಯಲ್ಲಿ ಅಹಂಕಾರವಿಲ್ಲದೆ, ಪದಾರ್ಥವು ಅರ್ಪಿತಯೋಗ್ಯವಾಗುತ್ತದೆ. ನಿಜವಾದ ಭಕ್ತನ ಮನಸ್ಸು ಅರ್ಪಿತವಾಗಬೇಕಾದುದನ್ನು ನೆನೆಸಿಕೊಂಡಾಗ, ಅದು ಆ ಪದಾರ್ಥವನ್ನು ಮನಸ್ಸಿನಲ್ಲೇ ಶುದ್ಧ ಮಾಡುತ್ತದೆ ಹಾಗೂ, ನಿಜವಾದ ಭಕ್ತನ ಭಾವವೂ ಅಹಂಕಾರವೂ ನಿರ್ಭಾವದಿಂದ ಅರ್ಪಣೆ ಮಾಡುತ್ತದೆಯಾದುದರಿಂದ ಪದಾರ್ಥವು ಅರ್ಪಿತಯೋಗ್ಯವಾಗುತ್ತದೆ.

**ಪವನಭೇದ :** ಉಸಿರಾಟದ ರಹಸ್ಯ. ವಿಶಿಷ್ಟರೀತಿಯ ಪ್ರಾಣಾಯಾಮದ ಮೂಲಕ ಶಿವಾನುಭವವನ್ನು ಪಡೆಯಬಹುದು ಎಂಬುದು ಕೆಲವರ ನಂಬಿಕೆ. ಅಂಥ ಪ್ರಾಣಾಯಾಮದ ರಹಸ್ಯದ ಜ್ಞಾನವೇ ಪವನ ಭೇದ.

**ಪಶು :** ಈ ಪದಕ್ಕೆ ಸಾಮಾನ್ಯ ಭಾಷೆಯಲ್ಲಿ ಹಸು ಅಥವಾ ಯಾವುದೇ ಪ್ರಾಣಿ ಎಂಬ ಅರ್ಥವಿದ್ದರೆ, ವಚನಗಳ ಪರಿಭಾಷೆಯಲ್ಲಿ ಜೀವಾತ್ಮ ಎಂಬ ಅರ್ಥವಿದೆ. ಜೀವಾತ್ಮನು ಪರಮಾತ್ಮನಲ್ಲಿ ಒಂದಾಗುವವರೆಗೆ ಸಂಸಾರಕ್ಕೆ ಅಂಟಿಕೊಂಡೇ ಇರುತ್ತಾನೆ. ಹೀಗೆ, ಬದ್ಧನಾದ ಜೀವನೆ ಪಶು ಎನಿಸಿಕೊಳ್ಳುತ್ತಾನೆ. 'ಪಾಶಬದ್ಧ ಜೀವನರಾಗಿ ಪಶುವೆನಿಸುವವರು' ಎಂದು ಸಂಗಮೇಶ್ವರದ ಅಪ್ಪಣ್ಣ ಹೇಳುವುದು ಈ ಕಾರಣಕ್ಕಾಗಿಯೇ. ಇಲ್ಲಿ ಪಾಶವೆಂದರೆ ಸಂಸಾರ, ಮಾಯೆ, ಪ್ರಕೃತಿ ಎಂದರ್ಥ.

**ಪಶುತ್ವ :** ಜೀವಾತ್ಮನು ತಾನು ಪರಶಿವನಿಂದ ಭಿನ್ನವೆಂದು ತಿಳಿಯುವುದು (೫:೭೩೧)

**ಪಶ್ಚಿಮ ಚಕ್ರ (ಪಶ್ಚಿಮ ಶಿಖಾಚಕ್ರ) :** ತಲೆಯ ಹಿಂಭಾಗದಲ್ಲಿರುವ ಚಕ್ರ.

**ಪಶ್ಚಿಮ ದ್ವಾರ :** ಹಿಂದಲೆಯಲ್ಲಿರುವ ಚಕ್ರ ಅಥವಾ ನಾಳ. ಒಂದು ಸಿದ್ಧಾಂತದ ಪ್ರಕಾರ ಪರಶಿವ ಅಲ್ಲಿ ನೆಲೆಸಿದ್ದಾನೆ.

**ಪಾದತೀರ್ಥ :** ಪಾದೋದಕ (೯:೧೬೨)

**ಪಾದೋದಕ :** ಮನೆಗೆ ಬಂದ ಗುರು ಅಥವಾ ಜಂಗಮರ ಪಾದಕ್ಕೆ ಪೂಜಾ ಸಮಯದಲ್ಲಿ ಅರ್ಪಿಸಿದ ನೀರು.

**ಪಾದೋದಕ ತ್ರಯ :** ಗುರು ಪಾದೋದಕ, ಕ್ರಿಯಾ ಪಾದೋದಕ, ಜ್ಞಾನಪಾದೋದಕ. ಬೇರೆಬೇರೆ ವಚನಕಾರರು ಇದಕ್ಕೆ ಪರ್ಯಾಯ ಪಾರಿಭಾಷಿಕ ಪದಗಳನ್ನು ಸೂಚಿಸಿದ್ದಾರೆ. ೧. ಗುರುಪಾದೋದಕ, ಲಿಂಗಪಾದೋದಕ, ಜಂಗಮ ಪಾದೋದಕ, ೨. ದೀಕ್ಷಾ ಪಾದೋದಕ, ಶಿಕ್ಷಾ ಪಾದೋದಕ, ಜ್ಞಾನ ಪಾದೋದಕ, ೩. ಕರುಣ ಜಲ, ವಿನಯ ಜಲ, ಸಮತೆ ಜಲ. ಹೆಸರು ಯಾವುದಿದ್ದರೂ ಅವುಗಳ ಅರ್ಥದಲ್ಲಿ ವ್ಯತ್ಯಾಸವಿಲ್ಲ. ದೀಕ್ಷಾಸಮಯದಲ್ಲಿ ಗುರುಪಾದದಿಂದ ಬಂದುದು ಗುರುಪಾದೋದಕ ಅಥವಾ ದೀಕ್ಷಾ ಪಾದೋದಕ; ಗುರು ಹೇಳಿದಂತೆ ನಾವು ಲಿಂಗಪೂಜೆ ಮಾಡಿ, ಅದರಿಂದ ಪಡೆದ ಪಾದೋದಕವೇ ಲಿಂಗ ಪಾದೋದಕ ಅಥವಾ ಶಿಕ್ಷಾ ಪಾದೋದಕ. ಗುರುಪಾದೋಕ ಸೇವನೆಯಲ್ಲಿ ಸ್ವಲ್ಪ ಶ್ರದ್ಧೆ ಇದ್ದರೆ, ಶಿಕ್ಷಾಪಾದೋಕ ಸೇವನೆಯಲ್ಲಿ ಸ್ವಲ್ಪ ತಿಳಿವಳಿಕೆಯೂ ಇದೆ. ಜಂಗಮ ಮೋಕ್ಷಾರ್ಥಿಗೆ ಕೊಡುವ ಪಾದೋದಕ ಜಂಗಮ ಪಾದೋದಕ ಅಥವಾ ಜ್ಞಾನಪಾದೋದಕ. ಕೇವಲ ಪಾದೋದಕ ಸೇವನೆಯಿಂದ ಮೋಕ್ಷ (ಜ್ಞಾನ) ಲಭಿಸುವುದಿಲ್ಲವಾದರೂ, ಅದನ್ನು ಸೇವಿಸಿದ ಶಿಷ್ಯನು ತಾನೂ ಜಂಗಮ ಲಿಂಗೈಕ್ಯನಾಗಬೇಕೆಂಬ ನಿರ್ಧಾರ ಕೈಗೊಳ್ಳಬೇಕು.

**ಪಾದೋದಕ ಪ್ರಸಾದ ಜೀವಿ :** ಕುಡಿಯುವ ನೀರೆಲ್ಲ ಪಾದೋಕ, ತಿನ್ನುವ ಆಹಾರವೆಲ್ಲ ಪ್ರಸಾದ ಎಂದು ನಂಬುವ ಭಕ್ತ. (೧:೭೫೫)

**ಪಾಶ :** ಕರ್ಮ ಅಥವಾ ಸಂಸಾರ ಬಂಧನ.

**ಪಾಷಂಡಿ :** ನಾಸ್ತಿಕ ಎಂಬುದು ಇವರ ಸಾಮಾನ್ಯ ಅಥವಾದರೂ, ಇದನ್ನು ಕೆಲವು ವಚನಕಾರರು ವೇಷಧಾರಿ ಎಂಬರ್ಥದಲ್ಲಿ ಬಳಸಿದ್ದಾರೆ. ನಿಜವಾಗಿ ಪರಶಿವನನ್ನು ನಂಬಿದವನು ಆಸ್ತಿಕ, ವೇಷಧಾರಿ ನಿಜವಾಗಿಯೂ ನಂಬದವನಾದುದರಿಂದ, ಅವನು ನಾಸ್ತಿಕ. (೯:೧೧೮)

**ಪಿಂಗಳ :** ಕೈಕಾಲು ಗುಹ್ಯ ಮುಂತಾದ ಕರ್ಮೇಂದ್ರಿಯಗಳಿಗೆ ಪ್ರಚೋದನೆ ನೀಡುವ ನಾಡಿ ಪಿಂಗಳ. ಮನುಷ್ಯ ಹೆಚ್ಚು ಕ್ರಿಯಾಶೀಲನೂ, ಬಹಿರ್ಮುಖಿಯೂ ಆಗಲು ಪಿಂಗಳಾ ನಾಡಿಯ ಪ್ರಚೋದನೆಯೇ ಕಾರಣ. ಇದಕ್ಕೆ ಸೂರ್ಯನಾಡಿಯೆಂಬ ಇನ್ನೊಂದು ಹೆಸರಿದೆ.

ಬಲಹೊಳ್ಳೆಯ ಮೂಲಕ ಉಸಿರಾಡುವುದರಿಂದ ಪಿಂಗಳಾ ಹೆಚ್ಚು ಕಾರ್ಯಪ್ರವೃತ್ತವಾಗುತ್ತದೆ.

**ಪಿಂಡ :** ಪಿಂಡವೆಂದರೆ ಶಿವನ ಒಂದಂಶವಾದ ಅಂಗ (ಜೀವ)ವೇ ಹೊರತು, ಮತ್ತೇನೂ ಅಲ್ಲ. ಇದು 'ಪಿಂಡ ಪಿಂಡವೆಂದೆನು, ತನು ಪಿಂಡವೆ? ಮನ ಪಿಂಡವೇ? ಅಲ್ಲ, ಆದಿ ಪಿಂಡವಿಡಿದು ಬಂದ ಜ್ಞಾನಪಿಂಡವೇ ಪಿಂಡ' ಎಂಬ (೧೧:೭೯೫) ಸ್ವತಂತ್ರ ಸಿದ್ಧಲಿಂಗೇಶ್ವರನ ವಚನದಿಂದ ವ್ಯಕ್ತವಾಗುತ್ತದೆ. ಶಿವನ ಅಂಶವಾದ ಪಿಂಡಕ್ಕೆ ಭಕ್ತಿ ಪಿಂಡವೆಂದೂ ಹೆಸರು. ಏಕೆಂದರೆ ಭಕ್ತನಿಗೂ ಪರಶಿವನಿಗೂ ಒಂದೇ ಪಿಂಡವಾದ ಕಾರಣ. (೧೧:೭೯೬)

**ಪಿಂಡಜ್ಞಾನ :** ಪಿಂಡಜ್ಞಾನವೆಂದರೆ ಪಿಂಡದ ಬಗೆಗೆ ಪಡೆಯುವ ಜ್ಞಾನವಲ್ಲ, ಪಿಂಡದಲ್ಲಿ ಜ್ಞಾನ (ಅರಿವು) ಅಥವಾ ಚಿದಂಶವಿದೆ, ಎಂಬುದರ ಜ್ಞಾನ. ಗಮನಿಸಿ : 'ನಿನ್ನ ಪಿಂಡದ ಮಧ್ಯದಲ್ಲಿ ಉದಯವಾಗಿ ತೋರುವ ಪಿಂಡ ಜ್ಞಾನದ ಮಹದರುಹೆ ಪರಬ್ರಹ್ಮವೆಂದು ಅರಿಯಲು ಯೋಗ್ಯವೆಂದನಯ್ಯಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ' (೧೧:೪೩)

**ಪಿಂಡಜ್ಞಾನಸ್ಥಲ :** ಗುರುವಿನ ಬೋಧೆಯಿಂದಾಗಿ, ಅಥವಾ ಮತ್ತೆ ಯಾವುದೋ ದಾರಿಯಿಂದ ಆತ್ಮನ ನಿಜಸ್ವರೂಪ, ಜಗತ್ತಿನ ನಿಜಸ್ವರೂಪ, ಆತ್ಮ ಹೇಗೆ ಅವಿದ್ಯೆ ಮತ್ತು ಮಾಯೆಗಳಿಂದ ಆವೃತನಾಗಿದ್ದಾನೆ ಮುಂತಾದ ಆಧ್ಯಾತ್ಮಿಕ ವಿಚಾರಗಳನ್ನು ಜೀವನು ತಿಳಿದುಕೊಂಡಾಗ ಅವನಿಗೆ ಪಿಂಡಜ್ಞಾನ ಉಂಟಾಗಿ, ಅವನು ಪಿಂಡಜ್ಞಾನ ಸ್ಥಲದಲ್ಲಿದ್ದಾನೆಂದರ್ಥ. ಆದರೆ ಈ ಜ್ಞಾನ ವ್ಯಾವಹಾರಿಕ ಜ್ಞಾನವೇ ಹೊರತು, ತಾನೇ ಅನುಭವಿಸಿ ಪಡೆದ ಜ್ಞಾನವಲ್ಲ.

**ಪಿಂಡತ್ರಯ :** ಪಿಂಡವೆಂದರೆ ಮಾನವ ದೇಹವೆಂಬ ಸ್ಥೂಲ ಅರ್ಥವಿದ್ದರೂ, ಆ ಪದ ದೇಹಕ್ಕೂ ಅಲ್ಲದೆ ದೇಹದಲ್ಲಿರುವ ಕರಣಾದಿಗಳೆಲ್ಲಕ್ಕೂ ಅನ್ವಯಿಸುತ್ತದೆ. ಬ್ರಹ್ಮಾಂಡವೆಂದರೆ ಜಗತ್ತು ಮತ್ತು ಅದನ್ನೊಳಗೊಂಡಿರುವ ಮತ್ತು ಅದರೊಳಗಿರುವ ಪರಶಿವನಿಗೆ ಹೇಗೆ ಅನ್ವಯಿಸುತ್ತದೆಯೋ ಹಾಗೆ ಪಿಂಡಾಂಡ (ಅಥವಾ ಪಿಂಡ) ಎಂಬ ಶಬ್ದವು ದೇಹೇಂದ್ರಿಯಾದಿಗಳಿಗೂ ಅಲ್ಲದೆ, ಅವುಗಳಲ್ಲಿರುವ ಆತ್ಮಕ್ಕೂ ಅನ್ವಯಿಸುತ್ತದೆ.

ಪಿಂಡವು ಆದಿಪಿಂಡ, ಮಧ್ಯಪಿಂಡ ಮತ್ತು ಅನಾದಿ ಪಿಂಡವೆಂದು ಮೂರು ವಿಧವಾಗಿದೆ.

ಆದಿಪಿಂಡಕ್ಕೆ ಜೀವ ಪಿಂಡವೆಂಬ ಮತ್ತೊಂದು ಹೆಸರಿದೆ. ಅದು ಹುಟ್ಟು (ಆದಿ) ಇತ್ಯಾದಿಗಳಿಗೆ ಬದ್ಧವಾಗಿರುವುದರಿಂದ ಅದಕ್ಕೆ ಆ ಹೆಸರು ಅನ್ವಯವಾಗುತ್ತದೆ. ಆದಿಪಿಂಡವೆಂದರೂ ಒಂದೇ, ಅಷ್ಟತನುವೆಂದೂ ಒಂದೇ. ಅಷ್ಟಕಗಳಾದ ಪೃಥ್ವಿ, ಅಪ್ಪು,

ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ ಮತ್ತು ಆತ್ಮ ಪರಶಿವನಿಂದ ಹುಟ್ಟಿ ಅವುಗಳಿಂದ ಜೀವ ಪಿಂಡವಾಗುವುದರಿಂದಲೂ ಅದಕ್ಕೆ ಆದಿಪಿಂಡವೆಂಬ ಹೆಸರು ಬಂದಿರಬಹುದು. ಅಂತೂ ಆದಿಪಿಂಡವು ನಾನಾರೀತಿಯ ಕರ್ಮಗಳನ್ನು ಮಾಡಿ ಭವಾಂತರಗಳಲ್ಲಿ ಸುಖದು:ಖಗಳನ್ನು ಅನುಭವಿಸುತ್ತಾ, ಕೊನೆಗೆ ಶಿವಕೃಪೆಯಿಂದ ಮೋಕ್ಷ ಪಡೆಯುತ್ತದೆ.

ಶಿವನ ಚಿದಂಶವೇ ಅವನ ಆಜ್ಞೆಯ ಮೇರೆಗೆ ಜಗದೋದ್ಧಾರ ಮಾಡಲು ಮರ್ತ್ಯಲೋಕದಲ್ಲಿ ಹುಟ್ಟಿ, ಶರೀರಸಂಬಂಧಿಯಾಗಿದ್ದರೂ, ಶರೀರದ ಅವಗುಣಗಳನ್ನು ಹೊದ್ದದೆ, ಕೇವಲ ನಿಷ್ಕಾಮಕರ್ಮ ಮಾಡುತ್ತಾ ತಮ್ಮ ಪಂಚಭೂತದ ಕಾಯವನ್ನು ಪ್ರಸಾದಕಾಯವನ್ನು ಮಾಡಿಕೊಂಡವರೇ, ಸುಜ್ಞಾನ ಪಿಂಡ. ಬಸವಾದಿ ಪ್ರಮಥರು ಧರಿಸಿದ ಶರೀರವೆಲ್ಲಾ ಸುಜ್ಞಾನ ಪಿಂಡ.

ತಾವೂ ಮತ್ತು ಶಿವ ಬೇರೆ ಬೇರೆ ಅಲ್ಲವೆಂದೂ, ತಾವು ಶಿವನ ಅಂಗವೆಂದೂ, ಶಿವ ತಮ್ಮ ಮೂಲಕ ಅನುಭವಿಸುತ್ತಾನೆಂದೂ, ತಿಳಿದುಕೊಂಡಿರುವವರ ಶರೀರ ಚಿತ್ಪಿಂಡ ಅಥವಾ ಅನಾದಿ ಪಿಂಡ. ತಾವು ಅನಾದಿಕಾಲದಿಂದಲೂ ಶಿವನಲ್ಲಿಯೇ, ಶಿವನ ಅಂಗವಾಗಿಯೇ ಇದ್ದೇವೆಂದು ತಿಳಿದುಕೊಂಡಿರುವುದರಿಂದ, ಮತ್ತು ಅವರು ತಮ್ಮ ಕಾಯದ ಅವಗುಣಗಳನ್ನೆಲ್ಲಾ ಕಳೆದುಕೊಂಡು ಶಿವನ ಕಾಯವನ್ನಾಗಿಮಾಡಿಕೊಂಡಿರುವುದರಿಂದ ಅದು ಚಿತ್ಪಿಂಡ ಎನಿಸಿಕೊಳ್ಳುತ್ತದೆ.

**ಪಿಂಡಮುಕ್ತ :** ಆತ್ಮ. ಆತ್ಮವು ಪಿಂಡ (ದೇಹ, ಇಂದ್ರಿಯಗಳು, ಇತ್ಯಾದಿಗಳ ಸಂಪುಟ)ದಲ್ಲಿಯೇ ಇದ್ದರೂ, ಹುಟ್ಟು ಸಾವು, ರೋಗ ರುಜಿನ, ಸುಖ ದು:ಖಗಳು ಶುದ್ಧನಾದ ಆತ್ಮನಿಗೆ ತಟ್ಟುವುದಿಲ್ಲವಾದುದರಿಂದ ಅವನು ಪಿಂಡಮುಕ್ತ (೨:೩೦೨).

**ಪಿಂಡಸ್ಥಲ :** ಪಿಂಡವೆಂದರೆ ಜೀವಾತ್ಮ, ಮನಸ್ಸು, ಬುದ್ಧಿ, ಅಹಂ, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ತನ್ಮಾತ್ರೆಗಳು ಮತ್ತು ಪಂಚಭೂತಗಳು ಇವುಗಳ ಒಂದು ಸಂಪುಟ. ಸ್ಥಲವೆಂದರೆ ಅವಸ್ಥೆ. ಜೀವಾತ್ಮನು ಪರಮಾತ್ಮನ ಸ್ವರೂಪವೆಂಬುದನ್ನೂ, ಮನಸ್ಸು, ಬುದ್ಧಿ, ಇತ್ಯಾದಿಗಳು ಅಸ್ಥಿರವೆಂಬುದನ್ನೂ, ತಿಳಿಯದ ಜೀವಾತ್ಮನ (ಅಜ್ಞಾನ) ಅವಸ್ಥೆಯೇ ಪಿಂಡಸ್ಥಲ. (೧ : ೧-೪)

**ಪುಣ್ಯಜಾತ :** ಪುಣ್ಯಕಾರ್ಯಗಳನ್ನು ಮಾಡಿ ಮತ್ತೆ ಹುಟ್ಟುವವನು.

**ಪುನರ್ಜಾತ :** ಇದನ್ನು ವಚನಕಾರರು ಎರಡು ಅರ್ಥದಲ್ಲಿ ಬಳಸಿದ್ದಾರೆ. ಮೊದಲನೆಯದು ಕರ್ಮಗಳನ್ನು ಮಾಡಿ ಮತ್ತೆ ಹುಟ್ಟುವವನು ಎಂಬ ಸಾಮಾನ್ಯ ಅರ್ಥ. ಎರಡನೆಯದು ಹಳೆಯ ದುರಭ್ಯಾಸಗಳನ್ನು ತ್ಯಜಿಸಿ, ಗುರುಕರುಣೆಯಿಂದ ಭಕ್ತನಾಗಿ ಆಧ್ಯಾತ್ಮಿಕ ಜೀವನವನ್ನು ಪ್ರಾರಂಭಿಸಿದವನು ಎಂಬ ವಿಶೇಷ ಅರ್ಥ. (೧:೬೯,೭:೧೨೪೬,೯:೧೬೪)

**ಪುರಪತಿ ಕ್ಷೇತ್ರಜ್ಞ :** ದೇಹವೆಂಬ ಪುರದ ಒಡೆಯನಾದ ಜೀವಾತ್ಮ. (೭ : ೪೯೯)

**ಪುರಹರ :** ಪ್ರಾರಬ್ಧ ಕರ್ಮದಿಂದ ಪ್ರಾಪ್ತವಾದ ದೇಹವೆಂಬ ಪುರವನ್ನು ನಾಶಮಾಡುವವನು (ಹರ), ಪರಶಿವ (**ನೋಡಿ : ತ್ರಿಪುರ, ತ್ರಿಪುರಾಂತಕ**) (೭ : ೪೯೯)

**ಪುರಾತನರು :** ನೋಡಿ : **ಅರವತ್ತು ಮೂರು ಪುರಾತನರು.**

**ಪುರುಷಾರ್ಥ :** ಪುರುಷ (ಆತ್ಮ)ನಿಗಾಗಿ ಮಾಡಬೇಕಾದ ಕರ್ತವ್ಯಗಳು. ಇವು ನಾಲ್ಕು : ಧರ್ಮ, ಅರ್ಥ, ಕಾಮ, ಮೋಕ್ಷ.

**ಪೂಜಾರಿಗಳು :** 'ಪೂಜಾರಿ' ಎಂದರೆ ಪೂಜಿಸುವವನು (ಪೂಜಕ) ಎಂದರ್ಥ. ಈ ಪದವು ಸಾಪೇಕ್ಷ ಪದವಿದ್ದು, ಅದು ಪೂಜ್ಯ ಎಂಬ ಪದವನ್ನು ಅವಲಂಬಿಸಿದೆ. ಪೂಜ್ಯ ವಸ್ತು ಅಥವಾ ವ್ಯಕ್ತಿಯ ಬಗೆಗೆ ಭಯ, ಗೌರವ ಮತ್ತು ಭಕ್ತಿ ಇದ್ದರೆ ಮಾತ್ರ ಪೂಜಾರಿಯು ಪೂಜ್ಯವಸ್ತು ಅಥವಾ ವ್ಯಕ್ತಿಯನ್ನು ಪೂಜಿಸುತ್ತಾನೆ. ಪೂಜ್ಯವ್ಯಕ್ತಿಯನ್ನು ಸಂತುಷ್ಟಪಡಿಸಿ, ಅವನ ಕೃಪೆಗೆ ಪಾತ್ರನಾಗಬೇಕೆಂಬುದೇ ಪೂಜೆಯ ಉದ್ದೇಶ. ಪೂಜ್ಯವನ್ನು ಪೂಜಾರಿಯು ಪೂಜೆಯ ಮೂಲಕ ಅಥವಾ ಕೆಲವೊಂದು ಕೃತ್ಯಗಳ ಮೂಲಕ ತೃಪ್ತಿಪಡಿಸಬಹುದು. ವಚನಕಾರರ ಪ್ರಕಾರ ಲಿಂಗ ಅಥವಾ ಪರಶಿವನೇ ಪೂಜ್ಯ; ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಮಹೇಶ್ವರ, ಪರಮೇಶ್ವರ, ಸರ್ವೇಶ್ವರ ಮತ್ತು ಮಹಾದೇವ ಎಂಬುವರೇ ಪೂಜಾರಿಗಳು.

ಬ್ರಹ್ಮಾಂಡವನ್ನು ಪಿಂಡಾಂಡವನ್ನೂ ಸೃಷ್ಟಿಸುವ ಬ್ರಹ್ಮನು ಪ್ರತಿ ಮಾನವನಲ್ಲಿ ಅವ್ಯಕ್ತವಾಗಿ ನೆಲೆಸಿದ್ದಾನೆ. ಒಂದು ಅರ್ಥದಲ್ಲಿ ಗುರುವೂ ಸಹ ಬ್ರಹ್ಮನೇ. ಗುರುವಿನಿಂದ ಲಿಂಗದೀಕ್ಷೆಯನ್ನು ಪಡೆದುಕೊಂಡ ಶಿಷ್ಯನು, ಪುನರ್ಜಾತ ಎನಿಸಿಕೊಳ್ಳುತ್ತಾನೆ. ಈ ಕಾರಣಕ್ಕೆ ಅವನನ್ನು ಗುರುಕರ ಸಂಜಾತ ಎಂದು ಕರೆಯಲಾಗಿದೆ. ದೀಕ್ಷಿತನಾದವನು (ಆಧ್ಯಾತ್ಮಿಕವಾಗಿ) ಮತ್ತೊಂದು ಜನ್ಮ ಪಡೆದಿರುವುದರಿಂದ ಹಾಗೂ ಗುರುವೇ ಆ ಆಧ್ಯಾತ್ಮಿಕ ಜನ್ಮಕ್ಕೆ ಕಾರಣನಾದುದರಿಂದ, ಗುರುವೂ ಸಹ ಬ್ರಹ್ಮನೇ. ಆದರೆ ವಾಸ್ತವವಾಗಿ ಶಿಷ್ಯನೇ ಗುರುವಾದರೆ ಮಾತ್ರ ಅವನು ಪುನರ್ಜಾತನೆನಿಸಿಕೊಳ್ಳುತ್ತಾನೆಯೇ ಹೊರತು (ಅಂದರೆ, ಪ್ರತಿಯೊಬ್ಬ ದೀಕ್ಷಿತನೂ ತನ್ನಲ್ಲೊಬ್ಬ ಹೊಸ ಮನುಷ್ಯನನ್ನು ಸೃಷ್ಟಿಸದ ಹೊರತು), ಬೇರೆ ಯಾರೋ ಹೊರಗಿನವರು ಅವನನ್ನು ಸೃಷ್ಟಿಸಲಾರರು. ಬ್ರಹ್ಮನು ಹೇಗೆ ಶಿವನನ್ನು ಸಂತುಷ್ಟಿಪಡಿಸಲು ಅವನು ಆಜ್ಞಾಪಿಸಿದ ಸೃಷ್ಟಿಕಾರ್ಯವನ್ನು ಮಾಡುತ್ತಾನೋ (ಅಥವಾ ಬ್ರಹ್ಮನ ಸೃಷ್ಟಿಕಾರ್ಯವು ಹೇಗೆ ಒಂದು ಪೂಜೆಯೋ) ಹಾಗೆಯೇ ಮಾನವನೂ ತನ್ನನ್ನು ಆಧ್ಯಾತ್ಮಿಕವಾಗಿ ಪರಿವರ್ತಿಸಿಕೊಳ್ಳುವ ಮೂಲಕ ಶಿವನ ಪೂಜಾರಿಯಾಗಬೇಕು.

ವಿಷ್ಣುವು ಜಗತ್ತನ್ನು ರಕ್ಷಿಸುವ ಮೂಲಕ ಪರಶಿವನನ್ನು ತೃಪ್ತಿಪಡಿಸುತ್ತಾನೆ. ಪ್ರತಿ ಮನುಷ್ಯನಲ್ಲಿಯೂ ಒಬ್ಬ ವಿಷ್ಣುವಿದ್ದಾನೆ. ಜಗತ್ತು ಹಾಳಾಗದಂತೆ ನೋಡಿಕೊಳ್ಳುವುದು

ಹೇಗೆ ವಿಷ್ಣುವಿನ ಕರ್ತವ್ಯವೋ ಹಾಗೆಯೇ ದೀಕ್ಷೆ ಪಡೆದ ಶಿಷ್ಯನು ಧಾರ್ಮಿಕ ಮತ್ತು ನೈತಿಕ ಹಾದಿಯನ್ನು ಬಿಟ್ಟು ಹಾಳಾಗದಂತೆ ನೋಡಿಕೊಳ್ಳುವುದು ಗುರುವಿನ ಕೆಲಸ. ಗುರುವಿನ ಆ ಕೆಲಸವನ್ನು ಶಿಷ್ಯನು, ತಾನೇ ಅರಿತುಕೊಂಡು ಮಾಡಬೇಕು. ಅಂದರೆ, ಶಿಷ್ಯನು ತಾನೇ ಹೇಗೆ ತನ್ನಲ್ಲೊಂದು ಹೊಸ ವ್ಯಕ್ತಿತ್ವವನ್ನು ಸೃಷ್ಟಿಸಿ ಬ್ರಹ್ಮನಾಗುತ್ತಾನೋ ಹಾಗೆಯೇ ಆ ಹೊಸವ್ಯಕ್ತಿತ್ವವನ್ನು ಕಾಪಾಡಿಕೊಳ್ಳುವ ಮೂಲಕ ಒಬ್ಬ ವಿಷ್ಣುವೂ ಆಗಬೇಕು. ರುದ್ರನು ಹೇಗೆ ಕೊನೆಯಲ್ಲಿ ಎಲ್ಲದನ್ನೂ ಸಂಹಾರ ಮಾಡುವ ಮೂಲಕ (ಸಂಹಾರವೆಂಬ ಪೂಜೆಯ ಮೂಲಕ) ಶಿವನನ್ನು ತೃಪ್ತಿಪಡಿಸುತ್ತಾನೋ ಹಾಗೆಯೇ ಸಾಧಕನಲ್ಲಿರುವ ರುದ್ರನೆಂಬ ಪೂಜಾರಿಯು ಅವನ ಸ್ಥೂಲಶರೀರದ ಎಲ್ಲ ದೋಷಗಳನ್ನೂ ನಾಶಮಾಡಿ ಶಿವನ ಅನುಗ್ರಹಕ್ಕೆ ಪಾತ್ರನಾಗುವಂತೆ ಮಾಡಬೇಕು. ಇಲ್ಲಿಯೂ ಸಹ ಶಿಷ್ಯನೇ ರುದ್ರನಾಗಬೇಕು ಎಂಬ ಮಾತನ್ನು ಮರೆಯಬಾರದು.

ನಮ್ಮ ಹಳೆಯ ಕರ್ಮಕ್ಕನುಗುಣವಾಗಿ ಈಶ್ವರನು ತನ್ನ ತಿರೋಧಾನ ಶಕ್ತಿಯ ಮೂಲಕ ನಮ್ಮನ್ನು ಹೇಗೆ ಕತ್ತಲೆಯಲ್ಲಿಟ್ಟು ಶಿವನ ಪ್ರಕಾಶ ಕಾಣದಂತೆ ಮಾಡುತ್ತಾನೋ ಹಾಗೆಯೇ ಸಾಧಕರಲ್ಲಿರುವ ಈಶ್ವರನು ಪಾಪಕ್ಕೂ ಪುಣ್ಯಕ್ಕೂ ಇರುವ ವ್ಯತ್ಯಾಸವನ್ನು ತಿಳಿಸಿಕೊಡುವ ಮೂಲಕ ಶಿವಾನುಗ್ರಹಕ್ಕೆ ಪಾತ್ರನಾಗುತ್ತಾನೆ. ನಮ್ಮಲ್ಲಿರುವ ಸದಾಶಿವನನ್ನು ಜಾಗೃತಗೊಳಿಸುವ ಮೂಲಕ (ಸದಾಶಿವನನ್ನು ಪೂಜಾರಿಯಾಗಿ ಮಾಡಿಕೊಂಡು), ನಾವು ಇತರರಿಗೆ ಅನುಗ್ರಹ ತೋರಿಸಬೇಕು. ಪರಶಿವನನ್ನು ಕುರಿತು ಧ್ಯಾನಿಸುವ ಮೂಲಕ, ಅವನ ಬಗೆಗಿನ ಕತೆ, ಪ್ರವಚನ ಇತ್ಯಾದಿಗಳನ್ನು ಕೇಳುವ ಮೂಲಕ, ಆಗಮ ಇತ್ಯಾದಿಗಳನ್ನು ಅಧ್ಯಯನ ಮಾಡುವ ಮೂಲಕ ನಾವು ಶಿವಯೋಗವನ್ನು ಆಚರಿಸಬಹುದು. ಹೀಗೆ ಆಚರಿಸುವುದೆಂದರೆ, ನಮ್ಮಲ್ಲಿರುವ ಮಹೇಶ್ವರನು ಪರಶಿವನನ್ನು ಪೂಜಿಸುತ್ತಿದ್ದಾನೆಂದರ್ಥ. ಸಾಧಕನು ಗುರುವಿನ ರೂಪದಲ್ಲಿ ಇತರರಿಗೆ ಅಷ್ಟಾಂಗಯೋಗವನ್ನು ಬೋಧಿಸಿದರೆ, ಆಗ ಅವನಲ್ಲಿರುವ ಪರಮೇಶ್ವರನು ಪರಶಿವನ ಪೂಜಾರಿಯಾಗಿದ್ದಾನೆಂದರ್ಥ. ಗುರುವು ತನ್ನ ಶಿಷ್ಯರನ್ನು ಬೇರೆಯವರು ತುಳಿದ ಆಧ್ಯಾತ್ಮಿಕ ಮಾರ್ಗದಲ್ಲೇ ಕರೆದುಕೊಂಡು ಹೋಗುವ ಮೂಲಕ, ಅವನು ಸರ್ವೇಶ್ವರನಂತೆ ಪರಶಿವನನ್ನು ಪೂಜಿಸುತ್ತಿದ್ದಾನೆಂದರ್ಥ. ಕೈಲಾಸದಲ್ಲಿರುವ ಪ್ರಮಥರಂತೆ ಸಾಧಕರನ್ನು ಮಾಡಿದರೆ, ಅಂಥ ಗುರುವು ಮಹಾದೇವನೆಂಬ ಪೂಜಾರಿ.

ಸಾಧಕನಲ್ಲೇ ಎಲ್ಲ ತಂತ್ರಗಳೂ ಇದ್ದು, ಅವುಗಳನ್ನು ನಿಯಂತ್ರಿಸುವ ಬ್ರಹ್ಮ, ವಿಷ್ಣು, ಮುಂತಾದ ಅಧಿದೇವತೆಗಳೂ ಅಲ್ಲಿಯೇ ಇದ್ದಾರೆಂದೂ ಹೇಳುವುದೂ ಒಂದೇ. ಸಾಧಕನು ತಾನೇ ಬ್ರಹ್ಮ, ವಿಷ್ಣು, ಮುಂತಾದವರ ಕರ್ತವ್ಯಗಳನ್ನು ಮಾಡಿ ಪರಶಿವನ ಅನುಗ್ರಹಕ್ಕೆ ಪಾತ್ರನಾಗಬೇಕೆಂದು ಹೇಳುವುದೂ ಒಂದೇ.

**ಪೂರ್ವ ಉತ್ತರದಲ್ಲಿ ನಿಶ್ಚಯವಾಗುವುದು :** ಪೂರ್ವವೆಂದರೆ ಆಧ್ಯಾತ್ಮಿಕ ಜೀವನ ಪ್ರಾರಂಭಿಸುವ ಮೊದಲು; ಉತ್ತರ ಎಂದರೆ ಲಿಂಗದೀಕ್ಷೆಯನಂತರದ ಜೀವನ. ನಿಶ್ಚಯವಾಗುವುದೆಂದರೆ, ನಿಶ್ಚಲ ಅಥವಾ ಇಲ್ಲವಾಗುವುದು. ಲಿಂಗಾಂಗ ಸಾಮರಸ್ಯಾಭಿಮುಖವಾಗಿ ಹೊರಟ ಮೇಲೆ ಭವಿಜೀವನ ಇಲ್ಲವಾಗುವುದು.(೩ : ೬೧)

**ಪೂರ್ವಕ್ಕೆರೆಡು ಉತ್ತರಕ್ಕೊಂದು :** ಸಾಧಕನ ಆಧ್ಯಾತ್ಮಿಕ ಜೀವನವನ್ನು ಎರಡು ಭಾಗ ಮಾಡಬಹುದು. ಲಿಂಗಾಂಗ ಸಾಮರಸ್ಯವನ್ನು ಪಡೆಯುವ ಮೊದಲಿನ (ಪೂರ್ವ) ಜೀವನ ಸಾಮರಸ್ಯವನ್ನು ಪಡೆದನಂತರದ (ಉತ್ತರ), ಜೀವನ. ಭಕ್ತಸ್ಥಲದಿಂದ ಹಿಡಿದು ಸಾಮರಸ್ಯವನ್ನು ಸಾಧಿಸುವವರೆಗೂ, ಸಾಧಕನು ತಾನು ಬೇರೆ, ತಾನು ಸಾಧಿಸಬೇಕಾದ ಧ್ಯೇಯ ಬೇರೆ ಎಂಬ ದ್ವೈತ ಭಾವವನ್ನೊಳಗೊಂಡಿರುತ್ತಾನೆ. ಸಾಮರಸ್ಯದನಂತರ ತಾನು ಶಿವನ ಅಂಗವೇ ಹೊರತು ಭಿನ್ನವಲ್ಲ (ತಾನು ಮತ್ತು ಶಿವ ಒಂದೇ) ಎಂಬ ಭಾವವನ್ನು ಒಳಗೊಳ್ಳುತ್ತಾನೆ. (೮ : ೧೪೨೬)

**ಪೂರ್ವಗತಿ ಪಥ :** ಇಲ್ಲಿ ಪೂರ್ವಗತಿಯೆಂದರೆ ಮೋಕ್ಷದ ಅರಿವು ಮೂಡಿದ ಮೇಲೆ ಮೋಕ್ಷವನ್ನು ಪಡೆಯುವ ಮಾರ್ಗ ಎಂದಾಗುತ್ತದೆ (೮ : ೯೪).

**ಪೂರ್ವಜನ್ಮ ನಿವೃತ್ತಿ :** ಹಿಂದಿನ ಜನ್ಮಗಳ ಕರ್ಮ ಮತ್ತು ಈಗಿನ ಜನ್ಮದ ಪೂರ್ವಾಶ್ರಯವನ್ನು ಬಿಡುವುದು. (೧ : ೮೭೧)

**ಪೂರ್ವದಂದುಗ :** ೧. ಭವಿತನವೇ (ಅನೈತಿಕತೆ ಮತ್ತು ಅಧಾರ್ಮಿಕತೆಯೇ) ಹೆಚ್ಚಿನಂಶವಿದ್ದ ಪೂರ್ವಾಶ್ರಯ. ೨. ವೀರಶೈವ ಧರ್ಮದ ಸಿದ್ಧಾಂತಗಳನ್ನು ಬಿಟ್ಟು ಉಳಿದ ಸಿದ್ಧಾಂತಗಳನ್ನು ಅವಲಂಬಿಸಿದ್ದ ಮೊದಲಿನ ಜೀವನ. (೧೨ : ೯೭೦)

**ಪೂರ್ವ ಪ್ರಕೃತಿ :** ಆಧ್ಯಾತ್ಮಿಕ ಜೀವನ ನಡೆಸಬೇಕೆಂದು ನಿರ್ಧರಿಸುವ ಮೊದಲಿನ ಜೀವನಕ್ಕೆ ವಚನಕಾರರು ಪೂರ್ವಾಶ್ರಯ ಎನ್ನುತ್ತಾರೆ. ಪೂರ್ವಾಶ್ರಯದಲ್ಲಿ ಮನುಷ್ಯರೆಲ್ಲರೂ ಪ್ರಕೃತಿಯ ಹಿಡಿತದಲ್ಲಿದ್ದು, ಇಂದ್ರಿಲೋಲುಪತೆಯ ಗುಲಾಮರಾಗಿರುತ್ತಾರೆ. ಇದನ್ನೆ ಈ ವಚನದಲ್ಲಿ ಪೂರ್ವಪ್ರಕೃತಿ ಎಂದು ಪಾರಿಭಾಷಿಕವಾಗಿ ಹೇಳಿದ್ದಾರೆ. (೧೨ : ೪೧೯)

**ಪೂರ್ವಮೀಮಾಂಸಾ :** ವೇದಗಳ ಕರ್ಮಕಾಂಡಕ್ಕೆ ಹೆಚ್ಚು ಪ್ರಾಶಸ್ತ್ಯಕೊಟ್ಟು, ಅದರಲ್ಲಿ ಅಸತ್ಯವಾದುದು, ಅನಾವಶ್ಯಕವಾದುದು ಏನೂ ಇಲ್ಲವೆಂದೂ ವಾದ ಪ್ರತಿವಾದಗಳ ಮೂಲಕ ಪ್ರತಿಪಾದಿಸುವ ಗುರಿಯನ್ನಿಟ್ಟುಕೊಂಡಿರುವ ದರ್ಶನವೇ ಪೂರ್ವ ಮೀಮಾಂಸಾ. ಪೂರ್ವ ಮೀಮಾಂಸಕರು ಯಾವ ವೈದಿಕ ಕರ್ಮಗಳನ್ನು ಮಾಡುವಾಗ ಯಾವ ಮಂತ್ರವನ್ನು ಪಠಿಸಬೇಕು, ಯಾವ ಯಜ್ಞದಿಂದ ಯಾವ ಫಲ ಲಭಿಸುತ್ತದೆ ಮುಂತಾದುವುಗಳನ್ನು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಆದರೆ ವೇದಗಳನ್ನು ಇಷ್ಟು ಪ್ರಬಲವಾಗಿ ಪ್ರತಿಪಾದಿಸುವ ಪೂರ್ವಮೀಮಾಂಸಕರು ನಿರೀಶ್ವರವಾದಿಗಳೆನ್ನುವುದು

ಆಶ್ಚರ್ಯಕರವಾದರೂ ಸತ್ಯಸಂಗತಿ. ಇಂಥ ದೇವತೆಯ ಹೆಸರಿನಲ್ಲಿ ಇಂಥ ಯಾಗವನ್ನು ಮಾಡಿದರೆ,, ಅದಕ್ಕೆ ಇಂಥ ಲಾಭವಿದೆ ಎಂಬ ಮಾತು ಸತ್ಯವಾದರೆ, ಈಶ್ವರ ಏಕೆ ಬೇಕು, ಎಂದು ಅವರು ಕೇಳುತ್ತಾರೆ. ಅವರ ಪ್ರಕಾರ ಪ್ರಪಂಚ ಅನಾದಿಕಾಲದಿಂದಲೂ ಇದೆ; ಅದು ಎಂದೂ ಸೃಷ್ಟಿಯಾಗಿಲ್ಲ; ಸೃಷ್ಟಿಯಾಗಿಲ್ಲವೆಂದ ಮೇಲೆ ಸೃಷ್ಟಿಕರ್ತನೂ ಇಲ್ಲ - ಎಂಬುದು ಅವರ ವಾದದ ತಿರುಳು.

ಪ್ರಾಯಶಃ ಯಾಂತ್ರಿಕ ರೀತಿಯ ಕರ್ಮ, ಯಜ್ಞ ಯಾಗಾದಿಗಳು ಒಳಗೊಳ್ಳುವ ಪ್ರಾಣಿಬಲಿ, ನಿರೀಶ್ವರವಾದ, ಮುಂತಾದವುಗಳು ಶರಣರ ನಿಲುವಿಗೆ ವಿರೋಧವಾದುದರಿಂದ, ಅವರು, ಪೂರ್ವ ಮೀಮಾಂಸಾ ದರ್ಶನವನ್ನು ಖಂಡಿಸಿದ್ದಾರೆ.

**ಪೂರ್ವಸಂಸ್ಕಾರ :** ಕೆಲವರು ಕೆಲವು ವೇಳೆ ಅನೇಕ ರೀತಿಯ ಕ್ರಿಯೆ, ಜ್ಞಾನ, ವ್ರತಗಳನ್ನು ಚಾಚೂ ತಪ್ಪದೆ ಆಚಾರಿಸಿದಾಗ್ಯೂ ಅವರಿಗೆ ಆಧ್ಯಾತ್ಮಿಕ ಲಾಭ ಸಿಕ್ಕುವುದಿಲ್ಲ. ಮತ್ತೆ ಕೆಲವರು ಇಂಥ ಯಾವುದೇ ಕ್ರಿಯೆಗಳನ್ನು ಆಚರಿಸದಿದ್ದರೂ ಅವರಿಗೆ ಶಿವಾನುಭವ ಲಭಿಸುತ್ತದೆ. ಇದಕ್ಕೆ ಅವರವರ ಪೂರ್ವ ಸಂಸ್ಕಾರವೇ ಕಾರಣ.

ಪೂರ್ವಸಂಸ್ಕಾರವೆಂದರೆ, ನಾವು ಹಿಂದಿನ ಜನ್ಮದಲ್ಲಿ ಹೊರಜಗತ್ತಿಗೆ ತೋರಿಸಿದ ಪ್ರತಿಕ್ರಿಯೆಗಳು ಹಾಗೂ ಹೊರಜಗತ್ತು ನಮ್ಮ ಮನಸ್ಸಿನ ಮೇಲೆ ಬೀರಿದ ಪರಿಣಾಮ. ಉದಾಹರಣೆಗೆ ಹಿಂದಿನ ಜನ್ಮದಲ್ಲಿ ನಾವು ದೀಕ್ಷೆಪಡೆದು ಪೂಜಾವಿಧಾನಗಳನ್ನೂ ಯೋಗಾಸನಗಳನ್ನೂ ಕಲಿತಿದ್ದೆವೆಂದು ಊಹಿಸೋಣ. ಈ ಜನ್ಮದಲ್ಲಿ ದೀಕ್ಷೆಯನ್ನಾಗಲೀ, ಯೋಗಾಸನಗಳ ಶಿಕ್ಷಣವನ್ನಾಗಲೀ, ಪಡೆಯದಿದ್ದರೂ ಕೇವಲ ಇತರರನ್ನು ನೋಡಿ ನಾವು ಪೂಜಿಸಲು ಅಥವಾ ಯೋಗಾಸನಗಳನ್ನು ಮಾಡಲು ಪ್ರಾರಂಭಿಸಿದರೆ, ನಮಗೆ ಪೂರ್ವಸಂಸ್ಕಾರವಿದೆಯೆಂದರ್ಥ. ತಂದೆ ತಾಯಿಗಳು ಸಂಗೀತಗಾರರಲ್ಲದಿದ್ದರೂ, ಅವರ ಒಬ್ಬ ಮಗ ಚಿಕ್ಕ ವಯಸ್ಸಿನಲ್ಲಿಯೇ ಸಂಗೀತದ ಕಡೆ ಒಲವು ತೋರಿಸಿ, ಶೀಘ್ರಗತಿಯಲ್ಲಿ ಕಲಿಯುವುದು, ತಂದೆತಾಯಿಗಳು ಇಬ್ಬರೂ ಸಂಗೀತಗಾರರಾಗಿದ್ದರೂ ಅವರ ಒಬ್ಬ ಮಗನೂ ಸಂಗೀತಗಾರನಾಗದೇ ಇರುವುದು ಪೂರ್ವಸಂಸ್ಕಾರದ ಫಲ. ಅದೇ ರೀತಿ ಶಿವಾನುಗ್ರಹವೂ ಸಹ ಪೂರ್ವಸಂಸ್ಕಾರದ ಫಲ (೯ : ೧೩೮೧-೮೨).

**ಪೂರ್ವಪಸಳಿಯುವುದು :** ಪೂರ್ವದ ಭವಿತನವನ್ನು ಬಿಡುವುದು (೭ : ೧೨೦೫)

**ಪೂರ್ವಾಚಾರ :** ಪೂರ್ವಾಚಾರವೆಂದರೆ ಮೊದಲು ಮಾಡುತ್ತಿದ್ದ ಆಚಾರವೆಂದಾದರೂ ವಾಸ್ತವಿಕವಾಗಿ, ಆಧ್ಯಾತ್ಮಿಕ ಪ್ರಗತಿಗೆ ಸಹಾಯ ಮಾಡದ ಆಚಾರವೆಂದೇ ಅದರ ಅರ್ಥ. (೧ : ೧೨೦೨)

**ಪೂರ್ವಾಚಾರ್ಯ :** ಸಂಸ್ಥಾಪಕನಾದ ಗುರು ಅಥವಾ ಆಚಾರ್ಯ. ಇದು ಬಸವಣ್ಣನಿಗೆ ಅಲ್ಲಮ ಪ್ರಭು ಅನ್ವಯಿಸುವ ಬಿರುದು. (೨ : ೧೦೮೩)

**ಪೂರ್ವಾಶ್ರಯ, ಪೂರ್ವಗುಣ :** ಆಧ್ಯಾತ್ಮಿಕ ಜೀವನವನ್ನು ಪ್ರಾರಂಭಿಸುವುದಕ್ಕೂ ಮೊದಲಿನ 'ಭವಿ' ಜೀವನ; ಭವಿಯ ಅವಗುಣ.

**ಪೃಥ್ವಿಯ ಪೂರ್ವಾಶ್ರಯವ ಕಳೆಯುವುದು :** ಮಾನವ ದೇಹಕ್ಕೆ ಕಾರಣವಾದ ಪಂಚಭೂತಗಳಲ್ಲಿ ಪೃಥ್ವಿ ತತ್ವ ಒಂದು. ಅದರ ಮುಖ್ಯ ಗುಣ ವಾಸನೆ. ಪೃಥ್ವಿ ತತ್ವವು ಕಾರಣಾಂತರದಿಂದ ವಿಕಾರವಾದಾಗ, ಮಾನವನಿಗೆ ಒಳ್ಳೆಯ ವಾಸನೆಯನ್ನು ಪಡೆಯಬೇಕೆಂಬ ಆಸೆ ಮೂಡುತ್ತದೆ. ಸದ್ಭಕ್ತನಾದವನ ದೇಹದಲ್ಲಿಯೂ ಪೃಥ್ವಿ ತತ್ವವಿರುವುದರಿಂದ, ಅಲ್ಲಿಯೂ ಅಂಥದೇ ಆಸೆ ಹುಟ್ಟಬೇಕು. ಆದರೆ ಅವನು ಸದ್ಭಕ್ತನಾದುದರಿಂದ, ಅಂಥ ಸ್ವಾರ್ಥಪರ ಆಸೆ ಅವನಲ್ಲಿ ಇಲ್ಲ ಅಥವಾ ಪೃಥ್ವಿಯ ಪೂರ್ವಾಶ್ರಯ ಕಳೆದಿದ್ದಾನೆ. (೨ : ೧೩೬)

**ಪ್ರಕಾಶ :** ಅನುಭಾವಿಯು ಧ್ಯಾನಸ್ಥಿತಿಯಲ್ಲಿರುವಾಗ ಮೊದಲು ಬಾಹ್ಯ ಪ್ರಪಂಚವನ್ನು ಮರೆಯುತ್ತಾನೆ. ಆಗ ತನ್ನ ಆತ್ಮವೇ ಅತ್ಯಂತ ಪ್ರಕಾಶಮಾನವಾಗಿ ಗೋಚರಿಸುತ್ತದೆ. ಈ ಪ್ರಕಾಶವನ್ನೇ ಚಿತ್ ಪ್ರಕಾಶ, ಪ್ರಕಾಶಲಿಂಗ, ಚಿದ್ಬೆಳಗು ಮುಂತಾಗಿ ಕರೆಯಲಾಗುತ್ತದೆ.

**ಪ್ರಕೃತಿ :** ಸಾಂಖ್ಯರ ಪ್ರಕಾರ, ಜಡ ಪ್ರಕೃತಿಯು ತ್ರಿಗುಣಗಳಿಂದಾಗಿದ್ದು, ಬುದ್ಧಿ, ಮನಸ್ಸು, ಅಹಂ, ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಪಂಚಭೂತ, ತನ್ಮಾತ್ರೆಗಳೆಲ್ಲಾ ಅದರಿಂದಲೇ ಉದ್ಭವಿಸುತ್ತದೆ. ಆದರೆ ಅವರ ಪ್ರಕಾರ ಈ ಉದ್ಭವಕ್ಕೆ ಯಾವ ದೈವ ಪ್ರಚೋದನೆಯೂ ಇಲ್ಲ. ವಚನಕಾರರು ಈ ಸಿದ್ಧಾಂತವನ್ನು ಒಪ್ಪುವುದಿಲ್ಲ.

**ಪ್ರಕೃತಿ ಜೀವಿ :** ಪ್ರಕೃತಿಯ ದುಷ್ಟ ಪ್ರಭಾವಕ್ಕೆ ಒಳಗಾದವನು. (೮ : ೨೨೯, ೯ : ೧೬೧)

**ಪ್ರಕೃತಿಧರ್ಮವನಾತ್ಮಂಗೇರಿಸಿಕಾಬ ಜಡ :** ತೆಳ್ಳಗೆ ಅಥವಾ ದಪ್ಪಗಿರುವುದು, ಎತ್ತರ ಅಥವಾ ಕುಳ್ಳಾಗಿರುವುದು, ಇತ್ಯಾದಿ ಗುಣಗಳು ಪ್ರಕೃತಿ (ದೇಹ) ಗುಣಗಳು. ಅವುಗಳನ್ನು ಆತ್ಮಕ್ಕೆ ಆರೋಪಿಸುವವನು ದಡ್ಡ (ಜಡ)ನೆನಿಸಿಕೊಳ್ಳುತ್ತಾನೆ. (೭ : ೬೬೫)

**ಪ್ರಕೃತಿಭಾವಿ :** ಪ್ರಕೃತಿಯಿಂದಾದ ದೇಹ ಮತ್ತು ಇಂದ್ರಿಯಗಳ ಸಲುವಾಗಿ ಭಾವಿಸಿ ಜೀವಿಸುವವನು. (೮ : ೧೯೯)

**ಪ್ರಣಮ :** ಓಂ ಎಂಬ ಏಕಾಕ್ಷರಿ. ಕೆಲವು ವೇಳೆ, ಇದು ಅ, ಉ ಮತ್ತು ಮ ಎಂಬ ಮೂರು ಅಕ್ಷರಗಳು ಕೂಡಿದ ಸಂಪುಟ ಎನ್ನಲಾಗುತ್ತದೆ. ಮತ್ತೆ ಕೆಲವು ವೇಳೆ ಈ ಮೂರಕ್ಷರಗಳು, ಕ್ರಮವಾಗಿ, ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರನ್ನು ಪ್ರತಿನಿಧಿಸುತ್ತವೆ ಎಂದು ನಂಬಲಾಗುತ್ತದೆ. ಅಂತೂ ಇದು ಮೊಟ್ಟಮೊದಲು ಉತ್ಪತ್ತಿಯಾದ ಅವ್ಯಕ್ತ ಶಬ್ದ. ಆದುದರಿಂದ ಇದಕ್ಕೆ ಆಧ್ಯಾತ್ಮಿಕ ವಲಯದಲ್ಲಿ ಅತಿ ಹೆಚ್ಚಿನ ಮೌಲ್ಯ. ತೋಂಟದ ಸಿದ್ಧಲಿಂಗಯತಿಗಳ ಪ್ರಕಾರ ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ. (೧೧ : ೩೩). ಕೆಲವು ವೇಳೆ ಪ್ರಣವ ಎಂಬ ಪದವು ನಮಃಶಿವಾಯ ಎಂಬ ಐದಕ್ಷರದ ಮಂತ್ರಕ್ಕೂ ಮತ್ತೆ ಕೆಲವು ವೇಳೆ ಓಂ ನಮಃ ಶಿವಾಯ ಎಂಬ ಷಡಕ್ಷರಿಗೂ ಅನ್ವಯವಾಗುತ್ತದೆ.

**ಪ್ರಣವದ ಆಕೃತಿಗಳು :** ಪ್ರಣವವೆಂದರೆ, ಓಂ ನಮಃ ಶಿವಾಯ ಎಂಬ ಆರಕ್ಷರದ ಮಂತ್ರವಾಗಿದ್ದರೂ, ಆ ಮಂತ್ರವು ಶಬ್ದ ಅಥವಾ ಅಕ್ಷರಗಳಿಂದ ರಚಿತವಾಗಿದ್ದರೂ, ಕೆಲವು ವಚನಕಾರರು ಶಾಕ್ತರನ್ನು ಅನುಕರಿಸಿ ಆ ಅಕ್ಷರಗಳಿಗೆ ಆಕಾರಗಳಿವೆ ಎಂದು ಹೇಳುತ್ತಾರೆ. ಪ್ರಥಮಾಕ್ಷರವು ಓಂ ತಾರಕ ಸ್ವರೂಪ ಉಳ್ಳುದು, ದ್ವಿತೀಯಾಕ್ಷರವು ದಂಡಕಾಕೃತಿ ಉಳ್ಳುದು, ಮೂರನೆಯದು ಕುಂಡಲಾಕಾರವಾಗಿದೆ, ನಾಲ್ಕನೆಯದು ಅರ್ಧ ಚಂದ್ರಾಕಾರವಾಗಿದೆ, ಐದನೆಯದಕ್ಕೆ ದರ್ಪಣಾಕೃತಿ ಇದೆ ಮತ್ತು ಆರನೆಯದಕ್ಕೆ ಜ್ಯೋತಿಯ ಆಕಾರವಿದೆ. (೧೩ : ೧೮೦೬-೧೮೦೯)

**ಪ್ರಣವ ರೂಪು :** ಪರಶಿವನು ಓಂಕಾರ ಪ್ರಣವದ ಮೂರ್ತರೂಪ. (೪ : ೧೧೬೦)

**ಪ್ರಣವದುತ್ಪತ್ತಿ :** ತೋಂಟದ ಸಿದ್ಧಲಿಂಗ ಶಿವಯೋಗಿಗಳ ಪ್ರಕಾರ, ಶೂನ್ಯಸ್ಥಿತಿಯಲ್ಲಿರುವ ಪರಶಿವನಿಗೆ ಸೃಷ್ಟಿಮಾಡಬೇಕೆಂಬ ಇಚ್ಛೆ ಉಂಟಾದಾಗ, ಮೊದಲು ಅವನಿಂದ ಚಿತ್ತು ಉದಯವಾಗಿ, ಆ ಚಿತ್ತಿನಿಂದ ಅಕಾರ, ಉಕಾರ, ಮಕಾರಗಳೆಂಬ ಮೂರು ಅಕ್ಷರಗಳು ಉತ್ಪತ್ತಿಯಾಗುತ್ತವೆ. ಚಿತ್ತು ಮತ್ತು ಈ ಮೂರಕ್ಷರಗಳು ಕೂಡಿದರೆ ಪ್ರಣವುವೆನಿಸಿಕೊಳ್ಳುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪ್ರಣವು ಜಡಶಬ್ದವಲ್ಲ, ಅದರಲ್ಲಿ ಚಿತ್ತು ಕೂಡಿದೆ. ಆದರೂ ಅದನ್ನು ಯಾರೂ ಉಚ್ಚರಿಸುತ್ತಿಲ್ಲ. ಯಾವುದೇ ವಸ್ತು ಸೃಷ್ಟಿಯಾಗಬೇಕಾದರೂ ಕೆಲವು ಬದಲಾವಣೆಗಳಾಗಲೇಬೇಕು, ಯಾವ ಬದಲಾವಣೆಯಾಗಬೇಕಾದರೂ ವಸ್ತುಗಳಲ್ಲಿ ಸ್ಪಂದನವಾಗಲೇಬೇಕು, ಯಾವ ಸ್ಪಂದನವಾಗಬೇಕಾದರೂ ಶಬ್ದ ಉಂಟಾಗಲೇ ಬೇಕು. ಆ ಶಬ್ದ ಅತ್ಯಂತ ಸೂಕ್ಷ್ಮವಾಗಿದ್ದು ಅದು ನಮ್ಮ ಕಿವಿಗೆ ಕೇಳಿಸದಿರಬಹುದು. ಅಂತೂ ಪರಶಿವನಲ್ಲಿ ಉಂಟಾದ ಸೃಷ್ಟಿಸಬೇಕೆಂಬ ಇಚ್ಛೆಯಿಂದ ಹೊರಟ ಪ್ರಣವುವು ಅಂಥ ಒಂದು ಮೊದಲ ಸ್ಪಂದನ.

**ಪ್ರತಿರೂಪು :** ಎದುರಿಗೆ ಕಾಣುವ ರೂಪು; ಅಜ್ಞಾನದಿಂದಾಗಿ ಪರಶಿವನು ಅನ್ಯವಸ್ತುವಾಗಿ ಕಂಡಾಗ, ಅವನು ಪ್ರತಿರೂಪು ಎನಿಸಿಕೊಳ್ಳುತ್ತಾನೆ. ಭಕ್ತನೂ ಪರಶಿವನಲ್ಲಿ ಒಂದಾದಾಗ, ತಾನೆಂಬ ಭಾವವೂ ಹೋಗುವುದಲ್ಲದೆ, ಪ್ರತಿರೂಪು (ಪರಶಿವನೆಂಬ ಅನ್ಯವಸ್ತುವೂ) ಇಲ್ಲವಾಗುತ್ತದೆ. (೮ : ೧೪೨೬)

**ಪ್ರಥಮಾಕ್ಷರ :** ಸೃಷ್ಟಿ ಮಾಡಬೇಕೆನಿಸಿದ ಪರಶಿವನಿಂದ ಹೊರಟ ಮೊದಲ ಅಕ್ಷರ, ಓಂ.

**ಪ್ರಥಮಾಚಾರ್ಯ :** ಪರಶಿವ.

**ಪ್ರದೇಶಿಕ :** ಪ್ರತಿಯೊಂದು ವಸ್ತುವೂ ಪ್ರತಿಯೊಬ್ಬ ವ್ಯಕ್ತಿಯೂ ಒಂದು ಕಾಲಕ್ಕೆ ಒಂದು ಪ್ರದೇಶದಲ್ಲಿದ್ದು, ಅದಕ್ಕೆ ಅವನಿಗೆ ಆಕಾರ ಮತ್ತು ಗಾತ್ರ ಎಂಬ ಪ್ರಾದೇಶಿಕ ಗುಣಗಳಿರುತ್ತವೆ. ಆದರೆ ಈ ಮಾತು ಚಿತ್ತಿಗೆ ಅನ್ವಯಿಸುವುದಿಲ್ಲ. ಶರಣನು ಚಿದ್ರೂಪವಾದುದರಿಂದ ಸಾಧಾರಣ ಜನರಂತೆ ಅವನು ಪ್ರದೇಶಿಕನಲ್ಲ. (೫ : ೬೯೯)

**ಪ್ರಪಂಚಿ :** ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತನಾದವನು/ಳು.

**ಪ್ರಪಂಚಿನ ಪುತ್ಥಳಿ :** ಪಂಚಭೂತಗಳಿಂದಾದ ದೇಹ. (೫ : ೭೮)

**ಪ್ರಪಂಚು ನಾಸ್ತಿ :** ಲಿಂಗಾಂಗ ಸಾಮರಸ್ಯವನ್ನು ಸಾಧಿಸಿದವನಿಗೆ ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತಿ ಇಲ್ಲವಾಗುತ್ತದೆ. ಪ್ರಪಂಚ ವಾಸ್ತವವಾಗಿ ಇರುತ್ತದೆ. ಆದರೆ ಅವನ ಪಾಲಿಗೆ ಇಲ್ಲವಾಗುತ್ತದೆ. (೫ : ೫೯೦)

**ಪ್ರಭಾಮೂರ್ತಿ :** ಪರಶಿವನಿಗೆ ಪ್ರಭೆ, ಜ್ಯೋತಿ, ಪ್ರಕಾಶ, ಬೆಳಗು, ಎಂಬ ಹೆಸರುಗಳೂ ಇವೆ. ಪ್ರಭೆಯೇ ಮೂರ್ತಿಗೊಂಡು ಭೂಮಿಗೆ ಬಂದರೆ, ಅವನನ್ನು ಗುರು ಎನ್ನುತ್ತೇವೆ. (೮ : ೫೪೨)

**ಪ್ರಮಥರು :** ಸಾಮರಸ್ಯ ಪಡೆದ ಶಿವಭಕ್ತರು. ಕೆಲವು ಕವಿಗಳ ಪ್ರಕಾರ ಇವರು ಕೈಲಾಸದಲ್ಲಿ ಶಿವಸಾನಿಧ್ಯದಲ್ಲಿರುತ್ತಾರೆ.

**ಪ್ರಮಾಣ :** ಯಾಥಾರ್ಥ ಜ್ಞಾನ ಪಡೆಯುವ ಮಾರ್ಗ. ದೂರದಲ್ಲಿ ಕತ್ತಲೆಯಲ್ಲಿ ಕಾಣುತ್ತಿರುವ ವಸ್ತು ಹಾವೋ ಹಗ್ಗವೋ ಎಂದು ತಿಳಿಯಬೇಕಾದರೆ, ಅದನ್ನು ಹತ್ತಿರದಿಂದ ನೋಡಿ, ಸಾಧ್ಯವಾದರೆ ಮುಟ್ಟಿ ನೋಡಿದಾಗ ಆ ವಸ್ತುವಿನ ನಿಜವಾದ ಸ್ವರೂಪ ತಿಳಿಯುತ್ತದೆ. ಹೀಗೆ ಇಂದ್ರಿಯ ಪ್ರಮಾಣಗಳ ಮೂಲಕ ಪಡೆಯುವ ಜ್ಞಾನ ಪ್ರತ್ಯಕ್ಷ ಜ್ಞಾನ. ಅದೇ ರೀತಿ, ಶಬ್ದ, ಅನುಮಾನ, ಅನುಪಲಬ್ಧಿ, ಉಪಮಾನ ಮತ್ತು ಅರ್ಥಾಪತ್ತಿಗಳೆಂಬ ಇತರ ರೀತಿಯ ಪ್ರಮಾಣಗಳೂ ಉಂಟು. (**ನೋಡಿ : ಶಬ್ದ ಪ್ರಮಾಣ**)

**ಪ್ರಸಾದ :** ಈ ಪದಕ್ಕೆ ಹಲವು ಪದರುಗಳಿರುವ ಅರ್ಥವಿದೆ. ಸಾಧಕನ ಸಾಧನೆ ವಿಕಾಸವಾದಂತೆಲ್ಲಾ ಈ ಪದದ ಅರ್ಥವೂ ವಿಕಾಸವಾಗುತ್ತಾ ಹೋಗುತ್ತದೆ.

ಸಾಧಕನ ಆಧ್ಯಾತ್ಮಿಕ ಜೀವನದ ಪ್ರಾರಂಭದಲ್ಲಿ (ಉದಾಹರಣೆಗೆ ಭಕ್ತಸ್ಥಲದಲ್ಲಿ) ಪ್ರಸಾದವೆಂದರೆ ಶುದ್ಧ ಆಹಾರ ಎಂದಾಗುತ್ತದೆ. ಇದನ್ನು ಸೇವಿಸಿದವನು ಶುದ್ಧನಾಗುತ್ತಾನೆ ಎಂಬ ನಂಬಿಕೆಯೇ ಪ್ರಸಾದ ಪರಿಕಲ್ಪನೆಯ ತಳಹದಿ.

ಭಕ್ತನು ಅರ್ಪಿಸುವ ಪದಾರ್ಥವು ಶುದ್ಧವಲ್ಲ; ಅರ್ಪಿಸುವ ಭಕ್ತನೂ ಶುದ್ಧನಲ್ಲ. ಆದರೆ ಅರ್ಪಿತವಾದ ಪದಾರ್ಥ ಗುರುಲಿಂಗಜಂಗಮರ ಸಂಪರ್ಕಕ್ಕೆ ಬಂದನಂತರ, ಅಂದರೆ ನೈವೇದ್ಯವಾದನಂತರ, ಅದು ಶುದ್ಧವಾಗುತ್ತದೆ; ಅದನ್ನು ಸೇವಿಸಿದ ಭಕ್ತ ಶುದ್ಧನಾಗುತ್ತಾನೆ. ಗುರುಲಿಂಗ ಜಂಗಮರು ಉಳಿದ ಎಲ್ಲಕ್ಕಿಂತ, ಎಲ್ಲರಿಗಿಂತ ಹೆಚ್ಚು ಪವಿತ್ರರಾದುದರಿಂದ, ಅವರನ್ನು ಪ್ರಸನ್ನಗೊಳಿಸಲು, ಆದಷ್ಟೂ ಉತ್ತಮ ಪದಾರ್ಥಗಳನ್ನೇ ಭಕ್ತನು ಅರ್ಪಿಸುತ್ತಾನೆ. ಹಬ್ಬ ಹುಣ್ಣಿಮೆಗಳಂಥ ವಿಶೇಷ ಸಂದರ್ಭದಲ್ಲಿ ವಿಶೇಷ ಭಕ್ಷ್ಯಗಳನ್ನು ಭಕ್ತನು ಅರ್ಪಿಸುವುದು ವಾಡಿಕೆ. ಅರ್ಪಿಸಿದ ವಸ್ತು ಯಾವುದೇ ಇರಲಿ ಭಕ್ತನು ಅದನ್ನು ಅರ್ಪಿಸಿ ಪ್ರಸಾದವನ್ನಲ್ಲದೆ ಅವನು ಮತ್ತೇನನ್ನು ಭುಂಜಿಸಬಾರದು, ಎಂಬುದು ಶರಣರ ವಿಧಿ.

ಪ್ರಸಾದ ಸ್ವೀಕರಣೆಯ ಹಿಂದೆ ಒಂದು ಗಮನಾರ್ಹ ದಾರ್ಶನಿಕ ಸಿದ್ಧಾಂತವಿದೆ. ನಮ್ಮನ್ನೂ, ನಮ್ಮಲ್ಲಿರುವ ದೇಹ, ಇಂದ್ರಿಯ, ಅಂತಃಕರಣ ಇತ್ಯಾದಿಗಳನ್ನೂ, ನಮಗಾಗಿ ಇಡೀ ವಿಶ್ವವನ್ನೂ ಸೃಷ್ಟಿಸಿದುದಕ್ಕಾಗಿ ನಾವು ಪರಶಿವನಿಗೆ ಕೃತಜ್ಞತೆ ತೋರಿಸಬೇಕು. ನಮ್ಮ ದೇಹ ನಮ್ಮದಲ್ಲ, ನಾವು ಭುಂಜಿಸುವ ಆಹಾರ, ಕುಡಿಯುವ ನೀರು ನಮ್ಮದಲ್ಲ, ಅವೆಲ್ಲ ಪರಶಿವನಿಂದ ನಾವು ಪಡೆದ ಸಾಲ ಎಂದು ತಿಳಿದು, ಅವುಗಳನ್ನು ಹಿಂತಿರುಗಿಸಿದರೆ, ನಾವು ಅವನಿಗೆ ಕೃತಜ್ಞತೆ ತೋರಿಸಿದಂತೆ. ಅವನು ಕೊಟ್ಟ ಆಹಾರವನ್ನು ಅವನಿಗೆ ಕೃತಜ್ಞತೆಯಿಂದ (ಭಕ್ತಿಯಿಂದ) ಅರ್ಪಿಸಿದರೆ ಅದು ಪ್ರಸಾದವಾಗುತ್ತದೆ.

ಶರಣರ ಪ್ರಸಾದ ಪರಿಕಲ್ಪನೆಯು ಸಾಂಪ್ರದಾಯಿಕ ಹಿಂದೂ ಪರಿಕಲ್ಪನೆಗಿಂತ ಒಂದೆರೆಡು ಅಂಶಗಳಲ್ಲಿ ಉತ್ತಮ. ಸಾಂಪ್ರದಾಯಿಕ ಹಿಂದೂ ಧರ್ಮದ ಪ್ರಕಾರ, ಭಕ್ತ ನೇರವಾಗಿ ಏನನ್ನೂ ಲಿಂಗಕ್ಕೆ ಅಥವಾ ಮತ್ಯಾವ ದೈವಕ್ಕೆ ಅರ್ಪಿಸುವಂತಿಲ್ಲ. ಆ ಕೆಲಸವನ್ನು ಪೂಜಾರಿಯಷ್ಟೇ ಮಾಡಬೇಕು. ಆದರೆ,ಶರಣಧರ್ಮದ ಪ್ರಕಾರ ಪ್ರತಿಯೊಬ್ಬ ಭಕ್ತನೂ/ ಭಕ್ತಳೂ ತಾನೇ ಪದಾರ್ಥವನ್ನು ಲಿಂಗಕ್ಕೆ ಅರ್ಪಿಸಿ, ಪ್ರಸಾದ ಮಾಡಿಕೊಳ್ಳಬಹುದು. ಎರಡನೆಯದಾಗಿ ಒಬ್ಬ ಭಕ್ತ ಪದಾರ್ಥವನ್ನು ಪ್ರಸಾದನ್ನಾಗಿ ಮಾಡಿಕೊಳ್ಳಲು ದೇವರ ಮೂರ್ತಿಯಿರುವ ಸ್ಥಾನ (ದೇವಸ್ಥಾನ)ಕ್ಕೇ ಹೋಗಬೇಕು. ಆದರೆ ಶರಣರು ಮನೆಯಲ್ಲೇ ತನ್ನ ಇಷ್ಟಲಿಂಗ ಪೂಜಿಸಿ, ಅದಕ್ಕೆ ಪದಾರ್ಥಗಳನ್ನು ಅರ್ಪಿಸಿ, ವಸ್ತುಗಳನ್ನು ಪ್ರಸಾದ ಮಾಡಿಕೊಳ್ಳಬಹುದು. ಇದಕ್ಕೆ ಕಾಲದೇಶಗಳ ಮಿತಿಹೇಗಿಲ್ಲವೋ ಹಾಗೆ ಕುಲಜಾತಿಗಳ ಭೇದವಾಗಲಿ ಗಂಡಸು ಹೆಂಗಸು ಎಂಬ ಭೇದವಾಗಲಿ ಇಲ್ಲ. ಮೇಲಾಗಿ ಲಿಂಗಕ್ಕೆ ಅರ್ಪಿಸಲು ವಿಶೇಷ ಭಕ್ಷ್ಯಗಳೇ ಬೇಕೆಂಬ ನಿಯಮವೂ ಇಲ್ಲ. ಭಕ್ತನು ತಾನು ನಿತ್ಯ ಸೇವಿಸುವ ಆಹಾರವೂ ಅರ್ಪಿತಯೋಗ್ಯ. ಪ್ರಸಾದದಲ್ಲಿ ರುಚಿಯನ್ನು ಪರೀಕ್ಷಿಸಬಾರದು ["ಪ್ರಸಾದದಲ್ಲಿ ಸೂತಕನರಸುವ ಪಾತಕರು" (೩:೧೪೭೨)]. ಅದೇ ರೀತಿ ಹಸಿವನ್ನು ತೀರಿಸಕೊಳ್ಳಲೋ ನಾಲಗೆಯು ಚಪಲವನ್ನು ತೀರಿಸಕೊಳ್ಳಲೋ ಪ್ರಸಾದವನ್ನು ಸ್ವೀಕರಿಸಬಾರದು.

ಪದಾರ್ಥಗಳ ಅರ್ಪಣೆಯ ಹಿಂದೆ ಕೃತಜ್ಞತೆ ಇರುವಂತೆ, ಪ್ರಸಾದವನ್ನು ಸ್ವೀಕರಿಸುವಲ್ಲಿಯೂ ಕೃತಜ್ಞತೆ ಇರಬೇಕು, ಹಾಗೂ ತಾನು ಶುದ್ಧನಾಗುತ್ತೇನೆಂಬ ನಂಬಿಕೆ ಇರಬೇಕು. ಅಲ್ಲದೆ, ಅರ್ಪಿಸುವ ವಸ್ತುಗಳು ಸತ್ಯ ಶುದ್ಧ ಕಾಯಕದಿಂದ ದುಡಿದುದಾಗಿರಬೇಕೇ ಹೊರತು, ಕಾಡಿ ಬೇಡಿ ತಂದುದಾಗಲಿ, ಕಳ್ಳತನ ವಂಚನೆಯಿಂದ ತಂದುದಾಗಲಿ ಆಗಿರಬಾರದು.

ಪ್ರಸಾದ ಕಲ್ಪನೆಗೆ ಇನ್ನೂ ವಿಶಾಲವಾದ ಅರ್ಥವನ್ನು ಕೊಟ್ಟರೆ, ಆಗ ಅದು ನಾವು ಸ್ವೀಕರಿಸುವ ಆಹಾರ ಪಾನೀಯಗಳಿಗಷ್ಟೇ ಅಲ್ಲ, ನಾವು ಉಸಿರಾಡುವ ಗಾಳಿ ನಿಂತ ನೆಲ,

ನೋಡುವ ನೋಟ, ಇತ್ಯಾದಿಗಳಿಗೆಲ್ಲ ಅನ್ವಯಿಸುತ್ತದೆ. ನಾವು ಲಿಂಗಕ್ಕೆ ಅರ್ಪಿಸಿ ಪಡೆದ ಆಹಾರ ಪ್ರಸಾದವಾದರೆ, ಇಲ್ಲಿ ಅರ್ಪಿಸದೇ ಪಡೆದುದು ಪ್ರಸಾದವಾಗುತ್ತದೆ. ಆದರೆ ಶರಣರು ಅರ್ಪಿಸದೆ ಪ್ರಸಾದವಿಲ್ಲ ಎಂದು ಹೇಳಿ ನೋಡುವ ರೂಪ, ಮೂಸುವ ವಾಸನೆ, ರುಚಿಸುವ ರುಚಿ, ಇತ್ಯಾದಿಗಳನ್ನು ನಾವು ಭೋಗಿಸುವ ಮುನ್ನ ಪರಶಿವನಿಗೆ ಅರ್ಪಿಸಬೇಕು, ಎನ್ನುತ್ತಾರೆ. ಈ ವಿಶಾಲಾರ್ಥದಲ್ಲಿ ನಾವು ಇಷ್ಟ ಲಿಂಗ ಪೂಜೆ ಮಾಡದೆಯೇ, ಕೈಯಿಂದ ಮುಟ್ಟಿ ನೈವೇದ್ಯ ಮಾಡದೆಯೇ, ವಸ್ತುಗಳನ್ನು ಲಿಂಗದ ಬಳಿ ಒಯ್ಯದೆಯೇ, ಅರ್ಪಿಸಬಹುದು. ಹೀಗೆ ಅರ್ಪಿಸಲು ಮನಸ್ಸೊಂದೇ ಸಾಕು. ಈ ರೀತಿಯ ಅರ್ಪಣೆ ಸಾಧ್ಯವೆಂಬುದನ್ನು ಪ್ರಾಣಲಿಂಗಿಸ್ಥಲ ಸಿದ್ಧಾಂತವು ತೋರಿಸುತ್ತದೆ. ಪ್ರಾಣಲಿಂಗಿಯು ತನ್ನ ಪ್ರತಿ ಇಂದ್ರಿಯದ ಬಾಗಿಲಿನಲ್ಲಿಯೂ, ಅಂತಃಕರಣದ ಬಾಗಿಲಿನಲ್ಲಿಯೂ ಲಿಂಗವನ್ನು ಪ್ರತಿಷ್ಠಾಪಿಸಿಕೊಳ್ಳುತ್ತಾನೆ. ಅಂದರೆ ಯಾವುದೇ ರೂಪವನ್ನು ಕಣ್ಣು ನೋಡುವ ಮೊದಲೇ ಕಣ್ಣಿನ ಬಾಗಿಲಿನಲ್ಲೇ ಇರುವ ಲಿಂಗ ನೋಡುತ್ತದೆ; ಅದೇ ರೀತಿ ರಸಗಂಧ, ಇತ್ಯಾದಿಗಳನ್ನು ಭಕ್ತನು ಅನುಭವಿಸುವ ಮೊದಲೇ ಪರಶಿವ ಅನುಭವಿಸುತ್ತಾನೆ. ಅಂದರೆ ಪರಶಿವ ಮೊದಲು ಅನುಭವಿಸಿ, ಅನಂತರ ನಾವು ಅನುಭವಿಸುವುದರಿಂದ ನಾವು ಅನುಭವಿಸುವುದು ಪ್ರಸಾದವೆನಿಸಿಕೊಳ್ಳುತ್ತದೆ. ಅಂತಹ ಇಂದ್ರಿಯ ವಿಷಯಗಳಲ್ಲಿ ಒಳಿತು-ಕೆಡಕುಗಳ ವ್ಯತ್ಯಾಸವನ್ನು ಸಾಧಕನು ಹುಡುಕುವುದಿಲ್ಲ. ಅವನಿಗೆ ಬಿಸಿಲೂ ಒಂದೇ, ಬೆಳದಿಂಗಳೂ ಒಂದೇ; ಭಕ್ಷ್ಯ ಭೋಜ್ಯಗಳೂ ಒಂದೇ, ಸಾಧಾರಣ ಆಹಾರವೂ ಒಂದೇ.

ಇನ್ನೂ ಒಂದು ವಿಶಾಲವಾದ ಅರ್ಥದಲ್ಲಿ ಆಹಾರ ಪಾನೀಯಗಳು, ರೂಪರಸಾದಿಗಳು ಅಷ್ಟೇ ಪ್ರಸಾದವಲ್ಲ, ನಮ್ಮ ಇಂದ್ರಿಯ, ಅಂತಃಕರಣ, ದೇಹಗಳೇ ಪ್ರಸಾದಗಳು. ಹೇಗೆಂದರೆ, ಅವೆಲ್ಲವನ್ನೂ ಪರಶಿವನೇ ಕೊಟ್ಟಿರುವುದರಿಂದ, ಹಾಗೂ ಪರಶಿವನಿಂದ ಬಂದುದೆಲ್ಲವೂ ಪ್ರಸಾದವಾದುದರಿಂದ, ದೇಹೇಂದ್ರಿಯಾದಿಗಳೇ ಪ್ರಸಾದಗಳು. ಈ ರೀತಿ ಯೋಚಿಸುವ ಶರಣನು ಮೊದಲು ತನ್ನೆಲ್ಲವನ್ನು ಶಿವನಿಗರ್ಪಿಸುತ್ತಾನೆ. ಆ ಮೇಲೆ ತನ್ನ ಆತ್ಮ (ಅಂಗ)ವನ್ನು ಶಿವನಿಗರ್ಪಿಸುತ್ತಾನೆ. ದೇಹೇಂದ್ರಿಯಾದಿಗಳನ್ನು ಶಿವನಿಗರ್ಪಿಸಿ , ಅನಂತರ ಅವುಗಳನ್ನು ಬಳಸುತ್ತಾನೆ-ಎಂಬುದು ಶರಣಸ್ಥಲ ಸಿದ್ಧಾಂತದ ಅರ್ಥ. ಹೀಗೆ ಸಂಪೂರ್ಣವಾಗಿ ತನ್ನೆಲ್ಲವನ್ನೂ ಅರ್ಪಿಸಿದ ಶರಣನು ತಾನೇನೇ ಮಾಡಿದರೂ, ಯೋಚಿಸಿದರೂ, ಅನುಭವಿಸಿದರೂ ಅದು ಶಿವನಿಗಾಗಿಯೇ ಹೊರತು, ತನಗಲ್ಲ ಎಂದು ತಿಳಿಯುತ್ತಾನೆ. ಈ ವಿಶಾಲಾರ್ಥದಲ್ಲಿ, ಪ್ರಸಾದಿಯೇ ಪ್ರಸಾದವಾಗಬೇಕೆಂಬುದು ಶರಣರ ಆಧ್ಯಾತ್ಮಿಕ ಜೀವನದ ಶ್ರೇಷ್ಠ ಗುರಿಯಾಗಿದೆ. ಅಂಥವನ ದೇಹವು ಪ್ರಸಾದಕಾಯ; ಅವನ ಕಾಯವೇ ಕೈಲಾಸ.

ಹೀಗೆ ತನ್ನೆಲ್ಲವನ್ನೂ ಅರ್ಪಿಸಿದ ಶರಣನಲ್ಲಿ ಎಳ್ಳಷ್ಟೂ ಸ್ವಾರ್ಥವಿಲ್ಲ. ಹೀಗೆ ಸ್ವಾರ್ಥವಿಲ್ಲದ ಆತ್ಮಕ್ಕೆ ಅನುಭಾವ ಸಾಧ್ಯವಾಗುತ್ತದೆ; ಅನುಭಾವದ ಮೂಲಕ ಲಿಂಗಾಂಗ ಸಾಮರಸ್ಯ ಸಾಧ್ಯವಾಗುತ್ತದೆ.

ಪ್ರಸಾದದ ಅರ್ಥ ಗೊತ್ತಿಲ್ಲದವರು ಕೇವಲ ಆಹಾರ ವಸ್ತುಗಳನ್ನು ಅರ್ಪಿಸಿ, ತಮ್ಮನ್ನು ತಾವು ಅರ್ಪಿಸಿಕೊಳ್ಳದಿದ್ದರೆ, ಅವರು ಆಧ್ಯಾತ್ಮಿಕ ಗುರಿಯನ್ನು ಸಾಧಿಸಲಾರರು. ಮೊದಲು ಆಹಾರ ಪದಾರ್ಥಗಳ ಅರ್ಪಣೆಯ ಮೂಲಕ ತ್ಯಾಗವನ್ನು ಆರಂಭಿಸಬೇಕು. ಆದರೆ ಅಲ್ಲೇ ನಿಲ್ಲಬಾರದು. ಅದು ಹಂತಹಂತವಾಗಿ ಮೇಲಕ್ಕೇರಿ ಸರ್ವಾರ್ಪಣೆಯಲ್ಲಿ ಮುಕ್ತಾಯವಾಗಬೇಕು.

ಪ್ರಸಾದವನ್ನು ಶುದ್ಧ ಪ್ರಸಾದ, ಸಿದ್ಧ ಪ್ರಸಾದ ಮತ್ತು ಪ್ರಸಿದ್ಧ ಪ್ರಸಾದ ಎಂದು ವಿಂಗಡಿಸುವುದು ಎಲ್ಲ ವಚನಕಾರರಲ್ಲಿ ಇರುವ ರೂಢಿ. ತನುವನ್ನು ಶುದ್ಧ ಮಾಡಲು ತೆಗೆದುಕೊಂಡ ಪ್ರಸಾದ ಶುದ್ಧ ಪ್ರಸಾದ; ಮನಸ್ಸನ್ನೂ ಇತರ ಅಂತಃಕರಣಗಳನ್ನೂ ಶುದ್ಧ ಮಾಡುವ ಪ್ರಸಾದ ಸಿದ್ಧ ಪ್ರಸಾದ; ಎಲ್ಲವೂ ಪರಶಿವನೆಂದು ತಿಳಿಯುವುದು (ಅಥವಾ ಭಾವವನ್ನು ಶುದ್ಧ ಮಾಡುವುದು) ಪ್ರಸಿದ್ಧ ಪ್ರಸಾದ.

**ಪ್ರಸಾದ ಕಾಯ :** ಶಿವನಿಗರ್ಪಿಸಿದ ಆಹಾರವು ಪ್ರಸಾದ ಅಥವಾ ಶುದ್ಧ ಪದಾರ್ಥವಾಗುತ್ತದೆ. ಅದನ್ನು ಸೇವಿಸಿದ ಭಕ್ತನು ಶುದ್ಧನಾಗುತ್ತಾನೆ. ಶಿವನಿಂದ ಬಂದುದೆಲ್ಲವನ್ನೂ ಶಿವನಿಗರ್ಪಿಸಿ ಪ್ರಸಾದವನ್ನಾಗಿ ಮಾಡಿಕೊಂಡು, ಅನಂತರವೇ ಅದನ್ನು ಸ್ವೀಕರಿಸಬೇಕಾದುದು ಭಕ್ತನ ನಿತ್ಯ ಮತ್ತು ಆದ್ಯ ಕರ್ತವ್ಯ. ಪ್ರಥಮದಲ್ಲಿ ಆಹಾರ ಪಾನೀಯಗಳಷ್ಟೇ ಅರ್ಪಿಸುವ ಭಕ್ತನು ತನ್ನ ಜ್ಞಾನ ವೃದ್ಧಿಯಾದಂತೆಲ್ಲ ತನ್ನ ದೇಹೇಂದ್ರಿಯಾದಿಗಳನ್ನೂ ಮೊದಲು ಶಿವನಿಗರ್ಪಿಸಿ, ಅನಂತರ ಅವುಗಳನ್ನು ಉಪಯೋಗಿಸುತ್ತಾನೆ ಅಥವಾ ಅವುಗಳ ಮೂಲಕ ಅನುಭವಿಸುತ್ತಾನೆ. ಒಂದರ್ಥದಲ್ಲಿ ಇಡೀ ಕಾಯವೇ ಪರಶಿವನದು ಎಂದು ತಿಳಿಯಬೇಕಾದುದು ಭಕ್ತನ ಆಧ್ಯಾತ್ಮಿಕ ಕರ್ತವ್ಯವಾಗುತ್ತದೆ. ಅಂಥವನ ಕಾಯವೇ ಪ್ರಸಾದ ಕಾಯ. ಪ್ರಸಾದ ಹೇಗೆ ಶುದ್ಧವೋ, ಹಾಗೆಯೇ ಪ್ರಸಾದ ಕಾಯವೂ ಶುದ್ಧ. "ಕೂಡಲ ಸಂಗಮದೇವನೊಲಿಸ ಬಂದ ಪ್ರಸಾದ ಕಾಯವ ಕೆಡಿಸಲಾಗದು" (೧ : ८८೫, ೯: ೨೬೨). ಅಂತಹ ಕಾಯವು ಯಾವಾಗಲೂ ಶುದ್ಧವಾಗಿರಬೇಕೇ ಹೊರತು ಅನೈತಿಕ, ಅಧಾರ್ಮಿಕ ಭಾವನೆಗಳ ಆಗರವಾಗಿರಬಾರದು.

**ಪ್ರಸಾದ ಜಿಹ್ವೆ :** ೧. ಪ್ರಸಾದವನ್ನು ರುಚಿಸುವ ಜಿಹ್ವೆ. (ನಾಲಗೆ). ೨. ಶಿವನಿಗೆ ಎಲ್ಲವನ್ನೂ ಅರ್ಪಿಸಿದಂತೆ ನಾಲಗೆಯನ್ನೂ ಅರ್ಪಿಸಿದರೆ, ಅದು ತನ್ನ ಪೂರ್ವಾಶ್ರಯವನ್ನು ಕಳೆದುಕೊಂಡು ಪ್ರಸಾದ ಜಿಹ್ವೆಯಾಗುತ್ತದೆ. (೩ : ೪೩೩)

**ಪ್ರಸಾದ ತ್ರಯ :** ಕಾಯ ಪ್ರಸಾದ, ಜೀವ ಪ್ರಸಾದ, ಪ್ರಾಣ ಪ್ರಸಾದ. ಕಾಯಕ್ಕಾಗಿ ಜೀವಿಸೆನು ಎಂದು ಕಾಯವನ್ನು ಅರ್ಪಿಸುವುದು ಕಾಯ ಪ್ರಸಾದ; ಜೀವ ಭಯವಿಲ್ಲದೇ ಜೀವವನ್ನೇ ಅರ್ಪಿಸುವುದು ಜೀವ ಪ್ರಸಾದ; ಇಂದ್ರಿಯ ವಿಷಯಗಳಿಗೆ ಹಾತೊರೆಯದೆ ಪ್ರಾಣವನ್ನೇ ಅರ್ಪಿಸುವುದು ಪ್ರಾಣ ಪ್ರಸಾದ (೩ : ೨೪೩).

**ಪ್ರಸಾದದ ಪೂರ್ವಾಶ್ರಯವ ಕಳೆಯುವುದು :** ಒಂದು ವಸ್ತು ಅಥವಾ ದ್ರವ್ಯವನ್ನು ಲಿಂಗಕ್ಕೆ ಅರ್ಪಿಸಿದಾಗ ಅದು ಪ್ರಸಾದವಾಗಿ ಮಾರ್ಪಡುತ್ತದೆ. ಆ ವಸ್ತುವಿನಲ್ಲಿ ಯಾವ ರೀತಿಯ ರಾಸಾಯನಿಕ ಬದಲಾವಣೆಯಾಗದಿದ್ದರೂ, ಅರ್ಪಣೆ ಮಾಡುವ ಭಕ್ತನು ಅದನ್ನು ಕೃತಜ್ಞತೆಯಿಂದ ಹಾಗೂ ಪಾವಿತ್ರ್ಯಭಾವನೆಯಿಂದ ಸ್ವೀಕರಿಸುತ್ತಾನೆ. ತಾನು ಪಡೆದ ವಸ್ತುವು ಶಿವನೇ ಕೊಟ್ಟಿದುದು (ಸೃಷ್ಟಿಸಿದುದು) ಆದುದರಿಂದ, ಅದನ್ನು ಪಡೆದುದಕ್ಕೆ ಕೃತಜ್ಞತೆ ತೋರಿಸುವುದು ಭಕ್ತನ ಆದ್ಯ ಕರ್ತವ್ಯ; ಶಿವ ಕೆಟ್ಟದ್ದನ್ನು ಕೊಡಲಾರ, ಕೊಟ್ಟಿದ್ದೆಲ್ಲಾ ಪವಿತ್ರವೇ ಎಂದು ಸ್ವೀಕರಿಸುವುದೂ ಅವನ ಕರ್ತವ್ಯ. ಅಲ್ಲದೆ ಪವಿತ್ರ ಪ್ರಸಾದವನ್ನು ಸ್ವೀಕರಿಸುವುದರಿಂದ ತಾನೂ ಪವಿತ್ರ (ಶುದ್ಧ)ನಾಗುತ್ತೇನೆಂಬ ಎಂಬ ಭಾವನೆಯೂ ಪ್ರಸಾದ ಸ್ವೀಕರಣೆಯ ಹಿಂದಿದೆ. ಹೀಗೆ ಶಿವನಿಗೆ ಅರ್ಪಿಸದೆ ಅಥವಾ ಪ್ರಸಾದೀಕರಿಸದ ವಸ್ತುವು ಸ್ವೀಕರಣೆಗೆ ಅಯೋಗ್ಯವಾಗಿರುತ್ತದೆ, ಹಾಗೂ ಅರ್ಪಿಸಿದ ಆ ಪೂರ್ವಾಶ್ರಯ (ಸ್ವೀಕಾರ ಅಯೋಗ್ಯತೆ) ಹೋಗಿ, ಪ್ರಸಾದ ಪವಿತ್ರವಾಗುತ್ತದೆ. (೩ : ೮)

**ಪ್ರಸಾದನಯನ :** ನಮ್ಮ ನಯನೇಂದ್ರಿಯಗಳು ಸಾಮಾನ್ಯವಾಗಿ ಐಹಿಕ ವಿಷಯಗಳನ್ನಷ್ಟೇ ನೋಡಿ ತೃಪ್ತಿಪಟ್ಟುಕೊಳ್ಳಲು ಇಚ್ಛಿಸುತ್ತದೆ. ಆದರೆ ಶಿವಯೋಗದ ಸಾಧನೆಯಲ್ಲಿ ತೊಡಗಿದವನ ಕಣ್ಣುಗಳು ಲಿಂಗವನ್ನು ನೋಡಿ, ಲಿಂಗಕ್ಕೆ ನೋಡಲಿತ್ತರೆ (ಅಂದರೆ, ಲಿಂಗನೋಟದಲ್ಲಿ ಉಳಿದುದನ್ನು ಮರೆತರೆ) ಆಗ ಅವನ ಕಣ್ಣುಗಳು ಪ್ರಸಾದನಯನವಾಗುತ್ತವೆ. ನಾವು ಲಿಂಗಕ್ಕೆ ಅರ್ಪಿಸಿದ ಆಹಾರ ಹೇಗೆ ಪ್ರಸಾದ (ಪ್ರಸಾದಾಹಾರ)ವಾಗುತ್ತದೆಯೋ ಹಾಗೆಯೇ, ಕಣ್ಣುಗಳನ್ನು ಲಿಂಗಕ್ಕೆ ಮನದಲ್ಲೇ ಅರ್ಪಿಸಿದಾಗ ಅವು ಪ್ರಸಾದನಯನಗಳಾಗುತ್ತವೆ.

**ಪ್ರಸಾದ ಪರಿಪೂರ್ಣಮೂರ್ತಿ :** ನಿಜವಾದ ಪ್ರಸಾದಿಯು ಪರಶಿವನಿಗೆ ವಸ್ತುಗಳನ್ನು ಅರ್ಪಿಸಿ ಅವುಗಳನ್ನು ಸ್ವೀಕರಿಸದೆ, ತನ್ನನ್ನೆ ಸಂಪೂರ್ಣವಾಗಿ ಅರ್ಪಿಸಿಕೊಳ್ಳುತ್ತಾನೆ. ಹೀಗೆ, ಅವನ ಇಡೀ ದೇಹಾದಿಕರಣಗಳ ಸಂಕೀರ್ಣವು ಪರಿಪೂರ್ಣ ಪ್ರಸಾದವಾಗಿದೆ. ಇದನ್ನೆ ಬಸವಣ್ಣನವರು ಪ್ರಸಾದಕಾಯವೆನ್ನುತ್ತಾರೆ. ಇಂತಹ ಪರಿಪೂರ್ಣ ಪ್ರಸಾದದ ಮೂರ್ತಿವೆತ್ತವನೆ ನಿಜವಾದ ಪ್ರಸಾದಿ. (೫ : ೭೬೩)

**ಪ್ರಸಾದ ಪ್ರಭೇದ :** ಪ್ರಸಾದವು ಮೇಲ್ನೋಟಕ್ಕೆ ಒಂದೇ ತೆರನಂತೆ ಕಂಡರೂ ವಚನಕಾರರು ಪ್ರಸಾದಿಗಳ ವರ್ತನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿ, ಪ್ರಸಾದದಲ್ಲಿರುವ ಪ್ರಭೇದಗಳನ್ನು ಗುರುತಿಸಿದ್ದಾರೆ. ಅವು ಮುಖ್ಯವಾಗಿ ನಾಲ್ಕು ರೀತಿಯವಿದೆ :

೧. ಉಪಜೀವನ ಪ್ರಸಾದ : ಉಳ್ಳವರು ಪ್ರಸಾದದ ಹೆಸರಿನಲ್ಲಿ ಪದೇ ಪದೇ ಸ್ವೀಕರಿಸುವ ಪ್ರಸಾದ.

೨. ತುಡುಗಣಿ ಪ್ರಸಾದ : ಬಡವರು ತಮ್ಮ ಹೊಟ್ಟೆ ತುಂಬಿಸಿಕೊಳ್ಳಲೋಸ್ಕರ ಕದ್ದು ಪದೇ ಪದೇ ಸ್ವೀಕರಿಸುವ ಪ್ರಸಾದ.

೩. ದಳದುಳಿ ಪ್ರಸಾದ : ಯಾವ ಅಂಜಿಕೆ ಅಥವಾ ಸಂಕೋಚವಿಲ್ಲದೆಯೂ ಎಲ್ಲರಿಗೂ ಕಾಣುವಂತೆ ಸ್ವೀಕರಿಸುವ ಪ್ರಸಾದ.

೪. ಸ್ವಯ ಪ್ರಸಾದ : ದೇಹವೆಂಬ ದೇಗುಲದಲ್ಲಿರುವ ಅಂಗವೇ ಲಿಂಗ ಎಂಬ ಭಾವನೆಯಿಂದ, ಆ ಲಿಂಗಕ್ಕೋಸ್ಕರ ಸ್ವೀಕರಿಸುವ ಪ್ರಸಾದ (೩ : ೨೪೧).

**ಪ್ರಸಾದ ಲಿಂಗದ ಪ್ರಸನ್ನತ್ವ :** ತನ್ನ ತ್ವಗಿಂದ್ರಿಯದ ತುದಿಯಲ್ಲಿ ಪ್ರಸಾದ ಲಿಂಗವನ್ನು ಪ್ರತಿಷ್ಠಾಪಿಸಿಕೊಂಡವನು, ಯಾವ ಸ್ಪರ್ಶವನ್ನೂ ಲಿಂಗ ಮುಟ್ಟದೆ, ತಾನು ಮುಟ್ಟೆ ಎಂದು ಪ್ರತಿಜ್ಞೆ ಮಾಡುತ್ತಾನೆ. ಅಲ್ಲದೆ, ಅವನು ತನ್ನ ತ್ವಗಿಂದ್ರಿಯವೇ ಶಿವನ ತ್ವಗಿಂದ್ರಿಯವೆಂದು ತಿಳಿದು, ಸ್ಪರ್ಶನದ ಸುಖ ತನಗಲ್ಲ, ಪರಶಿವನಿಗೆ ಎಂದು ತಿಳಿಯುತ್ತಾನೆ. ಹೀಗೆ ತ್ವಕ್ಕು, ಸ್ಪರ್ಶನ, ಸ್ಪರ್ಶನದ ಸುಖ ಮೂರನ್ನೂ ಪ್ರಸಾದ ಲಿಂಗಕ್ಕೆ ಅರ್ಪಿಸಿದ ಶರಣನು ಪ್ರಸಾದಲಿಂಗದ ಪ್ರಸನ್ನತೆಗೆ ಅರ್ಹವಾಗುತ್ತಾನೆ, ಹಾಗೂ ಆ ಮೂಲಕ, ತ್ವಗಿಂದ್ರಿಯದ ದುಷ್ಟಭಾವಗಳಿಂದ ಮುಕ್ತನಾಗುತ್ತಾನೆ.

**ಪ್ರಸಾದಲಿಂಗ ತ್ರಿವಿಧ :** ಲಿಂಗಮುಖದಿಂದ ಬಂದುದು ಶುದ್ಧ ಪ್ರಸಾದ, ಜಂಗಮ ಮುಖದಿಂದ ಬಂದುದು ಸಿದ್ಧ ಪ್ರಸಾದ ಮತ್ತು ಗುರುಮುಖದಿಂದ ಬಂದುದು ಪ್ರಸಿದ್ಧ ಪ್ರಸಾದ. (೩:೭೨೯)

**ಪ್ರಸಾದಲಿಂಗಾನುಭಾವಿ :** ಶರಣಸ್ಥಲದ ಸಾಧಕನು ತನ್ನೆಲ್ಲವನ್ನೂ ಶಿವನಿಗರ್ಪಿಸಿ ತಾನು ಪರಶಿವನ ಸತಿ ಎಂದೂ ಪ್ರತಿಯೊಂದೂ ಪರಶಿವನ ಪ್ರಸಾದವೆಂದೂ ತಿಳಿದುಕೊಂಡು ಪ್ರಸಾದಲಿಂಗವನ್ನು ಆರಾಧಿಸುತ್ತಾನೆ. ಅವನು ಆಕಾಶತತ್ವವನ್ನು ಪ್ರಸಾದ ಲಿಂಗಕ್ಕರ್ಪಿಸಿ, ಅದರಿಂದ ಶಬ್ದವೆಂಬ ಪ್ರಸಾದವನ್ನು ಪಡೆದು ಆನಂದಿಸುವುದರಿಂದ, ಅವನು ಪ್ರಸಾದಲಿಂಗಾನುಭಾವಿ ಎನಿಸಿಕೊಳ್ಳುತ್ತಾನೆ. (೧೨ : ೪೦೬)

**ಪ್ರಸಾದವನರಿತು ಪ್ರಸಾದವಿಲ್ಲದವನು :** ಸಾಧಾರಣ ಅರ್ಥದಲ್ಲಿ ಲಿಂಗಕ್ಕೆ ಅರ್ಪಿಸಿ, ಆ ಮೇಲೆ ನಾವು ಸೇವಿಸುವ ಆಹಾರವೇ ಪ್ರಸಾದ. ಆದರೆ ನಾವು ನೋಡುವ ನೋಟ, ರುಚಿಸುವ ರುಚಿ, ಮಂತಾದವುಗಳೆಲ್ಲವನ್ನೂ ಲಿಂಗಕ್ಕರ್ಪಿಸಿ ಅನಂತರ ನಾವು ಅನುಭವಿಸುವುದಾದರೆ, ಅವೂ ಪ್ರಸಾದವಾಗುತ್ತವೆ. ಅದೇ ರೀತಿ, ನಮ್ಮ ಇಂದ್ರಿಯಗಳು, ಅಂತಃಕರಣಗಳು, ಇತ್ಯಾದಿಗಳನ್ನೂ ನಾವು ಲಿಂಗಕ್ಕರ್ಪಿಸಿ ಆ ಮೇಲೆ ನಾವು ಉಪಯೋಗಿಸುವುದಾದರೆ, ಅವೂ ಪ್ರಸಾದವಾಗುತ್ತವೆ. ಹೀಗೆ ನಮ್ಮನ್ನೆ ನಾವು ಸಂಪೂರ್ಣವಾಗಿ ಅರ್ಪಿಸಿಕೊಂಡರೆ, ಅಂದರೆ, ಅರ್ಪಿಸಲು ನಮ್ಮಲ್ಲಿ ಏನೂ ಉಳಿಯದಿದ್ದರೆ, ಆಗ ನಾವೇ ಪ್ರಸಾದ, ನಾವೇ ಪ್ರಸಾದಿ. ಇದನ್ನರಿತವನಿಗೆ ಆಹಾರವೆಂಬ ಪ್ರಸಾದದ ಆವಶ್ಯಕತೆಯಿಲ್ಲ. (೮ : ೧೭೨೯)

**ಪ್ರಸಾದ ವಾಕ್ಯ :** ಪ್ರೀತಿ ಮತ್ತು ಕರುಣೆಯಿಂದ ಕೊಟ್ಟುದೆಲ್ಲವೂ ಪ್ರಸಾದ. ಭವಚಕ್ರದಲ್ಲಿ ತಿರುಗಿ ಅನೇಕ ರೀತಿಯ ಕೋಟಲೆಗೊಳಗಾದ ಮನುಷ್ಯರಿಗೆ, ಗುರುವಾದವನು ಪ್ರೀತಿ ಮತ್ತು ಕರುಣೆಯಿಂದ, ಹಿತೋಪದೇಶ ಮಾಡಿ ಅವರ ಮನಸ್ಸನ್ನು ಆಧ್ಯಾತ್ಮದ ಕಡೆಗೆ ತಿರುಗಿಸಿ, ಭವಚಕ್ರದ ಕಾರಣವನ್ನೂ, ಕಾರಣ ನಿರ್ಮೂಲನೋಪಾಯವನ್ನೂ ಅವರಿಗೆ ಬೋಧಿಸುತ್ತಾನೆ. ಹೀಗೆ ಅವನ ಬೋಧನೆಯಲ್ಲಿ ಬಂದ ವಾಕ್ಯಗಳೇ ಪ್ರಸಾದ ವಾಕ್ಯ.

**ಪ್ರಸಾದ ವಿಕಾರಿ :** ಪ್ರಸಾದಿಯು ತಾನೇ ಪ್ರಸಾದವಾಗಿ ಪರಿವರ್ತಿತನಾಗುವುದು. (೧ : ೭೮೬) (ನೋಡಿ : **ಪ್ರಸಾದ, ಪ್ರಸಾದವನರಿತು ಪ್ರಸಾದವಿಲ್ಲದವನು**)

**ಪ್ರಸಾದವಿಲ್ಲದ ಊಟ :** ಆಧ್ಯಾತ್ಮಿಕ ಸಾಧನೆಯ ಪ್ರಾಥಮಿಕ ಹಂತದಲ್ಲಿ ಸಾಧಕನು ಪ್ರಸಾದವೆಂದರೆ ಆಹಾರ ಪದಾರ್ಥವೆಂದು ತಿಳಿಯುತ್ತಾನೆ. ಒಂದು ವಿಶಾಲಾರ್ಥದ ಪ್ರಕಾರ, ಆಹಾರವೆಂದರೆ ಕೇವಲ ಬಾಯಿಯ ಮೂಲಕ ಸೇವಿಸುವ ಪದಾರ್ಥವಷ್ಟೇ ಅಲ್ಲ, ಜ್ಞಾನೇಂದ್ರಿಯಗಳ ಮೂಲಕ ಸೇವಿಸುವ ಎಲ್ಲ ವಿಷಯಗಳೂ (ರೂಪರಸಗಂಧಸ್ಪರ್ಶಶಬ್ದಗಳೆಲ್ಲವೂ) ಆಹಾರಗಳೇ. ಜ್ಞಾನೇಂದ್ರಿಯಗಳಿಗೆ ತಂತಮ್ಮ ಆಹಾರ ವಿಷಯಗಳನ್ನು ಕೊಡದಿರುವುದೇ ಪ್ರತ್ಯಾಹಾರ. ಆಧ್ಯಾತ್ಮಿಕ ಸಾಧನೆಯ ಉನ್ನತ ಹಂತವನ್ನು ತಲುಪಿ ಸಾಧಕನು ಯಾವ ರೀತಿಯ ಆಹಾರಗಳನ್ನೂ ಅರ್ಪಿಸದೆ, ತನ್ನ ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಅಂತ:ಕರಣಗಳನ್ನು ಪರಶಿವನಿಗೆ ಅರ್ಪಿಸಿ, ಅವುಗಳನ್ನೆ ಪ್ರಸಾದವನ್ನಾಗಿ ಮಾಡಿಕೊಂಡರೆ ಆಗ ಅವನದು ಪ್ರಸಾದವಿಲ್ಲದ ಊಟ (ಆಹಾರವಿಲ್ಲದ ಊಟ). (೩ : ೧೨೨೪)

**ಪ್ರಸಾದವೆ ಅಂಗವಾದವನು :** ತನ್ನನ್ನೆ ತಾನು ಲಿಂಗಕ್ಕೆ ಸಂಪೂರ್ಣವಾಗಿ ಅರ್ಪಿಸಿಕೊಂಡು ಶುದ್ಧನಾದವನು; ಅವನು ತನಗಾಗಿ ಏನನ್ನೂ ಮಾಡದೆ, ತಾನು ಮಾಡುವುದೆಲ್ಲವೂ ಪರಶಿವನಿಗಾಗಿ ಎಂದು ತಿಳಿದು ಮಾಡುತ್ತಾನೆ. (೮ : ೧೨೪)

**ಪ್ರಸಾದ ಹಸ್ತ :** ಪದಾರ್ಥವು ಲಿಂಗಾರ್ಪಿತವಾದಾಗ ತನ್ನ ಪೂರ್ವಾಶ್ರಯವ ಕಳೆದುಕೊಂಡು ಪ್ರಸಾದವಾಗುತ್ತದೆ. ಅರ್ಪಣೆ ಮಾಡುವ ಹಸ್ತವನ್ನೇ ಅರ್ಪಿಸಿದರೆ, ಅದು ಪ್ರಸಾದ ಹಸ್ತವಾಗುತ್ತದೆ.

**ಪ್ರಸಾದಿ :** ಶಿವನಿಗರ್ಪಿಸಿದಲ್ಲದೆ ಏನನ್ನೂ ಕೊಳ್ಳೆನೆನ್ನುವವನು ಪ್ರಸಾದಿ. ಇದು ಆಹಾರ ಪಾನೀಯಗಳ ಅರ್ಪಣೆಯಿಂದ ಪ್ರಾರಂಭವಾಗಿ ದೇಹೇಂದ್ರಿಯಾದಿಗಳ ಅರ್ಪಣೆಯಲ್ಲಿ ಮುಗಿಯುತ್ತದೆ.

**ಪ್ರಸಾದಿಯ ಅಗ್ನಿಯಂಗ :** ವಚನಗಳ ಪ್ರಕಾರ, ನಾಭಿಸ್ಥಾನದಲ್ಲಿರುವ ಮಣಿಪೂರಕವೆಂಬ ಚಕ್ರದಲ್ಲಿ ಅಥವಾ ಅದರಲ್ಲಿರುವ ಅಗ್ನಿತತ್ವದಲ್ಲಿ ಅಥವಾ ಇಚ್ಛಾಶಕ್ತಿಯಲ್ಲಿ ಶಿವಲಿಂಗ ಇರುತ್ತದೆ. ಶಿವಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುವ ಸಾಧಕನಿಗೆ ಪ್ರಸಾದಿ ಎಂಬ ಹೆಸರಿದ್ದು,

ಅದನ್ನು ಸಾಕ್ಷಾತ್ಕರಿಸಿಕೊಳ್ಳಲು ಅಗ್ನಿತತ್ವದ ಅಥವಾ ಇಚ್ಛಾಶಕ್ತಿಯ ದುಷ್ಪರಿಣಾಮಗಳನ್ನು ಕಡಿಮೆ ಮಾಡಬೇಕಾಗುತ್ತದೆ. ಹೀಗೆ ಶುದ್ಧವಾದ ಇಚ್ಛಾಶಕ್ತಿಗೆ ಅವಧಾನ ಭಕ್ತಿ ಎಂದು ಹೆಸರು.

ಇಚ್ಛಾಶಕ್ತಿಯ (ಅಗ್ನಿಯ) ದುಷ್ಪರಿಣಾಮಗಳನ್ನು ಕಡಿಮೆ ಮಾಡುವುದೆಂದರೆ, ವಿವಿಧ ಹಂತದಲ್ಲಿ ಅರ್ಪಣೆಯ ಅರ್ಥವನ್ನೂ ಹಿಗ್ಗಿಸುವುದು. ಮೊದಲು ಆಹಾರವನ್ನು ಪ್ರಸಾದವನ್ನಾಗಿ ಮಾಡಿಕೊಂಡು ಸೇವಿಸುತ್ತಾನೆ. ಅನಂತರ, ನಾವು ನೋಡುವ ನೋಟ, ಮೂಸುವ ಗಂಧ, ರುಚಿಸುವ ರುಚಿ, ಎಲ್ಲವನ್ನೂ ಪರಶಿವನೇ ನಮಗೆ ಕೊಟ್ಟಿರುವುದರಿಂದ ಅವುಗಳನ್ನು ಅವನಿಗೆ ಅರ್ಪಿಸಿ ಅನಂತರ ನಾವು ಅನುಭವಿಸಬೇಕು ಎಂದು ತಿಳಿಯುತ್ತಾನೆ. ಇಡೀ ಪ್ರಪಂಚವೇ ಪರಶಿವನ ಒಂದು ಪ್ರಸಾದ ಎಂದು ತಿಳಿಯುವುದು ಪ್ರಸಾದಿಸ್ಥಲದ ಒಂದು ಪ್ರಮುಖ ಗುಣ. ಇನ್ನೂ ಮುಂದೆ ಹೋಗಿ, ತನ್ನ ದೇಹ, ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಅಂತಃಕರಣಗಳೆಲ್ಲವನ್ನೂ ಅರ್ಪಿಸಿ ಅವುಗಳನ್ನು ಶಿವನ ಪ್ರಸಾದವೆಂಬಂತೆ ಉಪಯೋಗಿಸುತ್ತಾನೆ. ಹೀಗೆ ಮಾಡುವುದರಿಂದ ಅವನಲ್ಲಿ ಸ್ವಾರ್ಥತೆ ಕಡಿಮೆಯಾಗಿ, ಆತ್ಮ ಶುದ್ಧವಾಗುತ್ತಾ ಹೋಗುತ್ತದೆ. ಹೀಗೆ ಇಚ್ಛಾಶಕ್ತಿಯ ಮೂಲಕ, ಹೆಚ್ಚು ಹೆಚ್ಚು ಬಂಧನದ ಕಡೆಗೆ ಸಾಗುವ ಬದಲು ಲಿಂಗಾಂಗಸಾಮರಸ್ಯದ ಕಡೆಗೆ ಸಾಗುವುದೇ ಅಗ್ನಿಯನ್ನು ಅಂಗಮಾಡಿಕೊಳ್ಳುವುದು ಎಂಬುದರ ಅರ್ಥ. (೮ : ೧೯೬೯)

**ಪ್ರಸಾದಿ ಸ್ಥಲ ವರ್ತಕ :** ಪ್ರಸಾದಿ ಸ್ಥಲಕ್ಕೆ ಯೋಗ್ಯವಾದುದೆಲ್ಲವನ್ನೂ ತಪ್ಪದೇ ಆಚರಿಸುವವನು. (೭ : ೧೧೧೬)

**ಪ್ರಸಾದೋದಕ :** ಪ್ರಸಾದ ರೂಪದಲ್ಲಿ ಬಂದ ಉದಕ (ನೀರು).

**ಪ್ರಸಿದ್ಧ ಪ್ರಸಾದ :** ವಸ್ತುಗಳು ಜಂಗಮಕ್ಕರ್ಪಿತವಾದಾಗ ಪ್ರಸಿದ್ಧ ಪ್ರಸಾದವೆನಿಸಿಕೊಳ್ಳುತ್ತಾನೆ.

**ಪ್ರಸಿದ್ಧ ಪ್ರಸಾದಿಯ ಅಂಗ :** ಪ್ರಾಣಲಿಂಗಿಯಾದವನು ತನ್ನ ಪ್ರತಿ ಇಂದ್ರಿಯದ ಬಾಗಿಲಿನಲ್ಲೂ ಪರಶಿವನನ್ನು ಪ್ರತಿಷ್ಠಾಪಿಸಿರುತ್ತಾನೆ. ಅಂದರೆ, ತಾನು ನೋಡುವ ಮೊದಲು ಕಣ್ಣಿನ ಬಾಗಿಲಿನಲ್ಲೇ ಇರುವ ಪರಶಿವ ನೋಡುತ್ತಾನೆ. ತಾನು ಕೇಳುವ ಮೊದಲು, ಕಿವಿಯ ಬಾಗಿಲಿನಲ್ಲೇ ಇರುವ ಪರಶಿವ ಕೇಳಿಸಿಕೊಳ್ಳುತ್ತಾನೆ, ಇತ್ಯಾದಿ. ಹೀಗೆ ತಿಳಿದವನು, ಇದು ಒಳ್ಳೆಯದು, ಇದು ಕೆಟ್ಟದ್ದು ಎಂಬ ಭೇದವನ್ನು ಮಾಡುವುದಿಲ್ಲ. ಏಕೆಂದರೆ, ಶಿವಾರ್ಪಿತವಾದ ಯಾವುದೂ ಅಶುದ್ಧವಾಗಿರಲು ಸಾಧ್ಯವಿಲ್ಲವೆಂದು ಅವನು ತಿಳಿದಿದ್ದಾನೆ. ಅವನಿಗೆ ಬಿಸಿಲೂ ಒಂದೇ ಬೆಳದಿಂಗಳೂ ಒಂದೇ, ಅಂಥ ಪ್ರಸಾದಿಯ ಅಂಗವು ಪ್ರಸಿದ್ಧ ಪ್ರಸಾದಿಯ ಅಂಗವೆನಿಸಿಕೊಳ್ಳುತ್ತದೆ. (೮ : ೧೧೮)

**ಪ್ರಳಯ :** ಶಿವ ಸೃಷ್ಟಿ ಮತ್ತು ಸ್ಥಿತಿಗಳು ಸಾಕೆನಿಸಿದಾಗ ಪ್ರಪಂಚವನ್ನು ಮತ್ತೆ ತನ್ನೊಳಕ್ಕೆ ಎಳೆದುಕೊಳ್ಳುತ್ತಾನೆ. ಆದರೆ ಅವನೊಳಗಿದ್ದ ಪ್ರಪಂಚವು ಪ್ರಪಂಚದ ರೂಪದಲ್ಲಿರದೆ,

ಮೊದಲಿನಂತೆ, ಅವ್ಯಕ್ತ ಮತ್ತು ಅಸ್ಪಷ್ಟ ಶಕ್ತಿಯ ರೂಪದಲ್ಲಿರುತ್ತದೆ. ಪ್ರಳಯದಲ್ಲಿ ಎಲ್ಲದೂ ಇದ್ದರೂ, ಯಾವುದಕ್ಕೂ ನಾಮರೂಪಗಳಿರುವುದಿಲ್ಲ. ಜೀವಾತ್ಮಗಳೆಲ್ಲವೂ ನಿದ್ರಾವಸ್ಥೆಯಲ್ಲಿರುತ್ತದೆ. ಅವುಗಳಿಗೆ ಸ್ಥೂಲದೇಹಗಳಿರುವುದಿಲ್ಲ. ಮನಸ್ಸು, ಬುದ್ಧಿ ಇತ್ಯಾದಿಗಳಲ್ಲಿ ಭೇದವಿರುವುದಿಲ್ಲ. ಅವು ತಂತಮ್ಮ ಕರ್ಮಗಳೊಂದಿಗೆ ಹೀಗೆ ಅವ್ಯಕ್ತ ಸ್ಥಿತಿಯಲ್ಲೇ ಇರುತ್ತವೆ - ಮತ್ತೆ ಸೃಷ್ಟಿಯಾಗುವವರೆಗೂ.

**ಪ್ರಳಯುವ ಗೆಲಿಯುವುದು :** ಪ್ರಳಯುವಾದಾಗ ಜಗತ್ತಿನ ಜೀವರಾಶಿಯೆಲ್ಲವೂ ನಾಶವಾಗುವುದು. ಇದರರ್ಥ ಮಾನವನ ಕಷ್ಟಗಳೆಲ್ಲವೂ ಕೊನೆಗೊಂಡವು ಎಂದಲ್ಲ. ಪರಶಿವನ ಆಣತಿಯಂತೆ ರುದ್ರ ಪ್ರಳಯವನ್ನುಂಟು ಮಾಡುವುದು ಅವನ ಆಜ್ಞೆಯಂತೆ ಬ್ರಹ್ಮ ಮತ್ತೆ ಸೃಷ್ಟಿ ಮಾಡಲಿ ಎಂಬ ಉದ್ದೇಶದಿಂದ. ಮತ್ತೆ ಸೃಷ್ಟಿಯಾದಾಗ ನಮ್ಮ ಪ್ರಳಯಪೂರ್ವ ಕರ್ಮವು ನಮ್ಮ ಹೊಸ ಜನ್ಮವನ್ನು ನಿರ್ಧರಿಸುತ್ತದೆ. ಆಗ ನಾವು ಹೊಸ ಹೊಸ ಕೋಟಲೆಗೆ ಒಳಗಾಗುತ್ತೇವೆ. ಆದರೆ ಲಿಂಗಾಂಗ ಸಾಮರಸ್ಯವನ್ನು ಈ ಜನ್ಮದಲ್ಲೇ ಸಾಧಿಸಿದರೆ, ಮುಂದಿನ ಜನ್ಮವೂ ಇರುವುದಿಲ್ಲ, ನಾವು ಪ್ರಳಯಕ್ಕೂ ಒಳಗಾಗುವುದಿಲ್ಲ. (ಅ : ೪೪೬)

**ಪ್ರಾಕೃತರು :** ಪ್ರಕೃತಿಯ ಪಾಶಕ್ಕೆ ಬಲಿಯಾದವರು, ಕರ್ಮಿಗಳು. (೩ : ೧೨೩೯)

**ಪ್ರಾಜ್ಞ :** ಆತ್ಮನ ಶುದ್ಧ ಸ್ಥಿತಿ. ಆತ್ಮನ ಶುದ್ಧ ಸ್ಥಿತಿಯನ್ನು ನಾವು ಗಾಢ ನಿದ್ರೆಯಲ್ಲಿ ಅನುಭವಿಸಬಹುದು. ದೇಹಾದಿಕರಣಗಳ ಮೂಲಕ ಆತ್ಮನು ವಿಶ್ವನಾಗಿ ಜಗತ್ತಿನೊಡನೆಯೂ, ಕೇವಲ ಮನಸ್ಸಿನ ಮೂಲಕ ತೈಜಸನಾಗಿ ಮಾನಸಿಕ (ಸ್ವಪ್ನ)ಲೋಕದೊಡನೆಯೂ ವ್ಯವಹರಿಸಿದರೆ, ಪ್ರಾಜ್ಞನು ದೇಹಾದಿಕರಣಗಳ ಸಂಬಂಧವನ್ನು ಕಡಿದುಕೊಂಡು ಕಾರಣ ಶರೀರದಲ್ಲಿದ್ದರೂ ಶಾಂತನಾಗಿರುತ್ತಾನೆ.ಆದರೆ ಈ ಶಾಂತತೆ ಕೇವಲ ತಾತ್ಕಾಲಿಕ - ನಿದ್ರೆ (ಸುಷುಪ್ತಿ) ಮುಗಿಯುವವರೆಗೆ. ಇಂಥ ಪ್ರಾಜ್ಞನಿಗೆ ಮೋಕ್ಷ ಗುರುವು ವೇಧಾ ದೀಕ್ಷೆಯ ಮೂಲಕ ಭಾವಲಿಂಗ ಸಂಬಂಧ ಮಾಡಿಸುತ್ತಾನೆ. ವೇಧಾ ದೀಕ್ಷೆಯೆಂದರೆ, ಧ್ಯಾನದಲ್ಲಿ ಭಾವಲಿಂಗವನ್ನು ವೇಧಿಸುವುದೆಂದರ್ಥ. (೯:೧೨೭೦)

**ಪ್ರಾಣದಾಸೆಗೆ ಪ್ರಸಾದ :** ಕೇವಲ ಹಸಿವನ್ನು ಹಿಂಗಿಸಿಕೊಳ್ಳುವ ಅಥವಾ ಪ್ರಾಣವನ್ನು ಉಳಿಸಿಕೊಳ್ಳುವ ಸಲುವಾಗಿ ಸ್ವೀಕರಿಸುವ ಪ್ರಸಾದ. (ಹಾಗೆ ಮಾಡಬಾರದೆಂಬುದು ವಚನಕಾರರ ಅಪ್ಪಣೆ) (ಅ : ೧೩೫೭)

**ಪ್ರಾಣನ ಪ್ರಕೃತಿ :** ಪ್ರಾಣವೇ ಲಿಂಗ, ಲಿಂಗವೇ ಪ್ರಾಣ ಎಂದು ಹೇಳುವ ಬುದ್ಧಿವಂತರು ಪ್ರಾಣವು ಪ್ರಕೃತಿಯ ಅಂಶವೆಂಬುದನ್ನು ಮರೆತಿದ್ದಾರೆ. ಪ್ರಾಕೃತಿಕ ಸ್ವಭಾವದ ಪ್ರಾಣವು ಚಿತ್‌ಸ್ವರೂಪದ ಲಿಂಗವಾಗಲಾರದು. ಆದರೆ ಆ ಪ್ರಾಕೃತಿಕ ಅಂಶವು ಶಿವನ

ಗುಣವಾದುದರಿಂದ, ಅದನ್ನು ಪ್ರತ್ಯೇಕವೆಂದು ಭಾವಿಸಬಾರದು. ಇದನ್ನು ತಿಳಿದವರಿಗೆ ಅನುಭಾವದಲ್ಲಿ ಪರಮ ಪ್ರಕಾಶ ಕಾಣಿಸಿಕೊಳ್ಳುತ್ತದೆ.

**ಪ್ರಾಣಪ್ರಸಾದ :** ಪ್ರಾಣವು ಇಷ್ಟಲಿಂಗವನ್ನು ಮುಟ್ಟಿ ಪೂಜಿಸದಿದ್ದರೂ, ಅದು ಪರಶಿವನನ್ನು ಧ್ಯಾನಿಸುತ್ತಾ ವಸ್ತುಗಳನ್ನು ಅರ್ಪಿಸಿ, ಸ್ವೀಕರಿಸಿದರೆ, ಅದೇ ಪ್ರಾಣಪ್ರಸಾದ. (೮ : ೪೪೨)

**ಪ್ರಾಣಭಾವ ಶೂನ್ಯ ಶರಣಲಿಂಗ :** ಧ್ಯಾನಸ್ಥನಾದವನಿಗೆ ತನಗೆ ಪ್ರಾಣವಿದೆ ಎಂಬ ಭಾವವೂ ಇಲ್ಲವಾಗುತ್ತದೆ. ಧ್ಯಾನ (ಅನುಭಾವ) ಮುಗಿದ ಮೇಲೂ, ಸರ್ವವೂ ಶಿವನೆಂಬ ಜ್ಞಾನ ಉಂಟಾದ ಅವನಿಗೆ ಪ್ರಾಣಭಾವ ಶೂನ್ಯವಾಗುತ್ತದೆ. ಅಂಥ ಶರಣನೇ ಪ್ರಾಣಭಾವಶೂನ್ಯ ಶರಣಲಿಂಗ. (೧೨ : ೮೩೩)

**ಪ್ರಾಣಲಿಂಗಿ :** ದೇಹೇಂದ್ರಿಯಾದಿಗಳಲ್ಲಿ ಪ್ರಾಣ ಹೇಗೆ ಸರ್ವ ಸಮಾವೇಶಿಯಾಗಿದೆಯೋ ಹಾಗೆ ದೇಹೇಂದ್ರಿಯಾದಿಗಳಲ್ಲಿ ಲಿಂಗವನ್ನುಪ್ರತಿಷ್ಠಾಪಿಸಿಕೊಂಡವನು.

**ಪ್ರಾಣಲಿಂಗದಂಗ :** ಪ್ರಸಾದಿ ಸ್ಥಲದಲ್ಲಿರುವವನು ತಾನು ಸೇವಿಸುವ ನೀರು, ಆಹಾರಾದಿಗಳಷ್ಟೇ ಶಿವಾರ್ಪಿತಯೋಗ್ಯ, ಉಳಿದವಲ್ಲ ಎಂದು ತಿಳಿಯದೆ, ತಾನು ನೋಡುವ ನೋಟ, ರುಚಿಸುವ ರುಚಿ, ಮೂಸುವ ಗಂಧ, ಇತ್ಯಾದಿಗಳೆಲ್ಲವನ್ನೂ ಶಿವನಿಗೆ ಅರ್ಪಿಸಿ, ಆನಂತರ ಅವುಗಳನ್ನು ಪ್ರಸಾದವೆಂಬಂತೆ ಭೋಗಿಸಬೇಕು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಅವನು ತನ್ನ ಇಂದ್ರಿಯಗಳನ್ನೂ, ಅಂತಃಕರಣಗಳನ್ನೂ ಶಿವನಿಗರ್ಪಿಸಿ ಆನಂತರ ತಾನು ಉಪಯೋಗಿಸಬೇಕು. ಕೊನೆಗೆ ಇಂದ್ರಿಯಗಳ ಬಾಗಿಲಿನಲ್ಲಿಯೂ, ಅಂತಃಕರಣದ ಬಾಗಿಲಿನಲ್ಲಿಯೂ ಅಂದರೆ ಇಡೀ ಪ್ರಾಣದಲ್ಲೇ ಲಿಂಗವನ್ನು ಪ್ರತಿಷ್ಠಾಪಿಸಿದರೆ, ಆಂತಹ ಭಕ್ತನು ಪ್ರಸಾದ ಲಿಂಗದ ಒಂದಂಶವಾಗುತ್ತಾನೆ (೮:೧೫೩೬)

**ಪ್ರಾಣಲಿಂಗದ ಬಹಿಷ್ಕಾರ :** ಪ್ರತಿಯೊಬ್ಬ ಮಾನವನ ಅಂತರಂಗದಲ್ಲಿ ಅಂತಸ್ಥವಾಗಿರುವ ಪ್ರಾಣಲಿಂಗವನ್ನು ಹಸ್ತಮಸ್ತಕಸಂಯೋಗದ ಮೂಲಕ ಹೊರಕ್ಕೆ ತರುವುದು. (೩:೯೫೦)

**ಪ್ರಾಣಲಿಂಗ ಸಂಬಂಧ :** ಇಷ್ಟಲಿಂಗವನ್ನು ದೇಹದ ಮೇಲೆ ಧರಿಸಿಕೊಂಡರೆ ದೇಹ ಲಿಂಗ ಸಂಬಂಧವೆನಿಸುವಂತೆ, ಪ್ರಾಣವು ಹೇಗೆ ಇಡೀ ದೇಹದಲ್ಲಿದೆಯೋ ಹಾಗೆ ಲಿಂಗವು ಪ್ರಾಣದಲ್ಲಿದೆ ಎಂದು ತಿಳಿದುಕೊಂಡರೆ, ಪ್ರಾಣ ಲಿಂಗ ಸಂಬಂಧವೆನಿಸಿಕೊಳ್ಳುತ್ತದೆ.

**ಪ್ರಾಣಲಿಂಗಿಯ ಪವನವಂಗ :** ಹೃದಯಸ್ಥಾನದಲ್ಲಿರುವ ಅನಾಹತ ಚಕ್ರದಲ್ಲಿ ಅಥವಾ ಅದರಲ್ಲಿರುವ ವಾಯುತತ್ವದಲ್ಲಿ (ಅಥವಾ ಆದಿಶಕ್ತಿಯಲ್ಲಿ)ಶಿವನು ಜಂಗಮಲಿಂಗ ರೂಪದಲ್ಲಿರುತ್ತಾನೆ. ಜಂಗಮಲಿಂಗವನ್ನು ಸಾಕ್ಷತ್ಕರಿಸಿಕೊಳ್ಳುವ ಸಾಧಕನಿಗೆ ಪ್ರಾಣಲಿಂಗಿ ಎಂಬ ಹೆಸರಿದ್ದುಅದನ್ನು ಸಾಕ್ಷತ್ಕರಿಸಿಕೊಳ್ಳಲು ನಮ್ಮಲ್ಲಿರುವ ವಾಯು (ಪವನ) ತತ್ವದ

ಅಥವಾ ಆದಿಶಕ್ತಿಯ ದುಷ್ಪರಿಣಾಮಗಳನ್ನು ಕಡಿಮೆ ಮಾಡುವ ಮೂಲಕ ಅದನ್ನು ಶುದ್ಧಮಾಡ ಬೇಕಾಗುತ್ತದೆ; ಹೀಗೆ ಶುದ್ಧವಾದ ಆದಿಶಕ್ತಿಗೆ ಅನುಭಾವ ಭಕ್ತಿ ಎಂದು ಹೆಸರು.

ಪ್ರಾಣಲಿಂಗಿಯೆಂದರೆ ಆದಿಶಕ್ತಿಯ ವಿವಿಧ ರೂಪಗಳಾದ ಹತ್ತು ವಾಯುಗಳನ್ನು ನಿಯಂತ್ರಿಸುವವನು ಎಂದಾದುದರಿಂದ, ಆ ನಿಯಂತ್ರಣದ ಮೂಲಕ ಅನುಭಾವವನ್ನೂ ಸಾಧಿಸಿಕೊಳ್ಳುತ್ತಾನೆ. ಈ ಅನುಭಾವದ ಮೂಲಕ ಸಾಧಕನು, ಪ್ರಾಣವು ಹೇಗೆ ದೇಹದ ಪ್ರತಿ ಕಣದಲ್ಲಿಯೂ ಇದೆಯೋ ಹಾಗೆ ಲಿಂಗವು (ಪರಶಿವನೂ) ಪ್ರತಿ ಕಣದಲ್ಲಿಯೂ ಇದ್ದಾನೆ ಎಂಬ ಜ್ಞಾನವನ್ನುಪಡೆಯುತ್ತಾನೆ. ಪ್ರಾಣವೇ ಲಿಂಗ, ಲಿಂಗವೇ ಪ್ರಾಣ ಎಂಬುದು ಕೇವಲ ನಂಬಿಕೆಯಲ್ಲ, ಅದು ಅವನ ಸ್ವಂತ ಅನುಭವಕ್ಕೆ ಬಂದ ಸತ್ಯ. ಅಂದರೆ ಅವನು ಸಿದ್ಧಿಸಿಕೊಂಡ ಜಂಗಮಲಿಂಗಕ್ಕೆಅವನ ಪ್ರಾಣವೇ (ವಾಯುವೇ) ಅಂಗ (ಅ:೧೯೬೯).

**ಪ್ರಾಣಲಿಂಗಿ ಸ್ಥಲ :** ಶರಣನ ಆಧ್ಯಾತ್ಮಿಕ ಮುನ್ನಡೆಯಲ್ಲಿ ಪ್ರಾಣಲಿಂಗಿ ಸ್ಥಲ ಒಂದು ಮೈಲಿಗಲ್ಲು. ಇಷ್ಟಲಿಂಗಪೂಜೆ ಮುಂತಾದ ವಿಧಿಗಳನ್ನು ಆಚರಿಸಿ, ಪರಶಿವ ಹೊರಗಿದ್ದಾನೆ, ಎಂದು ಮೊದಲು ತಿಳಿದಿದ್ದ ಅವನು, ಈಗ ಧ್ಯಾನ ಜಪ, ಮಂತ್ರಗಳನ್ನು ಆಚರಿಸಿ, ಪರಶಿವ ಪ್ರಾಣರೂಪದಲ್ಲಿದ್ದಾನೆ, ಎಂದು ತಿಳಿದುಕೊಂಡಿದ್ದಾನೆ. ಮೊದಲಿನಂತೆ ಈಗ ಪರಶಿವನಿಗೆ ಹೊರಗಿನ ಪದಾರ್ಥಗಳನ್ನು ಅರ್ಪಿಸದೆ, ತನ್ನ ಕಾಯೇಂದ್ರಿಯಾದಿಗಳನ್ನೆ ಅರ್ಪಿಸಿಕೊಂಡ ಪ್ರಾಣಲಿಂಗಿಯು ತನ್ನಲ್ಲೆ ಇರುವ ಪರಶಿವನನ್ನು ಕಾಣತೊಡಗಿದ್ದಾನೆ.

**ಪ್ರಾಣಲಿಂಗಿಸ್ಥಲ ಈಶ್ವರನಾಶನ :** ಲಿಂಗವನ್ನು ಕೈಯಲ್ಲಷ್ಟೇ ಅಲ್ಲ, ಪ್ರಾಣವಿರುವಲ್ಲೆಲ್ಲಾ ಪ್ರತಿಷ್ಠಿಸಿದವನೇ ಪ್ರಾಣಲಿಂಗಿ. ಹೀಗೆ ರೂಪರಸಗಂಧಾದಿಗಳು ಆಯಾ ಇಂದ್ರಿಯಗಳನ್ನು ಸೋಂಕುವ ಮುನ್ನವೇ ಅವುಗಳ ಬಾಗಿಲಿನಲ್ಲಿರುವ ಪರಶಿವನನ್ನು ಮುಟ್ಟುತ್ತವೆ. ಹೀಗೆ ಎಲ್ಲರು ಎಲ್ಲವನ್ನು ಪರಶಿವನಿಗೆ ಮೊದಲು ಅರ್ಪಿಸಿ ತಾವು ಅನುಭವಿಸಿದರೆ, ಯಾರೂ ಕರ್ಮಬಂಧನಕ್ಕೆ ಒಳಗಾಗಬೇಕಾಗಿಲ್ಲ. ಆಗ ಬಂಧನಕಾಯ (ತಿರೋಧಾನ) ಮಾಡುವ ಈಶ್ವರನ ಅಗತ್ಯವೇ ಇರುವುದಿಲ್ಲವಾದುದರಿಂದ ಪರಶಿವ ಅವನನ್ನು ನಾಶಮಾಡುತ್ತಾನೆ. (ಅ:೨೦೦೨)

**ಪ್ರಾಣಲಿಂಗಿಸ್ಥಲ ತ್ರಿವಿಧ :** ಆಧ್ಯಾತ್ಮಿಕ ದಾರಿಯಲ್ಲಿ ಪ್ರಗತಿ ಸಾಧಿಸಿದ ಭಕ್ತನು ಕರಸ್ಥಲವಲ್ಲಿ ಮಾತ್ರವಲ್ಲದೆ, ದೇಹದ ಎಲ್ಲೆಡೆಯಲ್ಲಿಯೂ ಲಿಂಗಸ್ಥಾಪನೆ ಮಾಡಬೇಕು. ಈ ಭಾವಕ್ಕೆ ಪ್ರಾಣಲಿಂಗಿ ಸ್ಥಲವೆನ್ನುತ್ತಾರೆ. ಇದರಲ್ಲಿ ಮೂರು ಉಪಭಾಗಗಳಿದ್ದು ಅವುಗಳನ್ನು ಅನುಕ್ರಮವಾಗಿ ಆಚಾರಪ್ರಾಣಿ, ಲಿಂಗಪ್ರಾಣಿ ಮತ್ತು ಜಂಗಮಪ್ರಾಣಿ ಎಂದು ಕರೆಯಲಾಗಿದೆ. ಪ್ರಾಣಲಿಂಗಿಸ್ಥಲದ ಮೊದಲನೆ ಹಂತದಲ್ಲಿ ಭಕ್ತನು ಬಾಹ್ಯ ಆಚಾರಗಳಿಗೆ

ಹೆಚ್ಚು ಮಹತ್ವಕೊಡುತ್ತಾನೆ. ಸ್ನಾನ, ಲಿಂಗಪೂಜೆ, ಮಂತ್ರ, ಗುರು ಜಂಗಮಗಳಲ್ಲಿ ಭಕ್ತಿ, ಪ್ರಸಾದ ಪಾದೋದಕ ಸೇವನೆ, ಮುಂತಾದ ಬಾಹ್ಯ ಆಚಾರಗಳು ಆಧ್ಯಾತ್ಮಿಕ ಜೀವನಕ್ಕೆ ಪ್ರಾರಂಭದಲ್ಲಿ ಆವಶ್ಯಕವಾದರೂ ಅವೇ ಕೊನೆಯಲ್ಲ. ಭಕ್ತ ಇನ್ನೂ ಮುಂದಕ್ಕೆ ಹೋಗಬೇಕಾದರೆ, ಶಿವನು ತನ್ನಲ್ಲಿಯೇ ಇದ್ದಾನೆಂದು ತಿಳಿದು, ಧ್ಯಾನದ ಮೂಲಕ ಶಿವನನ್ನು ತಲುಪಲು ಪ್ರಯತ್ನಿಸಬೇಕು. ಈ ಪ್ರಯತ್ನವು ಅವನನ್ನು ಲಿಂಗಪ್ರಾಣಿಯನ್ನಾಗಿ ಮಾಡುತ್ತದೆ. ಧ್ಯಾನದ ಮೂಲಕ ಅವನ ಮತ್ತು ಶಿವನ ಮಧ್ಯ ದೂರ ಕಡಿಮೆಯಾದಾಗ, (ಅಥವಾ ಅವನು ತೆರಹಿಲ್ಲಿದ ಘನದಲ್ಲಿ ಒಂದಾದಾಗ) ಅವನು ತಾನೆ ಲಿಂಗವೆಂದುಕೊಳ್ಳುತ್ತಾನೆ. ಹೀಗೆ ಅವನು ನಡೆದಾಡುವ ಲಿಂಗವಾದುದರಿಂದ ಅವನು ಜಂಗಮ ಪ್ರಾಣಿಸ್ಥಲದಲ್ಲಿದ್ದಾನೆಂದರ್ಥ.

**ಪ್ರಾಣಶೂನ್ಯ :** ಜೀವನು ತಾನು ಪರಶಿವನಿಂದ ಪ್ರತ್ಯೇಕವಲ್ಲವೆಂದು ತಿಳಿಯುವುದೂ ಅಲ್ಲದೆ, ತನ್ನ ಸಂಸಾರ ಬಂಧನಕ್ಕೆ ಕಾರಣವಾದ ಅಜ್ಞಾನ, ಕರ್ಮ, ಮುಂತಾದ ಮಿತಿಗಳ(ಉಪಾಧಿ)ಗಳನ್ನು ತೊಡೆದುಹಾಕಿದಾಗ, ಹಾಗೂ ಆ ಮೂಲಕ ಲಿಂಗಾಂಗ ಸಾಮರಸ್ಯವನ್ನು ಸಾಧಿಸಿದಾಗ, ಅವನು ಪ್ರಾಣಶೂನ್ಯ ಎನಿಸಿಕೊಳ್ಳುತ್ತಾನೆ.(೮:೧೩೨೪)

**ಪ್ರಾಣಾಯಾಮ :** ವಿಧಿಬದ್ಧ ಉಸಿರಾಟ. ಪ್ರಾಣಾಯಾಮದ ಮೂಲಕ ಮಾನಸಿಕ ಸಂತುಲನವನ್ನು ಸಂಪಾದಿಸಬಹುದಲ್ಲದೆ, ಕುಂಡಲಿನಿಯನ್ನು ಜಾಗ್ರತಗೊಳಿಸಿ, ಅದು ವಿವಿಧ ಚಕ್ರಗಳ ಮೂಲಕ ಹಾದು ಸಹಸ್ರಾರವನ್ನು ತಲುಪುವಂತೆ ಮಾಡಬಹುದು, ಎಂಬುದು ಶಾಕ್ತರ ನಂಬಿಕೆ. ಇದಕ್ಕೆ ಕೆಲವು ಶರಣರ ಸಮ್ಮತಿ ಇದೆ.

**ಪ್ರಾಯಶ್ಚಿತ್ತ :** ಮಾಡಿದ ತಪ್ಪಿಗಾಗಿ ಮರುಗುವುದು. ಆದರೆ ವಚನಕಾರರ ಪ್ರಕಾರ, ಪ್ರಾಯಶ್ಚಿತ್ತವುಂಟೆಂದು ತಪ್ಪು ಮಾಡುವವರು ಅನಾಚಾರಿಗಳು. ಅಲ್ಲದೆ, ದುರ್ಗುಣಕ್ಕೆ ತಕ್ಕಂತೆ ಮಾಡಿದ ದುಷ್ಕಾರ್ಯಕ್ಕೆ ಕರ್ಮಫಲ ಇದ್ದೇ ಇರುವುದರಿಂದ, ದುರ್ಗುಣಕ್ಕುಂಟೇ ಪ್ರಾಯಶ್ಚಿತ್ತ ಎಂದು ವಚನಕಾರರೇ ಕೇಳುತ್ತಾರೆ. (೫:೩೬೭)

**ಪ್ರಾರಬ್ಧಕರ್ಮ :** ಹಿಂದಿನ ಜನ್ಮದ ಕರ್ಮಗಳು ಈಗ ಫಲ ನೀಡಲು ಪ್ರಾರಂಭಿಸಿದರೆ, ಅವು ಪ್ರಾರಬ್ಧ ಕರ್ಮಗಳೆಸಿಕೊಳ್ಳುತ್ತವೆ. ಇನ್ನೂ ಫಲ ನೀಡದ ಹಳೆಯ ಕರ್ಮಗಳು ಸಂಚಿತ.

**ಪ್ರಾರಬ್ಧಸುಖಿ :** ಸಾಧಕನು ಲಿಂಗಕ್ಕೆ ತನ್ನ ಚಿತ್ತ, ಮನ, ಮುಂತಾದ ಅಂತಃಕರಣಗಳನ್ನು ಅರ್ಪಿಸದೆ ತಾನು ಶುದ್ಧ ಪ್ರಸಾದಿ ಎಂದು ಹೇಳಿಕೊಂಡರೆ, ಅವನು ಮಾಯಾ ಮಲಪೀಡಿತನಾಗಿದ್ದಾನೆಂದು ಅರ್ಥ. ಅವನು ಪ್ರಾರಬ್ಧ ಕರ್ಮದ ಫಲ(ಸುಖ)ವನ್ನು ಅನುಭವಿಸಲೇ ಬೇಕು. (೧೨:೩೭೪)

**ಪ್ರೇತಶರೀರ :** ಮನುಷ್ಯನು ಪುಣ್ಯಕಾರ್ಯ ಹಾಗೂ ಪಾಪ ಕಾರ್ಯಗಳೆರಡನ್ನು ಮಾಡಿಸತ್ತಾಗ ಅವನು ಅವುಗಳ ಫಲವನ್ನು ಅನುಭವಿಸಲು ಅವನಿಗೊಂದು ಸ್ಥೂಲಶರೀರವಲ್ಲದ ಒಂದು ಶರೀರದ ಅಗತ್ಯವಿರುತ್ತದೆ. ಇದಕ್ಕೆ ಅನುಭವ ಶರೀರವೆಂದು ಹೆಸರು. ಒಂದು ವೇಳೆ ಅವನು ಹೆಚ್ಚಾಗಿ ಪಾಪಕಾರ್ಯಗಳನ್ನೆ, ಮಾಡಿದ್ದರೆ ಅವನಿಗೆ ಪ್ರೇತಶರೀರವೆಂಬ ಅನುಭವ ಶರೀರ ಸಿಕ್ಕುತ್ತದೆ. ಯಮದೂತರು ಅದರ ಪಾಪ ತೀರುವವರೆಗೂ ಅದಕ್ಕೆ ಯಾತನೆಗಳನ್ನು ಕೊಟ್ಟು, ಅದರಲ್ಲಿ ಪುಣ್ಯವಿದ್ದರೆ ಅದನ್ನು ದೇವದೂತರವಶಕ್ಕೆ ಕೊಡುತ್ತಾರೆ. ಪುಣ್ಯವೂ ತೀರಿದ ಮೇಲೆ ಜೀವನು ಮರ್ತ್ಯಲೋಕಕ್ಕೆ ಹಿಂದಿರುಗುತ್ತಾನೆ (೧೩:೨೪೦೦).

**ಪ್ರೇರಣಚೈತನ್ಯ :** ಪ್ರಪಂಚದಲ್ಲಿ ಇಂದ್ರಿಯಗೋಚರವಾದ ಪ್ರತಿಯೊಂದು ವಸ್ತುವೂ ಶಕ್ತಿಯಿಂದ ರಚಿತವಾಗಿದೆ; ಆದರೆ ಈ ಶಕ್ತಿಯು ಜಡವಾಗಿದ್ದು, ಅದು ಸ್ವಯಂ ಪರಿವರ್ತನೆಗೊಳ್ಳಲು ಸಾಧ್ಯವಿಲ್ಲ. ಅದರ ಪರಿವರ್ತನೆಗೆ ಪ್ರೇರಣೆ ನೀಡಲು ಚಿತ್ ಸ್ವರೂಪದ ಪರವಸ್ತುವಿಗೆ ಮಾತ್ರ ಸಾಧ್ಯ. ಆದುದರಿಂದ ಪರಶಿವನೇ ಪ್ರೇರಣ ಚೈತನ್ಯ. (೯:೨೯೯)

**ಫಲಪದಭವ :** ಫಲವನ್ನೂ ಪದವನ್ನೂ ಬಯಸಿ ನಾವು ಅನೇಕ ರೀತಿಯ ಕರ್ಮಗಳನ್ನು ಮಾಡಿ, ಅದರ ಪರಿಣಾಮವಾಗಿ ಮತ್ತೆ ನಾವು ಭವಕ್ಕೇ ಬರುತ್ತೇವೆ. ಕೆಲವು ವೇಳೆ ಸುಖ, ಬಹಳ ವೇಳೆ ದುಃಖ ಉಂಟಾಗುವುದೇ ಭವ. ಆದುದರಿಂದ ಫಲಪದವಿಯನ್ನು ಬಯಸದೆ ಭವಕ್ಕೆ ಮತ್ತೆ ಬಾರದೆ, ಮೋಕ್ಷವನ್ನೇ ಪಡೆಯಬೇಕೆಂಬುದು ವಚನಕಾರರ ಉಪದೇಶ. (೪:೫೮೫)

**ಬದ್ಧಕತನ :** ಕರ್ಮಬಂಧನಕ್ಕೆ ಒಳಗಾಗಿರುವುದು (೮:೧೬೬೧)

**ಬಯಲ ದೇಹಿ :** ೧.ಪಂಚಭೂತಗಳ ಕೆಟ್ಟ ಪರಿಣಾಮವನ್ನು ಇಲ್ಲವಾಗಿಸಿದವನು. ೨. ತನ್ನ ದೇಹವನ್ನು ಪರಶಿವನ ಅಥವಾ ಬಯಲಿನ ಅಂಗವನ್ನಾಗಿ (ಭಾಗವನ್ನಾಗಿ) ಮಾಡಿಕೊಂಡವನು. (೫:೧೦೦೮)

**ಬಯಲಪಾಶ :** ಚಿತ್‌ಸ್ವರೂಪದ ಬಯಲನ್ನು ದೇಹೇಂದ್ರಿಯಾದಿ ಕರಣಗಳು ಬಂಧಿಸಿ, ಅದನ್ನು ಜೀವಾತ್ಮನೆನಿಸುವಂತೆ ಮಾಡಿವೆ. ಈ ಕರಣಾದಿಗಳ ದೋಷ ನಿವಾರಿಸಲ್ಪಟ್ಟರೆ, ಕಿರಿದಾದ (ಪಾಶಕ್ಕೊಳಗಾದ) ಬಯಲು ಮಹಾಬಯಲನ್ನು (ಪರಶಿವನನ್ನು) ಸೇರಿ ಒಂದಾಗುತ್ತದೆ.

**ಬಯಲಭ್ರಾಂತ :** ಜೀವನದ ಪರಮೋದ್ದೇಶ ಪರಶಿವನೆಂಬ ಬಯಲಿನಲ್ಲಿ ಒಂದಾಗುವುದು ಎಂಬುದನ್ನು ಅರಿಯದೆ ಕ್ಷಣಿಕ ಐಹಿಕ ವಸ್ತುಗಳನ್ನೇ ತಮ್ಮ ಧ್ಯೇಯವನ್ನಾಗಿಮಾಡಿಕೊಂಡವನು. (೧೨:೨೬)

**ಬಯಲರೂಪ ಮಾಡುವುದು :** ಇಲ್ಲಿ ಬಯಲು ಎಂದರೆ ಚಿದಾಕಾಶ ಅಥವಾ ಪರಶಿವ ಎಂದರ್ಥ. ಭೂತಾಕಾಶಕ್ಕೆ ಆಗಲಿ ಚಿದಾಕಾಶಕ್ಕೆ ಆಗಲಿ ರೂಪವಿಲ್ಲ. ಆದರೆ ಲಿಂಗಾನುಭವಿಯು ತನ್ನ ಯೋಗ ಪ್ರತ್ಯಕ್ಷದಲ್ಲಿ ಚಿದಾಕಾಶವನ್ನು ಕಂಡಾಗ ಅದಕ್ಕೆ ರೂಪ ಉಂಟಾಯಿತೆಂದರ್ಥ.

**ಬಯಲಾಗುವುದು :** ಬಯಲಿನಲ್ಲಿರುವ ವಸ್ತುಗಳನ್ನು ನೋಡಿದಂತೆ, ಬಯಲೊಂದನ್ನೇ ನೋಡಲು ಸಾಧ್ಯವಿಲ್ಲ, ಹಾಗೆಯೇ ಪರಶಿವನಲ್ಲಿರುವ ವಸ್ತುಗಳನ್ನು ನೋಡಿದಂತೆ, ಚಿದ್ಬಯಲು ಎನಿಸಿಕೊಂಡ ಪರಶಿವನನ್ನು ನೋಡಲು ಸಾಧ್ಯವಿಲ್ಲ. ಆದರೆ, ಅನೇಕ ಕಾರಣಗಳಿಂದ ಬಂಧಿತನಾಗಿರುವ ಆತ್ಮನು ಆಧ್ಯಾತ್ಮಿಕ ಸಾಧನೆಯಿಂದಾಗಿ ಚಿದ್ಬಯಲಿನಲ್ಲಿ ಬೆರೆಯಬಹುದು. ಆಗ ಬಯಲು (ಅಂಗ) ಬಯಲಾಯಿತು (ಲಿಂಗವಾಯಿತು) ಎಂದರ್ಥ.

**ಬಯಲು :** ಪರಶಿವನಿಗೆ ಅನ್ವಯಿಸುವ ಪದ. ಇದು ಅಂಕಿತನಾಮವಾಗಿರದೆ ಒಂದು ಉಪಮೆಯಾಗಿದೆ. ಆಕಾಶ, ಚಿದಾಕಾಶ, ಚಿದಂಬರ ಇವು ಇದರ ಪರ್ಯಾಯ ಪದಗಳು. ಶೂನ್ಯ, ಶೂನ್ಯಸ್ಥಲ, ನಿಃಶೂನ್ಯ ಎಂಬ ಪದಗಳೂ ಇದರ ಪರ್ಯಾಯ ಪದಗಳು. ಪರಶಿವನನ್ನು ಬಯಲಿಗೇ (ಆಕಾಶಕ್ಕೇ) ಏಕೆ ಹೋಲಿಸಬೇಕು ಎಂಬುದಕ್ಕೆ ಕೆಲವು ಕಾರಣಗಳಿವೆ. ೧. ಯಾವುದೇ ವಸ್ತುವಾಗಲಿ, ಅದು ಎಷ್ಟೇ ದೊಡ್ಡದಿರಲಿ, ಆಕಾಶವು ಅದನ್ನು ಆವರಿಸಿಕೊಳ್ಳುತ್ತದೆಯಾದುದರಿಂದ, ಎಲ್ಲ ವಸ್ತುಗಳಿಗಿಂತಲೂ ಇಥವಾ ಇಡೀ ವಿಶ್ವಕ್ಕಿಂತಲೂ ಆಕಾಶವೇ ದೊಡ್ಡದು ಎನ್ನಬಹುದು. ಹಾಗೆಯೇ ಎಲ್ಲ ವಸ್ತುಗಳನ್ನೂ ಪರಶಿವನು ಒಳಗೊಳ್ಳುವುದರಿಂದ, ಅವನೂ ಆಕಾಶದಂತಿದ್ದಾನೆ ಎನ್ನಬಹುದು. ವಿಶ್ವವನ್ನೊಳಗೊಳ್ಳುವ ಆಕಾಶವು ಭೌತಾಕಾಶವಾದರೆ ವಿಶ್ವವನ್ನೂ, ಭೌತಾಕಾಶವನ್ನೂ ಒಳಗೊಳ್ಳುವ ಪರಶಿವನು ಚಿದಾಕಾಶ. ಎರಡನೆಯದಾಗಿ, ಮೋಡ, ಧೂಳು, ಮುಂತಾದ ತಾತ್ಕಾಲಿಕ ಘಟನೆಗಳು ಆಕಾಶದ ಮೂಲಸ್ವರೂಪವನ್ನು ಬದಲಾಯಿಸುವುದಿಲ್ಲ. ಅದೇ ರೀತಿ ಚಿದಾಕಾಶದಲ್ಲಿರುವ ವಸ್ತುಗಳು ಅವು ಎಷ್ಟೇ ಕೆಟ್ಟದಿದ್ದರೂ ಚಿದಾಕಾಶವನ್ನು ಕೆಡಿಸಲಾರವು.ಮೂರನೆ ಕಾರಣ ಮೊದಲನೆ ಎರಡು ಕಾರಣಗಳಿಗಿಂತ ಮುಖ್ಯವಾದುದು. ಎರಡು ಅಥವಾ ಹೆಚ್ಚು ವಸ್ತುಗಳ ಮಧ್ಯೆ ಇರುವ ಆಕಾಶವನ್ನು ತಿಳಿದುಕೊಳ್ಳಬಹುದೇ ಹೊರತು, ವಸ್ತುರಹಿತ ಆಕಾಶವನ್ನಲ್ಲ. ಎರಡು ವಸ್ತುಗಳ ಮಧ್ಯದಲ್ಲಿರುವ ಆಕಾಶ ದೊಡ್ಡದು ಅಥವಾ ಸಣ್ಣದು ಎಂದೂ, ಅನೇಕ ವಸ್ತುಗಳ ಮಧ್ಯದಲ್ಲಿರುವ ಆಕಾಶ ಚೌಕಾಕಾರದ್ದು, ಘನಾಕೃತಿಯುಳ್ಳದ್ದು ಎಂದೂ ವರ್ಣಿಸಬಹುದು. ಆಕಾಶದಲ್ಲಿ ಯಾವ ವಸ್ತುಗಳೂ ಇಲ್ಲದಿದ್ದರೆ, ಅದು ಸಣ್ಣದೂ ಅಲ್ಲ, ದೊಡ್ಡದೂ ಅಲ್ಲ, ತ್ರಿಕೋಣಾಕೃತಿಯೂ ಅಲ್ಲ,ಚೌಕಾಕೃತಿಯೂ ಅಲ್ಲ, ಮತ್ತಾವ ಆಕೃತಿಯೂ ಅಲ್ಲ. ಅದು ವರ್ಣನೆಗೆ ಸಿಕ್ಕುವುದಿಲ್ಲ. ಅದೇ ರೀತಿ ಪರಶಿವನಲ್ಲಿ ವಿಶ್ವವೇ ಇಲ್ಲದಂಥ ಅವಸ್ಥೆಯಲ್ಲಿ

(ಶಕ್ತಿಯು ಅವ್ಯಕ್ತವಾಗಿರುವಂಥ ಪ್ರಲಯ ಸ್ಥಿತಿಯಲ್ಲಿ) ಪರಶಿವನು ಕಾರಣನೂ ಅಲ್ಲ, ಕಾರ್ಯನೂ ಅಲ್ಲ, ದೊಡ್ಡವನೂ ಅಲ್ಲ, ಸಣ್ಣವನೂ ಅಲ್ಲ. ಅವನು ಆ ಸ್ಥಿತಿಯಲ್ಲಿ ವರ್ಣನಾತೀತನಾಗುತ್ತಾನೆ. (೨:೬೩೯)

**ಬಯಲೊಳಗಣ ರೂಪು, ರೂಪಿನೊಳಗಣ ಬಯಲು :** ಬಯಲು ಎಂಬ ಪದವು ಯಾವೊಂದು ಗುಣವೂ ಇಲ್ಲದ ಪರಶಿವನ ಸೃಷ್ಟಿ ಪೂರ್ವಸ್ಥಿತಿಗೆ ಅನ್ವಯವಾಗುತ್ತದೆ. ಅವನಿಗೆ ಸೃಷ್ಟಿಮಾಡುವ ಶಕ್ತಿಯಿದ್ದರೂ, ಆಗ ಅದೂ ಸಹ ಸುಪ್ತಸ್ಥಿತಿಯಲ್ಲಿರುತ್ತದೆ. ರೂಪು ಎಂದರೆ ದೇಹೇಂದ್ರಿಯಾದಿಗಳನ್ನುಳ್ಳ ಅಂಗ (ಆತ್ಮ), ಆದರೆ ತಾತ್ಕಾಲಿಕವಾಗಿ ರೂಪಿರುವ ಅಂಗದಲ್ಲಿ ಪರಶಿವನ (ಬಯಲಿನ) ಅಂಶವಿರುವುದರಿಂದ, ಅಂಗವನ್ನು ಸಣ್ಣಬಯಲೆಂದೂ, ಪರಶಿವನನ್ನು ದೊಡ್ಡ ಬಯಲು; ಚಿದ್ಬಯಲು, (ಚಿದಾಕಾಶ) ಎಂದೂ ಕರೆಯಬಹುದು. ಲಿಂಗಾಂಗ ಸಾಮರಸ್ಯದಲ್ಲಿ ದೇಹೇಂದ್ರಿಯಾದಿಗಳೂ ಸಹ ತಮ್ಮ ಅಧೋಗುಣಗಳನ್ನು ಕಳೆದುಕೊಂಡು ಊರ್ಧ್ವಗುಣಗಳನ್ನು ಪಡೆಯುವದರಿಂದ, ಅವು ಪರಶಿವನನ್ನು ಉತ್ತಮವಾಗಿ ಪ್ರತಿಫಲಿಸುತ್ತವೆ. ಕುಂಭದೊಳಗೆ ನೀರು ತುಂಬಿ ಸಮುದ್ರದೊಳಗೆ ಮುಳುಗಿಸಿದರೆ ಹೇಗೆ ಅದರ ಒಳಗೂ ನೀರು, ಹೊರಗೂ ನೀರು ಇರುತ್ತದೆಯೋ ಹಾಗೆ, ರೂಪಿನೊಳಗಣ ಸಣ್ಣಬಯಲು (ಅಂಗ, ಆತ್ಮ) ಪರಶಿವನೆಂಬ ಅಪರಿಮಿತ ಬಯಲಿನೊಳಗೆ ಲೀನವಾದರೆ, ಆ ರೂಪಿನ ಒಳಗೂ, ಹೊರಗೂ ಬಯಲು ಉಂಟಾಗುತ್ತದೆ. (೮:೧೨೮೩)

**ಬಹಿರಂಗದ ಭಿನ್ನಕ್ರೀ :** ಭಕ್ತನು ತಾನು ಪರಶಿವನಿಂದ ಭಿನ್ನನೆಂಬ ತಪ್ಪುಕಲ್ಪನೆಯಿಂದ ಹಾಗೂ ಡಾಂಭಿಕತನದಿಂದ ಮಾಡಿದ ಬಾಹ್ಯ ಆಚರಣೆಗಳು (೮:೪೬೩)

**ಬಹಿರಂಗದ ಶುದ್ಧಿ :** ತಲೆಬೋಳಿಸಿಕೊಳ್ಳುವುದು, ಗೃಹಸ್ಥನ ವೇಷಭೂಷಣಗಳನ್ನು ತ್ಯಜಿಸುವುದು, ಸ್ನಾನ ಮಾಡುವುದು, ಇತ್ಯಾದಿಗಳೆಲ್ಲ ಬಹಿರಂಗ ಶುದ್ಧಿ. ಅಂತರಂಗ ಶುದ್ಧಿಯಿಲ್ಲದೆಯೇ ಮಾಡಿದ ಬಹಿರಂಗ ಶುದ್ಧಿಗೆ ಧಾರ್ಮಿಕ ಮಹತ್ವವಿಲ್ಲ. ನೈತಿಕ ಆಚರಣೆಯೇ ನಿಜವಾದ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ. (ನೋಡಿ : ೧:೨೩೫)

**ಬಹಿರ್ಮುಖ ಸುಖವಿರಹಿತ :** ಆಧ್ಯಾತ್ಮಿಕ ಸಾಧನೆಯ ಪ್ರಥಮ ಹಂತದಲ್ಲಿರುವ ಸಾಧಕನು ಲಿಂಗಕ್ಕೆ ಹೊರಗಿನ ವಸ್ತುಗಳಾದ ನೀರು, ಹೂವು, ಪತ್ರೆ, ಹಣ್ಣು, ಆಹಾರ ಇತ್ಯಾದಿಗಳನ್ನು ಅರ್ಪಿಸಿ ಪಡುವ ಸುಖವೇ ಬಹಿರ್ಮುಖ ಸುಖ. ಇಷ್ಟನ್ನೂ ಮಾಡದವನು ಬಹಿರ್ಮುಖ ಸುಖವಿರಹಿತ. (೧೨:೩೬೩)

**ಬಹಿರ್ಲಿಂಗ :** ಹೊರಗಡೆ ಇರುವ, ಕಣ್ಣಿಗೆ ಕಾಣುವ ಲಿಂಗ, ಇಷ್ಟಲಿಂಗ. (೪:೧೬೬೫)

**ಬಹುಭಾಷಿಗಳು :** ಆಧ್ಯಾತ್ಮಿಕ ಸಾಧನೆಯಲ್ಲಿ ಗಳಿಸಿದುದಕ್ಕಿಂತ ಹೆಚ್ಚು ಮಾತನಾಡುವವರು, ಡಾಂಭಿಕರು. (೭:೫೦೧)

**ಬಹುಮುಖಿ :** ಯಾವುದೋ ಸ್ವಾರ್ಥ ಉದ್ದೇಶಕ್ಕಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ನಟಿಸುವವರು. (೮:೧೮೧೪)

**ಬಾಯೊಳಗಣ ಬಾಯಿ :** ಸಾಧಾರಣ ಜನರು ತಾವು ಉಂಬ ಬಾಯಲ್ಲಿ ತಾವೇ ಅನುಭವಿಸುವುದಾಗಿ ಭಾವಿಸಿದರೆ, ಅದರೊಳಗೆ ಮತ್ತೊಂದು ಬಾಯಿ ಇದೆ, ಅದು ಪರಶಿವನ ಬಾಯಿ ಎಂಬುದು ಅವರಿಗೆ ಗೊತ್ತಿಲ್ಲ. ಆ ವಿಷಯ ಪ್ರಾಣಲಿಂಗಿಗೆ ಗೊತ್ತಿರುವುದರಿಂದ, ತನ್ನ ಬಾಯಲ್ಲಿರುವ ಬಾಯಲ್ಲಿ ಪರಮಾತ್ಮ ಉಣ್ಣುತ್ತಾನೆ ಎಂದು ಅವನು ತಿಳಿಯುತ್ತಾನೆ. (೯:೫೫೧)

**ಬಾಹ್ಯಕ್ರಿಯಾವರ್ತಕ :** ನಿರ್ಮಲಚಿತ್ತನಾದ ಶರಣನು ಬೇರೆಯವರಂತೆ ಕೆಲವು ಬಾಹ್ಯ ಕ್ರಿಯೆಗಳನ್ನು ಮಾಡಿದರೂ, ಅವನ ಅಂತ:ಕರಣದಲ್ಲಿ ಆ ಕ್ರಿಯೆಗೆ ಸಂಬಂಧಿಸಿದ ಆಸೆ, ಕೋಪ, ಕಾಮ ಮುಂತಾದ ಭಾವಗಳಿರುವುದಿಲ್ಲ. ಅವನು ಕೇಡಿಗರ ಮಧ್ಯೆ ಇದ್ದರೂ, ಅವನು ಕೇಡು ಬಯಸುವುದೂ ಇಲ್ಲ, ಕೇಡು ಮಾಡುವುದೂ ಇಲ್ಲ. (೮:೧೮೧೭)

**ಬಾಹ್ಯಾಂತರದವನು :** ಲಿಂಗಾಂಗ ಸಾಮರಸ್ಯದ ಬಳಿಕ ಐಕ್ಯತೆ ಸಾಧಿಸಿದವನಿಗೆ ತನ್ನಲ್ಲಿ ಪರಶಿವನಿದ್ದಾನೆಂದೂ, ತಾನು ಪರಶಿವನಲ್ಲಿದ್ದೇನೆಂದೂ ಅರಿವಾಗುತ್ತದೆ. ಅಲ್ಲದೆ, ಅವನಿಗೆ ತಾನು ಎಂಬ ವೈಯುಕ್ತಿಕತಾ ಭಾವ ಹೋಗುವುದರಿಂದ ಅವನಿಗೆ ಒಳಗು ಹೊರಗುಗಳ ವ್ಯತ್ಯಾಸ ಇಲ್ಲವಾಗುತ್ತದೆ. ಉಪ್ಪಿನ ಬೊಂಬೆಯನ್ನು ಸಮುದ್ರದಲ್ಲಿ ಮುಳುಗಿಸಿದಾಗ, ಉಪ್ಪು ಎಲ್ಲಿದೆ ಎಂದು ಕೇಳಿದರೆ ಅದು ಬೊಂಬೆಯ ಒಳಗೂ ಹೊರಗೂ ಇದೆ ಎಂದಂತೆ, ಲಿಂಗೈಕ್ಯನಿಗೆ ಚೇತನವು ಒಳಗೂ ಇದ್ದು, ಹೊರಗೂ ಇದ್ದು, ಒಳ ಹೊರಗುಗಳ ವ್ಯತ್ಯಾಸ ಅನಾವಶ್ಯಕವೂ ಅಸಾಧ್ಯವೂ ಆಗುತ್ತದೆ. (೯:೯೧೬)

**ಬಾಹ್ಯಸ್ಥಾನವಾರು :** ದೀಕ್ಷೆ ಮೂಲಕ ಗುರು ಕೊಟ್ಟ ಇಷ್ಟಲಿಂಗವನ್ನು ಭಕ್ತನು ಕಕ್ಷೆ, ಕಂಠ, ಕರಸ್ಥಲ, ಉರಸಜ್ಜೆ, ಉತ್ತಮಾಂಗ, ಅಮಳೋಕ್ಯ ಈ ಆರು ಬಾಹ್ಯಸ್ಥಾನಗಳಲ್ಲಿ ಯಾವುದಾದರೊಂದು ಸ್ಥಾನದಲ್ಲಿ ಧರಿಸಬೇಕು. ಆರಂಭದಲ್ಲಿ ಬಾಹ್ಯಸ್ಥಾನವೊಂದರಲ್ಲಿ ಲಿಂಗಧಾರಣೆ ಆವಶ್ಯಕವಾದರೂ, ಅಷ್ಟೇ ಸಾಕಾಗುವುದಿಲ್ಲ. ತನ್ನ ಇಡೀ ದೇಹದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸುವುದು ಆವಶ್ಯಕ. (೭:೧೨೭೯, ೮೦)

**ಬಿಂದು :** ಶೂನ್ಯಸ್ಥಿತಿ ಮುಗಿದು, ಪರಶಿವನಿಗೆ ಸೃಷ್ಟಿಮಾಡಬೇಕೆನಿಸಿದಾಗ, ಅವನಲ್ಲೇ ಅವಿನಾಭಾವದಿಂದ ಇರುವ ಅವನ ಅಸ್ಪಷ್ಟರೂಪದ ಶಕ್ತಿಯು ಅವನಿಂದ ಪ್ರತ್ಯೇಕವಾಗುತ್ತದೆ. ಈ ಆದಿ ರೂಪದ ಶಕ್ತಿಯೇ ಬಿಂದು.

**ಬಿಂದ್ವಾಕಾಶ :** (ನೋಡಿ : ಆಕಾಶತ್ರಯ)

**ಬೀಜ :** ಮರದ ಕಾರಣ ಎಂಬ ಅರ್ಥದಲ್ಲಿಯೂ ಅಲ್ಲದೆ, ವಚನಕಾರರು ಕರ್ಮ (ಕರ್ಮಫಲಕ್ಕೆ ಕಾರಣ) ಎಂಬರ್ಥದಲ್ಲಿಯೂ ಈ ಪದವನ್ನು ಬಳಸಿದ್ದಾರೆ. "ಸ್ವಪ್ನಕ್ಕೆ ಬೀಜವಿಲ್ಲ", (೩:೪೪೫) ಎಂಬಲ್ಲಿ, ಭಕ್ತನು ಸುಪ್ತಚೇತನದ ಅವಸ್ಥೆಯಲ್ಲಿ ಪ್ರಸಾದದ

ಬಗೆಗೆ ಚಿಂತಿಸುತ್ತಿದ್ದರೆ, ಅಂತಹ ಚಿಂತೆ ಕರ್ಮ ಫಲಕ್ಕೆ ಬೀಜವಾಗುವುದಿಲ್ಲ ಎಂಬರ್ಥವಿದೆ. ಕೆಲವು ವೇಳೆ ಯಾವುದೇ ಕಾರಣ ಬೀಜವೆನಿಸಿಕೊಳ್ಳಬಹುದು. ಉದಾಹರಣೆಗೆ, ಸಕಲಗಂಧಕ್ಕೆ ವಾಯುವೇ ಬೀಜ (೯:೨೦೩) ಎಂಬಲ್ಲಿ ಗಂಧವನ್ನು ಪಸರಿಸಲು ವಾಯುವೇ ಕಾರಣ ಎಂಬರ್ಥವಿದೆ.

**ಬೀಜಾಕ್ಷರ :** ಓಂ ಎಂಬ ಪ್ರಣವದ ಮೂಲಾಕ್ಷರಗಳಾದ ಅ, ಉ, ಮಗಳೇ ಬೀಜಾಕ್ಷರಗಳು. ಕೆಲವು ವೇಳೆ, ಈ ಬೀಜಾಕ್ಷರಗಳಿಂದಲೇ ಶಕ್ತಿಗಳು ಉತ್ಪತ್ತಿಯಾಗುತ್ತದೆ, ಹಾಗೂ, ಆ ಶಕ್ತಿಗಳಿಂದಲೇ ಸಕಲ ಚರಾಚರ ವಸ್ತುಗಳು ಉತ್ಪತ್ತಿಯಾಗುತ್ತವೆ, ಎನ್ನುತ್ತಾರೆ ವಚನಕಾರರು.

**ಬುದ್ಧಿ :** ಇಂದ್ರಿಯಗಳು ವರದಿ ಮಾಡಿದ ರೂಪರಸಗಂಧಾದಿಗಳನ್ನು, ಇದು ಕೆಂಪು, ಇದು ಸಿಹಿ, ಇತ್ಯಾದಿಯಾಗಿ ನಿರ್ಧರಿಸುವ ಒಂದು ಅಂತಃಕರಣ.

**ಬುದ್ಧೀಂದ್ರಿಯ :** ಜ್ಞಾನೇಂದ್ರಿಯ (ಕಣ್ಣು, ಕಿವಿ, ನಾಲಗೆ, ಮೂಗು, ಚರ್ಮ)

**ಬೆಚ್ಚುಬೇರಾಗದ ಭಾವ :** ಭಕ್ತನು ತನ್ನ ದೇಹೇಂದ್ರಿಯಾದಿಗಳೆಲ್ಲವನ್ನೂ ಪರಶಿವನಿಗರ್ಪಿಸಿ, ಅವು ತನ್ನವಲ್ಲ ಶಿವನಿಗೆ ಸೇರಿದವು, ಎಂದು ತಿಳಿದಾಗ ತಾನು ಪರಶಿವನಿಂದ ಪ್ರತ್ಯೇಕವಾದ ವ್ಯಕ್ತಿಯೆಂಬುದನ್ನು ಮರೆಯುತ್ತಾನೆ. ತಾನು ತಾನಲ್ಲ, ತಾನು ಶಿವನ ಆವಾಸಸ್ಥಾನ ಎಂದರಿತ ಶರಣನ ಭಾವವು ಬೆಚ್ಚು ಬೇರಿಲ್ಲದ ಭಾವ (ಬೆರಸಿ ಬೇರಾಗದ ಭಾವ) (೫:೧೮೧)

**ಬೆಳಗು :** ಈ ಪದವನ್ನು ವಚನಕಾರರು ಎರಡು ಅರ್ಥಗಳಲ್ಲಿ ಬಳಸಿದ್ದಾರೆ. ೧. ಬುದ್ಧೀಂದ್ರಿಯಕ್ಕೆ ಕಾಣುವ ಬೆಳಕು. ೨. ಅನುಭಾವಿಗೆ ತುರೀಯಾವಸ್ಥೆಯಲ್ಲಿ ಕಾಣುವ ಬೆಳಗು. ಎರಡನೆ ಅರ್ಥದಲ್ಲಿ ಅದರ ಪರ್ಯಾಯ ಪದಗಳಾದ ಪ್ರಕಾಶ, ಚಿದ್ಬೆಳಗು, ಪರಂಜ್ಯೋತಿ, ಮುಂತಾದ ಪದಗಳು ಪರಶಿವನಿಗೆ ಅನ್ವಯಿಸುತ್ತದೆ.

**ಬೆಳ್ಪಿನ ಸುಖ :** ಅನುಭಾವಿಯು ತುರೀಯಾವಸ್ಥೆಯಲ್ಲಿ ಕಾಣುವ ಅತ್ಯಂತ ಪ್ರಕಾಶಮಾನವಾದ ಇಂದ್ರಿಯಾತೀತ ಬೆಳಕೇ ಬೆಳ್ಪು. ಅದನ್ನು ಕಾಣುವಾಗ ಅವನಿಗೆ ಆನಂದವೂ ಆಗುತ್ತದೆ. (೪:೬೦೬)

**ಬೆಳ್ಪಿನ ಹದಿನಾರೆಸಳ ಪೀಠ :** ಕಂಠಸ್ಥಾನದಲ್ಲಿರುವ ಹದಿನಾರು ದಳಗಳನ್ನುಳ್ಳ ವಿಶುದ್ಧಿ ಚಕ್ರ. ಇದೂ ಸಹ ತುರೀಯಾವಸ್ಥೆಯಲ್ಲಿನ ಅನುಭಾವಿಗೆ ಗೋಚರಿಸುತ್ತದೆಯೇ ಹೊರತು ಇತರರಿಗಲ್ಲ. (೪:೬೦೬)

**ಬೋಳು :** ತಲೆ ಬೋಳಿಸಿಕೊಳ್ಳುವುದು. ಇದು ಸನ್ಯಾಸಿಯ ಲಕ್ಷಣಗಳಲ್ಲೊಂದು. ಆದರೆ ನಿಜವಾದ ಶರಣ ಈ ಬಾಹ್ಯ ಲಕ್ಷಣಗಳಿಗೆ ಗಮನಕೊಡದೆ ಮನಸ್ಸಿನಲ್ಲಿರುವ ದುರಾಸೆಗಳನ್ನೂ, ಇತರ ದುರ್ಗುಣಗಳನ್ನೂ ಬೋಳಿಸಿಕೊಳ್ಳುವ ಕಡೆಗೆ ಗಮನಕೊಡುತ್ತಾನೆ.

**ಬ್ರಹ್ಮ :** ವಚನಕಾರರು ಇದನ್ನು ಎರಡು ಅರ್ಥಗಳಲ್ಲಿ ಬಳಸಿದ್ದಾರೆ. ಒಂದರ್ಥದಲ್ಲಿ ಬ್ರಹ್ಮ ಎಂದರೆ ಪರಬ್ರಹ್ಮ. ಪರಶಿವ, ಪರವಸ್ತು, ಶೂನ್ಯ, ಈ ಪದಗಳು "ಬ್ರಹ್ಮ"ದ ಪರ್ಯಾಯ ಪದಗಳು. ಈ ಅರ್ಥದಲ್ಲಿ ಬ್ರಹ್ಮನಿಗಿಂತ ಅಧಿಕವಿಲ್ಲ. ಮತ್ತೊಂದರ್ಥದಲ್ಲಿ, ಬ್ರಹ್ಮನು ವಿಷ್ಣು ಮತ್ತು ರುದ್ರರ ಸಮಾನ. ಅವನ ಕೆಲಸ ಕೇವಲ ಕ್ರಿಯಾಶಕ್ತಿಯ ಮೂಲಕ ಚರಾಚರವಸ್ತುಗಳನ್ನು ಸೃಷ್ಟಿಸುವುದು. ಈ ಅರ್ಥದಲ್ಲಿ ಬ್ರಹ್ಮನು ಪರಶಿವನಿಗೆ ಅಧೀನ. ಸಂಸ್ಕೃತ ದಾರ್ಶನಿಕ ಸಾಹಿತ್ಯದಲ್ಲಿ ಮೊದಲನೆಯದನ್ನು ಸೂಚಿಸಲು "ಬ್ರಹ್ಮನ್" ಎಂಬ ಪದವನ್ನೂ, ಎರಡನೆಯದನ್ನು ಸೂಚಿಸಲು "ಬ್ರಹ್ಮಾ" ಎಂಬ ಪದವನ್ನೂ ಬಳಸಲಾಗುತ್ತದೆ. ವಚನಕಾರರಿಗೆ ಈ ವ್ಯತ್ಯಾಸ ಗೊತ್ತಿದ್ದರೂ, ಎರಡನ್ನೂ ಸೂಚಿಸಲು ಬ್ರಹ್ಮ ಎಂಬ ಒಂದೇ ಪದವನ್ನು ಬಳಸುವುದು ಅಸಾಧು.

**ಬ್ರಹ್ಮಚಕ್ರ :** ಬ್ರಹ್ಮರಂಧ್ರ.

**ಬ್ರಹ್ಮಚಾರಿ :** ೧. ಬ್ರಹ್ಮ(ಪರಶಿವ)ನಲ್ಲೇ ಚರಿಸುತ್ತಿರುವವನು. ಬಸವಣ್ಣನವರ ಪ್ರಕಾರ, ಶರಣ ಹೇಗಿರಬೇಕೆಂದರೆ, ಅವನ ಪ್ರತಿಯೊಂದು ಕ್ರಿಯೆಯೂ, ಆಲೋಚನೆಯೂ, ಮಾತೂ, ಪರಶಿವನನ್ನು ಕುರಿತದ್ದಾಗಿರಬೇಕು. 'ಶ್ರೋತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು .... ಇಂತೀ ಪಂಚೇಂದ್ರಿಯಗಳಲ್ಲಿ ಬ್ರಹ್ಮಚಾರಿಯಾಗಿ' (೧:೧೩೭೯) ಎಂದು ಅವರು ಹೇಳುವಾಗ, ಪರಶಿವನನ್ನು ಕುರಿತು ಆಗೊಮ್ಮೆ ಈಗೊಮ್ಮೆ ಧ್ಯಾನಿಸಿದರೆ ಯಾರೂ ಶರಣನಾಗುವುದಿಲ್ಲ. ನಿಜವಾದ ಶರಣ (ಬ್ರಹ್ಮಚಾರಿ) ಕೇಳುವುದೆಲ್ಲವೂ ಶಿವಮಂತ್ರವೇ, ನೋಡುವುದೆಲ್ಲವೂ ಶಿವಸ್ವರೂಪವೇ, ಇತ್ಯಾದಿ.

**ಬ್ರಹ್ಮಜ್ಞಾನ :** ಬ್ರಹ್ಮಜ್ಞಾನವೆಂದರೆ ಜ್ಞಾತೃವೊಬ್ಬನು ಜ್ಞೇಯವಸ್ತುವೊಂದನ್ನು ತಿಳಿಯುವುದಲ್ಲ, ಸಾಧಾರಣ ಜ್ಞಾನದಲ್ಲಿ ಜ್ಞಾತೃ ಜ್ಞೇಯಗಳ ದ್ವೈತವಿದ್ದರೆ, ಬ್ರಹ್ಮಜ್ಞಾನದಲ್ಲಿ ಜ್ಞಾತೃ ಜ್ಞೇಯಗಳ ಅದ್ವೈತವಿರುತ್ತದೆ.

**ಬ್ರಹ್ಮನ್ :** ಉಪನಿಷತ್ತು ಮತ್ತು ವೇದಾಂತಗಳಲ್ಲಿ ಬಳಸಲಾಗುವ ಈ ಪದವು ಪರವಸ್ತು ಅಥವಾ ಪರಶಿವನನ್ನು ಸೂಚಿಸುತ್ತದೆ.

**ಬ್ರಹ್ಮನ ಉತ್ಪತ್ಯವ ಕಳೆಯುವುದು :** ಇದೊಂದು ಸಾಂಕೇತಿಕ ಪಾರಿಭಾಷಿಕ ಪದ. 'ಬ್ರಹ್ಮನ ಉತ್ಪತ್ಯವ ಕಳೆದುದಲ್ಲದೆ ಲಿಂಗಕ್ಕೆ ಮಜ್ಜನವೆರೆಯಲಾಗದು' ಎಂಬ ಪೂರ್ಣ ವಾಕ್ಯವನ್ನು ತೆಗೆದುಕೊಂಡರೆ, ಅದರ ಅರ್ಥ ಸ್ವಲ್ಪ ಸ್ಪಷ್ಟವಾಗುತ್ತದೆ. ಬ್ರಹ್ಮನು ಸೃಷ್ಟಿಕರ್ತನೆಂಬುದನ್ನೂ, ಇಷ್ಟಲಿಂಗವು ಕಲ್ಲುಕುಟಿಗನ ಸೃಷ್ಟಿಯೆಂಬುದನ್ನೂ ಇಲ್ಲಿ ನಾವು ಹೊಂದಿಸಬೇಕು. ಅಂದರೆ ಇಷ್ಟಲಿಂಗ ಮತ್ತು ಲಿಂಗಗಳಿಗಿರುವ ವ್ಯತ್ಯಾಸವನ್ನು ಮರೆತು ಲಿಂಗವೂ ಸೃಷ್ಟಿಗೊಳಗಾಗಿದೆ ಎಂಬ ಭ್ರಮೆಯನ್ನು ಮರೆಯದೆ ಇದ್ದರೆ, ಲಿಂಗಕ್ಕೆ ಮಜ್ಜನ ಮಾಡಿಸಬಾರದು. ಅಂದರೆ, ಇಷ್ಟಲಿಂಗವು ಲಿಂಗದ ಸಂಕೇತ ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ನಾವು ಲಿಂಗಪೂಜೆಯನ್ನು ಪ್ರಾರಂಭಿಸಬೇಕು. (೮:೧೯೬೫)

**ಬ್ರಹ್ಮನ ಉತ್ಪತ್ತ್ಯವ ಕೆಡಿಸುವುದು :** ಈಗಾಗಲೆ ಸೃಷ್ಟಿಗೆ ಸ್ಥಿತಿ ಮತ್ತು ಲಯಗಳಿಗೆ ಒಳಗಾಗಿರುವ ಆತ್ಮವನ್ನು ಮತ್ತೆ ಸೃಷ್ಟಿಗೆ ಒಳಗಾಗದಂತೆ ಮಾಡುವುದು, ಅಂದರೆ, ಮೋಕ್ಷವನ್ನು ಪಡೆಯುವುದು. (೭:೧೧೦೭)

**ಬ್ರಹ್ಮನ ಕಲ್ಪಿತ :** ಬ್ರಹ್ಮನ ಸೃಷ್ಟಿಗೆ ಮತ್ತೆ ಒಳಗಾಗದಿದ್ದರೆ, ಗುರು ಲಿಂಗ ಕೊಟ್ಟಿದುದಕ್ಕೆ ಸಾರ್ಥಕ. ಆದರೆ ಸಾಧಕನು ಅನೇಕ ರೀತಿಯ ಕರ್ಮಗಳನ್ನು ಮಾಡಿ, ಮತ್ತೆ ಬ್ರಹ್ಮನ ಸೃಷ್ಟಿಗೆ ಒಳಗಾದರೆ (ಬ್ರಹ್ಮನ ಕಲ್ಪಿತವ ಕಳೆಯದಿದ್ದರೆ) ಗುರು ಲಿಂಗ ಕೊಟ್ಟುದು ವ್ಯರ್ಥ. (೮:೧೯೬೬)

**ಬ್ರಹ್ಮನ ಪಾಶಕ್ಕೊಳಗಾಗುವುದು :** ಬ್ರಹ್ಮನೆಂದರೆ ಸೃಷ್ಟಿಕರ್ತ. ಇನ್ನೊಂದರ್ಥದಲ್ಲಿ ಕ್ರಿಯಾಶಕ್ತಿಯ ಅಧಿದೇವತೆ. ಕರ್ಮ ಮಾಡಿದವನು ಅನೇಕ ಜನ್ಮಾಂತರಗಳಲ್ಲಿ ಹುಟ್ಟುವುದೂ ಅಲ್ಲದೆ, ಪ್ರಳಯದನಂತರ ಮತ್ತೆ ಸೃಷ್ಟಿಯಾದಾಗಲೂ ಅವನು ತನ್ನ ಹಿಂದಿನ ಕರ್ಮಕ್ಕನುಸಾರವಾಗಿಯೇ ಹುಟ್ಟುತ್ತಾನೆ. ಹೀಗೆ ಪ್ರತಿಯೊಬ್ಬ ಕರ್ಮಿಯೂ ಬ್ರಹ್ಮನ ಹಂಗಿಗೆ (ಪಾಶಕ್ಕೆ) ಒಳಗಾದವನೇ. ಪ್ರತಿಯೊಬ್ಬನಲ್ಲಿಯೂ ಕ್ರಿಯಾಶಕ್ತಿಯ ಅಂಶವಿರುವುದರಿಂದ, ಕ್ರಿಯಾಶಕ್ತಿಯ ದುಷ್ಟ ಪ್ರಭಾವಕ್ಕೊಳಗಾದವರೆಲ್ಲರೂ ಬ್ರಹ್ಮನ ಪಾಶಕ್ಕೆ ಒಳಗಾದಂತೆಯೇ. ಎಲ್ಲಿಯವರೆಗೆ ಭಕ್ತರು ಗುರುಪೂಜಕರಾಗಿದ್ದೂ, ಬ್ರಹ್ಮಪಾಶಕ್ಕೆ ಒಳಗಾಗಿರುತ್ತಾರೋ ಅಲ್ಲಿಯವರೆಗೂ ಅವರು ಜ್ಞಾನಿಗಳಾಗಲು ಸಾಧ್ಯವಿಲ್ಲ.

**ಬ್ರಹ್ಮನ ಭಜನೆ ಹರಿಯುವುದು :** ಬ್ರಹ್ಮನು ಪರಶಿವನ ಆಜ್ಞೆಯ ಮೇರೆಗೆ ಸೃಷ್ಟಿಮಾಡುತ್ತಾನೆ. ಈ ಸೃಷ್ಟಿಯಿಂದಾಗಿ ನಾವು ಪರಶಿವನಿಂದ ಬೇರೆಯಾದೆವು (ಭಜನೆ) ಎಂದು ತಿಳೆಯುತ್ತೇವೆ. ಆದರೆ ಮುಕ್ತರಾದಾಗ ಬ್ರಹ್ಮನ ಭಜನೆಗೆ (ವಿಭಜನೆಗೆ, ಸೃಷ್ಟಿಗೆ) ನಾವು ಸಿಕ್ಕುವುದಿಲ್ಲ. (೭:೧೩೦೮)

**ಬ್ರಹ್ಮನಾಡಿ :** ಮಾನವದೇಹದಲ್ಲಿ ೭೨,೦೦೦ ನಾಡಿಗಳಿವೆ. ಅವುಗಳಲ್ಲಿ ೩೨ ನಾಡಿಗಳು ಮುಖ್ಯ. ಅವುಗಳಲ್ಲಿ ೧೪ ಮುಖ್ಯ. ಆ ಹದಿನಾಲ್ಕರಲ್ಲಿ ಮೂರು ಮುಖ್ಯ. ಆ ಮೂರರಲ್ಲಿ ಒಂದು ಮುಖ್ಯ. ಅದೇ ಬ್ರಹ್ಮನಾಡಿ. ಅದೊಂದೇ ನಾಡಿ ಬಳ್ಳಿಯಂತಿದ್ದು, ಅದಕ್ಕೆ ಆಧಾರ ಚಕ್ರವೇ ಬೇರು, ಬ್ರಹ್ಮರಂಧ್ರವೇ ತುದಿ; ಅಲ್ಲದೆ, ಅದು, ಕೈ, ಕಾಲು, ಸೊಂಟ ಮುಂತಾದ ಪ್ರದೇಶಗಳನ್ನೆಲ್ಲಾ ವ್ಯಾಪಿಸಿಕೊಂಡಿದೆ. ಅದಿಲ್ಲದ ಸ್ಥಾನಗಳೇ ಮಾನವ ದೇಹದಲ್ಲಿಲ್ಲ ಎಂಬಂತೆ ಅದು ಎಲ್ಲ ಸ್ಥಾನಗಳನ್ನೂ ವ್ಯಾಪಿಸಿಕೊಂಡಿದೆ. (೧೩:೧೫೭೬-೭೯)

**ಬ್ರಹ್ಮಪದವಿ :** ಬ್ರಹ್ಮನ ಸ್ಥಾನ. ಬ್ರಹ್ಮನು ಸೃಷ್ಟಿ ಮಾಡುತ್ತಿದ್ದರೂ, ಯಾವ ಬಂಧನಕ್ಕೂ ಒಳಗಾಗದೆ ಯಾವಾಗಲೂ ಆನಂದದಿಂದ ಇರುವನು. ಆದರೆ ಅವನು ಪರಶಿವನ ಅಧೀನ,

ಸ್ವತಂತ್ರನಲ್ಲ. ಬ್ರಹ್ಮ ಪದವಿಯು ಲಿಂಗಾಂಗ ಸಾಮರಸ್ಯಕ್ಕಿಂತ ಹೆಚ್ಚಿನದಲ್ಲವೆಂಬ ಕಾರಣದಿಂದ ಶರಣರು ಬ್ರಹ್ಮ ಪದವಿಯನೊಲ್ಲೆ ಎನ್ನುತ್ತಾರೆ.

**ಬ್ರಹ್ಮಮೂರ್ತಿ ಗುರುವಾಗುವುದು :** ಗುರುವಾದವನು ಅನುಭಾವಿಯಾಗಿರಬೇಕು, ಅಂದರೆ ಸರ್ವಸಂಗ ಪರಿತ್ಯಾಗಿಯಾಗಿರಬೇಕು. ಅದಲ್ಲದೆ, ಭಕ್ತರಾಗಬಯಸಿ ಬಂದವರಿಗೆ ಇಷ್ಟಲಿಂಗವನ್ನು ಕೊಟ್ಟು, ಪ್ರತಿಯಾಗಿ ದ್ರವ್ಯವನ್ನು ಕೇಳಿದರೆ, ಅವನಿನ್ನೂ ಕರ್ಮದಿಂದ ಮುಕ್ತನಾಗಿಲ್ಲ ಹಾಗೂ ಬ್ರಹ್ಮ ಮತ್ತೊಮ್ಮೆ ಸೃಷ್ಟಿ ಮಾಡಿದಾಗ ಅವನೂ ಹುಟ್ಟುತ್ತಾನೆ, ಎಂದರ್ಥ. (೮:೧೭೬೭)

**ಬ್ರಹ್ಮರಂಧ್ರ :** ನೆತ್ತಿಯ ಹತ್ತಿರದ ಮೆದುಳಿನಲ್ಲಿರುವ ಬ್ರಹ್ಮರಂಧ್ರದಲ್ಲಿ ಅಮೃತ ಒಸರುತ್ತದೆ, ಎಂಬುದು ಶಾಕ್ತ ಹಾಗೂ ವಚನಕಾರರ ನಂಬಿಕೆ. ಲಿಂಗೈಕ್ಯನಾದವನು ತುರೀಯ ಸ್ಥಿತಿಯಲ್ಲಿರುವಾಗ ಪಡುವ ಆನಂದವು ಈ ಅಮೃತ ಒಸರುವುದಿಂದಾಗಿಯೇ.

**ಬ್ರಹ್ಮರೂಪು :** ರೂಪವಿಲ್ಲದ ಲಿಂಗಕ್ಕೆ ನಾಲ್ಕು ಮುಖವುಳ್ಳ ಬ್ರಹ್ಮನ ರೂಪಿದೆ ಎಂದು ಆರೋಪಿಸುವುದು. (೯:೧೪೩) ವಚನಕಾರರಿಗೆ ಇದು ಅಗ್ರಾಹ್ಯ.

**ಬ್ರಹ್ಮಾಂಡ :** ಜಗತ್ತು.

**ಬ್ರಹ್ಮಾಂಡ ಪಿಂಡ :** ಬ್ರಹ್ಮಾಂಡದಲ್ಲಿರುವ ಎಲ್ಲ ತತ್ವಗಳು ಮಾನವ ದೇಹದಲ್ಲಿಯೂ ಇರುವುದರಿಂದ, ಮಾನವ ದೇಹವನ್ನು ಪಿಂಡಾಂಡವೆಂದು ಕರೆಯಲಾಗುತ್ತದೆ. ಬ್ರಹ್ಮಾಂಡ ಪಿಂಡವು ಪಿಂಡಾಂಡದ ಪರ್ಯಾಯ ಪದ. ಬ್ರಹ್ಮಾಂಡದಂತೆ ಬ್ರಹ್ಮಾಂಡ ಪಿಂಡವೂ ಅನೇಕ ಸಾರಿ ಸೃಷ್ಟಿ ಸ್ಥಿತಿ ಲಯಗಳಿಗೆ ಒಳಗಾಗಿದೆ. (೭:೧೧೧೧)

**ಬ್ರಹ್ಮಾನುಭವ :** ಶಿವಾನುಭವ. (೭:೪೧೩)

**ಭಂಗಿತವ ಮಾಡುವ ಇಂದ್ರಿಯ ಕರಣಂಗಳು :** ನಾವು ಒಂದು ಕಲ್ಲನ್ನು ಅರಿಯಬೇಕಾದರೆ ಅದು ಮತ್ತೊಂದು ಕಲ್ಲಿನಿಂದ, ನದಿಯಿಂದ, ಗಿಡಮರಗಳಿಂದ, ಮನೆ, ಮನುಷ್ಯ ಇತ್ಯಾದಿಗಳಿಂದ ಭಿನ್ನವೆಂದು ತಿಳಿಯುತ್ತೇವೆ. ಹಾಗಲ್ಲದೆ, ನಮಗೆ ಯಾವ ವಸ್ತುವಿನ ಜ್ಞಾನವೂ ಉಂಟಾಗಲಾರದು. ಅಲ್ಲದೆ, ಇಂದ್ರಿಯ ಮತ್ತು ಅಂತಃಕರಣಗಳು ನಮಗೆ ಪ್ರತ್ಯೇಕತಾಜ್ಞಾನವನ್ನಲ್ಲದೆ ಬೇರೆ ರೀತಿಯ ಜ್ಞಾನವನ್ನು ಕೊಡಲಾರವು. ಆದರೆ ಆತ್ಮವು ಇಂದ್ರಿಯ ಮತ್ತು ಅಂತಃಕರಣಗಳ ಸಂಪರ್ಕ ಕಡಿದುಕೊಂಡರೆ, ಅಂದರೆ, ಅನುಭಾವದಲ್ಲಿರುವಂತೆ, ಅದೊಂದೇ ಉಳಿದರೆ, ಅದಕ್ಕೆ ಹೀಗೆ ಭಂಗಿತ ಮಾಡುವುದು ಇಲ್ಲವಾಗಿ, ಐಕ್ಯ ಮಾಡುವುದು ಬರುತ್ತದೆ. ಆಗ ಅನುಭಾವಿಯು ವಿವಿಧ ವಸ್ತುಗಳಲ್ಲಿ ಏಕತೆಯನ್ನು ಕಾಣುತ್ತಾನೆ. (೮:೧೭೫೪)

**ಭಕ್ತ :** ವಚನಗಳಲ್ಲಿ ಈ ಪದಕ್ಕೆ ಎರಡು ಅರ್ಥಗಳಿವೆ. ೧. ಲಿಂಗದೀಕ್ಷೆ ಪಡೆದವರೆಲ್ಲರೂ ಭಕ್ತರು ಎಂಬ ಅರ್ಥದಲ್ಲಿ ಸ್ಥಲಭೇದವಿಲ್ಲ. ಪ್ರಸಾದಿಯೂ ಭಕ್ತನೇ, ಐಕ್ಯನೂ ಭಕ್ತನೇ. ೨. ಸ್ಥಲವನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ಮೊದಲನೆ ಸ್ಥಲದಲ್ಲಿರುವವನು ಮಾತ್ರ ಭಕ್ತ, ಮೇಲಿನ ಸ್ಥಲದವರಲ್ಲ.

**ಭಕ್ತಂಗೆ ಪೃಥ್ವಿಯಂಗ :** ವಚನಗಳ ಪ್ರಕಾರ ಮಾನವನ ಬೆನ್ನು ಹುರಿಯಲ್ಲಿ, ಕುತ್ತಿಗೆಯಲ್ಲಿ, ಭ್ರೂಮಧ್ಯದಲ್ಲಿ, ಮತ್ತು ನೆತ್ತಿಯಲ್ಲಿ ಪರಶಿವ ನೆಲೆಸುತ್ತಾನೆ. ಎಲ್ಲಕ್ಕಿಂತ ಕೆಳಗೆ, ಅಂದರೆ ಮೂಲಾಧಾರದಲ್ಲಿರುವ ಶಿವನಿಗೆ ಆಚಾರಲಿಂಗವೆಂದು ಹೆಸರು. ಶಿವನು ಚಿತ್‌ಸ್ವರೂಪನಾದುದರಿಂದ, ಅವನು ನೆಲೆಸಲು ಅಥವಾ ವ್ಯಕ್ತವಾಗಲು ಒಂದು ಮಾಧ್ಯಮ ಬೇಕು. ಕ್ರಿಯಾಶಕ್ತಿಯೇ ಆ ಮಾಧ್ಯಮ. ಕ್ರಿಯಾಶಕ್ತಿ ಪೃಥ್ವೀ ಭೂತದ ಮತ್ತೊಂದು ಹೆಸರು. ಅಂದರೆ ಆಚಾರಲಿಂಗವು ಕ್ರಿಯಾಶಕ್ತಿಯಲ್ಲಿ ನೆಲೆಸಿರುತ್ತದೆ ಹಾಗೂ ಅದರ ಅಧಿದೇವತೆ.

ಆಚಾರ ಲಿಂಗವನ್ನು ಸಾಧಿಸುವ ಸಾಧಕನಿಗೆ ಭಕ್ತನೆಂದು ಹೆಸರು. ಆಚಾರಲಿಂಗವು ನಮ್ಮಲ್ಲಿಯೇ ಇದ್ದರೂ ನಮಗೆ ವ್ಯಕ್ತವಾಗದು. ಅದನ್ನು ಸಾಧಿಸಲು ಭಕ್ತನು ಕ್ರಿಯಾಶಕ್ತಿಯ ದುಷ್ಪರಿಣಾಮಗಳನ್ನು ಕಡಿಮೆ ಮಾಡಿ, ಅದನ್ನು ಶುದ್ಧ ಮಾಡಬೇಕಾಗುತ್ತದೆ. ಶುದ್ಧವಾದ ಕ್ರಿಯಾಶಕ್ತಿಯೇ ಶ್ರದ್ಧಾ ಭಕ್ತಿ.

ಇಲ್ಲಿ ಕ್ರಿಯಾಶಕ್ತಿಯನ್ನು ಶುದ್ಧೀಕರಿಸುವುದು ಹೇಗೆ ಎಂಬ ಪ್ರಶ್ನೆ ಏಳುತ್ತದೆ. ಹಸಿವು, ನೀರಡಿಕೆ, ಶೋಕ, ಮೋಹ, ಮುಪ್ಪು ಮತ್ತು ಮರಣ ಎಂಬ ಷಡೂರ್ಮಿಗಳು ಪೃಥ್ವಿ ತತ್ವದ ದುಷ್ಪರಿಣಾಗಳು. ಅಂಗದಾಪ್ಯಾಯನದ ಬದಲು ಲಿಂಗದಾಪ್ಯಾಯನವ ಬೆಳಿಸಿಕೊಂಡರೆ, ಹಸಿವು ಇಲ್ಲವಾಗುತ್ತದೆ. ಹೀಗೆ ಉಳಿದ ಐದನ್ನೂ ಗೆಲ್ಲಲು ವಚನಕಾರರು ವಿವಿಧ ಉಪಾಯಗಳನ್ನು ಸೂಚಿಸಿದ್ದಾರೆ.

ಹಾಗೆಯೇ ಕ್ರಿಯಾಶಕ್ತಿಯಿಂದ ಉತ್ಪತ್ತಿಯಾದ ಕರ್ಮೇಂದ್ರಿಯಗಳನ್ನು ಆಧ್ಯಾತ್ಮಿಕ ಕಾರ್ಯಗಳಿಗೆ ಉಪಯೋಗಿಸಿದರೆ, ಆಗಲೂ ಕ್ರಿಯಾಶಕ್ತಿ ಶುದ್ಧವಾದಂತೆಯೇ. ಅದೇ ರೀತಿ ಓಂ ನಮಃ ಶಿವಾಯ ಎಂದು ಪದೇ ಪದೇ ಮಂತ್ರವನ್ನುಚ್ಚರಿಸುವ ಮೂಲಕ ವಾಗಿಂದ್ರಿಯವನ್ನು ಶುದ್ಧಗೊಳಸಬಹುದು. ಪರಶಿವನಿಗೆ ಹೇಗೆ ಇಡೀ ವಿಶ್ವವೇ ಒಂದು ಅಂಗವೋ ಹಾಗೆ, ಭಕ್ತನಿಗೆ ಪೃಥ್ವಿ ತತ್ವವು ಅಂಗವಾಗುತ್ತದೆ. (೮:೧೪೬೯)

**ಭಕ್ತದೇಹಿಕದೇವ :** ತನ್ನ ದೇಹೇಂದ್ರಿಯಾದಿಗಳನ್ನೆಲ್ಲ ಪರಶಿವನಿಗರ್ಪಿಸಿ, ನಾನು ನೋಡುವುದು, ಮಾಡುವುದು, ಎಲ್ಲದೂ ಪರಶಿವನಿಗಾಗಿ, ನನ್ನ ದೇಹದ ಮೂಲಕವೇ ಪರಶಿವ ಆನಂದಿಸುತ್ತಾನೆ ಎಂದು ತಿಳಿದ ಶರಣನ ಪ್ರಕಾರ, ಸದ್ಭಕ್ತರ ದೇಹವನ್ನು ಪರಶಿವನು ಆಕ್ರಮಿಸಿಕೊಂಡಿರುತ್ತಾನೆ. ಅಥವಾ ಶಿವನು ಭಕ್ತದೇಹಿಕ. (೧:೧೪೫, ೧:೩೯೬)

**ಭಕ್ತಕಾಯ ಮಮಕಾಯ :** ಲಿಂಗಾಂಗ ಸಾಮರಸ್ಯವನ್ನು ಸಾಧಿಸಿದ ಅನುಭಾವಿಗೆ, ತನ್ನ ದೇಹ ತನ್ನದಲ್ಲವೆಂದೂ, ಅದು ಶಿವನದೆಂದೂ ಅರಿವಾಗುತ್ತದೆ. ಅವನ ಪ್ರಕಾರ, ಪರಶಿವನು ಭಕ್ತನ ಕಾಯವು ನನ್ನ ಕಾಯ (ಭಕ್ತ ಕಾಯ ಮಮಕಾಯ) ಎನ್ನುತ್ತಾನೆ. ಇದರ ಪರಿಣಾಮವಾಗಿ ತಾನು ರುಚಿಸುವುದು, ನೋಡುವುದು, ಇತ್ಯಾದಿಗಳೆಲ್ಲಾ ಶಿವನಿಗಾಗಿ ಎಂದು ತಿಳಿಯುತ್ತಾನೆ. ಕೆಲವು ವಚನಕಾರರು ಅನುಭಾವಿಯ ಕಾಯವನ್ನು ಪರಶಿವನ ವಾಹನ ಎಂದು ವರ್ಣಿಸುತ್ತಾರೆ.

**ಭಕ್ತರ ಮಠ :** ಭಕ್ತರ ಮನೆ. (೩:೫೪೯)

**ಭಕ್ತವಿರೋಧಿ ಶರಣ :** ಭಕ್ತನು ನಿಷ್ಠೆಯಿಂದ ಲಿಂಗಕ್ಕೆ ಅರ್ಪಿಸಿದ ನಂತರ ಭುಂಜಿಸಿದರೆ, ಶರಣಸ್ಥಲವನ್ನು ತಲುಪಿದವನು (ಶರಣನು) ಏನನ್ನೂ ಕೈಯಿಂದ ಅರ್ಪಿಸುವುದಿಲ್ಲ. ಅವನು ವಸ್ತುಗಳನ್ನು ಅವು ಇದ್ದಲ್ಲಿಯೇ ಮನಸ್ಸಿನಲ್ಲೇ ಅರ್ಪಿಸಿ, ಅವುಗಳನ್ನು ಪ್ರಸಾದವನ್ನಾಗಿ ಮಾಡಿಕೊಳ್ಳುತ್ತಾನೆ. ತನ್ನ ದೇಹೇಂದ್ರಿಯ ಕರಣಾದಿಗಳನ್ನೂ ತನ್ನ ಆತ್ಮವನ್ನೂ ಪರಶಿವನಿಗೆ ಅವನು ಅರ್ಪಿಸಿರುವುದರಿಂದ, ಅರ್ಪಿಸುವ ವಸ್ತುವಾಗಲಿ, ಅರ್ಪಿಸುವ ಆತ್ಮ, ದೇಹವಾಗಲಿ ಅವನಲ್ಲಿ ಉಳಿದಿಲ್ಲ. ಆದುದರಿಂದ ಅವನು ಏನನ್ನೂ ಪರಶಿವನಿಗೆ ಅರ್ಪಿಸದಿದ್ದರೆ, ಭಕ್ತನಿಗೆ ಅದು ಅಧರ್ಮವಾಗಿ ಕಂಡೀತು ಹಾಗೂ ಭಕ್ತನು ಮಾಡುವ ಔಪಚಾರಿಕ ಕ್ರಿಯೆಗಳು- ಅವು ಎಷ್ಟೇ ಶ್ರದ್ಧಾಪೂರ್ವಕವಾಗಿರಲಿ ಶರಣನಿಗೆ ಒಪ್ಪಿಗೆಯಾಗದ ಕ್ರಿಯೆಗಳಾಗಿ ಕಾಣುತ್ತವೆ. ಆದುದರಿಂದ ಶರಣನು ಭಕ್ತವಿರೋಧಿ.

**ಭಕ್ತಸ್ಥಲ :** (ನೋಡಿ : **ಅಂಗಸ್ಥಲ ಲಿಂಗಸ್ಥಲ ಸಂಬಂಧ**)

**ಭಕ್ತಸ್ಥಲ ತ್ರಿವಿಧ :** ಆಧ್ಯಾತ್ಮಿಕ ಪಯಣದ ಮೊದಲಿನಲ್ಲಿ ಭಕ್ತನು ಮೊದಲು ಗುರುಭಕ್ತಿಯನ್ನೂ, ಲಿಂಗಭಕ್ತಿಯನ್ನೂ, ಜಂಗಮ ಭಕ್ತಿಯನ್ನೂ ತೋರಿಸಬೇಕು. ಗುರುವು ದೀಕ್ಷೆ ಕೊಡುವುದರಿಂದ ಗುರುಭಕ್ತಿ, ಲಿಂಗವು ಪರಮಾತ್ಮನ ಕುರುಹಾದುದರಿಂದ ಲಿಂಗಭಕ್ತಿ, ಜಂಗಮ ಸಾಮಾಜಿಕ ಒಳಿತಿಗೂ ಜ್ಞಾನ ಪ್ರಸಾರಕ್ಕೂ ತನ್ನ ಜೀವನವನ್ನೇ ಮುಡಿಪಾಗಿಟ್ಟಿರುವುದರಿಂದ ಜಂಗಮಭಕ್ತಿ ಆವಶ್ಯಕ.

**ಭಕ್ತಿ :** ೧. ಭಕ್ತಿಯೆಂದರೆ ಭಕ್ತನು ಗುರುವಿಗೆ, ಲಿಂಗಕ್ಕೆ ಮತ್ತು ಜಂಗಮಕ್ಕೆ ತೋರಿಸುವ ಪ್ರೀತಿ, ವಿಶ್ವಾಸ, ಮತ್ತು ಗೌರವ. ಗುರುವು ಶಿಷ್ಯನಿಗೆ ಇಷ್ಟಲಿಂಗ ದೀಕ್ಷೆಯನ್ನು ಮಾಡಿ, ವೀರಶೈವ ಧರ್ಮದ ಆಚಾರಗಳನ್ನು ಬೋಧಿಸಿ, ಶಿಷ್ಯನು ಆಧ್ಯಾತ್ಮಿಕ ಪಥದಲ್ಲಿ ಸಾಗುವಾಗ ಅವನಿಗೆ ಮಾರ್ಗದರ್ಶನ ನೀಡುವುದರಿಂದ ಅವನು ಗುರುವಿಗೆ ಕೃತಜ್ಞತೆಯನ್ನು ತೋರಿಸಲೋಸ್ಕರ ಭಕ್ತಿಯನ್ನು ತೋರಿಸಬೇಕು.

ಲಿಂಗವು ಪರಶಿವನ ಪ್ರತೀಕವಾಗಿರುವುದರಿಂದ ಲಿಂಗಕ್ಕೆ ಭಕ್ತಿ ತೋರುವುದೆಂದರೆ ಪರಶಿವನಿಗೆ ಭಕ್ತಿ ತೋರಿಸಿದಂತೆಯೇ. ಪರಶಿವನು ನಮ್ಮನ್ನು ಸೃಷ್ಟಿಸಿ, ನಮ್ಮ

ಅನುಕೂಲಕ್ಕಾಗಿ ವಿಶ್ವವನ್ನು ಸೃಷ್ಟಿಸಿರುವುದರಿಂದ, ನಮ್ಮನ್ನು ಪ್ರಾಣಿಗಳಿಗಿಂತ ಹೆಚ್ಚು ಬುದ್ಧಿವಂತರನ್ನಾಗಿ ಮಾಡಿರುವುದರಿಂದ, ನಾವು ಪರಶಿವನಿಗೆ ಕೃತಜ್ಞತೆ ತೋರಿಸಲೇಬೇಕು. ಪರಶಿವನಿಗೆ ಭಕ್ತಿಯ ಮೂಲಕವಲ್ಲದೆ ಇನ್ನು ಹೇಗೂ ನಾವು ಕೃತಜ್ಞತೆ ತೋರಿಸಲಾರೆವು.

ಜಂಗಮವು ನಮಗೆ ಆಗಾಗ್ಗೆ ವೀರಶೈವ ಧರ್ಮದ ಬಗೆಗೆ ಜ್ಞಾನ ನೀಡುವುದರಿಂದ ಹಾಗೂ ಸಮಾಜೋದ್ಧಾರದಲ್ಲಿ ನಿರತವಾಗಿರುವುದರಿಂದ, ನಾವು ಧರ್ಮಾಚರಣೆಯಲ್ಲಿ ನಡೆದುಕೊಳ್ಳುವಂತೆ ನಮ್ಮನ್ನು ಜಾಗರೂಕತೆಯಿಂದ ಕಾಯುತ್ತಿರುವುದರಿಂದ ನಾವು ಜಂಗಮಕ್ಕೆ ಭಕ್ತಿ ತೋರಿಸಬೇಕು. ಜಂಗಮ ಬಾಗಿಲಿಗೆ ಬಂದಾಗ ಧನದವಸಗಳನ್ನು ಕೊಟ್ಟರೆ ನಮ್ಮ ಕೃತಜ್ಞತೆ ಮುಟ್ಟಿದಂತಾಗಲಿಲ್ಲ. ಅವರು ತಿಳಿಸಿದ ಹಾದಿಯಲ್ಲಿ ನಾವು ಸಾಗಬೇಕು. ಹಾಗೆ ಸಾಗಿದರೆ ನಮಗೆ ಲಿಂಗಾಂಗ ಸಾಮರಸ್ಯವುಂಟು. ಇಂಥ ಧ್ಯೇಯವನ್ನು ಕಲ್ಪಿಸಿಕೊಟ್ಟು, ಅದನ್ನು ಮುಟ್ಟಲು ಮಾರ್ಗದರ್ಶನ ನೀಡುವ ಜಂಗಮಕ್ಕೆ ನಾವು ನಿಷ್ಠಾಪೂರ್ವಕ ಭಕ್ತಿ ತೋರಿಸಲೇಬೇಕು.

೨. ಬೇರೆ ಧರ್ಮಗಳಲ್ಲಿ ಕಾಣದ, ವೀರಶೈವ ಧರ್ಮದಲ್ಲಿ ಮಾತ್ರ ಕಾಣುವ ಮತ್ತೊಂದು ಅಂಶವೇನೆಂದರೆ ವಚನಕಾರರು 'ಭಕ್ತಿ' ಎಂಬ ಪದಕ್ಕೆ ಕೊಟ್ಟಿರುವ ಎರಡನೆ ಅರ್ಥ. ಈ ಅರ್ಥದ ಪ್ರಕಾರ, ಭಕ್ತಿಯು ಭಕ್ತನ ಧೋರಣೆಯಷ್ಟೇ ಅಲ್ಲ, ಅದೂ ಒಂದು ರೀತಿಯ ಶಕ್ತಿ. ಪರಶಿವನು ಸೃಷ್ಟಿಸಬೇಕೆಂದು ನಿರ್ಧರಿಸಿದ ಕೂಡಲೆ, ಅವನಲ್ಲಿ ಅವ್ಯಕ್ತವಾಗಿದ್ದ ಚಿತ್ತು ಎನಿಸಿಕೊಳ್ಳುವ ಶಕ್ತಿ (ನೆನಹು)ಯಲ್ಲಿ ಕ್ಷೋಭೆಯುಂಟಾಗುತ್ತದೆ. ಆಗ ಪರಶಿವನು ಅಂಗಸ್ಥಲ ಮತ್ತು ಲಿಂಗಸ್ಥಲ ಎಂಬ ಎರಡು ಭಾಗವಾಗುತ್ತಾನೆ. ಲಿಂಗಸ್ಥಲವೆಂದರೆ ಸೃಷ್ಟಿಯಲ್ಲಿ ನಿಕತನಾಗುವ ಪರಶಿವ ಮತ್ತು ಅವನ ಕಲಾಶಕ್ತಿ; ಅಂಗಸ್ಥಲವೆಂದರೆ ಸೃಷ್ಟಿಯಾಗಲಿರುವ ಮನುಷ್ಯ ಮತ್ತು ಅವನ ಭಕ್ತಿ ಶಕ್ತಿ. ವಾಸ್ತವವಾಗಿ, ಇಡೀ ವಿಶ್ವವೂ ಮನುಷ್ಯನು ಕಲಾಶಕ್ತಿಯಿಂದಲೇ ಸೃಷ್ಟಿಯಾಗಿದೆ. ಆದರೆ ಮನುಷ್ಯನಲ್ಲಿರುವ ಕಲಾಶಕ್ತಿಗಳು ಪರಿವರ್ತನಶೀಲ. ಅಂದರೆ, ಮನುಷ್ಯನನ್ನು ಬಂಧಿಸುವುದು ಕಲಾಶಕ್ತಿಗಳ ಸ್ವಾಭಾವಿಕ ಗುಣವಾದರೆ, ಅವನನ್ನು ಮುಕ್ತಿ ಪಡೆಯುವಂತೆ ಪ್ರಚೋದಿಸುವುದು ಭಕ್ತಿಶಕ್ತಿಗಳ ಸ್ವಾಭಾವಿಕ ಗುಣ. ಆದರೆ ಕಲಾಶಕ್ತಿಗಳು ಮತ್ತು ಭಕ್ತಿ ಶಕ್ತಿಗಳು ಎಂದು ಎರಡು ರೀತಿಯ ಶಕ್ತಿಗಳಿಲ್ಲ. ಕಲಾಶಕ್ತಿಗಳನ್ನು ಆಧ್ಯಾತ್ಮಿಕವಾಗಿ ಪರಿವರ್ತಿಸಿದರೆ, ಅವೇ ಭಕ್ತಿಶಕ್ತಿಗಳಾಗಿ ಪರಿಣಮಿಸುತ್ತವೆ. ಇವುಗಳ ಸಹಾಯದಿಂದ ಸಾಧಕನು ಆಧ್ಯಾತ್ಮಿಕ ಜೀವನದಲ್ಲಿ ಪ್ರಗತಿಸಾಧಿಸಿ, ಕೊನೆಯಲ್ಲಿ ಲಿಂಗಾಂಗ ಸಾಮರಸ್ಯವನ್ನೂ ಸಾಧಿಸಿಬಹುದು.

ಕಲಾಶಕ್ತಿಗಳು ಚಿತ್‌ಶಕ್ತಿ, ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳೆಂದು ಆರು ಪ್ರಕಾರವಾಗಿದ್ದು, ಅವುಗಳನ್ನು ಪರಿವರ್ತಿಸಿದಾಗ ಅವು ಕ್ರಮವಾಗಿ. ಸಮರಸಭಕ್ತಿ, ಆನಂದ ಭಕ್ತಿ, ಅನುಭಾವ ಭಕ್ತಿ, ಅವಧಾನಭಕ್ತಿ, ನಿಷ್ಠಾ

ಭಕ್ತಿ ಮತ್ತು ಶ್ರದ್ಧಾಭಕ್ತಿಗಳೆಂದು ಎನಿಸಿಕೊಳ್ಳುತ್ತವೆ. ಪರಿವರ್ತನೆ ಮೊದಲು ಸ್ಥೂಲಶಕ್ತಿಯಾದ ಕ್ರಿಯಾಶಕ್ತಿಯಿಂದ ಪ್ರಾರಂಭವಾಗಿ ಚಿತ್‌ಶಕ್ತಿಯ ಪರಿವರ್ತನೆಯಲ್ಲಿ ಕೊನೆಗೊಳ್ಳುವುದು. ಯಾವ ಶಕ್ತಿಯನ್ನು ಯಾವ ಹಂತದಲ್ಲಿ ಹೇಗೆ ಭಕ್ತಿಯನ್ನಾಗಿ ಪರಿವರ್ತಿಸಬೇಕೆಂಬುದಕ್ಕೆ ವಿವರ ಹೀಗಿದೆ :

೧. ಶ್ರದ್ಧಾ ಭಕ್ತಿ : ಆಧ್ಯಾತ್ಮಿಕ ಸಾಧನೆಯ ಪ್ರಥಮ ಹಂತದಲ್ಲಿರುವ ಸಾಧಕನು ಭಕ್ತನೆನಿಸಿಕೊಂಡರೆ, ಅವನು ಪರಶಿವನಿಗೆ ತೋರುವ ಧೋರಣೆಯು ಅಥವಾ ಭಕ್ತಿಯು ಶ್ರದ್ಧಾಭಕ್ತಿ ಎನಿಸಿಕೊಳ್ಳುತ್ತದೆ.

ಶ್ರದ್ಧಾಭಕ್ತಿಯು ಆಚಾರವನ್ನು ಒಳಗೊಳ್ಳುತ್ತದೆ. 'ಆಚಾರವುಳ್ಳವನೇ ಭಕ್ತನು'. ಆದರೆ ಪ್ರಥಮ ಹಂತದ ಈ ಸಾಧಕನಿಗೆ ತಾನೇಕೆ ಈ ಆಚಾರಗಳನ್ನು ಮಾಡಬೇಕೆಂಬುದು ಗೊತ್ತಿಲ್ಲ. ಆದುದರಿಂದ ಅವನು ಗುರು ಹೇಳಿದುದನ್ನು ಪ್ರಶ್ನಿಸದೆ, ಶಂಕಿಸದೆ, ಶ್ರದ್ಧೆಯಿಂದ ಮಾಡುತ್ತಾನೆ. ಆದುದರಿಂದ ಶ್ರದ್ಧೆಯಿಂದ ಮಾಡುವ ಆಚಾರಗಳೇ ಅವನು ಭಕ್ತನೆಂಬುದಕ್ಕೆ ಸಂಕೇತ.

ತನ್ನ ಭಕ್ತಿಯು ಬಹಳ ಶಿಥಿಲವಾದದ್ದೆಂದೂ, ತನ್ನ ಮನಸ್ಸು ಅಸ್ಥಿರವೆಂದೂ ಇದರಿಂದಾಗಿ ತನ್ನ ಮನಸ್ಸು ಲಿಂಗಧ್ಯಾನದಲ್ಲಿ ನಿರತವಾಗಲು ಸಾಧ್ಯವಿಲ್ಲವೆಂದೂ, ತನ್ನ ದೇಹಧರ್ಮಗಳ ಪ್ರೇರಣೆಯಿಂದಾಗಿ ತಾನು ಅನೇಕ ರೀತಿಯ ಮಾನಸಿಕ ತುಮುಲಗಳಿಗೆ ಒಳಗಾಗುವುದೂ ಅಲ್ಲದೆ ಅನೇಕ ದುಷ್ಕರ್ಮಗಳನ್ನು ಮಾಡಬೇಕಾಗಿದೆ ಎಂದೂ ಅವನು ಮರುಗಿದರೆ ಅವನು ಆಧ್ಯಾತ್ಮಿಕವಾಗಿ ಪ್ರಗತಿ ಸಾಧಿಸಲು ಸಾಧ್ಯ. (ಬಸವಣ್ಣನವರ ಭಕ್ತಸ್ಥಲಗಳ ವಚನಗಳನ್ನು ನೋಡಿದರೆ ಅವರಿಗೆ ತಮ್ಮ ದೋಷಗಳ ಅರಿವು ಎಷ್ಟು ಪಶ್ಚಾತ್ತಾಪ ಮತ್ತು ಸಂಕಟಗಳನ್ನುಂಟು ಮಾಡಿದೆ ಎಂಬುದು ವ್ಯಕ್ತವಾಗುತ್ತದೆ).

ಪೃಥ್ವಿ ತತ್ವವು ಕ್ರಿಯಾಶಕ್ತಿಯ ಒಂದು ರೂಪ. ಇದರಿಂದ ರಚಿತವಾದ ಕರ್ಮೇಂದ್ರಿಯಗಳಾಗಿ ನಾವು ಅನೇಕ ರೀತಿಯ ಕರ್ಮಗಳನ್ನು ಮಾಡಬೇಕಾಗುತ್ತದೆ. ಏಕೆಂದರೆ, ಆ ಶಕ್ತಿಯು ಪ್ರಥಮದಲ್ಲಿ ಷಡೂರ್ಮಿಗಳಿಗೆ ಕಾರಣವಾಗಿದೆ. ಹಸಿವು, ನೀರಡಿಕೆ, ಶೋಕ, ಮೋಹ, ಮುಪ್ಪು ಮತ್ತು ಮರಣ ಎಂಬ ಷಡೂರ್ಮಿಗಳು ನಮಗೆ ಆಧ್ಯಾತ್ಮಿಕವಾಗಿ ಅಡ್ಡಿಯಾಗುತ್ತವೆ. ಅವುಗಳನ್ನು ಗೆಲ್ಲಲು ವಚನಕಾರರು ಉಪಾಯಗಳನ್ನು ಸೂಚಿಸಿದ್ದಾರೆ. ಅಂಗದಾಪ್ಯಾಯದ ಬದಲು ಲಿಂಗದಾಪ್ಯಾಯ ಬೆಳೆಸಿಕೊಂಡರೆ ಹಸಿವನ್ನೂ, ಪಾದೋದಕ ಕುಡಿಯುವ ಮೂಲಕ ನೀರಡಿಕೆಯನ್ನೂ ಲಿಂಗವನ್ನು ಆನಂದಾಶ್ರುಗಳು ಬೀಳುವವರೆಗೂ ಪೂಜಿಸಿ, ಏಕಾಗ್ರತೆಯಿಂದ ನೋಡಿದರೆ ಶೋಕವನ್ನೂ, ಬಂಧು ಮೋಹಿಯಾಗುವ ಬದಲು ಲಿಂಗಮೋಹಿಯಾದರೆ, ಮೋಹವನ್ನೂ, ತನ್ನ

ಕರಣಗಳೆಲ್ಲವೂ ಲಿಂಗದ ಕರಣಗಳೆಂದು ತಿಳಿದರೆ ಮುಪ್ಪನ್ನೂ ಲಿಂಗದಲ್ಲಿ ಐಕ್ಯವಾಗುವ ಮೂಲಕ ಮರಣವನ್ನೂ, ಗೆಲ್ಲಬಹುದು. ಅಲ್ಲದೇ, ತನ್ನ ಕರ್ಮೇಂದ್ರಿಯಗಳನ್ನು ಲಿಂಗಕ್ಕೆ ಸಂಬಂಧಿಸಿದ ಕಾರ್ಯಗಳಿಗೆ ಮಾತ್ರ ಬಳಸುವ ಮೂಲಕ ಕ್ರಿಯಾಶಕ್ತಿಯನ್ನು ಶ್ರದ್ಧಾಭಕ್ತಿಯನ್ನಾಗಿ ಪರಿವರ್ತಿಸಬಹುದು.

೨. ನಿಷ್ಠಾ (ನೈಷ್ಠಿಕೀ) ಭಕ್ತಿ : ಆಧ್ಯಾತ್ಮಿಕ ಸಾಧನೆಯ ಎರಡನೆ ಹಂತದ ಸಾಧಕನಿಗೆ ಮಹೇಶ ಅಥವಾ ಮಾಹೇಶ್ವರನೆಂಬ ಹೆಸರಿದ್ದರೆ, ಅವನ ಭಕ್ತಿಗೆ ನಿಷ್ಠಾಭಕ್ತಿಯೆಂದು ಹೆಸರು.

ಶ್ರದ್ಧಾ ಭಕ್ತಿಗೆ ಜ್ಞಾನದ ಆಧಾರವಿಲ್ಲ. ಭಕ್ತನು ಹೆಚ್ಚಾಗಿ ಗುರು ಬೋಧಿಸಿದುದನ್ನೇ ಶ್ರದ್ಧೆಯಿಂದ ಪಾಲಿಸುತ್ತಾನೆ. ಆದುದರಿಂದ ಅದು ಬಹಳ ಶಿಥಿಲವಾದುದು. ಅದನ್ನು ಯಾವ ಸಣ್ಣ ಪ್ರಚೋದನೆಯೂ ಕೆಡಿಸಬಹುದು. ಆದುದರಿಂದ ಅಂಥ ಪ್ರಚೋದನೆಗೆ ಒಳಗಾಗದಂತೆ ಭಕ್ತನು ಎಚ್ಚರದಿಂದಿರಬೇಕಲ್ಲದೆ, ತನ್ನ ಶ್ರದ್ಧೆಯನ್ನು ನಿಷ್ಠೆಯನ್ನಾಗಿ ಬೆಳೆಸಿಕೊಳ್ಳಬೇಕು. ಆಗ ಅವನು ಮಹೇಶನೆನಿಸಿಕೊಳ್ಳುತ್ತಾನೆ. ಮಹೇಶ ಎಂಬ ಪದಕ್ಕೆ ನಿಯಂತ್ರಕ ಎಂಬ ಅರ್ಥವಿದ್ದು, ಮಹೇಶ ಸ್ಥಲದಲ್ಲಿರುವ ಸಾಧಕನು ತನ್ನ ಇಂದ್ರಿಯಗಳನ್ನು ನಿಗ್ರಹಿಸುತ್ತಾನೆ. ಲಿಂಗದಲ್ಲಿ ನಿಷ್ಠೆಯಿದ್ದವರಿಗೆ ಮಾತ್ರ ಮಹೇಶತ್ವ (ನಿಷ್ಠಾಭಕ್ತಿ) ಸಾಧ್ಯ. ಆದುದರಿಂದ ಇಲ್ಲಿ ನಿಷ್ಠೆ ಎಂದರೇನು ಎಂಬುದು ಮುಖ್ಯಪ್ರಶ್ನೆ.

ಪತಿವ್ರತೆಯಾದವಳಿಗೆ ತನ್ನ ಗಂಡನಲ್ಲದೆ ಪರಪುರುಷರಲ್ಲಿ ಹೇಗೆ ಆಸಕ್ತಿಯಿಲ್ಲವೋ, ಹಾಗೆ ನಿಷ್ಠಾಭಕ್ತಿ ಉಳ್ಳವನಿಗೆ ಶಿವನಿಗಿಂತ ಹೆಚ್ಚಿನದೇನೂ ಇಲ್ಲವೆಂಬ ಕಾರಣದಿಂದ ಬೇರೆಯದರಲ್ಲಿ ಆಸಕ್ತಿಯಿಲ್ಲ. ಇಲ್ಲಿ "ಲಿಂಗನಿಷ್ಠೆ" ಅಥವಾ "ಶಿವನಿಗಿಂತ ಹೆಚ್ಚಿನದಿಲ್ಲ" ಎಂಬುದಕ್ಕೆ ವಚನಕಾರರು ಎರಡು ಅರ್ಥಗಳನ್ನು ಕೊಟ್ಟಿರುವಂತೆ ಕಾಣುತ್ತದೆ. ಲಿಂಗನಿಷ್ಠೆಯೆಂದರೆ ಶಿವನಿಗಿಂತ ಹೆಚ್ಚಿನ ದೇವರಿಲ್ಲವೆಂದೂ, ಉಳಿದ ದೇವರುಗಳನ್ನು ಪೂಜಿಸುವುದು ವ್ಯರ್ಥವೆಂದೂ, ಆದುದರಿಂದ ಲಿಂಗಕ್ಕೆ ಮಾತ್ರ ನಾವು ನಿಷ್ಠೆ ತೋರಿಸಬೇಕೆಂದೂ ಮೊದಲನೆ ಅರ್ಥ. ಇದನ್ನೇ ಬೇರೆ ವಚನಕಾರರು 'ಸ್ಥಾವರಲಿಂಗ ಪೂಜಿಸಬಾರದು, ವಿಷ್ಣು ಇತ್ಯಾದಿ ದೇವರನ್ನು ಪೂಜಿಸಬಾರದು' ಎಂದಿದ್ದಾರೆ. ಪಾರಮಾರ್ಥಿಕ ಧ್ಯೇಯವಾದ ಪರಶಿವನನ್ನುಳಿದು ಮತ್ತೇನನ್ನೂ ಆಶಿಸಬಾರದು ಎಂಬುದು ಎರಡನೆ ಅರ್ಥ. ಹೆಣ್ಣು, ಹೊನ್ನು, ಮಣ್ಣು ಮುಂತಾದವುಗಳಿಗೆ ಆಶಿಸದೇ ಲಿಂಗಾಂಗ ಸಾಮರಸ್ಯವನ್ನೇ ಧ್ಯೇಯವಾಗಿಟ್ಟುಕೊಳ್ಳಬೇಕೆಂಬುದು ವಚನಕಾರರ ಆದೇಶ. ವಚನಕಾರರು ಲಿಂಗನಿಷ್ಠೆ ಎಂಬ ಪದವನ್ನು ಎರಡೂ ಅರ್ಥಗಳಲ್ಲಿ ಉಪಯೋಗಿಸುತ್ತಾರೆ.

ಲಿಂಗನಿಷ್ಠೆ (ನಿಷ್ಠಾಭಕ್ತಿ)ಯು ಮುಖ್ಯವಾಗಿ ಎರಡು ಪ್ರಕಾರಗಳಲ್ಲಿ ವ್ಯಕ್ತವಾಗುತ್ತದೆ - ಧಾರ್ಮಿಕ ರೀತಿಯಲ್ಲಿ ಮತ್ತು ನೈತಿಕ ರೀತಿಯಲ್ಲಿ. "ಎಲುದೋರಿದರೆ ನರ ಹರಿದರೆ,

ಕರುಳು ಕುಪ್ಪಳಿಸಿದರೆ ನಾ ಧೃತಿಗೆಡೆನಯ್ಯಾ! ಸಿರ ಹರಿದು ಅಟ್ಟಿ ನೆಲಕ್ಕೆ ಬಿದ್ದರೆ ನಾಲಗೆ ಕೂಡಲಸಂಗಾ ಶರಣೆನ್ನುತ್ತಿದ್ದೀತಯ್ಯಾ" ಎಂಬ ಬಸವಣ್ಣನವರ ವಚನವು ಧಾರ್ಮಿಕ ನಿಷ್ಠೆಗೆ ಉದಾಹರಣೆಯಾಗಿದೆ. ಅದೇ ರೀತಿ ಸಾಮರಸ್ಯಾಭಿಮುಖವಾಗಿ ಮಾತ್ರ ನಡೆಯುತ್ತೇನೆಂಬ ಛಲವೂ ಸಹ ಧಾರ್ಮಿಕ ನಿಷ್ಠೆಯೇ. ಪರಸತಿ, ಪರಧನ, ಒಲ್ಲೆನೆಂಬ ಛಲಬೇಕು ಶರಣಂಗೆ; ಮುಂತಾದ ನುಡಿಗಳು ನಿಷ್ಠೆಯನ್ನು ಸಾರುತ್ತವೆ. ತೋಂಟದ ಸಿದ್ಧಲಿಂಗ ಶಿವಯೋಗಿಗಳ ಪ್ರಕಾರ, "ಇಂದ್ರಿಯಂಗಳ ಮುಸುಕನುಗಿಯದೆ, ವಿಷಯಂಗಳ ಶಿರವನರಿಯದೆ, ಕರಣಂಗಳ ಕಳವಳವ ಕೆಡಿಸದೆ, ಕರ್ಮೇಂದ್ರಿಯಗಳ ಮೂಲದ ಬೇರಕಿತ್ತು ಭಸ್ಮವ ಮಾಡದೆ, ಕಷ್ಟಕಾಮನ ನಷ್ಟವ ಮಾಡಲರಿಯದೆ" ತಾವು ಲಿಂಗನಿಷ್ಠರೆಂದು ಹೇಳಿಕೊಳ್ಳುವವರು ನಿಜವಾಗಿಯೂ ಲಿಂಗ ನಿಷ್ಠರಲ್ಲ.

ಲಿಂಗದಲ್ಲಿ ನಿಷ್ಠೆಯಿರಬೇಕೆಂದರೂ ಒಂದೇ, ಕಲಾಶಕ್ತಿಗಳನ್ನು ಭಕ್ತಿಗಳನ್ನಾಗಿ ಪರಿವರ್ತಿಸಬೇಕೆಂದರೂ ಒಂದೇ. ಅಪ್ ತತ್ತ್ವವು ಜ್ಞಾನಶಕ್ತಿಯ ಒಂದು ರೂಪ. ಇಂದ್ರಿಯ ವಿಷಯಗಳಾದ ರೂಪರಸಾದಿಗಳು ಜ್ಞಾನಶಕ್ತಿಯ ಪರಿಣಾಮಗಳು. ಭಕ್ತಸ್ಥಳದಲ್ಲಿ ಕೇವಲ ಶ್ರದ್ಧೆಯೊಂದೇ ಪ್ರಧಾನವಾಗಿದ್ದರೆ, ಮಹೇಶ ಸ್ಥಲದಲ್ಲಿ ಸಾಧಕನಿಗೆ ಜ್ಞಾನೋದಯವಾಗಿ, ತಾನು ಏಕೆ ಆಚಾರಗಳನ್ನು ಮಾಡಬೇಕು, ಎಂಬುದರ ಜ್ಞಾನ ಉಂಟಾಗುತ್ತದೆ. ಸಾಧಕನು ಮಹೇಶನಾಗಿ ರೂಪರಸಾದಿಗಳ ಬಗೆಗಿನ ತನ್ನ ಆಸೆಗಳನ್ನು ನಿಯಂತ್ರಿಸುತ್ತಾನೆ, ಹಾಗೂ ಸುಬುದ್ಧಿ ಎಂಬ ಹಸ್ತದಿಂದ ಪಂಚ ವಿಷಯಗಳನ್ನು ಗುರುಲಿಂಗಕ್ಕೆ ಅರ್ಪಿಸುತ್ತಾನೆ.

೩. ಅವಧಾನ ಭಕ್ತಿ : ಆಧ್ಯಾತ್ಮಿಕ ಸಾಧನೆಯ ಮೂರನೆಯ ಹಂತದ ಸಾಧಕನಿಗೆ ಪ್ರಸಾದಿ ಎಂಬ ಹೆಸರಿದ್ದರೆ, ಅವನ ಭಕ್ತಿಗೆ ಅವಧಾನ ಭಕ್ತಿ ಎಂಬ ಹೆಸರಿದೆ. ಇಲ್ಲಿ ಅವಧಾನವೆಂದರೆ ಜಾಗರೂಕತೆ ಎಂದರ್ಥ. ಅಂದರೆ ಪ್ರಸಾದಿಯಾದವನು ಅವಧಾನಿಯಾಗಿರಬೇಕು. ಅವಧಾನ ಭಕ್ತಿಯ ಪರಿಕಲ್ಪನೆ ನಮಗೆ ಸರಿಯಾಗಿ ಅರ್ಥವಾಗಬೇಕಾದರೆ, ಅದು ಒಳಗೊಳ್ಳುವ ಪ್ರಸಾದದ ಪರಿಕಲ್ಪನೆ ನಮಗೆ ಸರಿಯಾಗಿ ಅರ್ಥವಾಗಬೇಕು.

ಸಾಮಾನ್ಯವಾಗಿ, ಲಿಂಗಕ್ಕೆ ಅರ್ಪಿಸಿದ ಹಾಲು, ಹಣ್ಣು, ಮುಂತಾದ ಆಹಾರ ಪದಾರ್ಥಗಳು ಪ್ರಸಾದವಾಗುತ್ತವೆ, ಆ ಪ್ರಸಾದವನ್ನು ಸೇವಿಸಿದವನು ಪ್ರಸಾದದಂತೆ ಶುದ್ಧವಾಗುತ್ತಾನೆ, ಎಂಬ ನಂಬಿಕೆಯನ್ನು ವಚನಗಳು ಪ್ರತಿಪಾದಿಸುತ್ತವೆ. ಪ್ರಸಾದವಲ್ಲದ (ಲಿಂಗಾರ್ಪಿತವಲ್ಲದ) ಯಾವ ವಸ್ತುವನ್ನೂ ವೀರಶೈವನು ಸೇವಿಸಬಾರದೆಂಬುದು ವಚನಕಾರರ ಆದೇಶ.

ಪ್ರಸಾದವೆಂದರೆ ಲಿಂಗಾರ್ಪಿತವಾದ ಆಹಾರ ವಸ್ತುಗಳು ಎಂಬ ಅರ್ಥವು "ಪ್ರಸಾದ"ದ ಬಹಳ ಸಂಕುಚಿತ ಅರ್ಥ ಸ್ವಲ್ಪ ವಿಶಾಲವಾದ ಅರ್ಥದಲ್ಲಿ, ಕೇವಲ ಆಹಾರ ವಸ್ತುಗಳನ್ನಷ್ಟೇ ಅಲ್ಲ, ನಾವು ನೋಡುವ ರೂಪ, ರುಚಿಸುವ ರಸ, ಶಬ್ದ, ಸ್ಪರ್ಶ,

ಗಂಧ ಇವೆಲ್ಲವೂ ಪ್ರಸಾದಗಳೇ. ಯಾರು ಇವುಗಳನ್ನು ಶಿವಾರ್ಪಿತ ಮಾಡಿ ಅನಂತರ ಅನುಭವಿಸುತ್ತಾರೋ ಅವರು ನಿಜವಾದ ಪ್ರಸಾದಿಗಳು.

"ಪ್ರಸಾದ"ದ ಅರ್ಥವನ್ನು ಇನ್ನೂ ಸ್ವಲ್ಪ ಹಿಗ್ಗಿಸಿದರೆ, ಆಹಾರ ಪಾನೀಯಗಳು ಇಂದ್ರಿಯ ವಿಷಯಗಳು (ರೂಪರಸಗಂಧಸ್ಪರ್ಶಶಬ್ದಗಳು) ಅಷ್ಟೇ ಅಲ್ಲ, ಸಾಧಕನು ತನ್ನ ಬುದ್ಧೀಂದ್ರಿಯಗಳನ್ನೂ, ಕರ್ಮೇಂದ್ರಿಯಗಳನ್ನೂ, ಅಂತಃಕರಣ ಚತುಷ್ಟಯಗಳನ್ನೂ ಶಿವನಿಗೆ ಅರ್ಪಿಸಿ ಅನಂತರ ತಾನು ಅವುಗಳನ್ನು ಉಪಯೋಗಿಸುತ್ತಾನೆ. ಶರಣ ತನ್ನ ಆತ್ಮವನ್ನೇ ಶಿವನಿಗೆ ಅರ್ಪಿಸಿ ಪ್ರಸಾದಿಯೇ ಪ್ರಸಾದವಾಗುತ್ತಾನೆ ಎಂಬುದು ಪ್ರಸಾದ ಪರಿಕಲ್ಪನೆಯ ಅತ್ಯಂತ ವಿಶಾಲಾರ್ಥ. ಹೀಗೆ ಮಾಡುವುದರಿಂದ ಸಾಧಕನು ಆದಷ್ಟೂ ಸ್ವಾರ್ಥಕ್ಕೆ ಎಡೆಯಿಲ್ಲದಂತೆ ಎಚ್ಚರವಹಿಸುತ್ತಾನೆ. ಹೀಗೆ ತನ್ನ ಇಚ್ಛೆಗಳಿಗೆ ಪ್ರಾಧಾನ್ಯತೆ ಕೊಡದಿರುವುದೇ ಇಚ್ಛಾಶಕ್ತಿಯ ರೂಪಾಂತರವಾದ ಅಹಂಕಾರದ ನಿಯಂತ್ರಣವೆನಿಸಿಕೊಳ್ಳುವುದು. ಸ್ವಾರ್ಥ ನಿರ್ಮೂಲನೆಯಾಗದ ಹೊರತು, ಆತ್ಮಶುದ್ಧವಾಗುವುದಿಲ್ಲ, ಆತ್ಮಶುದ್ಧವಾಗದ ಹೊರತು ಅನುಭಾವ ಸಿದ್ಧಿಸುವುದಿಲ್ಲ.

೪. ಅನುಭಾವ ಭಕ್ತಿ : ಮೋಕ್ಷ ಸಾಧನೆಯ ನಾಲ್ಕನೆ ಹಂತದ ಸಾಧಕನಿಗೆ ಪ್ರಾಣಲಿಂಗಿ ಎಂಬ ಹೆಸರಿದ್ದು, ಅವನ ಭಕ್ತಿಗೆ ಅನುಭಾವ ಭಕ್ತಿ ಎಂದು ಹೆಸರು. ಪ್ರಸಾದಿಯು ಎಲ್ಲವನ್ನೂ ಪ್ರಸಾದವನ್ನಾಗಿ ಮಾಡಿಕೊಂಡು ಅನುಭವಿಸಿದರೆ ಪ್ರಾಣಲಿಂಗಿಯು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ತನ್ನ ದೇಹೇಂದ್ರಿಯಗಳಲ್ಲೆಲ್ಲಾ ಲಿಂಗವನ್ನು ಪ್ರತಿಷ್ಠಾಪಿಸುತ್ತಾನೆ. ಅಂದರೆ ತನ್ನ ಬುದ್ಧೀಂದ್ರಿಯಗಳ ಪ್ರತಿಯೊಂದರ ಬಾಗಿಲಿನಲ್ಲೂ ಪರಶಿವನಿದ್ದಾನೆಂದು ದೃಢವಾಗಿ ಅವನು ನಂಬುತ್ತಾನೆ. ಹೀಗೆ ನಂಬುವುದೂ ಒಂದೇ, ಪರಶಿವನು ಅನುಭವಿಸಿದ ನಂತರವೇ ಭಕ್ತನು ಅನುಭವಿಸುತ್ತಾನೆಂದು ಹೇಳುವುದೂ ಒಂದೇ. ಪರಶಿವನು (ಉದಾಹರಣೆಗೆ) ಶ್ರೋತ್ರೇಂದ್ರಿಯದ ಬಾಗಿಲಿಗೆ ಬರುವ ಶಬ್ದಗಳನ್ನು ಮೊದಲು ಅನುಭವಿಸುತ್ತಾನೆ, ಅವು ಕಿವಿಯಿಂದ ಭಕ್ತನ ಮನಸ್ಸಿನ ಒಳಗೆ ಹೋಗುವಾಗ ಅವಾಗಲೇ ಪ್ರಸಾದವಾಗಿರುತ್ತವೆ. ಅಂತಹ ಪ್ರಸಾದವು ವಾಸ್ತವವಾಗಿ ಸುಶಬ್ದವಾಗಿರಲೇಬೇಕು. ಹೀಗೆ ರೂಪವೆಲ್ಲವೂ ಸುರೂಪ ರುಚಿಯೆಲ್ಲವೂ ಸುರುಚಿ ಸ್ಪರ್ಶನವೆಲ್ಲವೂ ಸುಸ್ಪರ್ಶನ, ವಾಸನೆಯೆಲ್ಲವೂ ಸುವಾಸನೆ ಎಂಬ ಪ್ರಸಾದವಾಗಿರುತ್ತವೆ. ಅದೇ ರೀತಿ ತನ್ನ ಕರ್ಮೇಂದ್ರಿಯಗಳ ಬಾಗಿಲುಗಳಲ್ಲೂ, ಅಂತಃಕರಣಗಳ ಬಾಗಿಲುಗಳಲ್ಲೂ ಪರಶಿವನಿದ್ದಾನೆಂಬ ಸಾಧಕನು ಸಂಪೂರ್ಣವಾಗಿ ಸ್ವಾರ್ಥದಿಂದ ಮುಕ್ತನಾಗಿರುತ್ತಾನೆ. ವಾಸ್ತವವಾಗಿ ಅವನ ದೇಹದಲ್ಲಿ ಪ್ರಾಣ ಎಲ್ಲೆಲ್ಲಿ ಇದೆಯೋ ಅಲ್ಲೆಲ್ಲಾ ಪರಶಿವನೇ ಇರುವುದರಿಂದ ಸಾಧಕನು ಪ್ರಾಣಲಿಂಗಿ ಎನಿಸಿಕೊಳ್ಳುತ್ತಾನೆ.

ಪ್ರಾಣಲಿಂಗಿಯು ಆದಿಶಕ್ತಿಯ ರೂಪವಾದ ದಶವಾಯುಗಳನ್ನು ನಿಯಂತ್ರಿಸಿ ಅನುಭಾವವನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಾನೆ. ಅನುಭಾವವು ಲಿಂಗಾಂಗ ಸಾಮರಸ್ಯಕ್ಕೆ ಹೋಗುವ ದಾರಿಯಲ್ಲಿ ಮೊದಲನೆ ಮೈಲಿಗಲ್ಲು.

೫. ತೋಂಟದ ಸಿದ್ಧಲಿಂಗ ಶಿವಯೋಗಿ ಮತ್ತು ಷಣ್ಮುಖ ಸ್ವಾಮಿಗಳ ಪ್ರಕಾರ, ಐದನೆ ಸ್ಥಲದಲ್ಲಿರುವ ಶರಣನ (ಶರಣ ಸ್ಥಲದಲ್ಲಿರುವವನ) ಆನಂದ ಭಕ್ತಿಯು ಬಹಳ ಉನ್ನತವಾದ ಆಧ್ಯಾತ್ಮಿಕ ಸಾಧನೆಯ ಫಲ. ದೇಹದ ಬಾಧೆಗಳಿಂದಲೂ, ಮನಸ್ಸಿನ ಮಾಯೆಯಿಂದಲೂ, ಅಂತಃಕರಣದ ತಪಸ್ಸಿನಿಂದಲೂ, ಐಂದ್ರಿಕ ಸುಖಗಳಿಂದಲೂ ದೂರ ಇರುವವನ ವರ್ತನೆಯನ್ನೊಳಗೊಂಡಿರುತ್ತದೆ. ಜೊತೆಗೆ ಅದು ಸತ್ಯ, ಶಮೆ, ದಮೆ, ದಯೆ, ಸೈರಣೆ, ಸಮಾಧಾನ, ಸಂತೋಷ, ಸ್ಥೈರ್ಯ, ಮುಂತಾದ ಸದ್ಗುಣಗಳನ್ನೊ ಪ್ರತಿಬಿಂಬಿಸುತ್ತದೆ.

ಆನಂದ ಭಕ್ತಿಯು ಸಾಧ್ಯವಾಗುವುದು ಕರ್ಮಗಳೆಲ್ಲವೂ ಸುಟ್ಟಾಗ; ತಾನು ಪ್ರತ್ಯೇಕ ವ್ಯಕ್ತಿ, ತಾನು ತನ್ನ ದೇಹ ಮತ್ತು ಇಂದ್ರಿಯಗಳ ಸಲುವಾಗಿ ಜೀವಿಸಬೇಕು ಎಂಬ ಅಜ್ಞಾನ ಹೋಗಿ, ಅದರ ಜಾಗದಲ್ಲಿ ತಾನು ಪರಶಿವನ ದೇಹ ಅಥವಾ ಭಾಗ (ಅಂಗ), ಲಿಂಗಾಂಗ ಸಾಮರಸ್ಯವೇ ತನ್ನ ಗುರಿ ಎಂಬ ಜ್ಞಾನೋದಯವಾದಾಗ; ಅರಿಷಡ್ವರ್ಗ, ಷಡೂರ್ಮಿ, ಮುಂತಾದ ಮಾನಸಿಕ ಹಾಗೂ ದೈಹಿಕ ದೋಷಗಳು ನಾಶವಾದಾಗ ಶರಣನು ಇವೆಲ್ಲವನ್ನೂ ಇಲ್ಲವಾಗಿಸಿರುವುದರಿಂದ, ಅವನಲ್ಲಿ ಆನಂದ ನೆಲೆಯೂರುತ್ತದೆ.

ಆನಂದವು ಶರಣನು ಹೊಸದಾಗಿ ಪಡೆಯುವ ಸ್ಥಿತಿಯಲ್ಲ, ಅದು ಅವನ ಸಹಜ ಸ್ಥಿತಿ. ಬಂಧನದಲ್ಲಿದ್ದಾಗ, ಅಜ್ಞಾನ, ಮಲತ್ರಯ, ಕರ್ಮತ್ರಯ, ಷಡೂರ್ಮಿ, ಅರಿಷಡ್ವರ್ಗ ಮುಂತಾದ ಉಪಾಧಿಗಳಿಂದಾಗಿ ಅಂಗನು ಅದನ್ನು ಅನುಭವಿಸುತ್ತಿರಲಿಲ್ಲ. ಆದರೆ ಉಪಾಧಿಗಳನ್ನು ಬದಿಗೆ ಸರಿಸುವ ಮೂಲಕ, ಆತ್ಮವನ್ನು ಅದರ ಮೊದಲಿನ (ಸಹಜ) ಸ್ಥಿತಿಗೆ ತಂದಿದ್ದಾನೆ.

ಆನಂದ ಭಕ್ತಿಯ ಪರಿಕಲ್ಪನೆಯನ್ನು ಸ್ಪಷ್ಟಪಡಿಸಲು ವಚನಕಾರರು ಶರಣನನ್ನು ಸತಿ ಎಂದೂ ಶಿವನೇ ಪತಿಯೆಂದು ಕರೆದಿದ್ದಾರೆ. ಅನುಭಾವದ ಮೂಲಕ ಆನಂದವನ್ನು ಪಡೆದ ಶರಣ ಅದಕ್ಕಾಗಿ ಹಾತೊರೆಯುತ್ತಾನೆ. ಗಂಡನ ಸಂಗದಿಂದ ಸುಖವನ್ನು ಪಡೆದ ಪತ್ನಿಯು ಹೇಗೆ ಅವನಿಂದ ಸ್ವಲ್ಪಕಾಲ ಅವನಿಂದ ದೂರವಿದ್ದಾಗ, ಅವನ ಸಂಗಕ್ಕಾಗಿ ಹಾತೊರೆಯುತ್ತಾಳೋ, ಹಾಗೆಯೇ ಶರಣ ಸತಿಯು ಲಿಂಗಪತಿಯ ಸಂಗಕ್ಕಾಗಿ ಹಾತೊರೆಯುತ್ತಾ ಇರುತ್ತಾಳೆ.

೬. ಸಮರಸ ಭಕ್ತಿ : ಅನುಭಾವದ ಮೂರು ಮುಖ್ಯ ಹಂತಗಳೆಂದರೆ, ಕೇವಲಾನಂದ, ಸಮರಸ ಮತ್ತು ಅದ್ವೈತ ಸ್ಥಿತಿ. ಧ್ಯಾನಸ್ಥನಾದವನು ಮೊದಲು ಬಾಹ್ಯಪ್ರಪಂಚದ

ಪ್ರಜ್ಞೆಯನ್ನು ಕಳೆದುಕೊಂಡು, ತಾನೊಬ್ಬನೇ ಇದ್ದೇನೆ ಎಂಬ ಅನುಭವವನ್ನು ಪಡೆಯುವುದಲ್ಲದೇ, ಆ ಸ್ಥಿತಿಯಲ್ಲಿ ಅವನಿಗೆ ಆನಂದವೂ ಆಗುತ್ತದೆ. ಸ್ವಪ್ರಜ್ಞೆ ಇದ್ದು, ಆನಂದವನ್ನು ಅನುಭವಿಸುವುದೇ ಕೇವಲಾನಂದ (ಕೈವಲ್ಯಾನಂದ); ಸ್ವಲ್ಪ ಹೊತ್ತಿನ ನಂತರ ತಾನು ಪರಶಿವನಲ್ಲಿ ಐಕ್ಯವಾಗುತ್ತಿರುವ ಅನುಭವವಾಗುವುದು ಅನುಭಾವದ ಎರಡನೆ ಹಂತ. ಈ ಒಂದು ಸ್ಥಿತಿಯನ್ನು ವಚನಕಾರರು ಅನೇಕ ಉಪಮೆಗಳ ಮೂಲಕ ತಿಳಿಸಲು ಯತ್ನಿಸಿದ್ದಾರೆ. ನದಿಯು ಸಮುದ್ರದಲ್ಲಿ ಬೆರೆತು, ಆಲಿಕಲ್ಲು ನೀರಿನಲ್ಲಿ ಮುಳುಗಿ, ಕರ್ಪೂರವು ಬೆಂಕಿಯನ್ನು ಮುಟ್ಟಿ, ಹೇಗೆ ತಮ್ಮ ವೈಶಿಷ್ಟ್ಯವನ್ನು ಕಳೆದುಕೊಳ್ಳುತ್ತವೆಯೋ ಹಾಗೆಯೇ, ಅಂಗನು ಲಿಂಗದೊಡನೆ ಬೆರೆತಾಗ ತಾನಾರೆಂಬುದನ್ನು ಮರೆತುಬಿಡುತ್ತಾನೆ.

ಅನುಭಾವದ ಮೂರನೆಯ ಹಂತದಲ್ಲಿ ಅನುಭವಿಯು ತನ್ನನ್ನೂ, ತಾನು ಬೆರೆತ ಲಿಂಗವನ್ನೂ ಮರೆಯುವುದಲ್ಲದೇ, ಏನಾಗುತ್ತದೆ ಎಂಬುದರ ಪ್ರಜ್ಞೆಯೂ ಅವನಿಗಿರುವುದಿಲ್ಲ.

ಅಲ್ಲದೆ, ಅನುಭಾವದಿಂದ ಜಾಗೃತ ಸ್ಥಿತಿಗೆ ಬಂದಾಗಲೂ ಯಾವುದೋ ಅಜ್ಞಾತ, ಅವ್ಯಕ್ತ ಶಕ್ತಿಯು ತನ್ನನ್ನು ನಿಯಂತ್ರಿಸುತ್ತಿದೆ, ತಾನು ಆ ಶಕ್ತಿಯ ದೆಸೆಯಿಂದಲ್ಲದೇ ಯೋಚಿಸಲಾರೆ, ಮಾತನಾಡಲಾರೆ, ತಿನ್ನುಣ್ಣಲಾರೆ, ಎಂಬ ಭಾವ ಅವನಲ್ಲಿ ಮೂಡುತ್ತದೆ. ಅಷ್ಟೇ ಅಲ್ಲ, ತಾನು ಎಂಬ ಭಾವ ಸಂಪೂರ್ಣವಾಗಿ ಹೋಗಿ ಅಲ್ಲಿ ಪರಶಿವ ಎಂಬ ಭಾವ ಸ್ಥಾಯಿಯಾಗಿ ನಿಲ್ಲುತ್ತದೆ. ಸಮುದ್ರದಲ್ಲಿ ಲೀನವಾದ ನದಿಗೆ ಕುರುಹಿಲ್ಲ, ಆದರೆ, ಅದನ್ನೊಳಗೊಂಡ ಸಮುದ್ರ ಉಳಿಯುತ್ತದೆ, ಬೆಂಕಿಯನ್ನು ಮುಟ್ಟಿದ ಕರ್ಪೂರ ಅಳಿಯುತ್ತದೆ, ಆದರೆ ಅದನ್ನು ಸುಟ್ಟ ಬೆಂಕಿ ಇನ್ನೂ ಇರುತ್ತದೆ: ಹಾಗೆಯೇ ಲಿಂಗಾಂಗ ಸಾಮರಸ್ಯದ ನಂತರ ಪರಶಿವನಲ್ಲಿ ಲೀನವಾದ ಅಂಗವು ತನ್ನತನವನ್ನು ಕಳೆದುಕೊಳ್ಳುತ್ತದೆ, ಆದರೆ ಅದನ್ನು ಆಕ್ರಮಿಸಿಕೊಂಡ ಲಿಂಗ (ಪರಶಿವ) ಸ್ಥಿರವಾಗಿ ಉಳಿಯುತ್ತದೆ.

ಕೆಲವು ವಚನಕಾರರು ಭಕ್ತಿಗಳನ್ನು (ಭಕ್ತಿಶಕ್ತಿಗಳನ್ನು) ಕಲೆಗಳೆಂದು ಕರೆಯುತ್ತಾರೆ. ಕೆಲವು ವಚನಕಾರರು ಭಕ್ತಿ ಮತ್ತು ಕಲೆ ಎಂಬ ಎರಡನ್ನೂ ಪರ್ಯಾಯವಾಗಿ ಬಳಸುತ್ತಾರೆ. ಈ ಅರ್ಥದಲ್ಲಿ ನಿವೃತ್ತಿಕಲೆಯೇ ಶ್ರದ್ಧಾಭಕ್ತಿ, ಪ್ರತಿಷ್ಠಾಕಲೆಯೇ ಅನುಭಾವ ಭಕ್ತಿ; ಶಾಂತಿ ಕಲೆಯೇ ಅನುಭಾವ ಭಕ್ತಿ; ಶಾಂತ್ಯತೀತ ಕಲೆಯೇ ಆನಂದ ಭಕ್ತಿ; ಶಾಂತ್ಯತೀತೋತ್ತರ ಕಲೆಯೇ ಸಮರಸಭಕ್ತಿ. ಇನ್ನು ಕೆಲವು ವಚನಕಾರರು ಭಕ್ತಿಶಕ್ತಿಗಳೂ ಕಲಾಶಕ್ತಿಗಳೂ ಕಲೆಗಳೂ ಬೇರೆ ಬೇರೆ ಅಲ್ಲವೇ ಅಲ್ಲ ಎಂದೂ ಶಾಂತ್ಯತೀತ್ತೋತ್ತರ, ಶಾಂತ್ಯತೀತ, ಶಾಂತಿ, ವಿದ್ಯಾ, ಪ್ರತಿಷ್ಠಾ ಮತ್ತು ನಿವೃತ್ತಿ ಕಲಗಳೇ ಪರಶಿವನ ಆರು ಶಕ್ತಿಗಳಾದ ಚಿತ್‌ಶಕ್ತಿ, ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳೆಂದೂ ಅವೇ ಭಕ್ತಿಗಳೆಂದೂ ಹೇಳುತ್ತಾರೆ. ಈ ಕೊನೆಯ ಅಭಿಪ್ರಾಯ ಸರಿಯೆಂದು ತೋರುತ್ತದೆ. ಏಕೆಂದರೆ ಒಬ್ಬನೇ ಪರಶಿವ ಅಂಗ ಮತ್ತು ಲಿಂಗ ಎಂದು ಹೇಗೆ ಕಾಣಿಸಿಕೊಳ್ಳುತ್ತಾನೋ,

ಹಾಗೆ ಒಂದೇ ಶಕ್ತಿ ಭಕ್ತಿ ಮತ್ತು ಕಲೆ ಎಂದು ಕಾಣಿಸಿಕೊಳ್ಳುತ್ತದೆ. ಹೀಗೆ ಭಕ್ತಿ, ಶಕ್ತಿ, ಕಲೆ, ಮುಂತಾದವುಗಳು ನಾಮಭೇದಕ್ಕೇ ಹೊರತು, ವಸ್ತುಭೇದಕ್ಕೆ ಅನ್ವಯಿಸುವುದಿಲ್ಲ.

**ಭಕ್ತಿಕಾಯ :** ಶೂನ್ಯಸ್ಥಿತಿ ಮುಗಿದ ನಂತರ ಪರಶಿವನಿಗೆ ತಾನೊಬ್ಬನೇ ಇರುವುದು ಅರಿವಾದಾಗ, ತನಗೊಬ್ಬ ಪೂಜಕ ಬೇಕೆನಿಸಿ, ತಾನೇ ಎರಡು ಭಾಗವಾಗುತ್ತಾನೆ. ಅದರಲ್ಲಿ ಒಂದು ಅಂಗಸ್ಥಲ, ಮತ್ತೊಂದು ಲಿಂಗಸ್ಥಲ. ಲಿಂಗಸ್ಥಲದಲ್ಲಿ ಸೃಜನಶೀಲ ಶಿವನಿದ್ದರೆ, ಅಂಗಸ್ಥಲದಲ್ಲಿ ಜೀವಾತ್ಮರುಗಳಿರುತ್ತಾರೆ. ಪ್ರತಿಯೊಬ್ಬ ಮನುಷ್ಯನ ದೇಹ, ಇಂದ್ರಿಯ, ಬುದ್ಧಿ, ಮನಸ್ಸು, ಇತ್ಯಾದಿಗಳೆಲ್ಲ ಶಿವನ ಶಕ್ತಿಯಿಂದಲೇ ಅಥವಾ ಕಲಾಶಕ್ತಿಯಿಂದಲೇ ಸೃಷ್ಟಿಸಲ್ಪಟ್ಟಿವೆ. ಮನುಷ್ಯನಿಗೆ ಸಂಸಾರಹೇಯಭಾವ ಉಂಟಾದಾಗ ಅವನು ಆಧ್ಯಾತ್ಮದ ಕಡೆಗೆ ತಿರುಗುತ್ತಾನೆ. ಅವನ ಆಧ್ಯಾತ್ಮ ಪ್ರಗತಿಯಾದಂತೆಲ್ಲಾ ಅವನ ಕಲಾಶಕ್ತಿಗಳೆಲ್ಲ ಭಕ್ತಿಗಳಾಗುತ್ತಾ (ಭಕ್ತಿಶಕ್ತಿಗಳಾಗುತ್ತಾ) ಹೋಗುತ್ತವೆ. ಹೀಗೆ ಭಕ್ತಿಗಳಿಂದುಂಟಾದ ಕಾಯವೇ ಭಕ್ತಿಕಾಯ. (೧:೮೦೯, ೧೧:೩೯)

**ಭಕ್ತಿತ್ರಯ :** ಭಕ್ತಸ್ಥಲದಲ್ಲಿರುವ ಭಕ್ತನು ತೋರಿಸಬೇಕಾದ ತ್ರಿವಿಧ ಭಕ್ತಿ, ಗುರುಭಕ್ತಿ, ಲಿಂಗಭಕ್ತಿ, ಜಂಗಮಭಕ್ತಿ.

**ಭಕ್ತಿದಾಸೋಹ :** ಭಕ್ತಿಯನ್ನೆ ಅರ್ಪಿಸುವುದು. ಅಂದರೆ, ಭಕ್ತಸ್ಥಲದಲ್ಲಿ ನಿಂದವನಿಗೆ, ತಾನು ಬೇರೆ, ಶಿವಬೇರೆ ಎಂಬ ದ್ವೈತ ಭಾವವಿದ್ದು, ಶಿವನಿಗೆ ಭಕ್ತಿಯಿಂದ ಪೂಜೆ, ಇತ್ಯಾದಿ ಸಲ್ಲಿಸಬೇಕು, ಎಂಬ ದ್ವೈತ ಭಾವ ಹೋಗುತ್ತದೆ. ಅವನು ಎಲ್ಲವನ್ನೂ ಅರ್ಪಿಸಿದಂತೆ, ತನ್ನನ್ನೆ ಅಂದರೆ ಭಕ್ತಿಭಾವವನ್ನೂ ಅರ್ಪಿಸುತ್ತಾನೆ.

**ಭಕ್ತಿಯಲ್ಲಿ ನಡೆವ ಭಕ್ತರು :** ಭಕ್ತಿಮಾರ್ಗದ ವೈಶಿಷ್ಟ್ಯವೆಂದರೆ ಭಕ್ತನು ತನ್ನನ್ನು ಪರಮಾತ್ಮನಿಂದ ಪ್ರತ್ಯೇಕಿಸಿಕೊಳ್ಳುವುದು; ಪೂಜ್ಯ ಪೂಜಕ ದ್ವೈತಭಾವವಿಲ್ಲದೆ ಭಕ್ತಿ ಸಾಧ್ಯವೇ ಇಲ್ಲ. ಆದರೆ ವಚನಕಾರ ಪ್ರಕಾರ, ಭಕ್ತಿ ಮೊದಲಲ್ಲಿ ಆವಶ್ಯಕವಾದರೂ ಕೊನೆಯವರೆಗೂ ಸಾಧಕನು, ಭಕ್ತನೇ ಆಗಿದ್ದರೆ, ಲಿಂಗಾಂಗ ಸಾಮರಸ್ಯವಾಗುವುದಿಲ್ಲ. ಈ ಕಾರಣಕ್ಕಾಗಿ, ಮೋಳಿಗೆ ಮಾರಯ್ಯನು "ಭಕ್ತಿಯಲ್ಲಿ ನಡೆವ ಭಕ್ತರಿಗಿನ್ನೆತ್ತಣ ಮುಕ್ತಿಯೋ," ಎಂದು ಕೇಳುತ್ತಾನೆ. (೮:೧೭೯೧)

**ಭಕ್ತಿವರ್ತಕ :** ಭಕ್ತಿಯ ಪ್ರವರ್ತಕ. ಭಕ್ತಸ್ಥಲಕ್ಕೆ ಯೋಗ್ಯವಾದುದೆಲ್ಲವನ್ನೂ ತಪ್ಪದೆ ಆಚರಿಸುವವನು. (೭:೧೧೧೬)

**ಭಕ್ತಿಸಂಭಾಷಣೆ :** ಬಸವಣ್ಣನವರ ಪ್ರಕಾರ ಭಕ್ತಿಯಿಂದ ಪೂಜಿಸುವುವೆಂದರೆ ಶಿವನೊಡನೆ ಮಾತನಾಡಿದಂತೆ. ಭಕ್ತಿ ಸಂಭಾಷಣೆಯಿಲ್ಲದ ಪೂಜೆ ಯಾಂತ್ರಿಕವಾಗುತ್ತದೆ. (೧:೧೭೫)

**ಭಕ್ತಿಸಾರಾಯ :** ಪರಶಿವನೇ ಭಕ್ತಿಯ ಸಾರವೆಂದು ತಿಳಿದವನು.

**ಭಕ್ತಿಸ್ಥಲ ಬ್ರಹ್ಮನಾಶನ :** ಭಕ್ತಿಸ್ಥಲವನ್ನು ಪರಿಣಾಮಕಾರಿಯಾಗಿ ಆಚರಿಸಿದರೆ, ಬ್ರಹ್ಮನ ನಿಯಂತ್ರಣದಲ್ಲಿರುವ ಕ್ರಿಯಾಶಕ್ತಿಯ ದುಷ್ಪರಿಣಾಗಳನ್ನು ಇಲ್ಲದಂತೆ ಮಾಡಬಹುದು, ಹಾಗೂ ಆ ಮೂಲಕ ಮುಂದೆ ನಾವು ಸೃಷ್ಟಿಯ ಪಾಶಕ್ಕೆ ಸಿಕ್ಕದಂತಿರಬಹುದು. ಎಲ್ಲರೂ ಹೀಗೆ ಸೃಷ್ಟಿಯ ಪಾಶದಿಂದ ತಪ್ಪಿಸಿಕೊಂಡರೆ ಪರಶಿವನು ಸೃಷ್ಟಿ ಮಾಡುವ ಬ್ರಹ್ಮನನ್ನು ಸೃಷ್ಟಿಸಬೇಕಾಗಿಲ್ಲ. (ಲ:೨೦೦೨)

**ಭಜನೆಭಾವನೆಯಳಿಯುವುದು :** ಇಲ್ಲಿ ಭಜನೆಯೆಂದರೆ ವಿಭಜನೆಯೆಂದರ್ಥ. ಭಕ್ತನು ತಾನು ಪರಶಿವನಿಂದ ವಿಭಜಿತನಾಗಿದ್ದೇನೆಂದು ತಿಳಿಯದಿರುವುದೇ ಭಜನೆಭಾವವಳಿಯುವುದು. (ಲ:೪೫೫)

**ಭರಿತಬೋನ :** ಭರಿತವೆಂದರೆ ತುಂಬಿಕೊಳ್ಳುವುದು, ಬೋನವೆಂದರೆ ಆಹಾರ. ಭರಿತವೆಂದರೆ ನಮ್ಮ ಇಡೀ ದೇಹೇಂದ್ರಿಯಾದಿಗಳಲ್ಲಿ ಪರಶಿವನನ್ನು ತುಂಬಿಕೊಂಡು ಅಂತರಂಗ ಬಹಿರಂಗಗಳ ವ್ಯತ್ಯಾಸವಿಲ್ಲದೆ, ಭಕ್ತನೇ ಪರಮಾತ್ಮನಲ್ಲಿ ಭರಿತವಾದರೆ ಅದು ಭರಿತಬೋನವೆನಿಸಿಕೊಳ್ಳುತ್ತದೆ. ಆಗ ಅಂತಹ ಭಕ್ತನು ಪರಶಿವನಿಗೆ ತಾನೇ ಪ್ರಸಾದವಾಗುತ್ತಾನೆ. ಅದೇ ರೀತಿ, ತನ್ನಲ್ಲಿ ಪರಶಿವನನ್ನು ಭರಿಸಿಕೊಂಡರೆ, ಆಗಲೂ ಭರಿತಬೋನವೇ, ಏಕೆಂದರೆ ಆಗ ಅವನು ಪ್ರಸಾದಿಯಾಗುತ್ತಾನೆ.

**ಭರಿತಾರ್ಪಣ :** ಭರಿತಾರ್ಪಣವೆಂದರೆ ತೃಪ್ತಿಯಾಗುವವರೆಗೂ ಅರ್ಪಣೆ ಮಾಡುವುದು ಎಂದರ್ಥ. ಈ ಅರ್ಥಕ್ಕೆ ಎರಡು ಮಗ್ಗಲುಗಳಿವೆ: ಅರ್ಪಣೆ ಮಾಡುವ ಭಕ್ತನು ತನಗೆ ತೃಪ್ತಿಯಾಗುವವರೆಗೂ ಅರ್ಪಿಸಬೇಕು ಎಂಬುದು ಒಂದು ಮಗ್ಗಲಾದರೆ, ಅರ್ಪಣೆ ಸ್ವೀಕರಿಸುವ ಗುರು, ಲಿಂಗ ಮತ್ತು ಜಂಗಮರು ತೃಪ್ತಿಯಾಗುವವರೆಗೂ ಅರ್ಪಿಸಬೇಕು ಎಂಬುದು ಮತ್ತೊಂದು ಮಗ್ಗಲು. ಇವು ಪರಸ್ಪರ ಸಂಬಂಧವುಳ್ಳ ಅರ್ಥಗಳು ಎಂಬುದನ್ನು ನಾವು ಮರೆಯಬಾರದು.

ಚೆನ್ನಕೂಡಲ ರಾಮೇಶ್ವರ ಲಿಂಗ ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿರುವ ಭರಿತಾರ್ಪಣದ ಚೆನ್ನಬಸವಣ್ಣನು ಭರಿತಾರ್ಪಣದ ಕೆಲವು ನಿಯಮಗಳನ್ನು ತಿಳಿಸಿದ್ದಾನೆ. ಅವುಗಳಲ್ಲಿ ಮುಖ್ಯವಾದ ಕೆಲವು ಹೀಗಿವೆ :

೧. ಹಸಿವು ಅಥವಾ ನಾಲಗೆಯ ಚಪಲವನ್ನು ತೀರಿಸಿಕೊಳ್ಳುವ ಉದ್ದೇಶದಿಂದ ಪದೇ ಪದೇ ಲಿಂಗಾರ್ಪಿತ ಮಾಡಿ ಆಹಾರ ಸ್ವೀಕರಿಸುವುದು ಸ್ವಾರ್ಥವೇ ಹೊರತು, ಭರಿತಾರ್ಪಣವಲ್ಲ.

೨. ನಮಗೆ ಏನೆಲ್ಲವನ್ನೂ ಕೊಟ್ಟಿರುವುದಾಗಿ, ನಾವು ಪರಮಾತ್ಮನಿಗೆ ಕೃತಜ್ಞತೆ ತೋರಿಸಬೇಕು. ಅವನಿಗೆ ತೋರಿಸುವ ಭಕ್ತಿಯೇ ಆ ಕೃತಜ್ಞತೆಯ ವ್ಯಕ್ತರೂಪ. ಕೃತಜ್ಞತೆ ತೋರಿಸದೆ ಹಾಗೆಯೇ ಭಂಜಿಸುವುದು ಭಕ್ತಿಯನ್ನು ಮರೆತಂತೆ; 'ಭಕ್ತಿಯ ಮರೆದು, ಸತ್ಯವ ತೊರೆದ, ದುರ್ಮತ್ತಂಗೆ ಭರತಾರ್ಪಣವಿಲ್ಲ'. (ಲ:೪೦೪)

೩. ನೋಡಿ ಅನುಭವಿಸಿ, ಅನಂತರ ಅನಂತರ ಮುಟ್ಟಿ ಅನುಭವಿಸಿ ಅರ್ಪಿಸುವುದು ಭರಿತಾರ್ಪಣವಲ್ಲ. ವಸ್ತುಗಳನ್ನು ನೋಡುವ ಮುನ್ನ, ಮುಟ್ಟುವ ಮುನ್ನ, ಮನಸ್ಸಿನಲ್ಲೇ ಭಕ್ತಿಪೂರ್ವಕವಾಗಿ ಅರ್ಪಿಸಬೇಕು.

೪. ಬೆಲೆವೆಣ್ಣುಗಳ ಸಹವಾಸ, ಪರಸ್ತ್ರೀಗಮನ, ಹುಸಿ, ಕೊಲೆ, ಹಿಂಸೆ ಕಳವುಗಳನ್ನು ಮಾಡದೆ, ಮೃಷ್ಟಾನ್ನವನ್ನು ಇಚ್ಛಿಸದೆ, ಇರುವುದನ್ನು ಅರ್ಪಿಸಿ, ಅದನ್ನೆ ಭುಂಜಿಸಿ, ತೃಪ್ತಿಪಟ್ಟುಕೊಳ್ಳುವುದೇ ಭರಿತಾರ್ಪಣ.

೫. ತಾನು ಮಾಡುತ್ತಿರುವ ಅನೈತಿಕತೆಯನ್ನು ಅರಿತುಕೊಂಡು, ಮತ್ತೆ ಅದನ್ನು ಮಾಡದಂತೆ ಪ್ರತಿಜ್ಞೆ ಮಾಡಿ, ಅದರಂತೆ ನಡೆದುಕೊಳ್ಳುವುದೇ ಭರಿತಾರ್ಪಣ.

೬. ದೇಹದ ದುಷ್ಟ ಪ್ರಭಾವಕ್ಕೆ ಒಳಗಾಗದೆ, ಇಂದ್ರಿಯ ವಿಷಯಗಳಿಗೆ ದಾಸನಾಗದೆ, ಮತ್ತೆ ಕರ್ಮಪುನರ್ಜನ್ಮಗಳಿಗೊಳಗಾದಂತೆ ಪ್ರತಿಯೊಂದು ವಸ್ತುವನ್ನೂ ಮನಸ್ಸಿನಲ್ಲೇ ಅರ್ಪಿಸುವುದು ಭರಿತಾರ್ಪಣ.

೭. ಅರ್ಪಿಸುವಾಗ ಜನರ ಸ್ತುತಿನಿಂದೆಗಳಿಗೆ ಗಮನ ಕೊಡಬಾರದು.

೮. ಪ್ರತಿತುತ್ತನ್ನು ತಿಂದು ತೃಪ್ತಿಪಡುವಾಗಲೂ ಲಿಂಗಕ್ಕೆ ಅರ್ಪಿಸಿದ ತೃಪ್ತಿಭಾವವಿರಬೇಕು. ಸತಿಸಂಗ ಮಾಡುವಾಗಲೂ ಅರ್ಪಣಾಭಾವವಿರಬೇಕು.

೯. ಮನ ಲಿಂಗದಲ್ಲಿ ನೆಲೆಗೊಂಡು, ನಾನು ಮತ್ತು ಲಿಂಗ ಬೇರೆ ಬೇರೆ ಎಂಬ ಉಭಯಭಾವ ಅಳಿದು ಮಾಡುವ ಅರ್ಪಣೆಯೇ ಭರಿತಾರ್ಪಣೆ. (೮:೪೦೪,೪೧೪,೫:೩೮೨)

**ಭವ :** ಇದಕ್ಕೆ ಹುಟ್ಟು ಮತ್ತು ಭವಚಕ್ರ ಎಂಬ ಎರಡು ಮುಖ್ಯ ಅರ್ಥಗಳಿವೆ. ದಾರ್ಶನಿಕ ಸಾಹಿತ್ಯದಲ್ಲಿ ಭವಚಕ್ರವೇ ಹುಟ್ಟಿಗೆ ಕಾರಣ ಎಂಬ ಅರ್ಥ ಬರುವಂತಹ ಪ್ರಯೋಗಗಳೇ ಅಧಿಕ.

**ಭವನಾಶ :** ಹುಟ್ಟು ಸಾವುಗಳ ಸರಪಳಿಯಿಂದ (ಸಂಸಾರದಿಂದ) ತಪ್ಪಿಸಿಕೊಳ್ಳುವುದೇ ಭವನಾಶವೇ ಹೊರತು, ಸಾವಲ್ಲ. (೯:೧೩೦)

**ಭವಪಾಶ :** ಭವ ಎಂದರೆ ಹುಟ್ಟುವುದು ಎಂದರ್ಥ. ನಮ್ಮ ಪ್ರತಿಯೊಂದು ಭವವೂ ಒಂದು ಪಾಶ. ಹೇಗೆಂದರೆ, ನಾವು ಮರೆವಿನಿಂದಾಗಿ, ಅನೇಕ ಕರ್ಮಗಳನ್ನು ಮಾಡಿ, ಅವುಗಳ ಫಲಗಳನ್ನು ಭೋಗಿಸಲು ಮತ್ತೆ ಭವವನ್ನು ಪಡೆಯುತ್ತೇವೆ. ಹೀಗೆ ನಮ್ಮ ಭವವು ಪಾಶವಾಗಿದೆ. ಮರೆವು ಹೋಗಿ ಅರಿವು ಬಂದರೆ, ನಾವು ಪಾಶಮುಕ್ತರಾಗುತ್ತೇವೆ. (ನೋಡಿ : **ಮರೆವು, ಸಂಸಾರ**)

**ಭವಬೀಜದ ನೆಲೆ :** ಪುನರ್ಜನ್ಮಕ್ಕೆ ಅಗತ್ಯವಾದ ಕರ್ಮಗಳು, ಸಂಸಾರ ಅವುಗಳ ನೆಲೆ. (೪:೧೩೯೧)

**ಭವಭಾರಿ :** ಕರ್ಮಮಾಡಿ ಮತ್ತೆ ಭವಕ್ಕೆ ಬಂದವನು.

**ಭವಮಾಟ :** ನಮ್ಮ ಸ್ವಾರ್ಥಕ್ಕಾಗಿ ನಾವು ಮಾಡಿದ ಕರ್ಮಗಳಿಗೆ ತಕ್ಕ ಫಲಗಳನ್ನು ಇಂದಲ್ಲ ನಾಳೆ ಅನುಭವಿಸಲೇಬೇಕಾಗುತ್ತದೆ. ಅದಕ್ಕಾಗಿ ನಾವು ಮತ್ತೆ ಹುಟ್ಟಬೇಕಾಗುತ್ತದೆ. ಮತ್ತೆ ಹುಟ್ಟಿದಾಗಲೂ ನಾವು ಅಂಥ ಕರ್ಮಗಳನ್ನೇ ಮಾಡುತ್ತೇವೆ. ಭವಚಕ್ರದಲ್ಲಿ ಸಿಕ್ಕಿಸುವಂತೆ ಮಾಡುವ ನಮ್ಮ ಕರ್ಮಗಳೆಲ್ಲವೂ ಭವಮಾಟ. (೩:೫೭)

**ಭವಮಾಲೆ, ಭವಚಕ್ರ :** (ನೋಡಿ : **ಭವಸಾಗರ, ಸಂಸಾರ**)

**ಭವರಾಟಳ :** ೧. ನಮ್ಮ ಹಿಂದಿನ ಜನ್ಮದ ಕರ್ಮಗಳಿಗನುಸಾರವಾಗಿ ಈ ಜನ್ಮದಲ್ಲಿ ಅಥವಾ ಮುಂದಿನ ಜನ್ಮಗಳಲ್ಲಿ ಸುಖದುಃಖಗಳನ್ನು ಅನುಭವಿಸುತ್ತೇವೆ. ಇದು ಒಂದು ನಿರ್ದಿಷ್ಟಕಾಲದಲ್ಲಿ ಪ್ರಾರಂಭವಾಗುತ್ತದೆ ಎಂದು ಹೇಳುವುದು ತಪ್ಪು. ಮೊದಲು ಹುಟ್ಟಿ, ಅನಂತರ ಕರ್ಮ ಮಾಡುತ್ತೇವೆಯೋ, ಅಥವಾ ಕರ್ಮ ಮಾಡಿದುದನ್ನು ತೀರಿಸಲು ಮತ್ತೆ ಹುಟ್ಟುತ್ತೇವೆಯೋ ಎಂದು ಕೇಳುವುದು ತಪ್ಪು.

೨. ಇದು ಅನಾದಿ. ಚಕ್ರವು ದುಂಡಗಿರುವುದರಿಂದ ಅದಕ್ಕೆ ಆದಿಯಿಲ್ಲ.

೩. ಮೊದಲು ಕನಸು ಬಿದ್ದು, ಅನಂತರ ಕನಸಿನ ವಸ್ತುಗಳನ್ನು ಅನುಭವಿಸುತ್ತೇವೆಯೋ ಅಥವಾ ಕನಸಿನ ವಸ್ತುಗಳನ್ನು ನೋಡಿದ ನಂತರ ಕನಸು ಪ್ರಾರಂಭವಾಗುತ್ತದೆಯೋ? ಎರಡೂ ಏಕಕಾಲದಲ್ಲಿ ಪ್ರಾರಂಭವಾಗುತ್ತವೆ. ಅಂದರೆ, ನಾವು ಯಾವಾಗ ನಮ್ಮ ಶಿವತ್ವವನ್ನು ಮರೆತು, ಜೀವತ್ವಕ್ಕೆ ಪ್ರಾಧಾನ್ಯತೆ ಕೊಡುತ್ತೇವೆಯೋ ಆಗಲೆ ನಮ್ಮ ಕರ್ಮ ಪ್ರಾರಂಭವಾಯಿತೆಂದರ್ಥ. ಎಲ್ಲಿಯವರೆಗೆ ಈ ಮರೆವು (ಅವಿದ್ಯೆ) ಅಥವಾ ಅಜ್ಞಾನ ಇರುತ್ತದೆಯೋ ಅಲ್ಲಿಯವರೆಗೂ ಕರ್ಮವೂ, ಅದರ ಫಲಗಳನ್ನು ಅನುಭವಿಸಲು ಭವಾಂತರಗಳೂ ಇರುತ್ತವೆ. ಇದಕ್ಕೆ ಆದಿಯೇ ಇಲ್ಲವಾದುದರಿಂದ, ಮತ್ತು ಇದು ಚಕ್ರದಂತೆ ತಿರುಗುತ್ತಲೇ ಇರುವುದರಿಂದ, ಇದು ಭವಚಕ್ರ ಅಥವಾ ಭವರಾಟಳ. (೧:೧೧೬೦)

**ಭವರೋಗವೈದ್ಯ :** ಅನೇಕ ರೀತಿಯ ಕರ್ಮಗಳನ್ನು ಮಾಡಿ ಪುನರ್ಜನ್ಮಗಳನ್ನು ಪಡೆಯುವುದೇ ಒಂದು ರೋಗ. ಇದು ಲೌಕಿಕ ರೋಗವಲ್ಲವಾದುದರಿಂದ, ಲೌಕಿಕ ರೀತಿಯಲ್ಲಿ ಇದನ್ನು ಗುಣಪಡಿಸಲು ಸಾಧ್ಯವಿಲ್ಲ. ಇದನ್ನು ಅಲೌಕಿಕ ಪರಶಿವನೇ ತನ್ನ ಅನುಗ್ರದ ಮೂಲಕ ಗುಣಪಡಿಸಬೇಕು. ಆದುದರಿಂದ ಅವನು ಭವರೋಗವೈದ್ಯ.

**ಭವವಿರೋಧ :** ಭವಚಕ್ರಕ್ಕೆ ಮತ್ತೆ ಸಿಕ್ಕಿಕೊಳ್ಳದಂತೆ ಮಾಡುವ ಪ್ರಯತ್ನವೇ (ಆಧ್ಯಾತ್ಮಿಕ ಜೀವನವೇ) ಭವವಿರೋಧ. (೮:೧೦೦೩)

**ಭವವ್ಯಾಕುಲ :** ಪೂಜೆ ಮಾಡುವಾಗ ಲಿಂಗಧ್ಯಾನದಲ್ಲಿ ನಿರತನಾಗದೆ, ಪ್ರಾಪಂಚಿಕ (ಭವ) ವ್ಯವಹಾರಗಳ ಬಗ್ಗೆ ವ್ಯಾಕುಲಚಿತ್ತನಾಗಿದ್ದರೆ, ಆ ಭಕ್ತ ಭವವ್ಯಾಕುಲ. (೯:೨೩೭)

**ಭವಸಾಗರ :** ಜೀವನು ತಾನು ಮಾಡಿದ ಕರ್ಮಗಳ ಫಲಗಳನ್ನು ಭೋಗಿಸಲು ಒಂದೇ ಜನ್ಮ ಸಾಲದಾದುದರಿಂದ, ಅವನು ಅನೇಕ ಜನ್ಮಗಳನ್ನೆತ್ತಬೇಕಾಗುತ್ತದೆ. ಇದೇ ಭವಾಂತರ. ಆದರೆ ಭವವು ಸಾಗರದಷ್ಟು ಅಪಾರವಾದುದರಿಂದ ಆಲಂಕಾರಿಕವಾಗಿ ಭವಸಾಗರ ಎಂದು ಕರೆಯಲಾಗಿದೆ.

**ಭವಾಂತರ :** ಭವ ಎಂದರೆ ಹುಟ್ಟು. ವಚನಗಳ ದರ್ಶನವೂ ಸೇರಿದಂತೆ ಎಲ್ಲ ಭಾರತೀಯ ದರ್ಶನಗಳ ಪ್ರಕಾರ (ಚಾರ್ವಾಕ ಮತವನ್ನುಳಿದು), ಮನುಷ್ಯನಿಗೆ ದೇಹದಿಂದ ಭಿನ್ನವಾದ ಆತ್ಮವೆಂಬ ಚಿದ್ವಸ್ತುವಿದ್ದು, ದೇಹ ಸತ್ತರೂ ಅದು ಸಾಯುವುದಿಲ್ಲ; ನಾವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳಿಗನುಸಾರವಾಗಿ, ಈ ಜನ್ಮ ಪಡೆದಿದ್ದೇವೆ. ಈ ಜನ್ಮದಲ್ಲಿ ಮಾಡಿದ ಕರ್ಮಫಲಗಳನ್ನು ಅನುಭವಿಸಲು ನಾವು ಮತ್ತೆ ಹುಟ್ಟಬೇಕಾಗುತ್ತದೆ. ಹೀಗೆ ಕರ್ಮ ಕಾರಣವಾದರೆ ಭವಾಂತರ ಪರಿಣಾಮವಾಗುತ್ತದೆ.

**ಭವಿ :** ಕರ್ಮಗಳನ್ನು ಮಾಡಿ ಮತ್ತೆ ಮತ್ತೆ ಹುಟ್ಟುವವನು ಎಂಬುದು ಈ ಪದದ ನಿಜವಾದ ಅರ್ಥವಾದರೂ ಅದಕ್ಕೆ ವ್ಯಾವಹಾರಿಕವಾಗಿ "ವೀರಶೈವ"ನಲ್ಲದವನು ಎಂಬರ್ಥವಿದೆ. ವೀರಶೈವನಲ್ಲದವನು ಇದೇ ಜನ್ಮದಲ್ಲಿ ಮೋಕ್ಷ ಪಡೆಯುತ್ತಾನೆ ಹಾಗೂ ವೀರಶೈವೇತರರು ಮತ್ತೆ ಮತ್ತೆ ಹುಟ್ಟುವುದರಿಂದ ಅವರು ಭವಿಗಳು ಎಂಬ ನಂಬಿಕೆಯೇ ವ್ಯಾವಹಾರಿಕ ಅರ್ಥದ ಮೂಲ.

**ಭವಿಪಾಕ :** ಲಿಂಗಗಳಿಲ್ಲದವರು ಮಾಡಿದ ಅಡುಗೆ.

**ಭವಿಶೈವದೈವ :** ವೀರಶೈವೇತರ ಶೈವರೆಲ್ಲ ಕೆಲವರ ಪ್ರಕಾರ ಭವಿಗಳು. ವೀರಶೈವರು ಇಷ್ಟಲಿಂಗಪೂಜಕರಾದರೆ, ಭವಿಶೈವರು ಸ್ಥಾವರಲಿಂಗ, ಮತ್ತಿತರ ದೈವಗಳನ್ನು ಪೂಜಿಸುತ್ತಾರೆ. (ಲ:೫೮೩)

**ಭಸ್ಮಧಾರಿ :** ಭಸ್ಮಧಾರಿ ಎಂಬ ಪದವು ಮಾನವರಿಗೂ ಪರಶಿವನಿಗೂ ಅನ್ವಯಿಸುತ್ತದೆ. ವಾಸ್ತವವಾಗಿ ಆ ವರ್ಣನೆ ಮೂಲಾನ್ವಯವಾಗುವುದು ಪರಶಿವನಿಗೆ, ಮಾನವನಿಗೆ ಅನ್ವಯವಾಗುವುದು ಔಪಚಾರಿಕವಾಗಿ ಮಾತ್ರ. ಸೂಕ್ಷ್ಮ, ಕಾರಣ ಮತ್ತು ಸ್ಥೂಲ ಎಂಬ ಮೂರು ಶರೀರಗಳನ್ನು (ಪುರಗಳನ್ನು) ಸುಡುವುದರಿಂದ (ನಮ್ಮ ಎಲ್ಲ ಕರ್ಮಗಳನ್ನೂ ನಾಶ ಮಾಡುವುದರಿಂದ) ಅವನು ತ್ರಿಪುರಸಂಹಾರಿ ಎನಿಸಿಕೊಳ್ಳುತ್ತಾನೆ. ಈ ಶರೀರ ತ್ರಯಗಳನ್ನು ಸುಟ್ಟು ಅವುಗಳ ಬೂದಿಯನ್ನು ಧರಿಸಿಕೊಂಡವ ಪರಶಿವ. ನಾವು ಸಾಂಕೇತಿಕವಾಗಿ ಭಸ್ಮ ಧರಿಸಿಕೊಳ್ಳುತ್ತೇವೆ.

**ಭಸ್ಮಾಂಗಿ :** ಭಸ್ಮಾಂಗಿ ಎಂದರೆ, ಭಸ್ಮವನ್ನೆ ಅಂಗವನ್ನಾಗಿ ಉಳ್ಳವನು. ಎಂದರ್ಥ. ಇದೊಂದು ಆಲಂಕಾರಿಕ ಶಬ್ದ. ಇದನ್ನು ಬೇರೆ ಭಾಷೆಯಲ್ಲಿ ಹೇಳಬೇಕೆಂದರೆ : ಯಾರು ಆಧ್ಯಾತ್ಮ ಸಾಧನೆಯ ಮೂಲಕ ತನ್ನೆಲ್ಲ ಅಂಗವಿಕಾರಗಳನ್ನೂ, ಮನೋವಿಕಾರಗಳನ್ನೂ.

ಕರ್ಮಫಲಗಳನ್ನೂ ಸುಟ್ಟು ಹಾಕಿರುತ್ತಾನೋ, ಅವನಲ್ಲಿ ಉಳಿದಿರುವುದು ಭಸ್ಮ (ಬೂದಿ) ಮಾತ್ರ. ಬೇರೆಯವನಿಗೆ ಕಾಣುವ ದೇಹೇಂದ್ರಿಯಾದಿಗಳು, ಸಾಧಕನಿಗೆ ಮಾತ್ರ ಭಸ್ಮರೂಪ. ಅಂಥ ವ್ಯಕ್ತಿ ಪರಶಿವನ ಪ್ರತಿರೂಪವಾಗಿದ್ದು, ಅವನು ನಡೆದಾಡುವ (ಜಂಗಮ) ಲಿಂಗ ಎನ್ನಿಸಿಕೊಳ್ಳುತ್ತಾನೆ. ಆದುದರಿಂದ ಭಸ್ಮಾಂಗಿಯು ಜಂಗಮ (೩:೭೬). ಮತ್ತೊಂದು ಅರ್ಥದಲ್ಲಿ ವಿಭೂತಿ ಧರಿಸಿಕೊಂಡವರೆಲ್ಲಾ ಭಸ್ಮಾಂಗಿಗಳೇ.

**ಭಾವ :** ವಚನಗಳಲ್ಲಿ ಇದಕ್ಕೆ ಕನಿಷ್ಠ ಮೂರು ಅರ್ಥಗಳಿವೆ : (೧) ಅಹಂಭಾವ, ಸ್ವಾರ್ಥ (೯:೧೩೧), (೨) ಬುದ್ಧಿ; ಪರವಸ್ತು 'ಭಾವಕ್ಕೆ ಅಗೋಚರ' (೯:೧೩೧) ಎಂದಾಗ, ಪರವಸ್ತುವಿನ ಮೂಲ ಸ್ವರೂಪ ಬುದ್ಧಿಗೆ ಮಿಗಿಲಾದುದು ಎಂದರ್ಥವಿದೆ (೩) ಜಾಯತೆ, ಆಸ್ತಿ, ಭಾತಿ, ಎಂಬ ಭಾವಗಳು (೯:೧೩೧).

**ಭಾವಂಗಳೈದು :** ಐದು ವಾಯುಗಳು, ಐದು ಭೂತಗಳು, ಐದು ಅಂತ:ಕರಣಗಳು, ಐದು ಇಂದ್ರಿಯಗಳು, ಐದು ವಿಷಯ (ತನ್ಮಾತ್ರೆ)ಗಳು ಎಂಬ ಐದು ಪಂಚತತ್ವಗಳು ಪದಾರ್ಥಗಳು ಎಂಬುದು ಮೊದಲನೆ ಭಾವ; ಜ್ಞಾತೃ (ತಾನು) ಎಂಬುದು ಎರಡನೆ ಭಾವ; ಜ್ಞೇಯ (ಇದಿರು) ಎಂಬುದು ಮೂರನೆ ಭಾವ; ಕೊಡ ಬೇಕು (ಅರ್ಪಿತ) ಎಂಬುದು ನಾಲ್ಕನೆ ಭಾವ ಮತ್ತು ಕೊಳ್ಳಬೇಕು (ಪ್ರಸಾದ) ಎಂಬುದು ಐದನೆ ಭಾವ. ಶರಣನು ಇವೆಲ್ಲ ಕೇವಲ ತೋರಿಕೆ ಎಂಬುದನ್ನು ಅರಿತು, ಅವುಗಳನ್ನು ಮರೆತು, ಎಲ್ಲವು ಒಂದೇ (ಶಿವನೇ) ಎಂದು ತಿಳಿಯಬೇಕು (೧೨:೧೧೯,೧೧೭೦).

**ಭಾವಕ :** ನಾನು ಬೇರೆ ಜೀವಾತ್ಮರಿಂದಲೂ ಪ್ರಪಂಚದಿಂದಲೂ, ಪರಮಾತ್ಮನಿಂದಲೂ ಭಿನ್ನ ಎಂದು ಭಾವಿಸುವವನು.

**ಭಾವಕ ಪರಿಭ್ರಮಣ :** ನಾನೇ ಹೆಚ್ಚು, ನನಗೆ ಹೆಚ್ಚುಗೊತ್ತು ಎಂಬ ಭ್ರಮೆಗೊಳಗಾದವನು (೮:೧೮೫೨)

**ಭಾವ ಕಾಂಡ :** ಪೂಜೆ, ಮಂತ್ರೋಚ್ಚಾರಣೆ ಮುಂತಾದ ಕ್ರಿಯೆಗಳನ್ನೂ, ದಾನಮಾಡುವುದು, ದಯೆತೋರಿಸುವುದು ಮುಂತಾದ ನೈತಿಕಕ್ರಿಯೆಗಳನ್ನೂ ಯಾವ ಉದ್ದೇಶಕ್ಕಾಗಿ ಮಾಡಬೇಕೆಂದು ತಿಳಿಸಿಕೊಡುವ ಶಾಸ್ತ್ರ (೮:೮೭೯).

**ಭಾವ ಗಮ್ಯಲಿಂಗ :** ಆತ್ಮ (ಭಾವ)ಕ್ಕೆ ಗೋಚರವಾಗುವ ಲಿಂಗ. ಅಂಗ ಅಥವಾ ಆತ್ಮನು ಪರಶಿವನನ್ನು ನೋಡುತ್ತಾನಷ್ಟೇ ಅಲ್ಲ, ಅವನೊಡನೆ ಸಂಯೋಗವನ್ನು ಹೊಂದುತ್ತಾನೆ. ಆಗ ಭಕ್ತನ ಶರೀರವೂ ಆತ್ಮವೂ ಶಿವಮಯವಾಗುವುದರಿಂದ, ಅವನ ದೇಹವು ಯೋಗಾಂಗವೆನಿಸಿಕೊಳ್ಳುತ್ತದೆ.

**ಭಾವ ತ್ರಯ :** ಸಂವಿತ್‌ಕಳಾ, ಸಂಧಾನಕಳಾ, ಸಮರಸಕಳಾ (೧೨:೧೧೯೬).

**ಭಾವದ ಬಯಲಿಗೆ ಬಣ್ಣವಿಡುವುದು :** ಭಾವದ ಬಯಲಿಗೆ ಬಣ್ಣವಿಟ್ಟ ಬಸವಣ್ಣ ಐಕ್ಯಸ್ಥಿತಿಯನ್ನು ತಲುಪಿದವನು. ತನ್ನ ವೈಯಕ್ತಿಕತೆಯನ್ನು (ಭಾವವನ್ನು) ಪರಶಿವನಿಗೆ ಅರ್ಪಿಸಿ, ಆ ಭಾವದಲ್ಲಿ ಬಯಲನ್ನು (ಪರಶಿವನನ್ನು) ತುಂಬಿಕೊಡಿದ್ದಾನೆ. ಆ ಬಯಲು ಇಂದ್ರಿಯಗೋಚರವಲ್ಲದಿದ್ದರೂ. ಆ ಸಾಧಕನು ಬಯಲಿನ ಸಾಕಾರ ಮೂರ್ತಿಯಾಗಿದ್ದಾನೆ. ಬಸವಣ್ಣನು ಅಂಥ ಸಾಕಾರಮೂರ್ತಿಯಾದುದರಿಂದ ಅವನನ್ನು ಬಯಲಿಗೆ ಬಣ್ಣವಿಟ್ಟವನೆಂದು ವರ್ಣಿಸಲಾಗಿದೆ, (೫:೭೨೫).

**ಭಾವದಭ್ರಮೆ :** ನಾನು ಪರಶಿವನಿಂದ ಪ್ರತ್ಯೇಕವಾದ ವ್ಯಕ್ತಿ ಎಂಬ ಭ್ರಮೆ. ನಾನು ಪರಶಿವನ ಭಾಗ ಅಥವಾ ಅಂಗ ಎಂಬುದು ಸತ್ಯ (೨:೧೦೨೧,೧೦೯೨)

**ಭಾವ ನಿರ್ಭಾವವನೆಯ್ದುವುದು :** (೯:೩೭೬) ನಾನು ಇದ್ದೇನೆ, ನಾನು ಮಾಡುತ್ತೇನೆ, ನಾನು ಸುಖಿಸುತ್ತಿದ್ದೇನೆ ಅಥವಾ ದುಃಖಿಸುತ್ತಿದ್ದೇನೆ ಎಂಬುದೆಲ್ಲಾ ಭಾವ. ವಸ್ತುಗಳ ಅರಿವಿಗೆ, ನನ್ನ ಸುಖದುಃಖಗಳ ಅನುಭವಕ್ಕೆ ಮತ್ತು ನಾನು ಈ ಕೆಲಸಗಳನ್ನು ಮಾಡಬೇಕು ಅಥವಾ ಮಾಡಬಾರದು ಎಂಬ ನಿರ್ಧಾರಕ್ಕೆ ಈ ನಾನು ಎಂಬ ಭಾವ ಆವಶ್ಯಕ. ಆದರೆ ಪರಮಾತ್ಮನಲ್ಲಿ ಐಕ್ಯವಾಗುವಾಗ, ಈ ಭಾವ ನಶಿಸಿಹೋಗಿ, ನಿರ್ಭಾವವಾಗುತ್ತದೆ. ನಿರ್ಭಾವವಾಗದೆ ಶಿವಸಾಕ್ಷಾತ್ಕಾರ ಸಾಧ್ಯವಿಲ್ಲ. (೯:೨೭೬)

**ಭಾವನಿರ್ಭಾವ ಸಿದ್ಧಿ :** ತಾನೆಂಬ ಅಹಂಭಾವವನ್ನು ಇಲ್ಲವಾಗಿಸಿದ ಸಿದ್ಧಿ; ಅಹಂನಷ್ಟ. (೮:೧೨೨೬) (ನೋಡಿ : **ಭಾವನಿರ್ಭಾವವನೆಯ್ದುವುದು**)

**ಭಾವಪಿಂಡಜ್ಞಾನ ಐಕ್ಯಲೇಪಸ್ಥಲ :** ಈ ಆರೂ ಪದಗಳು ಒಟ್ಟುಗೂಡಿ ಆಧ್ಯಾತ್ಮಿಕ ಜೀವನದ ಕೊನೆಯ ಹಂತಕ್ಕೆ ಅನ್ವಯಿಸುತ್ತದೆ. ಆದರೆ ಇವುಗಳಲ್ಲಿನ ಮೊದಲನೆ ಐದು ಪದಗಳ ಸ್ಪಷ್ಟನೆ ಆವಶ್ಯಕ.

ಭಾವ ಎಂದರೆ, ನಾನು ಎಂಬ ಪ್ರತ್ಯೇಕ ಭಾವ. ಆದರೆ ಆಧ್ಯಾತ್ಮಿಕ ಜೀವನದ ಕೊನೆಯ ಘಟ್ಟದಲ್ಲಿ ನಾನು ಎಂಬ ಭಾವಕ್ಕೆ ಸ್ವಾರ್ಥಪರವಾದ ಆಸೆಗಳಾಗಲಿ, ಆಧ್ಯಾತ್ಮಿಕ ಜೀವನಕ್ಕೆ ಅಡ್ಡಿ ಮಾಡುವ ಕಾಮ, ಕ್ರೋಧಾದಿಗಳಾಗಲಿ ಇರುವುದಿಲ್ಲವಾದುದರಿಂದ, ಅದು ಶುದ್ಧವಾದ ಆತ್ಮ (ಜೀವ). ಪಿಂಡವೆಂದರೆ ದೇಹ. ಪಿಂಡದಲ್ಲಿ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೂ ಅಲ್ಲದೆ, ಅಂತಃಕರಣಚತುಷ್ಟಯವೂ ಇರುತ್ತವೆ. ಆದರೆ ಆಧ್ಯಾತ್ಮಿಕ ಜೀವನದ ಕೊನೆಯ ಘಟ್ಟದಲ್ಲಿ ದೇಹೇಂದ್ರಿಯಕರಣಾದಿಗಳೆಲ್ಲವೂ ಶುದ್ಧವಾಗಿ, ಕಾಯವು ಅಕಾಯವಾಗಿರುತ್ತದೆ. ಅಲ್ಲದೆ ಆ ಘಟ್ಟದಲ್ಲಿ ಸಾಧಕನು (ಸಿದ್ಧನು) ತನ್ನ ದೇಹವು ಶಿವನ ದೇಹವೆಂದೂ, ತನ್ನದೆಂಬ ದೇಹ ತನಗಿಲ್ಲವೆಂದೂ ತಿಳಿದಿರುತ್ತಾನೆ.

ಜ್ಞಾನ ಅಥವಾ ಅರಿವು ಎಂದರೆ ಜಗತ್ತಿನ ಬಗೆಗೆ ಅಥವಾ ಅದರ ಕೆಲವು ವಿಭಾಗಗಳ ಬಗೆಗೆ ಪಡೆಯುವ ತಿಳುವಳಿಕೆ ಎಂದಲ್ಲ. ಜೀವಾತ್ಮನು ಬಂಧನದಲ್ಲಿರುವಾಗ ಇಂದ್ರಿಯ,

ಅಂತಃಕರಣ ಇತ್ಯಾದಿಗಳ ಪ್ರಭಾವಕ್ಕೊಳಪಟ್ಟಿರುತ್ತಾನೆ. ಆದರೆ ಆಧ್ಯಾತ್ಮಿಕ ಜೀವನದ ಕೊನೆಯ ಹಂತದಲ್ಲಿ ಜೀವಾತ್ಮನಿಗೆ ಅವುಗಳ ಸಂಗವಿದ್ದರೂ, ಅವುಗಳ ಪ್ರಭಾವಕ್ಕೆ ಹೊರತಾಗಿದ್ದಾನೆ. ಅಂತಹ ಚಿತ್‌ಸ್ವರೂಪನಾದ ಆತ್ಮನೇ ಜ್ಞಾನ. ಅದೇ ಜ್ಞಾನ ಪಿಂಡದಲ್ಲಿಯೂ ಅಲ್ಲದೆ, ಪ್ರಪಂಚದಲ್ಲೆಲ್ಲಾ ವ್ಯಾಪಕವಾಗಿ ಹರಡಿಕೊಂಡಿದೆ. ಅಂದರೆ ವ್ಯಕ್ತಿಯಲ್ಲಿರುವ ಆತ್ಮನೂ (ಜ್ಞಾನವೂ) ಪ್ರಪಂಚದಲ್ಲಿರುವ ಬ್ರಹ್ಮನೂ (ಜ್ಞಾನವೂ) ಒಂದೇ ಅಲ್ಲದೆ ಎರಡಲ್ಲ. ಐಕ್ಯ ಎಂದರೆ ಎರಡಲ್ಲದೆ, ಒಂದು ಎಂದರ್ಥ. ಶುದ್ಧವಾದ ಜೀವಾತ್ಮನು (ಜ್ಞಾನವು) ವಿಶ್ವಾತ್ಮ ಪರಶಿವನೊಂದಿಗೆ ಒಂದಾದಾಗ, ಅವನು ತನ್ನನ್ನು ಪ್ರತ್ಯೇಕಿಸಿಕೊಳ್ಳುವುದಿಲ್ಲ. ಅಲ್ಲದೆ ಅವನ ದೇಹ, ಇಂದ್ರಿಯಾದಿಗಳೆಲ್ಲಾ ಲಿಂಗಮಯವಾದುದರಿಂದ, ಅವನು ಇದು ದೇಹ, ಇದು ಆತ್ಮ ಎಂದು ಭೇದ ಮಾಡದೆ, ಎಲ್ಲವನ್ನೂ ಒಂದೇ ಎಂದು ತಿಳಿಯುತ್ತಾನೆ.

ಲೇಪ ಎಂದರೆ ಧರಿಸುವುದು. ಲಿಂಗದಲ್ಲಿ ಐಕ್ಯನಾದವನು ತನ್ನ ಪ್ರತ್ಯೇಕತೆಯನ್ನು ಕಳೆದುಕೊಂಡು, ತನ್ನ ವ್ಯಕ್ತಿತ್ವಕ್ಕೆ ಶಿವತ್ವವನ್ನು ಲೇಪಿಸಿಕೊಳ್ಳುತ್ತಾನೆ. ಅಲ್ಲಿಂದ ಮುಂದಕ್ಕೆ ತಾನೊಬ್ಬ ವಿಶಿಷ್ಟ ವ್ಯಕ್ತಿಯಂತೆ ನಡೆದುಕೊಳ್ಳದೆ, ಶಿವನು ನಡೆಸುವ ವಾಹನದಂತೆ ಅಥವಾ ಗೊಂಬೆಯಂತೆ ನಡೆದುಕೊಳ್ಳುತ್ತಾನೆ.

ಆಧ್ಯಾತ್ಮ ಜೀವನದ ಕೊನೆಯನ್ನು ಮುಟ್ಟಿರುವವನ ಸ್ಥಿತಿ ಈ ಮೇಲಿನಂತಿದ್ದರೆ, ಅವನ ಸ್ಥಿತಿಯನ್ನು ಭಾವಪಿಂಡ ಜ್ಞಾನ ಸ್ಥಲವೆಂದು ಕರೆಯಬಹುದು. (೯:೬೫೩)

**ಭಾವಲಿಂಗ :** ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇರುವ ಆತ್ಮ ಚೈತನ್ಯಾತ್ಮಕ ಲಿಂಗ (ಪರಶಿವ)ದ ಅಂಶ. ಅದೇ ಪ್ರಾಣದ ರೂಪದಲ್ಲಿ ಪ್ರಾಣಲಿಂಗವೆಂತಲೂ, ದೇಹದ ಮೇಲೆ ಕಾಣುವ ಇಷ್ಟಲಿಂಗವೆಂತಲೂ ಕರೆಯಲ್ಪಟ್ಟಿದೆ, ಎಂಬುದು ವಚನಕಾರರ ಸಿದ್ಧಾಂತ. ಜೀವಾತ್ಮ, ಅಂಗ, ಎಂಬ ಪದಗಳು ಭಾವಲಿಂಗದ ಪರ್ಯಾಯ ಪದಗಳು. ಸಾಮರಸ್ಯ ಸಿದ್ಧಿಸಿದನಂತರ ಭಾವಲಿಂಗ ಮತ್ತು ಪರಶಿವ ಇವರಿಗಿರುವ ವ್ಯತ್ಯಾಸ ಇಲ್ಲವಾಗಿ, ಶರಣನಿಗೆ ತಾನು ಪರಶಿವನ ಅಂಗ ಎಂಬ ಭಾವ ಮೂಡುತ್ತದೆ.

**ಭಾವಲಿಂಗದಂಗ :** ತನ್ನಲ್ಲಿ ಪರಶಿವ ನೆಲೆಸಿದ್ದಾನೆ, ತಾನು ಅವನನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂದು ಛಲ ಸಾಧಿಸುವವನು ಮಹೇಶ ಸ್ಥಲದಲ್ಲಿದ್ದಾನೆ. ಅವನು ತಾನು (ತನ್ನ ಅಂಗವು) ಭಾವಲಿಂಗದ ಅಂಗವೆಂದು ತಿಳಿಯುತ್ತಾನೆ. (೮:೧೫೩೬)

**ಭಾವಲಿಂಗ ಪರಿಣಾಮಿ :** ತನ್ನ ಭಾವವೇ ಲಿಂಗವೆಂದು ತಿಳಿದು ಪ್ರಪಂಚದ ಎಲ್ಲ ವಸ್ತುಗಳನ್ನೂ ಮನಸ್ಸಿನಲ್ಲೇ ಲಿಂಗಕ್ಕೆ ಅರ್ಪಿಸಿ, ಅವುಗಳನ್ನು ಪ್ರಸಾದವೆಂಬಂತೆ ಭೋಗಿಸುವವನು. ಈ ರೀತಿಯ ಭೋಗದಿಂದ ಅವನು ಸುಖದುಃಖಗಳ ವ್ಯತ್ಯಾಸ, ಸ್ತುತಿ ನಿಂದೆಗಳ ವ್ಯತ್ಯಾಸ, ಮುಂತಾದ ಸಾಮಾನ್ಯ ಜನರು ಮಾಡುವ ವ್ಯತ್ಯಾಸಗಳನ್ನು ಮಾಡುವುದಿಲ್ಲ. (೯:೧೩೩೯)

**ಭಾವಲಿಂಗಭಾವ :** ದೇಹ, ಇಂದ್ರಿಯ, ಅಂತಃಕರಣಾದಿಗಳೆಲ್ಲವನ್ನೂ ಶಿವನಿಗರ್ಪಿಸಿ, ತನ್ನ ಭಾವಸ್ಥಳದಲ್ಲಿ ಪರಶಿವನ್ನು ಸ್ಥಾಪಿಸಿದ ಅನುಭಾವಿಗೆ ಭಾವಲಿಂಗಭಾವ (ತನ್ನ ಭಾವ ಅಥವಾ ಅಂಗವೆಲ್ಲವೂ ಶಿವಮಯ ಎಂಬ ಭಾವನೆ) ಇರುತ್ತದೆಯೇ ಹೊರತು, ಪ್ರಕೃತಿಭಾವ ಇರುವುದಿಲ್ಲ. (೧೨:೬೯೦)

**ಭಾವಲಿಂಗಸಂಬಂಧ :** ಅಂಗನು ಅಹಂಕಾರದಿಂದ ಜೀವಾತ್ಮನೆನಿಸಿಕೊಳ್ಳುತ್ತಾನೆ. ಆ ಜೀವಾತ್ಮನ ಭಾವದಲ್ಲಿ ಸ್ವಾರ್ಥ ಹೋಗಿ ಅದರ ಜಾಗದಲ್ಲಿ ಲಿಂಗ ಸೇರಿಕೊಂಡರೆ, ಆಗ ಭಾವಲಿಂಗಸಂಬಂಧ ಉಂಟಾಯಿತೆಂದರ್ಥ. ಈ ಸಂಬಂಧ ಶರಣಸ್ಥಲದಲ್ಲಿ ಸಾಧ್ಯವಾಗುತ್ತದೆ. (೮:೧೪೨೪)

**ಭಾವ, ವಿಭಾವ, ನಿರ್ಭಾವ :** ಭಾವ (ಆಧ್ಯಾತ್ಮಿಕ ಬುದ್ಧಿ) ಬಲಿತಾಗ, ಸಾಧಕನು ಇಷ್ಟಲಿಂಗವೇ ಪರಶಿವ (ಲಿಂಗ) ಎಂದು ತಿಳಿಯುತ್ತಾನೆ. ಆಧ್ಯಾತ್ಮಿಕ ಬುದ್ಧಿ ಇನ್ನೂ ಬಲಿಯದೆ ಇದ್ದಾಗ ಅಥವಾ ಬುದ್ಧಿಗೆ ಅಜ್ಞಾನ ಜಾಸ್ತಿಯಾದಾಗ (ವಿಭಾವವಾದಾಗ), ಇಷ್ಟಲಿಂಗ ಕೇವಲ ಕಲ್ಲಿನಂತೆ ಕಾಣುತ್ತದೆ; ಆದರೆ ಬುದ್ಧಿ ತನ್ನನ್ನು ತಾನು ಮರೆತಾಗ (ನಿರ್ಭಾವವಾದಾಗ) ಲಿಂಗ ಶೂನ್ಯ ಎನಿಸಿಕೊಳ್ಳುತ್ತದೆ (೪:೧೧೬೦).

**ಭಾವರಹಿತ ಭಾವಜ್ಞ :** ಅನುಭಾವದಿಂದಾಗಿ ತಾನೆಂಬ ಭಾವವನ್ನು ಕಳೆದುಕೊಂಡು, ಆತ್ಮಸಾಕ್ಷಾತ್ಕಾರವನ್ನು ಪಡೆದುಕೊಂಡವನು (೭:೭೬).

**ಭಾವಸಾರಾಯ :** ಭಾವದ ಕೇಂದ್ರದಲ್ಲಿರುವವನೇ ಪರಶಿವ ಎಂದು ತಿಳಿದವನು.

**ಭಾವಸೂತಕ :** ನಾನು ಪರಶಿವನಿಂದ ಬೇರೆಯೂ ಪ್ರತ್ಯೇಕವೂ ಆಗಿರುವ ವ್ಯಕ್ತಿ ಎಂಬ ಅಜ್ಞಾನ. ಈ ಅಜ್ಞಾನವೂ ಒಂದು ಸೂತಕ.(೨:೭೦೬)

**ಭಾಳದಕ್ಷರವ ತೊಡೆಯುವುದು :** ನಾವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳಿಗೆ ತಕ್ಕಫಲವನ್ನು ಉಣ್ಣಲೇಬೇಕೆಂದು ಈಶ್ವರ ಈಗಾಗಲೇ ನಿಯಮಿಸಿದ್ದಾನೆ. ಭಾರತೀಯರು ಇದನ್ನು ಸಾಂಕೇತಿಕವಾಗಿ ಭಾಳದಕ್ಷರ (ಹಣೆ ಬರಹ) ಎನ್ನುತ್ತಾರೆ. ಕರ್ಮವನ್ನು ಅನುಭವಿಸುವ ಮುನ್ನ ಹಣೆಬರಹವನ್ನು ಅಳಿಸಲು ಯಾರಿಗೂ ಅಳವಲ್ಲ. (೪:೫೧೬)

**ಭಾಳನೇತ್ರ :** ಹಣೆಗಣ್ಣು; ಹಣೆಯಲ್ಲಿ ಕಣ್ಣುಳ್ಳವನು. ಈ ಪದವು ವಿಶೇಷವಾಗಿ ಶಿವನಿಗೆ ಅನ್ವಯಿಸುವುದಾದರೂ, ತಂತ್ರಶಾಸ್ತ್ರದ ಪ್ರಕಾರ, ಎಲ್ಲರೂ ಹಣೆಗಣ್ಣರೇ. ಪ್ರತಿಯೊಬ್ಬನೂ ಆಧ್ಯಾತ್ಮಿಕ ಶಿಕ್ಷಣದ ಮೂಲಕ ತನ್ನ ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರವನ್ನು ಜಾಗೃತಗೊಳಿಸಿದರೆ, ಅವನು ಅಲ್ಲಿ ಮಹಾಬೆಳಗನ್ನು ಕಾಣುತ್ತಾನೆ. ಇದನ್ನೇ ಪುರಾಣಗಳಲ್ಲಿ ಶಿವನ ಮೂರನೇ ಕಣ್ಣಿನಿಂದ ಮಹಾ ಉರಿ ಹೊರಬೀಳುತ್ತದೆ ಎಂದು ಹೇಳಲಾಗುತ್ತದೆ.

**ಭಿನ್ನಗಣ್ಯ** : ತಾನು ಪರಶಿವನಿಂದ ಭಿನ್ನ ಎಂಬ (ತಪ್ಪು) ದೃಷ್ಟಿ. ಇದು ವಚನಕಾರರ ಪ್ರಕಾರ ನಿರಕ್ಷೇಪರ ದೃಷ್ಟಿಯಲ್ಲ. (೫:೧೦೧೭)

**ಭಿನ್ನಕ್ರೀ** : ನಿಜವಾದ ಭಕ್ತಿಯೇನೆಂಬುದನ್ನು ಅರಿಯದೆ, ಬಾಹ್ಯ ಕ್ರಿಯೆಗಳೇ ಭಕ್ತಿ ಎಂಬ ಭ್ರಮೆ. (೮:೪೭೩)

**ಭಿನ್ನಜ್ಞಾನಿ** : ಭಕ್ತನು ಪರಶಿವನೊಂದಿಗೆ ಯಾವಾಗಲೂ ಒಂದಾಗಿಯೇ ಇರುತ್ತಾನೆ. ಆದರೆ ಅಜ್ಞಾನದಿಂದಾಗಿ ಈ ಅವಿನಾಸಂಬಂಧವನ್ನು ಅವನು ಮರೆತು, ತಾನು ಪರಶಿವನಿಂದ ಭಿನ್ನ ಎಂದು ತಿಳಿದುಕೊಂಡಿದ್ದಾನೆ. ಅಂಥವನೇ ಭಿನ್ನಜ್ಞಾನಿ. (೮:೪೭೩, ೧೦:೧೮೮)

**ಭೂತನಾಥ ಅಥವಾ ಭೂತಪತಿ** : ಭೂತ ಎಂಬ ಪದವು ಭೂತಪಂಚಕಗಳಿಗೂ ಭೂತಪಂಚಕಗಳಿಂದಾದ ದೇಹವನ್ನು ಪಡೆದ ಜೀವಿಗಳಿಗೂ ಅನ್ವಯಿಸುತ್ತದೆ. ಈ ಪದವನ್ನು ಯಾವುದೊಂದು ಅರ್ಥದಲ್ಲಿ ತೆಗೆದುಕೊಂಡರೂ ಪರಶಿವನೇ ಭೂತಪತಿಯಾಗುತ್ತಾನೆ. ಕೆಲವು ವೇಳೆ ಭೂತ ಎಂಬ ಪದವು ದೇಹವಿಲ್ಲದ ಆತ್ಮಗಳಿಗೆ ಅನ್ವಯಿಸುತ್ತದೆ. ಆಗಲೂ ಅಂತಹ ಗಣಗಳಿಗೆ ಪರಶಿವನೇ ಈಶ (ಭೂತಗಣಾಧೀಶ).

**ಭೂತನಾಯಕರ ಸ್ಥಾನ** : ಮಾನವ ದೇಹವು ಪಂಚಭೂತಗಳಿಂದ ರಚಿತವಾಗಿದ್ದು, ಪ್ರತಿಯೊಂದು ಭೂತಕ್ಕೂ ಒಬ್ಬೊಬ್ಬ ಅಧಿದೇವತೆ ಅಥವಾ ನಾಯಕನಿರುತ್ತಾನೆ. ಆ ನಾಯಕರು ನಮ್ಮ ದೇಹದ ವಿವಿಧ ಭಾಗಗಳಲ್ಲಿ ಎಲ್ಲಿರುತ್ತಾರೆಂಬುದಕ್ಕೆ ವಿವರ :

ಪೃಥ್ವೀಭೂತದ ನಾಯಕನಾದ ಬ್ರಹ್ಮನು ಹೃದಯಸ್ಥಾನದಲ್ಲಿ; ಅಪ್‌ತತ್ವದ ನಾಯಕನಾದ ವಿಷ್ಣುವು ಕಂಠಸ್ಥಾನದಲ್ಲಿ; ಅಗ್ನಿಭೂತದ ನಾಯಕನಾದ ರುದ್ರನು ಭ್ರೂಮಧ್ಯದಲ್ಲಿ, ವಾಯುಭೂತದ ನಾಯಕನಾದ ಈಶ್ವರನು ನೆತ್ತಿಯಲ್ಲಿ ಮತ್ತು ಆಕಾಶತತ್ವದ ನಾಯಕನಾದ ಸದಾಶಿವನು ಲಲಾಟದಲ್ಲಿ ಇದ್ದಾರೆ. (೧೩:೧೫೭೨)

**ಭೂತಭವಿಷ್ಯದ್ವರ್ತಮಾನಕ್ಕೆ ಹೊರಗಾಗುವುದು** : ನಮ್ಮ ಪ್ರತಿಯೊಂದು ಕ್ರಿಯೆಯೂ ಒಂದು ದೇಶ (ಪ್ರದೇಶ) ಮತ್ತು ಒಂದು ಕಾಲದಲ್ಲಿ ನಡೆಯುತ್ತದೆ. 'ನಾನು ಓದಿದೆ', ಎಂದರೆ ನನ್ನ ಓದುವ ಕಾರ್ಯ ಒಂದು ನಿರ್ದಿಷ್ಟಕಾಲದಲ್ಲಿ ಪ್ರಾರಂಭವಾಗಿ ಒಂದು ನಿರ್ದಿಷ್ಟಕಾಲದಲ್ಲಿ ಮುಗಿಯಿತು, ಒಂದು ನಿರ್ದಿಷ್ಟ ಪ್ರದೇಶದಲ್ಲಿ ನಡೆಯಿತು, ಎಂದರ್ಥ. ಹೀಗೆ, ನಮ್ಮ ಅಸ್ತಿತ್ವಕ್ಕೆ ಹಾಗೂ ಘಟನೆಗಳಿಗೆ ದೇಶಕಾಲಗಳ ನಂಟು ಇದೆ. ಆದರೆ ಯಾವಾಗಲೂ ನಾನು ಪರಶಿವನಲ್ಲೇ ಬೆರೆತೇ ಇದ್ದರೆ ಆಗ ಕಾಲದ (ಭೂತ, ಭವಿಷ್ಯತ್ ಮತ್ತು ವರ್ತಮಾನಗಳ) ವ್ಯತ್ಯಾಸ ಗೊತ್ತಾಗುವುದಿಲ್ಲ. ಆದ್ದರಿಂದ ಲಿಂಗೈಕ್ಯನಾದವನು ಭೂತಭವಿಷ್ಯದ್ವರ್ತಮಾನಕ್ಕೆ ಹೊರಗಾದವನು.

ಅದೇ ರೀತಿ ಪರಮಾತ್ಮನು ಎಲ್ಲ ಕಡೆಯೂ ಇರುವುದರಿಂದ ಅವನು ದೇಶಾತೀತ. ಲಿಂಗೈಕ್ಯನೂ ದೇಶಾತೀತನೇ.

**ಭೂತಹಿತ :** ಭೂತವೆಂದರೆ ಇಲ್ಲಿ ಜಡ ಎಂದಲ್ಲ. ಯಾವುದೇ ಪ್ರಾಣಿ ಭೂತವೆನಿಸಿಕೊಳ್ಳುತ್ತದೆ. 'ಸರ್ವಭೂತಹಿತ...' ಎಂದರೆ 'ಸಕಲ ಜೀವಿಗಳ ಹಿತ' ಎಂದರ್ಥ. (೩:೫೬)

**ಭೇದ :** ಭೇದವೆಂದರೆ ವ್ಯತ್ಯಾಸ ಅಥವಾ ಭಿನ್ನತೆ ಎಂಬರ್ಥ ಅಲ್ಲದೆ, ರಹಸ್ಯ, ಒಳಾರ್ಥ ಎಂಬರ್ಥವೂ ಇದೆ. (ಉದಾ : ಅದರ ಭೇದವನರಿಯ ... ಇಂತೀ ಭೇದವ ತಿಳಿದು... ೯:೧೧೭)

**ಭೃತ್ಯಾಚಾರ :** ನೋಡಿ : **ಪಂಚಾಚಾರ.**

**ಭೋಗಮೂರ್ತಿ :** ಪರಶಿವನಿಗೆ ಹಸಿವು ತೃಷೆಗಳಿಲ್ಲದಿದ್ದರೂ, ಅವನು ಅನುಭಾವಿಯ ವ್ಯಕ್ತಿತ್ವವನ್ನು ಪೂರ್ಣವಾಗಿ ವ್ಯಾಪಿಸಿಕೊಂಡಿರುವುದರಿಂದ, ಅವನೇ ಭಕ್ತನ ಮುಖದಿಂದ ಭೋಗಿಸುತ್ತಾನೆ. ಆಗ ಅಮೂರ್ತನಾದ ಪರಶಿವ ಭೋಗಮೂರ್ತಿಯೆನಿಸಿಕೊಳ್ಳುತ್ತಾನೆ. (೯:೨೪೭)

**ಭೋಕ್ತೃತ್ವ :** ಜೀವಾತ್ಮನು ತನ್ನ ಸಾಂಸಾರಿಕ ಅವಸ್ಥೆಯಲ್ಲಿರುವಾಗ ಅನೇಕ ರೀತಿಯ ಕೆಲಸಗಳನ್ನು ಮಾಡಿ ಅದರ ದೃಷ್ಟ ಮತ್ತು ಅದೃಷ್ಟ ಫಲಗಳನ್ನು ಅನುಭವಿ(ಭೋಗಿ)ಸುತ್ತಾನೆ. ಇದೇ ಭೋಕ್ತೃತ್ವಶಕ್ತಿ.

**ಭ್ರಮೆ ತಿಳಿದವನು :** ಭ್ರಮೆಯಿಂದ ಎಚ್ಚೆತ್ತವನು. ತಾನು ಪರಶಿವನಿಂದ ಭಿನ್ನ ಎಂಬುದು ತಪ್ಪು ಗ್ರಹಿಕೆ ಎಂದು ತಿಳಿದವನು. (೧:೬೫೬)

**ಭ್ರೂಮಧ್ಯದಿಂದ ಮೇಲೆ ಒಪ್ಪಿಪ್ಪ ಕನ್ನಿಕೆ :** ಹುಬ್ಬಿನ ಮಧ್ಯದಲ್ಲಿ ಆಜ್ಞಾಚಕ್ರವಿದೆ. ಅದರ ಮೇಲಿರುವುದು ಸಹಸ್ರಾರ ಚಕ್ರ. ಅದನ್ನು ಒಂದು ಕನ್ಯೆಗೆ ಹೋಲಿಸಲಾಗಿದೆ. (೬೩೩).

**ಮಂಕು, ಮರುಳು, :** 'ಮಂಕ' (ಮಂಕು) ಮತ್ತು 'ಮರುಳ' (ಮರುಳು) ಪರ್ಯಾಯ ಪದಗಳಾಗಿದ್ದು, ಅವುಗಳ ಅರ್ಥ 'ವ್ಯಾವಹಾರಿಕ ಬುದ್ಧಿಯಿಲ್ಲದವನು' ಎಂದು. ಮರುಳ ಅತಿದಡ್ಡನೂ ಆಗಿರಬಹುದು, ಹುಚ್ಚನೂ ಆಗಿರಬಹುದು. ಆದರೆ ವೀರಶೈವರಲ್ಲಿ ಅನುಭಾವಿಗೆ ಮರುಳನೆನ್ನುವ ಪದ್ಧತಿ ಬಹಳ ಹಿಂದಿನಿಂದಲೂ ಇದೆ. ಉದಾಹರಣೆಗೆ, ಅನುಭಾವಿಗೆ ಹಣದ ಆವಶ್ಯಕತೆಯಿಲ್ಲದುದರಿಂದ, ಅದನ್ನು ಆತ ಎಸೆದಾಗ, ವ್ಯಾವಹಾರಿಕ ಬುದ್ಧಿಯುಳ್ಳ ಜನರು ಅವನನ್ನು ಮಂಕ, ಮರುಳ, ಹುಚ್ಚ ಎಂದಾರು. ಆದರೆ ಮರುಳಪ್ಪ, ಹುಚ್ಚಪ್ಪ, ಎಂಬ ಹೆಸರುಗಳು ದಡ್ಡತನವನ್ನು ಸೂಚಿಸದೆ, ಯಾರೋ ಒಬ್ಬ ಅನುಭಾವಿಯನ್ನು ನೆನಪಿಸುತ್ತವೆ. "ಮನನಷ್ಟವಾಗಿ, ಮರವು ಇಲ್ಲದಾಗಿ, ತಾನೆಂಬ ಭಾವ ಕರಿಗೊಂಡಾತ"ನನ್ನು ದಸರಯ್ಯಗಳ ಪುಣ್ಯ ಸ್ತ್ರೀ ವೀರಮ್ಮ ಮಂಕು, ಮರುಳು, ಎನ್ನುವುದು ಈ ಕಾರಣಕ್ಕಾಗಿಯೇ. (೫:೬೯೭)

**ಮಂತ್ರ :** ಅಷ್ಟಾವರಣಗಳಲ್ಲಿ ಒಂದಾದ ಮಂತ್ರಕ್ಕೆ ಲಿಂಗಾಯತಧರ್ಮದಲ್ಲಿ ಒಂದು ವಿಶಿಷ್ಟಸ್ಥಾನವಿದೆ. ಇಲ್ಲಿ ಮಂತ್ರವೆಂದರೆ ಓಂ ನಮಃ ಶಿವಾಯ ಎಂಬ ಆರಕ್ಷರದ ಮಂತ್ರವಾಗಬಹುದು. ಅಥವಾ ನಮಃ ಶಿವಾಯ (ಅಥವಾ ಶಿವಾಯ ನಮಃ) ಎಂಬ ಐದಕ್ಷರದ ಮಂತ್ರವಾದರೂ ಆಗಬಹುದು. ಲಿಂಗದೀಕ್ಷಾಸಮಯದಲ್ಲಿ ಗುರುವು ಶಿಷ್ಯನ ಕಿವಿಯಲ್ಲಿ ಪಂಚಾಕ್ಷರಿ ಮಂತ್ರವನ್ನು ಉಸುರಿ, ಅದನ್ನು ತಪ್ಪದೆ ಉಚ್ಚರಿಸುವಂತೆ ಬೋಧಿಸುತ್ತಾನೆ.

ಮಂತ್ರವೆಂದರೆ ದೈವವನ್ನು ಮನಸ್ಸಿನಲ್ಲೆ (ಮನ್) ಇಟ್ಟುಕೊಳ್ಳುವ, ಅಥವಾ ಮನನ ಮಾಡಿಕೊಳ್ಳುವ ಒಂದು ತಂತ್ರ. ಲಿಂಗಪೂಜಾ ಸಮಯದಲ್ಲಷ್ಟೇ ಅಲ್ಲ, ಯಾವಾಗಲೂ ಪರಶಿವನನ್ನು ನೆನೆಯಬೇಕು ಎಂಬ ಉಪದೇಶ ಮಂತ್ರ ಸಿದ್ಧಾಂತದಲ್ಲಿ ಅಡಗಿದೆ. ಲಿಂಗವನ್ನು ಯಾವಾಗಲೂ ಪೂಜಿಸಲು ಸಾಧ್ಯವಿಲ್ಲವೆಂದ ಮೇಲೆ, ಕೊನೆಗೆ ನೆನೆಯಲಿಕ್ಕಾದರೂ ಸಾಧ್ಯಮಾಡಿಕೊಳ್ಳಬೇಕು. ಹಾಗೆ ನೆನೆಯಲು ಸಾಧ್ಯವಾಗುವುದು ಮಂತ್ರದ ಮೂಲಕ. ಆದರೆ ಮಂತ್ರವನ್ನು ಯಾಂತ್ರಿಕವಾಗಿ ಉಚ್ಚರಿಸದೆ, ಮನಃ ಪೂರ್ವಕವಾಗಿ ಉಚ್ಚರಿಸಬೇಕು.

ಹೀಗೆ ಪರಶಿವನನ್ನು ಯಾವಾಗಲೂ ನೆನೆಯುವುದರಿಂದ ಎರಡು ಫಲಗಳುಂಟಾಗುತ್ತವೆ. ೧. ಯಾವಾಗಲೂ ಪರಶಿವನನ್ನು ಮಂತ್ರದ ಮೂಲಕ ನೆನೆಯುವವನು ಅಧಾರ್ಮಿಕ ಮತ್ತು ಅನೈತಿಕ ಚಟುವಟಿಕೆಗಳಲ್ಲಿ ನಿರತನಾಗಿರುವುದಿಲ್ಲ, ಅಥವಾ ಆದಷ್ಟೂ ಅವುಗಳನ್ನು ದೂರ ಮಾಡಲಿಚ್ಛಿಸುತ್ತಾನೆ. ಅಂತೂ ಇದರಿಂದ ಆದಷ್ಟೂ ಶುದ್ಧನಾಗಲು ಪ್ರಯತ್ನಿಸುತ್ತಾನೆ. ೨. ಯಾವಾಗಲೂ ಶಿವನನ್ನು ನೆನೆದು, ತಾನು ಮಾಡುವುದೆಲ್ಲವೂ ಶಿವಾರ್ಪಿತವೆಂದು ಬಗೆದು, ಭಕ್ತನು ಪ್ರಾಣಲಿಂಗಿಯಾಗುತ್ತಾನೆ. ಹಾಗೂ ಅಂಥ ಮನಶುದ್ಧಿಯನ್ನು ಸಾಧಿಸಿದವನಿಗೆ ಅನುಭಾವದ ಮೂಲಕ ಲಿಂಗೈಕ್ಯ ಸಾಧ್ಯವಾಗುತ್ತದೆ.

ಕೆಲವು ವಚನಕಾರರ ಪ್ರಕಾರ, ನಮಃಶಿವಾಯ ಎಂಬ ಅಕ್ಷರಗಳು ಪರಶಿವನಿಂದಲೇ ಉದ್ಭವಿಸುತ್ತವೆ ಹಾಗೂ ಪಂಚಭೂತಗಳು ಈ ಅಕ್ಷರಗಳಿಂದ ಉದ್ಭವಿಸುತ್ತವೆ.

**ಮಂತ್ರಪಿಂಡ :** ಮಂತ್ರದಿಂದಾದ ಪಿಂಡ (ದೇಹ) ಮಂತ್ರಪಿಂಡ. ನಮಃಶಿವಾಯ ಎಂಬ ಮಂತ್ರವನ್ನು ಯಾವಾಗಲೂ ಉಚ್ಚರಿಸುವ ಮೂಲಕ ದೇಹದ ಪೂರ್ವಾಶ್ರಯವನ್ನು ಕಳೆದುಕೊಂಡ ಭಕ್ತನು ಅದನ್ನು ಮಂತ್ರಪಿಂಡವನ್ನಾಗಿ ಮಾಡಿಕೊಳ್ಳುತ್ತಾನೆ.

**ಮಂತ್ರಪಿಂಡದಿಂದ ಲಿಂಗ ಪ್ರತಿಷ್ಠೆ :** ನಮಃ ಶಿವಾಯ ಎಂಬ ಮಂತ್ರವನ್ನು ಸದಾ ಉಚ್ಚರಿಸುವ ಮೂಲಕ ಹಾಗೂ ಯಾವಾಗಲೂ ಶಿವನ ಬಗೆಗೇ ಚಿಂತಿಸುವ ಮೂಲಕ, ನಮ್ಮ ದೈಹಿಕ ವಿಕಾರಗಳು ಇಲ್ಲವಾಗಿ, ಆ ದೇಹದಲ್ಲಿ (ಅಂತಹ ಮಂತ್ರ ಪಿಂಡದಲ್ಲಿ) ಪರಶಿವನನ್ನು ಪ್ರತಿಷ್ಠೆ ಮಾಡಬಹುದು. (೭:೧೧೦೭)

**ಮಂತ್ರಮೂರ್ತಿ :** ನಾವು ಲಿಂಗಸಾನಿಧ್ಯದಲ್ಲಿರಲು ಮೂರು ಮಾರ್ಗಗಳಿವೆ. ಲಿಂಗಪೂಜೆಯಲ್ಲಿ ನಿರತನಾಗಿರುವುದು ಒಂದನೆ ಮಾರ್ಗ. ಯಾವಾಗಲೂ ಮಂತ್ರದ ಮೂಲಕ (ಮನಸ್ಸಿನಲ್ಲೇ ಅಥವಾ ಸಶಬ್ದವಾಗಿ) ಶಿವನನ್ನು ನೆನೆಯುವುದು ಎರಡನೆ ಮಾರ್ಗ. ಧ್ಯಾನದ ಮೂಲಕ ಅನುಭಾವವನ್ನು ಸಾಧಿಸಿ, ಲಿಂಗದಲ್ಲೇ ಒಂದಾಗುವುದು ಮೂರನೆಯ ಮಾರ್ಗ.

ಮಂತ್ರವೆಂದರೆ ಮನನದ ಮೂಲಕ ಪರವಸ್ತುವಿನ ಸಾನಿಧ್ಯದಲ್ಲಿರುವುದು ಎಂದಾದರೆ, ಯಾರು ಯಾವಾಗಲೂ ಮಂತ್ರದಲ್ಲಿ ನಿರತನಾಗಿರುತ್ತಾನೋ, ಅವನ ದೇಹವು ಮಂತ್ರಪಿಂಡವಾಗುತ್ತದೆ. ಅಥವಾ ಅವನ ಮಂತ್ರವೇ ಮೂರ್ತಿವೆತ್ತಂತೆ ಇರುತ್ತಾನೆ. ಅಂದರೆ, ಅವನನ್ನು ಮಾತನಾಡಿಸಿದರೆ, ಮಂತ್ರಗಳು (ಶಿವಸಂಬಂಧ ಮಾತುಗಳು) ಹೊರಬರುತ್ತವೆ. (೧೦:೮೧೬)

**ಮಂತ್ರವೈದ್ಯ :** ಭವರೋಗವೆಂಬುದಕ್ಕೆ, ಗುರು ಮಂತ್ರವೆಂಬ ಚಿಕಿತ್ಸೆ ಮಾಡುವುದರಿಂದ, ಮಂತ್ರವೇ ವೈದ್ಯವಾಗುತ್ತದೆ. (೧:೬೫೪)

**ಮಜ್ಜನ :** (ತ್ಸ:ಮಾರ್ಜನ) ತೊಳೆಯುವುದು. ಮನುಷ್ಯರಿಗೆ ಸಂಬಂಧಿಸಿದಂತೆ ಸ್ನಾನ ಎಂಬರ್ಥವೂ, ಲಿಂಗಕ್ಕೆ ಸಂಬಂಧಿಸಿದಂತೆ ('ಲಿಂಗ ಮಜ್ಜನ') ಲಿಂಗದ ಮೇಲೆ ಎರೆಯುವ ನೀರು ಎಂಬರ್ಥವೂ ಇದಕ್ಕಿದೆ.

**ಮಠ :** ೧. ಮನೆ; ಗೃಹಸ್ಥರು ವಾಸಿಸುವ ಸ್ಥಳ. ೨. ಜಂಗಮರು ವಾಸಿಸುವ ಸ್ಥಳ.

**ಮಣಿಪೂರಕ ಚಕ್ರ :** ನಾಭಿಸ್ಥಾನದಲ್ಲಿರುವ, ಹತ್ತು ದಳಗಳ ಚಕ್ರ. (ಪದ್ಮ). (ನೋಡಿ : ಚಕ್ರಗಳು)

**ಮಧ್ಯಮದ ಸುಖ :** ಸ್ವರ್ಗಕ್ಕೂ ಪಾತಾಳಕ್ಕೂ ಮಧ್ಯ ಇರುವ ಮರ್ತ್ಯದ ('ಮಧ್ಯಮದ') ಸುಖ; ಕ್ಷಣಿಕ ಪ್ರಾಪಂಚಿಕ ಸುಖ. (೪:೬೪೪)

**ಮನಃಪ್ರವೇಶಿ :** ಲಿಂಗವನ್ನು ಮನಸ್ಸಿನೊಳಕ್ಕೆ ಪ್ರವೇಶಮಾಡಿಕೊಂಡವನು.

**ಮನಕ್ಕೆ ಸಾಹಿತ್ಯ :** (ಲಿಂಗವು) ಮನಸ್ಸಿನಲ್ಲಿ ಅಂತಸ್ಥವಾಗುವುದು. (೮:೩೮೪)

**ಮನತ್ರಯ :** ಸುಬುದ್ಧಿ, ನಿಃಕಾಮ, ಅನುಕೂಲೆ. (೧೨:೧೧೯೬)

**ಮನದಂತರ್ಯಾಮಿ :** ಪರಶಿವನು ಭೌತವಸ್ತುವಿನಲ್ಲಿಯೂ ಅಲ್ಲದೆ, ಮನಸ್ಸಿನಲ್ಲಿಯೂ ಇದ್ದು ಅದನ್ನು ಒಳಗಿನಿಂದಲೇ ಆಳುತ್ತಾನೆ. (೧:೮೧೭)

**ಮನದಭಂಗ :** ಪ್ರಾಥಮಿಕ ಹಂತದಲ್ಲಿರುವ ಸಾಧಕನು ಪ್ರಪಂಚದ ವಿವಿಧ ವಸ್ತುಗಳಲ್ಲಿ ಏಕತೆಯಿಲ್ಲವೆಂದೂ, ತಾನು ಪ್ರಪಂಚದಿಂದಲೂ ಪರಶಿವನಿಂದಲೂ ಭಿನ್ನವೆಂದೂ ತಪ್ಪು ತಿಳಿದುಕೊಂಡಿರುತ್ತಾನೆ. ಹೀಗಾಗಿ, ಮನಸ್ಸೇ ಬೇರೆ, ಅದು ಯೋಚಿಸುವ ವಸ್ತುಗಳೇ

ಬೇರೆ ಎಂದು ತಿಳಿದುಕೊಂಡಿರುತ್ತಾನೆ. ಅವನು ಐಕ್ಯಸ್ಥಲವನ್ನು ಮುಟ್ಟಿದ ನಂತರ ಈ ತಪ್ಪು ತಿಳಿವಳಿಕೆ ಮಾಯವಾಗಿ, ತನ್ನ ಮನಸ್ಸು ಲಿಂಗದಿಂದ ಪ್ರತ್ಯೇಕವಲ್ಲ ಎಂಬ ಅರಿವು ಉಂಟಾಗುತ್ತದೆ. (೫:೨)

**ಮನದ ಮೈಲಿಗೆ :** ಅವಿದ್ಯೆ ಮತ್ತು ಅದರಿಂದ ಹುಟ್ಟುವ ಸ್ವಾರ್ಥಪರ ಆಸೆ, ಕಾಮ, ಕ್ರೋಧ ಮುಂತಾದ ಮನೋವಿಕಾರಗಳು. (೧:೧೪೦೦)

**ಮನದ ಶಿಲೆ :** ಶಿವನೇ ಇಷ್ಟಲಿಂಗವೆಂಬ ಕಲ್ಲಿನಲ್ಲಿ ನೆಲೆಸುವ ಬದಲು ಮನಸ್ಸೆಂಬ ಕಲ್ಲಿನಲ್ಲೇ ನೆಲೆಸು (ಎಂಬ ಪ್ರಾರ್ಥನೆ) (೯:೬೧)

**ಮನದ ಸೂತಕ ಹಿಂಗಿಸುವುದು :** ವಸ್ತುವಿನಿಂದ ವಸ್ತುವಿಗೆ ಹಾರುವುದೇ ಮನಸ್ಸಿನ ಸಹಜ ಗುಣ. ಒಂದು ಆಸೆಯ ಪೂರೈಕೆ ಮುಗಿಯುತ್ತಿದ್ದಂತೆಯೇ ಮತ್ತೊಂದಕ್ಕೆ ಮನಸ್ಸು ನೆಗೆಯುತ್ತಲೇ ಇದ್ದರೆ, ನಾವು ಸ್ವಾರ್ಥ ಆಸೆಗಳನ್ನು ತ್ಯಜಿಸಿ, ಬಂದದ್ದೆಲ್ಲಾ ಪರಶಿವನ ಪ್ರಸಾದ ಎಂಬ ಭಾವ ನಮ್ಮಲ್ಲಿ ಮೂಡುವುದೇ ಇಲ್ಲ. ಆದುದರಿಂದ ಪ್ರಸಾದಿಯಾಗಬಯಸುವವನು ಮನದ ಸೂತಕವ ಮೊದಲು ಹಿಂಗಿಸಬೇಕು. (೮:೧೦೩೮).

**ಮನದಳ ವಿಭಾಡ :** ಮನಸ್ಸಿನಲ್ಲಿರುವ ಕೆಟ್ಟ ಯೋಚನೆಗಳು, ಕೆಟ್ಟ ಆಸೆಗಳು, ಇತ್ಯಾದಿ ದಳಗಳನ್ನು ನಾಶಮಾಡುವವನು (ವಿಭಾಡ); ಪರಶಿವ. (೫:೬೬೩)

**ಮನನೆಮ್ಮಿದ ಅರ್ತಿ :** ಶಿವನನ್ನು ಮನಸ್ಸು ಪೂರ್ತಿಯಾಗಿ ನಂಬಿ, ಅವನಿಗೆ ತೋರಿಸುವ ಪ್ರೀತಿ ನಿಜವಾದ ಭಕ್ತಿ. (೯:೨೩೪)

**ಮನಬೆಂದವನು :** ಲಿಂಗಾಂಗ ಸಾಮರಸ್ಯದ ಮೂಲಕ ಮನನಷ್ಟ (ಅಹಂನಷ್ಟ) ಮಾಡಿಕೊಂಡವನು. (೮:೧೮೬)

**ಮನಭವಿ :** ಎಲ್ಲ ರೀತಿಯ ಪಾಪಕೃತ್ಯಗಳನ್ನು ಮಾಡುತ್ತಾ, ಲಿಂಗೈಕ್ಯತೆಯ ಬಗೆಗೆ ಯೋಚಿಸದೆ ಇರುವುದು. ಗುರುವು ಕೇವಲ ಲಿಂಗದೀಕ್ಷೆ ಮಾಡಿದರೆ ಸಾಲದು, ಅವನು ಭಕ್ತನ ಮನಸ್ಸಿನ ಭವಿತನವನ್ನೂ ಕಳೆಯಬೇಕು, ಭಕ್ತನೂ ಅದನ್ನು ಕಳೆದುಕೊಳ್ಳಲೋಸ್ಕರ ತನ್ನ ಭಕ್ತಿಯನ್ನು ನಿಷ್ಠಾಭಕ್ತಿಯನ್ನಾಗಿ ಮಾಡಿಕೊಳ್ಳಬೇಕು. (೮:೧೪೨೦+೧೪೨೧)

**ಮನಭಾಜನ :** ಮನಸ್ಸು ಲಿಂಗಕ್ಕೆ ಆಶ್ರಯವಾಗಿರುವುದು. ಅಂತಹ ಮನಸ್ಸಿನಲ್ಲಿ ಲಿಂಗದ ಯೋಚನೆಯಲ್ಲದೆ ಮತ್ತೇನೂ ಇರುವುದಿಲ್ಲ.

**ಮನಭಾವಶೂನ್ಯಶರಣಲಿಂಗ :** ಧ್ಯಾನದಲ್ಲಿ ಮುಳುಗಿರುವವನಿಗೆ ಕೊನೆಗೆ ತನಗೊಂದು ಮನಸ್ಸಿದೆ ಎಂಬ ಭಾವ ಸಹ ಇಲ್ಲವಾಗುತ್ತದೆ. ಅಷ್ಟೇ ಅಲ್ಲ, ಧ್ಯಾನ (ಅನುಭಾವ) ಮುಗಿದ ಮೇಲೂ ಸರ್ವವೂ ಶಿವಮಯವೆಂದು ತಿಳಿದ ಅವನಿಗೆ ಮನಭಾವವು ಶೂನ್ಯವಾಗುತ್ತದೆ. ಅಂಥ ಶರಣನೇ ಮನಭಾವಶೂನ್ಯಶರಣಲಿಂಗ. (೧೨:೮೩೩)

**ಮನಮನವನೇಕಾರ್ಥ ಮಾಡುವುದು :** ಲಿಂಗೈಕ್ಯ ಸಾಧಿಸಿದವನು ತನ್ನ ದೇಹೇಂದ್ರಿಯಾದಿ ಕರಣಗಳೆಲ್ಲವನ್ನೂ ಪರಶಿವನ ದೇಹೇಂದ್ರಿಯಾದಿಗಳೆಂದು ಅರಿಯುತ್ತಾನೆ. ಹೀಗಿರುವಾಗ ತನ್ನ ಮನವೆಂದರೂ ಒಂದೇ ಪರಶಿವನ ಮನವೆಂದರೂ ಒಂದೇ ಎಂಬ ಅವನ ಭಾವವೇ ಮನಮನವನೇಕಾರ್ಥ ಮಾಡುವುದು. (೯:೧೧೬೩)

**ಮನಮುಗ್ಧವಾದವನು :** ಅನುಭಾವದ ಮೂಲಕ ಲಿಂಗಾಂಗ ಸಾಮರಸ್ಯವನ್ನು ಪಡೆದು, ಆ ಅನುಭಾವ ದ್ವಂದ್ವಾತೀತವಾದಾಗ ಮತ್ತು ಅನುಭಾವಿಯು ಸ್ವಪ್ರಜ್ಞೆಯನ್ನು ಕಳೆದುಕೊಂಡಾಗ, ಆ ಅನುಭಾವದ ವಿಷಯ ಮತ್ತು ಸುಖ ಅವನ ಮನಸ್ಸಿಗೆ ಅಥವಾ ಬುದ್ಧಿಗೆ ಮೀರಿ ಅವನು ಮನಮುಗ್ಧನಾಗುತ್ತಾನೆ. (೫:೧೦೧೫)

**ಮನಲಿಂಗಭಾವ :** ತನ್ನ ಚಿತ್ತ, ಮನಸ್ಸು, ಅಹಂಕಾರಗಳೆಲ್ಲವನ್ನೂ ಶಿವನಿಗರ್ಪಿಸಿ, ಅವೆಲ್ಲವೂ ಪರಶಿವನವು, ತನ್ನವಲ್ಲ ಎಂಬ ಭಾವವನ್ನು ಬೆಳೆಸಿಕೊಂಡಮೇಲೆ, ಹಾಗೂ ಮನಸ್ಸು ಮತ್ತೇನನ್ನೂ ನೆನೆಯದೆ ಶಿವನನ್ನೆ ಸದಾ ನೆನೆಯುವಂತೆ ಮಾಡಿದ ಶರಣನಲ್ಲಿ ಮನಲಿಂಗಭಾವ (ಮನಸ್ಸೆಲ್ಲಾ ಲಿಂಗ ಎಂಬ ಭಾವ) ಇರುತ್ತದೆಯೇ ಹೊರತು, ಶಿವನೇ ಬೇರೆ, ಪ್ರಕೃತಿ ಭಾವವುಳ್ಳ ಮನಸ್ಸೇ ಬೇರೆ, ಎಂಬ ಪ್ರಕೃತಿಭಾವ ಇರುವುದಿಲ್ಲ.

**ಮನಲಿಂಗಸಂಬಂಧ :** ಮನಸ್ಸು ಯಾವಾಗಲೂ ಲಿಂಗಧ್ಯಾನದಲ್ಲೇ ನಿರತವಾಗಿರುವುದು. ಇದು ಅಂಗಲಿಂಗ ಸಂಬಂಧಕ್ಕಿಂತ ಉತ್ತಮವಾದುದು. (೮:೪೪೧)

**ಮನವಿಚ್ಛಂದ :** ತಾರತಮ್ಯ ಮಾಡುವ ಮನಸ್ಸು. (ಇವನು ನಮ್ಮವನು ಇವನಿಗೆ ಒಳ್ಳೆಯದನ್ನು ಮಾಡಬೇಕು. ಅವನು ಬೇರೆಯವನು, ಅವನಿಗೆ ಒಳ್ಳೇಯದನ್ನು ಮಾಡಬಾರದು ಎಂದು ಭಾಗವಾದ ಮನಸ್ಸು.)

**ಮನಸಾರಾಯ :** ಮನಸ್ಸಿನ ಕೇಂದ್ರವೆ ಪರಶಿವನೆಂದು ತಿಳಿದವನು.

**ಮನಸ್ಥಲ :** ಮನಸ್ಸಿನಲ್ಲಿ ನೆಲಸಿರುವ ಲಿಂಗ.

**ಮನಹಾಳಾಗುವುದು :** ಅನುಭಾವದ ದೆಸೆಯಿಂದಾಗಿ, ಎಲ್ಲವನ್ನೂ, ತನ್ನ ಆತ್ಮವನ್ನೂ, ಶಿವನಿಗೆ ಅರ್ಪಿಸಿದವನಿಗೆ ತನ್ನತನವಿಲ್ಲ. ಅವನು ಯೋಚಿಸುವುದು, ಇಚ್ಛಿಸುವುದು, ಎಲ್ಲದೂ ಶಿವನ ಇಚ್ಛೆಯಿಂದಲೇ ಹೊರತು, ತನ್ನಿಚ್ಛೆಯಿಂದಲ್ಲ. (೧:೫೦೯)

**ಮನೋಮುಕ್ತಿ :** ಮನಸ್ಸು ಯಾವುದಾದರೊಂದು ಭೌತವಸ್ತುವನ್ನು ಅಥವಾ ಅದರಿಂದ ಸಿಗಬಹುದಾದ ಸುಖವನ್ನು ಚಿಂತಿಸುತ್ತಾ ಇರುತ್ತದೆ. ಹೀಗಾಗಿ ಅದಕ್ಕೆ ಮುಕ್ತಿಯೆಂಬುದಿಲ್ಲ. ಒಂದು ವೇಳೆ, ಅದು ಸುಖದ ಚಿಂತೆಯನ್ನು ಬಿಟ್ಟು ಶಿವಧ್ಯಾನ ಪ್ರಾರಂಭಿಸಿದರೆ, ಅದಕ್ಕೆ ಮುಕ್ತಿ ಸಿಕ್ಕುತ್ತದೆ. (೯:೩೨೧)

**ಮನೋರ್ಲಯದೀಕ್ಷೆ :** ವಿಷಯದಿಂದ ವಿಷಯಕ್ಕೆ ಹಾರುವ ಮನಸ್ಸನ್ನು ಯಾವಾಗಲೂ ಪರಶಿವನನ್ನೇ ನೆನೆಯುವಂತೆ, ಪರಶಿವನಿಗಾಗಿ ಭೋಗಿಸುವಂತೆ, ಅದನ್ನು ಏಕಮುಖವಾಗಿ

ಹರಿಯುವಂತೆ ಮಾಡಿ, ಅನುಭಾವದಲ್ಲಿ ಅದನ್ನು ಲಯಗೊಳಿಸಬೇಕು. ಹೀಗೆ ಮಾಡಬೇಕೆಂದು ತೆಗೆದುಕೊಳ್ಳುವ ದೀಕ್ಷೆಯೇ ಮನೋರ್ಲಯ ದೀಕ್ಷೆ. (೧೦:೭೦೪)

**ಮಮಕಾರ ದಾಸೋಹ :** ಐಕ್ಯಸ್ಥಲ ತಲುಪಿದವನಿಗೆ ತಾನೆಂಬ ಮಮಕಾರವಿಲ್ಲ. ಆ ಮಮಕಾರವನ್ನು ಅವನು ಶಿವನಿಗೆ ಅರ್ಪಿಸಿ, ಐಕ್ಯಸ್ಥಲವನ್ನು ತಲುಪಿದ್ದಾನೆ.

**ಮರ್ತ್ಯ :** ಮನುಷ್ಯರ ಅಥವಾ ಸಾಯುವವರ ಲೋಕ. ಸ್ವರ್ಗಲೋಕದಲ್ಲಿರುವವರು ಅಮರರು ಹಾಗೂ ಸದಾ ಸುಖಿಗಳು. ಮನುಷ್ಯರು ಮರ್ತ್ಯಲೋಕದಲ್ಲಿ ಪುಣ್ಯ ಮಾಡಿ ಸ್ವರ್ಗಕ್ಕೆ ಹೋದರೂ, ಆ ಪುಣ್ಯ ತೀರಿದ ಮೇಲೆ ಮತ್ತೆ ಮರ್ತ್ಯಲೋಕಕ್ಕೆ ಮರಳಬೇಕಾಗುತ್ತದೆ. ಹಾಗೆಯೇ, ಪಾಪ ಮಾಡಿ ನರಕಕ್ಕೆ ಹೋದವರು ತಮ್ಮ ಪಾಪಕ್ಕೆ ತಕ್ಕ ಶಿಕ್ಷೆ ಮುಗಿದ ನಂತರ ಮತ್ತೆ ಮರ್ತ್ಯಲೋಕಕ್ಕೆ ಮರಳಬೇಕಾಗುತ್ತದೆ. ಹೀಗೆ ಮರ್ತ್ಯವು ಪಾಪ-ಪುಣ್ಯ ಮಾಡುವ ಸ್ಥಳವಾದುದರಿಂದ ಬಸವಣ್ಣನವರು ಅದನ್ನು ಕರ್ತಾರನ ಕಮ್ಮಟವೆಂದು ವರ್ಣಿಸಿದ್ದಾರೆ.

**ಮರ್ತ್ಯದ ಮಣಿಹ :** ಭಕ್ತನಾಗಿ ಮರ್ತ್ಯಲೋಕದಲ್ಲಿರುವವರೆಗೂ ಮಾಡಬೇಕಾದ (ಪೂಜೆ, ವ್ರತ, ಮುಂತಾದ) ಕರ್ತವ್ಯ. (೮:೧೩೬೦)

**ಮರಣಸೂತಕನಿರಸನ :** ಮರಣವು ಅತ್ಯಂತ ಅಪವಿತ್ರ ಘಟನೆಯೆಂಬ ಭಾವದಿಂದ ಹಿಂದೂಗಳು ಮರಣಸೂತಕವನ್ನಾಚರಿಸುತ್ತಾರೆ. ಆದರೆ ವೀರಶೈವರು ಅದನ್ನು ಆಚರಿಸಬಾರದು ಹಾಗೂ ಅಂಥ ಸೂತಕನಿರಸನವನ್ನು ಈ ಕೆಳಗಿನಂತೆ ಮಾಡಬಹುದು.

ಪ್ರತಿ ಮಾನವನೂ ಪರಶಿವನ ಅಂಗ (ಭಾಗ)ವಾಗಿದ್ದು ಮಲತ್ರಯಗಳ ಸಂಯೋಗದಿಂದಾಗಿ ಅದು ಸಂಸಾರದಲ್ಲಿ ಬಂಧಿತವಾಗಿದ್ದು, ಅನೇಕ ರೀತಿಯ ದುಃಖಗಳನ್ನು ಅನುಭವಿಸುತ್ತಿದೆ. ಪೂಜೆ, ಮಂತ್ರ ಮುಂತಾದ ಕ್ರಿಯೆಗಳ ಮೂಲಕವೂ, ನೈತಿಕ ಕ್ರಿಯೆಗಳ ಮೂಲಕ, ಧ್ಯಾನದ ಮೂಲಕವೂ ಆತ್ಮ (ಅಂಗ)ವನ್ನು ಶುದ್ಧೀಕರಿಸಿ, ಅಂಗ ಲಿಂಗದಲ್ಲಿ ಲೀನವಾಗಿ, ಇಂದ್ರಿಯಕರಣಾದಿಗಳು ಪರಶಿವನ ಶಕ್ತಿಯಲ್ಲಿ ಲೀನವಾಗುವುದೇ ಮರಣ ಎಂದು ತಿಳಿದುಕೊಂಡು, ಅಂಥ ಮರಣದ ಬಗ್ಗೆ ಸಂತೋಷಪಟ್ಟರೆ, ಮರಣಸೂತಕ ನಿರಸನವಾದಂತೆ; ಅಷ್ಟಲ್ಲದೆ, ದುಃಖಿಸುವುದು, ಎದೆ ಬಡಿದುಕೊಂಡು ಅಳುವುದು, ಪುರೋಹಿತರನ್ನು ಕರೆಸಿ ಶುದ್ಧೀಕರಣ ಮಾಡುವುದು ಮರಣಸೂತಕ ನಿರಸನವಲ್ಲ. (೧೪:೨೪೭೦)

**ಮರನೊಳಗಣ ಕಿಚ್ಚು :** ಪ್ರತಿಯೊಂದು ವಸ್ತುವಿನಲ್ಲಿಯೂ ಪಂಚಭೂತಗಳಿವೆ. ಆದರೆ ಅವು ಸಮಪ್ರಮಾಣದಲ್ಲಿರುವುದಿಲ್ಲ. ಬೆಂಕಿಯೆಂಬ ಭೂತವು ಬೆಂಕಿಯಲ್ಲಿರುವಂತೆ ನೀರಿನಲ್ಲಿಯೂ, ಕಲ್ಲಿನಲ್ಲಿಯೂ, ಮರದಲ್ಲಿಯೂ ಇರುತ್ತದೆ. ನೀರಿನಲ್ಲಿ ಬೆಂಕಿಯಿಲ್ಲದಿದ್ದರೆ, ನೀರು ಬಿಸಿಯಾಗುವುದಿಲ್ಲ. ಕಲ್ಲಿನಲ್ಲಿ ಬೆಂಕಿಯಿರುವುದು

ಕಲ್ಲುಗಳನ್ನು ಒಂದಕ್ಕೊಂದು ಹೊಡೆದಾಗ ವ್ಯಕ್ತವಾಗುತ್ತದೆ. ಅದೇ ರೀತಿ ಮರಕ್ಕೆ ಬೆಂಕಿ ತಾಗಿದಾಗ, ಮರದಲ್ಲಿದ್ದ ಬೆಂಕಿ ಉರಿಯುತ್ತದೆ.

ಈ ವಿಷಯವನ್ನು ವಚನಕಾರರು ಉಪಮೆಯಂತೆ ಬಳಸಿಕೊಂಡಿದ್ದಾರೆ. ಅದೇ ರೀತಿ ಕುರುಹಿನಲ್ಲಿ (ಇಷ್ಟಲಿಂಗದಲ್ಲಿ) ಅರಿವು ಇರುವುದರಿಂದಲೇ ಅದನ್ನು ಕುರಿತ ಧ್ಯಾನವು ಅರಿವನ್ನು ಕಾಣುವುದರಲ್ಲಿ ಕೊನೆಗೊಳ್ಳುತ್ತದೆ.

**ಮರಹು, ಮರೆವು :** ಮನುಷ್ಯನು ಮೊದಲು ಪರಶಿವನ ಅಂಗವಾಗಿದ್ದನು. ಸಂಸಾರದಲ್ಲಿದ್ದಾಗಲೂ ಅವನು ತಾನು ಶಿವಾಂಶಿಕನೆಂಬುದನ್ನು ತಿಳಿಯದೆ, ತನ್ನ ಮೂಲಸ್ವರೂಪವನ್ನು ಮರೆತಿದ್ದಾನೆ. ಈ ಮರೆವು ಅಥವಾ ಅವಿದ್ಯೆಯಿಂದಾಗಿ, ಅವನು ತನ್ನ ಜೀವನದ ಧ್ಯೇಯಗಳನ್ನೆ ತಪ್ಪಾಗಿ ಭಾವಿಸಿಕೊಂಡಿದ್ದಾನೆ; ಇದರಿಂದಾಗಿ ಅವನು ಭವಚಕ್ರದಲ್ಲಿ ಸಿಕ್ಕಿಕೊಂಡಿದ್ದಾನೆ. ಮರೆವನ್ನು ತೊಡೆದು ಅರಿವನ್ನು ಪಡೆದರೆ ಮುಂಚಿನಂತೆ ಸಾಮರಸ್ಯ ಪಡೆಯುತ್ತಾನೆ.

**ಮಲ, ಮಲತ್ರಯ :** ಎಲ್ಲಕ್ಕೂ ಕಾರಣೀಭೂತನಾದ ಪರಶಿವನಲ್ಲಿ ಶಕ್ತಿಯಿರುತ್ತದೆ. ಪ್ರಳಯ ಸ್ಥಿತಿಯಲ್ಲಿ ಅದು ಸುಪ್ತಸ್ಥಿತಿಯಲ್ಲಿರುತ್ತದೆ. ಪರಶಿವನು ಸೃಷ್ಟಿಸಬೇಕೆಂದು ನೆನಸಿದಾಗ, ಆ ಶಕ್ತಿಯು ಅವನ ಇಚ್ಛೆಯ ಪ್ರಕಾರ ವಿವಿಧ ಹಂತಗಳ ಮೂಲಕ ವಿಕಾಸಹೊಂದಿ ಕೊನೆಗೆ ಜಗತ್ತಾಗುತ್ತದೆ. ಆ ಶಕ್ತಿಯು ಜೀವನಲ್ಲಿರುವಾಗ ಅವು ಮಲ ಎನಿಸಿಕೊಳ್ಳುತ್ತವೆ. ವಾಸ್ತವವಾಗಿ ಪ್ರಪಂಚದ ಯಾವುದೇ ಶಕ್ತಿಯು ಮಲವಲ್ಲ. ಆದರೆ ಮಾನವನು ತನ್ನ ಅಜ್ಞಾನದಿಂದಾಗಿ ಅನೇಕ ರೀತಿಯ ಕರ್ಮಗಳನ್ನೆಸಗಿ ಅವುಗಳ ಫಲದಿಂದಾಗಿ ಅವನು ಬಂಧಿತನಾಗಿದ್ದಾನೆ. ನಾನು ಬಂಧಿಯಾಗಿದ್ದೇನೆ, ಎಂಬ ಮನೋಭಾವವೇ ಶಕ್ತಿಸಂಕೋಚದ ಗುರುತು. ಸಂಕುಚಿತ ಶಕ್ತಿಯೇ ಮಲ.

ಎಲ್ಲಿಯವರೆಗೆ ಮಾನವನು ಭಕ್ತಿ ಮಾರ್ಗಕ್ಕೆ ಬರದೆ ಕೇವಲ ಲೌಕಿಕ ಮಾರ್ಗದಲ್ಲೇ ಚಲಿಸುತ್ತಾನೋ ಅಲ್ಲಿಯವರೆಗೆ ಅವನಿಗೆ ಶಕ್ತಿಗಳು ಮಲಗಳಾಗಿಯೇ ಇರುತ್ತವೆ. ಹಾಗೂ ಎಲ್ಲಿಯವರೆಗೆ ಆ ಮಲಗಳಿರುತ್ತವೆಯೋ, ಅವು ಅವನನ್ನು ಮತ್ತಷ್ಟು ಪ್ರಾಪಂಚಿಕನನ್ನಾಗಿ ಮಾಡುತ್ತವೆ.

ವಚನಕಾರರು ಮೂರು ರೀತಿಯ ಮಲಗಳನ್ನು ಗುರುತಿಸಿದ್ದಾರೆ. ಅವೆಂದರೆ: ಆಣವ ಮಲ, ಮಾಯಾಮಲ, ಮತ್ತು ಕಾರ್ಮಿಕ ಮಲ.

ಆಣವ ಮಲ : ಶಂಕರಾಚಾರ್ಯರ ಅದ್ವೈತದ ಪ್ರಕಾರ ಪರಬ್ರಹ್ಮನಿಗೆ ಯಾವ ಗುಣವೂ ಇಲ್ಲ. ಅಂದರೆ, ಅವನಿಗೆ ಪ್ರಪಂಚವನ್ನು ಸೃಷ್ಟಿಸುವ ಶಕ್ತಿ, ಇಚ್ಛೆ ಹಾಗೂ ಜ್ಞಾನವಿಲ್ಲ. ಆದರೆ ವಚನಕಾರರ ಪ್ರಕಾರ ಪರಬ್ರಹ್ಮ (ಪರಶಿವ) ನಿರ್ಗುಣನಲ್ಲ, ಅವನಿಗೆ

ಶಕ್ತಿ ಇದೆ. ಈ ಶಕ್ತಿ ಮುಖ್ಯವಾಗಿ ಮೂರು ಪ್ರಕಾರಗಳಲ್ಲಿ ಪ್ರಕಟವಾಗುತ್ತದೆ. ಸೃಷ್ಟಿಸಬೇಕೆಂಬ ಪರಶಿವನ ಇಚ್ಛೆಯೇ ಇಚ್ಛಾಶಕ್ತಿ; ಯಾವ ರೀತಿಯ ಜಗತ್ತನ್ನು ಸೃಷ್ಟಿಸಬೇಕು, ಯಾವಾಗ ಸೃಷ್ಟಿಸಬೇಕು ಎಂಬ ಅವನ ಜ್ಞಾನವೇ ಜ್ಞಾನಶಕ್ತಿ; ಇಚ್ಛಾಶಕ್ತಿ ಮತ್ತು ಜ್ಞಾನಶಕ್ತಿಗಳಿಗನುಸಾರವಾಗಿ ಕಾರ್ಯಗತವಾಗುವ ಅವನ ಶಕ್ತಿಯೇ ಕ್ರಿಯಾಶಕ್ತಿ. ಪರಶಿವನ ಜ್ಞಾನಕ್ಕೆ ಮಿತಿಯೇ ಇಲ್ಲ. ಪ್ರಳಯಪೂರ್ವ ಜೀವನಗಳಲ್ಲಿ ನಾವೆಲ್ಲರೂ ಏನೇನು ಮಾಡಿದ್ದೇವೆಂಬುದು ಅವನಿಗೆ ಗೊತ್ತಿದೆ. ಅಂದರೆ ಅವನು ಸರ್ವಜ್ಞ. ಅವನಿಗೆ ಏನನ್ನು ಬೇಕಾದರೂ ಮಾಡಬಲ್ಲ ಶಕ್ತಿಯಿದೆ. ಅಂದರೆ, ಅವನು ಸರ್ವಶಕ್ತ. ಆದರೆ ಈ ಶಕ್ತಿಗಳು ಜೀವನಲ್ಲಿ ಇದ್ದರೂ ಅವು ಸಂಕುಚಿತವಾಗಿವೆ. ನಾನು ಏನು ಬೇಕಾದರೂ ಮಾಡಬಲ್ಲೆನೆಂಬ ಶಿವಶಕ್ತಿ, ಜೀವನಲ್ಲಿ ನನಗೆ ಅಲ್ಪಶಕ್ತಿಯಿದೆ, ಆದುದರಿಂದ ಪೂರ್ಣ ಸ್ವತಂತ್ರನಲ್ಲ ಎಂಬ ಭಾವವಾಗಿ ವ್ಯಕ್ತವಾಗುತ್ತದೆ. ಹೀಗೆ ಜೀವನಲ್ಲಿ ತನ್ನ ಅಲ್ಪತ್ವದ (ಅಣುವೆಂಬ) ಅರಿವು ಮೂಡಿಸುವ ಶಕ್ತಿಯು ಆಣವ ಮಲವೆನಿಸಿಕೊಳ್ಳುತ್ತದೆ. ಶಿವನ ಸರ್ವಜ್ಞತ್ವವು (ಜ್ಞಾನಶಕ್ತಿಯು) ಜೀವನಲ್ಲಿ ಸಂಕುಚಿತವಾಗಿ ಮಾಯಾಮಲವೆನಿಸಿಕೊಳ್ಳುತ್ತದೆ. ಇದರಿಂದಾಗಿ ಅವನಿಗೆ ಅಲ್ಪಜ್ಞಾನದ ಅರಿವು ಮೂಡುತ್ತದೆ. ಶಿವನ ಕ್ರಿಯಾಶಕ್ತಿಯು ಜೀವನದಲ್ಲಿ ಕಿಂಚಿತ್ ಕರ್ತೃತ್ವ ಶಕ್ತಿಯಾಗಿ ಪರಿಣಮಿಸಿ, ಕಾರ್ಮಿಕ ಮಲವೆನಿಸಿಕೊಳ್ಳುತ್ತದೆ.

**ಮಲಸಂಬಂಧಿ :** ಮಲತ್ರಯಗಳಿಗೆ ಬಂಧಿಯಾದವನು. (೮:೧೦೩೯)

**ಮಹತ್ :** ೧. ಬುದ್ಧಿತತ್ತ್ವ. ಪ್ರಕೃತಿಯ ವಿಕಾಸದಲ್ಲಿ ಇದು ಮೊದಲನೆ ಹಂತ. ಇದರಲ್ಲಿ ಎಲ್ಲ ವೈಯುಕ್ತಿಕ ಬುದ್ಧಿಗಳೂ, ಮನಸ್ಸುಗಳೂ, ಅಹಂಕಾರಗಳೂ, ಜ್ಞಾನೇಂದ್ರಿಯ ಇತ್ಯಾದಿಗಳೂ ಅವ್ಯಕ್ತ ಹಾಗೂ ಅವಿಭಾಜ್ಯ ಸ್ಥಿತಿಯಲ್ಲಿರುತ್ತವೆ. ಇದರಿಂದ ಮನಸ್ಸು (ಅಂದರೆ ಎಲ್ಲ ವೈಯುಕ್ತಿಕ ಮನಸ್ಸುಗಳ ಮೊತ್ತ) ಮುಂತಾದವು ಹುಟ್ಟುತ್ತವೆ.

೨. ಮಹತ್ ಅಂದರೆ ಪರಶಿವ. 'ಮನವು ಮಹದೊಳಗೆ ಲೀಯವಾಗಿ ...' (೧:೧೩೧೨)

**ಮಹದಾಕಾಶ :** (ಮಹಾಕಾಶ) ಅಪರಿಮಿತ ಆಕಾಶ. (ನೋಡಿ : **ಆಕಾಶತ್ರಯ**)

**ಮಹಾಂತಿ (ಮಹಾಂತ, ಮಹಂತ) :** ಭಕ್ತಿ, ಜ್ಞಾನ, ವೈರಾಗ್ಯದ ಮೂಲಕ, ಷಟ್‌ಸ್ಥಲಾಚರಣೆಯನ್ನು ಕೈಕೊಂಡು, ಜೀವನ್ಮುಕ್ತನಾದವನು, ಲಿಂಗೈಕ್ಯವನ್ನು ಸಾಧಿಸಿದವನು. (೮:೧೪೪೬)

**ಮಹಾಘನ :** ಚಿತ್‌ಸ್ವರೂಪನಾದ ಪರಶಿವ (೮:೬೧೦).

**ಮಹಾನುಭಾವ :** ಮಹಾ ಅನುಭಾವ.

**ಮಹಾಪ್ರಳಯ :** ಸೃಷ್ಟಿಯ ಪೂರ್ವದಲ್ಲಿ ಶಿವನ ಶಕ್ತಿಯು ಅವನಲ್ಲಿ ಅವ್ಯಕ್ತವಾಗಿದ್ದು, ಅದು ಪ್ರಕಟವಾಗುವುದೇ ಸೃಷ್ಟಿ. ಶಕ್ತಿಯ ಐದು ರೂಪಗಳೆಂದರೆ ಐದು ಭೂತಗಳು. ಇವುಗಳ ಸಾಕಾರ ಮೂರ್ತಿಗಳು ಚಿತ್‌ಶಕ್ತಿ, ಆದಿಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ. ಪರಶಿವನೇ ಇವುಗಳನ್ನು ನಿಯಂತ್ರಿಸುತ್ತಾನೆ. ಆಗ ಅವನು ಬ್ರಹ್ಮ, ವಿಷ್ಣು, ರುದ್ರ, ಈಶ್ವರ ಮತ್ತು ಸದಾಶಿವ ಎಂದು ಕರೆಯಲ್ಪಡುತ್ತಾನೆ. ಸೃಷ್ಟಿಯು ಹಿಮ್ಮುಖವಾಗಿ ನಡೆದರೆ ಅದೇ ಪ್ರಳಯ. ಆಗಲೂ ಘಟನೆಗಳು ಕ್ರಮವಾಗಿಯೇ ಜರುಗುತ್ತವೆ. ಅತ್ಯಂತ ಸ್ಥೂಲವಾದುದು ಕೊನೆಗೆ ಸೃಷ್ಟಿಯಾಗುವಂತೆ, ಅತ್ಯಂತ ಸ್ಥೂಲವಾದುದು ಕೊನೆಗೆ ಅತ್ಯಂತ ಸೂಕ್ಷ್ಮವಾದುದರಲ್ಲಿ ಐಕ್ಯವಾಗುತ್ತದೆ. ಹೀಗೆ ಲಯದಲ್ಲಿ ಭೂಮಿತತ್ವವು ಜಲತತ್ವದಲ್ಲಿ ಅಡಗುತ್ತದೆ. (ಆಗ ಭೂಮಿಯ ಅಧಿದೇವತೆಯಾದ ಬ್ರಹ್ಮನು ಜಲದ ಅಧಿದೇವತೆಯಾದ ವಿಷ್ಣುವಿನಲ್ಲಿ ಅಡಗುತ್ತಾನೆ); ಜಲವು ಅಗ್ನಿಯಲ್ಲಿ ಹಾಗೂ ಆ ಅಗ್ನಿಯು ವಾಯುವಿನಲ್ಲಿಯೂ, ಆ ವಾಯುವು ಆಕಾಶದಲ್ಲಿಯೂ ಅಡಗುತ್ತದೆ; ಅದೇ ರೀತಿ ಜಲದ ಅಧಿದೇವತೆಯಾದ ವಿಷ್ಣುವು ರುದ್ರನಲ್ಲಿಯೂ, ರುದ್ರನು ಈಶ್ವರನಲ್ಲಿಯೂ, ಈಶ್ವರ ಸದಾಶಿವನಲ್ಲಿಯೂ ಅಡಗುತ್ತಾನೆ. ಸದಾಶಿವ ನಿಷ್ಕಲಸ್ಥಲದಲ್ಲಿಯೂ, ನಿಷ್ಕಲ ಸ್ಥಲವು ಶೂನ್ಯಸ್ಥಲದಲ್ಲಿಯೂ ಅಡಗುತ್ತದೆ. ಆಗ ಪರಶಿವನೊಬ್ಬನೆ ಇದ್ದನು, ಪೂಜ್ಯಪೂಜಕರೆಂಬ, ಆದಿ ಅನಾದಿ ಎಂಬ ಭೇದಭಾವವಿಲ್ಲದೆ (೧:೧೩೨೦).

**ಮಹಾಬೆಳಗು :** ನೋಡಿ : **ಪ್ರಕಾಶ.**

**ಮಹಾಲಿಂಗ :** ಅನೇಕ ಶರಣರ ಪ್ರಕಾರ, ಮಹಾಲಿಂಗವೆಂದರೆ, ನಿಷ್ಕಲ ಲಿಂಗ; ಮಹಾಲಿಂಗನಿಂದ ಐದು ಶಕ್ತಿ, ಐದು ಭಕ್ತಿ, ಐದು ಅಧಿದೇವತೆಗಳು, ಇತ್ಯಾದಿ ಉತ್ಪತ್ತಿಯಾಗುತ್ತವೆ. ಆದರೆ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಪ್ರಕಾರ, ಸ್ವಪ್ರಜ್ಞೆಯಿಲ್ಲದ ಪರಶಿವನೇ ಶೂನ್ಯಲಿಂಗ, ಸ್ವಪ್ರಜ್ಞೆ ಉಂಟಾಗಿ ಅವನಲ್ಲಿ ಸೃಷ್ಟಿಮಾಡಬೇಕೆಂಬ ಇಚ್ಛೆ ಉಂಟಾದರೆ, ಅವನು ನಿಃಕಲ ಲಿಂಗ ಎನಿಸಿಕೊಳ್ಳುತ್ತಾನೆ. ನಿಃಕಲ ಲಿಂಗದಲ್ಲಿ ಆ ಇಚ್ಛೆ ಉಂಟಾದ ಕೂಡಲೆ ಅದರಿಂದ ಚಿತ್ತು ಉತ್ಪತ್ತಿಯಾಗಿ, ಇದರಿಂದ ಅ, ಉ, ಮಕಾರಗಳು ಉತ್ಪತ್ತಿಯಾಗಿ, ಚಿತ್ತು ಆ ಮೂರಕ್ಷರಗಳನ್ನು ಕೂಡಿಕೊಂಡು ಪ್ರಣಮವೆನಿಸಿಕೊಳ್ಳುತ್ತದೆ. 'ಆ ಓಂಕಾರವೆಂಬ ಪ್ರಣಮವೇ ಅಖಂಡ ಪರಿಪೂರ್ಣ ಗೋಳಕಾಕಾರ ತೇಜೋಮಯ ಮೂರ್ತಿಯಪ್ಪ ಮಹಾಲಿಂಗ'. (೧೧:೩೩)

ಹೀಗೆ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಪ್ರಕಾರ ಮಹಾಲಿಂಗವೂ ಒಂದು ಉತ್ಪತ್ತಿಯೇ ಹೊರತು, ಅದೇ ಸೃಷ್ಟಿಕರ್ತನಲ್ಲ.

ಆದರೆ, ಸೃಷ್ಟಿಗೆ ಬೇಕಾದ ಉಪಾದಾನ ಕಾರಣಗಳೆಲ್ಲವೂ ಮಹಾಲಿಂಗದಲ್ಲಿ ಅಡಕವಾಗಿವೆ. 'ಪಂಚಶಕ್ತಿಯನು, ಪಂಚಸಾದಾಖ್ಯವನು, ಪಂಚಕಲೆಗಳನು,

ಪಂಚಾಕ್ಷರಗಳನು, ಪಂಚಭೂತಾತ್ಮವನು ತನ್ನಲ್ಲಿ ಗರ್ಭಿಕರಿಸಿಕೊಂಡು ತಾನು ಚಿದ್‌ಬ್ರಹ್ಮಾಂಡಾತ್ಮಕನಾಗಿ' (೧೧:೩೬), ಸರ್ವವ್ಯಾಪಕನಾಗಿದ್ದಾನೆ. ಹೀಗೆ ಅನಂತ ಕೋಟಿ ಬ್ರಹ್ಮಾಂಡಗಳನ್ನು ಮಹಾಲಿಂಗ ಗರ್ಭೀಕರಿಸಿಕೊಂಡಿದ್ದರೂ ಅವನಿಗೆ 'ಕರ ಚರಣಾದ್ಯವಯಂಗಳಿಲ್ಲ' (೧೧:೩೪). ಅಂತೂ, ಸೃಷ್ಟಿ ಪೂರ್ವಸ್ಥಿತಿಯ ಶಿವನ ಒಂದು ಅವಸ್ಥೆಯೇ ಮಹಾಲಿಂಗ.

ಈ ಮಹಾಲಿಂಗ ತಾನೊಬ್ಬನೇ, ಅಂದರೆ ಕೇವಲ ಇಚ್ಛಾಮಾತ್ರದಿಂದ ಸೃಷ್ಟಿಸಲಾರ. ಅವನಿಗೆ ಹಾಗೆ ಮಾಡಲು ಶಕ್ತಿ ಬೇಕು. ಶಕ್ತಿಯೂ ಸಹ ಆ ಸ್ಥಿತಿಯಲ್ಲಿ ನಾಮ ರೂಪಗಳಿಲ್ಲದ ಅವ್ಯಕ್ತಸ್ಥಿತಿಯಲ್ಲಿದ್ದು, ಮಹಾಲಿಂಗನ ಒಂದು ಅವಿಭಾಜ್ಯ ಅಂಗವಾಗಿದೆ. ಪರಶಿವನ ಆ ಅವಸ್ಥೆಗೆ ಮಹಾಲಿಂಗ ಎಂಬ ಹೆಸರು. ಹೇಗೆ ಅನ್ವಯವಾಗುತ್ತದೆಯೋ ಹಾಗೆ ಶಕ್ತಿಯ ಆಗಿನ ಅವಸ್ಥೆಗೆ ಚಿಚ್ಛಕ್ತಿ (ಚಿತ್‌ಶಕ್ತಿ) ಎಂಬ ಹೆಸರು ಅನ್ವಯವಾಗುತ್ತದೆ. (ನೋಡಿ : **ಚಿತ್ತು, ನಿಃಕಲ ಲಿಂಗ, ಶಕ್ತಿ**).

**ಮಹಾಲಿಂಗ ತ್ರಿವಿಧ :** ಪಿಂಡಜ, ಅಂಡಜ ಮತ್ತು ಬಿಂದ್ವಾಕಾಶಗಳೆಂಬ ತ್ರಿವಿಧವನ್ನು ತಿಳಿಯುವುದೇ ಮಹಾಲಿಂಗಸ್ಥಲದ ತ್ರಿವಿಧ. ಇಲ್ಲಿ 'ಪಿಂಡಜ'ವೆಂದರೆ ದೇಹದಿಂದ ಉತ್ಪತ್ತಿಯಾದವನು ಎಂದರ್ಥ. ತಾನು ಪಿಂಡವೆಂದೂ, ಮತ್ತೊಂದು ಪಿಂಡದಿಂದ ಉತ್ಪತ್ತಿಯಾದವನೆಂದೂ ಭ್ರಮಿತನಾಗುವುದೇ ಪಿಂಡಸ್ಥಲ. ಈ ಭ್ರಮೆಯಿಂದಾಗಿ ಮನುಷ್ಯ ತಾನು ಘಟದಲ್ಲಿರುವ ಆಕಾಶದಂತೆ ಮಿತಿಯುಳ್ಳವನು ಎಂಬ ಅಜ್ಞಾನ ಉಂಟಾಗುತ್ತದೆ; ಗುರುವು ಕೊಟ್ಟ ಆಧ್ಯಾತ್ಮಿಕ ಶಿಕ್ಷಣದ ಮೂಲಕ ತಾನು ಅಂಡಜ (ಬ್ರಹ್ಮಾಂಡದಲ್ಲಿರುವವನು) ಎಂಬ ಪ್ರಜ್ಞೆ ಮೂಡಿದಾಗ ತನ್ನ ಮತ್ತು ಬ್ರಹ್ಮಾಂಡದ ಜ್ಞಾನ ಮೂಡುವುದೂ ಅಲ್ಲದೆ, ತಾನು ಪರಶಿವನೆಂಬ ಮಹಾಕಾಶದಲ್ಲಿದ್ದೇನೆಂಬ ಜ್ಞಾನ ಮೂಡುತ್ತದೆ. ಆದರೆ ಮುಂದೆ ತಾನು ಪರಶಿವನ ಒಂದು ಅಂಶ, ಅವನಲ್ಲಿ ಬಿಂದು ರೂಪದಲ್ಲಿ (ಅವ್ಯಕ್ತಸ್ಥಿತಿ) ಇದ್ದೆ, ಈಗ ವ್ಯಕ್ತವಾಗಿ, ಮಾನವರೂಪು ಧರಿಸಿದ್ದೇನೆ, ಎಂಬ ಅರಿವು ಮೂಡಿದಾಗ ತನ್ನ ನಿಜಸ್ವರೂಪದ ಅರಿವಾಗುತ್ತದೆ. ಐಕ್ಯಸ್ಥಲದಲ್ಲಿದ್ದು ಮಹಾಲಿಂಗವನ್ನು ಸಾಕ್ಷಾತ್ಕರಿಸಿಕೊಂಡವನಿಗಷ್ಟೇ ತನ್ನ ಬಿಂದುರೂಪದ ಮೂಲದ ಅರಿವಾಗುತ್ತದೆ; ಅಥವಾ ತನ್ನ ಆತ್ಮ ಚಿದಾಕಾಶ (ಬಿಂದ್ವಾಕಾಶ)ದಲ್ಲಿರುವುದು ಅರಿವಾಗುತ್ತದೆ.

**ಮಹಾಲಿಂಗದ ಪ್ರಸನ್ನತ್ವ :** ತನ್ನ ಆತ್ಮವನ್ನೇ ಮಹಾಲಿಂಗಕ್ಕರ್ಪಿಸಿ, ಅನುಭಾವದ ಮೂಲಕ ಆನಂದ ಪಡೆದ ಶರಣನು, ತನ್ನ ಪ್ರತ್ಯೇಕತೆ (ವಿಶಿಷ್ಟತೆ)ಯನ್ನೇ ಕಳೆದುಕೊಳ್ಳುತ್ತಾನೆ. ಹೀಗೆ ತಾನೆಂಬ ಭಾವವಿಲ್ಲದ ಐಕ್ಯನು ತಾನು ಬೇರೆ ಲಿಂಗ ಬೇರೆ ಎಂದು ತಿಳಿಯದೆ ಅದರಲ್ಲೇ ಸಂಪೂರ್ಣವಾಗಿ ಬೆರೆತಿರುವುದರಿಂದ, ಮಹಾಲಿಂಗನ ಪ್ರಸನ್ನತೆಗೆ ಪಾತ್ರನಾಗಿ, ಬಯಲಿನಲ್ಲಿ ಬಯಲು ಬೆರೆತಂತೆ ಬಯಲಾಗುತ್ತಾನೆ.

**ಮಹಾಲಿಂಗದಲ್ಲಿ ಮಿಶ್ರಾರ್ಪಣ :** ಮಿಶ್ರಾರ್ಪಣ ಸಿದ್ಧಾಂತದ ಪ್ರಕಾರ, ಪ್ರತಿಯೊಂದು ಲಿಂಗದಲ್ಲಿ ಉಳಿದ ಲಿಂಗಗಳಿವೆ. ಆಚಾರಲಿಂಗದಲ್ಲಿ ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗಗಳಿರುವಂತೆ, ಗುರುಲಿಂಗದಲ್ಲಿ ಆಚಾರಲಿಂಗ, ಶಿವಲಿಂಗ, ಇತ್ಯಾದಿ ಲಿಂಗಗಳಿವೆ. ಆಚಾರಲಿಂಗವು ಪೃಥ್ವೀ ತತ್ವದ ಪ್ರತೀಕವಾದ ಆಧಾರ ಚಕ್ರದಲ್ಲಿದ್ದು, ಅದಕ್ಕೆ ಅರ್ಪಿಸಿದ ವಸ್ತುವು, ಅದರೊಳಗಿರುವ ಉಳಿದ ಲಿಂಗಗಳಿಗೂ ಅರ್ಪಿಸಿದಂತೆಯೇ. ಇದನ್ನು ಮಹಾಲಿಂಗಕ್ಕೆ ಸಂಬಂಧಿಸಿದಂತೆ ಆದಯ್ಯ ಹೀಗೆ ವಿವರಿಸುತ್ತಾನೆ :

ಆಚಾರಲಿಂಗವೂ ಅದರಲ್ಲಿರುವ ಉಳಿದ ಐದು ಲಿಂಗಗಳೂ ಭಕ್ತನು ಅರ್ಪಿಸಿದ ಚಿಗುರು, ಮೊಗ್ಗು, ಹಣ್ಣು, ಮುಂತಾದುವುಗಳ ಗಂಧವನ್ನರಿಯುತ್ತವೆ; ಗುರುಲಿಂಗವೂ ಅದರೊಳಗಿರುವ ಉಳಿದ ಲಿಂಗಗಳೂ ಅರ್ಪಿತವಾದ ರುಚಿಯ ವಿವಿಧ ಪ್ರಕಾರಗಳನ್ನು ಅರಿಯುತ್ತವೆ; ಶಿವಲಿಂಗವೂ, ಅದರೊಳಗಿರುವ ಉಳಿದ ಲಿಂಗಗಳೂ ಅರ್ಪಿತವಾದ ವಿವಿಧ ಬಣ್ಣಗಳನ್ನು ಅರಿಯುತ್ತವೆ; ಜಂಗಮಲಿಂಗವೂ ಅದರೊಳಗಿರುವ ಉಳಿದ ಲಿಂಗಗಳೂ, ಅರ್ಪಿತವಾದ ವಿವಿಧ ಪ್ರಕಾರವಾದ ಸ್ಪರ್ಶವನ್ನು ಅರಿಯುತ್ತವೆ; ಪ್ರಸಾದ ಲಿಂಗವೂ ಅದರೊಳಗಿರುವ ವಿವಿಧ ಲಿಂಗಗಳೂ ಅರ್ಪಿತವಾದ ವಿವಿಧ ರೀತಿಯ ಶಬ್ದಗಳನ್ನು (ಗಂಟೆ, ಜಾಗಟೆ. ವೀಣೆ, ಶಂಖ ಮೊದಲಾದವುಗಳನ್ನು) ಅರಿಯುತ್ತವೆ. ಹೀಗೆ ಪ್ರತಿಯೊಂದು ಲಿಂಗಕ್ಕೂ ಮಾಡಿದ ವಿವಿಧ ರೀತಿಯ ರೂಪ, ವಿವಿಧ ರೀತಿಯ ರುಚಿ, ಮಿಶ್ರಾರ್ಪಣವೆನಿಸಿಕೊಳ್ಳುತ್ತವೆ. ಆದರೆ ಮಹಾಲಿಂಗಕ್ಕೆ ಅರ್ಪಿತವಾಗುವ ಮಿಶ್ರಾರ್ಪಣಗಳು ಇವೆಲ್ಲವುಗಳ ಮೊತ್ತ, ಹೇಗೆಂದರೆ :

ಆಚಾರಲಿಂಗಕ್ಕೆ ಗಂಧಗಳ ಮಿಶ್ರಾರ್ಪಣೆಯನ್ನೂ, ಗುರುಲಿಂಗಕ್ಕೆ ರುಚಿಗಳ ಮಿಶ್ರಾರ್ಪಣವನ್ನೂ (ಇತ್ಯಾದಿ) ಮಾಡಿದರೆ, ಮಹಾಲಿಂಗಕ್ಕೆ, ಆಚಾರಲಿಂಗದ ಮಿಶ್ರಾರ್ಪಣೆಯ ತೃಪ್ತಿಯನ್ನೂ, ಗುರುಲಿಂಗದ ಮಿಶ್ರಾರ್ಪಣೆಯ ತೃಪ್ತಿಯನ್ನೂ, ಹಾಗೆಯೇ ಉಳಿದ ಲಿಂಗಗಳ ಮಿಶ್ರಾರ್ಪಣೆಯ ತೃಪ್ತಿಯನ್ನೂ ಅರ್ಪಿಸಲಾಗುವುದು. (೬:೧೦೨೦) (ನೋಡಿ : **ಮಿಶ್ರಷಡುಸ್ಥಲ**)

**ಮಹಾಶೂನ್ಯ :** ಜಗತ್ತೇ ಇಲ್ಲದಿದ್ದಾಗ ಪರಶಿವನೊಬ್ಬನೇ ಇದ್ದ. ಅವನಿಗೆ ಸೃಷ್ಟಿಸಬೇಕೆಂಬ ಇಚ್ಛೆಯೂ ಇರಲಿಲ್ಲದ ಸ್ಥಿತಿ ಅದು; ಅಷ್ಟೇಕೆ, ಪರಶಿವನಿಗೆ ಸ್ವ-ಪ್ರಜ್ಞೆ ಇರಲಿಲ್ಲ. ಆಗ ಇದನ್ನೆ ಶೂನ್ಯ, ಮಹಾಶೂನ್ಯ, ನಿಶ್ಶೂನ್ಯ ಮುಂತಾಗಿ ಕರೆಯುತ್ತಾರೆ. ಆದರೆ ಪರಶಿವನಲ್ಲಿ ಎಲ್ಲವನ್ನೂ ಸೃಷ್ಟಿಸಲು ಬೇಕಾದ ಶಕ್ತಿ ಇದ್ದರೂ, ಅದೂ ಸಹ ಅವನಲ್ಲಿ ನಿಷ್ಕ್ರಿಯವಾಗಿತ್ತು. ಏಕೆಂದರೆ, ಪರಶಿವ ಅದಕ್ಕೆ ಯಾವ ಪ್ರಚೋದನೆಯನ್ನೂ ನೀಡಿರಲಿಲ್ಲ. ಆದರೆ ಶೂನ್ಯ ಏನೊಂದೇನೂ ಇಲ್ಲದ ಸ್ಥಿತಿಯಲ್ಲ. ಅಂತಹ ಸ್ಥಿತಿ ಅನಿರ್ವಾಚ್ಯ. ಏಕೆಂದರೆ ನಮಗೆ

ಏನನ್ನಾದರೂ ವರ್ಣಿಸಲು ಹೋಲಿಕೆ ಬೇಕು. ಶಿವನನ್ನು ಕಾರಣವೆಂದು ವರ್ಣಿಸಲು ಪರಿಣಾಮ (ಉದಾ : ಪ್ರಪಂಚ) ಬೇಕು. ಆದರೆ ಪ್ರಪಂಚವೇ ಇಲ್ಲದಿದ್ದರೆ, ಅವನು ಸೃಷ್ಟಿಕರ್ತ, ಕಾರಣ ಎಂದು ವರ್ಣಿಸಲು ಬರುವುದಿಲ್ಲ. ಪ್ರಪಂಚದ ಸೃಷ್ಟಿಯ ನಂತರ, ಶಿವನನ್ನು ಸೃಷ್ಟಿ ಸ್ಥಿತಿ ಲಯಕರ್ತ ಮುಂತಾಗಿ ವರ್ಣಿಸಬಹುದು. ಆದ್ದರಿಂದ ಶೂನ್ಯವು ಎಲ್ಲವನ್ನೂ ಒಳಗೊಂಡ ಪೂರ್ಣವಾದರೂ, ಅನಿರ್ವಾಚ್ಯವಾದುದರಿಂದಷ್ಟೇ ಶೂನ್ಯ.

**ಮಹೇಶ್ವರನಿಗೆ ಅಪ್ಪು ಅಂಗ :** ಮೂಲಾಧಾರದ ಮೇಲಿರುವ ಸ್ವಾಧಿಷ್ಠಾನ ಚಕ್ರದಲ್ಲಿ ನೆಲೆಸಿರುವ ಶಿವನಿಗೆ ಗುರುಲಿಂಗವೆಂದು ಹೆಸರು; ಶಿವನು ಮಾನವನಲ್ಲಿ ವ್ಯಕ್ತವಾಗಲು ಒಂದು ಮಾಧ್ಯಮ ಬೇಕು. ಜ್ಞಾನಶಕ್ತಿಯೇ ಆ ಮಾಧ್ಯಮ. ಜ್ಞಾನಶಕ್ತಿಯು ಅಪ್ (ನೀರು) ತತ್ವದ ಮತ್ತೊಂದು ಹೆಸರು. ಅಂದರೆ, ಗುರುಲಿಂಗವು ಜ್ಞಾನಶಕ್ತಿಯ ಅಧಿದೇವತೆ.

ಗುರುಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುವ ಸಾಧಕನಿಗೆ ಮಹೇಶ್ವರನೆಂದು ಹೆಸರು. ಗುರುಲಿಂಗವು ನಮ್ಮ ಬೆನ್ನುಹುರಿಯಲ್ಲೇ ಇದ್ದರೂ, ಅದನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧಕನು ಅಪ್ ತತ್ವದ ದುಷ್ಪರಿಣಾಮಗಳನ್ನು ಕಡಿಮೆ ಮಾಡಿ, ಅದನು ಶುದ್ಧ ಮಾಡಬೇಕಾಗುತ್ತದೆ. ಶುದ್ಧವಾದ ಜ್ಞಾನಶಕ್ತಿಗೆ ನಿಷ್ಠಾಭಕ್ತಿ ಎಂದು ಹೆಸರು.

ಜ್ಞಾನಶಕ್ತಿಯನ್ನು (ಅಪ್‌ತತ್ವವನ್ನು) ಶುದ್ಧ ಮಾಡುವುದು ಹೇಗೆ? ಜ್ಞಾನಶಕ್ತಿಯ ಉತ್ಪನ್ನಗಳಾದ ತನ್ಮಾತ್ರೆ (ರೂಪರಸಗಂಧಾದಿ)ಗಳನ್ನು ಹತೋಟಿಯಲ್ಲಿಡುವುದೇ ಜ್ಞಾನಶಕ್ತಿಯನ್ನು ಶುದ್ಧೀಕರಿಸುವ ವಿಧಾನ. ಅಂದರೆ ಸಾಧಕನು ಯಾವ ರೀತಿಯ ತನ್ಮಾತ್ರೆಗಳು ಆಧ್ಯಾತ್ಮಿಕ ಜೀವನಕ್ಕೆ ಅಡ್ಡಿಯಾಗುತ್ತವೆ, ಯಾವ ರೀತಿಯ ತನ್ಮಾತ್ರೆಗಳು ಆಧ್ಯಾತ್ಮಿಕ ಜೀವನಕ್ಕೆ.ಸಹಾಯುವಾಗುತ್ತವೆ ಎಂಬುದರ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕಾಗುತ್ತದೆ.

ಜ್ಞಾನಶಕ್ತಿಯ ದುಷ್ಪರಿಣಾಮಗಳನ್ನು ಕಡಿಮೆ ಮಾಡಿ, ನಿಷ್ಠಾ ಭಕ್ತಿಯನ್ನು ಬೆಳೆಸಿಕೊಳ್ಳುವ ಸಾಧಕನಿಗೆ ಮಹೇಶ್ವರ ಎಂಬ ಹೆಸರಿದ್ದು, ಅವನು ಇಂದ್ರಿಯ ನಿಗ್ರಹ ಮಾಡುವ ಮೂಲಕ ಜ್ಞಾನವನ್ನು ಪಡೆಯಬೇಕು ಎಂಬುದು ಇದರ ತಾತ್ಪರ್ಯ. (ಅ:೧೯೬೯)

**ಮಹೇಶ್ವರ ಸ್ಥಲ :** (ನೋಡಿ : ಅಂಗಸ್ಥಲ ಲಿಂಗಸ್ಥಲ ಸಂಬಂಧ; ಭಕ್ತಿ).

**ಮಹೇಶ್ವರ ಸ್ಥಲ ತ್ರಿವಿಧ :** ಮಹೇಶ್ವರ ಸ್ಥಲದಲ್ಲಿ ಭಕ್ತನು ತನ್ನ ವಿಶ್ವಾಸವನ್ನಷ್ಟೇ ಅಲ್ಲ, ತನ್ನ ನಿಷ್ಠೆಯನ್ನೂ ತೋರಿಸಬೇಕು. ತನ್ನ ನಿಷ್ಠೆಯನ್ನು ಎಷ್ಟು ತೋರಿಸುತ್ತಾನೋ ಅಷ್ಟರ ಮಟ್ಟಿಗೆ ಅವನು ವೀರನೆನಿಸಿಕೊಳ್ಳುತ್ತಾನೆ. ಇಂತಹ ವೀರರು ಇಹಲೋಕವೀರ, ಪರಲೋಕ ವೀರ ಮತ್ತು ಲಿಂಗವೀರ ಎಂದು ಮೂರು ತೆರನಾಗಿರುತ್ತಾರೆ. ಇಹಲೋಕದ ಆಸೆ ಆಮಿಶಗಳನ್ನು ಜಯಿಸುವವನು ಇಹಲೋರಕದ ವೀರ. ಪಾರಮಾರ್ಥಿಕ ಉದ್ದೇಶಗಳನ್ನು

ಸಾಧಿಸಲು ತನ್ನ ನಿಷ್ಠೆಯನ್ನು ಕೈ ಬಿಡದವನು ಪರಲೋಕ ವೀರ. ಲಿಂಗವನ್ನು ತನ್ನಲ್ಲಿ ಪ್ರತಿಷ್ಠಾಪಿಸಿಕೊಳ್ಳಲು ಅಥವಾ ತನ್ನನ್ನು ಲಿಂಗದಲ್ಲಿ ಐಕ್ಯಮಾಡಿಕೊಳ್ಳಲು ಎಂಥ ತ್ಯಾಗಕ್ಕಾದರೂ ಸಿದ್ಧವಾಗಿರುವವನು ಲಿಂಗವೀರ. ಲಿಂಗವೀರನೇ ಉಳಿದಿಬ್ಬರಿಗಿಂತ ಮೇಲು. ಹೇಗೆಂದರೆ ಅವು ಕೊನಗೆ ಲಿಂಗಕ್ಕೆ ತನ್ನನ್ನೆ ಸಮರ್ಪಿಸಿಕೊಳ್ಳಲು (ಸಂಪೂರ್ಣ ಶರಣಾಗಲು, ಅಥವಾ ಶರಣನಾಗಲು) ಹಿಂತೆಗೆಯುವುದಿಲ್ಲ (೩:೭೨೯).

**ಮಹೇಶ್ವರ ಸ್ಥಲ ವಿಷ್ಣುನಾಶನ :** ಮಹೇಶ್ವರಸ್ಥಲವನ್ನು ಪರಿಣಾಮಕಾರಿಯಾಗಿ ಆಚರಿಸಿದರೆ, ವಿಷ್ಣುವು ನಿಯಂತ್ರಿಸುವ ಅಪ್ ತತ್ವದ ಅಥವಾ ಜ್ಞಾನಶಕ್ತಿಯ ದುಷ್ಟ ಪರಿಣಾಮಗಳನ್ನು ಇಲ್ಲದಂತೆ ಮಾಡಬಹುದು. ಹೀಗೆ ಎಲ್ಲರೂ ಮಹೇಶ್ವರ ಸ್ಥಲವನ್ನೂ ಪರಿಣಾಕಾರಿಯಾಗಿ ಆಚರಿಸಿದರೆ, ಜಗತ್ತನ್ನು ರಕ್ಷಿಸುವ ವಿಷ್ಣುವಿನ ಅಗತ್ಯವೇ ಇರುವುದಿಲ್ಲ.

**ಮಾಟ :** ಕ್ರಿಯೆ, ಆಚಾರ, (ನೋಡಿ : **ಆಚಾರ; ಆಚಾರ ಪ್ರಭೇದ**)

**ಮಾತಿನ ಘಾತ :** ಮಾತಿನಿಂದ ಘಾತ ಮಾಡುವುದು; ವಾಗ್ವಾದ.

**ಮಾತು ಕೆಡುವುದು :** ಮೌನ. ತನ್ನ ತಾನರಿದ ಶರಣ ('ತಾನಾದವನು') ಅನಿರ್ವಚನೀಯ ಅವಸ್ಥೆಯನ್ನು ಅನುಭವಿಸುತ್ತಾನೆ. (೧:೯೨೩)

**ಮಾಯಾಂಶಿಕ :** ಕೆಲವು ವೇಳೆ ಮಾಯೆ ಎಂಬ ಪದವನ್ನು ಅಧೋಮಾಯಾ ಎಂಬರ್ಥದಲ್ಲಿ ಬಳಸಲಾಗಿದ್ದು ಅಂಥ ಮಾಯೆಯ ಅಂಶವನ್ನುಳ್ಳವನು ಮಾಯಾಂಶಿಕವೆನಿಸಿಕೊಳ್ಳುತ್ತಾನೆ. (೪:೯೧೦)

**ಮಾಯಾಕಾವಳ :** ಕಾವಳ ಅಥವಾ ಮಂಜುಕವಿದಾಗ ನಾವು ಹೇಗೆ ಏನನ್ನೂ ಸ್ಪಷ್ಟವಾಗಿ ಕಾಣಲಾರೆವೋ ಹಾಗೆಯೇ, ಮಾಯೆ ಅಥವಾ ಅಜ್ಞಾನ ಅಥವಾ ಮರೆವು ಎಂಬ ಕಾವಳ ಕವಿದಾಗಲೂ ನಾವು ವಸ್ತುಸ್ಥಿತಿಯನ್ನು ಸರಿಯಾಗಿ ಕಾಣಲಾರೆವು; ಆಗ ಶಿವಾನುಭವದ ಸುಖದ ಹಿರಿಮೆಯನ್ನು ಕಾಣದೆ ಲೌಕಿಕ ಸುಖವನ್ನೇ ಹಿರಿದೆಂದು ಕಂಡು ಸಂಸಾರಬಂಧನಕ್ಕೊಳಗಾಗಿ ಪಡಬಾರದ ದುಃಖವನ್ನು ಪಡುತ್ತೇವೆ. (೧೪:೩೩೭)

**ಮಾಯಾಛಾಯೆ (ಛಾಯಾಮಾಯೆ) :** ಪರಮಚಿತ್ (ಪರಶಿವ) ಪ್ರಕಾಶಮಯ. ಅವನ ಪ್ರಕಾಶವನ್ನು ಅಜ್ಞಾನವನ್ನೂ ಮಾಯೆಯನ್ನೂ ಗೆದ್ದ ಅನುಭಾವಿಗಳಷ್ಟೇ 'ನೋಡ'ಬಲ್ಲರು. ಉಳಿದವರು ನೋಡಲಾರರೇಕೆಂದರೆ, ಶಿವನ ಪ್ರಕಾಶವನ್ನು ಶಕ್ತಿ (ಮಾಯೆ) ಎಂಬುದು ಮುಚ್ಚಿ ನಮಗೆ ಕೇವಲ ಛಾಯೆ ಕಾಣುತ್ತದೆಯೇ ಹೊರತು, ಬೆಳಕು ಕಾಣಿಸುವುದಿಲ್ಲ. ಮಾಯೆ ಈ ರೀತಿ ಮಾಡುವುದರಿಂದ ಅದು ಮಾಯಾ ಛಾಯೆ ಅಥವಾ ಛಾಯಾಮಾಯೆ. (೧೩:೨೪೦೪, ೨೪೦೬, ೨೪೧೦, ೨೪೧೪)

**ಮಾಯಾತಮಂಧ :** ಇಲ್ಲಿ 'ಮಾಯಾ' ಎಂಬ ಪದವನ್ನು 'ಅಜ್ಞಾನ' ಅಥವಾ 'ಮರೆವು' ಎಂಬರ್ಥದಲ್ಲಿ ಬಳಸಲಾಗಿದೆ. ನಾವು ಮರೆವಿನಿಂದಾಗಿ ವಸ್ತುಸ್ಥಿತಿಯನ್ನು ಕಾಣಲು

ವಿಫಲರಾಗುತ್ತೇವೆ. ಕತ್ತಲಿನಲ್ಲಿ (ತಮಂಧದಲ್ಲಿ) ಹೇಗೆ ವಸ್ತುಗಳನ್ನು ನಾವು ಸರಿಯಾಗಿ ನೋಡಲಾರೆವೋ ಹಾಗೆಯೇ ಮಾಯಾತಮಂಧದಲ್ಲಿಯೂ ಸತ್ಯವನ್ನು ಸರಿಯಾಗಿ ನೋಡಲಾರೆವು. ಇದರಿಂದಾಗಿ ನಾವು ಜೀವನದ ಧ್ಯೇಯವನ್ನು ಸರಿಯಾಗಿ ಗುರುತಿಸಿಕೊಳ್ಳದೆ, ಅನೇಕ ರೀತಿಯ ಕರ್ಮಗಳನ್ನು ಮಾಡಿ ಸಂಸಾರ ಬಂಧನಕ್ಕೊಳಗಾಗುತ್ತೇವೆ.

**ಮಾಯಾಧೀನರು :** ಹೊನ್ನು, ಹೆಣ್ಣು, ಮಣ್ಣುಗಳೆಂಬ ಮೋಹಕ್ಕೆ ಅಧೀನರಾದವರು.

**ಮಾಯಾಪ್ರಪಂಚು :** ಶಂಕರಾಚಾರ್ಯರೂ ವಚನಕಾರರೂ 'ಮಾಯಾ' 'ಮಾಯಾ ಪ್ರಕೃತಿ' 'ಮಾಯಾಪ್ರಪಂಚ' ಎಂಬ ಶಬ್ದಗಳನ್ನು ಎರಡು ವಿಭಿನ್ನ ಅರ್ಥಗಳಲ್ಲಿ ಬಳಸುತ್ತಾರೆ. ಶಂಕರಾಚಾರ್ಯರ ಪ್ರಕಾರ ಈಶ್ವರ ತನ್ನ ಮಾಯೆಯಿಂದ ಸೃಷ್ಟಿಸುತ್ತಾನಾದರೂ, ಜೀವನ್ಮುಕ್ತನಿಗೆ ಈಶ್ವರನೂ ಪ್ರಪಂಚವೂ ಆತ್ಮಗಳ ಅನೇಕತೆಯೂ ಮಿಥ್ಯೆಯಾಗುತ್ತವೆ. ಅವನಿಗೆ ಬ್ರಹ್ಮ ಮಾತ್ರ ಸತ್ಯ. ಆದರೆ ವಚನಕಾರರ ಪ್ರಕಾರ, ಮಾಯೆ ಅಥವಾ ಶಕ್ತಿ ಅಥವಾ ಮಾಯಾಶಕ್ತಿ ಪರಶಿವನ ಒಂದು ಅವಿಭಾಜ್ಯ ಗುಣವಾಗಿದ್ದು; ಕೆಲವರ ಪ್ರಕಾರ ಅದು ಅವನ ಶರೀರ, ಅವನು ಅದರ ಆತ್ಮ. ಅವನ ಗುಣ ಅಥವಾ ಶರೀರವಾದ ಮಾಯೆಯಿಂದಲೆ ಪ್ರಪಂಚ ಹಾಗೂ ಸಕಲ ಜೀವಕೋಟಿಗಳ ಶರೀರವೂ ಉತ್ಪತ್ತಿಯಾಗುತ್ತದೆ. ಪರಶಿವ ಎಷ್ಟು ಸತ್ಯವೋ ಮಾಯಾ ಪ್ರಪಂಚವೂ ಅಷ್ಟೇ ಸತ್ಯ. ಆದರೆ ಪರಶಿವ ನಿತ್ಯ, ಪ್ರಪಂಚ ಅನಿತ್ಯ. ಆದರೂ ಅವನಲ್ಲಿಯ ಮಾಯಾಶಕ್ತಿ ಅವನಲ್ಲಿಯೇ ಇರುತ್ತದೆ; ಕೆಲವು ವೇಳೆ ಪ್ರಪಂಚವಾಗಿ ವ್ಯಕ್ತವಾಗುತ್ತದೆ, ಲಯಸ್ಥಿತಿಯಲ್ಲಿ ಅವನಲ್ಲೇ ಅವ್ಯಕ್ತವಾಗಿ ಅಡಗಿರುತ್ತದೆ.

**ಮಾಯಾವಿಕಾರ :** ಅಜ್ಞಾನ ಅಥವಾ ಮರೆವಿನಿಂದ ಉಂಟಾದ (ಕೆಟ್ಟ) ಪರಿಣಾಮಗಳು.

**ಮಾಯಾವಿಡಂಬನಸ್ಥಲ :** ಜೀವನು ತನ್ನ ಎಲ್ಲ ದುಃಖಗಳಿಗೂ ಕಾರಣವಾದ ಮಾಯೆಯನ್ನು ಗೆಲ್ಲದೆ ಬಿಡಲಾರನೆಂದು ಪ್ರತಿಜ್ಞೆ ಮಾಡುತ್ತಾನೆ. ಅವನ ಈ ಮಾನಸಿಕ ಸ್ಥಿತಿಯೇ ಮಾಯಾವಿಡಂಬನ ಸ್ಥಲ. (೨:೧೨,೪೫)

**ಮಾಯೆ :** ವಚನಕಾರರು ಈ ಪದವನ್ನು ಕನಿಷ್ಟ ನಾಲ್ಕು ಅರ್ಥಗಳಲ್ಲಿ ಬಳಸಿರುವಂತೆ ಕಾಣುತ್ತದೆ.

೧. ಶಂಕರರ ಚಿದದ್ವೈತದಲ್ಲಿ 'ಮಾಯೆ' ಎಂಬ ಪದವನ್ನು 'ಭ್ರಮೆ' ಎಂಬರ್ಥದಲ್ಲಿಯೂ ಕೆಲವು ವೇಳೆ 'ಅನಿತ್ಯ' ಅಥವಾ 'ಅಶಾಶ್ವತವಾದುದು' ಎಂಬ ಅರ್ಥದಲ್ಲಿಯೂ ಬಳಸಲಾಗಿದೆ. ಉದಾಹರಣೆಗೆ 'ಜಗನ್ಮಿಥ್ಯಾ' ಎಂಬ ಪ್ರಯೋಗದಲ್ಲಿ ಜಗತ್ತು ಇಂದ್ರಿಯಗೋಚರವಾದರೂ, ಅದು ಬ್ರಹ್ಮನಂತೆ ಸತ್ಯವಲ್ಲ. ಹಗ್ಗವು ಕತ್ತಲೆಯಲ್ಲಿ ಹಾವಿನಂತೆ ಕಾಣು(ತೋರು)ತ್ತದೆ. ಅದೇ ರೀತಿ ನಿರ್ಗುಣ ಬ್ರಹ್ಮವು ಅಥವಾ

ಅನಂತ ಚಿತ್ತು ಪರಿಮಿತವಾದ ಜಡ ಅಥವಾ ಭೌತ ಜಗತ್ತಿನಂತೆ ತೋರುತ್ತದೆ. ಈ ತೋರಿಕೆ (ಭ್ರಮೆ) ಅಬಾಧಿತವಲ್ಲ. ಬೆಳಕು ಬಂದ ಕೂಡಲೇ ನಾವು ನೋಡಿದುದು ಹಾವಲ್ಲ, ಹಗ್ಗ ಮಾತ್ರ ಎಂಬ ಅರಿವು ಹೇಗೆ ಮೂಡುತ್ತದೆಯೋ ಹಾಗೆಯೇ, ಬ್ರಹ್ಮಜ್ಞಾನ ಉಂಟಾದ ಕೂಡಲೇ ಜಗತ್ತಿನಂತೆ ಕಾಣುತ್ತಿದ್ದುದು ನಿರ್ಗುಣ ಚಿತ್ತು ಎಂಬ ಅರಿವು ಮೂಡುತ್ತದೆ. ಇದೆಲ್ಲ ತೋರಿಕೆಯೂ ಅಜ್ಞಾನ ಅಥವಾ ಮಾಯೆಯಿಂದ.

ಆದರೆ ವಚನಕಾರರು ಪ್ರಪಂಚವು ಭ್ರಮೆಯಲ್ಲವೆಂದೂ, ವಾಸ್ತವಿಕ ಸತ್ಯವೆಂದೂ ಹೇಳುತ್ತಾರೆ. ಅದು ಪರಶಿವನ ಶಕ್ತಿಯಿಂದಾದ ಉತ್ಪನ್ನ. ಶಿವಶಕ್ತಿಗೆ ಮಾಯೆ ಎಂಬ ಪರ್ಯಾಯ ಪದವನ್ನೂ ವಚನಕಾರರು ಬಳಸುತ್ತಾರೆ. ಆದುದರಿಂದ ಜಗತ್ಸೃಷ್ಟಿಗೆ ಮಾಯೆಯು ಉಪಾದಾನ ಕಾರಣ.

ಮಾಯೆಯು "ಅಧೋಮಾಯೆ" ಮತ್ತು "ಊರ್ಧ್ವ ಮಾಯೆ" ಎಂದು ಎರಡು ಬಗೆಯಾಗಿದೆ. ಈ ಎರಡು ಪದಗಳು "ಕಲಾಶಕ್ತಿ" ಮತ್ತು "ಭಕ್ತಿಶಕ್ತಿ" ಎಂಬ ಪದಗಳಿಗೆ ಪರ್ಯಾಯ ಪದಗಳಾಗಿವೆ (ನೋಡಿ : **ಶಕ್ತಿ**).

೨. ಮತ್ತೊಂದರ್ಥದಲ್ಲಿ ಯಾವುದು ಸಕಲರನ್ನೂ ಕಾಡುತ್ತದೆಯೋ ಅದೇ ಮಾಯೆ. "ಮುಂದುಗೆಡಿಸಿತ್ತು ಮಾಯೆ" (೧:೧೪), "ಇದಾವ ಪರಿಯಲ್ಲಿ ಕಾಡಿಹಿತು ಮಾಯೆ" (೧:೧೫) ಎಂಬಲ್ಲಿ ಈ ಅರ್ಥ ಸ್ಪಷ್ಟವಾಗುತ್ತದೆ. ಮಾಯೆ ಇಂದ್ರಾದಿ ದೇವತೆಗಳನ್ನು ಕಾಡುತ್ತದೆ ಮುಂತಾದ ವಾಕ್ಯಗಳು 'ಮಾಯೆ' ಎಂದರೆ ಕಷ್ಟ ಅಥವಾ ಕೇಡು ಮಾಡುವ ಶಕ್ತಿ ಎಂದಾಗುತ್ತದೆ. ಹರಿ ಹಂದಿಯಾದುದು, ಬ್ರಹ್ಮನಿಗೆ ಶಿರ ಹೋದುದು, ದೇವೇಂದ್ರನು ಶಾಪಗ್ರಸ್ತನಾಗಿ ರೋಗಿಯಾದುದು, ಇತ್ಯಾದಿಗಳೆಲ್ಲ ಪರಶಿವನ ಮಾಯೆಯಿಂದಾಗಿಯೆ. ಆದರೆ ಮಾಯೆ ಒಬ್ಬ ಹೆಂಗಸು ಎಂದು ತಿಳಿಯುವುದು ತಪ್ಪು. ವಚನಕಾರರು ಮಾಯೆಯನ್ನು ಮಾಯಾಂಗನೆ, ಮುಂತಾಗಿ ಸ್ತ್ರೀವಾಚಕ ಪದಗಳಿಂದ ಕರೆದಿದ್ದರೂ, ಮಾಯೆ ಹೆಂಗಸಲ್ಲ. ವಚನಸಾಹಿತ್ಯದಲ್ಲಿ ಕ್ರಿಯಾಶಕ್ತಿ, ಇಚ್ಛಾಶಕ್ತಿ, ಇತ್ಯಾದಿ ಶಕ್ತಿಗಳ ಪಟ್ಟಿಯಲ್ಲಾಗಲಿ, ಸದಾಶಿವ, ಈಶ್ವರ, ಇತ್ಯಾದಿ ಸಾದಾಖ್ಯ (ಅಧಿದೇವತೆ)ಗಳ ಪಟ್ಟಿಯಲ್ಲಾಗಲಿ ಮಾಯೆ ಎಂಬ ವ್ಯಕ್ತಿಯು ಸೇರ್ಪಡೆಯಾಗಿಲ್ಲ.

೩. "ಆಸೆ" ಎಂಬುದು "ಮಾಯೆ"ಯ ಮತ್ತೊಂದು ಅರ್ಥ. "ಮನದ ಮುಂದಣ ಆಸೆಯೇ ಮಾಯೆ" ಎಂಬಲ್ಲಿ ಇದು ಸ್ಪಷ್ಟವಾಗುತ್ತದೆ. ಪ್ರಾಯಶಃ 'ಅನಿಯಂತ್ರಿತ ಆಸೆ' ಎಂಬುದು ಅದರ ಒಳಾರ್ಥವಿರಬಹುದು.

೪. ಮರೆವು ಅಥವಾ ಅಜ್ಞಾನ (ಅವಿದ್ಯೆ) ಎಂಬುದು ಮತ್ತೊಂದು ಅರ್ಥ. ನಾವು ನಮ್ಮ ನಿಜವಾದ ಸ್ವರೂಪದ ಬಗ್ಗೆ ಅಥವಾ ಜೀವನದ ನಿಜವಾದ ಧ್ಯೇಯದ ಬಗ್ಗೆ ಜ್ಞಾನವಿಲ್ಲದಿದ್ದರೆ, ನಾವು ಮಾಯೆಗೊಳಗಾಗಿದ್ದೇವೆಂದರ್ಥ (ನೋಡಿ : **ಮಾಯಾಕಾವಳ, ಮಾಯಾಛಾಯೆ**).

ಸಿದ್ಧರಾಮನು ಇವೆಲ್ಲವನ್ನೂ ತಾತ್ಪರ್ಯರೂಪದಲ್ಲಿ "ಯೋಗಿಗೆ ಕೋಪವೇ ಮಾಯೆ, ರೋಗಿಗೆ ಅಪಥ್ಯವೇ ಮಾಯೆ, ಜ್ಞಾನಿಗೆ ಮಿಥ್ಯವೇ ಮಾಯೆ; ಅರಿದೆನೆಂಬುವಂಗೆ ನಾನು ನೀನೆಂಬುದೆ ಮಾಯೆ" (೪:೯೯೭) ಎನ್ನುತ್ತಾನೆ.

**ಮಾಹೇಶ್ವರ ವರ್ತಕ :** ಮಾಹೇಶ್ವರ ಸ್ಥಲದಲ್ಲಿ ಉಚಿತವಾದುದೆಲ್ಲವನ್ನೂ ತಪ್ಪದೆ ಆಚರಿಸುವವನು. (೭:೧೧೧೬)

**ಮಿಥ್ಯಕಾಯ :** ಕರ್ಮಗಳಿಗೂ, ಸುಖದುಃಖಗಳಿಗೂ, ಹುಟ್ಟು, ಬೆಳವಣಿಗೆ, ಸಾವು ಮುಂತಾದ ಉಪಾಧಿಗಳಿಗೂ ಒಳಗಾದ ಶರೀರ. (೧೨:೬೨೦)

**ಮಿಥ್ಯಾವಾದ :** ಪ್ರಪಂಚವೂ ಸತ್ಯವಲ್ಲ, ಸೃಷ್ಟಿಕರ್ತನೂ ಸತ್ಯವಲ್ಲ, ಆತ್ಮಗಳ ಅನೇಕತೆಯೂ ಸತ್ಯವಲ್ಲ ಎಂಬ ಶಂಕರಾಚಾರ್ಯರ ಹಾಗೂ ಶಾಂಕರ ವೇದಾಂತಿಗಳ ವಾದ; ಅವರ ಪ್ರಕಾರ ನಿರ್ಗುಣ ನಿರಾಕಾರ ಬ್ರಹ್ಮನೊಬ್ಬನೇ ಸತ್ಯ; ನಾನೆಂಬುದೂ ಮಿಥ್ಯೆ, ಆದರೆ ಅಜ್ಞಾನವೆಂಬ ಮುಸುಕನ್ನು ಕಳಚಿದರೆ ನಾನೇ ಬ್ರಹ್ಮ. (ಅಹಂ ಬ್ರಹ್ಮಾಸ್ಮಿ) (೯:೧೧೨೬).

**ಮಿಶ್ರಷಡುಸ್ಥಲ, ಮಿಶ್ರಲಿಂಗಾರ್ಪಣ :** ಪ್ರತಿಯೊಂದು ಸ್ಥಲದಲ್ಲಿಯೂ ಉಳಿದ ಐದೂ ಸ್ಥಲಗಳನ್ನು ಆಚರಿಸುವುದೇ ಮಿಶ್ರ ಷಡುಸ್ಥಲ; ಪ್ರತಿ ಸ್ಥಲದ ಸಾಧಕನು ತನ್ನ ಸ್ಥಲದ ಲಿಂಗವನ್ನಷ್ಟೇ ಅಲ್ಲ, ಉಳಿದ ಐದು ಸ್ಥಲಗಳ ಲಿಂಗಗಳನ್ನೂ ಆರಾಧಿಸಿ, ಅವುಗಳಿಗೆ ಯೋಗ್ಯ ಅರ್ಪಣೆ ಮಾಡುವುದೇ ಮಿಶ್ರ ಲಿಂಗಾರ್ಪಣೆ. ಮಿಶ್ರಷಡುಸ್ಥಲಾಚರಣೆ ಮತ್ತು ಮಿಶ್ರಲಿಂಗಾರ್ಪಣೆ ಪರಸ್ಪರ ಸಂಬಂಧವುಳ್ಳ ಆಚರಣೆಗಳು. ಅವುಗಳನ್ನು ಸಂಕ್ಷಿಪ್ತವಾಗಿ ಹೀಗೆ ವಿವರಿಸಬಹುದು:

ಭಕ್ತನ ಆಚಾರಲಿಂಗ ಭೋಜ್ಯವನ್ನೂ, ಭಕ್ತನ ಮಹೇಶನ ಗುರುಲಿಂಗಕ್ಕೆ ಪಾನೀಯವನ್ನೂ, ಭಕ್ತನ ಪ್ರಸಾದಿಯ ಶಿವಲಿಂಗಕ್ಕೆ ಭಕ್ಷ್ಯವನ್ನೂ, ಭಕ್ತನ ಪ್ರಾಣಲಿಂಗಿಯ ಜಂಗಮಲಿಂಗಕ್ಕೆ ಚೋಹ್ಯವನ್ನೂ, ಭಕ್ತನ ಶರಣನ ಪ್ರಸಾದ ಲಿಂಗಕ್ಕೆ ಲೇಹ್ಯವನ್ನೂ ಸಮರ್ಪಿಸಬೇಕು. ಆದರೆ ಭಕ್ತನು ಐಕ್ಯನ ಮಹಾಲಿಂಗಕ್ಕೆ ಮೇಲೆ ಹೇಳಿದ ಐದು ಪದಾರ್ಥಗಳನ್ನೂ ಸಮರ್ಪಿಸಿ, ತಾನು ತೃಪ್ತಿ ಎಂಬ ಪ್ರಸಾದವನ್ನು ಭೋಗಿಸುತ್ತಾನೆ. ಇದು ಸ್ಥೂಲ ದೇಹದ ಭಾಗಗಳಾದ ಕೈಗಳಿಂದ ಮಾಡುವ ಅರ್ಪಣೆಯಾದುದರಿಂದ ಇದು ಕಾಯಾರ್ಪಣವೆನಿಸಿಕೊಳ್ಳುತ್ತದೆ. (೧೩:೧೮೩೪)

ಭಕ್ತಸ್ಥಲದ ಸಾಧಕನ ಆತ್ಮನಿಗೆ ಪೃಥ್ವಿ ಎಂಬ ದೇಹವಿದೆ. ಆ ಭಕ್ತನು ಸುಚಿತ್ತವೆಂಬ ಹಸ್ತದಲ್ಲಿ ತನ್ನಲ್ಲಿರುವ ಆಚಾರಲಿಂಗದ ಘ್ರಾಣೇಂದ್ರಿಯವೆಂಬ ಮುಖಕ್ಕೆ ಬೇರು ಗೆಣಸು ಮೊದಲಾದ ಗಂಧ ದ್ರವ್ಯಗಳನ್ನು ಸಮರ್ಪಿಸಿ, ತೃಪ್ತಿಯೆಂಬ ಪ್ರಸಾದವನ್ನು ಭೋಗಿಸುತ್ತಾನೆ. ಇಲ್ಲಿ ಭಕ್ತನು ಕಣ್ಣಿಗೆ ಕಾಣದ ಸುಚಿತ್ತವೆಂಬ ಕರಣದ ಮೂಲಕ ಅರ್ಪಣೆ ಮಾಡುವುದರಿಂದ, ಅವನ ಅರ್ಪಣೆಯು ಕರಣಾರ್ಪಣವೆನಿಸಿಕೊಳ್ಳುತ್ತದೆ (೧೩:೧೮೩೫).

ಅದೇ ರೀತಿ ಭಕ್ತನಲ್ಲಿರುವ ಪ್ರಸಾದಿಗೆ ಪೃಥ್ವಿ ತತ್ವದಲ್ಲಿರುವ ಅಗ್ನಿಯೇ ದೇಹ. ಭಕ್ತನು ಸುಚಿತ್ತದಲ್ಲಿರುವ ನಿರಹಂಕಾರ ಎಂಬ ಹಸ್ತದಿಂದ, ಆಚಾರ ಲಿಂಗದಲ್ಲಿರುವ ಶಿವಲಿಂಗಕ್ಕೆ ಚಿಗುರು, ಪತ್ರೆ, ಮುಂತಾದವುಗಳಲ್ಲಿರುವ ಸುಗಂಧವನ್ನು ಅರ್ಪಿಸಿ, ತೃಪ್ತಿ ಎಂಬ ಪ್ರಸಾದವನ್ನು ಪಡೆಯುತ್ತಾನೆ; ಭಕ್ತನಲ್ಲಿಯ ಪ್ರಾಣಲಿಂಗಿಗೆ ಪೃಥ್ವಿ ತತ್ವದಲ್ಲಿರುವ ವಾಯುವೇ ದೇಹ; ಅದರ ಸುಚಿತ್ತದಲ್ಲಿರುವ ಸುಮನವೆಂಬ ಹಸ್ತದಿಂದ, ಆಚಾರಲಿಂಗದಲ್ಲಿರುವ ಜಂಗಮಲಿಂಗಕ್ಕೆ, ಮೊಗ್ಗು ಮುಂತಾದ ವಸ್ತುಗಳಲ್ಲಿರುವ ಸುಗಂಧವನ್ನು ಅರ್ಪಿಸಿ, ತೃಪ್ತಿ ಎಂಬ ಪ್ರಸಾದವನ್ನು ಪಡೆಯುತ್ತಾನೆ; ಹಾಗೆಯೇ ಭಕ್ತನಲ್ಲಿಯ ಶರಣನಿಗೆ ಆಕಾಶವೇ ಅಂಗ. ಆ ಅಂಗದಲ್ಲಿ ಸುಚಿತ್ತದಲ್ಲಿರುವ ಸುಜ್ಞಾನವೆಂಬ ಹಸ್ತವಿದೆ. ಭಕ್ತನು ಆ ಹಸ್ತದಿಂದ ಆಚಾರಲಿಂಗದಲ್ಲಿರುವ ಪ್ರಸಾದ ಲಿಂಗಕ್ಕೆ ಕಾಯಿ ಮೊದಲಾದ ವಸ್ತುಗಳಿರುವ ಗಂಧವನ್ನು ಅರ್ಪಿಸಿ, ತೃಪ್ತಿಯೆಂಬ ಪ್ರಸಾದ ಪಡೆಯುತ್ತಾನೆ. ಕೊನೆಯದಾಗಿ ಭಕ್ತನಲ್ಲಿಯ ಐಕ್ಯನಿಗೆ ಪೃಥ್ವಿಯಲ್ಲಿರುವ ಆತ್ಮನೇ ಅಂಗ; ಅದಕ್ಕೆ ಸುಚಿತ್ತದಲ್ಲಿರುವ ಭಾವವೇ ಹಸ್ತ. ಭಕ್ತನು ಆಚಾರ ಲಿಂಗದಲ್ಲಿರುವ ಮಹಾಲಿಂಗಕ್ಕೆ ಭಾವವೆಂಬ ಹಸ್ತದಿಂದ ಎಲ್ಲ ಸುಗಂಧ ದ್ರವ್ಯವನ್ನು ಅರ್ಪಿಸಿ, ತೃಪ್ತಿಯೆಂಬ ಪ್ರಸಾದವನ್ನು ಭೋಗಿಸುತ್ತಾನೆ.

ಅದೇ ರೀತಿ ಮಹೇಶನಲ್ಲಿ ಉಳಿದ ಐದು ಸ್ಥಲಗಳೂ, ಗುರು ಲಿಂಗವಲ್ಲದೇ ಅದರಲ್ಲಿ ಉಳಿದ ಐದು ಲಿಂಗಗಳೂ ಇದ್ದು, ತನ್ನ ಹಸ್ತವಾದ ಸುಬುದ್ಧಿಯಿಂದ ಹಾಗೂ ಅದರೊಳಗಿರುವ ಸುಚಿತ್ತ, ಸುಮನ, ಇತ್ಯಾದಿ ಹಸ್ತಗಳಿಂದ, ಗುರುಲಿಂಗಕ್ಕೂ, ಅದರೊಳಗಿರುವ ಐದು ಲಿಂಗಗಳಿಗೂ ಒಗರು ಮಧುರ ಮುಂತಾದ ರುಚಿಗಳನ್ನು ಸಾಧಕನು ಅರ್ಪಿಸಿ, ತೃಪ್ತಿಯೆಂಬ ಪ್ರಸಾದವನ್ನು ಪಡೆಯುತ್ತಾನೆ. ಈ ಮಾತು ಉಳಿದ ಸ್ಥಲಗಳಿಗೂ ಅನ್ವಯಿಸುತ್ತದೆ. (೧೩:೧೮೩೫-೧೮೭೦)

**ಮಿಶ್ರಾರ್ಪಣ :** ಮಿಶ್ರಾರ್ಪಣ ಕಲ್ಪನೆಯ ಪ್ರಕಾರ, ನಾವು ಯಾವುದೇ ವಿಷಯ (ರೂಪ, ರಸ, ಗಂಧ, ಇತ್ಯಾದಿ)ವನ್ನು ಯಾವುದೇ ಲಿಂಗಕರ್ಪಿಸಿದರೂ, ಅದು ಉಳಿದೆಲ್ಲ ಲಿಂಗಗಳಿಗೆ ತೃಪ್ತಿಯಾಗುತ್ತದೆ. ಪ್ರತಿಯೊಂದು ಲಿಂಗದಲ್ಲಿಯೂ ಉಳಿದೆಲ್ಲ ಲಿಂಗಗಳಿರುವುದರಿಂದ, ವಿವಿಧ ರೀತಿಯ ರುಚಿಯನ್ನು ಒಂದು ಕಾಲದಲ್ಲರ್ಪಿಸಿ, ಮತ್ತೊಂದು ಕಾಲದಲ್ಲಿ ರೂಪವನ್ನರ್ಪಿಸಿದರೆ, ಆ ಅರ್ಪಣೆಯು ಒಂದೇ ಲಿಂಗಕ್ಕೆ ತೃಪ್ತಿಯನ್ನು ನೀಡದೆ, ಉಳಿದೆಲ್ಲ ಲಿಂಗಗಳಿಗೂ ತೃಪ್ತಿ ನೀಡುತ್ತದೆ. ಒಂದೇ ಅಪ್ಯಾಯನ ಸಾಧ್ಯ ಎಂಬುದೇ ಇದರ ಅಂತಿಮ ಸಂದೇಶ. (ನೋಡಿ : ಮಹಾಲಿಂಗದಲ್ಲಿ ಮಿಶ್ರಾರ್ಪಣ, ಮಿಶ್ರಷಡುಸ್ಥಲ)

**ಮೀಸಲು :** ಲಿಂಗ, ಜಂಗಮ ಅಥವಾ ಗುರುವಿಗೆ ಮೀಸಲೆಂದು ತೆಗೆದಿಟ್ಟ ಆಹಾರ ಪದಾರ್ಥಗಳು; ಪಡಿ.

**ಮುಕ್ತಿ :** ತಾಪತ್ರಯಗಳಿಂದ ಪೂರ್ಣವಾಗಿ ಪಡೆದ ಬಿಡುಗಡೆ. ಮುಕ್ತಿ ಪಡೆದವನಿಗೆ ಐಹಿಕ ತಾಪತ್ರಯಗಳೂ ಇಲ್ಲ, ಪುನರ್ಜನ್ಮವೂ ಇಲ್ಲ, ಹಿಂದಿನ ಕರ್ಮಗಳೂ ಇಲ್ಲ. ಮುಕ್ತಿ ಸಾಮರಸ್ಯದ ಮೂಲಕ ಮಾತ್ರ ಸಾಧ್ಯ. ಮುಕ್ತಿಯು ಎರಡು ವಿಧವಾಗಿದೆ. ವ್ಯಕ್ತಿಯು ಜೀವಿಸಿದ್ದಾಗಲೇ ಮುಕ್ತಿಯನ್ನು ಪಡೆದರೆ, ಅದಕ್ಕೆ ಜೀವನ್ಮುಕ್ತಿ ಎಂದು ಹೆಸರು; ಮರಣದ ನಂತರ ಪಡೆದ ಮುಕ್ತಿಗೆ ವಿದೇಹ ಮುಕ್ತಿ ಎಂದು ಹೆಸರು. ವಿದೇಹ ಮುಕ್ತಿ ಸಿದ್ಧಾಂತವನ್ನು ಪ್ರತಿಪಾದಿಸುವವ ಪ್ರಕಾರ, ದೇಹವು ಪ್ರಾರಬ್ಧ ಕರ್ಮದ ಫಲವಾಗಿರುವದರಿಂದ, ದೇಹಕ್ಕೆ ಸಾವು ಬರುವವರೆಗೂ ಅಂದರೆ, ಪ್ರಾರಬ್ಧ ಕರ್ಮ ಮುಗಿಯುವವರೆಗೂ ಮುಕ್ತಿ ಸಾಧ್ಯವಿಲ್ಲ, ಮುಕ್ತಿ ಸಾವಿನ ನಂತರ ಮಾತ್ರ ಸಾಧ್ಯ. ಜೀವನ್ಮುಕ್ತಿ ಸಿದ್ಧಾಂತವನ್ನು ಪ್ರತಿಪಾದಿಸುವವರ ಪ್ರಕಾರ, ದೇಹ, ಮನಸ್ಸು, ಇತ್ಯಾದಿಗಳನ್ನು ನಾವು ಕರ್ಮಮುಕ್ತ ಮಾಡಿದರೆ, ಈ ಜನ್ಮದಲ್ಲೆ ಮುಕ್ತಿ ಸಾಧ್ಯ. ವಚನಕಾರರು ಜೀವನ್ಮುಕ್ತಿಯನ್ನು ಪ್ರತಿಪಾದಿಸುತ್ತಾರೆ.

**ಮೂಗಿಲ್ಲದವಳು :** ಮೂಗು ವಾಸನೆ ಪಡೆಯುವ ಇಂದ್ರಿಯ; ಆದರೆ 'ವಾಸನೆ' ಎಂಬ ಪದಕ್ಕೆ 'ಹಿಂದಿನ ಜನ್ಮದ ಸಂಸ್ಕಾರ' ಎಂಬರ್ಥವೂ ಇರುವುದರಿಂದ 'ಮೂಗಿಲ್ಲದವಳು' ಎಂದರೆ, ಹಿಂದಿನ ಜನ್ಮದ ವಾಸನೆಗಳೆಲ್ಲವೂ ಸುಟ್ಟು, 'ಮುಕ್ತಿಯೋಗ್ಯಳಾಗಿರುವವಳು' ಎಂದರ್ಥವಾಗುತ್ತದೆ. (೫:೨೮೩)

**ಮೂರ್ತಿಯೆಂಟು :** ಪರಶಿವನು ಪ್ರಳಯಪೂರ್ವ ಸ್ಥಿತಿಯಲ್ಲಿ ನಿರ್ಗುಣನೂ ನಿರಾಕಾರನೂ ಆಗಿರುತ್ತಾನೆ. ಆದರೆ ತಾನೆ ಜಗವಾದಾಗ, ಮೂರ್ತ(ವ್ಯಕ್ತ)ವಾಗುತ್ತಾನೆ. ಹೀಗೆ ಜಗವಾಗುವ ಮೊದಲು ಎಂಟು ರೂಪದ ಮೂರ್ತಿಯಾಗುತ್ತಾನೆ. ಈ ಎಂಟು ಮೂರ್ತಿಗಳೆಂದರೆ- ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಆತ್ಮ, ಸೂರ್ಯ ಮತ್ತು ಚಂದ್ರ. ಈ ಕಾರಣಕ್ಕಾಗಿ ಈ ಎಂಟು ಮೂರ್ತಿಗಳನ್ನು ಶಿವನ ಅಷ್ಟತನು ಎಂದೂ, ಶಿವನೇ ಅದರ ಆತ್ಮವೆಂದೂ, ಕೆಲವು ವೇಳೆ ಪರಿಗಣಿಸಲಾಗುತ್ತದೆ. (೪:೧೦೦೨)

**ಮೂರ್ತಿಸಾದಾಖ್ಯ :** ನೋಡಿ : **ಸಾದಾಖ್ಯ**

**ಮೂಲಾಗ್ನಿ :** ಮೂಲಾಧಾರದಲ್ಲಿ ಇರುವ ಅಗ್ನಿಯೇ ಮೂಲಾಗ್ನಿ. ಅಲ್ಲಿ ಸುಪ್ತವಾಗಿರುವ ಕುಂಡಲಿಯನ್ನು ಜಾಗೃತಗೊಳಿಸಿ, ಅದನ್ನು ಆಜ್ಞಾಚಕ್ರದಲ್ಲಿರುವ ಮಹಾಲಿಂಗದಲ್ಲಿ ಕೂಡಿಸಿದಾಗ ಯೋಗಿಗೆ ಅನಂತಕೋಟಿ ಸೂರ್ಯಪ್ರಕಾಶದ ಅನುಭವವಾಗುತ್ತದೆ. ಅಂದರೆ, ಮೂಲಾಗ್ನಿ ಮಂದತರವಾಗಿದ್ದು, ಆಜ್ಞಾಚಕ್ರದ ಅಗ್ನಿ ಪ್ರಕಾಶಮಾನವಾಗಿರುತ್ತದೆ. (೧೪:೨೯೮) ಮಂಡಲಾಕಾರದಲ್ಲಿ ಸುಪ್ತವಾಗಿರುವ ಕುಂಡಲಿಯನ್ನು ಜಾಗೃತಗೊಳಿಸಿದಾಗ, ಹಾಗೆ ಮಾಡುತ್ತಿರುವವನಿಗೆ ತನ್ನ ಮೈಯೆಲ್ಲಾ ಬಿಸಿಯಾದ ಅನುಭವವಾಗುತ್ತದೆ. ಇದು ಮೂಲಾಧಾರ ಚಕ್ರದಲ್ಲಿ ಪ್ರಾರಂಭವಾಗುವುದರಿಂದ ಅದಕ್ಕೆ ಮೂಲಾಗ್ನಿ ಎಂದು ಹೆಸರು. (ತಪಸ್ ಎಂಬ ಶಬ್ದವು ತಾಪ ಅಥವಾ ಉಷ್ಣಕ್ಕೆ ಸಂಬಂಧಿಸಿದೆಯೆಂಬುದನ್ನು ಇಲ್ಲಿ ನಾವು ಸ್ಮರಿಸಿಕೊಳ್ಳಬಹುದು.) (೧೪:೨೯೮)

**ಮೂಲಜ್ವಾಲೆ :** ಮೂಲಾಧಾರದಲ್ಲಿರುವ ಅಗ್ನಿ. ಅಲ್ಲಿರುವ ಅಗ್ನಿಯನ್ನು ಸುಷುಮ್ನ ನಾಳದ ತುದಿಯಲ್ಲಿರುವ ಸಹಸ್ರಾರ ಪದ್ಮಕ್ಕೆ ತಂದು ಮುಟ್ಟಿಸುವುದೇ ಸಾಧಕನ ಗುರಿ. (೧೩:೧೫೫೩-೯೭)

**ಮೂಲಮಂತ್ರ :** ಬೀಜಮಂತ್ರ; ಅಂದರೆ ಓಂ ನಮಃ ಶಿವಾಯ ಎಂಬ ಮಂತ್ರ.

**ಮೂಲಸ್ಥಾನ :** ಉದ್ಭವ ಸ್ಥಾನ. ಶಿವಲಿಂಗವು ಸಹಜವಾಗಿ ಉದ್ಭವವಾಯಿತೆಂದು ನಂಬಲಾದ ಸ್ಥಳ.

**ಮೂವತ್ತಾರು ತತ್ವಗಳು :** ಸೃಷ್ಟಿಯ ವಚನಗಳು ಸಾಮಾನ್ಯವಾಗಿ ಮೂವತ್ತಾರು ತತ್ವಗಳ ವಿಚಾರವನ್ನು ಒಳಗೊಳ್ಳುತ್ತವೆ. ಸೃಷ್ಟಿ ಹೇಗಾಯಿತು, ಹೇಗೆ ಪ್ರಾರಂಭವಾಗಿ, ಯಾವ ಕ್ರಮದಲ್ಲಿ ಮುಂದುವರಿದು, ಹೇಗೆ ಕೊನೆಗೊಂಡಿತು, ಯಾವ ವಸ್ತುವು ಉಪಾದಾನವಾಗಿ ಬಳಸಲ್ಪಟ್ಟಿತು, ಯಾವ ಉದ್ದೇಶಕ್ಕಾಗಿ ಸೃಷ್ಟಿಯಾಯಿತು, ಎಂಬ ವಿಚಾರಗಳೂ ಅಂಥ ವಚನಗಳಲ್ಲಿ ಅಡಕವಾಗಿರುತ್ತವೆ.

ಸೃಷ್ಟಿಯಲ್ಲಿ ಮೂವತ್ತಾರು ತತ್ವಗಳು ಪಾಲ್ಗೊಳ್ಳುತ್ತವೆ ಎಂಬ ಮಾತನ್ನು ಎಲ್ಲ ವಚನಕಾರರು ಒಪ್ಪಿಕೊಂಡರೂ, ಆ ಮೂವತ್ತಾರು ತತ್ವಗಳಾವವು ಎಂಬ ವಿಷಯದಲ್ಲಿ ಅವರಲ್ಲಿ ಒಮ್ಮತವಿಲ್ಲ. ಆದರೆ ಆ ಮೂವತ್ತಾರು ತತ್ವಗಳಲ್ಲಿ ಮೊದಲನೆ ಹನ್ನೊಂದು ತತ್ವಗಳನ್ನು ಪ್ರಸ್ತಾಪಿಸುವಾಗ ಮಾತ್ರ ವಚನಕಾರರಲ್ಲಿ ಒಮ್ಮತವಿರುವಂತೆ ಕಾಣುತ್ತದೆ. ಆ ಒಮ್ಮತವನ್ನು ಹೀಗೆ ಸಂಕ್ಷಿಪ್ತವಾಗಿ ತಿಳಿಸಬಹುದು. ಮೊದಲು ಪರಶಿವನು ಏನೊಂದೇನೂ ಇಲ್ಲದಂಥ ಪರಿಸ್ಥಿತಿಯಲ್ಲಿ ತಾನೊಬ್ಬನೇ ಇದ್ದನು. ತಾನು ಸೃಷ್ಟಿಸಬೇಕಾದ ವಿಶ್ವದ ಬಗೆಗಾಗಲೀ ತನ್ನ ಬಗೆಗಾಗಲಿ ಅವನಿಗೆ ಅರಿವಿರಲಿಲ್ಲ. ಪರಶಿವನ ಅಂಥ ಪರಿಸ್ಥಿತಿಯನ್ನು ವಚನಕಾರರು ಶೂನ್ಯ, ಮಹಾಶೂನ್ಯ, ಸರ್ವಶೂನ್ಯ, ಮುಂತಾದ ಹೆಸರುಗಳಿಂದ ಕರೆದಿದ್ದಾರೆ. ಮುಂದೆ ಅವನಲ್ಲಿ ನೆನಹು (ಚಿತ್ತು ಅಥವಾ ಜ್ಞಾನಚಿತ್ತು) ತಲೆದೋರಿದಾಗ, ಅವನಿಗೆ ತಾನೊಬ್ಬನೇ ಇರುವುದರ ಅರಿವಾಗಿ, ಸೃಷ್ಟಿ ಮಾಡಬೇಕೆಂಬ ಬಯಕೆಯೂ ಅವನಲ್ಲಿ ಮೂಡುತ್ತದೆ. ಅವನ ಇಂಥ ಅವಸ್ಥೆಗೆ ಕೆಲವರು ನಿಃಕಲ (ನಿಷ್ಕಲ) ಲಿಂಗ ಸ್ಥಲ ಎಂಬ ಹೆಸರನ್ನೂ ಮತ್ತೆ ಕೆಲವರು ಮಹಾಲಿಂಗಸ್ಥಲ ಎಂಬ ಹೆಸರನ್ನೂ ಕೊಟ್ಟಿದ್ದಾರೆ.

ಕೆಲವು ವಚನಕಾರರ ಪ್ರಕಾರ, ನಿಃಕಲ ಲಿಂಗವು ತನ್ನಲ್ಲೇ ಇರುವ ಶಕ್ತಿಯೆಂಬ ಉಪಾದಾನ ಕಾರಣದಿಂದ ಹತ್ತು ವಿದ್ಯಾತತ್ವಗಳನ್ನೂ, ಇವುಗಳಿಂದ ಇಪ್ಪತ್ತೈದು ಆತ್ಮ ತತ್ವಗಳನ್ನೂ ಸೃಷ್ಟಿಸುತ್ತದೆ. ಈ ಹತ್ತು ವಿದ್ಯಾತತ್ವಗಳು ಯಾವುವೆಂದರೆ : ಶಿವಸಾದಾಖ್ಯ, ಅಮೂರ್ತಿಸಾದಾಖ್ಯ, ಮೂರ್ತಿಸಾದಾಖ್ಯ, ಕರ್ತೃಸಾದಾಖ್ಯ ಮತ್ತು ಕರ್ಮಸಾದಾಖ್ಯ ಎಂಬ ಐದು ಸಾದಾಖ್ಯಗಳು ಮತ್ತು ಅವುಗಳ ಜೊತೆಗೇ ಇರುವ ನಿವೃತ್ತಿಕಲಾ, ಪ್ರತಿಷ್ಠಾಕಲಾ, ವಿದ್ಯಾಕಲಾ, ಶಾಂತಿಕಲಾ ಮತ್ತು ಶಾಂತ್ಯತೀತಕಲಾ ಎಂಬ ಐದು ಕಲೆ ಅಥವಾ ಕಲಾಶಕ್ತಿಗಳು. ಈ ಹತ್ತು ವಿದ್ಯಾತತ್ವಗಳು ಪರಶಿವ ಮತ್ತು ಅವನ ಶಕ್ತಿಯ ವಿಕಸಿತ ರೂಪಗಳಷ್ಟೇ ಹೊರತು, ಅವು ಸ್ವತಂತ್ರ ತತ್ವಗಳಲ್ಲ.

ಈ ಹತ್ತು ವಿದ್ಯಾತತ್ವಗಳಿಂದ ಆಕಾಶ, ವಾಯು, ಅಗ್ನಿ, ಅಪ್ಪು, ಪೃಥ್ವಿಗಳೆಂಬ ಭೂತಪಂಚಕಗಳು, ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ಚರ್ಮಗಳೆಂಬ ಜ್ಞಾನೇಂದ್ರಿಯ ಪಂಚಕಗಳು, ಕೈ, ಕಾಲು, ಗುದ, ಗುಹ್ಯ, ವಾಕ್ಕು ಎಂಬ ಕರ್ಮೇಂದ್ರಿಯ ಪಂಚಕಗಳು, ಪ್ರಾಣ, ಅಪಾನ, ಉದಾನ, ವ್ಯಾನ ಮತ್ತು ಸಮಾನಗಳೆಂಬ ವಾಯು ಪಂಚಕಗಳು, ಜೀವಾತ್ಮ ಮತ್ತು ಅವನ ಜೊತೆಗಿರುವ ಚಿತ್ತ, ಬುದ್ಧಿ, ಮನಸ್ಸು ಮತ್ತು ಅಹಂಕಾರ ಎಂಬ ಅಂತಃಕರಣ ಪಂಚಕಗಳು, ಉದ್ಭವಿಸುತ್ತವೆ.

ಕೆಲವು ವಚನಕಾರರು ಮೇಲೆ ಹೇಳಿದ ಸಾದಾಖ್ಯಗಳ ಬದಲು ಈಶ್ವರ, ಸದಾಶಿವ, ಬ್ರಹ್ಮ, ವಿಷ್ಣು ಮತ್ತು ರುದ್ರರ ಹೆಸರುಗಳನ್ನೂ ಮತ್ತೆ ಕೆಲವು ವಚನಕಾರರು ಈಶಾನ್ಯ, ತತ್ಪುರುಷ, ಅಘೋರ, ವಾಮದೇವ ಮತ್ತು ಸದ್ಯೋಜಾತ ಎಂಬ ಹೆಸರುಗಳನ್ನೂ ಬಳಸುತ್ತಾರೆ. ಅದೇ ರೀತಿ ಕಲೆಗಳ ಬದಲು ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳ ಹೆಸರನ್ನು ಬಳಸುತ್ತಾರೆ. ಈ ರೀತಿ ಒಂದು ಹೆಸರುಗಳ ಗುಂಪಿನ ಬದಲು ಮತ್ತೊಂದು ಹೆಸರುಗಳ ಗುಂಪನ್ನು ಬಳಸುವುದು ಅರ್ಥವಾಗುವ ವಿಷಯ. ಆದರೆ ಕೆಲವರು ಇಪ್ಪತ್ತೈದು  ತತ್ವಗಳಲ್ಲಿನ ಪಂಚಕಗಳನ್ನೆ ಬದಲಾಯಿಸಿ ಗೊಂದಲವನ್ನುಂಟುಮಾಡಿದ್ದಾರೆ. ಉದಾಹರಣೆಗೆ ಕೆಲವರು ವಾಯುಪಂಚಕಗಳ ಬದಲು ವಿಷಯ ಪಂಚಕಗಳನ್ನು (ರೂಪರಸಾದಿ ತನ್ಮಾತ್ರೆಗಳನ್ನು) ಜೋಡಿಸುತ್ತಾರೆ. ಆದರೆ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಪ್ರಕಾರ, ೨೫ ಆತ್ಮತತ್ವಗಳೆಂದರೆ, ಆತ್ಮನೂ ಸೇರಿ, ಅಂತಃಕರಣ ಪಂಚಕ, ವಿಷಯ ಪಂಚಕ, ಬುದ್ಧೀಂದ್ರಿಯ ಪಂಚಕ, ವಾಯು ಪಂಚಕ ಮತ್ತು ಕರ್ಮೇಂದ್ರಿಯ ಪಂಚಕ. ಇವರು ಪಂಚಭೂತಗಳನ್ನು ಹೆಸರಿಸದಿರುವುದು ಗಮನಾರ್ಹ. ಪ್ರಾಯಶಃ ಪಂಚಭೂತಗಳು ಪಂಚಕಲೆ (ಪಂಚಶಕ್ತಿ)ಗಳ ಪ್ರತೀಕವಾಗಿರುವುದರಿಂದ ಹಾಗೂ ಅವು ಆಗಲೇ ವಿದ್ಯಾತತ್ವದ ಗುಂಪಿನಲ್ಲಿ ಸೇರ್ಪಡೆಯಾಗಿರುವುದರಿಂದ, ಅವನ್ನು ಮತ್ತೆ ಹೆಸರಿಸುವುದು ಅನಾವಶ್ಯಕವೆಂಬ ಕಾರಣದಿಂದ ಅವನ್ನು ಕೈಬಿಟ್ಟಿರಬಹುದು.

ಆದರೆ ಸಿದ್ಧಲಿಂಗ ಶಿವಯೋಗಿಗಳ ಕೆಲವು ಸೃಷ್ಟಿಯ ವಚನಗಳನ್ನು ಗಮನಿಸಿದರೆ, ತತ್ವಗಳು ಮೂವತ್ತಾರಕ್ಕಿಂತ ಹೆಚ್ಚಿರಬೇಕೆನಿಸುತ್ತದೆ. ಅವರ ಪ್ರಕಾರ, ನಿಃಕಲ ಲಿಂಗದಿಂದ ಆರು ಲಿಂಗಗಳು, ಆರು ಶಕ್ತಿಗಳು, ಆರು ಕಲೆಗಳು, ಆರು ಸಾದಾಖ್ಯಗಳು, ಆರು ಅಕ್ಷರಗಳು, ಐದು ಕರ್ಮೇಂದ್ರಿಯಗಳು, ಐದು ವಿಷಯಗಳು, ಐದು ಮಹಾಭೂತಗಳು, ಐದು ವಾಯುಗಳು, ಐದು ಬುದ್ಧೀಂದ್ರಿಯಗಳು, ಐದು ಅಂತಃಕರಣಗಳು ಉದ್ಭವಿಸುತ್ತವೆ. ಇವುಗಳ ಮೊತ್ತ ಅರವತ್ತಾಗುತ್ತದೆ. ಇವುಗಳ ಜೊತೆಗೆ ನಿಃಕಲ ಲಿಂಗ, ಮುಂತಾದ ಪರಶಿವನ ಅವಸ್ಥೆಗಳನ್ನು ಸೇರಿಸಿದರೆ ಸಂಖ್ಯೆ ಇನ್ನೂ ದೊಡ್ಡದಾಗುತ್ತದೆ.

ಆದರೆ ಅವರೇ ಮತ್ತೊಂದು ಕಡೆ, ಮೇಲೆ ಹೇಳಿರುವ ಮೂವತ್ತಾರು ತತ್ವಗಳನ್ನೂ ಪ್ರಸ್ತಾಪಿಸುತ್ತಾರೆ.

ಆದರೆ ಇವುಗಳನ್ನು ಪ್ರಸ್ತಾಪಿಸುವ ವಚನಗಳು ಈ ಎರಡು ತೀರ್ಮಾನಗಳನ್ನು ವ್ಯಕ್ತಪಡಿಸುತ್ತವೆ. (೧) ಸೃಷ್ಟಿಯು ಅಸ್ಪಷ್ಟ, ಅವ್ಯಕ್ತ ಮತ್ತು ಸೂಕ್ಷ್ಮ ಅವಸ್ಥೆಯಿಂದ ಸ್ಪಷ್ಟ, ವ್ಯಕ್ತ ಮತ್ತು ಸ್ಥೂಲ ಅವಸ್ಥೆಯ ಕಡೆಗೆ ಚಲಿಸುತ್ತದೆ. ಮೊದಲು ಶಕ್ತಿಯು ಅಸ್ಪಷ್ಟ, ಸೂಕ್ಷ್ಮ ಸ್ಥಿತಿಯಲ್ಲಿದ್ದು ಕೊನೆಗೆ ಇಂದ್ರಿಯಗೋಚರ ಸ್ಥೂಲ ಪ್ರಪಂಚವಾಗಿ ವ್ಯಕ್ತವಾಗುತ್ತದೆ. (೨) ಶಿವ ತಾನೊಬ್ಬನೆ ಸೃಷ್ಟಿಸಲಾರ, ಶಕ್ತಿ ತಾನೊಂದೇ ವಿಕಾಸವಾಗಲಾರದು; ವಿಕಾಸವಾಗುವುದು ಶಕ್ತಿಯೇ ಆದರೂ ಅದಕ್ಕೆ ಚಾಲನೆ ನೀಡಿ, ಮಾರ್ಗದರ್ಶನ ನೀಡಲು ಚೈತನ್ಯ ಸ್ವರೂಪನಾದ ಶಿವ ಆವಶ್ಯಕ. ಶಕ್ತಿಯ ಪ್ರತಿ ವಿಕಾಸದ ಹಂತದಲ್ಲೂ ಶಿವ ಬೇರೆ ಬೇರೆ ರೂಪಗಳಲ್ಲಿ ಅದನ್ನು ನಿಯಂತ್ರಿಸಿ, ಅದಕ್ಕೆ ಮಾರ್ಗದರ್ಶನ ನೀಡುತ್ತಾನೆ.

**ಮೃಢನೊಳೆಡದೆರಹಿಲ್ಲದಿರುವುದು :** ಮೃಢ (ಶಿವ)ನಿಗೂ ತನಗೂ ತೆರಹಿಲ್ಲದಂತೆ ಕೂಡಿಕೊಂಡಿರುವುದು. ಶಿವನಲ್ಲಿ ಒಂದಾಗಿರುವುದು. (೫:೩೦೩)

**ಮೇರು (ಮಹಾಮೇರು, ಮೇರುದಂಡ) :** ಮನುಷ್ಯನ ಬೆನ್ನುಹುರಿ. ಇದರಲ್ಲಿ ಐದು ಚಕ್ರಗಳಿವೆ (ನೋಡಿ : **ಚಕ್ರಗಳು**).

**ಮೋಕ್ಷ :** (ನೋಡಿ : **ಮುಕ್ತಿ**).

**ಯಂತ್ರವಾಹಕ :** ೧. ಇಡೀ ಜಗತ್ತನ್ನು ಒಂದು ಯಂತ್ರವೆಂದು ಪರಿಗಣಿಸಿದರೆ, ಅದನ್ನು ಆಡಿಸುವ ಪರಶಿವನು ಯಂತ್ರವಾಹಕನೆನಿಸಿಕೊಳ್ಳುತ್ತಾನೆ. ಇಲ್ಲಿ ಜಗತ್ತು ಎಂಬ ಪದವನ್ನು ಜಡ ಜಗತ್ತು ಎಂದೂ ಜೀವಜಗತ್ತು ಎಂದೂ ಅರ್ಥೈಸಬೇಕು. ಏಕೆಂದರೆ ಪರಶಿವನು ಅವೆರಡನ್ನೂ ತನಗಿಚ್ಛೆ ಬಂದಂತೆ ಆಡಿಸುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ- ಯಂತ್ರದಿಂದ ಹೊರಗಿದ್ದುಕೊಂಡು ಹೇಗೆ ಅದನ್ನು ಯಂತ್ರವಾಹಕನು ಆಡಿಸುತ್ತಾನೋ, ಹಾಗೆಯೇ, ಪರಶಿವನು ಜಗತ್ತಿನ ಒಳಗಿದ್ದುಕೊಂಡೇ ಜಗತ್ತನ್ನು ನಿಯಂತ್ರಿಸುತ್ತಾನೆ.

೨. ಯಂತ್ರವಾಹಕ ಎಂಬ ಪದವು ಒಂದು ಉಪಮೆ. ನಿಯಂತ್ರಕ, ಜಗತ್ತನ್ನು ನಿಯಂತ್ರಿಸುವವನು, ಎಂಬುದು ವಾಚ್ಯಾರ್ಥ. (೩:೧೯೫)

**ಯಜನ (ಯಜ್ಞ) :** ಅರ್ಪಣೆ.

**ಯಮ (ಯಮಯೋಗ) :** ಅಷ್ಟಾಂಗಯೋಗದಲ್ಲಿ ಮೊದಲನೆ ಅಂಗ. ಇದರಲ್ಲಿ ಮತ್ತೆ ಸತ್ಯ, ಅಹಿಂಸೆ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಎಂಬ ಐದು ಉಪಾಂಗಗಳಿವೆ. ಎಂದೂ ಸುಳ್ಳು ಹೇಳಬಾರದು, ಯಾವಾಗಲೂ ಸತ್ಯವನ್ನೆ ಹೇಳಬೇಕು.

ಅದೂ ಮೃದುವಾಗಿ ಹೇಳಬೇಕು ಎಂಬುದು ಸತ್ಯ; ಯಾವ ಪ್ರಾಣಿಗೂ ಹಿಂಸೆ ನೀಡಬಾರದು ಎಂಬುದು ಅಹಿಂಸೆ. ಕಳ್ಳತನ ಮಾಡಬಾರದು ಎಂಬುದು ಆಸ್ತೇಯ; ಮದುವೆಯಾಗಬೇಕು, ಆದರೆ ಪರಸ್ತ್ರೀಯರನ್ನು ನೆನೆಯಬಾರದು, ಅವರ ಸಂಗ ಮಾಡಬಾರದು ಎಂಬುದು ಬ್ರಹ್ಮಚರ್ಯ; ಯಾರಾದರೂ ಏನನ್ನಾದರೂ ಕೊಟ್ಟರೆ ಅದನ್ನು ಸ್ವೀಕರಿಸಬಾರದೆಂಬುದು ಅಪರಿಗ್ರಹ. ವಚನಕಾರರು ಇವನ್ನೆಲ್ಲಾ ಸದಾಚಾರದೊಳಗೆ ಸೇರಿಸುವುದರಿಂದ, ಹಾಗೂ ಅಷ್ಟಾಂಗಯೋಗಕ್ಕೆ ಲಿಂಗೈಕ್ಯತೆ ಧ್ಯೇಯವಲ್ಲದುದರಿಂದ, ಯಮಯೋಗವನ್ನು ಪ್ರತ್ಯೇಕವಾಗಿ ಆಚರಿಸುವುದಿಲ್ಲ.

**ಯುಕ್ತಿ :** ವ್ಯಾವಹಾರಿಕ ಜ್ಞಾನ. (೧:೧೦೬೨)

**ಯೋಗ :** ಯೋಗ ಎಂಬ ಪದಕ್ಕೆ ಅನೇಕ ಅರ್ಥಗಳಿದ್ದು, ಇವುಗಳನ್ನು ಮುಖ್ಯವಾಗಿ ಎರಡು ಗುಂಪುಗಳಾಗಿ ಮಾಡಬಹುದು.

೧. ಧ್ಯೇಯ ಎಂಬುದು ಒಂದು ಅರ್ಥ. ಬೇರೆ ಬೇರೆ ದರ್ಶನಗಳ ಪ್ರಕಾರ, ಜೀವನಕ್ಕೆ ಬೇರೆ ಬೇರೆ ಧ್ಯೇಯಗಳಿವೆ. ಶಿವಯೋಗದ ಪ್ರಕಾರ, ಯೋಗ (ಸಂಯೋಗ)ವೆಂದರೆ ಶಿವಜೀವರ ಕೂಟ ಎಂದರ್ಥ. ಪಾತಂಜಲಯೋಗದ ಪ್ರಕಾರ ಯೋಗವೆಂದರೆ ಶಿವ ಜೀವರ ಕೂಟವಲ್ಲ, ಕೇವಲ ಚಿತ್ತ ವೃತ್ತಿ ನಿರೋಧ.

೨. ಪರಮಧ್ಯೇಯವೇನೇ ಇರಲಿ, ಆ ಧ್ಯೇಯವನ್ನು ಸಾಧಿಸಲು ಅನುಸರಿಸಬೇಕಾದ ಮಾರ್ಗವೇ ಯೋಗ. ಈ ಅರ್ಥದಲ್ಲಿಯೇ ನಾವು ಭಕ್ತಿಯೋಗ, ಕರ್ಮಯೋಗ, ಮುಂತಾದ ಪದಗಳನ್ನು ಬಳಸುವುದು.

**ಯೋಗಪ್ರಮಾಣ :** ಯೋಗ ಎಂಬ ಪದವು ಒಂದು ವಿಶಿಷ್ಟ ಅರ್ಥದಲ್ಲಿ ಸಮಾಧಿ ಸ್ಥಿತಿಗೆ ಅನ್ವಯಿಸುತ್ತದೆ. ವಚನಕಾರರ ಪ್ರಕಾರ, ಐಕ್ಯನು ಸಮಾಧಿಸ್ಥಿತಿಯಲ್ಲಿ (ಲಿಂಗಾಂಗ ಸಾಮರಸ್ಯ ಸ್ಥಿತಿಯಲ್ಲಿ) ಇರುವಾಗ, ಅವನ ಆತ್ಮವು ಪರಮಾತ್ಮನಲ್ಲಿ ಐಕ್ಯವಾಗುತ್ತಿರುವುದು ಸ್ವಲ್ಪ ಹೊತ್ತಿನ ಮೊದಲೇ ಗೊತ್ತಾಗಿ, ಅದು ಪರಮಾತ್ಮನಲ್ಲಿ ತಾನು ಒಂದಾಗಿರುವಾಗ, ಅವನಿಗೆ ತನ್ನ ಬಗೆಗಾಗಲಿ ಪರಮಾತ್ಮನ ಬಗೆಗಾಗಲಿ ಅರಿವಾಗುವುದಿಲ್ಲ. ಅನಂತರ ಅವನು ಜಾಗೃತ ಸ್ಥಿತಿಗೆ ಹಿಂದಿರುಗಿದಾಗ, ತನ್ನ ಐಕ್ಯಸ್ಥಿತಿಯ ಬಗ್ಗೆ ಜ್ಞಾಪಕ ಬರುತ್ತದೆ. ಇದನ್ನು ನಿದ್ದೆಯ ಉಪಮೆಯ ಮೂಲಕ ಹೀಗೆ ವಿವರಿಸಬಹುದು: ನಾವು ಗಾಢ ನಿದ್ರೆಯನ್ನು ಪ್ರವೇಶಿಸುವ ಮೊದಲು ಗಾಢನಿದ್ರೆಯನ್ನು ಪ್ರವೇಶಿಸುವುದರ ಅರಿವಾಗುತ್ತದೆ. ಗಾಢ ನಿದ್ರೆ ಬಂದ ನಂತರ ಆ ಸ್ಥಿತಿಯಲ್ಲಿರುವುದರ ಅರಿವು ನಮಗಾಗುವುದಿಲ್ಲ. ನಿದ್ದೆಯಿಂದ ಎಚ್ಚತ್ತ ನಂತರ ನಮಗೆ ನಿದ್ದೆ ಬಂದಿದ್ದುದರ ಜ್ಞಾಪಕ ಬಂದು, ನನಗೆ ಗಾಢ ನಿದ್ರೆ ಬಂದಿತ್ತು ಎನ್ನುತ್ತೇವೆ. ಹಾಗೆಯೇ ಯೋಗ (ಸಮಾಧಿ) ಸ್ಥಿತಿ ಪಡೆದು, ಜಾಗೃತ ಸ್ಥಿತಿಗೆ ಬಂದವನು ಆತ್ಮ ಮತ್ತು ಪರಮಾತ್ಮ ಇರುವುದು

ಸತ್ಯವೆಂದೂ, ಆತ್ಮ ಪರಮಾತ್ಮರ ಸಂಯೋಗ ಸಾಧ್ಯವೆಂದೂ, ಅದಕ್ಕೆ ತನ್ನ ಯೋಗವೇ (ಸಮಾಧಿ ಸ್ಥಿತಿಯೇ) ಪ್ರಮಾಣವೆಂದೂ ಹೇಳುವನು.

**ಯೋಗಲಿಂಗಾಂಗ :** ಅನುಭಾವದ ಮೂಲಕ ಲಿಂಗಾಂಗ ಸಾಮರಸ್ಯವನ್ನು ಸಾಧಿಸಿದವನಿಗೆ ಧ್ಯಾನಿಸಲಾಗಲಿ ಕಾಣಲಾಗಲಿ ಮತ್ತೊಂದಿಲ್ಲ. ಇತರರು ಲಿಂಗದ ಅಂಗಗಳಾದರೂ ಅವರಿಗೆ ಅನುಭಾವ (ಯೋಗ) ಸಿದ್ಧಿಸಿಲ್ಲವಾದುದರಿಂದ ಅವರು ಯೋಗಲಿಂಗಾಂಗಿಗಳಲ್ಲ.

**ಯೋಗಾಂಗ :** ಶಿವಯೋಗ ಸಿದ್ಧಿಸಿಕೊಂಡವನ ದೇಹ. ಶಿವಯೋಗಿಯು ತನ್ನ ಅಂಗ (ದೇಹ), ಇಂದ್ರಿಯ, ಮನಸ್ಸು, ಬುದ್ಧಿ, ಇತ್ಯಾದಿಗಳೆಲ್ಲವೂ ಶಿವನ ಅಂಗವೆಂದು ತಿಳಿದುಕೊಳ್ಳುವುದಲ್ಲದೆ, ಅವನು ಶಿವನೊಡನೆ ಯೋಗ (ಸಂಯೋಗ, ಕೂಟ)ವನ್ನೂ ಪಡೆಯುವದರಿಂದ, ಅವನ ಅಂಗವು ಯೋಗಾಂಗವೆನಿಸಿಕೊಳ್ಳುತ್ತದೆ. (೮:೧೦೩೮)

**ರಜಸೂತಕ ನಿರಸನ :** ರಜಸ್ವಲೆಯಾದವರು ಮೂರುದಿನ ಒಳಗೆ ಬರಬಾರದು, ಜನರನ್ನಾಗಲಿ ಪವಿತ್ರ ವಸ್ತುಗಳನ್ನಾಗಲಿ ಮುಟ್ಟಿ ಮೈಲಿಗೆ ಮಾಡಬಾರದು ಎಂಬುದು ಹಿಂದೂಗಳ ಸಾಮಾಜಿಕ ಸಂಸ್ಕಾರಗಳಲ್ಲೊಂದು. ವೀರಶೈವರು ಈ ಸೂತಕವನ್ನಾಚರಿಸಬಾರದು, ಹಾಗೂ ಅದನ್ನು ನಿವಾರಿಸಬೇಕೆಂಬುದಕ್ಕೆ ವಿವರ : ಶಿವದೀಕ್ಷೆ ಪಡೆದ ಹೆಂಗಸರು ತಮ್ಮ ಶರೀರವೆಲ್ಲವನ್ನೂ ಲಿಂಗಶರೀರವನ್ನಾಗಿ ಮಾಡಿಕೊಂಡ ಮೇಲೆ, ರಜಸ್ವಲೆಯಿಂದಾಗಿ ತಾವು ನಿರ್ಮಲ ಕಾಯದವರೆಂದು ತಿಳಿದುಕೊಳ್ಳಬೇಕು, ಹಾಗೂ ದೀಕ್ಷಾ ಪಾದೋದಕದಿಂದ ಸ್ನಾನಮಾಡಿ, ಗುರುಕಾರುಣ್ಯದ ಮೂಲಕ ಲಿಂಗಸಂಬಂಧವಾಗಿರುವವರ ದರ್ಶನ ಸ್ಪರ್ಶನ ಸಂಭಾಷಣೆಗಳ ಮೂಲಕ ಪಾವನರಾಗುವುದೇ ರಜಸೂತಕನಿರಸನ. (೧೪:೨೪೬೮)

**ರಸವಾದ :** ಗಿಡಮೂಲಿಕೆ ಮತ್ತಿತರ ರೀತಿಯ ರಸಗಳಿಂದ ದೇಹವನ್ನು ಬಹಳ ಕಾಲದವರೆಗೆ ಆರೋಗ್ಯವಾಗಿಯೂ ಶಕ್ತಿಯುತವಾಗಿಯೂ ಇಡಬಹುದೆಂಬ ವಾದ. ಆದರೆ ಇದು ಸಂಸಾರ ಬಂಧನದಿಂದ ತಪ್ಪಿಸಿಕೊಳ್ಳಲು ಯಾವ ರೀತಿಯ ಸಹಾಯವನ್ನೂ ಮಾಡುವುದಿಲ್ಲವಾದುದರಿಂದ, ಇದು ವಚನಕಾರರಿಗೆ ಅಸ್ವೀಕಾರಾರ್ಹ. (೪:೫೮೦)

**ರುಚಿಭವಿ :** ದೇಹದ ಬಯಕೆಗಾಗಿ ಮಾತ್ರ ಆಹಾರವನ್ನು ಸ್ವೀಕರಿಸುವುದು ರುಚಿಭವಿ. ಆಹಾರವನ್ನು ಪರಶಿವನಿಗೆ ಮೊದಲು ಕೃತಜ್ಞತೆಯಿಂದ ಅರ್ಪಿಸಿ, ಅನಂತರ ಅದನ್ನು ಭುಂಜಿಸಿದರೆ, ಆ ರುಚಿಗೆ ಭವಿತನ ಹೋಗಿ ಪ್ರಸಾದಿತ್ವ ಬಂದಿದೆ ಎಂದರ್ಥ. (೮:೧೪೨೦)

**ರುಚಿವಿಕಾರಿಗಳು :** ವಿವಿಧ ರುಚಿಗಳನ್ನು ಆಸ್ವಾದಿಸಬೇಕೆಂಬ ಉದ್ದೇಶದಿಂದ ಪ್ರಸಾದ ಸೇವನೆ ಮಾಡುವವರು. ಆದರೆ ಪ್ರಸಾದದಲ್ಲಿ ರುಚಿಯನ್ನರಸಬಾರದು. (೩:೬೧೩)

**ರುಚಿವಿರೋಧಿ ಪ್ರಸಾದಿ :** ಪ್ರಸಾದಿಯಾದವನು ಲಿಂಗಕ್ಕೆ ಅರ್ಪಣೆ ಮಾಡಿದುದನ್ನು ಪ್ರಸಾದಮಾಡಿಕೊಳ್ಳುವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಾನೆ. ಏಕೆಂದರೆ ಆ ಕ್ರಿಯೆಯಲ್ಲಿ

ಅವನ ಕೃತಜ್ಞತೆ ವ್ಯಕ್ತವಾಗುವುದಲ್ಲದೆ, ತಾನು ಪ್ರಸಾದವನ್ನು ಸೇವಿಸಿ ಶುದ್ಧನಾಗಬೇಕೆಂಬ ಶ್ರದ್ಧೆ ಇದೆ. ಹೀಗಾಗಿ ಅವನು ಪ್ರಸಾದದ ರುಚಿಗೆ ಗಮನ ಕೊಡುವುದಿಲ್ಲ. ಪ್ರಸಾದಕ್ಕೆ ರುಚಿ ಇರಲೇಬೇಕೆನ್ನುವವನು ಪ್ರಸಾದಿಯಲ್ಲ. (೩:೮೦೭)

**ರುಚಿಸಂಪಾದನೆ :** ಇಲ್ಲಿ ಸಂಪಾದನೆ ಎಂದರೆ ಸಂದೇಹ, ಚರ್ಚೆ ಎಂಬರ್ಥವಿದೆ. 'ಪ್ರಸಾದದಲ್ಲಿ ರುಚಿಸಂಪಾದನೆಯ ಮಾಡುವನ್ನಕ್ಕ ಪ್ರಸಾದ ಸಂಬಂಧಿಯಲ್ಲ' ಎಂಬುದಕ್ಕೆ ನಿಜವಾದ ಪ್ರಸಾದಿಯು ಪ್ರಸಾದದ ರುಚಿಯ ಬಗ್ಗೆ ಸಂಶಯ ತಾಳಬಾರದು ಎಂಬರ್ಥವಿದೆ. (೩:೧೨೧೯)

**ರುಚ್ಯರ್ಪಿತ (ಪ್ರಾಣಲಿಂಗಾರ್ಪಿತ) :** ಮಧುರ, ಆಮ್ಲ, ಲವಣ, ಕಟು, ಕಷಾಯ, ತಿಕ್ತ ಎಂಬ ಆರು ರುಚಿಗಳನ್ನು ಮನಸ್ಸಿನಲ್ಲೆ ನಾಲಗೆಯನ್ನು ತಟ್ಟೆಯನ್ನಾಗಿ ಮಾಡಿಕೊಂಡು, ಹೃದಯದಲ್ಲಿರುವ ಪ್ರಾಣಲಿಂಗಕ್ಕೆ ಅರ್ಪಿಸಿದರೆ ಆ ಪ್ರಾಣಲಿಂಗಾರ್ಪಿತವು ರುಚ್ಯರ್ಪಿತವೆನಿಸಿಕೊಳ್ಳುತ್ತದೆ. ಹೀಗೆ ಮಾಡುವಾಗ ಕರಣಗಳು ಒಮ್ಮುಖವಾಗಿರಬೇಕು.

**ರುದ್ರನ ನೊಸಲಗಣ್ಣಿನ ಕಿಚ್ಚು :** ಪಂಚಮೂರ್ತಿಗಳಲ್ಲೊಬ್ಬನಾದ ರುದ್ರನು ಪಂಚಕೃತ್ಯಗಳಲ್ಲೊಂದಾದ ವಿಶ್ವಸಂಹಾರವನ್ನು ಮಾಡುತ್ತಾನೆ. ಅವನ ಮೂರನೇ ಕಣ್ಣು ಹಣೆಯಲ್ಲಿದ್ದು ಅದಕ್ಕೆ ಜಗತ್ತನ್ನೆ ಸಂಹರಿಸುವ ಶಕ್ತಿ ಇದೆ. ಆದರೆ ಈ ವಚನದಲ್ಲಿ ನೊಸಲಗಣ್ಣಿನ ಕಿಚ್ಚು ಎಂಬ ಪದವು ಆಲಂಕಾರಿಕವಾಗಿ ಬಳಕೆಯಾಗಿದೆ. ಪ್ರತಿಯೊಬ್ಬನ ಹುಬ್ಬುಗಳ ಮಧ್ಯೆ ಆಜ್ಞಾಚಕ್ರವಿದ್ದು, ಆಧ್ಯಾತ್ಮಿಕ ಶಿಕ್ಷಣದಿಂದ ಅದು ಜಾಗ್ರತವಾದಾಗ, ಸಾಧಕನು ಅಲ್ಲಿ ಅಪ್ರತಿಮ ಬೆಳಕನ್ನು ಕಾಣುತ್ತಾನೆ. ಅದೇ ನೊಸಲಗಣ್ಣಿನ ಕಿಚ್ಚು. ಇಷ್ಟು ಆಧ್ಯಾತ್ಮಿಕ ಪ್ರಗತಿ ಸಾಧಿಸಿದವನನ್ನು ತ್ರಿಪುರಗಳ (ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರಗಳ) ಅಥವಾ ಮಲವನ್ನು ಸುಟ್ಟಿದ್ದಾನೆ ಎಂಬುದು ಈ ಮಾತಿನ ಅರ್ಥ. (೨:೪೮೫)

**ರುದ್ರನ ಪಾಶಕ್ಕೊಳಗಾಗುವುದು :** ಯಾವುದೋ ಐಹಿಕ ಲಾಭಕ್ಕಾಗಿ ಜಂಗಮ ಪೂಜೆಯನ್ನು ಮಾಡುವವರಿಗೆ ಜ್ಞಾನಗಳಿಸಲು (ಶಿವಸಾಕ್ಷಾತ್ಕಾರ ಪಡೆಯಲು) ಸಾಧ್ಯವಿಲ್ಲ. ಅಂಥ ಸ್ವಾರ್ಥಿಗಳು ಸಾವನ್ನು ಗೆಲ್ಲದೆ ಪ್ರಳಯಕ್ಕೊಳಗಾಗಲೇ ಬೇಕು, ಅಥವಾ ಪ್ರಳಯಕರ್ತನಾದ ರುದ್ರನ ಪಾಶಕ್ಕೆ ಒಳಗಾಗಲೇ ಬೇಕು.

**ರುದ್ರನ ಪಾಶವ ಹೊದ್ದದಿರುವುದು :** ರುದ್ರನು ಪರಶಿವನ ಆಜ್ಞೆಯ ಮೇರೆಗೆ ಪ್ರಪಂಚವನ್ನು ಸಂಹಾರ ಮಾಡುತ್ತಾನೆ. ಆದರೆ, ಸಂಹಾರವೇ ಕೊನೆಯಲ್ಲ. ಕೆಲಕಾಲದ ಮೇಲೆ, ಬ್ರಹ್ಮನು ನಮ್ಮ ನಮ್ಮ ಕರ್ಮಗಳಿಗನುಗುಣವಾಗಿ ನಮ್ಮನ್ನೂ ಪ್ರಪಂಚವನ್ನೂ ಮತ್ತೆ ಸೃಷ್ಟಿಸುತ್ತಾನೆ. ನಾವು ಈ ಜನ್ಮದಲ್ಲೇ ಲಿಂಗಾಂಗ ಸಾಮರಸ್ಯ ಪಡೆದರೆ, ನಾವು ಲಯಕ್ಕೊ ಒಳಗಾಗುವುದಿಲ್ಲ. ಮತ್ತೆ ಹುಟ್ಟುವುದೂ ಇಲ್ಲ. (೭:೧೩೦೮)

**ರುದ್ರನ ಹಂಗು :** ಅನೇಕ ಕರ್ಮಗಳನ್ನು ಮಾಡುತ್ತಾ ಜನ್ಮಾಂತರಗಳಲ್ಲಿ ಹುಟ್ಟಿ ಕೊನೆಗೆ ಲಯಕ್ಕೊ ಒಳಗಾದರೆ, ರುದ್ರನ ಹಂಗಿನಲ್ಲಿದ್ದಾನೆಂದರ್ಥ. ಏಕೆಂದರೆ ಲಯ ರುದ್ರನ ಕರ್ತವ್ಯ. (೮:೧೯೬೬)

**ರುದ್ರಮೂರ್ತಿ ಜಂಗಮವಾಗುವುದು :** ಜಂಗಮನು ಸ್ವಾರ್ಥ ಆಸೆಗಳಿಗೆ ಸಿಕ್ಕಿ ತಿರುಗುವುದಾದರೆ, ಅವನು ಮತ್ತೊಮ್ಮೆ ಲಯಕ್ಕೆ (ರುದ್ರನ ಪಾಶಕ್ಕೆ) ಒಳಗಾಗುತ್ತಾನೆ ಎಂದರ್ಥ. ನಿಜವಾದ ಭಕ್ತನು ಬ್ರಹ್ಮಮೂರ್ತಿ, ವಿಷ್ಣುಮೂರ್ತಿ, ರುದ್ರಮೂರ್ತಿ ಈ ಮೂವರಿಂದಲೂ ತಪ್ಪಿಸಿಕೊಳ್ಳಬೇಕು. (ಅ:೧೭೬೭)

**ರುದ್ರ ರೂಪು :** ಲಿಂಗಕ್ಕೆ (ಪರಶಿವನಿಗೆ) ರೂಪಿಲ್ಲದಿದ್ದರೂ ಅದಕ್ಕೆ ರುದ್ರನ ರೂಪನ್ನು ಆರೋಪಿಸುವುದು. (೯:೧೪೩)

**ರುದ್ರಾಕ್ಷಿ (ರುದ್ರಾಕ್ಷ) :** ರುದ್ರನ ಕಣ್ಣುಗಳಿಂದ ಉದುರಿದ ಅಶ್ರುಗಳೇ ಗಟ್ಟಿಯಾಗಿ ರುದ್ರಾಕ್ಷಿಯಾದವು ಎಂಬುದು ಪೌರಾಣಿಕ ವಿವರಣೆ. ಶಿವಯೋಗಿಗಳೂ ಭಕ್ತರೂ ಇವುಗಳನ್ನು ಧರಿಸಲೇ ಬೇಕು. ರುದ್ರಾಕ್ಷಿಯ ಪೌರಾಣಿಕ ಮಹತ್ವ ಏನೇ ಇದ್ದರೂ, ಅವುಗಳ ಮಾಲೆಯಲ್ಲಿರುವ ರುದ್ರಾಕ್ಷಿಗಳನ್ನು ಎಣಿಸುವುದು ಧ್ಯಾನಕ್ಕೆ ಸಹಾಯವಾಗುತ್ತದೆ. ರುದ್ರಾಕ್ಷಿಯಿಲ್ಲದ ಭಕ್ತ, ಗುರು ಜಂಗಮರಾರೂ ಗೌರವಕ್ಕೆ ಪಾತ್ರರಲ್ಲ.

**ರೂಪು ನಿರೂಪು :** ಇದನ್ನು ವಚನಕಾರರು ಎರಡು ಅರ್ಥಗಳಲ್ಲಿ ಬಳೆಸಿದ್ದಾರೆ. ಪರಶಿವನಿಗೆ ರೂಪು ಮತ್ತು ನಿರೂಪುಗಳೆರಡನ್ನೂ ಆರೋಪಿಸಬಹುದು ಎಂಬುದು ಒಂದು ಅರ್ಥ. ಸೃಷ್ಟಿ ಪೂರ್ವದ ಮುನ್ನ ಅವನಿಗೆ ಯಾವ ರೂಪವೂ ಇರುವುದಿಲ್ಲ. ಆದರೆ ತಾನೇ ಜಗವಾದಾಗ ಅವನಿಗೆ ಜಗತ್ತಿನ ರೂಪ ಬರುತ್ತದೆ. ಆದರೆ ಜಗತ್ತಿನ ರೂಪ ಅವನ ಶಾಶ್ವತ ರೂಪವಲ್ಲ. ಏಕೆಂದರೆ ಶಿವ ಜಗವಾದಂತೆ, ಜಗವಾಗದಿರಲೂ ಬಲ್ಲ. ಅಲ್ಲದೆ, ಅವನಿಗೆ ರೂಪವೂ ಇಲ್ಲ, ನಿರೂಪವೂ ಇಲ್ಲ ಎಂದು ಹೇಳಬಹುದು. ಜಗತ್ತಿನ ರೂಪ ಪಡೆದಾಗ ಶಿವನು ನಿರೂಪನಲ್ಲ, ಸೃಷ್ಟಿಪೂರ್ವಸ್ಥಿತಿಯಲ್ಲಿ ರೂಪನಲ್ಲ.

ಮತ್ತೊಂದರ್ಥದಲ್ಲಿ, ರೂಪು ನಿರೂಪು ಎಂಬುದನ್ನು ರೂಪವಿದ್ದುದನ್ನು ನಿರೂಪುಗೊಳಿಸುವುದು ಎಂದು ಅರ್ಥೈಸಬಹುದು. ಜಗತ್ತಿನ ಪ್ರತಿಯೊಂದು ವಸ್ತುವಿಗೂ ಒಂದು ನಿರ್ದಿಷ್ಟ ರೂಪ ಇದೆ. ಆದರೆ ತುರೀಯ ಸ್ಥಿತಿಯಲ್ಲಿರುವ ಅನುಭಾವಿಗೆ ಜಗತ್ತಿನ ವೈವಿಧ್ಯಮಯ ವಸ್ತುಗಳು ಕಾಣುತ್ತಿದ್ದರೂ, ಅವುಗಳಲ್ಲಿ ಅಂತಸ್ಥವಾಗಿರುವ ರೂಪವಿಲ್ಲದ ಪರಶಿವ ಗೋಚರಿಸುತ್ತಾನೆ. ಹೀಗೆ ರೂಪನ್ನು ನಿರೂಪಗೊಳಿಸುವುದೇ ವೀರಶೈವನ ಗುರಿ.

**ರೂಪಿನೊಳಗಣ ಬಯಲು :** ಅಂಗಕ್ಕೆ ದೇಹ, ಇಂದ್ರಿಯ, ಇತ್ಯಾದಿಗಳಿರುವುದರಿಂದ ಅದು ರೂಪಿನೊಳಗಣ ಲಿಂಗವೆನಿಸಿಕೊಳ್ಳುತ್ತದೆ. ಆದರೆ ಆ ಅಂಗವು ಬಯಲು ಎನಿಸಿಕೊಳ್ಳುವ ಪರಶಿವನ ಅಂಶವಾದುದರಿಂದ, ಅದು ಸದ್ಯಕ್ಕೆ ಸಣ್ಣ ಬಯಲು ಎನಿಸಿಕೊಳ್ಳುತ್ತದೆ. ಆದುದರಿಂದ ರೂಪಿನೊಳಗಣ ಬಯಲು ಎಂದರೆ ದೇಹೇಂದ್ರಿಯಾದಿಗಳ ಸಂಪುಟದಲ್ಲಿ ಅಡಗಿರುವ ಅಂಗ (ಆತ್ಮ) ಎಂದಾಗುತ್ತದೆ. (ಅ:೧೨೪೩)

**ರೂಪಿಲ್ಲದವಳು :** ಶಕ್ತಿಯನ್ನು ಸ್ತ್ರೀವಾಚಕವಾಗಿ ಬಳಸುವುದು ವಾಡಿಕೆ. ಪರಶಿವನಲ್ಲಿ ಶಕ್ತಿ ಒಂದಾಗಿರುವಾಗ (ಇನ್ನೂ ಶಕ್ತಿವಿಕಾಸವಾಗದೇ ಇರುವಾಗ) ಶಕ್ತಿಗೆ ಯಾವುದೇ ರೂಪವಿರುವುದಿಲ್ಲ. (೪:೨೨೭)

**ರೂಪುಮುಕ್ತಿ :** ನಾವು ಅನೇಕ ರೀತಿಯ ನೋಟಗಳನ್ನು (ರೂಪುಗಳನ್ನು) ನೋಡಬೇಕೆಂಬ ಆಸೆಯಿಂದ ಅನೇಕ ರೀತಿಯ ಕರ್ಮಗಳನ್ನು ಮಾಡಿ ಬಂಧನಕ್ಕೊಳಗಾಗುತ್ತೇವೆ. ಆದರೆ ಅಂತಶ್ಚಕ್ಷುವಿನಿಂದ (ಅನುಭಾವದಲ್ಲಿ) ಪರಶಿವನನ್ನು ನೋಡಿದರೆ ನಮಗೆ ರೂಪುಮುಕ್ತಿ ದೊರೆಯುತ್ತದೆ. ಅಂದರೆ ನೇತ್ರಗಳು ತಮ್ಮ ಪೂರ್ವಾಶ್ರಯಗಳನ್ನು ಕಳೆದುಕೊಂಡು ಮುಕ್ತವಾಗುತ್ತವೆ. (೯:೩೨೧)

**ರೂಪು ರುಚಿ ಚಿತ್ತ ಏಕವಾಗುವುದು :** ನೋಡುವ ರೂಪ, ಪದಾರ್ಥದ ರುಚಿ, ಅನುಭವಿಸುವ ಚಿತ್ತ, ಅರ್ಪಣೆಯ ಅಂತವಾದ ಲಿಂಗ ಇವೆಲ್ಲವೂ ಒಂದು ಎಂದು ತಿಳಿದು ಅರ್ಪಿಸಿದರೆ, ಆ ಅರ್ಪಣೆಗೊಂದು ಅರ್ಥ ಬರುತ್ತದೆ. (೯:೩೨೧)

**ರೂಪುವಿಕಾರಿ :** ವಿವಿಧ ರೂಪುಗಳನ್ನು ನೋಡಲಿಚ್ಛಿಸುವವರು. (೩:೬೧೩)

**ರೂಪು ವಿರಹಿತ ಶರಣ :** ಶರಣಸ್ಥಲದಲ್ಲಿರುವ ಸಾಧಕನು (ಶರಣನು), ತಾನು ಪರಶಿವನ ಸತಿಯೆಂದು ತಿಳಿದು, ತನ್ನದೆಲ್ಲವನ್ನೂ ಅವನಿಗೆ ಹೃತ್ಪೂರ್ವಕವಾಗಿ ಸಮರ್ಪಿಸಿಕೊಳ್ಳುತ್ತಾನೆ. ಆದರೆ ಪರಶಿವ ಮಾನವ ರೂಪದ, ಅಥವಾ ಮತ್ತಾವ ರೂಪದ, ಗಂಡನಲ್ಲ. ಪರಶಿವನು ಚಿತ್‌ಸ್ವರೂಪನೆಂಬುದನ್ನು ಅವನಾಗಲೇ ಅನುಭಾವದ ಮೂಲಕ ತಿಳಿದುಕೊಂಡಿದ್ದಾನೆ. ಅಂದರೆ ಶರಣನಿಗೆ ಪರಶಿವನು ಚಿದ್ರೂಪನೆ ಹೊರತು, ಇಂದ್ರಿಯ ಗೋಚರ ರೂಪನಲ್ಲ. ಅದೇ ರೀತಿ ತಾನು ಚಿದ್ರೂಪದ ಸತಿಯೇ ಹೊರತು ಇಂದ್ರಿಯ ಗೋಚರ ಸತಿಯಲ್ಲ.

**ರೂಪು ಸಹಿತ ಭಕ್ತ :** ಭಕ್ತಸ್ಥಲದಲ್ಲಿರುವ ಸಾಧಕನಿಗೆ ಇಷ್ಟಲಿಂಗವೇ ದೇವರು, ಅಂದರೆ ಅವನಿಗೆ ಪರಶಿವ ರೂಪ್ರಹಿತನೆಂಬುದೂ ಗೊತ್ತಿಲ್ಲ, ಗೊತ್ತಿದ್ದರೂ ರೂಪುರಹಿತ (ನಿರಾಕಾರ) ಪರಶಿವನನ್ನು ಕಲ್ಪಿಸಿಕೊಳ್ಳಲು ಅವನು ಅಶಕ್ತ. (೯:೫೭೮)

**ಲಕುಹಾ :** ಕುಹಾ ಅಥವಾ ಲಕುಹಾ ಹತ್ತು ನಾಡಿಗಳಲ್ಲಿ ಒಂದಾಗಿದ್ದು, ಅದು ಗುದನಾಳದ ಹತ್ತಿರವಿದೆ.

**ಲಾಂಛನ :** ೧. ಜಂಗಮ ೨. ಕಂಥೆ, ಕಟ್ಟಿಗೆ, ಜಡೆ, ಕರ್ಪರ, ಕಮಂಡಲು, ರುದ್ರಾಕ್ಷಿ, ವಿಭೂತಿ, ಮುಂತಾದ ಜಂಗಮರ ಬಾಹ್ಯ ಲಕ್ಷಣಗಳು.

**ಲಾಂಛನಧಾರಿ (ಲಾಂಛನಿ) :** ಜಂಗಮ ವೇಷ ಧರಿಸಿದವನು.

**ಲಿಂಗ :** 'ಲಿಂಗ' ಎಂಬ ಪದಕ್ಕೆ 'ಕಾರಣ', 'ಸ್ಥಾವರಲಿಂಗ', 'ಇಷ್ಟಲಿಂಗ', 'ಪರಶಿವ' ಮುಂತಾದ ಅರ್ಥಗಳಿವೆ. ಆದರೆ ವಚನ ಸಾಹಿತ್ಯಕ್ಕೆ ಸಂಬಧಿಸಿದಂತೆ ಕೊನೆಯ ಎರಡು ಅರ್ಥಗಳು ಪ್ರಸ್ತುತ.

ಪರಶಿವನೇ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಕ್ಕೆ ಕಾರಣವಾಗಿರುವುದರಿಂದ, ಅವನನ್ನು ಲಿಂಗ (ಕಾರಣ) ಎಂದು ಕರೆಯಲಾಗುತ್ತದೆ. ಆದರೆ ಲಿಂಗ ಎಂಬ ಜಡವಸ್ತುವು ಪರಶಿವನ ಗುರುತು ಅಥವಾ ಸಂಕೇತವಷ್ಟೇ ಹೊರತು, ಅದೇ ಪರಶಿವನಲ್ಲ. ಲಿಂಗಕ್ಕೆ ಒಂದು ಆಕಾರ ಮತ್ತು ಗಾತ್ರವಿರುವಂತೆ, ಪರಶಿವನಿಗೆ ಯಾವ ವಿಶಿಷ್ಟ ಆಕಾರವಾಗಲಿ ಯಾವ ವಿಶಿಷ್ಟ ಗಾತ್ರವಾಗಲಿ ಇಲ್ಲ.

ಲಿಂಗವು ಸ್ಥಾವರಲಿಂಗ ಮತ್ತು ಇಷ್ಟಲಿಂಗ ಎಂದು ಎರಡು ಪ್ರಕಾರವಾಗಿದೆ. ಸ್ಥಾವರಲಿಂಗವೆಂದರೆ ಒಂದೇ ಕಡೆ ಇರುವ ಪ್ರತಿಷ್ಠೆಯಾಗಿರುವ ಲಿಂಗ ಎಂದರ್ಥ. ದೇವಸ್ಥಾನದಲ್ಲಿ ಪ್ರತಿಷ್ಠೆಯಾಗಿರುವ ಲಿಂಗಗಳೆಲ್ಲ ಸ್ಥಾವರ ಲಿಂಗಗಳೇ.

ಬಹಳ ಹಿಂದಿನ ಕಾಲದಲ್ಲಿ ಜನರು ಪ್ರಯಾಣ ಮಾಡುವಾಗ ಸ್ಥಾವರ ಲಿಂಗದ ಆಕಾರದ, ಆದರೆ ಸಣ್ಣ ಗಾತ್ರದ, ಲಿಂಗವನ್ನು ತಮ್ಮ ಜೊತೆಯಲ್ಲಿ ಒಯ್ಯುತ್ತಿದ್ದರು. ತಾವು ಬೀಡು ಬಿಟ್ಟ ಕಡೆ ಅದನ್ನು ಸ್ಥಾವರಲಿಂಗದಂತೆ ಪೂಜಿಸುತ್ತಿದ್ದರು. ಪ್ರಾಯಶಃ ಅಂಥ ಸಣ್ಣ ಗಾತ್ರದ ಲಿಂಗವನ್ನು ಅಂಗದ ಮೇಲೆ ಧರಿಸುವ ಪದ್ಧತಿ ಆಮೇಲೆ ಪ್ರಾರಂಭವಾಗಿರಬಹುದು. ಇಷ್ಟಲಿಂಗಧಾರಣೆಯು ಆ ಪದ್ಧತಿಯ ಪಳೆಯುಳಿಕೆಯಿರಬಹುದು.

ವಚನಕಾರರು ಯಾವುದನ್ನು ಇಷ್ಟಲಿಂಗವೆಂದು ಕರೆಯುತ್ತಾರೋ, ಅದರೊಳಗೆ ಸಣ್ಣ ಗಾತ್ರದ ಲಿಂಗವಿದ್ದರೂ, ಸ್ಥಾವರಲಿಂಗ ಪರಿಕಲ್ಪನೆಗೂ ಇಷ್ಟಲಿಂಗ ಪರಿಕಲ್ಪನೆಗೂ ಎರಡು ಸ್ಪಷ್ಟ ವ್ಯತ್ಯಾಸಗಳಿವೆ. ಅ). ಸ್ಥಾವರಲಿಂಗ ಗುಡಿಯಲ್ಲಿ ಮಾತ್ರ ಪ್ರತಿಷ್ಠಿತವಾಗಿದ್ದು ಎಲ್ಲರಿಗೂ ಎಲ್ಲ ವೇಳೆಯಲ್ಲಿಯೂ ಅದರ ದರ್ಶನ ಮತ್ತು ಪೂಜೆ ಲಭ್ಯವಿಲ್ಲ. ಲಿಂಗಪೂಜೆ ಅಥವಾ ದರ್ಶನ ಮಾಡಬೇಕೆನ್ನುವವರು ಅದು ಪ್ರತಿಷ್ಠಿತವಾಗಿರುವ ಗುಡಿಗೆ ಹೋಗಬೇಕೇ ಹೊರತು, ಬೇರೆ ಕಡೆಗೆ ಹೋಗುವಂತಿಲ್ಲ. ಆದರೆ ಇಷ್ಟಲಿಂಗಧಾರಕನು ಅದನ್ನು ತನ್ನಿಷ್ಟ ಬಂದಲ್ಲಿಗೆ ಒಯ್ದು ಅಲ್ಲಿ ಅದನ್ನು ಪೂಜಿಸಬಹುದು. ಅದರ ಪೂಜೆಗೆ ಕಾಲ ಮಿತಿಯೂ ಇಲ್ಲ. ಆ). ಸಾಮಾನ್ಯವಾಗಿ ಸ್ಥಾವರಲಿಂಗವನ್ನು ಪೂಜೆ ಮಾಡಲು ಒಬ್ಬ ವ್ಯಕ್ತಿಯನ್ನು ನೇಮಿಸಲಾಗುತ್ತದೆ. ಅವನು ಶುಚಿರ್ಭೂತನಾಗಿ, ಒಂದು ನಿಯಮಿತ ವೇಳೆಯಲ್ಲಿ ದೇವಸ್ಥಾನಕ್ಕೆ ಬಂದು ಲಿಂಗವನ್ನು ಪೂಜೆ ಮಾಡುತ್ತಾನೆ. ಕೆಲವು ವಿಶಿಷ್ಟ ಜಾತಿಯ ಜನರಷ್ಟೇ ಪೂಜಿಸಬೇಕು, ಇತರ ಜಾತಿಯ ಜನರು ಪೂಜಿಸಬಾರದು; ಗರ್ಭಗುಡಿಯ ಒಳಗೆ ಸಹಾ ಅವರು ಬರಬಾರದು, ಎಂಬ ನಿಮಯವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ಉಳಿದವರು ಅವನ ಪೂಜೆಯನ್ನು ನೋಡಬಹುದೇ ಹೊರತು ತಾವೇ ಪೂಜೆ ಮಾಡುವಂತಿಲ್ಲ, ಅವನು ಕೊಟ್ಟ ತೀರ್ಥ ಪ್ರಸಾದ ಮಂಗಳಾರತಿಗಳನ್ನು ಇತರರು ಸ್ವೀಕರಿಸಬಹುದೇ ಹೊರತು, ತಾವೇ ಪೂಜೆಮಾಡುವಂತಿಲ್ಲ; ವಚನಕಾರರ ಪ್ರಕಾರ,

ಭಕ್ತ ತಾನೇ ಪೂಜಿಸಬಹುದು; ಅದಕ್ಕೆ ತಾನೇ ಅರ್ಪಿಸಬಹುದು. ಇದಕ್ಕೆ ಲಿಂಗಭೇದವಿಲ್ಲ, ಜಾತಿ ಭೇದವೂ ಇಲ್ಲ. ಇಷ್ಟಲಿಂಗ ಪೂಜೆ ಮಾಡಲು ಗಂಡಸರಿಗಿರುವಷ್ಟೇ ಅಧಿಕಾರ ಹೆಂಗಸರಿಗೂ ಇದೆ.

ಇಷ್ಟಲಿಂಗವನ್ನು ಪಡೆಯಲು ಒಂದು ಅರ್ಹತೆ ಬೇಕು. ಅದೆಂದರೆ, ಭವಿತನದ ಜೀವನದಲ್ಲಿ ಅತೃಪ್ತಿ ಮತ್ತು ಶಿವಸಾಯುಜ್ಯವನ್ನು ಪಡೆಯಬೇಕೆಂಬ ಮಹತ್ವಾಕಾಂಕ್ಷೆ ಇವೆರಡೂ ಗುಣಗಳಿರುವುದೇ ಆ ಅರ್ಹತೆ. ಹೀಗೆ ಇಷ್ಟಲಿಂಗ ಪಡೆಯಲು ಬರುವವರು ಲಿಂಗಾಯತರಾಗಿರಬೇಕೆಂಬ ನಿಯಮವಿಲ್ಲ. ಆದರೆ ಇಷ್ಟಲಿಂಗ ಪಡೆದ ಮೇಲೆ ಅವರು ಲಿಂಗಾಯತ ಧರ್ಮದ ಆಚಾರಗಳನ್ನು ತಪ್ಪದೆ ಪಾಲಿಸಬೇಕು.

ಇಷ್ಟಲಿಂಗವನ್ನು ಭಕ್ತನು ಎಲ್ಲಿಂದಲೋ ತರುವುದಾಗಲಿ ಯಾರಿಂದಲೋ ಪಡೆಯುವುದಾಗಲಿ ಕೂಡದು. ಅದನ್ನು ಶೈವ ಗುರುವಿನಿಂದಲೂ ಪಡೆಯಕೂಡದು. ಅದನ್ನು ವೀರಶೈವ ಗುರುವಿನಿಂದ ಮಾತ್ರ ಪಡೆಯಬೇಕು. ಗುರುವೆನ್ನಿಸಿಕೊಳ್ಳುವವನೂ ಸಹ ಲಿಂಗಾಂಗ ಸಾಮರಸ್ಯ ಪಡೆದ ವ್ಯಕ್ತಿಯೇ ಆಗಿರಬೇಕೇ ಹೊರತು, ಕೇವಲ ದೀಕ್ಷಾ ವಿಧಿಗಳನ್ನು ತಿಳಿದಿದ್ದರೆ ಸಾಲದು.

ಪ್ರತಿಯೊಬ್ಬ ಮನುಷ್ಯನಲ್ಲಿಯೂ ಚೈತನ್ಯವಿದ್ದು, ಅದು ಹಣೆ ಮತ್ತು ನೆತ್ತಿಯಲ್ಲಿ ಹೆಚ್ಚು ಪ್ರಮಾಣದಲ್ಲಿರುತ್ತದೆ ಎಂಬುದು ವಚನಕಾರ ಮತ್ತು ಶಾಕ್ತರ ನಂಬಿಕೆ. ಆಧಾರ ಚಕ್ರ ಮುಂತಾದ ಸ್ಥಾನಗಳಲ್ಲಿ ಲಿಂಗ (ಪರಶಿವ) ಇದ್ದರೂ, ಧ್ಯಾನದ ಮೂಲಕ ಆಜ್ಞಾಚಕ್ರದಲ್ಲಿರುವ ಭ್ರೂಮಧ್ಯದಲ್ಲಿರುವ ಮಹಾಲಿಂಗನನ್ನೂ, ಸಹಸ್ರಾರಚಕ್ರದಲ್ಲಿರುವ (ನೆತ್ತಿಯಲ್ಲಿರುವ) ಶೂನ್ಯಲಿಂಗವನ್ನೂ ಸಾಕ್ಷಾತ್ಕರಿಸಿಕೊಳ್ಳುವುದು ಜೀವನದ ಪರಮೋದ್ದೇಶ. ಗುರುವಾದವನು ಸಾಧಕನ ನೆತ್ತಿಯನ್ನು ಮುಟ್ಟಿ, ಅಲ್ಲಿರುವ ಚೈತನ್ಯವನ್ನು ತಂದು ಇಷ್ಟಲಿಂಗದಲ್ಲಿ ಪ್ರತಿಷ್ಠಾಪಿಸಿದಾಗ ಆ ಇಷ್ಟಲಿಂಗವು ಪೂಜೆಗೆ ಯೋಗ್ಯವಾಗುತ್ತದೆ. ಅಲ್ಲದೆ ಗುರುವು ಶಿಷ್ಯನಿಗೆ ಮಂತ್ರವನ್ನುಪದೇಶಿಸಿ, ಇಷ್ಟಲಿಂಗ ಪೂಜೆಯ ವಿಧಾನವನ್ನು ಕಲಿಸಿಕೊಡುತ್ತಾನೆ. ಇಲ್ಲಿಂದ ಮುಂದೆ, ಸಾಧಕನಿಗೆ ಇಷ್ಟಲಿಂಗವು ಒಂದು ಜಡವಸ್ತುವಲ್ಲ, ಚಿತ್‌ಸ್ವರೂಪನಾದ ಪರಶಿವನ ಸಂಕೇತ ಮತ್ತು ಆವಾಸಸ್ಥಾನ. ಅದು ಜೊತೆಯಲ್ಲಿದೆ ಎಂದರೆ, ಅವನ ಪ್ರಕಾರ, ಪರಶಿವ ಜೊತೆಯಲ್ಲಿದ್ದಾನೆ ಎಂದರ್ಥ. ಇದು ಅವನಿಗೆ ಧಾರ್ಮಿಕವಾಗಿ ಮತ್ತು ನೈತಿಕವಾಗಿ ಜಾಗರೂಕತೆಯಿಂದಿರಲು ಸಹಾಯಕವಾಗುತ್ತದೆಯಷ್ಟೇ ಅಲ್ಲ, ಪರಶಿವನೆಂದರೆ ದೂರ ಎಲ್ಲೋ ಇರುವ ದೈವವಲ್ಲ, ನಮ್ಮಲ್ಲೇ ಇರುವ ಮತ್ತು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾದಂಥವನು ಎಂಬ ಆತ್ಮವಿಶ್ವಾಸವನ್ನೂ ಅದು ಮೂಡಿಸುತ್ತದೆ.

ಇಷ್ಟಲಿಂಗವು ಕೇವಲ ಪೂಜಿಸಲ್ಪಡುವ ವಸ್ತುವಷ್ಟೇ ಅಲ್ಲ. ಸಾಧಕನ ವಿಚಾರಶಕ್ತಿ ವಿಕಾಸವಾದಂತೆಲ್ಲಾ ಅವನು ಇಷ್ಟಲಿಂಗವನ್ನು ಒಂದು ಧ್ಯಾನವಸ್ತುವನ್ನಾಗಿ

ಮಾಡಿಕೊಳ್ಳುತ್ತಾನೆ. ದೃಷ್ಟಲಿಂಗ (ಇಷ್ಟಲಿಂಗದಲ್ಲಿ) ಪರಶಿವನನ್ನು ಕಾಣುವುದೇ ನಿಜವಾದ ಇಷ್ಟಲಿಂಗ ಪೂಜೆ, ಎನ್ನುತ್ತಾರೆ ಶರಣರು. ಪೂಜಾವಿಧಿಗಳು ಮುಗಿದ ನಂತರ ಸಾಧಕನು ಇಷ್ಟಲಿಂಗವನ್ನೆ ದಿಟ್ಟಿಸಿ ನೋಡುತ್ತಾ ಧ್ಯಾನಮಗ್ನನಾಗಿ ಬಾಹ್ಯಪ್ರಪಂಚವನ್ನೂ ಮರೆತು, ತಾನು ಪರಶಿನಲ್ಲಿ ಒಂದಾಗುವುದನ್ನು ಅನುಭವಿಸಿ, ಕೊನೆಯಲ್ಲಿ ತನ್ನನ್ನೂ ಮರೆಯಬೇಕು ಎಂಬುದು ಈ ಮಾತಿನ ತಾತ್ಪರ್ಯ. ಈ ಸಿದ್ಧಿ ಸ್ಥಾವರಲಿಂಗ ಪೂಜೆಯಿಂದ ಸಾಧ್ಯವಾಗುವುದಿಲ್ಲ.

ಇಷ್ಟಲಿಂಗವನ್ನು ಅನೇಕರು ತಮ್ಮ ಪ್ರಾಣಕ್ಕೆ ಸಮಾನವೆಂದು ತಿಳಿಯುತ್ತಾರೆ, ಕೆಲವು ವಚನಕಾರರು, ಇಷ್ಟಲಿಂಗವನ್ನು ಒಂದು ಕ್ಷಣವೂ ಅಗಲಬಾರದು ಎಂದೂ, ಅದನ್ನು ಆಕಸ್ಮಿಕವಾಗಿ ಕಳೆದುಕೊಂಡರೆ ಪ್ರಾಣತ್ಯಾಗ ಮಾಡಬೇಕೆಂದೂ, ಹೇಳಿದರೆ, ಮತ್ತೆ ಕೆಲವು ವಚನಕಾರರು ಆಕಸ್ಮಿಕವಾಗಿ ಕಳೆದುಕೊಂಡ ಲಿಂಗದ ಬದಲು ವೀರಶೈವ ಗುರುವಿನಿಂದ ಮತ್ತೊಂದನ್ನು ಪಡೆಯಬಹುದೆಂದೂ ಹೇಳುತ್ತಾರೆ. ಆದರೆ ಎಲ್ಲ ವಚನಕಾರರು ಒಕ್ಕೊರಲಿನಿಂದ "ಇಷ್ಟಲಿಂಗ ಧರಿಸಿದ ಮೇಲೆ, ಅದಕ್ಕೆ ನಿಷ್ಠೆಯನ್ನೂ ಭಕ್ತಿಯನ್ನೂ ತೋರಿಸಬೇಕೇ ಹೊರತು, ಬೇರೆ ದೈವವನ್ನು ಪೂಜಿಸಬಾರದು" ಎಂದು ಹೇಳುತ್ತಾರೆ. ಪ್ರಾಯಶಃ ಇದರ ಮೂಲ ಅರ್ಥ, ಲಿಂಗಧಾರಕನಾದ ಮೇಲೆ ಮನಸ್ಸು ಇತರ ವಿಷಯಗಳ ಕಡೆ ಹರಿಯಬಾರದು ಎಂದಿರಬಹುದು. ಹೀಗೆ ಹೇಳಲು ಕಾರಣವೇನೆಂದರೆ, ಲಿಂಗಭಕ್ತಿ ಮತ್ತು ವಿಷಯಪ್ರೇಮ ಎರಡೂ ಒಟ್ಟಿಗೆ ಇರಲು ಸಾಧ್ಯವಿಲ್ಲವಾದುದರಿಂದ, ಲಿಂಗದೀಕ್ಷೆ ತೆಗೆದುಕೊಂಡವರು ಲಿಂಗಕ್ಕೆ ಬದ್ಧರಾಗಿರಬೇಕಾದುದು ಆವಶ್ಯಕ. ಅನ್ಯದೈವವನ್ನು ಪೂಜಿಸುವುದು ಲಿಂಗದಲ್ಲಿ ನಂಬಿಕೆಯಿಲ್ಲ ಎಂಬುದನ್ನು ಸೂಚಿಸುವುದರಿಂದಲೂ, ಅನ್ಯದೈವ ಪೂಜೆಯನ್ನು ವಚನಕಾರರು ಖಂಡಿಸಿರಬಹುದು.

ಪ್ರಾಯಶಃ ಇಷ್ಟಲಿಂಗವನ್ನು ಲಿಂಗಾಯತೇತರಿಗೆ ಕೊಡುವ ಸಂಪ್ರದಾಯವನ್ನು ಪ್ರಾರಂಭಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಈ ಮೂಲಕ ಧರ್ಮ ಕೇವಲ ಕೆಲವರ ಸ್ವತ್ತಲ್ಲ, ಅದು ಎಲ್ಲರ ಹಕ್ಕು ಎಂಬ ಮಾತನ್ನು ಬಸವಣ್ಣ ಸಾರಿದಂತಾಯಿತು. ಅದೂ ಅಲ್ಲದೆ ಇಷ್ಟಲಿಂಗಧಾರಕ (ಶಿವಭಕ್ತ)ರೆಲ್ಲಾ ಸಮಾನರೇ ಹೊರತು, ಅವರಲ್ಲಿ ಜಾತಿ ಭೇದವಿರಕೂಡದು ಎಂಬ ತತ್ವವನ್ನೂ ಅವರು ಸಾರಿದರು.

**ಲಿಂಗಕಾಯಶರಣ :** ಪ್ರಾಣಲಿಂಗಿಸ್ಥಲವನ್ನು ಮುಟ್ಟಿರುವ ಶರಣನು, ಲಿಂಗವನ್ನು ಕೇವಲ ಕರಸ್ಥಲ ಅಥವಾ ಉರಸ್ಥಲದಲ್ಲಷ್ಟೇ ಅಲ್ಲ, ಸರ್ವಾಂಗಗಳಲ್ಲಿಯೂ ಪ್ರತಿಷ್ಠಾಪಿಸಿರುತ್ತಾನೆ. ಹೀಗಿರುವುದರಿಂದ, ಯಾವುದೇ ರೂಪ, ರಸ, ಗಂಧ, ಇತ್ಯಾದಿ ಅವನ ಜ್ಞಾನೇಂದ್ರಿಯಗಳನ್ನು ತಗಲುವ ಮುನ್ನವೇ ಲಿಂಗಕ್ಕೆ ತಗಲುತ್ತದೆ. ತಾನು ನಡೆಯುವ ಮುನ್ನ ಲಿಂಗವೇ ನಡೆಯುತ್ತದೆ; ತಾನು ನುಡಿಯುವ ಮುನ್ನ ಲಿಂಗವೇ ನುಡಿಯುತ್ತದೆ; ತಾನು ತೃಪ್ತಿಪಟ್ಟುಕೊಳ್ಳುವ ಮುನ್ನಲಿಂಗಕ್ಕೆ ತೃಪ್ತಿಯಾಗುತ್ತದೆ. ಇಂತಹ

ಶರಣ ಲಿಂಗಕಾಯ ಶರಣ ಅಥವಾ ಕಾಯವನ್ನೆಲ್ಲಾ ಲಿಂಗವನ್ನಾಗಿ ಮಾಡಿಕೊಂಡಿರುವ ಶರಣ. (೩:೪೭೨)

**ಲಿಂಗಕ್ಕೆ ಆಧಾರವಾದ ಭಕ್ತ :** ಪರಶಿವನು ಸದ್ಭಕ್ತರಲ್ಲಿ ವ್ಯಕ್ತವಾದಾಗ, ಅಂತಹ ಸದ್ಭಕ್ತನು ಲಿಂಗಕ್ಕೆ ಆಧಾರವಾಗಿದ್ದಾನೆಂದರ್ಥ. (೩:೬೯)

**ಲಿಂಗಗಂಧ :** ನಿಜವಾದ ಪ್ರಸಾದಿಯು ತಾನು ಸೇವಿಸುವ ಆಹಾರ ವಸ್ತುಗಳನ್ನಷ್ಟೇ ಅಲ್ಲ, ಮೂಸುವ ಗಂಧವನ್ನು ಪರಶಿವನು ಕರುಣಿಸಿದ ವಸ್ತು (ಪರಶಿವನ ಪ್ರಸಾದ) ಅಥವಾ ಲಿಂಗಗಂಧ ಎಂದು ತಿಳಿಯುತ್ತಾನೆ. ಇದರಿಂದ ಗಂಧವು ತನಗೆ ಸೇರಿದುದಲ್ಲ ಎಂಬ ನಿಸ್ವಾರ್ಥ ಬುದ್ಧಿ ಬೆಳೆಯುತ್ತದೆ.

**ಲಿಂಗಘ್ರಾಣ :** ಸಾಧಕನು ಪ್ರಸಾದಿ ಸ್ಥಲದಲ್ಲಿದ್ದಾಗಲೇ ತನ್ನೆಲ್ಲ ಅವಯವಗಳು ಪರಶಿವನ ಪ್ರಸಾದವೆಂದು ತಿಳಿಯುತ್ತಾನೆ. ಅದರಂತೆ ತನ್ನ ಘ್ರಾಣೇಂದ್ರಿಯವು ಪರಶಿವನ ಘ್ರಾಣ (ಅಥವಾ ಪರಶಿವನು ಆಕ್ರಮಿಸಿಕೊಂಡಿರುವ ಘ್ರಾಣ) ಎಂದು ತಿಳಿಯುತ್ತಾನೆ. (೧೪:೨೯೪೨) ಹೀಗೆ ಘ್ರಾಣ ತನ್ನದಲ್ಲ ಎಂಬ ಭಾವವು ಘ್ರಾಣದ ವಿಷಯಗಳ ಬಗೆಗಿನ ಮೋಹವನ್ನು ಕಡಿಮೆ ಮಾಡುವುದಲ್ಲದೆ, ಲಿಂಗ ಘ್ರಾಣವೆಂದು ತಿಳಿಯುವದರಿಂದ ಸಾಧಕನು ನಿಸ್ವಾರ್ಥಭಾವದಿಂದ ಮೂಸಬೇಕಾಗುತ್ತದೆ.

**ಲಿಂಗಜಿಹ್ವೆ :** ಸಾಧಕನು ಪ್ರಸಾದಿ ಸ್ಥಲದಲ್ಲಿರುವಾಗಲೇ ತನ್ನೆಲ್ಲ ಇಂದ್ರಿಯಗಳು ಪರಶಿವನು ಕರುಣಿಸಿದಂಥ ಅವಯವಗಳೆಂದು (ಪರಶಿವನ ಪ್ರಸಾದವೆಂದು) ತಿಳಿಯುತ್ತಾನೆ. ಅದರಂತೆ ತನ್ನ ಜಿಹ್ವೆ (ನಾಲಗೆ) ಸಹ ಪರಶಿವನ (ಲಿಂಗದ) ಜಿಹ್ವೆ ಅಥವಾ ಪರಶಿವ ಆಕ್ರಮಿಸಿಕೊಂಡಿರುವ ಜಿಹ್ವೆ ಎಂದು ತಿಳಿಯುತ್ತಾನೆ. (೧೪:೨೯೪೨)

**ಲಿಂಗತತ್ವ :** ಪರಶಿವನ ಸೃಷ್ಟಿಯಲ್ಲಿ ಮೊದಲ ಹಂತ. ಆಗ ಲಿಂಗವು ಹನ್ನೊಂದು ತತ್ವಗಳನ್ನೊಳಗೊಂಡಿರುತ್ತದೆ. ಇವುಗಳಲ್ಲಿ ಐದು ಸಾದಾಖ್ಯಗಳು ಮತ್ತು ಐದು ಶಕ್ತಿಗಳು ಮತ್ತು ಪರಶಿವ. ಐದು ಸಾದಾಖ್ಯಗಳೆಂದರೆ ಸದಾಶಿವ, ಈಶ್ವರ, ರುದ್ರ, ವಿಷ್ಣು ಮತ್ತು ಬ್ರಹ್ಮ. ಕೆಲವು ಸಾರಿ ಈ ಐದು ಹೆಸರುಗಳ ಬದಲು ಶಿವಸಾದಾಖ್ಯ, ಅಮೂರ್ತಿ ಸಾದಾಖ್ಯ, ಮೂರ್ತಿ ಸಾದಾಖ್ಯ, ಕರ್ತು ಸಾದಾಖ್ಯ ಮತ್ತು ಕರ್ಮಸಾದಾಖ್ಯ ಎಂಬ ಹೆಸರುಗಳನ್ನೂ ಬಳಸಲಾಗುತ್ತದೆ; ಮತ್ತೆ ಕೆಲವು ವೇಳೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ್ಯ ಎಂಬ ಹೆಸರುಗಳನ್ನು ಬಳಸುವುದೂ ಉಂಟು. ಐದು ಶಕ್ತಿಗಳೆಂದರೆ : ಶಾಂತ್ಯತೀತ, ಶಾಂತಿ, ವಿದ್ಯಾ, ಪ್ರತಿಷ್ಠಾ ಮತ್ತು ನಿವೃತ್ತಿ (ಕೆಲವು ವೇಳೆ ಆದಿಶಕ್ತಿ, ಚಿಚ್ಛಕ್ತಿ, ಜ್ಞಾನಶಕ್ತಿ ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿ ಎಂಬ ಹೆಸರುಗಳನ್ನೂ ಬಳಸುವುದುಂಟು). ಸಾದಾಖ್ಯಗಳ ಮತ್ತು ಶಕ್ತಿಗಳ ಹೆಸರು ಬದಲಾದರೂ ಸಿದ್ಧಾಂತ ಒಂದೇ. ಅದೆಂದರೆ, ಪ್ರತಿಯೊಂದು ರೀತಿಯ ಶಕ್ತಿಯೂ ಒಬ್ಬ ಅಧಿದೇವತೆಯ ಅಧೀನದಲ್ಲಿರುತ್ತದೆ ಮತ್ತು ಈ ಹತ್ತೂ ತತ್ವಗಳು ಪರಶಿವನ ಅಧೀನದಲ್ಲಿರುತ್ತವೆ.

**ಲಿಂಗತನು :** ದೇಹೇಂದ್ರಿಯಾದಿಗಳನ್ನು ಶಿವನಿಗೆ ಅರ್ಪಿಸಿದ ಭಕ್ತನು ತನ್ನ ತನುವನ್ನು ತನ್ನದೆಂದು ತಿಳಿಯದೆ ಶಿವನದೆಂದು ತಿಳಿಯುವುದು.

**ಲಿಂಗತ್ರಯ :** ವಚನಕಾರರು ಈ ಪದಕ್ಕೆ ಎರಡು ಅರ್ಥಗಳಲ್ಲಿ ಬಳಸಿದ್ದಾರೆ. ಆಯತಲಿಂಗ, ಸ್ವಾಯತಲಿಂಗ, ಸನ್ನಹಿತಲಿಂಗ, ಎಂಬುದು ಒಂದು ಅರ್ಥ. ಆಯತಲಿಂಗವೆಂದರೆ 'ಬಂದಲಿಂಗ'. ಗುರುವಿನ ಹಸ್ತಮಸ್ತಕ ಸಂಯೋಗವೆಂಬ ಕ್ರಿಯೆಯ ಮೂಲಕ ಶಿಷ್ಯನಿಗೆ ಬಂದ ಇಷ್ಟಲಿಂಗವೇ ಆಯತಲಿಂಗ. ಇದು ಭೌತವಸ್ತುವಾದರೂ ಚಿನ್ಮಯನಾದ ಪರಶಿವನ ಕುರುಹು. ಚಿನ್ಮಯಲಿಂಗವು (ಪರಶಿವ) ತನ್ನಲ್ಲಿಯೇ ಇದೆ ಎಂದು ತಿಳಿದುಕೊಂಡರೆ ಹಾಗೂ ಆ ಲಿಂಗದಿಂದ ಹಸ್ತಮಸ್ತಕ ಸಂಯೋಗದಿಂದ ಹೊರತೆಗೆಯಲ್ಪಟ್ಟು ಇಷ್ಟಲಿಂಗದಲ್ಲಿಯೇ ಪ್ರತಿಷ್ಠಾಪಿಸಲ್ಪಟ್ಟಿದ್ದು ಎಂದು ಶಿಷ್ಯ ತಿಳಿದುಕೊಂಡರೆ ಅದು ಸ್ವಾಯತ ಲಿಂಗ. ಹಾಗೆ ತಿಳಿದುಕೊಂಡಲಿಂಗವನ್ನು ಎಲ್ಲಾ ಅಂಗಗಳಲ್ಲಿ ಪ್ರತಿಷ್ಠಾಪಿಸಿಕೊಂಡರೆ (ಅನುಭಾವದ ಮೂಲಕ ಸಾಕ್ಷಾತ್ಕರಿಸಿಕೊಂಡರೆ), ಹಾಗೆ ಅಂತಸ್ಥವಾಗಿರುವ ಲಿಂಗವು ಸನ್ನಹಿತ ಲಿಂಗವೆನಿಸಿಕೊಳ್ಳುತ್ತದೆ.

ಮತ್ತೆ ಕೆಲವು ವಚನಕಾರರು 'ಲಿಂಗತ್ರಯ' ಎಂಬ ಶಬ್ದಕ್ಕೆ ಸಗುಣಲಿಂಗ, ನಿರ್ಗುಣಲಿಂಗ, ನಿರ್ಭೇದಲಿಂಗ, ಎಂದು ಅರ್ಥೈಸುತ್ತಾರೆ. ಸಗುಣಲಿಂಗವೆಂದರೆ ಸೃಷ್ಟಿಸ್ಥಿತಿ, ಇತ್ಯಾದಿಗಳನ್ನು ಮಾಡುವ ಲಿಂಗ. ನಿರ್ಗುಣಲಿಂಗವೆಂದರೆ ಶಕ್ತಿಯಿಂದ ಪ್ರತ್ಯೇಕಿಸಲ್ಪಟ್ಟ ಚಿನ್ಮಯ ಲಿಂಗ. ಸಗುಣ ಮತ್ತು ನಿರ್ಗುಣಗಳ ವ್ಯತ್ಯಾಸವಿಲ್ಲದ ಶೂನ್ಯಲಿಂಗವೆ (ಶೂನ್ಯವೇ ಅಥವಾ ಮಹಾಶೂನ್ಯವೇ) ನಿರ್ಭೇದಲಿಂಗ. (೧೨:೧೯೬)

**ಲಿಂಗತ್ವಕ್ಕು :** ಸಾಧಕನು ಪ್ರಸಾದಿ ಸ್ಥಲದಲ್ಲಿರುವಾಗ ತನ್ನ ತ್ವಕ್ಕು (ಚರ್ಮ) ತನ್ನ ತ್ವಕ್ಕಲ್ಲ, ಅದು ಲಿಂಗವು ಕರುಣಿಸಿದ ತ್ವಕ್ಕು, ಲಿಂಗವು ಆಕ್ರಮಿಸಿಕೊಂಡಿರುವ ತ್ವಕ್ಕು, ಆದುದರಿಂದ, ಅದು ಲಿಂಗದ ತ್ವಕ್ಕು ಎಂದು ತಿಳಿಯುತ್ತಾನೆ. (೧೪:೨೯೪೨) ಇದರಿಂದ ಸ್ಪರ್ಶ ಮೋಹ ಕಡಿಮೆಯಾಗುವುದಲ್ಲದೆ, ಲಿಂಗದ ತ್ವಕ್ಕಿಕಾಗಿ ನಿಸ್ವಾರ್ಥ ಭಾವದಿಂದ ಸ್ಪರ್ಶಮಾಡಬೇಕಾಗುತ್ತದೆ

**ಲಿಂಗದಂಗ :** ಐಕ್ಯಸ್ಥಲವನ್ನು ಮುಟ್ಟಿದವನು ತನ್ನ ವೈಶಿಷ್ಟ್ಯವನ್ನು ಕಳೆದುಕೊಂಡಿರುತ್ತಾನೆ. ಅಲ್ಲದೆ, ತಾನು ಶಿವನ ವಾಹನ ಅಥವಾ ಶಿವನ ಅಂಗ ಎಂದು ತಿಳಿದುಕೊಂಡಿರುತ್ತಾನೆ. (೮:೨೬)

**ಲಿಂಗದ ನೆಲೆ :** ಪರಶಿವನ (ಲಿಂಗದ) ಮೂಲ ಸ್ವರೂಪ. (೭:೩೮೯)

**ಲಿಂಗದ ಪೂರ್ವಾಶ್ರಯವ ಕಳೆಯುವುದು :** ಲಿಂಗ ಎಂಬ ಜಡ ವಸ್ತುವನ್ನು ಒಬ್ಬ ಮನುಷ್ಯನು ಮಾಡುತ್ತಾನೆ. ಅದರ ಮೇಲಿನ ಕಂಥೆಯನ್ನು ಮತ್ತೊಬ್ಬ ಮಾಡುತ್ತಾನೆ. ಆದರೆ ಅಷ್ಟಕ್ಕೆ ಆ ವಸ್ತುವು ಪೂಜಾಯೋಗ್ಯವಾಗುವುದಿಲ್ಲ ಅಥವಾ ಇಷ್ಟಲಿಂಗವೆನಿಸಿಕೊಳ್ಳುವುದಿಲ್ಲ. ಅದರಲ್ಲಿ ಚಿತ್ತನ್ನು ಪ್ರತಿಷ್ಠಾಪಿಸಿ, ಅದರ ಮಹತ್ವವನ್ನು ತಿಳಿಸಿಕೊಡಲು ಗುರು ಬೇಕು.

ಹಸ್ತಮಸ್ತಕ ಸಂಯೋಗವನ್ನೊಳಗೊಳ್ಳುವ ದೀಕ್ಷೆ ನಡೆದಾಗಲೆ, ಅದರ ಪೂರ್ವಾಶ್ರಯ ಕಳೆದು ಇಷ್ಟಲಿಂಗ (ಪ್ರಾಣಲಿಂಗದ ಕುರುಹು) ಆಯಿತೆಂದರ್ಥ. (೩:೮)

**ಲಿಂಗದ ಬೆಳಗು :** ಲಿಂಗಧ್ಯಾನದ ಒಂದು ಹಂತದಲ್ಲಿ ಧ್ಯಾನಿಯ ಅಂತಃಚಕ್ಷುವಿಗೆ ಬೆಳಕು ಗೋಚರಿಸುತ್ತದೆ. (ನೋಡಿ : **ಪ್ರಕಾಶ**)

**ಲಿಂಗದಷ್ಟ ಅಂಗ :** ಹಾವಿನಿಂದ ಕಡಿಸಿಕೊಂಡವನ ಮೈಯೆಲ್ಲವೂ ಹೇಗೆ ವಿಷಮಯವಾಗುತ್ತದೆಯೋ ಹಾಗೆಯೇ ಲಿಂಗದಷ್ಟವಾದ ಅಂಗವೆಲ್ಲವೂ ಲಿಂಗಮಯವಾಗುತ್ತದೆ. ಇಲ್ಲಿ ಲಿಂಗದಷ್ಟ (ಲಿಂಗದಿಂದ ಕಡಿಸಿಕೊಳ್ಳುವುದು) ಎಂದರೆ, ಪ್ರಾಣಲಿಂಗಿಯಾಗುವುದು ಎಂದರ್ಥ. (೫:೪೭೬) (ನೋಡಿ : **ಪ್ರಾಣಲಿಂಗಿ**)

**ಲಿಂಗದಷ್ಟವಾದವರು :** ಸರ್ಪದಷ್ಟವಾದವರು ವಿಷವೇರಿ ಹೇಗೆ ಪ್ರಜ್ಞಾಶೂನ್ಯರಾಗಿರುವರೋ ಹಾಗೆಯೇ (ಅನುಭಾವದ ಮೂಲಕ) ಲಿಂಗದಷ್ಟವಾದವರು ಹೊರ ಪ್ರಪಂಚದ ಪ್ರಜ್ಞೆಯನ್ನೂ ಸ್ವಪ್ರಜ್ಞೆಯನ್ನೂ ಕಳೆದುಕೊಳ್ಳುತ್ತಾರೆ. (೯:೪೯೩)

**ಲಿಂಗದೇಹಿ :** ದೇಹದ ಮೇಲೆ ಲಿಂಗವನ್ನು ಧರಿಸಿದವನು. (೯:೧೩೫)

**ಲಿಂಗದೇಹಿಕ ಭಕ್ತ :** ಅನುಭಾವದ ಮೂಲಕ ತನ್ನ ದೇಹವೆಲ್ಲವನ್ನೂ ಪರಶಿವ ಆಕ್ರಮಿಸಿಕೊಂಡಿದ್ದಾನೆಂಬುದನ್ನು ಅರಿತುಕೊಂಡ ಭಕ್ತ.

**ಲಿಂಗದ್ರೋಹ :** ಗುರು ಕಾರುಣ್ಯದಿಂದ ಇಷ್ಟಲಿಂಗವನ್ನು ಪಡೆದನಂತರವೂ ತನ್ನ ಪೂರ್ವಶ್ರಮದ ಆಚಾರಗಳನ್ನೆ ಮತ್ತೆ ಆಚರಿಸಿದರೆ, ಆಗ ಅವನು ಲಿಂಗದ್ರೋಹ ಮಾಡಿದಂತಾಗುತ್ತದೆ.

**ಲಿಂಗಧಾರಣೆ :** ಗುರುವು ಹಸ್ತಮಸ್ತಕ ಸಂಯೋಗದ ಮೂಲಕ ಶಿಷ್ಯನಿಗೆ ಲಿಂಗದೀಕ್ಷೆ ಕೊಟ್ಟಾಗ ಮಾತ್ರ ಶಿಷ್ಯ ಲಿಂಗವನ್ನು ಧರಿಸಿಬಹುದು. ಆ ಗುರುವು ವೀರಶೈವ ಗುರುವಾಗಿರಬೇಕು, ಇತರ ಶೈವಗುರುವಾಗಿರಬಾರದು. ವೀರಶೈವ ಗುರುವಾದರೂ ಹಣಕ್ಕಾಗಿ ದೀಕ್ಷೆ ಕೊಡದೆ, ಮೋಕ್ಷಾರ್ಥಿಯಾಗಿ ಬಂದವರಿಗಷ್ಟೇ ದೀಕ್ಷೆ ಕೊಡಬೇಕು. ನಿಜವಾದ ಲಿಂಗಧಾರಣೆ ದೇಹದ ಮೇಲಲ್ಲ, ತನುತ್ರಯದಲ್ಲಿ.

**ಲಿಂಗಧಾರಣೆಯ ಸ್ಥಲಗಳು :** ಕರ, ಕಕ್ಷೆ, ಎದೆ, ಅಮಳೋಕ್ಯ, ಗಳ, ಶಿರ (ಉತ್ತಮಾಂಗ).

**ಲಿಂಗನೇತ್ರ :** ಸಾಧಕನು ಪ್ರಸಾದಿ ಸ್ಥಲದಲ್ಲಿರುವಾಗಲೇ ತನ್ನೆಲ್ಲ ಇಂದ್ರಿಯಗಳು ಪರಶಿವನು ಕರುಣಿಸಿದ (ಪರಶಿವನ) ಪ್ರಸಾದ ಎಂದು ತಿಳಿಯುತ್ತಾನೆ. ಅದರಂತೆ ತನ್ನ ನೇತ್ರವೂ ಸಹ ತನ್ನ ನೇತ್ರವಲ್ಲ, ಲಿಂಗದ ನೇತ್ರ, ಅಥವಾ ಲಿಂಗ ಆಕ್ರಮಿಸಿಕೊಂಡಿರುವ ನೇತ್ರ ಎಂದು ತಿಳಿಯುತ್ತಾನೆ. (೧೪:೭೯೪೨) ಇದರಿಂದ ತಾನು ನೋಡಬೇಕೆಂಬ ಸ್ವಾರ್ಥ ಕಡಿಮೆಯಾಗಿ, ಲಿಂಗಕ್ಕಾಗಿ ನೋಡುವ ಆಸೆ ಹೆಚ್ಚಾಗುತ್ತದೆ.

**ಲಿಂಗಪತಿ ಶರಣ ಸತಿಭಾವ :** ವಚನಕಾರರ ಪ್ರಕಾರ, ಸಾಧಕನು ತನ್ನ ದೇಹೇಂದ್ರಿಯಕರಣಾದಿಗಳನ್ನು ಪರಶಿವನಿಗೆ ಅರ್ಪಿಸಿ, ತನ್ನತನವನ್ನೂ ನಾಶಪಡಿಸಿ, ಲಿಂಗದಲ್ಲಿ ಐಕ್ಯವಾಗುವುದೇ ಪರಮಧ್ಯೇಯವಾಗಿದೆ. ಅವನು ಮೊದಲು ಆಹಾರವಸ್ತುಗಳನ್ನು ಅರ್ಪಿಸುತ್ತಾನೆ, ಜ್ಞಾನೋದಯವಾದನಂತರ ತಾನು ಇಂದ್ರಿಯಗಳ ಮೂಲಕ ಅನುಭವಿಸುವ ರೂಪರಸಗಂಧಾದಿಗಳನ್ನೂ ಅರ್ಪಿಸುತ್ತಾನೆ. ಅನಂತರ ತನ್ನ ದೇಹೇಂದ್ರಿಯ ಅಂತಃಕರಣಗಳನ್ನೂ ಕೊನೆಯಲ್ಲಿ ಆತ್ಮವನ್ನೆ ಪರಶಿವನಿಗೆ ಅರ್ಪಿಸುತ್ತಾನೆ. ಹೀಗೆ ತನ್ನ ಎಲ್ಲವನ್ನೂ ಪರಶಿವನಿಗೆ ಅರ್ಪಿಸಿರುವ ಶರಣನು (ಶರಣಸ್ಥಲದಲ್ಲಿರುವ ಸಾಧಕನು) ತಾನು ಮಾಡುವುದೆಲ್ಲವೂ ಲಿಂಗಕ್ಕಾಗಿಯೇ ಎಂದು ತಿಳಿಯುತ್ತಾನೆ, ಹಾಗೂ ದೇಹೇಂದ್ರಿಯ ಮನಪ್ರಾಣಾದಿಗಳನ್ನು ಲಿಂಗದ ಸತಿ ಎಂದು ತಿಳಿಯುತ್ತಾನೆ. ಸತಿಯು ತನ್ನ ಪತಿಯ ಸುಖಕ್ಕಾಗಿ ಹೇಗೆ ತನ್ನೆಲ್ಲವನ್ನೂ ಸಮರ್ಪಿಸಿಕೊಳ್ಳುತ್ತಾಳೆಯೋ ಹಾಗೆಯೇ ಭಕ್ತನು ತನ್ನೆಲ್ಲವನ್ನೂ ಲಿಂಗಕ್ಕಾಗಿ ಅರ್ಪಿಸಿಕೊಳ್ಳುತ್ತಾನೆ. ಆದುದರಿಂದ ಅವನು ಲಿಂಗದ ಸತಿ. ಲಿಂಗವು ಅವನ ಪತಿ.

**ಲಿಂಗಪ್ರಾಣಿ :** ಲಿಂಗವನ್ನೇ ಮೈಗೂಡಿಸಿಕೊಂಡವನು.

**ಲಿಂಗಬಾಹ್ಯ :** ೧. ಲಿಂಗವನ್ನು ಅಂಗದಿಂದ ಹೊರಗಿಟ್ಟುಕೊಳ್ಳುವವನು; ೨. ಲಿಂಗವನ್ನು ದೇಹದ ಮೇಲೆ ಧರಿಸಿ, ಅಂತರಂಗದಲ್ಲಿ ಸ್ಥಾಪಿಸಿಕೊಳ್ಳದೆ ಇರುವವನು. (೭:೧೧೦೧)

**ಲಿಂಗಭರಿತ ಶರಣ :** ಲಿಂಗವು ಶರಣನನ್ನು ಸೇರಿದಂತೆ ಎಲ್ಲ ವಸ್ತುಗಳಲ್ಲಿಯೂ ಇದ್ದರೂ, ಅದನ್ನು ಸಾಕ್ಷಾತ್ಕರಿಸಿಕೊಂಡ ಶರಣನಷ್ಟೇ ಲಿಂಗಭರಿತ ಶರಣನಾಗುತ್ತಾನೆ. ನಿರ್ಜೀವ ವಸ್ತುಗಳಲ್ಲಿಯೂ ಪರಶಿವನಿದ್ದರೂ, ಅವು ಅವನನ್ನು ಸಾಕ್ಷಾತ್ಕರಿಸಿಕೊಳ್ಳುವುದಿಲ್ಲವಾದುದರಿಂದ ಅವು ಶಿವಯೋಗಿಯಾಗಲು ಸಾಧ್ಯವಿಲ್ಲ. ಅದೇ ರೀತಿ ಸಾಕ್ಷಾತ್ಕಾರವಿಲ್ಲದ ಶರಣ ಲಿಂಗಭರಿತ ಶರಣನಲ್ಲ ಅಥವಾ ಶಿವಯೋಗಿಯಲ್ಲ. (೩:೪೬೬)

**ಲಿಂಗಭಾಜನ :** ಲಿಂಗದಾಶ್ರಯ. ಪ್ರಸಾದಿಯು ತನ್ನೆಲ್ಲವನ್ನೂ ತನ್ನಿಂದ ಹೊರಗಿರುವ ಪರಶಿವನಿಗೆ ಅರ್ಪಿಸಿದರೆ, ಪ್ರಾಣಲಿಂಗಿಯು ಪರಶಿವನನ್ನು ತನ್ನ ಎಲ್ಲ ಇಂದ್ರಿಯಗಳ ಬಾಗಿಲಿನಲ್ಲಿಯೂ ಎಲ್ಲ ಭಾಗಗಳಲ್ಲಿಯೂ ಪ್ರತಿಷ್ಠಾಪಿಸುತ್ತಾನೆ. ಪ್ರಸಾದಿಯು ಪದಾರ್ಥಗಳನ್ನು ಅರ್ಪಿಸಲು ಪ್ರಯತ್ನ ಮಾಡಬೇಕು. ಆದರೆ ಅನುಭಾವದ ಮೂಲಕ ಎಲ್ಲೆಲ್ಲೂ ಪರಶಿವನನ್ನು ಕಾಣುವ ಪ್ರಾಣಲಿಂಗಿಯು ತನ್ನ ದೇಹೇಂದ್ರಿಯಾದಿಗಳೆಲ್ಲವನ್ನೂ ಪರಶಿವನ ಸ್ಥಾನವನ್ನಾಗಿ (ಭಾಜನವನ್ನಾಗಿ) ಮಾಡುತ್ತಾನೆ. (೩:೬೧೦)

**ಲಿಂಗಭೋಗೋಪಭೋಗಿ :** ತನ್ನ ಅಂಗದ ಪ್ರತಿಯೊಂದು ಭಾಗದಲ್ಲಿಯೂ ಲಿಂಗವನ್ನು ಪ್ರತಿಷ್ಠಾಪಿಸಿ, ತನ್ನದೆಲ್ಲವನ್ನೂ ಅದಕ್ಕರ್ಪಿಸಿ, ತಾನು ಯೋಚಿಸುವುದು, ಮಾಡುವುದು, ಸುಖಿಸುವುದು ಎಲ್ಲ ಲಿಂಗಕ್ಕಾಗಿ ಎಂದು ತಿಳಿದು, ಕೊನೆಗೆ 'ಲಿಂಗವು ನನ್ನ ದೇಹದ ಮೂಲಕವೇ ಸುಖಿಸುತ್ತದೆ' ಎಂದು ತಿಳಿದುಕೊಳ್ಳುವವನು ಲಿಂಗಭೋಗೋಪಭೋಗಿ.

**ಲಿಂಗಭೋಗೋಪಭೋಗಿಯ ಸಂಗಸುಖ :** ತನ್ನ ದೇಹೇಂದ್ರಿಯಾದಿಗಳನ್ನು ಲಿಂಗಕ್ಕರ್ಪಿಸಿ, ಆ ದೇಹೇಂದ್ರಿಯಾದಿಗಳ ಮೂಲಕವೇ ಪರಶಿವನು ಸುಖಿಸುತ್ತಾನೆಂದೂ, ತಾನು ಅನಂತರ ಸುಖಿಸುತ್ತೇನೆಂದೂ ನಂಬುವವನು ಪಡುವ ಸುಖ. (೫:೯೨೪)

**ಲಿಂಗಭ್ರಾಂತ :** ಇಲ್ಲಿ ಭ್ರಾಂತ ಎಂಬ ಪದವನ್ನು ಸಾಧಾರಣ ಅರ್ಥದಲ್ಲಿ, ಅಂದರೆ ಹುಚ್ಚು, ಗೀಳು ಉಳ್ಳವನು ಎಂಬರ್ಥದಲ್ಲಿ ಬಳಸಲಾಗಿದೆ. ಹೀಗೆ ಲಿಂಗಭ್ರಾಂತನೆಂದರೆ ಯಾವಾಗಲೂ ಪರಶಿವನನ್ನೆ ಚಿಂತಿಸುತ್ತಿರುವವನು ಎಂದಾಗುತ್ತದೆ. (೧:೧೦೧೧)

**ಲಿಂಗಮುಖ :** ಲಿಂಗದ ಬಾಯಿ. ನಮ್ಮ ಮನಸ್ಸು ನಮ್ಮ ಬಾಯಿಯ ಮೂಲಕ ಹೇಗೆ ಸವಿಯುತ್ತದೆಯೋ, ಹಾಗೆಯೇ ಕಣ್ಣು, ಕಿವಿಗಳೆಂಬ ಬಾಯಿಗಳ ಮೂಲಕವೂ ಸವಿಯುತ್ತದೆ. ನಮ್ಮ ಮನಸ್ಸನ್ನು ಪರಶಿವನೇ ಆಕ್ರಮಿಸಿಕೊಂಡಾಗ, ನಮ್ಮ ದೇಹೇಂದ್ರಿಯಾದಿಗಳೆಲ್ಲ ಲಿಂಗದ ಮುಖ (ಬಾಯಿ)ಗಳಾಗುತ್ತವೆ.

ಮತ್ತೊಂದರ್ಥದಲ್ಲಿ ಲಿಂಗದ ಬಾಯಿಗಳಿಂದಲೇ ಭೂತತತ್ತ್ವ, ಇತ್ಯಾದಿಗಳು ಹೊರಬರುತ್ತವೆ. (ನೋಡಿ : **ಸಾದಾಖ್ಯ**).

**ಲಿಂಗಮುಖ ಜಂಗಮ :** ಲಿಂಗವೇ ಜಂಗಮ, ಜಂಗಮವೇ ಲಿಂಗ ಎಂದರಿತವನು, ಕಣ್ಣಿಗೆ ಕಾಣದ ಲಿಂಗಕ್ಕೆ ಅರ್ಪಿಸುವುದರ ಬದಲು, ಕಣ್ಣಿಗೆ ಕಾಣುವ ಮತ್ತು ನಡೆದಾಡುವ ಲಿಂಗಕ್ಕೆ - ಅಂದರೆ ಜಂಗಮಕ್ಕೆ - ಅರ್ಪಿಸುತ್ತಾನೆ. ಆದರೆ, ಬೇರಿಗೆ ಎರೆದ ನೀರು ಹೇಗೆ ಮರದ ತುದಿಯಲ್ಲಿರುವ ಎಲೆ, ಹೂವು ಮತ್ತು ಫಲಗಳಿಗೆ ತಲುಪುತ್ತದೆಯೋ ಹಾಗೆಯೇ ಜಂಗಮಕ್ಕೆ ಅರ್ಪಿಸುವುದೆಲ್ಲವೂ ಲಿಂಗಕ್ಕೇ ತಲುಪುತ್ತದೆ. ಹೀಗೆ ಅರ್ಪಿತವು ಜಂಗಮದ ಮೂಲಕ ಲಿಂಗಕ್ಕೆ ತಲುಪುವುದರಿಂದ, ಜಂಗಮವು ಲಿಂಗದ ಬಾಯಿ (ಮುಖ) ಎನಿಸಿಕೊಳ್ಳುತ್ತದೆ. (೯:೩೪೧)

**ಲಿಂಗಮುಖ ದರ್ಶನ :** ಲಿಂಗಮುಖ ದರ್ಶನವೆಂದರೆ, ಕರಸ್ಥಲದಲ್ಲಿರುವ ಅಥವಾ ಗುಡಿಯಲ್ಲಿರುವ ಲಿಂಗದ ಮುಖದರ್ಶನ ಅಲ್ಲ, ಅನುಭಾವದಲ್ಲಿ ಆಗುವ ಲಿಂಗಸಾಕ್ಷಾತ್ಕಾರ. (೯:೪೧೪)

**ಲಿಂಗಮುಖದಲುದಯವಾದ ಶರಣ :** ಅತ್ಯಂತ ಪರಿಶುದ್ಧನಾದ ಭಕ್ತನೇ ಮೂಲರೂಪದ ಮನುಷ್ಯ. ಲಿಂಗದಿಂದಲೇ ಎಲ್ಲವೂ ಉತ್ಪತ್ತಿಯಾದಂತೆ ಈ ಶುದ್ಧ ಭಕ್ತನೂ ಸೃಷ್ಟಿಯಾಗುತ್ತಾನೆ. ಆದರೆ ಮನುಷ್ಯ ಭವಾಂತರದಲ್ಲಿ ಅಶುದ್ಧನಾಗುತ್ತಾನೆ. ಎಲ್ಲವನ್ನೂ ಶಿವನಿಗೆ ಅರ್ಪಿಸಿದವನು, ಅಂದರೆ ಶರಣ ಸ್ಥಲವನ್ನೂ ತಲುಪಿದವನು, ಮತ್ತೆ ಲಿಂಗಮುಖದಲುದಯವಾದ ಶರಣನಾಗುತ್ತಾನೆ.

**ಲಿಂಗರುಚಿ :** ನಿಜವಾದ ಪ್ರಸಾದಿಯು ತಾನು ಸೇವಿಸುವ ರುಚಿಯನ್ನು ಪರಶಿವನ ಪ್ರಸಾದ (ಲಿಂಗರುಚಿ) ಎಂದು ತಿಳಿಯುತ್ತಾನೆ. ಅವನು ತನ್ನ ರುಚಿ ಎಲ್ಲದೂ ಲಿಂಗರುಚಿ ಎಂದು

ತಿಳಿದಾಗ ತನ್ನ ಸ್ವಾರ್ಥ ಕಡಿಮೆಯಾಗಿ ಲಿಂಗಭಕ್ತಿ ಹೆಚ್ಚಾಗುತ್ತದೆ ಹಾಗೂ ರುಚಿಯಲ್ಲಿ ಒಳಿತು ಕೆಡುಕುಗಳನ್ನು ಹುಡುಕುವದನ್ನು ಬಿಟ್ಟು ಎಲ್ಲ ರುಚಿಯನ್ನೂ ಸಮಭಾವದಿಂದ ತಾಣುತ್ತಾನೆ. (೧೪:೨೯೪೨)

**ಲಿಂಗರೂಪ :** ನಿಜವಾದ ಪ್ರಸಾದಿಯು ತಾನು ನೋಡುವ ರೂಪು ಲಿಂಗದ ಪ್ರಸಾದ (ಲಿಂಗರೂಪ) ಎಂದು ತಿಳಿಯುತ್ತಾನೆ. ಇದರಿಂದ ರೂಪ ತಾನು ಅನುಭವಿಸುವ ವಸ್ತುವಲ್ಲ, ಪರಶಿವ ಅನುಭವಿಸುವ ವಿಷಯ ಎಂದು ತಿಳಿದ ಸಾಧಕನಲ್ಲಿ ಸ್ವಾರ್ಥ ಕಡಿಮೆಯಾಗುತ್ತದೆ. ಅಲ್ಲದೆ ತಾನು ನೋಡಿದ ರೂಪನ್ನು ಲಿಂಗರೂಪೆಂದು ತಿಳಿದು ಅದರಲ್ಲಿ ಕುರೂಪ ಸುರೂಪಗಳ ವ್ಯತ್ಯಾಸ ಮಾಡುವುದಿಲ್ಲ.

**ಲಿಂಗವಡಗುವುದು :** ಈ ಪಾರಿಭಾಷಿಕ ಪದವನ್ನು ಎರಡು ರೀತಿಯಲ್ಲಿ ಅರ್ಥೈಸಬಹುದು. ೧. ಇಷ್ಟಲಿಂಗವನ್ನು ನೋಡುತ್ತಾ ಧ್ಯಾನದಲ್ಲಿ ಮಗ್ನವಾಗಿ, ಕೊನೆಗೆ ತನ್ನನ್ನೂ ಮರೆತರೆ ಆಗ ಲಿಂಗವಡಗುತ್ತದೆ. ೨. ಅನುಭಾವದಲ್ಲಿ ಅನುಭಾವಿಯು ತನ್ನನ್ನು ಮರೆಯುವುದೂ ಅಲ್ಲದೆ ಲಿಂಗವನ್ನೂ ಮರೆಯುವುದರಿಂದ ಆಗಲೂ ಲಿಂಗವಡಗುತ್ತದೆ. ಆದರೆ ಯಾವ ಅರ್ಥದಲ್ಲಿ ತೆಗೆದುಕೊಂಡರೂ ತಾನು ಇದಿರು (ಜ್ಞಾತೃ ಜ್ಞೇಯ)ಗಳೆಂಬ ಉಭಯವಿಲ್ಲದಿರುವುದು ದಿಟ. (೫:೯೧೪)

**ಲಿಂಗವನರಿದವಂಗೆ ಲಿಂಗವಿಲ್ಲ :** ಲಿಂಗ ಎಂಬ ಪದಕ್ಕೆ ಎರಡು ಅರ್ಥಗಳಿವೆ. ಕಣ್ಣಿಗೆ ಕಾಣುವ ಇಷ್ಟಲಿಂಗ, ಇಂದ್ರಿಯಗಳಿಗೂ ಮನಸ್ಸಿಗೂ ಅತೀತವಾದ ಪರಶಿವ (ಲಿಂಗ). ಮೊದಲನೆಯದು ಎರಡನೆಯದರ ಕುರುಹು. ಸಾಧಕನು ಅದರ ಮೂಲಕ ಎರಡನೆಯದನ್ನು ಅರಿಯಬೇಕು. ಪರಶಿವನನ್ನು ಅರಿತವನಿಗೆ ಇಷ್ಟಲಿಂಗದ ಆವಶ್ಯಕತೆ ಇರುವುದಿಲ್ಲ (೮:೧೭೨೯) .

**ಲಿಂಗವಶ :** ಲಿಂಗಕ್ಕೆ ಶರಣಾಗುವುದು ಹಾಗೂ ತನ್ನ ವೈಯುಕ್ತಿಕತೆಯನ್ನು ಕಳೆದುಕೊಳ್ಳುವುದು (ಲಿಂಗವಶದಿಂದ ಬಂದ ನಡೆಗಳು... ಲಿಂಗವಿರಿಸಿದಂತಿಪ್ಪುದಲ್ಲದೆ... ಭಕ್ತರಭಿಮಾನ ತನ್ನವೆಂಬುದಾಗಿ - ೧:೬೮೫)

**ಲಿಂಗವ ಸರ್ವಾಂಗದಲ್ಲಿ ಪೂರ್ಣವ ಮಾಡುವುದು :** ಇಲ್ಲಿ ಪೂರ್ಣ ಎಂಬ ಪದಕ್ಕೆ ತುಂಬುವುದು ಅಥವಾ ಪ್ರವೇಶ ಮಾಡುವುದು ಅಥವಾ ಪ್ರತಿಷ್ಠಾಪಿಸುವುದು ಎಂಬ ಅರ್ಥ ಕೊಡುವುದು ಸೂಕ್ತ. ಆಗ 'ಲಿಂಗವ ಸರ್ವಾಂಗದಲ್ಲಿ ಪೂರ್ಣವ ಮಾಡುವುದು' (೩:೯೫೦) ಎಂಬ ಪದಕ್ಕೆ ಲಿಂಗವನ್ನು ಪ್ರತಿಯೊಂದು ಭಾಗದಲ್ಲಿಯೂ ತುಂಬುವುದು ಅಥವಾ ಪ್ರತಿಷ್ಠಾಪಿಸುವುದು ಎಂಬ ಅರ್ಥವುಂಟಾಗುತ್ತದೆ.

**ಲಿಂಗವಾದರೆ ಬಾಯಿಲ್ಲದಿರುವುದು :** ಸಾಧಕನು ಲಿಂಗಕ್ಕರ್ಪಿಸಿ ಅನಂತರ ತಾನು ಸೇವಿಸುತ್ತಾನೆ. ಆದರೆ ತಾನೇ ಲಿಂಗದ ಬಾಯಿಯಾದರೆ (ನೋಡಿ : **ಲಿಂಗಮುಖ**) ಬಾಯಿಗೆ ಸಂಬಂಧಿಸಿದ ಬಯಕೆಗಳು ಇಲ್ಲವಾಗುತ್ತವೆ. (೮:೧೭೩೨)

**ಲಿಂಗವಾರ್ತೆ :** ಪರಶಿವನ ಬಗೆಗಿನ ಮಾತು. ಸತ್ಸಂಗ ಮಾಡುವುದರಿಂದಲೂ, ಶಿವಕಥೆ, ಶಿವಪುರಾಣಗಳನ್ನು ಕೇಳುವುದರಿಂದಲೂ, ಗುರುಬೋಧನೆಯಿಂದಲೂ, ಮನಸ್ಸು ಯಾವಾಗಲೂ ಲಿಂಗವನ್ನು ನೆನೆಯಲು (ಲಿಂಗವಾರ್ತೆಯು) ಸಾಧ್ಯವಾಗುತ್ತದೆ. (೨:೩೫೬)

**ಲಿಂಗವಿಕಾರಿ :** ಲಿಂಗವಾಗಿ ಪರಿವರ್ತಿತನಾದವನು. ಸಾಮರಸ್ಯ ಪಡೆದವನಿಗೆ ತಾನು ಪರಶಿವನ ವಶವೆಂದು ತಿಳಿದಾಗ, ಅವನಿಗೆ ಅಹಂ ನಷ್ಟವಾಗುವುದಲ್ಲದೆ, ಲಿಂಗದ ಗುಣಗಳು ಪ್ರಾಪ್ತವಾಗುತ್ತವೆ. ಅಂಥವನಿಗೆ ಅಂಗವಿಕಾರವಿಲ್ಲ. (೧:೭೯೬)

**ಲಿಂಗವಿರಹಿತ :** ಲಿಂಗವನ್ನು ಬಿಟ್ಟವನು. ('ಪಂಚೇಂದ್ರಿಯ ಸುಖವನು ಲಿಂಗವಿರಹಿತನಾಗಿ ಭುಂಜಿಸಲಾಗದು'. ೧:೭೯೭)

**ಲಿಂಗವಿಲ್ಲದ ನೋಟ :** ಇಷ್ಟಲಿಂಗವನ್ನು ಪಡೆದ ಭಕ್ತನು ಅದನ್ನು ಕೆಲವು ಕ್ಷಣ ಪೂಜೆ ಮಾಡಿದರೆ ಸಾಲದು. ಶರಣರ ಪ್ರಕಾರ ಅದನ್ನು ದಿಟ್ಟಿಸಿ ನೋಡಿ, ಆ ದೃಷ್ಟಿಯೋಗದ ಮೂಲಕ ಆನಂದ ಪರವಶನಾಗಬೇಕು. ಆದರೆ ಪ್ರಾಣಲಿಂಗಿಸ್ಥಲದಲ್ಲಿರುವ ಸಾಧಕನು ಇಷ್ಟಲಿಂಗವಿಲ್ಲದೆಯೂ ಧ್ಯಾನಸ್ಥಿತಿಯಲ್ಲಿ ತನ್ನ ಒಳಗಣ್ಣಿನಿಂದ ಲಿಂಗವನ್ನು ನೋಡುತ್ತಾನೆ. ಈ ಲಿಂಗವಿಲ್ಲದ ನೋಟವನ್ನು ಯೋಗ, ಸಮಾಧಿ, ಅನುಭಾವ ಮುಂತಾಗಿಯೂ ಕರೆಯಬಹುದು. (೩:೧೨೨೪)

**ಲಿಂಗವಿಷಯ ಭ್ರಾಂತ :** ರೂಪರಸಾದಿ ವಿಷಯಗಳು ಅಂಗಕ್ಕೆ ಸಂಬಂಧಿಸಿ ಹೇಗೆ ಇಂದ್ರಿಯ ವಿಷಯಗಳೆನಿಸಿಕೊಳ್ಳುತ್ತವೆಯೋ, ಹಾಗೆಯೇ ಅವೇ ವಿಷಯಗಳು ಲಿಂಗಕ್ಕಾಗಿ ಎಂದು ಪ್ರಾಣಲಿಂಗಿಯು ತಿಳಿದರೆ, ಆಗ ಅವು ಲಿಂಗವಿಷಯಗಳಾಗುತ್ತವೆ. ಸಾಧಾರಣ ಜನರು ಎಲ್ಲದನ್ನೂ ತಮ್ಮ ವಿಷಯಗಳನ್ನಾಗಿ ಮಾಡಿಕೊಂಡು ಹೇಗೆ ಭ್ರಮಿತರೆನಿಸಿಕೊಳ್ಳುತ್ತಾರೋ, ಹಾಗೆ ಪ್ರಾಣಲಿಂಗಿಗಳು ಎಲ್ಲವನ್ನೂ ಶಿವನಿಗಾಗಿ ಅರ್ಪಿಸಿ, ಸಾಧಾರಣ ಜನರಿಂದ ಭ್ರಮಿತರೆನಿಸಿಕೊಳ್ಳುತ್ತಾರೆ. (೧೦:೫೦೨)

**ಲಿಂಗಶಬ್ದ :** ನಿಜವಾದ ಪ್ರಸಾದಿಯು ತಾನು ಸೇವಿಸುವ ಆಹಾರ ವಸ್ತುಗಳನ್ನಷ್ಟೇ ಅಲ್ಲ, ಕೇಳುವ ಶಬ್ದವನ್ನೂ ಪರಶಿವನ (ಲಿಂಗದ) ಪ್ರಸಾದ ಎಂದು ತಿಳಿಯುತ್ತಾನೆ. ಶಬ್ದವು ಪ್ರಸಾದವೆಂದು ತಿಳಿದಾಗ ಅದರಲ್ಲಿ ಒಳಿತು ಕೆಡಕುಗಳನ್ನರಸಲು ಹೋಗುವುದಿಲ್ಲ. (೧೪:೨೯೪೨)

**ಲಿಂಗಶ್ರೋತ್ರ :** ಸಾಧಕನು ಪ್ರಸಾದಿಸ್ಥಲದಲ್ಲಿರುವಾಗ ತನ್ನ ಶ್ರೋತ್ರೇಂದ್ರಿಯವು (ಕಿವಿ) ತನ್ನ ಶ್ರೋತ್ರವಲ್ಲ, ಅವು ಪರಶಿವನವು, ಏಕೆಂದರೆ ಅವನ್ನು ಅವನೇ ಕೊಟ್ಟಿದ್ದಾನೆ, ಅವನ್ನು ಅವನೇ ಆಕ್ರಮಿಸಿಕೊಂಡಿದ್ದಾನೆ ಎಂದು ತಿಳಿಯುತ್ತಾನೆ. ಇದರಿಂದ ಶಬ್ದಮೋಹ ಕಡಿಮೆಯಾಗುವುದಲ್ಲದೆ, ಲಿಂಗದ ಶ್ರವಣಕ್ಕಾಗಿ ನಿಸ್ವಾರ್ಥಭಾವದಿಂದ ಕೇಳಿಸಿಕೊಳ್ಳಬೇಕಾಗುತ್ತದೆ. (೧೪:೨೯೪೨)

**ಲಿಂಗಸಹ ಭೋಜನ :** ಲಿಂಗವನ್ನು ಧರಿಸಿದ ಭಕ್ತನು ತಾನು ಶಿವನ ಒಂದು ಭಾಗ (ಅಂಗ) ಎಂದು ತಿಳಿದುಕೊಂಡು, ಶಿವಾಂಶವು ಪೂರ್ಣದಲ್ಲಿರುವಂತೆ ಅಂಗದಲ್ಲಿಯೂ ಇದೆ ಎಂದು ತೀರ್ಮಾನಿಸುತ್ತಾನೆ. ಆಗ ಅವನು ತಾನು ಮಾಡಿದ ಭೋಜನ ಶಿವನಿಗೂ ಭೋಜನವಾಗುವುದರಿಂದ, ಅವನು ಮತ್ತು ಶಿವ ಸಹಭೋಜನದಲ್ಲಿ ಭಾಗಿಗಳಾಗಿದ್ದಾರೆಂದರ್ಥ. (೧೧:೨೪೦)

**ಲಿಂಗಸಾಧಕರು :** ಷಟ್‌ಸ್ಥಲದ ಸಾಧಕರು ಆರು ಲಿಂಗಗಳನ್ನು ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆಯಾ ಸ್ಥಲಕ್ಕೆ ಆಯಾಲಿಂಗವೆಂಬುದನ್ನು ಗುರುತಿಸಿ, ಆ ಸಾಧಕರಿಗೆ ಈ ಕೆಳಗಿನ ಹೆಸರುಗಳನ್ನು ಕೊಟ್ಟಿದ್ದಾರೆ.

೧. ಆಚಾರ ಭಕ್ತ : ಆಚಾರಲಿಂಗವನ್ನು ಆರಾಧಿಸಿ, ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸುವ ಭಕ್ತಸ್ಥಲದ ಸಾಧಕ. ಅವನ ಸಾಧನಾ ರೂಪ ಶ್ರದ್ಧಾ ಭಕ್ತಿ.

೨. ಗೌರಮಾಹೇಶ್ವರ : ಗುರುಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸುವ ಮಾಹೇಶ್ವರಸ್ಥಲದ ಸಾಧಕ. ಅವನ ಸಾಧನಾ ರೂಪ ನೈಷ್ಠಿಕಾ ಭಕ್ತಿ.

೩. ಲೈಂಗಿ ಪ್ರಸಾದಿ : ಶಿವಲಿಂಗವನ್ನು ಸಾವಧಾನ ಭಕ್ತಿಯ ಮೂಲಕ ಸಾಕ್ಷಾತ್ಕರಿಸಿಕೊಳ್ಳುವ ಪ್ರಸಾದಿ ಸ್ಥಲದ ಸಾಧಕ.

೪. ಚರಪ್ರಾಣಲಿಂಗಿ : ಜಂಗಮ ಲಿಂಗವನ್ನು ಅನುಭಾವ ಭಕ್ತಿಯ ಮೂಲಕ ಸಾಕ್ಷಾತ್ಕರಿಸಿಕೊಳ್ಳುವ ಪ್ರಾಣಲಿಂಗಿ ಸ್ಥಲದ ಸಾಧಕ.

೫. ಪ್ರಸಾದ ಶರಣ : ಪ್ರಸಾದ ಲಿಂಗವನ್ನು ಆನಂದ ಭಕ್ತಿಯ ಮೂಲಕ ಸಾಕ್ಷಾತ್ಕರಿಸಿಕೊಳ್ಳುವ ಶರಣ ಸ್ಥಲದ ಸಾಧಕ.

೬. ಮಹಾಘನ ಐಕ್ಯ :ಮಹಾಲಿಂಗವನ್ನು ಸಮರಸ ಭಕ್ತಿಯ ಮೂಲಕ ಸಾಕ್ಷಾತ್ಕರಿಸಿಕೊಳ್ಳುವ ಐಕ್ಯಸ್ಥಲದ ಸಾಧಕ. (೧೧:೭೭೭-೭೯)

**ಲಿಂಗಸಾರಾಯ :** ಲಿಂಗವೇ ಎಲ್ಲದರ ಸಾರ ಎಂದು ತಿಳಿದವರು.

**ಲಿಂಗಸಾಹಿತ್ಯ :** ವೀರಶೈವಗುರು ಕೊಟ್ಟ ಲಿಂಗವನ್ನು ದೇಹದ ಮೇಲೆ ಧರಿಸುವುದು.

**ಲಿಂಗಸಿದ್ಧಾತ್ಮಿ :** ಹೆಣ್ಣನ್ನು ಬೆರೆಯಬೇಕು ಎಂಬ ಬಯಕೆಯನ್ನು ತ್ಯಜಿಸಿ, ಲಿಂಗದಲ್ಲಿ ಬೆರೆಯಬೇಕು ಎಂಬ ಬಯಕೆಯನ್ನು ಬೆಳೆಸಿಕೊಂಡವನು. (ಅಂದರೆ, 'ಹೆಣ್ಣಿನ ಗುಣವನರಿದು, ಕಳೆದಡೆ') ಲಿಂಗಶುದ್ಧಾತ್ಮಿ ಎನಿಸಿಕೊಳ್ಳುತ್ತಾನೆ. (೮:೨೦೨೯)

**ಲಿಂಗಸಿದ್ಧಿ :** ಶಿವ ಸಾಕ್ಷಾತ್ಕಾರ ಮಾಡಿಕೊಳ್ಳುವುದು. (೮:೧೫೬೧)

**ಲಿಂಗಸುಖ :** ಲಿಂಗಾಂಗ ಸಾಮರಸ್ಯದಿಂದ ಉಂಟಾದ ಆನಂದ.

**ಲಿಂಗಸ್ಥಲ :** ನೋಡಿ : ಅಂಗಸ್ಥಲ ಲಿಂಗಸ್ಥಲ ಸಂಬಂಧ.

**ಲಿಂಗಸ್ಥಲ ನಾಸ್ತಿ :** ಲಿಂಗಾಂಗ ಸಾಮರಸ್ಯ ಸಾಧಿಸದವರು ಅಂಗಸ್ಥಲ ಮತ್ತು ಲಿಂಗಸ್ಥಲ ಎಂದು ಭೇದ ಮಾಡುತ್ತಾರೆ. ಆದರೆ ಲಿಂಗಾಂಗ ಸಾಮರಸ್ಯ ಸಾಧಿಸಿದವರು ಮೊದಲು ತಾವು ಅಂಗ ಎಂಬ ಭಾವವನ್ನು ಕಳೆದುಕೊಳ್ಳುತ್ತಾರೆ. ಅನಂತರ ತಮ್ಮ ಧ್ಯಾನದ ವಸ್ತುವಾದ ಲಿಂಗವನ್ನೂ ಮರೆಯುತ್ತಾರೆ. ಹೀಗೆ ಸಾಮರಸ್ಯವು ದ್ವೈತನಾಸ್ತಿಗೆ ಕಾರಣವಾಗುತ್ತದೆ. (೯:೯೧೧)

**ಲಿಂಗಸ್ಪರ್ಶ :** ನಿಜವಾದ ಪ್ರಸಾದಿಯು ತಾನು ಸ್ಪರ್ಶಿಸುವ ಶೀತ, ಉಷ್ಣ, ಮೃದು, ಒರಟು ಇತ್ಯಾದಿಗಳೆಲ್ಲವನ್ನೂ ಪರಶಿವನ ಸ್ಪರ್ಶ (ಲಿಂಗಸ್ಪರ್ಶ) ಎಂದು ತಿಳಿಯುತ್ತಾನೆ. ಹಾಗೆ ತಿಳಿದಾಗ, ಅವನಲ್ಲಿ ಸ್ವಾರ್ಥ ಕಡಿಮೆಯಾಗಿ, ಲಿಂಗಭಕ್ತಿ ಹೆಚ್ಚಾಗುತ್ತದೆ, ಹಾಗೂ ಸ್ಪರ್ಶದಲ್ಲಿ ಹಿತ ಅಹಿತಗಳ ವ್ಯತ್ಯಾಸ ಮಾಡುವುದನ್ನು ಬಿಟ್ಟು, ಎಲ್ಲ ಸ್ಪರ್ಶನವನ್ನೂ ಸಮಾನ ದೃಷ್ಟಿಯಿಂದ ಕಾಣುತ್ತಾನೆ. (೧೪:೨೯೪೨)

**ಲಿಂಗಸ್ವಾಯತ :** ಇದಕ್ಕೆ ಲಿಂಗವನ್ನು ತನ್ನದನ್ನಾಗಿ ಮಾಡಿಕೊಳ್ಳುವುದು ಎಂಬ ವಾಚ್ಯಾರ್ಥವನ್ನು ಕೊಡಬಹುದಾದರೂ ಲಿಂಗವನ್ನು ತನ್ನಲ್ಲೆ ನೆಲೆಗೊಳಿಸುವುದು ಎಂಬುದು ಪಾರಿಭಾಷಿಕ ಅರ್ಥವಾಗುತ್ತದೆ.

**ಲಿಂಗಸ್ವಾಯತ ದೀಕ್ಷೆ :** ಲಿಂಗಾಯತ ದೀಕ್ಷೆಯ ನಂತರ ಗುರುವು ಶಿಷ್ಯನಿಗೆ ಈ ಇಷ್ಟಲಿಂಗದ ಮಧ್ಯದಲ್ಲಿ ಎಲ್ಲ ಲೋಕಗಳು, ಎಲ್ಲ ಜೀವಿಗಳೂ ಇವೆ, ಇದೇ ನಿನಗೆ ಕಾಮಧೇನು, ಕಲ್ಪವೃಕ್ಷ, ನೀನು ಪಾದೋದಕ ಪ್ರಸಾದವನ್ನವನ್ನಲ್ಲದೆ ಮತ್ತೇನನ್ನೂ ಸೇವಿಸಬಾರದು, ನಿನ್ನ ಸಂತೋಷವನ್ನು ಲಿಂಗಕ್ಕೆ ಅರ್ಪಿಸಬೇಕು, ಇದನ್ನು ಆರರಲ್ಲಿ ನಿನಗೆ ಇಷ್ಟವಾದ ಒಂದು ಸ್ಥಾನದಲ್ಲಿ ಧರಿಸು, ಸತ್ಯ ಶುದ್ಧಕಾಯಕದಿಂದ ಬಂದ ಫಲವನ್ನು ಮಾತ್ರ ದಾಸೋಹಕ್ಕೆ ವಿನಿಯೋಗಿಸು, ಇದರಿಂದ ನಿನಗೆ ಸಂತೃಪ್ತಿ ದೊರಕುತ್ತದೆ ಎಂದು ಬೋಧಿಸುತ್ತಾರೆ. ಹೀಗೆ ಬಂದ ಲಿಂಗದ ಮೂಲಕ ತನ್ನಲ್ಲಿ ಪರಶಿವನನ್ನು (ಲಿಂಗವನ್ನು) ಕಂಡುಕೊಳ್ಳುವ ಪ್ರಯತ್ನ ಮಾಡುವುದೇ ಲಿಂಗಸ್ವಾಯತ ದೀಕ್ಷೆ. (ನೋಡಿ : **ಲಿಂಗಾಯತ ದೀಕ್ಷೆ**) (೧೦:೬೯೧)

**ಲಿಂಗಾಂಗ ಕೂಟ :** ಲಿಂಗಾಂಗ ಸಾಮರಸ್ಯ. (ನೋಡಿ : **ಲಿಂಗಾಂಗ ಸಾಮರಸ್ಯ**)

**ಲಿಂಗಾಂಗ ಸಾಮರಸ್ಯ :** ಇಲ್ಲಿ ಮೊದಲು 'ಲಿಂಗ', 'ಅಂಗ', ಮತ್ತು 'ಸಾಮರಸ್ಯ' ಇವುಗಳ ಅರ್ಥವನ್ನು ತಿಳಿದು, ಇಡೀ ಪದಗುಚ್ಛದ ಅರ್ಥವನ್ನು ಆಮೇಲೆ ತಿಳಿಯೋಣ. ಲಿಂಗವೆಂದರೆ (ಪರಶಿವನೆಂದರೆ) ಅನಂತ, ಅವಿರಳ, ಅಖಂಡ ಚಿತ್; ಅಂಗ ಎಂದರೆ ಶುದ್ಧವಾದ ಆತ್ಮ; ಸಾಮರಸ್ಯ ಒಂದೇ ಭಾವ ಇರುವುದು. 'ಶುದ್ಧವಾದ ಆತ್ಮಕ್ಕೆ ತಾನೇ ಪರಶಿವನೆಂಬ ಭಾವ ಇರುವುದು' ಎಂಬುದು 'ಲಿಂಗಾಂಗ ಸಾಮರಸ್ಯ'ದ ಅರ್ಥ. ಈಗ ಇಡೀ ಪದಗುಚ್ಛದ ಅರ್ಥವನ್ನು ವಿವರಿಸೋಣ.

ಅಂಗನು ಮೂಲತಃ ಪರಶಿವನ ಅಂಗ (ಭಾಗ); ಆ ಸ್ಥಿತಿಯಲ್ಲಿ ಅವನು ಶುದ್ಧ ಮತ್ತು ಸದಾ ಆನಂದ ಸ್ಥಿತಿಯಲ್ಲಿದ್ದ. ಆದರೆ ಅವನು ಮರೆವು ಅಥವಾ ಅಜ್ಞಾನದಿಂದಾಗಿ ತಾನೊಬ್ಬ 'ಪರಶಿವನಿಂದ ಪ್ರತ್ಯೇಕವಾದ ವ್ಯಕ್ತಿ' ಎಂದು ತಪ್ಪು ತಿಳಿದಿದ್ದಾನೆ; ದೇಹೇಂದ್ರಿಯಗಳ ಸೌಖ್ಯವೇ ಜೀವನದ ಮುಖ್ಯ ಗುರಿ, ಎಂದೂ ಭ್ರಮಿಸಿದ್ದಾನೆ; ಈ ಭ್ರಮದ್ವಯಗಳಿಂದಾಗಿ ಅನೇಕ ರೀತಿಯ ಕರ್ಮಗಳನ್ನು ಮಾಡಿ, ಅವುಗಳ ಫಲವನ್ನು ಅನುಭವಿಸಲು ಮತ್ತೆ ಮತ್ತೆ ಹುಟ್ಟಿ ಬರುತ್ತಿದ್ದಾನೆ, ಮರುಜನ್ಮದಲ್ಲಿಯೂ ಅದೇ ಭ್ರಮೆ ಇರುವುದರಿಂದ, ಮತ್ತೆ ಪುನರ್ಜನ್ಮಕ್ಕೆ ಅಗತ್ಯವಾದ ಕರ್ಮಗಳನ್ನೇ ಮಾಡುತ್ತಿದ್ದಾನೆ. ಹೀಗೆ ಭವಚಕ್ರದಲ್ಲಿ ನರಳುವುದು ಅವನಿಗೆ ಸಹಿಸದಾದಾಗ ಅದರಿಂದ ಹೊರಬರಲು ನಿರ್ಧರಿಸಿ, ಮಾರ್ಗದರ್ಶನಕ್ಕಾಗಿ ಗುರುವಿನಬಳಿ ಬಂದು, ಲಿಂಗದೀಕ್ಷೆಯ ಮೂಲಕ ಆಧ್ಯಾತ್ಮಿಕ ಜೀವನ ಆರಂಭಿಸಿ, ಕೊನೆಯಲ್ಲಿ ಲಿಂಗಾಂಗ ಸಾಮರಸ್ಯವನ್ನು ಗಳಿಸುತ್ತಾನೆ. ಈ ಗಳಿಕೆ ಮರುಗಳಿಕೆಯೇ ಹೊರತು, ಹೊಸಗಳಿಕೆಯೇನಲ್ಲ.

ಆಧ್ಯಾತ್ಮಿಕ ಸಾಧನೆಯ ಮೂಲಕ ಗಳಿಸಿಕೊಂಡ ಲಿಂಗಾಂಗ ಸಾಮರಸ್ಯವು ಮೋಕ್ಷದ ಇನ್ನೊಂದು ಹೆಸರು. ಸಂಸಾರದಲ್ಲಿರುವವನಿಗೆ ಮರೆವು, ಪ್ರತ್ಯೇಕತಾಭಾವ, ಪುನರ್ಜನ್ಮ ಮತ್ತು ಮಲತ್ರಯಗಳು ಇರುತ್ತವೆ. ಮೋಕ್ಷವೆಂದರೆ ಇವುಗಳಿಂದ ಬಿಡುಗಡೆ. ಆಧ್ಯಾತ್ಮಿಕ ಸಾಧನೆಯ ಮೂಲಕ ಜ್ಞಾನ ಪಡೆದವನಿಗೆ ಮರೆವು ಇಲ್ಲ; ಮರೆವು ಇಲ್ಲದವನಿಗೆ ತನ್ನ ನಿಜ ಸ್ವರೂಪ ತಿಳಿದಿರುವುದರಿಂದ ಅವನಿಗೆ ಯಾವ ಸ್ವಾರ್ಥವೂ ಇಲ್ಲ; ಸ್ವಾರ್ಥವಿಲ್ಲದಿರುವ ಶುದ್ಧಾತ್ಮನಿಗೆ ಪುನರ್ಜನ್ಮವಿಲ್ಲ; ಅವನು ಮೊದಲಿನಂತೆ ಶಿವನೊಂದಿಗೆ ಸಂಪೂರ್ಣವಾಗಿ ಬೆರೆತು ಒಂದಾಗುತ್ತಾನೆ.

'ಒಂದಾಗುವುದು' ಅಥವಾ 'ಸಾಮರಸ್ಯ' ಎಂದರೇನು ಎಂಬುದು ಬಹಳ ಮುಖ್ಯ ಪ್ರಶ್ನೆ. 'ಗಂಡಹೆಂಡರಲ್ಲಿ ಸಾಮರಸ್ಯವಿಲ್ಲ' ಎಂದಾಗ 'ಅವರಿಬ್ಬರಲ್ಲಿಯೂ ಬಹಳಷ್ಟು ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿವೆ' ಎಂದರ್ಥ. ಒಂದು ವೇಳೆ ಅವರಲ್ಲಿ ಸಾಮರಸ್ಯವಿದ್ದರೆ ಬಹಳಷ್ಟು ವಿಷಯಗಳಲ್ಲಿ ಸಹಮತವಿದೆ ಎಂದರ್ಥ. ಆದರೆ ಲಿಂಗಾಂಗ ಸಾಮರಸ್ಯವು ಮಾನವರಲ್ಲಿರುವ ಸಾಮರಸ್ಯದಂತಲ್ಲ. ಒಂದು ವೇಳೆ ಶುದ್ಧವಾದ ಅಂಗನು ನಾನು ಪರಶಿವನಾಗಿದ್ದೇನೆ ಎಂಬ ಅಭಿಪ್ರಾಯವನ್ನು ತಳೆದರೆ, ಆಗ ಪರಶಿವನೂ ನಾನು ಅಂಗನಾಗಿದ್ದೇನೆ ಎಂಬ ಅಭಿಪ್ರಾಯವನ್ನು ತಳೆಯಬೇಕಾಗುತ್ತದೆ. ಆದರೆ ಪರಶಿವ ಸೃಷ್ಟಿ ಸ್ಥಿತಿಲಯಗಳನ್ನು ಮಾಡಿದಂತೆ, ಶುದ್ಧಾತ್ಮ ಮಾಡಲಾರ; ಆದುದರಿಂದ ಅಂಗನಷ್ಟೇ ತಾನು ಶಿವನಲ್ಲಿ ಒಂದಾಗಿದ್ದೇನೆ ಎಂದು ತಿಳಿಯುತ್ತಾನೆಯೇ ಹೊರತು, ಪರಶಿವ ತಾನು ಅಂಗನಲ್ಲಿ ಒಂದಾಗಿದ್ದೇನೆಂಬ ಭಾವ ತಳೆಯುವುದಿಲ್ಲ. ಸಾಮರಸ್ಯ ಭಾವ ಬೇಕಾಗಿರುವುದು ಅಂಗನಿಗೆ, ಲಿಂಗಕ್ಕಲ್ಲ.

ಅಂಗನು ಸಮರಸಭಾವವನ್ನು (ತಾನು ಪರಶಿವನಾಗಿದ್ದೇನೆಂಬ ಭಾವವನ್ನು) ತಳೆಯುತ್ತಾನೆಂಬುದರ ಅರ್ಥವೇನು?

ಅನುಭಾವದ ಮೂಲಕ ಐಕ್ಯಸ್ಥಿತಿಯನ್ನು ತಲುಪಿದ ಅಂಗನು ತಾನು ಪರಶಿವನಲ್ಲಿ ಬೆರೆತಿರುವುದರ ಅನುಭವವಾಗುತ್ತದೆ. ಐಕ್ಯಸ್ಥಿತಿಯೆಂದರೆ ಒಂದು ನಿರಂತರ ಸ್ಥಿತಿಯೇ ಹೊರತು, ಕೋಪ, ದುಃಖ, ಮುಂತಾದ ಸ್ಥಿತಿಗಳಂಥ ಕ್ಷಣಿಕ ಮಾನಸಿಕ ಸ್ಥಿತಿಯಲ್ಲ. ಅನುಭಾವಿಯು ಶಿವನಲ್ಲಿ ಒಂದಾದನಂತರ, ತಾನು ಮಾಡುವ ಎಲ್ಲ ಕ್ರಿಯೆಗಳೂ ಶಿವನ ಕ್ರಿಯೆಗಳೆಂದೇ ತಿಳಿಯುತ್ತಾನೆ. ಸಂಸಾರಬದ್ಧನಾದವನು "ನಾನು ಈ ಕೆಲಸವನ್ನು ಮಾಡುತ್ತಿದ್ದೇನೆ" ಎಂದರೆ, ಅನುಭಾವಿಯು "ಅಂಗ ಅನಂಗವೆರಡೂ ಅಳಿದು, ನಿಜದಲ್ಲಿ ನಿಂದ ಲಿಂಗೈಕ್ಯನ ಅಂಗದ ಮೇಲುಳ್ಳ ಕ್ರೀಗಳೆಲ್ಲವೂ ಲಿಂಗಕ್ರೀಗಳು ನೋಡಾ!" ಎನ್ನುತ್ತಾನೆ. ಬೇರೆಯವರಿಗೆ ಅವನು ಊಟ ಮಾಡುವುದು ಕಾಣುತ್ತದೆ; ಆದರೆ ಅನುಭಾವಿ ತಾನು ಊಟಮಾಡುವಾಗ ತೃಪ್ತಿಯಾಗುವುದು ಪರಶಿವನಿಗೆ ಎಂದು ತಿಳಿಯುತ್ತಾನೆ. ಈ ಅರ್ಥದಲ್ಲಿ ಅವನು ಪರಶಿವನ ದೇಹ ಅಥವಾ ಅಂಗ.

ಸಾಮರಸ್ಯ ಪಡೆದವನಿಗೆ ಲಿಂಗೈಕ್ಯನಿಗೆ ಪುನರ್ಜನ್ಮವಿಲ್ಲ. ಸಾಮರಸ್ಯವನ್ನು ಈ ಜನ್ಮದಲ್ಲೇ ಪಡೆಯಬೇಕೇ ಹೊರತು, ಸತ್ತನಂತರ ಅಲ್ಲ; ಇಲ್ಲೇ ಪಡೆಯಬೇಕೇ ಹೊರತು, ಮತ್ತೊಂದು ಲೋಕದಲ್ಲಿ ಅಲ್ಲ ಎನ್ನುತ್ತಾರೆ, ಶರಣರು. ವೈಕುಂಠ ಅಥವಾ ಕೈಲಾಸಕ್ಕೆ ಹೋಗಬೇಕೆಂದು ಆಶಿಸುವ ಭಕ್ತರನ್ನು ಅವರು ಅವಹೇಳನ ಮಾಡುತ್ತಾರೆ.

ಸಾಮರಸ್ಯ ಪಡೆದವನಿಗೆ ಆನಂದವಾಗುತ್ತದೆ. ಇಲ್ಲಿ ಆನಂದವೆಂದರೆ, ನಮಗೆ ಗೊತ್ತಿರುವ ಸುಖ ಯಾವುದೂ ಅಲ್ಲ. ನಾವು ಸುಖಪಡುವುದು ಇಂದ್ರಿಯಗಳ ಮೂಲಕ. ಆದರೆ ಲಿಂಗಾಂಗ ಸಾಮರಸ್ಯದ ಆನಂದ ಇಂದ್ರಿಯ ಜನ್ಯವಲ್ಲ. ಶುದ್ಧವಾದ ಆತ್ಮನು ಪರಶಿವನಂತೆ ಸತ್, ಚಿತ್, ಆನಂದ. ಯಾವುದೇ ದುಃಖಕ್ಕೊಳಗಾಗದೇ, ಯಾವುದೇ ರೀತಿಯ ಲೋಭ, ಮೋಹ, ಮುಂತಾದ ಮಾನಸಿಕ ತುಮುಲಗಳಿಗೆ ಒಳಗಾಗದೆ, ಶಾಂತವಾಗಿರುವುದೇ ಆನಂದ. ಪ್ರಪಂಚದಲ್ಲಿ ಏನನ್ನು ಗಳಿಸಬೇಕೋ ಅದೆಲ್ಲಕ್ಕಿಂತ ಹೆಚ್ಚಿನದನ್ನು ಗಳಿಸಿರುವುದೇ ಅವನ ಚಿರ ಸಮಾಧಾನ, ಆ ಸಮಾಧಾನವೇ ಆನಂದ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ: ಅವನ ಆನಂದ ಏನನ್ನೋ ಪಡೆದಿದ್ದರಿಂದ ಬಂದುದಲ್ಲ, ಎಲ್ಲವನ್ನೂ ತ್ಯಜಿಸಿದುದರಿಂದ ಬಂದುದು.

ಲಿಂಗಾಂಗ ಸಾಮರಸ್ಯವು ಸಿಡಿಲು ಹೊಡೆದಂತೆ ಒಂದೇ ಸಾರಿಗೆ ಪ್ರಾಪ್ತವಾದುದಲ್ಲ. ಅದನ್ನು ಪಡೆಯಲು ಸಾಧಕನು ಅನೇಕ ಆಧ್ಯಾತ್ಮಿಕ ಸಾಧನೆಯ ಹಂತಗಳನ್ನು ಏರಬೇಕಾಗುತ್ತದೆ. ಈ ಹಂತಗಳೇ ಷಟ್‌ಸ್ಥಲಗಳು. ಇವುಗಳನ್ನು ಮುಖ್ಯವಾಗಿ ಮೂರುಭಾಗ ಮಾಡಬಹುದು. ಭಕ್ತಸ್ಥಲ ಮತ್ತು ಮಹೇಶಸ್ಥಲದಲ್ಲಿ ಲಿಂಗಪೂಜೆ,

ಮಂತ್ರ, ನೈತಿಕ ಕ್ರಿಯೆ ಮುಂತಾದ ಆಚಾರಗಳನ್ನು ಮಾಡಿ ಸಾಧಕನು ಶುದ್ಧನಾಗಲು ಪ್ರಯತ್ನಿಸುತ್ತಾನೆ; ಪ್ರಸಾದಿ ಮತ್ತು ಪ್ರಾಣಲಿಂಗಿ ಸ್ಥಲಗಳಲ್ಲಿ ಎಲ್ಲವೂ ಶಿವನ ಪ್ರಸಾದವೆಂದೂ, ತನ್ನದೇನೂ ಇಲ್ಲವೆಂದೂ ತಿಳಿದು ಸ್ವಾರ್ಥತ್ಯಾಗ ಮಾಡುವುದನ್ನೂ ಧ್ಯಾನ ಮಾಡುವುದನ್ನೂ ಕಲಿಯುತ್ತಾನೆ. ಆಗಾಗ ಅವನಿಗೆ ಧ್ಯಾನದಲ್ಲಿ ಶಿವಸಾಕ್ಷಾತ್ಕಾರ ಆಗಬಹುದು. ಶರಣಸ್ಥಲ ಹಾಗೂ ಐಕ್ಯಸ್ಥಲಗಳಲ್ಲಿ ಅವನು ಧ್ಯಾನದ ಮೂಲಕ ಶಿವನಲ್ಲಿ ಒಂದಾಗುವುದೂ ಅಲ್ಲದೇ ತಾನೆಂಬ ಭಾವವನ್ನು ಮರೆಯುತ್ತಾನೆ.

ಲಿಂಗಾಂಗ ಸಾಮರಸ್ಯ ಸಾಧ್ಯವಾಗುವುದು ಲಿಂಗ ಮತ್ತು ಅಂಗಗಳೆರಡರ ಸ್ವರೂಪ ಒಂದೇ ಇದ್ದಾಗ. ಅಂಗನೂ ಚಿತ್ ಪರಶಿವನೂ ಚಿತ್ ಆಗಿರುವುದರಿಂದಲೇ ಅಂಗನು ಲಿಂಗದಲ್ಲಿ ಬೆರೆಯಲು ಸಾಧ್ಯ. ನದಿಯ ಆಕಾರ, ಸಮುದ್ರದ ಆಕಾರ, ಆ ಎರಡು ನೀರುಗಳ ರುಚಿ, ಬೇರೆ ಬೇರೆ ಇರಬಹುದು. ಆದರೂ ನದಿ ಸಮುದ್ರದಲ್ಲಿ ಸೇರಿ ಒಂದಾಗಿ ತನ್ನತನವನ್ನು ಕಳೆದುಕೊಳ್ಳುತ್ತದೆ. ಹಾಗೆಯೇ ಪರಶಿವನಿಗಿರುವ ಸೃಷ್ಟಿ, ಸ್ಥಿತಿ, ಮಾಡುವ ಶಕ್ತಿ, ಸರ್ವವ್ಯಾಪಕತ್ವ ಹಾಗೂ ಅಂಗನ ಮಿತಿಗಳು ಬೇರೆ ಬೇರೆ ಇರಬಹುದು. ಆದರೂ ಅಂಗ ಲಿಂಗದಲ್ಲಿ ಸೇರಿ ಒಂದಾಗುತ್ತದೆ. ಏಕೆಂದರೆ ಅವೆರಡೂ ಚಿದ್ವಸ್ತುಗಳು.

ಸಾಮರಸ್ಯ ಅಥವಾ ಕೂಟವೆಂದರೆ ಅಂಗ ಒಂದು ಕಡೆಯಿಂದ, ಲಿಂಗ ಮತ್ತೊಂದು ಕಡೆಯಿಂದ ಬಂದು ಕೂಡಿ ಅಲ್ಲಿಂದ ಮುಂದಕ್ಕೆ ಒಂದಾಗುತ್ತವೆ, ಎಂದರ್ಥವಲ್ಲ. ಲಿಂಗಾಂಗ ಸಾಮರಸ್ಯವನ್ನು ನದಿಯು ಸಮುದ್ರವನ್ನು ಕೂಡಿದುದಕ್ಕೆ ಹೋಲಿಸಿದರೂ ಲಿಂಗ ಮತ್ತು ಅಂಗಗಳಲ್ಲಿ ಆ ರೀತಿಯ ಕೂಟವಿರುವುದಿಲ್ಲ. ಪರಶಿವನು ಎಲ್ಲೆಲ್ಲಿಯೂ ಇರುವುದರಿಂದ ಅಂಗ ಅವನನ್ನು ಹುಡುಕಿಕೊಂಡು ಎಲ್ಲಿಯೂ ಹೋಗಬೇಕಾಗಿಲ್ಲ. ಅಂಗನು ತನ್ನಲ್ಲಿರುವ ಮಲತ್ರಯಗಳನ್ನೂ ಇತರ ದೋಷಗಳನ್ನೂ ತೊಡೆದು ಹಾಕಿದರೆ ಸಾಕು, ಅಲ್ಲಿರುವ ಪರಶಿವ ಪ್ರಕಾಶಿಸುತ್ತಾನೆ.

**ಲಿಂಗಾಂಗಿ :** ಲಿಂಗದೇಹಿ. ಲಿಂಗವನ್ನೇ ದೇಹವನ್ನಾಗಿ ಮಾಡಿಕೊಂಡ ಅಂಗ.

**ಲಿಂಗಾಚಾರ :** ನೋಡಿ : **ಪಂಚಾಚಾರ.**

**ಲಿಂಗಾನುಭಾವಿ :** ಶಿವಾನುಭವವನ್ನು ಸಿದ್ಧಿಸಿಕೊಂಡವನು. (ನೋಡಿ : **ಅನುಭಾವ**)

**ಲಿಂಗಾಯತ ದೀಕ್ಷೆ :** ವಿಭೂತಿ ಪಟ್ಟದೀಕ್ಷೆಯಲ್ಲಿ ತನ್ನ ತೊಡೆಯ ಮೇಲಿಟ್ಟುಕೊಂಡಿರುವ ಇಷ್ಟಲಿಂಗಕ್ಕೆ ಗುರುವು ಶರಣನ ಚಿದಂಗವೇ ನಿನಗೆ ಪ್ರಶಸ್ತ ಸ್ಥಲವೆಂದು ಹೇಳುತ್ತಾ, ಮೋಕ್ಷಾರ್ಥಿಯಾಗಿ ಬಂದವನ ಕರಸ್ಥಲಕ್ಕೆ ಆ ಲಿಂಗವನ್ನು ಹಸ್ತಾಂತರಿಸುವುದೇ ಲಿಂಗಾಯತ ದೀಕ್ಷೆ. ಹಾಗೆ ಮಾಡುವಾಗ ಗುರುವು ನಿಮಿಷಾರ್ಧವೂ ಅದನ್ನು ಅಗಲಬಾರದೆಂದು ಹೇಳುತ್ತಾ, ಲಿಂಗಾಂಗ ಸಾಮರಸ್ಯಕ್ಕೆ ಅದು ಹೇಗೆ ಆವಶ್ಯಕವೆಂದು ತೋರಿಸಿಕೊಡುತ್ತಾನೆ. (ನೋಡಿ : **ವಿಭೂತಿ ಪಟ್ಟ ದೀಕ್ಷೆ**) (೧೦:೯೮೦).

**ಲಿಂಗಾರ್ಪಿತ :** ಜಡಪದಾರ್ಥಗಳನ್ನೂ ಅಲ್ಲದೆ, ದೇಹೇಂದ್ರಿಯಾದಿಗಳನ್ನೂ, ಕೊನೆಗೆ ತನ್ನ ಆತ್ಮವನ್ನೂ ಸಮರ್ಪಿಸಿಕೊಳ್ಳುವುದೇ ನಿಜವಾದ ಲಿಂಗಾರ್ಪಣೆ.

**ಲಿಂಗೈಕ್ಯ :** ತಾನು ಬೇರೆ ಪರಶಿವ ಬೇರೆ ಎಂಬ ದ್ವೈತಭಾವವಳಿದು ಲಿಂಗದಲ್ಲಿ ಐಕ್ಯವಾದವನು. (ನೋಡಿ : **ಅಂಗಸ್ಥಲ ಲಿಂಗಸ್ಥಲ ಸಂಬಂಧ, ಲಿಂಗಾಂಗ ಸಾಮರಸ್ಯ**)

**ಲಿಂಗೀಬ್ರಾಹ್ಮಣ :** ಪ್ರಾಯಶ: ಆಗಮೋಕ್ತ ಶೈವ, ವೀರಶೈವ, ಶಾಕ್ತ, ಮುಂತಾದ ಧರ್ಮಗಳನ್ನು ವೈದಿಕರು ಒಪ್ಪಿಕೊಂಡಿರದ ಒಂದು ಕಾಲವಿದ್ದಿರಬೇಕು. ಯಜ್ಞ ವಿರೋಧಿಗಳಾದ ಆಗಮಿಗಳೂ ವೈದಿಕರೂ ತಂತಮ್ಮಲ್ಲಿ ವೈಷಮ್ಯವಿರಬಾರದೆಂದು ತೀರ್ಮಾನಿಸಿ, ಆಗಮಿಕ, ವೀರಶೈವರಂತೆ ವೈದಿಕರೂ ಲಿಂಗಧಾರಣೆ ಮಾಡಲು ತೊಡಗಿದಾಗ ಆಗಮಗಳನ್ನು ಸ್ವೀಕರಿಸಿದ ಲಿಂಗೀ ಬ್ರಾಹ್ಮಣರು ಅಲಿಂಗಿಗಳಾದ ವೈದಿಕ ಬ್ರಾಹ್ಮಣರು ಮುಂತಾಗಿ ವಿಭಜನೆಯಾಯಿತು. ಈಗಲೂ ಲಿಂಗ ಮತ್ತು ಯಜ್ಞೋಪವೀತ ಎರಡನ್ನೂ ಧರಿಸುವ ವೀರಶೈವರಿದ್ದಾರೆ. ಅವರನ್ನು ಆರಾಧ್ಯ, ಗುರುವ ಮುಂತಾಗಿ ಕರೆಯಲಾಗುತ್ತದೆ.

**ವಚನ :** ಈ ಪದವನ್ನು ವಚನಕಾರರು ಅನೇಕ ಅರ್ಥಗಳಲ್ಲಿ ಬಳಸಿದ್ದಾರೆ. ೧. ಬಸವಣ್ಣನವರ ವಚನ, ಆದ್ಯರ ವಚನ, ಎಂಬಲ್ಲಿ ಒಂದು ಶೈಲಿಯ ಬರವಣಿಗೆ ಎಂದಾಗುತ್ತದೆ. ಸಾಮಾನ್ಯವಾಗಿ ಗದ್ಯರೂಪದಲ್ಲಿದ್ದರೂ ಕಾವ್ಯದ ಉಸಿರು ಹೊಂದಿರುವ ಈ ಶೈಲಿಯನ್ನೇ ನಾವು ವಚನ ಎನ್ನುತ್ತೇವೆ. ವಚನ ಎಂಬ ಪದವು ಅನುಭಾವಿಯ ಮಾತಿಗೆ ಅನ್ವಯಿಸುತ್ತದೆ. ಸತ್ಯವನ್ನು ನೇರವಾಗಿ ಅನುಭವಿಸಿದ ಅವನಿಗೆ ಯಾವುದರ ನಿರ್ಬಂಧವಿಲ್ಲದುದರಿಂದ, ಅವನು ಮಾತ್ರ ಆಧ್ಯಾತ್ಮಿಕ ವಿಷಯಗಳ ಬಗೆಗೆ ಅಧಿಕಾರಯುತವಾಗಿ ಮಾತನಾಡಬಲ್ಲ. ಇದರಲ್ಲಿ ಕಷ್ಟಪಟ್ಟು ಬರೆಯುವಂಥದೇನೂ ಇಲ್ಲ. ಅನುಭಾವಿಗಳಿಗೆ ವಚನಗಳು ಪ್ರಯತ್ನವಿಲ್ಲದೆಯೇ ಹೊರಬರುತ್ತವೆ.

೨. ಆಗಮಗಳ ಮಾತು. 'ಅಹಂ ಸರ್ವಜಗತ್ ಕರ್ತಾ, ಮಮಕರ್ತಾ ಮಹೇಶ್ವರ ಎಂದು ವಿಷ್ಣು ಹೇಳಿದ ವಚನವ ಮರೆದಿರಲ್ಲ' (೧:೫೪೮).

೩. ಶಾಸ್ತ್ರದ ಮಾತು, ವೇದಗಳ ಮಾತು. (''ಶಾಸ್ತ್ರದ ವಚನ ಹೋಂತಿಗೆ ಮಾರಿ'' ೧:೫೭೨)

೪. ದಿಟವಾದ ಮಾತು. ಕೂಡಲ ಸಂಗನ ವಚನವಿಂತೆಂದುದು :''ಶ್ವಪಚೋಪಿಯಾದಡೇನು, ಶಿವಭಕ್ತನೇ ಕುಲಜಂ,ಭೋ''. (೧:೫೪೯)

೫. ಆಣೆ ಮಾಡುವುದು. (''ಅಡಿಗಡಿಗೆ ದೇವರಾಣೆ ... ಎಂಬ ವಚನವೆ ಹೊಲ್ಲ'' ೩:೬೬೦)

೬. ಸಿದ್ಧಾಂತ. ''ಅನ್ಯರ ವಚನವ ಕೊಂಡಾಡಲು ಕರ್ಮ ಬಿಡದು'' (೧:೧೦೭)

೭. ಆಜ್ಞೆ. ''ಇಂತೆಂಬುದು ಆದ್ಯರ ವಚನ''.

೮. ಯಾವುದೇ ಮಾತು. (''ಅವಳ ವಚನ ಬೆಲ್ಲದಂತೆ'' ೧:೧೧೦)

**ವಚನದ ರಚನೆಯ ನುಡಿದಪರು** : ಅನುಭಾವಿಗಳಿಗೆ ವಚನವು ಪ್ರಯತ್ನವಿಲ್ಲದೆಯೇ ಹೊರಹೊಮ್ಮುತ್ತದೆ. ಆದರೆ ಅನುಭಾವವಿಲ್ಲದ ಕೆಲವರು ವಚನವನ್ನು ರಚಿಸಿ, ನುಡಿಯುತ್ತಾರೆ. ಅಂಥವರ ವಚನ ಅಸತ್ಯವಾಗಿರುವ ಸಾಧ್ಯತೆ ಇದೆ.

**ವರ್ಣಾಶ್ರಮ** : ವೈದಿಕ ಸಂಪ್ರದಾಯದ ಪ್ರಕಾರ, ಮನುಷ್ಯರಲ್ಲಿ ನಾಲ್ಕು ಪ್ರಮುಖ ವರ್ಗಗಳಿವೆ. ಅವೆಂದರೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ. ಒಂದು ಸಿದ್ಧಾಂತದ ಪ್ರಕಾರ, ಈ ನಾಲ್ಕು ವರ್ಗ ಅಥವಾ ವರ್ಣಗಳು ಜಾತಿಗಳಲ್ಲ, ಸ್ವಭಾವದಿಂದ ಬಂದವುಗಳು. ವಿದ್ಯೆ ಕಲಿಯುವುದು, ಕಲಿಸುವುದು, ಸಾತ್ವಿಕ ಗುಣಗಳನ್ನು ಬೆಳೆಸಿಕೊಳ್ಳುವುದು, ಬ್ರಾಹ್ಮಣರ ಗುಣ. ಈ ಗುಣಗಳನ್ನು ಬೆಳೆಸಿಕೊಂಡ ಯಾರಾದರೂ ಬ್ರಾಹ್ಮಣರಾಗಬಹುದು. ಅಂಥವರು ಬ್ರಾಹ್ಮಣ ತಂದೆತಾಯಿಯರಿಗೇ ಹುಟ್ಟಿರಬೇಕು ಎಂಬ ನಿಯಮವಿಲ್ಲ. ಬ್ರಾಹ್ಮಣ ತಂದೆತಾಯಿಯರಿಗೆ ಹುಟ್ಟಿದವರಷ್ಟೇ ಬ್ರಾಹ್ಮಣರು, ಮುಂತಾದ ನಿಮಯಗಳು ಮನುವಿನ ಕಾಲದಲ್ಲಾಗಲೇ ಪ್ರಚಲಿತವಿದ್ದವು. ಅದೇ ರೀತಿ, ವೈದಿಕ ಸಂಪ್ರದಾಯದ ಪ್ರಕಾರ, ವ್ಯಕ್ತಿಯ ಜೀವನದಲ್ಲಿ ನಾಲ್ಕು ಆಶ್ರಮಗಳಿವೆ ಅವೆಂದರೆ, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ವಿದ್ಯಾರ್ಥಿಯಾಗಿ ಬ್ರಹ್ಮಚರ್ಯ ಪಾಲಿಸುತ್ತಾ, ವೇದೋಪನಿಷತ್ತು ಮುಂತಾದ ವಿದ್ಯೆ ಕಲಿಯಬೇಕು. ವಿದ್ಯೆ ಕಲಿತನಂತರ ತಾರುಣ್ಯದಲ್ಲಿ ಮದುವೆಯಾಗಿ ಗೃಹಸ್ಥನಾಗಬೇಕು; ತನ್ನ ಮಕ್ಕಳಿಗೆ ಮದುವೆ ಮಾಡಿ ಸತಿಯೊಡನೆ ಕಾಡಿಗೆ ಹೋಗಿ (ವಾನಪ್ರಸ್ಥ ಜೀವನದಲ್ಲಿ) ಆಧ್ಯಾತ್ಮಿಕ ಜೀವನ ಪ್ರಾರಂಭಿಸಬೇಕು, ಮತ್ತು ಕೊನೆಯಲ್ಲಿ ಮೋಕ್ಷಾರ್ಥಿಯಾಗಿ ಸನ್ಯಾಸ ಜೀವನ ನಡೆಸಬೇಕು.

**ವರ್ತಕ ಪ್ರಸಾದಿ** : ೧. ಅರ್ಪಿತವನ್ನು ಕೊಟ್ಟು ಪ್ರತಿಫಲವನ್ನು ಅಪೇಕ್ಷಿಸುವ ವಾಣಿಜ್ಯಶೀಲ ಬುದ್ಧಿಯುಳ್ಳವನು, ೨. ಪ್ರತಿದಿನವೂ ತಪ್ಪದೆ ಯಾಂತ್ರಿಕವಾಗಿ ಪ್ರಸಾದ ಪಡೆಯುವವನು. (೮:೧೧೮)

**ವರ್ಮವಶಗತ** : ಸೃಷ್ಟಿ, ಜೀವ, ಮತ್ತು ಪರಶಿವ ಇವರ ಬಗೆಗಿನ ರಹಸ್ಯ (ವರ್ಮ)ವನ್ನು ತಿಳಿಯುವುದು (೫:೮೮೮).

**ವಸ್ತು** : ವಚನಕಾರರು ಈ ಪದವನ್ನು ಮೂರು ಅರ್ಥಗಳಲ್ಲಿ ಬಳಸಿದ್ದಾರೆ. ೧. ಯಾವುದೇ ವಸ್ತು - ಅದು ಸಜೀವಿಯಾಗಿರಬಹುದು, ನಿರ್ಜೀವಿಯಾಗಿರಬಹುದು. ೨. ದೇಹ. 'ಇಷ್ಟಲಿಂಗ ಭಿನ್ನವಾಗಲೊಡನೆ ತೆತ್ತಿಗರ ಕಂಡಲ್ಲಿ... ವಸ್ತುವ ಬಿಡುವುದು, ನೀರು ನೇಣು ಔಷಧಂಗಳಲ್ಲಿ... ವಸ್ತುವ ಬಿಡಬೇಕು...' (೫:೫೩೫), ೩. ಪರವಸ್ತು (ಪರಶಿವ)

**ವಸ್ತುಭಾವದ ನಿಹಿತ** : ಪರವಸ್ತುವಿನ ಬಗೆಗಿನ ಜ್ಞಾನ, ರಹಸ್ಯ. (೮:೧೮೫೨)

**ವಸ್ತುಭಾವಲೇಪ** : ಅಂಗವು ಲಿಂಗದಲ್ಲಿ ಲೀಯವಾದಾಗ, ಅದು ತನ್ನ ಜೀವಭಾವವನ್ನು ಕಳೆದುಕೊಳ್ಳುವುದೂ ಅಲ್ಲದೆ, ತನ್ನನ್ನು ತುಂಬಿಕೊಂಡಿರುವ ಪರವಸ್ತುವನ್ನೇ ಲೇಪಿಸಿಕೊಳ್ಳುತ್ತದೆ ಇದೇ ನಿಜವಾದ ಪ್ರಾಣ ಮತ್ತು ಲಿಂಗಗಳ ಸಂಬಂಧ. (೮:೧೪೨೫)

**ವಸ್ತುಲೇಪ** : ಪರವಸ್ತುವಿನಲ್ಲಿ ಮುಳುಗಿದ ಅಂಗನು ಅದರಲ್ಲಿಯೇ ಇರುತ್ತಾನೆ, ಹಾಗೂ ಅದನ್ನೆ ಲೇಪಿಸಿಕೊಳ್ಳುತ್ತಾನೆ. (೭:೧೧೧೭)

**ವಾಗದ್ವೈತ :** ಮಾತಿನ ಅದ್ವೈತ, ಶಿವ ಜೀವರ ಐಕ್ಯತೆಯನ್ನು (ಅದ್ವೈತವನ್ನು) ಪುಸ್ತಕಗಳಿಂದಲೂ, ಇತರರ ಪ್ರವಚನಗಳಿಂದಲೂ ತಿಳಿದುಕೊಳ್ಳುವುದು. (೯:೨೦೧) ಆದರೆ ಅನುಭಾವದ ಮೂಲಕ ಪಡೆದ ಅದ್ವೈತವಲ್ಲ. ವಾಗದ್ವೈತವನ್ನು ನುಡಿಯುವವರಲ್ಲಿ ಕೆಲವರು ಕಪಟಿಗಳೂ ಇರಬಹುದು.

**ವಾಗದ್ವೈತ ನಿರಸನ ಸ್ಥಲ :** ವಾಗದ್ವೈತವು (ನೋಡಿ : **ವಾಗದ್ವೈತ**) ಮುಮುಕ್ಷುವಿಗೆ ಆವಶ್ಯಕ. ಅದ್ವೈತದ ಬಗೆಗೆ ತಿಳಿದುಕೊಂಡ ಮೇಲೆ ಅವನು ನಿಜವಾಗಿಯೂ ಅದನ್ನು ಸಿದ್ಧಿಸಿಕೊಂಡಾಗ ವಾಗದ್ವೈತ ಹೋಯಿತು ಎಂದರ್ಥ. ಅಂಥವನು ಮೌನಿಯಾಗಿರುತ್ತಾನೆ. ಅಂಥ ಅವಸ್ಥೆಯೇ ವಾಗದ್ವೈತ ನಿರಸನಸ್ಥಲ.

**ವಾಮದೇವ :** ಸಾದಾಖ್ಯಗಳಲ್ಲಿ ಒಂದು (ನೋಡಿ : **ಸಾದಾಖ್ಯಗಳು**).

**ವಾಯು :** ೧. ಪಂಚಭೂತಗಳಲ್ಲಿ ಒಂದು, ೨. ಪ್ರಾಣವಾಯು.

**ವಾಯುಧಾರಣೆ :** ವಾಯುಗಳು ಹದಿನಾಲ್ಕು ವಿಧವಿದ್ದು, ಅವೆಲ್ಲವೂ ಒಂದೇ ವಾಯುವಿನ ಹದಿನಾಲ್ಕು ರೂಪಗಳಾಗಿವೆ. ಅವುಗಳಲ್ಲಿ ಐದು ಮುಖ್ಯ, ಆ ಐದರಲ್ಲಿ ಒಂದೇ ವಾಯು ಮುಖ್ಯ. ಅದು ದೇಹದ ಎಲ್ಲ ಕಡೆಗಳಲ್ಲೂ ಚಲಿಸುತ್ತಿದ್ದು, ಪ್ರಾಣಾಯಾಮದ ಮೂಲಕ (ಪೂರಕ, ರೇಚಕ, ಕುಂಭಕಗಳು ಮೂಲಕ) ಬ್ರಹ್ಮನಾಡಿಯಲ್ಲಿ ನಿಲ್ಲಿಸುವುದೇ ವಾಯುಧಾರಣೆ. ಇದು ಆಯುಷ್ಯವೃದ್ಧಿ ಮಾಡುವುದಲ್ಲದೆ, ನಮ್ಮ ಜ್ಞಾನಶಕ್ತಿಯನ್ನು ಹೆಚ್ಚಿಸಿ, ಪರಶಿವನೊಂದಿಗೆ ಬೆಳೆಯಲು ಸಹಾಯಕವಾಗುವುದು.

**ವಾಯುಪುತ್ರ :** ವಾಯುವಿನಂತೆ ಸದಾ ಚಂಚಲವಾಗಿರುವ ಮನಸ್ಸು. (೪:೧೩೬೬)

**ವಾಯುಪ್ರಾಣಿ :** ಲಿಂಗಾಂಗ ಸಾಮರಸ್ಯದ ಗುರಿಯಿಲ್ಲದೆ, ಕೇವಲ ಉಸಿರಾಡಿಕೊಂಡಿರುವ, ಪ್ರಾಣಿರೂಪದ ಮನುಷ್ಯ, ೨. ಕೇವಲ ಪ್ರಾಣಾಯಾಮ ಮಾಡುವವನು. (೧:೭೬೬)

**ವಾಯುವಿನ ಪಂಚೀಕರಣ :** ನೋಡಿ : **ಪಂಚೀಕರಣ.**

**ವಾಯುವಿನ ಪೂರ್ವಾಶ್ರಯವ ಕಳೆಯುವುದು :** ಮಾನವ ದೇಹದ ರಚನೆಗೆ ಕಾರಣವಾದ ಪಂಚಭೂತಗಳಲ್ಲೊಂದಾದ ವಾಯುತತ್ವಕ್ಕೆ ಸ್ಪರ್ಶನವೇ ಮುಖ್ಯಗುಣ. ಇದರಿಂದಾಗಿ ನಮಗೆ ಸ್ವಾಭಾವಿಕವಾಗಿ, ಚಳಿಗಾಲದಲ್ಲಿ ಬೆಚ್ಚಗಿರಬೇಕೆಂಬ ಆಸೆಯೂ, ಬೇಸಗೆ ಕಾಲದಲ್ಲಿ ತಣ್ಣಗಿರಬೇಕೆಂಬ ಆಸೆಯೂ, ಹಿತಕಾರಿಯಾದ ಸ್ಪರ್ಶಬೇಕೆಂದೂ, ಅಹಿತಕಾರಿಯಾದ ಸ್ಪರ್ಶ ಬೇಡವೆಂದೂ ಬಯಸುತ್ತೇವೆ. ಆದರೆ ಸದ್ಭಕ್ತನಿಗೆ ಯಾವುದೇ ಸ್ವಾರ್ಥಪರ ಆಸೆಗಳಿಲ್ಲವಾದುದರಿಂದ ಅವನಿಗೆ ಚಳಿಯೂ ಒಂದೇ ಬೇಸಗೆಯೂ ಒಂದೇ; ಅವನು ಎಲ್ಲವನ್ನೂ ಸಹಿಸಿಕೊಳ್ಳುವುದಷ್ಟೇ ಅಲ್ಲ, ತಾನು ಮುಟ್ಟುವುದೆಲ್ಲವೂ ಶಿವಶಕ್ತಿಯ ವಿವಿಧ ರೂಪವೆಂದು ತಿಳಿದು, ಯಾವಾಗಲೂ ಸಂತುಷ್ಟನಾಗಿರುತ್ತಾನೆ ಅಥವಾ ಅವನು ವಾಯುವಿನ ಪೂರ್ವಾಶ್ರಯ ಕಳೆದಿದ್ದಾನೆ.

**ವಿಕಾರ :** ಬದಲಾವಣೆ, ಚಾಂಚಲ್ಯ. ಹುಟ್ಟು, ಬೆಳವಣಿಗೆ, ರೋಗ ರುಜಿನ ಮುಂತಾದವುಗಳು ದೈಹಿಕ ವಿಕಾರಗಳಾದರೆ, ಸಿಟ್ಟು ಮುಂತಾದವುಗಳು ಮನೋವಿಕಾರಗಳು. ಸಾಂಖ್ಯರ ಪ್ರಕಾರ, ಪ್ರಕೃತಿಯ ವಿಕಾಸವೇ ಅದರ ವಿಕಾರ.

**ವಿಕಾರಿ :** ಮಾನಸಿಕ ಸಂತುಲನವನ್ನು ಕಳೆದುಕೊಂಡವನು. (೮:೨೨೯)

**ವಿಧಿತ್ರಯ :** ಕರ್ಮಕ್ಕೆ ತಕ್ಕಂತೆ ಅನುಭವಿಸಲೇಬೇಕಾದ ಮೂರು ರೀತಿಯ ಫಲಗಳು. ಇವೆಂದರೆ, ಸುಖ, ದು:ಖ ಮತ್ತು ವಿಷಾದ. (೪:೧೪೪೩)

**ವಿದ್ಯಾಕಲೆ :** ಕಲಾಶಕ್ತಿಯ ಪರಿಣಾಮಗಳಲ್ಲಿ ಒಂದು. ಇದರಿಂದಾಗಿ, ಈಗಿರುವ ಮರೆವು ಹೋಗಿ, ಜ್ಞಾನ (ವಿದ್ಯಾ) ಹುಟ್ಟುತ್ತದೆ.

**ವಿನಯಜಲ :** ದಶವಿಧ ಉದಕಗಳಲ್ಲಿ ಒಂದಾದ ಇದಕ್ಕೆ ಕ್ರಿಯಾಪಾದೋದಕವೆಂಬ ಮತ್ತೊಂದು ಹೆಸರಿದೆ.

**ವಿಪ್ರಕರ್ಮ :** ವಿಪ್ರರು (ಬ್ರಾಹ್ಮಣರು) ಮಾಡುವ ಕರ್ಮ, ವೈದಿಕ ಕರ್ಮ. (೧:೭೦೬)

**ವಿಭೂತಿ :** ಭಸ್ಮ, ಭಸಿತ. ಇದು ಕಾಮದಹನದ ಸಂಕೇತ. ಜ್ಞಾನವೆಂಬ ಅಗ್ನಿಯಿಂದ ಸ್ವಾರ್ಥಪರವಾದ ಎಲ್ಲ ಕಾಮ (ಆಸೆ)ಗಳನ್ನೂ ದಹಿಸಿದವನೇ ನಿಜವಾದ ಶಿವಯೋಗಿ. ಅಂಥವನ ಮೈಮನವೆಲ್ಲಾ ವಿಭೂತಿಯಿಂದಾಗಿದೆ, ಎಂದು ಸಾಂಕೇತಿಕ ಭಾಷೆಯಲ್ಲಿ ಹೇಳಬಹುದು. ಆದರೆ ಅವನಂತೆ ತಾವೂ ಆಗಬೇಕೆಂದು ಬಯಸುವ ಸಾಧಕರು ಮೊದಲು ಸಾಂಕೇತಿಕವಾಗಿ, ಅಂದರೆ, ಕಾಮದಹನದ ಸಂಕೇತವಾದ ವಿಭೂತಿ ಧಾರಣೆಯಿಂದ ಪ್ರಾರಂಭಿಸುತ್ತಾರೆ. ಆದರೆ ವಿಭೂತಿ ಧಾರಣೆ ಕೇವಲ ಸಾಂಕೇತಿಕ ಆಚರಣೆಯೆಂದೂ, ಜ್ಞಾನಾಗ್ನಿಯಿಂದ ಎಲ್ಲ ರೀತಿಯ ಆಸೆಗಳನ್ನು ಸುಡುವುದೇ ನಿದವಾದ ಆಚರಣೆಯೆಂದೂ ತಿಳಿದವನು ಸಾಂಕೇತಿಕ ಆಚರಣೆಯಿಂದ ಇನ್ನೂ ಮುಂದೆ ಹೋಗುತ್ತಾನೆ. ವಿಭೂತಿ ಎಂಬ ಶಬ್ದಕ್ಕೆ ಐಶ್ವರ್ಯ ಎಂಬುದು ಪರ್ಯಾಯವಾಗಿದೆ. ಈಶ್ವರ ಎಂಬುದರ ಭಾವವೇ ಐಶ್ವರ್ಯ. ಈಶ್ವರನೆಂದರೆ ಒಬ್ಬ ವ್ಯಕ್ತಿಯ ಅಂಕಿತನಾಮವಲ್ಲ. ಈಶ್ವರ ಎಂದರೆ ಪ್ರಭು, ಅಥವಾ ಸ್ವಾಮಿ (ಒಡೆಯ) ಎಂದರ್ಥ. ಇಲ್ಲಿಯೂ ಈಶ್ವರ ಒಂದು ಸಂಕೇತ. ಒಡೆಯನು ತನ್ನ ಸೇವಕರನ್ನು ಹೇಗೆ ನಿಯಂತ್ರಿಸುತ್ತಾನೋ ಹಾಗೆ ಈಶ್ವರನು ಎಲ್ಲ ಇಂದ್ರಿಯಗಳ ಒಡೆಯ. ಈ ಅರ್ಥದಲ್ಲಿ ಇಂದ್ರಿಯಗಳನ್ನು ಹತೋಟಿಯಲ್ಲಿಡುವವನು ಈಶ್ವರ. ಹೀಗೆ, ವಿಭೂತಿ ಅಥವಾ ಐಶ್ವರ್ಯವೆಂದರೆ ಇಂದ್ರಿಯ ನಿಯಂತ್ರಣ ಸಾಮರ್ಥ್ಯ ಎಂದಾಗುತ್ತದೆ. ವಿಭೂತಿ ಧರಿಸುವವನು ಅನಂತರವಾದರೂ ಆ ಆಚಾರದ ಹಿಂದಿರುವ ದರ್ಶನವನ್ನು ತಿಳಿದುಕೊಳ್ಳಬೇಕು.

**ವಿಭೂತಿ ಪಟ್ಟ :** ವಿಭೂತಿಯ ಗಟ್ಟಿ. (೯:೧೩೫)

**ವಿಭೂತಿಪಟ್ಟ ದೀಕ್ಷೆ :** ವಿಭೂತಿಪಟ್ಟ ದೀಕ್ಷೆಯು ಸ್ವಸ್ತಿಕಾರೋಹಣ ದೀಕ್ಷೆ ಮತ್ತು ಕಲಶಾಭಿಷೇಕ ದೀಕ್ಷೆಯ ನಂತರ ಮಾಡುವ ದೀಕ್ಷೆ. (ನೋಡಿ : **ಸ್ವಸ್ತಿಕಾರೋಹಣ ದೀಕ್ಷೆ, ಕಲಶಾಭಿಷೇಕ ದೀಕ್ಷೆ**). ಗುರುವು ಉಳಿದ ಶರಣರೊಡಗೂಡಿ ಆ ಇಷ್ಟಲಿಂಗಕ್ಕೆ ಸಪ್ತವಿಧಾರ್ಚನೆ, ಅಷ್ಟವಿಧಾರ್ಚನೆ, ಷೋಡಶೋಪಚಾರಗಳನ್ನು ಮಾಡಿದ ನಂತರ, ತನ್ನ

ತೊಡೆಯ ಮೇಲೆ ಕೂರಿಸಿಕೊಳ್ಳುತ್ತಾನೆ. ಆಮೇಲೆ ಪ್ರಾಣಲಿಂಗ ಸ್ವರೂಪವಾದ ಎರಡು ಕೈಗಳ ಹತ್ತು ಬೆರಳುಗಳ ಮಧ್ಯದಲ್ಲಿ ಓಂ ನಮಃ ಶಿವಾಯ ಎಂಬ ಮಂತ್ರವನ್ನು ಎರಡು ಸಾರಿ (ಹನ್ನೆರೆಡು ಅಕ್ಷರಗಳನ್ನು) ಬರೆದು, ಭಾವಲಿಂಗ ಸ್ವರೂಪವಾದ ಮಸ್ತಕವನ್ನು ಸಪ್ತ ವಿಧಾರ್ಚನೆ ಮಾಡಿ, ಅದರ ಮೇಲೂ ಹನ್ನೆರೆಡು ಅಕ್ಷರಗಳನ್ನು ಬರೆದು, ಮಂತ್ರೋಚ್ಚಾರಣೆ ಮಾಡುತ್ತಾ, ಸರ್ವಾಚಾರ ಸಂಪನ್ನನಾಗೆಂದು ಹರಸುತ್ತಾ ಆ ಲಿಂಗಕ್ಕೆ ವಿಭೂತಿ ಧರಿಸುವುದೇ ವಿಭೂತಿ ಪಟ್ಟದೀಕ್ಷೆ. (೧೦:೬೮೯)

**ವಿಮರ್ಶಾ ಶಕ್ತಿ :** ವಿಮರ್ಶಾ ಶಕ್ತಿ ಅಥವಾ ನೆನಹು (ನೆನವು) ಸಹ ಶಕ್ತಿಯ ಅತ್ಯಂತ ಸೂಕ್ಷ್ಮರೂಪ. ಅದು ಎರಡು ವಿಧದಲ್ಲಿ ಕೆಲಸ ಮಾಡುತ್ತದೆ.

೧. ಸೃಷ್ಟಿಪೂರ್ವದ ಮೂಲಸ್ಥಿತಿಯಲ್ಲಿ ಪರಶಿವನು ಸರ್ವಶೂನ್ಯ ನಿರಾಲಂಬನಾಗಿರುತ್ತಾನೆ. ಅಂದರೆ ಅಂತಹ ಸ್ಥಿತಿಯಲ್ಲಿ ಪ್ರಪಂಚವೂ ಇಲ್ಲ, ಪ್ರಪಂಚದ ಉಪಾದಾನ ಕಾರಣವಾದ ಶಕ್ತಿಯೂ ಇಲ್ಲ, ಶಕ್ತಿಯ ವಿವಿಧ ರೂಪಗಳಾದ ಇಚ್ಛಾಶಕ್ತಿ, ಜ್ಞಾನಶಕ್ತಿ, ಮುಂತಾದವುಗಳೂ ಇಲ್ಲ, ಅವುಗಳನ್ನು ನಿಯಂತ್ರಿಸುವ ಸದಾಶಿವ, ಈಶ್ವರ, ಮುಂತಾದ ಅಧಿದೇವತೆಗಳೂ ಇಲ್ಲ. ಅಷ್ಟೇ ಏಕೆ, ಪರಶಿವನಿಗೆ ಸೃಷ್ಟಿಸಬೇಕು ಎಂಬ ಇಚ್ಛೆಯಾಗಲಿ ತಾನೊಬ್ಬನೇ ಇದ್ದೇನೆ ಎಂಬ ಅರಿವಾಗಲಿ ಅವನಿಗಿಲ್ಲ. ಇಂಥ ಒಂದು ಸಂದರ್ಭದಲ್ಲಿ ಅವನಲ್ಲಿ ನೆನಹು ತಲೆದೋರಿ, ತಾನೊಬ್ಬನೇ ಇರುವ ಅರಿವಾಗುತ್ತದೆ. ನೆನಹು ಒಂದು ಪ್ರಚೋದಕ ಶಕ್ತಿ. ಹೇಗೆಂದರೆ, ಆ ನೆನಹು ತಲೆದೋರದಿದ್ದರೆ, ಅವನಿಗೆ ತಾನೊಬ್ಬನೆ ಇರುವ ಅರಿವಾಗುತ್ತಿರಲಿಲ್ಲ. ಈ ಸ್ವ ಪ್ರಜ್ಞೆ ಇಲ್ಲದಿದ್ದರೆ ಅವನಿಗೆ ಸೃಷ್ಟಿಸುವ ಇಚ್ಛೆ ಉಂಟಾಗುತ್ತಿರಲಿಲ್ಲ, ಸೃಷ್ಟಿಸುವ ಇಚ್ಛೆಯೇ ಅವನಿಗೆ ಇಲ್ಲದಿದ್ದರೆ ಅವನು ಸೃಷ್ಟಿಕರ್ತನಾಗುತ್ತಿರಲಿಲ್ಲ. ಆದುದರಿಂದ ನೆನಹು ಒಂದು ಪ್ರಚೋದಕ ಶಕ್ತಿ, ಆದರೆ ಸಚೇತನ ವಸ್ತುವಿನಂಥ ಪ್ರಚೋದಕ ಶಕ್ತಿಯಲ್ಲ. ಅಂದರೆ, ವಿಮರ್ಶಾಶಕ್ತಿಯು ಮಾತ್ರ ಇಚ್ಛಾಶಕ್ತಿ (ಸೃಷ್ಟಿಸಬೇಕೆಂಬ ಇಚ್ಛೆ), ಜ್ಞಾನಶಕ್ತಿ, (ಏನನ್ನು, ಯಾವಾಗ, ಯಾವ ರೀತಿಯಲ್ಲಿ ಸೃಷ್ಟಿಸಬೇಕೆಂಬ ಜ್ಞಾನ) ಮತ್ತು ಕ್ರಿಯಾಶಕ್ತಿ (ಇಚ್ಛೆಯನ್ನು ಜ್ಞಾನದ ಪ್ರಕಾರ ಕಾರ್ಯಗತ ಮಾಡಲು ಬೇಕಾದ ಉಪಾದಾನಕರಣ)ಗಳಿಗೆ ಜನ್ಮ ನೀಡುತ್ತದೆ.

೨. ವಿಮರ್ಶಾಶಕ್ತಿಯು ಕೇವಲ ಪ್ರಚೋದಕ ಶಕ್ತಿಯಂಥ ನಿಮಿತ್ತಕಾರಣವಷ್ಟೇ ಅಲ್ಲ, ಅದು ಉಪಾದಾನಕರಣವೂ ಹೌದು. ನವಿಲಿನ ತತ್ತಿಯಲ್ಲಿ ಸಂಪೂರ್ಣ ನವಿಲು ಹೇಗೆ ಅವ್ಯಕ್ತವಾಗಿ ಅಡಕವಾಗಿದೆಯೋ ಹಾಗೆಯೇ ಇಡೀ ಜಗತ್ತಿನ ವೈವಿಧ್ಯಮಯ ಚರಾಚರವಸ್ತುಗಳು ಶಿವನಲ್ಲಿ ನೆನಹಿನ ರೂಪದಲ್ಲಿ ಅಡಕವಾಗಿವೆ. "ಲೋಕಾದಿಲೋಕಂಗಳೇನೂ ಇಲ್ಲದಂದು ಏಕಮೇವ ಪರಬ್ರಹ್ಮವು ತಾನೊಂದೇ ನೋಡಾ! ಅದು ತನ್ನನು ನೆನೆಯದೇ ಇದಿರನು ನೆನೆಯದೆ ನೆನಹು ನಿಷ್ಪತ್ತಿಯಾಗಿದ್ದಿತು. ನೋಡಾ! ನೆನಹಿಲ್ಲದ ಘನವಸ್ತು ನೆನೆದ ನೆನಹೇ ಸಾವಯವವಾಗಿ ಚಿತ್ತನಿಸಿಕೊಂಡಿತ್ತು.

ಆ ಚಿತ್ತೇ ಸತ್ತು ಚಿತ್ತು ಆನಂದ ನಿತ್ಯ ಪರಿಪೂರ್ಣ ಎಂಬ ಐದಂಗನಂಗೀಕರಿಸಿ ನಿಃಕಲ ಶಿವತತ್ವವೆನಿಸಿಕೊಂಡಿತ್ತು ನೋಡಾ! ಅದರೊಳಗೆ ಒಂದು ಲಿಂಗಸ್ಥಲ, ಮತ್ತೊಂದು ಅಂಗಸ್ಥಲ. ಇತ್ಯಾದಿ" ಎಂದು ತೋಂಟದ ಸಿದ್ಧಲಿಂಗ ಶಿವಯೋಗಿಗಳು ಹೇಳುವಾಗ, ನೆನಹು ಪರಶಿವನಲ್ಲಿ ಅಂಗಸ್ಥಲ ಮತ್ತು ಲಿಂಗಸ್ಥಲಗಳ ವಿಭಜನೆ ಉಂಟುಮಾಡುವುದಲ್ಲದೆ, ಇದರ ಮೂಲ ರೂಪಾದ ಚಿತ್ತಿನಲ್ಲಿಯೂ ಶಕ್ತಿ ಮತ್ತು ಭಕ್ತಿ ಎಂಬ ವಿಭಜನೆಗೆ ಕಾರಣವಾಗುತ್ತದೆ. ಆ ಶಕ್ತಿಯೇ ಮುಂದೆ ಆರು ತೆರನಾಗಿ, ಕೊನೆಗೆ ಬ್ರಹ್ಮನ ಅಧೀನದಲ್ಲಿ ಪ್ರಪಂಚವಾಗಿ ಮಾರ್ಪಡುತ್ತದೆ, ಎಂಬರ್ಥವಿದೆ. (೧೧:೩೩, ೩೮, ೩೯, ೪೪, ೬೩).

**ವಿರಕ್ತ :** ಪ್ರಾಪಂಚಿಕ ಆಸೆಗಳನ್ನು ಸಂಪೂರ್ಣವಾಗಿ ತೊರೆದವನು. ದೇಹದ ವಿಕಾರಗಳು, ಮನದ ವಿಕಾರಗಳು ಅವನನ್ನು ಚಂಚಲಚಿತ್ತನನ್ನಾಗಿ ಮಾಡುವುದಿಲ್ಲ. ಅವನನ್ನು ಅರಿಷಡ್ವರ್ಗಗಳು ಬಾಧಿಸಲಾರವು, ಹಾಗೂ ಅವನು ಲಿಂಗಾಂಗ ಸಾಮರಸ್ಯವನ್ನು ಪಡೆಯಬೇಕೆಂಬ ಉತ್ಕಟಾಕಾಂಕ್ಷೆಯುಳ್ಳವನು. ಆಚಾರದಲ್ಲಿ ನಿತರನಾದವನು.

**ವಿರಕ್ತಿ :** ವಿರಕ್ತಿಯೆಂದರೆ ಸನ್ಯಾಸ. ಅಂದರೆ ಎಲ್ಲವನ್ನೂ ತೊರೆದು ಕಾಡಿಗೆ ಹೋಗುವುದು ಎಂದಾಗಲಿ, ಸಮಾಜದಿಂದ ದೂರವಿರುವುದು ಎಂದಾಗಲಿ ಅಲ್ಲ. ನಿಜವಾದ ವಿರಕ್ತನು ಊರಲ್ಲೇ, ಎಲ್ಲರ ನಡುವೆಯೇ ಇದ್ದು, ಆದಷ್ಟು ಸ್ವಾರ್ಥಪರವಾದ ಆಸೆಗಳನ್ನು ಕಡಿಮೆ ಮಾಡಿಕೊಂಡು ಪರಹಿತಾರ್ಥವಾಗಿ ನಡೆದುಕೊಳ್ಳುತ್ತಾನಲ್ಲದೆ, ದೈವಕ್ಕೆ ತಾನು ತೋರಿಸಬೇಕಾದಷ್ಟು ಭಕ್ತಿಯನ್ನು ತೋರಿಸುತ್ತಿರುತ್ತಾನೆ. ಆದರೆ ಮೋಳಿಗೆ ಮಾರಯ್ಯನ ಪ್ರಕಾರ ಭಕ್ತಿಯೆಂಬ ತುರೀಯಾನಂದದಲ್ಲಿ ಸಿಕ್ಕಿ ಸಾಯುವುದಕ್ಕಿಂತ ವಿರಕ್ತಿಯಿಂದ ಕರಿಗೊಂಡು ಮಾಡುವ ಸದಾನಂದದ ಇರವು ಮೇಲು. ವಿರಕ್ತಿ ಹೇಗಿರಬೇಕೆಂದರೆ 'ಬಂದುದನೊಲ್ಲದೆ, ಬಾರದುದಕ್ಕೆ ಬಯಸದೆ, ಮಾಟದಲ್ಲಿ ಮನ ಸಂದೇಹಿಸದೆ, ಜಗದಲ್ಲಿ ಸುಳಿದ ಆಟದವರ ನೋಡುತ್ತ, ಉಣ ಬಂದವರಿಗಿಕ್ಕಿ, ಬೇಡಬಂದವರಿಗೆ ಕೊಟ್ಟು' ಊರಲ್ಲೇ ಇರಬೇಕೇ ಹೊರತು ಕಾಡಿಗೆ ಹೋಗಬಾರದು. (೮:೧೮೯)

**ವಿರಳ, ಅವಿರಳ :** ಇಂದ್ರಿಯಗೋಚರ ಪ್ರಪಂಚದಲ್ಲಿರುವ ವಸ್ತುಗಳು ಪರಸ್ಪರ ದೂರವಿರುವುದರಿಂದ, ಅವುಗಳನ್ನು ವಿರಳವೆಂದು ಕರೆಯಬೇಕಾಗುತ್ತದೆ. ಪರವಸ್ತುವಾದ ಚೈತನ್ಯವು ಪ್ರತಿಯೊಂದು ವಸ್ತುವಿನ, ಪ್ರತಿಯೊಬ್ಬ ವ್ಯಕ್ತಿಯ,' ಕಣಕಣದಲ್ಲಿದ್ದರೂ, ಅದು ಎಲ್ಲೂ ಹರಿದು ಹಂಚಿ ಹೋಗಿಲ್ಲ. ಅದು ಅವಿರಳವಾಗೇ ಇದೆ. ಅದು ಅವಿರಳವಾಗುವುದರಿಂದಲೇ ಅದಕ್ಕೆ ಅಖಂಡ, ನಿರವಯ, ಅವಿಭಾಜ್ಯ ಎಂದೂ ಹೆಸರು. (೮:೯೯೦)

**ವಿಷ್ಣುಮೂರ್ತಿ ಲಿಂಗವಾಗುವುದು :** ಇಷ್ಟಲಿಂಗವನ್ನು ಮೂರು ವಿವಿಧ ಹಂತಗಳ ಉದ್ದೇಶದಿಂದ ಧರಿಸುತ್ತಾರೆ. ಅದನ್ನು ಅಂಗೈಮೇಲೆ ಇರಿಸಿ ಪೂಜಿಸಬೇಕು, ಎಂಬುದು

ಮೊದಲನೆ ಉದ್ದೇಶ. ವಿವಿಧ ರೀತಿಯ ಅರ್ಪಣೆಗಳಿಗಿಂತ ತನ್ನ ಕರಣೇಂದ್ರಿಯಾದಿಗಳನ್ನೆ ಅರ್ಪಿಸುವ ಉದ್ದೇಶದಿಂದ ಪರಶಿವನನ್ನೆ (ಲಿಂಗವನ್ನೆ) ಸರ್ವಾಂಗದಲ್ಲಿ ಸ್ಥಾಪಿಸಬೇಕು ಎಂಬುದು ಎರಡನೆ ಉದ್ದೇಶ. ಅನುಭಾವದಲ್ಲಿ ತಾನೇ ಲಿಂಗವಾಗಬೇಕು ಎಂಬುದು ಮೂರನೆ ಉದ್ದೇಶ. ಆದರೆ ನಮ್ಮ ವಿವಿಧ ರೀತಿಯ ದುರಾಸೆ ಮತ್ತು ದುರುದ್ದೇಶಗಳಿಂದ ಕೂಡಿದ ಕಾಯದಲ್ಲಿ ಲಿಂಗ ಸಿಕ್ಕಿ ಹಾಕಿ ಕೊಂಡಿರುವುದರಿಂದ, ಹಾಗೂ ಲಿಂಗವನ್ನು ಮರೆತು ನಮ್ಮ ಪೋಷಣೆಗೆ ನಾವು ಗಮನ ಕೊಡುವುದರಿಂದ, ಲಿಂಗವು ವಿಷ್ಣುವಿನ ಸ್ಥಿತಿಯಿಂದ ಬಿಡುಗಡೆ ಹೊಂದಿಲ್ಲವೆಂದರ್ಥ. (ವಿಷ್ಣು ಜಗತ್ತನ್ನು ರಕ್ಷಿಸುವಂತೆ ನಾವು ನಮ್ಮನ್ನು ಪೋಷಿಸಿ, ರಕ್ಷಿಸಿಕೊಳ್ಳುತ್ತೇವೆ. ಆದುದರಿಂದ ನಮ್ಮಲ್ಲಿರುವ ಲಿಂಗವು ಸ್ಥಿತಿಗೆ ಒಳಗಾಗಿದೆ.) (೮:೧೭೬೭)

**ವಿಷ್ಣುರೂಪು :** ರೂಪಿಲ್ಲದ ಲಿಂಗಕ್ಕೆ (ಪರಶಿವನಿಗೆ) ವಿಷ್ಣುವಿನ ರೂಪನ್ನು ಆರೋಪಿಸುವುದು. (೯:೧೪೩)

**ವಿಷ್ಣುವಿನ ಪಾಶಕ್ಕೊಳಗಾಗುವುದು :** ವಿಷ್ಣುವೆಂದರೆ ಸ್ಥಿತಿಕರ್ತ. ಇನ್ನೊಂದರ್ಥದಲ್ಲಿ ವಿಷ್ಣುವು ಜ್ಞಾನಶಕ್ತಿಯ ಅಧಿದೇವತೆ. ಕೆಲವರು ತಮ್ಮ ಜೀವನವನ್ನು ಮುಂದುವರೆಸಲು ಲಿಂಗಪೂಜೆಯನ್ನು ಉಪಯೋಗಿಸಿಕೊಳ್ಳುತ್ತಾರೆ. ಅಂಥ ಲಿಂಗಪೂಜಕರು ಮಾಡುವ ಪ್ರಯತ್ನಗಳಿಗೆ ಜ್ಞಾನಶಕ್ತಿ ಬೇಕು. ಇದರ ದುಷ್ಟ ಪ್ರಭಾವದಿಂದಾಗಿ ಮನುಷ್ಯನು ಅನೇಕ ರೀತಿಯ ಕರ್ಮಗಳನ್ನು ಮಾಡಿ ಬಂಧನಕ್ಕೊಳಗಾಗುವುದರಿಂದ, ಅವರು ಲಿಂಗಪೂಜೆಯ ಮೂಲಕ ಪರಶಿವನನ್ನು ಕಾಣಲು ಸಾಧ್ಯವಿಲ್ಲ. ಅವರು ವಿಷ್ಣುವಿನ ಪಾಶಕ್ಕೊಳಗಾಗಿಯೇ ಇರುತ್ತಾರೆ. (೮:೧೭೨೫)

**ವಿಷ್ಣುವಿನ ಸಂತೋಷಕ್ಕೆ ಸಿಕ್ಕದಿರುವುದು :** ವಿಷ್ಣುವು ಶಿವನ ಆಜ್ಞೆಯ ಮೇರೆಗೆ ಜಗತ್ತನ್ನು ರಕ್ಷಿಸುತ್ತಾನೆ. ನಾವೂ ನಮ್ಮನ್ನು ರಕ್ಷಿಸಿಕೊಳ್ಳಲು ಅಥವಾ ಪ್ರಾಪಂಚಿಕ ಸುಖ ಪಡೆಯಲು ಹಾತೊರೆಯುತ್ತಿರುತ್ತೇವೆ. ಹೀಗೆ ಪ್ರಾಪಂಚಿಕ ಸುಖಕ್ಕೆ ಹಾತೊರೆಯದಿರುವುದೇ ವಿಷ್ಣುವಿನ ಸಂತೋಷಕ್ಕೆ ಸಿಕ್ಕದಿರುವುದು ಎಂಬುದಕ್ಕರ್ಥ. ಇದು ಜೀವನ್ಮುಕ್ತನಿಗಷ್ಟೇ ಸಾಧ್ಯ. (೭:೧೩೦೮)

**ವಿಷ್ಣುವಿನ ಸ್ಥಿತಿ :** ಬ್ರಹ್ಮನು ಸೃಷ್ಟಿಸಿದ ಜಗತ್ತನ್ನು ವಿಷ್ಣುವು ರಕ್ಷಿಸುತ್ತಾನೆ. ರಕ್ಷಣಾ ಕಾರ್ಯಕ್ಕೆ ಸ್ಥಿತಿ ಎಂದೂ ಹೆಸರು. ವಿಷ್ಣುವಿನ ಸ್ಥಿತಿಗೂ ಲಿಂಗಕ್ಕೆ ಮಾಡುವ ನೈವೇದ್ಯಕ್ಕೂ ಇಲ್ಲಿ ಮೋಳಿಗೆ ಮಾರಯ್ಯ ಸಂಬಂಧ ಕಲ್ಪಿಸಿದ್ದಾನೆ. ವಿಷ್ಣುವು ಜಗತ್ತನ್ನು ರಕ್ಷಿಸಿದಂತೆ ನಾವೂ ನಮ್ಮ ದೇಹವನ್ನು ರಕ್ಷಿಸಿಕೊಳ್ಳುತ್ತೇವೆ. ಆದರೆ ಕೇವಲ ದೇಹ ಪೋಷಣೆಗೋಸ್ಕರ ನಾವು ನೈವೇದ್ಯ (ಪ್ರಸಾದ) ಭುಂಜಿಸಿದರೆ ಭಕ್ತಿ ಮಾಡಿದಂತಾಗುವುದಿಲ್ಲ. ಆದ್ದರಿಂದ ನಿಜವಾದ ಭಕ್ತಿ ಮಾಡುವವನು ದೇಹರಕ್ಷಣಾ ಭಾವವನ್ನು, ಅಂದರೆ ವಿಷ್ಣುವಿನ ಸ್ಥಿತಿಯನ್ನು, ಬಿಟ್ಟು ಲಿಂಗಕ್ಕೆ ನೈವೇದ್ಯ ಮಾಡಿರಬೇಕು. (೮:೧೯೬೫)

**ವಿಷ್ಣುವಿನ ಹಂಗು :** ವಿಷ್ಣುವು ಹೇಗೆ ಸ್ಥಿತಿಯಲ್ಲಿ ನಿರತನಾಗಿರುತ್ತಾನೊ ಹಾಗೆಯೇ, ಜಂಗಮನೂ ಸಹ ಕೇವಲ ದೇಹ ರಕ್ಷಣೆಯಲ್ಲೇ ನಿರತನಾಗಿದ್ದರೆ, ಜಂಗಮ ಮಾಡುವ ಕಾರ್ಯಗಳೆಲ್ಲಾ ವ್ಯರ್ಥ. ಆಗ ಅವನು ವಿಷ್ಣುವಿನ ಹಂಗಿನಲ್ಲಿದ್ದಾನೆಂದರ್ಥ. (೮:೧೯೬೬)

**ವಿಶುದ್ಧ ಚಕ್ರ :** ಕಂಠಸ್ಥಾನದಲ್ಲಿರುವ ಚಕ್ರ ಅಥವಾ ಪದ್ಮ. ಇದಕ್ಕೆ ಹದಿನಾರು ದಳಗಳಿವೆ. (ನೋಡಿ : **ಚಕ್ರಗಳು**)

**ವಿಶ್ವ :** ಇದಕ್ಕೆ ಜಗತ್ತು ಎಂಬ ಸಾಮಾನ್ಯ ಅರ್ಥವಿದ್ದರೂ, ಉಪನಿಷತ್ತುಗಳಲ್ಲಿ, 'ಜಾಗ್ರತಾವಸ್ಥೆಯಲ್ಲಿ ಸ್ಥೂಲ ತನುವಿನಲ್ಲಿ ವ್ಯಕ್ತವಾಗಿ, ವಿಶ್ವದೊಡನೆ ವ್ಯವಹರಿಸುವ ಆತ್ಮ', ಎಂಬ ಅರ್ಥವೂ ಇದೆ. ವಚನಕಾರರೂ ಈ ಪದವನ್ನು ಅದೇ ಅರ್ಥದಲ್ಲಿ ಬಳಸಿದ್ದಾರೆ. ಪಂಚಭೂತಗಳಲ್ಲಿ ಪೃಥ್ವಿ ಮತ್ತು ಅಪ್ಪು ಸ್ಥೂಲತಮವಾದ ಭೂತಗಳು. ಇವುಗಳು ಪ್ರಧಾನವಾಗಿರುವ ಶರೀರ ಸ್ಥೂಲ ಶರೀರ. ಆ ಸ್ಥೂಲ ಶರೀರಕ್ಕೆ ಕ್ರಿಯಾದೀಕ್ಷೆಯ ಮೂಲಕ ದೀಕ್ಷಾ ಗುರುವು ಇಷ್ಟಲಿಂಗ ಸಂಬಂಧವನ್ನು ಮಾಡುತ್ತಾನೆ. ಇಂಥ ಸ್ಥೂಲ ಶರೀರದಲ್ಲಿರುವ ಜೀವಾತ್ಮನು, ಜಾಗ್ರತಾವಸ್ಥೆಯಲ್ಲಿ ವಿಶ್ವ ಎನಿಸಿಕೊಳ್ಳುತ್ತಾನೆ. (ನೋಡಿ : ೯ : ೭೧೫, ೧೨೭೦). ಕ್ರಿಯಾ ದೀಕ್ಷೆಯೆಂದರೆ, ಪೂಜೆ ಅರ್ಪಣೆ, ಪ್ರಸಾದ ಸ್ವೀಕರಣೆ, ಮುಂತಾದ ಕ್ರಿಯೆಗಳ ಮೂಲಕ ಇಷ್ಟಲಿಂಗವನ್ನು ತೃಪ್ತಿಪಡಿಸಬೇಕೆಂಬ ಗುರುವಿನ ಆಣತಿ.

**ವಿಶ್ವತೋ ಮುಖಲಿಂಗ :** ಪರಶಿವನು ಎಲ್ಲೆಲ್ಲಿಯೂ ಇರುವುದರಿಂದ, ವಿಶ್ವದ ಪ್ರತಿಭಾಗವೂ ಅವನ ಮುಖವೇ ಆಗಿದೆ. ಅಂದರೆ, ಅವನು ಎಲ್ಲ ಕಡೆಯೂ ಏಕಕಾಲದಲ್ಲಿ ನೋಡಬಲ್ಲನು. (ಸರ್ವಜ್ಞ) ಎಂದರ್ಥ. (೭:೯೭೬)

**ವಿಶ್ವಪರಿಪೂರ್ಣ :** ಜಗತ್ತನ್ನು ಪೂರ್ಣವಾಗಿ ತುಂಬಿಕೊಂಡಿರುವವನು, ಪರಶಿವ. (೧:೧೩೧೯)

**ವಿಶ್ವಾಸ :** ಕೇವಲ ನಂಬದೆ, ಆ ನಂಬಿಕೆ ಸತ್ಯವೆಂದು ತಿಳಿಯುವುದು. (೯:೨೧೨)

**ವಿಶ್ವಾಸ ಭಕ್ತಿ :** ಷಟ್‌ಸ್ಥಳಗಳಲ್ಲಿ ಮೊದಲನೆಯ ಭಕ್ತಿ. ಶ್ರದ್ಧಾ ಅಥವಾ ಸದ್ಭಕ್ತಿ ಎಂಬ ಹೆಸರೂ ಇದಕ್ಕಿದೆ. (ನೋಡಿ : **ಭಕ್ತಿ, ಅಂಗಸ್ಥಲ-ಲಿಂಗಸ್ಥಲ ಸಂಬಂಧ**)

**ವೀರಮಾಹೇಶ್ವರ :** ಮಹೇಶ್ವರ ಸ್ಥಲದಲ್ಲಿರುವ ಸಾಧಕ. ಇಷ್ಟಲಿಂಗವನ್ನಲ್ಲದೆ ಮತ್ತೇನನ್ನೂ ಪೂಜಿಸುವುದಿಲ್ಲವೆಂದೂ, ಪರಧನ ಪರಸತಿ ಒಲ್ಲೆನೆಂದೂ, ಪ್ರತಿಜ್ಞೆ ಮಾಡುವುದು ಮಹೇಶ್ವರನ ಕರ್ತವ್ಯ.

**ವೀರಶೈವ :** ವೀರಶೈವನಾದವನಿಗೆ ಅಷ್ಟಾವರಣ, ಷಟ್‌ಸ್ಥಲ, ಪಂಚಾಚಾರಗಳ ಆಚರಣೆ ಆವಶ್ಯಕ (ನೋಡಿ:**ಅಷ್ಟಾವರಣ, ಪಂಚಾಚಾರ,ಲಿಂಗಾಂಗ ಸಾಮರಸ್ಯ**) ವೀರಶೈವನು ವೈದಿಕ ಸಂಪ್ರದಾಯದ ಯಜ್ಞಗಳನ್ನು ಆಚರಿಸುವುದಿಲ್ಲ. ಯಜ್ಞೋಪವೀತವನ್ನು ಧರಿಸುವುದಿಲ್ಲ, ಗಾಯತ್ರಿ ಮಂತ್ರವನ್ನು ಜಪಿಸುವುದಿಲ್ಲ, ಅವನಿಗೆ

ವರ್ಣಾಶ್ರಮಧರ್ಮಗಳಲ್ಲಿ ನಂಬಿಕೆಯಿಲ್ಲ. ಗುಡಿಗಳಲ್ಲಿ ಪ್ರತಿಷ್ಠಿತವಾಗಿರುವ ಮೂರ್ತಿಗಳನ್ನು ಆರಾಧಿಸುವುದಿಲ್ಲ. ಹಿಂದೆ ಅನೇಕ ಸಾರಿ ಪುನರ್ಜನ್ಮವೆತ್ತಿದ್ದರೂ, ವೀರಶೈವನಾದ ಮೇಲೆ ಪುನರ್ಜನ್ಮವಿಲ್ಲ. ಬೇರೆಜಾತಿಯವರೂ ವೀರಶೈವರಾಗಬಹುದು (೩:೧೯೫)

**ವೀರಶೈವಗುರು :** ವೀರಶೈವ ತಂದೆತಾಯಿಗಳಿಗೆ ಹುಟ್ಟಿದ ಶಿಶುವಿಗಾಗಲಿ ವೀರಶೈವರಾಗಬೇಕೆಂದು ಬಯಸಿದ ಬೇರೆ ಜಾತಿಯವರಿಗಾಗಲಿ ಲಿಂಗ ದೀಕ್ಷೆ ಕೊಡುವ ಗುರು ಮಾತ್ರ ವೀರಶೈವನೇ ಆಗಿರಬೇಕು. ವೀರಶೈವರಲ್ಲದ ಗುರುಗಳಿಂದ ಪಡೆದ ಲಿಂಗದೀಕ್ಷೆಗೆ ಮಾನ್ಯತೆಯಿಲ್ಲವೆಂದು ವಚನಕಾರರು ಒತ್ತಿ ಹೇಳುತ್ತಾರೆ.

**ವೀರಶೈವ ದೀಕ್ಷೆ :** ವೀರಶೈವ ತಂದೆ ತಾಯಿಗಳಿಗೆ ಜನಿಸಿದವರೆಲ್ಲಾ ವೀರಶೈವರಲ್ಲ, ಅಂಥವರೂ ಭವಿಗಳೆನಿಸಿಕೊಳ್ಳುತ್ತಾರೆ. ಅವರೂ ಸಹ ವೀರಶೈವಗುರುವಿನಿಂದ ಲಿಂಗದೀಕ್ಷೆಯ ಮುಂಖಾಂತರ ವೀರಶೈವದೀಕ್ಷೆ ಪಡೆಯಬೇಕು. ವೀರಶೈವೇತರರೂ ಸಹ ವೀರಶೈವ ದೀಕ್ಷೆಯಿಂದಾಗಿ ವೀರಶೈವರಾಗಬಹುದು. ವೀರಶೈವ ದೀಕ್ಷೆಯ ಮೂಲಕ ವೀರಶೈವರಾದವರಿಗೆ ಪೂರ್ವಾಶ್ರಯದ ಬಂಧನಗಳಿಲ್ಲ. ವೀರಶೈವ ಧರ್ಮದ ಎಲ್ಲ ನಿಯಮಗಳನ್ನೂ ಪಾಲಿಸಿದರೆ, ಅವರಿಗೆ ಲಿಂಗಾಂಗ ಸಾಮರಸ್ಯ ಪ್ರಾಪ್ತವಾಗಿ, ಅವರಿಗೆ ಮತ್ತೆ ಪುನರ್ಜನ್ಮವಿರುವುದಿಲ್ಲ ಎಂಬುದು ವಚನಕಾರರ ಸಿದ್ಧಾಂತ.

**ವೀರಶೈವ ಲಿಂಗ :** ಪ್ರಾಣಲಿಂಗ. "ಅರಿವಿನ ಮನದ ಕೊನೆಯಲ್ಲಿ ನಿತ್ಯನಿವಾಸವಾಗಿ ಪೂಜಿಸಿಕೊಂಬುದು ವೀರಶೈವ ಲಿಂಗ" (೭:೫೪೨) ಎಂಬಲ್ಲಿ, ಮನಸ್ಸಿನಲ್ಲಾಗಲೇ ಪ್ರತಿಷ್ಠಾಪಿತವಾಗಿರುವ ಲಿಂಗ ಎಂಬರ್ಥವಿದೆ.

**ವೃಷಭ :** ಪೌರಾಣಿಕ ಪರಿಭಾಷೆಯಲ್ಲಿ ವೃಷಭ ಕೈಲಾಸದಲ್ಲಿರುವ ಒಬ್ಬ ಪ್ರಮಥನಾದರೂ ಅಥವಾ ಶಿವನ ವಾಹನವಾದರೂ, ವಚನ ಪರಿಭಾಷೆಯಲ್ಲಿ ಈ ಪದಕ್ಕೆ ಒಂದು ವಿಶಿಷ್ಟ ಅರ್ಥವಿದೆ. ಐಕ್ಯಸ್ಥಲವನ್ನು ತಲುಪಿದವನು ಅಹಂಭಾವವನ್ನು ಕಳೆದುಕೊಂಡು, ತಾನು ಮಾಡುವ ಪ್ರತಿ ಯೋಚನೆ, ನಿರ್ಧಾರ, ಮಾತು, ಕಾರ್ಯಗಳೆಲ್ಲವೂ ಶಿವನೇ ತನ್ನ ಮೂಲಕ ಮಾಡಿಸುತ್ತಾನೆಂದು ತಿಳಿದುಕೊಳ್ಳುತ್ತಾನೆ. ಅವನ ದೇಹ, ಇಂದ್ರಿಯ, ಇತ್ಯಾದಿಗಳೆಲ್ಲಾ ಶಿವನ ಅಂಗಗಳು, ಅಥವಾ ತಾನೊಬ್ಬ ಶಿವ ನಡೆಸುವ ಒಂದು ವಾಹನ. ಶಿವನ ವಾಹನವಾದ ವೃಷಭ ನಡೆಯುವುದು ಶಿವನ ಇಚ್ಛೆಯ ಪ್ರಕಾರ ಹೇಗೋ, ಹಾಗೆಯೇ ಐಕ್ಯನು ಯೋಚಿಸುವುದು, ಸುಖಿಸುವುದು, ಹಾಗೂ ಇತರ ಕಾರ್ಯಗಳನ್ನು ಮಾಡುವುದೂ ಶಿವನ ಇಚ್ಛೆಯಂತೆಯೇ. ಆದುದರಿಂದ ಐಕ್ಯನು ಶಿವನ ವಾಹನ ವೃಷಭ.

**ವೇದ ಘಾತಕ :** ವೇದಗಳ ಬೋಧನೆಗೆ ವಿರುದ್ಧವಾಗಿ ನಡೆದುಕೊಳ್ಳುವವನು, ಅಧರ್ಮಿ.

**ವೇದಪಾತಕ :** ವೇದಗಳನ್ನು ಪಠಿಸಿ, ಅದರಂತೆ ನಡೆದುಕೊಳ್ಳದೇ ಇರುವವನು. (೨:೭೭೪)

**ವೇದ್ಯ :** ಅರ್ಪಣೆ, ನೈವೇದ್ಯ. (ಎನ್ನ ತನುಮನವೆರಡೂ ನಿನ್ನ ಚರಣಕ್ಕೆ ವೇದ್ಯ ೧:೧೩೧೧)

**ವೇಧಾದೀಕ್ಷೆ :** ಲಿಂಗದ ರಹಸ್ಯವನ್ನು ವೇಧಿಸುವ ಕ್ರಮ. ಇದನ್ನು ಜ್ಞಾನಗುರು ಅಥವಾ ಅನುಭಾವವನ್ನು ಪಡೆದ ಐಕ್ಯ ಮಾತ್ರ ತಿಳಿಸಿಕೊಡಬಲ್ಲ.

**ವೇಷಧಾರಿ :** ಜಂಗಮರಂತೆ ವೇಷ ತೊಟ್ಟು, ಜಂಗಮರ ಗುಣಗಳಿಲ್ಲದ ಜಂಗಮರು. (೫:೬೦೭)

**ವೇಷಲಾಂಛನಧಾರಿ :** ಬಾಹ್ಯ ಸಂಕೇತಗಳಾದ ಕಾವಿಬಟ್ಟೆ, ರುದ್ರಾಕ್ಷಿ, ವಿಭೂತಿ, ಮುಂತಾದವುಗಳನ್ನು ಧರಿಸಿ, ಕೈಯಲ್ಲಿ ಭಿಕ್ಷಾ ಪಾತ್ರೆ ಅಥವಾ ಜೋಳಿಗೆ, ಕಮಂಡಲು, ಕೋಲುಗಳನ್ನು ಹಿಡಿದವನು. ಇವೆಲ್ಲವೂ ಸಂನ್ಯಾಸದ ಲಾಂಛನಗಳು. ಆದರೆ ಇವಾವೂ ಇವನ್ನು ಧರಿಸಿದವನ ಮಾನಸಿಕ ಸ್ಥಿತಿಯನ್ನು ಪ್ರತಿಬಿಂಬಿಸುವುದಿಲ್ಲ.

**ವೇಳೆವಾಳಿ :** ಸಮಯ (ವ್ರತನೇಮ) ಇತ್ಯಾದಿಯನ್ನು ಪಾಲಿಸುವವನು. ಇವನು ಆಳೇ ಆಗಿದ್ದರೂ, ಶಿವನ ದಾಸನೇ ಹೊರತು, ಮಾನವರ ದಾಸನಲ್ಲ.

**ವ್ಯಾನ :** ವಾಯುಗಳಲ್ಲಿ ಇದೂ ಒಂದು. (ನೋಡಿ : **ದಶವಾಯುಗಳು**).

**ವ್ಯಾಪಾರದ ಲತೆ :** ವ್ಯಾವಹಾರಿಕ ಅಥವಾ ಪ್ರಾಪಂಚಿಕ ಜೀವನ. (೮:೧೮೪೮)

**ವ್ಯೋಮಾಮೃತ ಪ್ರಸಾದ :** ಬ್ರಹ್ಮರಂಧ್ರದಲ್ಲಿ (ಚಿದಾಕಾಶದಲ್ಲಿ) ಒಸರುವ ಅಮೃತ. ತನ್ನ ಆತ್ಮವನ್ನೇ ಸಮರ್ಪಣ ಮಾಡಿಕೊಂಡವನಿಗಷ್ಟೆ ಇದನ್ನು ಪ್ರಸಾದ ಮಾಡಿಕೊಂಡು ಸ್ವೀಕರಿಸಲು ಸಾಧ್ಯ. (೧೧:೬೬೨)

**ವ್ರತ :** ವ್ರತವೆಂದರೆ, ತನ್ನ ಆಧ್ಯಾತ್ಮಿಕ ಜೀವನದ ಪ್ರಗತಿಗೆ ಸಹಾಯಕವಾಗುವಂತ ಕೆಲಸವನ್ನು ತಪ್ಪದೆ ಮಾಡುತ್ತೇನೆಂಬ ಪ್ರತಿಜ್ಞೆ. ಉದಾಹರಣೆಗೆ ಉಪವಾಸ ವ್ರತ. ವಾಸ್ತವವಾಗಿ ಉಪವಾಸ ಮಾಡುತ್ತೇವೆಂದು ಹೇಳಿ ಅನ್ನ ಅಥವಾ ರೊಟ್ಟಿಯನ್ನು ಬಿಟ್ಟು ಉಳಿದ ತಿನಿಸುಗಳನ್ನು ಹೊಟ್ಟೆ ತುಂಬಾ ಸೇವಿಸಿವುದು ಉಪವಾಸವಿನಿಸಿಕೊಳ್ಳುವುದಿಲ್ಲ. ಒಂದು ವೇಳೆ ಕಟ್ಟು ನಿಟ್ಟಿನ ಉಪವಾಸ ಮಾಡಿದರೂ ಅದು ಆಧ್ಯಾತ್ಮಿಕ ಪ್ರಗತಿಗೆ ಸಹಾಯಕವಾಗುವುದಿಲ್ಲ. ಆದರೆ ಉಪವಾಸ ವ್ರತದ ಹಿಂದಿರುವ ಉದ್ದೇಶ ಒಂದು ಹೊತ್ತಿಗಾದರೂ ಆಹಾರದ ಮೇಲಿನ ಆಸೆಯನ್ನು ಕಡಿಮೆ ಮಾಡಿಕೊಳ್ಳಬೇಕು (ಮತ್ತು ಲಿಂಗದ ಮೇಲಿನ ಆಸೆಯನ್ನು ತೀವ್ರಗೊಳಿಸಿಕೊಳ್ಳಬೇಕು) ಎಂಬುದು. ಇಂತಹ ವ್ರತಗಳ ಮೂಲಕ ನಮ್ಮ ಸ್ವಾರ್ಥ ಉದ್ದೇಶಗಳು ಕಡಿಮೆಯಾಗಿ ನಮ್ಮ ಮನಸ್ಸು ಅಥವಾ ಆತ್ಮ ಶುದ್ಧವಾಗುತ್ತಾ ಹೋಗುತ್ತದೆ. ಕಾಮ ಕ್ರೋಧಾದಿಗಳಿಲ್ಲದ ಶುದ್ಧ ಆತ್ಮವು ಪರಮಾತ್ಮನ ವಾಸಕ್ಕೆ ಯೋಗ್ಯ. ಜೊತೆಗೆ ತಾವು ವ್ರತಿಗಳೆಂದು ಹೇಳದಿಹುದೇ ವ್ರತ. ಗುರುಲಿಂಗಜಂಗಮವ ದೂಷಿಸದಿಹುದೇ ವ್ರತ. ಸಹಪಂಕ್ತಿಯಲ್ಲಿ ವಿಶೇಷವಕೊಳದಿಪ್ಪುದೇ ವ್ರತ, ಮುಂತಾದವುಗಳೂ ವ್ರತಗಳಾಗಬೇಕು ಎಂದು ವಿಧಿಸುತ್ತಾನೆ ಮೋಳಿಗೆ ಮಾರಯ್ಯ. (೮:೧೮೧೪)

**ವ್ರತ, ನೇಮ, ಶೀಲ :** ಆಚಾರವು ಸಾಮಾನ್ಯವಾದರೆ ವ್ರತವು ವಿಶಿಷ್ಟ. ಲಿಂಗಾಯತರೆಲ್ಲರೂ ಲಿಂಗಪೂಜೆ ಮಾಡುವುದು ಸಾಮಾನ್ಯ. ಮೌನವ್ರತ, ಸ್ವರ್ಣಗೌರೀವ್ರತ, ಮುಂತಾದ ವ್ರತಗಳನ್ನು ಆಚರಿಸುವುದು ವಿಶಿಷ್ಟ ಸಂದರ್ಭಗಳಲ್ಲಿ. ವಿಶಿಷ್ಟ ರೀತಿಯಲ್ಲಿ ಮಾಡುವ ಅರ್ಚನೆ (ಉದಾ : ಕುಂಕುಮಾರ್ಚನೆ) ಅಥವಾ ಅರ್ಪಣೆ (ಉದಾ : ವಿಶಿಷ್ಟ ಭೋಜ್ಯಗಳನ್ನು ಅರ್ಪಿಸುವುದು) ಇವೆಲ್ಲ ವ್ರತಗಳ ವಿವಿಧ ಪ್ರಕಾರಗಳು. ಸೋಮವಾರ ಊಟ ಮಾಡುವುದಿಲ್ಲ ಅಥವಾ ಒಂದೇ ಹೊತ್ತು ಊಟ ಮಾಡುತ್ತೇನೆ ಎಂಬುದು ಕೆಲವರ ವ್ರತ. ಛಳಿಗಾಲದಲ್ಲಿ ತಣ್ಣೀರಲ್ಲಿ ಸ್ನಾನಮಾಡಿ ಒದ್ದೆ ಬಟ್ಟೆಯಲ್ಲೇ ಅಡುಗೆ ಮಾಡುತ್ತೇನೆ ಎಂಬುದು ಕೆಲವರ ವ್ರತ. ಈ ಇಡೀ ತಿಂಗಳು ಬಾಳೆಹಣ್ಣು ತಿನ್ನುವುದಿಲ್ಲ, ಈ ತಿಂಗಳು ಮುಖಕ್ಷೌರ ಮಾಡಿಕೊಳ್ಳುವುದಿಲ್ಲ ಎಂಬುದು ಕೆಲವರ ವ್ರತ, ಭಾನುವಾರ ಮಾತನಾಡುವುದಿಲ್ಲ (ಮೌನ) ಎಂಬುದು ಕೆಲವರ ವ್ರತ. ಹೀಗೆ ವ್ರತಕ್ಕೆ ನಾನಾ ಮುಖಗಳುಂಟು.

ವ್ರತವನ್ನು ಆಚರಿಸುವುದು ಮುಖ್ಯವಾಗಿ ಎರಡು ಉದ್ದೇಶಗಳಿಗಾಗಿ. ಮೊದಲನೆಯದು ಇಂದ್ರಿಯ ನಿಗ್ರಹ, ಎರಡನೆಯದು ಆಧ್ಯಾತ್ಮಿಕ ಪ್ರಗತಿ. ಉದಾಹರಣೆಗೆ ವಿಷಯಲೋಲುಪತೆಯಲ್ಲಿ ಮುಳುಗಿ ತಮ್ಮ ಆಸೆಗಳನ್ನು ಕಡಿಮೆ ಮಾಡಿಕೊಳ್ಳಬೇಕೆನ್ನುವರು ವಾರದಲ್ಲೊಂದು ದಿನ ಮದ್ಯಪಾನ ಮಾಡುವುದಿಲ್ಲ ಅಥವಾ ಮಾಂಸಭಕ್ಷಣೆ ಮಾಡುವುದಿಲ್ಲ, ಮುಂತಾದ ವ್ರತಗಳನ್ನು ಮಾಡುವುದು ಒಳ್ಳೆಯದೇ. ಅವರು ಇದೇ ವ್ರತವನ್ನು ವಾರದಲ್ಲಿ ಎರಡು ಸಾರಿ ಆಚರಿಸಿ, ಮತ್ತೆ ಕೆಲವು ತಿಂಗಳಾದ ಬಳಿಕ, ವಾರದಲ್ಲಿ ಮೂರುಬಾರಿ ಆಚರಿಸಿ, ಕೊನೆಗೆ ಅದನ್ನು ವಾರದ ಏಳು ದಿವಸಗಳಿಗೆ ವಿಸ್ತರಿಸಿದರೆ, ಆ ವ್ರತದ ಮೂಲಕ ಆ ಒಂದು ಆಸೆಯನ್ನು ಗೆಲ್ಲಬಹುದು. ಅದೇ ರೀತಿ, ಅರಿಷಡ್ವರ್ಗಗಳಿಗೂ ವ್ರತದ ಮೂಲಕ ಕಡಿವಾಣ ಹಾಕಿ, ಕೊನೆಗೆ ಅವುಗಳ ಮೇಲೂ ನಿಯಂತ್ರಣ ಸಾಧಿಸಬಹುದು. ಆದರೆ ಜೀವಮಾನವೆಲ್ಲ ಸೋಮವಾರ ಮಾತ್ರ ಮಾಂಸಭಕ್ಷಣೆ ವರ್ಜ್ಯ ಮಾಡುವವರು ಅಂತಹ ವ್ರತದಿಂದ ಇಂದ್ರಿಯ ನಿಗ್ರಹವನ್ನೂ ಸಾಧಿಸುವುದಿಲ್ಲ, ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸುವುದಿಲ್ಲ. ಏಕೆಂದರೆ, ಇಂದ್ರಿಯ ನಿಗ್ರಹವಿಲ್ಲದೆ, ಆತ್ಮಶುದ್ಧಿ ಸಾಧ್ಯವಿಲ್ಲ, ಆತ್ಮಶುದ್ಧಿಯಿಲ್ಲದೇ ಆಧ್ಯಾತ್ಮಿಕ ಗುರಿಯೂ ಅಸಾಧ್ಯ. ಆದುದರಿಂದ ವ್ರತಗಳೂ ಆಚಾರಗಳಂತೆ ಸಾಮಾನ್ಯವಾಗಿರಬೇಕೇ ಹೊರತು, ಕಾಲಕ್ಕೆ ಸೀಮಿತವಾಗಿರಬಾರದು.

ಇನ್ನು ಕೆಲವರು ಉಪವಾಸ ವ್ರತ ಮಾಡುತ್ತೇವೆಂದು, ಮತ್ತೆ ಕೆಲವರು ಒಪ್ಪತ್ತು ಮಾಡುತ್ತೇವೆಂದು, ಮತ್ತೆ ಕೆಲವರು ಸಂಕಷ್ಟಿ ಮಾಡುತ್ತೇವೆಂದು, ಅನ್ನ ರೊಟ್ಟಿ, ಚಪಾತಿ ಮುಂತಾದ ದೈನಂದಿನ ಆಹಾರಗಳನ್ನು ವರ್ಜಿಸಿ, ಅವುಗಳ ಬದಲು ಉಪ್ಪಿಟ್ಟು, ಅವಲಕ್ಕಿ, ಹಣ್ಣು, ಖರ್ಜೂರ, ಇತ್ಯಾದಿಗಳನ್ನು ಹೊಟ್ಟೆ ತುಂಬಾ ತಿನ್ನುತ್ತಾರೆ. ಆದರೆ ಇದು

ಉಪವಾಸ ವ್ರತವಲ್ಲ. ಉಪವಾಸ ವ್ರತದ ಉದ್ದೇಶವೂ ಸಹ, ಹಸಿವು, ತೃಷೆ ಮುಂತಾದ ಮೂಲಪ್ರವೃತ್ತಿಗಳನ್ನು ಜಯಿಸಬೇಕೆಂಬುದೇ. ಆದರೆ ಉಪವಾಸದ ಹೆಸರಿನಲ್ಲಿ ಉಪ್ಪಿಟ್ಟು, ಅವಲಕ್ಕಿ, ಇತ್ಯಾದಿಗಳನ್ನು ಹೇರಳವಾಗಿ ತಿಂದರೆ, ಹಸಿವು ತೃಷೆಯನ್ನು ಗೆಲ್ಲಲು ಸಾಧ್ಯವೇ ಇಲ್ಲ. ಅಲ್ಲದೇ , ಇಂಥ ವ್ರತಗಳ ಉದ್ದೇಶವೇನೆಂಬುದೇ ಕೆಲವರಿಗೆ ಗೊತ್ತಿಲ್ಲವಾದುದರಿಂದ, ಅಂಥವರ ವ್ರತಗಳು ಉದ್ದೇಶವಿಲ್ಲದೇ ಹೊರಟ ಕುರುಡನ ನಡಿಗೆಯಂತೆ ನಿಷ್ಪ್ರಯೋಜಕ.

ವ್ರತಗಳ ಹೆಸರಿನಲ್ಲಿ ಕೆಲವರು ಅರ್ಥವಿಲ್ಲದ ಆಚಾರಗಳನ್ನು ರೂಢಿಸಿಕೊಳ್ಳುತ್ತಾರೆ. ಭವಿಗಳ ಮನೆಯಲ್ಲಿ ಊಟ ಮಾಡುವುದಿಲ್ಲ. (ಆದರೆ ಅವರು ಕೊಟ್ಟ ಪಡಿ ಸ್ವೀಕರಿಸಿದರೆ ದೋಷವಿಲ್ಲ); ಉಪ್ಪನ್ನು ತಿನ್ನುವುದಿಲ್ಲ; ಪೂಜೆಗೆ ಚಿಲುಮೆಯ ನೀರನ್ನು ಮಾತ್ರ ಬಳಸುತ್ತೇನೆ; ಲಿಂಗಕ್ಕೆ ಆಕಳ ಹಾಲನ್ನೇ ನೈವೇದ್ಯ ಮಾಡುತ್ತೇನೆ; ಪರಿಮಳವನ್ನು ವಸ್ತ್ರಕ್ಕೆ ಸಿಂಪಡಿಸಿಕೊಳ್ಳುವುದಿಲ್ಲ ಅಥವಾ ಮೈಮೇಲೆ ಲೇಪಿಸಿಕೊಳ್ಳುವುದಿಲ್ಲ, ಲಿಂಗಪೂಜೆಗೆ ಕೆಂಪು ಹೂಗಳೇ ಶ್ರೇಷ್ಠ; ಮುಂತಾದವುಗಳು ಕೆಲವು. ಭಕ್ತ ಉಪ್ಪು ತಿನ್ನುವುದನ್ನು ಬಿಟ್ಟರೆ ಶಿವನಿಗೆ ಹೇಗೆ ಸಂತೋಷವಾಗುತ್ತದೆ? ನಿತ್ಯತೃಪ್ತನಾದ ಶಿವನಿಗೆ ನಾವು ನೈವೇದ್ಯ ಮಾಡುವ ಅರ್ಧ ಲೋಟ ಹಾಲಿನಿಂದ ಇನ್ನೂ ಹೆಚ್ಚಿನ ತೃಪ್ತಿಯಾಗುತ್ತದೆಯೇ? ಉಪ್ಪು ತಿನ್ನದವರನ್ನೂ ಹಾಲು ನೈವೇದ್ಯ ಮಾಡಿದವರನ್ನೂ ಶಿವ ಮೆಚ್ಚಿಕೊಳ್ಳುತ್ತಾನೆಯೇ? ಇಂಥ ವ್ರತಾಚರಣೆಗಳನ್ನು ಶರಣರು ಕಟುವಾಗಿ ಟೀಕಿಸಿದ್ದಾರೆ. ಅವರ ಪ್ರಕಾರ, ಪರದ್ರವ್ಯ, ಪರಸತಿಯರಿಗೆ ಆಸೆ ಮಾಡುವುದನ್ನೂ, ಹುಸಿ, ಕೊಲೆ, ಕಳವು ಮಾಡುವುದನ್ನೂ ವರ್ಜಿಸುತ್ತೇವೆಂದು ವ್ರತಮಾಡಬೇಕೇ ಹೊರತು, ಈ ರೀತಿ ಅರ್ಥರಹಿತ ವ್ರತಗಳನ್ನು ಮಾಡುತ್ತೇವೆಂದಲ್ಲ. ಪ್ರಾಯಶಃ ನಮ್ಮ ಅಜ್ಞಾನವೂ ಈ ವ್ರತಾಚಾರಕ್ಕೆ ಕಾರಣವಾಗಿದ್ದೀತು. ಅದಕ್ಕೆ ಅಲ್ಲಮ ಪ್ರಭು "ಸುಖವನರಿಯದ ಕಾರಣ ಹೆಂಗುಸು ಸೂಳೆಯಾದಳು, ಶಿವಲಿಂಗವನರಿಯದ ಕಾರಣ ಭಕ್ತ ಶೀಲವಂತನಾದ" ಅಥವಾ ವ್ರತಸ್ಥನಾದ ಎಂದು ಹೇಳಿದುದು. ಪರದ್ರವ್ಯ, ಪರಸತಿಯರಿಗೆ ಆಸೆ ಪಡುವುದು, ಮುಂತಾದ ದುರ್ಗುಣಗಳನ್ನು ತ್ಯಜಿಸುತ್ತೇನೆಂದು ಯಾರೂ ವ್ರತ ಕೈಗೊಳ್ಳುವುದಿಲ್ಲ. ಏಕೆಂದರೆ ಅದು ಬಹಳ ಕಠಿಣ; ಉಪ್ಪು ತಿನ್ನುವುದಿಲ್ಲ, ಹಾಲನ್ನೇ ನೈವೇದ್ಯ ಮಾಡುತ್ತೇನೆ. ಎಂಬ ವ್ರತ ಕೈಕೊಳ್ಳುವುದು ಸುಲಭ. ಆದರೆ ದುರ್ಗುಣ ವರ್ಜ್ಯದಿಂದಾಗುವ ಲಾಭ ವ್ರತಾಚರಣೆಗಿಲ್ಲ.

ವಚನಕಾರರು ವ್ರತಗಳನ್ನು ಶೀಲ ಮತ್ತು ನೇಮಗಳಿಂದ ಪ್ರತ್ಯೇಕಿಸದೆ, ಅವು ಮೂರನ್ನು ಸಮೀಕರಿಸುವುದು ಆಶ್ಚರ್ಯ. ಉದಾಹರಣೆಗೆ ಈ ಕೆಳಗಿನ ವಚನಗಳನ್ನು ಗಮನಿಸಿ,

೧. ಬಂದುದ ಕೈಕೊಳ್ಳಬಲ್ಲಡೆ ನೇಮ; ವಂಚನೆಯ ಮಾಡದಿಪ್ಪುದೇ ನೇಮ; ನಡೆದು ತಪ್ಪದಿದ್ದರೆ ನೇಮ; ನುಡಿದು ಹುಸಿಯದಿದ್ದರೆ ನೇಮ.

೨. ಭಕ್ತರ ಮಠಕ್ಕೆ ಹೋಗಿ, ಒಳಹೊರಗಿಂಬುದು ಶೀಲವೇ? ನಮ್ಮ ಲಿಂಗಕ್ಕೆ ಒಳ್ಳೆಯ ಅಗ್ಗಣಿ ತನ್ನಿ, ಒಳ್ಳೆಯ ಪುಷ್ಪವನ್ನು ತನ್ನಿ, ಒಳ್ಳೆಯ ಓಗರವ ಮಾಡಿರಿ ಎಂಬುದು ಶೀಲವೇ? ಅಲ್ಲ, ಪಂಚೇಂದ್ರಿಯ ಸಪ್ತಧಾತು ಅರಿಷಡ್ವರ್ಗ ಅಷ್ಟಮದವ ಕೊಂದಾತನೆ ಶೀಲವಂತ.

೩. ವ್ರತವನಾಶ್ರಯಿಸಿದ ಮೇಲೆ, ಹುಸಿ, ಕೊಲೆ, ಕಳವು, ಪರದಾರ ಮಾಡುವನ್ನಬರ ವ್ರತಸ್ಥನಲ್ಲದೆ ನೇಮಕ್ಕೆ ಸಲ್ಲ, ಅವಗಾಚಾರವಿಲ್ಲ.

೪. ಪರಧನವನೊಲ್ಲನಿಪ್ಪುದೇ ವ್ರತ; ಪರಸ್ತ್ರೀಯರ ಕೂಡದಿಪ್ಪುದೇ ಶೀಲ, ಸರ್ವಜೀವನ ಕೊಲ್ಲದಿಪ್ಪುದೇ ನೇಮ.

೫. ಮನ ಆರೋಚಕವಾದಲ್ಲಿ ಲವಣ ವಾರಿಯಾಗಿ ಪರಪಾಕ ಮುಂತಾದ ರಸದ್ರವ್ಯನೊಲ್ಲನಿಪ್ಪುದು ವ್ರತವೇ?.... ಪರದ್ರವ್ಯ, ಪರಸತಿ, ಹುಸಿ, ಕೊಲೆ, ಕಳವು ಅತಿಕಾಂಕ್ಷೆಯಂ ಬಿಟ್ಟು, ಬಂದುದ ನಿಂದುದ ಕಂಡು ಆಕಾಂಕ್ಷೆ ಮಾಡದಿಪ್ಪುದೆ ಅರವತ್ನಾಲ್ಕು ವ್ರತ, ಐವತ್ತಾರು ಶೀಲ, ಮೂವತ್ತೆರೆಡು ನೇಮ....

ದುರ್ಗುಣ ನಿರ್ಮೂಲನೆಗೆ ನೇಮವೆಂದು ಮೊದಲನೆಯ ವಚನವೂ, ಶೀಲವೆಂದು ಎರಡನೆಯ ವಚನವೂ, ವ್ರತವೆಂದು ಮೂರನೆಯ ವಚನವೂ ಹೇಳಿ, ಈ ಮೂರು ಪದಗಳಿಗೆ ಸಮಾನ ಅರ್ಥವಿದೆ ಎಂಬುದನ್ನು ಅವು ಖಚಿತಪಡಿಸುತ್ತವೆ. ನಾಲ್ಕು ಮತ್ತು ಐದನೆ ವಚನಗಳು ಇನ್ನೂ ಹೆಚ್ಚು ಸ್ಪಷ್ಟವಾಗಿ ಸಚ್ಚಾರಿತ್ರವೇ ಶೀಲ, ವ್ರತ ಮತ್ತು ನೇಮ ಎಂದು ಹೇಳಿವೆ.

ಇದರಿಂದ ಎರಡು ಅಂಶಗಳು ವ್ಯಕ್ತವಾಗುತ್ತವೆ. ೧. ನಿಜವಾದ ವ್ರತಶೀಲ ನೇಮಗಳು ಆಧ್ಯಾತ್ಮಿಕ ಜೀವನಕ್ಕೆ ಬಹಳ ಅಗತ್ಯ. ಅದಿಲ್ಲದೆ ಆತ್ಮಶುದ್ಧಿಯಿಲ್ಲ, ಆತ್ಮಶುದ್ಧಿಯಿಲ್ಲದವನಿಗೆ ಅನುಗ್ರಹ, ಅನುಭಾವ ಇಲ್ಲ; ಇವೆರಡೂ ಇಲ್ಲದೆ ಲಿಂಗಾಂಗ ಸಾಮರಸ್ಯವಿಲ್ಲ. ೨. ಚಿಲುಮೆಯ ನೀರು ಮಾತ್ರ ಪೂಜೆಗೆ ಯೋಗ್ಯ, ಭವಿಗಳ ಮನೆಯಲ್ಲಿ ಪ್ರಸಾದ ಸ್ವೀಕರಣೆ ಯೋಗ್ಯವಲ್ಲ, ಮುಂತಾದ ಬಾಹ್ಯ, ವ್ಯಾವಹಾರಿಕ ಆಚರಣೆಗಳು ವ್ರತಗಳೂ ಅಲ್ಲ, ಶೀಲಗಳೂ ಅಲ್ಲ ನೇಮಗಳೂ ಅಲ್ಲ; ಅವುಗಳಿಂದ ಆಧ್ಯಾತ್ಮಿಕ ಪ್ರಗತಿಯೂ ಆಗುವುದಿಲ್ಲ; ಆದುದರಿಂದ ಅವು ಅನಾವಶ್ಯಕ.

**ಶಕ್ತಿ :** ಜಗತ್ತಿನಲ್ಲಾಗುವ ಸಣ್ಣ ಸಣ್ಣ ಬದಲಾವಣೆಗಳಿಗೆ ಮನುಷ್ಯ, ಪ್ರಾಣಿ, ಸೂರ್ಯ, ಚಂದ್ರ, ಮುಂತಾದವುಗಳೇ ಕಾರಣವೆಂದು ನಾವು ನಂಬುತ್ತೇವೆ. ಆದರೆ ಇಡೀ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಪ್ರಲಯಗಳನ್ನು ಗಣನೆಗೆ ತೆಗೆದುಕೊಂಡರೆ ಮನುಷ್ಯ, ಪ್ರಾಣಿ, ಸೂರ್ಯ, ಚಂದ್ರ ಮುಂತಾದವುಗಳೇ ಕಾರಣವೆಂದು ಹೇಳುವುದು ಹಾಸ್ಯಾಸ್ಪದವಾಗುತ್ತದೆ, ಏಕೆಂದರೆ, ಆಗ ಈ ಕಾರಣಗಳೆ ಇನ್ನೂ ಸೃಷ್ಟಿಯಾಗಿರುವುದಿಲ್ಲ; ಮನುಷ್ಯ ಜಗತ್ತಿನ

ಪ್ರಳಯ ಮಾಡಲು ಸಾಧ್ಯವಿಲ್ಲ. ಆಗ ನಾವು ಇಂಥ ಜಾಗತಿಕ ಬದಲಾವಣೆಗಳಿಗೆ ಕಾರಣಗಳಾವವು ಎಂಬುದಕ್ಕೆ ಉತ್ತರ ಕೊಡಲು ಈ ಜಗತ್ತಿನ ಮೂಲ ವಸ್ತುವಾವುದೆಂಬುದನ್ನು ಹುಡುಕುತ್ತೇವೆ. ಇದಕ್ಕೆ ಸಾಂಖ್ಯರು ಪ್ರಕೃತಿ ಮತ್ತು ಪುರುಷರೇ (ಆತ್ಮಗಳೇ) ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣವೆಂದು ಹೇಳಿದರೆ, ಪೃಥ್ವಿ, ಅಪ್ಪು, ತೇಜ ಮತ್ತು ವಾಯು ಎಂಬ ನಾಲ್ಕು ಭೂತಗಳೆ ಕಾರಣವೆಂದು ಚಾರ್ವಾಕರು ನಂಬುತ್ತಾರೆ. ಈ ಎರಡು ಸಿದ್ಧಾಂತಗಳು ಪ್ರಕೃತಿ ಪುರುಷರಿಗಿಂತ ಮತ್ತು ಚತುರ್ಭೂತಗಳಿಗಿಂತ ಹೆಚ್ಚಿನ ತತ್ತ್ವವೇನೂ ಇಲ್ಲವೆಂದು ಪ್ರತಿಪಾದಿಸುವುದರಿಂದ, ಅವು ನಿರೀಶ್ವರವಾದಿ ಮತಗಳೆನಿಸಿಕೊಳ್ಳುತ್ತವೆ. ವಚನಕಾರರು ಈ ಸಿದ್ಧಾಂತಗಳನ್ನು ಖಂಡಿಸಿದ್ದಾರೆ.

ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳಿಗೆ ಪ್ರಕೃತಿ ಇತ್ಯಾದಿ ಮೂಲ ವಸ್ತುಗಳು ಬೇಕು ಎಂಬ ಮಾತನ್ನು ವಚನಕಾರರು ಒಪ್ಪುತ್ತಾರೆ. ಈ ಮೂಲವಸ್ತುವನ್ನು ಅವರು ಶಕ್ತಿ ಎಂದು ಕರೆದಿದ್ದಾರೆ. ಆದರೆ ಅವರ ಪ್ರಕಾರ ಶಕ್ತಿಯೊಂದೇ ಈ ಕೆಲಸಗಳನ್ನು ಮಾಡಲಾರದು. ಏಕೆಂದರೆ ಶಕ್ತಿಯು ಜಡ (ಅಚೇತನ) ವಸ್ತುವಾಗಿದ್ದು, ಅದು ತಂತಾನೆ ಪ್ರಪಂಚದ ವಿವಿಧ ವಸ್ತುಗಳನ್ನು ರಚಿಸಲು ಸಾಧ್ಯವಿಲ್ಲ. ಅದು ಯಾವಾಗ ಬದಲಾವಣೆಯಾಗಬೇಕು, ಯಾವ ಕಾಲಕ್ರಮದಲ್ಲಿ ಬದಲಾವಣೆಯಾಗಬೇಕು ಎಂಬುದನ್ನು ನಿರ್ಧರಿಸಿ, ನಿಯಂತ್ರಿಸಲು ಮಾರ್ಗದರ್ಶನ ನೀಡಲು, ಜಡಶಕ್ತಿಯಲ್ಲದ, ಆದರೆ ಜಡಶಕ್ತಿಗಿಂತ ಹೆಚ್ಚಿನ, ಚೈತನ್ಯ ''ಬೇಕಾಗುತ್ತದೆ. ಈ ಚೈತನ್ಯವನ್ನು ವಚನಕಾರರು ಹಲವಾರು ಹೆಸರುಗಳಿಂದ ಕರೆದಿದ್ದು, ಅವುಗಳಲ್ಲಿ ಒಂದಾದ 'ಪರಶಿವ' ಎಂಬುದನ್ನು ನಾವೀಗ ಆರಿಸಿಕೊಳ್ಳೋಣ.

ವಚನಕಾರರ ಪರಶಿವನು ಅದ್ವೈತಿಗಳ ಬ್ರಹ್ಮವಂತೆ ನಿರ್ಗುಣನಲ್ಲ. ಪರಶಿವನಿಗೆ ಅನೇಕ ಗುಣಗಳಿವೆ. ಅವೆಲ್ಲದನ್ನೂ 'ಶಕ್ತಿ' ಎಂಬ ಪದದಡಿಯಲ್ಲಿ ತರಬಹುದು. ಹಾಗಾದರೆ 'ಶಕ್ತಿ' ಎಂದರೇನು?.

ವಚನಗಳಲ್ಲಿ 'ಶಕ್ತಿ' ಎಂಬ ಪದಕ್ಕೆ ಕನಿಷ್ಠ ಎರಡು ವಿಭಿನ್ನ ಅರ್ಥಗಳಿವೆ. ಉದಾಹರಣೆಗೆ 'ಕುಂಬಾರನಿಗೆ ಮಡಕೆ ಮಾಡುವ ಶಕ್ತಿಯಿದೆ' ಮತ್ತು ಬೀಜಕ್ಕೆ ಮರವಾಗುವ ಶಕ್ತಿಯಿದೆ ಎಂಬ ಎರಡು ವಾಕ್ಯಗಳಲ್ಲಿ ಶಕ್ತಿ ಎಂಬ ಪದವು ಹೇಗೆ ಬೇರೆ ಬೇರೆ ಅರ್ಥಗಳಲ್ಲಿ ಬಳಸಲು ಸಾಧ್ಯವಾಗಿದೆ ಎಂಬುದನ್ನು ಗಮನಿಸೋಣ. ಕುಂಬಾರನು ಮಣ್ಣಿನ ಮುದ್ದೆಯನ್ನು ಕೆಲವು ಸಲಕರಣೆಗಳ ಮೂಲಕ ಮಡಕೆಯನ್ನಾಗಿ ಪರಿವರ್ತಿಸುತ್ತಾನೆ, ಹಾಗೆ ಮಾಡುವ ಶಕ್ತಿ ಅವನಿಗಿದೆ, ಎಂಬುದು ಮೊದಲನೆ ವಾಕ್ಯದ ಅರ್ಥ. ಆದರೆ ಬೀಜದಲ್ಲಿರುವ ಶಕ್ತಿಯು ತಾನೇ ಮರವಾಗುತ್ತದೆ. ಅಂದರೆ ಕುಂಬಾರನ

ಯಾವ ಶಕ್ತಿಯೂ ಮಡಕೆಯಾಗುವುದಿಲ್ಲ. ಆದುದರಿಂದ ಕುಂಬಾರ ಮತ್ತು ಬೀಜ ಎರಡಕ್ಕೆ ಶಕ್ತಿ ಇದ್ದರೂ ಕುಂಬಾರನಿಗಿರುವ ಶಕ್ತಿಯು (ಬಲವು) ನಿಮಿತ್ತ ಕಾರಣವೆನಿಸಿದರೆ, ಬೀಜಶಕ್ತಿಯು ಉಪಾದಾನಕಾರಣವೆನಿಸಿಕೊಳ್ಳುತ್ತದೆ.

ವಚನಕಾರರು 'ಶಕ್ತಿ'ಯೆಂಬ ಪದವನ್ನು ಈ ಎರಡು ಅರ್ಥಗಳಲ್ಲಿಯೂ ಬಳಸಿದ್ದಾರೆ. ಶಕ್ತಿಯೇ ಪ್ರಪಂಚವಾಗಿ ಮಾರ್ಪಡುತ್ತದೆ ಎಂದಾಗ ಶಕ್ತಿ ಎಂಬುದು ಒಂದು ವಸ್ತುವೆಂದು, ಶಿವನಿಗೆ ಅದನ್ನು ನಿಯಂತ್ರಿಸಿ ನಿರ್ದೇಶನ ನೀಡಬಲ್ಲ ಶಕ್ತಿ ಇದೆ ಎಂದಾಗ ಶಕ್ತಿ ಎಂಬುದು ಶಿವನ ಒಂದು ಗುಣವೆಂದು ಅರ್ಥವಾಗುತ್ತದೆ. ಈಗ ಶಕ್ತಿ ಎಂಬುದಕ್ಕೆ ಮೊದಲನೆ ಅರ್ಥದ ಒತ್ತುಕೊಡೋಣ.

ಈಶ್ವರ ಕೃಷ್ಣನ ಸಾಂಖ್ಯದರ್ಶನದ ಪ್ರಕಾರ ಮೂಲಪ್ರಕೃತಿಯೇ ಶಕ್ತಿಯ ಆಗರ. ಬೀಜವು ಮರವಾಗಿ ಹೇಗೆ ಮಾರ್ಪಡುತ್ತದೆಯೋ ಹಾಗೆಯೇ ಪ್ರಕೃತಿ ಎಂಬ ಶಕ್ತಿಯು ಬುದ್ಧಿ, ಮನಸ್ಸು, ಅಹಂ, ಪಂಚೇಂದ್ರಿಯಗಳು ಇತ್ಯಾದಿಯಾಗಿ ಮಾರ್ಪಡುತ್ತದೆ. ಇವೇ ತತ್ವಗಳು ಹಿಮ್ಮುಖವಾಗಿ ಚಲಿಸಿ ಮೂಲ ಪ್ರಕೃತಿಯ ಸಾಮ್ಯಾವಸ್ಥೆಯನ್ನು ತಲುಪಿದರೆ ಆಗ ಪ್ರಲಯವಾಗುತ್ತದೆ. ಆದರೆ ಪ್ರಕೃತಿಯು ಪ್ರಲಯದಿಂದ ಸೃಷ್ಟಿಯೆಂಬ ಅವಸ್ಥೆಗೆ ವಿಕಾಸವಾಗುವಾಗಲಾಗಲಿ, ಸೃಷ್ಟಿಯಿಂದ ಪ್ರಲಯಸ್ಥಿತಿಗೆ ಹಿಂದಿರುವಾಗಲಾಗಲೀ ಅಥವಾ ಇವೆರಡರ ಮಧ್ಯದ ಅವಸ್ಥೆಯಲ್ಲಿ ನಡೆಯುವ ಭೌತಿಕ, ರಾಸಾಯನಿಕ, ಮಾನಸಿಕ, ಮತ್ತು ಜೈವಿಕ ಬದಲಾವಣೆಗಳು ಆಗುವಾಗಲಾಗಲಿ, ಅದು ಹೊರಗಿನ, ಈಶ್ವರನಂಥ, ನಿಮಿತ್ತ ಕಾರಣಗಳನ್ನು ಅವಲಂಬಿಸುವುದಿಲ್ಲ. ಈ ಎಲ್ಲ ರೀತಿಯ ಬದಲಾವಣೆಗಳಿಗೆ ಅಗತ್ಯವಾದ ಶಕ್ತಿಯು ಪ್ರಕೃತಿಯಲ್ಲೇ ಇದೆ.

ಒಂದು ವಸ್ತುವಿನ ಸೃಷ್ಟಿಗೆ ಅಥವಾ ಕ್ರಿಯೆ ಅಥವಾ ಚಲನೆಗೆ ಬೇಕಾಗುವ ತತ್ವವೇ ಶಕ್ತಿ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಆದರೆ ಶಕ್ತಿಯು ಬಣ್ಣ, ಭಾರ, ರುಚಿಗಳಂತಹ ಅಮೂರ್ತ ಗುಣವಲ್ಲ. ಏಕೆಂದರೆ ಅಮೂರ್ತ ಗುಣದಿಂದ ಏನನ್ನೂ ಸೃಷ್ಟಿಸಲು ಸಾಧ್ಯವಿಲ್ಲ. ಉದಾಹರಣೆಗೆ ಮೃದುವಾದ ವಸ್ತುವಿನಿಂದ ಏನನ್ನಾದರೂ ರಚಿಸಬಹುದು. ಆದರೆ, ಮೃದುತ್ವದಿಂದ ಏನನ್ನೂ ರಚಿಸಲು ಬರುವುದಿಲ್ಲ. ಅಂದರೆ, ಶಕ್ತಿ ಎಂಬುದು ಒಂದು ದ್ರವ್ಯವೇ ಹೊರತು ಒಂದು ಗುಣವಲ್ಲ. ಉದಾಹರಣೆಗೆ "ಪರಶಿವನಿಂದ ಚಿಚ್ಛಕ್ತಿ, ಚಿಚ್ಛಕ್ತಿಯಿಂದ ಪರಾ, ಆದಿ, ಜ್ಞಾನ, ಕ್ರಿಯಾ ಎಂಬ ಪಂಚಕಲಾ ಶಕ್ತಿಯುರುದಯರಾದರು ನೋಡಾ ಆ ಕ್ರಿಯಾಶಕ್ತಿಯಿಂದ ನಿವೃತ್ತಿಕಲೆ, ಆ ನಿವೃತ್ತಿಕಲೆಯಿಂದ ಮಹಾಮಾಯೆ ಹುಟ್ಟಿತ್ತು ನೋಡಾ ಆ ಮಹಾಮಾಯಾ ಶಕ್ತಿಯಿಂದ ಸಮಸ್ತ ಜಗತ್ತಿನ ಜನನ ನೋಡಾ" ಎಂದು ತೋಂಟದ ಸಿದ್ಧಲಿಂಗ ಶಿವಯೋಗಿಗಳು ಹೇಳುವಾಗ (೧೧.೬೫) ಜಗತ್ತಿನ ಸೃಷ್ಟಿಗೆ ಬೇಕಾಗುವ ಮೂಲವಸ್ತು ಒಂದು ದ್ರವ್ಯ ಅಥವಾ ವಸ್ತುವಾಗಿರಬೇಕೇ ಹೊರತು, ಗುಣವಾಗಿರಬಾರದು, ಎಂಬುದು

ಸ್ಪಷ್ಟವಾಗುತ್ತದೆ. ಕೆಲವು ವಚನಕಾರರೇನೋ ಶಿವ ಶಕ್ತಿಯರ ಸಂಬಂಧವನ್ನು ಹೇಳುವಾಗ, ಶಿವನೇ ದ್ರವ್ಯವೆಂದು ಶಕ್ತಿಯೇ ಗುಣವೆಂದೂ (ಉದಾಹರಣೆಗೆ ಶಿವ, ಹೂವು, ಶಕ್ತಿ, ಗಂಧ) ಹೇಳುತ್ತಾರೆ. ಆದರೆ ಅಂಥ ಉಪಮೆಗಳು ಶಿವಶಕ್ತಿಯರ ಸಂಬಂಧಕ್ಕೆ ಅನ್ವಯಿಸುತ್ತವೆ ಹೊರತು, ಶಿವಶಕ್ತಿಯರ ಸ್ವರೂಪಕ್ಕೆ ಅನ್ವಯಿಸುತ್ತವುದಿಲ್ಲ.

ಮತ್ತೆ ಕೆಲವು ವಚನಕಾರರು ಶಕ್ತಿಯನ್ನು ಪರಶಿವನ ಹೆಂಡತಿಯೆಂಬಂತೆ ಚಿತ್ರಿಸಿದ್ದಾರೆ. ಉದಾಹರಣೆಗೆ 'ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣವಪ್ಪ ಪರಶಿವನ ಚಿತ್ಪ್ರಾಣಶಕ್ತಿಯಿಂದ ಪರಮಜ್ಞಾನಶಕ್ತಿ ಉದಯಿಸಿದಳು ನೋಡಾ' (೧೧.೪೪), 'ನಿಃಕಲ ಶಿವನ ಮಧ್ಯದಲ್ಲಿ ಚಿಚ್ಛಕ್ತಿ ಉದಯಿಸಿದಳು....' (೧೧.೬೩) 'ಲೀಲೆಯಾದೊಡೆ ಉಮಾಪತಿ, ಲೀಲೆ ತಪ್ಪಿದೊಡೆ ಸ್ವಯಂಭೂ' (೨.೧೪೫) ಶಕ್ತಿ ಎಂದರೆ ಒಂದು ಅಚೇತನ ಮೂಲವಸ್ತು ಎಂದು ಹಿಂದೆ ಹೇಳಿ, ಈಗ ಶಕ್ತಿಯು ಶಿವನ ಹೆಂಡತಿ (ಒಬ್ಬ ವ್ಯಕ್ತಿ) ಎಂದೂ ಆ ವ್ಯಕ್ತಿಗೆ ಸೃಷ್ಟಿಸುವ ಶಕ್ತಿ ಇದೆ ಎಂದೂ ಹೇಳಿದರೆ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಶಿವನೇ ಸೃಷ್ಟಿಕರ್ತ ಎಂದು ಮೊದಲು ಹೇಳಿ, ಈಗ ಸೃಷ್ಟಿಸುವ ಶಕ್ತಿ ಉಮೆಗಿದೆ ಎಂದು ಹೇಳುವುದು ವಿರೋದಾಭಾಸವೆನಿಸುತ್ತದೆ. ಉಮೆಗೆ ಸೃಷ್ಟಿಸುವ ಶಕ್ತಿ ಇದ್ದರೆ, ಶಿವನೇಕೆ ಬೇಕು ಎಂಬ ಮತ್ತೊಂದು ಸಮಸ್ಯೆ ಏಳುತ್ತದೆ. ಆದುದರಿಂದ ಶಕ್ತಿಯನ್ನು ಸ್ತ್ರೀವಾಚಕದಿಂದ ಸಂಬೋಧಿಸುವುದು ಒಂದು ಅಲಂಕಾರಿಕ ಭಾಷೆಯೇ ಹೊರತು, ವಸ್ತುಸ್ಥಿತಿಗೆ ಅನ್ವಯಿಸುವ ಭಾಷೆಯಲ್ಲ. ಆ ಭಾಷೆ ಪುರಾಣಗಳಿಗೆ ಯೋಗ್ಯವೇ ಹೊರತು, ದರ್ಶನಕ್ಕಲ್ಲ.

ಶಕ್ತಿಯೇ ಪ್ರಪಂಚವಾಗಿ ಮಾರ್ಪಡುತ್ತದೆ ಎಂದರೆ ಆ ಗುಣವು ಶಿವನ ದಿಗ್ದರ್ಶನ ಮತ್ತು ನಿಯಂತ್ರಣವಿಲ್ಲದೇ ಸಾಧ್ಯವಿಲ್ಲ. ಆದುದರಿಂದ ಶಕ್ತಿಯು ಉಪಾದಾನ ಕಾರಣ. ಪರಶಿವನು ನಿಮಿತ್ತ ಕಾರಣ, ಎರಡೂ ವಸ್ತುಗಳೇ : ಶಿವ ಚಿದ್ವಸ್ತು, ಶಕ್ತಿ ಚಿದ್ವಸ್ತು ಮತ್ತು ಜಡವಸ್ತುಗಳೆರಡನ್ನು ಸೃಷ್ಟಿಸಬಲ್ಲ ದ್ರವ್ಯ. ಅಂದರೆ, ಶಕ್ತಿಯು ಕಲ್ಲು, ಮಣ್ಣು ಮುಂತಾದ ಜಡವಸ್ತುಗಳನ್ನೂ ಸೃಷ್ಟಿಸಬಲ್ಲುದು. ಆತ್ಮಗಳಂತಹ ಚಿದ್ವಸ್ತುಗಳನ್ನೂ ಸೃಷ್ಟಿಸಬಲ್ಲುದು.

ಶಕ್ತಿಯು ವಚನಕಾರರ ಪ್ರಕಾರ ಎರಡು ರೀತಿಯಲ್ಲಿ ಕೆಲಸ ಮಾಡಬಲ್ಲುದು. ಶಿವನ ಇಚ್ಛೆಯ ಪ್ರಕಾರ ಅದು ಮನುಷ್ಯರ ದೇಹೇಂದ್ರಿಯ ಕರಣಾದಿಗಳಾಗಿ ರೂಪಾಂತರಗೊಂಡರೆ ಅದು ಮಾಯಾಶಕ್ತಿ, ಅಧೋಮಾಯಾ, ಕಲಾಶಕ್ತಿ ಎಂಬ ಹೆಸರುಗಳಿಂದ ಕರೆಯಲ್ಪಡುತ್ತದೆ. ಅಂದರೆ ಮನುಷ್ಯನೊಂದಿಗಿರುವ ಈ ಶಕ್ತಿಗಳು ಅವನನ್ನು ಸಂಸಾರಕ್ಕೆ ಬಂಧಿಸುತ್ತವೆ. ಕೆಲವು ಶಕ್ತಿಗಳು ನಮ್ಮಲ್ಲಿ ಮೋಹವನ್ನೂ, ಮತ್ತೆ ಕೆಲವು ಶಕ್ತಿಗಳು ಕ್ರೋಧವನ್ನೂ ಉತ್ಪಾದಿಸಬಲ್ಲವು. ಮೋಹ ಕ್ರೋಧಾದಿಗಳು ಆಧ್ಯಾತ್ಮಿಕ ಜೀವನದ ಅಡ್ಡಿಗಳಾಗಿರುವುದರಿಂದ ಅವು ಅಧೋಮಾಯೆಯ (ಅಥವಾ ಕಲಾಶಕ್ತಿಯ)

ರೂಪಾಂತರಗಳೆನಿಸಿಕೊಳ್ಳುತ್ತವೆ. ಆದರೆ ಅವೇ ಶಕ್ತಿಗಳು ಗುರುವಿನ ಪ್ರೇರಣೆಯಿಂದಾಗಿ ನಮ್ಮಲ್ಲಿ ಮುಮುಕ್ಷುತ್ವ, ಭಕ್ತಿ, ವೈರಾಗ್ಯ, ಮುಂತಾದ ಆಧ್ಯಾತ್ಮಿಕ ಗುಣಗಳನ್ನು ಉಂಟುಮಾಡಬಲ್ಲವು. ಆಗ ಆ ಶಕ್ತಿಗಳಿಗೆ ಭಕ್ತಿಶಕ್ತಿ ಅಥವಾ ನಿವೃತ್ತಿಶಕ್ತಿ ಅಥವಾ ಊರ್ಧ್ವಮಾಯಾ ಎನಿಸಿಕೊಳ್ಳುತ್ತದೆ. ಹೀಗೆ ಮನುಷ್ಯನೆಂದರೆ ಕಲಾಶಕ್ತಿ ಮತ್ತು ಭಕ್ತಿಶಕ್ತಿಗಳ ನಡುವಿನ ತಿಕ್ಕಾಟ. ಭಕ್ತಿ ಶಕ್ತಿಗಳು ಗೆದ್ದರೆ, ಮುಮುಕ್ಷುವಾಗುತ್ತಾನೆ. ಕಲಾಶಕ್ತಿಗಳು ಗೆದ್ದರೆ ಮತ್ತೆ ಸಂಸಾರಿಯಾಗುತ್ತಾನೆ.

ಕಲಾಶಕ್ತಿ ಮತ್ತು ಭಕ್ತಿಶಕ್ತಿಗಳು ಮೂಲದಲ್ಲಿ ಶಕ್ತಿಯೇ ಆಗಿದ್ದು, ಆ ಶಕ್ತಿಯು ಪರಶಿವನಲ್ಲಿ ಅವ್ಯಕ್ತವಾಗಿ ಅಡಗಿರುತ್ತವೆ. ಸೃಷ್ಟಿಯಾದನಂತರವೂ ಅವು ಶಿವನಲ್ಲಿಯೇ ಇದ್ದು, ಮನುಷ್ಯನಿಗೆ ಇಂದ್ರಿಯಗೋಚರವೂ ಬುದ್ಧಿಗೋಚರವೂ ಆಗುತ್ತದೆ. ಕೆಲವು ವೇಳೆ ಇದೇ ಪರಶಿವನ ತನುವೆಂದೂ ಪರಶಿವನೇ ಅವನ ಆತ್ಮವೆಂದೂ ಪರಿಗಣಿಸಲಾಗುತ್ತದೆ. ಅಂತೂ ಶಿವ ಮತ್ತು ಶಕ್ತಿಗಳಲ್ಲಿ ಅವಿನಾಭಾವ ಸಂಬಂಧವಿದೆ- ಆತ್ಮ ಮತ್ತು ದೇಹಗಳಿಗಿರುವ ಸಂಬಂಧದಂತೆ.

ಕೆಲವರು ಶಕ್ತಿ ಎಂಬ ಪದವನ್ನು ಹೆಣ್ಣುಮಗು ಎಂಬರ್ಥದಲ್ಲಿ ಬಳಸಿದ್ದಾರೆ. (೫:೩೯೮). ಶಕ್ತಿ ಪರಶಿವನ ಸತಿಯೆಂಬ ಪೌರಾಣಿಕ ಭಾಷೆಯ ಪ್ರಕಾರ, ಇದು ಸಮರ್ಥನೀಯ.

**ಶಕ್ತಿನಿಪಾತ :** ಶಕ್ತಿಪಾತ ಅಥವಾ ಶಕ್ತಿನಿಪಾತವೆಂದರೆ ಶಕ್ತಿ ಕೆಳಗಿಳಿಯುವುದು ಎಂದರ್ಥ. ಇದು ವಾಚ್ಯಾರ್ಥವಾದರೂ ಇದರ ಸೂಚ್ಯಾರ್ಥ ಶಿವಾನುಗ್ರಹ ಎಂದು. ಮೇಲಿರುವ ಶಿವನು ಅನುಗ್ರಹಿಸುತ್ತಾನೆಂದರೆ, ಅವನ ಶಕ್ತಿಯು ಕೆಳಗಿರುವ ಭಕ್ತನಿಗೆ ಇಳಿದು ಬರುತ್ತದೆ ಎಂದರ್ಥ. ಮತ್ತೊಂದರ್ಥದಲ್ಲಿ ಶಕ್ತಿನಿಪಾತವೆಂದರೆ ಅಮೃತ ಬೀಳುವುದು ಎಂದಾಗುತ್ತದೆ. ಬ್ರಹ್ಮರಂಧ್ರದಿಂದ ಹನಿಹನಿಯಾಗಿ ಬೀಳುವ ಅಮೃತವನ್ನು ಲಿಂಗೈಕ್ಯನು ಸವಿಯುತ್ತಾನೆಂಬ ನಂಬಿಕೆ ಶಿವಾಗಮಗಳಲ್ಲೂ ವಚನಗಳಲ್ಲೂ ವ್ಯಕ್ತವಾಗುತ್ತದೆ. ಈ ಅಮೃತ ಸೇವನೆ ನಡೆದಿರುವವರೆಗೆ ಮನುಷ್ಯ ಸಾಯುವುದಿಲ್ಲ.

**ಶಕ್ತಿ ಮತ್ತು ತತ್ವ :** ಸೃಷ್ಟಿಯ ವಚನಗಳಲ್ಲಿ ಪರಾಶಕ್ತಿಯಾದಿಯಾಗಿ ಐದು ಶಕ್ತಿಗಳ ವಿಚಾರವಲ್ಲದೇ, ಪೃಥ್ವಿ ಮುಂತಾದ ಐದು ತತ್ವಗಳ ವಿಚಾರವೂ ಬರುತ್ತದೆ. ಕೆಲವು ವೇಳೆ ಪಂಚಶಕ್ತಿಗಳ ಮತ್ತೊಂದು ಹೆಸರೆ ಪಂಚಭೂತಗಳೆಂಬ ನಂಬಿಕೆಯೂ ಮೂಡುತ್ತದೆ. ಅಂತೂ ಪಂಚಭೂತಗಳು ಪಂಚಶಕ್ತಿಗಳ ಬೇರೆ ಹೆಸರುಗಳು ಅಥವಾ ಬೇರೆ ರೂಪಗಳು.

ಪಂಚಭೂತಗಳು ಶಕ್ತಿಯ ವಿವಿಧ ರೂಪಗಳೆಂಬುದಕ್ಕೆ ಪಂಚೀಕರಣದ ವಚನಗಳು ಪುಷ್ಟಿ ನೀಡುತ್ತವೆ. ಅವುಗಳ ಗುಣಧರ್ಮಗಳ ವಿಶ್ಲೇಷಣೆಯು ಈ ಮಾತನ್ನು ಸಮರ್ಥಿಸುತ್ತದೆ.

ಕಾಠಿಣ್ಯ ಧರ್ಮವನ್ನು ಹೊಂದಿರುವ ಪೃಥ್ವಿ ತತ್ವಕ್ಕೆ ರೂಪ, ರಸ, ಗಂಧ, ಶಬ್ದ ಮತ್ತು ಕಾಠಿಣ್ಯ ಎಂಬ ಐದು ಗುಣಗಳಿವೆ. ಎರಡು ಕಠಿಣ ವಸ್ತುಗಳ ಘರ್ಷಣೆಯು ಶಬ್ದವನ್ನು ಉತ್ಪಾದಿಸಬಲ್ಲದು; ಅವುಗಳಲ್ಲಿ ಈ ಗುಣಗಳಿರುವುದರಿಂದಲೇ, ಕಠಿಣ ವಸ್ತುಗಳು ಇಂದ್ರಿಯ ಸಂಪರ್ಕಕ್ಕೆ ಬಂದಾಗ ರೂಪರಸಾದಿ ವಿಷಯಗಳನ್ನು ಉತ್ಪಾದಿಸಬಲ್ಲವು. ಅದೇ ರೀತಿ, ಜಲತತ್ವಕ್ಕೆ ಕಾಠಿಣ್ಯವನ್ನು ಬಿಟ್ಟು ಉಳಿದ ನಾಲ್ಕು ಗುಣಗಳೂ, ಅಗ್ನಿಗೆ ಶಬ್ದ, ಸ್ಪರ್ಶ ಮತ್ತು ರೂಪ (ತೇಜ) ಎಂಬ ಮೂರು ಗುಣಗಳೂ, ವಾಯುವಿಗೆ ಶಬ್ದ ಮತ್ತು ಸ್ಪರ್ಶವೆಂಬ ಎರಡು ಗುಣಗಳೂ, ಆಕಾಶಕ್ಕೆ ಶಬ್ದವೆಂಬ ಒಂದೇ ಗುಣವೂ ಇದೆ.

ಪೃಥ್ವೀತತ್ವಕ್ಕೆ ಕಾಠಿಣ್ಯವಿದೆ ಎಂದರೂ ಒಂದೇ, ಭಾರವನ್ನು ತಡೆದುಕೊಳ್ಳುವ ಶಕ್ತಿ ಇದೆ ಎಂದರೂ ಒಂದೇ. ಕಠಿಣ ವಸ್ತುಗಳೊಳಗೆ ಮತ್ತೊಂದು ವಸ್ತು ಪ್ರವೇಶಿಸಲು ಸಾಧ್ಯವಿಲ್ಲ. ಜಲ ತತ್ವಕ್ಕೆ ಬಂಧಕ ಗುಣವಿದೆ. ನೀರನ್ನು ಸೇರಿಸಿ ಮುದ್ದೆ ಮಾಡಬಹುದು; ನೀರು ಹೋದ ವಸ್ತುವಿನ ಭಾಗಗಳು ಬಿಡಿಬಿಡಿಯಾಗುತ್ತವೆ. ಅಗ್ನಿಗೆ ಸುಡುವ ಅಥವಾ ಪಾಕ ಮಾಡುವ ಶಕ್ತಿಯಿದೆ. ಇದರಿಂದ ವಸ್ತುವಿನ ಮೊದಲಿನ ಗುಣಗಳು ನಾಶವಾಗುತ್ತವೆ ಹಾಗೂ ಹೊಸಗುಣಗಳು ಬರುತ್ತವೆ. ವಸ್ತುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಯ್ಯುವುದು ವಾಯುವಿನ ಗುಣ; ಹಾಗೂ ವಸ್ತುಗಳಿಗೆ ಅವಕಾಶ ಮಾಡಿಕೊಡುವುದೇ ಆಕಾಶದ ಗುಣ.

ಪ್ರಪಂಚದ ಪ್ರತಿಯೊಂದು ವಸ್ತುವಿನಲ್ಲಿ ಐದೂ ಭೂತಗಳು ಬಳಸಲ್ಪಟ್ಟಿದ್ದರೂ, ಅವುಗಳ ಪ್ರಮಾಣದ ವೈಶಿಷ್ಟ್ಯದಿಂದಾಗಿ ವಸ್ತುಗಳು ವಿಶಿಷ್ಟ ಗುಣಗಳನ್ನು ಪಡೆಯುತ್ತವೆ. ಕಠಿಣ ವಸ್ತುಗಳಲ್ಲಿ ಪೃಥ್ವಿ ತತ್ವದ ಅಂಶ ಬಹಳ, ಉಳಿದ ತತ್ವಗಳ ಅಂಶ ಕಡಿಮೆ; ದ್ರವ ವಸ್ತುಗಳಲ್ಲಿ ಜಲತತ್ವ ಪ್ರಧಾನ; ಗಾಳಿ, ಹೊಗೆ, ಮುಂತಾದ ವಸ್ತುಗಳಲ್ಲಿ ವಾಯು ತತ್ವಪ್ರಧಾನ; ಬೆಂಕಿ, ಉಷ್ಣ ಮುಂತಾದವುಗಳಲ್ಲಿ ಅಗ್ನಿ ತತ್ವ ಪ್ರಧಾನ; ಖಾಲಿ ಸ್ಥಳ (ಗಾಳಿಯೂ ಇಲ್ಲದ ಸ್ಥಳಗಳಲ್ಲಿ) ಆಕಾಶ ತತ್ವ ಪ್ರಧಾನ. (ನೋಡಿ : **ಶಕ್ತಿ, ಪಂಚೀಕರಣ**).

**ಶಕ್ತಿಯಾರು, ಲಿಂಗವಾರು :** ಪರಶಿವನು ಶೂನ್ಯ ಸ್ಥಿತಿಯಲ್ಲಿರುವಾಗ ಅವನಲ್ಲಿ ನೆನಹು ಅಥವಾ ವಿಮರ್ಶಾ ಶಕ್ತಿ ತಲೆದೋರಿದಾಗ, ಅವನೇ ಮುಂದೆ ನಿಃಕಲಲಿಂಗನೆನಿಸಿಕೊಳ್ಳುತ್ತಾನೆ. ಅನಂತರ ಅವನೇ ಅಂಗಸ್ಥಲ ಮತ್ತು ಲಿಂಗಸ್ಥಲ ಎಂದು ಇಬ್ಭಾಗವಾಗುತ್ತಾನೆ. ಅನಂತರ ಲಿಂಗಸ್ಥಲದಲ್ಲಿ ಆರು ಲಿಂಗಗಳೂ ಮತ್ತು ಆರು ಶಕ್ತಿಗಳೂ ಉದ್ಭವವಾಗುತ್ತವೆ. ಹೀಗೆ ಹೇಳುವ ವಚನಕಾರರ ಅರ್ಥವಿಷ್ಟೇ: ಪರಶಿವನ ಇಚ್ಛೆಯಂತೆ ಶಕ್ತಿ ವಿಕಾಸಗೊಳ್ಳುತ್ತದೆ, ಹಾಗೂ ಶಕ್ತಿ ವಿಕಾಸದ ಪ್ರತಿ ಹಂತದಲ್ಲಿಯೂ ಅದು ಪರಶಿವನ ಮಾರ್ಗದರ್ಶನ ಮತ್ತು ನಿಯಂತ್ರಣದಲ್ಲಿರುತ್ತದೆ. ಈ ಮಾತನ್ನು ಅವರು ಈ ಕೆಳಗಿನಂತೆ ಹೇಳುತ್ತಾರೆ :

ಲಿಂಗವಾರು ಎಂದರೆ, ಮಹಾಲಿಂಗ, ಪ್ರಸಾದಲಿಂಗ, ಜಂಗಮಲಿಂಗ, ಶಿವಲಿಂಗ, ಗುರುಲಿಂಗ ಮತ್ತು ಆಚಾರಲಿಂಗ. ಇವು ಏಕಕಾಲಕ್ಕೆ ಉದ್ಭವವಾಗದೇ, ಈಗ ತಿಳಿಸಿರುವ ಕ್ರಮದಲ್ಲಿ ಒಂದಾದ ಮೇಲೊಂದರಂತೆ ಉದ್ಭವವಾಗುತ್ತವೆ. ನಿ:ಕಲ ಸ್ಥಲದಲ್ಲೇ ಶಕ್ತಿಯು ಪರಶಿವನೊಂದಿಗಿದ್ದು, ಅದು ಅಂಗಸ್ಥಲ ಲಿಂಗಸ್ಥಲವೆಂದು ಇಬ್ಭಾಗವಾದಾಗ ಅದರಲ್ಲಿದ್ದ ಶಕ್ತಿಯೂ ಇಬ್ಭಾಗವಾಗುತ್ತದೆ. ಲಿಂಗದ ಜೊತೆಗಿರುವ ಶಕ್ತಿಗೆ ಕಲಾ ಶಕ್ತಿಯೆಂದೂ, ಅಂಗದ ಜೊತೆಗಿರುವ ಶಕ್ತಿಗೆ ಭಕ್ತಿ ಶಕ್ತಿಯೆಂದೂ ಹೆಸರಿದೆ. ಮೇಲೆ ತಿಳಿಸಿದ ಆರು ಲಿಂಗಗಳ ಜೊತೆಗಿರುವ ಶಕ್ತಿಗಳೂ ಸಹ ಒಂದಾದ ಮೇಲೊಂದರಂತೆ ಅಂದರೆ, ಲಿಂಗದ ಜೊತೆಗೇ, ಕ್ರಮವಾಗಿ ಉದ್ಭವಿಸುತ್ತವೆ. ಹೀಗೆ ಮಹಾಲಿಂಗದ ಜೊತೆಗಿರುವ ಶಕ್ತಿಗೆ ಚಿಚ್ಛಕ್ತಿ ಎಂದೂ, ಪ್ರಸಾದಲಿಂಗದ ಜೊತೆಗಿರುವ ಶಕ್ತಿಗೆ ಪರಾಶಕ್ತಿ ಎಂದೂ ಜಂಗಮಲಿಂಗದ ಜೊತೆಗಿರುವ ಶಕ್ತಿಗೆ ಆದಿಶಕ್ತಿ ಎಂದೂ ಶಿವಲಿಂಗದ ಜೊತೆಗಿರುವ ಶಕ್ತಿಗೆ ಇಚ್ಛಾಶಕ್ತಿ ಎಂದೂ, ಗುರುಲಿಂಗದ ಜೊತೆಗಿರುವ ಶಕ್ತಿಗೆ ಜ್ಞಾನಶಕ್ತಿ ಎಂದೂ, ಆಚಾರ ಲಿಂಗದ ಜೊತೆಗಿರುವ ಶಕ್ತಿಗೆ ಕ್ರಿಯಾಶಕ್ತಿಯೆಂದೂ ಹೆಸರು.

ಈ ಲಿಂಗಗಳೂ ಈ ಶಕ್ತಿಗಳೂ ಎಲ್ಲಿವೆ? ಅವುಗಳು ಹೇಗೆ ವ್ಯಕ್ತವಾಗುತ್ತವೆ ಅಥವಾ ಅವುಗಳ ಕಾರ್ಯಗಳೇನು? ವಾಸ್ತವವಾಗಿ ಈ ಆರು ಲಿಂಗಗಳು ಮನುಷ್ಯನ ದೇಹದಲ್ಲೇ ಇರುವ ಆರು ಚಕ್ರ ಅಥವಾ ಪದ್ಮಗಳಲ್ಲಿರುತ್ತವೆ. ಅದೇ ರೀತಿ ಈ ಆರು ಶಕ್ತಿ ಮನುಷ್ಯನ ವಿವಿಧ ಭಾಗಗಳಾಗಿ (ಬುದ್ಧಿ, ಬುದ್ಧೀಂದ್ರಿಯ, ಇತ್ಯಾದಿಗಳಾಗಿ) ಮಾರ್ಪಟ್ಟಿವೆ. ನಮ್ಮ ಆಧ್ಯಾತ್ಮಿಕ ಪ್ರಗತಿಯಾದಂತೆಲ್ಲಾ ಈ ಶಕ್ತಿಗಳ ಅವಗುಣಗಳು ಹೋಗಿ, ನಾವು ಹಂತಹಂತವಾಗಿ ಈ ಲಿಂಗಗಳನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾ ಹೋಗುತ್ತೇವೆ. ವಾಸ್ತವವಾಗಿ ಆರು ಲಿಂಗಗಳಿಲ್ಲ. ಆರು ಲಿಂಗಗಳು ಒಂದೇ ಲಿಂಗದ ಆರು ಅವಸ್ಥೆಗಳು, ಅದೇ ರೀತಿ ವಾಸ್ತವವಾಗಿ ಆರು ಶಕ್ತಿಗಳಿಲ್ಲ. ಅವೆಲ್ಲ ಒಂದೇ ಶಕ್ತಿಯ ಆರು ರೂಪಾಂತರಗಳು. ಹೀಗೆ, ಇಡೀ ಮನುಷ್ಯನನ್ನೆ ಒಂದು ಶಕ್ತಿಯೆಂದು ತೆಗೆದುಕೊಂಡರೆ, ಅವನಲ್ಲಿ ಒಂದೇ ಲಿಂಗ (ಒಬ್ಬ ಪರಶಿವ) ಮಾತ್ರ ಇರುತ್ತಾನೆ. ಅದೇ ಅವನ ಆತ್ಮ. ಹೀಗೆ ನೋಡಿದಾಗ, ಇಡೀ ವಿಶ್ವವೇ ಒಂದು ಶಕ್ತಿ ಮತ್ತು ಅದು ಪರಶಿವನ ದೇಹ, ಅವನು ಅದರ ಆತ್ಮ. ಇಂತಹ ದೇಹಾತ್ಮ ಸಂಬಂಧವುಳ್ಳ ಅಸ್ತಿತ್ವಕ್ಕೆ ಬ್ರಹ್ಮಾಂಡವೆನ್ನುತ್ತಾರೆ. ಮನುಷ್ಯನು ಪಿಂಡಾಂಡವೆನಿಸಿಕೊಳ್ಳುತ್ತಾನೆ.

**ಶತಪತ್ರ ಕಮಲ ಕರ್ಣಿಕಾ :** ಚಕ್ರಕ್ಕೆ ಇನ್ನೊಂದು ಹೆಸರು ಪದ್ಮ. ಆರನೆಯದಾದ ಆಜ್ಞಾ ಚಕ್ರದ ಮೇಲೆ ಬ್ರಹ್ಮರಂಧ್ರವಿದೆ. ಇದನ್ನು ಕೆಲವು ವೇಳೆ ಸಹಸ್ರಾರವೆಂದೂ ಕರೆಯುತ್ತಾರೆ. ಪ್ರತಿಯೊಂದು ಚಕ್ರಕ್ಕೂ ನಿಯಮಿತ ಸಂಖ್ಯೆಯ ದಳಗಳಿರುತ್ತವೆ. ಸಹಸ್ರಾರಕ್ಕೆ ಕೆಲವು ವೇಳೆ ನೂರು ದಳಗಳಿರುತ್ತವೆ (ಶತಪತ್ರ ಕಮಲಕರ್ಣಿಕಾ) ಎಂದೂ ಮತ್ತೆ ಕೆಲವು ವೇಳೆ ಸಹಸ್ರದಳಗಳಿರುತ್ತವೆಯೆಂದೂ ಹೇಳಲಾಗುತ್ತದೆ. (೨:೧೨೬೩)

**ಶಬುದ ಲಿಂಗೈಕ್ಯ :** ನಿಜವಾಗಿಯೂ ಲಿಂಗೈಕ್ಯನಾಗದೆ ಲಿಂಗೈಕ್ಯನಾದೆ ಎಂದು ಹೇಳುವವನು. ವಾಸ್ತವವಾಗಿ ಅಹಂನಷ್ಟನಾದವನು ನಾನು ಲಿಂಗೈಕ್ಯನಾದೆ ಎಂದು ಹೇಳಿದರೆ ಅದು ಕೇವಲ ವಿರೋಧಾಭಾಸವಾಗುತ್ತದೆ. ಅಥವಾ ಹಾಗೆ ಹೇಳುವವನಿಗೆ ಅಹಂನಷ್ಟವಾಗಿಲ್ಲವೆಂದರ್ಥ. (೮:೧೭೮). ಅವನು ಶಬ್ದಲಿಂಗೈಕ್ಯ ಅಥವಾ ಕೇವಲ ವಾಗದ್ವೈತಿ (೮:೧೭೮).

**ಶಬ್ದ ಪ್ರಮಾಣ :** ಶಬ್ದಗಳ ಮೂಲಕ ಯಥಾರ್ಥ ಜ್ಞಾನ ಪಡೆಯುವ ವಿಧಾನ. ಉದಾಹರಣೆ, ಭಾರತದಲ್ಲಿ ಒಬ್ಬ "ಅಮೇರಿಕಾದಲ್ಲಿ ಬಿಸಿನೀರಿನ ಬುಗ್ಗೆಗಳಿವೆ" ಎಂದು ಹೇಳಿದಾಗ, ನಾವು ಅಮೆರಿಕಾಕ್ಕೆ ಹೋಗದೆಯೇ, ಅಲ್ಲಿಯ ಬಿಸಿನೀರಿನ ಬುಗ್ಗೆಗಳ ಬಗ್ಗೆ ತಿಳಿದುಕೊಳ್ಳುವುದರಿಂದ, ನಾವು ಅನುಸರಿಸಿದ ಮಾರ್ಗ ಶಬ್ದ ಪ್ರಮಾಣವೆನಿಸಿಕೊಳ್ಳುವುದು. ಮತ್ತೆ ಕೆಲವು ವೇಳೆ, ಬ್ರಹ್ಮ ಸಾಕ್ಷಾತ್ಕಾರ ಮಾಡಿಕೊಂಡಿರುವವರು ಬ್ರಹ್ಮದ ಬಗ್ಗೆ ಹೇಳಿದಾಗ, ನಾವು ಅದನ್ನು ನಂಬುತ್ತೇವೆ. ಆಗ ಬ್ರಹ್ಮದ ಬಗ್ಗೆ ನಾವು ಶಬ್ದ ಪ್ರಮಾಣದ ಮೂಲಕ ತಿಳಿದುಕೊಂಡೆವೆಂದರ್ಥ. ಸಾಮಾನ್ಯವಾಗಿ ಶಬ್ದಪ್ರಮಾಣವೆಂದರೆ ವೇದಗಳೇ ಎಂದರ್ಥ. ಏಕೆಂದರೆ, ವೇದಗಳೇ ಸ್ವರ್ಗ, ನರಕ ಯಜ್ಞಯಾಗಾದಿಗಳ ಫಲ, ಬ್ರಹ್ಮ, ಆತ್ಮ ಮುಂತಾದ ಅಲೌಕಿಕ ವಿಚಾರಗಳನ್ನು ತಿಳಿಸುತ್ತವೆ. (೩:೩೬೯)

**ಶಬ್ದ ಪ್ರಸಾದ :** ಮುಕ್ತಿ ಪಡೆಯಬೇಕೆಂಬ ಆಸೆಯಿಂದ ಬಂದ ಶಿಷ್ಯನಿಗೆ ಲಿಂಗದೀಕ್ಷೆ ಕೊಟ್ಟು ಕಿವಿಯಲ್ಲಿ ಮಂತ್ರೋಪದೇಶ ಮಾಡಿದರೆ, ಶಿಷ್ಯನ ಪಾಲಿಗೆ ಅದು ಶಬ್ದ ಪ್ರಸಾದ. (೧೧:೧೦೨೩)

**ಶಬ್ದ ಬೋಧಕರು :** ಸ್ವಾನುಭಾವ ಪಡೆಯದೆಯೇ ಬೇರೆಯವರು ಹೇಳಿದುದನ್ನು ಮತ್ತೆ ಹೇಳುವವರು. ಇಂಥ ಬೋಧಕರು ಸ್ವಾನುಭಾವಿಗಳಿಲ್ಲವಾದುದರಿಂದ, ಅವರು ನುಡಿದಂತೆ ನಡೆಯುವವರಲ್ಲ.

**ಶಬ್ದಸಾರಾಯ :** ಪರಶಿವನೇ ಎಲ್ಲ ಶಬ್ದಗಳ ಸಾರ. ಎಲ್ಲ ಶಬ್ದಗಳೂ ಬೇರೆ ಬೇರೆ ವಸ್ತುಗಳಿಗೆ ಅನ್ವಯಿಸಿದರೂ, ಆ ವಸ್ತುಗಳೆಲ್ಲವೂ ಶಿವನ ವಿವಿಧ ರೂಪಗಳಾದುದರಿಂದ, ಎಲ್ಲ ಶಬ್ದಗಳೂ ಶಿವನನ್ನೇ ಸೂಚಿಸುತ್ತವೆ.

**ಶರಣ :** ವಚನಗಳಲ್ಲಿ ಈ ಪದಕ್ಕೆ ಕನಿಷ್ಟ ಮೂರು ಅರ್ಥಗಳಿರುವುದು ಕಾಣುತ್ತದೆ. ೧. ಇಷ್ಟಲಿಂಗವನ್ನು ಧರಿಸಿ ಗುರುಲಿಂಗ ಜಂಗಮಕ್ಕೆ ಎಲ್ಲವನ್ನೂ ಅರ್ಪಿಸಿದವನು ಶರಣ. ಈ ಅರ್ಥದಲ್ಲಿ ಸಂಪೂರ್ಣವಾಗಿ (ಶಿವನಿಗೆ) ಶರಣನಾದವನೇ ಶರಣ. ಇದು ಸ್ಥಲಸೂಚಕವಲ್ಲ. ೨. ವಚನಗಳ ಪ್ರಕಾರ ಆಧ್ಯಾತ್ಮಿಕ ಪ್ರಗತಿಯು ಆರು ಹಂತ ಅಥವಾ ಸ್ಥಲಗಳನ್ನು ಒಳಗೊಂಡಿದೆ. ಐದನೆಯ ಸ್ಥಲದಲ್ಲಿರುವ ಸಾಧಕನೇ ಈ ಅರ್ಥದಲ್ಲಿ

ಶರಣ. ೩. ತೋಂಟದ ಸಿದ್ಧಲಿಂಗ ಶಿವಯೋಗಿಗಳು ಈ ಪದವನ್ನು ಮೂರನೆಯ ಅರ್ಥದಲ್ಲಿಯೂ ಪ್ರಯೋಗಿಸಿದ್ದಾರೆ. ಅವರ ಪ್ರಕಾರ, ಮನುಷ್ಯ ಮೊಟ್ಟ ಮೊದಲು ಅತ್ಯಂತ ಶುದ್ಧ ರೂಪಾಗಿದ್ದು, ಅವನಿಗೂ ಶಿವನಿಗೂ ವ್ಯತ್ಯಾಸವಿರಲಿಲ್ಲ. ಕಾಲಕ್ರಮೇಣ ಅವನು ಮಲಿನವಾಗುತ್ತಾ ಬಂದಿದ್ದಾನೆ. "ಪ್ರಪಥಮದಲ್ಲಿ ನಿರಾಕಾರ ವಸ್ತು ತಾನೊಂದೆ, ಆ ನಿರಾಕಾರಪರ ವಸ್ತುವಿನಲ್ಲಿ ಮಹಾಜ್ಞಾನ ಉದಯವಾಗಿ, ಆ ಮಹಾಜ್ಞಾನವೇ ಅನಾದಿ ಶರಣರ ರೂಪಾಗಿ ..." (೧೧:೩೮) ಮತ್ತು "ಸತ್ತುಚಿತ್ತಾನಂದ ನಿತ್ಯ ಪರಿಪೂರ್ಣವಪ್ಪ ಪರಶಿವನ ಚಿತ್ಪ್ರಾಣ ಶಕ್ತಿಯಿಂದ ಪರಮ ಜ್ಞಾನ ಶಕ್ತಿ ಉದಯಿಸಿದಳು ನೋಡಾ . . . ಆ ಪರಿಪೂರ್ಣ ಸಮ್ಯಜ್ಞಾನದಿಂದ ಶರಣನ ಉತ್ಪತ್ತಿ." (೧೧:೪೪) ಎಂಬ ವಚನಗಳನ್ನು ನೋಡಿದಾಗ, ಶರಣನೆ ಒಂದು ಮೂಲ ಅಚ್ಚೆಂದೂ, ಮಲಿನವಾದ ಮನುಷ್ಯರೆಲ್ಲ ಅವನ ಪ್ರತಿಕೃತಿಗಳೆಂದೂ ಅರ್ಥವಾಗುತ್ತದೆ. ಅದೇ ರೀತಿ, "ಆದಿ ಅನಾದಿಗಳೇನೂ ಇಲ್ಲದ ನಿರುಪಮಲಿಂಗದಲ್ಲಿ ಅನುಪಮ ಭಕ್ತಿ ಜನಿಸಿತ್ತು ನೋಡಾ. ಆ ಭಕ್ತಿಯಗರ್ಭದಲ್ಲಿ ಸತ್ಯ ಶರಣನುದಯಿಸಿದನು" (೧೧:೪೮) ಎನ್ನುವಾಗ ಇನ್ನೂ ಏನೂ ಸೃಷ್ಟಿಯಾಗದಿದ್ದಾಗ ಶರಣ ಹುಟ್ಟಿದನು, ಅವನಿಗೆ ಕಲಾಶಕ್ತಿಗಳಿಂದಾದ ಮೈಮನ ಬುದ್ಧಿಗಳಿರಲಿಲ್ಲ. ಕೇವಲ ಭಕ್ತಿಶಕ್ತಿಗಳಷ್ಟೇ ಇದ್ದವು, ಎಂಬರ್ಥ ಬರುತ್ತದೆ. ಅಂತೂ ಶರಣನೆಂದರೆ ಅತ್ಯಂತ ಪರಿಶುದ್ಧವಾದ ಅಂಗ ಎಂಬ ಅರ್ಥ ಖಂಡಿತ ಬರುತ್ತದೆ.

"ಆದಿ ಪರಮೇಶ್ವರನು ತನ್ನ ವಿನೋದಾರ್ಥ (೧೧:೪೬) ಶರಣನಾಗಿ ತೋರುತ್ತಾನೆಂದೂ, ಶಿವನ ಸದ್ರೂಪನೇ ಬಸವಣ್ಣ, ಚಿದ್ರೂಪವೇ ಚೆನ್ನಬಸವಣ್ಣ ಆನಂದ ಸ್ವರೂಪವೇ ಅಲ್ಲಮ ಪ್ರಭು" ತೋಂಟದ ಸಿದ್ಧಲಿಂಗ ಶಿವಯೋಗಿ (೧೧:೪೧) ಎಂದು ಹೇಳುವಾಗ, ಶರಣ ಒಬ್ಬ ಆದರ್ಶ ಪುರುಷನೆಂದೂ, ಬಸವಾದಿ ಪ್ರಮಥರು ಜೀವಂತ ಉದಾಹರಣೆಗಳೆಂದೂ ಅರ್ಥವಾಗುತ್ತದೆ. ಅಲ್ಲದೆ, ನಂದೀಶ್ವರ, ಭೃಂಗೀಶ್ವರ, ವೀರಭದ್ರ, ಮುಂತಾದ ಸದಾಶಿವನ ಸಾಹಚರ್ಯದಲ್ಲಿ ಇರುವವರೆಲ್ಲರೂ ಶರಣರು ಎನ್ನುವಾಗಲೂ ಸಹ, ಅವರಿಗೆ ಮಾಲಿನ್ಯ ಇಲ್ಲವೇ ಇಲ್ಲವೆಂಬುದು ವ್ಯಕ್ತವಾಗುತ್ತದೆ. (೧೧:೫೫)

ಶಿವಜ್ಞಾನ, ಪರಮವೈರಾಗ್ಯ, ಸರ್ವಾಚಾರ ಸಂಪತ್ತು ಇವುಗಳ ಮೂರ್ತಿಗಳಾದ ಶರಣರು ಲಿಂಗಾತ್ಮಕರು, ಲಿಂಗೇಂದ್ರಿಯ, ಲಿಂಗಾಂಗ ಸಂಗಿಗಳು, ಪ್ರಾಣ ಮುಕ್ತರು, ಮನೋಮುಕ್ತರು (೧೧:೪೫), ಆದರೆ ಅವರು ಅನಾದಿ ಕರ್ಮಿಗಳಾಗಿ ಅನಂತರ ಮುಕ್ತಿ ಪಡೆದವರಲ್ಲ. ಅವರು ನಿತ್ಯ ಮುಕ್ತರು. (೧೧:೪೯). ಹಾಗಾದರೆ, ಬಸವಾದಿ ಶರಣರೆಲ್ಲ ಮೊದಲು ಬದ್ಧರಾಗಿದ್ದು ಅನಂತರ ಮುಕ್ತರಾದವರಲ್ಲವೆ? ಎಂದು ಕೆಲವರು ಆಕ್ಷೇಪಿಸಬಹುದು. ಆದರೆ ಅವರಾದರೂ ಸಹ ಮರೆವಿನಿಂದಾಗಿ ತಾವು ಬದ್ಧರೆಂದು ತಿಳಿದುಕೊಂಡಿದ್ದರು. ಅರಿವು ಬಂದ ನಂತರ ಮೊದಲಿನಂತೆ ಶರಣರಾದವರು. ಅಂದರೆ

ವಾಸ್ತವವಾಗಿ ಅವರು ಯಾವಾಗಲೂ ನಿರ್ಮಲರೆ. ಅವರು ಅನಾದಿ ನಿರ್ಮಲರಾದ ಕಾರಣ ಅವರಿಗೆ ಮಾಯಾಕರ್ಮ ಆಣವ ಮಲಗಳನ್ನು ಆರೋಪಿಸಬಾರದು. (೧೧:೫೧).

"ಚಿನ್ನದಿಂದಾದ ಬಂಗಾರ ಚಿನ್ನದ ರೂಪಲ್ಲದೆ, ಮತ್ತೊಂದು ರೂಪಾಗಬಲ್ಲುದೆ?" ಅದೇ ರೀತಿ ಲಿಂಗಮುಖದಿಂದ ಉದಯವಾದ ಶರಣರು ಲಿಂಗದ ರೂಪಲ್ಲದೆ, ಮತ್ತೊಂದು ರೂಪೆನಬಹುದೇ? (೧೧:೫೨) "ಹೀಗೆ ಲಿಂಗದಿಂದ ಶರಣರುದಯವಾಗದಿರ್ದಡೆ, ಬಸವ, ಚೆನ್ನಬಸವ, ಪ್ರಭುದೇವರು ಮುಖ್ಯವಾದ ಏಳುನೂರು ಎಪ್ಪತ್ತು ಅಮರಗಣಂಗಳು ಎಲ್ಲರೂ ಕ್ಷೀರಕ್ಷೀರವ ಬೆರೆಸಿದಂತೆ..... ಲಿಂಗವ ಬೆರೆಸಿ ಮಹಾಲಿಂಗವೆಯಾದರು ನೋಡಾ" (೧೧:೬೦) ಅಂದರೆ, ಶುದ್ಧರೂಪಾದ, ಯಾವಾಗಲೂ ಶಿವಸಾನಿಧ್ಯದಲ್ಲಿದ್ದವರು ಹೇಗೆ ಶರಣರೆನಿಸಿಕೊಳ್ಳುತ್ತಾರೋ, ಹಾಗೆಯೇ, ಆಧ್ಯಾತ್ಮಿಕ ಸಾಧನೆಯ ಮೂಲಕ ಲಿಂಗೈಕ್ಯ ಸಾಧಿಸಿದವರೆಲ್ಲರೂ ಶುದ್ಧರೂಪಾಗಿ ಶರಣರಾಗುತ್ತಾರೆ. ಆದರೆ ಶರಣರಾಗಬೇಕಾದರೆ ಅವರಿಗೆ ದೇಹವಿರಬಾರದು ಎಂದರ್ಥವಲ್ಲ. ಜೀವನ್ಮುಕ್ತರೆಲ್ಲರೂ ಶರಣರೇ. ಅದೇ ರೀತಿ ಶಿವಸಾನಿಧ್ಯವನ್ನು ಪಡೆಯಲು ಕೈಲಾಸಕ್ಕೆ ಹೋಗಬೇಕೆಂಬುದೂ ಇದರ ಅರ್ಥವಲ್ಲ. ವಾಸ್ತವವಾಗಿ ಶರಣರು ಕೈಲಾಸವನ್ನು ನಂಬುವುದಿಲ್ಲ, ಅದರ ಬದಲು ಕಾಯವನ್ನೇ ಕೈಲಾಸವನ್ನಾಗಿ ಮಾಡಿಕೊಳ್ಳಬೇಕೆಂದರು.

**ಶರಣಂಗೆ ಆಕಾಶವಂಗ :** ಕಂಠಸ್ಥಾನದಲ್ಲಿರುವ ವಿಶುದ್ಧ ಚಕ್ರದಲ್ಲಿ ಅಥವಾ ಅದರಲ್ಲಿರುವ ಆಕಾಶವೆಂಬ ತತ್ವದಲ್ಲಿ (ಅಥವಾ ಪರಾಶಕ್ತಿಯಲ್ಲಿ) ಶಿವನು ನೆಲೆಸಿದ್ದು, ಪ್ರಸಾದಲಿಂಗವೆಂಬ ಹೆಸರಿನಿಂದ ಕರೆಯಲ್ಪಡುತ್ತಾನೆ. ಪ್ರಸಾದಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುವ ಸಾಧಕನು ಆಗ ಶರಣಸ್ಥಲಕ್ಕೆ ಬಂದಿರುತ್ತಾನೆ. ಅವನು ಪ್ರಸಾದಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ, ನಮ್ಮಲ್ಲಿರುವ ಆಕಾಶ ಎಂಬ ಭೂತದ ಅಥವಾ ಪರಾಶಕ್ತಿಯ ದುಷ್ಪರಿಣಾಗಳನ್ನು ಕಡಿಮೆ ಮಾಡಿ, ಅದನ್ನು ಶುದ್ಧ ಮಾಡಬೇಕಾಗುತ್ತದೆ. ಹೀಗೆ ಶುದ್ಧವಾದ ಪರಾಶಕ್ತಿಗೆ ಆನಂದ ಭಕ್ತಿಯೆಂದೂ ಹೆಸರಿದೆ. (೮:೧೯೬)

ಶರಣಸ್ಥಲಕ್ಕೆ ಬರುವ ಮುನ್ನ ಸಾಧಕನು ಆಗಲೇ ಅರಿಷಡ್ವರ್ಗ, ಅಷ್ಟಮದ, ದೇಹದ ಬಾಧೆಗಳು, ಅಂತಃಕರಣದ ತಮಸ್ಸು ಮುಂತಾದ ಆಧ್ಯಾತ್ಮಿಕ ದೋಷಗಳನ್ನು ಗೆದ್ದಿರುವುದರಿಂದ, ಹಾಗೂ ಸತ್ಯ, ದಯೆ, ಕ್ಷಮೆ, ಸೈರಣೆ, ಸಮಾಧಾನ, ಸಂತೋಷ, ಸ್ಥೈರ್ಯ ಮುಂತಾದ ಆಧ್ಯಾತ್ಮಿಕ ಗುಣಗಳನ್ನು ಬೆಳೆಸಿಕೊಂಡಿರುವುದರಿಂದ, ಅವನಿಗೆ ಉಳಿದಿರುವ ಒಂದೇ ಒಂದು ಮೆಟ್ಟಿಲೆಂದರೆ, ಶಿವನಿಗೆ ತನ್ನನ್ನು ತಾನೇ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದು. ಮೇಲಿನ ಆಧ್ಯಾತ್ಮಿಕ ಶಿಕ್ಷಣ ಪಡೆದ ಅವನಿಗೆ ಇದು ಕಷ್ಟದ ಮಾತೇನಲ್ಲ. ಹೀಗೆ ಸರ್ವವನ್ನೂ ಸಮರ್ಪಿಸಿಕೊಂಡ ಸಾಧಕನಿಗೆ ಶರಣ (ಶರಣಾಗತಿ

ಭಾವವನ್ನು ಹೊಂದಿದವನು) ಎಂಬ ಹೆಸರಿದ್ದು, ಆ ಭಾವದ ಮೂಲಕ ಅವನು ಆನಂದವನ್ನು ಪಡೆಯುತ್ತಾನೆ. ಈ ಆನಂದವು ಪರಶಿವನ ಪ್ರಸಾದವಾದುದರಿಂದ, ಪರಶಿವನ ಆರೂಪಕ್ಕೆ ಪ್ರಸಾದಲಿಂಗವೆಂದು ಹೆಸರು.

ನಿರ್ಮಲವಾದ ಆಕಾಶದಲ್ಲಿ ಯಾವೊಂದು ದೋಷವೂ ಹೇಗಿರುವುದಿಲ್ಲವೋ ಹಾಗೆಯೇ ಶರಣನಲ್ಲಿ ಯಾವ ದೋಷಗಳೂ ಇಲ್ಲ, ಅಥವಾ ಶರಣನಲ್ಲಿರುವ ಶುದ್ಧವಾದ ಆಕಾಶ ತತ್ವವೇ ಪ್ರಸಾದಲಿಂಗದ ಕಾಯ (ಅಂಗ).

**ಶರಣ ಭರಿತ ಲಿಂಗ :** ಪರಶಿವನು (ಲಿಂಗವು) ಪ್ರಪಂಚದ ಎಲ್ಲ ವಸ್ತುಗಳಲ್ಲಿಯೂ ಇರುವಂತೆ ಶರಣನು ಲಿಂಗದಲ್ಲಿ ತುಂಬಿಕೊಂಡಿದ್ದಾನೆ.

**ಶರಣಭಾವ ವಿರಹಿತ ಸಮ್ಯಗ್‌ಜ್ಞಾನಿ :** ಶರಣನಿಗೆ ಅನುಭಾವವಿದ್ದರೂ, ತಾನು ಅನೇಕ ಸಾರಿ ಪರಶಿವನಲ್ಲಿ ಬೆರೆತಿದ್ದರೂ. ತನ್ನ ವೈಯುಕ್ತಿಕತೆಯನ್ನು ಇನ್ನೂ ಕಳೆದುಕೊಂಡಿಲ್ಲ. ನಾನು ಶಿವನ ಸತಿ ಎಂಬ ಭಾವದಲ್ಲಿ ನಾನು ಎಂಬ ಭಾವ ಇನ್ನೂ ಅವನಿಗಿದೆ. ಆದರೆ ಶರಣಸ್ಥಲದ ಮುಂದಿನ ಸ್ಥಲವಾದ ಐಕ್ಯಸ್ಥದಲ್ಲಿ ಸಾಧಕನು ತಾನು ಪರಶಿವನಲ್ಲಿ ಬೆರೆಯುವುದೂ ಅಲ್ಲದೆ, ಅವನಿಂದ ತನ್ನನ್ನು ಪ್ರತ್ಯೇಕಿಸಿಕೊಳ್ಳಲಾರ. ಅವನೇ ಸಮ್ಯಗ್‌ಜ್ಞಾನಿ. (೯:೫೭೯)

**ಶರಣ ವಿರೋಧಿ ಲಿಂಗೈಕ್ಯ :** ಶರಣನು ತನ್ನನ್ನೆ ಸಂಪೂರ್ಣವಾಗಿ ಸಮರ್ಪಿಸಿಕೊಂಡರೂ ಅವನು ಇನ್ನೂ ಶಿವನಿಂದ ಭಿನ್ನವೇ ಆಗಿದ್ದಾನೆ. ಅವನಲ್ಲಿ ಇನ್ನೂ ಐಕ್ಯಭಾವ ಬಂದಿಲ್ಲವಾದುದರಿಂದ ಐಕ್ಯನ ಕಣ್ಣಿಗೆ ಶರಣನು ಇನ್ನೂ ಅಪೂರ್ಣ. ಆದುದರಿಂದ ಲಿಂಗೈಕ್ಯನು ಶರಣ ವಿರೋಧಿ. ವಾಸ್ತವವಾಗಿ ಅವನು ಶರಣನನ್ನು (ಶರಣಸ್ಥಲದಲ್ಲಿರುವವನನ್ನು) ವಿರೋಧಿಸುವುದೂ ಇಲ್ಲ, ಕಡೆಗಣಿಸುವುದೂ ಇಲ್ಲ. ಶರಣಭಾವಕ್ಕೂ ಐಕ್ಯಭಾವಕ್ಕೂ ವ್ಯತ್ಯಾಸವಿದೆ ಎಂಬುದಷ್ಟೇ ವಿರೋಧ ಎಂಬುದರ ಅರ್ಥ. (೩:೨೮೦).

**ಶರಣ ಸತಿ ಲಿಂಗಪತಿ :** ನೋಡಿ : **ಲಿಂಗಪತಿ ಶರಣಸತಿ**

**ಶರಣಸ್ಥಲ :** ನೋಡಿ : **ಅಂಗಸ್ಥಲ ಲಿಂಗಸ್ಥಲ ಸಂಬಂಧ.**

**ಶರಣಸ್ಥಲತ್ರಿವಿಧ :** ಶರಣಸ್ಥಲದಲ್ಲಿಯೂ, ಅದರ ಹಿಂದಿನ ಸ್ಥಲಗಳಲ್ಲಿರುವಂತೆ, ಮೂರು ಉಪಸ್ಥಲಗಳಿರುತ್ತವೆ. ಅವೆಂದರೆ : ಇಷ್ಟಲಿಂಗಾರ್ಚಕ, ಪ್ರಾಣಲಿಂಗಾರ್ಚಕ, ಮತ್ತು ತೃಪ್ತಿ (ಭಾವ) ಲಿಂಗಾರ್ಚಕ. ಶರಣಸ್ಥಲದಲ್ಲಿರುವವನು ಆಗಲೆ ಪ್ರಸಾದಿ ಮತ್ತು ಪ್ರಾಣಲಿಂಗಿ ಸ್ಥಲಗಳನ್ನು ಹಾಯ್ದು ಬಂದಿರುವುದರಿಂದ, ಅವನು ಇಷ್ಟಲಿಂಗಪೂಜೆಯನ್ನು ಮಾಡಿದರೂ ಅದು ಕೇವಲ ಔಪಚಾರಿಕ ಆಚಾರವಾಗಿರುತ್ತದೆ. ಇಷ್ಟಲಿಂಗ ಅರ್ಚನೆಯಲ್ಲಿ ಅವನು ಬಾಹ್ಯ ವಸ್ತುಗಳನ್ನು ಅರ್ಪಿಸುತ್ತಾನೆ. ಆದರೆ ಅವನು ಇಷ್ಟಲಿಂಗಾರ್ಚನೆಯ

ಸಮಯದಲ್ಲಿಯೂ ತನ್ನಲ್ಲಿರುವ ಪ್ರಾಣಲಿಂಗವನ್ನು ಜಾಗ್ರತಗೊಳಿಸುತ್ತಾನೆ. ಆಗ ಅವನು ಅದಕ್ಕೆ ಬಾಹ್ಯ ವಸ್ತುಗಳನ್ನು ಸಮರ್ಪಿಸದೆ ತನ್ನ ಅಂತಃಕರಣ, ಇಂದ್ರಿಯಾದಿಗಳನ್ನು ಸಮರ್ಪಿಸುತ್ತಾನೆ. ಧ್ಯಾನದಲ್ಲಿ ತಾನೇ ಪರಶಿವನ ಸ್ವರೂಪವೆಂಬುದನ್ನು ತಿಳಿದುಕೊಂಡಾಗ, ತೃಪ್ತಿಲಿಂಗಾರ್ಚನೆಯಾಯಿತೆಂದರ್ಥ. ಅಲ್ಲಿ ತನ್ನ ಆತ್ಮ (ಭಾವ)ವನ್ನೆ ಅವನು ಲಿಂಗಕ್ಕೆ ಅರ್ಪಿಸುವುದರಿಂದ, ಅವನು ಶಿವನಿಗೆ ಸಂಪೂರ್ಣ ಶರಣಾಗಿದ್ದಾನೆಂದರ್ಥ. ಅವನೇ ಪೂರ್ಣ ಅರ್ಥದಲ್ಲಿ ಶರಣ.

**ಶರಣಸ್ಥಲ ಸದಾಶಿವನಾಶನ :** ಪ್ರಪಂಚದ ವಸ್ತುಗಳನ್ನಷ್ಟೇ ಅಲ್ಲ, ತನ್ನ ದೇಹಕರಣೇಂದ್ರಿಯಾದಿಗಳನ್ನೂ, ತನ್ನ ಆತ್ಮವನ್ನೂ ಸಂಪೂರ್ಣವಾಗಿ ಶಿವನಿಗೆ ಅರ್ಪಿಸಿದವನೇ ಶರಣ. ಎಲ್ಲರೂ ಶರಣ ಸ್ಥಲವನ್ನು ಪರಿಣಾಮಕಾರಿಯಾಗಿ ಆಚರಿಸಿದರೆ, ಅನುಗ್ರಹ ಕಾರ್ಯ ಮಾಡುವ ಸದಾಶಿವನ ಅಗತ್ಯವಿರುವುದಿಲ್ಲ. ಆಗ ಪರಶಿವ ಅವನನ್ನು ನಾಶಗೊಳಿಸಬಹುದು. (೮:೨೦೦೨)

**ಶರಣು :** ನಮಸ್ಕಾರ.

**ಶರೀರವಿಲ್ಲದ ಸಂಬಂಧಿ :** ಲಿಂಗೈಕ್ಯನಾದ ಶರಣನಿಗೆ ಶರೀರವಿದ್ದರೂ ಅವನು ಅದರ ಸಲುವಾಗಿ ಯಾವ ಸ್ವಾರ್ಥ ಕ್ರಿಯೆಗಳನ್ನೂ ಮಾಡುವವನಲ್ಲ. ಅವನು ಪರಶಿವನ ಇಚ್ಛೆಗನುಸಾರವಾಗಿ ಎಲ್ಲವನ್ನೂ ಮಾಡುತ್ತಾನೆಯೇ ಹೊರತು, ತನ್ನ ಇಚ್ಛೆಗನುಸಾರವಾಗಿ ಅಲ್ಲ, ಏಕೆಂದರೆ ಅವನಿಗೆ ಸ್ವಾರ್ಥ ಇಚ್ಛೆಗಳೇ ಇಲ್ಲ. ಅಲ್ಲದೆ, ಅವನು ತನ್ನ ಆತ್ಮ, ಇಂದ್ರಿಯಗಳು, ಅಂತ:ಕರಣಗಳನ್ನೂ ಅಲ್ಲದೆ ದೇಹವನ್ನೂ ಪರಶಿವನಿಗೆ ಅರ್ಪಿಸಿರುವುದರಿಂದ, ಅವನಿಗೆ ತನ್ನದೆಂಬ ದೇಹವಿಲ್ಲ. (೩:೭೬೯)

**ಶಸ್ತ್ರವೈದ್ಯ :** ಭವರೋಗಕ್ಕೆ ಜಂಗಮನು ಶಸ್ತ್ರಚಿಕಿತ್ಸಕ. (ಶಸ್ತ್ರ ವೈದ್ಯ)

**ಶಾಂತಿ :** ಶಾಂತಿ ಎಂಬುದು ಕಲೆಗಳಲ್ಲಿ ಒಂದು. ಇದು ಪರಶಿವನಿಗೆ ಎಲ್ಲವನ್ನೂ ಅರ್ಪಿಸಿದ ಸಾಧಕನಿಗೆ ಉಂಟಾಗುತ್ತದೆ.

**ಶಾಂತ್ಯಾತೀತ :** ಇದು ಶಾಂತಿ ಕಲೆಗಿಂತ ಹೆಚ್ಚಿನ ಮಾನಸಿಕ ಸ್ಥಿತಿ. ಎಲ್ಲವನ್ನು ಅರ್ಪಿಸಿಕೊಂಡು, ಕೊನೆಗೆ ಅನುಭಾವದಲ್ಲಿ ಅಹಂನಷ್ಟವಾದವನಿಗೆ ಯಾವ ಸ್ವಾರ್ಥ ಭಾವನೆಗಳೂ ಇಲ್ಲವಾಗುತ್ತವೆ. ಅವನಿಗೆ ಲಭಿಸುವ ಮಾನಸಿಕ ಸ್ಥಿತಿಯೇ ಶಾಂತ್ಯಾತೀತ ಕಲೆ. ಕೆಲವು ವೇಳೆ ಇದನ್ನು ಭಕ್ತಿ ಶಕ್ತಿಯ ಗುಂಪಿನಲ್ಲಿ ಸೇರಿಸುತ್ತಾರೆ.

**ಶಾಂಭವಯೋಗ :** ಶಂಭುವನ್ನು ಕುರಿತು ಏಕಾಗ್ರ ಚಿತ್ತದ ಮೂಲಕ ಐಕ್ಯತೆಯ ಸಾಧಿಸುವ ಯೋಗ.

**ಶಾಸ್ತ್ರಮದ :** ೧. ತನಗೇ ಶಾಸ್ತ್ರ ಗೊತ್ತು ಎಂಬ ಮದ. ೨. ನಾವು ಅನುಸರಿಸುವ ಶಾಸ್ತ್ರವೇ ಹಿರಿದು ಎಂಬ ಮದ. (೯:೧೨೦೦)

**ಶಿಕ್ಷಾಗುರು :** ಸಂಸಾರವು ಹೇಯವೆನಿಸಿ ಆಧ್ಯಾತ್ಮಿಕ ಜೀವನ ನಡೆಸುವ ಉದ್ದೇಶದಿಂದ ಮಾರ್ಗದರ್ಶನಕ್ಕೆ ಬಂದವನಿಗೆ ಕರುಣೆಯಿಂದ ಲಿಂಗದೀಕ್ಷೆ ಮಾಡುವವನು ದೀಕ್ಷಾಗುರು. ಆದರೆ ಬರೀ ದೀಕ್ಷೆಯಿಂದ ಶಿವಾನುಗ್ರಹ ಪ್ರಾಪ್ತಿಯಾಗುವುದಿಲ್ಲ. ಸಾಧಕನು ಮೋಕ್ಷ ಪಡೆಯಲು ಇನ್ನೂ ಹೆಚ್ಚಿನ ಶಿಕ್ಷಣ ಪಡೆಯಬೇಕು. ಈ ಹೆಚ್ಚಿನ ಆಧ್ಯಾತ್ಮಿಕ ಶಿಕ್ಷಣವನ್ನು ಕೊಡುವವನೇ ಶಿಕ್ಷಾಗುರು.

**ಶಿಕ್ಷಾಪಾದೋದಕ :** ಪಾದೋದಕವನ್ನು ನೇರವಾಗಿ ಸ್ವೀಕರಿಸದೆ, ಅದನ್ನು ವಿಭೂತಿಯಲ್ಲಿ ಮಿಶ್ರ ಮಾಡಿದರೆ, ಅದು ಶಿಕ್ಷಾ ಪಾದೋದಕವೆನಿಸಿಕೊಳ್ಳುತ್ತದೆ.

**ಶಿಖಾಚಕ್ರ :** ನೆತ್ತಿಯಲ್ಲಿರುವ ಚಕ್ರ. ಇದು ಎಂಟನೆಯ ಚಕ್ರ.

**ಶಿಲಾಕಾಷ್ಠ ನ್ಯಾಯ :** ಕಲ್ಲಿನಲ್ಲಿ ಬೆಂಕಿಯಿದ್ದರೂ ಅದು ಮತ್ತೊಂದು ಕಲ್ಲಿನೊಡನೆ ಘರ್ಷಿಸದಿದ್ದರೆ ಅದರಲ್ಲಿರುವ ಬೆಂಕಿ ಹೊರಬರುವುದಿಲ್ಲ. ಅದೇ ರೀತಿ, ಕಟ್ಟಿಗೆಯಲ್ಲಿ ಬೆಂಕಿಯಿದ್ದರೂ, ಅದಕ್ಕೆ ಹೊರಗಿನಿಂದ ಬೆಂಕಿ ತಗುಲದಿದ್ದರೆ, ಅದು ಉರಿಯುವುದಿಲ್ಲ. ಈ ವಿಷಯವನ್ನು ಉಪಯೋಗಿಸಿಕೊಂಡು ಮುಮ್ಮಡಿ ಕಾರ್ಯೇಂದ್ರನೆಂಬ ವಚನಕಾರ, ಕಲ್ಲನ್ನು ಗುರುವಿಗೂ ಬೆಂಕಿಯನ್ನು ಜ್ಞಾನಕ್ಕೂ, ಕಟ್ಟಿಗೆಯನ್ನು ಶಿಷ್ಯನಿಗೂ ಹೋಲಿಸಿ, ತನ್ನ ಶಿಲಾಕಾಷ್ಠನ್ಯಾಯವನ್ನು ಹೀಗೆ ಪ್ರತಿಪಾದಿಸಿದ್ದಾನೆ :

ಶಿಲೆಯೊಳಗಿರುವ ಅಗ್ನಿಯು ಕಾಷ್ಠವನ್ನು ಹತ್ತಿಸಿ ಅದರೊಳಗಿರುವ ರಸವನ್ನು ನಾಶಮಾಡಿ, ಆ ಕಾಷ್ಠವನ್ನು ಅಗ್ನಿಮಯ ಮಾಡುತ್ತದೆಯಲ್ಲದೆ, ಕೊನೆಯಲ್ಲಿ ಆ ಕಾಷ್ಠವು ಇಲ್ಲದಂತಾಗುತ್ತದೆ. ಆದರೆ ಶಿಲೆಯು ಇಲ್ಲದಂತಾಗುವುದಿಲ್ಲ; ಅದು ಹಾಗೇ ಉಳಿಯುತ್ತದೆ. ಅದೇ ರೀತಿ ಗುರುವು ತನ್ನಲ್ಲಿರುವ ಜ್ಞಾನದಿಂದ ಶಿಷ್ಯನಲ್ಲಿ ಆಧ್ಯಾತ್ಮಿಕ ಜ್ಞಾನವನ್ನು ಹತ್ತಿಸಿ, ಅವನಲ್ಲಿರುವ ಪಾಪವೆಂಬ ರಸವನ್ನು ನಾಶಮಾಡಿ, ಅವನನ್ನು ಜ್ಞಾನಮಯವನ್ನಾಗಿ ಮಾಡಿದಾಗ, ಕೊನೆಗೆ ಶಿಷ್ಯನು ಬಯಲಾಗುತ್ತಾನೆ. ಆದರೆ ಗುರುವು ಅಜ್ಞಾನಿಯಾಗಿದ್ದರೆ ತಾನು ಈ ಉದ್ದೀಪನ ಕಾರ್ಯಮಾಡಿ, ಬಯಲಾಗದೆ ಹಾಗೆ ಉಳಿಯುತ್ತಾನೆ. ಇದೇ ಶಿಲಾಕಾಷ್ಠನ್ಯಾಯ. (೧೩:೨೩೪೨) (ನೋಡಿ : **ಕಾಷ್ಠಶಿಲಾನ್ಯಾಯ**)

**ಶಿವ :** ಈ ಪದವನ್ನು ವಚನಕಾರರು ಕನಿಷ್ಠ ಮೂರು ಅರ್ಥಗಳಲ್ಲಿ ಬಳಸಿದ್ದಾರೆ. ೧. ವಿಶಾಲವಾದ ಅರ್ಥದಲ್ಲಿ ಈ ಪದವು ಸೃಷ್ಟಿ, ಸ್ಥಿತಿ ಇತ್ಯಾದಿಗಳನ್ನು ಮಾಡುವ ಶಿವನಿಗಾದರೂ ಅನ್ವಯಿಸಬಹುದು, ಪರಪ್ರಜ್ಞೆಯಾಗಲಿ ಸ್ವಪ್ರಜ್ಞೆಯಾಗಲಿ ಇಲ್ಲದ ಪರಶಿವ ಅಥವಾ ಶೂನ್ಯ ಲಿಂಗಕ್ಕಾದರೂ ಅನ್ವಯಿಸಬಹುದು. ೨. ಸಂಕುಚಿತ ಅರ್ಥದಲ್ಲಿ ಶಿವ ಎಂದರೆ ಸಾದಾಖ್ಯಗಳಲ್ಲಿ ಒಂದಾದ ಶಿವಸಾದಾಖ್ಯ. ಸೃಷ್ಟಿಯ ಮುಖವಾದ ಪರಶಿವನ ಒಂದು ಅವಸ್ಥೆಯೇ ಶಿವ ಅಥವಾ ಶಿವಸಾದಾಖ್ಯ. ಶಿವಸಾದಾಖ್ಯವು ಎಲ್ಲ ರೀತಿಯ

ಸೃಷ್ಟಿಯನ್ನೂ ಮಾಡದೆ, ಒಂದು ಶಕ್ತಿಯ ಮೂಲಕ ಒಂದು ಆಂಶಿಕ ಸೃಷ್ಟಿಯನ್ನು ಮಾಡುತ್ತದೆ. ೩. ಇನ್ನೂ ಒಂದು ಸಂಕುಚಿತ ಅರ್ಥದಲ್ಲಿ ಶಿವನು ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹ ಎಂಬ ಪಂಚಕೃತ್ಯಗಳನ್ನು ಮಾಡುತ್ತಾನೆ. ಆದರೆ ಶಿವ ಶೂನ್ಯಲಿಂಗವಲ್ಲ. ಏನೂ ಮಾಡದ ಶೂನ್ಯ ಲಿಂಗ, ಪಂಚಕೃತ್ಯಗಳನ್ನು ಮಾಡುವ ಶಿವ, ಆಂಶಿಕ ಸೃಷ್ಟಿ ಮಾಡುವ ಶಿವಸಾದಾಖ್ಯ, ಮೂವರೂ ಒಂದೇ ಪರವಸ್ತುವಿನ ವಿವಿಧ ಅವಸ್ಥೆಗಳಾದರೂ, ವಚನಕಾರರು, ಆಯಾ ಅವಸ್ಥೆಗಳಿಗೆ ತಕ್ಕಂತೆ ಅದಕ್ಕೆ ಸೂಕ್ತ ಹೆಸರುಗಳನ್ನು ನೀಡಿದ್ದಾರೆ. ಆದುದರಿಂದ, ಪಾರಿಭಾಷಿಕವಾಗಿ ಹೇಳಬೇಕೆಂದರೆ, ಶಿವ, ಸಾದಾಖ್ಯ, ಶೂನ್ಯ ಇವಕ್ಕೆ ಬೇರೆ ಬೇರೆ ಅರ್ಥಗಳಿವೆ. ಆದರೆ ಕೆಲವರು ಈ ವ್ಯತ್ಯಾಸವನ್ನು ನಿರ್ಲಕ್ಷಿಸಿ, ಶಿವ ಎಂಬ ಒಂದೇ ಪದವನ್ನು ಮೂರು ಅರ್ಥ ಬರುವಂತೆ ಬಳಸುತ್ತಾರೆ. (ನೋಡಿ:**ಚಿತ್ತು, ಲಿಂಗ, ಸೃಷ್ಟಿ, ಸ್ಥಿತಿ, ಪ್ರಲಯ, ಶಿವಶಕ್ತಿ ಸಂಪುಟ, ಶಿವಶಕ್ತ್ಯಾತ್ಮಕ**).

**ಶಿವಜ್ಞಾನ :** ಅನುಭಾವದ ಮೂಲಕ, ಅಥವಾ ಲಿಂಗೈಕ್ಯವಾಗುವ ಮೂಲಕ, ಪಡೆದ ಶಿವನ ಬಗೆಗಿನ ಜ್ಞಾನ.

**ಶಿವದಾರ :** ಇಷ್ಟಲಿಂಗವನ್ನಿಡುವ ಕರಡಿಗೆ (ಗುಂಡುಗಡಿಗೆ)ಯನ್ನು ಕೊರಳಿಗೆ ತೂಗು ಹಾಕಿಕೊಳ್ಳಲು ಬೇಕಾದ ದಾರ.

**ಶಿವದಾಸ :** ಶಿವನಿಗೂ, ಶಿವಶರಣರಿಗೂ ದಾಸನಾದವನು; ಭೃತ್ಯಾಚಾರ ಪ್ರವರ್ತಕ.

**ಶಿವದೀಕ್ಷೆ :** ವೀರಶೈವ ಗುರುವು ಕೊಡುವ ಲಿಂಗದೀಕ್ಷೆ. ಸಂಸಾರದೆಡೆಗೆ ಹೇಯದೃಷ್ಟಿ ಬೀರುತ್ತಾ, ಆಧ್ಯಾತ್ಮದತ್ತ ಒಲವು ತೋರುತ್ತಾ ಬಂದ ಮುಮುಕ್ಷುವಿಗೆ ಗುರುವು ಕರುಣೆಯಿಂದ ಲಿಂಗಕೊಟ್ಟು, ದೀಕ್ಷೆಯ ಮೂಲಕ ಅವನನ್ನು ಲಿಂಗಾಯತನನ್ನಾಗಿ ಮಾಡುತ್ತಾನೆ. ದೀಕ್ಷೆಯು ಕೆಲವು ವಿಶಿಷ್ಟ ವಿಧಿಗಳನ್ನೊಳಗೊಳ್ಳುತ್ತದೆ.

**ಶಿವದೂತ :** ಮಾನವರ ಮತ್ತು ಪ್ರಾಣಿಗಳ ಪ್ರಾಣವನ್ನು ತೆಗೆದುಕೊಂಡು ಹೋಗಲು ಯಮನಿಂದ ನಿಯೋಜಿತರಾದವರು ಹೇಗೆ ಯಮದೂತರೆನಿಸಿಕೊಳ್ಳುತ್ತಾರೋ ಹಾಗೆ, ಜಂಗಮರಿಗೆ ಉದಾಸೀನ ಮಾಡಿದ ಲಿಂಗ ಪೂಜಕರನ್ನು ದಂಡಿಸಲು ಶಿವನಿಂದ ನಿಯೋಜಿತರಾದವರು ಶಿವದೂತರೆನಿಸಿಕೊಳ್ಳುತ್ತಾರೆ. (೧:೪೨೪)

**ಶಿವದೃಷ್ಟಿ :** ಐಕ್ಯನಿಗೆ ತಾನೆಂಬ ಭಾವ ಇಲ್ಲವಾಗುವುದರಿಂದ, ತನ್ನ ಕರಣಗಳೆಲ್ಲವೂ ಶಿವನಕರಣಗಳೆಂದೂ, ತನ್ನ ಇಚ್ಛೆಗಳೆಲ್ಲ ಶಿವನ ಇಚ್ಛೆಗಳೆಂದೂ, ತನ್ನ ದೃಷ್ಟಿ ಶಿವನ ದೃಷ್ಟಿಯೆಂದೂ ತಿಳಿದುಕೊಳ್ಳುತ್ತಾನೆ. (೪:೧೪೦೩)

**ಶಿವದೇಹ :** ಐಕ್ಯಸ್ಥಿತಿಯನ್ನು ತಲುಪಿದವನಿಗೆ ತಾನೆಂಬ ಭಾವ ಇಲ್ಲವಾಗಿ, ತಾನು ಶಿವನ ಬಳಕೆಗಾಗಿ ಇರುವ ದೇಹ ಎಂಬ ಅರಿವು ಮೂಡುತ್ತದೆ. (೪:೧೪೦೩)

**ಶಿವನ ಚಿದ್ಗರ್ಭ :** ಶಿವನೆಂದರೆ ಚಿತ್ತು. ಆದರೆ ವಚನಕಾರರ ಚಿತ್ತು, ಚಿತದ್ವೈತದ ಚಿತ್ತಿನಂತೆ ನಿರ್ಗುಣ ನಿರಾಕಾರ ಚಿತ್ತಲ್ಲ. ಆ ಚಿತ್ತಿಗೆ ಶಕ್ತಿ ಎಂಬ ಗುಣವಿದ್ದು, ಅದರಲ್ಲಿ ಎಲ್ಲವೂ ಅಡಕವಾಗಿದೆ. ಪ್ರತಿಯೊಂದು ಇಂದ್ರಿಯಗೋಚರ ವಸ್ತುವೂ ಶಕ್ತಿಯ ರೂಪಾದುದರಿಂದ, ಹಾಗೂ ಅದು ಪರಶಿವನೆಂಬ ಚಿತ್ತಿನಲ್ಲಿ ಅಂತಸ್ಥವಾಗಿರುವುದರಿಂದ ಪರಶಿವನೆ ಚಿದ್‌ಗರ್ಭವೆನಿಸಿಕೊಳ್ಳುತ್ತಾನೆ (೫:೧೭೨).

**ಶಿವನ ಪಂಚಾವಸ್ಥೆ :** ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹ. ಈ ಕೃತ್ಯಗಳನ್ನು ಶಿವನು ಬೇರೆಯವರ ಕೈಯಿಂದ ಮಾಡಿಸುತ್ತಾನೆಂಬ ಮಾತಿಗೆ ವಿರುದ್ಧವಾಗಿ, ಶಿವನೇ ಐದು ಅವಸ್ಥೆಗಳ ನೈದಿ, ಈ ಕೃತ್ಯಗಳನ್ನು ಮಾಡುತ್ತಾನೆನ್ನಬಹುದು. (೪:೧೬೧೧)

**ಶಿವಪಥ :** ಶಿವನನ್ನು ಸಾಕ್ಷಾತ್ಕರಿಸಿಕೊಳ್ಳುವ ಮಾರ್ಗ. ಶಿವಯೋಗ. (ನೋಡಿ:ಶಿವಯೋಗ)

**ಶಿವಪೂಜೆ :** ವೀರಶೈವರು ಸ್ಥಾವರಲಿಂಗ ಪೂಜೆಯನ್ನು ಮಾಡಬಾರದು. ಆದುದರಿಂದ ಶಿವಪೂಜೆಯೆಂದರೆ, ಅವರ ಪ್ರಕಾರ, ಇಷ್ಟಲಿಂಗ ಪೂಜೆಯೇ.

**ಶಿವಬಟ್ಟೆ :** ಶಿವಪಥ. (ನೋಡಿ : ಶಿವಯೋಗ)

**ಶಿವಬೀಜ :** ಶಿವನಮಂತ್ರ ಅಥವಾ ಓಂ ಎಂಬ ಬೀಜಮಂತ್ರ. (೯:೮೫೯)

**ಶಿವಭಕ್ತ :** ಶೈವ ಬ್ರಾಹ್ಮಣರೂ, ಶೈವಸಿದ್ಧಾಂತಿಗಳೂ ಶಿವಭಕ್ತರೇ ಆದರೂ, ವಚನಗಳ ಪರಿಭಾಷೆಯಲ್ಲಿ ಶಿವಭಕ್ತ ಎಂಬ ಪದವು ಇಷ್ಟಲಿಂಗಧಾರಿಗಳಿಗೆ ಮಾತ್ರ ಅನ್ವಯಿಸುತ್ತದೆ. ವೀರಶೈವ ಗುರುವಿಗೆ ಮಾತ್ರ ಮಾನ್ಯತೆ ನೀಡಿ, ಇತರ ಶೈವ ಗುರುಗಳಿಗೆ ಮಾನ್ಯತೆನೀಡದಿರುವುದನ್ನು ನೋಡಿದರೆ, ಶಿವಭಕ್ತ ಎಂಬುದಕ್ಕೆ ನೀಡಿದ ಈ ಸಂಕುಚಿತ ಅರ್ಥ ಸಮರ್ಥನೀಯವೆನಿಸುತ್ತದೆ. ಆದರೆ ಶಿವಭಕ್ತರೆಲ್ಲಾ ಕುಲಜರು. ಅವರಲ್ಲಿ ಜಾತಿಭೇದ ಸಲ್ಲದು, ಎನ್ನುತ್ತಾರೆ ವಚನಕಾರರು.

**ಶಿವಭಾವಕ :** ಶಿವನನ್ನೆ ಯಾವಾಗಲೂ ಭಾವಿಸುತ್ತಾ, ತಾನು ನೋಡುವ ನೋಟ, ಕೇಳುವ ಶಬ್ದ, ಇತ್ಯಾದಿಗಳೆಲ್ಲವೂ ಶಿವನಿಗಾಗಿಯೇ ಎಂದು ಭಾವಿಸುವವನು. (೮:೧೬೧೫)

**ಶಿವಮಂತ್ರಕಾಯ :** ಯಾವಾಗಲೂ ಶಿವನನ್ನೇ ನೆನೆಸುತ್ತಿರುವವನ ಕಾಯ. ಹೀಗೆ ಯಾವಾಗಲೂ ಶಿವನನ್ನೆ ನೆನೆಸುವುದು ಅನುಭಾವಿಗೆ ಮಾತ್ರ ಸಾಧ್ಯ. ಅನುಭಾವಿಗೆ ಎಲ್ಲವೂ ಲಿಂಗಮಯವಾಗಿ ತೋರುವುದರಿಂದ, ಅವನಿಗೆ ಬೇರೆ ಕಾಣಿಸಲಾಗಲಿ ನೆನೆಯಲಾಗಲಿ ಸಾಧ್ಯವಿಲ್ಲ. ಇಂಥ ಲಿಂಗೈಕ್ಯನಿಗೆ ಜಾತಿ ಸೂತಕವಿಲ್ಲ, ವರ್ಣಾಶ್ರಮ ಭೇದವಿಲ್ಲ. ಅಷ್ಟೇಕೆ ದೇಹಾಭಿಮಾನವೂ ಇಲ್ಲ. (೧೧:೧೦೮೩)

**ಶಿವಯೋಗ :** 'ಯೋಗ' ಎಂಬ ಪದವು 'ಯುಜ್' ಎಂಬ ಧಾತುವಿನಿಂದ ವ್ಯುತ್ಪತ್ತಿಯಾಗಿದ್ದು, ಅದಕ್ಕೆ 'ಕೂಟ' ('ಕೂಡುವುದು' ಅಥವಾ 'ಬೆರೆಯುವುದು') ಎಂಬ ಅರ್ಥವಿದೆ.

ಸಾಮಾನ್ಯವಾಗಿ, ಈ ಅರ್ಥದ ಆಧಾರದ ಮೇಲೆ 'ಯೋಗವೆಂದರೆ ಆತ್ಮವು ಪರಮಾತ್ಮನಲ್ಲಿ ಬೆರೆಯುವುದು' ಎಂದು ಹೇಳಲಾಗುವುದು. ಇದೇ ಅರ್ಥದ ಆಧಾರದ ಮೇಲೆ, 'ಜೀವನು ಶಿವನೊಂದಿಗೆ ಬೆರೆಯುವುದೇ ಶಿವಯೋಗ' ಎನ್ನಬಹುದು. ಶಿವನನ್ನು ಸೇರುವುದು ಶಿವಯೋಗಿಗಳ ಧ್ಯೇಯ.

'ಯೋಗ' ಎಂಬ ಪದಕ್ಕೆ 'ಮಾರ್ಗ' ಎಂಬ ಅರ್ಥವೂ ಇದೆ. ಉದಾಹರಣೆಗೆ, ಭಕ್ತಿಯೋಗ, ಕರ್ಮಯೋಗ ಎಂಬ ಪದಗಳಿಗೆ ಭಕ್ತಿಮಾರ್ಗ, ಕರ್ಮಮಾರ್ಗ ಎಂಬ ಪರ್ಯಾಯ ಪದಗಳೂ ಇವೆ. ಭಕ್ತಿ ಅಥವಾ ಕರ್ಮಮಾರ್ಗವಾಗಿ ಪರಮಾತ್ಮನನ್ನು ಸೇರುವುದು ಎಂಬುದು ಈ ಪದಗಳ ಅರ್ಥ. ಅದೇ ರೀತಿ, ಶಿವಯೋಗವೆಂದರೆ ಶಿವನನ್ನು ಸೇರುವ ಮಾರ್ಗ, ಶಿವಪಥ ಎಂಬರ್ಥವೂ ಇದೆ.

ವಚನಕಾರರ ಪ್ರಕಾರ, ಮನುಷ್ಯ ಪರಶಿವನಲ್ಲ, ಪರಶಿವನಾಗಲಾರ. ಆದರೆ ಅವನಲ್ಲಿ ಶಿವಾಂಶವಿದೆ. ಅವನು ಮೂಲತಃ ಪರಶಿವನ ಅಂಗ (ಭಾಗ ಅಥವಾ ದೇಹ). ಆದರೆ ಅವನು ಈ ಸತ್ಯವನ್ನು ಮರೆತು, ತಾನು ಸ್ವತಂತ್ರ, ಅಂಗಭೋಗವೇ ಜೀವನದ ಪರಮೋದ್ದೇಶ, ಎಂದು ತಪ್ಪು ತಿಳಿದು, ನಾನಾ ರೀತಿಯ ಆಸೆಗಳಿಗೊಳಗಾಗಿ, ಅವುಗಳನ್ನು ಪೂರೈಸಿಕೊಳ್ಳಲು ನಾನಾರೀತಿಯ ಕರ್ಮಗಳನ್ನು ಮಾ೯, ಅವುಗಳ ಫಲಗಳನ್ನು ಅನುಭವಿಸಲು ನಾನಾರೀತಿಯ ಜನ್ಮಗಳನ್ನೆತ್ತಿ, ಸಂಸ್ಕಾರಕ್ಕೆ ? ದ್ಧನಾಗಿ, ಅನೇಕ ರೀತಿಯ ದುಃಖವನ್ನು ಅನುಭವಿಸುತ್ತಾನೆ. ಈ ದುಃಖವನ್ನುಂಟು ಮಾಡುವ ಕರ್ಮವನ್ನು ಧ್ವಂಸ ಮಾಡಿ, ಸಂಸಾರ ಬಂಧನದಿಂದ ತಪ್ಪಿಸಿಕೊಂಡು, ತಾನು ದೇಹೇಂದ್ರಿಯಾದಿ ಕರಣಗಳಲ್ಲ, ಶಿವನ ಅಂಗವಾದ ಆತ್ಮ ಎಂಬ ಜ್ಞಾನವನ್ನು ಪಡೆದು, ಪುನಃ ಮೊದಲಿನಂತೆ ಶಿವನೊಂದಿಗೆ ಸಾಮರಸ್ಯ ಪಡೆಯುವುದೇ ಶಿವಯೋಗದ ಧ್ಯೇಯ. ಇದನ್ನು ಪಡೆಯಲು ಅಗತ್ಯವಾದ ಶಕ್ತಿಗಳನ್ನು ಅವನು ಹೊರಗಿನಿಂದ ಪಡೆಯಬೇಕಾಗಿಲ್ಲ, ಅವು ಅವನಲ್ಲೇ ಇವೆ. ಅದನ್ನು ಸರಿಯಾದ ಗುರುವಿನ ಮಾರ್ಗದರ್ಶನದಲ್ಲಿ ಜಾಗ್ರತಗೊಳಿಸಿ, ಸದುಪಯೋಗಪಡಿಸಿಕೊಂಡು, ಅವುಗಳನ್ನು ಶಿವಾಭಿಮುಖವಾಗಿ ಮಾಡಿದರೆ, ಶಿವಯೋಗ ಸಫಲವಾದಂತೆಯೇ.

ಈ ಶಕ್ತಿಗಳನ್ನು ಶಿವಾಭಿಮುಖವಾಗಿ ಮಾಡಿದರೆ ಆಗ ಅವು ಭಕ್ತಿ ಅಥವಾ ಭಕ್ತಿಶಕ್ತಿಗಳೆನಿಸಿಕೊಳ್ಳುತ್ತವೆ. ಶಕ್ತಿಯು ಚಿತ್ ಶಕ್ತಿ, ಪರಾಶಕ್ತಿ, ಆದಿಶಕ್ತಿ, ಇಚ್ಛಾ ಶಕ್ತಿ, ಜ್ಞಾನಶಕ್ತಿ, ಮತ್ತು ಕ್ರಿಯಾಶಕ್ತಿ ಎಂದು ಆರು ಪ್ರಕಾರವಾಗಿದ್ದು, ಅವು ಭಕ್ತಿಗಳಾಗಿ ಪರಿವರ್ತಿತವಾದಾಗ, ಶ್ರದ್ಧಾಭಕ್ತಿ, ನಿಷ್ಠಾಭಕ್ತಿ, ಅವಧಾನಭಕ್ತಿ, ಅನುಭಾವ ಭಕ್ತಿ, ಆನಂದ ಭಕ್ತಿ ಮತ್ತು ಸಮರಸ ಭಕ್ತಿ ಎನಿಸಿಕೊಳ್ಳುತ್ತವೆ. ಈ ಶಕ್ತಿಗಳನ್ನು ಭಕ್ತಿಗಳನ್ನಾಗಿ ಪರಿವರ್ತಿಸುವ ದಾರಿಯಲ್ಲಿ ಆರು ಮೈಲಿಕಲ್ಲುಗಳಿದ್ದು, ಅವನ್ನು ಷಟ್‌ಸ್ಥಲ ಎಂದು ಕರೆಯಲಾಗುತ್ತದೆ. ಆದುದರಿಂದ, ಶಿವಯೋಗವು ಆರು ಹಂತಗಳಲ್ಲಿ ನಡೆಯುವ ಒಂದು ಆಧ್ಯಾತ್ಮಿಕ ಪ್ರಯೋಗ.

ಪರಶಿವನಲ್ಲಿರುವ ಶಕ್ತಿಯೇ ಚಿತ್‌ಶಕ್ತಿ ಮುಂತಾದ ಶಕ್ತಿಗಳಾಗಿ ವಿಕಾಸಗೊಂಡು, ಮನುಷ್ಯನಲ್ಲಿ ಪಂಚಭೂತಗಳಿಂದಾದ ದೇಹ, ಅಂತಃಕರಣಗಳು, ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳಾಗಿ ರೂಪಾಂತರಗೊಂಡಿದೆ. ಅವುಗಳನ್ನು ಭಕ್ತಿಗಳನ್ನಾಗಿ ಪರಿವರ್ತಿಸುವುದೆಂದರೆ, ಮೊದಲು ಅವುಗಳನ್ನು ಅಧಾರ್ಮಿಕವಾಗಿ ವರ್ತಿಸದಂತೆ ತಡೆಯುವುದು; ಅನಂತರ, ಅವು ಶಿವಕೇಂದ್ರೀಯ ವರ್ತನೆಯಲ್ಲಿ ಮಾತ್ರ ತೊಡಗುವಂತೆ ಪ್ರೇರೇಪಿಸುವುದು; ಉದಾಹರಣೆಗೆ ಕೈಗಳನ್ನು ಕಳ್ಳತನ ಮಾಡದಂತೆ ತಡೆಹಿಡಿದು, ಲಿಂಗಪೂಜೆ ಮಾಡುವಂತೆ ಅವುಗಳನ್ನು ಪ್ರೇರೇಪಿಸುವುದು; ಲೌಕಿಕ ವಿಷಯಗಳಿಗೆ ಸತತವಾಗಿ ಹರಿದಾಡುವ ಮನಸ್ಸನ್ನು ನಿಯಂತ್ರಿಸಿ ಶಿವಮಂತ್ರವನ್ನು ಉಚ್ಚರಿಸುವಂತೆ ಅಥವಾ ಶಿವಧ್ಯಾನ ಮಾಡುವಂತೆ ನಿಯಂತ್ರಿಸುವುದು, ಇತ್ಯಾದಿ.

ಇದೇ ತತ್ವವನ್ನು ಮತ್ತೊಂದು ರೀತಿಯಲ್ಲಿ ಮಂಡಿಸಬಹುದು : ಮೇಲೆ ತಿಳಿಸಿದ ಶಕ್ತಿಗಳು, ಸ್ಥೂಲ ಶರೀರ, ಸೂಕ್ಷ್ಮ ಶರೀರ ಮತ್ತು ಕಾರಣ ಶರೀರ ಎಂದು ಮೂರು ರೀತಿಯ ಅಂಗಗಳಾಗಿ ರೂಪಾಂತರಗೊಂಡಿವೆ. ಸಾಧಕನು ಇವುಗಳನ್ನು ಕ್ರಮವಾಗಿ ತ್ಯಾಗಾಂಗ, ಭೋಗಾಂಗ ಮತ್ತು ಯೋಗಾಂಗಗಳಾಗಿ ಪರಿವರ್ತಿಸಬೇಕು.

ಸ್ಥೂಲ ಶರೀರವು ಪಂಚಭೂತಗಳಿಂದ ಮಾಡಲ್ಪಟ್ಟಿದ್ದು, ಅದು ಹೆಚ್ಚಾಗಿ ಕ್ರಿಯಾಶಕ್ತಿಯ ರೂಪಾಂತರವಾಗಿದೆ. ಅದರ ಬಯಕೆಗಳನ್ನು ತೀರಿಸಲು ಮನುಷ್ಯನು ಕ್ರಿಯಾಶೀಲನಾಗಿ, ಅನೇಕ ರೀತಿಯ ಕರ್ಮಗಳನ್ನು ಮಾಡಬೇಕಾಗುತ್ತದೆ. ಶರಣರು ಕ್ರಿಯಾಶಕ್ತಿಯ ದುಷ್ಪ್ರಭಾವವನ್ನು ತಪ್ಪಿಸಲು, ಅಂದರೆ ಸ್ಥೂಲಶರೀರವನ್ನು ತ್ಯಾಗಾಂಗವನ್ನಾಗಿ ಮಾಡಲು, ಸಾಧಕನು ಅದನ್ನು ಧಾರ್ಮಿಕ ಕಾರ್ಯಗಳಿಗೆ ಮಾತ್ರ ಬಳಸಬೇಕೆನ್ನುತ್ತಾರೆ. ಇಲ್ಲಿ ಇಷ್ಟ ಲಿಂಗ ಪೂಜೆ, ಮತ್ತು ಇತರ ಆಚಾರಗಳು ತ್ಯಾಗಗಳಾಗಿ ಪರಿಣಮಿಸುತ್ತವೆ. ಗುರುಲಿಂಗ ಜಂಗಮರಿಗೆ ಮಾಡುವ ದಾಸೋಹ, ದಾಸೋಹಕ್ಕೆ ಪೂರ್ವಭಾವಿಯಾಗಿ ಅಗತ್ಯವಾದ ಕಾಯಕ, ಇವೆಲ್ಲ ಸ್ಥೂಲಶರೀರವನ್ನು ತ್ಯಾಗಾಂಗವನ್ನಾಗಿ ಮಾಡುವ ಕ್ರಮಗಳು.

ಸೂಕ್ಷ್ಮ ಶರೀರದಲ್ಲಿ ಜ್ಞಾನೇಂದ್ರಿಯ, ಅಂತಃಕರಣ, ಇತ್ಯಾದಿಗಳಿವೆ. ನಮ್ಮ ಸ್ಥೂಲದೇಹವು ಮರಣದಲ್ಲಿ ನಶಿಸಿಹೋದಾಗ, ಆತ್ಮವು ಉಳಿದ ಎರಡು ಶರೀರಗಳೊಡನೆ ಮುಂದಿನ ಜನ್ಮಕ್ಕೆ ಹೋಗುತ್ತದೆ. ನಮ್ಮ ಆಸೆ ಆಕಾಂಕ್ಷೆಗಳನ್ನು ಹರಿಯಬಿಡುವುದಾಗಲಿ, ನಿಯಂತ್ರಿಸುವುದಾಗಲಿ ಸೂಕ್ಷ್ಮಶರೀರವೇ ಮಾಡಬೇಕು. ಅದೇ ಕರ್ತೃ ಮತ್ತು ಭೋಕ್ತೃ. ಇದನ್ನು ಸಾಧಕನು ಭೋಗಾಂಗವಾಗಿ ಪರಿವರ್ತಿಸಬೇಕು. ಶರಣರು ದೇಹದ ಹಾಗೂ ಮಾನಸಿಕ ಬಯಕೆಗಳನ್ನು ತೀರಿಸಬಾರದು ಎಂದು ಹೇಳಲಿಲ್ಲ. ಅದರ ಬದಲು, ಬರೀ ಅದರ ಕಡೆಗೆ ಗಮನಕೊಡಬಾರದೆಂದೂ, ಎಲ್ಲವನ್ನೂ ಪರಶಿವನಿಗೆ ಅರ್ಪಿಸಿದ ನಂತರವೇ ಭೋಗಿಸಬೇಕೆಂದೂ ಹೇಳಿದರು. ಈ ರೀತಿಯ ಭೋಗಕ್ಕೆ ಎರಡು ಸ್ತರಗಳಿವೆ. ಮೊದಲನೆ

ಸ್ತರದಲ್ಲಿ ಸಾಧಕನು ತಾನು ಸೇವಿಸುವ ಆಹಾರ ಪಾನೀಯಗಳನ್ನಷ್ಟೇ ಪರಶಿವನಿಗರ್ಪಿಸಿ, ಅನಂತರ ತಾನು ಭೋಗಿಸುತ್ತಾನೆ. ಕ್ರಮೇಣ, ಅವನು ತನ್ನ ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಅಂತಃಕರಣಗಳನ್ನೆಲ್ಲಾ ಪರಶಿವನಿಗರ್ಪಿಸಿ, ಅನಂತರ ಅವುಗಳನ್ನು ಉಪಯೋಗಿಸುತ್ತಾನೆ: ಎರಡನೆ ಸ್ತರದಲ್ಲಿ, ಪ್ರತಿ ಕರ್ಮೇಂದ್ರಿಯ ಜ್ಞಾನೇಂದ್ರಿಯ ಬಾಗಿಲಿನಲ್ಲೂ ಪರಶಿವನನ್ನೇ ಪ್ರತಿಷ್ಠಾಪಿಸುತ್ತಾನೆ. ಇದರಿಂದಾಗಿ, ಅವನು ನೋಡುವ ನೋಟ, ಕೇಳುವ ಶಬ್ದ, ಇತ್ಯಾದಿಯನ್ನು ಪರಶಿವನು ಮೊದಲು ಅನುಭವಿಸಿ, ಅನಂತರ ಸಾಧಕನು ಅನುಭವಿಸುತ್ತಾನೆ. ಹೀಗೆ ಸೂಕ್ಷ್ಮ ಶರೀರದಲ್ಲಿ ಅರಿಷಡ್ವರ್ಗ ಮುಂತಾದ ಆಧ್ಯಾತ್ಮಿಕ ಜೀವನದ ವೈರಿಗಳಿದ್ದರೆ, ಭೋಗಾಂಗಗಳಲ್ಲಿ ಅಂಥ ಯಾವುದೂ ಇಲ್ಲ. ಮುಖ್ಯವಾಗಿ, ಅಲ್ಲಿ ಸ್ವಾರ್ಥವಿಲ್ಲ. ಸ್ವಾರ್ಥವಿಲ್ಲದ ಆತ್ಮ ಶುದ್ಧ.

ಕಾರಣ ಶರೀರದಲ್ಲಿ ಆತ್ಮನೂ ಹಿಂದಿನ ಜನ್ಮದ ವಾಸನೆಗಳೂ ಇರುತ್ತವೆ. ಇವುಗಳಿಂದಾಗಿ ಈಗಿನ ಜನ್ಮದಲ್ಲಿ ಅನೇಕ ರೀತಿಯ ಆಸೆ ಆಕಾಂಕ್ಷೆಗಳು ತಲೆದೋರುತ್ತವೆ. ಅಲ್ಲದೆ, ಹಿಂದಿನ ಜನ್ಮದ ಕರ್ಮಗಳು ಈಗಿನ ಜನ್ಮದಲ್ಲಿ ಫಲನೀಡುತ್ತವೆ. ಇದರಿಂದಾಗಿಯೂ ನಾವು ದುಃಖಪಡುತ್ತೇವೆ. ಆದರೆ ಕಾರಣ ಶರೀರವನ್ನು ನಾವು ಯೋಗಾಂಗವನ್ನಾಗಿ ಮಾಡಿದರೆ, ನಾವು ಜೀವನ್ಮುಕ್ತರಾಗುತ್ತೇವೆ. ಯೋಗಾಂಗವೆಂದರೆ, ಪರಶಿವನೊಂದಿಗೆ ಯೋಗವನ್ನು (ಐಕ್ಯ)ವನ್ನು ಪಡೆಯಲು ಸಹಾಯಕವಾಗುವ ಅಂಗ (ಶರೀರ). ಇಲ್ಲಿಯೂ ರೀತಿಯೂ ಎರಡು ಹಂತಗಳಿವೆ. ಮೊದಲನೆಯ ಹಂತದಲ್ಲಿ ಸಾಧಕನು ಪರಶಿವನೊಂದಿಗೆ ಧ್ಯಾನದಲ್ಲಿ ಒಂದಾಗುತ್ತಾನೆ. ಎರಡನೆ ಹಂತದಲ್ಲಿ ತಾನೆಂಬ ಭಾವವನ್ನು ಸಂಪೂರ್ಣವಾಗಿ ಮರೆಯುತ್ತಾನೆ. ಹೀಗಾಗಿ, ತಾನು ನೋಡುವುದು, ಕೇಳುವುದು, ರುಚಿಸುವುದು, ಮುಂತಾದ ಕ್ರಿಯೆಗಳು ಪರಶಿವನಿಗಾಗಿಯೇ ಹೊರತು ತನಗಾಗಿ ಅಲ್ಲ, ಅಥವಾ ತನ್ನ ಜ್ಞಾನೇಂದ್ರಿಯಗಳ ಮೂಲಕ ಪರಶಿವನು ಅರಿಯುತ್ತಾನೆ ಹಾಗೂ ಭೋಗಿಸುತ್ತಾನೆ ಅಥವಾ 'ತಾನೊಂದು ಪರಶಿವನ ವಾಹನ' ಎಂದು ತಿಳಿಯುತ್ತಾನೆ. ಹೀಗೆ ಶಿವ ಬೇರೆ ತಾನು ಬೇರೆ ಎಂದು ತಿಳಿಯದಿರುವುದೇ ಯೋಗ.

ಉಳಿದ ಹಂತಗಳಿಗೂ ಮೂರನೆ ಹಂತಕ್ಕೂ ಇರುವ ಮುಖ್ಯ ವ್ಯತ್ಯಾಸವನ್ನು ನಾವು ಕಡೆಗಣಿಸಬಾರದು. ಅದೆಂದರೆ, ಮೂರನೇ ಹಂತವು ಧ್ಯಾನ ಮತ್ತು ಅದರ ಪರಿಣಾಮಕ್ಕೆ ಮೀಸಲಾದ ಸ್ಥಲ. ಇದನ್ನೇ ಅನುಭಾವ ಎನ್ನುತ್ತಾರೆ. ಸ್ಥೂಲ, ಸೂಕ್ಷ್ಮ ಹಾಗೂ ಕಾರಣ ತನುಗಳನ್ನು ತ್ಯಾಗಾಂಗ, ಭೋಗಾಂಗ ಹಾಗೂ ಯೋಗಾಂಗಗಳನ್ನಾಗಿ ಪರಿವರ್ತಿಸುವ ಶಿವಯೋಗ ಸಾಧನೆಯು, ಮೇಲೆ ಹೇಳಿದಂತೆ, ಆರು ಹಂತಗಳಲ್ಲಿ ಜರಗುತ್ತವೆ. ಭಕ್ತ ಮತ್ತು ಮಹೇಶ ಸ್ಥಲಗಳಲ್ಲಿ ಸ್ಥೂಲ ತನುವನ್ನು ತ್ಯಾಗಾಂಗವನ್ನಾಗಿಯೂ, ಪ್ರಸಾದಿ ಮತ್ತು ಪ್ರಾಣಲಿಂಗಿ ಸ್ಥಲಗಳಲ್ಲಿ ಸೂಕ್ಷ್ಮ ತನುವನ್ನು ಭೋಗಾಂಗವನ್ನಾಗಿಯೂ ಶರಣ ಮತ್ತು ಐಕ್ಯಸ್ಥಲಗಳಲ್ಲಿ ಕಾರಣತನುವನ್ನು ಯೋಗಾಂಗವನ್ನಾಗಿಯೂ ಮಾಡುವುದು

ಶಿವಯೋಗ ಸಾಧಕನ ಕರ್ತವ್ಯ. ಹೀಗೆ ಶಕ್ತಿಗಳನ್ನು ಪರಿವರ್ತಿಸದೆ ಶಿವಯೋಗ ಸಿದ್ಧಿಸುವುದಿಲ್ಲ.

ಶಿವಯೋಗದಲ್ಲಿ ಭಕ್ತಿಯೋಗ, ಕರ್ಮಯೋಗ ಮತ್ತು ಜ್ಞಾನಯೋಗಗಳು ಅಡಕವಾಗಿವೆ. ಆದರೆ ಶಾಕ್ತರ ತಂತ್ರವು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅಡಕವಾಗಿದೆ. ಗುರುಲಿಂಗ ಜಂಗಮರಿಗೆ ತೋರಿಸುವ ಭಕ್ತಿ, ಅದಕ್ಕೆ ಪೂರಕವಾದ ಆಚಾರಗಳು ಭಕ್ತಿಯೋಗದ ಗುರುತುಗಳು. ತಾನು ಏನನ್ನೂ ತನ್ನ ಸ್ವಂತಕ್ಕಾಗಿ ಭೋಗಿಸುವುದಿಲ್ಲ, ಭೋಗಸುವುದೆಲ್ಲ ಶಿವನೇ ಎಂದು ತಿಳಿದು ಆಚರಿಸುವುದು ಕರ್ಮಯೋಗದ ಕುರುಹು. ಕಾಯಕ ಮತ್ತು ದಾಸೋಹ ಇದರಲ್ಲೆ ಅಂತರ್ಗತವಾಗಿವೆ. ಕೊನೆಯದಾಗಿ ತಾನು ಶಿವಾಂಶಿಕ, ಶಿವನ ಅಂಗ, ಸ್ವತಂತ್ರನಲ್ಲ ಎಂದು ತಿಳಿಯುವುದೇ ಜ್ಞಾನಯೋಗ. (ಆದರೆ ಶಂಕರಾಚಾರ್ಯರ ಜ್ಞಾನಯೋಗದಲ್ಲಿ ಪ್ರಪಂಚವೂ ಜೀವಾನೇಕತೆಯೂ ಭ್ರಮೆಯಾದರೆ, ವಚನಕಾರರ ಜ್ಞಾನಯೋಗದಲ್ಲಿ ಪ್ರಪಂಚವು ಪರಶಿವನ ಶಕ್ತಿ, ಜೀವನು ಪರಶಿವನ ಅಂಗ, ಯಾವ ರೀತಿಯಲ್ಲೂ ಭ್ರಮೆಯಲ್ಲ).

ಇವುಗಳಿಗೆ ಪೂರಕವಾಗಿ, ಶಾಕ್ತರಂತೆ ವಚನಕಾರರು ಚಕ್ರಗಳ ಸಿದ್ಧಾಂತವನ್ನೂ ನಂಬುತ್ತಾರೆ. ವಚನಕಾರರ ಪ್ರಕಾರ, ಆಧಾರ ಚಕ್ರದಲ್ಲಿ ಆಚಾರಲಿಂಗವೂ, ಸ್ವಾಧಿಷ್ಠಾನ ಚಕ್ರದಲ್ಲಿ ಗುರುಲಿಂಗವೂ ಮಣಿಪೂರಕ ಚಕ್ರದಲ್ಲಿ ಶಿವಲಿಂಗವೂ ಅನಾಹತ ಚಕ್ರದಲ್ಲಿ ಜಂಗಮಲಿಂಗ, ವಿಶುದ್ಧ ಚಕ್ರದಲ್ಲಿ ಪ್ರಸಾದಲಿಂಗವೂ ಮತ್ತು ಆಜ್ಞಾ ಚಕ್ರದಲ್ಲಿ ಮಹಾಲಿಂಗವೂ ಇದೆ. ಮೊದಲು ಭಕ್ತಸ್ಥಲದಲ್ಲಿ ಆಚಾರಲಿಂಗವನ್ನು ಸಾಕ್ಷಾತ್ಕರಿಸಿಕೊಂಡು ಆಧ್ಯಾತ್ಮಿಕ ಪ್ರಗತಿ ಸಾಧಿಸುತ್ತಾ, ಕೊನೆಯಲ್ಲಿ ಐಕ್ಯಸ್ಥಲದಲ್ಲಿ ಮಹಾಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಶಿವಯೋಗ.

**ಶಿವಯೋಗಾನುಸಂಧಾನ :** ಶಿವನಲ್ಲಿ ಯುಜ್ಯನಾಗುವುದೇ ಶಿವಯೋಗ. ಅನುಭಾವವೆಂಬ ಅನೇಕ ಪದರುಗಳುಳ್ಳ ಕ್ರಿಯೆಯಲ್ಲಿ ಅಂಗವು ಕೊನೆಯಲ್ಲಿ ಶಿವನಲ್ಲಿ ಐಕ್ಯವಾಗುವ ಒಂದು ಅಪರೂಪದ ಅನುಭವ ಪಡೆಯುತ್ತದೆ. ಇದೇ ಶಿವಯೋಗಾನುಸಂಧಾನ.

**ಶಿವಲಿಂಗ :** ಇದಕ್ಕೆ ಕನಿಷ್ಟ ಮೂರು ಅರ್ಥಗಳಿವೆ. ೧. ಗುಡಿಯಲ್ಲಿ ಸ್ಥಾಪಿಸಿರುವ ಸ್ಥಾವರಲಿಂಗ. ೨. ಇಷ್ಟಲಿಂಗ. ೩. ಪ್ರಸಾದಿಸ್ಥಲದ ಸಾಧಕನು ಸಿದ್ಧಿಸಿಕೊಳ್ಳುವ ಶಿವಲಿಂಗ. ಇದು ಅಂಗಸ್ಥಲದ ಆರು ಅಂಗಗಳಲ್ಲಿ ಒಂದು.

**ಶಿವಲಿಂಗದ ಪ್ರಸನ್ನತ್ವ :** ತನ್ನ ಕಣ್ಣಿನ ತುದಿಯಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿಕೊಂಡವನು ಲಿಂಗವು ಮೊದಲು ನೋಡದೆ ತಾನು ನೋಡೆನು ಎಂದು ಪ್ರತಿಜ್ಞೆ ಮಾಡುತ್ತಾನೆ. ಅವನು ಇನ್ನೂ ಮುಂದುವರಿದು, ತನ್ನ ಕಣ್ಣುಗಳೇ ಶಿವನ ಕಣ್ಣುಗಳೆಂದು ತಿಳಿದು, ರೂಪನ್ನು ಅನುಭವಿಸಿ ತೃಪ್ತಿ ಪಡುವವನು ನಿಜವಾಗಿಯೂ ಶಿವನೇ ಹೊರತು, ತಾನಲ್ಲ ಎಂದು ತಿಳಿಯುತ್ತಾನೆ. ಹೀಗೆ ಕಣ್ಣನ್ನೂ, ಕಣ್ಣು ನೋಡುವ ರೂಪನ್ನು ಶಿವಲಿಂಗಕ್ಕರ್ಪಿಸಿ, ಆ

ಮೇಲೆ ತಾನು ಭೋಗಿಸುವ ಪ್ರಸಾದಿಯು ಶಿವಲಿಂಗವನ್ನು ತೃಪ್ತಿ ಪಡಿಸುತ್ತಾನೆ. ಇದರಿಂದ ಪ್ರಸನ್ನವಾದ ಶಿವಲಿಂಗವು ಪ್ರಸಾದಿಯನ್ನು ನಯನೇಂದ್ರಿಯದ ಬಂಧನದಿಂದ ಮುಕ್ತಗೊಳಿಸುತ್ತದೆ. (೧೧:೬೬೦)

**ಶಿವಲಿಂಗದಲ್ಲಿಯ ಮಿಶ್ರಾರ್ಪಣ** : ನೋಡಿ : **ಮಿಶ್ರ ಷಡುಸ್ಥಲ, ಮಹಾಲಿಂಗದಲ್ಲಿಯ ಮಿಶ್ರಾರ್ಪಣ.**

**ಶಿವಲಿಂಗಸ್ಥಲ** : ಆಧ್ಯಾತ್ಮಿಕ ಪ್ರಗತಿಯ ಹಂತಗಳನ್ನು ಆರು ಎಂದು ಗುರುತಿಸುವುದರ ಬದಲು ನೂರೊಂದು ಎಂದು ಗುರುತಿಸಿದರೆ, ಆಗ ಅವುಗಳನ್ನು ಮುಖ್ಯವಾಗಿ ೪೪ ಅಂಗಸ್ಥಲಗಳು ಮತ್ತು ೫೭ ಲಿಂಗಸ್ಥಲಗಳೆಂದು ಎರಡು ವರ್ಗ ಮಾಡಬಹುದು. ಶಿವಲಿಂಗಸ್ಥಲವು ೫೭ ಲಿಂಗಸ್ಥಲಗಳಲ್ಲಿ ಒಂದು. ಇದರಲ್ಲಿ ಮತ್ತೆ ಮೂರು ಭಾಗಗಳಿದ್ದು, ಅವಕ್ಕೆ ಅನುಗ್ರಹಲಿಂಗ, ಅರ್ಪಿತ ಲಿಂಗ, ತನುಗುಣಲಿಂಗ, ಎಂಬ ಹೆಸರಿವೆ. ಅನುಗ್ರಹ ಲಿಂಗಸ್ಥಲದಲ್ಲಿ ಕಾಯಾನುಗ್ರಹಸ್ಥಲ, ಇಂದ್ರಿಯಾನುಗ್ರಹಸ್ಥಲ, ಪ್ರಾಣಾನುಗ್ರಹಸ್ಥಲ ಎಂಬ ಮೂರು ಉಪಸ್ಥಲಗಳಿವೆ. ಅದೇ ರೀತಿ ಅರ್ಪಿತಲಿಂಗ ಸ್ಥಲವು ಕಾಯಾರ್ಪಿತಸ್ಥಲ, ಕರಣಾರ್ಪಿತಸ್ಥಲ, ಭಾವಾರ್ಪಿತಸ್ಥಲ ಎಂಬ ಮೂರು ಉಪಸ್ಥಲಗಳನ್ನೊಳಗೊಳ್ಳುತ್ತದೆ. ಹಾಗೆಯೇ ಮೂರನೆಯ ತನುಗುಣಲಿಂಗಸ್ಥಲವು ಶಿಷ್ಯಸ್ಥಲ, ಶುಶ್ರೂಷಾಸ್ಥಲ ಮತ್ತು ಸೇವ್ಯಸ್ಥಲ ಎಂಬ ಮೂರು ಉಪಸ್ಥಲಗಳನ್ನೊಳಗೊಳ್ಳುತ್ತದೆ.

ಶಿವಲಿಂಗಸ್ಥಲವು ಷಟ್‌ಸ್ಥಲಸಿದ್ಧಾಂತದ ಪ್ರಸಾದಿ ಸ್ಥಲಕ್ಕೆ ಸಮ. ಪ್ರಸಾದಿಯು ತನ್ನ ಕಾಯ, ಇಂದ್ರಿಯ ಮತ್ತು ಚಿತ್ತ ಮತ್ತು ಪ್ರಾಣಗಳನ್ನು ಶಿವನ ಅನುಗ್ರಹ (ಪ್ರಸಾದ) ಎಂದು ತಿಳಿದು, ಅವುಗಳನ್ನು ಶಿವನಿಗೆ ಅರ್ಪಿಸಿದಾಗ, ಅವನ ಅರ್ಪಣೆಯು ಕಾಯಾರ್ಪಿತ, ಕರಣಾರ್ಪಿತ ಮತ್ತು ಭಾವಾರ್ಪಿತವೆನಿಸಿಕೊಳ್ಳುತ್ತದೆ.

**ಶಿವಲಿಂಗಾನುಭಾವಿ** : ಪ್ರಸಾದಿಸ್ಥಲದ ಸಾಧಕನು ತಾನೇ ಬೇರೆ ಪರಶಿವನೇ ಬೇರೆ ಎಂದು ತಿಳಿದು ಶಿವಲಿಂಗವನ್ನು ಆರಾಧಿಸುವುದರಿಂದ, ಆ ಸ್ಥಲದಲ್ಲಿ ಅವನು ಅನುಭಾವಿಯಾಗಿರಲು ಸಾಧ್ಯವಿಲ್ಲ. ಅನುಭಾವದಲ್ಲಿ ಆನಂದ ಅಥವಾ ಸುಖ ಇರುವುದರಿಂದ ಸುಖಿಯಾದವನು ಅನುಭಾವಿಯಾಗಿರುತ್ತಾನೆಂಬ ಸೂಚ್ಯಾರ್ಥ ಇಲ್ಲಿದೆ. ಈ ಸ್ಥಲದ ಸಾಧಕನು ಅಗ್ನಿ ತತ್ವವನ್ನು ಶಿವಲಿಂಗಕ್ಕೆ ಅರ್ಪಿಸಿ, ಅದರಿಂದ ರೂಪೆಂಬ ಪ್ರಸಾದವನ್ನು ಪಡೆದು ಸುಖಿಸುವುದರಿಂದ ಅವನು ಶಿವಾಲಿಂಗಾನುಭಾವಿ ಎನಿಸಿಕೊಳ್ಳುತ್ತಾನೆ. (೧೭:೪೦೬)

**ಶಿವಲೋಕ** : ವೀರಶೈವ ಕವಿಗಳ ಪ್ರಕಾರವೂ ಶೈವ ಸಿದ್ಧಾಂತಿಗಳ ಪ್ರಕಾರವೂ, ಶಿವನು ತನ್ನ ಪರಿವಾರದೊಂದಿಗೆ ಕೈಲಾಸ (ಶಿವಲೋಕ) ಎಂಬ ತನ್ನದೇ ಆದ ಲೋಕದಲ್ಲಿರುತ್ತಾನೆ. ಆದರೆ ಬಹಳಷ್ಟು ವಚನಕಾರರು ಕೈಲಾಸ ಪರಿಕಲ್ಪನೆಯನ್ನು ಅವಹೇಳನ ಮಾಡುತ್ತಾರೆ.

**ಶಿವಶಕ್ತಿ ಸಂಪುಟ :** ಶಿವ ಮತ್ತು ಶಕ್ತಿ ಇವುಗಳ ಕೂಟ. ಶಿವ ಎಂದರೆ ಚಿತ್ತು, ಶಕ್ತಿ ಎಂದರೆ ಇಂದ್ರಿಯಗಳಿಗೂ ಮನಸ್ಸಿಗೂ ಗೋಚರವಾಗುವ ಉಳಿದ ತತ್ವ. ಶಕ್ತಿ ವಿಕಾಸ ಹೊಂದಿ ನಮ್ಮೆಲ್ಲರ ಬುದ್ಧಿ, ಮನಸ್ಸು, ಅಹಂ, ಚಿತ್ತ, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ತನ್ಮಾತ್ರೆಗಳು ಮತ್ತು ಪಂಚಭೂತಗಳಾಗಿ, ಅವುಗಳೇ ವಿವಿಧ ಪರಿಣಾಮಗಳಲ್ಲಿ ಮಿಶ್ರಣ ಹೊಂದಿ ಜಗತ್ತಿನ ನಾನಾ ರೂಪದ ವಸ್ತುಗಳಾಗಿವೆ. ಶಿವನು ಇಚ್ಛಿಸದ ಹೊರತು ಶಕ್ತಿ ವಿಕಾಸ ಹೊಂದುವುದಿಲ್ಲ.

ಆದರೆ ಶಿವ ತತ್ವ ಮತ್ತು ಶಕ್ತಿ ತತ್ವ ಹೀಗೆ ಎರಡು ವಿಭಿನ್ನ ತತ್ವಗಳಾದರೂ ಅವೆರಡರಲ್ಲೂ ಅವಿನಾ ಸಂಬಂಧವಿದೆ. ಅವೆರಡೂ ಯಾವುದೋ ಒಂದು ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟ ಪ್ರದೇಶದಲ್ಲಿ ಬಂದು ಕೂಡಿದವು, ಅಲ್ಲಿಂದ ಮುಂದೆ ಅವುಗಳಲ್ಲಿ ಅವಿನಾ ಸಂಬಂಧ ಏರ್ಪಟ್ಟಿತು, ಎಂಬುದು ಇದರ ಅರ್ಥವಲ್ಲ. ಈ ಸಂಬಂಧಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಶಿವ ಯಾವಾಗಲೂ ಶಕ್ತಿಯೊಂದಿಗೇ ಇರುತ್ತಾನೆ. ಶಕ್ತಿಗೆ ಸ್ವತಂತ್ರ ಅಸ್ತಿತ್ವವೂ ಇಲ್ಲ, ಸ್ವತಂತ್ರ ಕಾರ್ಯಶಕ್ತಿಯೂ ಇಲ್ಲ. ಅದು ಶಿವನನ್ನೇ ಆಶ್ರಯಿಸುವುದರಿಂದ, ಅವನ ಇಚ್ಛೆಯ ಮೇರೆಗೆ ಸೃಷ್ಟಿಯಾಗುತ್ತದೆ, ಅವನ ಇಚ್ಛೆಯ ಮೇರೆಗೆ ಲಯವಾಗುತ್ತದೆ.

'ಶಿವಶಕ್ತಿಸಂಪುಟ' ಎಂಬುದರ ಅರ್ಥವನ್ನು ನಾವು ಒಂದು ಉಪಮೆಯ ಮೂಲಕ ಸ್ಪಷ್ಟಪಡಿಸಬಹುದು : ನಮ್ಮ ಜೀವಂತ ದೇಹವು ಶಕ್ತಿಯ ರೂಪಾಂತರ; ಅದರಲ್ಲಿರುವ ಇಂದ್ರಿಯಗಳೂ, ಬುದ್ಧಿ ಮುಂತಾದ ಅಂತಃಕರಣಗಳೂ, ಅಲ್ಲಿ ನಡೆಯುವ ಯೋಚನೆ, ಪ್ರಶ್ನೆ, ಸಿಟ್ಟು, ಆಶ್ಚರ್ಯ, ದುಃಖ, ಮುಂತಾದ ಮಾನಸಿಕ ವ್ಯಾಪಾರಗಳೂ ಶಕ್ತಿಯ ರೂಪಾಂತರವೇ. ಆದರೆ ಈ ಶಕ್ತಿಯ ಕಾರ್ಯಗಳು ಚಿದ್ವಸ್ತುವಾದ ಆತ್ಮವಿಲ್ಲದಿದ್ದರೆ ನಡೆಯುವುದಿಲ್ಲ. ಆದರೂ ಇದು ಆತ್ಮ, ಇದು ಶಕ್ತಿಯ ರೂಪಾಂತರ, ಎಂದು ತೋರಿಸಲು ಬರುವುದಿಲ್ಲ. ಅವೆರಡರಲ್ಲಿ ಯಾವುದೋ ಒಂದು ನಿಗೂಢ ರೀತಿಯಲ್ಲಿ ಪರಸ್ಪರ ಸಂಬಂಧವಿದೆ. ವ್ಯಕ್ತಿ ಎಂಬ ಒಂದೇ ಸಂಪುಟದಲ್ಲಿ ಬದಲಾಗದ ಚಿತ್ತು ಬದಲಾಗುವ ಶಕ್ತಿ ಎರಡೂ ಇವೆ. ಹಾಗೆಯೇ ಪರಶಿವನೆಂದರೆ ಚಿತ್ ಮತ್ತು ಶಕ್ತಿ ಎಂಬ ಎರಡು ತತ್ವಗಳ ಒಂದು ಸಂಪುಟ.

ಇಷ್ಟಾದರೂ ಶಿವನಿಗೆ ಶಕ್ತಿ ಇದೆ ಎಂದು ಹೇಳುವುದು ಸೂಕ್ತವೇ ಹೊರತು, ಶಕ್ತಿಗೆ ಚೈತನ್ಯವಿದೆ ಎಂದು ಹೇಳುವುದಲ್ಲ. ಏಕೆಂದರೆ, ಚಿತ್ತು ಶಕ್ತಿಯನ್ನು ನಿಯಂತ್ರಿಸುತ್ತದೆಯೇ ಹೊರತು, ಶಕ್ತಿ ಚಿತ್ತನ್ನು ನಿಯಂತ್ರಿಸುವುದಿಲ್ಲ. (೩:೫೮೯)

**ಶಿವಶಕ್ತ್ಯಾತ್ಮಕ :** ಮೊದಲು ಪರಶಿವನು ಶೂನ್ಯ ಸ್ಥಿತಿಯಲ್ಲಿದ್ದು, ಅವನಲ್ಲಿರುವ ಶಕ್ತಿಯು ಅವ್ಯಕ್ತವಾಗಿರುತ್ತದೆ. ಅವನಿಗೆ ಸೃಷ್ಟಿ ಮಾಡಬೇಕೆಂಬ ಇಚ್ಛೆ ಮೂಡಿದಾಗ, ಅವನು ಶಕ್ತಿಯೊಡಗೂಡುತ್ತಾನೆ, ಅಥವಾ ಶಿವಶಕ್ತ್ಯಾತ್ಮಕವಾಗುತ್ತಾನೆ. (೭:೫೭೮)

**ಶಿವಶರಣ :** ಪರಶಿವನಿಗೆ ತನ್ನೆಲ್ಲವನ್ನೂ ಅಥವಾ ತನ್ನನ್ನೆ ಸಂಪೂರ್ಣವಾಗಿ ಅರ್ಪಿಸಿಕೊಂಡು, ಅಹಂನಷ್ಟವಾಗಿ, ಅವನಿಗೇ ಸಂಪೂರ್ಣವಾಗಿ ಶರಣಾದವನು. ಆದರೆ ಈ ಪದವನ್ನು ಕೆಲವು ವೇಳೆ ಆಧ್ಯಾತ್ಮಿಕ ಜೀವನವನ್ನು ಆಗ ತಾನೆ ಪ್ರಾರಂಭಿಸಿದ ವ್ಯಕ್ತಿಗೂ ಅನ್ವಯಿಸುವಂತೆ ಬಳಸಲಾಗುತ್ತದೆ.

**ಶಿವಶರಣು :** ಶಿವನೇ ನಾನು ನಿನಗೆ ಶರಣಾಗಿದ್ದೇನೆ ಎಂಬ ಶರಣನ ಭಾವ.

**ಶಿವಸಂಸ್ಕಾರ :** ಲಿಂಗದೀಕ್ಷೆಯ ಸಮಯದಲ್ಲಿ ಗುರುವು ಕೊಡುವ ಬೋಧನೆಯಿಂದಾಗಿ ಸಾಧಕನಲ್ಲಿ ಉಂಟಾಗುವ ಸಂಸ್ಕಾರ.

**ಶಿವಾಚಾರ :** ಈ ಪದವನ್ನು ಸಾಮಾನ್ಯವಾಗಿ ಪಂಚಾಚಾರಗಳಲ್ಲಿ ಒಂದಾದ ಆಚಾರಕ್ಕೆ ಅನ್ವಯವಾಗುವಂತೆ ಬಳಸಲಾಗುತ್ತದೆ. (ನೋಡಿ : **ಪಂಚಾಚಾರ**). ಆದರೆ ಬಸವಣ್ಣನವರು ಆ ಪದವನ್ನು ಕೆಲವು ವೇಳೆ ಲಿಂಗಾಯತ ಧರ್ಮಕ್ಕೆ ಅನ್ವಯಿಸುವಂತೆ ಬಳಸಿದ್ದಾರೆ. "ಅವರ ನಡೆಯೊಂದು ನುಡಿಯೊಂದಾದೊಡೆ ಶಿವಾಚಾರಕ್ಕವರುಸಲ್ಲರಯ್ಯಾ" (೧:೬೫೮) ಎಂಬಲ್ಲಿ ಈ ಅರ್ಥ ವ್ಯಕ್ತವಾಗುತ್ತದೆ.

**ಶಿವಾದ್ವೈತ :** ವಚನಗಳಲ್ಲಿ ಪದೇ ಪದೇ ಬರುವ ಶಿವಾದ್ವೈತ ಎಂಬ ಪದಕ್ಕೆ "ದ್ವೈತಾದ್ವೈತ" ಅಥವಾ "ಶಕ್ತಿವಿಶಿಷ್ಟಾದ್ವೈತ" ಎಂಬ ಅರ್ಥವನ್ನು ಕೊಡಬಹುದು. ಶಿವಾದ್ವೈತ ಎಂದರೆ ಶಿವ ಒಬ್ಬನೇ ಇದ್ದಾನೆ ಎಂಬ ಸಿದ್ಧಾಂತ. ಹಾಗಾದರೆ, ಅನೇಕ ಭೌತವಸ್ತುಗಳಿಂದ ಕೂಡಿದ ಜಗತ್ತೂ ಅನೇಕ ಜೀವಿಗಳೂ ಇದ್ದಾವಲ್ಲ ಎಂಬ ಸಂದೇಹ ಬರುತ್ತದೆ. ಶಂಕರಾಚಾರ್ಯರ ಚಿದದ್ವೈತದ ಪ್ರಕಾರ ಬ್ರಹ್ಮನೊಬ್ಬನೇ ಸತ್ಯ, ಆತ್ಮಗಳ ಅನೇಕತೆಯೂ ಭೌತಪ್ರಪಂಚವೂ ಅಸತ್ಯ. ಆದರೆ ವಚನಕಾರರ ಶಿವಾದ್ವೈತದ ಪ್ರಕಾರ, ಆತ್ಮಗಳೂ ಜಗತ್ತೂ ಅಸತ್ಯ ಅಲ್ಲ, ಅವು ಶಿವನೊಳಗೆ ಅಡಗಿರುತ್ತವೆ. ಜೀವಜಗತ್ತು ಮತ್ತು ಈಶ್ವರರ ನಡುವಿನ ಸಂಬಂಧವನ್ನು ವಚನಕಾರರು ಸಮುದ್ರ ಮತ್ತು ನೊರೆತೆರೆಗಳ ಸಂಬಂಧಕ್ಕೆ ಹೋಲಿಸುತ್ತಾರೆ. ಸಮುದ್ರವಿಲ್ಲದಿದ್ದರೆ, ತೆರೆಗಳೂ ನೊರೆಯೂ ಇರಲು ಸಾಧ್ಯವಿಲ್ಲ. ಸಮುದ್ರವೇ ಅವುಗಳ ಅಸ್ತಿತ್ವಕ್ಕೆ ಕಾರಣ. ಹಾಗೆಯೇ ಪರಶಿವನೇ ಇಲ್ಲದಿದ್ದರೆ, ಜಗತ್ತು ಜೀವಗಳು ಇರುತ್ತಿರಲಿಲ್ಲ. ಏಕೆಂದರೆ, ಅವುಗಳು ಅವನಿಂದ ವ್ಯಕ್ತವಾಗುತ್ತವೆ. ಎರಡನೆಯದಾಗಿ, ತೆರೆಗಳೂ ನೊರೆಯೂ ಸಮುದ್ರದ ಒಂದು ಅವಸ್ಥೆ. ಅವುಗಳ ರೂಪ ಆಕಾರ ಬದಲಾಗಬಹುದು. ಆದರೆ ಅವುಗಳ ಆಧಾರ ಬದಲಾಗುವುದಿಲ್ಲ. ಹಾಗೆಯೇ ಜೀವ ಜಗತ್ತು ಪರಶಿವನ ವಿವಿಧ ಅವಸ್ಥೆಗಳು, ಅವುಗಳ ನಾಮರೂಪಗಳು ಬದಲಾಗಬಹುದಾದರೂ, ಅವುಗಳ ಆಧಾರ ಮಾತ್ರ ಪರಶಿವನೇ. ಅಥವಾ ಭಿತ್ತಿ ಒಂದರಲ್ಲಿ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಚಿತ್ರಗಳನ್ನು ಹೇಗೆ ರಚಿಸಬಹುದೋ, ಹಾಗೆಯೇ ಪರಶಿವನೆಂಬ ಆಧಾರದ ಮೇಲೆ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಜಗತ್ತುಗಳು ಬೇರ ಬೇರೆ ಜೀವರಾಶಿಗಳೂ ಕಾಣಿಸಿಕೊಳ್ಳಬಹುದು.

ಇದರಿಂದ ವ್ಯಕ್ತವಾಗುವ ಅಂಶವಿದು : ಫೇನತರಂಗಗಳು ಸಮುದ್ರದಿಂದ ಭಿನ್ನವಾಗಿರದೆ, ಅದರ ಅಂಗಗಳಾಗಿವೆ ಹೇಗೋ ಹಾಗೆಯೇ, ಜೀವಜಗತ್ತು ಪರಶಿವನಿಂದ ಭಿನ್ನವಾಗಿರದೆ ಅವನ ಅಂಗ(ಭಾಗ)ವಾಗಿವೆ. ಆದುದರಿಂದ ಶಿವನೊಬ್ಬನೇ ಇರುವವನು. ಈ ಸಿದ್ಧಾಂತವೇ ಶಿವಾದ್ವೈತ.

**ಶಿವಾನುಭವ :** ಶಿವಾನುಭಾವ. (ನೋಡಿ : **ಅನುಭಾವ**)

**ಶಿವಾನುಭಾವಿ(ಲಿಂಗಾನುಭಾವಿ) :** ಧ್ಯಾನದಲ್ಲಿ ಶಿವನೊಂದಿಗೆ ಬೆರೆತವನು, ಧ್ಯಾನ(ಅನುಭಾವ) ಮುಗಿದ ನಂತರವೂ ಎಲ್ಲೆಲ್ಲಿಯೂ ಶಿವನನ್ನು ಕಾಣುವವನು.

**ಶಿವಾವಸ್ಥೆ :** ಶಿವನನ್ನು ನಾಲ್ಕೂ ಅವಸ್ಥೆಗಳಲ್ಲಿ ನೋಡುವುದು. ಆತ್ಮನು ತನ್ನ ನಿಜಸ್ವರೂಪ ಶಿವಾಂಶಿಕನೆಂದರಿದು ಶಿವನನ್ನು ಅರಿತಾಗ ಶಿವಜಾಗ್ರ; ಆತ್ಮನು ಶಿವನನ್ನರಿದು ಶಿವನನ್ನು ಬೆರೆಸುವುದು ಶಿವಸ್ವಪ್ನ; ಆತ್ಮನು ಶಿವನನ್ನು ಬೆರೆಸಿ, ಆ ಕೂಟವನ್ನು ಅರಿಯದಿದ್ದರೆ, ಅದು ಶಿವಸುಷುಪ್ತಿ; ಆತ್ಮನು ಶಿವನನ್ನು ಬೆರಸಿ, ತಾನೂ ಅಳಿದು ಶಿವನೂ ಅಳಿದರೆ ಅದು ಶಿವತೂರ್ಯ. ಆತ್ಮನು ತಾನಳಿದು ಶಿವ ಉಳಿದರೆ ಅದು ಶಿವವ್ಯೋಮ ಅಥವಾ ಚಿದಾಕಾಶ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶಿವನೆಂಬ ನಾಮವನ್ನೂ ಮರೆತು ನಿಶ್ಶಬ್ದವಾದರೆ ಶಿವವ್ಯೋಮಾತೀತಾವಸ್ಥೆ (೧೩:೧೯೬೩).

**ಶೀಲ :** ನೋಡಿ : **ಅರುವತ್ತು ನಾಲ್ಕು ಶೀಲಗಳು; ವ್ರತ ನೇಮ ಶೀಲ.**

**ಶೀಲವಂತರು :** ೧. ಒಂದು ವಿಶಾಲ ಅರ್ಥದಲ್ಲಿ ವಿಶಿಷ್ಟ ನಿಯಮಗಳನ್ನು ಪಾಲಿಸುವವರೆಲ್ಲ ಶೀಲವಂತರು. ಕೆರೆ ಬಾವಿಗಳಿಂದ ತಂದ ನೀರು ಅಶುದ್ಧವೆಂದೂ, ಹೊಸದಾಗಿ ಗುಂಡಿಯೊಂದನ್ನು ತೆಗೆದು ಅಲ್ಲಿಂದ, ನೀರುತರುವುದು, ದಿನಕ್ಕೆ ಮೂರು ಸ್ನಾನ ಮಾಡುವುದು, ಭವಿಪಾಕವನ್ನು ಲಿಂಗಕ್ಕರ್ಪಿಸದೆ ಭಕ್ತಮಾಡಿದ ಪಾಕವನ್ನಷ್ಟೇ ಅರ್ಪಿಸುವುದು, ಸೌದೆಯನ್ನು ತೊಳೆದು ಪಾಕ ಮಾಡಲು ಉಪಯೋಗಿಸುವುದು, ಮುಂತಾದ ಅರ್ಥವಿಲ್ಲದ ನೇಮಗಳನ್ನು ಮಾಡುವವರು ಶೀಲವಂತರು. (ಲಿಂಗಪೂಜೆ, ಮಂತ್ರಪಠನ, ವಿಭೂತಿ ರುದ್ರಾಕ್ಷಿಧಾರಣ ಇತ್ಯಾದಿಗಳನ್ನೂ ಇವರು ಮಾಡುತ್ತಾರೆ).

೨. ಒಂದು ವಿಶಿಷ್ಟ (ಸಂಕುಚಿತ) ಅರ್ಥದಲ್ಲಿ ಆಧ್ಯಾತ್ಮಿಕ ಮತ್ತು ನೈತಿಕ ನಿಯಮಗಳನ್ನು ಆಚರಿಸುವವರಷ್ಟೇ ಶೀಲವಂತರು (ನೋಡಿ : **ಆಚಾರ**).

**ಶುದ್ಧ ಪ್ರಸಾದ :** ಲಿಂಗಕ್ಕೆ ಅರ್ಪಿಸಿದ ಪದಾರ್ಥಗಳೆಲ್ಲ ಶುದ್ಧವಾಗಿ ಪ್ರಸಾದವೇ ಆದರೂ, ಶುದ್ಧ ಪ್ರಸಾದವೆಂಬ ವಿಶಿಷ್ಟ ರೀತಿಯ ಪ್ರಸಾದವಿದೆ. ಆದರೆ ಶುದ್ಧ ಪ್ರಸಾದಕ್ಕೆ ಬೇರೆ ಬೇರೆ ಸಂದರ್ಭಗಳಲ್ಲಿ ಬೇರ ಬೇರೆ ಅರ್ಥಗಳಿವೆ. ಉದಾಹರಣೆಗೆ ಗುರುವಿಗೆ ಅರ್ಪಿಸಿದುದು ಶುದ್ಧ, ಲಿಂಗಕ್ಕೆ ಅರ್ಪಿಸಿದುದು ಸಿದ್ಧ, ಜಂಗಮನಿಗೆ ಅರ್ಪಿಸಿದುದು ಪ್ರಸಿದ್ಧ. ಕಾಯದ ಕಳವಳವ ಕಳೆಯಲು ತೆಗೆದುಕೊಂಡ ಪ್ರಸಾದ ಸಿದ್ಧ ಪ್ರಸಾದ, ಮನದ

ಪೂರ್ವಾಶ್ರಯವ ಕಳೆಯಲು ತೆಗೆದುಕೊಂಡ ಪ್ರಸಾದ ಸಿದ್ಧ ಪ್ರಸಾದ: ಶಿವ ಜೀವರ ದ್ವೈತವನ್ನು ಅಳಿಸಲು ತೆಗೆದುಕೊಂಡ ಪ್ರಸಾದ ಪ್ರಸಿದ್ಧ. ಇತ್ಯಾದಿ.

**ಶುದ್ಧ ಪ್ರಸಾದಿಯ ಅಂಗ :** ತನ್ನ ದೇಹವನ್ನು ಶುದ್ಧ ಮಾಡಿಕೊಳ್ಳಲು ಭಕ್ತನು ಪ್ರಸಾದವನ್ನು ಸ್ವೀಕರಿಸುತ್ತಾನೆ. ಅವನ ದೇಹವು ಪ್ರಾರಬ್ಧ ಕರ್ಮದ ಫಲವಾಗಿದ್ದರೂ, ಅಂಥ ದೇಹದ ಬಯಕೆಗಾಗಿ (ಹಸಿವನ್ನು ಹಿಂಗಿಸುವ ಅಥವಾ ರುಚಿಯನ್ನು ಪೂರೈಸಿಕೊಳ್ಳುವ ಸಲುವಾಗಿ) ಪ್ರಸಾದ ಸ್ವೀಕರಿಸಬಾರದು. ಇಂಥ ಆಸೆಯಿಲ್ಲದೆ ತೆಗೆದುಕೊಂಡ ಪ್ರಸಾದದಿಂದ ಬೆಳೆದ ದೇಹವಷ್ಟೇ ಶುದ್ಧ ಪ್ರಸಾದಿಯ ಅಂಗವೆನಿಸಿಕೊಳ್ಳುತ್ತದೆ. (೮:೧೧೮)

**ಶುದ್ಧ ಮಂಟಪ :** ಶುದ್ಧ ಆತ್ಮವು ಪರಶಿವನು ಇರಲು ಯೋಗ್ಯವಾದ ಸ್ಥಳವಾದ ಕಾರಣ, ಅದನ್ನು ಆಲಂಕಾರಿಕವಾಗಿ ಶುದ್ಧ ಮಂಟಪವೆಂದು ಕರೆಯಲಾಗಿದೆ. (೪:೯೮)

**ಶುದ್ಧ ಶೈವ :** ಪ್ರಾಯಶ: ಶೈವಸಿದ್ಧಾಂತದ ಪರ್ಯಾಯ ಪದ.

**ಶುದ್ಧ ಸಂಗಮ :** ಶರಣನು ತನ್ನನ್ನು ಪರಶಿವನ ಸತಿ ಎಂದು ತಿಳಿದುಕೊಂಡು, ಪರಶಿವನೊಡನೆ ಉಂಟಾದ ತನ್ನ ಕೂಟವನ್ನು ಶುದ್ಧ ಸಂಗಮ ಎಂದು ವರ್ಣಿಸುತ್ತಾನೆ. ದೈಹಿಕ ಸಮಾಗಮದ ದೋಷಗಳು ಲಿಂಗಾಂಗ ಸಾಮರಸ್ಯದಲ್ಲಿರುವುದಿಲ್ಲವಾದುದರಿಂದ ಅದು ಶುದ್ಧ ಸಂಗಮ. (೪:೩೬)

**ಶುದ್ಧ ಸಿದ್ಧ ಪ್ರಸಾದ :** ನೋಡಿ : **ಶುದ್ಧ ಪ್ರಸಾದ.**

**ಶೂನ್ಯ :** ಪರಶಿವನ ಒಂದು ಅವಸ್ಥೆ. ಶೂನ್ಯಲಿಂಗ, ಮಹಾಶೂನ್ಯ ಮುಂತಾಗಿ ಕರೆಯಲಾಗುವ ಇದನ್ನು ವಸ್ತುಗಳೇನೂ ಇಲ್ಲದ ಚಿದ್‌ಬಯಲು ಎನ್ನಬಹುದು. (ನೋಡಿ : **ಬಯಲು**)

**ಶೂನ್ಯ ಸಿಂಹಾಸನ :** ೧. ಅನುಭಾವದಲ್ಲಿ ಅಂಗನು ಲಿಂಗದಲ್ಲಿ ಭಿನ್ನವಿಲ್ಲದಂತೆ ಒಂದಾದಾಗ, ಅವನಿಗೆ ಶಿವನು ಶೂನ್ಯರೂಪದಲ್ಲಿ ಕಾಣುತ್ತಾನೆ. ಶೂನ್ಯವೆಂದರೆ ಯಾವುದೇ ಗುಣಕರ್ಮಗಳಿಲ್ಲದ ಪರಶಿವನ ಅವಸ್ಥೆ. ಮಾನವರಲ್ಲಿ ಶ್ರೇಷ್ಠನಾದ ರಾಜನು ಸಿಂಹಾಸನದ ಮೇಲೆ ಕುಳಿತಿರುವಂತೆ, ಶ್ರೇಷ್ಠವಾದ ಶೂನ್ಯಲಿಂಗವು ಶೂನ್ಯ ಸಿಂಹಾಸನದಲ್ಲಿ ಆಸೀನವಾಗಿರುತ್ತದೆ. ಅನುಭಾವದ ಮೂಲಕ ಲಿಂಗೈಕ್ಯ ಸ್ಥಿತಿಯನ್ನು ಪಡೆದ ಜೀವಾತ್ಮನೇ ಆ ಶೂನ್ಯಕ್ಕೆ ಸಿಂಹಾಸನವಾಗುತ್ತಾನೆ. ಅಂದರೆ, ಆ ಜೀವಾತ್ಮನಲ್ಲಿ ಜೀವತ್ವ ಹೋಗಿ ಅದರ ಸ್ಥಳದಲ್ಲಿ ಶಿವತ್ವ ನೆಲೆಸಿರುತ್ತದೆ. (೮:೬೪೬, ೧೪:೩೦೪೨) ೨. ಅನುಭವ ಮಂಟಪದಲ್ಲಿ ಶೂನ್ಯಸಿಂಹಾಸನವೆಂಬ ಆಸನವಿತ್ತು, ಅದನ್ನು ಅನುಭವ ಮಂಟಪದ ಅಧ್ಯಕ್ಷನಾದ ಅಲ್ಲಮ ಪ್ರಭುವು ಏರುತ್ತಿದ್ದ.

**ಶೈವ :** ಶಿವಾಗಮಗಳಲ್ಲಿ ಉಕ್ತವಾಗಿರುವುದನ್ನು ನಂಬುವವನು ಶೈವ. ಹಿಂದೆ ಅನೇಕ ಶೈವ ಪ್ರಭೇದಗಳಿದ್ದಿರಬಹುದಾದರೂ, ಈಗ ಮಾತ್ರ ಕಾಶ್ಮೀರ ಶೈವ, ಶೈವ ಸಿದ್ಧಾಂತ, ವೀರಶೈವ ಎಂಬ ಮೂರು ಪ್ರಧಾನ ಶೈವಗಳಿವೆ. (ನೋಡಿ: **ಶೈವ ಪ್ರಭೇದ**)

**ಶೈವಗುರು :** ವೀರಶೈವೇತರರ ಗುರುವಿಗೆ ವಚನಗಳಲ್ಲಿ ಶೈವಗುರು ಎಂದು ಕರೆಯಲಾಗುತ್ತದೆ. ಶೈವಗುರು ಕೊಟ್ಟ ದೀಕ್ಷೆಗೆ ವಚನಕಾರರು ಮಾನ್ಯತೆ ನೀಡುವುದಿಲ್ಲ.

**ಶೈವ ಪ್ರಭೇದ :** ಶೈವರಲ್ಲಿ ಪ್ರಭೇದಗಳನ್ನು ಗುರುತಿಸುವಾಗ ಪ್ರಭೇದ ಸಂಖ್ಯೆಯಲ್ಲಾಗಲಿ, ಪ್ರಭೇದ ಲಕ್ಷಣಗಳಲ್ಲಾಗಲಿ ವಚನಕಾರರಲ್ಲಿ ಒಮ್ಮತವಿಲ್ಲ. ಶಾಂತವೀರೇಶ್ವರ ಅಥವಾ ಶಾಂತವೀರೇಶ್ವರ ಪ್ರಭು ಎಂಬ ಅಂಕಿತವನ್ನುಳ್ಳ ವಚನಗಳ ಕರ್ತೃವು ಶೈವರಲ್ಲಿ ನಾಲ್ಕು ಪ್ರಭೇದಗಳನ್ನು ಗುರುತಿಸಿದ್ದಾನೆ. ಸಾಮಾನ್ಯ ಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವ - ಇವೇ ಆ ನಾಲ್ಕು ಪ್ರಭೇದಗಳೆಂದು ತಿಳಿಸಿ, ಆ ವಚನಕಾರನು ಪ್ರತಿಯೊಂದರ ಮುಖ್ಯ ಲಕ್ಷಣಗಳನ್ನು ವಿವರಿಸಿದ್ದಾನೆ.

ಸಾಮಾನ್ಯ ಶೈವ : ಕೇವಲ ವಿಭೂತಿ ಪಟ್ಟದಿಂದಲೇ ಶುದ್ಧನಾಗಿ, ಆ ಮೂಲಕ ಶೈವನೆನಿಸಿಕೊಳ್ಳುವವನೇ ಸಾಮಾನ್ಯಶೈವ. ದೇವ, ದಾನವ, ಅಥವಾ ಮಾನವರಿಂದ ಪ್ರತಿಷ್ಠಾಪಿಸಲ್ಪಟ್ಟ ಲಿಂಗವನ್ನು ದರ್ಶನ, ನಮಸ್ಕಾರ, ಅರ್ಚನ ಮತ್ತು ಪ್ರದಕ್ಷಿಣೆ ಮಾಡುವುದು ಇವನ ಮುಖ್ಯ ಲಕ್ಷಣ. ಶಿವಕೀರ್ತಿ, ಶಿವವಚನ, ಶಿವಭಕ್ತರಲ್ಲಿ ಪ್ರೀತಿ ಇವನಿಗಿದೆ.

ಮಿಶ್ರಶೈವ : ಮಿಶ್ರಶೈವನು ಕೇವಲ ಸ್ಥಾವರ ಲಿಂಗವನ್ನಷ್ಟೇ ಅಲ್ಲ, ವಿಷ್ಣು, ದೇವಿ, ಷಣ್ಮುಖ, ಗಣಪತಿ, ಸೂರ್ಯ, ಇಂದ್ರಾದಿ ದೇವತೆಗಳ ಪೂಜೆಯನ್ನು ಮಾಡುತ್ತಾನೆ. ಅವನಿಗೆ ಯಾವೊಂದು ದೈವವೂ ದೊಡ್ಡದಲ್ಲ. ಯಾವೊಂದು ದೈವವೂ ಸಣ್ಣದಲ್ಲ, ಎಲ್ಲ ದೈವಗಳಲ್ಲಿಯೂ ಅವನಿಗೆ ಸಮಾನ ಭಕ್ತಿಯಿದೆ. ಕೆಲವು ವೇಳೆ ಅವನು ಉಳಿದೆಲ್ಲ ದೈವಗಳನ್ನು ಶಿವಸಮಾನವೆಂದು ತಿಳಿದು, ಅದರಂತೆ ಪೂಜಿಸುತ್ತಾನೆ.

ಶುದ್ಧಶೈವ : ಶಿವನ ಉದ್ದೇಶದಿಂದ ಜನಿಸಿದವನು ಶುದ್ಧಶೈವ. ಆ ಶುದ್ಧ ಶೈವನಿಂದ ಹುಟ್ಟಿದವನು ಶೈವ ಬ್ರಾಹ್ಮಣ ಅಥವಾ ಆದಿಶೈವ. ಅಂದರೆ, ಶಿವನ ಐದು ಮುಖಗಳಲ್ಲಿ ಹುಟ್ಟಿದ ಕೌಶಿಕ, ಕಾಶ್ಯಪ, ಭಾರದ್ವಾಜ, ಅತ್ರಿ, ಮತ್ತು ಗೌತಮರೆಂಬ ಐದು ಶಿವದೀಕ್ಷಿತರ ವಂಶದವರೆಲ್ಲಾ ಶೈವ ಬ್ರಾಹ್ಮಣರು. ಇವರು ವೇದೋಕ್ತ, ಶಾಸ್ತ್ರೋಕ್ತ ಸಮಸ್ತ ಕ್ರಿಯಾದಿಗಳನ್ನು ಮಾಡುವವರು. ಹಾಗೂ ಸ್ಥಾವರಲಿಂಗ ಪೂಜೆ ಮಾಡುವವರು.

ಇವರು ಮಾಡುವ ಶಿವಪೂಜೆಯು ಆತ್ಮಾರ್ಥ ಮತ್ತು ಪರಾರ್ಥ ಎಂದು ಎರಡು ವಿಧವಾಗಿದೆ. ಹೃದಯಸ್ಥಾನದಲ್ಲಿಯೂ ಗುರುಕೊಟ್ಟ ಲಿಂಗದಲ್ಲಿಯೂ ಇರುವ ಪೂಜೆಯನ್ನು ಮಾಡುವುದೇ ಆತ್ಮಾರ್ಥ ಪೂಜೆ. ಪ್ರತಿಷ್ಠಾಪಿತವಾದ ಶಿವಲಿಂಗ ಪೂಜೆಯನ್ನು ಎಲ್ಲರಿಗೂ ಹಿತವಾಗುವ ಉದ್ದೇಶದಿಂದ ಮಾಡಿದರೆ, ಆ ಪೂಜೆ ಪರಾರ್ಥ ಪೂಜೆ ಎನಿಸಿಕೊಳ್ಳುತ್ತದೆ. ಆದರೆ ಶುದ್ಧ ಶೈವನು ವಿಷ್ಣು, ಇತ್ಯಾದಿ ದೈವಗಳನ್ನು ಶಿವಾವರಣಗಳಲ್ಲಿ ಆತ್ಮಾರ್ಥಕ್ಕಾಗಿ ಅಥವಾ ಪರಾರ್ಥಕ್ಕಾಗಿ ಪೂಜಿಸಬಾರದು; ಸ್ವಾರ್ಥ

ದೃಷ್ಟಿಯಿಂದಲೂ ಪೂಜಿಸಬಾರದು. ಒಂದು ವೇಳೆ ವಿಷ್ಣು ಇತ್ಯಾದಿ ದೈವಗಳನ್ನು ಪರಾರ್ಥವಾಗಿ ಪೂಜಿಸುವುದೇ ಆದರೆ, ಅಂಥ ದೈವಗಳು ಶಿವನ ಪರಿವಾರದವರೆಂದು ತಿಳಿದು ಪೂಜಿಸಬೇಕು. ಆದರೆ ಶಿವಾಲಯದ ಹೊರಗೆ ಇರುವ ವಿಷ್ಣು, ಸಪ್ತಮಾತೃಕೆ ಮುಂತಾದವರ ವಿಗ್ರಹಗಳ ಪೂಜೆ ವರ್ಜ್ಯ. ಕ್ರಿಯಾದಿಗಳ ಮೂಲಕ ಮಾಡುವ ಪೂಜೆಗಿಂತ ಮಂತ್ರಗಳ ಮೂಲಕ ಲಿಂಗಪೂಜೆಯು ಉತ್ತಮ. ಅಂಥವನ ಶರೀರವು ಮಂತ್ರಪಿಂಡವಾಗಿ ಅವನು ಶಿವಾನುಗ್ರಹಕ್ಕೆ ಅರ್ಹನಾಗುತ್ತಾನೆ.

ಈ ಮೂರು ಪ್ರಭೇದಗಳಿಗಿಂತ ವೀರಶೈವವು ಉತ್ತಮವಾದುದು. ವೀರಶೈವ ಪ್ರೋಕ್ತ ಆಚಾರಗಳು ಬಹಳ ಸುಲಭವಾದುವು. ಅಲ್ಲದೆ ಆ ಆಚಾರದಿಂದ ಲಭ್ಯವಾದಂಥ ಜ್ಞಾನವು ಅಥವಾ ಲಿಂಗಾಂಗ ಐಕ್ಯವು ಕೈಲಾಸ ಮುಂತಾದ ಲಾಭಗಳಿಗಿಂತ ಹೆಚ್ಚಿನದು. ವೀರಶೈವನು ಜ್ಞಾನ ಅಥವಾ ವಿದ್ಯೆಯಲ್ಲಿ ('ವಿ') ರಮಿಸುವವನು ('ರ') ಅಥವಾ ವಿನೋದಿಸುತ್ತಿರುವವನು ಎಂದಾದುದರಿಂದ ಅವನು ಶಮದಮಾದಿ ಷಟ್ ಸಂಪತ್ತಿಯಿಂದ ಶೋಭಿಸುತ್ತಿರುತ್ತಾನೆ, ಅಲ್ಲದೆ ಅವನು ಮಾಯೆಯನ್ನು ಗೆದ್ದವನಾದುದರಿಂದ ಅವನನ್ನು ವೀರಮಾಹೇಶ್ವರನೆಂದೂ ಕರೆಯಲಾಗುತ್ತದೆ. ಶಿವೈಕ್ಯರಾದ ವೀರಶೈವರು ಜ್ಞಾನಯಜ್ಞದಲ್ಲಿ ನಿರತರಾಗಿರುತ್ತಾರೆ.

ಅವರಿಗೆ ಯಾವ ಸ್ವಾರ್ಥಪರ ಆಸೆಗಳೂ ಇಲ್ಲವಾದುದರಿಂದ ಅವರು ಕರ್ಮಯೋಗಿಗಳೂ ಹೌದು. ಇತರ ಶೈವರು ಮಾಡಬೇಕೆಂದು ಇಚ್ಛಿಸಿದ್ದ ಎಲ್ಲ ಸತ್ಕಾರ್ಯಗಳನ್ನೂ ವೀರಶೈವರು ಬಹಿರಂಗದಲ್ಲಿ ಮಾಡಿ ತೋರಿಸುತ್ತಾರೆ. ಬಹಳ ಕ್ರಿಯೆಗಳನ್ನು ಮಾಡಿ ಅಲ್ಪಫಲವನ್ನು ಪಡೆಯುವುದು ಇತರ ಶೈವ ಪ್ರಭೇದಗಳ ಗುಣವಾದರೆ, ಅಲ್ಪ ಕ್ರಿಯೆಗಳನ್ನು ಮಾಡಿ ಬಹಳ ಫಲವನ್ನು ಪಡೆಯುವುದು ವೀರಶೈವದ ಗುಣವಾಗಿದೆ.

ವೀರಶೈವದಲ್ಲೂ ಮೂರು ಪ್ರಭೇದಗಳಿವೆ. ಅವೆಂದರೆ ಸಾಮಾನ್ಯ, ವಿಶೇಷ ಮತ್ತು ನಿರಾಭಾರಿ. ಹಸ್ತ ಮಸ್ತಕ ಸಂಯೋಗವನ್ನೊಳಗೊಂಡ ದೀಕ್ಷೆಯ ಮೂಲಕ ವೀರಶೈವನಾದವನು ಸಾಮಾನ್ಯ ವೀರಶೈವ. ಪಂಚಾಕ್ಷರಿ ಮಂತ್ರದಿಂದ ದೀಕ್ಷೆ ಪಡೆದು ಉತ್ತಮಾಂಗಾದಿ ಯಾವುದಾದರೂ ಸ್ಥಾನದಲ್ಲಿ ಇಷ್ಟಲಿಂಗವನ್ನೂ ವಿಭೂತಿಯನ್ನೂ ಅವನು ಧರಿಸುತ್ತಾನೆ, ಹಾಗೂ ಪ್ರತಿದಿನ ಒಂದು ಸಾರಿ, ಸಾಧ್ಯವಾದರೆ ಎರಡು ಸಾರಿ, ಸಾಧ್ಯವಾದರೆ ಮೂರು ಸಾರಿ ಅದನ್ನು ಪೂಜಿಸುತ್ತಾನೆ.

ಶುದ್ಧ ವೀರಶೈವರು ಮಾಡುವ ದೀಕ್ಷಾ ವಿಧಾನವನ್ನು ಅನುಸರಿಸಿ, ಶಿವಕುಂಭವನ್ನು ಸ್ಥಾಪಿಸಿ, ಅದರಲ್ಲಿರುವ ಶಿವನನ್ನು ಪೂಜಿಸಿ, ದೀಕ್ಷೋತ್ಸವಕ್ಕೆ ಬಂದಿರುವ ಒಡೆಯರುಗಳನ್ನು ಸಂತುಷ್ಟಗೊಳಿಸುವ ಸಲುವಾಗಿ ಅವರಿಗೆ ವಿಭೂತಿ ವೀಳೆಯವನ್ನು

ಕೊಡುವವನು ವಿಶೇಷ ವೀರಶೈವ. ಅವನು ಗುರು ಹೇಳಿದ ಎಲ್ಲ ದೀಕ್ಷಾ ಕರ್ಮಗಳನ್ನು ಮಾಡುವುದಲ್ಲದೇ ತನ್ನ ಮಲತ್ರಯಗಳನ್ನೂ ನಿರ್ಮೂಲನೆ ಮಾಡಿಕೊಳ್ಳುತ್ತಾನೆ. ಶಿವಾಚಾರ್ಯನು ಅಂಥ ವಿಶೇಷ ವೀರಶೈವ ಶಿಷ್ಯನನ್ನು ಕೃಪಾದೃಷ್ಟಿಯಿಂದ ನೋಡಿ, ಅವನ ದೇಹವನ್ನು ಚಿತ್ ಶರೀರವನ್ನಾಗಿ ಮಾಡುತ್ತಾನೆ. ಅನಂತರ ದೀಕ್ಷಿತನು ಷಟ್‌ಚಕ್ರ, ಷಡಂಗ ಮತ್ತು ಷಡಧ್ವಗಳನ್ನು ಜಾಗೃತಗೊಳಿಸುತ್ತಾನೆ. ವಿಶೇಷ ವೀರಶೈವನು ತನ್ನ ದೇಹ ಮತ್ತು ಪ್ರಾಣ ಬೇರಾಗದ ಹಾಗೆ ವರ್ತಿಸುತ್ತಾನೆ, ಅಂದರೆ ಅವನು ಲಿಂಗದಲ್ಲಿ ಪ್ರಾಣವನ್ನಿರಿಸಿ ತನ್ನ ಎಲ್ಲ ಕೆಲಸ ಮತ್ತು ಚಿಂತನೆಗಳನ್ನು ಲಿಂಗಾಭಿಮುಖವಾಗಿ ಮಾಡುತ್ತಾನೆ.

ನಿರಾಭಾರಿ ವೀರಶೈವನು ಸಕಲ ಸಾಂಸಾರಿಕ ವ್ಯಾಪಾರಗಳನ್ನು ದೂರೀಕರಿಸಿ, ದಂಡ, ಕೌಪೀನ, ಕಾಷಾಂಬರ, ಜಟಾಬಂಧ, ನಾರುಡುಗೆಗಳನ್ನು ಧರಿಸಿ, ಚಿತ್ತದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿಕೊಂಡಿರುತ್ತಾನೆ. ಅವನು ಕೂರುವುದು ಕೃಷ್ಣಾಜಿನ ಅಥವಾ ವ್ಯಾಘ್ರಾಜಿನದ ಮೇಲೆ, ಕೇಳುವುದು ಶಿವಲೀಲಾ ಕಥನ, ಭುಂಜಿಸುವುದು ನಿಯತ ಭಿಕ್ಷಾನ್ನ, ಸ್ವಾರ್ಥತ್ಯಾಗ ಮಾಡಿದ ಅವನಿಗೆ ಯಾವ ಪಾಪವೂ ಪ್ರಾಯಶ್ಚಿತ್ತವೂ ಇಲ್ಲ.

**ಶೈವಲಿಂಗ :** ಸ್ಥಾವರಲಿಂಗ. (೪:೫೪೨)

**ಶೈವಸಿದ್ಧಾಂತ :** ಶೈವ ಸಿದ್ಧಾಂತ ಅಥವಾ ತಮಿಳು ಶೈವದಲ್ಲಿ ಶಿವನೇ ಪ್ರಮುಖ. ಅದರ ದರ್ಶನದಲ್ಲಿ ಶಿವನು ಶಕ್ತಿಯೆಂಬ ಕರಣದ ಮೂಲಕ, ಮಾಯೆ ಅಥವಾ ಪ್ರಕೃತಿಯಿಂದ ಜಗತ್ತನ್ನು ಸೃಷ್ಟಿಸುತ್ತಾನೆ. ಮಾಯೆಯು ಮನುಷ್ಯನಿಗೆ ಬಂಧನವನ್ನುಂಟು ಮಾಡುವುದರಿಂದ, ಅದಕ್ಕೆ ಪಾಶವೆಂದು ಹೆಸರು. ಜೀವಾತ್ಮನಿಗೆ ಪಶು ಎಂದು ಹೆಸರು. ಅವನು ಬಂಧನದಲ್ಲಿದ್ದಾಗ ಪಶು. ಬಂಧನದಲ್ಲಿದ್ದಾಗ, ಪ್ರಾಣಿಯಂತೆ, ಅಜ್ಞಾನಿಯಾದುದರಿಂದ ಅವನು ಪಶು. ಶಿವನ ಅನುಗ್ರಹದಿಂದ ಅವನು ಮೋಕ್ಷ ಪಡೆಯುವುದರಿಂದ, ಹಾಗೂ ಶಿವನೇ ಎಲ್ಲ ಪಶುಗಳ ಒಡೆಯನಾದುದರಿಂದ, ಶಿವನೇ ಪಶುಪತಿ. ಹೀಗೆ ಶೈವ ಸಿದ್ಧಾಂತದಲ್ಲಿ ಪಶು, ಪಾಶ, ಪಶುಪತಿ ಪ್ರಧಾನ ಪರಿಕಲ್ಪನೆಗಳಾಗಿವೆ.

ಶೈವ ಸಿದ್ಧಾಂತಿಗಳು ದ್ವೈತಿಗಳು. ಅವರ ಪ್ರಕಾರ, ಶಿವ ತಾನೇ ಜಗವಾಗುವುದಿಲ್ಲ, ಅವನು ಪ್ರಕೃತಿಯನ್ನು ಮಾರ್ಪಡಿಸುತ್ತಾನೆ. ಕುಂಬಾರನು ಮಣ್ಣಿಗೆ ಹೇಗೆ ವಿವಿಧ ರೂಪ ಕೊಡುವ ಮೂಲಕ ವಿವಿಧ ರೀತಿಯ ಮಡಕೆ, ಹೂಜಿ, ಮುಂತಾದವುಗಳನ್ನು ರಚಿಸುತ್ತಾನೋ, ಹಾಗೆ ಶಿವನು ಪ್ರಕೃತಿಗೆ ವಿವಿಧ ರೂಪಗಳನ್ನು ಕೊಡುವ ಮೂಲಕ ಪ್ರಪಂಚದ ವಿವಿಧ ವಸ್ತುಗಳನ್ನು ರಚಿಸುತ್ತಾನೆ.

ಶೈವಸಿದ್ಧಾಂತಿಗಳ ಪ್ರಕಾರ, ಮೋಕ್ಷ ಪಡೆದ ಆತ್ಮ ಶಿವಲೋಕಕ್ಕೆ ಹೋಗಿ, ಅಲ್ಲಿ ನಿರಂತರ ಶಿವಸಾನಿಧ್ಯದಲ್ಲಿರುತ್ತದೆ. ಜೀವನು ಶಿವನಾಗುತ್ತಾನೆಂಬ ಮಾತನ್ನು ಅವರು ಒಪ್ಪುವುದಿಲ್ಲ.

ಶೈವಸಿದ್ಧಾಂತವು ಭಕ್ತಿ ಪ್ರಧಾನ ಪಂಥ. ಅವರ ಅರವತ್ತು ಮೂರು ಪುರಾತನರೇ ವಚನಕಾರರಿಗೆ ಆದರ್ಶ ಪುರುಷರು. ಶೈವಸಿದ್ಧಾಂತದ ಪ್ರತಿಪಾದಕರೂ ಸಂಸ್ಕೃತದಲ್ಲಿ ಬರೆಯದೆ, ತಮ್ಮ ಅನುಭವಗಳನ್ನು ತಮಿಳಿನಲ್ಲಿ ಬರೆದು, ತಮ್ಮ ಸಂದೇಶವನ್ನು ಜನಸಾಮಾನ್ಯರಿಗೆ ಮುಟ್ಟಿಸಿದರು. ಅವರೂ ಜಾತಿಮತಪಂಥಗಳನ್ನು ತಿರಸ್ಕರಿಸಿ, ಶಿವಭಕ್ತರೆಲ್ಲ ಒಂದೇ ಎಂದು ಸಾರಿದರು.

**ಶ್ರದ್ಧಾಭಕ್ತಿ :** ಆಧ್ಯಾತ್ಮಿಕ ಸಾಧನೆಯ ಪ್ರಥಮ ಹಂತದಲ್ಲಿ ತೋರಿಸುವ ಭಕ್ತನ ಭಕ್ತಿ. ಇದಕ್ಕೆ ಸದ್ಭಕ್ತಿ, ವಿಶ್ವಾಸ ಭಕ್ತಿ, ಎಂಬ ಹೆಸರೂ ಇವೆ. ಇಲ್ಲಿ ಗುರು ಹೇಳಿದುದನ್ನು ಪ್ರಶ್ನಿಸದೆ, ಕೇವಲ ಶ್ರದ್ಧೆ ಅಥವಾ ವಿಶ್ವಾಸದಿಂದ ಭಕ್ತನು ಕೆಲವೊಂದು ವಿಶಿಷ್ಟ ಆಚರಣೆಗಳಲ್ಲಿ ನಿರತನಾಗಿರುತ್ತಾನೆ. ಅವನ್ನೇ ಏಕೆ ಮಾಡಬೇಕೆಂಬುದು ಅವನಿಗಿನ್ನೂ ಗೊತ್ತಿಲ್ಲ. (ನೋಡಿ:**ಭಕ್ತಿ, ಅಂಗಸ್ಥಲ-ಲಿಂಗಸ್ಥಲ ಸಂಬಂಧ**)

**ಶ್ರದ್ಧೆ ಸುಖ ಪರಿಣಾಮಿ :** ಭಕ್ತಸ್ಥಲದ ಸಾಧಕನು ತನ್ನ ಸುಚಿತ್ತವೆಂಬ ಹಸ್ತದಲ್ಲಿ ಆಚಾರಲಿಂಗವನ್ನು ಕಂಡು, ಶ್ರದ್ಧೆಯೆಂಬ ಭಕ್ತಿಯನ್ನು ಆಚರಿಸುತ್ತಿರುವಾಗ ಶ್ರದ್ಧೆ ಸುಖವು ಪರಿಣಮಿಸುತ್ತದೆ. ಅಲ್ಲದೆ ಅವನ ಸುಬುದ್ಧಿಯೆಂಬ ಹಸ್ತದಲ್ಲಿ ಗುರುಲಿಂಗ ಕಾಣಿಸಿಕೊಳ್ಳುತ್ತದೆ. (೧೨:೪೫೫)

**ಶ್ರುತಿದೃಷ್ಟ ಅನುಮಾನ :** ಶಬ್ದ, ಪ್ರತ್ಯಕ್ಷ ಮತ್ತು ಅನುಮಾನಗಳೆಂಬ ಮೂರು ಪ್ರಮಾಣಗಳು. ಬರೆವಣಿಗೆ ಪ್ರಚಲಿತವಿಲ್ಲದಿದ್ದ ಕಾಲದಲ್ಲಿ ಜನರು ವೇದ ಪಠನವನ್ನು ಬೇರೆಯವರಿಂದ ಕೇಳಿಸಿಕೊಂಡು (ಶ್ರುತಿ) ತಿಳಿದುಕೊಳ್ಳುತ್ತಿದ್ದರು. ಹೀಗೆ ಶಬ್ದ ಗ್ರಹಣದ ಮೂಲಕ ಪಡೆದ ಈ ಜ್ಞಾನವು ಶ್ರುತಿ ಎನಿಸಿಕೊಂಡಿತು. ಹಾಗೂ ಅದನ್ನು ಪಡೆಯುವ ಮಾರ್ಗವು ಶಬ್ದವನ್ನು ಕೇಳಿಸಿಕೊಳ್ಳುವ (ಶ್ರುತ) ಮಾರ್ಗವಾದುದರಿಂದ ಅದಕ್ಕೆ ಶಬ್ದ ಪ್ರಮಾಣ ಎಂಬ ಹೆಸರು ಬಂದಿತು.

ಪ್ರತ್ಯಕ್ಷವೆಂದರೆ ಅಕ್ಷದಿಂದ (ಕಣ್ಣಿನಿಂದ) ನೋಡುವುದು ಎಂದರ್ಥ. ವಾಸ್ತವವಾಗಿ ಪ್ರತ್ಯಕ್ಷ ಪ್ರಮಾಣ ಎಂಬ ಪದವು ಕೇವಲ ಕಣ್ಣಿನಿಂದ ನೋಡಿ ಪಡೆದ (ದೃಷ್ಟ) ಪಡೆದ ಜ್ಞಾನಕ್ಕಷ್ಟೇ ಅನ್ವಯಿಸದೆ ಇತರ ಇಂದ್ರಿಯಗಳಿಂದ ಪಡೆದ ಜ್ಞಾನಕ್ಕೂ ಅನ್ವಯಿಸುತ್ತದೆ. ಅನುಮಾನವೆಂದರೆ ನಮಗೆ ಗೊತ್ತಿರುವ ಕೆಲವು ವಿಷಯಗಳಿಂದ ತರ್ಕದ ಮೂಲಕ ಗೊತ್ತಿಲ್ಲದ ಕೆಲವು ವಿಷಯಗಳನ್ನು ತಿಳಿದುಕೊಳ್ಳುವುದು. ಉದಾಹರಣೆಗೆ ದೂರದ ಬೆಟ್ಟದಲ್ಲಿ ಹೊಗೆ ಕಾಣಿಸಿಕೊಂಡರೆ ಅಲ್ಲಿ ಬೆಂಕಿ ಇರಬೇಕೆಂದು ತಿಳಿದುಕೊಳ್ಳುತ್ತೇವೆ. ಏಕೆಂದರೆ ಈ ಹಿಂದೆ ಹೊಗೆ ಇದ್ದಲ್ಲೆಲ್ಲಾ ಬೆಂಕಿ ಇರುವುದರ ಅನುಭವ ನಮಗಾಗಿದೆ.

**ಶ್ರುತಿ :** ೧. ವೇದ ಮತ್ತು ಉಪನಿಷತ್ತುಗಳು. ೨. ಯಾವುದೇ ಧರ್ಮದ ಗ್ರಂಥ.

**ಶ್ರುತಿಗತೀತ :** ಶ್ರುತಿಗಳ ವರ್ಣನೆಗೆ ಮೀರಿದವನು, ಪರಶಿವ. (೭:೭೨೬)

**ಶ್ರೋತ್ರದ ಕೈಗಳಲರ್ಪಿಸುವುದು :** ನಾವು ಸಾಮಾನ್ಯವಾಗಿ ಪದಾರ್ಥಗಳನ್ನು ಕೈಗಳಿಂದಲೆ ನೈವೇದ್ಯ ಮಾಡುತ್ತೇವೆ. ಆಧ್ಯಾತ್ಮಿಕ ಪ್ರಗತಿ ಸಾಧಿಸಿದವನು ಶಬ್ದವನ್ನು ಕಿವಿಗಳೆಂಬ ಕೈಯಿಂದ ಅರ್ಪಿಸಿ, ಆಮೇಲೆ ತಾನು ಕೇಳಿಸಿಕೊಳ್ಳುತ್ತಾನೆ. ಅಂದರೆ ರೂಪ, ರಸ, ಗಂಧ ಮುಂತಾದ ಯಾವುದೇ ವಿಷಯವು ಅವನ ತನು ತಾಗದ ಮುನ್ನ, ಅದನ್ನು ಅವನು ಮನಸ್ಸಿನಲ್ಲೇ ಲಿಂಗಕ್ಕೆ ಅರ್ಪಿಸಿದ ನಂತರ ತಾನು ಅನುಭವಿಸುತ್ತಾನೆ. (೩:೩೦೮)

**ಶ್ರೋತ್ರದಿಂದ ಅರ್ಪಿಸುವುದು :** ಶ್ರೋತ್ರೇಂದ್ರಿಯದಿಂದ ನಾವು ಕುಶಬ್ದಗಳನ್ನು ಸುಶಬ್ದಗಳಿಂದ ಪ್ರತ್ಯೇಕಿಸಿ, ಸುಶಬ್ದವನ್ನಷ್ಟೇ ಲಿಂಗಕ್ಕೆ ಅರ್ಪಿಸಬೇಕು. ಒಂದು ವಿಶಾಲಾರ್ಥದಲ್ಲಿ, ನಿಸ್ವಾರ್ಥ ಭಾವನೆಯಿಂದ ಅರ್ಪಿಸುವವನು ಲಿಂಗಕ್ಕೆ ಒಂದು ನಿಶ್ಚಿತ ಪ್ರದೇಶದಲ್ಲಿ ಮತ್ತು ಒಂದು ನಿಶ್ಚಿತ ಸಮಯದಲ್ಲಿ ಶಬ್ದವನ್ನು ಅರ್ಪಿಸದೆ, ಮನಸ್ಸಿನಲ್ಲಿಯೇ ಲಿಂಗವನ್ನು ನೆನೆದು, ಮನಸ್ಸಿನಲ್ಲಿಯೇ ಶಬ್ದವನ್ನು ಅದಕ್ಕೆ ಅರ್ಪಿಸಿ, ಅನಂತರ ತಾನು ಅನುಭವಿಸುತ್ತಾನೆ. ಇದನ್ನೆ ಚೆನ್ನಬಸವಣ್ಣನವರು (೩:೨೨೮) "ಸುಶಬ್ದವನು ಶ್ರೋತ್ರದಿಂ ಲಿಂಗಕ್ಕರ್ಪಿಸುವಲ್ಲಿ..." ಎನ್ನುತ್ತಾರೆ. (ಅದೇ ರೀತಿ ಸ್ಪರ್ಶೇಂದ್ರಿಯದಿಂದ ಸ್ಪರ್ಶನವನ್ನೂ, ರಸನೇಂದ್ರಿಯದಿಂದ ಮಹಾರಸವನ್ನೂ ಮನಸ್ಸಿನಲ್ಲೇ ಅರ್ಪಿಸಿ ಅನಂತರ ಭೋಗಿಸಬೇಕೆಂದು ಚೆನ್ನಬಸವಣ್ಣನವರು ಹೇಳುತ್ತಾರೆ. ನೋಡಿ : ೩:೨೨೮)

**ಶ್ರೋತ್ರಲಿಂಗ ಸಮರಸ :** ಲಿಂಗೈಕ್ಯನಾದವನ ಶ್ರೋತ್ರವೂ (ಕಿವಿಯೂ) ಅವನ ಆತ್ಮದಂತೆ ಲಿಂಗದಲ್ಲಿ ಸಾಮರಸ್ಯವನ್ನು ಪಡೆಯುತ್ತದೆ. ಐಕ್ಯನ ಆತ್ಮವನ್ನು ಪರಶಿವನು ಹೇಗೆ ಪೂರ್ತಿ ಆವರಿಸಿಕೊಂಡಿದ್ದಾನೋ, ಹಾಗೆಯೇ ಅವನ ಇಂದ್ರಿಯಕರಣಾದಿಗಳನ್ನೂ ಆವರಿಸಿಕೊಂಡಿದ್ದಾನೆ. ಆದ್ದರಿಂದ, ಅವನ ಶ್ರೋತ್ರವು ಲಿಂಗದೊಂದಿಗೆ ಒಂದಾಗಿದೆ (೧೦:೧೫೫೪).

**ಷಟ್ಕರ್ಮ :** ಆರು ರೀತಿಯ ಕರ್ತವ್ಯಗಳು. ಯಜನ (ಯಜ್ಞ ಮಾಡುವುದು), ಯಾಜನ (ಯಜ್ಞ ಮಾಡಿಸುವುದು), ಅಧ್ಯಯನ (ವೇದ, ಶಾಸ್ತ್ರ, ಪುರಾಣ ಇವುಗಳ ಅಧ್ಯಯನ), ಅಧ್ಯಾಪನ (ವೇದ ಶಾಸ್ತ್ರಾದಿಗಳನ್ನು ಬೋಧಿಸುವುದು), ದಾನ, ಪ್ರತಿಗ್ರಹ.

**ಷಟ್ಕಲೆ :** ಆರು ಕಲೆಗಳು. ಸಾಧಕನ ಆಧ್ಯಾತ್ಮಿಕ ಪ್ರಗತಿಯ ಹಂತವನ್ನು ಸೂಚಿಸುವ ಈ ಆರು ಕಲೆಗಳು ಹೀಗಿವೆ: ನಿವೃತ್ತಿಕಲಾ, ಪ್ರತಿಷ್ಠಾಕಲಾ, ವಿದ್ಯಾಕಲಾ, ಶಾಂತಿಕಲಾ, ಶಾಂತ್ಯತೀತಕಲಾ ಮತ್ತು ಶಾಂತ್ಯತೀತೋತ್ತರ ಕಲಾ. ಇವು ಸಾಧಕನ ಮಾನಸಿಕ ಸ್ಥಿತಿಯನ್ನು ಸೂಚಿಸುತ್ತವೆಯಾದುದರಿಂದ ಅವುಗಳನ್ನು ಆರು ಹಂತದ ಭಕ್ತಿ ಎಂದೂ ಕರೆಯಬಹುದು. ಸಾಧಕನು ಭಕ್ತಸ್ಥಲದಲ್ಲಿ ನಿಸ್ವಾರ್ಥ ಕ್ರಿಯೆಗಳನ್ನು ಆಚರಿಸಲು ಪ್ರಾರಂಭಿಸುತ್ತಾನೆ, ಅಥವಾ ಅವನಲ್ಲಿ ನಿವೃತ್ತಿಕಲೆ ಇರುತ್ತದೆ; ಮಹೇಶ್ವರ ಸ್ಥಲದಲ್ಲಿ ನಿವೃತ್ತಿಕಲೆ ಅವನಲ್ಲಿ ನೆಲೆಸುವುದರಿಂದ ಅಥವಾ ಪ್ರತಿಷ್ಠಿತವಾಗುವುದರಿಂದ ಅವನ ಭಕ್ತಿಯನ್ನು ಪ್ರತಿಷ್ಠಾ

ಕಲೆಯೆನ್ನಬಹುದು, ಪ್ರಸಾದಿ ಸ್ಥಲದಲ್ಲಿ ತನ್ನ ಮತ್ತು ಪ್ರಪಂಚದ ಬಗೆಗಿನ ಜ್ಞಾನ (ವಿದ್ಯೆ) ಹೆಚ್ಚಿ, ಸಾಧಕನು ಪ್ರಸಾದದ ಬಗೆಗೆ ಅವನ ಧೋರಣೆ ಬದಲಾಗುತ್ತದೆ, ಪ್ರಾಣಲಿಂಗಿಯು ಅವಧಾನದ ಮೂಲಕ ತನ್ನ ಎಲ್ಲ ಭಾಗಗಳಲ್ಲಿಯೂ ಲಿಂಗವನ್ನು ಪ್ರತಿಷ್ಠಾಪಿಸಿಕೊಳ್ಳುವುದರಿಂದ, ಅವನಲ್ಲಿ ಸ್ವಾರ್ಥ ಭಾವನೆಗಳು ಕಡಿಮೆಯಾಗಿ ಅವನಲ್ಲಿ ಶಾಂತಿ ನೆಲೆಸುತ್ತದೆ. ಶರಣನು ತನ್ನೆಲ್ಲವನ್ನೂ ಶಿವನಿಗರ್ಪಿಸಿ, ಅಥವಾ ತನ್ನನ್ನೆ ಪ್ರಸಾದವನ್ನಾಗಿ ಮಾಡಿಕೊಂಡು, ಹೆಚ್ಚಿನ ಶಾಂತಿಯನ್ನು ಪಡೆಯುತ್ತಾನೆ ಹಾಗೂ ಆನಂದವನ್ನು ಪಡೆಯುತ್ತಾನೆ; ಹಾಗೂ ಐಕ್ಯನು ಶಿವನಲ್ಲಿ ಒಂದಾಗುವ ಮೂಲಕ ತನಗೂ ಪರಶಿವನಿಗೂ ಭಿನ್ನತೆಯಿಲ್ಲವೆಂಬ ಜ್ಞಾನವನ್ನು ಪಡೆದು ಪರಮಸುಖಿಯಾಗುತ್ತಾನೆ. (ನೋಡಿ:**ಭಕ್ತಿ, ಕಲ ಮತ್ತು ಶಕ್ತಿ**).

**ಷಟ್‌ಕೃಷಿ ವ್ಯಾಪಾರ :** ಆರು ರೀತಿಯ ಉದ್ಯೋಗಗಳು. ಅವೆಂದರೆ ಅಸಿ (ಖಡ್ಗ) - ಖಡ್ಗ ಹಿಡಿದು ಯುದ್ಧ ಮಾಡುವುದು; ಮಸಿ, ಮಸಿಯಿಂದ ಲೆಕ್ಕಪತ್ರಗಳನ್ನು ಬರೆಯುವುದು (ಗುಮಾಸ್ತೆ), ಕೃಷಿ-ವ್ಯವಸಾಯ, ಗೋಪಾಲನೆ - ದನ ಸಾಕುವುದು ಅಥವಾ ಕಾಯುವುದು, ವಾಣಿಜ್ಯ - ವ್ಯಾಪಾರ ಮಾಡುವುದು ಮತ್ತು ಯಾಚನೆ - ಭಿಕ್ಷಾಟನೆ (ಇವುಗಳಲ್ಲಿ ಯಾವೊಂದನ್ನು ಮಾಡಿದವನೂ ಜಂಗಮನಲ್ಲ).

**ಷಟ್‌ಚಕ್ರ :** ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಎಂಬ ಆರು ಚಕ್ರಗಳು. (ನೋಡಿ : **ಚಕ್ರಗಳು**)

**ಷಟ್‌ತ್ರಿಂಶತತ್ವ :** ಮೂವತ್ತಾರು ತತ್ವಗಳು. (ನೋಡಿ : **ಮೂವತ್ತಾರು ತತ್ವಗಳು**)

**ಷಟ್‌ತ್ರಿಂಶತತ್ವವ ಗರ್ಭೀಕರಿಸಿಕೊಂಡಿಪ್ಪಾತ :** ಮೂವತ್ತಾರು ತತ್ವಗಳನ್ನು ಒಳಗೊಂಡಿರುವ ಪರಶಿವ. (೫:೮೬೧)

**ಷಟ್‌ಸಂಪತ್ತಿ :** ಜ್ಞಾನಯೋಗ ಸಾಧನೆಗೆ ಅಗತ್ಯವಾದ ಆರು ಮನೋಸ್ಥಿತಿಗಳು. ಅವೆಂದರೆ, ಶಮೆ, ದಮೆ, ತಿತಿಕ್ಷೆ, ಉಪರತಿ, ಶ್ರದ್ಧೆ ಮತ್ತು ಸಮಾಧಾನ. (೩:೧೬೪೬)

**ಷಟ್ (ಅಥವಾ ಷಡು) ಸಮ್ಮಾರ್ಜನೆ :** ಆರು ಶುದ್ಧಿಕಾರಕ ವಸ್ತುಗಳು. ಅವೆಂದರೆ, ಗೋಮಯ, ಗೋಮೂತ್ರ, ಗೋರೋಜನ, ಗೋಕ್ಷೀರ, ಗೋಘೃತ ಮತ್ತು ಗೋದಧಿ.

**ಷಟ್‌ಸ್ಥಲ :** ನೋಡಿ : **ಅಂಗಸ್ಥಲ ಲಿಂಗಸ್ಥಲ ಸಂಬಂಧ, ಮಿಶ್ರಷಡುಸ್ಥಲ.**

**ಷಟ್‌ಸ್ಥಲ ಬ್ರಹ್ಮಿ (ಷಡುಸ್ಥಲ ಬ್ರಹ್ಮಯೋಗಿ) :** ಪ್ರತಿಯೊಂದು ಸ್ಥಲದಲ್ಲಿಯೂ ಉಳಿದ ಐದು ಸ್ಥಲಗಳಿವೆ. ಉದಾಹರಣೆಗೆ ಭಕ್ತನಲ್ಲಿ ಮಹೇಶ, ಭಕ್ತನಲ್ಲಿ ಪ್ರಸಾದಿ. ಭಕ್ತನಲ್ಲಿ ಪ್ರಾಣಲಿಂಗಿ, ಭಕ್ತನಲ್ಲಿ ಶರಣ, ಭಕ್ತನಲ್ಲಿ ಐಕ್ಯ, ಹಾಗೆಯೇ ಮಹೇಶನಲ್ಲಿ ಭಕ್ತ, ಮಹೇಶನಲ್ಲಿ ಪ್ರಸಾದಿ, ಇತ್ಯಾದಿ. ಅಲ್ಲದೆ, ಪ್ರತಿಯೊಂದು ಸ್ಥಲದಲ್ಲಿಯೂ ತನ್ನ ಸ್ಥಲದ ಲಿಂಗವನ್ನಲ್ಲದೆ, ಆ ಲಿಂಗದಲ್ಲಿರುವ ಉಳಿದ ಐದು ಲಿಂಗಗಳನ್ನೂ ಸಾಧಕನು

ಅರ್ಪಿಸಬೇಕು. ಉದಾಹರಣೆಗೆ, ಭಕ್ತನು ಆಚಾರಲಿಂಗವನ್ನೂ, ಭಕ್ತನಲ್ಲಿರುವ ಮಹೇಶನು ಆಚಾರಲಿಂಗದಲ್ಲಿರುವ ಗುರುಲಿಂಗವನ್ನೂ, ಭಕ್ತನಲ್ಲಿರುವ ಪ್ರಸಾದಿಯು ಆಚಾರಲಿಂಗದಲ್ಲಿರುವ ಶಿವಲಿಂಗವನ್ನೂ, ಭಕ್ತನಲ್ಲಿರುವ ಪ್ರಾಣಲಿಂಗಿಯು ಆಚಾರಲಿಂಗದಲ್ಲಿರುವ ಜಂಗಮಲಿಂಗವನ್ನೂ, ಭಕ್ತನಲ್ಲಿರುವ ಶರಣನು ಆಚಾರಲಿಂಗದಲ್ಲಿರುವ ಪ್ರಸಾದಲಿಂಗವನ್ನೂ, ಭಕ್ತನಲ್ಲಿರುವ ಐಕ್ಯನು ಆಚಾರಲಿಂಗದಲ್ಲಿರುವ ಮಹಾಲಿಂಗವನ್ನೂ ಅರ್ಚಿಸಬೇಕು. ಭಕ್ತನಿಗೆ ಪೃಥ್ವಿಯೇ ಅಂಗ, ಆ ಅಂಗಕ್ಕೆ ಸುಚಿತ್ತವೆಂಬ ಸೂಕ್ಷ್ಮ ಹಸ್ತ. ಭಕ್ತನಲ್ಲಿ ಮಹೇಶ, ಪ್ರಸಾದಿ, ಇತ್ಯಾದಿ ಇರುವಂತೆ, ಅವನ ಅಂಗವಾದ ಪೃಥ್ವಿಯಲ್ಲಿ ಮಹೇಶನ ಅಂಗವಾದ ಅಪ್ಪು, ಪ್ರಸಾದಿಯ ಅಂಗವಾದ ಅಗ್ನಿ, ಇತ್ಯಾದಿ ಅಂಗಗಳೂ, ಸುಚಿತ್ತವೆಂಬ ಹಸ್ತದಲ್ಲಿ ನಿರಹಂಕಾರ ಸುಮನ, ಮುಂತಾದ ಹಸ್ತಗಳೂ ಇವೆ. ಹೀಗೆ ವಾಸ್ತವವಾಗಿ ಲಿಂಗಗಳು ಆರಲ್ಲವೆಂದೂ, ಸ್ಥಲಗಳು ಆರಲ್ಲವೆಂದೂ, ದೇಹಗಳು ಆರಲ್ಲವೆಂದೂ, ಒಂದೇ ಲಿಂಗ, ಒಂದೇ ಸ್ಥಲ, ಒಂದೇ ದೇಹ ಎಂದೂ ತಿಳಿದು ಅದನ್ನು ಒಡಗೂಡಿದವನೇ ಷಟ್‌ಸ್ಥಲಬ್ರಹ್ಮಿ ಅಥವಾ ಬ್ರಹ್ಮಯೋಗಿ. (೧೩:೧೮೭೧)

**ಷಟ್‌ಸ್ಥಾನಲಿಂಗ ಸಂಬಂಧ :** ದೇಹದ ಆರು ಭಾಗಗಳಲ್ಲಿ ಲಿಂಗ ಧರಿಸುವುದು. ಈ ಆರು ಸ್ಥಾನಗಳೆಂದರೆ ಕಕ್ಷೆ, ಕೈ (ತೋಳು), ತಲೆ ಎದೆ, ಹೃದಯ, ಮುಖ (೮:೧೬೧೩).

**ಷಡಂಗ :** ವಚನಕಾರರು ಈ ಪದವನ್ನು ಎರಡು ವಿವಿಧ ಅರ್ಥಗಳಲ್ಲಿ ಉಪಯೋಗಿಸಿದ್ದಾರೆ.

೧. ನಿಷ್ಕಲ ಲಿಂಗದಲ್ಲಿ ಮೊದಲು ಅಂಗಸ್ಥಲ ಮತ್ತು ಲಿಂಗಸ್ಥಲ ಎಂಬ ಎರಡು ಭಾಗಗಳುಂಟಾಗಿ, ಅಂಗಸ್ಥಲದಲ್ಲಿ ಅಂಗಗಳಿರುತ್ತವೆ. ಪ್ರತಿಯೊಬ್ಬ ಮನುಷ್ಯನಲ್ಲಿಯೂ ಆರು ಲಿಂಗಗಳಿದ್ದು ಅಂಗನು ಆ ಆರು ಲಿಂಗಗಳನ್ನು ಒಂದಾದ ಮೇಲೊಂದರಂತೆ ಸಾಕ್ಷಾತ್ಕರಿಸಿಕೊಳ್ಳಬೇಕು. ಅಂದರೆ, ಅಂಗನ ಆಧ್ಯಾತ್ಮಿಕ ಜೀವನದಲ್ಲಿ ಆರು ಸ್ಥಲಗಳಿವೆ ಎಂದರ್ಥ. ಅಥವಾ ಪ್ರತಿಯೊಬ್ಬ ಸಾಧಕನೂ ಆರು ರೀತಿಯ ಅಂಗನಾಗುತ್ತಾನೆ. (ಷಡಂಗನಾಗುತ್ತಾನೆ). ಈ ಆರು ಅಂಗಸ್ಥಲಗಳೆಂದರೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ. ಷಡಂಗನು (ಆರು ಸ್ಥಲಗಳ ಸಾಧಕನು) ಯಾವಾಗಲೂ ಪರಶಿವನ ಅಂಗವೇ (ಭಾಗವೇ). ಆದರೆ ಭಕ್ತಸ್ಥಲದಲ್ಲಿ ಅದಿನ್ನೂ ಅವನಿಗೆ ಅರಿವಾಗುವುದಿಲ್ಲ. ಐಕ್ಯದಲ್ಲಿ ಈ ಸತ್ಯದ ನೇರ ಅರಿವು ಉಂಟಾಗುತ್ತದೆ.

೨. ಮತ್ತೊಂದು ಅರ್ಥದ ಪ್ರಕಾರ, ಮನುಷ್ಯನಿಗೆ ಆರು ಷಡಂಗಗಳಿವೆ. ಅವೆಂದರೆ: ೧. ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಆತ್ಮ ಎಂಬ ಆರು ಭೂತಾಂಗ. ೨. ರೂಪ, ರಸ, ಗಂಧ, ಸ್ಪರ್ಶ, ಶಬ್ದ, ಕರ್ತ ಎಂಬ ಆರು ಯೋಗಾಂಗ. ೩. ಚಿತ್ತ, ಬುದ್ಧಿ, ಮನಸ್ಸು, ಅಹಂ, ಜ್ಞಾನ, ಭಾವ ಎಂಬ ಆರು ಕಾಮಾಂಗ. ೪. ಘ್ರಾಣ, ಜಿಹ್ವೆ,

ತ್ವಕ್ಕು, ನೇತ್ರ, ಶ್ರೋತ್ರ, ಚೇತನ ಎಂಬ ಆರು ದಿವ್ಯಾಂಗ. ೫. ಪಾಯು, ಪಾಣಿ, ವಾಕ್ಕು, ಗುಹ್ಯ, ಪಾದ, ಅಂತರ, ಎಂಬ ಆರು ಕರ್ಮಾಂಗಗಳು. ೬. ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಶಿವ, ಸದಾಶಿವ ಎಂಬ ಆರು ಶಿವಾಂಗ (೧೩:೧೯೨೭, ೧೯೩೨)

**ಷಡಕ್ಷರಿ :** ಆರು ಅಕ್ಷರಗಳುಳ್ಳ ಮಂತ್ರ. ಅದೇ ಓಂ ನಮಃ ಶಿವಾಯ.

**ಷಡ್ಗುಣ ವಿರಹಿತ :** ಆಧ್ಯಾತ್ಮ ಜೀವನಕ್ಕೆ ಅಡ್ಡಿ ಮಾಡುವ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯ ಎಂಬ ಆರು ಗುಣಗಳು ಇಲ್ಲದಿರುವುದು. ನಿಜವಾದ ಭಕ್ತನಿಗೆ ಪರಸ್ತ್ರೀಯರ ಮೇಲೆ ಕಾಮವಿಲ್ಲ. ಗುರುಲಿಂಗ ಜಂಗಮದಲ್ಲಿ ಕ್ರೋಧವಿಲ್ಲ, ಹೊನ್ನು ಹೆಣ್ಣು ಮಣ್ಣುಗಳಲ್ಲಿ ಲೋಭವಿಲ್ಲ, ತನ್ನ ತನುಮನಧನದಲ್ಲಿ ಮೋಹವಿಲ್ಲ, ಸಾಧುಸಜ್ಜನರಲ್ಲಿ ಮದವಿಲ್ಲ ಮತ್ತು ಯಾಚಕರ ಮೇಲೆ ಮತ್ಸರವಿಲ್ಲ. (೧೨:೧೨೭)

**ಷಡ್ಗುಣ ಸಂಪದ :** ಕ್ಷಮೆ, ದಮೆ, ಶಾಂತಿ, ಸೈರಣೆ, ಸತ್ಯ, ನಿತ್ಯ.

**ಷಡ್‌ದರ್ಶನ :** ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಮೀಮಾಂಸಾ (ಪೂರ್ವ ಮೀಮಾಂಸಾ), ವೇದಾಂತ (ಉತ್ತರ ಮೀಮಾಂಸಾ). (ನೋಡಿ : **ನ್ಯಾಯವೈಶೇಷಿಕ, ಸಾಂಖ್ಯಯೋಗ, ಅಷ್ಟಾಂಗ ಯೋಗ, ಪೂರ್ವ ಮೀಮಾಂಸಾ, ಅದ್ವೈತ, ದ್ವೈತ**)

**ಷಡ್ಭಾವ ಬಂಧನ :** ಜಿಹ್ವಾಬಂಧನ, ನಾಸಿಕ ಬಂಧನ, ಕರ್ಣಬಂಧನ, ಕಾಮ್ಯಬಂಧನ, ಆಶಾಬಂಧನ, ಅಹಂಕಾರಬಂಧನ, ಎಂಬ ಆರು ರೀತಿಯ ಬಂಧನಗಳು. ಶಿವನಿಂದೆ ಶಿವಭಕ್ತನಿಂದೆ, ಲಿಂಗಸಂಬಂಧಿಯಾದ ಶಬ್ದವನ್ನುಳಿದು ಬೇರೆ ಶಬ್ದಗಳನ್ನು ಕೇಳುವುದಿಲ್ಲವೆಂದು ಕಿವಿಮುಚ್ಚಿಕೊಳ್ಳುವುದು ಕರ್ಣಬಂಧನ. ಅದೇ ರೀತಿ ಕೆಲವರು ಪ್ರಸಾದವಲ್ಲದ ಆಹಾರ, ದುರ್ಗಂಧ, ಕಾಮ್ಯವಸ್ತುಗಳ ನೋಟಗಳ ವಿರುದ್ಧವಾಗಿ ಜಿಹ್ವಾಬಂಧನ, ನಾಸಿಕ ಬಂಧನ ಮತ್ತು ಕಾಮ್ಯಬಂಧನ ಮಾಡಿಕೊಳ್ಳುತ್ತಾರೆ. ಹಾಗೆಯೇ, ಕೆಟ್ಟದನ್ನು ಆಶಿಸುವುದಿಲ್ಲವೆಂದು ಆಶಾಬಂಧನವನ್ನೂ, ನಾನೆಂಬ ಪ್ರತ್ಯೇಕ ಭಾವನೆ ನನಗಿಲ್ಲವೆಂದು ಅಹಂಕಾರ ಬಂಧನವನ್ನೂ ಕೆಲವರು ಮಾಡಿಕೊಳ್ಳುತ್ತಾರೆ. ಆದರೆ ಈ ರೀತಿಯ ಔಪಚಾರಿಕ ವ್ರತಗಳನ್ನು ಬಿಟ್ಟು ಎಲ್ಲವನ್ನೂ ಶಿವನಿಗೆ ಅರ್ಪಿಸುವವನೇ ನಿಜವಾದ ಶರಣ. (೫:೩೬೨)

**ಷಡ್ಭಾವ ವಿಕಾರಗಳು :** ೧. ಅಸ್ತಿತೆ : ಮಗುವು ತಾಯಿಯ ಗರ್ಭದಲ್ಲಿರುವಾಗ, ಅದಕ್ಕೆ ಬೇಕಿರಲಿ, ಬೇಡದಿರಲಿ ತಾಯಿಯು ತಿಂದ ಆಹಾರವನ್ನು ತಾನೂ ತಿನ್ನಬೇಕಾಗುತ್ತದೆ, ಅದರಿಂದ ಬೇನೆ ಕೆಲವು ಸಲ ಉಂಟಾಗಬಹುದು. ಅದೇ ರೀತಿ ಅದರ ಅಕ್ಕಪಕ್ಕದಲ್ಲಿ ಅನೇಕ ರೀತಿಯ ಅಸಹ್ಯ ಪದಾರ್ಥಗಳಿರುತ್ತವೆ. ಇದೂ ಒಂದು ರೀತಿಯ ಅನಿಷ್ಟ. ಅಸ್ತಿತ್ವವನ್ನು ಈ ಅನಿಷ್ಟಗಳು ಹಿಂಬಾಲಿಸುತ್ತವೆಯಾದ್ದರಿಂದ, ಇದಕ್ಕೆ ಅಸ್ತಿತೆ ವಿಕಾರಗಳೆನ್ನುತ್ತಾರೆ.

೨. ಜಾಯತೆ : ಹುಟ್ಟಿದಾಗ ಪಡುವ ಯಾತನೆಗೆ ಜಾಯತೆ ಎಂದು ಹೆಸರು.

೩. ಪರಿಣಮತೆ; ಶಿಶುವಿನಲ್ಲಿ ಅಜ್ಞಾನವೇ ಹೆಚ್ಚಾಗಿರುವಾಗ, ತನಗೇನು ಬಾಧೆಯಾಗುತ್ತಿದೆಯೆಂದು ತಿಳಿಸಲು ಅದಕ್ಕೆ ಸಾಧ್ಯವಾಗುವುದಿಲ್ಲ. ಮಗು ಪಡುತ್ತಿರುವ ಬಾಧೆಯೊಂದಾಗಿದ್ದರೆ, ತಾಯಿ, ಉಪಚರಿಸುವ ರೀತಿ ಬೇರೊಂದಾಗಿರುತ್ತದೆ. (೧೪೪)

೪. ವಿವರ್ಧತೆ : ತಾರುಣ್ಯದಲ್ಲಿ ಯಾವ ಕಡೆ ಬೆಳೆಯಬೇಕು ಎಂಬ ತಾಕಲಾಟವಿರುತ್ತದೆ. ಲೌಕಿಕತೆಯಲ್ಲಿ ಬೆಳೆಯಬೇಕೋ, ಪಾರಮಾರ್ಥಿಕತೆಯಲ್ಲಿ ಬೆಳೆಯಬೇಕೋ ಎಂಬುದೆ ಆ ತಾಕಲಾಟ.

೫. ಅಪಕ್ಷೀಯತೆ : ಮನುಷ್ಯನ ಕ್ರಿಯಾಶಕ್ತಿ ಕುಂಠಿತವಾಗಿ, ಅವನು ಪರಾವಲಂಬಿಯಾಗುತ್ತಾನೆ.

೬. ವಿನಶ್ಯತೆ : ಸಾವಿನ ದವಡೆಯಲ್ಲಿ ಸಂಕಟ ಪಡುವುದೇ ವಿನಶ್ಯತೆ.

**ಷಡ್‌ವಿಕಾರಗಳನ್ನು ಕೆಡಿಸುವುದು :** ಷಡ್ಭಾವವಿಕಾರಗಳೂ ಸಹ ಆಧ್ಯಾತ್ಮಿಕ ಜೀವನದ ವೈರಿಗಳೇ. ಅವುಗಳು ನಶಿಸದ ಹೊರತು ಮುಕ್ತಿ ಸಾಧ್ಯವಿಲ್ಲ. ವಚನಕಾರರು ಅವುಗಳನ್ನು ಕೆಡಿಸುವ ಉಪಾಯವನ್ನು ಹೀಗೆ ತಿಳಿಸಿದ್ದಾರೆ : ನಾನು ಸ್ವತಂತ್ರ ಅಸ್ತಿತ್ವವನ್ನು ಪಡೆದಿದ್ದೇನೆ ಎಂದು ತಿಳಿಯದೆ ನಾನು ಗುರುವಿನ ಕೃಪಾಗರ್ಭದಲ್ಲಿದ್ದೇನೆಂದು ತಿಳಿದರೆ, ಅಸ್ತಿ ಎಂಬ ವಿಕಾರ ಕೆಡುತ್ತದೆ. ನಾನು ಮಾಯೆಯ ಪರಿಣಾದಿಂದ ಹುಟ್ಟಿದ್ದೇನೆ ಎಂದು ಭಾವಿಸದೆ, ನಾನು ಗುರುಕರಸಂಜಾತ ಎಂದು ಭಾವಿಸಿದರೆ, ಜಾಯತೆ ಎಂಬ ವಿಕಾರ ಕೆಡುತ್ತದೆ. ಗುರುವು ಅನುಗ್ರಹಿಸಿದ ಸದ್ಭಾವಜಾತ ಲಿಂಗವನ್ನು ಅಂಗದಲ್ಲಿ ಧರಿಸುವ ಮೂಲಕ ತೃಪ್ತಿಯನ್ನು ಸಂಪಾದಿಸಿ, ಅದರಿಂದ ವಿಪರಿಣಮತೇ ಎಂಬ ವಿಕಾರವನ್ನು ಕೆಡಿಸಬಹುದು. ಗುರುವು ತೋರಿಸಿಕೊಟ್ಟ ಆಚಾರ ಮತ್ತು ಜ್ಞಾನಮಾರ್ಗದಲ್ಲಿ ನಡೆದು ಆಧ್ಯಾತ್ಮದಲ್ಲಿ ಬೆಳೆಯುವ ಮೂಲಕ ವಿವರ್ಧತೆ ಎಂಬ ವಿಕಾರವನ್ನು ಸುಡಬಹುದು. ದೇಹೇಂದ್ರಿಯಾದಿಗಳೆಲ್ಲ ನನ್ನವಲ್ಲ, ಪರಶಿವನವು ಎಂದು ಎಲ್ಲವನ್ನೂ ಪರಶಿವನಿಗೆ ಅರ್ಪಿಸುವ ಮೂಲಕ ಅಪಕ್ಷೀಯತೆ ಎಂಬ ವಿಕಾರವನ್ನು ಕೆಡಿಸಬಹುದು. ಮಣ್ಣಿನಲ್ಲಿ ಲೀಯವಾಗುವ ಬದಲು ಲಿಂಗಾಂಗ ಐಕ್ಯದ ಮೂಲಕ ಲಿಂಗದಲ್ಲಿ ಲೀಯವಾದರೆ, ವಿನಶ್ಯತಿ ಎಂಬ ವಿಕಾರವನ್ನು ಕೆಡಿಸಬಹುದು. (ನೋಡಿ : **ಷಡ್ಭಾವ ವಿಕಾರ**) (೧೧:೯೧೧)

**ಷಡ್‌ಭ್ರಮೆ :** ಜಾತಿ, ವರ್ಣ, ಆಶ್ರಮ. ಕುಲ, ಗೋತ್ರ, ನಾಮ ಎಂಬ ಆರು ಭ್ರಮೆಗಳು. ಇವು ಭ್ರಮೆಗಳೇಕೆಂದರೆ ಇವುಗಳ ಮೂಲಕ ಮೋಕ್ಷವನ್ನು ಸಾಧಿಸಬಹುದು ಎಂದು ಸಾಧಕನು ತಪ್ಪು ತಿಳಿದುಕೊಂಡಿರುತ್ತಾನೆ. ಆದರೆ ಜಾತಿ ಅಥವಾ ಕುಲ ಅಥವಾ ಗೋತ್ರವು ಮೋಕ್ಷಕ್ಕೆ ಸಹಾಯಕವಲ್ಲ ಎಂಬುದು ವಚನಕಾರರ ಅಭಿಮತ.

**ಷಡ್ರಸ :** ಸಿಹಿ, ಹುಳಿ, ಉಪ್ಪು, ಒಗರು, ಕಹಿ ಮತ್ತು ಕಾರ.

**ಷಡ್ರಸಾಮೃತ :** ಲಿಂಗಾಂಗ ಸಾಮರಸ್ಯವನ್ನು ಪಡೆಯಬೇಕೆಂಬ ಸಾಧಕರು ಈ ಆರು ವಿಧದ ರಸಾಮೃತವನ್ನು ಸೇವಿಸಬೇಕಾಗುತ್ತದೆ. ಇವೆಂದರೆ, ದರ್ಶನಾಮೃತ, ಸ್ಪರ್ಶನಾಮೃತ, ಸಂಭಾಷಣಾಮೃತ, ಪಾದೋದಕಾಮೃತ, ಪ್ರಸಾದಾಮೃತ ಮತ್ತು ಅನುಭಾವಾಮೃತ. ಇಲ್ಲಿ ಅಮೃತ ಎಂಬ ಪದವು ಆಲಂಕಾರಿವಾಗಿ ಬಳಕೆಯಾಗಿದ್ದು, ಅತಿ ಹೆಚ್ಚಿನ ಮೌಲ್ಯವುಳ್ಳದ್ದು, ಅತ್ಯಂತ ಆವಶ್ಯಕವಾದುದು ಎಂಬರ್ಥ ಕೊಡುತ್ತದೆ.

ತಂತಮ್ಮ ಆದರ್ಶ ವ್ಯಕ್ತಿಗಳನ್ನು ನೋಡಬೇಕೆಂಬ ಇಚ್ಛೆ ಎಲ್ಲರಿಗೂ ಇರುತ್ತದೆ. ಅದರಂತೆ ಪ್ರಾಥಮಿಕ ಅವಸ್ಥೆಯಲ್ಲಿರುವ ಸಾಧಕರು ಅನುಭಾವಿಗಳನ್ನು ದರ್ಶನ ಮಾಡಬೇಕೆಂಬ ಆಸೆ ಇಟ್ಟುಕೊಂಡಿದ್ದು, ಅವರನ್ನು ದರ್ಶನ ಮಾಡಿದಾಗ ಅವರಿಗೆ ದರ್ಶನಾಮೃತ ಎಂಬ ರಸವನ್ನು ಕುಡಿದು ತೃಪ್ತಿಯಾಗುತ್ತದೆ. ಅದೇ ರೀತಿ, ಅವರ ಕೈಕುಲುಕುವುದರಿಂದ ಅಥವಾ ಪಾದ ಸ್ಪರ್ಶನ ಮಾಡಿದರೆ ತಾವು ಪಾವನರಾಗುತ್ತೇರೆಂದು ತಿಳಿದವರು ಅವರನ್ನು ಮುಟ್ಟುವ ಮೂಲಕ ಸ್ಪರ್ಶನಾಮೃತ ರಸಸೇವನೆ ಮಾಡಿ ತೃಪ್ತರಾಗುತ್ತಾರೆ. ಇನ್ನೂ ಕೆಲವರು ಅವರನ್ನು ಮಾತನಾಡಿಸಿ, ಅವರಿಂದ ಕೆಲವು ಅಮೂಲ್ಯ ಸಲಹೆಗಳನ್ನು ಪಡೆದು ಸಂಭಾಷಣ ರಸಾಮೃತ ಸೇವನೆ ಮಾಡುತ್ತಾರೆ. ಇನ್ನು ಕೆಲವು ಆಸ್ತಿಕರು ಅವರಿಂದ ಪಾದೋದಕ ಪಡೆದು ಅದನ್ನು ಸೇವಿಸಿ ತೃಪ್ತಿಪಡೆಯುತ್ತಾರೆ. ಮತ್ತೆ ಕೆಲವರು ಅವರು ಕೊಟ್ಟ ಪ್ರಸಾದಾಮೃತ ಸೇವನೆ ಮಾಡಿ ತಾವು ಧನ್ಯರಾದೆವೆಂದುಕೊಳ್ಳುತ್ತಾರೆ. ಆದರೆ ಇವೆಲ್ಲ ಕಡಿಮೆ ಮೌಲ್ಯದ ಆವಶ್ಯಕತೆಗಳಾಗಿದ್ದು ತಾತ್ಕಾಲಿಕ ತೃಪ್ತಿಯನ್ನು ಕೊಟ್ಟರೆ, ಆ ಆದರ್ಶ ಪುರುಷರಿಂದ ಅನುಭಾವ ಪಡೆಯುವ ಮಾರ್ಗವನ್ನು ಕಲಿತುಕೊಂಡರೆ, ಅವರು ಇವೆಲ್ಲಕ್ಕಿಂತ ಹೆಚ್ಚಿನ ಮೌಲ್ಯದ (ಅನುಭಾವವೆಂಬ) ರಸಾಮೃತವನ್ನುಂಡು ತೃಪ್ತಿಪಡುತ್ತಾರೆ. ಮೊದಲಿನ ಐದು ಕಡಿಮೆ ಮೌಲ್ಯದವರಾದರೂ ಅವು ಆವಶ್ಯಕವೇಕೆಂದರೆ, ಅವು ಸಾಧಕನ ಭಕ್ತಿಗೆ, ಶ್ರದ್ಧೆಯನ್ನೂ ನಿಷ್ಠೆಯನ್ನೂ ತಂದುಕೊಡುತ್ತವೆ. ಈ ಕಾರಣದಿಂದಲೇ ಭಕ್ತರು ಶಿವಶರಣರೊಡನಾಟ ಗಳಿಸಿಕೊಳ್ಳಬೇಕೇ ಹೊರತು, ಭವಿಗಳ ಸಂಗವನ್ನಲ್ಲ ಎಂದು ಶರಣರು ಹೇಳುವುದು. (೧೪:೨೪೨೪)

**ಷಡ್ವರ್ಗಸಂಪನ್ನ :** ನಿಜವಾದ ಭಕ್ತನಿಗೆ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ತು ಮಾತ್ಸರ್ಯಗಳಿಲ್ಲವೆಂದಲ್ಲ. ಆದರೆ ಅವನು ಗುರುಲಿಂಗಜಂಗಮದ ಬರವಿಗೆ ಕಾಮಿಸುತ್ತಾನೆ, ಮಲಬದ್ಧ ಮಾನವರ ಬಗೆಗೆ ಅವನಿಗೆ ಕ್ರೋಧ; ಪಾದೋದಕ ಪ್ರಸಾದಗಳ ಬಗೆಗೆ ಅವನಿಗೆ ಲೋಭ; ಶಿವಾನುಭವಿಗಳ ಜೊತೆ ಮಾತನಾಡುವ ಮೋಹ. ಶಿವದೂಷಕ ಜನರ ಬಗೆಗೆ ಅವನಿಗೆ ಮದ ಹಾಗೂ ಶರಣರು ಸಂಸಾರ ಬಂಧನಕ್ಕೆ ಯೋಗ್ಯವಾಗುವಂತಹ ಕೆಲಸ ಮಾಡಿದರೆ, ಅವನ ಬಗೆಗೆ ಅವನಿಗೆ ಮತ್ಸರ. ಇಂಥ ಭಕ್ತನು ಷಡ್ವರ್ಗ ಸಂಪನ್ನ. (೧೨:೧೨೮)

**ಷಡ್ವಿಧ ಆಚಾರಲಿಂಗ :** ಮಿಶ್ರಷಡುಸ್ಥಲ ಸಿದ್ಧಾಂತದ ಪ್ರಕಾರ, ಪ್ರತಿಯೊಂದು ಅಂಗಸ್ಥಲದಲ್ಲಿಯೂ ಉಳಿದ ಅಂಗಸ್ಥಲಗಳು ಅಡಕವಾಗಿವೆ. ಉದಾಹರಣೆಗೆ : ಭಕ್ತನ ಭಕ್ತ, ಭಕ್ತನ ಮಹೇಶ, ಭಕ್ತನ ಪ್ರಸಾದಿ, ಭಕ್ತನ ಪ್ರಾಣಲಿಂಗಿ, ಭಕ್ತನ ಶರಣ ಮತ್ತು ಭಕ್ತನ ಐಕ್ಯ. ಹಾಗೆಯೇ ಪ್ರತಿಯೊಂದು ಅಂಗಸ್ಥಲದಲ್ಲಿಯೂ ಉಳಿದ ಅಂಗಸ್ಥಲಗಳು ಅಡಕವಾಗಿವೆ. ಆಚಾರದಲ್ಲಿ ಆಚಾರಲಿಂಗ, ಆಚಾರದಲ್ಲಿ ಗುರುಲಿಂಗ, ಆಚಾರದಲ್ಲಿ ಶಿವಲಿಂಗ, ಆಚಾರದಲ್ಲಿ ಜಂಗಮಲಿಂಗ, ಆಚಾರದಲ್ಲಿ ಪ್ರಸಾದಲಿಂಗ, ಆಚಾರದಲ್ಲಿ ಮಹಾಲಿಂಗ. ಹೀಗಾದರೆ ಭಕ್ತನು ಆಚಾರಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುವುದೆಂದರೆ, ಆರು ಲಿಂಗಗಳನ್ನೂ ಸಾಕ್ಷಾತ್ಕರಿಸಿಕೊಳ್ಳುವುದೆಂದರ್ಥ. ಹಾಗೆ ಸಾಕ್ಷಾತ್ಕರಿಸಿಕೊಳ್ಳಲು ಅವನು ಭಕ್ತಸ್ಥಲದಲ್ಲಿ ನಡೆದುಕೊಂಡಂತೆ ನಡೆದುಕೊಂಡರೆ ಸಾಲದು, ಅದರ ಜೊತೆಗೆ ಉಳಿದ ಐದೂ ಸ್ಥಲಗಳ ಸಾಧಕನಂತೆ ಆಚರಿಸಬೇಕಾಗುತ್ತದೆ. ಅದು ಹೇಗೆಂಬುದನ್ನು ಷಡ್ವಿಧ ಆಚಾರಲಿಂಗ ಪರಿಕಲ್ಪನೆಯು ತಿಳಿಸುತ್ತದೆ. ಆಚಾರಲಿಂಗದ ಆಚಾರಲಿಂಗವನ್ನು ತೃಪ್ತಿಪಡಿಸಲು ಅವನು ಪಂಚಾಚಾರ ನಿರತನಾಗಬೇಕು. (ನೋಡಿ : **ಪಂಚಾಚಾರ**), ಆಚಾರಲಿಂಗದಲ್ಲಿನ ಗುರುಲಿಂಗವನ್ನು ಒಲಿಸಿಕೊಳ್ಳಲು ಸದಾ ಪಂಚಾಕ್ಷರಿ ಮಂತ್ರವನ್ನು ಉಚ್ಚರಿಸುತ್ತಿರಬೇಕು, ಆಚಾರಲಿಂಗದಲ್ಲಿರುವ ಶಿವಲಿಂಗವನ್ನು ಒಲಿಸಿಕೊಳ್ಳಲು, ಪೂಜಾ ಸಮಯದಲ್ಲಿ ತದೇಕ ದೃಷ್ಟಿಯಿಂದ ಇಷ್ಟಲಿಂಗವನ್ನು ನಿರೀಕ್ಷಿಸಬೇಕು. ಆಚಾರದಲ್ಲಿರುವ ಜಂಗಮಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳಲು, ಅವನು ಯಜ್ಞ(ದಾಸೋಹ) ಮಾಡಬೇಕು. ಅಷ್ಟವಿಧಾರ್ಚನೆ ಮತ್ತು ಷೋಡಶೋಪಚಾರಗಳನ್ನೂ ಮಾಡಬೇಕು. (ನೋಡಿ:**ದಾಸೋಹ, ಅಷ್ಟವಿಧಾರ್ಚನೆ, ಷೋಡಶೋಪಚಾರ**), ಆಚಾರಲಿಂಗದಲ್ಲಿನ ಪ್ರಸಾದಲಿಂಗವನ್ನು ತೃಪ್ತಿಪಡಿಸಲು ಪರಶಿವನನ್ನು ಕುರಿತು ಯಾವಾಗಲೂ ಸ್ತೋತ್ರ ಮಾಡಬೇಕು; ಆಚಾರಲಿಂಗದೊಳಗಿನ ಮಹಾಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳಲು, ಮಹಾಲಿಂಗವನ್ನು ವೇಧಿಸಿ, ತಾನು ಅದರಲ್ಲಿ ಐಕ್ಯವಾಗಬೇಕು. ಹೀಗೆ ಷಡ್ವಿಧ ಆಚಾರಲಿಂಗವು ಕ್ರಿಯೆ, ಮಂತ್ರ, ನಿರೀಕ್ಷಣೆ, ಯಜನ, ಈಶನ, (ಸ್ತೋತ್ರ) ಮತ್ತು ವೇಧಾ ಎಂಬ ಆರು ಕ್ರಿಯೆಗಳನ್ನು ಒಳಗೊಂಡಿದೆ.

**ಷಡ್ವಿಧ ಉದಕ :** ೧. ಸ್ಪರ್ಶನೋದಕ : ಹಸ್ತದಿಂದ ಸ್ಪರ್ಶಿಸಿದರೆ ಸ್ಪರ್ಶನೋದಕ.

೨. ಅವಧಾರೋದಕ : ಕೆಳಗೆ ಧಾರೆಯಂತೆ (ಅವಧಾರೆ) ಬಿದ್ದ ಉದಕವನ್ನು ಲಿಂಗಕ್ಕೆ ಎರೆದರೆ, ಅವಧಾರೋದಕ.

೩. ಆಪ್ಯಾಯನೋದಕ : ಅದನ್ನು ಲಿಂಗಕ್ಕೆ ಅರ್ಪಿಸಿದ ಆನಂದವೇ ಅಥವಾ ತೃಪ್ತಿಯೇ (ಆಪ್ಯಾಯನ). ಆ ಉದಕವನ್ನು ಆಪ್ಯಾಯನೋದಕವೆನ್ನುತ್ತಾರೆ.

೪. ಹಸ್ತೋದಕ : ಹಾಗೆ ಮಾಡಿ ಕೈ ತೊಳೆದುಕೊಂಡರೆ ಅದನ್ನು ತೊಳೆದ ಉದಕವು ಹಸ್ತೋದಕ.

೫. ಪರಿಣಾಮೋದಕ : ಲಿಂಗಕ್ಕೆ ತೃಪ್ತಿಯಾಯಿತೆಂಬ ಭಕ್ತನ ಮಾನಸಿಕ ಪರಿಣಾಮವೇ ಪರಿಣಾಮೋದಕ.

೬. ಸತ್ಯೋದಕ : ತಟ್ಟೆ ಬಟ್ಟಲಲ್ಲಿ ಪಾದೋಕವನ್ನು ತುಂಬಿಕೊಂಡು ಅನಂತರ ಸರ್ವಾಂಗದಲ್ಲಿ ಲೇಪಿಸಿಕೊಂಡಾಗ, ಅದು ಸತ್ಯೋದಕವೆನಿಸಿಕೊಳ್ಳುತ್ತದೆ. (೪:೫೧)

**ಷಡ್ವಿಧ ದಾಸೋಹ** : ದಾಸ, ವೀರದಾಸೋಹ, ಭೃತ್ಯ, ವೀರಭೃತ್ಯ, ಸಜ್ಜನ ಸಮಯಾಚಾರ, ಸಕಲಾವಸ್ಥೀಯಾರ್ಚನೆ.

**ಷಡ್ವಿಧ ದ್ರೋಹ** : ಆಚಾರ ದ್ರೋಹ, ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹ, ಪಾದೋದಕ ದ್ರೋಹ, ಪ್ರಸಾದ ದ್ರೋಹ. ಗುರು ಹೇಳಿದಂತೆ ನಡೆಯದಿರುವುದೇ ಆಚಾರ ದ್ರೋಹ; ಗುರುವಿಗೆ ಭಕ್ತಿ ತೋರಿಸದಿರುವುದು ಗುರುದ್ರೋಹ; ಅನ್ಯದೈವ ಪೂಜನೆ ಲಿಂಗದ್ರೋಹ; ಜಂಗಮನಿಗೆ ದಾನ ಮಾಡದಿರುವುದು ಜಂಗಮದ್ರೋಹ; ಪಾದೋದಕವನ್ನು ಸಂದೇಹಿಸುವುದು ಪಾದೋದಕ ದ್ರೋಹ; ಪ್ರಸಾದದಲ್ಲಿ ರುಚಿಯನರಸುವುದು ಪ್ರಸಾದ ದ್ರೋಹ.

**ಷಡ್ವಿಧ ಭಕ್ತ** : ಭಕ್ತನು ಯಾವ ಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೋ ಅದರ ಅಂಗವಾಗುತ್ತಾನೆ. ಹೀಗೆ ಅವನು ಆಚಾರಾಂಗ (ಆಚಾರಲಿಂಗದ ಅಂಗ), ಗುರಾಂಗ (ಗುರುಲಿಂಗ ಅಂಗ), ಶಿವಾಂಗ (ಶಿವಲಿಂಗದ ಅಂಗ), ಚರಾಂಗ (ಜಂಗಮಲಿಂಗದ ಅಂಗ), ಪ್ರಸಾದಾಂಗ (ಪ್ರಸಾದ ಲಿಂಗದ ಅಂಗ) ಮತ್ತು ಮಹದಂಗ (ಮಹಾಲಿಂಗದ ಅಂಗ)ನಾಗುತ್ತಾನೆ.

**ಷಡ್ವಿಧ ಭಕ್ತಿ** : ಶ್ರದ್ಧಾ (ವಿಶ್ವಾಸ ಅಥವಾ ಸದ್) ಭಕ್ತಿ, ನಿಷ್ಠಾ ಭಕ್ತಿ, ಅವಧಾನ ಭಕ್ತಿ, ಅನುಭಾವ ಭಕ್ತಿ, ಆನಂದ ಭಕ್ತಿ, ಮತ್ತು ಸಮರಸ ಭಕ್ತಿ. (ನೋಡಿ:ಭಕ್ತಿ)

**ಷಡ್ವಿಧ ಭವಿ** : ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಇವುಗಳನ್ನು ಜಯಿಸದವನೇ ಷಡ್ವಿಧ ಭವಿ.

**ಷಡ್ವಿಧ ಲಿಂಗ** : ಆಚಾರ ಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ.

**ಷಡ್ವಿಧಲಿಂಗ ತೃಪ್ತಿ** : ಸಾಧಕನು ಷಡ್ವಿಧ ಲಿಂಗಗಳಿಗೆ ಷಡ್ವಿಧ ವಿಷಯುಗಳನ್ನು ಅರ್ಪಿಸಿ, ಆ ಲಿಂಗಗಳನ್ನು ತೃಪ್ತಿ ಪಡಿಸುತ್ತಾನೆ. ಭಕ್ತನು ಗಂಧವನ್ನರ್ಪಿಸಿ ಆಚಾರಲಿಂಗವನ್ನೂ, ಮಹೇಶನು ರಸವನ್ನು ಅರ್ಪಿಸಿ ಗುರುಲಿಂಗವನ್ನೂ, ಪ್ರಸಾದಿಯು ರೂಪವನ್ನರ್ಪಿಸಿ ಶಿವಲಿಂಗವನ್ನೂ, ಪ್ರಾಣಲಿಂಗಿಯು ಸ್ಪರ್ಶನವನ್ನು ಅರ್ಪಿಸಿ ಜಂಗಮಲಿಂಗವನ್ನೂ, ಶರಣನು ಶಬ್ದವನ್ನರ್ಪಿಸಿ ಪ್ರಸಾದಲಿಂಗವನ್ನೂ, ಐಕ್ಯನು ಪಂಚೇಂದ್ರಿಯಗಳನ್ನು ಅರ್ಪಿಸಿ ಮಹಾಲಿಂಗವನ್ನೂ ತೃಪ್ತಿಪಡಿಸುತ್ತಾನೆ.

**ಷಡ್ವಿಧ ಲಿಂಗಧಾರಣೆ :** ನಮ್ಮ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳು ಶಕ್ತಿಯ ವಿವಿಧ ರೂಪಾಂತರಗಳು. ಪ್ರತಿಯೊಂದು ಇಂದ್ರಿಯದಲ್ಲಿಯೂ ಒಂದೊಂದು ಲಿಂಗವಿದ್ದು, ಆ ಲಿಂಗಗಳೂ ಸಹ ಪರಶಿವನ ವಿವಿಧ ಅವತರಣಿಕೆಗಳಾಗಿವೆ. ಶಕ್ತಿಯ ವಿವಿಧ ರೂಪಾಂತರಗಳಲ್ಲಿರುವ ಲಿಂಗದ ವಿವಿಧ ಅವತರಣಿಕೆಗಳನ್ನು ಸಾಧಕನು ವಿವಿಧ ಹಂತಗಳಲ್ಲಿ ಒಲಿಸಿಕೊಳ್ಳುತ್ತಾನೆ. ಇದನ್ನೆ ವಚನಕಾರರು ಷಡ್ವಿಧ ಲಿಂಗಧಾರಣೆ ಎಂದು ಕರೆದಿದ್ದಾರೆ. ಯಾವ ಹಂತದಲ್ಲಿ ಯಾವ ಲಿಂಗವನ್ನು ಒಲಿಸಿಕೊಳ್ಳಬೇಕೆಂಬುದಕ್ಕೆ ವಿವರ:

೧. ಪೃಥ್ವಿತತ್ವವು ಘ್ರಾಣೇಂದ್ರಿಯ ಮತ್ತು ಗುದಗಳಾಗಿ ವಿಕಸಿತಗೊಂಡಿದೆ. ಅಲ್ಲಿ ನಿವೃತ್ತಿಕಲೆಯೆಂಬ ಭಕ್ತಿ ಇದೆ. ಆ ಕಲೆಯಲ್ಲಿ ಕ್ರಿಯಾಶಕ್ತಿಯುತವಾದ ಆಚಾರಲಿಂಗವಿದ್ದು, ಸಾಧಕನು ಅದನ್ನು ಭಕ್ತಸ್ಥಲದಲ್ಲಿ ಧರಿಸಿ, ಭಕ್ತನೆನಿಸಿಕೊಳ್ಳುತ್ತಾನೆ.

೨. ಜಿಹ್ವೆ ಮತ್ತು ಗುಹ್ಯ ಅಪ್ ತತ್ವದ ವಿಕಸಿತ ರೂಪಗಳು. ಅಲ್ಲಿ ಪ್ರತಿಷ್ಠಾ ಕಲೆಯೆಂಬ ಭಕ್ತಿ ಇದೆ, ಅದರಲ್ಲಿ ಜ್ಞಾನ ಶಕ್ತಿಯುತವಾದ ಗುರುಲಿಂಗ ಇದ್ದು, ಅದನ್ನು ಧರಿಸಿದ ಸಾಧಕನು ಮಹೇಶನೆನಿಸಿಕೊಳ್ಳುತ್ತಾನೆ.

೩. ನೇತ್ರ ಮತ್ತು ಪಾದಗಳು ಅಗ್ನಿತತ್ವದ ರೂಪಾಂತರ. ಅವುಗಳಲ್ಲಿ ವಿದ್ಯಾಕಲೆಯೆಂಬ ಭಕ್ತಿಇದೆ, ಅದರಲ್ಲಿ ಇಚ್ಛಾಶಕ್ತಿಯುತವಾದ ಶಿವಲಿಂಗ ಇದ್ದು, ಅದನ್ನು ಧರಿಸಿದವನು ಪ್ರಸಾದಿಯೆನಿಸಿಕೊಳ್ಳುತ್ತಾನೆ.

೪. ತ್ವಕ್ಕು ಮತ್ತು ಪಾಣಿಗಳು ವಾಯು ತತ್ವದ ರೂಪಾಂತರ. ಅವುಗಳಲ್ಲಿ ಶಾಂತಿಕಲಾ ಎಂಬ ಭಕ್ತಿಯಿದೆ. ಅದರಲ್ಲಿ ಆದಿಶಕ್ತಿಯುತವಾದ ಜಂಗಮಲಿಂಗವಿದ್ದು ಅದನ್ನು ಧರಿಸಿದವನು ಪ್ರಾಣಲಿಂಗಿ ಎನಿಸಿಕೊಳ್ಳುತ್ತಾನೆ.

೫. ಶ್ರೋತ್ರ ಮತ್ತು ವಾಗಿಂದ್ರಿಯಗಳು ಪರಾಶಕ್ತಿಯ ಬೇರೆ ರೂಪಗಳು. ಅವುಗಳಲ್ಲಿ ಶಾಂತ್ಯತೀತ ಕಲೆಯೆಂಬ ಭಕ್ತಿಯಿದ್ದು, ಅದರಲ್ಲಿ ಪರಾಶಕ್ತಿಯುತವಾದ ಪ್ರಸಾದಲಿಂಗವಿದ್ದು, ಅದನ್ನು ಧರಿಸಿಕೊಂಡಾತ ಶರಣನೆನಿಸಿಕೊಳ್ಳುತ್ತಾನೆ.

೬. ಆತ್ಮ ಎಂಬ ಅಂಗಕ್ಕೆ ಮನಸ್ಸೆಂಬ ಚಿಚ್ಛಕ್ತಿ ರೂಪದ ಶಕ್ತಿಯಿದ್ದು, ಅದರೊಳಗೆ ಶಾಂತ್ಯತೀತೋತ್ತರ ಕಲೆ ಎಂಬ ಭಕ್ತಿ ಇದೆ, ಅದರಲ್ಲಿರುವ ಚಿಚ್ಛಕ್ತಿಯುತವಾದ ಮಹಾಲಿಂಗವನ್ನು ಧರಿಸಿದವನು ಐಕ್ಯ.

ಮೇಲೆ ಹೇಳಿದ ಆರು ಲಿಂಗಗಳು ಮನುಷ್ಯನ ಕರಣೇಂದ್ರಿಯಗಳಲ್ಲಿ ಆಗಲೇ ಇವೆ. ಅವನ್ನು ಹೊಸದಾಗಿ ಅವನು ಇಷ್ಟಲಿಂಗದಂತೆ ಧರಿಸಬೇಕಾಗಿಲ್ಲ. ಅವನಲ್ಲಿವಿರುವ ಶಕ್ತಿಗಳೇ ಆ ಲಿಂಗಗಳನ್ನು ಮುಚ್ಚಿವೆ. ಸಾಧಕನು ಕಲೆಗಳೆಂಬ ಭಕ್ತಿಗಳ ಸಹಾಯದಿಂದ, ಆ ಶಕ್ತಿಗಳನ್ನು ಪಾರದರ್ಶಕ ಮಾಡಿ, ಅವುಗಳಲ್ಲಿರುವ ಲಿಂಗವನ್ನು ನೋಡಿದರೆ, ಲಿಂಗಧಾರಣೆ ಮಾಡಿದಂತೆ. ಶಕ್ತಿಗಳನ್ನು ಪಾರದರ್ಶಕ ಮಾಡುವುದೆಂದರೆ, ಅವುಗಳ ದುರ್ಗುಣಗಳನ್ನು ತೆಗೆದು, ಅವುಗಳ ದುರ್ವರ್ತನೆಯನ್ನು ತಡೆದು, ಅವುಗಳನ್ನು ಆಧ್ಯಾತ್ಮಿಕ ಉದ್ದೇಶಕ್ಕಾಗಿ ಬಳಸಿಕೊಳ್ಳುವುದು (೧೧:೮೫೬).

**ಷಡ್ವಿಧ ಲಿಂಗ ಪ್ರಸಾದ :** ಆಧ್ಯಾತ್ಮಿಕ ಸಾಧನೆಯ ಒಂದು ಹಂತದಲ್ಲಿ, ಇಂದ್ರಿಯ ಗೋಚರವಾದ ಹಾಗೂ ಭೋಜ್ಯಯೋಗ್ಯವಾದ ವಸ್ತುಗಳನ್ನು ಪರಶಿವನಿಗೆ ಅರ್ಪಿಸಿ ಅವುಗಳನ್ನು ಪ್ರಸಾದ ಮಾಡಿಕೊಳ್ಳುವುದು ಒಂದು ವ್ಯರ್ಥಕ್ರಿಯೆ ಎಂಬ ಅರಿವು ಮೂಡುತ್ತದೆ. ಏಕೆಂದರೆ ಪ್ರಸಾದದ ನಿಜವಾದ ಅರ್ಥ ಇಷ್ಟಕ್ಕೇ ಸೀಮಿತವಾಗಿಲ್ಲ. ನಾವು ಇಂದ್ರಿಯಗಳ ಮೂಲಕ ಏನೇನನ್ನು ಅನುಭವಿಸುತ್ತೇವೆಯೋ ಅವೆಲ್ಲವನ್ನೂ ಪ್ರಸಾದವೆಂಬಂತೆಯೇ ಸ್ವೀಕರಿಸಬೇಕು. ಈ ಅರ್ಥದಲ್ಲಿ ತೆಗೆದುಕೊಂಡರೆ, ನಮ್ಮ ದೇಹದಲ್ಲಿರುವ ಆರು ಲಿಂಗಗಳಿಗೆ ರೂಪರಸಗಂಧಾದಿಗಳನ್ನು ಅರ್ಪಿಸಿ, ಅವನ್ನು ಪ್ರಸಾದವೆಂಬಂತೆ ಆಮೇಲೆ ಸ್ವೀಕರಿಸಿದರೆ, ಆಗ ನಾವು ನಿಜವಾದ ಪ್ರಸಾದಿಗಳೆನಿಸಿಕೊಳ್ಳುತ್ತೇವೆ. ಹೀಗೆ ನಾವು ಘ್ರಾಣಿಸುವ ಮುನ್ನ ಆಚಾರಲಿಂಗಕ್ಕೆ ಅರ್ಪಿಸಿದರೆ, ಆ ವಾಸನೆ ಆಚಾರಲಿಂಗದ ಪ್ರಸಾದವಾಗುತ್ತದೆ. ಅದೇ ರೀತಿ ನಾವು ರುಚಿಸಿದ್ದೆಲ್ಲ ಗುರುಲಿಂಗದ ಪ್ರಸಾದ, ನೋಡಿದ್ದೆಲ್ಲ ಶಿವಲಿಂಗದ ಪ್ರಸಾದ, ಸ್ಪರ್ಶಿಸಿದ್ದೆಲ್ಲಾ ಜಂಗಮಲಿಂಗದ ಪ್ರಸಾದ, ಕೇಳಿದ್ದೆಲ್ಲಾ ಪ್ರಸಾದಲಿಂಗದ ಪ್ರಸಾದ ಹಾಗೂ ನಮ್ಮ ಇಂದ್ರಿಯಗಳೂ, ಉತ್ತಮವಾದುದೆಲ್ಲವೂ ಮಹಾಲಿಂಗದ ಪ್ರಸಾದ. ಹೀಗೆ ತಾನು ಅನುಭವಿಸುವ ಮುನ್ನ ಎಲ್ಲವನ್ನೂ ಲಿಂಗಕ್ಕರ್ಪಿಸುವವನು ಸರ್ವಾಂಗ ಪ್ರಸಾದಿ. (೧೦:೮೦೦)

**ಷಡ್ವಿಧವಿಭೂತಿಧಾರಣೆ :** ಶಿವಭಕ್ತರಾದವರೆಲ್ಲರೂ ವಿಭೂತಿಧರಿಸಬೇಕೆಂಬ ನಿಯಮವಿದೆ. ಆದರೆ ಯಾರಾರು ಯಾವಾವ ಸ್ಥಲದಲ್ಲಿ ಧರಿಸಿದರೆ ಯಾವಾವ ಲಾಭಗಳುಂಟಾಗುತ್ತವೆ ಎಂಬುದನ್ನು ಚೆನ್ನಬಸವಣ್ಣನವರು ಈ ರೀತಿ ತಿಳಿಸಿಕೊಡುತ್ತಾರೆ.

೧. ಸಹಜಲಿಂಗಧಾರಕರು ವಿಭೂತಿಯನ್ನು ತಮ್ಮ ಶರೀರದ ಎಂಟು ಸ್ಥಾನಗಳಲ್ಲಿ ಧರಿಸಬೇಕು, ಹಾಗೆ ಧರಿಸಿದವರಿಗೆ ಗುರುದೀಕ್ಷೆಯುಂಟಾಗುತ್ತದೆ.

೨. ಕ್ರಿಯಾದೀಕ್ಷೆ ಪಡೆದ ಉಪಾಧಿಕ ಭಕ್ತರು ತಮ್ಮ ಶರೀರದ ಹದಿನಾರು ಸ್ಥಾನಗಳಲ್ಲಿ ವಿಭೂತಿಧಾರಣೆ ಮಾಡಬೇಕು; ಹಾಗೆ ಮಾಡಿದರೆ, ಅವರಿಗೆ ಗುರಲಿಂಗ ಜಂಗಮದ ಸದ್ಭಕ್ತಿ ಫಲಿಸುವುದು.

೩. ಕ್ರಿಯಾದೀಕ್ಷೆ ಮತ್ತು ಮಂತ್ರದೀಕ್ಷೆ ಪಡೆದ ನಿರುಪಾಧಿಕ ಭಕ್ತರು ತಮ್ಮ ಅಂಗದ ಮೂವತ್ತೆರಡು ಸ್ಥಾನಗಳಲ್ಲಿ ವಿಭೂತಿಧಾರಣೆ ಮಾಡಬೇಕು; ಹಾಗೆ ಮಾಡಿದರೆ, ಅವರು ತ್ರಿವಿಧಪಾದೋದಕ ಪ್ರಸಾದಕ್ಕೆ ಯೋಗ್ಯರಾಗುತ್ತಾರೆ.

೪. ಕ್ರಿಯಾದೀಕ್ಷೆ, ಮಂತ್ರದೀಕ್ಷೆ ಮತ್ತು ವೇಧಾದೀಕ್ಷೆ ಪಡೆದ ಸಹಜ ಭಕ್ತರು ತಮ್ಮ ಶರೀರದ ಮೂವತ್ತಾರು ಸ್ಥಾನಗಳಲ್ಲಿ ವಿಭೂತಿಯನ್ನು ಧರಿಸಬೇಕು. ಹಾಗೆ ಮಾಡಿದರೆ ಅವರಿಗೆ ಸಚ್ಚಿದಾನಂದಪದ ದೊರೆಯುತ್ತದೆ.

೫. ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ವೇಧಾದೀಕ್ಷೆ ಮತ್ತು ಸಚ್ಚಿದಾನಂದ ದೀಕ್ಷೆಯನ್ನು ಪಡೆದ ನಿರ್ವಂಚನ ಭಕ್ತರು ನಲವತ್ತುನಾಲ್ಕು ಸ್ಥಾನಗಳಲ್ಲಿ ವಿಭೂತಿಯನ್ನು ಧರಿಸಬೇಕು. ಹಾಗೆ ಮಾಡಿದರೆ ಅವರಿಗೆ ನಿರ್ವಾಣಪದ ಲಭಿಸುತ್ತದೆ.

೬. ಕೊನೆಯದಾಗಿ, ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ವೇಧಾದೀಕ್ಷೆ, ಸಚ್ಚಿದಾನಂದ ದೀಕ್ಷೆ ಮತ್ತು ನಿರ್ವಾಣಪದದೀಕ್ಷೆಗಳನ್ನು ಪಡೆದ ಸದ್ಭಕ್ತರು ತಮ್ಮ ಅಂಗದ ನಾಲ್ವತ್ತೆಂಟು ಸ್ಥಾನಗಳಲ್ಲಿ ಮಂತ್ರವನ್ನು ಪಠಿಸುತ್ತಾ ವಿಭೂತಿ ಧಾರಣೆ ಮಾಡಬೇಕು, ಹಾಗೆ ಮಾಡಿದರೆ ಅವರಿಗೆ, ಜಂಗಮರೊಡನಾಟ ಮತ್ತು ಪರಶಿವನೊಡನೆ ಕೂಟ ಉಂಟಾಗಿ, ಕೊನೆಯಲ್ಲಿ ನಿರವಯ ಸಮಾಧಿ ಉಂಟಾಗುತ್ತದೆ (೩:೯೪೬,೯೪೭).

**ಷಡ್ವಿಧ ಶಕ್ತಿ :** ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿತ್‌ಶಕ್ತಿ ಎಂಬ ಪರಶಿವನ ಶಕ್ತಿಯ ಆರು ವಿಧಗಳು. (ನೋಡಿ:**ಶಕ್ತಿ, ಕಲೆ ಮತ್ತು ಶಕ್ತಿ, ಶಕ್ತಿ ಮತ್ತು ತತ್ವ**)

**ಷಡ್ವಿಧ ಸಮರ್ಪಣೆ :** ಭಕ್ತನು ತನಗೆ ಬಂದ ಪದಾರ್ಥಗಳನ್ನು ಗುರುಲಿಂಗಜಂಗಮಕ್ಕೂ, ಪುಷ್ಪ ಮೊದಲಾದ ಸುಗಂಧ ವಸ್ತುಗಳನ್ನು ಆಚಾರಲಿಂಗಕ್ಕೂ ಸಮರ್ಪಿಸಬೇಕು. ಹಣ್ಣು ಮೊದಲಾದ ರಸಭರಿತ ವಸ್ತುಗಳನ್ನು ಮಹೇಶನು ಗುರುಲಿಂಗಕ್ಕೆ ಸಮರ್ಪಿಸಬೇಕು; ಪೀತ, ಶ್ವೇತ ಮುಂತಾದ ವಸ್ತ್ರಾದಿಗಳನ್ನು, ಅಂದರೆ ಅವುಗಳ ರೂಪನ್ನು, ಪ್ರಸಾದಿಯು ಶಿವಲಿಂಗಕ್ಕೆ ಸಮರ್ಪಿಸಬೇಕು; ಕೌಪೀನ, ಉಡುದಾರ, ಮುಂತಾದ ಯಾವಾಗಲೂ ನಮ್ಮನ್ನು ಮುಟ್ಟುತ್ತಿರುವ ಪದಾರ್ಥಗಳನ್ನು (ಅಂದರೆ, ಸ್ಪರ್ಶನವನ್ನು) ಪ್ರಾಣಲಿಂಗಿಯು ತನ್ನ ಸತ್ಕ್ರಿಯೆಗಳ ಮೂಲಕ ಜಂಗಮಲಿಂಗಕ್ಕೆ ಸಮರ್ಪಿಸಬೇಕು; ಶಬ್ದೋತ್ಪಾದಕ ವಸ್ತುಗಳಾದ ಗಂಟೆ, ತಂತಿವಾದ್ಯಗಳು ಮುಂತಾದ ವಸ್ತುಗಳನ್ನು (ಅಂದರೆ ಶಬ್ದವನ್ನು) ಶರಣನು ಪ್ರಸಾದಲಿಂಗಕ್ಕೆ ಸಮರ್ಪಿಸಬೇಕು; ಕೊನೆಯದಾಗಿ, ಐಕ್ಯನು ತನ್ನೆಲ್ಲವನ್ನೂ ಮಹಾಲಿಂಗಕ್ಕೆ ಸಮರ್ಪಿಸಿ, ಪರಿಪೂರ್ಣ ತೃಪ್ತಿ ಪಡೆಯಬೇಕು.

ಆದರೆ ಇಲ್ಲಿ ವಚನಕಾರರು, ಈ ರೀತಿ ಅರ್ಪಿತವಾಗುವ ವಸ್ತುಗಳು ಸತ್ಯ, ಶುದ್ಧ ಕಾಯಕದಿಂದ ಬಂದಿರುವಂಥಾದ್ದಾಗಿರಬೇಕೆಂದು ಎಚ್ಚರಿಸುತ್ತಾರೆ. (೧೪:೨೪೫೩)

**ಷಡ್ವಿಧ ಹಸ್ತ :** ಇಲ್ಲಿ ಹಸ್ತವೆಂದರೆ ರಕ್ತಮಾಂಸಗಳಿಂದಾದ ಸ್ಥೂಲದೇಹದ ಒಂದು ಭಾಗವಲ್ಲ. ನಾವು ಇಂದ್ರಿಯಗೋಚರವಾದ ಇಷ್ಟಲಿಂಗಕ್ಕೆ ಇಂದ್ರಿಯಗೋಚರವಾದ ವಸ್ತುಗಳನ್ನು ಇಂದ್ರಿಯಗೋಚರವಾದ ಕೈಯಿಂದ ಹೇಗೆ ಅರ್ಪಿಸುತ್ತೇವೆಯೋ ಹಾಗೆಯೇ, ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರಿದವನು, ಇಂದ್ರಿಯಗೋಚರವಲ್ಲದ ಲಿಂಗಕ್ಕೆ ಅಂತಃ ಕರಣದಿಂದಲೇ ರೂಪ, ರಸ, ಗಂಧ ಮುಂತಾದ ವಿಷಯಗಳನ್ನು ಅರ್ಪಿಸುತ್ತಾನೆ. ಆಗ ಅಂತಃಕರಣವು ಸಾಂಕೇತಿಕವಾಗಿ ಹಸ್ತ ಎನಿಸಿಕೊಳ್ಳುತ್ತದೆ. ಈ ಹಸ್ತಗಳು ಆರು. ಅವೆಂದರೆ: ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ ಮತ್ತು ಸದ್ಭಾವ. (ನೋಡಿ:**ಹಸ್ತ**)

**ಷಣ್ಮುಖ ಶಿವ :** ಸದ್ಯೋಜ್ಯಾತ, ವಾಮದೇವ, ಅಘೋರ, ತತ್ಪುರುಷ, ಈಶಾನ, ಗೋಪ್ಯ, ಎಂಬ ಆರು ಮುಖಗಳುಳ್ಳ ಪರಶಿವ. ಸೃಷ್ಟಿವೇಳೆಯಲ್ಲಿ ಶಿವನ ಈ ಆರು ಮುಖಗಳಿಂದ ಸೃಷ್ಟಿಗೆ ಬೇಕಾದ ಪೃಥ್ವಿ, ನೀರು, ಅಗ್ನಿ, ವಾಯು, ಆಕಾಶ, ಮತ್ತು ಜೀವಾತ್ಮಗಳು ಹೊರಬರುತ್ತವೆ (೪:೧೪೦೬).

**ಷಷ್ಠಿಧಾರಣ :** ಸಾಧಕನು ತಂತ್ರಗಳ ಪ್ರಕಾರ ಮಾಡಬೇಕಾದ ಆರು ರೀತಿಯ ಧಾರಣಗಳು. ಅವೆಂದರೆ, ನಾಡಿಧಾರಣ, ಅಗ್ನಿಧಾರಣ, ಅಮೃತಧಾರಣ, ಆಧಾರ ಧಾರಣ, ನಿರಾಧಾರಧಾರಣ. (ನೋಡಿ : **ಬ್ರಹ್ಮನಾಡಿ, ವಾಯುಧಾರಣ, ಅಗ್ನಿಧಾರಣ, ಆಧಾರಧಾರಣ, ಅಮೃತಧಾರಣ**).

**ಷಡುವರ್ಣ :** ಶ್ವೇತ, ಪೀತ, ಕಪೋತ, ಹರಿತ, ಕೃಷ್ಣ, ಮಾಂಜಿಷ್ಟ; ಸಾಧಕನು ತನ್ನ ಸಾಧನೆಯ ಆರು ಹಂತಗಳಲ್ಲಿ, ಅಂದರೆ, ತನ್ನ ಆರು ಚಕ್ರಗಳನ್ನು ಜಾಗೃತಗೊಳಿಸಿದಾಗ, ಈ ಆರು ಬಣ್ಣಗಳು ಅವನಿಗೆ (ಸಮಾಧಿ ಸ್ಥಿತಿಯಲ್ಲಿ) ಗೋಚರವಾಗುತ್ತವೆ. ೧. ಮೂಲಾಧಾರ ಚಕ್ರ ಜಾಗೃತವಾದಾಗ ಹಳದಿ, (ಪೀತ) ಬಣ್ಣವೂ, ಸ್ವಾಧಿಷ್ಠಾನ ಚಕ್ರ ಜಾಗೃತವಾದಾಗ ಹಸಿರು ಬಣ್ಣವೂ, ಮಣಿಪೂರಕ ಚಕ್ರ ಜಾಗೃತವಾದಾಗ ಬಿಳಿ ಶ್ವೇತ ವರ್ಣವೂ, ಆಜ್ಞಾ ಚಕ್ರ ಜಾಗೃತವಾದಾಗ ಮಾಣಿಕ್ಯ ವರ್ಣವೂ ಗೋಚರವಾಗುತ್ತದೆ (೨:೧೮೮,೫೫೪).

**ಷಡೂರ್ಮಿಗಳು :** ಮನುಷ್ಯನ ಆರು ಮೂಲ ಗುಣಗಳು. ಅವೆಂದರೆ : ಹಸಿವು (ಕ್ಷುತ್ತು), ನೀರಡಿಕೆ (ಪಿಪಾಸೆ), ಶೋಕ, ಮೋಹ, ಜರೆ, ಮರಣ. ಹಸಿವಾಗುವುದನ್ನೂ ನೀರಡಿಕೆಯಾಗುವುದನ್ನೂ ಮುಪ್ಪು ಮತ್ತು ಮರಣ ಸಂಭವಿಸುವುದನ್ನು ಹೇಗೆ ತಪ್ಪಿಸಲು ಸಾಧ್ಯವಿಲ್ಲವೋ, ಹಾಗೆ ಶೋಕ ಮತ್ತು ಮೋಹಗಳನ್ನೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಅವುಗಳಿಂದಾಗುವ ತಾಪವನ್ನು ಆಧ್ಯಾತ್ಮಿಕ ಸಾಧನೆಯ ಮೂಲಕ ಗೆಲ್ಲಬಹುದು ಎಂಬುದು ವಚನಕಾರರ ಅಭಿಮತ. ಲಿಂಗದ ತೃಪ್ತಿಯ ಕಡೆಗೆ ಗಮನ ಕೊಡುವ ಮೂಲಕ ಹಸಿವನ್ನು ಗೆಲ್ಲಬಹುದು; ಪಾದೋದಕ ಸೇವನೆಯಿಂದ ನೀರಡಿಕೆಯನ್ನೂ, ಲಿಂಗಪೂಜೆಯಲ್ಲಿ ಆನಂದಾಶ್ರುಗಳನ್ನು ಸುರಿಸುವ ಮೂಲಕ ಶೋಕವನ್ನೂ, ದೇಹಮೋಹವ ಬಿಟ್ಟು ಲಿಂಗ ಮೋಹಿಯಾಗುವ ಮೂಲಕ ಮೋಹವನ್ನೂ, ಕರಣೇಂದ್ರಿಯಗಳು ಲಿಂಗದಲ್ಲಿ ಲೀಯವಾಗುವ ಮೂಲಕ ಮುಪ್ಪನ್ನೂ, ತಾನೆಂಬುದಳಿದು ಆತ್ಮನು ಮಹಾಲಿಂಗದಲ್ಲಿ ಐಕ್ಯವಾಗುವ ಮೂಲಕ ಮರಣವನ್ನೂ ಗೆಲ್ಲಬಹುದು. (೧೧:೯೦೪)

**ಷೋಡಶೋಪಚಾರ (ಷೋಡಶಭಕ್ತಿ) :** ಅರ್ಘ್ಯ, ಪಾದ್ಯ, ಆಚಮನ, ಪತ್ರಪುಷ್ಪ, ಗಂಧ, ಅಕ್ಷತೆ, ರುದ್ರಾಕ್ಷಿ ಮಾಲೆ, ಛತ್ರ, ಚಾಮರ, ವ್ಯಜನ, ಗೀತ, ವಾದ್ಯ, ನರ್ತನ, ಪ್ರದಕ್ಷಿಣ, ನಮಸ್ಕಾರ, ಸ್ತೋತ್ರ ಎಂಬ ಹದಿನಾರಂಗಗಳ ಆರಾಧನೆ.

**ಸಂಕಲ್ಪ ಜೀವಿಗಳು :** ನಾವು ಅಜ್ಞಾನದ ದೆಸೆಯಿಂದಾಗಿ ನಿತ್ಯಾನಿತ್ಯ ವಸ್ತುವಿವೇಕವನ್ನು ಕಳೆದುಕೊಂಡು, ಸಾಮರಸ್ಯದ ಬದಲು ಐಹಿಕ ಜೀವನದ ಪ್ರಗತಿಯನ್ನೇ ನಮ್ಮ ಜೀವನದ ಗುರಿಯನ್ನಾಗಿ ಮಾಡಿಕೊಳ್ಳುತ್ತೇವೆ. ಹೀಗೆ ತಮ್ಮನ್ನು ತಾವೇ ಗುರಿಯಾಗಿಟ್ಟುಕೊಂಡ ಅಜ್ಞಾನಿಗಳೆಲ್ಲರೂ ಸಂಕಲ್ಪ ಜೀವಿಗಳು. (೮:೧೮೮೫)

**ಸಂಕಲ್ಪ ವಿಕಲ್ಪ :** ಇವು ಅಜ್ಞಾನದ (ಮರೆವಿನ) ಎರಡು ಮುಖಗಳು. "ಇಲ್ಲದುದ ಕಲ್ಪಿಸುವುದೇ ಸಂಕಲ್ಪ, ಇದ್ದುದ ಅರಿಯದಿಹುದೇ ವಿಕಲ್ಪ". (೪:೧೩೩೪)

**ಸಂಗಗುಣ :** ಪ್ರತಿಯೊಂದು ವಸ್ತುವಿನಲ್ಲಿಯೂ ಪಂಚಭೂತಗಳಿದ್ದು, ಅವು ವಿವಿಧ ಪ್ರಮಾಣಗಳಲ್ಲಿ ಬೆರೆತಿರುತ್ತವೆ. ಅಲ್ಲದೆ ಪ್ರತಿಯೊಂದು ಭೂತದಲ್ಲಿಯೂ ತನ್ನ ವಿಶಿಷ್ಟ ಗುಣದ ಜೊತೆಗೆ ಉಳಿದ ಭೂತಗಳ ಗುಣಗಳೂ ಇರುತ್ತವೆ. ಒಂದು ವಸ್ತು ಗಟ್ಟಿಯಾದ ಕಲ್ಲೋ, ಮಣ್ಣೋ ಆಗಿದ್ದರೆ, ಅದರಲ್ಲಿ ಪೃಥ್ವೀ ತತ್ವವು ಬಹಳವಿದ್ದು, ನೀರು, ವಾಯು, ಇತ್ಯಾದಿ ತತ್ವಗಳು ಕಡಿಮೆ ಇರುತ್ತವೆ; ಒಂದು ವಸ್ತು ನೀರು ಆಗಿದ್ದರೆ, ಅಪ್ ತತ್ವಗಳು ಬಹಳ ಇವೆ ಎಂದರ್ಥ. "ಘಟದೊಳಗೆ ರಸವಿದ್ದು, ರಸದೊಳಗೆ ಘಟವಿದ್ದು, ಸಂಗಗುಣದಿಂದ ನೀರಾಗಿ.." (೮:೧೭೫೨). ಹಾಗೆಂದು ಕಲ್ಲನ್ನು ಕುಟ್ಟಿ ಪುಡಿ ಮಾಡಿದರೆ, ಅದರಲ್ಲಿರುವ ಅಪ್‌ತತ್ವ ಹೊರಬರುವುದಿಲ್ಲ (೮:೧೭೫೩)

**ಸಂಗರಹಿತವಾದ ಸುಖ :** ಹೆಣ್ಣಾಗಲಿ, ಗಂಡಾಗಲಿ ಸುಖಪಡಬೇಕಾದರೆ ಅವರಿಬ್ಬರೂ ಮೊದಲು ಸಂಗ ಮಾಡಬೇಕು. ಸಂಗವಿಲ್ಲದೆ ಸುಖ ಸಾಧ್ಯವಿಲ್ಲ. ಆದರೆ ಲಿಂಗಾಂಗ ಸಾಮರಸ್ಯದಲ್ಲಿ ಅಂಗನು ಕಾಣುವ ಸುಖವು ಈ ರೀತಿಯ ಸಂಗದಿಂದ ಉಂಟಾದುದಲ್ಲ. ಅದು ಸಂಗರಹಿತ ಸುಖ (೯:೪೧೯).

**ಸಂಚಾರ :** ಜೀವನು ಸಂಸಾರದಲ್ಲಿ ಜನ್ಮದಿಂದ ಜನ್ಮಕ್ಕೆ ಮಾಡುವ ಸಂಚಾರ (೮:೧೮೮೬).

**ಸಂಚಾರದ ಭ್ರಮೆ :** ಜೀವನು ಕರ್ಮಫಲಗಳ ದೆಸೆಯಿಂದಾಗಿ ತಾನು ಸಂಸಾರದಲ್ಲಿ ಜನ್ಮ ಜನ್ಮಾಂತರಗಳ ಸಂಚಾರ ಮಾಡುತ್ತಿದ್ದೇನೆ ಎಂದು ಭಾವಿಸಿದರೆ ಅದು ಭ್ರಮೆ. ವಾಸ್ತವವಾಗಿ ಜೀವಾತ್ಮನು ಪರಮಾತ್ಮನಾದುದರಿಂದ ಅವನಿಗೆ ಸಂಚಾರ ಸಾಧ್ಯವೇ ಇಲ್ಲ. ಏಕೆಂದರೆ ಪರಿಮಿತ ಭೌತವಸ್ತುಗಳು ಒಂದು ಪರಿಮಿತ ಸ್ಥಳದಿಂದ ಇನ್ನೊಂದು ಪರಿಮಿತ ಪ್ರದೇಶಕ್ಕೆ ಸಂಚರಿಸುವಂತೆ, ಅಪರಿಮಿತ ಪರಮಾತ್ಮನು ಸಂಚರಿಸಲು ಸಾಧ್ಯವಿಲ್ಲ. ಜೀವಾತ್ಮನಿಗೆ ತನ್ನ ನಿಜ ಸ್ವರೂಪದ ಅರಿವಾದಾಗ ತಾನು ಸಂಚರಿಸುತ್ತೇನೆಂಬ ಭ್ರಮೆಯೂ ಹೋಗುತ್ತದೆ. (೮:೧೬೬೨)

**ಸಂಚಿತ ಕರ್ಮ :** ಅನೇಕ ಜನ್ಮಗಳಲ್ಲಿ ಕೂಡಿಟ್ಟುಕೊಂಡಿರುವ ಕರ್ಮಗಳು. ಇವು ಇನ್ನೂ ಫಲ ನೀಡಿಲ್ಲ, ಆದರೆ ಮುಂದೆ ಯಾವಾಗಲೋ ಫಲ ನೀಡುತ್ತದೆ. ಫಲ ನೀಡಲು ಪ್ರಾರಂಭವಾದ ಕೂಡಲೇ ಆ ಕರ್ಮವು ಪ್ರಾರಬ್ಧ ಕರ್ಮವೆನಿಸಿಕೊಳ್ಳುತ್ತದೆ.

**ಸಂಚಿತಸುಖಿ :** ಭಕ್ತನ ಕಾಯವು ಪರಶಿವನ ಕಾಯವೆಂದು ತಿಳಿಯದಿದ್ದರೆ, ಅವನಿಗೆ ಕಾಯವನ್ನರ್ಪಿಸುವ ರೀತಿ ಗೊತ್ತಿಲ್ಲವೆಂದರ್ಥ. ಅಂಥ ಅಜ್ಞಾನಿ ತಾನು ಶುದ್ಧ ಪ್ರಸಾದಿ ಎಂದುಕೊಂಡರೂ, ವಾಸ್ತವವಾಗಿ ಅವನು ಸಂಚಿತ ಕರ್ಮವನ್ನು ಅನುಭವಿಸುವುದು ತಪ್ಪುವುದಿಲ್ಲ. (ಇಲ್ಲಿ ಸುಖಿ ಎಂದರೆ ಸುಖ ಪಡುವವನು ಎಂದಾಗದೆ, ಅನುಭವಿಸುವವನು ಎಂದಾಗುತ್ತದೆ) (೧೨:೩೭೪).

**ಸಂಜ್ಞೆಗಳು :** ಚಕ್ರಗಳಲ್ಲಿ ಅಂತಸ್ಥವಾಗಿರುವ ಪರಶಿವನನ್ನು ಆಚಾರಲಿಂಗ, ಗುರುಲಿಂಗ ಎಂದು ಮುಂತಾಗಿ ಕೆಲವರು ಕರೆದರೆ, ಮತ್ತೆ ಕೆಲವರು ಪರ, ಗೂಢ, ಶರೀರಸ್ಥ, ಲಿಂಗಕ್ಷೇತ್ರ, ಅನಾದಿ, ಮಹತ್, ಅಪ್ರಮಾಣ, ನಿರ್ನಾಮ, ಅವಿರಳ, ಎಂದು ಕರೆಯುತ್ತಾರೆ. ಈ ಒಂಬತ್ತು ಪರಶಿವನ ಸಂಜ್ಞೆಗಳು.

**ಸಂದನಳಿದು ನಿಲ್ಲುವುದು :** ಆತ್ಮನು ತನ್ನ ಶುದ್ಧರೂಪದಲ್ಲಿ ಪರಶಿವನೊಂದಿಗೆ ಐಕ್ಯವಾದಾಗ ಅವರಿಬ್ಬರ ಮಧ್ಯದ ಸಂದು ಇಲ್ಲವಾಗುತ್ತದೆ. ಅಲ್ಲದೆ, ಅಂಗನು ಪರಶಿವನಲ್ಲೇ ನಿಲ್ಲುತ್ತಾನೆ. ಹಾಗೆ ಸಂದನಳಿದು ಶಿವನಲ್ಲಿ ನೆಲೆಸುವುದೇ ಆತ್ಮನ ಧ್ಯೇಯ (೯:೨೦೯).

**ಸಂದೇಹ :** ಧಾರ್ಮಿಕ ವಿಚಾರಗಳ ಬಗೆಗಿನ ಸಂದೇಹ. ಶಿವನಿದ್ದಾನೋ ಇಲ್ಲವೋ, ಅವನು ನಮ್ಮನ್ನು ರಕ್ಷಿಸುತ್ತಾನೋ ಇಲ್ಲವೋ, ನಾವು ಮಾಡುವ ಭಕ್ತಿಯಿಂದ ಶಿವಾನುಗ್ರಹ ದೊರೆಯುತ್ತದೆಯೋ ಇಲ್ಲವೋ ಮುಂತಾದ ಸಂದೇಹ. ವಾಸ್ತವವಾಗಿ ಇದು ಕೇವಲ ಬೌದ್ಧಿಕ ಸಂದೇಹವಲ್ಲ. ಇದರ ನಿಹಿತಾರ್ಥ ವಿಶ್ವಾಸವಿಲ್ಲದೆ ಇರುವುದು ಎಂಬುದು. ವಿಶ್ವಾಸರಾಹಿತ್ಯವು ಯಾವಾಗಲೂ ಆಧ್ಯಾತ್ಮಿಕ ಜೀವನಕ್ಕೆ ಅಡ್ಡಿ.

**ಸಂಪಾದನೆ :** ಇದಕ್ಕೆ ವಚನಗಳಲ್ಲಿ ಕನಿಷ್ಠ ನಾಲ್ಕು ಅರ್ಥಗಳಾದರೂ ಇವೆ : ೧. ಗಳಿಕೆ. ೨. ಸಂಭಾಷಣೆ. ೩. ಗಾಢ ಬಾಂಧವ್ಯ. ('ಪುರಹರ ಕ್ಷೇತ್ರದಲ್ಲಿ ಪುರಪತಿಯೊಡನೆ ಸಂಪಾದನೆ' ೭:೪೯೯); ೪. ಸಂದೇಹ, ಚರ್ಚೆ. 'ಪ್ರಸಾದದಲ್ಲಿ ರುಚಿ ಸಂಪಾದನೆಯ ಮಾಡುವನ್ನಕ್ಕ ಪ್ರಸಾದ ಸಂಬಂಧಿಯಲ್ಲ' ಎಂಬಲ್ಲಿ ಪ್ರಸಾದವು ರುಚಿಯಾಗಿದೆಯೋ ಇಲ್ಲವೊ ಎಂದು ಸಂದೇಹಿಸುವವರಿಗೆ ಪ್ರಸಾದವಿಲ್ಲ ಎಂಬರ್ಥವಿದೆ.

**ಸಂಪೂರ್ಣಾನಂದ ಭರಿತಾಚಾರ :** ಸಾಧಕನು ತಾನು ಭಕ್ತನಾದಾಗಿನಿಂದ ಪ್ರಾಣಲಿಂಗಿಯಾಗುವವರೆಗೂ ಮಾಡುವ ಆಧ್ಯಾತ್ಮಿಕ ಸಾಧನೆಯು ಒಂದು ರೀತಿಯ ಸಿದ್ಧತೆ. ಅವನಿಗೆ ಸಾಂಸಾರಿಕ ದುಃಖ ಹಾಗೂ ಕರ್ಮಗಳ ಫಲಗಳನ್ನು ತೊಡೆಯಬೇಕೆಂದರೂ ಆ ಸ್ಥಲಗಳಲ್ಲಿ ಸಾಧ್ಯವಾಗುವುದಿಲ್ಲ. ಆದರೆ ಶರಣಸ್ಥಲದಲ್ಲಿ (ಅನುಭಾವದ ಅವಸ್ಥೆಯಲ್ಲಿ) ಅವನಿಗೆ ಸಂಪೂರ್ಣ ಆನಂದ ದೊರೆಯುತ್ತದೆ. ಆಗ ಅವನು ತನಗಾಗಿ ಏನನ್ನೂ ಯೋಚಿಸದೆ, ಮಾಡದೆ, ಏನನ್ನೂ ತಿನ್ನದೆ, ಕುಡಿಯದೆ, ಎಲ್ಲವನ್ನೂ ಪರಶಿವನಿಗಾಗಿಯೇ ಮಾಡಿ, ತಾನು ತೃಪ್ತಿ (ಆನಂದ) ಪಟ್ಟುಕೊಳ್ಳುತ್ತಾನೆ.

ಇಂಥ ಆನಂದ ಇಂದ್ರಿಯ ಮತ್ತು ವಸ್ತುಗಳ ಸನ್ನಿಕರ್ಷದಿಂದ ಬರುವ ಆನಂದವಲ್ಲವೆಂಬುದನ್ನು, ಅದು ಕೇವಲ ಸ್ವಾನುಭಾವಿಗೆ (ಅನುಭಾವಿಗೆ) ಮಾತ್ರ ಸಿದ್ಧಿಸುವ ಆನಂದವೆಂಬುದನ್ನು ನಾವು ಗಮನಿಸಬೇಕು.

**ಸಂಬಂಧಸಂಯೋಗಲಿಂಗಾಂಗಿ :** ಇಷ್ಟಲಿಂಗವನ್ನು ಧರಿಸುವ ಮೂಲಕ ಅದರೊಡನೆ ಸಂಬಂಧವನ್ನೂ, ಲಿಂಗದಲ್ಲಿ ಲೀಯವಾಗುವ ಮೂಲಕ ಅದರೊಡನೆ ಸಂಯೋಗವನ್ನೂ ಪಡೆದವನು (೭:೫).

**ಸಂಬಂಧಿ :** ದೇಹಸಂಬಂಧಿ. ಐಕ್ಯಸ್ಥಳ ಮುಟ್ಟಿದವರ ಆತ್ಮಕ್ಕೆ ದೇಹದ ಸಂಬಂಧವಿದ್ದರೂ, ಅದರಿಂದ ಅವರಿಗೆ ಯಾವ ಬಾಧಕವೂ ಇಲ್ಲ. ಉಳಿದ ಸಂಬಂಧಿಗಳು ಲೌಕಿಕರು (೧:೭೮೩).

**ಸಂವಿತ್‌ಪ್ರಭಾನಂದ :** ಸಂವಿದ್ ಎಂದರೆ ಚಿತ್ತು, ಚೈತನ್ಯ ಅಥವಾ ಅರಿವು; ಇದು ಪರಶಿವನ ಇನ್ನೊಂದು ಹೆಸರು; ಪ್ರಭೆ ಎಂದೂ ಕರೆಯುತ್ತಾರೆ. ಅನುಭಾವಿಯು ದೇಹಕರಣಾದಿಗಳ ಸಂಗದಿಂದ ಸ್ವಲ್ಪ ಹೊತ್ತಿನವರೆಗಾದೂ ದೂರವಿದ್ದಾಗ, ಅವನು ಪ್ರಭೆಯನ್ನು 'ನೋಡು'ವುದೂ ಅಲ್ಲದೆ, ಆನಂದವನ್ನೂ ಸವಿಯುತ್ತಾನೆ. ಈ ಆನಂದ ಸಹ ಪರಶಿವನ ಗುಣಗಳಲ್ಲೊಂದು (೧೨:೧೪೯).

**ಸಂಸಾರ :** ಮನುಷ್ಯನು ಪರಶಿವನ ಅಂಗ. ಇದನ್ನು ಮರೆತು (ಅವಿದ್ಯೆಯಿಂದಾಗಿ) ತಾನು ಪ್ರತ್ಯೇಕ ವ್ಯಕ್ತಿಯೆಂದೂ, ಐಹಿಕ ಸುಖವೇ ಜೀವನದ ಧ್ಯೇಯವೆಂದೂ ತಿಳಿದು, ಅವನು ಅನೇಕ ರೀತಿಯ ಕರ್ಮಗಳನ್ನು ಮಾಡುತ್ತಾನೆ. ಈ ಕರ್ಮಗಳಿಗೆ ತಕ್ಕ ಫಲಗಳನ್ನು ಅವನು ಈ ಜನ್ಮದಲ್ಲೇ ತೀರಿಸಬಹುದು. ಅವು ಬಹಳವಿದ್ದರೆ ಮುಂದಿನ ಜನ್ಮದಲ್ಲಿ ತೀರಿಸಬೇಕಾಗುತ್ತದೆ. ಆದರೆ ಮುಂದಿನ ಜನ್ಮದಲ್ಲಿಯೂ ಅದೇ ಮರೆವು ಮುಂದುವರಿದು, ಜೀವನು ಅಂಥವೇ ಕರ್ಮಗಳನ್ನು ಮಾಡಿ, ಅವುಗಳ ಫಲಗಳನ್ನು ಭೋಗಿಸಲು ಮತ್ತೊಂದು ಜನ್ಮವೆತ್ತುತ್ತಾನೆ. ಹೀಗೆ ಜೀವನು ಹುಟ್ಟುವುದು, ಕರ್ಮ ಮಾಡುವದು, ಸಾಯುವುದು, ಮತ್ತೆ ಹುಟ್ಟುವುದು ಒಂದು ಚಕ್ರದಂತೆ ಉರುಳುತ್ತಲೇ ಇದ್ದರೆ, ಜೀವನ ಅಂತಹ ಸಂಚಾರಕ್ಕೆ ಸಂಸಾರ ಎಂದು ಹೆಸರು.

**ಸಂಸಾರ ಕರ್ಮ :** ಮತ್ತೆ ನಮ್ಮನ್ನು ಸಂಸಾರಕ್ಕೆ ಬಂಧಿಸುವಂತಹ ಕಾರ್ಯ(ಕರ್ಮ)ಗಳು. (೧೧:೧೩೧).

**ಸಂಸಾರಹೇಯಸ್ಥಲ :** ಮನುಷ್ಯನಿಗೆ ತಾನು ನಿಜವಾಗಿಯೂ ಶಿವಾಂಶಿಕನೆಂಬುದು ಮರೆತು ಹೋಗಿದೆ. ಈ ಮರೆವಿನಿಂದಾಗಿ ಅವನಿಗೆ ತಾನು ಪ್ರತ್ಯೇಕವ್ಯಕ್ತಿಯೆಂದೂ, ದೇಹೇಂದ್ರಿಯಾದಿಗಳೇ ಮುಖ್ಯವೆಂದೂ ತಿಳಿದು, ಅವುಗಳನ್ನು ತೃಪ್ತಿಪಡಿಸಲು ಅನೇಕ ರೀತಿಯ ಕರ್ಮಗಳನ್ನು ಮಾಡುತ್ತಾನೆ; ಇವುಗಳ ಫಲಗಳನ್ನು ಭೋಗಿಸಲು ಮತ್ತೊಂದು

ಜನ್ಮವನ್ನೆತ್ತಿ, ಆ ಜನ್ಮದಲ್ಲೂ ಅಂಥವೇ ಕರ್ಮಗಳನ್ನು ಮಾಡಿ, ಮತ್ತೆ ಮುಂದಿನ ಜನ್ಮದಲ್ಲಿ ಅವುಗಳ ಫಲಗಳನ್ನು ಭೋಗಿಸುತ್ತಾನೆ. ಹೀಗೆ ಹುಟ್ಟು, ಕರ್ಮ, ಕರ್ಮಫಲದ ಭೋಗ, ಸಾವು ಇವುಗಳ ಬಂಧನಕ್ಕೆ ಅಥವಾ ಸಂಸಾರಕ್ಕೆ ಸಿಕ್ಕಿಕೊಳ್ಳುತ್ತಾನೆ. ತನ್ನ ನೈಜ ಸ್ವರೂಪದ ಬಗ್ಗೆ ಅರಿವು ಮೂಡಿದಾಗ ಹಾಗೂ ಸಂಸಾರದ ಬಗ್ಗೆ ತಿರಸ್ಕಾರ ಮೂಡಿದಾಗ, ಅದನ್ನು ದ್ವೇಷಿಸಲು ಪ್ರಾರಂಭಿಸುತ್ತಾನೆ. ಸಂಸಾರವನ್ನು ಹೀಗೆ ತುಚ್ಛವಾಗಿ ಕಾಣುವವನ ಮಾನಸಿಕ ಸ್ಥಿತಿಗೆ ಸಂಸಾರಹೇಯಸ್ಥಲವೆಂದು ಹೆಸರು.

**ಸಂಸಾರಿ :** ಸಂಸಾರ ಬಂಧನಕ್ಕೆ ಸಿಕ್ಕಿಹಾಕಿಕೊಂಡವನು. (ನೋಡಿ : **ಸಂಸಾರ**)

**ಸಂಸಿದ್ಧಿಯಿಲ್ಲದವನು :** ಲಿಂಗಾಂಗ ಸಾಮರಸ್ಯವನ್ನು ಸಾಧಿಸಿದವನು ಮತ್ತೇನನ್ನೂ ಸಾಧಿಸಬೇಕಾಗಿಲ್ಲವಾದುದರಿಂದ ಅವನು ಸಂಸಿದ್ಧಿಯಿಲ್ಲದವನು (೫:೭೮೫).

**ಸಕಲ :** ಕಲಾಸಹಿತನಾದ ಪರಶಿವ. ಸೃಷ್ಟಿಯಾದಾಗ ಪರಶಿವನ ಶಕ್ತಿಯು ವ್ಯಕ್ತವಾಗುತ್ತದೆ. ಆಗ ಶಿವನು ಸಕಲನೆನಿಸಿಕೊಳ್ಳುತ್ತಾನೆ. (೨:೧೨೭೨)

**ಸಕಲ ಕರಣ :** ಎಲ್ಲ (ನಾಲ್ಕು) ಅಂತಃಕರಣಗಳು. (ಮನಸ್ಸು, ಬುದ್ಧಿ, ಅಹಂ, ಚಿತ್ತ - ೩:೧೩೯೧)

**ಸಕಲ ಸಂಸಾರ ವೇದಿಗಳ ಶೇಷ ಸಮರ್ಪಣೆ :** ಪರಮಾರ್ಥ ಸತ್ಯವನ್ನು ತಿಳಿಯದೆ ಶಾಸ್ತ್ರ ಮುಂತಾದ ಸಂಸಾರಕ್ಕೆ ಸಂಬಂಧಿಸಿದವುಗಳನ್ನು ಮಾತ್ರ ತಿಳಿದವರು ಲಿಂಗ ಮತ್ತು ತಮ್ಮನ್ನು ಬಿಟ್ಟು ಉಳಿದುದನ್ನು ಅರ್ಪಿಸುವುದು. ಹೀಗೆ ಮಾಡಿದರೆ ಪೂರ್ಣ ಭಕ್ತಿ ತೋರಿಸಿದಂತಾಗುವುದಿಲ್ಲ. (೮:೧೨೬)

**ಸಕಲೇಂದ್ರಿಯ :** ಎಲ್ಲ ಇಂದ್ರಿಯಗಳು, (ಕಣ್ಣು, ಕಿವಿ, ಮೂಗು, ಚರ್ಮ, ನಾಲಗೆ ಎಂಬ ಐದು ಜ್ಞಾನೇಂದ್ರಿಯಗಳು ಮತ್ತು ಪಾದ, ಪಾಯು, ವಾಕ್ಕು, ಗುದ ಮತ್ತು ಗುಹ್ಯ ಎಂಬ ಐದು ಕರ್ಮೇಂದ್ರಿಯಗಳು).

**ಸಕಲೇಂದ್ರಿಯ ಮುಖದಲ್ಲಿ ಮೋಹಿ :** ಅಂಗನು ತನ್ನ ಪ್ರತಿಯೊಂದು ಇಂದ್ರಿಯವೂ ಪರಶಿವನ ಬಾಯೆಯೆಂದು ತಿಳಿದು, ಅವನಿಗೋಸ್ಕರ ತಾನು ತಿನ್ನಬೇಕು, ಅವನಿಗೋಸ್ಕರ ತಾನು ನೋಡಬೇಕು, ಎಂದು ಮುಂತಾಗಿ ಪರಶಿವನಲ್ಲಿ ಮೋಹಿಯಾಗಿರುವವನು. (೫:೧೯)

**ಸಕಾಯಮುಖದಲ್ಲಿ ಅಕಾಯ ಪ್ರತಿಬಂಬಿಸುವುದು :** ಸಕಾಯ ಮುಖವೆಂದರೆ ಕಾಯವುಳ್ಳವನು ಎಂದರ್ಥ; ಆದರೆ ಅಂಥಮುಖ ಅಕಾಯ (ಕಾಯವಿಲ್ಲದ ಪರಶಿವ)ನನ್ನು ಪ್ರತಿಬಿಂಬಿಸುವಂತಿರಬೇಕು; ಅಂದರೆ ಅವನು ಪರಶಿವನಲ್ಲಿ ಲೀಯವಾದವನಿರಬೇಕು. (೩:೩೯೮)

**ಸಕೀಲ :** ೧. ರಹಸ್ಯ. (೮:೧೧೧೫), ೨. ಸಕೀಲ ಸಂಬಂಧ. (ನೋಡಿ : **ಇನ್ನೂರ ಹದಿನಾರು ಸಕೀಲ**)

**ಸಗುಣ :** ಗುಣವುಳ್ಳ ಪರಶಿವ. ಪರಶಿವನಿಗೆ ಅನೇಕ ಗುಣಗಳಿವೆ. ಪ್ರಪಂಚವನ್ನು ಸೃಷ್ಟಿಸುವ, ರಕ್ಷಿಸುವ ಮತ್ತು ಸಂಹರಿಸುವ ಶಕ್ತಿಯಿದೆ, ಜನರನ್ನು ಅವರವರ ಕರ್ಮಗಳಿಗೆ ತಕ್ಕಂತೆ ಶಿಕ್ಷಿಸುವ ಅಥವಾ ಅನುಗ್ರಹಿಸುವ ಶಕ್ತಿ ಇದೆ. ಹೀಗೆ ಶಕ್ತಿ ಎಂಬ ಗುಣ ಅವನಿಗಿದೆ. ಅಲ್ಲದೆ, ಅವನು ಸತ್, ಚಿತ್, ಆನಂದ, ನಿತ್ಯ ಮತ್ತು ಪರಿಪೂರ್ಣ. ಶಂಕರಾಚಾರ್ಯರ ಪರಬ್ರಹ್ಮನೂ ಸತ್, ಚಿತ್, ಆನಂದ, ನಿತ್ಯ ಮತ್ತು ಅನಂತನೇ ಆದರೂ, ಅವನಿಗೆ ಯಾವ ರೀತಿಯ ಶಕ್ತಿಯೂ ಇಲ್ಲವಾದುದರಿಂದ ಅವನು ನಿರ್ಗುಣ.

ಜಡಜಗತ್ತನ್ನೂ, ಜೀವಿಗಳಿಗೆ ಬುದ್ಧಿ, ಮನಸ್ಸು, ದೇಹ, ಇತ್ಯಾದಿಗಳನ್ನೂ ಉಂಟುಮಾಡುವ ಶಕ್ತಿಯು ಶಿವನ ಗುಣ (ವಿಶೇಷಣ) ವಾದರೂ, ಅವನು ಅದಕ್ಕೆ ಅತೀತವಾಗಿ ನಿಯಂತ್ರಿಸುತ್ತಾನಾದ್ದರಿಂದ, ಅವನು ಅದಕ್ಕೆ ಅಧೀನನಲ್ಲ, ಶಕ್ತಿಯೇ ಅವನಿಗೆ ಅಧೀನ.

**ಸಗುಣ ನಿರ್ಗುಣ :** ಶಂಕರಾಚಾರ್ಯರ ಚಿದದ್ವೈತದ ಪ್ರಕಾರ ಸತ್, ಚಿತ್, ಆನಂದನೇ ಪರಮ ಸತ್ಯ ಅಥವಾ ಪರಬ್ರಹ್ಮ. ಇಂಥ ಪರಬ್ರಹ್ಮನಿಗೆ ಯಾವುದೇ ರೀತಿಯ ಆಕಾರ (ದೊಡ್ಡದು, ಸಣ್ಣದು) ಯಾವುದೇ ರೀತಿಯ ಗುಣಗಳಾಗಲಿ (ಕೆಂಪು, ಕಪ್ಪು ಇತ್ಯಾದಿ) ಇಲ್ಲ. ಈ ಕಾರಣದಿಂದ ಅವನನ್ನು ನಿರ್ಗುಣ, ನಿರಾಕಾರ ಬ್ರಹ್ಮನೆಂದು ಕರೆಯುತ್ತಾರೆ. ಶಂಕರಾಚಾರ್ಯರ ಪ್ರಕಾರ ಈ ರೀತಿಯ ಚಿತ್‌ಸ್ವರೂಪನಾದ ನಿರ್ಗುಣ ಬ್ರಹ್ಮ ಮಾತ್ರ ಸತ್ಯ, ಜಗತ್ತೂ, ಜಗತ್ತನ್ನು ಸೃಷ್ಟಿಸಿದ ಈಶ್ವರನೂ, ಜೀವಗಳೂ ಅಸತ್ಯ. ಅವಿದ್ಯೆಯ ದೆಸೆಯಿಂದಾಗಿ ನಾವು ಈಶ್ವರನು (ಸಗುಣ ಬ್ರಹ್ಮನು) ಜಗತ್ತನ್ನು ಸೃಷ್ಟಿಸುತ್ತಾನೆಂದು ಭ್ರಮಿಸುತ್ತೇವೆ. ವಾಸ್ತವವಾಗಿ ಜಗತ್ತೂ ಇಲ್ಲ, ಜಗತ್ತನ್ನು ಸೃಷ್ಟಿಸಬೇಕಾದ ಈಶ್ವರನೂ ಇಲ್ಲ. ಕತ್ತಲಲ್ಲಿ ಹಗ್ಗವು ಹಾವಿನಂತೆ ಹೇಗೆ ಕಾಣುತ್ತದೆಯೋ ಹಾಗೆಯೇ ಅಜ್ಞಾನಿಗಳಿಗೆ ನಿರ್ಗುಣ ಬ್ರಹ್ಮನೇ ಜಗತ್ತಾಗಿ ಕಾಣುತ್ತದೆ. ಆದರೆ ವಚನಕಾರರ ಪ್ರಕಾರ, ಪರಶಿವನು ಮೊದಲು ಅಂದರೆ ಶೂನ್ಯಸ್ಥಿತಿಯಲ್ಲಿರುವಾಗ, ನಿರ್ಗುಣನಾಗಿರುತ್ತಾನೆ ಹಾಗೂ ಅವನೇ ಸೃಷ್ಟಿ ಮಾಡಿದಾಗ ಸಗುಣನಾಗುತ್ತಾನೆ. ಶಂಕರಾಚಾರ್ಯರ ಪ್ರಕಾರ ಪರಬ್ರಹ್ಮನನ್ನು ನೋಡಿದವರಿಗೆ ಜಗತ್ತು ಕಾಣುವುದಿಲ್ಲ. ಅವರಿಗೆ ಕಾಣುವುದೆಲ್ಲ ನಿರ್ಗುಣ ಬ್ರಹ್ಮನೇ, ಅದೇ ರೀತಿ ಜಗತ್ತನ್ನು ಕಾಣುವವರಿಗೆ ನಿರ್ಗುಣ ಬ್ರಹ್ಮ ಕಾಣುವುದಿಲ್ಲ. ಹೀಗೆ ಒಂದೇ ವಸ್ತುವನ್ನು ಎರಡು ಕೋನಗಳಿಂದ - ಅವಿದ್ಯೆಯಿಂದಾಗಿ ವ್ಯಾವಹಾರಿಕ ಕೋನದಿಂದ ಮತ್ತು ಜ್ಞಾನ ಪ್ರಾಪ್ತಿಯಿಂದಾಗಿ ಪಾರಮಾರ್ಥಿಕ ದೃಷ್ಟಿಯಿಂದ - ನೋಡಲು ಸಾಧ್ಯವಿದೆಯೇ ಹೊರತು, ವಾಸ್ತವಿಕವಾಗಿ ಏಕಕಾಲದಲ್ಲಿ ಎರಡು ಸತ್ಯಗಳಿಲ್ಲ. ಆದರೆ ವಚನಕಾರರ ಪ್ರಕಾರ, ಒಬ್ಬನೇ ಪರಶಿವನು ವಾಸ್ತವಿಕವಾಗಿ ಒಂದು ಕಾಲದಲ್ಲಿ

ಶೂನ್ಯದಂತೆ, ಮತ್ತೊಂದು ಕಾಲದಲ್ಲಿ ಸಗುಣಬ್ರಹ್ಮನಂತೆ, ಹಾಗೂ ಕೆಲವು ವೇಳೆ ಜಗತ್ತಿನಂತೆ ಕಾಣುತ್ತಾನೆ. ಶಿವ ಜಗವಾಗಲೂ ಬಲ್ಲ, ಜಗವಾಗದಿರಲೂ ಬಲ್ಲ. ಆದರೆ ಇವೆಲ್ಲ ಅವನ ವಿವಿಧ ಅವಸ್ಥೆಗಳೇ ವಿನಾ, ನಮ್ಮ ವ್ಯಕ್ತಿನಿಷ್ಠ ಭ್ರಮೆಗಳಲ್ಲ. (೧೧:೨೩)

**ಸಗುಣಾನಂದ ಸನ್ನಿಹಿತ ಶರಣ :** ಅನುಭಾವದಲ್ಲಿ ಸಗುಣ ಪರಶಿವನಲ್ಲಿ ಬೆರೆತು ಆನಂದ ಪಡೆಯುವ ಶರಣನು ಪರಶಿವನು ಎಲ್ಲೆಲ್ಲಿಯೂ ಇದ್ದಾನೆಂದೂ, ಪರಶಿವನೆ ಜಗತ್ತಾಗಿ (ಸಾಕಾರ ಮತ್ತು ಸಗುಣನಾಗಿ) ತೋರುತ್ತಿದ್ದಾನೆಂದು ತಿಳಿದು ಜಗತ್ತೆಂಬ ಶಿವಲೀಲೆಯನ್ನು ನೋಡಿ ಆನಂದಿಸುತ್ತಾನೆ. ಅಂಥ ಶರಣನಲ್ಲೇ ಪರಶಿವನು ಸನ್ನಿಹಿತನಾಗಿದ್ದಾನೆ.

**ಸಗುಣಾರ್ಪಿತ :** ಆಧ್ಯಾತ್ಮಿಕ ಸಾಧನೆಯ ಪ್ರಥಮ ಹಂತದಲ್ಲಿರುವ ಸಾಧಕನು ಪರಶಿವನಿಗೆ ನೀರು, ವಿಭೂತಿ, ಹೂವು, ಹಣ್ಣು ಮುಂತಾದ ಬಾಹ್ಯವಸ್ತುಗಳನ್ನು ಅರ್ಪಿಸಿದಾಗ ಅವನಿಗೆ ಬಹಿರ್ಮುಖ ಸುಖವಾಗುತ್ತದೆ ಹಾಗೂ ಅವನು ಪರಶಿವನನ್ನು ಸಗುಣನೆಂದು ತಿಳಿದುಕೊಂಡಿದ್ದಾನೆಂದರ್ಥ. ಆ ರೀತಿಯ ಬಹಿರ್ಮುಖ ಸುಖವನ್ನು ಅರ್ಪಿಸುವುದು ಸಗುಣಾರ್ಪಿತ. (೧೨:೩೬೩).

**ಸತ್ಕುಲಜ (ಉತ್ತಮ ಕುಲಜ) :** ಸಾಂಪ್ರದಾಯಿಕ ಹಿಂದೂಗಳ ಪ್ರಕಾರ, ಬ್ರಾಹ್ಮಣ, ಕ್ಷತ್ರಿಯ ಕುಲದಲ್ಲಿ ಹುಟ್ಟಿದವನು ಸತ್ಕುಲಜ ನೆನಿಸಿಕೊಂಡರೆ, ವೀರಶೈವರ ಪ್ರಕಾರ, ಶಿವಭಕ್ತರೆಲ್ಲ ಸತ್ಕುಲಜರೇ; ಶಿವಸಂಸ್ಕಾರ ಆದವರೆಲ್ಲರೂ ಶ್ವಪಚ ಜಾತಿಯವರಾಗಿದ್ದರೂ ಶಿವಸಂಸ್ಕಾರವಾದವರೆಂಬ ಒಂದೇ ಕಾರಣಕ್ಕೆ ಸತ್ಕುಲಜರೆನಿಸಿಕೊಳ್ಳುತ್ತಾರೆ. ಶಿವಸಂಸ್ಕಾರವಿಲ್ಲದ ಬ್ರಾಹ್ಮಣ ಶ್ವಪಚನಿಗಿಂತ ಕೀಳು; ಎಂಬುದು ಕೆಲ ವಚನಕಾರರ ಅಭಿಪ್ರಾಯ. (೯:೯೬)

**ಸತ್‌ಕ್ರಿಯಾನಂದ :** ಅನುಭಾವವನ್ನು ಸಾಧಿಸಿದ ಶರಣನು ಮಾಡುವ ಕ್ರಿಯೆಗಳೆಲ್ಲ ಸತ್ಕ್ರಿಯೆಗಳೇ, ಹಾಗೂ ಅವನು ಎಲ್ಲವನ್ನೂ ಅರ್ಪಣ ಭಾವದಿಂದ ಮಾಡುವುದರಿಂದ, ಅವನಿಗೆ ಸಿಕ್ಕುವ ಪ್ರಸಾದವೆಲ್ಲವೂ ಆನಂದ; ಅಂದರೆ, ಅವನು ಯಾವುದನ್ನೂ ಪ್ರಯತ್ನಪೂರ್ವಕವಾಗಿ ಮಾಡದೆ ಸಹಜವಾಗಿ ಮಾಡಿ, ಫಲ ನೀಡುವ ಮುನ್ನವೇ ಆನಂದಿತವಾಗಿರುತ್ತಾನೆ (೧೨:೮೭೭).

**ಸತ್ಕ್ರಿಯಾವಧಾನ :** ಸಾಧಕನು ತಾನು ಪರಶಿವನಿಂದ ಭಿನ್ನವೆಂದು ತಿಳಿದು, ಹೆಚ್ಚಾಗಿ ಸತ್ಕ್ರಿಯೆಗಳಲ್ಲಿ ನಿರತನಾಗುತ್ತಾನೆ. ಸತ್ಕ್ರಿಯೆಗಳಿಂದ ಮಾತ್ರ ಪರಶಿವನ ಅನುಗ್ರಹವನ್ನು ಸಂಪಾದಿಸಲು ಸಾಧ್ಯವಾದುದರಿಂದ ಅವಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು (ಅವಧಾನವನ್ನು) ಕೊಡುತ್ತಾನೆ. ಇಲ್ಲಿ ಸತ್ಕ್ರಿಯೆ ಎಂದರೆ ಪೂಜೆ, ಮಂತ್ರಪಠನೆ, ಭಜನೆ ಮುಂತಾದ ಕ್ರಿಯೆಗಳು ಹಾಗೂ ಅಹಿಂಸೆ, ಸತ್ಯ, ಅಸ್ತೇಯ ಮುಂತಾದ ನೈತಿಕ ಕ್ರಿಯೆಗಳು (೧೪:೨೪೧೬).

**ಸತ್‌ಕ್ರೀವಂತ :** ಧಾರ್ಮಿಕ ಮತ್ತು ನೈತಿಕ ಕ್ರಿಯೆಗಳನ್ನು ಮಾಡುವವನು.

**ಸತ್ತು, ಚಿತ್ತು, ಆನಂದ :** ಪರಶಿವನು ಮೂಲಸ್ವರೂಪದಲ್ಲಿ ಪರಮ ಚಿತ್ತು ಆಗಿದ್ದಾನೆ. ಅವನಲ್ಲಿ ಅನೇಕ ಬದಲಾವಣೆಗಳಾದರೂ (ಉದಾ : ಅವನೆ ಜಗವಾದರೂ) ಅವನ ಮೂಲ ಸ್ವರೂಪದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಆದುದರಿಂದ ಅವನು ಸತ್. ಅವನು ಸ್ವಭಾವತಃ ಅನಂದವನ್ನು ಅನುಭವಿಸುವವನು. ಅವನ ಆನಂದಕ್ಕೆ ಅಡ್ಡಿಯುಂಟುಮಾಡುವ ಯಾವ ಕ್ರಿಯೆಯೂ ಎಂದೂ ಜರುಗುವುದಿಲ್ಲವಾದುದರಿಂದ ಅವನು ನಿತ್ಯಾನಂದ.

**ಸತ್ತು ಬೆರೆಸುವುದು :** ಸತ್ತ ನಂತರ ಆತ್ಮ ಪರಮಾತ್ಮನಲ್ಲಿ ಬೆರೆಯುವುದು : ವಿದೇಹ ಮುಕ್ತಿ, ಅಥವಾ ಸಾಯುಜ್ಯ. ಬಸವಣ್ಣನವರ ಪ್ರಕಾರ, 'ಸತ್ತು ಬೆರೆಸಿಹೆನೆಂದಡೆ, ಕಬ್ಬಿನ ತುದಿಯ ಮೆಲಿದಂತೆ' (೧:೯೨೪). ವಚನಕಾರರು ಜೀವನ್ಮುಕ್ತಿಯೇ ಇದಕ್ಕಿಂತ ಮೇಲೆಂದು ಹೇಳುತ್ತಾರೆ.

**ಸತ್ಯ :** ಇದಕ್ಕೆ ವಚನಗಳಲ್ಲಿ ಕನಿಷ್ಠ ಮೂರು ಅರ್ಥಗಳಾದರೂ ಇವೆ.

೧. ಹೇಳಿದ ಮಾತಿಗೆ ತಕ್ಕಂತೆ ನಡೆಯುವುದು ಸತ್ಯಶೀಲ. ಸತ್ಯಶೀಲವು ಸತ್ಯವನ್ನು ಮಾತ್ರ ಹೇಳುವುದನ್ನು ಒಳಗೊಳ್ಳುತ್ತದೆ.

೨. ಸತ್ಯದಿಂದ ಮಾಡುವ ಭಕ್ತಿ ಎಂಬಲ್ಲಿ (೯:೨೨೦) ಅದಕ್ಕೆ ನಿಜವಾದ ಭಕ್ತಿ ಎಂಬರ್ಥವಿದೆ.

೩. ಯಾವುದು ಒಂದು ಕ್ಷಣದಲ್ಲಿ ತೋರಿ, ಮತ್ತೊಂದು ಕ್ಷಣದಲ್ಲಿ ಕಾಣೆಯಾಗುತ್ತದೆಯೋ ಅದಕ್ಕೆ ಸತ್ತೆ (ಸತ್ಯ) ಇಲ್ಲ ಎನ್ನುವುದಾದರೆ, ಸತ್ಯವೆಂಬ ವಿಶೇಷಣ ಯಾವಾಗಲೂ ಇರುವ ಪರಮಾತ್ಮನಿಗೆ ಮಾತ್ರ ಸಲ್ಲುತ್ತದೆ (೯:೯೬).

**ಸತ್ಯಶುದ್ಧದೀಕ್ಷೆ :** ಬಂದುದೆಲ್ಲವೂ ಶಿವನ ಪ್ರಸಾದವೆಂದು ಅನುಭವಿಸುವುದೇ, ಸತ್ಯಶುದ್ಧ ದೀಕ್ಷೆ. ಎಲ್ಲ ದುರ್ಗುಣಗಳನ್ನೂ ವರ್ಜಿಸಿ,ಎಲ್ಲ ಸದ್ಗುಣಗಳನ್ನೂ ಸಂಪಾದಿಸಿ, ಲಿಂಗೈಕ್ಯ ಸುಖದಲ್ಲಿ ಮುಳುಗಿರುವುದು ಸತ್ಯಶುದ್ಧದೀಕ್ಷೆಯ ಲಕ್ಷಣ. (೧೦:೯೮೮)

**ಸತ್ಯಸಮರ್ಪಣ :** ನಿಜವಾದ ವಿರಕ್ತನು ಹೇಗಿರಬೇಕೆಂದರೆ, ಅಂದಂದಿಗೆ ಬಂದುದ ಕಂಡು ಹಿಗ್ಗದಿರಬೇಕು, ಹಾಗೂ ಬಾರದಿದುಕ್ಕೆ ಭ್ರಮೆಯಿಲ್ಲದಿರಬೇಕು. ಮುಕ್ತಿಯನ್ನರಸಿ ಅದು ಸಿಕ್ಕದಿದ್ದರೂ ಅವನು ವ್ಯಥೆಗೊಳಗಾಗಬಾರದು. ಅವನು ಎಲ್ಲವನ್ನೂ (ಸುಖ ದುಃಖಗಳನ್ನೂ) ಶಿವನಿಗರ್ಪಿಸಿರುವುದರಿಂದ, ಅವನ ಸಮರ್ಪಣೆಯನ್ನು ಸತ್ಯ ಸಮರ್ಪಣವೆಂದು ಕರೆಯಬೇಕು (೮:೧೯೨೩).

**ಸದಮಲಸುಖ :** ನಮ್ಮ ಎಲ್ಲ ಇಂದ್ರಿಯ ಸುಖಗಳೂ ಒಂದಲ್ಲ ಒಂದು ರೀತಿಯಲ್ಲಿ ದೋಷಪೂರಿತವಾಗಿವೆ. ಎಲ್ಲವೂ ಕ್ಷಣಿಕವೇ ಆಗಿರುವುದರಿಂದ, ಅವುಗಳಲ್ಲಿ ಕೆಲವಾದರೂ ನಿರಂತರವಾಗಿರಬಾರದಿತ್ತೇ ಎಂಬ ದುಃಖ ನಮಗೆ ಉಂಟಾಗುತ್ತದೆ; ಮತ್ತೆ ಕೆಲವು ವೇಳೆ ನಾವು ಸುಖ ಪಡುತ್ತಿರುವಾಗಲೇ ಈ ಸುಖ ಇನ್ನೊಂದು ಕ್ಷಣವಾದಮೇಲೆ ಮುಗಿದು

ಹೋಗುವುದಲ್ಲಾ ಎಂದು ದುಃಖಿಸುತ್ತೇವೆ. ನಮ್ಮ ಸುಖಗಳೆಲ್ಲಾ ಬಹಳ ದುಃಖದನಂತರ (ಯಾತನಾಯುಕ್ತ ಶ್ರಮದ ನಂತರ) ಬಂದವುಗಳಾಗಿರುತ್ತವೆ. ಹೀಗೆ ನಮ್ಮ ಇಂದ್ರಿಯ ಸುಖಗಳಲ್ಲಿ ದುಃಖ ಮಿಶ್ರಿತವಾಗಿರುವುದರಿಂದ, ಅವಾವೂ ಅಮಲ ಸುಖವಲ್ಲ. ಆದರೆ ಲಿಂಗಾಂಗ ಸಾಮರಸ್ಯದಿಂದೊಗುವ ಸುಖವು ನಿಜವಾದ, ಅಮಲವಾದ ಸುಖವು (ಸದ್ ಅಮಲ ಸುಖ) (೩:೧೫೬೨).

**ಸದಾಚಾರ :** ಪಂಚಾಚಾರಗಳಲ್ಲಿ ಒಂದು (ನೋಡಿ : **ಪಂಚಾಚಾರ**)

**ಸದಾಶಿವ :** ಸಾದಾಖ್ಯಗಳಲ್ಲಿ ಒಂದು (ನೋಡಿ : **ಸಾದಾಖ್ಯ, ಅಧಿದೇವತೆಗಳು**).

**ಸದ್ಗುಣಗಂಧಪ್ರಸಾದ :** ದೀಕ್ಷೆಯ ಸಮಯದಲ್ಲಿ ಗುರುವು ಶಿಷ್ಯನಿಗೆ ಕೊಡುವ ನಿರ್ಮಾಲ್ಯಗಂಧವೇ, ಶಿಷ್ಯನಿಗೆ ಸದ್ಗುಣಗಂಧ ಪ್ರಸಾದ (೧೧:೧೦೨೩).

**ಸದ್ಭಕ್ತಿ :** ದೋಷವಿಲ್ಲದ, ನಿಷ್ಠಾಯುಕ್ತ ಭಕ್ತಿ ಎಂಬುದು ಇದರ ಸಾಮಾನ್ಯ ಅರ್ಥವಾದರೂ, ಅನೇಕ ವೇಳೆ ಇದು ಶ್ರದ್ಧಾಭಕ್ತಿಯ ಪರ್ಯಾಯ ಪದವೆಂಬಂತೆ ಬಳಸಲ್ಪಟ್ಟಿದೆ.

**ಸದ್ಭಾವಲೇಪ ಗ್ರಾಹಕ ಐಕ್ಯ :** ಐಕ್ಯಸ್ಥಲದ ಸಾಧಕನು ಆತ್ಮ ಎಂಬ ತನ್ನ ಅಂಗದಲ್ಲಿರುವ ಸದ್ಭಾವ ಎಂಬ ಹಸ್ತದಿಂದ ಮಹಾಲಿಂಗದ ಬಾಯಿಯಾದ ನಿರ್ಭಾವಕ್ಕೆ ಬಯಲು ಅಥವಾ ನಿರ್ವಯಲು ಎಂಬುದನ್ನು ಅರ್ಪಿಸುತ್ತಾನೆ. ಅಂದರೆ, ತನ್ನ ಆತ್ಮದಲ್ಲೇ ಅವನು ಮಹಾಲಿಂಗವನ್ನೂ ಪ್ರತಿಷ್ಠಾಪಿಸಿರುವುದರಿಂದ, ಅವನ ಆತ್ಮದಲ್ಲಿನ ಬಯಲನ್ನು ಮಹಾಲಿಂಗಕ್ಕೆ ಅರ್ಪಿಸಿದಂತೆಯೇ. ಹೀಗೆ ಐಕ್ಯನು ತನ್ನ ಸದ್ಭಾವವನ್ನೂ ಲೇಪಿಸಿಕೊಂಡು ಮಹಾಲಿಂಗ ಗ್ರಾಹಕನಾಗಿರುವುದರಿಂದ ಅವನು ಸದ್ಭಾವ ಲೇಪೈಕ್ಯನೆನಿಸಿಕೊಳ್ಳುತ್ತಾನೆ.

**ಸದ್ಭಾವವಂತ :** ತನ್ನ ಅಂಗದಲ್ಲಿ (ಭಾವದಲ್ಲಿ) ಲಿಂಗವನ್ನು ಸ್ಥಾಪಿಸಿ, ತಾನೆಂಬ ಅಹಂಭಾವವನ್ನು ಮರೆತವನು (೭:೮೩).

**ಸದ್ಭಾವವಿಲ್ಲದ ಭಕ್ತಿ :** ಕೇವಲ ಇಷ್ಟಲಿಂಗ ಪೂಜೆ ಮಾಡಿ ಗುರುಜಂಗಮರಿಗೆ ಭಕ್ತಿ ತೋರಿಸಿ, ಅನೈತಿಕವಾಗಿ ನಡೆದುಕೊಂಡರೆ, ಅದು ಸದ್ಭಾವವಿಲ್ಲದ ಭಕ್ತಿಯಾಗುತ್ತದೆ (೮:೯೧೩).

**ಸದ್ಯೋಜ್ಯಾತ :** (ನೋಡಿ : **ಸಾದಾಖ್ಯ**)

**ಸದ್ವೀರ ಮಾಹೇಶ್ವರರು :** ಮಾಹೇಶ್ವರಸ್ಥಲದಲ್ಲಿರುವವರು (೮:೬೫೦).

**ಸನ್ನಹಿತ ಪ್ರಸಾದಿ :** ಸಾಧಾರಣ ಸಾಧಕರು ಲಿಂಗಕ್ಕೆ ವಸ್ತುಗಳನ್ನು ಅರ್ಪಿಸುವಾಗ ಲಿಂಗವನ್ನು ಮುಟ್ಟಿ ಪೂಜಿಸಿ, ವಸ್ತುಗಳನ್ನು ಮುಟ್ಟಿ ಅರ್ಪಿಸುತ್ತಾರೆ. ಇದರಿಂದ, ಅವರು ಲಿಂಗದಿಂದ ವಸ್ತುಗಳನ್ನು ದೂರವಿಟ್ಟಿದ್ದಾರೆ ಎಂದೂ, ತಾವು ಲಿಂಗದಿಂದ ಭಿನ್ನವೆಂದು ತಿಳಿದುಕೊಂಡಿದ್ದಾರೆಂದೂ ವ್ಯಕ್ತವಾಗುತ್ತದೆ. ಆದರೆ ಸನ್ನಹಿತ ಪ್ರಸಾದಿಯು ಬೇರೆ ವಸ್ತುಗಳನ್ನೂ ಅಲ್ಲದೆ, ತನ್ನ ಜ್ಞಾನೇಂದ್ರಿಯ, ಕರ್ಮೇಂದ್ರಿಯ ಮತ್ತು ಅಂತಃಕರಣ

ಮತ್ತು ಜೀವಗಳನ್ನೂ ಅರ್ಪಿಸುತ್ತಾನೆ. ಇವನ ಅರ್ಪಣೆ ಯಾವಾಗಲೂ ಮಾನಸಿಕವೇ ಹೊರತು ಇಂದ್ರಿಯಗೋಚರವಲ್ಲ (೮:೪೪೫).

**ಸನ್ನಹಿತ ಲಿಂಗ :** ಪರಶಿವ (ಲಿಂಗ) ಹೊರಗಿದ್ದಾನೆಂದು ತಿಳಿಯದೆ ತನ್ನೊಳಗೇ ಇದ್ದಾನೆಂದೂ, ತಾನು ಮಾಡುವುದೆಲ್ಲವೂ ಲಿಂಗಕ್ಕಾಗಿಯೇ ಎಂದು ತಿಳಿದುಕೊಂಡರೆ, ಲಿಂಗ ಸನ್ನಿಹಿತವಾಗಿದೆ ಎಂದರ್ಥ.

**ಸನ್ನಹಿತ ಸುಖಾರ್ಪಿತ :** ಆಧ್ಯಾತ್ಮಿಕವಾಗಿ ಹೆಚ್ಚಿನ ಸಾಧನೆಗೈದ ಸಾಧಕನು ತನ್ನ ಎಲ್ಲ ಅಂತಃಕರಣ ಬಾಹ್ಯಕರಣಗಳನ್ನೂ ಪರಶಿವನಿಗೆ ಅರ್ಪಿಸಿ, ಎಲ್ಲ ಬೇಕುಬೇಡಗಳನ್ನೂ ದೂರೀಕರಿಸಿ, ಬಂದುದೆಲ್ಲವೂ ಶಿವನ ಪ್ರಸಾದವೆಂದು ಸಮತಾಭಾವದಿಂದ ಪಡುವ ಸುಖವೇ ಸಮತಾಮುಖಸುಖ. ಪರಶಿವ ಹೊರಗಿಲ್ಲ, ತನ್ನಲ್ಲೇ ಇದ್ದಾನೆಂದು ಸನ್ನಹಿತವಾದ ಲಿಂಗಕ್ಕೆ ಅರ್ಪಿಸುವ ತೃಪ್ತಿಯೇ ಸನ್ನಹಿತ ಸುಖಾರ್ಪಿತ. (೧೨:೩೬೩).

**ಸಪ್ತಕುಲ ಪರ್ವತ :** ಇಡೀ ಬ್ರಹ್ಮಾಂಡವೇ ಸಂಗ್ರಹರೂಪದಲ್ಲಿ ಪಿಂಡಾಂಡ (ಮಾನವದೇಹವಾಗಿ) ಕಾಣುತ್ತದೆ. ಬ್ರಹ್ಮಾಂಡದಲ್ಲಿರುವ ಏಳು ಪರ್ವತಗಳು ಮಾನವ ದೇಹದಲ್ಲಿ ಎಲ್ಲೆಲ್ಲಿ ಇವೆ ಎಂಬುದಕ್ಕೆ ವಿವರ : ತ್ರಿಕೋಣೆಯಲ್ಲಿ ಮಹಾಮೇರು ಪರ್ವತ, ಅರ್ಧಕೋಣೆಯಲ್ಲಿ ಮಂದರ ಪರ್ವತ, ದಕ್ಷಿಣ ಕೋಣೆಯಲ್ಲಿ ಕೈಲಾಸ ಪರ್ವತ, ವಾಮಕೋಣೆಯಲ್ಲಿ ಹಿಮಾಲಯ ಪರ್ವತ, ದಕ್ಷಿಣ ಭಾಗದಲ್ಲಿ ಗಂಧಮಾದನ ಪರ್ವತ, ಊರ್ಧ್ವಭಾಗದಲ್ಲಿ ನಿಷಾಧಪರ್ವತ, ರೋಮಲೇಖೆಯಲ್ಲಿ ವಿಂಧ್ಯಪರ್ವತ. ಇದು ತನ್ನ ಕಲ್ಪಿತವಲ್ಲವೆಂದು ಸಾಧಿಸಲು ವಚನಕಾರನು ಈಶ್ವರೋವಾಚದ ಶ್ಲೋಕವನ್ನು ಉದ್ಧರಿಸುತ್ತಾನೆ (೧೩:೧೫೬೭).

**ಸಪ್ತದ್ವೀಪ :** ಮಾನವ ಶರೀರವು ಸಂಕ್ಷಿಪ್ತ ಬ್ರಹ್ಮಾಂಡವೆಂದೂ ಬ್ರಹ್ಮಾಂಡದಲ್ಲಿರುವ ಏಳು ದ್ವೀಪಗಳು ಮಾನವ ಶರೀರದಲ್ಲಿವೆಯೆಂದೂ ಸಾಧಿಸಲು ವಚನಕಾರನೊಬ್ಬನು ಈ ವಿವರಗಳನ್ನು ಕೊಡುತ್ತಾನೆ. ಅಸ್ಥಿಸ್ಥಾನದಲ್ಲಿರುವ ಜಂಬೂದ್ವೀಪ, ಮೇದಸ್ಥಾನದಲ್ಲಿ ಪ್ಲಕ್ಷದ್ವೀಪ, ಮಾಂಸಸ್ಥಾನದಲ್ಲಿ ಕುಶದೀಪ, ಶಿರಸ್ಥಾನದಲ್ಲಿ ಕ್ರೌಂಚದ್ವೀಪ, ತ್ವಚಸ್ಥಾನದಲ್ಲಿ ಶಾಲ್ಮಲೀದ್ವೀಪ, ರೋಮಸಂಚದಲ್ಲಿ ಗೋಮೇಧ ದ್ವೀಪ, ಇವೆ. ಇದು ತನ್ನ ಕಲ್ಪಿತವಲ್ಲವೆಂದು ತೋರಿಸಲು ವಚನಕಾರರು ಶ್ರೀ ಮಹಾಭಗವಾನ ಉವಾಚದಿಂದ ಶ್ಲೋಕವನ್ನು ಉದ್ಧರಿಸುತ್ತಾನೆ (೧೩:೧೫೬೮).

**ಸಪ್ತಧಾತು :** ಮಾನವ ಶರೀರವು ಏಳು ರೀತಿಯ ಧಾತುಗಳಿಂದಾಗಿದ್ದು, ಅವೆಲ್ಲವೂ ಶಕ್ತಿಯ ವಿವಿಧ ರೂಪಗಳಾಗಿವೆ. ಈ ಏಳು ಧಾತುಗಳೆಂದರೆ : ೧. ರಸ; ಇದು ಜೊಲ್ಲು, ಜಠರರಸ, ಇತ್ಯಾದಿಗಳಿಗೆ ಕಾರಣವಾದುದು, ೨. ರುಧಿರ, ೩. ಮಾಂಸ, ೪. ಮೇಧಸ್ಸು ೫. ಅಸ್ಥಿ ೬. ಮಜ್ಜೆ ೭. ಶುಕ್ಲ (೩:೨೫೨). ಕೆಲವು ವಚನಕಾರರ ಪ್ರಕಾರ, ಅಸ್ಥಿ, ಮಜ್ಜೆ, ಮಾಂಸ

ಮುಂತಾದ ಘನ ಪದಾರ್ಥಗಳು ಪೃಥ್ವಿತತ್ವದಿಂದಾಗಿವೆ; ರಕ್ತ, ಶುಕ್ಲ, ಮುಂತಾದ ದ್ರವವಸ್ತುಗಳೆಲ್ಲ ಅಪ್ ತತ್ವದಿಂದಾಗಿವೆ; ಇತ್ಯಾದಿ.

**ಸಪ್ತಮಲ :** ಆತ್ಮವನ್ನು ಆಧ್ಯಾತ್ಮಿಕವಾಗಿ ಮಲಿನ ಮಾಡಿ, ಶಿವನೊಂದಿಗೆ ಬೆರೆಯದಂತೆ ಮಾಡುವ ಏಳು ಮಲಗಳು. ಇವೆಂದರೆ : ಮೋಹ, ಮದ, ರಾಗ, ವಿಷಾದ, ತಾಪ, ಶೋಕ, ವೈಚಿಂತ್ಯ (ಇವುಗಳಲ್ಲಿ ಕೆಲವು ಅರಿಷಡ್ವರ್ಗದಲ್ಲಿ ಸೇರಿವೆ) (೧೧:೮೦೮).

**ಸಪ್ತವರ್ಣಗಳ ಪರಿಣಾಮಗಳು :** ಮನುಷ್ಯನ ದೇಹದಲ್ಲಿ ಏಳು ವರ್ಣಗಳಿದ್ದು, ಅವು ರಕ್ತಮಾಂಸದ ಕಣ್ಣುಗಳಿಗೆ ಕಾಣುವುದಿಲ್ಲ. ಆದರೆ ಅವು ವಿವಿಧ ಹಂತದ ಸಾಧಕನಿಗೆ ಕಾಣಿಸಿಕೊಳ್ಳುವುವು. ವಿವಿಧ ಚಕ್ರಗಳು ಜಾಗ್ರತವಾದಾಗ ವಿವಿಧ ಬಣ್ಣಗಳು ಕಾಣಿಸಿಕೊಳ್ಳುತ್ತವೆ. ಸಾಧನೆ ಇನ್ನೂ ಫಲಪ್ರದವಾಗದೆ ಇದ್ದಾಗ ಅವು ಮಾನವನ ವರ್ತನೆಯ ಮೇಲೆ ಕೆಲವು ಪರಿಣಾಮ ಮಾಡುತ್ತವೆ (೩:೧೧೨೪).

ಮೂಲಾಧಾರದಲ್ಲಿ ಪ್ರಧಾನ ಅಂಶ ಪೃಥ್ವಿತತ್ವ, ಅದರಲ್ಲಿ ಕಪಿಲ ವರ್ಣವಿದೆ. ಈ ವರ್ಣದಿಂದಾಗಿ ಮನುಷ್ಯನ ದೇಹದಲ್ಲಿ ಅಳುಕು ಉಂಟಾಗುತ್ತದೆ. ಸ್ವಾಧಿಷ್ಠಾನ ಚಕ್ರದಲ್ಲಿ ಅಪ್ಪುವಿದ್ದು, ಅದರಲ್ಲಿ ನೀಲವರ್ಣವಿದೆ. ಇದರಿಂದಾಗಿ ದೇಹ ನಡುಗುವುದು, ಮಣಿಪೂರಕ ಚಕ್ರದಲ್ಲಿ ಅಗ್ನಿ ತತ್ವವಿದ್ದು, ಅದರಲ್ಲಿ ಮಾಂಜಿಷ್ಟ ವರ್ಣವಿದೆ. ಇದರ ಪರಿಣಾಮವಾಗಿ ನಾವು ಕಣಸು ಕಾಣುತ್ತೇವೆ. ಅನಾಹತ ಚಕ್ರದಲ್ಲಿ ವಾಯು ಅಂಶಪ್ರಧಾನವಾಗಿದ್ದು, ಅದರಲ್ಲಿ (ಪೀತ) ಹಳದಿ ವರ್ಣವಿರುತ್ತದೆ. ಇದರ ಪರಿಣಾಮವಾಗಿ ದೇಹದ ಒಳಗಡೆ ಒತ್ತು ಉಂಟಾಗುತ್ತದೆ. ವಿಶುದ್ಧಿ ಚಕ್ರದಲ್ಲಿ ಆಕಾಶ ತತ್ವ ಪ್ರಧಾನವಾಗಿದ್ದು, ಅದರಲ್ಲಿ ಕಪ್ಪು ವರ್ಣವಿದೆ. ಇದರ ಪ್ರಾಬಲ್ಯದಿಂದಾಗಿ ನಮಗೆ ಗೊಂದಲ ಉಂಟಾಗಿ, ದೇಹವು ತತ್ತರಿಸುತ್ತದೆ. ಆಜ್ಞಾಚಕ್ರದಲ್ಲಿ ಚಂದ್ರನಿದ್ದು, ಅದರಲ್ಲಿ ಶ್ವೇತವರ್ಣವಿದೆ. ಇದರಿಂದಾಗಿ ನಮಗೆ ಚಿಂತೆ ಉಂಟಾಗುತ್ತದೆ. ಬ್ರಹ್ಮರಂಧ್ರದಲ್ಲಿ ಸೂರ್ಯನಿದ್ದು, ಅದರಲ್ಲಿ ಗೌರವರ್ಣವಿದೆ. ಇದರಿಂದಾಗಿ ದೇಹದಲ್ಲಿ ಸಂಚಲನೆ ಉಂಟಾಗುತ್ತದೆ. ಸಾಧಕನು ತನ್ನ ಸಾಧನೆಯಿಂದಾಗಿ ಈ ಪರಿಣಾಮಗಳನ್ನು ನಿಯಂತ್ರಿಸಬೇಕೆಂಬುದು ಈ ವಚನದ ಸೂಚ್ಯ ಉಪದೇಶ (೩:೧೧೨೪).

**ಸಪ್ತವ್ಯಸನಗಳು :** ಆಧ್ಯಾತ್ಮಿಕ ಮಾರ್ಗದಿಂದ ವಿಚಲಿತನಾಗುವಂತೆ ಮನುಷ್ಯನನ್ನು ಏಳು ರೀತಿಯ ವ್ಯಸನಗಳು ಕಾಡುತ್ತವೆ. ಇವೆಂದರೆ: ತನುವ್ಯಸನ, ಮನವ್ಯಸನ, ಧನವ್ಯಸನ, ವಾಹನವ್ಯಸನ, ಉತ್ಸಾಹ ವ್ಯಸನ, ವಿಶ್ವವ್ಯಸನ, ಸೇವಕ ವ್ಯಸನ.

೧. ತನು ವ್ಯಸನವೆಂದರೆ ದೇಹಕ್ಕೆ ಸಂಬಂಧಿಸಿದ ವ್ಯಸನ. ತೆಳ್ಳಗಿದ್ದರೆ ದಷ್ಟಪುಷ್ಟವಾಗಿಲ್ಲವಲ್ಲ ಎಂಬ ಚಿಂತೆ, ದಪ್ಪಗಿದ್ದರೆ ತೆಳಗಿಲ್ಲವೆಂಬ ಚಿಂತೆ; ವಸ್ತ್ರ ಆಭರಣಗಳು ಮುಂತಾದ ಶೃಗಾರ ವಸ್ತುಗಳ ಬಗೆಗಿನ ಚಿಂತೆ (೩:೩೩೨).

೨. ಮನವ್ಯಸನವೆಂದರೆ, ಯಾವರೀತಿ ಕಳ್ಳತನ ಮಾಡಲಿ, ಯಾವ ಸುಳ್ಳು ಹೇಳಲಿ, ಎಂಬ ವ್ಯಸನ ಹಾಗೂ ಪರಸ್ತ್ರೀಯರ ಬಗೆಗಿನ ವ್ಯಸನ.

೩. ಧನವ್ಯಸನವೆಂದರೆ ಧನ, ರಾಜ್ಯ, ಇತ್ಯಾದಿಗಳನ್ನು ಬಯಸುವುದು.

೪. ವಾಹನ ವ್ಯಸನವೆಂದರೆ ಆನೆ, ಕುದುರೆ ಮುಂತಾದ ವಾಹನಗಳ ವ್ಯಸನ (ಆಧುನಿಕ ಕಾಲದಲ್ಲಾದರೆ, ಯಾಂತ್ರಿಕ ವಾಹನಗಳ ವ್ಯಸನ).

೫. ಉತ್ಸಾಹ ವ್ಯಸನವೆಂದರೆ ಪುತ್ರ, ಮಿತ್ರ, ಸ್ತ್ರೀಯರ ಸಂಗವ ಬಯಸುವುದು.

೬. ವಿಶ್ವವ್ಯಸನವೆಂದರೆ, ಮನೆ, ಹೊಲ, ರಾಜ್ಯ ಮುಂತಾದ ಕ್ಷೇತ್ರಗಳನ್ನು ಬಯಸುವುದು.

೭. ಸೇವಕ (ಸೇವನ) ವ್ಯಸನವೆಂದರೆ, ತಿನ್ನಲಾರೆ, ಕುಡಿಯಲಾರೆ, ತೊಡಲಾರೆ, ಎಂಬ ವ್ಯಸನ. ಆಧ್ಯಾತ್ಮಿಕ ಉದ್ದೇಶವನ್ನುಳ್ಳವನು ಈ ಏಳು ವ್ಯಸನಗಳಿಂದ ದೂರನಾಗಿ, ಲಿಂಗವ್ಯಸನಿಯಾಗಿರಬೇಕೆಂಬುದು ಚೆನ್ನಬಸವಣ್ಣನವರ ಉಪದೇಶ.

**ಸಪ್ತ ಸಮುದ್ರ :** ಮಾನವದೇಹವಾದ ಪಿಂಡಾಂಡವು ಸಣ್ಣ ರೂಪದ ಬ್ರಹ್ಮಾಂಡವೆಂದೂ, ಬ್ರಹ್ಮಾಂಡದಲ್ಲಿರುವ ಸಪ್ತ ಸಮುದ್ರಗಳು ಪಿಂಡಾಂಡದಲ್ಲಿಯೂ ಇವೆಯೆಂದೂ ಹೀಗೆ ಹೇಳುತ್ತಾನೆ :

ಮಾನವನ ಮೂತ್ರವೆ ಲವಣ ಸಮುದ್ರ, ಅಮೃತವೇ ಕ್ಷೀರ ಸಮುದ್ರ, ಶ್ಲೇಷ್ಮವೇ ದಧಿ ಸಮುದ್ರ, ಮಜ್ಜೆಯೆ ಘೃತ ಸಮುದ್ರ, ಮಾಂಸವೇ ರಸಸಮುದ್ರ, ಶೋಣಿತವೇ ಸುರೆಯ ಸಮುದ್ರ, ಲಂಬಿಕಾಸ್ಥಾನದ ಸ್ವಾದೋದಕವೇ ಸ್ವಾದೋದಕ ಸಮುದ್ರ (೧೩:೧೫೬೯).

**ಸಪ್ತಾಚಾರ :** ಕೆಲವು ವಚನಕಾರರು ಆಚಾರಗಳನ್ನು ಪಂಚಾಚಾರಗಳೆಂದೂ, ಸಪ್ತಾಚಾರಗಳೆಂದೂ, ಏಕಾದಶ ಆಚಾರಗಳೆಂದೂ ಐವತ್ತು ಆಚಾರಗಳೆಂದೂ ಸರ್ವಾಚಾರವೆಂದೂ ವರ್ಗೀಕರಿಸಿದ್ದಾರೆ. ಇಲ್ಲಿ ಸಪ್ತಾಚಾರವೆಂದರೆ, ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರ, ಸತ್ಯಾಚಾರ, ನಿತ್ಯಾಚಾರ, ಧರ್ಮಾಚಾರ ಮತ್ತು ಸರ್ವಾಚಾರ ಎಂಬ ಏಳು ಆಚಾರಗಳು.

ಕ್ರಿಯಾಚಾರ : ಪಂಚಾಚಾರ, ಅಷ್ಟಾವರಣ ಮತ್ತು ಷಟ್‌ಸ್ಥಲಗಳ ಆಚರಣೆಗಳಲ್ಲಿ ಸಾಧಕನು ಪರಿಣಿತನಾಗಬೇಕು. ಅಂದರೆ, ಅವುಗಳನ್ನು ಪ್ರಯತ್ನಪೂರ್ವಕವಾಗಿ ಮಾಡದೆ, ಸಹಜವಾಗಿ ಮಾಡುವಷ್ಟು ಪರಿಣಿತನಾಗಬೇಕು. ಹೀಗೆ ಮಾಡುವುದರಿಂದ ಕರ್ಮೇಂದ್ರಿಯಗಳು ತಮ್ಮ ಪೂರ್ವಾಶ್ರಯವನ್ನು ಕಳೆದುಕೊಂಡು ಶುದ್ಧವಾಗುವುವು. ಆದರೆ ಕ್ರಿಯೆಗಳು ಯಾಂತ್ರಿಕವಾಗಿರದೆ, ನಿಷ್ಠೆಯಿಂದ ಕೂಡಿರಬೇಕು.

ಜ್ಞಾನಾಚಾರ : ಶರಣರು ತಮ್ಮ ವಚನಗಳಲ್ಲಿ ಹೇಳಿರುವುದನ್ನು ವಿನಯಪೂರ್ವಕವಾಗಿ ಪಾಲಿಸಬೇಕು. ಗುರುಹಿರಿಯರಲ್ಲಿ ಭಕ್ತಿ, ಗುರುಹಿರಿಯರ ದರ್ಶನ-ಸ್ಪರ್ಶನ ಸಂತರ್ಪಣೆ ಮಾಡಿ, ಅವರ ಸಂಗದಿಂದುಂಟಾಗುವ ಆಧ್ಯಾತ್ಮಿಕ ಲಾಭಗಳನ್ನು ಪಡೆದುಕೊಳ್ಳಬೇಕು.

ಭಾವಾಚಾರ : ಭಾವಾಚಾರವೆಂದರೆ ಸ್ವ-ಪರೀಕ್ಷೆ. ನಮ್ಮ ನಮ್ಮ ಗುಣಾವಗುಣಗಳನ್ನು ನಾವೇ ನಮ್ಮ ಅನುಭವದಿಂದ ತಿಳಿದು, ಅವಗುಣಗಳನ್ನು ತ್ಯಜಿಸಬೇಕು. ಅದರಲ್ಲೂ ಆಧ್ಯಾತ್ಮಿಕ ಜೀವನಕ್ಕೆ ಅಡ್ಡಿಮಾಡುವ ಕಾಮ ಕ್ರೋಧ ಮುಂತಾದ ಚಿತ್ತವಿಕಾರಗಳನ್ನು ತ್ಯಜಿಸಬೇಕು, ಹಾಗೂ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕು.

ಸತ್ಯಾಚಾರ : ಕೊಟ್ಟ ಮಾತಿನಂತೆ ನಡೆಯುವುದು, ಬೋಧಿಸಿದಂತೆ ನಡೆಯುವುದು, ಸುಳ್ಳು ಹೇಳದೆ ಸತ್ಯವನ್ನಷ್ಟೇ ಹೇಳುವುದು ಸತ್ಯಾಚಾರವೆನಿಸಿಕೊಳ್ಳುತ್ತದೆ.

ನಿತ್ಯಾಚಾರ : ಇಲ್ಲದಿದುದಕ್ಕೆ ಆಶಿಸದೆ, ಬಂದುದನ್ನು ತಿರಸ್ಕರಿಸದೆ, ಏನೇ ಬಂದರೂ ಪ್ರಸಾದ ಭಾವದಿಂದ ಅಂದರೆ (ನಿತ್ಯ ಪ್ರಸಾದಿಯಂತೆ) ನಡೆದುಕೊಳ್ಳುವುದೇ ನಿತ್ಯಾಚಾರ.

ಧರ್ಮಾಚಾರ : ಪ್ರಸಾದ ಪಾದೋಕವನ್ನಲ್ಲದೆ ಮತ್ತೇನನ್ನೂ ಸ್ವೀಕರಿಸದಿರುವುದು, ಯಾವಾಗಲೂ ಶಿವಮಂತ್ರವನ್ನು ಜಪಿಸುವುದು ಧರ್ಮಾಚಾರವೆನಿಸಿಕೊಳ್ಳುತ್ತದೆ.

ಸರ್ವಾಚಾರ : ಮೇಲೆ ಹೇಳಿದ ಎಲ್ಲ ಆಚಾರಗಳನ್ನೂ (ಸರ್ವಾಚಾರವನ್ನು) ಲಿಂಗಾಂಗ ಸಾಮರಸ್ಯದ ಸಲುವಾಗಿ ಹಾಗೂ ಅದು ಸಿದ್ಧಿಸುವಂತೆ ಮಾಡುವುದೇ ಸರ್ವಾಚಾರ (೩:೯೪೫).

**ಸಪ್ಪೆಯ ಭಕ್ತಿ, ಸಪ್ಪೆಯ ನೇಮ :** ಸಿಹಿ, ಉಪ್ಪು, ಹುಳಿ, ಕಾರ, ಮುಂತಾದ ರುಚಿಯನ್ನು ಹೆಚ್ಚಿಸುವ ವಸ್ತುಗಳಿಲ್ಲದ ಆಹಾರವೇ ಸಪ್ಪೆಯ ಆಹಾರ. ಭಕ್ತನಾದವನು ರುಚಿಕರವಾದ ಆಹಾರವನ್ನು ವರ್ಜಿಸಿ, ಸಪ್ಪೆಯ ಆಹಾರವನ್ನೆ ಸ್ವೀಕರಿಸಿದರೆ ಅವನ ಭಕ್ತಿ ಹೆಚ್ಚುತ್ತದೆ ಎಂಬ (ಸುಳ್ಳು) ನಂಬಿಕೆಯಿಂದ ಮಾಡಿದ ಭಕ್ತಿ (೮:೪೫೩).

**ಸಮಕಳೆ :** ಒಂದೇ ರೀತಿಯಿರುವ ಸ್ವಲಕ್ಷಣ. ಪರಶಿವ ಹೇಗೆ ಚಿತ್‌ಸ್ವರೂಪ ಹಾಗೂ ಶುದ್ಧನೋ ಹಾಗೆಯೇ ಆಧ್ಯಾತ್ಮಿಕ ಧ್ಯೇಯವನ್ನು ಸಾಧಿಸಿದವನೂ ಚಿತ್‌ಸ್ವರೂಪ ಮತ್ತು ಶುದ್ಧ. ಹೀಗೆ ಸಮಕಳೆ ಇದ್ದಲ್ಲಿ ಮಾತ್ರ, ಜೀವ ಮತ್ತು ಶಿವ ಬೆರೆಯಬಲ್ಲರು - ನೀರು ನೀರು ಬೆರೆತಂತೆ.

**ಸಮತಾಗುಣ :** ತಾರತಮ್ಯವಿಲ್ಲದ ಮನಸ್ಸು. ಬೇಕು, ಬೇಡಗಳಿಲ್ಲದ, ಒಳ್ಳೆಯದು ಕೆಟ್ಟದು ಎಂದು ಭೇದ ಮಾಡದ,, ಎಲ್ಲ ಪರಿಸ್ಥಿತಿಯಲ್ಲೂ ಶಾಂತಚಿತ್ತದಿಂದ ಇರುವ ಮನಸ್ಸು.

**ಸಮತಾ ಪ್ರಸಾದಿ :** ಬಿಸಿಲಿರಲಿ, ನೆರಳಿರಲಿ, ಕಹಿ ಇರಲಿ, ಸಿಹಿ ಇರಲಿ, ಎಲ್ಲವನ್ನೂ ಸಮತಾಭಾವದಿಂದ ನೋಡಿ, ಅದನ್ನು ಪರಶಿವನಿಗರ್ಪಿಸಿ ಅನಂತರ ಅನುಭವಿಸುವವನು. ಅವನು ಸ್ವಾರ್ಥ ಭಾವವನ್ನು ಕಳೆದುಕೊಂಡಿರುವುದರಿಂದ ಅವನಿಗೆ ಪ್ರಪಂಚದಲ್ಲಿರುವುದೆಲ್ಲಾ ಅರ್ಪಿತಯೋಗ್ಯವೆನಿಸುತ್ತದೆ. ಏಕೆಂದರೆ, ಅವನು ಎಲ್ಲವೂ ಶಿವನ ಪ್ರಸಾದವೆಂದು ತಿಳಿದುಕೊಂಡಿರುವುದರಿಂದಲೂ, ಎಲ್ಲದೂ ಒಳ್ಳೆಯದೇ ಇರಬೇಕೆ ಹೊರತು, ಕೆಟ್ಟದಿರಲು ಸಾಧ್ಯವಿಲ್ಲ ಎಂದು ತಿಳಿದುಕೊಂಡಿರುವುದರಿಂದಲೂ, ಅವನಿಗೆ

ಬೇಕು ಬೇಡಗಳ ವ್ಯತ್ಯಾಸ ಇಲ್ಲವಾಗಿ, ಎಲ್ಲವನ್ನೂ ಶಿವನಿಗೆ ಸಮತಾಭಾವದಿಂದ ಅರ್ಪಿಸುತ್ತಾನೆ (೮:೪೪೫).

**ಸಮತೆಮುಖ ಸುಖವಿರಹಿತ :** ತನ್ನ ಅಂತಃಕರಣಗಳನ್ನೇ ಪರಶಿವನಿಗೆ ಅರ್ಪಿಸಿ, ಎಲ್ಲ ಬೇಕು ಬೇಡಗಳನ್ನೂ ಗೆದ್ದು, ಸುಖವೇ ಬರಲಿ, ದುಃಖವೇ ಬರಲಿ, ಚಿತ್ತ ಶಾಂತಿಯನ್ನು ಕಳೆದುಕೊಳ್ಳದ ಸಮಬುದ್ಧಿಯುಳ್ಳವನು ಎಲ್ಲವನ್ನೂ ಸಮತಾಭಾವದಿಂದ ಪರಶಿವನಿಗರ್ಪಿಸಿ ಸುಖಪಡುತ್ತಾನೆ. ಆ ಸುಖವೇ ಸಮತಾಸುಖ. ಅದನ್ನು ಮಾಡದವನು ಸಮತಾಮುಖ (ಒಳಹೊರಗೆಂಬ ಭೇದಭಾವವಿಲ್ಲದವನು) ಸುಖವಿರಹಿತ (೧೨:೩೬೩).

**ಸಮದೃಷ್ಟಿ :** ಎಲ್ಲವನ್ನೂ ಸಮಾನವೆಂಬಂತೆ ನೋಡುವುದು (೪:೮೫೭). (ನೋಡಿ : **ಸಮತಾಗುಣ, ಸಮತಾ ಪ್ರಸಾದಿ**).

**ಸಮಯಗುರು :** ಸದಾಚಾರಗಳನ್ನು ಕಲಿಸಿಕೊಡುವ ಗುರು (೮:೧೪೯೫).

**ಸಮಯದೀಕ್ಷೆ :** ಬಸವಾದಿ ಪ್ರಮಥರನ್ನು ಆದರ್ಶವಾಗಿಟ್ಟುಕೊಂಡು, ವೀರಶೈವರಾಚರಿಸುವ ಷಟ್‌ಸ್ಥಲಮಾರ್ಗದಲ್ಲಿ ನಡೆಯುತ್ತಾ, ಶರಣಗಣಗಳು ಕೊಟ್ಟ ಪ್ರಸಾದವನ್ನು ಸ್ವೀಕರಿಸಿ, ದುರ್ಮಾರ್ಗದಲ್ಲಿ ನಡೆಯುವ ಗುರು, ಭಕ್ತ, ಬಂಧು, ಬಳಗದವರನ್ನು ತ್ಯಜಿಸಿ, ಕಾಮಕ್ರೋಧಾದಿಗಳ ಬಲೆಗೆ ಸಿಕ್ಕದೆ, ತ್ರಿಕರಣ ಶುದ್ಧತೆಯಿಂದ ಅಷ್ಟಾವರಣವನ್ನು ಪಾಲಿಸುವುದೇ ಸಮಯದೀಕ್ಷೆ (೧೦:೯೭೨).

**ಸಮಯಪ್ರಸಾದ :** ಗುರುಲಿಂಗ ಜಂಗಮರನ್ನು ನೋಡಿ ಶ್ರದ್ಧೆಯಿಂದ ಪ್ರಸಾದ ಸ್ವೀಕರಿಸುವುದೇ ಸಮಯಪ್ರಸಾದ (೫:೧೧೦೪).

**ಸಮಯವ ಬಿಡುವುದು :** ಸಮಯಕ್ಕೆ ತಕ್ಕ ಆಚಾರಗಳನ್ನು ಮಾಡದೆ ನಿರ್ಲಕ್ಷಿಸುವುದು. (ಉದಾಹರಣೆಗೆ, ಬೆಳಿಗ್ಗೆ ಇಷ್ಟಲಿಂಗಪೂಜೆ ಮಾಡಬೇಕೆಂಬ ವಿಧಿಯನ್ನು ನಿರ್ಲಕ್ಷಿಸುವುದು) (೫:೬೦೯).

**ಸಮಯಾಚಾರ :** ಶುದ್ಧ ಮನಸ್ಸಿನಿಂದ ಮಾಡುವ ಆಚಾರ. ಇದರ ಜೊತೆಗೆ ಭಕ್ತನಲ್ಲಿ ಶ್ರದ್ಧೆ ಮತ್ತು ನಿಷ್ಠೆಯೂ ಇರಬೇಕು. ಗುರುಹಿರಿಯರಲ್ಲಿ ಭಯಭಕ್ತಿ ಇರಬೇಕು. ಅನ್ಯಮನಸ್ಕರಾಗಿ ಮಾಡುವ ಆಚಾರವೂ ಅಲಕ್ಷ್ಯದಿಂದ ಮಾಡುವ ಆಚಾರವೂ ಸಮಯಾಚಾರವೆನಿಸಿಕೊಳ್ಳುವುದಿಲ್ಲ.

**ಸಮರತಿ :** ಪರಸ್ಪರ ಪ್ರೀತಿ. ಭಕ್ತನು ಪರಶಿವನನ್ನು ಪ್ರೀತಿಸಿದಂತೆ, ಅವನ ಭಕ್ತಿಯಿಂದ ಸುಪ್ರೀತನಾದ ಪರಶಿವನು ಭಕ್ತನನ್ನು ಪ್ರೀತಿಸುತ್ತಾನೆ. ಆಗ ಭಕ್ತನು ತಾನು ಪಡುವ ಆನಂದವು ಪರಮಾತ್ಮನಿಗೆ ಅರ್ಪಿತವಾಗುತ್ತದೆಯೆಂದು ನಂಬುತ್ತಾನೆ.

**ಸಮರಸಸುಖ ಪರಿಣಾಮಿ :** ಐಕ್ಯಸ್ಥಲದ ಸಾಧಕನು ತನ್ನ ಸದ್ಭಾವ ಎಂಬ ಹಸ್ತದಲ್ಲಿ ಮಹಾಲಿಂಗವನ್ನು ಕಂಡು ಸಮರಸವೆಂಬ ಭಕ್ತಿಯನ್ನಾಚರಿಸುವಾಗ ಅವನಿಗೆ ಆಗುವ ಸುಖವೇ ಸಮರಸ ಸುಖ. ಸಮರಸ ಸುಖಪರಿಣಾಮಿಯಾದ ಆತ ಎಲ್ಲೆಲ್ಲೂ ಪರಶಿವನನ್ನೇ ಕಾಣುತ್ತಾನೆ.

**ಸಮರಸಾದ್ವೈತ :** ನದಿಯ ನೀರು ಮತ್ತು ಸಮುದ್ರದ ನೀರು ಎರಡೂ ನೀರೇ ಆಗಿರುವುದರಿಂದ ನದಿಯು ಸಮುದ್ರದಲ್ಲಿ ಬೆರೆತು ಒಂದಾಗಲು ಸಾಧ್ಯ. ಅದೇ ರೀತಿ ಅಂಗ (ಜೀವಾತ್ಮ) ಮತ್ತು ಲಿಂಗ (ಪರಮಾತ್ಮ) ಎರಡೂ ಚಿದ್ವಸ್ತುಗಳೇ (ಆತ್ಮಗಳೇ) ಆದುದರಿಂದ, ಅಂಗವು ಲಿಂಗದಲ್ಲಿ ಬೆರೆಯಲು ಸಾಧ್ಯ. ಜೀವನ ಭಾವವೂ, ಶಿವನ ಭಾವವೂ ಒಂದೇ ಆದುದರಿಂದ ಅಂತಹ ಐಕ್ಯಭಾವಕ್ಕೆ ಸಮರಸಾದ್ವೈತ ಎಂದು ಹೆಸರು. ಜೀವನಿಗೆ ಶಿವಸ್ವರೂಪ ಬರುತ್ತದೆಯೇ ಹೊರತು ಶಿವನೇ ಆಗುವುದಿಲ್ಲವೆಂಬುದು ಸಮರಸಾದ್ವೈತದ ಗಮನಾರ್ಹ ಅಂಶ (೫:೫೦೮).

**ಸಮಸುಖ :** ಶರಣಸ್ಥಲದ ಸಾಧಕನು ತನ್ನನ್ನು ಸತಿಗೂ ಪರಶಿವನನ್ನು ಪತಿಗೂ ಹೋಲಿಸಿಕೊಳ್ಳುತ್ತಾನೆ. ಸತಿಯು ತನ್ನನ್ನು ತನ್ನ ಪತಿಗೆ ಅರ್ಪಿಸಿಕೊಂಡಾಗ ತಾನು ಸುಖಪಡುವುದಲ್ಲದೆ, ತನ್ನ ಪತಿಯನ್ನು ಸುಖ ಪಡಿಸುತ್ತಾಳೆ.

**ಸಮಾಧಾನ ಪ್ರಸಾದಿ :** ಎಲ್ಲ ಬಾಹ್ಯವಸ್ತುಗಳನ್ನೂ, ತನ್ನ ಇಂದ್ರಿಯಾದಿ ಸರ್ವವನ್ನೂ ಮಾನಸಿಕವಾಗೇ ಲಿಂಗಕ್ಕೆ ಅರ್ಪಿಸಿ, ಬೇಕು ಬೇಡಗಳನ್ನು ದೂರವಾಗಿಸಿ, ಸುಖದು:ಖಗಳೇನೇ ಬಂದರೂ ಅದೆಲ್ಲ ಶಿವನ ಪ್ರಸಾದವೆಂದು ಸ್ವೀಕರಿಸಿ ಸದಾ ಸಮಾಧಾನದಿಂದ ಇರುವವನು (೮:೪೪೫).

**ಸಮಾಧಿ :** ಧ್ಯಾನದ ಉತ್ತುಂಗ. ಸಮಾಧಿಯಲ್ಲಿ ಧ್ಯಾನಿಯು ಪರಪ್ರಜ್ಞೆಯನ್ನೂ, ತಾನು ಪರಶಿವನಲ್ಲಿ ಒಂದಾಗಿರುವುದನ್ನೂ ಅನುಭವಿಸಿ, ಆನಂದಿಸಿ, ಅನಂತರ ಸ್ವಪ್ರಜ್ಞೆಯನ್ನೂ ಕಳೆದುಕೊಳ್ಳುತ್ತಾನೆ. ಸಮಾಧಿಯಿಂದ ಎಚ್ಚರವಾದಾಗ ಅವನಿಗೆ ತಾನು ಶಿವನೊಂದಿಗೆ ಒಂದಾದುದು ಜ್ಞಾಪಕಕ್ಕೆ ಬರುತ್ತದೆ. ಆದರೆ ಸಮಾಧಿಸ್ಥನಾಗಿರುವವನಿಗೆ ತನಗೇನಾಗುತ್ತಿದೆ ಎಂಬುದು ವರ್ಣನಾತೀತ.

**ಸಮ್ಯಗ್‌ಜ್ಞಾನ :** ಅನುಭಾವದ ಮೂಲಕ ಪಡೆದ ಜ್ಞಾನ. ಉದಾಹರಣೆಗೆ ದೇಹಕ್ಕಿಂತ ಭಿನ್ನವಾದ ಆತ್ಮವೊಂದಿದೆ, ಆ ಆತ್ಮನು ಶಿವಾಂಶಿಕನಾಗಿದ್ದಾನೆ, ಲಿಂಗಾಂಗ ಸಾಮರಸ್ಯದಲ್ಲಿ ನದಿಯು ಸಮುದ್ರದಲ್ಲಿ ಸೇರಿ ತನ್ನ ವೈಯುಕ್ತಿಕತೆಯನ್ನು ಕಳೆದುಕೊಂಡಂತೆ, ಆತ್ಮನು ಪರಶಿವನಲ್ಲಿ ಬೆರೆತು ತನ್ನ ವೈಯುಕ್ತಿಕತೆಯನ್ನು ಕಳೆದುಕೊಳ್ಳುತ್ತಾನೆ ಎಂಬ ಸತ್ಯಗಳು ಪ್ರತ್ಯಕ್ಷ ಅಥವಾ ಅನುಮಾನದಿಂದಾಗಲೀ ಪುಸ್ತಕ ಅಥವಾ ಗುರುಗಳಿಂದಾಗಲಿ ತಿಳಿದುಕೊಳ್ಳಲು ಬರುವುದಿಲ್ಲ.

**ಸಮ್ಯಗ್‌ಜ್ಞಾನಾನಂದ :** ಅನುಭಾವದ ಮೂಲಕ ಸಾಧಕನು ತಾನು ಶಿವಾಂಶಿಕನೆಂಬ ಸಮ್ಯಗ್‌ಜ್ಞಾನವನ್ನು ಪಡೆದಿದ್ದಾನೆ; ತಾನು ಪ್ರತ್ಯೇಕ ವ್ಯಕ್ತಿಯಲ್ಲ, ತಾನು ಪರಶಿವನ ಅಂಗ (ದೇಹ ಅಥವಾ ಭಾಗ) ಎಂದು ತಿಳಿದುಕೊಂಡಿರುವುದರಿಂದ, ತಾನು ಮಾಡಬೇಕಾದ ಯಾವ ಸ್ವಾರ್ಥಪರ ಕರ್ಮಗಳೂ ಇಲ್ಲವೆಂದೂ ಅವನು ತಿಳಿದಿದ್ದಾನೆ. ಲಿಂಗಾಂಗ ಸಂಯೋಗದ ಮೂಲಕವೂ, ತಾನು ಪಡೆದ ಸಮ್ಯಗ್ ಜ್ಞಾನದ ಮೂಲಕವೂ ಅವನು ಆನಂದಿತನಾಗಿರುವುದರಿಂದ, ಅವನನ್ನು ಸಮ್ಯಗ್‌ಜ್ಞಾನಾನಂದಶರಣನೆನ್ನಬೇಕಾಗುತ್ತದೆ (೧೨:೮೭೭).

**ಸಮ್ಯಗ್‌ಜ್ಞಾನಾವಧಾನ :** ಸಮ್ಯಗ್‌ಜ್ಞಾನವೆಂದರೆ ಸತ್ಯದ ಬಗೆಗಿನ ಜ್ಞಾನ. ಸಾಧಕನು ತನ್ನ ನಿಜಸ್ವರೂಪವೇನು, ಪರಮಾತ್ಮನ ಸ್ವರೂಪ, ಕ್ರಿಯೆ ಮತ್ತು ಅವಸ್ಥೆಗಳಾವುವು, ಮೋಕ್ಷವೆಂದರೇನು ಮುಂತಾದ ಸತ್ಯಗಳ ಬಗೆಗೆ ಜ್ಞಾನ ಪಡೆಯಬೇಕಾದುದು ಆವಶ್ಯಕ. ಸಮ್ಯಗ್ ಜ್ಞಾನವಿಲ್ಲದ ಆಧ್ಯಾತ್ಮಿಕ ಜೀವನ ಕುರುಡನ ಸಂಚಾರದಂತಾಗುತ್ತದೆ. ಸಮ್ಯಗ್ ಜ್ಞಾನವನ್ನು ಪಡೆದ ಸಾಧಕನು ತನ್ನ ಗುರಿಯನ್ನು ಹೇಗೆ ಸಾಧಿಸಬೇಕೆಂಬುದನ್ನು ತಿಳಿದುಕೊಳ್ಳುತ್ತಾನೆ (೧೪:೨೪೧೬).

**ಸಮ್ಯಗ್ ಪದವಿ :** ಸರಿಯಾದ ಪದವಿ, ಉನ್ನತ ಪದವಿ, ಮುಕ್ತಿ.

**ಸಯಧಾನ :** ಪ್ರಸಾದ. ಆದರೆ ವಚನ ೧:೧೧೫೩ ರಲ್ಲಿ ಸಯಧಾನ ಎಂಬ ಪದವನ್ನು ಅಲಂಕಾರಿಕವಾಗಿ ಬಳಸಲಾಗಿದೆ, ಹಾಗೂ ಅನುಭಾವಕ್ಕೆ ಸಂಬಂಧಿಸಿದಂತೆ ಬಳಸಲಾಗಿದೆ.

೧. ಕಾಲಮುಟ್ಟಲಮ್ಮದ ಸಯಧಾನ : ಯಾವುದೇ ಸಯಧಾನ (ಆಹಾರಪದಾರ್ಥ)ವು ಒಂದು ಕಾಲದಲ್ಲಿ ಪ್ರಾರಂಭವಾಗಿ, ಮತ್ತೊಂದು ಕಾಲದಲ್ಲಿ ಹಳಸಲು ಪ್ರಾರಂಭಿಸುತ್ತದೆ. ಆದರೆ ಸಾಮರಸ್ಯವೆಂಬ ಸಯಾಧಾನ ಕಾಲಾತೀತ.

೨. ನಮ್ಮ ಯೋಚನೆಗಳೆಲ್ಲವೂ ಕಲ್ಪನೆಗಳನ್ನೊಳಗೊಳ್ಳುತ್ತವೆ, ಆದರೆ ಸಾಮರಸ್ಯವು ಕಲ್ಪಿತವಿಲ್ಲದುದು. ಅದರಲ್ಲಿ ಭ್ರಮೆಯಿಲ್ಲ.

೩. ಅನಂತರತಿ : ಲಿಂಗಾಂಗ ಸಾಮರಸ್ಯಕ್ಕೆ ಕೊನೆಯೇ ಇಲ್ಲ. ಅದನ್ನು ಅನಂತ ರತಿ ಸುಖಕ್ಕೆ ಹೋಲಿಸಲಾಗಿದೆ.

**ಸರಹರಿದವನು :** ಹುಟ್ಟು ಸಾವುಗಳ ಮಾಲೆ (ಸರ) ಯನ್ನು ಹರಿದವನು, ಲಿಂಗೈಕ್ಯತೆ ಸಾಧಿಸಿದವನು (೮:೧೮೬).

**ಸರಹರಿದ ಸಂಬಂಧ :** ಹುಟ್ಟು ಸಾವುಗಳ ಮಾಲೆಯನ್ನು ಹರಿದು ಪರಶಿವನೊಂದಿಗೆ ಮಾಡಿದ ಸಂಬಂಧ (೭:೧೧೭೧).

**ಸರ್ವೇಂದ್ರಿಯಗಳ ಒಂದು ಮುಖವ ಮಾಡುವುದು :** ಪ್ರತಿಯೊಂದು ಇಂದ್ರಿಯವನ್ನೂ ಪರಶಿವನ ಪ್ರತ್ಯೇಕ ಬಾಯಿಯೆಂದು ತಿಳಿಯುವುದು ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಿದ

ಭಕ್ತನ ಕರ್ತವ್ಯವಾದರೂ, ಕೊನೆಯಲ್ಲಿ ಹಾಗೆ ತಿಳಿಯುವ ಬುದ್ಧಿಯೇ ನಿಜವಾದ ಬಾಯಿಯೆನಿಸಿಕೊಳ್ಳುತ್ತದೆ.

**ಸರ್ವಕರ್ತೃ :** ಎಲ್ಲವನ್ನೂ ಸೃಷ್ಟಿಸಿದ ಶಿವ. ಇಲ್ಲಿ ಎಲ್ಲ ಎಂಬ ಪದ ಕೇವಲ ಜಡವಸ್ತುಗಳಿಗೆ ಅನ್ವಯಿಸದೆ, ಪರಶಿವನ ಶಕ್ತಿಯ ವಿವಿಧ ರೂಪಗಳಾದ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಮುಂತಾದವುಗಳ ಅಧಿದೇವತೆಗಳಿಗೂ, ಅಂದರೆ, ಬ್ರಹ್ಮ, ವಿಷ್ಣು, ರುದ್ರ ಮುಂತಾದವರಿಗೂ ಅನ್ವಯಿಸುತ್ತದೆ (೯:೨೯೭).

**ಸರ್ವಜ್ಞ :** ಎಲ್ಲವನ್ನೂ ತಿಳಿದ ಪರಶಿವ. ಇಲ್ಲಿ ಎಲ್ಲ ಎಂಬ ಪದ ಇಲ್ಲಿ ಈಗಿರುವ ವಸ್ತು ಮತ್ತು ಘಟನೆಗಳಿಗಷ್ಟೇ ಅನ್ವಯಿಸದೆ, ಎಲ್ಲ ಕಾಲಗಳಲ್ಲಿಯೂ ಇರುವ ವಸ್ತುಗಳಿಗೆ ಮತ್ತು ಎಲ್ಲ ಕಾಲಗಳಲ್ಲಿ ನಡೆಯುವ ಘಟನೆಗಳಿಗೂ ಅನ್ವಯಿಸುತ್ತದೆ.

**ಸರ್ವಜ್ಞತ್ವಾನುಭಾವ ಪ್ರಕಾಶ :** ತನ್ನ ಅನುಭಾವದಲ್ಲಿ ಮಹಾಪ್ರಭೆಯನ್ನು ಅನುಭವಿಸುವ ಶರಣನು ಸರ್ವಜ್ಞತ್ವವನ್ನು ಪಡೆಯುತ್ತಾನೆ. ಚಿನ್ನವೊಂದನ್ನು ತಿಳಿದುಕೊಂಡರೆ ಅದರಿಂದಾದ ಅನೇಕ ಆಭರಣಗಳನ್ನೂ ಹೇಗೆ ತಿಳಿದುಕೊಂಡಂತಾಗುತ್ತದೆಯೋ, ಹಾಗೆ ಪರಶಿವನನ್ನು ಅನುಭಾವದಲ್ಲಿ ಸಾಕ್ಷಾತ್ಕರಿಸಿಕೊಂಡರೆ, ಅವನಿಂದಾದ ಪ್ರಪಂಚದ ಎಲ್ಲ ವಸ್ತುಗಳನ್ನು ಅರಿತುಕೊಂಡಂತೆಯೇ. ಇದೇ ಸರ್ವಜ್ಞತ್ವ. ಅಲ್ಲದೆ ತಾನು ಶರಣ, ಪ್ರಸಾದಲಿಂಗ ತನ್ನಿಂದ ಭಿನ್ನ ಎಂಬ ದ್ವೈತಭಾವ ಅವನಲ್ಲಿ ಇಲ್ಲವಾಗುತ್ತದೆ.

**ಸರ್ವನಿರ್ವಾಣಿ :** ಎಲ್ಲದರಿಂದಲೂ ಬಿಡುಗಡೆ ಪಡೆದವನು. ಇಲ್ಲಿ 'ಎಲ್ಲ' ಎಂಬುದು ಅಜ್ಞಾನ (ಮರೆವು), ಸಂಸಾರ ಬಂಧನ, ಮಲತ್ರಯಗಳ ದೋಷ ಮತ್ತು ಅವುಗಳ ಪರಿಣಾಮಗಳಾದ ಸಂಸಾರ ಬಂಧನವನ್ನುಂಟುಮಾಡುವ ಆಸೆಗಳು, ಬಹಳ ಹಿಂದಿನ ಅನೇಕ ಜನ್ಮಗಳ ಕರ್ಮಫಲಗಳು- ಎಲ್ಲವನ್ನೂ ಒಳಗೊಳ್ಳುತ್ತದೆ (೮:೧೧೨೧).

**ಸರ್ವಪ್ರೇರಕ :** ಎಲ್ಲ ವಸ್ತುಗಳೂ ಶಕ್ತಿಯಿಂದಾಗಿದ್ದು, ಆ ಶಕ್ತಿಯು ಜಡವಾದುದರಿಂದ, ಅದಕ್ಕೆ ಪ್ರೇರಣೆ ಅಥವಾ ಚಾಲನ ಶಕ್ತಿ ಶಕ್ತಿಯಲ್ಲದ ವಸ್ತುವಿನಿಂದ, ಅಂದರೆ, ಚಿತ್‌ಸ್ವರೂಪನಾದ ಪರಶಿವನಿಂದ ಬರಬೇಕು. ಆತ್ಮಗಳು ಚಿದ್ವಸ್ತುಗಳಾದರೂ ಅವುಗಳಿಗೂ ಸಹ ಪ್ರೇರಣೆ ಪರಶಿವನಿಂದಲೇ ಬರಬೇಕು. ಆದರೆ ಪರಶಿವ ಆತ್ಮರಿಗೆ ಈ ಕಾರ್ಯವನ್ನು ಮಾಡು, ಆ ಕಾರ್ಯವನ್ನು ಮಾಡಬೇಡ ಎಂಬ ವಿಶಿಷ್ಟ ಪ್ರೇರಣೆಗಳನ್ನು ನೀಡುವುದಿಲ್ಲ. ಯಾವುದೇ ಕಾರ್ಯ ಅಥವಾ ಚಿಂತನೆಗೆ ಬೇಕಾಗುವ ಮೂಲ ಪ್ರೇರಣೆ ಮಾತ್ರ ಪರಶಿವನಿಂದ ಬರುತ್ತದೆ. ಹೀಗೆ ಜಡ ಮತ್ತು ಅಜಡವಸ್ತುಗಳೆಲ್ಲಕ್ಕೂ ಅವನೇ ಪ್ರೇರಕವಾಮದರಿಂದ, ಅವನು ಸರ್ವಪ್ರೇರಕನೆನಿಸಿಕೊಳ್ಳುತ್ತಾನೆ. (೧೧:೫೨೮).

**ಸರ್ವಭಾವಜ್ಞ :** ಎಲ್ಲವನ್ನೂ ಸಮತಾಭಾವದಿಂದ ಕಾಣುವವನು. ಎಲ್ಲವೂ ಪರಶಿವನ ಶಕ್ತಿಯಿಂದಲೇ ಹುಟ್ಟಿವೆ ಎಂದ ಮೇಲೆ, ಕೆಲವು ಒಳ್ಳೆಯವು, ಕೆಲವು ಕೆಟ್ಟವು ಎಂದಿರಲು

ಸಾಧ್ಯವಿಲ್ಲ. ಆದುದರಿಂದ ಎಲ್ಲವನ್ನೂ ಪರಶಿವನ ಪ್ರಸಾದವೆಂದು ಸಮಭಾವದಿಂದ ಸ್ವೀಕರಿಸಬೇಕು, ಎನ್ನುತ್ತಾನೆ ಸರ್ವಭಾವಜ್ಞ (ಲ:೧೩೯೦).

**ಸರ್ವಭಾವಲೇಪ ಸಂಬಂಧಸ್ಥಲ :** ಅನುಭಾವದ ಮೂಲಕ ಐಕ್ಯಸ್ಥಿತಿಯನ್ನು ಪಡೆದು, ಅಂದರೆ, ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡು, ತನ್ನಿಂದ ಪರಶಿವನನ್ನೂ, ಪರಶಿವನಿಂದ ತನ್ನನ್ನೂ ಪ್ರತ್ಯೇಕಿಸಲಾರದಂತೆ ಬೆರೆತು, ಮುಕ್ತನಾಗಿರುವವನ ಸ್ಥಿತಿ ಹೇಗಿರುತ್ತದೆಯೆಂದರೆ, ಪರಶಿವನು ಹೇಗೆ ಎಲ್ಲ ವಸ್ತುಗಳಲ್ಲಿ ಅವ್ಯಕ್ತವಾಗಿ ಅಡಗಿರುತ್ತಾನೋ, ಹಾಗೆಯೇ ಐಕ್ಯನೂ ಸರ್ವವನ್ನೂ (ಸರ್ವವೂ ಆದ ಪರಶಿವನ್ನನ್ನು) ತನ್ನ ವ್ಯಕ್ತಿತ್ವಕ್ಕೆ ಲೇಪಿಸಿಕೊಂಡಿರುತ್ತಾನೆ. ಆ ಲೇಪದ ಮೂಲಕ ಭಾವಾತ್ಮನು (ಜೀವಾತ್ಮನು) ಸಾಧಿಸಿಕೊಂಡಿರುವ ಸಂಬಂಧವೇ ಸರ್ವಭಾವಲೇಪ ಸಂಬಂಧ. ಅಂಥ ಐಕ್ಯನಿರುವ ಸ್ಥಿತಿಯೇ ಸರ್ವಭಾವಲೇಪ ಸಂಬಂಧ ಸ್ಥಲ (೯:೬೬೫).

**ಸರ್ವಲೇಪ :** ಐಕ್ಯಸ್ಥಲವನ್ನು ಮುಟ್ಟಿದವನಿಗೆ ತಾನು ಎಲ್ಲದರಲ್ಲಿಯೂ, ತನ್ನಲ್ಲಿ ಎಲ್ಲದೂ ಇರುವ ಅನುಭವವಾಗುತ್ತದೆಯಾದ ಕಾರಣ ಅವನು ಸರ್ವಲೇಪ (ಲ:೨೮೫).

**ಸರ್ವವ್ಯವಧಾನಿ :** ಪ್ರಾಣಲಿಂಗಿಯಾದವನು ಯಾವಾಗಲೂ ಲಿಂಗಧ್ಯಾನದಲ್ಲಿ ನಿರತನಾಗಿರುತ್ತಾನೆ. ತನ್ನ ಪ್ರತಿ ಅಂಗದಲ್ಲಿಯೂ ಲಿಂಗವನ್ನು ಪ್ರತಿಷ್ಠಾಪಿಸಿಕೊಂಡಿರುವ ಅವನಿಗೆ ತಾನು ಮಾಡುವುದೆಲ್ಲವೂ ಲಿಂಗಕ್ಕಾಗಿಯೇ ಎಂಬ ವಿಶ್ವಾಸವಿರುತ್ತದೆ. ಇಂಥ ಸಾಧಕನೇ ಸರ್ವವ್ಯವಧಾನಿ (ಲ:೨೮೫).

**ಸರ್ವಶೂನ್ಯ (ಸರ್ವಶೂನ್ಯ ನಿರಾವಲಂಬ) :** ಪರಶಿವನು ಇನ್ನೂ ಏನನ್ನೂ ಸೃಷ್ಟಿಸದೇ ಇದ್ದಾಗ, ಸೃಷ್ಟಿಸಬೇಕೆಂಬ ನೆನಹೂ ಅವನಲ್ಲಿ ತಲೆದೋರದಿದ್ದಾಗ, ತಾನೊಬ್ಬನೇ ಇದ್ದೇನೆಂಬ ಅರಿವೂ ಅವನಿಗೆ ಬಾರದಿದ್ದಾಗ ಅವನ ಸ್ಥಿತಿಯನ್ನು ಸರ್ವಶೂನ್ಯ ಅಥವಾ ಸರ್ವಶೂನ್ಯನಿರಾವಲಂಬ ಸ್ಥಲ ಎಂದು ಕರೆಯಲಾಗುತ್ತದೆ. ತಾನೊಬ್ಬನೇ ಇದ್ದೇನೆ ಎಂಬ ಅರಿವು ಅವನಿಗೆ ಉಂಟಾದಾಗ ಅವನು ಮಹಾಶೂನ್ಯನೆನಿಸಿಕೊಳ್ಳುತ್ತಾನೆ. ಸೃಷ್ಟಿಮಾಡಬೇಕೆಂಬ ಬಯಕೆ ತಲೆದೋರಿದಾಗ ಅವನು ನಿಷ್ಕಲ ಲಿಂಗನೆನಿಸಿಕೊಳ್ಳುತ್ತಾನೆ. ಅನಂತರ ಅವನು ಅಂಗಸ್ಥಲ, ಲಿಂಗಸ್ಥಲವೆಂಬ ಇಬ್ಭಾಗವಾಗುತ್ತಾನೆ.

**ಸರ್ವಸಂಗಪರಿತ್ಯಾಗಿ :** ವಿರಕ್ತನಾಗುವ ಮೊದಲು ಇದ್ದ ತಂದೆ, ತಾಯಿ ಬಂಧು ಬಳಗ ಎಲ್ಲರ ಸಂಬಂಧವನ್ನೂ ತೊರೆದವನು, ಇಂದರಿಂದಾಗಿ ಆಧ್ಯಾತ್ಮಿಕ ಜೀವನಕ್ಕೆ ಅಡ್ಡಿಮಾಡುವ ಮೋಹ ಅಥವಾ ಮಮತೆಯನ್ನು ನಿವಾರಿಸಿದಂತಾಗುವುದು (ಲ:೧೧೨೧).

**ಸರ್ವಸಂಬಂಧಿ :** ಅನುಭಾವ ಸಿದ್ಧಿಸದ ಮುನ್ನ ನಾವೆಲ್ಲರೂ ೧. ವಸ್ತುಗಳೆಲ್ಲ ಪರಸ್ಪರ ಭಿನ್ನವಾಗಿರುವಂತೆ ಹಾಗೂ ೨. ನಮಗೂ ಪರಮಾತ್ಮನಿಗೂ ಭಿನ್ನತೆ ಇರುವಂತೆ ಕಾಣುತ್ತೇವೆ. ಆದರೆ ಅನುಭಾವಿಗಳಿಗೆ ಪ್ರಪಂಚ, ಪರಶಿವ ಮತ್ತು ತಾವು ಎಲ್ಲ ಪರಸ್ಪರ ಒಂದಾಂದಂತೆ ಕಾಣುತ್ತವೆ. ಅನುಭಾವಿಗಳು ಸರ್ವಸಂಬಂಧಿಗಳು (೫:೬೧೩).

**ಸರ್ವಸ್ಥಲ ಸಂಪೂರ್ಣ :** ಪ್ರಪಂಚದ ಎಲ್ಲ ವಸ್ತುಗಳಲ್ಲಿಯೂ, ಸರ್ವರ ಆತ್ಮಗಳಲ್ಲಿಯೂ, ಪ್ರತಿ ಪ್ರದೇಶದಲ್ಲಿಯೂ ತುಂಬಿಕೊಂಡಿರುವ ಪರಶಿವ (೮:೧೬೮೬).

**ಸರ್ವಾಂಗ ಪ್ರಸಾದಿ :** ಆಧ್ಯಾತ್ಮಿಕ ದಾರಿಯಲ್ಲಿ ಇನ್ನೂ ಹೆಚ್ಚು ದೂರ ಸಾಗದೆ ಇರುವವನು ಕೇವಲ ಆಹಾರ ಪದಾರ್ಥಗಳನ್ನು ಪರಶಿವನಿಗೆ ಅರ್ಪಿಸಿ, ಅನಂತರ ತಾನು ಭೋಗಿಸುತ್ತಾನೆ. ಆದರೆ ಆ ದಾರಿಯಲ್ಲಿ ಹೆಚ್ಚು ಮುಂದುವರಿದವನು, ಆಹಾರ ಪದಾರ್ಥಗಳನ್ನು ಮತ್ತು ಇತರ ಇಂದ್ರಿಯ ವಿಷಯಗಳನ್ನಷ್ಟೇ ಅಲ್ಲ, ತನ್ನ ಬುದ್ಧಿ, ಮನಸ್ಸು, ಅಹಂ, ಚಿತ್ತ, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಇತ್ಯಾದಿಗಳನ್ನು ಅಂದರೆ, ತನ್ನ ಎಲ್ಲ ಅಂಗಗಳನ್ನೂ ಪರಶಿವನಿಗೆ ಅರ್ಪಿಸಿ, ಅನಂತರ ಅವುಗಳನ್ನು ಪ್ರಸಾದವೆಂಬಂತೆ ಉಪಯೋಗಿಸುತ್ತಾನೆ. ಹೀಗೆ ತನ್ನ ಎಲ್ಲ ಅಂಗಗಳನ್ನೂ ಪ್ರಸಾದವನ್ನಾಗಿ ಮಾಡಿಕೊಂಡವನು ಸರ್ವಾಂಗ ಪ್ರಸಾದಿ (೩:೮೦೦).

**ಸರ್ವಾಂಗ ಮುಖ :** ಸರ್ವಾಂಗ ಲಿಂಗಿಯ ಅಂತಃಕರಣ, ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳೆಲ್ಲದರ ಮೂಲಕವೂ ಪರಶಿವ ಅನುಭವಿಸುವುದರಿಂದ, ಅವೆಲ್ಲವೂ ಅವನ ಬಾಯಿ (ಮುಖ) ಎನಿಸಿಕೊಳ್ಳುತ್ತವೆ (೯:೨೪೭).

**ಸರ್ವಾಂಗಲಿಂಗಿ :** ಭಕ್ತಸ್ಥಲದ ಸಾಧಕನು ಕೇವಲ ದೇಹದ ಮೇಲೆ ಲಿಂಗವನ್ನು ಧರಿಸಿದರೆ ಪ್ರಾಣಲಿಂಗಿಯು (ಸರ್ವಾಂಗಲಿಂಗಿಯು) ತನ್ನ ಎಲ್ಲ ಅಂಗಗಳಲ್ಲಿಯೂ ಪರಶಿವನನ್ನು ಪ್ರತಿಷ್ಠಾಪಿಸಿಕೊಳ್ಳುತ್ತಾನೆ. ಆಗ ಸರ್ವಾಂಗ ಲಿಂಗಿಯು ಯಾವುದೇ ವಸ್ತುವನ್ನು ಮುಟ್ಟಿ ಅಥವಾ ನೋಡಿ ಅಥವಾ ರುಚಿಸುವ ಮೊದಲು ಅವನ ಪ್ರತಿ ಅಂಗದಲ್ಲಿಯೂ ಇರುವ ಪರಶಿವನೇ ಅನುಭವಿಸುತ್ತಾನೆ. ಹೀಗೆ, ಅವನು ಪರಶಿವನಿಗೆ ಇತರರು ಮಾಡುವಂತೆ ಕೈಯಿಂದ ಮುಟ್ಟಿ ಯಾವುದೇ ವಸ್ತುವನ್ನು ನೈವೇದ್ಯ ಮಾಡಬೇಕಿಲ್ಲ. ಏಕೆಂದರೆ ಅವನು ಮನಸ್ಸಿನಲ್ಲೆ ಸರ್ವವನ್ನೂ ಪರಶಿವನಿಗೆ ಅರ್ಪಿಸುತ್ತಾನೆ.

**ಸರ್ವಾಂಗಲೋಚನವುಳ್ಳ ಜಂಗಮ :** ಯಾವ ವ್ಯಕ್ತಿ ಸ್ವಾನುಭಾವದಿಂದಾಗಿ ನಿಸ್ವಾರ್ಥ ಬುದ್ಧಿಯಿಂದ ಪ್ರಪಂಚವನ್ನು ನೋಡುತ್ತಾನೋ ಅವನಿಗೆ ಪ್ರಪಂಚದ ಪ್ರತಿಯೊಂದು ವಸ್ತುವೂ ಪರಶಿವನ ಮೂರ್ತಿಯಂತೇ ಕಾಣುತ್ತದೆ. ಅವನ ಪ್ರತಿಯೊಂದು ಅಂಗವೂ ಶಿವನನ್ನು 'ಕಾಣು'ತ್ತದೆ. ಅಂತಹ ವ್ಯಕ್ತಿ ನಿಜವಾದ ಚಲಿಸುವ ಲಿಂಗ (ಜಂಗಮ) (೫:೬೧).

**ಸರ್ವಾಂಗಸಂಬಂಧವನಳಿಸುವುದು :** ಸಾಧಾರಣವಾಗಿ ಭೂತಪಂಚಕಗಳೂ, ತನ್ಮಾತ್ರೆಗಳೂ, ಇತರ ಕರಣಾದಿಗಳೂ ನಮ್ಮನ್ನು ಬಂಧನಕ್ಕೆಡೆ ಮಾಡುತ್ತವೆ. ಆದರೆ ಆಧ್ಯಾತ್ಮಿಕ ಶಕ್ತಿಯಿಂದ ಈ ಭೂತಶಕ್ತಿಗಳನ್ನು ನಾವು ಭಕ್ತಿಶಕ್ತಿಗಳನ್ನಾಗಿ ಮಾಡಿದರೆ, ಅವು ನಮ್ಮ ಆಧ್ಯಾತ್ಮಿಕ ಪ್ರಗತಿಯಲ್ಲಿ ಸಹಾಯಕಾರಿಯಾಗುವುವು. ಹೀಗೆ ಸ್ಥೂಲಾಂಗವು ತನ್ನ ದೋಷಗಳನ್ನು ಕಳೆದುಕೊಂಡು ತ್ಯಾಗಾಂಗವೆನಿಸಿಕೊಳ್ಳುವುದು. ಸೂಕ್ಷ್ಮಾಂಗವು

ಭೋಗಾಂಗವೆನಿಸಿಕೊಳ್ಳುವುದು ಮತ್ತು ಕಾರಣಾಂಗವು ಯೋಗಾಂಗವೆನಿಸಿಕೊಳ್ಳುವುದು. ಹೀಗೆ ಸರ್ವಾಂಗ ಸಂಬಂಧವನ್ನು ಕಳಚಿಕೊಂಡವನು ಲಿಂಗಾಂಗ ಸಾಮರಸ್ಯಕ್ಕೆ ಯೋಗ್ಯನಾಗುತ್ತಾನೆ (೧೨:೪೬).

**ಸರ್ವಾಂಗ ಸ್ವಾಯತ :** ಪರಶಿವನು ನಮ್ಮಲ್ಲೇ ಇದ್ದರೂ, ನಾವು ಅವನನ್ನು ಸಾಕ್ಷಾತ್ಕರಿಸಿಕೊಂಡಿರುವುದಿಲ್ಲ. ಅವನನ್ನು ಸಾಕ್ಷಾತ್ಕರಿಸಿಕೊಂಡಾಗ ಅವನು ನಮ್ಮ ಪ್ರತಿ ಅಂಗದಲ್ಲಿಯೂ ವ್ಯಕ್ತನಾಗುತ್ತಾನೆ. ಹೀಗೆ ಸಾಕ್ಷಾತ್ಕರಿಸಿಕೊಳ್ಳುವುದೇ ಸರ್ವಾಂಗ ಸ್ವಾಯತ (೮:೫೩೯).

**ಸರ್ವಾವಧಾನಿ :** ಪ್ರತಿಯೊಂದು ವಸ್ತುವನ್ನು ನೋಡಿ ಅಥವಾ ಮುಟ್ಟಿ ಅಥವಾ ರುಚಿಸಿ ಭೋಗಿಸುವ ಮೊದಲು ಅದನ್ನು ಪರಶಿವನಿಗೆ ಅರ್ಪಿಸಬೇಕೆಂಬ ಎಚ್ಚರವುಳ್ಳವನು: ಹೀಗೆ ಅರ್ಪಿಸಿ ಪಡೆದ ವಸ್ತುವು ಪ್ರಸಾದವೆನಿಸಿಕೊಳ್ಳುತ್ತದೆ ಹಾಗೂ ಪ್ರಸಾದ ಸ್ವೀಕರಣೆಯು ಭಕ್ತನನ್ನು ಶುದ್ಧನನ್ನಾಗಿ ಮಾಡುತ್ತದೆ (೮:೧೧೨೧).

**ಸರ್ವೇಂದ್ರಿಗಳು ಏಕೇಂದ್ರಿಯವಾಗುವುದು :** ನಮ್ಮ ಎಲ್ಲ ಇಂದ್ರಿಯಗಳನ್ನೂ ಪರಶಿವನ ಒಂದಿಂದ್ರಿಯ ಮಾಡುವುದು (೭:೧೦೨೦).

**ಸಹಜ ಸಂಕಲ್ಪ :** ಹುಟ್ಟಿನಿಂದ ಬಂದ ಅವಿದ್ಯೆ (ಮರೆವು).

**ಸಹಜಸಂಗಿ :** ಶಿವಜೀವರ ಸಂಗವು ಅನಾದಿ ಅನಂತವೇ ಹೊರತು, ಆಗಂತುಕವಲ್ಲ. ನೀರಿನಲ್ಲಿ ಮುತ್ತು ರತ್ನಗಳು ಹೇಗೆ ಸಹಜವಾಗೇ ಉತ್ಪತ್ತಿಯಾಗುತ್ತವೆಯೋ, ಹಾಗೆಯೇ ಶಿವ ಜೀವರ ಸಂಗ ಸಹಜ.

**ಸಹಭೋಜನ :** ಪ್ರಸಾದಿಸ್ಥಲವನ್ನು ತಲುಪಿದ ಭಕ್ತ ತಾನು ಏನನ್ನು ಮಾಡಿದರೂ ಅದು ಶಿವನಿಗಾಗಿ ಎಂದು ತಿಳಿಯುತ್ತಾನೆ. ವಾಸ್ತವವಾಗಿ ಅವನು ತಾನು ನೋಡುವ ನೋಟ, ರುಚಿಸುವ ರುಚಿ, ಮೂಸುವ ವಾಸನೆ ಇತ್ಯಾದಿಗಳನ್ನೆಲ್ಲಾ ಶಿವನಿಗರ್ಪಿಸಿದ ನಂತರವೇ ತಾನು ಅನುಭವಿಸಬೇಕೆಂದು ನಿರ್ಧರಿಸಿದ್ದಾನೆ. ಹೀಗೆ ಅವನು ಶಿವನಿಗೆ ಆರೋಗಣೆಯ ಮಾಡಿಸಬೇಕೆಂದರೆ, ತಾನು ಪ್ರಸಾದ ತೆಗೆದುಕೊಳ್ಳಬೇಕಾಗುತ್ತದೆ. ಅವನು ಶಿವನಿಗೆ ಅರ್ಪಿಸಿ, *ಅನಂತರ* ತಾನು ತಿನ್ನುವುದಿಲ್ಲ ಎಂಬುದು ಗಮನಾರ್ಹ ಅಂಶ. ಗರ್ಭಿಣಿ ಊಟ ಮಾಡಿದಾಗ ಅದು ಆಕೆಗೂ ಅವಳ ಶಿಶುವಿಗೂ ಹೇಗೆ ಸಹಭೋಜನವಾಗುತ್ತದೆಯೋ, ಹಾಗೆಯೇ ಭಕ್ತನ ಊಟ ಶಿವ ಜೀವರಿಬ್ಬರಿಗೂ ಸಹಭೋಜನವಾಗುತ್ತದೆ (೧:೧೨೫೬).

**ಸಹಸ್ರಪತ್ರದನವಕಮಳ ಸಿಂಹಾಸನ :** ತಲೆಯಲ್ಲಿರುವ ಪದ್ಮಕ್ಕೆ ಸಾವಿರದಳಗಳಿರುತ್ತವೆ. ಆದುದರಿಂದ ಅದಕ್ಕೆ ಸಹಸ್ರಪತ್ರನವಕಮಲವೆಂದು ಹೆಸರು. ಅಲ್ಲಿ ಪರಶಿವನು ಇರುತ್ತಾನೆಂದೂ, ಆರು ಚಕ್ರಗಳಲ್ಲಿರುವ ಆಚಾರಾದಿ ಲಿಂಗಗಳಿಂದ ಹಿಡಿದು

ಮಹಾಲಿಂಗದವರೆಗೆ ಎಲ್ಲವನ್ನೂ ಸಿದ್ಧಿಸಿಕೊಂಡನಂತರ, ಸಾಧಕನು ಸಹಸ್ರಾರವನ್ನು ಸಿಂಹಾಸನಮಾಡಿಕೊಂಡಿರುವ ಶೂನ್ಯಲಿಂಗವನ್ನು ಸಾಧಿಸಬೇಕು (೯:೩೨೨).

**ಸಾಂಖ್ಯಯೋಗ :** ಸಾಂಖ್ಯದರ್ಶನ ಪ್ರವರ್ತಕನಾದ ಈಶ್ವರ ಕೃಷ್ಣನ ಪ್ರಕಾರ ಇರುವುದೆಲ್ಲವನ್ನೂ ಪ್ರಕೃತಿ ಮತ್ತು ಪುರುಷ ಎಂದು ಎರಡು ಭಾಗ ಮಾಡಬಹುದು. ಪ್ರಕೃತಿಯು ಮೂಲತಃ ಜಡ, ಅಚೇತನ. ಪುರುಷ ಆತ್ಮ ಚೇತನ, ಆದರೆ ನಿಷ್ಕ್ರಿಯ. ಪ್ರಕೃತಿಯು ಜಡವಾದುದರಿಂದ ಚಲಿಸಲಾರದು ಅಥವಾ ಯಾವುದೇ ರೀತಿಯಲ್ಲಿ ಪರಿಣಾಮ ಉಂಟುಮಾಡಲಾರದು; ಪುರುಷನಿಗೆ ಕೈಕಾಲು ಮುಂತಾದ ಅಂಗಗಳಿಲ್ಲವಾದುದರಿಂದ ಅದು ಚಲಿಸಲಾರದು ಅಥವಾ ಯಾವುದೇ ರೀತಿಯಲ್ಲಿ ಕಾರ್ಯಪ್ರವೃತ್ತನಾಗಲಾರದು. ಆದರೆ, ಕುಂಟ ಮತ್ತು ಕುರುಡ ಇಬ್ಬರೂ ಕೂಡಿ ಹೇಗೆ ಪಯಣಿಸಬಲ್ಲರೋ ಹಾಗೆಯೇ ಪ್ರಕೃತಿ ಮತ್ತು ಪುರುಷ ಕೂಡಿದರೆ ಕಾರ್ಯ ನಿರತರಾಗಬಲ್ಲರು. ಮನುಷ್ಯನೆಂದರೆ ಇಂಥ ಪ್ರಕೃತಿ-ಪುರುಷರ ಸಂಯೋಜನೆ.

ಸಾಂಖ್ಯರು ನಿರೀಶ್ವರವಾದಿಗಳು. ಸೃಷ್ಟಿ, ಸ್ಥಿತಿ ಮತ್ತು ಲಯಗಳು ಪ್ರಕೃತಿ ಪುರುಷನಿಗೋಸ್ಕರ ಮಾಡುವ ಕ್ರಿಯೆಗಳು. ಪ್ರಕೃತಿಯ ಸಂಬಂಧವನ್ನು ಕಡಿದುಕೊಂಡು ಕೇವಲ ತಾನೊಬ್ಬನೇ ಇರುವುದೇ (ಕೈವಲ್ಯವೇ) ಜೀವನದ ಗುರಿ. ಜ್ಞಾನವೇ ಈ ಗುರಿಯನ್ನು ತಲುಪುವ ಮಾರ್ಗ.

ಯೋಗವು ಈ ಎಲ್ಲ ಸಿದ್ಧಾಂತಗಳನ್ನು ಒಂದೆರಡನ್ನು ಬಿಟ್ಟು ಒಪ್ಪಿಕೊಳ್ಳುತ್ತದೆ. ಯೋಗದರ್ಶನದಲ್ಲಿ ಈಶ್ವರನಿದ್ದಾನೆ. ಆದರೆ ಅವನು ಸೃಷ್ಟಿ, ಸ್ಥಿತಿ ಮತ್ತು ಲಯಗಳನ್ನು ಮಾಡುವುದಿಲ್ಲ, ಭಕ್ತರ ಕರೆಗೆ ಓಗೊಡುವುದಿಲ್ಲ, ದುಷ್ಟರನ್ನು ಶಿಕ್ಷಿಸುವುದಿಲ್ಲ. ಸೃಷ್ಟಿಯಾದ ಕೂಡಲೆ ಮನುಕುಲಕ್ಕೆ ವೇದವನ್ನು ಬೋಧಿಸುವುದಷ್ಟೇ ಅವನ ಕೆಲಸ. ಚಿತ್ತವೃತ್ತಿನಿರೋಧವೆಂಬ ಪರಮಗುರಿಯನ್ನು ತಲುಪಲು ಅಷ್ಟಾಂಗಯೋಗವೇ ಸರಿಯಾದ ಮಾರ್ಗ. ಕೇವಲ ದೈಹಿಕ ಲಾಭಕ್ಕೆ ಅಷ್ಟಾಂಗ ಯೋಗ ಮಾಡುವವರನ್ನು ವಚನಕಾರರು ಸಹಿಸುವುದಿಲ್ಲ. (ನೋಡಿ : **ಅಷ್ಟಾಂಗಯೋಗ**)

**ಸಾಗರ ತರಂಗ ನ್ಯಾಯ :** ಪರಶಿವ ಮತ್ತು ಜೀವರ ನಡುವಿನ ಸಂಬಂಧ ಪರಶಿವ ಮತ್ತು ಪ್ರಪಂಚದ ನಡುವಿನ ಸಂಬಂಧ - ಇವುಗಳ ವಿಚಾರವಾಗಿ ಮಾತನಾಡುವಾಗ ವಚನಕಾರರು ಸಾಗರ ತರಂಗ ನ್ಯಾಯವನ್ನು ಬಳಸಿಕೊಳ್ಳುತ್ತಾರೆ. ಜೀವನ ದೋಷಗಳೂ, ಪ್ರಪಂಚದ ದೋಷಗಳೂ ಪರಶಿವನಿಗೆ ತಟ್ಟುವುದಿಲ್ಲವೆ, ಎಂದು ಯಾರಾದರೂ ಆಕ್ಷೇಪಿಸಿದರೆ, ಅದಕ್ಕೆ ವಚನಕಾರರು ಹೀಗೆ ಉತ್ತರಿಸುತ್ತಾರೆ: ತೃಣ ಮತ್ತು ಕಣಗಳು ಸಾಗದರಲ್ಲಿವೆ ಎಂದರೆ, ಸಾಗದರ ಆಳ ಮತ್ತು ಗಾಂಭಿರ್ಯ ತೃಣ ಮತ್ತು ಕಣಗಳಲ್ಲಿವೆ ಎಂದಾಗುವುದಿಲ್ಲ. ತೃಣ ಮತ್ತು ಕಣಗಳು ಅಥವಾ ನೊರೆ ಮತ್ತು ತೆರೆಗಳು ಸಾಗರದ ಕ್ಷಣಿಕ ಅವಸ್ಥೆಗಳೇ ಹೊರತು, ಅದರ ಸಾರಸ್ವಭಾವವಲ್ಲ. ಅದೇ ರೀತಿ, ಬ್ರಹ್ಮ, ವಿಷ್ಣು ಮುಂತಾದವರೂ, ಹುಲುಮಾನವರೂ ಪರಶಿವನಲ್ಲಿದ್ದರೂ ಅವರಾರೂ ಪರಶಿವನಂತೆ

ಪರಿಪೂರ್ಣರಲ್ಲ, ನಿತ್ಯರಲ್ಲ, ಶುದ್ಧರಲ್ಲ. ಅದೇ ರೀತಿ, ನೊರೆ ತೆರೆಗಳು, ತೃಣಕಣಗಳು ಸಾಗರವನ್ನಲಂಬಿಸುವಂತೆ ಬ್ರಹ್ಮ, ವಿಷ್ಣು, ಮೊದಲಾದ ಅಧಿದೇವತೆಗಳೂ ಮಾನವರೂ, ಪ್ರಾಣಿಗಳೂ, ಭೌತ ವಿಶ್ವವೂ, ಪರಶಿವನನ್ನೇ ಅವಲಂಬಿಸುತ್ತವೆ. ಅವರ ದೋಷಗಳು, ಅವರ ಅನಿತ್ಯತೆ, ಪರಶಿವನಿಗೆ ತಾಗುವುದಿಲ್ಲ. ಒಂದು ವೇಳೆ, ಚರಾಚರ ವಸ್ತುಗಳನ್ನೂ ಅಧಿದೇವತೆಗಳನ್ನೂ ಒಳಗೊಂಡ ಇಡೀ ಜಗತ್ತನ್ನೇ ಪರಶಿವನ ಶರೀರವೆಂದು ಪರಿಗಣಿಸಿದರೂ, ಆ ಶರೀರದ ದೊಷಗಳು ಅವನಿಗೆ ತಾಗುವುದಿಲ್ಲ. ಲಿಂಗಾಂಗ ಸಾಮರಸ್ಯ ಪಡೆದ ಮಾನವನನ್ನೇ ದೈಹಿಕ ಮತ್ತು ಪರಿಸರದ ಬಾಧೆಗಳು ಪೀಡಿಸುವುದಿಲ್ಲವೆಂದ ಮೇಲೆ, ನಿತ್ಯಮುಕ್ತನಾದ ಪರಶಿವನನ್ನು ೩೬ ತತ್ವಗಳ ಶರೀರವು ಹೇಗೆ ಪೀಡಿಸಬಲ್ಲವು? (೧೧:೧೩೦೪).

**ಸಾದಾಖ್ಯ :** 'ಸಾದಾಖ್ಯ' ಎಂಬ ಪದವು 'ಸತ್' ('ನಿಜವಾದ') 'ಆಖ್ಯ' ('ಮುಖ') ಎಂಬ ಪದಗಳಿಂದ ಕೂಡಿ ಆದುದು. ಆ ಸಂಸ್ಕೃತ ಪದಕ್ಕೆ ಮುಖ ಮತ್ತು ಬಾಯಿ ಎಂಬ ಎರಡು ಅರ್ಥಗಳಿದ್ದು ವಚನಕಾರರು ಈ ಪದವನ್ನು ಎರಡೂ ಅರ್ಥಗಳಲ್ಲಿ ಬಳಸುತ್ತಾರೆ.

ಸಾದಾಖ್ಯಗಳು ಆರೆಂದು ಕೆಲವು ವಚನಕಾರರು, ಐದೆಂದು ಕೆಲವು ವಚನಕಾರರು ಅಭಿಪ್ರಾಯಪಡುತ್ತಾರೆ. ಅಷ್ಟೆ ಅಲ್ಲ, ಸಾದಾಖ್ಯಗಳ ಸ್ವರೂಪ ಮತ್ತು ಕರ್ತವ್ಯಗಳ ಬಗೆಗೂ ಒಮ್ಮತವಿಲ್ಲ. ತೋಂಟದ ಸಿದ್ಧಲಿಂಗ ಶಿವಯೋಗಿಗಳೇ ಸಾದಾಖ್ಯಗಳು ಐದೆಂದು ಕೆಲವು ಸಾರಿ ಹೇಳಿ,  ಆರೆಂದು ಕೆಲವು ಸಾರಿ ಹೇಳುತ್ತಾರೆ. ಉದಾಹರಣೆಗೆ ನೋಡಿ ೧೧:೩೬, ೬೩, ಇತ್ಯಾದಿ.

ಸಾದಾಖ್ಯಗಳ ಹೆಸರುಗಳೂ ಸಹ ಒಂದೇ ತೆರನಿರುವುದಿಲ್ಲ. ತೋಂಟದ ಸಿದ್ಧಲಿಂಗ ಶಿವಯೋಗಿಗಳು ಮಹಾಸಾದಾಖ್ಯ, ಶಿವಸಾದಾಖ್ಯ, ಮೂರ್ತಿಸಾದಾಖ್ಯ, ಅಮೂರ್ತಿ ಸಾದಾಖ್ಯ, ಕರ್ತೃ ಸಾದಾಖ್ಯ ಮತ್ತು ಕರ್ಮಸಾದಾಖ್ಯ ಎಂಬ ಆರು ಸಾದಾಖ್ಯಗಳನ್ನು ಗುರುತಿಸಿದ್ದಾರೆ. (೧೧:೬೩) ಕೆಲವರು ಸಾದಾಖ್ಯಗಳಿಗೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಎಂಬ ಹೆಸರುಗಳನ್ನು ಕೊಟ್ಟಿದ್ದಾರೆ.

ಆಗಮಗಳಲ್ಲಿಯೂ, ವಚನಗಳಲ್ಲಿಯೂ ಬರುವ ಈ ಪದಕ್ಕೆ ಪ್ರಾಯಶಃ ಈ ಅರ್ಥವಿದ್ದೀತು : ಶಿವನು ಚಿತ್‌ಸ್ವರೂಪನಾದುದರಿಂದ ಅವನು ಇಂದ್ರಿಯಾತೀತ ಮತ್ತು ಮನೋತೀತ. ಅಂಥ ಶಿವನು ಭಕ್ತರಿಗೆ ಕಾಣಿಸಿಕೊಳ್ಳಬೇಕಾದರೆ ಯಾವುದಾದರೊಂದು ಮಾಧ್ಯಮ ಬೇಕು, ಅಥವಾ ಅವನು ಯಾವುದಾದರೊಂದು ರೂಪದಲ್ಲಿ ಪ್ರಕಾಶಿಸಬೇಕು. ಇಂಥ ಮಾಧ್ಯಮ ಅಥವಾ ಪ್ರಕಾಶವೇ ಮುಖ ಅಥವಾ ಸಾದಾಖ್ಯ. ಅರ್ಥಾಥ್, ಪರಶಿವನು ಶಕ್ತಿಗಳನ್ನು ಚಿನ್ಮಯ ಮಾಡುವ ಮೂಲಕ ಪ್ರಕಾಶಿಸುತ್ತಾನೆ (ವ್ಯಕ್ತವಾಗು)ತ್ತಾನೆ. ಹೀಗೆ ಶಿವನು ಒಬ್ಬನೇ ಆದರೂ ಭಕ್ತರಿಗೆ ಐದು (ಅಥವಾ ಆರು) ರೂಪಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಆದರೆ ಆ ಮುಖಗಳು ಇಂದ್ರಿಯಗೋಚರವಲ್ಲ.

ಸಾದಾಖ್ಯ ಪರಿಕಲ್ಪನೆಯು ಪ್ರಾಯಶಃ ಪರಶಿವನ ಸರ್ವವ್ಯಾಪಕತ್ವವನ್ನೂ ಸರ್ವಜ್ಞತ್ವವನ್ನೂ ಪ್ರತಿಬಿಂಬಿಸುತ್ತವೆ. ಹೇಗೆಂದರೆ: ಕಾಲದೇಶಗಳ ಮಿತಿಗೊಳಪಟ್ಟ ಮಾನವನು ಯಾವುದಾದರೊಂದು ಸ್ಥಳ ಅಥವಾ ದಿಕ್ಕಿಗೆ ಹೋಗಬಲ್ಲನು, ಆದರೆ ಪರಶಿವನು ಎಲ್ಲಾ ಆರು ದಿಕ್ಕುಗಳಿಗೂ (ಮೇಲೆ, ಕೆಳಗೆ, ಹಿಂದೆ, ಮುಂದೆ, ಎಡ ಮತ್ತು ಬಲ) ಏಕಕಾಲಕ್ಕೆ ಹೋಗಬಲ್ಲನು. ಅಥವಾ ವ್ಯಾಪಾಸಿಕೊಳ್ಳಬಲ್ಲನು. ಅದೇ ರೀತಿ ಮನುಷ್ಯನು ಒಂದು ಕಾಲದಲ್ಲಿ ಒಂದೇ ದಿಕ್ಕಿನಲ್ಲಿ ನೋಡಬಲ್ಲನು, ಅಥವಾ ನೋಡಿ ಅರಿಯಬಲ್ಲನು. ಆದರೆ ಪರಶಿವನು ಆರು ದಿಕ್ಕುಗಳಲ್ಲಿ ಏಕಕಾಲದಲ್ಲಿ ನೋಡಿ ತಿಳಿಯಬಲ್ಲನು. ಹೀಗೆ ನೋಡಲು ಅವನಿಗೆ ಆರು ಮುಖಗಳು ಬೇಕು. ಆ ದೃಷ್ಟಿಯಿಂದ ಪರಶಿವನಿಗೆ ಆರು ಸಾದಾಖ್ಯಗಳಿವೆ ಎಂದು ವಚನಕಾರರು ಹೇಳಿರಬಹುದು. ಕೆಲವು ಸಾರಿ ನಾಲ್ಕು ದಿಕ್ಕುಗಳನ್ನು ನೋಡಲು ನಾಲ್ಕು ಮುಖಗಳೂ, ಮಧ್ಯದಲ್ಲಿರಲೂ ಐದನೇ ಮುಖವೂ ಬೇಕೆಂದು ಕೆಲವರು ಐದೇ ಸಾದಾಖ್ಯಗಳು ಸಾಕೆಂದು ನಂಬಿರಬಹುದು.

ಮೇಲಿನ ಈ ಎರಡು ಅರ್ಥಗಳು ಕೇವಲ ಊಹೆಯ ಆಧಾರದ ಮೇಲೆ ನಿಂತಿದ್ದು, ಅವುಗಳ ಬಗೆಗೆ ವಚನಕಾರರು ಏನು ಹೇಳುತ್ತಾರೆಂಬುದನ್ನು ನೋಡೋಣ. ಅವರು ಸೃಷ್ಟಿಗೆ ಸಂಬಂಧಿಸಿದಂತೆ ಪಂಚಸಾದಾಖ್ಯ ಕಲ್ಪನೆಯನ್ನು ಹೀಗೆ ಪ್ರತಿಪಾದಿಸಿದ್ದಾರೆ. ಮೂಲಶಕ್ತಿಯು ಪರಶಿವನಲ್ಲಿ ಯಾವಾಗಲೂ ಅವಿನಾಭಾವದಿಂದ ಇರುತ್ತದೆ. ಅದು ಪ್ರಲಯಕಾಲದಲ್ಲಿ ಅವನಲ್ಲಿ ಅವ್ಯಕ್ತವಾಗಿ ಅಡಗಿದ್ದರೆ, ಸೃಷ್ಟಿಯ ಕಾಲದಲ್ಲಿ ವ್ಯಕ್ತವಾಗುತ್ತದೆ. ಆದರೆ ಅವ್ಯಕ್ತವಾಗಿದ್ದ ಶಕ್ತಿಯು ನಾನಾ ಹಂತಗಳಲ್ಲಿ ವಿಕಸಿತವಾಗಿ, ಕೊನೆಗೆ ಪ್ರಪಂಚದ ವಿವಿಧ ಚರಾಚರವಸ್ತುಗಳಾಗಿ ವ್ಯಕ್ತವಾಗಬೇಕಾದರೆ, ಅದಕ್ಕೆ ಪ್ರತಿಹಂತದಲ್ಲಿಯೂ ಪ್ರೇರಣೆ ಮತ್ತು ಮಾರ್ಗದರ್ಶನ ನೀಡಿ, ಅದನ್ನು ನಿಯಂತ್ರಿಸಲು ಪರಶಿವನೆಂಬ ಚಿದ್ವಸ್ತು ಬೇಕೇ ಬೇಕು. ವಿವಿಧ ಹಂತಗಳಲ್ಲಿ ವಿಕಸಿತವಾದ ಶಕ್ತಿಗೆ ಪರಾಶಕ್ತಿ, ಆದಿಶಕ್ತಿ, ಮುಂತಾದ ಹೆಸರುಗಳಿರುವಂತೆ, ಅವುಗಳಿಗೆ ವಿವಿಧ ಹಂತಗಳಲ್ಲಿ ಪ್ರೇರಣೆ ಮತ್ತು ಮಾರ್ಗದರ್ಶನ ನೀಡುವ ಪರಶಿವನಿಗೂ ಶಿವಸಾದಾಖ್ಯ, ಅಮೂರ್ತಿಸಾದಾಖ್ಯ, ಮುಂತಾದ ಹೆಸರುಗಳಿವೆ. ವಚನಕಾರರು ಯಾವ ಸಾದಾಖ್ಯ ಯಾವ ಶಕ್ತಿಯ ಜೊತೆಗಿರುತ್ತದೆ ಎಂಬುದನ್ನು ಹೀಗೆ ತಿಳಿಸಿದ್ದಾರೆ.

ಸದ್ಯೋಜಾತ ಅಥವಾ ಶಿವಸಾದಾಖ್ಯ - ಶಾಂತ್ಯತೀತ ಕಲೆ ಅಥವಾ ಪರಾಶಕ್ತಿ

ವಾಮದೇವ ಅಥವಾ ಅಮೂರ್ತಿಸಾದಾಖ್ಯ - ಶಾಂತಿಕಲಾ ಅಥವಾ ಆದಿಶಕ್ತಿ

ಅಘೋರ ಅಥವಾ ಮೂರ್ತಿ ಸಾದಾಖ್ಯ - ವಿದ್ಯಾಕಲಾ ಅಥವಾ ಇಚ್ಛಾಶಕ್ತಿ

ತತ್ಪುರಷ ಅಥವಾ ಕರ್ತೃಸಾದಾಖ್ಯ - ಪ್ರತಿಷ್ಠಾಕಲಾ ಅಥವಾ ಜ್ಞಾನಶಕ್ತಿ

ಈಶಾನ್ಯ ಅಥವಾ ಕರ್ಮಸಾದಾಖ್ಯ - ನಿವೃತ್ತಿಕಲಾ ಅಥವಾ ಕ್ರಿಯಾಶಕ್ತಿ

ಶಿವ ತಾನೊಬ್ಬನೇ ಸೃಷ್ಟಿಸಲಾರ, ಶಕ್ತಿ ತಾನೊಂದೇ ವಿಕಾಸವಾಗಲಾರದು. ಶಿವನ ಪ್ರೇರಣೆಯಂತೆ ಶಕ್ತಿ ವಿಕಾಸವಾದರೆ ಅದೇ ಸೃಷ್ಟಿ.

ಆಧ್ಯಾತ್ಮಿಕ ಜೀವನದ ದೃಷ್ಟಿಯಿಂದ ನೋಡಿದಾಗ, ಸಾದಾಖ್ಯ ಪರಿಕಲ್ಪನೆಗೆ ಹೆಚ್ಚಿನ ಅರ್ಥ ಬರುತ್ತದೆ. ಆಗ 'ಸಾದಾಖ್ಯ'ಕ್ಕೆ ಬಾಯಿ ಎಂಬರ್ಥ ಕೊಡಬೇಕಾಗುತ್ತದೆ. ಭಕ್ತನು ಇಡೀ ವಿಶ್ವವೂ ತನ್ನ ದೇಹ, ಇಂದ್ರಿಯ, ಕರಣಾದಿಗಳೆಲ್ಲವೂ ಶಿವನಿಂದ ಪಡೆದ ಸಾಲವೆಂದು ತಿಳಿದು, ಅವುಗಳನ್ನು ಹಿಂದಿರುಗಿಸುವುದು ತನ್ನ ಕರ್ತವ್ಯವೆಂದು ತೀರ್ಮಾನಿಸಿದಾಗ, ಅವನ ನಿಜವಾದ ಆಧ್ಯಾತ್ಮಿಕ ಜೀವನ ಪ್ರಾರಂಭವಾಗುತ್ತದೆ. ಆಗ ಅವನು ತನ್ನ ಎಲ್ಲವನ್ನೂ ಅಂದರೆ, ತಾನು ಸೇವಿಸುವ ನೀರು, ಆಹಾರ, ಕೇಳುವ ಶಬ್ದ, ವಾಸಿಸುವ ವಾಸನೆ, ಬುದ್ಧೀಂದ್ರಿಯ ಕರ್ಮೇಂದ್ರಿಯಗಳು ಮೊದಲಾದವುಗಳೆಲ್ಲವನ್ನೂ ಪರಶಿವನಿಗೆ ಸಮರ್ಪಿಸುತ್ತಾನೆ. ಹೀಗೆ ಸಮರ್ಪಿಸುವಾಗ ಅವನು ಆಯಾ ಪದಾರ್ಥಗಳನ್ನು ಕೈಯಲ್ಲಿ ಸ್ಪರ್ಶಿಸದೇ, ಅವೆಲ್ಲಿಯೋ ಅಲ್ಲಿಂದಲೇ, ಮನಸ್ಸಿನಲ್ಲೇ, ಪರಶಿವನ ಆರು ಅಥವಾ ಐದು ಬಾಯಿಗಳಿಗೆ (ಸಾದಾಖ್ಯಗಳಿಗೆ) ಅರ್ಪಿಸುತ್ತಾನೆ. ಆ ಮಾತು "..... ಇನ್ನಿದಕ್ಕೆ ಅರ್ಪಿತ ಮುಖಂಗಳ ಹೇಳಿಹೆನು : ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದ ಲಿಂಗ, ಮಹಾಲಿಂಗ ಈ ಐದು ಲಿಂಗವೂ ಆಚಾರ ಲಿಂಗಕ್ಕೆ ಮುಖವೆಂದರಿಯಲುಬೇಕಯ್ಯಾ. ಶಿವಲಿಂಗ, ಜಂಗಮಲಿಂಗ, ಪ್ರಸಾದ ಲಿಂಗ, ಮಹಾಲಿಂಗ, ಆಚಾರಲಿಂಗ ಈ ಐದು ಲಿಂಗವು ಗುರುಲಿಂಗಕ್ಕೆ ಮುಖವೆಂದು ಅರಿಯಲು ಬೇಕಯ್ಯಾ . . . ಹೀಂಗೆ ಅಂಗಮುಖಗಳಲ್ಲಿಯೂ ಲಿಂಗವೇ ಮುಖವಾಗಿಪ್ಪ ಭೇದವನರಿಯಬೇಕಯ್ಯಾ . . ." (೧೧:೪೧೩) ಎಂಬ ತೋಂಟದ ಸಿದ್ಧಲಿಂಗ ಶಿವಯೋಗಿಗಗಳ ವಚನದಿಂದ ಸ್ಪಷ್ಟವಾಗುತ್ತದೆ. ಆಗ ನಮ್ಮ ಇಂದ್ರಿಯದ ಪ್ರತಿಯೊಂದು ಬಾಗಿಲು ಲಿಂಗದ ಪರಶಿವನ ಬಾಯಿಯಾಗುತ್ತದೆ. ಈ ಮಾತೂ ಸಹ "ಅಂಗವಾದ ಭಕ್ತನು ಸುಚಿತ್ತವೆಂಬ ಹಸ್ತದಿಂದ ಆಚಾರಲಿಂಗಕ್ಕೆ ಘ್ರಾಣವೆಂಬ ಮುಖದಲ್ಲಿ ಗಂಧದ ಸಮರ್ಪಣವ ಮಾಡಿ ಆಚಾರಲಿಂಗದ ಪ್ರಸನ್ನ ಪ್ರಸಾದವ ಸ್ವೀಕರಿಸುತ್ತಿಪ್ಪನಯ್ಯಾ. ಜಲವೇ ಅಂಗವಾದ ಮಹೇಶ್ವರನು ಸುಬುದ್ಧಿಯೆಂಬ ಹಸ್ತದಿಂದ ಗುರುಲಿಂಗಕ್ಕೆ ಜಿಹ್ವೆಯೆಂಬ ಮುಖದಲ್ಲಿ ರಸವನು ಸಮರ್ಪಣವ ಮಾಡಿ ಗುರುಲಿಂಗದ ಪ್ರಸನ್ನ ಪ್ರಸಾದವ ಸ್ವೀಕರಿಸುತ್ತಿಪ್ಪನಯ್ಯಾ...." (೧೧:೪೧೪) ಎಂಬ ಅವರ ವಚನದಿಂದಲೇ ಸ್ಪಷ್ಟವಾಗುತ್ತದೆ.

ಕೆಲವು ಸೃಷ್ಟಿಯ ವಚನಗಳಲ್ಲಿ ಶಕ್ತಿವಿಕಾಸದ ಪರಿಕಲ್ಪನೆಯ ಜೊತೆಗೆ ಸಾದಾಖ್ಯದ ಪರಿಕಲ್ಪನೆಯೂ ಬರುತ್ತದೆ. ಅಲ್ಲಿಯೂ ಸಹ ಸಾದಾಖ್ಯ ಎಂಬ ಪದಕ್ಕೆ ಬಾಯಿ ಎಂಬರ್ಥವೇ ಇದೆ. ಉದಾಹರಣೆಗೆ ಆ ... ಆ "ಲಿಂಗದ ಮಧ್ಯದಲ್ಲಿ ಬೀಜದಿಂದ ವೃಕ್ಷವು ಉದಯವಾಗುವ ಹಾಂಗೆ, ಆ ಲಿಂಗವು ತನ್ನ ಇಚ್ಛಾಶಕ್ತಿಯ ಕೂಡಿಕೊಂಡು ಜಗದುತ್ಪತ್ತಿ ಸ್ಥಿತಿ ಲಯಂಗಳಿಗೆ ಕರ್ತುವಾಗಿ..... ಒಪ್ಪುತ್ತಿಪ್ಪುದು ಸದಾಶಿವ ಮೂರ್ತಿ. ಆ ಸದಾಶಿವನ ಈಶಾನ್ಯ ಮುಖದಲ್ಲಿ ಆಕಾಶ ಪುಟ್ಟಿತ್ತು, ತತ್ಪುರುಷ ಮುಖದಲ್ಲಿ ವಾಯು

ಪುಟ್ಟಿತ್ತು..." (೧೧:೬೭) ಎಂಬ ವಚನವೂ, "ಇಂತೆನೆವ ಶಿವನ ಮುಖದಲ್ಲಿ ಒಗೆದ ಭೂತಗಳಾವುದೆಂದಡೆ: ಸದ್ಯೋಜಾತ ಮುಖದಲ್ಲಿ ಪೃಥ್ವಿ, ವಾಮದೇವ ಮುಖದಲ್ಲಿ ಅಪ್ಪು, ಅಘೋರ ಮುಖದಲ್ಲಿ ಅಗ್ನಿ, ತತ್ಪುರುಷ ಮುಖದಲ್ಲಿ ವಾಯು, ಈಶಾನ್ಯ ಮುಖದಲ್ಲಿ ಆಕಾಶ" (೧೧:೫೪೫) ಎಂಬ ವಚನವೂ ಈ ಮಾತನ್ನು ಪುಷ್ಟೀಕರಿಸುತ್ತದೆ. ಹೀಗೆ ಸಾದಾಖ್ಯಗಳು ಹೇಗೆ ಶಿವನ ಸೃಷ್ಟಿಯೋ ಹಾಗೆಯೇ, ಸಾದಾಖ್ಯಗಳು ಶಕ್ತಿಯೊಡಗೂಡಿ ವಿವಿಧ ತತ್ವಗಳನ್ನು ಸೃಷ್ಟಿಸುತ್ತವೆ.

ಇಲ್ಲಿ ಬಾಯಿ ಅಥವಾ ಮುಖ ಎಂಬ ಅರ್ಥವು 'ಪರಶಿವನಿಗೆ ವಾಸ್ತವವಾಗಿಯೂ ಒಂದು ದೇಹವಿದೆ, ಅದಕ್ಕೊಂದು ತಲೆಯಿದೆ, ಅದರಲ್ಲೊಂದು ಬಾಯಿಯಿದೆ' ಎಂಬ ತಪ್ಪು ಕಲ್ಪನೆಗೆ ಎಡೆಮಾಡಿಕೊಡಬಾರದು. ಅನೇಕ ದಾರ್ಶನಿಕ ವಿಚಾರಗಳನ್ನು ನಾವು ನೇರವಾದ ಭಾಷೆಯಲ್ಲಿ ಹೇಳಲು ಸಾಧ್ಯವಿಲ್ಲ. ಆಗೆಲ್ಲ ನಾವು ಉಪಮೆ ಮುಂತಾದ ಆಲಂಕಾರಿಕ ಭಾಷೆಯನ್ನೇ ಬಳಸುವುದು ಅನಿವಾರ್ಯವಾಗುತ್ತದೆ. ಪರಶಿವನ ಮುಖ, ಸಾದಾಖ್ಯ, ಇಂದ್ರಿಯಗಳ ಬಾಗಿಲು, ವಿಶ್ವತೋಬಾಹು, ಸುಹಸ್ತ, ಮುಂತಾದ ಪದಗಳೂ ಅಂತಹ ಇತರ ಪದಗಳೂ ಆಲಂಕಾರಿಕ ಭಾಷೆಯೇ. ಅವುಗಳನ್ನು ವಾಚ್ಯಾರ್ಥದಲ್ಲಿ ತೆಗೆದುಕೊಳ್ಳಬಾರದು. ಹಾಗೆ ವಾಚ್ಯಾರ್ಥದಲ್ಲಿ ತೆಗೆದುಕೊಂಡರೆ ಶಿವನಿಗೆ ಮಾನವಗುಣಗಳನ್ನು ಆರೋಪಿಸಬೇಕಾಗುತ್ತದೆ. ಶಿವನಿಗೆ ಅಷ್ಟತನು (ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ, ಆತ್ಮ, ಸೂರ್ಯ ಮತ್ತು ಚಂದ್ರ ಎಂಬ ಎಂಟು ಘಟಕಗಳಿಂದ ಕೂಡಿದ ದೇಹ) ಇದೆ ಎಂದು ತೋಂಟದ ಸಿದ್ಧಲಿಂಗ ಶಿವಯೋಗಿಗಳೂ ಇತರ ವಚನಕಾರರೂ ಹೇಳಿದರೂ, ಆ ಅಷ್ಟತನು ನಮ್ಮ ತನುವಿನಂತಹುದಲ್ಲ ಎಂದು ಅವರೇ ಹೇಳುತ್ತಾರೆ. ಉದಾಹರಣೆಗೆ "ಆಕಾರವಿಲ್ಲದಾತಂಗೆ ಅಂಗವೆಂದೇಕೆ ಕಲ್ಪಿಸಿ ಹೇಳುವಿರಿ?" ಎಂದು ಸಿದ್ಧಲಿಂಗ ಶಿವಯೋಗಿಗಳು ಕೇಳುವಾಗ, ಪರಶಿವನಿಗೆ ನಮ್ಮ ಆಕಾರದ ದೇಹವಿಲ್ಲ ಎಂಬ ಅವರ ಅಭಿಪ್ರಾಯ ಸ್ಪಷ್ಟವಾಗುತ್ತದೆ.

**ಸಾಮೀಪ್ಯ :** ದ್ವೈತಿಗಳ ಪ್ರಕಾರ ಶುದ್ಧವಾದ ಆತ್ಮನು ಸಾಲೋಕ್ಯದ ನಂತರ ಪರಮಾತ್ಮನ ಬಳಿ ಸಾರುತ್ತಾನೆ. ಆದ್ದರಿಂದ ಇದು ಎರಡನೆ ಹಂತ. (ನೋಡಿ : **ಸಾಲೋಕ್ಯ, ಸಾಯುಜ್ಯ ಮತ್ತು ಸಾರೂಪ್ಯ**).

**ಸಾಯದ ಮುನ್ನವೆ ಸಾಯುವುದು :** ದೇಹವು ಸಾಯುವ ಮೊದಲೆ ನಾನು ಎಂಬ ಭಾವ ಸತ್ತುಹೋಗುವುದು; ಇದು ಅನುಭಾವಿಗಳಿಗಷ್ಟೇ ಸಾಧ್ಯ. ಆದುದರಿಂದ ಜೀವನ್ಮುಕ್ತರಷ್ಟೇ ಸಾಯದ ಮುನ್ನ ಸಾಯುತ್ತಾರೆ (೮:೯೫೫).

**ಸಾಯುಜ್ಯ :** ದ್ವೈತಿಗಳ ಪ್ರಕಾರ ಇದು ಶುದ್ಧರೂಪದ ಆತ್ಮನ ಕೊನೆಯ ಧ್ಯೇಯ. ತಾತ್ಕಾಲಿಕವಾಗಿ ಶುದ್ಧ ಆತ್ಮನು ಪರಮಾತ್ಮನೊಂದಿಗೆ ಬೆರೆತು ಮತ್ತೆ ಬೇರಾಗುವುದೇ

ಸಾಯುಜ್ಯದ ಅರ್ಥ. ವಚನಕಾರರು ಶಿವಸಾಯುಜ್ಯ ಎಂಬ ಪದವನ್ನು ಉಪಯೋಗಿಸಿದರೂ ಅವರ ಪ್ರಕಾರ ಶಿವಸಾಯುಜ್ಯವನ್ನು ಪಡೆದವರು ಶಿವನೊಂದಿಗೆ ಬೇರಾಗದಂತೆ ಬೆರೆಯುತ್ತಾರೆ.

**ಸಾರೂಪ್ಯ :** ಸಾರೂಪ್ಯ ಎಂಬ ಶುದ್ಧಾತ್ಮನ ಪದವಿಯು ಮೂರನೆಯದು. ಮುಕ್ತಾತ್ಮನು ಸ್ವರೂಪದಲ್ಲಿ ಪರಮಾತ್ಮನಂತೆ ಶುದ್ಧಸ್ವರೂಪವನ್ನು ಪಡೆಯುತ್ತಾನೆಯೇ ಹೊರತು, ಸೃಷ್ಟಿ, ಸ್ಥಿತಿ ಮಾಡುವ ಶಕ್ತಿಯನ್ನಲ್ಲ. (ನೋಡಿ : **ಸಾಲೋಕ್ಯ, ಸಾಯುಜ್ಯ, ಸಾಮೀಪ್ಯ**).

**ಸಾಲೋಕ್ಯ :** ವೈಷ್ಣವರ ಪ್ರಕಾರ, ಜೀವನು ಮೋಕ್ಷವನ್ನು ಏಕಾಏಕಿಯಾಗಿ ಸಂಪಾದಿಸದೆ, ಹಂತಹಂತವಾಗಿ ಸಂಪಾದಿಸುತ್ತಾನೆ. ಈ ಹಂತಗಳು ನಾಲ್ಕು : ಅವು ಕ್ರಮವಾಗಿ, ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯ.

ಸಾಲೋಕ್ಯವೆಂದರೆ, ಮುಕ್ತನಾದ ಜೀವನು 'ಅವನ ಲೋಕ' (ವಿಷ್ಣುವಿನ ಲೋಕವನ್ನು) ಪ್ರವೇಶಿಸುತ್ತಾನೆ. [ಸಾಲೋಕ್ಯದ ಮತ್ತೊಂದು ಅರ್ಥವೆಂದರೆ, ಅವನಿಂದ (ವಿಷ್ಣುವಿನಿಂದ) ನೋಡಲ್ಪಡುವುದು]. ವಿಷ್ಣುವಿನ ಬಳಿ ಸಾರುವುದೇ ಸಾಮೀಪ್ಯ. ಇನ್ನೂ ಹೆಚ್ಚು ಶುದ್ಧನಾಗಿ ವಿಷ್ಣುವಿನ ಶುದ್ಧರೂಪವನ್ನೂ ಪಡೆದು, ಕೊನೆಗೆ ಅವನಲ್ಲಿ ತಾತ್ಕಾಲಿಕವಾಗಿ ಲೀನವಾಗುತ್ತಾನೆ. (ನೋಡಿ : **ಜೀವನ್ಮುಕ್ತಿ, ವಿದೇಹಮುಕ್ತಿ**).

**ಸಾವಧಾನ ಸುಖ ಪರಿಣಾಮಿ :** ಪ್ರಸಾದಿಯ ಸಾಧಕನು ಶಿವಲಿಂಗವನ್ನು ತನ್ನ ನಿರಹಂಕಾರವೆಂಬ ಹಸ್ತದಲ್ಲಿ ಕಂಡು ಸಾವಧಾನವೆಂಬ ಭಕ್ತಿಯನ್ನು ಆಚರಿಸುವಾಗ ಅವನಿಗೆ ತನ್ನ ಸುಮನ ಹಸ್ತದಲ್ಲಿ ಮುಂದಿನ ಸ್ಥಲದ ಜಂಗಮಲಿಂಗವು ಕಾಣಿಸಿಕೊಳ್ಳುತ್ತದೆ (೧೨:೪೫೫).

**ಸಾವಯ (ಸಾವಯವ) :** ಅವಯವ ಅಥವಾ ಭಾಗಗಳನ್ನುಳ್ಳ ಪರಶಿವ. ಶಕ್ತಿವಿಕಾಸದ ನಂತರದ ಪರಶಿವ.

**ಸಾಸಿರದಳದ ಅಮೃತದ ಕೊಡ :** ಸಹಸ್ರಾರ (ಬ್ರಹ್ಮರಂಧ್ರ)ದಲ್ಲಿರುವ ಅಮೃತದ ಸೆಲೆ (೫:೧೮೬೩).

**ಸಿದ್ಧ ಪ್ರಸಾದ :** ಲಿಂಗಕ್ಕೆ ಅರ್ಪಿಸಿದ ವಸ್ತುಗಳು ಸಿದ್ಧಪ್ರಸಾದ ಎನಿಸಿಕೊಳ್ಳುತ್ತವೆ. (ನೋಡಿ:**ತ್ರಿವಿಧ ಪ್ರಸಾದ**).

**ಸಿದ್ಧಪ್ರಸಾದಿಯ ಅಂಗ :** ಜ್ಞಾನೇಂದ್ರಿಯ, ಕರ್ಮೇಂದ್ರಿಯ ಮತ್ತು ಅಂತಃಕರಣಗಳ ಸಲುವಾಗಿ ಶರಣನು ಪ್ರಸಾದವನ್ನು ಸ್ವೀಕರಿಸದೆ ಎಲ್ಲವೂ ಶಿವನ ಪ್ರಸಾದವೆಂದೂ ಅದು ಜ್ಞಾನೇಂದ್ರಿಯಾದಿಗಳನ್ನು ಶುದ್ಧಮಾಡುತ್ತದೆಂದೂ ತಿಳಿದು ಸ್ವೀಕರಿಸಿದರೆ ಅಂಥವನ ಅಂಗವು ಸಿದ್ಧಪ್ರಸಾದಿಯ ಅಂಗವೆನಿಸಿಕೊಳ್ಳುತ್ತದೆ. ಸಿದ್ಧ ಪ್ರಸಾದಿಯು ಪ್ರಪಂಚದಲ್ಲಿ ಪರಶಿವನ ಪ್ರಸಾದವನ್ನಲ್ಲದೇ ಮತ್ತೇನನ್ನೂ ಕಾಣ. ಅವನು ನೋಡುವ ನೋಟ, ಕಾಣುವ ರೂಪು, ಕೇಳುವ ಶಬ್ದ ಎಲ್ಲವೂ ಅವನ ಪ್ರಕಾರ ಶಿವನ ಪ್ರಸಾದ (೮:೧೧೮).

**ಸುಕಾಯಕ :** ಗುರುಲಿಂಗ ಜಂಗಮಗಳಿಗೆ ಮಾಡುವ ಅರ್ಪಣೆಯು ಸುಕಾಯಕದಿಂದ ಗಳಿಸಿದುದಾಗಿರಬೇಕು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಲ್ಲದೆ, ತಾನು ಮಾಡುತ್ತಿರುವುದೆಲ್ಲವೂ ಲಿಂಗಕ್ಕಾಗಿ, ತನಗಾಗಿ ಅಲ್ಲ, ಎಂಬ ಧಾರ್ಮಿಕ ಭಾವನೆಯಿಂದ ಮಾಡಿದ ಕಾಯಕ ಸುಕಾಯಕ.

**ಸುಖವ ನಿಶ್ಚೈಸಿವುದು :** ನಿಶ್ಚೈಸುವುದು ಎಂಬುದಕ್ಕೆ ಖಚಿತಪಡಿಸುವುದು ಎಂಬ ಸಾಮಾನ್ಯ ಅರ್ಥವಿದ್ದರೂ, ಅನೇಕ ವೇಳೆ ಸಾಧಿಸುವುದು, ಸಾಕ್ಷಾತ್ಕರಿಸಿಕೊಳ್ಳುವುದು ಎಂಬ ಅರ್ಥದಲ್ಲಿಯೂ ಅದನ್ನು ಬಳಸಲಾಗುತ್ತದೆ. ಸುಂಕದ ಬಂಕಣ್ಣನು 'ಸುಖವನ್ನು ನಿಶ್ಚೈಸಲಿಲ್ಲ, ಅದು ದುಃಖಕ್ಕೆ ಬೀಜ' (೯:೬೨೪) ಎಂದು ಹೇಳುವಾಗ ಅದಕ್ಕೆ 'ಸುಖವನ್ನು ಸಾಧಿಸಿದರೆ, ಅದು ದುಃಖಕ್ಕೆ ಕಾರಣವಾಗುತ್ತದೆ' ಎಂಬರ್ಥವಿದೆ. ಸುಖವು ಹೇಗೆ ದುಃಖಕ್ಕೆ ಕಾರಣವಾಗುತ್ತದೆ ಎಂಬುದು ಕೆಲವರ ಪ್ರಶ್ನೆ. ಅದಕ್ಕೆ ಆಧ್ಯಾತ್ಮಿಕ ಜೀವನ ನಡೆಸುವವರ ಅನುಭವದ ಉತ್ತರ ಹೀಗಿದೆ : ನಾವು ಸುಖ ಪಟ್ಟ ಮೇಲೆ ಅದನ್ನು ಮತ್ತೆ ಮತ್ತೆ ಪಡೆಯಬೇಕೆಂಬ ಆಸೆ ಉಂಟಾಗುತ್ತದೆ. ಅದನ್ನು ಪಡೆಯುವರೆಗೂ ನಮಗೆ ದುಃಖ (ಕಷ್ಟ) ಉಂಟಾಗುತ್ತದೆ. ಅತಿಯಾದ ಸುಖದಿಂದ ನಮ್ಮ ಆರೋಗ್ಯ ಹಾಳಾಗಿ, ಆಗಲೂ ದುಃಖ ಉಂಟಾಗಬಹುದು. ಹೀಗೆ, ಸುಖವನ್ನು ಸಾಧಿಸುವುದರಿಂದ ಕೊನೆಗೆ ದುಃಖ ಉಂಟಾಗುತ್ತದೆ, ಎಂಬ ಅನುಭವಿಗಳ ನುಡಿಯಲ್ಲಿ ಸಾಕಷ್ಟು ಸತ್ಯವಿದೆ (ನಮ್ಮ ಸುಖವು ಕೆಲವು ವೇಳೆ ಇತರರಿಗೆ ದುಃಖ ಉಂಟು ಮಾಡುತ್ತದೆ).

**ಸುಚಿತ್ತ :** ಸಾಧಾರಣ ಜನರ ಚಿತ್ತದಲ್ಲಿ ನಾನಾ ರೀತಿಯ ವ್ಯಾಪಾರಗಳು ನಡೆಯುತ್ತಿರುತ್ತವೆ. ನಾವು ಉದ್ದೇಶಪೂರ್ವಕವಾಗಿ ಮಾಡುವ ಕರ್ಮಗಳಿಗೆ ಈ ವ್ಯಾಪಾರಗಳೇ ಕಾರಣ. ಹೀಗಾಗಿ ನಾವು ಅಲ್ಪ ಸುಖವನ್ನೂ ಸಾಗರದಷ್ಟು ದುಃಖವನ್ನೂ ಅನುಭವಿಸುತ್ತಿರುತ್ತೇವೆ. ಹೀಗೆ ನಮ್ಮ ಸುಖದುಃಖಗಳಿಗೆ ಚಿತ್ತದ ವ್ಯಾಪಾರಗಳೇ ಕಾರಣ. ಆದರೆ ಆಧ್ಯಾತ್ಮಿಕ ಸಾಧನೆಯಿಂದ ಚಿತ್ತದ ಮೇಲೆ ನಾವು ನಿಯಂತ್ರಣ ಸಾಧಿಸಬಲ್ಲೆವಾದರೆ, ಆಗ ಅದು ತನ್ನ ವ್ಯಾಪಾರವನ್ನು ಆಧ್ಯಾತ್ಮದ ಕಡೆಗೆ ತಿರುಗಿಸುತ್ತದೆ. ಅಂತಹ ಚಿತ್ತ ಸುಚಿತ್ತವೆನಿಸಿಕೊಳ್ಳುತ್ತದೆ. ['ಸುಚಿತ್ತದಲ್ಲಿ ಲಿಂಗಾರ್ಚನೆಯ ಮಾಡುವ ಶರಣ' (೩:೩೮೫)].

**ಸುಚಿತ್ತಲೇಪಗ್ರಾಹಕ :** ಭಕ್ತನು ಪರಶಿವನಿಗೆ ಭಕ್ತಿಯನ್ನು ತೋರಿಸುವ ಸಲುವಾಗಿ ಪ್ರಾರಂಭದಲ್ಲಿ ಆಹಾರ ವಸ್ತುಗಳನ್ನು ಅರ್ಪಿಸುತ್ತಾನೆ. ಪರಶಿವನು ನಿತ್ಯತೃಪ್ತನೆಂದು ಅರಿತ ಮೇಲೆ, ಅವನಿಗೆ ಆಹಾರ ವಸ್ತುಗಳನ್ನು ಅರ್ಪಿಸುವುದರ ಬದಲು ತನ್ನ ಇಂದ್ರಿಯಗಳನ್ನೂ ಇಂದ್ರಿಯ ವಿಷಯಗಳನ್ನೂ ಅರ್ಪಿಸಿ, ಶುದ್ಧನಾಗುತ್ತಾನೆ. ಹೀಗೆ ಅವನು ಭಕ್ತಸ್ಥಲದಲ್ಲಿ ಪೃಥ್ವಿ ಎಂಬ ತನ್ನ ಅಂಗದಲ್ಲಿರುವ ಸುಚಿತ್ತವೆಂಬ ಹಸ್ತದಿಂದ

ಗಂಧವನ್ನು ಆಚಾರಲಿಂಗದ ಬಾಯಿಯಾದ ಘ್ರಾಣೇಂದ್ರಿಯಕ್ಕೆ ಅರ್ಪಿಸುತ್ತಾನೆ. ಅಂದರೆ ತನ್ನ ಘ್ರಾಣೇಂದ್ರಿಯದಲ್ಲೆ ಅವನು ಆಚಾರಲಿಂಗವನ್ನು ಸ್ಥಾಪಿಸಿರುವುದರಿಂದ, ಅವನ ಮೂಗಿಗೆ ಬರುವ ಗಂಧಗಳೆಲ್ಲ ಆಚಾರಲಿಂಗಕ್ಕೆ ಅರ್ಪಿತವಾದಂತೆಯೇ.

ಸುಚಿತ್ತವನ್ನು ಲೇಪಿಸಿಕೊಂಡು ಅವನು ಆಚಾರಲಿಂಗವನ್ನು ಗ್ರಹಿಸುವುದರಿಂದ, ಅವನು ಸುಚಿತ್ತಲೇಪಗ್ರಾಹಕ ಭಕ್ತನೆನಿಸಿಕೊಳ್ಳುತ್ತಾನೆ ಹಾಗೂ ಅವನು ಗುರುಲಿಂಗವಾಗುತ್ತಾನೆ (೩:೧೧೪೭೦).

**ಸುಜ್ಞಾನ :** ಆತ್ಮಶುದ್ಧಿಯಾದವನ ಜ್ಞಾನ. ಆತ್ಮಶುದ್ಧಿಯಾದವನು ಯಾವಾಗಲೂ ಪರಶಿವನನ್ನೇ ನೆನೆದರೂ, ಅವನಿಗೂ ಸಹ ಪರಶಿವನ ನಿಜಸ್ವರೂಪ ತಿಳಿಯಲಾರದು (೨:೭೦೫).

**ಸುಜ್ಞಾನಲೇಪ ಗ್ರಾಹಕ ಶರಣ :** ಶರಣಸ್ಥಲದ ಸಾಧಕನು ಆಕಾಶ ಎಂಬ ತನ್ನ ಅಂಗದಲ್ಲಿರುವ ಸುಜ್ಞಾನ ಎಂಬ ಹಸ್ತದಿಂದ ಪ್ರಸಾದಲಿಂಗದ ಬಾಯಿಯಾದ ಶ್ರೋತ್ರ (ಕಿವಿ)ಗಳಿಗೆ ಶಬ್ದವನ್ನು ಅರ್ಪಿಸುತ್ತಾನೆ. ಅಂದರೆ, ತನ್ನ ಕಿವಿಗಳಲ್ಲೇ ಅವನು ಪ್ರಸಾದಲಿಂಗವನ್ನು ಪ್ರತಿಷ್ಠಾಪಿಸಿರುವುದರಿಂದ, ಅವನ ಕಿವಿಗಳಿಗೆ ಕೇಳಿಸುವ ಶಬ್ದಗಳೆಲ್ಲವೂ ಅವುಗಳಲ್ಲಿರುವ ಪ್ರಸಾದಲಿಂಗಕ್ಕೆ ಅರ್ಪಿತವಾದಂತೆಯೇ. ಹೀಗೆ ಶರಣನು ತನ್ನ ಸುಜ್ಞಾನವನ್ನು ಲೇಪಿಸಿಕೊಂಡು ಪ್ರಸಾದಲಿಂಗವನ್ನು ಗ್ರಹಿಸಿರುವುದರಿಂದ, ಅವನು ಸುಜ್ಞಾನ ಲೇಪ ಗ್ರಾಹಕ ಶರಣ ಎನಿಸಿಕೊಳ್ಳುತ್ತಾನೆ, ಅಂಥ ಶರಣನು ಮಹಾಲಿಂಗದಲ್ಲಿ ಐಕ್ಯವಾಗುತ್ತಾನೆ (೩:೧೪೭೦).

**ಸುಜ್ಞಾನ ಹಸ್ತ :** (ನೋಡಿ : **ಹಸ್ತಗಳು**).

**ಸುಜ್ಞಾನವಾಹನ :** ಶರಣಸ್ಥಲದಲ್ಲಿರುವ ಸಾಧಕನು ಆತ್ಮ, ಇಂದ್ರಿಯಗಳನ್ನೂ, ದೇಹ, ಅಂತಃಕರಣ, ಇಂದ್ರಿಯ ವಿಷಯಗಳನ್ನು ಪರಶಿವನಿಗೆ ಅರ್ಪಿಸಿರುವುದರಿಂದ ಅವನಿಗೆ ತನ್ನದೆನ್ನುವುದು ಏನೂ ಇಲ್ಲ. ಅವನಿಗೆ ಯಾವ ಸ್ವಾರ್ಥ ಆಸೆಗಳೂ ಇಲ್ಲ. ಅಷ್ಟೇಕೆ, ಅವನು ತಾನು ಮಾಡುವುದೆಲ್ಲವೂ ಶಿವನ ಇಚ್ಛೆಯಂತೆ ಎಂದು ತಿಳಿಯುತ್ತಾನೆ. ಅಥವಾ "ಶಿವನು ನನ್ನ ದೇಹೇಂದ್ರಿಯಾದಿಗಳ ಮೂಲಕ ಅನುಭವಿಸುತ್ತಾನೆ" ಎಂದು ತಿಳಿಯುತ್ತಾನೆ. ಹೀಗೆ ಅವನು ಶಿವನ ಇಚ್ಛೆಯಂತೆ 'ನಡೆ'ಯುವುದರಿಂದ ಅವನು ಶಿವನ ವಾಹನ ಎನಿಸಿಕೊಳ್ಳುತ್ತಾನೆ. ಅವನಿಗೆ ಇರುವುದೆಲ್ಲವೂ ಕೇವಲ ಜ್ಞಾನ (ಸುಜ್ಞಾನ)ವಾದುದರಿಂದ ಅವನು ಸುಜ್ಞಾನವಾಹನ (೩:೧೪೭೦).

**ಸುಬದ್ಧ :** ಮನುಷ್ಯನು ಅಜ್ಞಾನದಿಂದಾಗಿ, ತನ್ನ ನಿಜವಾದ ಗುರಿಯೇನೆಂಬುದನ್ನು ಮರೆತು, ದೇಹ ಮತ್ತು ಇಂದ್ರಿಯಗಳ ಸಲುವಾಗಿ ಅನೇಕ ರೀತಿಯ ಕರ್ಮಗಳನ್ನು ಮಾಡಿ ಬದ್ಧಕನಾಗಿದ್ದಾನೆ. ಈ ಸ್ಥಿತಿಯಲ್ಲಿ ಕರ್ಮ ಮತ್ತು ಸಂಸಾರಗಳ ನಡುವೆ ಬಂಧವಿದೆ.

ಆದರೆ ತಾನಾರೆಂಬುದನ್ನು ತಿಳಿದು, ತನ್ನ ಮತ್ತು ಪರಶಿವನ ನಡುವೆ ಸಂಬಂಧವನ್ನೇರ್ಪಡಿಸಿಕೊಂಡರೆ, ಆಗ ಆ ಸಂಬಂಧ ಸುಬದ್ಧ (ಒಳ್ಳೆಯ ಸಂಬಂಧ)ವೆನಿಸಿಕೊಳ್ಳುತ್ತದೆ (೮:೨೯೨).

**ಸುಬುದ್ಧಿ :** ಬುದ್ಧಿಯು ಯಾವಾಗಲೂ ನಾವು ತಿಳಿದ ವಸ್ತುವಿನ ಸ್ವಭಾವ ಅಥವಾ ಗುಣವನ್ನು (ಉದಾ : ಇದು ಪುಸ್ತಕ) ನಿರ್ಧರಿಸುತ್ತದೆ. ಆಲೋಚಿಸುವುದು ಇದರ ಮತ್ತೊಂದು ಕರ್ತವ್ಯ. ಪ್ರಕೃತಿ ಅಥವಾ ಶಕ್ತಿಯ ವಿಕಾರವಾದ ಬುದ್ಧಿಯು ಸಾಮಾನ್ಯವಾಗಿ ಭೌತಿಕ ಅಥವಾ ಇಂದ್ರಿಯಾನುಭವದ ವಸ್ತುಗಳ ಕಡೆಗೇ ಹರಿಯುತ್ತಿರುತ್ತದೆ. ಆದರೆ ಲಿಂಗಾನುಭವವನ್ನು ಪಡೆದ ವ್ಯಕ್ತಿಯ ಬುದ್ಧಿಯು (ಸುಬುದ್ಧಿಯು). ಯಾವಾಗಲೂ ಒಳ್ಳೆಯದನ್ನೇ ಚಿಂತಿಸುತ್ತಿರುತ್ತದೆ (೨:೧೫೭೯).

**ಸುಬುದ್ಧಿಲೇಪಗ್ರಾಹಕ ಮಹೇಶ್ವರ :** ಮಹೇಶ್ವರ ಸ್ಥಲದಲ್ಲಿ ಸಾಧಕನು ಅಪ್ಪು ಎಂಬ ತನ್ನ ಅಂಗದಲ್ಲಿರುವ ಸುಬುದ್ಧಿ ಎಂಬ ಹಸ್ತದಿಂದ ಗುರುಲಿಂಗದ ಬಾಯಿಯಾದ ಜಿಹ್ವೆಗೆ ರುಚಿಯನ್ನು ಅರ್ಪಿಸುತ್ತಾನೆ. ಅಂದರೆ ತನ್ನ ನಾಲಗೆಯಲ್ಲೇ ಅವನು ಗುರುಲಿಂಗವನ್ನು ಸ್ಥಾಪಿಸಿಕೊಂಡಿರುವುದರಿಂದ, ಅವನ ನಾಲಗೆಗೆ ಬರುವ ರುಚಿಯೆಲ್ಲವೂ ಅದರಲ್ಲಿರುವ ಗುರುಲಿಂಗಕ್ಕೆ ಅರ್ಪಿತವಾದಂತೆಯೇ. ಹೀಗೆ ಮಹೇಶ್ವರನು ತನ್ನ ಸುಬುದ್ಧಿಯನ್ನು ಲೇಪಿಸಿಕೊಂಡು ಗುರುಲಿಂಗವನ್ನು ಗ್ರಹಿಸುವುದರಿಂದ ಅವನು ಸುಬುದ್ಧಿಲೇಪ ಗ್ರಾಹಕ ಮಹೇಶ್ವರನೆನಿಸಿಕೊಳ್ಳುತ್ತಾನೆ, ಹಾಗೂ ಅವನು ಶಿವಲಿಂಗವಾಗುತ್ತಾನೆ (೩:೧೪೭೦).

**ಸುಮನ :** ಸಾಧಾರಣ ವ್ಯಕ್ತಿಯ ಮನಸ್ಸು ಕ್ಷಣಕ್ಕೊಂದು ಪ್ರಾಪಂಚಿಕ ವಸ್ತುವನ್ನು ಚಿಂತಿಸುವುದರಿಂದ, ಅದು ಅಸ್ಥಿರವಾಗಿರುತ್ತದೆ. ಆದರೆ ಆಧ್ಯಾತ್ಮಿಕ ಪ್ರಗತಿ ಸಾಧಿಸಿದ ಭಕ್ತನ ಮನಸ್ಸು (ಅಥವಾ ಸುಮನ) ಪರಶಿವನಲ್ಲೇ ಸ್ಥಿರವಾಗಿ ನೆಲೆಸಿರುತ್ತದೆಯಲ್ಲದೆ, ಪ್ರಾಪಂಚಿಕ ವಿಷಯಗಳ ಕಡೆಗೆ ಅನಾವಶ್ಯಕವಾಗಿ ಹರಿಯುವುದಿಲ್ಲ (೨:೨೭೧).

**ಸುಮನಲೇಪಗ್ರಾಹಕ ಪ್ರಾಣಲಿಂಗಿ :** ಪ್ರಾಣಲಿಂಗಿಸ್ಥಲದಲ್ಲಿ ಸಾಧಕನು ವಾಯು ಎಂಬ ತನ್ನ ಅಂಗದಲ್ಲಿರುವ ಸುಮನ ಎಂಬ ಹಸ್ತದಿಂದ ಜಂಗಮಲಿಂಗದ ಬಾಯಿಯಾದ ತ್ವಗಿಂದ್ರಿಯಕ್ಕೆ ಸ್ಪರ್ಶವನ್ನು ಅರ್ಪಿಸುತ್ತಾನೆ. ಅಂದರೆ, ತನ್ನ ಚರ್ಮದಲ್ಲೆ ಅವನು ಜಂಗಮಲಿಂಗವನ್ನೂ ಪ್ರತಿಷ್ಠಾಪಿಸಿರುವುದರಿಂದ, ಅವನ ಚರ್ಮವು ಪಡೆಯುವ ಸ್ಪರ್ಶನವೆಲ್ಲವೂ ಅದರಲ್ಲಿರುವ ಜಂಗಮಲಿಂಗಕ್ಕೆ ಅರ್ಪಿತವಾದಂತೆಯೇ. ಹೀಗೆ ಪ್ರಾಣಲಿಂಗಿಯು ತನ್ನ ಸುಮನವನ್ನು ಲೇಪಿಸಿಕೊಂಡು ಜಂಗಮಲಿಂಗವ ಗ್ರಾಹಕನಾಗಿರುವುದರಿಂದ, ಅವನನ್ನು ಸುಮನಲೇಪ ಗ್ರಾಹಕವೆಂದು ಕರೆಯಲಾಗುತ್ತದೆ. ಅವನು ಮುಂದೆ ಪ್ರಸಾದಲಿಂಗದಲ್ಲಿ ಐಕ್ಯವಾಗುತ್ತಾನೆ (೩:೧೪೭೦).

**ಸುರುಚಿ :** ಪ್ರಾಣಲಿಂಗಿಯು ತನ್ನ ಶರೀರದ ಎಲ್ಲ ಅಂಗಗಳಲ್ಲಿಯೂ ಲಿಂಗವನ್ನು ಸ್ಥಾಪಿಸಿರುವುದರಿಂದ, ಅವನ ಇಂದ್ರಿಯಗಲಿಗೆ ಬಂದುದೆಲ್ಲಾ ಪ್ರಸಾದವೇ (ಒಳ್ಳೆಯದೇ) ಆಗುತ್ತದೆ. ಹೀಗಿರುವದರಿಂದ ಅವನ ನಾಲಗೆಯ ತುದಿಯಲ್ಲಿರುವ ಲಿಂಗವು ರುಚಿಯನ್ನು ಪಡೆದು ಅದನ್ನು ಸುರುಚಿ ಎಂಬ ಪ್ರಸಾದವನ್ನಾಗಿ ಮಾಡುತ್ತದೆ. ಬಂದ ರುಚಿಯೆಲ್ಲಾ ಹೀಗೆ ಪ್ರಸಾದವಾಗುವುದರಿಂದ, ಕೆಟ್ಟ ರುಚಿ ಎಂಬುದು ಅವನಿಗೆ ಉಂಟಾಗದೆ, ಬರೀ ಸುರುಚಿ ಉಂಟಾಗುತ್ತದೆ (೩:೧೦೮೨).

**ಸುರೂಪ :** ಪ್ರಾಣಲಿಂಗಿಯು ತನ್ನ ಶರೀರದ ಎಲ್ಲ ಅಂಗಗಳಲ್ಲಿಯೂ ಲಿಂಗವನ್ನು ಪ್ರತಿಷ್ಠಾಪಿಸಿರುತ್ತಾನೆ. ಹೀಗಿರುವುದರಿಂದ ಅವನ ಕಣ್ಣಿನ ತುದಿಯಲ್ಲಿರುವ ಲಿಂಗವು ರೂಪನ್ನು ಪಡೆದು ಅದನ್ನು ಸುರೂಪ ಎಂಬ ಪ್ರಸಾದವನ್ನಾಗಿ ಮಾಡುತ್ತದೆ. ಅಲ್ಲಿಗೆ ಕುರೂಪ ಬರಲು ಸಾಧ್ಯವೇ ಇಲ್ಲ. ಏಕೆಂದರೆ ಆ ಕುರೂಪನ್ನು ಪ್ರಾಣಲಿಂಗಿಯು ಪ್ರಸಾದವನ್ನಾಗಿ ಮಾಡಿಕೊಳ್ಳುತ್ತಾನೆ. ಕುಪ್ರಸಾದ ಎಂಬುದಿಲ್ಲವಾದುದರಿಂದ, ಕುರೂಪವೂ ಸುರೂಪವೆಂಬ ಪ್ರಸಾದವಾಗುತ್ತದೆ (೩:೧೦೮೨).

**ಸುವಾಸನೆ :** ಸರ್ವಾಂಗಲಿಂಗಿಯು ತನ್ನ ಶರೀರದ ಎಲ್ಲ ಅಂಗಗಳಲ್ಲಿಯೂ ಲಿಂಗವನ್ನು ಸ್ಥಾಪಿಸಿರುವುದರಿಂದ, ಅವನ ಜ್ಞಾನೇಂದ್ರಿಯಗಳಿಗೆ ಬಂದ ವಿಷಯಗಳೆಲ್ಲ ಪ್ರಸಾದವೇ ಆಗುತ್ತದೆ. ಹೀಗಿರುವುದರಿಂದ, ಅವನ ಘ್ರಾಣೇಂದ್ರಿಯದ ತುದಿಯಲ್ಲಿರುವ ಲಿಂಗವು ಯಾವ ವಾಸನೆಯನ್ನು ಪಡೆದರೂ ಅದನ್ನು ಸುವಾಸನೆ ಎಂಬ ಪ್ರಸಾದವನ್ನಾಗಿ ಪರಿವರ್ತಿಸುತ್ತದೆ. ಬಂದ ವಾಸನೆಯೆಲ್ಲ ಹೀಗೆ ಪ್ರಸಾದವಾಗುವುದರಿಂದ, ದುರ್ವಾಸನೆ ಎಂಬುದು ಪ್ರಾಣಲಿಂಗಿಗೆ ಉಂಟಾಗದೆ, ಕೇವಲ ಸುವಾಸನೆ ಉಂಟಾಗುತ್ತದೆ. (೩:೧೦೮೨).

**ಸುಶಬ್ದ :** ಪ್ರಾಣಲಿಂಗಿಯು ತನ್ನ ಶರೀರದ ಪ್ರತಿಯೊಂದು ಅಂಗದಲ್ಲಿಯೂ ಲಿಂಗವನ್ನು ಪ್ರತಿಷ್ಠಾಪಿಸಿಕೊಂಡಿರುತ್ತಾನೆ. ಹೀಗಿರುವುದರಿಂದ, ಅವನ ಶ್ರೋತ್ರದ ಕೊನೆಯಲ್ಲಿ ಲಿಂಗವಿರುವುದರಿಂದ, ಅಲ್ಲಿಗೆ ಬಂದ ಶಬ್ದವೆಲ್ಲ ಸುಶಬ್ದವೇ ಆಗುತ್ತದೆ. ಅಂದರೆ, ಯಾವ ರೀತಿಯ ಶಬ್ದ ಬಂದರೂ ಪ್ರಾಣಲಿಂಗಿಯು ಅದನ್ನು ಪ್ರಸಾದ ಎಂದು ಸ್ವೀಕರಿಸುವುದರಿಂದ, ಅವನು ಕುಶಬ್ದವನ್ನು ಕೇಳುವುದೇ ಇಲ್ಲ. (೩:೧೦೮೨).

**ಸುಷುಮ್ನ ನಾಡಿ :** (ನೋಡಿ : ನಾಡಿಗಳು).

**ಸುಸ್ಪರ್ಶನ :** ಪ್ರಾಣಲಿಂಗಿ ಅಥವಾ ಸರ್ವಾಂಗ ಲಿಂಗಿಯು ತನ್ನ ಶರೀರದ ಎಲ್ಲ ಅಂಗಗಳಲ್ಲಿಯೂ ಲಿಂಗವನ್ನು ಪ್ರತಿಷ್ಠಾಪಿಸಿರುತ್ತಾನೆ. ಹೀಗಿರುವುದರಿಂದ ಅವನ ಚರ್ಮದ ಕೊನೆಯಲ್ಲಿ (ಮುಂಭಾಗದಲ್ಲಿ) ಲಿಂಗವಿರುವುದರಿಂದ, ಅಲ್ಲಿಗೆ ಬಂದ ಸ್ಪರ್ಶವೆಲ್ಲಾ ಸುಸ್ಪರ್ಶವೇ ಆಗುತ್ತದೆ. ಅಂದರೆ ಯಾವ ರೀತಿಯ ಸ್ಪರ್ಶನ ಬಂದರೂ

ಪ್ರಾಣಲಿಂಗಿಯು ಅದನ್ನು ಪ್ರಸಾದ ಎಂದು ತಿಳಿಯುವುದರಿಂದ, ಅವನಿಗೆ ಕೆಟ್ಟ ಸ್ಪರ್ಶ ಇರುವುದೇ ಇಲ್ಲ. (೩:೧೦೮೨).

**ಸೂಕ್ಷ್ಮಶಕ್ತಿ :** ಸೂಕ್ಷ್ಮಶಕ್ತಿಯು ಇಂದ್ರಿಯಗಳಿಗೆ ಗೋಚರವಾಗದೆ, ಅದು ತನ್ನ ಪರಿಣಾಮಗಳ ಮೂಲಕ ವ್ಯಕ್ತವಾಗುತ್ತದೆ. ಪಾಪಪುಣ್ಯಗಳು ಅಗೋಚರ (ಅದೃಷ್ಟ)ವಾಗಿದ್ದರೂ, ದುಃಖಸುಖಗಳು ಉಂಟಾದಾಗ, ಇವು ಪಾಪಪುಣ್ಯಗಳಿಂದ ಉಂಟಾಗಿವೆ ಎಂದು ತೀರ್ಮಾನಿಸುತ್ತೇವೆ. ಕಾಲವು ಅಮೂರ್ತವಾಗಿದ್ದರೂ, ಅದು ಪತ್ರಪುಷ್ಪಾದಿಗಳಿಗೆ ಕಾರಣವಾಗಿರುವಂತೆ, ಮಂತ್ರ ಪ್ರಯೋಗದಿಂದ ಗರಹರಣವಾಗುವಂತೆ, ಪ್ರಸಾದವೆಂಬ ಸೂಕ್ಷ್ಮ ಶಕ್ತಿಯಿಂದ ಅನಿಷ್ಟ ನಿವಾರಣೆಯೂ ಇಷ್ಟಪ್ರಾಪ್ತಿಯೂ ಆಗುತ್ತದೆ.

**ಸೂಕ್ಷ್ಮಶರೀರ :** ಪುರಾತನ ಭಾರತೀಯ ದಾರ್ಶನಿಕರು ಪ್ರತಿಪಾದಿಸುವ ಹಾಗೂ ವಚನಕಾರರು ಒಪ್ಪಿಕೊಂಡಿರುವ ಒಂದು ಸಿದ್ಧಾಂತದ ಪ್ರಕಾರ, ಪ್ರತಿಯೊಬ್ಬ ವ್ಯಕ್ತಿಗೂ ಸ್ಥೂಲಶರೀರ, ಸೂಕ್ಷ್ಮಶರೀರ ಮತ್ತು ಕಾರಣಶರೀರ ಎಂಬ ಮೂರು ಶರೀರಗಳಿರುತ್ತವೆ. ಸ್ಥೂಲ ಶರೀರವು ಪಂಚಮಹಾಭೂತಗಳಿಂದಾಗಿದ್ದು ಅದು ಹುಟ್ಟು-ಸಾವು, ರೋಗ-ರುಜಿನ ಮುಂತಾದ ಬದಲಾವಣೆಗೆ ಒಳಪಡುತ್ತದೆ. ಸೂಕ್ಷ್ಮಶರೀರವು ಹತ್ತು ಇಂದ್ರಿಯಗಳು, ಐದು ತನ್ಮಾತ್ರೆಗಳು ಮತ್ತು ಮೂರು ಅಂತಃಕರಣಗಳನ್ನೂ ಒಳಗೊಳ್ಳುತ್ತದೆ. ಸಾವಿನ ನಂತರ ಸ್ಥೂಲ ಶರೀರವು ಬಿದ್ದು ಹೋದರೆ ಜೀವಾತ್ಮನು ಸೂಕ್ಷ್ಮಶರೀರ ಮತ್ತು ಕಾರಣ ಶರೀರದೊಂದಿಗೆ ಮುಂದಿನ ಜನ್ಮಕ್ಕೆ ಹೋಗಿ ಮತ್ತೊಂದು ಸ್ಥೂಲಶರೀರವನ್ನು ಪಡೆಯುತ್ತಾನೆ.

**ಸೂತಕ ನಾಲ್ಕು :**

೧. ಶಬ್ದಸೂತಕಿ : ತಮಗೆ ಎಲ್ಲಾ ಗೊತ್ತು ಎಂದು ಹೇಳಿಕೊಳ್ಳುವ ಅಜ್ಞಾನಿಗಳು (೩:೬೫೩).

೨. ಲಿಂಗಸೂತಕಿ : ಮಾತು ಮಾತಿಗೆ ಲಿಂಗವೆನ್ನುವ ಆದರೆ ಲಿಂಗದ ಮಹತ್ವ ಗೊತ್ತಿಲ್ಲದವನು (೩:೬೭೬).

೩. ಜಂಗಮಸೂತಕಿ : ನಿಜವಾದ ಜಂಗಮ ಯಾರು ಎಂದು ತಿಳಿಯದೆಯೇ ಮಾತು ಮಾತಿಗೆ ಜಂಗಮ ಜಂಗಮ ಎನ್ನುವವನು.

೪. ಪ್ರಸಾದ ಸೂತಕಿ : ಪ್ರಸಾದದ ಮಹತ್ವ ಗೊತ್ತಿಲ್ಲದೆ ಪ್ರಸಾದದ ಹೆಸರಿನಲ್ಲಿ ಪದೇ ಪದೇ ಆಹಾರ ಪಾನೀಯಗಳನ್ನು ಸ್ವೀಕರಿಸುವವನು.

**ಸೂತಕವಾರು :** ಕುಲಸೂತಕ, ಛಲಸೂತಕ, ತನುಸೂತಕ, ಮನಸೂತಕ, ನೆನಹು ಸೂತಕ ಮತ್ತು ಭಾವಸೂತಕ. ಸೂತಕವೆಂದರೆ ನಾವೇ ಕಲ್ಪಿಸಿಕೊಂಡ ದೋಷಗಳೇ ಹೊರತು ಸಹಜ ದೋಷಗಳಲ್ಲ. ಇವುಗಳ ವಿವರ :

ಒಬ್ಬ ವ್ಯಕ್ತಿ ಕೀಳು ಕುಲಕ್ಕೆ ಸೇರಿದ್ದರೆ, ಅವನಿಗೆ ಕುಲಸೂತಕವಿದೆ ಎಂದರ್ಥ. ಅವನನ್ನು ಮೇಲು ಕುಲಕ್ಕೆ ಸೇರಿದವರು ಮುಟ್ಟುವುದಿಲ್ಲ.

ನಮ್ಮ ಅನೇಕ ಸದ್ಭಾವನೆ, ಸದುದ್ದೇಶಗಳು ನಮ್ಮ ಛಲದಿಂದಾಗಿ ವ್ಯಕ್ತವಾಗುವುದಿಲ್ಲ. ನಾನು ಎಷ್ಟೇ ಒಳ್ಳೆಯವನಾಗಿದ್ದರೂ, ನನ್ನ ವಿರೋಧಿಯ ಛಲದಿಂದಾಗಿ ನಾನು ಅವನಿಗೆ, ಅವನ ಕಡೆಯವರಿಗೆ ಕರುಣೆ ತೋರಿಸುವುದಿಲ್ಲ. ಈ ರೀತಿಯ ಛಲವು ಒಂದು ಸೂತಕವಾಗಿದ್ದು ಅದು ನಮ್ಮ ಆತ್ಮವನ್ನು ಅಶುದ್ಧ ಮಾಡುತ್ತದೆ.

ಸ್ನಾನ ಮಾಡದಿದ್ದರೆ, ಮುಟ್ಟಾಗಿದ್ದರೆ ತನುಸೂತಕವಾಗುತ್ತದೆ, ಮನಸ್ಸಿನಲ್ಲಿ ಕಾಮ, ಕ್ರೋಧ, ಮದ ಇತ್ಯಾದಿಗಳಿದ್ದರೆ, ಮನ ಸೂತಕವಾಗುತ್ತದೆ, ಅರಿವು ಅಥವಾ ನೆನಹು ಅನೇಕ ಉಪಾಧಿಗಳಿಂದಾಗಿ ಅದು ಅಸುಖಿಯಾಗಿರುವುದರಿಂದ, ನೆನಹು ಸೂತಕಕ್ಕೊಳಗಾಗಿದೆ, ಎಂದರ್ಥ. ಜೀವನಿಗೆ ತಾನು ಪ್ರತ್ಯೇಕ ಎಂಬ ಭಾವ ಬಂದರೆ ಅದು ಭಾವಸೂತಕ.

**ಸೂತಕ ಶ್ರುತ :** ಕೇಳಬಾರದ ಮಾತು, ಕೆಟ್ಟ ಮಾತು (೪:೩).

**ಸೃಷ್ಟಿ :** ವಚನಗಳಲ್ಲಿ ಈ ಪದಕ್ಕೆ ಎರಡು ಅರ್ಥಗಳಿವೆ. ಒಂದರ್ಥದಲ್ಲಿ ಅದು ಪರಶಿವನ ಸೃಷ್ಟಿಕಾರ್ಯಕ್ಕೆ ಅನ್ವಯಿಸಿದರೆ, ಮತ್ತೊಂದರ್ಥದಲ್ಲಿ 'ಸೃಷ್ಟಿ'ಯು ಸೃಷ್ಟಿಯಾದ ಜಗತ್ತಿಗೆ ಅನ್ವಯಿಸುತ್ತದೆ. ಮೊದಲನೆಯದು ಒಂದು ಪ್ರಕ್ರಿಯೆ, ಎರಡನೆಯದು ಆ ಪ್ರಕ್ರಿಯೆಯ ಪರಿಣಾಮ. ಈಗ ಮೊದಲಿನ ಅರ್ಥಕ್ಕೆ ಒತ್ತು ಕೊಡೋಣ.

ಜೈನರೂ, ಮೂಲ ಪೂರ್ವಮೀಮಾಂಸಕರೂ ಪ್ರಪಂಚವು ಸೃಷ್ಟಿಯಾಗಿದೆ ಎಂಬ ಮಾತನ್ನು ಒಪ್ಪುವುದಿಲ್ಲ. ಅವರ ಪ್ರಕಾರ, ಪ್ರಪಂಚವು ಅನಾದಿಕಾಲದಿಂದಲೂ ಇದೆ. ಸಾಂಖ್ಯರು ಮತ್ತು ವೈಶೀಷಿಕ ದರ್ಶನದ ಪ್ರವರ್ತಕನಾದ ಕಣಾದ ಮಹರ್ಷಿ ಸೃಷ್ಟಿ, ಸ್ಥಿತಿ ಮತ್ತು ಲಯ ಎಂಬ ಕ್ರಿಯೆಗಳು ಚಕ್ರ ತಿರುಗಿದಂತೆ ಒಂದಾಮೇಲೊಂದರಂತೆ ಜರಗುತ್ತವೆ ಎಂದೂ, ಇವು ಅನಾದಿ ಅನಂತವೆಂದೂ ಹೇಳುತ್ತಾರೆ. ಆದರೆ ಜೈನ, ಬೌದ್ಧ, ಚಾರ್ವಾಕ, ಪೂರ್ವ ಮೀಮಾಂಸಕ, ಸಾಖ್ಯ, ವೈಶೀಷಿಕ ಇವರಾರೂ ಸೃಷ್ಟಿಕರ್ತನಿದ್ದಾನೆಂಬ ಮಾತನ್ನು ಒಪ್ಪಿಕೊಳ್ಳುವುದಿಲ್ಲ. ಭೌತವಸ್ತುವಲ್ಲದ ಮತ್ತೇನನ್ನೂ ಒಪ್ಪಿಕೊಳ್ಳದ ಚಾರ್ವಾಕನಿಗೆ ಸೇಶ್ವರವಾದ ವರ್ಜ್ಯ; ಪ್ರಪಂಚವು ಅನಾದಿಕಾಲದಿಂದಲೂ ಇರುವುದರಿಂದ ಅದನ್ನು ಸೃಷ್ಟಿಸಲು ಈಶ್ವರ ಬೇಕಿಲ್ಲ, ಎಂದು ಪೂರ್ವ ಮೀಮಾಂಸಕ, ಜೈನ ಮತ್ತು ಬೌದ್ಧರು ವಾದಿಸುತ್ತಾರೆ. ಸೃಷ್ಟಿ, ಸ್ಥಿತಿ, ಮತ್ತು ಲಯ ಎಲ್ಲವೂ ಆತ್ಮಗಳು ಮಾಡಿದ ಕರ್ಮ ಅಥವಾ ಅದೃಷ್ಟಕ್ಕೆ ತಕ್ಕಂತೆ ನಡೆಯುತ್ತವೆ ಎಂಬುದು ಸಾಂಖ್ಯ ಮತ್ತು ಮೂಲ ವೈಶೇಷಿಕರ ವಾದ.

ಆದರೆ, ವಚನಕಾರರ ಪ್ರಕಾರ, ಪ್ರಪಂಚದಲ್ಲಿರುವ ಎಲ್ಲ ವಸ್ತುಗಳೂ ಶಕ್ತಿಯಿಂದ ಮಾಡಲ್ಪಟ್ಟಿವೆ. ಆದರೆ ಶಕ್ತಿಯು ಮೂಲತಃ ಜಡವಾಗಿದ್ದು ಅದು

ಬದಲಾವಣೆಗೊಳಪಡಬೇಕಾದರೆ ಅದನ್ನು ಪ್ರಚೋದಿಸುವ, ಚೇತನ ಬೇಕು. ಈ ಚೇತನವೇ ಪರಶಿವ. ಶಕ್ತಿಯು ಪರಶಿವನ ಹೊರಗಿಲ್ಲ. ಅವನಿಗೂ ಶಕ್ತಿಗೂ ಇರುವ ಸಂಬಂಧ ಕುಂಬಾರ ಮತ್ತು ಮಣ್ಣಿಗೂ ಇರುವ ಸಂಬಂಧದಂತಲ್ಲ. ಶಕ್ತಿಯು ಶಿವನ ಒಂದು ವಿಶೇಷಣ. ಆದುದರಿಂದಲೇ ಅವನನ್ನು ಶಕ್ತಿ ವಿಶಿಷ್ಟಶಿವ ಎಂದು ಕರೆಯಲಾಗುತ್ತದೆ. ಕುಂಬಾರ ಮತ್ತು ಮಣ್ಣು ಎರಡು ಬೇರೆ ಬೇರೆ ರೀತಿಯ ಮತ್ತು ಪರಸ್ಪರರಿಂದ ದೂರ ಇರುವ ವಸ್ತುಗಳಾದರೆ, ಪರಶಿವ ಮತ್ತು ಶಕ್ತಿ ಒಂದೇ ವಸ್ತು. ಇದನ್ನು ನಾವು ಒಂದು ಉಪಮೆಯ ಮೂಲಕ ಹೀಗೆ ವಿವರಿಸಬಹುದು: ಹೂವು ಮತ್ತು ಅದರ ಸುಗಂಧ ಬೇರೆ ಬೇರೆ ರೀತಿಯ ವಸ್ತುಗಳಾದರೂ ಹೂವಿಲ್ಲದೆ ಸುಗಂಧವಿಲ್ಲ, ಸುಗಂಧವಿಲ್ಲದೇ ಹೂವಿಲ್ಲ. ಅದೇ ರೀತಿ ಪರಶಿವನಿಲ್ಲದೆ ಶಕ್ತಿಯೊಂದೇ ವಿಕಾಸವಾಗಲಾರದು, ವಿಕಾಸವಾಗುತ್ತದೆ ಎಂದು ಹೇಳಿದರೆ ಅದು ಸಾಂಖ್ಯದರ್ಶನವಾಗುತ್ತದೆ. ಆದರೆ ಈ ಮಾತನ್ನು ವಚನಕಾರರು ಒಪ್ಪುವುದಿಲ್ಲ. ಅದೇ ರೀತಿ ಶಕ್ತಿಯಿಲ್ಲದೆ ಪರಶಿವನೊಬ್ಬನೆ ಇರಬಲ್ಲನು ಎಂಬ ಅದ್ವೈತಿಗಳ ಮಾತು ವಚನಕಾರರಿಗೆ ಒಪ್ಪಿಗೆಯಾಗುವುದಿಲ್ಲ. ಶಕ್ತಿಯಿಲ್ಲದ ಪರಶಿವ ಯಾವುದರಿಂದ ಸೃಷ್ಟಿಮಾಡುತ್ತಾನೆ? ಒಂದು ವೇಳೆ ಸೃಷ್ಟಿಯೇ ಇಲ್ಲವೆಂದರೆ, ಅದೂ ತಪ್ಪಾಗುತ್ತದೆ. ಏಕೆಂದರೆ, ಹಾಗೆ ಹೇಳುವವನಾದರೂ ಸೃಷ್ಟಿಯಾಗಿರಬೇಕು. ಆದುದರಿಂದ ಸೃಷ್ಟಿಯಾದ ಜಗತ್ತಿದೆ, ಪರಶಿವನೂ ಇದ್ದಾನೆ, ಆದರೆ ಪರಶಿವನಿಗೆ ಸೃಷ್ಟಿಸಲು ಬೇಕಾದ ಶಕ್ತಿಯಿಲ್ಲ ಎಂದು ಹೇಳುವುದು ಅಸಮಂಜಸ.

ಕೆಲವು ವೇಳೆ ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾರ, ಆತ್ಮ, ಸೂರ್ಯ ಮತ್ತು ಚಂದ್ರ ಎಂಬ ಎಂಟು ತತ್ವಗಳಿಂದ ಪರಶಿವನು ಸೃಷ್ಟಿಸುತ್ತಾನೆಂದೂ, ಆ ಸೃಷ್ಟಿಯೇ (ಅಥವಾ ಎಂಟು ತತ್ವಗಳೇ) ಪರಶಿವನ ಶರೀರವೆಂದೂ ವಚನಕಾರರು ಹೇಳುತ್ತಾರೆ. ಇಂಥ ಜಗತ್ತು (ಶಿವನ) ಅಷ್ಟತನು.

ಶಿವ ಮತ್ತು ಶಕ್ತಿಗಳ ಸಂಬಂಧ ಹೀಗಿರುವುದರಿಂದ ಪ್ರಪಂಚದ ಸೃಷ್ಟಿಗೆ ಬೇಕಾಗುವುದು ಪರಶಿವನ ಇಚ್ಛೆ ಮಾತ್ರ. ಅವನು ಇಚ್ಛಿಸಿದ ಕೂಡಲೆ ಅವನಲ್ಲೆ ಅವ್ಯಕ್ತವಾಗಿ ಅಡಗಿದ್ದ ಶಕ್ತಿಯು ವಿಕಾಸವಾಗಲು ಪ್ರಾರಂಭವಾಗುತ್ತದೆ. ಶಕ್ತಿವಿಕಾಸವು ಒಂದು ಕ್ರಮವನ್ನನುಸರಿಸುತ್ತದೆ. ವಚನಕಾರರ ಈ ಪರಿಕಲ್ಪನೆಯನ್ನು ಸ್ಥೂಲವಾಗಿ ಹೀಗೆ ಮಂಡಿಸಬಹುದು.

ಮೊದಲು ಪರಶಿವನು ತಾನೊಬ್ಬನೇ ಇರುತ್ತಾನೆ. ಆಗ ಅವನಿಗೆ ಪ್ರಪಂಚದ ಬಗೆಗಿನ ಅರಿವು ಇರುವುದಿಲ್ಲ. ಏಕೆಂದರೆ ಆಗ ಪ್ರಪಂಚವೇ ಇನ್ನೂ ಸೃಷ್ಟಿಯಾಗಿರುವುದಿಲ್ಲ. ಪ್ರಪಂಚವನ್ನು ಸೃಷ್ಟಿಸಬೇಕೆಂಬ ಇಚ್ಛೆ ಉಂಟಾಗುತ್ತದೆ. ಇದನ್ನು ನಿಃಕಲ (ನಿಷ್ಕಲ) ಲಿಂಗ ಸ್ಥಲ ಎಂದು ಕರೆಯುವುದು ರೂಢಿ. ಆಗ ಶಕ್ತಿಯಲ್ಲಿ ಕ್ಷೋಭೆ (ಚಲನೆ) ಉಂಟಾಗಿ ನಿಷ್ಕಲ ಲಿಂಗವು ಲಿಂಗಸ್ಥಲ ಮತ್ತು ಅಂಗಸ್ಥಲ ಎಂಬ ಎರಡು ಭಾಗವಾಗುತ್ತದೆ. ಅದೇ

ರೀತಿ ನಿಷ್ಕಲಲಿಂಗದಲ್ಲಿದ್ದ ಶಕ್ತಿಯೂ ಎರಡು ಭಾಗವಾಗಿ, ಲಿಂಗಸ್ಥಲದಲ್ಲಿರುವ ಶಕ್ತಿಯು ಕಲಾಶಕ್ತಿಯೊಂದೂ, ಅಂಗಸ್ಥಲದಲ್ಲಿರುವ ಶಕ್ತಿಯು ಭಕ್ತಿಶಕ್ತಿಯೆಂದೂ ಎನಿಸಿಕೊಳ್ಳುತ್ತದೆ. ಲಿಂಗಸ್ಥಲವೆಂದರೆ ಪೂಜ್ಯಲಿಂಗ, ಅಂಗಸ್ಥವೆಂದರೆ ಪೂಜಕ ಅಂಗ. ಲಿಂಗಸ್ಥಲವು ಮತ್ತೆ ಆರು ಭಾಗವಾಗಿ, ಅದರ ಜೊತೆಯಲ್ಲಿರುವ ಕಲಾಶಕ್ತಿಯೂ ಆರು ಭಾಗವಾಗುತ್ತದೆ, ಅಲ್ಲದೆ ನಿಷ್ಕಲ ಲಿಂಗದ ಜೊತೆಗಿರುವ ಶಕ್ತಿಯು ಹೇಗೆ ಅದರ ಅವಿಭಾಜ್ಯ ಅಂಗವಾಗಿರುತ್ತದೆಯೋ ಹಾಗೆಯೇ ಲಿಂಗಸ್ಥಲದ ಆರು ಭಾಗಗಳ ಜೊತೆಗಿರುವ ಆರು ಕಲಾಶಕ್ತಿಗಳೂ ಅವುಗಳ ಅವಿಭಾಜ್ಯ ಅಂಗಗಳಾಗಿರುತ್ತವೆ. ಲಿಂಗಸ್ಥಲದ ಆರು ಭಾಗಗಳು ಮತ್ತು ಅವುಗಳ ಅಂಗಗಳಾದ ಆರು ಕಲಾಶಕ್ತಿಗಳ ವಿವರ ಹೀಗಿದೆ : ಮಹಾಲಿಂಗ ಮತ್ತು ಚಿತ್‌ಶಕ್ತಿ, ಪ್ರಸಾದಲಿಂಗ ಮತ್ತು ಪರಾಶಕ್ತಿ, ಜಂಗಮಲಿಂಗ ಮತ್ತು ಆದಿಶಕ್ತಿ, ಶಿವಲಿಂಗ ಮತ್ತು ಇಚ್ಛಾಶಕ್ತಿ, ಗುರುಲಿಂಗ ಮತ್ತು ಜ್ಞಾನಶಕ್ತಿ, ಆಚಾರಲಿಂಗ ಮತ್ತು ಕ್ರಿಯಾಶಕ್ತಿ. ಕೆಲವು ವೇಳೆ ಲಿಂಗಗಳ ಬದಲು ಅಧಿದೇವತೆಗಳ ಹೆಸರನ್ನು ಬಳಸಲಾಗುತ್ತದೆ. ಮತ್ತೆ ಕೆಲವು ವೇಳೆ ಸಾದಾಖ್ಯಗಳ ಹೆಸರುಗಳನ್ನು ಬಳಸಲಾಗಿತ್ತದೆ. ಪರಶಿವನು ಈ ಶಕ್ತಿಗಳನ್ನೂ ಈ ಅಧಿದೇವತೆಗಳನ್ನೂ ಒಂದೇ ಏಟಿಗೆ ಸೃಷ್ಟಿಸದೆ ಒಂದಾದ ನಂತರ ಒಂದರಂತೆ ಈ ಕೆಳಗಿನಂತೆ ಸೃಷ್ಟಿಸುತ್ತಾನೆ ಎಂದು ಚೆನ್ನಬಸವಣ್ಣನವರು ಹೇಳುತ್ತಾರೆ :

ಸಹಜದಿಂದ ನಿರಾಲಂಬವಾಯ್ತು, ನಿರಾಲಂಬದಿಂದ ನಿರವಯವಾಯಿತ್ತು;
ನಿರವಯದಿಂದ ನಿರಾಕಾರವಾಯಿತ್ತು, ನಿರಾಕಾರದಿಂದ ಆದಿಯಾಯಿತ್ತು;
ಆದಿಯಿಂದ ಮೂರ್ತಿಯಾದವನೊಬ್ಬ ಶರಣ;
ಆ ಶರಣನ ಮೂರ್ತಿಯಿಂದ ಸದಾಶಿವನಾದ;
ಆ ಸದಾಶಿವ ಮೂರ್ತಿಗೆ ಜ್ಞಾನಶಕ್ತಿಯಾದಳು;
ಆ ಸದಾಶಿವಂಗೆಯೂ ಜ್ಞಾನಶಕ್ತಿಯರಿಬ್ಬರಿಗೆಯೂ ಶಿವನಾದ;
ಆ ಶಿವಂಗೆ ಇಚ್ಛಾಶಕ್ತಿಯಾದಳು;
ಆ ಶಿವಂಗೆಯೂ ಇಚ್ಛಾಶಕ್ತಿಯಿಬ್ಬರಿಗೆಯೂ ರುದ್ರನಾದ;
ಆ ರುದ್ರಂಗೆ ಕ್ರಿಯಾಶಕ್ತಿಯಾದಳು.
ಆ ರುದ್ರಂಗೆಯೂ ಕ್ರಿಯಾಶಕ್ತಿಯಿಬ್ಬರಿಗೆಯೂ ವಿಷ್ಣುವಾದ;
ಆ ವಿಷ್ಣುವಿಂಗೆ ಮಹಾಲಕ್ಷ್ಮಿಯಾದಳು.
ಆ ವಿಷ್ಣುವಿಂಗೆಯೂ ಮಹಾಲಕ್ಷ್ಮಿಯಿಬ್ಬರಿಗೆಯೂ ಬ್ರಹ್ಮನಾದ,

ಆ ಬ್ರಹ್ಮಂಗೆ ಸರಸ್ವತಿಯಾದಳು.
ಆ ಬ್ರಹ್ಮಂಗೆಯೂ ಸರಸ್ವತಿಯಿಬ್ಬರಿಗೆಯೂ
ನರರು ಸುರರು ದೇವರ್ಕಗಳು ಹೆಣ್ಣುಗಂಡು,
ಸಚರಾಚರ ಸಹಿತವಾಗಿ ಎಂಬತ್ತು ನಾಲ್ಕು ಲಕ್ಷ ಜೀವ ಜಂತುಗಳು,
ತೋರುವ ತೋರಿಕೆಯೆಲ್ಲ ಹುಟ್ಟಿತ್ತು ಕಾಣಾ
ಕೂಡಲ ಚೆನ್ನ ಸಂಗಮದೇವಾ (೩:೧೭೩೭)

ಇಲ್ಲಿ ಶಕ್ತಿ ಮತ್ತು ಅಧಿದೇವತೆಯರ ಹೆಸರುಗಳು ಬೇರೆ ಬೇರೆಯಿವೆ. ಬೇರೆ ವಚನಕಾರರು ಇವುಗಳ ಬದಲು ಬೇರೆ ಹೆಸರುಗಳನ್ನು ಉಪಯೋಗಿಸುತ್ತಾರೆ ಎಂಬ ಅಂಶವನ್ನು ಬಿಟ್ಟರೆ, ಒಂದು ಅಂಶ ಮಾತ್ರ ಸ್ಪಷ್ಟವಾಗುತ್ತದೆ. ಅದೆಂದರೆ : ಅತ್ಯಂತ ಸೂಕ್ಷ್ಮ ಶಕ್ತಿಯಾದ ಜ್ಞಾನಶಕ್ತಿ ಮತ್ತು ಅದನ್ನು ನಿಯಂತ್ರಿಸುವ ಸದಾಶಿವನು ಮೊದಲು ಸೃಷ್ಟಿಯಾಗಿ, ಕೊನೆಯಲ್ಲಿ ಸರಸ್ವತಿಯಿಂದ ಬ್ರಹ್ಮನು ಹುಟ್ಟಿ, ಬ್ರಹ್ಮನು ಪ್ರಪಂಚದ ಸಕಲ ಚರಾಚರ ವಸ್ತುಗಳನ್ನು ಸೃಷ್ಟಿಸುತ್ತಾನೆ. ಆದರೆ, ಪರಶಿವನೂ ಅಲ್ಲದೆ, ಬ್ರಹ್ಮ, ವಿಷ್ಣು, ಮುಂತಾದ ಪ್ರತ್ಯೇಕ ವ್ಯಕ್ತಿಗಳಿದ್ದಾರೆ ಎಂಬುದು ಇದರ ಅರ್ಥವಲ್ಲ. ಬ್ರಹ್ಮಾದಿಗಳೆಲ್ಲ ಶಿವನ ವಿವಿಧ ರೂಪಾಂತರಗಳು. ಅದೇ ರೀತಿ, ಅವನಿಂದ ಹುಟ್ಟಿದ ಚರಾಚರ ವಸ್ತುಗಳೂ ಅವನ ರೂಪಾಂತರವೇ. ಆದರೆ ಮನುಷ್ಯನು ಇದನ್ನು ಅಜ್ಞಾನದಿಂದ ಮರೆತು, ಎಲ್ಲವೂ ಬೇರೆ ಬೇರೆ ಎಂದು ತಿಳಿಯುತ್ತಾನೆ.

ಅಂಗಸ್ಥಲ ಮತ್ತು ಲಿಂಗಸ್ಥಲ ಎಂಬ ಪದಗಳನ್ನು ಬಳಸಿಕೊಂಡು ಹೇಳುವುದಾದರೆ: ಮೇಲೆ ಹೇಳಿದ ಆರು ಲಿಂಗಗಳು ಅಥವಾ ಆರು ಸಾದಾಖ್ಯ ಅಥವಾ ಅಧಿದೇವತೆಗಳು ಪ್ರಪಂಚದ ಎಲ್ಲ ಕಡೆಯೂ ಇರುವುದಲ್ಲದೆ ಮಾನವನ ದೇಹದಲ್ಲೂ ಇವೆ. ಈ ಕಾರಣಕ್ಕಾಗಿಯೇ ವಚನಕಾರರು ಪ್ರಪಂಚವೆಂಬ ಬ್ರಹ್ಮಾಂಡಕ್ಕೂ ಮಾನವನೆಂಬ ಪಿಂಡಾಂಡಕ್ಕೂ ವ್ಯತ್ಯಾಸ ಮಾಡದಿರುವುದು.

ಪ್ರಪಂಚ ಮತ್ತು ಜೀವರಾಶಿಗಳನ್ನು ಸೃಷ್ಟಿಮಾಡಿದ ಮೇಲೆ ಪರಶಿವನು ಅವುಗಳಿಂದ ಹೊರಗಿರದೆ ಅವುಗಳಲ್ಲೇ ಅಂತಸ್ಥವಾಗಿರುತ್ತಾನೆ. "ಎತ್ತೆತ್ತ ನೋಡಿದರತ್ತತ್ತ ನೀನೇ ದೇವಾ, ಸಕಲ ವಿಸ್ತಾರದ ರೂಹು ನೀನೇ ದೇವಾ" ಎಂದು ಬಸವಣ್ಣನವರು ಹೇಳುವಾಗಲೂ, "ಗಿರಿಗಳ ಗುಹೆಗಳ ಕಂದರದಲ್ಲಿ, ನೆಲಹೊಲದಲ್ಲಿ, ಇಪ್ಪೆ ದೇವಾ, ಎಲ್ಲಿ ನೋಡಿದಲ್ಲಿ ಇಪ್ಪೆ ದೇವಾ" ಎಂದು ಅಲ್ಲಮ ಪ್ರಭು ಹೇಳುವಾಗಲೂ, "ಎಲ್ಲೆಲ್ಲಿ ನೋಡಿದಲ್ಲಲ್ಲಿ ನೀನೇ ದೇವಾ, ಪಿಂಡಾಂಡದೊಳಗೆಲ್ಲ ನೀನೇ ದೇವಾ" ಎಂದು ಸ್ವತಂತ್ರ ಸಿದ್ಧಲಿಂಗೇಶ್ವರರು ಹೇಳುವಾಗಲೂ, ಪರಶಿವನು ವಿಶ್ವದ ತುಂಬ ಮತ್ತು ವಿಶ್ವದ ಹೊರಗೆಲ್ಲ ಇದ್ದಾನೆಂದೂ, ಆದರೆ, ಅನುಭಾವಿಗಳಿಗಷ್ಟೇ ಗೋಚರವಾಗುತ್ತಾನೆಂದೂ ಅರ್ಥವಾಗುತ್ತದೆ.

ಪ್ರಪಂಚದಲ್ಲಿರುವ (ಪ್ರಪಂಚದ ವಸ್ತುಗಳಾಗಿ ರೂಪಾಂತರಗೊಂಡಿರುವ) ಶಕ್ತಿಗಳಿಗೆ ಕಲಾಶಕ್ತಿ ಅಥವಾ ಅಧೋಮಾಯೆ ಎಂದು ಹೆಸರು. ಮನುಷ್ಯನು ತನ್ನ ಕರ್ಮಗಳಿಂದಾಗಿ ಅಧೋಸ್ಥಿತಿಗೆ ಇಳಿದಿದ್ದಾನಾದುದರಿಂದ, ಅವಕ್ಕೆ ಆ ಹೆಸರು ಬಂದಿದೆ. ಒಂದು ವೇಳೆ ಅವನಿಗೆ ಸಮರ್ಥ ಗುರುವೊಬ್ಬ ಸಿಕ್ಕಿ, ಅವನಿಂದ ಸರಿಯಾದ ಆಧ್ಯಾತ್ಮಿಕ ಶಿಕ್ಷಣ ದೊರೆತರೆ, ಅವನು ಅದೇ ಶಕ್ತಿಗಳನ್ನು ಲಿಂಗಾಂಗ ಸಾಮರಸ್ಯದ ಸಿದ್ಧಿಗಾಗಿ ಬಳಸಿಕೊಳ್ಳಬಹುದು. ಅಂಥ ಸಿದ್ಧಿಗೆ ಬಳಸಿಕೊಂಡ ಶಕ್ತಿಗಳು ಪರಿವರ್ತಿತವಾಗಿ ಭಕ್ತಿಶಕ್ತಿ ಅಥವಾ ಊರ್ಧ್ವ ಮಾಯೆ ಎನಿಸಿಕೊಳ್ಳುತ್ತದೆ.

ಪ್ರಪಂಚದಲ್ಲಿ ಎಲ್ಲೆಲ್ಲೂ ಪರಮಾತ್ಮನಿದ್ದರೂ ಅವನು ಅನುಭಾವಿಗಳಿಗಷ್ಟೇ ಕಂಡು ಉಳಿದವರಿಗೆ ಹೇಗೆ ಕಾಣುವುದಿಲ್ಲವೋ, ಹಾಗೆಯೇ ಮನುಷ್ಯನಲ್ಲೇ ಆಚಾರಲಿಂಗಾದಿಯಾಗಿ ಆರು ರೂಪಗಳಲ್ಲಿ ಪರಶಿವನು ನೆಲೆಸಿದ್ದರೂ, ಅನುಭಾವಿಗಳಿಗಷ್ಟೇ ಕಂಡು, ಇತರರಿಗೆ ಕಾಣುವುದಿಲ್ಲ. ಅಧೋ ಮಾಯೆಯನ್ನು ಊರ್ಧ್ವ ಮಾಯೆಯನ್ನಾಗಿ ಪರಿವರ್ತಿಸಿ, ಆ ಮೂಲಕ ಅನುಭಾವ ಪಡೆದು, ಆ ಮೂಲಕ ಶಿವಸಾಕ್ಷಾತ್ಕಾರ ಪಡೆಯುವುದೇ ಶಿವಯೋಗ. ಆದುದರಿಂದ ವಚನಕಾರರ ಪ್ರಕಾರ, ಸೃಷ್ಟಿ ವಿಚಾರವು ಶಿವಯೋಗಕ್ಕೆ ಬುನಾದಿ.

**ಸೃಷ್ಟಿಯ ಪ್ರತಿಷ್ಠೆ :** ಶಿಲ್ಪಿಯ ಕೈಯಲ್ಲಿ ಸೃಷ್ಟಿಯಾಗಿ ದೇವಾಲಯದಲ್ಲಿ ಪ್ರತಿಷ್ಠಾಪನೆಗೊಂಡ ವಿಗ್ರಹ ಅಥವಾ ಸ್ಥಾವರಲಿಂಗ.

**ಸೇವ್ಯಪ್ರಸಾದ :** ಇಷ್ಟಲಿಂಗಕ್ಕೆ ಅರ್ಪಿಸಿದುದು. ಆದಿ ಪ್ರಸಾದವಾಗುತ್ತದೆ. ಅದೇ ಪ್ರಾಣಲಿಂಗಕ್ಕೆ ಅರ್ಪಿತವಾದಾಗ ಅಂತ್ಯಪ್ರಸಾದವಾಗುತ್ತದೆ. ಪ್ರಾಣಲಿಂಗದ ಬಾಯಿಂದ ಬಂದುದೇ ಭಾವಲಿಂಗಕ್ಕೆ ಸೇವ್ಯಪ್ರಸಾದವಾಗುತ್ತದೆ (೯:೧೧೩೬).

**ಸೋಂಕಿನ ಸುಖ :** ಇಷ್ಟಲಿಂಗವನು ಮುಟ್ಟಿ ಪೂಜಿಸುವ ಸುಖ.

**ಸೋಹಂ :** ಸ, (=ಅವನೇ), ಅಹಂ (=ನಾನು). ಸಾರದಲ್ಲಿ ಪರಮಾತ್ಮನೂ ಜೀವಾತ್ಮನೂ ಒಂದೇ. ಅನುಭಾವಸ್ಥಿತಿಯಲ್ಲಿ ಶರಣನು ತನ್ನ ಅಹಂಭಾವವನ್ನು ಕಳೆದುಕೊಂಡು ತಾನೇ ಶಿವನಾಗಿದ್ದೇನೆಂದು ತಿಳಿಯುತ್ತಾನೆ (೨:೬೬೪).

**ಸ್ಥಲ :** ವಚನಗಳಲ್ಲಿ ಇದು ಕನಿಷ್ಠ ಮೂರು ಅರ್ಥಗಳಲ್ಲಿ ಬಳಸಲ್ಪಟ್ಟಿದೆ.

೧.ನಿಃಕಲಲಿಂಗ, ಸ್ಥಲ, ಸದಾಶಿವ ಈ ಮೂರೂ ಪದಗಳು ಅನೇಕ ವೇಳೆ ಸಮಾನಾರ್ಥಕವಾಗಿ ಪ್ರಯೋಗವಾಗಿದ್ದು, ಪ್ರಪಂಚದ ಮೂಲ ಸ್ಥಳ ಎಂಬರ್ಥವನ್ನು ಅವು ಕೊಡುತ್ತವೆ. ಮಗ್ಗೆಯ ಮಾಯಿದೇವನ ಪ್ರಕಾರ 'ಸ್ಥ' ಎಂದರೆ ಯಾವುದರಿಂದ ಪ್ರಪಂಚವು ಹೊರಬರುತ್ತದೆಯೋ ಅದು; 'ಲ' ಎಂದರೆ, ಪ್ರಪಂಚವು ಲಯವಾಗಿ ಕೊನೆಗೆ ಎಲ್ಲಿಗೆ ಹಿಂತಿರುಗುತ್ತದೆಯೋ ಅದು, ಅಂದರೆ ಪರಶಿವ. ಅವನ ಪದವ್ಯುತ್ಪತ್ತಿಯು ನಮಗೆ

ಅಸ್ವೀಕಾರಾರ್ಹವಾಗಿ ಕಂಡರೂ, ಅವನ ಪ್ರಕಾರ ಸ್ಥಲವೆಂದರೆ, ಪ್ರಪಂಚದ ಮೂಲಸ್ಥಳ ಎಂಬ ಮಾತಂತೂ ಖಚಿತವಾಗುತ್ತದೆ. ಅದೇ ರೀತಿ, ಇತರ ವಚನಕಾರರು ಸ್ಥಲವು ಅಂಗಸ್ಥಲ, ಲಿಂಗಸ್ಥಲವೆಂದು ಇಬ್ಭಾಗವಾಯಿತು ಎಂದು ಹೇಳುವಾಗ ಸ್ಥಲವೆಂದರೆ ಪರಶಿವ ಎಂಬುದು ಖಚಿತವಾಗುತ್ತದೆ.

೨. ಮತ್ತೊಂದರ್ಥದಲ್ಲಿ ಸ್ಥಲವೆಂದರೆ ಚಕ್ರ ಅಥವಾ ಪದ್ಮ. ಉದಾಹರಣೆಗೆ, ಆಚಾರಲಿಂಗಸ್ಥಲವೆಂದರೆ ಆಧಾರ ಚಕ್ರ. ಏಕೆಂದರೆ, ಮಾನವದೇಹದಲ್ಲಿರುವ ಪ್ರತಿಯೊಂದು ಚಕ್ರದಲ್ಲಿಯೂ ಒಂದೊಂದು ಲಿಂಗವಿದೆ, ಅದನ್ನು ಒಂದಾದ ಮೇಲೊಂದರಂತೆ ಸಾಕ್ಷಾತ್ಕರಿಸಿಕೊಳ್ಳುವುದು ವೀರಶೈವನ ಕರ್ತವ್ಯ. ಆದರೆ ಲಿಂಗವು ಹೇಗೆ ಅಗೋಚರವೋ, ಅದರ ಸ್ಥಲವಾದ ಚಕ್ರವೂ ಅಗೋಚರ.

೩. ಮೂರನೆಯ ಅರ್ಥದಲ್ಲಿ ಸ್ಥಲವು ಸಾಧಕನ ಆಧ್ಯಾತ್ಮಿಕ ಹಂತಕ್ಕೆ ಅನ್ವಯಿಸುತ್ತದೆ. ಭಕ್ತಸ್ಥಲವು ಪ್ರಾಥಮಿಕ ಹಂತದ ಸಾಧಕನ ಸ್ಥಲವಾದರೆ, ಐಕ್ಯಸ್ಥಲವು ಸಾಧಕನ ಅಂತಿಮ ಸ್ಥಲವಾಗಿದೆ. ವಾಸ್ತವಿಕವಾಗಿ, ಸ್ಥಲವು ಈ ಅರ್ಥದಲ್ಲಿ ಸಾಧಕನ ನಂಬಿಕೆ, ಆಚರಣೆಗಳ ಮೊತ್ತಕ್ಕೆ ಅನ್ವಯಿಸುತ್ತದೆ.

**ಸ್ಥಲಲೇಪ :** ಸಾಧಕನು ತನ್ನ ಗುರಿಯನ್ನು ಇನ್ನೂ ಮುಟ್ಟದೇ ಇರುವಾಗ ತನ್ನ ಆಧ್ಯಾತ್ಮಿಕ ದಾರಿಯನ್ನು ಭಕ್ತಸ್ಥಲ, ಮಹೇಶ್ವರ ಸ್ಥಲ, ಇತ್ಯಾದಿಯಾಗಿ ವಿಂಗಡಿಸುತ್ತಾನೆ. ಆದರೆ ಐಕ್ಯಸ್ಥಲವನ್ನು ಸಾಧಿಸಿದ ಮೇಲೆ ಸಾಧಕ ಸಾಧ್ಯ ಸಿದ್ಧಿ ಇವುಗಳ ವ್ಯತ್ಯಾಸ ಇಲ್ಲವಾಗಿ ಸ್ಥಲ ಮೂವತ್ತಾರೂ ಇರುವುದಿಲ್ಲ, ಆರೂ ಇರುವುದಿಲ್ಲ, ಅಂಗಸ್ಥಲ ಲಿಂಗಸ್ಥಲ ಎಂಬ ಎರಡು ಸ್ಥಲಗಳೂ ಇರುವುದಿಲ್ಲ. ಆಗ ಇರುವುದೆಲ್ಲಾ ಒಂದೇ ಸ್ಥಲ. ಐಕ್ಯನಾದವನು ಆ ಒಂದೇ ಸ್ಥಲವನ್ನು ತನ್ನ ಜೀವನದ ಪ್ರತಿ ಅಂಗಕ್ಕೂ ಲೇಪಿಸಿಕೊಂಡಿರುತ್ತಾನೆ. (ಅ:೨೦೦೫).

**ಸ್ಥಾವರ-ಜಂಗಮ :** ಈ ಪದ ಜೋಡಿಯನ್ನು ಎರಡು ರೀತಿಯಲ್ಲಿ ಅರ್ಥೈಸಬಹುದು.

೧. ಸ್ಥಾವರಲಿಂಗ ಜಂಗಮಲಿಂಗ ಎಂಬರ್ಥದಲ್ಲಿ ತೆಗೆದುಕೊಂಡಾಗ, ಸ್ಥಿರವಾದ ಲಿಂಗ ಚಲಿಸುವ ಲಿಂಗ, ಎಂದಾಗುತ್ತದೆ. ಲಿಂಗ ಎಂದರೆ ಪರಶಿವ ಎಂದಾಗುವುದರಿಂದ ಲಿಂಗ ಚಲಿಸಲು ಸಾಧ್ಯವಿಲ್ಲ. ಜಂಗಮನು ಚಲಿಸುವ ಲಿಂಗ.

೨. ಗುಡಿಯಲ್ಲಿ ಸ್ಥಾಪಿತವಾದ ಲಿಂಗ ಸ್ಥಾವರಲಿಂಗವಾದರೆ, ವ್ಯಕ್ತಿಯ ಜೊತೆಯಲ್ಲಿ ಚಲಿಸುವ ಇಷ್ಟಲಿಂಗ ಜಂಗಮವೆನಿಸುತ್ತದೆ (ನೋಡಿ : **ಸ್ಥಾವರಲಿಂಗ**).

**ಸ್ಥಾವರ ಭಕ್ತ :** ಇದನ್ನು ಸ್ಥಾವರ ಲಿಂಗದ ಭಕ್ತ ಎಂಬರ್ಥದಲ್ಲಿಯೂ ತೆಗೆದುಕೊಳ್ಳಬಹುದು. ಆಧ್ಯಾತ್ಮಿಕ ಪ್ರಗತಿಯಿಲ್ಲದ, ಭಕ್ತಸ್ಥಲದಲ್ಲೇ ನೆಲೆ ನಿಂತಿರುವ ಭಕ್ತ ಎಂಬರ್ಥದಲ್ಲಿಯಾದರೂ ತೆಗೆದುಕೊಳ್ಳಬಹುದು.

**ಸ್ಥಾವರಲಿಂಗ :** ವಚನಕಾರರು ಇದನ್ನು ಎರಡು ಅರ್ಥಗಳಲ್ಲಿ ಬಳಸಿದ್ದಾರೆ.

೧. ಸ್ಥಿರವಾದ ಅಥವಾ ಚಲಿಸದ ಲಿಂಗ. ಗುಡಿಯಲ್ಲಿ ಅಥವಾ ಮಠ ಅಥವಾ ಮನೆಗಳಲ್ಲಿ ಪ್ರತಿಷ್ಠಾಪಿತವಾಗಿರುವ ಲಿಂಗಗಳೆಲ್ಲ ಸ್ಥಾವರ ಲಿಂಗಗಳೇ. ಈ ಅರ್ಥದಲ್ಲಿ ಸ್ಥಾವರ ಲಿಂಗವು ಇಂದ್ರಿಯಗೋಚರ, ಕಲ್ಲಿನಲ್ಲಿ ಮಾಡಿದ, ಒಂದು ವಿಶಿಷ್ಟ ಆಕಾರ ಮತ್ತು ಗಾತ್ರದ ಲಿಂಗ. ಇದು ಸಾಂಪ್ರದಾಯಿಕ ಹಿಂದೂಗಳ ಪ್ರಕಾರ, ಪರಶಿವನ ಪ್ರತೀಕವಾದರೂ, ವಚನಕಾರರು ಸ್ಥಾವರಲಿಂಗ ಪೂಜೆಯನ್ನು ಕಟುವಾಗಿ ಖಂಡಿಸಿದ್ದಾರೆ.

೨. ಲಿಂಗ (ಪರಶಿವ) ಯಾವಾಗಲೂ ಸ್ಥಾವರವೇ (ಅಚಲವೇ). ಇರುವುದೆಲ್ಲ ಪರಶಿವನೇ ಆಗಿರುವುದರಿಂದಲೂ, ಎಲ್ಲೆಲ್ಲಿಯೂ ಅವನೇ ಇರುವುದರಿಂದಲೂ ಅವನು ಚಲಿಸುತ್ತಾನೆಂದು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಅವನು ಚಲಿಸುತ್ತಾನೆಂದು ಕಲ್ಪಿಸಿಕೊಳ್ಳಬೇಕಾದರೆ, ಅವನಿರುವ ಮತ್ತು ಅವನಿಲ್ಲದ ಸ್ಥಳಗಳನ್ನು ಮೊದಲು ಕಲ್ಪಿಸಿಕೊಂಡು, ಅವನಿರುವ ಸ್ಥಳದಿಂದ, ಈಗಿಲ್ಲದ ಸ್ಥಳಕ್ಕೆ ಚಲಿಸುತ್ತಿದ್ದಾನೆಂದು ಕಲ್ಪಿಸಿಕೊಳ್ಳಬೇಕಾಗುತ್ತದೆ. ಆದರೆ ಅವನಿಲ್ಲದ ಸ್ಥಳವೇ ಇಲ್ಲವೆಂದ ಮೇಲೆ, ಅವನು ಚಲಿಸಲು ಸಾಧ್ಯವೇ ಇಲ್ಲ. ಆಗ ಅವನು ಸ್ಥಾವರ ಮಾತ್ರ. ಬಸವಣ್ಣನವರು ಸ್ಥಾವರ ಜಂಗಮ ಒಂದೇ (೧:೧೮೭) ಎಂದು ಹೇಳುವಾಗ, ತಿರುಗಾಡುವ ಲಿಂಗವಾದ ಜಂಗಮನೂ, ಸ್ಥಾವರನಾದ ಪರಶಿವನೂ ಒಂದೇ ಹೊರತು, ಬೇರೆಬೇರೆಯಲ್ಲ ಎಂಬ ಅರ್ಥ ಅವರ ಮಾತಿಗಿದೆ. ಹಾಗೆಯೇ 'ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು' ಎಂದಾಗಲೂ, ಜಂಗಮನಿಗೆ ಎರೆದರೆ, ಪರಶಿವ ನೆನೆದಂತೆ ಎಂಬರ್ಥವಾಗುತ್ತದೆ.

**ಸ್ಥೂಲಶರೀರ :** ಪಂಚಭೂತಗಳಿಂದಾದ, ಇಂದ್ರಿಯಗೋಚರವಾದ, ಹುಟ್ಟು, ಸಾವು ರೋಗ ರುಜಿನ ಮುಂತಾದ ಬದಲಾವಣೆಗೊಳಪಟ್ಟ, ದೇಹ.

**ಸ್ಪರ್ಶನ ಪ್ರಸಾದ :** ಮೋಕ್ಷಾರ್ಥಿಯಾಗಿ ಬಂದ ಶಿಷ್ಯನಿಗೆ ಲಿಂಗದೀಕ್ಷೆಯನ್ನು ಕೊಡುವ ಸಮಯದಲ್ಲಿ ಗುರುವು ಶಿಷ್ಯನ ಮಸ್ತಕವನ್ನು ತನ್ನ ಹಸ್ತದಿಂದ ವಿಧಿಬದ್ಧವಾಗಿ ಮುಟ್ಟಿದಾಗ ಆಗುವ ಸ್ಪರ್ಶನವೇ ಶಿಷ್ಯನ ಪಾಲಿಗೆ ಸ್ಪರ್ಶನ ಪ್ರಸಾದ (೧೧:೧೦೨೪).

**ಸ್ವತಂತ್ರತ್ವಾನುಭವ ಪ್ರಕಾಶ :** ಅನುಭಾವಿಯು ತನ್ನ ಅನುಭಾವದಲ್ಲಿ ಚಿತ್ ಪ್ರಕಾಶವನ್ನು ನೋಡಿದಾಗ, ತನ್ನ ಇಂದ್ರಿಯಗಳನ್ನು ನಿಗ್ರಹಿಸುವ ಮೂಲಕ ಅವನಿಗೆ ಸ್ವತಂತ್ರತ್ವ ಲಭಿಸುತ್ತದೆ ಹಾಗೂ ತಾನು ಮಹೇಶ, ತಾನು ಕಾಣುತ್ತಿರುವ ಪ್ರಕಾಶ ಗುರುಲಿಂಗ ಎಂಬ ಭೇದಭಾವ ಅಡಗುತ್ತದೆ.

**ಸ್ವತಂತ್ರಿಯಲ್ಲ, ಪರತಂತ್ರಿಯಲ್ಲ :** ಸಾಮಾನ್ಯವಾಗಿ ಆಧ್ಯಾತ್ಮಿಕ ಪಥವನ್ನು ತುಳಿಯಲು ಪ್ರಾರಂಭಿಸಿದವನು ತನ್ನನ್ನು ಪರತಂತ್ರಿಯೆಂದೂ, ಪರಮಾತ್ಮನನ್ನು ಸ್ವತಂತ್ರಿಯೆಂದು ಬಗೆದು ತನ್ನ ಭಕ್ತಿಯನ್ನು ತೋರಿಸುತ್ತಿರುತ್ತಾನೆ. ಇವೆರಡೂ ಪದಗಳು ಸ್ಥಾಪೇಕ್ಷ ಪದಗಳು.

ಯಾವುದೇ ವಸ್ತು ಅಥವಾ ವ್ಯಕ್ತಿ ಸ್ವತಂತ್ರ ಎನ್ನಿಸಿಕೊಳ್ಳಬೇಕಾದರೆ, ಸ್ವತಂತ್ರವಲ್ಲದ ಹಾಗೂ ತನ್ನನ್ನು ಅವಲಂಬಿಸುವ ವಸ್ತುಗಳು-ವ್ಯಕ್ತಿಗಳು ಇರಬೇಕಾಗುತ್ತದೆ. ಸ್ವತಂತ್ರವಾದ ಒಂದೇ ವಸ್ತುವಿದ್ದು ಅದನ್ನವಲಂಬಿಸುವ ಯಾವುದೇ ವಸ್ತುವಿಲ್ಲದಿದ್ದರೆ, ಆ ವಸ್ತು ಸ್ವತಂತ್ರವೂ ಅಲ್ಲ, ಪರತಂತ್ರವೂ ಅಲ್ಲ. ಅದೇ ರೀತಿ ಯಾವುದೇ ವಸ್ತು ಪರತಂತ್ರವೆನ್ನಿಸಿಕೊಳ್ಳಬೇಕಾದರೆ, ಅದಕ್ಕೆ ಆಶ್ರಯ ಕೊಡುವ ವಸ್ತು ಇರಬೇಕಾಗಿತ್ತದೆ. ಇವುಗಳ ಸಂಬಂಧವನ್ನು ತಾಯಿ ಮಗು ಎಂಬ ಪದಗಳ ಸಂಬಂಧಕ್ಕೆ ಹೋಲಿಸಬಹುದು. ತಾಯಿ ಎನ್ನಿಸಿಕೊಳ್ಳಬೇಕಾದರೆ ಅವಳಿಗೆ ಮಗುವಿರಬೇಕಾಗುತ್ತದೆ, ಹಾಗೆಯು ಮಗು-ಮಗ ಎನ್ನಿಸಿಕೊಳ್ಳಬೇಕಾದರೆ ತಾಯಿ ಇರಬೇಕಾಗುತ್ತದೆ.

ಆದರೆ ಲಿಂಗಾಂಗ ಸಾಮರಸ್ಯದ ಮೂಲಕ ಪರಮಾತ್ಮನನ್ನು ಸ್ವಾನುಭಾವದಿಂದ ಅರಿತರೆ, ಆ ಪರಮಾತ್ಮ ಸ್ವತಂತ್ರಿಯಲ್ಲ, ಅರಿತವನು ಪರತಂತ್ರಿಯಲ್ಲ ಏಕೆಂದರೆ ಸಾಮರಸ್ಯದಲ್ಲಿ ಜ್ಞಾತೃ ಜ್ಞೇಯಗಳ ಸಂಬಂಧ ಅಳಿಸಿಹೋಗುತ್ತದೆ (೮:೧೫೫೦).

**ಸ್ವಯಂಜ್ಞಾನ ಶಿಖಿ :** ತನ್ನಿಂದ ತಾನೇ (ಸ್ವಯಂ) ಹತ್ತಿಕೊಳ್ಳುವ ಬೆಂಕಿ (ಶಿಖಿ). ಸಮಾಧಿ ಸ್ಥಿತಿಯಲ್ಲಿರುವ ಅನುಭಾವಿಗೆ ಗೋಚರವಾಗುವ ಜ್ಯೋತಿ. ಆದರೆ ಅದು ಎರಡು ವಸ್ತುಗಳ ಘರ್ಷಣೆಯಿಂದಾದ ಬೆಂಕಿಯಾಗಿರದೆ, ಜ್ಞಾನವುಂಟಾದಾಗ (ಚಿತ್ ಒಂದೇ ಉಳಿದಾಗ), ಅನುಭಾವಿಗೆ ಮಾತ್ರ ಗೋಚರವಾಗುವ ಬೆಂಕಿ (೧೧:೬೬೨).

**ಸ್ವಯಂಪ್ರಕಾಶ ಕಿಚ್ಚು :** ಅನುಭಾವಿಯು ತನ್ನ ಅನುಭಾವದ ಒಂದು ಹಂತದಲ್ಲಿ ತಾನು ಚಿತ್ತೆಂಬುದನ್ನು ಅರಿಯುತ್ತಾನೆ. ಆ ಚಿತ್ತು ಅತ್ಯಂತ ಪ್ರಕಾಶಮಾನವಾದ ಉರಿಯ-ದೀಪದ ರೂಪದಲ್ಲಿ ಅವನಿಗೆ ಕಾಣಿಸಿಕೊಳ್ಳುತ್ತದೆ. ನಾವು ಕಣ್ಣಿನಿಂದ ನೋಡಿದ ವಸ್ತುಗಳು ತಮ್ಮ ಪ್ರಕಾಶವನ್ನು ಬೇರೊಂದು ವಸ್ತುವಿನಿಂದ ಪಡೆದರೆ, ಚಿತ್ತೆಂಬ ಜ್ಯೋತಿಯು ಸ್ವಯಂ ಪ್ರಕಾಶ. (ಪರಶಿವನೇ ಸ್ವಯಂ ಪ್ರಕಾಶಮಾನವಾದ ಪರಂಜ್ಯೋತಿ) (೯:೨೮೦).

**ಸ್ವಯಂಭು :** ಪ್ರತಿಯೊಂದು ವಸ್ತುವಿನ ಅಸ್ತಿತ್ವಕ್ಕೂ ಪರಶಿವನೇ ಕಾರಣ, ಆದರೆ ಪರಶಿವನ ಅಸ್ತಿತ್ವಕ್ಕೆ ತಾನೆ (ಸ್ವ) ಕಾರಣ.

**ಸ್ವಯಂ ಪ್ರಸಾದ :** ಭಕ್ತನು ತನ್ನನ್ನೇ ಲಿಂಗಕ್ಕೆ ಅರ್ಪಿಸಿಕೊಂಡು, ಅನುಭಾವದಲ್ಲಿ ಆ ಲಿಂಗವನ್ನು ಕಂಡಾಗ ಆ ಲಿಂಗವೇ ಸ್ವಯಂಪ್ರಸಾದವಾಗಿತ್ತು (೮:೧೨೧).

**ಸ್ವಯವನರಿಯುವುದು :** ತನ್ನನ್ನು ಶಿವಸ್ವರೂಪನೆಂದು ಅರಿಯುವುದು. (೮:೧೧೩೩).

**ಸ್ವಯಸಂಪರ್ಕದಿಂದ ಒದಗಿದ ಬೆಳಗು :** ನನ್ನಲ್ಲಿರುವ ಅಂಗನು ಲಿಂಗವನ್ನು ಸಂಪರ್ಕಿಸಿದಾಗ ಅಥವಾ ಲಿಂಗದಲ್ಲಿ ಒಂದಾದಾಗ ಉಂಟಾಗುವ ಬೆಳಗೇ ಸ್ವಯಸಂಪರ್ಕದಿಂದ ಒದಗಿದ ಬೆಳಗು. ಸಾಧಾರಣ ಬೆಳಗು ಅಥವಾ ಬೆಂಕಿಗೆ ಯಾವುದಾದರೂ ವಸ್ತು ಆಹುತಿ ಆದಂತೆ ಈ ಬೆಳಗಿಗೆ ಯಾವುದೇ ವಸ್ತು ಆಹುತಿಯಾಗುವುದಿಲ್ಲ. ಈ ಬೆಳಗಿನಿಂದ ಕರ್ಮಗಳೆಲ್ಲ

ಸುಟ್ಟವು ಎಂದು ಆಲಂಕಾರಿಕವಾಗಿ ಹೇಳಬಹುದೇ ಹೊರತು, ದೇಶಕಾಲದಲ್ಲಿರುವ ಯಾವ ವಸ್ತುವನ್ನೂ ಈ ಆತ್ಮಜ್ಯೋತಿ ಸುಡಲಾರದು (೮:೧೫೫೮).

ಸ್ವಯಾಂಗಲಿಂಗ : ತನಗಾಗಿ ಪಡೆದು ಅಂಗದ ಮೇಲೆ ಧರಿಸಿಕೊಂಡಿರುವ ಇಷ್ಟಲಿಂಗ (೮:೬೩೮).

ಸ್ವಯಾದ್ವೈತ : ಶಿವ ಮತ್ತು ಜೀವ ಸಾರದಲ್ಲಿ ಒಂದೇ (ಅದ್ವೈತ) ಎಂಬುದನ್ನು ನಾವು ಬೇರೆಯವರಿಂದ ಅಥವಾ ಪುಸ್ತಕಗಳಿಂದ ತಿಳಿದುಕೊಳ್ಳಬಹುದು. ಆದರೆ, ನಮ್ಮ ಅನುಭಾವದಲ್ಲಿ ನಾವು ಆ ಅದ್ವೈತವನ್ನು ಅನುಭವಿಸಿದರೆ ಅದು ಸ್ವಯಾದ್ವೈತವೆನಿಸಿಕೊಳ್ಳುತ್ತದೆ (೭:೧೨೦೫, ೯:೨೦೧).

ಸ್ವಯಾನುಭಾವರು (ಸ್ವಾನುಭಾವಿಗಳು) : ತಮ್ಮ ಆತ್ಮದ ನಿಜಸ್ವರೂಪವನ್ನು ಅನುಭವಿಸಿದವರು. ಅನುಭಾವದಲ್ಲಿ ಆತ್ಮವು ದೇಹ, ಇಂದ್ರಿಯ. ಅಂತಃ ಕರಣಗಳೊಂದಿಗೆ ಇರುವ ತನ್ನ ಸಂಬಂಧವನ್ನು ತಾತ್ಕಾಲಿಕವಾಗಿ ಕಡಿದುಕೊಂಡಾಗ, ಅದಕ್ಕೆ ತಾನೊಂದೇ ಇರುವ ಆನಂದದಾಯಕ ಅನುಭವವಾಗುತ್ತದೆ. ಅಲ್ಲದೆ, ತಾನು ಶಿವಾಂಶಿಕ ಎಂಬ ಅನುಭವವೂ ಆಗುತ್ತದೆ. ಹೀಗೆ ತಮ್ಮ ಮೂಲ ಸ್ವರೂಪವನನ್ನು ಅನುಭವಿಸುವವರು ಸ್ವಯಾನುಭಾವರೆನಿಸಿಕೊಳ್ಳುತ್ತಾರೆ (೧:೧೩೦೪).

ಸ್ವರೂಪ ನಿರೂಪ : ಮಾನವನ ನಿಜವಾದ ಸ್ವರೂಪ ದೇಹ, ಇಂದ್ರಿಯ, ಬುದ್ಧಿ, ಇತ್ಯಾದಿಗಳಲ್ಲ, ಅವುಗಳಲ್ಲಿ ಅಂತಸ್ಥವಾಗಿರುವ ಆತ್ಮ. ಆ ಆತ್ಮಕ್ಕೆ ಯಾವುದೇ ರೂಪವಿಲ್ಲ. ಸ್ವರೂಪಕ್ಕೆ (ಆತ್ಮನಿಗೆ) ರೂಪವಿಲ್ಲ (ನಿರೂಪ). (೨:೩೧೧).

ಸ್ವಸ್ತಿಕಾರೋಪಣ ದೀಕ್ಷೆ : ಸಂಸಾರವನ್ನು ಹೇಯವಾಗಿ ಕಂಡು, ಲಿಂಗಾಂಗ ಸಾಮರಸ್ಯವನ್ನು ಪಡೆಯಬೇಕೆಂಬ ಇಚ್ಛೆಯಿಂದ ಬಂದ ಶಿಷ್ಯನಿಗೆ ಗುರುವು ಕೊಡುವ ಅನೇಕ ವಿಧದ ದೀಕ್ಷೆಗಳಲ್ಲಿ ಇದು ಮೊದಲನೆಯದು. ಮೊದಲು ಹಾಲು, ತುಪ್ಪ, ಬಾಳೆಹಣ್ಣು, ಕಬ್ಬು ಮತ್ತು ಜೇನುತುಪ್ಪ ಇವುಗಳನ್ನೊಳಗೊಂಡ ಪಂಚಾಮೃತದಿಂದ ಶಿಷ್ಯನಿಗೆ ಅಭಿಷೇಕ ಮಾಡಿಸಿ, ಶರಣ ಗಣಗಳು ಹಸ್ತೋದಕ, ಮಂತ್ರೋದಕ, ಶುದ್ಧೋದಕ, ಗಂಧೋದಕ ಮತ್ತು ಪುಷ್ಪೋದಕ ಎಂಬ ಪಂಚೋದಕಗಳಿಂದ ಅವನಿಗೆ ಸ್ನಾನಮಾಡಿಸುತ್ತಾರೆ. ಮೂರಂಗುಲ ಉದ್ದವಾದ ದರ್ಭೆಯನ್ನು ತೋರಿಸಿ, ತ್ರಿವಿಧ ಮಂತ್ರ ಸ್ಮರಣೆಯಿಂದ, ಅದನ್ನು ಅವನ ಸೊಂಟಕ್ಕೆ ಕಟ್ಟುತ್ತಾರೆ, ಅರಿಷಡ್ವರ್ಗಗಳನ್ನು ಗೆಲ್ಲು ಎಂದು ಬೋಧಿಸಿ, ಬಾಳೆ ಗಿಡದ ಪಟ್ಟೆಯನ್ನು ಕೌಪೀನದಂತೆ (ಷಡಕ್ಷರ ಮಂತ್ರ ಹೇಳುತ್ತಾ) ಕಟ್ಟುತ್ತಾರೆ. ಸುಳ್ಳು ಹೇಳಬೇಡ, ಸತ್ಯವನ್ನೇ ನುಡಿ, ಕೊಡುವ ತೆಗೆದುಕೊಳ್ಳುವ ವಿಚಾರದಲ್ಲಿ ಆಪ್ತತ್ವದಿಂದ ನಡೆದುಕೊ, ಎಂದು ಹೇಳಿ ಗುರುವು, ಅಲ್ಲಿರುವ ಶರಣಗಣಗಳ ಒಪ್ಪಿಗೆ ಪಡೆದು, ಶಿಷ್ಯನ ಮಸ್ತಕದ ಮೇಲೆ ಹಸ್ತವನ್ನಿಡುತ್ತಾನೆ, ಹಾಗೂ ಅಲ್ಲಿ ಗುರು ಶಿಷ್ಯ ಭೇದಭಾವಳಿದು ಗುರುವು ಶಿಷ್ಯನ ಸೂತ್ರವನ್ನೂ, ಶಿಷ್ಯನು ಗುರುವಿನ ಸೂತ್ರವನ್ನೂ

ಹಿಡಿಯುತ್ತಾರೆ. ಅಲ್ಲಿರುವ ಭೃತ್ಯರಿಂದ ಕಳಸಾರ್ಚನೆ ರಚಿಸಿ, ಪ್ರಮಥಗಣ, ಆರಾಧ್ಯ, ಭಕ್ತ, ಮಾಹೇಶ್ವರರೊಡಗೂಡಿ, ನವರತ್ನಖಚಿತವಾದ ಶೂನ್ಯ ಸಿಂಹಾಸನದ ಮೇಲೆ, ಮಂತ್ರವೇ ಮೂರ್ತಿಗೊಂಡಿರುವಂತೆ ಕುಳಿತಿರುವ ನಿರಂಜನ ಜಂಗಮಕ್ಕೆ ವಿಭೂತಿ, ವೀಳ್ಯ, ಸುವರ್ಣ, ದಶಾಂಘಸಸಾರ, ಪುಷ್ಪಮಾಲೆ, ವಸ್ತ್ರಾಭರಣ ಎಂಬ ಸಪ್ತಪದಾರ್ಥಗಳನ್ನು ಕೊಡುವಂತಹುದೇ ಸ್ವಸ್ತಿಕಾರೋಹಣ ದೀಕ್ಷೆ (೧೦:೬೮೭).

**ಸ್ವಾಧಿಷ್ಠಾನ ಚಕ್ರ :** ನೋಡಿ : **ಚಕ್ರಗಳು.**

**ಸ್ವಾನಂದ :** ಸ್ವಾನುಭಾವದಿಂದ ಪಡೆದ ಆನಂದ. ಸ್ವಾನಂದವು ಆತ್ಮನ ಮೂಲ (ಸ್ವಂತ) ಆನಂದವೇ ಹೊರತು, ಹೊರಗಿನಿಂದ ಬಂದ ಆನಂದವಲ್ಲ.

**ಸ್ವಾನುಭಾವ :** ಬೇರೆ ವಸ್ತುಗಳನ್ನು ಅನುಭವಿಸದೆ, ಆತ್ಮವು ತನ್ನನ್ನೇ ಅನುಭವಿಸುವುದು. ಇದು ಚಿಂತನೆಯ ಫಲವಲ್ಲ. ಅನುಭಾವದಲ್ಲಿ ಆತ್ಮವು ತನ್ನ ಉಪಾಧಿಗಳನ್ನು ಕಳೆದುಕೊಂಡು, ತಾತ್ಕಾಲಿಕವಾಗಿ ಇಂದ್ರಿಯಾದಿಗಳ ಸಂಗವನ್ನು ಕಡಿದುಕೊಂಡು, ತಾನೊಂದೇ ಇರುವುದನ್ನು ಅನುಭವಿಸುವುದೇ ಸ್ವಾನುಭಾವ. ಸ್ವಾನುಭಾವದಲ್ಲಿ ತಾನು ಶಿವನೊಂದಿಗೆ ಬೆರೆತಿರುವುದನ್ನೂ ಅರಿಯಬಹುದು. (೨:೬೭೨, ೪:೯೯).

**ಸ್ವಾನುಭಾವ ಸನ್ನದ್ಧ :** ಜ್ಞಾನವೆಂಬ ಬೆಳಕನ್ನು ನಾವು ನೋಡಬೇಕಾದರೆ ಅದು ಪೂಜೆ ಮತ್ತಿತರ ಕ್ರಿಯೆಗಳಿಂದ ಸಾಧ್ಯವಿಲ್ಲ. ಶ್ರದ್ಧೆಯನ್ನು ಬೆಳೆಸಿಕೊಳ್ಳಲು ಅವು ಮೊದಲು ಆವಶ್ಯಕವಾದರೂ ಅವೇ ಕೊನೆಯಾಗಲಾರವು. ಜ್ಞಾನದ ಬೆಳಗನ್ನು ಕಾಣಬೇಕಾದರೆ ಕೊನೆಯಲ್ಲಿ ಸ್ವಾನುಭಾವ ಆವಶ್ಯಕ. ಕ್ರಿಯೆಗಳು ನಮ್ಮನ್ನು ಸಾತ್ವಿಕರನ್ನಾಗಿ ಮಾಡದಿದ್ದರೆ ಸ್ವಾನುಭಾವ ಸಾಧ್ಯವಿಲ್ಲ. ಸ್ವಾನುಭಾವದಲ್ಲಿ ನಾವು ಕಾಣುವ ಬೆಳಗು ಹೊರಗಿನದಲ್ಲ, ನಮ್ಮಲ್ಲೇ ಅವ್ಯಕ್ತವಾಗಿರುವ ಬೆಳಕು (೫:೯೪೬).

**ಸ್ವಾಮಿಭೃತ್ಯಸಂಬಂಧ :** ಈ ಪದ ಮಾನವಸ್ವಾಮಿ ಭೃತ್ಯರಿಗೆ ಅನ್ವಯಿಸದೆ, ಶಿವ ಮತ್ತು ಶರಣರ ಸಂಬಂಧಕ್ಕೆ ಅನ್ವಯಿಸುತ್ತದೆ. ಪ್ರತಿಯೊಬ್ಬ ಶರಣನೂ ತಾನು ಶಿವನ ದಾಸ, ಎಂದು ತಿಳಿದು ಅದರಂತೆ ನಡೆದುಕೊಳ್ಳಬೇಕು. ಅಂದರಿಂದಾಗಿ, ಅವನು ಶಿವಶರಣರ ದಾಸನಾಗಿರಲು ಸಾಧ್ಯವಾಗುತ್ತದೆ (ನೋಡಿ : **ಭೃತ್ಯಾಚಾರ**) (೧:೨೩೭).

**ಸ್ವಾಯತ ಲಿಂಗ :** ಲಿಂಗವು ನಮ್ಮಲ್ಲಿಯೇ ಇದೆ ಎಂಬುದನ್ನು ಆತ್ಮ ಸಾಕ್ಷಾರವ ಮೂಲಕ ತಿಳಿದುಕೊಂಡರೆ, ಆಗ ಆ ಲಿಂಗವು ಸ್ವಾಯತಲಿಂಗವೆನಿಸಿಕೊಳ್ಳುತ್ತದೆ.

**ಹಂಸತ್ರಯ :** ಜೀವಹಂಸ, ಪರಮಹಂಸ, ಪರಾಪರಹಂಸ (೧೩:೧೮೮೧)

**ಹತ್ತೆಸಳ ಪೀಠ :** ಹತ್ತುದಳಗಳ ಪದ್ಮ, ಮಣಿಪೂರಕ ಪದ್ಮ (ಚಕ್ರ).

**ಹದಿನಾಲ್ಕು ತೆರನ ಭಕ್ತಿ :** ಸಾಧಕನು ತನ್ನ ಆಧ್ಯಾತ್ಮಿಕ ಪಥದ ಪ್ರಾರಂಭಿಕ ಹಂತದಲ್ಲಿ ಜಂಗಮ ಲಿಂಗಕ್ಕೆ ಹದಿನಾಲ್ಕು ರೀತಿಯ ಭಕ್ತಿಯನ್ನು ತೋರಿಸಬೇಕು. ರಾಜನೊಬ್ಬನಿಗೆ ಪ್ರಜೆಯು ತೊರುವ ಗೌರವವನ್ನೇ, ಆ ಭಕ್ತನು ಜಂಗಮನಿಗೆ ತೋರಿಸುತ್ತಾನೆ. ಈ ಭಕ್ತಿಯಲ್ಲಿ ಹದಿನಾಲ್ಕು ಅಂಶಗಳಿವೆ. ಅವುಗಳ ವಿವರ ಹೀಗಿದೆ :

೧. ಲಿಂಗಕ್ಕೆ ಮಜ್ಜನಮಾಡಿಸಬೇಕು, ೨. ವಸ್ತ್ರದಿಂದ ಅದನ್ನು ಒರೆಸಬೇಕು. ೩. ಲಿಂಗಕ್ಕೆ ಗಂಧವನ್ನೂ, ೪. ಅಕ್ಷತೆಯನ್ನೂ ಲೇಪಿಸಬೇಕು; ೫. ಪತ್ರೆ ಪುಷ್ಪಗಳನ್ನು ಅರ್ಪಿಸಬೇಕು; ೬. ಧೂಪಾರತಿಯನ್ನೂ, ೭. ದೀಪಾರತಿಯನ್ನೂ ಬೆಳಗಬೇಕು; ೮. ನೈವೇದ್ಯ ಮಾಡಬೇಕು; ೯. ನೀರನ್ನು ಅರ್ಪಿಸಬೇಕು; ೧೦. ತಾಂಬೂಲವನ್ನು ಅರ್ಪಿಸಬೇಕು; ೧೧. ಊಟದ ನಂತರ ರಾಜನಿಗೆ ಸುಖಾಸನ ನೀಡುವಂತೆ ಜಂಗಮ ಲಿಂಗಕ್ಕೂ ಸುಖಾಸನ ನೀಡಬೇಕು; ೧೨. ರಾಜನ ಸಂತೋಷಕ್ಕಾಗಿ ಅವನನ್ನು ಹೊಗಳಿ, ಅವನಿಗೆ ನರ್ತನವನ್ನು ತೋರಿಸುವಂತೆ, ಜಂಗಮ ಲಿಂಗಕ್ಕೂ ಮಂತ್ರ ಸ್ತೋತ್ರ ಗೀತ ನರ್ತನಗಳು ಆಗಬೇಕು; ೧೩. ಮಲಗಿ ಎದ್ದನಂತರ ರಾಜನಿಗೆ ವಸ್ತ್ರಾಲಂಕಾರ, ಆಭರಣಗಳ ಧಾರಣೆಯಾಗುವಂತೆ ಜಂಗಮ ಲಿಂಗಕ್ಕೂ ಆಗಬೇಕು. ೧೪. ರಾಜನಿಗೆ ಹಿಂತಿರುಗಲು ವಾಹನದ ಏರ್ಪಾಡು ಮಾಡುವಂತೆ ಜಂಗಮ ಲಿಂಗಕ್ಕೂ ವಾಹನದ ಏರ್ಪಾಟು ಮಾಡಬೇಕು.

ಆದರೆ ಈ ವಚನದಲ್ಲಿ (೩:೧೫೨೮) ಇದಾವುದನ್ನು ಮಾಡಬಾರದು, ಇದೇನನ್ನೂ ಮಾಡದೆಯೇ ಪ್ರಸಾದವನ್ನು ಪಡೆದುಕೊಳ್ಳುವವನಿಗೆ ಗುರುಲಿಂಗ ಜಂಗಮ ಉಂಟು, ಉಳಿದವರಿಗೆ ಇಲ್ಲ ಎಂದು ಹೇಳಲಾಗಿದೆ. ಇದರ ಅರ್ಥ, ಲಿಂಗವನ್ನಾಗಲಿ ಜಂಗಮವನ್ನಾಗಿ ಒಬ್ಬ ಸಧಾರಣ ರಾಜನಂತೆ ಕಾಣಬಾರದು ಎಂಬುದಾಗಿದೆ .

**ಹದಿನಾಲ್ಕು ಲೋಕಗಳು (ಈರೇಳು ಲೋಕ) :** ೧. ಅತಳ, ೨. ವಿತಳ, ೩. ಸುತಳ ೪. ರಸಾತಳ, ೫. ತಳಾತಳ, ೬. ಮಹಾತಳ, ೭. ಪಾತಾಳ ಇವು ೮. ಭೂ ಲೋಕದ ಕೆಳಗೆ; ೯. ಭೂವರ್ಲೋಕ ೧೦. ಸ್ವರ್ಲೋಕ, ೧೧. ಮಹರ್ಲೋಕ, ೧೨. ಜನರ್ಲೋಕ ೧೩. ತಪೋಲೋಕ ಮತ್ತು ೧೪. ಸತ್ಯಲೋಕ ಈ ಆರು ಭೂಲೋಕದ ಮೇಲೆ (೧:೧೨೨೫).

**ಹದಿನೆಂಟು ಪುರಾಣಗಳು :** ಬ್ರಹ್ಮ, ಬ್ರಹಾಂಡ, ಬ್ರಹ್ಮವೈವರ್ತ, ಮಾರ್ಕಾಂಡೇಯ, ಭವಿಷ್ಯ, ವಾಮನ, ವಿಷ್ಣು, ಭಾಗವತ, ನಾರದೀಯ, ಗರುಡ, ಪದ್ಮ, ವರಾಹ, ಶಿವ, ಲಿಂಗ, ಸ್ಕಂದ, ಅಗ್ನಿ, ಮತ್ಸ್ಯ, ಕೂರ್ಮ,

**ಹರಸ್ರಾವ :** ಹರನಿಗೆ ಸಮಾನವಾದ ಗುರುವು ಕೊಟ್ಟ ದೀಕ್ಷೆಯಿಂದಾಗಿ ಹುಟ್ಟಿದ ಭಕ್ತ; ಗುರುಕರಸಂಜಾತ.

**ಹಸ್ತಗಳು (ಸುಹಸ್ತಗಳು) :** ಆಧ್ಯಾತ್ಮಿಕ ಸಾಧನೆಯ ಪ್ರಥಮ ಹಂತದಲ್ಲಿ ಸಾಧಕನು ಆಹಾರವನ್ನು ಲಿಂಗಕ್ಕೆ ತನ್ನ ಕೈಯಿಂದ ನೈವೇದ್ಯ (ಅರ್ಪಣೆ) ಮಾಡುತ್ತಾನೆ. ಆದರೆ

ಜಗತ್ತು, ಜೀವ ಮತ್ತು ಪರಶಿವ ಇವರ ಬಗೆಗಿನ ತನ್ನ ಜ್ಞಾನ ಹೆಚ್ಚಾದಂತೆಲ್ಲಾ ಕೇವಲ ತಿನ್ನುವ ಆಹಾರ ಪದಾರ್ಥಗಳನ್ನಷ್ಟೇ ಅಲ್ಲ, ಇತರ 'ಆಹಾರ'ಗಳನ್ನೂ ಅವನು ಅರ್ಪಿಸಲು ಪ್ರಾರಂಭಿಸುತ್ತಾನೆ. ರೂಪ, ರಸ, ಗಂಧ, ಸ್ಪರ್ಶನ ಮತ್ತು ಶಬ್ದ ಇವು ಕ್ರಮವಾಗಿ ಕಣ್ಣು, ನಾಲಗೆ, ಮೂಗು, ಚರ್ಮ ಮತ್ತು ಕಿವಿಗಳ ಆಹಾರಗಳು (ವಿಷಯಗಳು). ಆದರೆ ತಿನ್ನುವ ಆಹಾರವನ್ನು ಕೈಯಿಂದ ಅರ್ಪಿಸುವಂತೆ ಉಳಿದ ಆಹಾರಗಳನ್ನು (ಐಂದ್ರಿಕ ವಿಷಯಗಳನ್ನು) ಕೈಯಿಂದ ಅರ್ಪಿಸಲು ಬರುವುದಿಲ್ಲ. ಅಲ್ಲದೆ, ತಿನ್ನುವ ಆಹಾರವನ್ನು ಅವನು ಒಂದು ನಿರ್ದಿಷ್ಟ ಸಮಯದಲ್ಲಿ ಮತ್ತು ಒಂದು ನಿರ್ದಿಷ್ಟ ಸ್ಥಳದಲ್ಲಿ ಅರ್ಪಿಸುತ್ತಾನೆ. ಆದರೆ ಇದ್ರಿಯ ವಿಷಯಗಳಿಗೆ ಈ ಕಾಲದೇಶಗಳ ಮಿತಿಯಿಲ್ಲ. ಭಕ್ತನು ಅವುಗಳನ್ನು ಅವು ಎಲ್ಲಿವೆಯೊ ಅಲ್ಲಿಂದಲೆ, ಅಂತಃಕರಣದಲ್ಲೆ ಅರ್ಪಿಸುತ್ತಾನೆ. ಹೀಗೆ ಅವನ ಅತಃಕರಣ ಚತುಷ್ಟಯುವು ಸಾಂಕೇತಿಕವಾಗಿ ಅಥ'ವಾ ಆಲಂಕಾರಿಕ ಹಸ್ತವೆನಿಸಿಕೊಳ್ಳುತ್ತವೆ. ಆರು ಲಿಂಗಗಳಿಗೆ ಆರು ಹಂತದ ಸಾಧಕನು ಯಾವಾವ 'ಆಹಾರ'ವನ್ನು ಯಾವಾವ ಸುಹಸ್ತದಿಂದ ಅರ್ಪಿಸುತ್ತಾನೆ ಎಂಬುದಕ್ಕೆ ವಿವರ ಹೀಗಿದೆ :

೧. ಸಾಧಕನು ಭಕ್ತಸ್ಥಲದಲ್ಲಿರುವಾಗ ತನ್ನ ಪಂಚಭೂತಗಳಲ್ಲೊಂದಾದ ಪೃಥ್ವೀತತ್ವದಲ್ಲಿರುವ ಸುಗಂಧವನ್ನು ಸದ್ಭಕ್ತಿ (ಶ್ರದ್ಧಾಭಕ್ತಿ)ಯಿಂದ ಸುಚಿತ್ತ ಹಸ್ತದಿಂದ ಆಚಾರಲಿಂಗಕ್ಕೆ ಅರ್ಪಿಸುತ್ತಾನೆ. ಸುಚಿತ್ತವು ಸಾಧಾರಣ ಚಿತ್ತದ ಆಧ್ಯಾತ್ಮಿಕವಾಗಿ ಸುಧಾರಿತ ರೂಪ. ಸಾಧಾರಣ ಜನರ ಚಿತ್ತವು ತಮ್ಮ ಹಿಂದಿನ ಜನ್ಮದ ವಾಸನೆಗಳಿಂದ ಮತ್ತು ಅನಾದಿಯಾಗಿ ಬಂದ ಮರೆವಿನಿಂದಾಗಿ ಏನೆಲ್ಲ ವಸ್ತುಗಳಿಗೆ ಆಸೆ ಪಡುತ್ತಿದ್ದರೆ, ಸಾಧಕನ ಸುಚಿತ್ತವು ತನ್ನ ಎಲ್ಲ ಆಸೆಗಳನ್ನೂ ಪರಶಿವನಿಗೇ ಅರ್ಪಿಸುತ್ತದೆ.

೨. ಮಹೇಶಸ್ಥಲದಲ್ಲಿರುವ ಸಾಧಕನು ಜಲತತ್ವದಲ್ಲಿರುವ ಸುರಸವನ್ನು ನೈಷ್ಠಿಕಾಭಕ್ತಿಯಿಂದ ಸುಬುದ್ಧಿ ಎಂಬ ಹಸ್ತದಿಂದ ಗುರುಲಿಂಗಕ್ಕೆ ಅರ್ಪಿಸುತ್ತಾನೆ. ಸುಬುದ್ಧಿಯು ಸಾಧಾರಣ ಬುದ್ಧಿಯ ಆಧ್ಯಾತ್ಮಿಕ ರೂಪ. ಸಾಧಾರಣ ಜನರ ಬುದ್ಧಿ ಕೆಲವು ವಸ್ತುಗಳನ್ನು ಒಳ್ಳೆಯವೆಂದು, ಕೆಲವನ್ನು ಕೆಟ್ಟವೆಂದೂ ನಿರ್ಧರಿಸಿದರೆ, ಸುಬುದ್ಧಿಯು ಆ ಭೇದವನ್ನೇ ಶಿವನಿಗರ್ಪಿಸಿ ಸುಖದುಃಖ, ಹೊಗಳಿಕೆ-ತೆಗಳಿಕೆಗಳನ್ನು ಸಮಾನ ಬುದ್ಧಿಯಿಂದ ನೋಡುತ್ತದೆ.

೩. ಪ್ರಸಾದಿಯು ಅಗ್ನಿತತ್ವದಲ್ಲಿರುವ ಸುರೂಪನ್ನು ಅವಧಾನ ಭಕ್ತಿಯಿಂದ ನಿರಹಂಕಾರ ಹಸ್ತದಿಂದ ಶಿವಲಿಂಗಕ್ಕೆ ಅರ್ಪಿಸುತ್ತಾನೆ. ನಿಜವಾದ ಪ್ರಸಾದಿಯು ತನ್ನ ಅನುಭವಕ್ಕೆ ಬಂದ ವಸ್ತುಗಳನ್ನು ಒಳ್ಳೆಯವು ಕೆಟ್ಟವು ಎಂಬ ಭೇದಭಾವದಿಂದ ನೋಡದೆ, ಯಾವುದನ್ನೂ ದ್ವೇಷಿಸದೆ ಹಾಗೂ ತಿರಸ್ಕರಿಸದೆ, ಯಾವುದನ್ನೂ ಇಷ್ಟಪಡದೆ, ಎಲ್ಲವನ್ನೂ ಅರ್ಪಿಸಿ ಪ್ರಸಾದವನ್ನಾಗಿ ಮಾಡಿಕೊಂಡಿದ್ದಾನೆ.

೪. ಪ್ರಾಣಲಿಂಗಿಯು ವಾಯುತತ್ವದಲ್ಲಿರುವ ಸುಸ್ಪರ್ಶನವನ್ನು ಅನುಭಾವ ಭಕ್ತಿಯಿಂದ ಸುಮನಹಸ್ತದಿಂದ ಜಂಗಮಲಿಂಗಕ್ಕೆ ಅರ್ಪಿಸುತ್ತಾನೆ. ಎಲ್ಲವನ್ನೂ ಶಿವನೇ ನಿರ್ಧರಿಸುತ್ತಾನೆಂದೂ, ಇದರಲ್ಲಿ ಗ್ರಹಗತಿಗಳ ಪಾತ್ರವೇನೂ ಇಲ್ಲವೆಂದೂ ಅವನು ನಂಬಿರುವುದರಿಂದ ಅವನು ಜ್ಯೋತಿಷ್ಯಶಾಸ್ತ್ರವನ್ನು ನಂಬುವುದಿಲ್ಲ; ಅನ್ಯಧರ್ಮ, ಅನ್ಯಯೋಗಗಳನ್ನು ಅವನು ನಂಬುವುದಿಲ್ಲ.

೫. ಶರಣಸ್ಥಲದಲ್ಲಿರುವ ಸಾಧಕನು ಆಕಾಶತತ್ವದಲ್ಲಿರುವ ಸುಶಬ್ದವನ್ನು ಆನಂದಭಕ್ತಿಯಿಂದ ಸುಜ್ಞಾನ ಹಸ್ತದಿಂದ ಪ್ರಸಾದಲಿಂಗಕ್ಕೆ ಅರ್ಪಿಸಿತ್ತಾನೆ. ಅವನು ಜಗತ್ತೆಲ್ಲ ಶಿವಮಯವೆಂದು ಪರಿಗಣಿಸುವುದರಿಂದ, ತಾನು ಕೇಳುವ ಶಬ್ದವೆಲ್ಲವೂ ಸುಶಬ್ದವೆಂದೇ ತಿಳಿಯುತ್ತಾನೆ. ಏಕೆಂದರೆ, ಶಿವಾರ್ಪಿತವಾದ ಎಲ್ಲ ಶಬ್ದಗಳೂ ಸುಶಬ್ದವಾಗೇ ಪರಿವರ್ತಿತವಾಗಬೇಕು. ಅಲ್ಲದೆ ಅವನು ಆದಷ್ಟು ಶಿವನ ಬಗೆಗಿನ ಜಪ, ಭಜನೆ, ವಚನ, ಕಥೆಗಳನ್ನು ಮಾತ್ರ ಕೇಳಲಿಚ್ಛಿಸುತ್ತಾನೆ.

೬. ಐಕ್ಯನು ಆತ್ಮದಲ್ಲಿರುವ ಎಲ್ಲ ಇಂದ್ರಿಯಗಳ ಪರಿಣಾಮವನ್ನು (ತೃಪ್ತಿಯನ್ನು) ಸಮರಸ ಭಕ್ತಿಯಿಂದ ಸದ್ಭಾವ ಹಸ್ತದಿಂದ ಮಹಾಲಿಂಗಕ್ಕೆ ಅರ್ಪಿಸುತ್ತಾನೆ. ಸುಜ್ಞಾನ ಹಸ್ತವು ಇಂದ್ರಿಯ ವಿಷಯಗಳನ್ನು ಇಷ್ಟಲಿಂಗದ ಸೇವಕರನ್ನಾಗಿಯೂ, ಪಂಚವಾಯುಗಳನ್ನು ಪ್ರಾಣಲಿಂಗದ ಸೇವಕರನ್ನಾಗಿಯೂ, ಅವಸ್ಥಾತ್ರಯಗಳನ್ನು ಭಾವಲಿಂಗದ ಸೇವಕರನ್ನಾಗಿಯೂ ಮಾಡುತ್ತದೆ.

ಕೆಲವು ವೇಳೆ, ವಚನಕಾರರು 'ಹಸ್ತ' ಎಂಬ ಪದದ 'ಸುಹಸ್ತ' ಎಂಬ ಪದವನ್ನು ಬಳಸುತ್ತಾರೆ.

ಕೆಲವು ವಚನಕಾರರು ಈ ಸೂಕ್ಷ್ಮ ಅಥವಾ ಆಧ್ಯಾತ್ಮಿಕ ಹಸ್ತಗಳು ಒಂಬತ್ತೆಂದು ಹೇಳಿ, ಉಳಿದ ಮೂರು ಹಸ್ತಗಳ ಕಾರ್ಯಗಳನ್ನು ಈ ರೀತಿ ವಿವರಿಸಿದ್ದಾರೆ.

೭. ನಿರ್ನಾಮ ಹಸ್ತ : ಅಷ್ಟಾವರಣ ಮತ್ತು ಪಂಚಾಚಾರಗಳನ್ನು ತಪ್ಪದೆ ಆಚರಿಸುವಂತೆ ಪ್ರಚೋದಿಸುವ ಹಸ್ತ. ತನಗಾಗಿ ಏನನ್ನೂ ಮಾಡದೆ (ತನ್ನ ಹೆಸರನ್ನೇ ಮರೆತು) ಎಲ್ಲವನ್ನೂ ಶಿವನಿಗೇ ಮಾಡಬೇಕೆಂಬ ಹಸ್ತ.

೮. ನಿಷ್ಕಳಂಕ ಹಸ್ತ : ವೀರಶೈವ ಧರ್ಮದ ಎಲ್ಲ ಆಚಾರಗಳನ್ನೂ ತಪ್ಪದಂತೆ ಆಚರಿಸುವಂತೆ ಪ್ರಚೋದಿಸುವ ಹಸ್ತ.

೯. ನಿರಾಳ ಹಸ್ತ : ಸಾಧಕನು ತನ್ನನ್ನೆ ಸಂಪೂರ್ಣವಾಗಿ ಪರಶಿವನಿಗೆ ಅರ್ಪಿಸುವ ಹಸ್ತ.

ಈ ಒಂಬತ್ತು ಹಸ್ತಗಳಲ್ಲಿ ಮೊದಲಿನ ಆರರ ವಿಚಾರವು ಷಟ್‌ಸ್ಥಲ ಸಿದ್ಧಾಂತಕ್ಕನುಗುಣವಾಗಿದ್ದು ಅರ್ಥ ಪೂರ್ಣವಾಗಿದೆ. ಉಳಿದ ಮೂರು ಹಸ್ತಗಳ ವಿಚಾರವು ಅರ್ಥವಾಗದಂತಿದ್ದು, ಅನಾವಶ್ಯಕವೆನಿಸುತ್ತದೆ.

**ಹಸ್ತಮಸ್ತಕ ಸಂಯೋಗ :** ಸಂಸಾರದಲ್ಲಿ ಹುರುಳಿಲ್ಲವೆಂದು ತಿಳಿದವನು, ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಗುರುವಿನ ಬಳಿ ಬಂದಾಗ, ಗುರುವು ಕರುಣೆಯಿಂದ ಅವನಿಗೆ ಅಂಗದೀಕ್ಷೆಕೊಡುತ್ತಾನೆ. ಲಿಂಗದೀಕ್ಷೆಯೆಂದರೇನು? ಪ್ರತಿಯೊಬ್ಬನಲ್ಲಿಯೂ ಚಿತ್ತು ಅಂತಸ್ಥವಾಗಿರುತ್ತದೆ. ಇದೇ ಪರಮಾತ್ಮನ ಅಂಶ. ಸಾಮಾನ್ಯ ಜನರು ಇದು ತಲೆಯಲ್ಲಿ, ಅಥವಾ ನೆತ್ತಿಯಲ್ಲಿರುತ್ತದೆ ಎಂದು ನಂಬುತ್ತಾರೆ. ಗುರುವಾದವನು ತನ್ನ ಕೈಯನ್ನು ಶಿಷ್ಯನ ತಲೆ ಅಥವಾ ನೆತ್ತಿಯ ಮೇಲಿಟ್ಟು, ಅಲ್ಲಿ ಅಂತಸ್ಥವಾಗಿರುವ ಶಿವಾಂಶಿಕ ಚಿತ್ತನ್ನು ತನ್ನ ಕೈಗೆ ವರ್ಗಾಯಿಸಿಕೊಂಡು, ಆ ಮೇಲೆ ಅದನ್ನು ಇಷ್ಟಲಿಂಗದಲ್ಲಿ ಪ್ರತಿಷ್ಠಾಪಿಸುತ್ತಾನೆ. ಈ ಪ್ರತಿಕ್ರಿಯೆಗೆ ಹಸ್ತ ಮಸ್ತಕ ಸಂಯೋಗವೆಂದು ಹೆಸರು.

**ಹುಟ್ಟುಗೆಡುವುದು :** ಮತ್ತೆ ಹುಟ್ಟದಿರುವುದು. ಆಧ್ಯಾತ್ಮದಲ್ಲಿ ಪ್ರಗತಿ ಸಾಧಿಸಿ, ನಿಷ್ಕಾಮ ಕರ್ಮ ಮಾಡಿದವನಿಗಷ್ಟೇ ಹುಟ್ಟುಗೇಡು ಸಾಧ್ಯ (೪:೭೪೦).

**ಹೃದಯಕಮಲಕರ್ಣಿಕಾವಾಸ :** ಜೀವಾತ್ಮನ ವಾಸಸ್ಥಾನವಾದ ಹೃದಯಕಮಲ.

**ಹೇಗತನ :** ಮೂಕತನ. ಭಕ್ತಿಯು ಪರಾಕಾಷ್ಠೆ ಮುಟ್ಟಿ ಅನಭಾವದಲ್ಲಿ ಕೊನೆಗೊಂಡಾಗ, ಅದು ಯಾರಿಗೂ ನಿವೇದಿಸಲಾಗದಂತಾಗುತ್ತದೆ. ಆಗ ಅದನ್ನು ಅನುಭವಿಸಿದವನು 'ಮೂಕ'ನಾಗುತ್ತಾನೆ (೧,೨೯೫).

**ಹೊದ್ದದ ಪ್ರಪಂಚಿಕ :** ಬದಲಾಗದ ಪ್ರಪಂಚ. ಪ್ರಪಂಚವು ಪ್ರತಿಕ್ಷಣವೂ ಬದಲಾಗುತ್ತಿದ್ದರೂ, ಅದನ್ನು ಹೊದ್ದದ ಪ್ರಪಂಚವೆಂದು ಕರೆಯಲು ಸಿದ್ಧರಾಮನಿಗೆ ಒಂದು ಸ್ಪಷ್ಟ ಕಾರಣವಿದೆ: ಅವನು ಆ ಪದವನ್ನು ಇಂದ್ರಿಯಗೋಚರ ಪ್ರಪಂಚಕ್ಕೆ ಅನ್ವಯಿಸದೆ, ಅದರೊಳಗೆ ಅಂತಸ್ಥವಾಗಿರುವ ನಿತ್ಯಪರತತ್ವಕ್ಕೆ ಅನ್ವಯಿಸಿತ್ತಾನೆ (೪ : ೬೪೪).

**************

## ಸಮಗ್ರ ವಚನಸಾಹಿತ್ಯ ಪ್ರಕಟನ ಯೋಜನೆ

'ಸಮಗ್ರ ವಚನಸಾಹಿತ್ಯದ ಪ್ರಕಟನ ಯೋಜನೆ' ಕರ್ನಾಟಕ ಸರ್ಕಾರದ ಈವರೆಗಿನ ಸಾಹಿತ್ಯಕ ಸಾಧನೆಗಳಲ್ಲಿ ಒಂದು ಮಹತ್ವದ ದಾಖಲೆಯಾಗಿದೆ. ಇದು ಒಂದು ಸಾಹಿತ್ಯಕೃತಿಯ ಪ್ರಕಟನೆಯಲ್ಲ, ಒಂದು ಸಾಹಿತ್ಯ ಪ್ರಕಾರದ ಪ್ರಕಟನೆ.

ತತ್ವಕ್ಕೆ ತತ್ವ, ಸಾಹಿತ್ಯಕ್ಕೆ ಸಾಹಿತ್ಯವಾಗಿರುವ 'ವಚನ ವಾಙ್ಮಯ' ಏಕಕಾಲಕ್ಕೆ ಆತ್ಮಕಲ್ಯಾಣವನ್ನೂ ಸಮಾಜ ಕಲ್ಯಾಣವನ್ನೂ ಪ್ರತಿಪಾದಿಸುವ ಮೂಲಕ ಜಾಗತಿಕ ಮಹತ್ವ ಗಳಿಸಿದೆ. ಈ ಮೌಲಿಕ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಜನತೆಗೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಇವತ್ತಿನ ಮಿತಿಗೆ ಸಿಗುವ ಬಸವಯುಗ ಮತ್ತು ಬಸವೋತ್ತರ ಯುಗಗಳ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಪ್ರಕಟಿಸಿದ ಪ್ರಯತ್ನವಿದು. ಈ ಮೂಲಕ ಬಸವಯುಗದ ಹಲವು ಹೊಸ ವಚನಗಳು ಬೆಳಕಿಗೆ ಬರುವುದರೊಂದಿಗೆ, ಬಸವೋತ್ತರ ಯುಗದ ಸಮಗ್ರ ವಚನ ಸಂಪತ್ತು ಪ್ರಥಮಸಲ ಹೊರ ಬರುತ್ತಿರುವುದು ಈ ಯೋಜನೆಯ ವಿಶೇಷ ಸಾಧನೆಯಾಗಿದೆ.

೮೦೦ ವರ್ಷಗಳುದ್ದಕ್ಕೂ ಬೆಳೆದುಬಂದ ಈ ಸಾಹಿತ್ಯದ ವ್ಯಾಪ್ತಿಯನ್ನು ಪ್ರಥಮಬಾರಿ ಗುರುತಿಸಿಕೊಡುತ್ತಿರುವ ಈ ಸಾಹಸದ ಫಲವಾಗಿ, ೨೦ಸಾವಿರ ವಚನಗಳು ಸುಮಾರು ೧೦ಸಾವಿರ ಪುಟ ವ್ಯಾಪ್ತಿಯ ೧೫ ಸಂಪುಟಗಳಲ್ಲಿ (ವಚನ ಪರಿಭಾಷಾಕೋಶ ಸೇರಿ) ಬೆಳಕು ಕಾಣುತ್ತಿವೆ.

ISBN : 81-7713-098-6